ಗೊರೂರವರ ಸಾಹಿತ್ಯದಲ್ಲಿ ಗ್ರಾಮಸಮಾಜ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಕೆ.ವಿ. ನಾಗರಾಜಪ್ಪ

ಮಾರ್ಗದರ್ಶಕರು
ಡಾ. ಎ. ಸುಬ್ಬಣ್ಣ ರೈ
ಪ್ರವಾಚಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೬

ಗೊರೂರರವರ ಸಾಹಿತ್ಯದಲ್ಲಿ ಗ್ರಾಮಸಮಾಜ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಕೆ.ವಿ. ನಾಗರಾಜಪ್ಪ

ಮಾರ್ಗದರ್ಶಕರು
ಡಾ. ಎ. ಸುಬ್ಬಣ್ಣ ರೈ
ಪ್ರವಾಚಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೬

ಪ್ರಮಾಣಪತ್ರ

ಗೊರೂರವರ ಸಾಹಿತ್ಯದಲ್ಲಿ ಗ್ರಾಮಸಮಾಜ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಲಾಗಿದೆ. ಡಾ.ಎ. ಸುಬ್ಬಣ್ಣ ರೈ, ಪ್ರವಾಚಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಇವರು ಈ ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಪ್ರಕಟಣೆಗಳಲ್ಲಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 05.08.2006.

ಕೆ.ವಿ. ನಾಗ...

ಕೆ.ವಿ. ನಾಗರಾಜಪ್ಪ

ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕರು

ಶ್ರೀ.ಧ.ಮಂ.ಕಾಲೇಜು

ಉಜಿರೆ, (ದ.ಕ.) ೫೭೪ ೨೪೦

ದೃಢೀಕರಣ ಪತ್ರ

ಶ್ರೀ ಕೆ.ವಿ. ನಾಗರಾಜಪ್ಪ, ಇವರು **ಗೊರೂರರವರ ಸಾಹಿತ್ಯದಲ್ಲಿ ಗ್ರಾಮಸಮಾಜ** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಾದರಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದರಲ್ಲಿನ ಯಾವುದೇ ಭಾಗವನ್ನು ಈ ಮೊದಲು ಪದವಿಗಾಗಲಿ, ಪ್ರಕಟಣೆಗಾಗಲಿ ಬಳಸಿಕೊಂಡಿಲ್ಲವೆಂದು ದೃಢಪಡಿಸುತ್ತಿದ್ದೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೭. ೦೫. ೨೦೦೨

ಎ. ಸುಬ್ಬಣ್ಣ ರೈ

ಡಾ.ಎ. ಸುಬ್ಬಣ್ಣ ರೈ
ಪ್ರವಾಚಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕೃತಜ್ಞತೆ

ಈ ಅಧ್ಯಯನಕ್ಕೆ ಸರ್ವ ವಿಧದಲ್ಲಿ ಸಹಕರಿಸಿದ,

ಕನ್ನಡ ವಿಶ್ವವಿದ್ಯಾಲಯದ

ಕುಲಪತಿಗಳಿಗೆ,

ಕುಲಸಚಿವರಿಗೆ,

ಅಧ್ಯಯನಾಂಗದ ನಿರ್ದೇಶಕರಿಗೆ,

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಮುಖ್ಯಸ್ಥರಿಗೆ,

ಪ್ರಾಧ್ಯಾಪಕರಿಗೆ ಮತ್ತು ಬೋಧಕೇತರ ಸಿಬ್ಬಂದಿ ವರ್ಗಕ್ಕೆ,

ಸಂಶೋಧನಾ ಮಾರ್ಗದರ್ಶಕರಾದ ಡಾ.ಎ.ಸುಬ್ಬಣ್ಣ ರೈ ಇವರಿಗೆ,

ನನ್ನ ಮಾತೃಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಿಗೆ,

ಕಾರ್ಯದರ್ಶಿಗಳಿಗೆ ಹಾಗೂ ಸದಸ್ಯರಿಗೆ,

ಪ್ರಾಂಶುಪಾಲರಿಗೆ ಹಾಗೂ ಸಹೋದ್ಯೋಗಿಗಳಿಗೆ,

ಎಫ್.ಐ.ಪಿ. ನಿಯಮದಡಿ ಎರಡು ವರ್ಷಗಳ ಕಾಲ ಸಂಶೋಧನೆಗೆ

ಅವಕಾಶ ಕಲ್ಪಿಸಿಕೊಟ್ಟ ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ,

ಕರ್ನಾಟಕ ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಗೆ,

ನನ್ನ ಬಾಳ ಬೆಳಕಾದ ಪ್ರೀತಿಯ ಗುರುಗಳಿಗೆ,

ಈ ಪ್ರಬಂಧದ ಸಿದ್ಧತೆಯಲ್ಲಿ ಪ್ರತ್ಯಕ್ಷವಾಗಿ ಹಾಗೂ

ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಬುದ್ಧಿ ಭಾವನೆಗಳ ಮೂರ್ತಿ ಸ್ವರೂಪವಾದ ಮಾನವನಲ್ಲಿ ಬೆಳವಣಿಗೆಯ ದೃಷ್ಟಿಯಿಂದ ನಾವು ಅನೇಕ ಬದಲಾವಣೆಗಳನ್ನು ಗುರುತಿಸಬಹುದು. ಈ ಬದಲಾವಣೆಯನ್ನು ವ್ಯಕ್ತಿ ಜೀವನದಲ್ಲಿಯೂ ಹಾಗೂ ಸಾಮಾಜಿಕ ಜೀವನದಲ್ಲೂ ಸ್ಪಷ್ಟವಾಗಿ ಮನಗಾಣಬಹುದು. ಕಾಲ ದೇಶ ಪರಿಸರಕ್ಕೆ ಅನುಗುಣವಾಗಿ ಸಾಮಾಜಿಕ ಜೀವನದಲ್ಲಿ ವೈವಿಧ್ಯತೆಯನ್ನು ನೋಡುತ್ತೇವೆ. ಈ ವಿಷಯಗಳನ್ನು ಸಮಾಜಶಾಸ್ತ್ರ ಪರಿಚಯ ಮಾಡಿಕೊಡುವ ಸಮಾಜಶಾಸ್ತ್ರಜ್ಞ, ವಿಶಿಷ್ಟ ರೀತಿಯಲ್ಲಿ ಅಧ್ಯಯನ ಮಾಡಿ ವಿಚಾರ ಮಾಡುವುದು ಒಂದು ರೀತಿಯ ಸಾಮಾಜಿಕ ಅಧ್ಯಯನವಾಗಿದೆ. ಇಂತಹ ಸಾಮಾಜಿಕ ಅಧ್ಯಯನದಲ್ಲಿ ಬಹುಮಟ್ಟಿಗೆ ವೈಜ್ಞಾನಿಕ ದೃಷ್ಟಿ ಮತ್ತು ತೌಲನಿಕ ದೃಷ್ಟಿ ನಮಗೆ ಕಂಡುಬರುತ್ತದೆ. ಹೀಗೆ ಅಧ್ಯಯನ ಮಾಡಿದಾಗ ಒಂದೇ ಸಮಾಜದಲ್ಲಿ ಹಲವು ರೀತಿಯ ಸ್ವರೂಪ ಮತ್ತು ಲಕ್ಷಣಗಳನ್ನು ನೋಡಬಹುದು. ಕೆಲವು ದೃಷ್ಟಿಯಲ್ಲಿ ಹಲವು ಸಮಾಜಗಳ ಲಕ್ಷಣ ಒಂದೇ ಆಗಿದ್ದರೂ ವಿಶಿಷ್ಟ ಸಂದರ್ಭಗಳಲ್ಲಿ ಭಿನ್ನತೆಯ ವಿಶೇಷತೆಯನ್ನು ಕಾಣಬಹುದು. ಮನುಷ್ಯ ಸಮಾಜದ ಮೂಲ ಚಿಂತನೆ ಬದುಕಿನ ರೀತಿಯಲ್ಲಿ ನಾವು ಸಾರೂಪ್ಯ ಅಂಶಗಳನ್ನು ಗುರುತಿಸುವುದು ಸ್ವಾಭಾವಿಕವಾಗಿದೆ. ಆದರೆ ಇಲ್ಲಿಯ ಭಿನ್ನತೆಯನ್ನು ವಿಶೇಷ ಲಕ್ಷಣವಾಗಿ ಮನಗಾಣುತ್ತೇವೆ. ಒಟ್ಟಿನಲ್ಲಿ ಒಂದು ಸಮಾಜದ ಸಾಮಾಜಿಕ ಅಧ್ಯಯನ ಕುತೂಹಲಕಾರಿಯಾಗಿರುತ್ತದೆ.

ವ್ಯಕ್ತಿಯ ಪ್ರಗತಿಗೆ ಸಾಮಾಜಿಕ ಅಭಿವೃದ್ಧಿಗೆ ಸಾಮಾಜಿಕ ಅಧ್ಯಯನ ಪೂರಕವಾಗಿ ಇರುತ್ತದೆ ಹಾಗೂ ಪ್ರೇರಕವೂ ಆಗಿರುತ್ತದೆ. ಮನುಕುಲ ನಡೆದು ಬಂದ ಆದಿ ಸಮಾಜಶಾಸ್ತ್ರಜ್ಞರಿಗೆ ಎಷ್ಟು ಗಂಭೀರವಾದ ವಿಷಯವಾಗಿರುತ್ತದೋ ಅಷ್ಟೇ ವ್ಯಕ್ತಿಗೂ ಸಹ ಉತ್ಸಾಹದ ವಿಷಯ ಗಂಭೀರವಾದ ಅಧ್ಯಯನದ ವಿಷಯವಾಗಿರುತ್ತದೆ. ಸಮಾಜದ ಬೆಳವಣಿಗೆಯಲ್ಲಿ ಕಂಡುಬರುವ ವೈಪರೀತ್ಯಗಳು, ವಿಚಿತ್ರಗಳು ಮತ್ತು ವೈರುಧ್ಯಗಳು ಎಲ್ಲಾ ಕಾಲಕ್ಕೂ ಅಧ್ಯಯನದ ದೃಷ್ಟಿಯಿಂದ ಗಂಭೀರವಾದ ಅಂಶಗಳಾಗಿವೆ. ಇಂಥಹ ಅಧ್ಯಯನದಿಂದಲೇ ಸಮಾಜಶಾಸ್ತ್ರದ ರಚನೆ ಅರ್ಥವನ್ನು ಪಡೆಯುವುದರ ಜತೆಗೆ ಪರಿಪೂರ್ಣತೆಯನ್ನು ಪಡೆದುಕೊಳ್ಳುತ್ತದೆ. ಸಮಾಜಶಾಸ್ತ್ರದಲ್ಲಿ ಕುತೂಹಲ ಪ್ರಜ್ಞೆ, ವೈಚಾರಿಕ ದೃಷ್ಟಿಯ ಹಿನ್ನೆಲೆ ಸಮಾಜಶಾಸ್ತ್ರಜ್ಞನಿಗೆ ಅತ್ಯಂತ ಪ್ರಧಾನ ಎನಿಸುತ್ತದೆ. 'ಇತಿಹಾಸ' ಘಟನೆಗಳ ಪುನರ್

ಸೃಷ್ಟಿಯಾದರೆ 'ಸಮಾಜಶಾಸ್ತ್ರ' ವ್ಯಕ್ತಿಯ ಬದುಕಿನ ಹಿನ್ನೋಟಕ್ಕೆ ಸಹಕಾರಿಯಾದಂತೆ ಬದುಕಿನ ಮುನ್ನೋಟಕ್ಕೆ ಮಾರ್ಗದರ್ಶಿಯು ಆಗುತ್ತದೆ ಎಂಬ ಮಾತು ಸಮಾಜಶಾಸ್ತ್ರಜ್ಞರ ಒಂದು ಅಭಿಮತವಾಗಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಅಧ್ಯಯನ ಒಂದು ಪ್ರಾಮಾಣಿಕ ಚಟುವಟಿಕೆಯೆಂದು ಹೇಳಬಹುದು. ಇಲ್ಲಿ ಸಮಾಜಶಾಸ್ತ್ರಜ್ಞರ ಅಧ್ಯಯನದ ದೃಷ್ಟಿಕೋನ ಬೆಳೆದಂತೆಲ್ಲಾ ಸಮಾಜಶಾಸ್ತ್ರ ಸ್ವರೂಪದಲ್ಲೂ ವೈವಿಧ್ಯತೆಯನ್ನು ಗುರುತಿಸಬಹುದು.

ಸಮಾಜಶಾಸ್ತ್ರ ಅಧ್ಯಯನದಲ್ಲಿ ವರ್ಗದ ಹಿನ್ನೆಲೆಯಲ್ಲಿ ಮತ್ತು ಪರಿಸರದ ಹಿನ್ನೆಲೆಯನ್ನು ಪ್ರಮುಖವಾಗಿ ನೋಡುತ್ತೇವೆ. ಎಲ್ಲಾ ಕಾಲದ ಸಮಾಜದಲ್ಲಿಯೂ ಹಲವು ರೀತಿಯ ವರ್ಗಗಳ ವಿಭಜನೆಯನ್ನು ಕಾಣುತ್ತೇವೆ. ಈ ವರ್ಗ ವಿಂಗಡಣೆ ಪ್ರಧಾನವಾಗಿ ಜಾತಿಯ ಆಧಾರದ ಮೇಲೆ ಹಾಗೂ ಆರ್ಥಿಕ ಆಧಾರದ ಮೇಲೆ ಗುರುತಿಸಿದರೆ ಮತ್ತೆ ಕೆಲವು ಸಂದರ್ಭಗಳಲ್ಲಿ ಸಿದ್ಧಾಂತದ ಹಿನ್ನೆಲೆಯಲ್ಲಿಯೂ ನೋಡಬಹುದು. ಕುಲಧರ್ಮ ಸಂಪ್ರದಾಯಗಳ ಸ್ಥಿತಿಗತಿಗಳ ವಿವೇಚನೆಯನ್ನು ಇಂತಹ ಸಾಮಾಜಿಕ ಅಧ್ಯಯನದಲ್ಲಿ ಮುಖ್ಯವಾಗಿ ಕಾಣಬಹುದು. ಪರಿಸರ ವ್ಯಕ್ತಿ ಜೀವನದೊಂದಿಗೆ ಸಾಮಾಜಿಕ ಪರಿಸ್ಥಿತಿಯೊಂದಿಗೆ ಅಭೂತಪೂರ್ವವಾದ ಅವಿನಾಭಾವ ಸಂಬಂಧವನ್ನು ಹೊಂದಿರುತ್ತದೆ. ಭೌಗೋಳಿಕ ವ್ಯತ್ಯಾಸಕ್ಕೆ ಅನುಗುಣವಾಗಿ ಪರಿಸರದಲ್ಲಿಯೂ ವ್ಯತ್ಯಯಗಳನ್ನು ಗುರುತಿಸಬಹುದು. ಮಾನವನ ಜೀವನ ಇಂತಹ ಪರಿಸರಗಳ ಸ್ಥಿತಿಗತಿಗಳೊಂದಿಗೆ ಸಂಬಂಧವನ್ನು ಹೊಂದಿರುತ್ತದೆ ಎಂಬುದು ನಿರ್ವಿವಾದ ಸಂಗತಿ.

ಸಾಹಿತ್ಯದ ಅಧ್ಯಯನ, ವಿಶ್ಲೇಷಣೆ ಮತ್ತು ವಿಮರ್ಶೆ ಎಂದರೆ ಒಂದು ಅರ್ಥದಲ್ಲಿ ಸಮಾಜದ ಪುನರ್ ಮೌಲ್ಯೀಕರಣವೆಂದೇ ಅರ್ಥ. ಸಾಹಿತ್ಯ ಮತ್ತು ಸಮಾಜದ ನಂಟು ಬಿಡಿಸಲಾರದಂತಹುದು. ಸಾಹಿತ್ಯವು ಕಾಲಮಾನದ ಜೊತೆಗೆ ಬದುಕನ್ನು ಪ್ರಕಟಗೊಳಿಸುವ ಸಂದರ್ಭ, ಕ್ರಮ, ವಿಶಿಷ್ಟ ಮತ್ತು ಭಿನ್ನವಾದುದು. ಸಾಹಿತ್ಯವನ್ನು ವ್ಯಕ್ತಿ ಹಾಗೂ ಸಮಾಜ ಜೀವನದ 'ಪ್ರತಿಬಿಂಬ-ಗತಿಬಿಂಬ' ಎಂಬ ವ್ಯಾಖ್ಯಾನ ಮಾಡುವುದುಂಟು. ಇದು ಹೊರನೋಟಕ್ಕೆ ಸ್ಥೂಲವೆನಿಸಿದರೂ ಸೂಕ್ಷ್ಮವಾಗಿ ಗಮನಿಸಿದಾಗ ಸತ್ಯವೆನಿಸುತ್ತದೆ. ವ್ಯಕ್ತಿ ಜೀವನದಲ್ಲಿ - ಸಾಮಾಜಿಕ ಜೀವನದಲ್ಲಿ ಅನೇಕ ಧ್ಯೇಯಿ ಧೋರಣೆಗಳನ್ನು ಗಮನಿಸಿದಾಗ ಕುತೂಹಲ ಅಂಶಗಳು ಮನವರಿಕೆಯಾಗುತ್ತದೆ. ಇಂಥಹ ಸಂದರ್ಭದಲ್ಲಿ ಸಾಮಾನ್ಯವಾಗಿ ವಿಭಿನ್ನತೆಯಲ್ಲಿ ಏಕತೆಯನ್ನು ಸಾಮಾಜಿಕ ಜೀವನದಲ್ಲಿ ಕಾಣುತ್ತೇವೆ. ಸಾಹಿತಿಯ ಮೂಲೋದ್ದೇಶ ವ್ಯಕ್ತಿ ಜೀವನದ ಮತ್ತು ಸಾಮಾಜಿಕ ಜೀವನದ ಪ್ರತಿಬಿಂಬವನ್ನು - ಗತಿಬಂಬವನ್ನು ತನ್ನ ಸಾಹಿತ್ಯ ಕೃತಿಯಲ್ಲಿ ಸೆರೆ ಹಿಡಿಯುವುದೇ ಆಗಿರುತ್ತದೆ. ಸಾಹಿತ್ಯ ವಿಮರ್ಶೆಯೆಂದರೆ ಅಂತಿಮವಾಗಿ ಸಮಾಜದ ವಿಮರ್ಶೆಯೆಂದೆ ಅರ್ಥ ಬರುತ್ತದೆ. ಯಾವುದೇ ಅಧ್ಯಯನ ಕೊನೆಗೊಳ್ಳುವುದು ಸಮಾಜ ಕುರಿತ ಚಿಂತನೆಯಲ್ಲಿ ಎಂಬುದನ್ನು ಗುರುತಿಸಬಹುದು. "ಕಾವ್ಯವಿಮರ್ಶೆಯ ಕೆಲಸ ಅಂತಿಮವಾಗಿ ಲೋಕ ವಿಮರ್ಶೆಯು ಹೌದು ಅಥವಾ ನನ್ನ ಮಟ್ಟಿಗೆ ಲೋಕ ವಿಮರ್ಶೆಯ ಒಂದು ರೂಪವೇ ಕಾವ್ಯವಿಮರ್ಶೆ" (ನಾಗರಾಜ್

ಡಿ.ಆರ್.; ೧೯೮೭; ಪು.೧) ಎಂಬ ಡಿ.ಆರ್. ನಾಗರಾಜ್ ಅವರ ಮಾತು ಕೇವಲ ಕಾವ್ಯಕ್ಕೆ ಮಾತ್ರ ಅನ್ವಯಿಸಬೇಕಾಗಿಲ್ಲ. ಇದನ್ನು ಸಾಹಿತ್ಯದ ಇತರೆ ಪ್ರಕಾರಗಳಿಗೂ ವಿಸ್ತರಿಸಬಹುದು. 'ಸಾಹಿತ್ಯವೆಂಬುದು ಬದುಕಿನ ವ್ಯಾಖ್ಯಾನ'ವೆಂಬ ಬರಗೂರು ರಾಮಚಂದ್ರಪ್ಪನವರ ಮಾತು ಕೂಡ ಇದನ್ನೇ ತಿಳಿಸುತ್ತದೆ. ಹೀಗೆ ಸಾಹಿತ್ಯ ಜೀವನಕ್ಕೆ ಸಂವಾದಿಯಾದಾಗಲೇ ನಿಜವಾದ ಅರ್ಥದಲ್ಲಿ ಸಾಹಿತ್ಯ ಪರಿಪೂರ್ಣವೆನಿಸುತ್ತದೆ. ಶ್ರೇಷ್ಠ ಸಾಹಿತ್ಯದ ಹಿರಿಮೆ ನೈಜತೆಯನ್ನು ಅಳೆಯುವುದಕ್ಕೆ ಇದೇ ಮಾನದಂಡವೂ ಆಗಿರುತ್ತದೆ. ಉತ್ತಮ ಸಾಹಿತ್ಯದ ಈ ಲಕ್ಷಣವನ್ನು ಕನ್ನಡ ಸಾಹಿತ್ಯದಲ್ಲಿಯು ಗುರುತಿಸಬಹುದು. ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳಲ್ಲಿ ಚಿಂತನೆಯ ಕ್ರಿಯೆ ನಿರಂತರವಾಗಿ ನಡೆದುಬಂದಿದೆ. ಇಪ್ಪತ್ತನೆ ಶತಮಾನದ ಕನ್ನಡ ಸಾಹಿತ್ಯದ ಸ್ವರೂಪದ ಅಧ್ಯಯನವನ್ನು ವಿಚಾರ ಮಾಡಿದಾಗ ಇಲ್ಲಿಯು ವೈವಿಧ್ಯತೆಯನ್ನು ನೋಡುತ್ತೇವೆ. ಈ ಶತಮಾನದ ಕನ್ನಡ ಸಾಹಿತ್ಯದ ಸ್ವರೂಪವನ್ನು ಪ್ರಕಾರ ದೃಷ್ಟಿಯಿಂದ ಹಲವು ರೀತಿಗಳಲ್ಲಿ ವಿಭಜನೆ ಮಾಡಿದರು ವಸ್ತು ದೃಷ್ಟಿಯಿಂದ ಜೀವನದ ಗತಿಬಿಂಬದ ಮೂಲ ಚಿಂತನೆಯ ಸೆಲೆಯನ್ನು ಇಲ್ಲಿ ಗುರುತಿಸಬಹುದು.

ವೈವಿಧ್ಯಪೂರ್ಣವಾದ ದೃಷ್ಟಿಯಲ್ಲಿ ಇಂದು ಸಾಹಿತ್ಯದ ಅಧ್ಯಯನ ಅನೇಕ ವಿದ್ವಾಂಸರಿಂದ ನಡೆದು ಅದಕ್ಕೆ ಅನುಗುಣವಾದ ಮಹಾಪ್ರಬಂಧಗಳು ಮೂಡಿ ಬಂದಿವೆ. ಈ ಮೇಲ್ಪಂಕ್ತಿಯಲ್ಲಿಯೇ 'ಗೊರೂರುರವರ ಸಾಹಿತ್ಯದಲ್ಲಿ ಗ್ರಾಮಸಮಾಜ' ಎಂಬ ಮಹಾಪ್ರಬಂಧ ರಚಿತವಾಗಿದೆ. ಚಿರಂತನ ಜೀವನ ಮೌಲ್ಯಗಳ ಅಧ್ಯಯನ ಎಲ್ಲಾ ಕಾಲಕ್ಕೂ ಹೇಗೆ ಅತ್ಯವಶ್ಯ ಎನಿಸುತ್ತದೆಯೋ ಅದೇ ರೀತಿಯಲ್ಲಿ ಮಾನವನ ಪರಿಸರದ ಅಧ್ಯಯನವು ಅಷ್ಟೇ ಉತ್ಸಾಹದಾಯಕವಾದದ್ದು ಮತ್ತು ಪ್ರಮುಖವಾದದ್ದು ಎಂಬುದು ಸಮಾಜಶಾಸ್ತ್ರಜ್ಞರು ಭಾವಿಸಿದ ಸತ್ಯವಾದರೆ ಸಹೃದಯರಿಗೂ ಅಷ್ಟೇ ಆಸಕ್ತಿಯ ಸಂಗತಿಯಾಗಿದೆ. ಹಳ್ಳಿಯ ಜನಜೀವನವನ್ನು ಬದುಕಿನ ಕಲೆಯ ದೃಷ್ಟಿಯಿಂದ ಇಂದು ವಿದ್ಯಾವಂತರು ಸಹ ಅಧ್ಯಯನ ಮಾಡುತ್ತಿರುವುದು ಅವರ ವಿಶೇಷ ದೃಷ್ಟಿಗೆ ಸಾಕ್ಷಿಯಾದಂತೆ ಅವರ ಆರೋಗ್ಯಕರ ಬೆಳವಣಿಗೆಯ ದೃಷ್ಟಿಗೂ ನಿದರ್ಶನವಾಗಿದೆ ಎಂದು ಹೇಳಬಹುದು. ಈ ನಿಜದ ಹಿನ್ನೆಲೆಯಲ್ಲಿ 'ಗೊರೂರವರ ಸಾಹಿತ್ಯದಲ್ಲಿ ಗ್ರಾಮಸಮಾಜ'ದ ಅಧ್ಯಯನ ಪ್ರಸ್ತುತ ಹಾಗೂ ಅರ್ಥಪೂರ್ಣವೆನಿಸುತ್ತದೆ.

ಗ್ರಾಮಸಮಾಜ ಎಂದರೇನು? ಗ್ರಾಮಸಮಾಜದ ಪರಿಕಲ್ಪನೆಯ ಅರ್ಥ - ವ್ಯಾಪ್ತಿ ಮತ್ತು ಸ್ವರೂಪವನ್ನು ವಿಶ್ಲೇಷಿಸಲಾಗಿದೆ. ಗೊರೂರವರು ತಮ್ಮ ಕೃತಿಗಳ ಮೂಲಕ ಕಟ್ಟಿಕೊಡುವ ಗ್ರಾಮಸಮಾಜದ ಸ್ವರೂಪದಲ್ಲಿ ಎಲ್ಲಾ ಸಾಂಸ್ಕೃತಿಕ ಸ್ಥಿತ್ಯಂತರಗಳ ಉಲ್ಲೇಖ ನಮಗೆ ಗಮನಾರ್ಹ ಪ್ರಮಾಣದಲ್ಲಿ ದೊರೆಯುತ್ತದೆ. ಗ್ರಾಮಸಮಾಜದ ಸ್ವರೂಪ ಸಮಸ್ಯೆಗಳು ಆಧಾರಸಹಿತ ಮಹಾಪ್ರಬಂಧದಲ್ಲಿ ಚರ್ಚಿತವಾಗಿದೆ. ಗೊರೂರವರು ವಾಸ್ತವ ಗ್ರಾಮಸಮಾಜವನ್ನು ತಮ್ಮ ಕೃತಿಗಳಲ್ಲಿ ಎಷ್ಟು ಸಮರ್ಥ ರೀತಿಯಲ್ಲಿ ಉಲ್ಲೇಖಿಸಿದ್ದಾರೆಯೋ ಅದರ ಹಿನ್ನೆಲೆಯಲ್ಲಿ ಅವರ ಕಾಲ್ಪನಿಕ ಗ್ರಾಮಸಮಾಜವನ್ನು ಅವರ ಕೃತಿಗಳಲ್ಲಿ

ಗುರುತಿಸಬಹುದು. ಅವರ ಕಾಲ್ಪನಿಕ ಗ್ರಾಮಸಮಾಜದ ಹಿನ್ನೆಲೆಯಲ್ಲಿ ಗೊರೂರರವರ ಸಾಂಸ್ಕೃತಿಕ ವೈಚಾರಿಕ ಕ್ರಾಂತಿಯ ಬೆಳಕು ನಮಗೆ ಗೋಚರವಾಗುತ್ತದೆ.

ಗೊರೂರರವರ ಕೃತಿಗಳಲ್ಲಿ ಗ್ರಾಮಸಮಾಜವನ್ನು ಗುರುತಿಸುವಾಗ ಅವರ ಸೃಜನಶೀಲ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಮಹಾಪ್ರಬಂಧವನ್ನು ರಚಿಸಲಾಗಿದೆ. ಅವರ ಸೃಜನೇತರ ಕೃತಿಗಳನ್ನು ಇಲ್ಲಿ ಪರಿಮಿತ ಪ್ರಮಾಣದಲ್ಲಿ ಪರಿಚಯಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಪ್ರಾದೇಶಿಕ ಕೃತಿಗಳನ್ನು ರಚಿಸಿರುವ ಬೇರೆ ಸಾಹಿತಿಗಳ ಕೃತಿಗಳನ್ನು ಹಾಗೂ ಗ್ರಾಮಸಮಾಜಕ್ಕೆ ಸಂಬಂಧಿಸಿದ ಇತರೆ ಕೃತಿಗಳನ್ನು ಆನುಷಂಗಿಕವಾಗಿ ಮಾತ್ರ ಸ್ಥೂಲವಾಗಿ ವಿಚಾರ ಮಾಡಲಾಗಿದೆ. ಗ್ರಾಮಸಮಾಜದ ಸ್ವರೂಪವನ್ನು ಗೊರೂರರವರ ಸಾಹಿತ್ಯದಲ್ಲಿ ಅಧ್ಯಯನ ಮಾಡುವಾಗ ಸಮಾಜಶಾಸ್ತ್ರಜ್ಞರ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲಾಗಿದೆ. ಈ ಕಾರಣದಿಂದಲೇ ಗ್ರಾಮಸಮಾಜದ ಚಿಂತನ, ಚಿತ್ರಣ ಇಲ್ಲಿ ಅನನ್ಯವಾಗಿದೆ ಎಂಬುದನ್ನು ಪುರಾವೆಗಳ ಮೂಲಕ ಸಮರ್ಥಿಸಲಾಗಿದೆ.

ಗ್ರಾಮಸಮಾಜದ ಅಧ್ಯಯನದಲ್ಲಿ ಗ್ರಾಮಸಮಾಜದ ಭೌತಿಕ ಸ್ವರೂಪವನ್ನು, ಜೀವನ ವಿಧಾನವನ್ನು, ಸಾಮಾಜಿಕ ರಚನೆಯನ್ನು, ಜನರ ಆಚಾರ-ವಿಚಾರಗಳನ್ನು, ಕುಟುಂಬದ ಸಂಗತಿಗಳನ್ನು, ಜಾತಿ ಮತ್ತು ವಿವಾಹ ಕಾರ್ಯದ ಸ್ಥೂಲ ಅಂಶಗಳನ್ನು ಹಾಗೂ ಒಟ್ಟು ಪ್ರಾದೇಶಿಕ ಸಂಸ್ಕೃತಿಯನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಸಂದರ್ಭೋಚಿತವಾಗಿ ನಿರೂಪಿಸಲಾಗಿದೆ. ನವೋದಯ ಸಂದರ್ಭದ ಗೊರೂರರವರ ಸಾಹಿತ್ಯದಲ್ಲಿ ಒಂದಾದ ಗ್ರಾಮಸಮಾಜದ ಚಿಂತನೆ ಇಲ್ಲಿ ಪ್ರಮುಖ ವಿಚಾರವಾಗಿದೆ.

ಆಧುನಿಕ ಕನ್ನಡ ಸಾಹಿತ್ಯವನ್ನು ಇತ್ತೀಚಿನ ದಿನಗಳಲ್ಲಿ ಕೇವಲ ಸಾಹಿತ್ಯಿಕ ಅಂಶಗಳಿಂದಷ್ಟೇ ಅಧ್ಯಯನ ಮಾಡುವ ಪರಿಸ್ಥಿತಿ ಇಲ್ಲ. ಆದಕಾರಣ ಸಾಹಿತ್ಯದ ಅಧ್ಯಯನವನ್ನು ಅಂತರ್‌ಶಿಸ್ತೀಯ ದೃಷ್ಟಿಯಿಂದಲು ಅಧ್ಯಯನಗಳಿಗೆ ಒಳಪಡಿಸಿರುವುದನ್ನು ಗುರುತಿಸಬಹುದಾಗಿದೆ. ಹೀಗೆ ಸಾಹಿತ್ಯದ ಅಧ್ಯಯನ ಇತರ ಶಾಸ್ತ್ರಗಳ ನೆರವನ್ನು ಬಯಸುತ್ತದೆ. ಸಾಹಿತ್ಯದ ನಿರ್ಮಾಣ ಕ್ರಿಯೆಯೂ ಕೂಡ ಸಮಾಜದ ಸಮಗ್ರ ಅಂಶಗಳಿಂದ ಆಚಾರ-ವಿಚಾರ, ರಾಜಕೀಯ, ಧಾರ್ಮಿಕ, ಸಾಮಾಜಿಕ ಮೊದಲಾದವು ಗಳನ್ನು ಒಳಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಸಾಂಸ್ಕೃತಿಕವಾಗಿ ವಿಶಿಷ್ಟ ದಾಖಲೆ ಎನಿಸಿಕೊಳ್ಳುತ್ತದೆ ಎಂಬುದು ನಿರ್ವಿವಾದ.

ಸಾಹಿತ್ಯದ ಮೇಲ್ಮೆಯ ಗುಣಗಳಲ್ಲಿ ಪ್ರಾದೇಶಿಕತೆಯು ಒಂದು. ಸಾಹಿತ್ಯದಲ್ಲಿ ಜೀವನ ಮೌಲ್ಯಗಳನ್ನು ಗುರುತಿಸುವಾಗ ತೋರಿಸುವ ಸಹಜ ಆಸಕ್ತಿಯನ್ನು ಪ್ರಾದೇಶಿಕ ಚಿತ್ರವನ್ನು ಅರಿಯುವುದರಲ್ಲಿಯೂ ಅಷ್ಟೇ ಆಸಕ್ತಿಯನ್ನು ಸಹೃದಯರು ತೋರಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಸಾಹಿತ್ಯದ ಅಧ್ಯಯನ ಪರಿಪೂರ್ಣ ಎನಿಸುತ್ತದೆ. ಗೊರೂರರವರ ಕೃತಿಗಳಲ್ಲಿ ಜೀವನ ಮೌಲ್ಯಗಳಿಗೆ ನಿಚ್ಚಳ

ಉದಾಹರಣೆಗಳನ್ನು ಕಾಣುವಂತೆ ಪ್ರಾದೇಶಿಕ ಮೌಲ್ಯಗಳಿಗೂ ಹಾಗೂ ಸಾಂಸ್ಕೃತಿಕ ಅನನ್ಯತೆಗಳಿಗೂ ಅವರ ಕೃತಿಗಳು ಹೆಚ್ಚು ಸಾಕ್ಷಿಭೂತವಾಗಿವೆ. ಗೊರೂರವರ ಕೃತಿಗಳನ್ನು ಇಂತಹ ಪರಿಪೂರ್ಣವಾದ ದೃಷ್ಟಿಯಲ್ಲಿ ಅಧ್ಯಯನ ನಡೆಸುವುದು ಆಸಕ್ತಿಯ ಸಂಗತಿಯಾಗಿದೆ. ಗೊರೂರವರ ಕೃತಿಗಳನ್ನು ಕೇವಲ ಸಾಹಿತ್ಯದ ಸೊಗಸಿನಿಂದ ಕೆಲವೇ ಜನ ವಿದ್ವಾಂಸರು ಮತ್ತು ವಿಮರ್ಶಕರು ಅಧ್ಯಯನ ನಡೆಸಿರುವುದು ಸಂತಸದ ಸಂಗತಿ. ಇಂದು ಸಾಹಿತ್ಯವನ್ನು ವಿವಿಧ ವೈಚಾರಿಕ ಶಿಸ್ತುಗಳ ಮೂಲಕ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಒಳಪಡಿಸುತ್ತಿರುವುದು ಪ್ರಚಲಿತ ಪ್ರವೃತ್ತಿಯಾಗಿದೆ. ಅದರಂತೆ ಇಲ್ಲಿ ಗೊರೂರವರ ಸಾಹಿತ್ಯ ಕೃತಿಗಳನ್ನು ಸಮಾಜಶಾಸ್ತ್ರ ಮತ್ತು ಪ್ರಾದೇಶಿಕತೆಯ ದೃಷ್ಟಿಯಿಂದ ಗ್ರಾಮಸಮಾಜದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಇಲ್ಲಿನ ಉದ್ದೇಶವಾಗಿದೆ. ಈ ವ್ಯಾಪ್ತಿಯಲ್ಲಿಯೇ ಮಹಾಪ್ರಬಂಧದ ಅಧ್ಯಾಯಗಳು ಮೂಡಿಬಂದಿದೆ. ಸಾಮಾಜಿಕ ಅಧ್ಯಯನದ ದೃಷ್ಟಿಯಿಂದಲೂ ಪ್ರಾದೇಶಿಕ ಕೃತಿಗಳ ಅಧ್ಯಯನ ಅರ್ಥಪೂರ್ಣ ಎಂಬುದನ್ನು ಖಚಿತಪಡಿಸಲಾಗಿದೆ. ವ್ಯಕ್ತಿಯ ಬದುಕನ್ನು ಪ್ರತ್ಯೇಕವಾಗಿ ಗುರುತಿಸಿ ವಿಚಾರ ಮಾಡಿದಾಗ ಕಂಡುಬರುವ ಕುತೂಹಲ ವಾಸ್ತವಾಂಶ ಪರಿಸರದ ಅಧ್ಯಯನದಿಂದಲೂ ಪಡೆಯಬಹುದು ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಎಲ್ಲಾ ಪ್ರಾದೇಶಿಕ ಕಾದಂಬರಿಗಳಲ್ಲಿಯು ಒಂದು ನಿರ್ದಿಷ್ಟ ಪರಿಸರದ ವ್ಯಾಪ್ತಿಯನ್ನು ಕಾಣುವಂತೆ ಗೊರೂರವರ ಕೃತಿಗಳಲ್ಲಿಯು ಗೊರೂರಿನ ಪರಿಸರ - ಹೇಮಾವತಿಯ ಪರಿಸರ ಒಂದು ಚೌಕಟ್ಟಾಗಿದೆ. ಗೊರೂರವರ ಪಾಲಿಗೆ ಊರು ಅವಿಭಾಜ್ಯ ಅಂಗವಾಗಿದೆ. ಹೇಮಾವತಿ ಆ ಪರಿಸರಕ್ಕೆ ಉಸಿರಾದಂತೆ ಗೊರೂರವರ ಸಾಹಿತ್ಯಕ್ಕೂ ಉಸಿರಾಗಿದೆ. ಪರಿಸರದ ನೋವು ನಲಿವು ಗೊರೂರವರ ನೋವು ನಲಿವಿಗೆ ಒಂದಾಗಿದೆ. ಹೀಗೆ ಗೊರೂರವರು ಪರಿಸರಕ್ಕೆ ಪೂರ್ಣವಾಗಿ ಸ್ಪಂದಿಸಿ ಅವರ ಪ್ರಾದೇಶಿಕ ಕೃತಿಗಳನ್ನು ಓದುವ ಸಹೃದಯರಲ್ಲಿಯೂ ಸಮಾನ ಸ್ಪಂದನವನ್ನು ಮೂಡಿಸಿದ್ದಾರೆ. ವ್ಯಕ್ತಿ ತಾನಾಗಿ ತನ್ನ ಮಟ್ಟಿಗೆ ಬದುಕುವುದರಲ್ಲಿ ಕಾಣುವ ಸುಖ ಸಂತೋಷ ಪರಿಸರದೊಂದಿಗೆ ಹೊಂದಿಕೊಂಡು ಬದುಕಿದಾಗ ಅನುಭವಿಸುವ ಆನಂದ ಪಡೆಯುವ ವಿವೇಕ ವಿಶಿಷ್ಟವಾದದು. ಈ ವಾಸ್ತವಾಂಶವನ್ನು ಎಲ್ಲಾ ಪ್ರಾದೇಶಿಕ ಕೃತಿಗಳು ಪ್ರತಿಧ್ವನಿಸುವಂತೆ ಗೊರೂರವರ ಪ್ರಾದೇಶಿಕ ಕೃತಿಗಳು ಅನುರಣನಗೊಳಿಸುತ್ತವೆ.

ಪ್ರಾದೇಶಿಕ ಹಿನ್ನೆಲೆಯಲ್ಲಿ ಗೊರೂರವರ ಸಾಹಿತ್ಯದ ಮೇಲ್ಮೆಯನ್ನು, ವಿಸ್ತಾರವನ್ನು ಅರಿಯುವ, ಅಳೆಯುವ ಒಂದು ಆಸಕ್ತ ಮನಸ್ಸಿನ ಪ್ರಾಮಾಣಿಕ ಪ್ರಯತ್ನ ಇಲ್ಲಿ ಕಂಡು ಬರುತ್ತದೆ. ವಿಷಯ ವಿಸ್ತಾರಕ್ಕೆ ಒಂದು ಚೌಕಟ್ಟನ್ನು ಹಾಕಿಕೊಳ್ಳಬೇಕಾದುದು ಅನಿವಾರ್ಯವೂ ಅತ್ಯಂತ ಅಗತ್ಯ ಅಂಶ ಆಗಿರುವುದರಿಂದ 'ಗೊರೂರವರ ಸಾಹಿತ್ಯದಲ್ಲಿ ಗ್ರಾಮಸಮಾಜ' ಎಂದು ಮಹಾಪ್ರಬಂಧಕ್ಕೆ ಶೀರ್ಷಿಕೆಯನ್ನು ಕೊಡಲಾಗಿದೆ. ಆ ಮೂಲಕ ಗೊರೂರವರ ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿರುವ ಗ್ರಾಮಸಮಾಜದ ಸ್ವರೂಪವನ್ನು ತಕ್ಕಮಟ್ಟಿಗೆ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ೨

ಪ್ರಸ್ತಾವನೆ-ವಿಷಯ ಪ್ರವೇಶ

ಅಧ್ಯಾಯ ೨

ಪ್ರಸ್ತಾವನೆ - ವಿಷಯ ಪ್ರವೇಶ

ಕರ್ನಾಟಕದ ಶಿಲ್ಪಕಲೆಯ ಬೀಡಾದ ಹಾಸನ ಜಿಲ್ಲೆಯಲ್ಲಿ ಹೇಮಾವತಿ ಒಂದು ಜೀವಂತ ನದಿ. ಈ ನದಿಯ ಪರಿಸರದಲ್ಲಿ ಇರುವ ಒಂದು ಸಾಧಾರಣ ಗ್ರಾಮ 'ಗೊರೂರು'. ಇದು ರಾಮಸ್ವಾಮಿ ಅಯ್ಯಂಗಾರರ ಜನ್ಮಸ್ಥಳ. ಗೊರೂರರವರು ತಮ್ಮ ಊರಿನೊಂದಿಗೆ ವಿಶೇಷವಾಗಿ ಹೊಂದಿಕೊಂಡು ಬದುಕಿ ಅಲ್ಲಿಯ ಗ್ರಾಮೀಣ ಸಂಸ್ಕೃತಿಯನ್ನು ತಮ್ಮ ಕೃತಿಗಳಲ್ಲಿ ಅತ್ಯಂತ ಸಹಜವಾಗಿ ಸಮರ್ಪಕವಾಗಿ ಹಿಡಿದಿಟ್ಟು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟವಾದ ಪ್ರಾದೇಶಿಕ ಸಾಹಿತ್ಯವನ್ನು ನೀಡಿ ಹುಟ್ಟೂರಿನ ಹೆಸರಿನೊಂದಿಗೆ ತಮ್ಮ ಹೆಸರು ಒಂದಾಗುವಂತೆ ವಿಶಿಷ್ಟವಾದ ಸಾಹಿತ್ಯವನ್ನು ರಚಿಸಿ 'ಗೊರೂರು ರಾಮಸ್ವಾಮಿ ಅಯ್ಯಂಗಾರ್' ಎಂದು ಕನ್ನಡ ಸಾಹಿತ್ಯದಲ್ಲಿ ಖ್ಯಾತನಾಮರಾಗಿದ್ದಾರೆ. ಗೊರೂರರವರ ಕೃತಿಗಳಲ್ಲಿ 'ಗೊರೂರು' ಎಲ್ಲಾ ಕಾಲಕ್ಕೂ ಸಾಂಸ್ಕೃತಿಕವಾಗಿ ಜೀವಂತವಾಗಿ ಉಳಿದು ಬಂದಿದೆ. ಸಾಹಿತಿ ಸ್ವಾನುಭವವನ್ನು ತಾನು ಕಂಡ ಲೋಕಾನುಭವವನ್ನು ತನ್ನದಾಗಿಸಿಕೊಂಡು ಕೃತಿಯಲ್ಲಿ ಪ್ರತಿಬಿಂಬಿಸುವುದು ಸಹಜ ಚಟುವಟಿಕೆಯಾಗುತ್ತದೆ. ಇಂತಹ ವಾಸ್ತವ, ಕೃತಿಗಳಲ್ಲಿ ಸಾಹಿತಿ ತಾನು ಪ್ರತಿಪಾದಿಸಿರುವ ಅನುಭವಗಳೊಂದಿಗೆ ಹೊಂದಿರುವ ತಾದಾತ್ಮ್ಯ ಗುಣ ಅವನ ಕೃತಿಗಳಿಗೆ ವಿಶೇಷವಾಗಿ ಸಾಹಿತ್ಯಕ ಮೌಲ್ಯವನ್ನು ತಂದುಕೊಡುತ್ತದೆ. ಜೊತೆಗೆ ಇಂತಹ ಸಾಹಿತ್ಯ ಕೃತಿಗಳು ಸಹೃದಯರ ಪಾಲಿಗೆ ರಂಜನೀಯವು ವಿವೇಕಪ್ರದವು ಆಗಿ ಉಳಿಯುತ್ತದೆ. ಅಡಿಗರು ಸಾಹಿತ್ಯದಲ್ಲಿ ಮಣ್ಣಿನ ವಾಸನೆ ಇರಬೇಕೆಂದು ಒಂದು ವಿಶಿಷ್ಟ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅಡಿಗರ ದೃಷ್ಟಿಯಲ್ಲಿ ಮಣ್ಣಿನ ವಾಸನೆ ಎಂದರೆ ಸಾಹಿತಿಯ ಕೃತಿ, ನಿರ್ದಿಷ್ಟ ಪರಿಸರದ ಪ್ರಾದೇಶಿಕ ಚಿತ್ರವನ್ನು ಕೊಡುವುದರ ಮೂಲಕ ಹಾಗೂ ಅಲ್ಲಿಯ ಜನರ ಸಾಂಸ್ಕೃತಿಕ ಬದುಕಿನ ಚಿತ್ರವನ್ನು ನೀಡುವುದರ ಮೂಲಕ ಕೃತಿಯಲ್ಲಿ ತುಂಬಿ ಬಂದ ವಿಶೇಷ ನೈಜತೆಯ ಲಕ್ಷಣ ಎಂಬುದು ನಮಗೆ ಮನವರಿಕೆಯಾಗುತ್ತದೆ.

ಗ್ರಾಮಸಮಾಜದ ಅಧ್ಯಯನ ಇಂದಿನ ಕನ್ನಡ ವಿಮರ್ಶಕರಲ್ಲಿ ಪ್ರತ್ಯೇಕವಾಗಿ ಕಂಡುಬಂದಿಲ್ಲ. ಸಾಹಿತ್ಯ ವಿಮರ್ಶೆಯ ಒಟ್ಟು ದೃಷ್ಟಿಯಲ್ಲಿ ಕೇವಲ ಒಂದು ಅಂಶವಾಗಿ ಮಾತ್ರ ಕಂಡುಬಂದಿದೆ. ಇಷ್ಟಾದರು ಸಿ. ವೆಂಕಟೇಶ ಅವರ 'ಲಂಕೇಶರ ಕಥನ ಸಾಹಿತ್ಯದಲ್ಲಿ ಗ್ರಾಮಸಮಾಜ' ಎಂಬ ಎಂ.ಫಿಲ್. ಪದವಿಗಾಗಿ ನಡೆಸಿದ ಅಧ್ಯಯನ ಹಾಗೂ ಜಿ. ಉಮೇಶ ಅವರ 'ನವೋದಯ ಕಥಾ ಸಾಹಿತ್ಯದಲ್ಲಿ

ಗ್ರಾಮಸಮಾಜ' ಎಂಬ ಪಿಎಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನ ಗಮನಾರ್ಹ ಕೃತಿಗಳು. ಇದರ ಜತೆಗೆ ಹಾ.ಮಾ. ನಾಯಕ ಅವರು ಸಂಪಾದಿಸಿರುವ ಗೊರೂರರವರ ಅಭಿನಂದನ ಗ್ರಂಥವಾದ 'ಗೊರೂರು ಗೌರವ ಗ್ರಂಥ', ಶಿವರಾಮೇಗೌಡ ನಾಗವಾರ ಅವರ 'ಗೊರೂರು ಕೃತಿಗಳು - ಒಂದು ಸಾಂಸ್ಕೃತಿಕ ಅಧ್ಯಯನ' ಮುಖ್ಯವಾದ ಕೃತಿಗಳಾಗಿವೆ. ಹಾಗೆಯೇ ಸಿ.ಜಿ. ವೆಂಕಟಯ್ಯನವರು 'ಗೊರೂರರ ಜಾನಪದ ಸಾಧನೆ ಮತ್ತು ಸಿದ್ಧಿ' ಎಂಬ ಪಿಎಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನ ಕೃತಿ ಮತ್ತು ಅವರೇ ರಚಿಸಿದ ಇನ್ನೆರಡು ಕೃತಿಗಳಾದ 'ಡಾ. ಗೊರೂರು - ಜೀವನ, ಸಾಧನೆ' ಹಾಗೂ 'ಗೊರೂರು ರಾಮಸ್ವಾಮಿ ಅಯ್ಯಂಗಾರ್' ಎಂಬ ಕೃತಿಗಳನ್ನು ಇಲ್ಲಿ ಉಲ್ಲೇಖಿಸಬಹುದು. ಬೇರೆ ಬೇರೆ ಕೃತಿಗಳಲ್ಲಿ ವಿವಿಧ ಲೇಖಕರು ಗೊರೂರರವರ ಬಗ್ಗೆ ಬರೆದಿರುವ ಲೇಖನಗಳು ಗಮನಾರ್ಹವಾದವು. ಇಂದಿನ ವಿಮರ್ಶೆಗಳಲ್ಲಿ ಗ್ರಾಮಸಮಾಜದ ಅಧ್ಯಯನ ಒಂದು ಪ್ರಮುಖ ಅಂಶವಾಗಿ ನಮಗೆ ಗೋಚರವಾಗುತ್ತದೆ. ವಿಮರ್ಶಕರ ದೃಷ್ಟಿಯಲ್ಲಿ ಇಂದು ಸಾಹಿತ್ಯ ನಿಂತಿರುವುದು ಗ್ರಾಮಸಮಾಜದ ಚಿತ್ರಣದ ಹಿನ್ನೆಲೆಯಲ್ಲಿ ಎಂಬುದನ್ನು ಮರೆಯುವಂತಿಲ್ಲ. ಆಧುನಿಕ ದೃಷ್ಟಿ ಸಂಪ್ರದಾಯಿಕ ಮೌಲ್ಯಗಳ ಪರಸ್ಪರ ಹೊಂದಾಣಿಕೆ ಹಾಗೂ ಘರ್ಷಣೆಗಳನ್ನು ಇಂದಿನ ಸಾಹಿತ್ಯ ವಿಮರ್ಶೆಯಲ್ಲಿ ವಿಶೇಷವಾಗಿ ಕಾಣುತ್ತೇವೆ. ಗ್ರಾಮೀಣ ಪರಿಸರ ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ಭಾರತೀಯ ಜನಜೀವನದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿರುತ್ತದೆ. ನಮ್ಮ ಎಲ್ಲಾ ಸಾಹಿತ್ಯ ಕೃತಿಗಳಲ್ಲಿಯೂ ಗ್ರಾಮೀಣ ಪರಿಸರದ ಚಿತ್ರಣ ಮತ್ತು ಗ್ರಾಮೀಣ ಜೀವನ ಚಿತ್ರಣ ಹಾಸುಹೊಕ್ಕಾಗಿರುವುದನ್ನು ನೋಡಬಹುದು. ಕೃತಿಯ ವಸ್ತುಸ್ವರೂಪ ಹೀಗಿರುವಾಗ ಕೃತಿಯಲ್ಲಿ ಗ್ರಾಮೀಣ ಜೀವನದ ಅಧ್ಯಯನವನ್ನು ನಾವು ಒಂದಾಗಿ ಪರಿಭಾವಿಸಲೇ ಬೇಕಾಗುತ್ತದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಈ ಅಭಿಪ್ರಾಯಕ್ಕೆ ಪೂರಕವಾದ ಅಂಶಗಳನ್ನು ಮುಂದಿನ ಅಧ್ಯಾಯಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ಗುರುತಿಸಬಹುದು. ಸಾಹಿತ್ಯ ಕೃತಿಯನ್ನು ಜೀವನ ದೃಷ್ಟಿಯ ಹಿನ್ನೆಲೆಯಲ್ಲಿ ಪರಿಭಾವಿಸುವುದು ಹಾಗೂ ವಿಮರ್ಶಿಸುವುದು ಅರ್ಥಪೂರ್ಣ ಎನಿಸುತ್ತದೆ ಎಂಬ ಸತ್ಯಾಂಶವನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ.

ಕನ್ನಡ ನವೋದಯ ಸಾಹಿತಿಗಳು ತಮ್ಮ ಕತೆ, ಕಾದಂಬರಿ ಹಾಗೂ ಪ್ರಬಂಧಗಳಲ್ಲಿ ಪ್ರಾದೇಶಿಕತೆಯನ್ನು ಬಹುಮಟ್ಟಿಗೆ ಪ್ರತಿಬಿಂಬಿಸಿದ್ದಾರೆ. ಕವಿ - ಸಾಹಿತಿ ತನ್ನ ಕಾಲದ ತಾನು ಬದುಕಿ ಬಾಳಿದ ಪರಿಸರದ ಚಿತ್ರವನ್ನು ತನ್ನ ಸಾಹಿತ್ಯದ ಹಿನ್ನೆಲೆಯಲ್ಲಿ ಉಳಿಸಿಕೊಂಡಾಗ ಆ ಸಾಹಿತ್ಯ ಕೃತಿಗೆ ಪ್ರಾದೇಶಿಕ ಹಿನ್ನೆಲೆಯ ಸ್ವರೂಪ ಮೇಲ್ಮೆ ಉಂಟಾಗುತ್ತದೆ. ವರ್ತಮಾನದ ಸ್ಥಿತಿ ಚಿತ್ರ ಸಾಹಿತ್ಯ ಕೃತಿಗೆ ನೈಜತೆಯನ್ನು ತಂದುಕೊಟ್ಟಂತೆ ಪ್ರಾದೇಶಿಕ ಚಿತ್ರಣವು ಸಹ ಕೃತಿಯ ವಾಸ್ತವತೆಗೆ ಸಹಕಾರಿಯಾಗುತ್ತದೆ. ಸಾಹಿತ್ಯ - ಸಾಹಿತಿ - ಸಹೃದಯ, ಈ ಮೂವರು ಅಂಶದಲ್ಲಿ ಒಂದಾಗಿ ಅನ್ಯೋನ್ಯವಾಗಿ ಉಳಿಯುತ್ತಾರೆ ಮತ್ತು ಪರಸ್ಪರ ಸಾಫಲ್ಯವನ್ನು ಹೊಂದುತ್ತಾರೆ.

ಗೊರೂರರವರ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಬಹುಮಟ್ಟಿಗೆ ಪ್ರಾದೇಶಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಇಂದಿನ ವಿಮರ್ಶಕರ ಸಹೃದಯರ ಸ್ವಾಭಾವಿಕ ರೀತಿಯಾಗಿದೆ. ನವೋದಯ ಸಾಹಿತಿಗಳಲ್ಲಿ ಸಾಮಾನ್ಯವಾಗಿ ಕುವೆಂಪು, ಕಾರಂತ, ರಾವ್‌ಬಹುದ್ದೂರ್, ಎಚ್.ಎಲ್. ನಾಗೇಗೌಡ ಮತ್ತು ಗೊರೂರರವರನ್ನು ಪ್ರಾದೇಶಿಕ ಸಾಹಿತ್ಯವನ್ನು ಸೃಷ್ಟಿಸಿದ ಹಿರಿಯ ಸಾಹಿತಿಗಳೆಂದು ಪಟ್ಟಿ ಮಾಡುವುದುಂಟು. ಈ ರೀತಿಯ ಚಿಂತನೆಯಲ್ಲಿ ಅರ್ಥವು ಇದೆ ಮತ್ತು ಔಚಿತ್ಯವೂ ಇದೆ. ಇವರ ಪ್ರಾದೇಶಿಕ ಕೃತಿಗಳ ಅಧ್ಯಯನ ಸಾಹಿತ್ಯದ ಅಧ್ಯಯನಕ್ಕೆ ಪೂರ್ಣ ದೃಷ್ಟಿಯನ್ನು ತಂದುಕೊಡುತ್ತದೆ.

ಪ್ರಾದೇಶಿಕ ಕಾದಂಬರಿಗಳಲ್ಲಿ ಒಂದು ನಿರ್ದಿಷ್ಟ ಪರಿಸರದ ಭೌಗೋಳಿಕ ವರ್ಣನೆ, ಸಾಂಸ್ಕೃತಿಕ ಹಿನ್ನೆಲೆ, ಜನರ ಜೀವನ ರೀತಿ, ಅವರ ಬದುಕಿನ ಸಂಪ್ರದಾಯಗಳ ಅನುಸರಣೆ, ಕಲಾವಂತಿಕೆ, ಜೀವನ ಮೌಲ್ಯಗಳು ಹಾಗೂ ಆಸೆ - ಆಕಾಂಕ್ಷೆಗಳು ಚಿತ್ರಿತವಾಗಿರುತ್ತದೆ. ಗೊರೂರರವರ ಸಾಹಿತ್ಯದಲ್ಲಿ ಹೇಮಾವತಿ ತೀರದ ಗೊರೂರಿನ ಪರಿಸರ ಮೂರ್ತರೂಪ ತಾಳಿದೆ. ಕುವೆಂಪು ಅವರ ಗದ್ಯಕೃತಿಗಳಾದ 'ಮಲೆಗಳಲ್ಲಿ ಮದುಮಗಳು', 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆನಾಡಿನ ಚಿತ್ರಗಳು' ಈ ಕೃತಿಗಳಲ್ಲಿ ಮಲೆನಾಡಿನ ಗ್ರಾಮೀಣ ಜೀವನವನ್ನು ಚಿತ್ರಿಸಿದ್ದಾರೆ. ಕುವೆಂಪು ಅವರ ಗದ್ಯ ಸಾಹಿತ್ಯ ಮಲೆನಾಡಿನ ಬದುಕಿಗೆ ಪ್ರಕೃತಿ ಚಿತ್ರಣಕ್ಕೆ ಅಮರ ಸಾಕ್ಷಿ ಎಂದು ಹೇಳುವುದರಲ್ಲಿ ಔಚಿತ್ಯವಿದೆ. ನಿಸರ್ಗದ ರಮ್ಯತೆ, ಭವ್ಯತೆ ಆ ಪರಿಸರದ ಜನರ ಬದುಕಿನ ವೈವಿಧ್ಯತೆ ಈ ಕೃತಿಗಳಲ್ಲಿ ನಾವು ಓದಿ ಅನುಭವಿಸಿ ಮೆಚ್ಚಬೇಕಾದ ಅಂಶ ಎಂಬುದು ನಿರ್ವಿವಾದ. ಕಾರಂತರು ತಮ್ಮ ಕಾದಂಬರಿಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೋಟ ಸುತ್ತಮುತ್ತಲಿನ ಬ್ರಾಹ್ಮಣರ ಜೀವನವನ್ನು ಹೆಚ್ಚಾಗಿ ಚಿತ್ರಿಸಿದ್ದಾರೆ. ಗ್ರಾಮ ಜೀವನಕ್ಕೆ ಸಂಬಂಧಿಸಿದಂತೆ ಮರಳಿ ಮಣ್ಣಿಗೆ, ಬೆಟ್ಟದ ಜೀವ, ಚೋಮನದುಡಿ, ನಂಬಿದವರ ನಾಕ ನರಕ ಮತ್ತು ಮೂಕಜ್ಜಿಯ ಕನಸು ಕೃತಿಗಳಲ್ಲಿ ಪ್ರಾದೇಶಿಕ ಜೀವನ ಚಿತ್ರಿತವಾಗಿದೆ. ರಾವ್ ಬಹುದ್ದೂರ್ ಅವರ 'ಗ್ರಾಮಾಯಣ' ಕೃತಿಯಲ್ಲಿ ಪಾದಹಳ್ಳಿಯ ಕತೆಯನ್ನು ವಿಶೇಷವಾಗಿ ಗುರುತಿಸಬಹುದು. ಬಯಲುಸೀಮೆಯ ಒಕ್ಕಲಿಗರ ಗ್ರಾಮಜೀವನದ ದಟ್ಟ ಬದುಕನ್ನು ಕೊಡುವಲ್ಲಿ ಸಫಲ ಪ್ರಯತ್ನ ನಡೆಸಿದ ಎಚ್.ಎಲ್. ನಾಗೇಗೌಡರ 'ನನ್ನೂರು' ಮತ್ತು 'ದೊಡ್ಡ ಮನೆ'ಗಳು ಮಹತ್ವದ ಪಾತ್ರವಹಿಸುತ್ತದೆ. ಗೊರೂರರವರ ಕೃತಿಗಳಲ್ಲಿ ಕಂಡುಬರುವಂತಹದು ಗೊರೂರಿನ ಪರಿಸರ ಮತ್ತು ಹೇಮಾವತಿಯ ಸಂಸ್ಕೃತಿ. ಅವರು ಚಿತ್ರಿಸಿರುವ ಸಮಾಜ ಹಾಸನ ಜಿಲ್ಲೆಯ ಒಂದು ಮೂಲೆಗೆ ಸೀಮಿತವಾದರೂ ಅದರಲ್ಲಿ ವಿಸ್ತೃತ ಪ್ರದೇಶವೊಂದರ ಗ್ರಾಮೀಣ ಸಂಸ್ಕೃತಿಯ ಪ್ರತಿಬಿಂಬವನ್ನು ಕಾಣಬಹುದು. ಇವರ ಕೃತಿಗಳಲ್ಲಿ ಎಲ್ಲಾ ಜಾತಿಯವರ ರೀತಿನೀತಿಗಳನ್ನು ಗುರುತಿಸಬಹುದು. ಈ ಪ್ರಾದೇಶಿಕ ಕೃತಿಗಳೆಲ್ಲವು ಸಹೃದಯರ ಪಾಲಿಗೆ ವಿಶಿಷ್ಟ ಕೃತಿಗಳಾಗಿ ಉಳಿದಿವೆ.

ಗೊರೂರವರ ಪ್ರಾದೇಶಿಕ ಕೃತಿಗಳಲ್ಲಿ ಹೇಮಾವತಿ ಪರಿಸರದ ಚಿತ್ರ ಸಮರ್ಥ ಪರಿಪೂರ್ಣ ಹಿನ್ನೆಲೆಯಲ್ಲಿ ಉಳಿದುಬಂದಿದೆ. ಹೇಮಾವತಿ ಜೀವನದಿಯಾಗಿ ತನ್ನ ಪರಿಸರದ ಜನಕ್ಕೆ ಜೀವಂತಿಕೆಯನ್ನು ತಂದುಕೊಟ್ಟಿದೆ. ಹಳ್ಳಿಗಾಡಿನ ಬದುಕಿನಲ್ಲಿ ಗೊರೂರವರು ಒಂದಾಗಿ ಬದುಕಿ ಆ ಪರಿಸರದ ಪ್ರತಿನಿಧಿಯಾಗಿ ಉಳಿದಿದ್ದಾರೆ. ಹಳ್ಳಿ ಬದುಕಿನಲ್ಲಿ ಗೊರೂರವರು ತೋರಿಸುವ ತನ್ಮಯತೆ ಸಾಮರಸ್ಯ ಸ್ಥಿತಿ ಅವರ ಪ್ರಾದೇಶಿಕ ಕೃತಿಗಳಿಗೆ ನೈಜತೆಯ ಜೀವಂತಿಕೆಯನ್ನು ತುಂಬಿಕೊಟ್ಟಿದೆ. ಗ್ರಾಮೀಣ ಪರಿಸರದಲ್ಲಿ ನಿರ್ದಿಷ್ಟ ನೆಲೆಯಲ್ಲಿ ವಿಭಿನ್ನ ವ್ಯಕ್ತಿಗಳನ್ನು ಕಾಣಬಹುದು. ಇಂತಹ ವ್ಯಕ್ತಿಗಳ ಚಿತ್ರಣವೇ ಅವರ ಕೃತಿಗಳ ವಿಭಿನ್ನ ಪಾತ್ರಗಳಾಗಿವೆ.

ಪ್ರಾದೇಶಿಕತೆಯಲ್ಲಿ ವೈವಿಧ್ಯತೆಯನ್ನು ಗುರುತಿಸುವಂತೆ ವಿಶಿಷ್ಟತೆಯನ್ನು ನೋಡಬಹುದು. ಈ ಕಾರಣದಿಂದಲೇ ಗೊರೂರವರ ಹಳ್ಳಿಯ ಚಿತ್ರಗಳನ್ನು ಓದುವ ನಮಗೆ ನಾವು ನಗರವಾಸಿಗಳಾಗಿದ್ದರು ಅಲ್ಲಿಯ ಚಿತ್ರಗಳು ಸಹಜ ಸ್ವಾರಸ್ಯದೊಂದಿಗೆ ಅತ್ಯಾಕರ್ಷಕವಾಗಿದೆ. ಗೊರೂರವರ ಪ್ರಾದೇಶಿಕ ಕೃತಿಗಳಲ್ಲಿ ಕಂಡುಬರುವ ಒಂದೊಂದು ಪಾತ್ರವು ತನ್ನದೇ ಆದ ರೀತಿಯಲ್ಲಿ ಅನನ್ಯವೆನಿಸುತ್ತದೆ ಹಾಗೂ ಅಷ್ಟೇ ಅವಿಸ್ಮರಣೀಯವಾಗಿ ಉಳಿಯುತ್ತದೆ. ಅವರ ಪ್ರಾದೇಶಿಕ ಕೃತಿಗಳಲ್ಲಿ ಕಾಣುವ ಭಾಷೆ ಆ ಪರಿಸರಕ್ಕೆ ಹೊಂದುವಂತಹ ಭಾಷೆಯಾಗಿರುತ್ತದೆ. ಭಾಷಾವಿಜ್ಞಾನದ ದೃಷ್ಟಿಯಿಂದ ಪ್ರಾದೇಶಿಕ ಕೃತಿಗಳು ಅಧ್ಯಯನಕ್ಕೆ ಯೋಗ್ಯವಾಗಿವೆ.

ಸಾಹಿತ್ಯದಲ್ಲಿ ವೈಚಾರಿಕತೆ ಒಂದು ಜೀವನಾಡಿ ಇದ್ದಂತೆ. ವೈಚಾರಿಕತೆಯಲ್ಲಿ ಆಸಕ್ತನಾಗಿರುವ ಸಹೃದಯ ಸಾಹಿತ್ಯದಲ್ಲಿ ಇದನ್ನು ನಿಚ್ಚಳವಾಗಿ ಹುಡುಕ ಬಯಸುವುದು ಸಹಜ ಪ್ರವೃತ್ತಿಯಾಗಿದೆ. ಎಲ್ಲಾ ಕಾಲದ ಸಾಹಿತ್ಯ ಕೃತಿಗಳಲ್ಲಿಯು ಅಂದಿನ ಜನರ ವೈಚಾರಿಕ ಮನೋಧರ್ಮವನ್ನು ನಾವು ಗುರುತಿಸಲೇಬಹುದು. ವೈಚಾರಿಕತೆ ಸಾಹಿತ್ಯ ಕೃತಿಯಲ್ಲಿ ಅಪ್ರಯತ್ನಪೂರ್ವಕವಾಗಿ ಮೂಡಿಬರುವ ಒಂದು ವಾಸ್ತವ ಅಂಶ ಎಂಬುದನ್ನು ಮರೆಯುವಂತಿಲ್ಲ. ಈ ಕಾರಣದಿಂದ ಒಂದು ಕೃತಿಯ ಮೂಲ ಜೀವಾಂಶಗಳಲ್ಲಿ ವೈಚಾರಿಕತೆಯು ಒಂದು ಅಂಶವೆಂದು ಭಾವಿಸಿರುವಾಗ ಗೊರೂರವರ ಕೃತಿಗಳಲ್ಲಿ ವೈಚಾರಿಕತೆಯ ಅಂಶಗಳನ್ನು ಸ್ಪಷ್ಟವಾಗಿ ನೋಡಬಹುದು. ಪರಿಸರ ಚಿತ್ರಣ ಜೀವನ ಮೌಲ್ಯಗಳ ನಿರೂಪಣೆಗಳ ಜತೆಗೆ ಇವುಗಳ ಹಿನ್ನೆಲೆಯಲ್ಲಿಯೇ ಯುಗಧರ್ಮಕ್ಕೆ ಅನುಗುಣವಾದ ವೈಚಾರಿಕ ಅಂಶಗಳನ್ನು ಗೊರೂರವರ ಕೃತಿಗಳಲ್ಲಿ ಸಾಹಿತ್ಯದ ಮೂಲ ಲಕ್ಷಣವಾಗಿ ಗುರುತಿಸಬಹುದು.

ಸಮಾಜದಲ್ಲಿ ವೈಚಾರಿಕತೆಯ ಅಂಶ ಯುಗಧರ್ಮಕ್ಕೆ ಅನುಗುಣವಾಗಿ ಬೆಳೆಯಬಹುದು ಹಾಗೂ ಬದಲಾಗಬಹುದು. ಇದನ್ನು ಚಾರಿತ್ರಿಕ ದೃಷ್ಟಿಯಿಂದ ಗುರುತಿಸಿದರೆ ವೈಚಾರಿಕತೆಗೆ ಸಾಹಿತ್ಯ ಕೃತಿಯಲ್ಲಿ ವಿಶೇಷ ಸ್ಥಾನಮಾನ ಸೊಬಗು ದೊರೆಯುತ್ತದೆ. ಗೊರೂರವರ ಕೃತಿಗಳಲ್ಲಿ ಪ್ರತಿಪಾದಿತವಾಗಿರುವ

ವೈಚಾರಿಕತೆಯ ಸ್ವರೂಪವನ್ನು ಚಾರಿತ್ರಿಕ ದೃಷ್ಟಿಯಿಂದ ಪರಿಭಾವಿಸುವುದು ಪ್ರಸ್ತುತ ಮಹಾಪ್ರಬಂಧದ ಪ್ರಮುಖ ವಿಚಾರವಾಗಿದೆ. ಈ ವಿಚಾರಕ್ಕೆ ಪೂರಕವಾಗಿ ಅವರು ತಮ್ಮ ಕೃತಿಗಳಲ್ಲಿ ಕಟ್ಟಿಕೊಡುವ ಗ್ರಾಮಸಮಾಜದ ಸ್ವರೂಪವನ್ನು ಅಧ್ಯಯನದ ಕೇಂದ್ರ ನೆಲೆಯಲ್ಲಿ ಇಟ್ಟುಕೊಳ್ಳಲಾಗಿದೆ. ವೈಚಾರಿಕತೆಯ ಅಂಶ ಗೊರೂರರವರ ಕೃತಿಗಳಲ್ಲಿ ಹೆಚ್ಚು ಸಾಹಿತ್ಯಕ ಸೊಗಡಿನಿಂದ ಸೊಬಗಿನಿಂದ ಮೂಡಿ ಬಂದಿರುವುದು ಒಂದು ಅನನ್ಯ ಲಕ್ಷಣವಾಗಿದೆ.

ಗೊರೂರರವರ ಕೃತಿಗಳಲ್ಲಿ ವರ್ತಮಾನದ ವೈಚಾರಿಕತೆಯ ಜತೆಗೆ ಸಂಪ್ರದಾಯದ ನಂಬಿಕೆಗಳು ಜತೆ ಜತೆಯಾಗಿ ಮೂಡಿ ಬಂದಿದೆ. ಈ ಸಂಪ್ರದಾಯಗಳು ಯಾವುದೋ ಒಂದು ಕಾಲಕ್ಕೆ ಜನರ ವೈಚಾರಿಕತೆಯ ಫಲವಾಗಿ ಮೂಡಿ ಬಂದಿದೆ ಎಂಬ ವಾಸ್ತವಾಂಶವನ್ನು ಮರೆಯುವಂತಿಲ್ಲ. ಈ ದೃಷ್ಟಿಯಲ್ಲಿ ಗೊರೂರರವರು ನಮ್ಮ ಅನೇಕ ಸಂಪ್ರದಾಯಗಳನ್ನು ಪರಿಭಾವಿಸಿ ಅದರಲ್ಲಿಯೂ ವೈಚಾರಿಕತೆಯ ಮೇಲ್ಮೆಯನ್ನು ದಾಖಲಿಸಿದ್ದಾರೆ. ಸಂಪ್ರದಾಯದ ಉತ್ತಮಾಂಶಗಳನ್ನು ವೈಚಾರಿಕತೆಯ ಅಮೂಲ್ಯ ಅಂಶಗಳೊಂದಿಗೆ ಮೈಗೂಡಿಸಿಕೊಂಡು ಬದುಕಿದ ವ್ಯಕ್ತಿಗಳ ಚಿತ್ರಣ ಮತ್ತು ಸಮಾಜದ ಚಿತ್ರಣ ಗೊರೂರರವರ ಸಾಹಿತ್ಯದ ಸೊಗಸಿನ ಅಂಶ ಎಂದು ಹೇಳಬಹುದು. ಗೊರೂರರವರ ಈ ತಾತ್ವಿಕ ಹಿನ್ನೆಲೆಯನ್ನು ಗಮನಿಸಿದಾಗ ಅವರ ಕೃತಿಗಳು ವೈಚಾರಿಕತೆಯ ನೆಲೆಗಟ್ಟಿನಲ್ಲಿ ನಿರೂಪಿತವಾಗಿದೆ ಎಂದು ಗುರುತಿಸಬಹುದು.

ಇಂದು ಕರ್ನಾಟಕದಲ್ಲಿ ಅನೇಕ ಪ್ರಸಿದ್ಧ ವಿದ್ವಾಂಸರಿಂದ ಸಾಂಸ್ಕೃತಿಕ ಅಧ್ಯಯನ ಅನನ್ಯವಾಗಿ ವಿಶಿಷ್ಟ ದೃಷ್ಟಿಕೋನದಲ್ಲಿ ನಡೆದಿರುವುದನ್ನು ಕಾಣಬಹುದು. ಇದು ಸಾಹಿತ್ಯ ಅಧ್ಯಯನದ ಪರಿಪೂರ್ಣ ದೃಷ್ಟಿಯಾಗಿದೆ. ಭಾರತೀಯ ಸಾಂಸ್ಕೃತಿಕ ಬದುಕಿನ ಅನೇಕ ರೀತಿಯ ವಿಶೇಷತೆಗೆ - ಸಾಫಲ್ಯಕ್ಕೆ ಕಾರಣಗಳನ್ನು ಇಂತಹ ಅಧ್ಯಯನದಲ್ಲಿ ಗುರುತಿಸಬಹುದು. ಸಾಂಸ್ಕೃತಿಕ ದೃಷ್ಟಿಯಿಂದ ಹತ್ತೊಂಭತ್ತನೆ ಶತಮಾನದ ಕೊನೆಯ ದಶಕಗಳು ಹಾಗೂ ಇಪ್ಪತ್ತನೆ ಶತಮಾನದ ಆರಂಭದ ದಶಕಗಳನ್ನು ಅನೇಕ ದೃಷ್ಟಿಯಲ್ಲಿ ಸಂಧಿಕಾಲದ ದಿನಗಳು ಎಂದು ಗುರುತಿಸುತ್ತೇವೆ. ಈ ಕಾಲದಲ್ಲಿ ರಚಿತವಾದ ಸಾಹಿತ್ಯ ಪ್ರಾಚೀನ ಸಂಸ್ಕೃತಿ ಹಾಗೂ ನವೀನ ಸಂಸ್ಕೃತಿ ಎರಡನ್ನು ತುಲನಾತ್ಮಕವಾಗಿ ಗಮನಿಸುವುದು ಸಹಜ ಅಂಶವಾಗಿದೆ. ಸಾಹಿತ್ಯದಲ್ಲಿ ಮೌಲ್ಯ ನಿರ್ಣಯ ಮಾಡುವಾಗ ಇಂಥಹ ಸಂಧಿಕಾಲದ ಸಾಹಿತ್ಯ ಲಕ್ಷಣಗಳನ್ನು ವಿಶೇಷವಾಗಿ ನೋಡುತ್ತೇವೆ. ಸಂಧಿಕಾಲದ ಸಾಹಿತ್ಯದಲ್ಲಿ ಪೂರ್ವ-ಪಶ್ಚಿಮಗಳ ಅನುಸಂಧಾನ ಹಾಗೂ ಅಪರೂಪವಾಗಿ ಘರ್ಷಣೆಯ ಅಂಶವನ್ನು ಗುರುತಿಸಬಹುದು. ಇಂಥ ಸಂಧಿಕಾಲದಲ್ಲಿ ದೇಶಿ ಸಂಸ್ಕೃತಿಗೆ ಹೊಸ ರೂಪ ದೊರಕಿತ್ತು ಎಂಬ ಮಾತು ಒಪ್ಪುವ ಮಾತಾಗಿದೆ. ಸಂಧಿಕಾಲದಲ್ಲಿ ನಮ್ಮ ಸಂಸ್ಕೃತಿಗೆ ಆತ್ಮವಿಮರ್ಶೆ ಮಾಡಿಕೊಳ್ಳುವ ವಿಶೇಷ ಸಂದರ್ಭ ಒದಗಿ ಬಂದಿತು. ಗ್ರಾಮಸಮಾಜದ ಅಧ್ಯಯನ ಮಾಡುವಾಗ ಈ ಎಲ್ಲ ತಾತ್ವಿಕ ಅಂಶಗಳ ಹಿನ್ನೆಲೆ ಅಧ್ಯಯನದ ಸೂತ್ರರೂಪವಾಗಿ

ಉಳಿಯುತ್ತದೆ. ಸಾಹಿತ್ಯದಲ್ಲಿ ವಸ್ತುನಿಷ್ಠ ವಿವರಣೆ ನಿರ್ಣಯಗಳನ್ನು ಹೇಳುವಾಗ ಸಂಧಿಕಾಲದ ಸಾಂಸ್ಕೃತಿಕ ಸ್ಥಿತ್ಯಂತರಗಳು ನಮಗೆ ಪ್ರಮುಖ ಎನಿಸುತ್ತದೆ.

ಪಾಶ್ಚಾತ್ಯ ಸಂಸ್ಕೃತಿಯ ಒತ್ತಡ, ಆಧುನೀಕರಣ, ನಗರೀಕರಣ ಹಾಗೂ ಕೈಗಾರಿಕೀಕರಣದ ಪ್ರಭಾವದಿಂದ ನಮ್ಮ ಗ್ರಾಮೀಣ ಸಂಸ್ಕೃತಿಯ ಚಿರಂತನ ಮೌಲ್ಯಗಳು ಕ್ರಮೇಣ ಕುಸಿಯುತ್ತ ಕಣ್ಮರೆಯಾಗುತ್ತಿವೆ ಎಂಬ ಮಾತು ಇಂದು ನಮ್ಮ ಅನುಭವಕ್ಕೆ ಬರುತ್ತಿದೆ. ವಸಾಹತು ಸಂಸ್ಕೃತಿಗೆ ಪ್ರತಿಕ್ರಿಯಿಸಿದ ಹಲವು ಆಯಾಮಗಳನ್ನು ನಾವು ಗೊರೂರರವರ ಕೃತಿಗಳಲ್ಲಿ ನೋಡಬಹುದು. ಯಾವುದೇ ಸಮಾಜ ನಿರಂತರವಾಗಿ ಬದಲಾವಣೆಗಳಿಗೆ ಒಳಪಟ್ಟು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತದೆ. ಭಾರತದಲ್ಲಿ ವಸಾಹತುಶಾಹಿ ಆಡಳಿತದಿಂದ ಹಿಡಿದು ಇಲ್ಲಿಯವರೆವಿಗೆ ಗ್ರಾಮಸಮಾಜ ಸಾಕಷ್ಟು ಬದಲಾವಣೆಗಳಿಗೆ ಒಳಪಟ್ಟಿದೆ. ಇಂದು ಗ್ರಾಮಸಮಾಜ ಅನೇಕ ತಲ್ಲಣಗಳಿಗೆ, ಸಂಕಟಗಳಿಗೆ ಒಳಗಾಗಿದೆ. ಗೊರೂರರವರ ಕೃತಿಗಳು ಕಟ್ಟಿಕೊಡುವ ಗ್ರಾಮಸಮಾಜದ ವಿವರಗಳಿಗೆ ಪೂರಕವಾಗಿ ಇಂದು ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಜಾಗತೀಕರಣವು ಉಂಟು ಮಾಡಿದ ಸಮಸ್ಯೆಗಳನ್ನು ವಿವೇಚಿಸಲಾಗಿದೆ. ಜಾಗತೀಕರಣದ ಫಲವಾಗಿ ಹುಟ್ಟಿಕೊಂಡ 'ವಿಶ್ವಗ್ರಾಮ' (Global Village) ಎಂಬ ಹೊಸ ಪರಿಕಲ್ಪನೆಯನ್ನು ಸ್ಥೂಲವಾಗಿ ವಿವರಿಸಲಾಗಿದೆ. ಇಂತಹ ಸಂದರ್ಭದಲ್ಲಿ ಗ್ರಾಮಸಮಾಜದ ಬಗ್ಗೆ ಶೈಕ್ಷಣಿಕ ಹಾಗೂ ಶೈಕ್ಷಣಿಕೇತರ ವಲಯಗಳಲ್ಲಿ ಸಾಕಷ್ಟು ಅಧ್ಯಯನಗಳು ಜರುಗುತ್ತಿವೆ. ಗೊರೂರರವರು ತಮ್ಮ ಕೃತಿಗಳ ಮೂಲಕ ಗ್ರಾಮೀಣ ಸಮಾಜದ ಮೌಲ್ಯಗಳ ಸಂರಕ್ಷಣೆಗೆ ನಮ್ಮ ಕಣ್ತೆರೆಸಿ ಅದರ ರಕ್ಷಣೆಗೆ ನಮ್ಮನ್ನು ಜಾಗೃತಗೊಳಿಸುವ ಕಾಯಕವನ್ನು ಅವರು ತಮ್ಮ ಕೃತಿಗಳಲ್ಲಿ ಮಾಡಿದ್ದಾರೆ. ಹೀಗೆ ಗ್ರಾಮೀಣ ಸಂಸ್ಕೃತಿಯ ಪರಿಚಯ ಮತ್ತು ಸಂರಕ್ಷಣೆಯ ಕಾರ್ಯ ಎರಡೂ ಅಂಶಗಳಲ್ಲಿ ಗೊರೂರರವರ ಜವಾಬ್ದಾರಿ ಗಮನಾರ್ಹವಾದುದು. ಈ ದೃಷ್ಟಿಯಲ್ಲಿ ಅವರ ಕೃತಿಗಳನ್ನು ಗ್ರಾಮಸಮಾಜದ ಮೌಲ್ಯವರ್ಧಿತ ಕೃತಿಗಳೆಂದು ಹೇಳಬಹುದು. ಈ ಕಾರಣಕ್ಕಾಗಿಯೇ ಗೊರೂರರವರು ನವೋದಯ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಗೊರೂರರವರ ಸಾಹಿತ್ಯದ ಈ ಮೇಲ್ಮೆಯನ್ನು ಇಪ್ಪತ್ತನೆ ಶತಮಾನದ ಆರಂಭದ ದಶಕಗಳಲ್ಲಿ ಕನ್ನಡ ವಿಮರ್ಶಕರು ಗುರುತಿಸದೆ ಅಲಕ್ಷ್ಯ ತೋರಿರುವುದು ವಿಷಾದನೀಯವಾಗಿದೆ. ಇತ್ತೀಚಿನ ದಶಕಗಳಲ್ಲಿ ಈ ಅಲಕ್ಷ್ಯ ಕಣ್ಮರೆಯಾಗುತ್ತಿರುವುದು ವಿಶೇಷ ಸಂಗತಿ. ದೇಶಿ ಸಂಸ್ಕೃತಿಯ ಪುನರುತ್ಥಾನ ಕಾರ್ಯದಲ್ಲಿ ಗೊರೂರರವರ ಕೃತಿಗಳು ಸಫಲವಾಗಿದೆ ಎಂಬ ಸಂಗತಿಯನ್ನು ಇಂದಿನ ಚಿಂತಕರು ಒಪ್ಪಿ ನುಡಿದಿದ್ದಾರೆ.

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಪತ್ರಿಕಾರಂಗದವರು ದೇಶಿ ಸಂಸ್ಕೃತಿಯ ಮೇಲ್ಮೆಯನ್ನು ತಮ್ಮ ಪತ್ರಿಕೆಗಳ ಮೂಲಕ ಹೇಗೆ ಉತ್ಕರ್ಷಗೊಳಿಸಿದರೋ ಅದಕ್ಕೆ ಸಂವಾದಿಯಾಗಿ ಗೊರೂರರವರು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಗೊರೂರರವರು 'ಲೋಕಮಿತ್ರ',

‘ಆಂಧ್ರಪತ್ರಿಕೆ’ ಮತ್ತು ‘ಭಾರತಿ’ ಪತ್ರಿಕೆಗಳ ಸಮಾಚಾರ ಲೇಖಕರಾಗಿ ಕಾರ್ಯನಿರ್ವಹಿಸಿದ್ದಾರೆ. ಇಲ್ಲಿಯು ಗ್ರಾಮೀಣ ಸಂಸ್ಕೃತಿಯ ವಿಚಾರಮಂಡನೆ ನಮಗೆ ಮನವರಿಕೆಯಾಗುತ್ತದೆ.

ಗೊರೂರವರು ಜನ್ಮತಃ ಉತ್ತಮ ಜಾತಿಯ ಸಂಪ್ರದಾಯಸ್ಥರ ಮನೆತನದಲ್ಲಿ ಹುಟ್ಟಿದವರು. ಅವರು ತಮ್ಮ ಗ್ರಾಮದ ಎಲ್ಲಾ ವರ್ಗ - ಜಾತಿಯವರೊಂದಿಗೆ ಬೆರತು ವಿಶಿಷ್ಟಪೂರ್ಣವಾಗಿ ಬದುಕಿ ಬಾಳಿದವರು. ಗ್ರಾಮೀಣ ಪರಿಸರದ ಎಲ್ಲ ವ್ಯಕ್ತಿಗಳ ಜೀವನದ ನೋವು ನಲಿವಿಗೆ ಸ್ಪಂದಿಸಿ ತಾವು ಪಡೆದ ವಿಶೇಷ ಅನುಭವವನ್ನು ತಮ್ಮ ಕೃತಿಗಳ ಮೂಲಕ ಸಹೃದಯರೊಂದಿಗೆ ಹಂಚಿಕೊಂಡಿದ್ದಾರೆ. ಅವರ ಕೃತಿಗಳಲ್ಲಿ ನಾವು ಗಮನಿಸುವ ಅನುಭವ ಶ್ರೀಮಂತಿಕೆಯ ಸೊಗಸು ಈ ದೃಷ್ಟಿಯಿಂದ ಮುಖ್ಯವಾದದ್ದು ಎಂದು ಗುರುತಿಸಬಹುದು. ಗ್ರಾಮೀಣ ಸಂಸ್ಕೃತಿಯ ನೈಜ ಚಿತ್ರಣಕ್ಕೆ ಗೊರೂರವರು ಪಡೆದ ಅನನ್ಯವಾದ ಗ್ರಾಮೀಣ ಜೀವನದ ಅನುಭವ ಮೂಲಶಕ್ತಿಯಾಗಿದೆ - ಪ್ರೇರಕಶಕ್ತಿಯಾಗಿದೆ.

ಗೊರೂರವರು ತಮ್ಮ ಕೃತಿಗಳಲ್ಲಿ ಗಾಂಧೀಜಿಯವರ ವಿಚಾರಧಾರೆಯನ್ನು ಪ್ರಸ್ತಾಪಿಸಿರುವುದು ಕೃತಿಗಳ ವಿಶೇಷ ಸಂಗತಿಯಾಗಿದೆ. ಗಾಂಧೀಜಿಯವರೊಂದಿಗೆ ಸಂಪರ್ಕ ಹೊಂದಿ ಅವರ ಸಿದ್ಧಾಂತಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡ ಗೊರೂರವರು ಗಾಂಧಿತತ್ತ್ವವನ್ನು ತಮ್ಮ ಕೃತಿಗಳಲ್ಲಿ ಕಥಾ ವಸ್ತುವಿನೊಂದಿಗೆ ಸೇರಿಸಿ ಹೇಳುವಲ್ಲಿ ಔಚಿತ್ಯವನ್ನು ತೋರಿಸಿದ್ದಾರೆ. ಹೀಗೆ ಗೊರೂರವರ ಸಾಹಿತ್ಯ ತಾತ್ವಿಕವಾಗಿ ತಾರ್ಕಿಕವಾಗಿ ಹೆಚ್ಚು ಸಮರ್ಪಕವಾಗಿದೆ ಎಂಬ ಭಾವನೆ ಸಹೃದಯರಿಗೆ ವೇದ್ಯವಾಗುತ್ತದೆ. ಗೊರೂರವರ ಸಾಹಿತ್ಯವನ್ನು ಕುರಿತು ಅಭ್ಯಾಸ ಮಾಡುವವರಿಗೆ ಅದು ಸಮರ್ಥ, ಸಂತಸದ, ಸವಾಲಿನ ಮತ್ತು ಸಾರ್ಥಕ ಚಟುವಟಿಕೆ ಎನಿಸುತ್ತದೆ. ಈ ಚಿಂತನೆಯಲ್ಲಿಯೇ ಗೊರೂರವರ ಕೃತಿಗಳನ್ನು ಅವಲೋಕಿಸಿ ‘ಗೊರೂರವರ ಸಾಹಿತ್ಯದಲ್ಲಿ ಗ್ರಾಮಸಮಾಜ’ ಎಂಬ ಮಹಾಪ್ರಬಂಧವನ್ನು ರಚಿಸಲಾಗಿದೆ.

ಗೊರೂರವರು ಕೊಡುವ ಗ್ರಾಮಸಮಾಜದ ಚಿತ್ರಣ ಅವರು ಕಂಡು ಅನುಭವಿಸಿ ಪಡೆದ ಚಿತ್ರಣ. ಸಾಹಿತ್ಯಕ್ಕೆ ವಸ್ತು ಶ್ರೀಸಾಮಾನ್ಯನ ಬದುಕು ಆಗಬಲ್ಲದು - ಗ್ರಾಮೀಣ ಪರಿಸರದ ಚಿತ್ರಣವು ಆಗಬಹುದು ಎಂಬ ಪ್ರಸಿದ್ಧ ಆಂಗ್ಲ ಕವಿ ಬಹಳ ಹಿಂದೆಯೇ ತಿಳಿಸಿದ್ದಾನೆ. ಗ್ರಾಮೀಣ ಜನರ ಬದುಕು ಅವಲೋಕನ ಮಾಡಿ ಅರ್ಥ ಮಾಡಿಕೊಂಡಂತೆಲ್ಲಾ ಕುತೂಹಲವನ್ನು ಮೂಡಿಸಿ ಬೆಳೆಸುವ ಸತ್ತ್ವ ಒಂದಿದೆ ಎಂಬುದು ಗೊರೂರವರ ಸಾಹಿತ್ಯದಲ್ಲಿ ಚೆನ್ನಾಗಿ ಮನಗಾಣಬಹುದು. ಅವರ ಬದುಕಿನ ವಿವಿಧ ನೆಲೆಗಳನ್ನು ಲೇಖಕರು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ. ಪ್ರತಿ ಕೃತಿಯಲ್ಲಿಯು ಗ್ರಾಮೀಣ ಚಿತ್ರವನ್ನು ಕೊಡುವಾಗ ಅವರು ಪ್ರತಿಪಾದಿಸಿರುವ ಸಾಂಸ್ಕೃತಿಕ ಅನನ್ಯತೆಯ ದೃಷ್ಟಿ ಅತ್ಯಂತ ಮೇಲ್ಮೆಯಿಂದ ಕೂಡಿದೆ. ವೈಯಕ್ತಿಕ ಬದುಕಿನ ನೋವು ನಲಿವು ಒಂದು ಸಾಮಾನ್ಯ ಸಂಗತಿಯಾದರು ಆ ಬದುಕಿನ ಹಿಂದೆ ಇರುವ ಸಾಂಸ್ಕೃತಿಕ ಹಿನ್ನೆಲೆ ಅತ್ಯಂತ ಗಮನಾರ್ಹವಾಗಿರುತ್ತದೆ. ಗ್ರಾಮೀಣ ಜನರ ಬದುಕಿನ ರೀತಿಯಲ್ಲಿ ವಿವಿಧ ಕಸಬುಗಳನ್ನು ಕಾಣಬಹುದು ಹಾಗೂ ವಿವಿಧ ನಂಬಿಕೆಗಳನ್ನು ಗುರುತಿಸಬಹುದು.

ಗ್ರಾಮೀಣ ಕಲೆ ಕಲಾದೃಷ್ಟಿಯಿಂದ ರೋಚಕವಷ್ಟೇ ಅಲ್ಲದೆ ವೈವಿಧ್ಯಮಯವಾಗಿದೆ ಎಂಬುದನ್ನು ಗೊರೂರವರು ಗ್ರಾಮೀಣ ಜನರು ಆಚರಿಸುವ ಹಬ್ಬ-ಹರಿದಿನಗಳ ಹಿನ್ನೆಲೆಯಲ್ಲಿ ಪ್ರಸ್ತುತಪಡಿಸಿರುವುದು ಅವರ ಕೃತಿಗಳ ವಿಶೇಷ ಸಂಗತಿಯಾಗಿದೆ. ಮಹಾಪ್ರಬಂಧದಲ್ಲಿ ಈ ವಿಷಯಗಳ ಉಲ್ಲೇಖ ವಿವರಣೆಯೊಂದಿಗೆ ಕೂಡಿದೆ. ಗೊರೂರವರು ಗ್ರಾಮೀಣ ಸಮಾಜದ ಸಣ್ಣ ಸಂಗತಿಯಿಂದ ಹಿಡಿದು ವಿಶೇಷ ಸಂಗತಿಗಳವರೆಗೆ ಆ ಸಮಾಜದ ಎಲ್ಲ ವಿಷಯಗಳನ್ನು ಪೂರ್ಣದೃಷ್ಟಿಯಲ್ಲಿ ಪರಿಭಾವಿಸಿರುವುದು ಅವರ ಕೃತಿಗಳ ಮೂಲಕ ನಮಗೆ ಸ್ಪಷ್ಟವಾಗುತ್ತದೆ. ಈ ಕಾರಣದಿಂದಲೇ ಗ್ರಾಮೀಣ ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದ ಗೊರೂರವರ ಕೃತಿಗಳನ್ನು ಪ್ರಮುಖವಾಗಿ ಪರಿಭಾವಿಸಿ ವಿಸ್ತೃತವಾಗಿ ಚರ್ಚಿಸಲಾಗಿದೆ.

ಗೊರೂರವರು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿರುವ ಧರ್ಮದೃಷ್ಟಿ ಸಾಧಾರಣ ವ್ಯಕ್ತಿಗೂ ಒಪ್ಪಿತವಾಗುವಂತಹ ಅಷ್ಟೇ ಸರಳ ದೃಷ್ಟಿಯಾಗಿದೆ. ವ್ಯಕ್ತಿ ತಾನು ಬದುಕಿ ತನ್ನ ಸಹಜೀವಿಗಳನ್ನು ಬದುಕಲು ಅನುಕೂಲ ಮಾಡಿಕೊಡುವ ವಿಶೇಷ ಜೀವನ ಕಲೆಯನ್ನು ಅವರು ಧರ್ಮ ಎಂದು ತಮ್ಮ ಕೃತಿಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಸಂಪ್ರದಾಯ-ಆಧುನಿಕತೆಗಳ ಆರೋಗ್ಯಕಾರಿಯಾದ ಸಮ್ಮಿಳನವನ್ನು ಗೊರೂರವರ ಕೃತಿಗಳು ಸ್ಪಷ್ಟಪಡಿಸಿರುವುದನ್ನು ಪ್ರಸ್ತಾಪಿಸಲಾಗಿದೆ. ದಲಿತರ ಜೀವನವನ್ನು ಗೊರೂರವರು ತಮ್ಮ ಕೃತಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಿಶೇಷವಾಗಿ ಚಿತ್ರಿಸಿದ್ದಾರೆ. ೧೯೪೦ರ ವೇಳೆಗೆ ಹೊಲೆಯರ ಬದುಕಿನ ಬಗ್ಗೆ ಲೇಖಕರು ವಿಚಾರ ಮಾಡಿರುವುದು ಮುಖ್ಯವಾದ ಸಂಗತಿಯಾಗಿದೆ. ಗೊರೂರಿನ ಜಾತ್ರೆಯಲ್ಲಿ ಕೆಳಜಾತಿಯವರಿಗೆ ಕೊಡುತ್ತಿದ್ದ ಪುರಸ್ಕಾರವನ್ನು ಗೊರೂರವರು ಅತ್ಯಂತ ನವುರಾಗಿ ಸವಿಸ್ತಾರವಾಗಿ ತಿಳಿಸಿರುವುದು ಗಮನಾರ್ಹವಾದ ಸಂಗತಿ. ಇಲ್ಲಿ ಸಾಹಿತಿಯ ನಿಷ್ಪಕ್ಷಪಾತ ದೃಷ್ಟಿ ಎಷ್ಟು ಮನನೀಯವಾಗಿದೆಯೋ ಅಷ್ಟೇ ಪುರಸ್ಕೃತವಾಗಿದೆ ಎಂಬುದನ್ನು ಗುರುತಿಸಬಹುದು. ಸಂಸಾರದಲ್ಲಾಗಲಿ ಸಾಮಾಜಿಕ ಜೀವನದಲ್ಲಾಗಲಿ ಹೆಣ್ಣು-ಗಂಡಿನ ಪಾತ್ರವನ್ನು ಸ್ಥಾನ ವಿಶೇಷವನ್ನು ಗುರುತಿಸುವಲ್ಲಿಯು ಗೊರೂರವರ ಔದಾರ್ಯ ವಿಚಕ್ಷಣೆ ಮೆಚ್ಚುವಂತಹುದಾಗಿದೆ. ಮೂಢನಂಬಿಕೆಗಳ ಚರ್ಚೆ ಲೇಖಕರ ಕೃತಿಗಳಲ್ಲಿ ಸಮಯೋಚಿತವಾಗಿ ಸಮರ್ಪಕವಾಗಿ ಮೂಡಿಬಂದಿರುವುದು ಅವರ ಕೃತಿಗಳಿಗೆ ವೈಚಾರಿಕ ಪ್ರಜ್ಞೆಯ ಲಕ್ಷಣವನ್ನು ತಂದುಕೊಟ್ಟಿದೆ.

ಗೊರೂರವರ ಜಾನಪದ ಸಂಗ್ರಹವನ್ನು ಗಮನಿಸಿದಾಗ ಅವರಿಗಿರುವ ಜಾನಪದ ಸಾಹಿತ್ಯದ ಒಲವನ್ನು ಪ್ರತಿಬಿಂಬಿಸುತ್ತದೆ. ಜಾನಪದ ಸಾಹಿತ್ಯವನ್ನು ಸಂಗ್ರಹಿಸುವ ಕಾರ್ಯದಲ್ಲಿ ಗೊರೂರವರು ಅಗ್ರಶ್ರೇಣಿಯ ವಿದ್ವಾಂಸರಾಗಿದ್ದಾರೆ. ಅವರು ತಮ್ಮ ಕೃತಿಗಳಲ್ಲಿ ಬಳಸಿರುವ ಭಾಷೆ ವಸ್ತುವಿಗೆ ತಕ್ಕಂತೆ ಅಭಿವ್ಯಕ್ತಪಡೆದಿರುವ 'ಗ್ರಾಮಭಾಷೆ' ಆಗಿದೆ. ಗ್ರಾಮೀಣ ಶೈಲಿಯು ಸಹ ಇವರ ಶೈಲಿಯ ಒಂದು ವಿಶೇಷವಾಗಿದೆ.

ಗೊರೂರವರ ಕೃತಿಗಳಲ್ಲಿ ವಸ್ತು ವೈವಿಧ್ಯತೆ ಮುಖ್ಯವಾದ ಲಕ್ಷಣವಾದರೆ ಕಥಾ ಸಂದರ್ಭವನ್ನು ವಿವರಿಸುವಾಗ ಮತ್ತು ವರ್ಣಿಸುವಾಗ ಅವರು ಬಳಸುವ ರಸಿಕತೆಯ ಮಾತುಗಳು ಸಂದರ್ಭವನ್ನು ಮನಮುಟ್ಟಿಸುವುದರ ಜತೆಗೆ ಚಿರಸ್ಮರಣೀಯಗೊಳಿಸುತ್ತದೆ. ಕನ್ನಡ ಸಾಹಿತ್ಯದಲ್ಲಿ ರಸಿಕತೆಯ ಶೈಲಿಯನ್ನು ಬಳಸಿದವರಲ್ಲಿ ಗೊರೂರವರು ಅಗ್ರಮಾನ್ಯರಾಗಿದ್ದಾರೆ. ಇವರ ಮಾತಿನ ರಸಿಕತೆಯಲ್ಲಿ ವ್ಯಂಗ್ಯವಿಲ್ಲ, ವ್ಯಗ್ರವಿಲ್ಲ. ನಗುವಿನ ಮರೆಯಲ್ಲಿ ಸತ್ಯವನ್ನು ಅಂತರ್ಗತಗೊಳಿಸುವ ವಿಶೇಷ ಕೌಶಲ್ಯ ಗೊರೂರವರ ಶೈಲಿಯ ನೈಪುಣ್ಯವಾಗಿದೆ. ಗೊರೂರವರ ಕೃತಿಗಳು ಸಹೃದಯರ ಅಂತರಂಗದಲ್ಲಿ ಅವಿಸ್ಮರಣೀಯವಾಗಿರುವುದು ಅವರ ಹಾಸ್ಯದ ಸೊಬಗಿನಿಂದ. ಅವರ ಸಾಹಿತ್ಯದಲ್ಲಿನ ರಸಿಕತೆಯ ಗುಂಗಿನಲ್ಲಿ ಮುಳುಗಿ ಹೋದ ಸಹೃದಯರು ಕೆಲವೊಮ್ಮೆ ಅಲ್ಲಿಯ ಗಂಭೀರ ಸಂಗತಿಗಳನ್ನು ಮರೆತು ಬಿಡುವುದುಂಟು. ಅಷ್ಟೇ ಅಲ್ಲದೆ ಅನೇಕ ವಿಮರ್ಶಕರು ಸಹ ಗೊರೂರವರ ಕೃತಿಗಳನ್ನು ವಿಮರ್ಶಿಸುವಾಗ ವಸ್ತುನಿಷ್ಠ ವಿಮರ್ಶೆಯನ್ನು ಮಾಡದೆ ಅವರ ಕೃತಿಗಳಲ್ಲಿ ಕಂಡುಬರುವ ಹಾಸ್ಯದ ಸಂಗತಿಗಳನ್ನು ಹೇಳಿ ಕೃತಿಯ ವಿಮರ್ಶೆಯನ್ನು ಕಡೆಗಣಿಸಿರುವುದುಂಟು. ಪಾರಿಜಾತ ಪರಿಮಳ ಅದರ ಸೊಬಗಿನ ಕಾಣ್ಕೆಗೆ ಕಾರಣವಾಗುವಂತೆ ಗೊರೂರವರ ಸಾಹಿತ್ಯದಲ್ಲಿಯ ರಸಿಕ ಶೈಲಿ ಕೃತಿಯ ಅಂತಸ್ಸತ್ತ್ವವನ್ನು ಕಾಣುವುದಕ್ಕೆ ಸಹೃದಯರಿಗೆ ಪ್ರೇರಣೆ ತಂದು ಕೊಡುತ್ತದೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ವಿಷಯ.

ವಾಸ್ತವ ಬದುಕಿನಲ್ಲಿ ಸ್ವತಂತ್ರ ವ್ಯಕ್ತಿಯಾಗಿ, ಸ್ವಚ್ಛ ವ್ಯಕ್ತಿಯಾಗಿ ಹಾಗೂ ಸ್ನೇಹಮಯಿ ವ್ಯಕ್ತಿಯಾಗಿ ಗೊರೂರವರು ಹೇಗೆ ವಿಶಿಷ್ಟ ಬದುಕನ್ನು ನಡೆಸಿದರೋ ಅದೇ ರೀತಿಯಲ್ಲಿ ಸಾಹಿತಿಯಾಗಿ ಕನ್ನಡ ಸಾರಸ್ವತ ಲೋಕದಲ್ಲಿ ಸಹೃದಯರಿಗೆಲ್ಲಾ ಅಚ್ಚುಮೆಚ್ಚಿನ ಸಾಹಿತಿಯಾಗಿದ್ದಾರೆ. ಯಾವುದೇ ರೀತಿಯ ಗುಂಪುಗಾರಿಕೆಗೂ ಸೇರದ ವಿಶಾಲ ಮನೋಧರ್ಮದ ವಿವೇಚನಾ ದೃಷ್ಟಿಯ ಸಾಹಿತಿ ಗೊರೂರವರು. ಅಮೆರಿಕದಲ್ಲಿ ಗೊರೂರವರು ಇದ್ದರು ಅವರ ಗೊರೂರಿನ ನೆನಪು ನಿತ್ಯ ಚೇತೋಹಾರಿಯಾಗಿತ್ತು. ಇಂತಹ ಗೊರೂರವರ ವಿಚಾರಪೂರ್ಣ ಕೃತಿಗಳನ್ನು ಆಸಕ್ತಿ, ಶ್ರದ್ಧೆ, ನಿರ್ಮಲ ಮನಸ್ಸು ಹಾಗೂ ಶುದ್ಧ ದೃಷ್ಟಿಯಲ್ಲಿ ಅಧ್ಯಯನ ಮಾಡಿ ಮೇಲೆ ಪ್ರತಿಪಾದಿಸಿರುವ ವಿಚಾರಗಳ ಹಂದರದ ಮೇಲೆ 'ಗೊರೂರವರ ಸಾಹಿತ್ಯದಲ್ಲಿ ಗ್ರಾಮಸಮಾಜ' ಎಂಬ ಮಹಾಪ್ರಬಂಧ ರಚಿತವಾಗಿದೆ.

ಅಧ್ಯಾಯ ೩

ಗ್ರಾಮಸಮಾಜದ ಸ್ವರೂಪ

ಅಧ್ಯಾಯ ೩

ಗ್ರಾಮ ಸಮಾಜದ ಸ್ವರೂಪ

ಡಾರ್ವಿನ್ನನ 'ವಿಕಾಸವಾದ' ಮಾನವನ ವಿಕಾಸಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ತಿಳಿಯಲು ಅಧ್ಯಯನ ಮಾಡಲು ಒಂದು ಬದ್ಧ ಸುಂದರ ನೆಲೆಗಟ್ಟು ಎಂಬುದಾಗಿ ವಿಜ್ಞಾನಿಗಳು ಮತ್ತು ಸಮಾಜಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮಂಗನಿಂದ ಮಾನವ ಹೇಗೆ ಆದನು ಎಂಬುದು ಡಾರ್ವಿನ್ನನ ಜೈವಿಕ ಸಿದ್ಧಾಂತದ ಸ್ವರೂಪವಾಗಿದೆ. ಆದಿಮಾನವ ಅಂತರ್‌ಗ್ರಹದ ಮಾನವ ಆದ ರೀತಿಯನ್ನು ಬೆಳವಣಿಗೆಯನ್ನು ವಿಶ್ವದ ಸಮಾಜಶಾಸ್ತ್ರಜ್ಞರು ವೈಜ್ಞಾನಿಕವಾಗಿ, ತಾರ್ಕಿಕವಾಗಿ, ಚಿಂತನೆ ಮಾಡಿ ಅಧ್ಯಯನ ಮಾಡಿ ಈ ಅಧ್ಯಯನದ ಫಲವಾಗಿ ಹಲವು ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಸಮಾಜಶಾಸ್ತ್ರಜ್ಞರ ಅಧ್ಯಯನದಲ್ಲಿ ವೈಜ್ಞಾನಿಕ ಚಿಂತನೆಯ ಲಕ್ಷಣಗಳನ್ನು ಗುರುತಿಸಬಹುದು. ಡಾರ್ವಿನ್ನನ ಸಿದ್ಧಾಂತ ಸಮಾಜಶಾಸ್ತ್ರಜ್ಞರ ಸಿದ್ಧಾಂತಗಳು ಮಾನವನ ವಿಕಾಸದ ತತ್ತ್ವಕ್ಕೆ ಪರಸ್ಪರ - ಪೂರಕವೂ, ಪ್ರೇರಕವೂ ಆಗಿದೆ. ಮಾನವ ವಿಕಾಸದ ಸಂಶೋಧನೆ ವೈಜ್ಞಾನಿಕವಾಗಿ, ತಾತ್ತ್ವಿಕವಾಗಿ ಹಾಗೂ ತಾರ್ಕಿಕವಾಗಿ ಅತ್ಯಂತ ಕುತೂಹಲಕಾರಿಯಾಗಿದೆ. ವಿಜ್ಞಾನ ಒಂದು ವಿಷಯವನ್ನು ಕುರಿತು-ಒಂದು ವಸ್ತುವನ್ನು ಕುರಿತು ಕ್ರಮಬದ್ಧವಾದ ವಿಶೇಷ ಅಧ್ಯಯನ ಎನಿಸಿಕೊಳ್ಳುತ್ತದೆ.

ವೈಜ್ಞಾನಿಕ ಅಧ್ಯಯನದಲ್ಲಿ ನಾವು ಕಾಣುವ ಕ್ರಮ, ಸ್ಪಷ್ಟವು ಬೆಳವಣಿಗೆಯಿಂದ ಕೂಡಿದ್ದು ಆಗಿರುತ್ತದೆ. ವೈಜ್ಞಾನಿಕ ಅಧ್ಯಯನದ ಮೊದಲ ಹಂತ ವಸ್ತುವಿನ ಅವಲೋಕನ. ಇಲ್ಲಿ ವಿಷಯ ಮತ್ತು ವಸ್ತುವನ್ನು ಕುರಿತು ಒಂದು ಸ್ಥೂಲವಾದ ವಿವರಣೆಯನ್ನು ನೋಡಬಹುದು. ಎರಡನೆಯ ಹಂತದಲ್ಲಿ ಆ ವಸ್ತುವಿನ ಸ್ವರೂಪವನ್ನು ವಿಚಾರಿಸಿದ ನಂತರ ಅದರ ಲಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಕಾರ್ಯಕಾರಣಗಳನ್ನು ಆಲೋಚನೆ ಮಾಡುತ್ತೇವೆ. ಈ ರೀತಿಯ ಆಲೋಚನೆ ಅಧ್ಯಯನದ ಮೂಲಕ ವಸ್ತು ವಿಜ್ಞಾನಿಗೆ ಸುಸ್ಪಷ್ಟವಾಗುತ್ತದೆ. ಇಂತಹ ಚಿಂತನೆಯ ಮೂಲಕ ವಿಜ್ಞಾನಿ ವಸ್ತುವಿಗೆ ಸಂಬಂಧಪಟ್ಟ ನಿಗೂಢ ಸತ್ಯಗಳನ್ನು ಕಂಡುಕೊಂಡು ಅದನ್ನು ಜಗತ್ತಿಗೆ ಬಹಿರಂಗಪಡಿಸುತ್ತಾನೆ. ಇದನ್ನೇ 'ವಸ್ತುವಿನ ವೈಜ್ಞಾನಿಕ ಪರಾಮರ್ಶೆ' ಎಂದು ಕರೆಯುವುದು. ಮೂರನೆಯ ಹಂತದಲ್ಲಿ ವಿಜ್ಞಾನಿ ತಾನು ಈ ಮೊದಲಿಗೆ ಕಂಡುಕೊಂಡ ವಸ್ತುವಿನ ವಿಷಯವನ್ನು ಮತ್ತಷ್ಟು ಆಳವಾಗಿ ಚಿಂತಿಸಿ ವಸ್ತುವಿನ ಗುಣಲಕ್ಷಣಗಳ ಪರಿಣಾಮವನ್ನು - ಪ್ರಯೋಜನವನ್ನು - ಆ ವಸ್ತುವಿನಿಂದ ಉಂಟಾಗಬಹುದಾದ ಸಾಧಕ ಬಾಧಕಗಳನ್ನು

ಆಲೋಚನೆ ಮಾಡಿ ಅವುಗಳನ್ನು ವಿವರವಾಗಿ ತಿಳಿಸುತ್ತಾನೆ. ಇಲ್ಲಿ ವಿಜ್ಞಾನಿ ಒಂದು ವಸ್ತುವನ್ನು ಕುರಿತು ಆಳವಾಗಿ ಗಂಭೀರವಾಗಿ ಆಲೋಚನೆ ಮಾಡಿರುವುದು ನಮಗೆ ಗೋಚರವಾಗುತ್ತದೆ. ಈ ಆಲೋಚನೆಯ ಘಟ್ಟದಲ್ಲಿ ವಿಜ್ಞಾನಿ ತೋರಿಸುವ ಉತ್ಸಾಹ ಪ್ರಾಮಾಣಿಕತೆ ಅತ್ಯಂತ ಅಭಿನಂದನೀಯವಾದದ್ದು. ಈ ಅಧ್ಯಯನದ ನಂತರ ವಿಜ್ಞಾನಿ ತಾನು ವಸ್ತುವಿನ ಬಗ್ಗೆ ಪಡೆದುಕೊಂಡ ಮಾಹಿತಿಗಳ ಆಧಾರದ ಮೇಲೆ ಕೊನೆಯಲ್ಲಿ ಒಂದು ವೈಜ್ಞಾನಿಕ ಅಭಿಪ್ರಾಯದ ತೀರ್ಮಾನಕ್ಕೆ ಬರುತ್ತಾನೆ. ವಿಜ್ಞಾನಿಯ ಈ ಎಲ್ಲ ಹಂತದ ಚಿಂತನೆಯಲ್ಲಿ ತತ್ಸಂಬಂಧವಾಗಿ ಕಾರಣಗಳನ್ನು ಪುರಾವೆಗಳನ್ನು ನೀಡುತ್ತಾನೆ. ವಿಜ್ಞಾನಿಯ ಚಿಂತನೆಗೆ ಪುರಾವೆಗಳ ಪ್ರಾಮಾಣಿಕತೆ ಮುಖ್ಯವಾದಂತೆ ಆತ ಕಲ್ಪನೆಗಳಿಂದ ಪೂರ್ಣವಾಗಿ ಮುಕ್ತನಾಗಿರುತ್ತಾನೆ. ಕೆಲವು ಹಂತದಲ್ಲಿ ವಿಜ್ಞಾನಿ ವಿಷಯದ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದರು ಮುಂದಿನ ಅವನ ಆಲೋಚನೆಯಲ್ಲಿ ಈ ಅನುಮಾನಗಳಿಗೆ ತೀರ್ಮಾನದ ಪರಿಹಾರವನ್ನು ಕಂಡುಕೊಳ್ಳುತ್ತಾನೆ. ಹೀಗೆ ವೈಜ್ಞಾನಿಕ ಚಿಂತನೆಯಲ್ಲಿ ಕಲ್ಪನೆ ಅನುಮಾನಗಳಿಗೆ ಅವಕಾಶವಿರುವುದಿಲ್ಲ.

ಸಮಾಜಶಾಸ್ತ್ರವನ್ನು ಅಭ್ಯಾಸ ಮಾಡುವಾಗ ಮಾನವನ ಬುದ್ಧಿ ಹಾಗೂ ಮನೋವಿಕಾಸವನ್ನು ನಾವು ಮೊದಲಿಗೆ ಅಧ್ಯಯನ ಮಾಡುವುದು ಅತ್ಯಗತ್ಯ. ಮಾನವನ ಬುದ್ಧಿ ಮನಸ್ಸು 'ಮಂಗನಿಂದ ಮಾನವ' ಪರಿವರ್ತನೆಯಾದ ಹಂತದಿಂದಲೇ ಗುರುತಿಸಬಹುದು. ಮಾನವನ ಬೆಳವಣಿಗೆಯಲ್ಲಿ ನಾವು ಮೊದಲಿಗೆ ಕಾಣುವುದು ಸಮಾಜಶಾಸ್ತ್ರ ದೃಷ್ಟಿಯಿಂದ ಕಾಡು ಮಾನವನನ್ನು - ಹಳೆ ಶಿಲಾಯುಗದ ವ್ಯಕ್ತಿಯನ್ನು. ಮನಶ್ಶಾಸ್ತ್ರಜ್ಞರು ಮಾನವನ ಬುದ್ಧಿ ಹಾಗೂ ಮನಸ್ಸಿನ ವಿಕಾಸವನ್ನು ಹೇಳುವಾಗ ಕಾಡು ಮನುಷ್ಯನಲ್ಲಿ ಇದ್ದ ಬುದ್ಧಿ, ಕಂಡುಬರುವ ಮನಸ್ಥಿತಿ ಅತ್ಯಂತ ಪರಿಮಿತ ಪ್ರಮಾಣದಲ್ಲಿತ್ತು. ಪ್ರಾಣಿ ಜೀವನಕ್ಕೂ ಶಿಲಾಯುಗದ ಮಾನವನ ಜೀವನಕ್ಕೂ ಯಾವ ರೀತಿಯ ವ್ಯತ್ಯಾಸವು ನಮಗೆ ಕಂಡುಬರುವುದಿಲ್ಲ. ಮಾನವನ ಇತಿಹಾಸದಲ್ಲಿ ಶಿಲಾಯುಗದ ನಂತರದಲ್ಲಿ ಕಂಡುಬರುವ ಬೆಳವಣಿಗೆ ಗಮನಾರ್ಹವಾದದ್ದು. ಮನುಷ್ಯನಲ್ಲಿ ಬುದ್ಧಿ ಭಾವನೆಗಳು ಕಾಲದಿಂದ ಕಾಲಕ್ಕೆ ತ್ವರಿತಗತಿಯಲ್ಲಿ ಬೆಳೆಯುತ್ತದೆ - ಬದಲಾವಣೆಯಾಗುತ್ತದೆ ಎಂಬುದು ಮನಶ್ಶಾಸ್ತ್ರಜ್ಞರ ವೈಜ್ಞಾನಿಕ ಸಿದ್ಧಾಂತವಾಗಿದೆ. ಈ ಬುದ್ಧಿ ಭಾವನೆಗಳ ಬೆಳವಣಿಗೆಯನ್ನು ನೈಸರ್ಗಿಕ ಬೆಳವಣಿಗೆಯೆಂದು ಮಾನವಶಾಸ್ತ್ರಜ್ಞರು ವೈಜ್ಞಾನಿಕವಾಗಿ ಸಿದ್ಧಾಂತ ಮಾಡಿದ್ದಾರೆ. ಇದಕ್ಕೆ ಉದಾಹರಣೆಯಾಗಿ ನಾವು ಮಕ್ಕಳ ಬೆಳವಣಿಗೆಯನ್ನು ಗುರುತಿಸಬಹುದು. ಬುದ್ಧಿ ಭಾವನೆಗಳ ವಿಕಾಸಕ್ಕೆ ಜೀವನದ ಅವಶ್ಯಕತೆಯೇ ಮೂಲ ಕಾರಣ ಎಂದು ಹೇಳಿದಾಗ ಇದು ಸತ್ಯಸಂಗತಿ ಎನಿಸುತ್ತದೆ. ಅವಶ್ಯಕತೆ 'ಸಂಶೋಧನೆಗೆ ಪ್ರೇರಕ' ಎಂಬ ಮಾತು ವಿಜ್ಞಾನವಲಯದಲ್ಲಿ ಹೇಗೆ ಸತ್ಯದ ಮಾತಾಗಿದೆಯೋ ಅದೇ ರೀತಿಯಲ್ಲಿ ಮಾನವನ ವಿಕಾಸಕ್ಕೂ - ಸಮಾಜವಿಜ್ಞಾನಕ್ಕೂ ಆ ಮಾತು ಅನ್ವಯವಾಗುತ್ತದೆ.

ಕಾಡುಜನ ಒಂದು ಪರಿಮಿತ ಪ್ರಮಾಣದಲ್ಲಿ ಒಂದು ಪರಿಸರದಲ್ಲಿ ವಾಸ ಮಾಡುತ್ತಿದ್ದರು. ಅವರಲ್ಲಿ ಗಡ್ಡೆಗೆಣಸು ಆಹಾರವಾಗಿತ್ತು. ಮರದ ಎಲೆ ತೊಗಟೆ ಉಡುಗೆಯಾಗಿತ್ತು. ಇದಕ್ಕೆ ಹೊರತಾಗಿ

ಬೇರೆ ಯಾವ ರೀತಿಯ ಬಯಕೆಯು ಕಾಡು ಮನುಷ್ಯನಿಗೆ ಇರಲಿಲ್ಲ. ಆದರೆ ಬುದ್ಧಿಭಾವನೆಗಳ ಬೆಳವಣಿಗೆಯಿಂದ ವ್ಯಕ್ತಿಯಲ್ಲಿ ಹೊಸ ಹೊಸ ಆಸೆಗಳು ಜೀವನದಲ್ಲಿ ಮೂಡತೊಡಗಿತು. ತಿನ್ನುವ ಆಹಾರದಲ್ಲಿ ವೈವಿಧ್ಯತೆಯನ್ನು ಕಾಣುವ ಸಲುವಾಗಿ ಇದ್ದ ಪರಿಸರಕ್ಕಿಂತ ಬೇರೆ ಪರಿಸರವನ್ನು ಕಾಣುವ ಹಂಬಲದಿಂದ ಮಾನವ ಅಲೆದಾಡುವುದಕ್ಕೆ ಪ್ರಾರಂಭಿಸಿದ. ಈ ಅಲೆಮಾರಿತನ ಅವನ ಜೀವನಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿತು. ತಿನ್ನುವ ಆಹಾರದಲ್ಲಿ ಗಡ್ಡೆ ಗೆಣಸಿಗೆ ಪರ್ಯಾಯವಾಗಿ ಹಣ್ಣು-ಹಂಪಲುಗಳನ್ನು ಉಡುಪಿಗೆ ಮರದ ತೊಗಟೆಗೆ ಬದಲಾಗಿ ಪ್ರಾಣಿ ಚರ್ಮವನ್ನು ಬಳಸಲು ಮಾನವನು ಪ್ರಾರಂಭಿಸಿದನು. ಅಲೆಮಾರಿ ಜನ ಕಾಲಾಂತರದಲ್ಲಿ ಕೃಷಿ ಕೌಶಲ್ಯವನ್ನು ಕಲಿತುಕೊಂಡು ನಂತರ ಅದಕ್ಕೆ ಅನುಗುಣವಾದ - ಅನುಕೂಲವಾದ ಭೌಗೋಳಿಕ ಪರಿಸರಗಳಲ್ಲಿ ನೆಲೆಯಾಗಿ ನಿಲ್ಲುವುದಕ್ಕೆ ಪ್ರಾರಂಭಿಸಿದನು. ಹೀಗೆ ಮಾನವ ತನ್ನ ಸಂಬಂಧದ ವ್ಯಕ್ತಿಗಳನ್ನು ತಾನು ಗುರುತಿಸಿಕೊಂಡು ಒಂದು ನೆಲೆಯಲ್ಲಿ ಒಂದು ಸೂರಿನ ಅಡಿಯಲ್ಲಿ ವಾಸ ಮಾಡುವುದಕ್ಕೆ ಪ್ರಾರಂಭಿಸಿದನು. ಹೀಗೆ ಒಂದು ಕಡೆ ನೆಲೆನಿಂತ ಮಾನವ ಹಳ್ಳಿಗಳನ್ನು ನಿರ್ಮಿಸಿಕೊಂಡನು. ಇದು ಗ್ರಾಮೀಣ ಜೀವನದ ಮೊದಲ ಘಟ್ಟ. ಈ ಅವಸ್ಥೆಯಲ್ಲಿ ಸಂಘ ಜೀವನದ ಸ್ವರೂಪವನ್ನು ಕಾಣಬಹುದು. ಮನುಷ್ಯನ ಬುದ್ಧಿ ಬೆಳೆದ ಹಾಗೆ ಅವನ ಭಾವನೆಗಳಲ್ಲಿ ವೈವಿಧ್ಯತೆಯನ್ನು ಸಂಸ್ಕಾರವನ್ನು ಗುರುತಿಸಬಹುದು. ಹೊಟ್ಟೆಯಪಾಡಿಗಾಗಿ ಹಸಿವನ್ನು ತೀರಿಸಿಕೊಳ್ಳುವ ಸಲುವಾಗಿ ಮಾನವ ತೆಗೆದುಕೊಳ್ಳುವ ಆಹಾರದಲ್ಲಿ ವೈವಿಧ್ಯತೆಯನ್ನು ಪರಿಷ್ಕಾರವನ್ನು ತಂದುಕೊಂಡಿರುವುದು ಅವನ ಬದುಕಿನ ಬೆಳವಣಿಗೆಯಲ್ಲಿ ಕಾಣುವ ಎರಡನೆಯ ಹೆಜ್ಜೆಯಾಗಿದೆ.

ಬಂಧುಗಳಲ್ಲಿ ಸಂಘಟಿತನಾದ ಮಾನವ ಮೊದಲು ಸಂಘಜೀವಿಯಾದ. ತನ್ನ ಬಳಗದ ರಕ್ಷಣೆಗಾಗಿ ಆತ ತನ್ನಂಥಹ ಇತರ ವ್ಯಕ್ತಿಗಳ ಸಹಕಾರವನ್ನು ತಾನು ಬಯಸುವುದು ಮಾನವನ ಬೆಳವಣಿಗೆಯ ಚಟುವಟಿಕೆಯ ಲಕ್ಷಣವಾಯಿತು. ತನ್ನ ರಕ್ತ ಸಂಬಂಧಿಗಳ ರಕ್ಷಣೆಗಾಗಿ ವ್ಯಕ್ತಿ ತೋರಿಸಿದ ವಿಶಾಲ ಕಾಳಜಿ ಇಲ್ಲಿ ನಮಗೆ ಮನವರಿಕೆಯಾಗುತ್ತದೆ. ಕುಟುಂಬದ ಜನ ಸಂಘಟಿತರಾದಂತೆ ಸಮುದಾಯದ ಜನ ಒಂದು ಕಡೆಯಲ್ಲಿ ಸೇರುವುದನ್ನು ಕಂಡಾಗ ಮಾನವನ ಸಂಘಜೀವನ ಪ್ರವೃತ್ತಿ ಸಾಮಾಜಿಕ ಜೀವನದ ಕಡೆಗೆ ಪರಿವರ್ತಿತ ಆಗಿರುವುದನ್ನು ಗಮನಿಸಬಹುದು. 'ಸಂಘ ಜೀವನದ ತತ್ತ್ವ ವಿಕಾಸವೇ ಸಮಾಜ ಜೀವನದ ಸ್ವರೂಪ' ಎಂದು ಸಮಾಜಶಾಸ್ತ್ರಜ್ಞರು ಸ್ಪಷ್ಟಪಡಿಸಿದ್ದಾರೆ. ಒಂದು ಸಮಾಜದಲ್ಲಿ ಹಲವು ಕುಟುಂಬಗಳ ಸಾಮೂಹಿಕ ಜೀವನವನ್ನು ನೋಡಬಹುದು. ಈ ಸಾಮಾಜಿಕ ಜೀವನದಲ್ಲಿ ಕೂಡಿ ಬಾಳುವ ಆಕರ್ಷಣೆ ನಮಗೆ ಕಂಡುಬಂದರೂ ಕೂಡಿ ಬಾಳುವ ಅವಶ್ಯಕತೆಯೂ ಇಲ್ಲಿ ಸೂಚ್ಯವಾಗಿದೆ. ಇಂತಹ ಸಾಮಾಜಿಕ ಜೀವನದಲ್ಲಿ ಕುಟುಂಬಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳ ಜತೆಗೆ ಕುಟುಂಬಗಳಲ್ಲಿ ಕಂಡುಬರುವ ವಿಶೇಷ ಅಂಶಗಳು ನಮಗೆ ಸ್ಫುಟವಾಗುತ್ತದೆ. ಒಂದು ಸಮಾಜಕ್ಕೂ ಮತ್ತೊಂದು ಸಮಾಜಕ್ಕೂ ಹೋಲಿಸಿ ನೋಡಿದಾಗ ಆ ಸಮಾಜಗಳಲ್ಲಿ ಸಾಮ್ಯತೆ ಮತ್ತು

ಅನನ್ಯತೆಯನ್ನು ಅನಿವಾರ್ಯವಾಗಿ ಹಾಗೂ ವಿಶೇಷವಾಗಿ ಗುರುತಿಸಬಹುದೆಂದು ಸಮಾಜಶಾಸ್ತ್ರಜ್ಞರು ಸ್ಪಷ್ಟಪಡಿಸಿದ್ದಾರೆ. ಶತಮಾನಗಳು ಉರುಳಿದಂತೆ ಜೀವನದಲ್ಲಿ ಸಂಘರ್ಷಗಳು ಕಂಡುಬಂದಂತೆಲ್ಲಾ ಸಾಮಾಜಿಕ ಜೀವನದಲ್ಲಿ ಸ್ಥಿತಿಗತಿಗಳನ್ನು ವ್ಯತ್ಯಾಸದಲ್ಲಿ ಗುರುತಿಸಬಹುದು. ಗ್ರಾಮಗಳ ಬೆಳವಣಿಗೆಯಲ್ಲಿ ಕುಟುಂಬಗಳ ಪ್ರಮಾಣಕ್ಕೆ ಅನುಗುಣವಾಗಿ ನಗರ - ಪಟ್ಟಣಗಳ ಉಗಮವನ್ನು ನೋಡುತ್ತೇವೆ. ಗ್ರಾಮೀಣ ಬದುಕಿಗೂ ನಗರ ಪಟ್ಟಣಗಳ ಬದುಕಿಗೂ ಸ್ಪಷ್ಟವಾಗಿ ವ್ಯತ್ಯಾಸವನ್ನು ಕಾಣಬಹುದು. ಇಲ್ಲಿಯೂ ಸಹ ಬುದ್ಧಿಭಾವನೆಗಳ ಬೆಳವಣಿಗೆಯ ಪ್ರಮಾಣವನ್ನು ಕಾಣುವಂತೆ ಪ್ರತ್ಯಕ್ಷ ಹಾಗೂ ಪರೋಕ್ಷ ವ್ಯಕ್ತಿಗಳ ಪ್ರಭಾವವು ಕಾರಣವಾಗಿರುವುದನ್ನು ಗುರುತಿಸಬಹುದು.

ವೈಜ್ಞಾನಿಕ ಪ್ರಗತಿ ವ್ಯಕ್ತಿ ಜೀವನಕ್ಕೆ ಸಾಮಾಜಿಕ ಜೀವನಕ್ಕೆ ಹೊಸ ಹೊಸ ಸ್ವರೂಪಗಳನ್ನು ಆಯಾಮಗಳನ್ನು ತಂದುಕೊಟ್ಟಿದೆ. ಗ್ರಾಮೀಣ ಬದುಕಿನಲ್ಲಿ ಒಂದು ರೀತಿಯ ಬದಲಾವಣೆಯನ್ನು ಕಂಡಂತೆ ನಗರ ಜೀವನದಲ್ಲಿಯೂ ಬದಲಾವಣೆಗಳು ಕಂಡುಬರುತ್ತವೆ. ಇಂದಿನ ಜಾಗತೀಕರಣ ಯುಗದಲ್ಲಿ ವ್ಯಕ್ತಿ ವಿಶ್ವದ ವ್ಯಕ್ತಿಯಾಗಿ ವಿಕಾಸ ಹೊಂದುತ್ತಿದ್ದಾನೆ. ವಿಜ್ಞಾನದ ಪ್ರಗತಿ ಇಂದು ವ್ಯಕ್ತಿಯನ್ನು ವಿಶ್ವ ಸಂಬಂಧದೊಂದಿಗೆ ಗಂಟು ಹಾಕಿದೆ ಎಂಬ ಮಾತು ಪೂರ್ಣ ಸತ್ಯ. ವ್ಯಕ್ತಿಯ ಜೀವನದಲ್ಲಿ ತನ್ನ ಸಮೀಪ ಬಳಗದ ಪ್ರಭಾವ ಹೇಗೆ ಪರಿಣಾಮಕಾರಿಯಾಗಿದೆಯೋ ಹಾಗೆ ಪರಿಸರದ ವಲಯದ ವ್ಯಕ್ತಿ ಜೀವನದ ಪ್ರೇರಣೆಯು ಅಷ್ಟೇ ಗಹನವಾಗಿದೆ. ಹೀಗೆ ವ್ಯಕ್ತಿಜೀವನದ ವಿಕಾಸವನ್ನು ಸಮಾಜಶಾಸ್ತ್ರದಲ್ಲಿ ಸ್ಪಷ್ಟವಾಗಿ ಕಾಣಬಹುದು.

ಸಮಾಜಶಾಸ್ತ್ರ ಮೊದಲಿಗೆ ಕೇವಲ ಒಂದು ಶಾಸ್ತ್ರದ ಅಧ್ಯಯನವಾಗಿದ್ದು ಇಂದು ಅದನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಪ್ರಾರಂಭಿಸಿದಾಗ ಸಮಾಜಶಾಸ್ತ್ರವನ್ನು ಸಮಾಜವಿಜ್ಞಾನವೆಂದು ಪರಿಗಣಿಸಲಾಯಿತು. ಇಂದಿನ ಸಮಾಜಶಾಸ್ತ್ರಜ್ಞರನ್ನು ಸಮಾಜ ವಿಜ್ಞಾನಿಗಳೆಂದು ನಾವು ಕರೆಯುವುದರಲ್ಲಿಯೂ ವಿಶೇಷ ಅರ್ಥವನ್ನು ಗಮನಿಸಬಹುದು. ಸಮಾಜಶಾಸ್ತ್ರವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದರಿಂದ ಅದು ಸಮಾಜ ವಿಜ್ಞಾನವಾಯಿತು. ಸಮಾಜಶಾಸ್ತ್ರದ ಕ್ರಮಬದ್ಧವಾದ ಅಧ್ಯಯನ, ಶಾಸ್ತ್ರೀಯ ಅಧ್ಯಯನ ಮತ್ತು ವೈಜ್ಞಾನಿಕ ರೀತಿಯ ಅಧ್ಯಯನ ಭಾರತೀಯರಲ್ಲಿ ಹಾಗೂ ಪಾಶ್ಚಾತ್ಯರಲ್ಲಿ ನಡೆದಿರುವುದನ್ನು ನೋಡಬಹುದು. ಪ್ಲೇಟೊ, ಅರಿಸ್ಟಾಟಲ್ ಸಾಮಾಜಿಕ ಜೀವನವನ್ನು ಹೇಗೆ ಸೈದ್ಧಾಂತಿಕವಾಗಿ ಅಧ್ಯಯನ ಮಾಡಿದ್ದಾರೋ ಅದೇ ರೀತಿಯಲ್ಲಿ ಭಾರತೀಯರಲ್ಲಿಯೂ ಮನು, ಚಾಣುಕ್ಯ ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನಗಳಲ್ಲಿ ವ್ಯಕ್ತಿಯ ಆಸೆ ಆಕಾಂಕ್ಷೆಗಳ ವಿಚಾರದ ಜತೆಗೆ ಅವನ ಆಶೋತ್ತರಗಳ ವಿಕಾಸವನ್ನು ಗುರುತಿಸಬಹುದು. ಭಾರತೀಯರ ಬದುಕಿನ ರೀತಿ ಬಹುಮಟ್ಟಿಗೆ ಸಂಪ್ರದಾಯಬದ್ಧವಾಗಿದ್ದರು ಕಾಲಮಾನ ಸ್ಥಿತಿಗೆ ಅನುಗುಣವಾಗಿ ಕೆಲವು ಪ್ರಗತಿಯ ಅಂಶಗಳನ್ನು ನೋಡುತ್ತೇವೆ. ಮನುಷ್ಯನಲ್ಲಿ ಸಂಪ್ರದಾಯಕ್ಕೆ ಬದ್ಧವಾಗಿ ಬದುಕುವುದು ಪ್ರಗತಿಗೆ ಅನುಗುಣವಾಗಿ ಬದುಕನ್ನು ಪರಿವರ್ತಿಸಿಕೊಳ್ಳುವುದು ನೈಜ

ಲಕ್ಷಣವೆಂದು ಮಾನವಶಾಸ್ತ್ರ ಚಿಂತಕರು ಅಭಿಪ್ರಾಯ ಪಟ್ಟಿರುವುದು ಇದಕ್ಕೆ ಪೂರಕವಾಗಿದೆ. ಹಳ್ಳಿಯ ಸ್ಥಿತಿ-ಗತಿ ನಮಗೆ ಅರಿವಾಗದಂತೆ ಬದಲಾಗುತ್ತಿದೆ ಹಾಗೂ ವಿಕಾಸ ಹೊಂದುತ್ತಿದೆ.

ಸಮಾಜಶಾಸ್ತ್ರ ಅಧ್ಯಯನಕ್ಕೆ ಪೂರಕವಾಗಿ ಧಾರ್ಮಿಕ ಅಧ್ಯಯನವನ್ನು, ರಾಜಕೀಯ ಅಧ್ಯಯನವನ್ನು ಮತ್ತು ಆರ್ಥಿಕ ಅಧ್ಯಯನವನ್ನು ಜತೆಯಲ್ಲಿಯೇ ನಡೆಸುವುದು ಎಷ್ಟು ಸ್ವಾಭಾವಿಕವೋ ಅಷ್ಟೇ ಸೂಕ್ತವಾದದ್ದು ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ವ್ಯಕ್ತಿ ಮೂಲಭೂತವಾಗಿ ಧರ್ಮದ ನೆಲೆಗಟ್ಟಿನ ಮೇಲೆ ಬದುಕಿದರೂ ಆರ್ಥಿಕ ಹಾಗೂ ರಾಜಕೀಯ ಪ್ರಭಾವಗಳಿಗೆ ಒಳಗಾಗಲೇಬೇಕು. ಇವುಗಳ ಜತೆಗೆ ವೈಜ್ಞಾನಿಕ ಚಿಂತನೆಗೂ ಪ್ರಗತಿಯ ಆಕರ್ಷಣೆಗೂ ಒಳಗಾಗಲೇಬೇಕು.

ಶತಮಾನಗಳ ನಂತರ ಕೃಷಿಯ ಜಾಣ್ಮೆ ಶಿಲಾಯುಗದ ವ್ಯಕ್ತಿಗೆ ಬಂದಾಗ ಅವರು ಕೃಷಿಯ ಸಲುವಾಗಿ ಅದರ ಅಭಿವೃದ್ಧಿಯ ಸಲುವಾಗಿ ಒಂದು ಪರಿಸರದಲ್ಲಿ ನೆಲೆಯಾಗಿ ನಿಂತು ಬಾಳುವುದನ್ನು ಪ್ರಾರಂಭಿಸಿದರು. ಇಂತಹ ಬದುಕಿನಿಂದ ಅವರ ಕೃಷಿ ಜೀವನ ಬದುಕಿಗೆ ಬದ್ಧತೆಯನ್ನು ಹೊಸತನವನ್ನು ಸುಖವನ್ನು ತಂದು ಕೊಟ್ಟಿರುವುದನ್ನು ಸಮಾಜಶಾಸ್ತ್ರಜ್ಞರು ಗುರುತಿಸಿ ಆ ಕಾಲದಿಂದ ಗ್ರಾಮೀಣ ಜೀವನ ಪ್ರಾರಂಭವಾಯ್ತು ಎಂದು ಸ್ಪಷ್ಟಪಡಿಸಿದ್ದಾರೆ. ಕೃಷಿ ಈ ಅರ್ಥದಲ್ಲಿ ಗ್ರಾಮಗಳ ಅಸ್ತಿತ್ವಕ್ಕೆ ನಾಂದಿ ಆಯ್ತು ಎಂದು ಸಮಾಜ ಶಾಸ್ತ್ರಜ್ಞರು ತೀರ್ಮಾನಿಸಿದ್ದಾರೆ. ಗ್ರಾಮೀಣ ಜೀವನದಲ್ಲಿ ಕೃಷಿ ಪ್ರಮುಖವಾದಾಗ ಆ ಪರಿಸರದಲ್ಲಿ ಬಾಳುವ ವ್ಯಕ್ತಿಗಳಿಗೆ ಭೂಮಿಯ ಮೇಲಿನ ಒಡೆತನ ಪ್ರಾಪ್ತವಾಯಿತು. ಗ್ರಾಮ ಸಮಾಜದಲ್ಲಿ ವ್ಯಕ್ತಿಗೆ ಭೂಮಿಯ ಮೇಲೆ ಇರುವ ಒಡೆತನ ಅವನ ಸ್ಥಿತಿವಂತಿಕೆಗೆ ಕಾರಣವಾಯಿತು. ಶ್ರೀಮಂತ, ಮಧ್ಯಮ ವ್ಯಕ್ತಿ ಮತ್ತು ಬಡವ ಎಂಬ ವರ್ಗಗಳು ಸಮಾಜದಲ್ಲಿ ಕಾಣತೊಡಗಿತು. ಗ್ರಾಮ ಸಮಾಜದ ಬೆಳವಣಿಗೆಯಾಗುತ್ತ ಬಂದಂತೆ ಗ್ರಾಮಗಳ ಸ್ವರೂಪ ಉತ್ತಮ ರೀತಿಯಲ್ಲಿ ಬೆಳವಣಿಗೆಯಾಗಿರುವುದನ್ನು ನಾವು ಸಮಾಜಶಾಸ್ತ್ರ ಅಧ್ಯಯನದಲ್ಲಿ ತಿಳಿಯಬಹುದು. ಭಾರತವನ್ನು 'ಹಳ್ಳಿಗಳ ದೇಶ' ಎಂದು ಕರೆಯುವುದರ ಮೂಲಕ ಭಾರತದಲ್ಲಿ ಹಳ್ಳಿಗಳಿಗೆ ಇರುವ ಪ್ರಾಶಸ್ತ್ಯವನ್ನು ನಾವು ಚೆನ್ನಾಗಿ ಮನಗಾಣಬಹುದು. ಸಮಾಜಶಾಸ್ತ್ರರು ಹಳ್ಳಿಗಳನ್ನು ವಿಸ್ತೃತ ಅರ್ಥದಲ್ಲಿ ಗ್ರಾಮ ಎಂದು ಕರೆದಿದ್ದಾರೆ. ಇಂದು ಪಟ್ಟಣಗಳನ್ನು ಅಂತರ ರಾಷ್ಟ್ರೀಯ ಮಹಿಮೋತ್ತಮ ಪಟ್ಟಣಗಳಿಗೆ ಸಾಟಿಯಾದ ಪಟ್ಟಣಗಳನ್ನು ಭಾರತ ದೇಶದಲ್ಲಿ ಗುರುತಿಸಿದರು ಮೂಲ ಗ್ರಾಮಗಳ ಅಸ್ತಿತ್ವ ಇಂದು ನಮ್ಮ ದೇಶದಲ್ಲಿ ಪ್ರಧಾನವಾಗಿಯೇ ಉಳಿದಿವೆ. ಈ ದೃಷ್ಟಿಯಿಂದ ಭಾರತೀಯ ಸಾಹಿತ್ಯದ ಸಂಸ್ಕೃತಿಯ ತಾಯಿಬೇರನ್ನು ನಮ್ಮ ಗ್ರಾಮಗಳಲ್ಲಿಯೇ ಕಾಣಬಹುದು ಎಂಬ ಮಾತು ಪೂರ್ಣ ಸತ್ಯವಾಗಿದೆ.

ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಗ್ರಾಮಸಮಾಜದ ಪಾತ್ರವನ್ನು ಸಂಶೋಧನೆ ಮಾಡಿರುವ ವಿದ್ವಾಂಸರು ನಮ್ಮ ಸಾಹಿತ್ಯಕ್ಕೆ ಹೊಸತನ - ಬನಿ ಬಂದಿರುವುದು ಗ್ರಾಮಜೀವನದ ಪ್ರಭಾವದಿಂದ

ಎಂಬುದನ್ನು ನಿಷ್ಕರ್ಷೆ ಮಾಡಿ ತಿಳಿಸಿದ್ದಾರೆ. ನಮ್ಮ ಸಾಹಿತ್ಯದ ವೈವಿಧ್ಯತೆಗೆ ಗ್ರಾಮಜೀವನದ ವೈವಿಧ್ಯತೆಯೇ ಪ್ರೇರಣೆ ಹಿನ್ನೆಲೆ ಎಂಬುದನ್ನು ನಾವು ಸ್ಪಷ್ಟವಾಗಿ ಹೇಳಬಹುದು. ಇಂದಿನ ನಗರ ಜೀವನದ ಹಿನ್ನೆಲೆ ಇಂದಿನ ಸಾಹಿತ್ಯದಲ್ಲಿ ನಮಗೆ ಗೋಚರವಾದರು ಅದಕ್ಕೆ ಪೋಷಕವಾಗಿ ಗ್ರಾಮದ ಚಿತ್ರವು ನಮ್ಮ ಸಾಹಿತ್ಯದಲ್ಲಿ ಅನಿವಾರ್ಯವಾಗಿ ಮೂಡಿ ಬಂದಿದೆ. ನಮ್ಮ ಜನಪದ ಸಾಹಿತ್ಯ ಸತ್ವಪೂರ್ಣ ಸಾಹಿತ್ಯವಾಗಿರುವುದು ಗ್ರಾಮೀಣ ಜನರ ವಿಶಿಷ್ಟ ಬದುಕಿನಿಂದ ಮಾತ್ರ ಎಂಬುದನ್ನು ಎಂದಿಗೂ ಮರೆಯಲಾಗುವುದಿಲ್ಲ.

ನಮ್ಮ ಗ್ರಾಮಗಳು ಬಹುಮಟ್ಟಿಗೆ ಸ್ವಾವಲಂಬಿಗಳಾಗಿದ್ದವು. ನೈಸರ್ಗಿಕ ಸೌಲಭ್ಯಗಳನ್ನು ಬಳಸಿಕೊಂಡು ಗ್ರಾಮೀಣ ಜನ ತಮ್ಮ ಬದುಕನ್ನು ಸದೃಢ ಮಾಡಿಕೊಂಡಿದ್ದರು. ಭೂಮಿಯನ್ನು ತನ್ನ ಒಡೆತನಕ್ಕೆ ಬಳಸಿಕೊಂಡಾಗ ಗ್ರಾಮೀಣ ಜನರಲ್ಲಿ ಜೀವನ ಶೈಲಿ ಬದಲಾಗಿರುವುದನ್ನು ಅನಿವಾರ್ಯವಾಗಿ ಗುರುತಿಸಬಹುದು. ಭಾರತೀಯ ಗ್ರಾಮ ಅತಿ ಪ್ರಾಚೀನವಾದುದು. ಕ್ರಿ.ಪೂ. ೬೫೦೦ ರಷ್ಟು ಹಿಂದೆಯೇ ಅದು ಅಸ್ತಿತ್ವದಲ್ಲಿತ್ತು ಎಂದು ಅಭಿಪ್ರಾಯಪಡಲಾಗಿದೆ. ಗ್ರಾಮಗಳ ಭೌತಿಕ ರಚನೆ, ಸ್ವರೂಪ ಮತ್ತು ಕಾರ್ಯ, ವೈವಿಧ್ಯತೆ ಕುರಿತು ಋಗ್ವೇದ, ಮನು ಧರ್ಮಶಾಸ್ತ್ರ, ರಾಮಾಯಣ, ಮಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನ ನೀತಿಶಾಸ್ತ್ರ ಮೊದಲಾದ ಗ್ರಂಥಗಳಲ್ಲಿ ಹಲವಾರು ಉಲ್ಲೇಖಗಳನ್ನು ಗುರುತಿಸಬಹುದು. ಹಿಂದೂ ಸಂಸ್ಕೃತಿಯ ಪುರಾತತ್ತ್ವ ಸಂಶೋಧನೆಯ ಮೂಲಕ ಹರಪ್ಪಾ ಮತ್ತು ಮಹೆಂಜೋದಾರೋ ನಗರಗಳು ಗ್ರಾಮ ಸಮಾಜದ ಬೆಳವಣಿಗೆಯಲ್ಲಿ ಒಂದು ಪ್ರಧಾನ ಮೈಲಿಗಲ್ಲುಗಳಾಗಿವೆ. ಡಾ. ಪಣಿಕ್ಕರರು ಅಭಿಪ್ರಾಯಪಡುವಂತೆ "ಸ್ವಯಂ ಪರಿಪೂರ್ಣವಾದ ಗ್ರಾಮವು ಆರ್ಯರ ಕೊಡುಗೆಯೋ ಅಥವಾ ಆ ಪೂರ್ವದಲ್ಲಿದ್ದ ಜನರು ಸೃಷ್ಟಿಸಿದ ಪದ್ಧತಿಯ ಮುಂದುವರಿಕೆಯೋ ಎಂದು ಹೇಳುವುದು ಕಷ್ಟದ ಮಾತು. ಮಹೆಂಜೋದಾರೋದಂಥ ಪಟ್ಟಣಗಳು ಬೆಳೆದು ಬರಬೇಕಾದರೆ ಅತ್ಯುತ್ತಮವಾದ ಹಾಗೂ ವಿಸ್ತೃತವಾದ ಕೃಷಿ ಪದ್ಧತಿ ಹಾಗೂ ಆರ್ಥಿಕ ದೃಷ್ಟಿಯಿಂದ ರೂಪಿಸಿದ ಗ್ರಾಮ ಪದ್ಧತಿಗಳ ಬೆಂಬಲವಿಲ್ಲದೆ ಸಾಧ್ಯವಿಲ್ಲ. ಆರ್ಯರು ತಾವು ಕೃಷಿಯನ್ನು ಕೈಗೆತ್ತಿಕೊಂಡಾಗ ಆಗಲೇ ಅಸ್ತಿತ್ವದಲ್ಲಿದ್ದ ಗ್ರಾಮ ಜೀವನವನ್ನೇ ಅಳವಡಿಸಿ ಕೊಂಡರು ಎಂದು ಗ್ರಹಿಸುವುದು ಹೆಚ್ಚು ಸಮಂಜಸವೆಂದು ತೋರುತ್ತದೆ". (ನಾಗೇಶ್ ಹೆಚ್.ವಿ.; ೧೯೮೬; ಪು.೧೪೮) "ವಾಲ್ಮೀಕಿ ರಾಮಾಯಣದಲ್ಲಿ ಘೋಷ್ ಮತ್ತು ಗ್ರಾಮಗಳೆಂಬ ಎರಡು ವಿವಿಧ ಹಳ್ಳಿಗಳ ಬಗ್ಗೆ ಉಲ್ಲೇಖಿಸಲಾಗಿದೆ. ಗ್ರಾಮವು ಘೋಷ್‌ಗಿಂತ ದೊಡ್ಡದು, ಗ್ರಾಮ ಮಹತ್ತರ, ಘೋಷ್ ಮಹತ್ತರ್‌ಗಳೆಂದು ಅವುಗಳಿಗೆ ಮುಖ್ಯಸ್ಥರನ್ನು ನಿಗದಿಗೊಳಿಸಲಾಯಿತು. ಸಣ್ಣ ಸಣ್ಣ ಘೋಷ್‌ಗಳು ಅರಣ್ಯಗಳಿಗೆ ಹೊಂದಿಕೊಂಡಂತೆ ರಚನೆಯಾಗುತ್ತಿದ್ದವು. ಪಶುಪಾಲನೆ ಗ್ರಾಮಗಳ ಮುಖ್ಯ ಕಸುಬು. ಗ್ರಾಮದ ಸಮಗ್ರ ಆಡಳಿತದ ಉಸ್ತುವಾರಿಯನ್ನು ಗ್ರಾಮಿಣಿಯು ನೋಡಿಕೊಳ್ಳುತ್ತಿದ್ದನು. ಮನು ಧರ್ಮಶಾಸ್ತ್ರದಲ್ಲಿ ಗ್ರಾಮಗಳ ಬಗ್ಗೆ ಉಲ್ಲೇಖವಿದೆ. ಗಡಿಗಳಲ್ಲಿ ದೇವಾಲಯಗಳನ್ನು ನಿರ್ಮಿಸಿ ಆ

ವ್ಯಾಪ್ತಿಯಲ್ಲಿ ಅರಳಿ, ಹತ್ತಿ, ಬೇಲ ಮತ್ತು ಆಲದ ಮರಗಳನ್ನು ಗುಂಪು ಗುಂಪಾಗಿ ಬೆಳೆಸುವುದು, ಕೆರೆಗಳನ್ನು ಸ್ಥಾಪಿಸುವುದು, ಮತ್ತಿತರ ಕುರುಹುಗಳು ಗ್ರಾಮಗಳ ಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ ಎಂದು ತಿಳಿಸಲಾಗಿದೆ". (ಮೈಲಾರಪ್ಪ ಡಿ.ಸಿ.; ೧೯೯೮; ಪು.೮) "ಭರತನು ಇದನ್ನು ಬ್ರಾಹ್ಮಣಾದಿ ವರ್ಣಗಳಿಂದ ಕೂಡಿದ ಪ್ರಕಾರ ಕಂದಕಗಳಿಲ್ಲದ ಜನವಸತಿಯೆಂದು ವರ್ಣಿಸಿದ್ದಾನೆ. ಮಾರ್ಕಂಡೇಯ ಪುರಾಣದಲ್ಲಿ ಶೂದ್ರರು ಹೆಚ್ಚು ಸಂಖ್ಯೆಯಲ್ಲಿರುವ, ರೈತರು ಸಮೃದ್ಧವಾಗಿರುವ, ಸಾಗುವಳಿ ಯೋಗ್ಯವಾದ ಭೂಮಿಯ ಮಧ್ಯದಲ್ಲಿರುವ ಜನವಸತಿಗೆ 'ಗ್ರಾಮ'ವೆಂದು ಹೆಸರು". (ನಾಗೇಶ್ ಹೆಚ್.ವಿ.; ೧೯೯೨; ಪು.೨) ಅರ್ಥಶಾಸ್ತ್ರದಲ್ಲಿ ಅರ್ಥಶಾಸ್ತ್ರದ ಬೆಳವಣಿಗೆಯನ್ನು ಕುರಿತು ವಿಚಾರ ಮಾಡುವಾಗ ಗ್ರಾಮಗಳ ಬೆಳವಣಿಗೆಯನ್ನು ಪ್ರಾಸಂಗಿಕವಾಗಿ ವಿಚಾರ ಮಾಡಿದ್ದಾರೆ. ಗ್ರಾಮಗಳಲ್ಲಿ ಅದರ ಗಾತ್ರ ಸ್ವಾವಲಂಬಿತನ ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಮಾಜಶಾಸ್ತ್ರಜ್ಞರು ಗ್ರಾಮಗಳನ್ನು ಜೇಷ್ಠ, ಮಧ್ಯಮ ಮತ್ತು ಕನಿಷ್ಠ ಎಂದು ಮೂರು ವಿಭಾಗ ಮಾಡಿರುವುದು ಗಮನಾರ್ಹವಾದುದು.

ಭಾರತದಲ್ಲಿ ಹಳ್ಳಿ, ಪಲ್ಲಿ, ಊರು, ಖೇಡ, ಗಾಂವ್ ಎಂಬ ಇತ್ಯಾದಿ ಹೆಸರುಗಳಿಂದ ಕರೆಯುವ ಗ್ರಾಮಗಳಿಗೆ ನದಿ, ಬೆಟ್ಟ, ಗುಡ್ಡ, ಕಾಡುಗಳಿಂದಾವೃತವಾದ ಒಂದು ನಿಶ್ಚಿತವಾದ ನೆಲೆ ಇರುತ್ತದೆ. ಇದಕ್ಕೆ ಪೂರಕವಾದ ಸಮುದಾಯದ ಬದುಕು, ಒಕ್ಕಲು ಮಕ್ಕಳು, ಆತನ ಪರಿವಾರ ಹಾಗೂ ಸಾಕು ಪ್ರಾಣಿಗಳು, ಜಾತಿ-ವಿಜಾತಿಗಳು, ಒಡೆಯ-ಆಳು ಸಂಬಂಧ, ಬಡವ-ಬಲ್ಲಿದವರ ಅಸಮಾನತೆ, ದೇವಾಲಯಗಳು, ಗುಡಿಗಳು, ಬಾವಿಗಳು, ಗ್ರಾಮದ ಬದುಕನ್ನು ನಿಯಂತ್ರಿಸುತ್ತವೆ ಮತ್ತು ಬದುಕನ್ನು ರೂಪಿಸುತ್ತವೆ. ಭಾರತೀಯ ಎಲ್ಲಾ ಗ್ರಾಮಗಳ ಭೌತಿಕ ಸ್ವರೂಪ ಒಂದೇ ಆಗಿಲ್ಲ. ಭೌಗೋಳಿಕವಾಗಿ ಗ್ರಾಮಗಳ ಸ್ವರೂಪವನ್ನು ಬಯಲು ಸೀಮೆಯ ಪರಿಸರಕ್ಕೂ ಮಲೆನಾಡು ಕರಾವಳಿಯ ಪರಿಸರಕ್ಕೂ ವಿಶೇಷವಾದ ವ್ಯತ್ಯಾಸಗಳಿಂದ ಗುರುತಿಸಬಹುದು. ಈ ವ್ಯತ್ಯಾಸ ಆ ಪ್ರದೇಶದ ಸಂಸ್ಕೃತಿಯ ಮೇಲೂ ಪ್ರಭಾವವನ್ನು ಬೀರುತ್ತದೆ. ಗ್ರಾಮಗಳ ಈ ಅನನ್ಯ ವಿಶಿಷ್ಟತೆಯನ್ನು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ನೋಡಬಹುದು. ಕನ್ನಡ ಸಾಹಿತ್ಯವನ್ನೇ ವಿಶೇಷವಾಗಿ ಗಮನಿಸಿದಾಗ ಕರಾವಳಿ ಸಾಹಿತ್ಯ, ಬಯಲುಸೀಮೆಯ ಸಾಹಿತ್ಯ, ಮಲೆನಾಡಿನ ಪರಿಸರದಲ್ಲಿ ಮೂಡಿ ಬಂದ ಸಾಹಿತ್ಯ ತನ್ನದೇ ಆದ ಜೀವನ ರೀತಿ ಕ್ರಮಕ್ಕೆ ಹಿನ್ನೆಲೆಯಾಗಿ ತನ್ನತನದೊಂದಿಗೆ ಮೂಡಿ ಬಂದಿರುವುದು ನಮಗೆ ಗೋಚರವಾಗುತ್ತದೆ. ರಾವ್‌ಬಹುದ್ದೂರ್ ರವರ ಸಾಹಿತ್ಯ, ಬೇಂದ್ರೆಯವರ ಸಾಹಿತ್ಯ, ಕುವೆಂಪು ಅವರ ಸಾಹಿತ್ಯ, ಕಾರಂತರ ಸಾಹಿತ್ಯ ಮತ್ತು ಗೊರೂರವರ ಸಾಹಿತ್ಯ ವೈವಿಧ್ಯತೆಯಿಂದ ಕೂಡಿರುವುದು ಆಯಾ ಪರಿಸರದ ಪ್ರಭಾವದಿಂದ ಎಂಬ ಸತ್ಯಾಂಶ ನಮಗೆ ಮನವರಿಕೆಯಾಗುತ್ತದೆ.

ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಗ್ರಾಮಗಳನ್ನು ಜಾತೀಯತೆ, ಅನಕ್ಷರತೆ, ಬಡತನ, ಅನಾರೋಗ್ಯ, ನಿರುದ್ಯೋಗ ಮೊದಲಾದ ಸಾಮಾಜಿಕ ವಿಷಮತೆಗಳು ಕಾಡುತ್ತಿವೆ. ಮಾನವ ಸಂಸ್ಕೃತಿಯ

ತೊಟ್ಟಿಲುಗಳಾದ ಗ್ರಾಮಗಳು ನಿನ್ನೆ ಮೊನ್ನೆ ಹುಟ್ಟಿದವಲ್ಲ. ಮಾನವ ಸಮಾಜದ ಎಲ್ಲಾ ಕಾಲಗಳಲ್ಲಿಯೂ ಗ್ರಾಮಗಳ ಇರುವಿಕೆಯನ್ನು ಕಾಣುತ್ತೇವೆ. ಗ್ರಾಮಸಮಾಜವನ್ನು ಕುರಿತು ಸಮಾಜಶಾಸ್ತ್ರಜ್ಞರು ಈ ರೀತಿ ಅಭಿಪ್ರಾಯ ಪಡುತ್ತಾರೆ. ಬೋಗಾರ್ಡಸ್ ಎಂಬ ಸಮಾಜಶಾಸ್ತ್ರಜ್ಞ "ಮಾನವ ಸಮಾಜವು ಗ್ರಾಮೀಣ ಸಮುದಾಯದಿಂದ ಹುಟ್ಟಿ ಬೆಳೆದು ಬಂದಿದೆ" (ನಾರಾಯಣ ವಿಶ್ವ ಎಂ.; ೨೦೦೦; ಪು.೩೦) ಎಂದು ಹೇಳುತ್ತಾನೆ. ಕ್ರೋಪಾಟ್ಕಿನ್ ಎಂಬ ಮತ್ತೊಬ್ಬ ಸಮಾಜಶಾಸ್ತ್ರಜ್ಞ "ಗ್ರಾಮೀಣ ಸಮುದಾಯಗಳಿಲ್ಲದ ಕಾಲವನ್ನು ಕಂಡಿರುವ ಯಾವುದೊಂದು ಮಾನವ ಸಮಾಜವನ್ನಾಗಲೀ, ಜನಾಂಗವನ್ನಾಗಲೀ ಅಥವಾ ದೇಶವನ್ನಾಗಲಿ ನಾವು ಕಂಡಿಲ್ಲ" (ಅದೇ) ಎಂಬ ಅಭಿಪ್ರಾಯವನ್ನು ತಿಳಿಸುತ್ತಾನೆ. ಈ ಅಭಿಪ್ರಾಯವು ಗ್ರಾಮ ಸಮಾಜದ ಪ್ರಾಚೀನತೆಯನ್ನು ವಿಶೇಷತೆಯನ್ನು ನಮಗೆ ಖಚಿತಪಡಿಸುತ್ತದೆ. ಮಾನವ ಸಂಸ್ಕೃತಿಯ ನಾಗರಿಕತೆಯ ವಿಕಾಸವನ್ನು ಗುರುತಿಸುವುದರಲ್ಲಿಯೂ ಸಮಾಜಶಾಸ್ತ್ರಜ್ಞರ ಈ ಅಭಿಪ್ರಾಯಗಳು ನಮಗೆ ಅತಿ ಪ್ರಮುಖವೆನಿಸುತ್ತದೆ. ಗ್ರಾಮಸಮಾಜದ ಬೆಳವಣಿಗೆಯಲ್ಲಿ ನಾವು ಈ ಕಾರಣದಿಂದಲೇ ಬದುಕಿನ ಪರಿವರ್ತನಶೀಲತೆಯನ್ನು ಪರಿಭಾವಿಸಬಹುದು. ಭಾರತೀಯ ಗ್ರಾಮಸಮಾಜದ ಮಹತ್ವವನ್ನು ಕುರಿತಾಗಿ ಚರಿತ್ರೆಕಾರ ಚಾರ್ಲ್ಸ್ ಟ್ರೆವೇಲಿಯನ್ ಅವರ ಮಾತಿನಂತೆ ಭಾರತದ ಮೇಲೆ ಪರಕೀಯರು ಅನೇಕ ಸಲ ಆಕ್ರಮಣ ನಡೆಸಿದ್ದಾರೆ ಹಾಗೂ ಗೆದ್ದಿದ್ದಾರೆ. ಆದರೆ ಗರಿಕೆ ಹುಲ್ಲು ಆಳವಾಗಿ ಭೂಮಿಯನ್ನು ಕಚ್ಚಿಕೊಂಡಿರುವಂತೆ ಇಲ್ಲಿ ಗ್ರಾಮ ಸಭೆಗಳು ಗಟ್ಟಿಯಾಗಿ ನಿಂತಿವೆ ಎಂದು ಅಭಿಪ್ರಾಯಪಡುತ್ತಾರೆ. ವಸಾಹತುಶಾಹಿ ಅಧಿಕಾರಿಗಳು ಭಾರತದ ನೈಸರ್ಗಿಕ ಸಂಪತ್ತನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಂತೆ ಜನಶಕ್ತಿಯನ್ನು ಮೂಲ ವಸ್ತುವಿನಂತೆ ಉಪಯೋಗಿಸಿಕೊಂಡರು. ವಸಾಹತುಶಾಹಿಗಳ ನೀತಿ ಮೂಲತಃ ವ್ಯಾಪಾರಿ ಮನೋಧರ್ಮವಾಗಿತ್ತು. ಲಾಭ-ನಷ್ಟಗಳ ಲೆಕ್ಕಾಚಾರವೇ ಇಲ್ಲಿ ಮುಖ್ಯವಾಗಿತ್ತು. ಬ್ರಿಟಿಷರು ಎಷ್ಟು ಸಾಧ್ಯವೋ ಅಷ್ಟು ಭಾರತದಿಂದ ಸಂಪತ್ತನ್ನು ತಮ್ಮ ದೇಶಕ್ಕೆ ಸಾಗಿಸಿದರು.

ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಗ್ರಾಮ ಸಮಾಜ ಅನೇಕ ಏರಿಳಿತಗಳನ್ನು ಕಂಡಿದೆ. ಬದುಕು ಸದಾ ಪರಿವರ್ತನಶೀಲವಾದದ್ದು. ಬದಲಾವಣೆ ಎಂಬುದು ಒಂದು ನೈಸರ್ಗಿಕ ನಿಯಮ. ಯಾವುದೇ ಸಮಾಜ ಬದಲಾವಣೆಗಳಿಗೆ ಒಳಗಾಗಿದೆ ಎಂದರೆ ಆ ಸಮಾಜವು ಜೀವಂತಿಕೆ ಸಂಕೇತವಾಗಿರುತ್ತದೆ. ಗ್ರಾಮಸಮಾಜದ ಬೆಳವಣಿಗೆಯ ಅಪೂರ್ವ ಸ್ಥಿತಿಯನ್ನು ಇಂದಿನ 'ಜಾಗತಿಕ ಗ್ರಾಮ'ದ (Global Village) ಪರಿಕಲ್ಪನೆಯಲ್ಲಿ ಕಾಣಬಹುದು. ಗ್ರಾಮಸಮಾಜದ ಬೆಳವಣಿಗೆ ಬದಲಾವಣೆಗೆ ಶಿಕ್ಷಣ, ಉದ್ಯೋಗ, ವೈಜ್ಞಾನಿಕ ಮನೋಧರ್ಮ, ಆಧುನಿಕತೆ, ಕೈಗಾರಿಕೀಕರಣ, ನಗರೀಕರಣ, ಸಮೂಹ ಮಾಧ್ಯಮಗಳು ಪ್ರಭಾವೀಪೂರ್ಣ ಹಿನ್ನೆಲೆಯ ಅಂಶಗಳಾಗಿವೆ.

'ಗ್ರಾಮಸಮಾಜ'ದ ಪರಿಕಲ್ಪನೆ ಮೇಲು ನೋಟಕ್ಕೆ ಸರಳವಾಗಿ ಗೋಚರವಾದರೂ ಅದು ತುಂಬಾ ಸಂಕೀರ್ಣವಾದುದು. 'ಗ್ರಾಮಸಮಾಜ' ಹಲವು ವಿಷಯಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡಿದೆ. ಗ್ರಾಮ

ವಾಸಿಗಳು ನಾನಾ ಧರ್ಮ ನಾನಾ ಭಾಷೆಗಳಿಗೆ ಸೇರಿದವರಾಗಿರುತ್ತಾರೆ. ಗ್ರಾಮಸಮಾಜ ಎಂಬುದು ಏಕತ್ರ ಘಟಕವಲ್ಲ. ಭಾರತೀಯ ಸಮಾಜದಲ್ಲಿ ಜಾತಿ ಆಧಾರಿತವಾಗಿದ್ದು, ಗ್ರಾಮಸಮಾಜದಲ್ಲಿ 'ಜಾತಿ' ಪ್ರಧಾನ ಪಾತ್ರ ವಹಿಸುತ್ತದೆ. ಆಹಾರ, ಮದುವೆ, ಸಾವು ಮೊದಲಾದ ಕ್ರಿಯೆಗಳಲ್ಲಿ ಜಾತಿಯನ್ನೇ ಅವಲಂಬಿಸಿ ಕಾರ್ಯ ಜರುಗಿಸುತ್ತಾರೆ. ಸಂಪ್ರದಾಯ ನಿಯಮಗಳು ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಿರುತ್ತವೆ. ಗ್ರಾಮೀಣ ಬದುಕಿನಲ್ಲಿ ಸಹಕಾರ, ಪರಸ್ಪರ ಅವಲಂಬನೆ, ರಕ್ತ ಸಂಬಂಧ ಮುಖ್ಯವಾದ ಸಂಗತಿಗಳಾಗಿರುತ್ತವೆ. ಸಮಾಜಶಾಸ್ತ್ರವು ಇಂತಹ ವಿಷಯಗಳ ಬಗ್ಗೆ ಅಧ್ಯಯನ ನಡೆಸಿದೆ. ಗ್ರಾಮಸಮಾಜವೆಂಬುದು ಇಂದು ಪ್ರತ್ಯೇಕ ಅಧ್ಯಯನ ಶಿಸ್ತಾಗಿ, ಶಾಸ್ತ್ರವಾಗಿ ಬೆಳೆಯುತ್ತಿದೆ. ಗ್ರಾಮಸಮಾಜದಲ್ಲಿ ರೈತ ಪ್ರಧಾನ ವ್ಯಕ್ತಿ ಮತ್ತು ಕೃಷಿ ಪ್ರಮುಖ ವೃತ್ತಿ. ಈ ಕಾರಣದಿಂದಲೇ ರೈತನನ್ನು ಅವನ ಕೃಷಿಯನ್ನು ಗ್ರಾಮದ ಜೀವನಾಡಿ ಎಂದು ಕರೆಯುವುದು. ಜನಪದ ಗೀತೆಯಲ್ಲಿ ಗ್ರಾಮೀಣ ಜನ ಬೆಳಗಾಗ ಎದ್ದು ಎಳ್ಳು ಜೀರಿಗೆ ಬೆಳೆಯುವ ಭೂಮಿ ತಾಯಿಯನ್ನು ಒಂದು ಗಳಿಗೆ ಸ್ಮರಿಸುವುದು ಮತ್ತು ಸ್ತುತಿಸುವುದು ಸಹಜ ಎನಿಸುತ್ತದೆ.

ಗ್ರಾಮಸಮಾಜ ಅತೀ ಪ್ರಾಚೀನ ಕಾಲದಿಂದ ಅಸ್ತಿತ್ವದಲ್ಲಿದ್ದರೂ ನಮಗೆ ಸ್ಪಷ್ಟವಾದ ವಿವರಗಳು ಸಿಗುವುದು ಮೌರ್ಯರ ಕಾಲದಿಂದ. ವೇದಗಳ ಕಾಲದಲ್ಲಿ ಗ್ರಾಮಗಳ ಆಡಳಿತವನ್ನು 'ಸಭಾ' ಮತ್ತು 'ಸಮಿತಿಗಳು' ನಿರ್ವಹಿಸುತ್ತಿದ್ದಂತೆ ಮೌರ್ಯರ ಕಾಲದಲ್ಲಿ 'ಗಣಗಳು' ನಿರ್ವಹಿಸುತ್ತಿದ್ದುದು ಕಂಡುಬರುತ್ತದೆ. ಬ್ರಿಟಿಷರ ಆಳ್ವಿಕೆಯ ಪೂರ್ವ ಕಾಲದಲ್ಲೇ ಗ್ರಾಮ ಪಂಚಾಯಿತಿಗಳು ಬಹಳ ಜನಪ್ರಿಯವಾಗಿದ್ದವು ಎಂಬುದು ಗಮನಾರ್ಹವಾದ ಸಂಗತಿ. ರಾಷ್ಟ್ರಕೂಟರ ಕಾಲದಲ್ಲಿ 'ಗೌಡ'ರ ಮೂಲಕ ಗ್ರಾಮಗಳ ಆಡಳಿತ ನಡೆಯುತ್ತಿತ್ತು. ಸರ್ಕಾರಕ್ಕೆ 'ಸದ್ಭಾಗ'ದ ಮೂಲಕ ಗ್ರಾಮಗಳಲ್ಲಿ ಕಂದಾಯ ಪಾವತಿಯಾಗುತ್ತಿತ್ತು. ವಿಜಯನಗರದ ಅರಸರು ಪಟೇಲ, ಶ್ಯಾನುಭೋಗ, ತೋಟಿ ಇವರುಗಳ ಮೂಲಕ ಗ್ರಾಮದ ಆಡಳಿತ ನಡೆಸುತ್ತಿದ್ದರು. ಮೈಸೂರು ಅರಸರ ಕಾಲಕ್ಕೆ ಗ್ರಾಮೀಣ ಪರಿಸರದಲ್ಲಿ ಆಡಳಿತ ಸುಧಾರಣೆ ಆಗುವುದರ ಜತೆಗೆ ಕುಶಲ ಕಲೆಗಳಿಗೆ ಗ್ರಾಮೀಣ ಪರಿಸರದಲ್ಲಿ ಪ್ರೋತ್ಸಾಹ ದೊರೆಯಿತು. ಇದಕ್ಕೆ ಅನುಗುಣವಾಗಿ ಸಾಂಸ್ಕೃತಿಕ ಬದುಕನ್ನು ಸಾಹಿತ್ಯದ ಬೆಳವಣಿಗೆಯನ್ನು ಗ್ರಾಮೀಣ ಪರಿಸರದಲ್ಲಿ ವಿಶೇಷವಾಗಿ ಗುರುತಿಸಬಹುದು.

ವಸಾಹತು ಆಡಳಿತ ಸಂದರ್ಭದಲ್ಲಿ ಗ್ರಾಮಗಳ ಸ್ವರೂಪ ಆಡಳಿತ ರೀತಿಗೆ ಅನುಗುಣವಾಗಿ ಹೊಸ ಸ್ವರೂಪವನ್ನು ಪಡೆಯಿತು. ಇವರು ನಗರಗಳ ಬೆಳವಣಿಗೆಯ ಕಡೆಗೆ ಹೆಚ್ಚು ಗಮನವನ್ನು ಕೊಟ್ಟಂತೆ ಗ್ರಾಮಗಳ ಬೆಳವಣಿಗೆಗೆ ಆದ್ಯತೆ ಕೊಡಲಿಲ್ಲ. ಗ್ರಾಮಗಳಲ್ಲಿ ಆರ್ಥಿಕ ವ್ಯವಸ್ಥೆಯ ಸುಧಾರಣೆ ಸ್ವಲ್ಪ ಮಟ್ಟಿಗೆ ಕುಂಟಿತವಾಯ್ತು ಎಂಬುದು ಸತ್ಯ. ಇಷ್ಟಾದರೂ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಗ್ರಾಮಗಳ ಪ್ರಗತಿ ಸಾಮೂಹಿಕ ದುಡಿಮೆಯ ಮೂಲಕ ಸಾಧಿತವಾಗುತ್ತಿತ್ತು ಎಂಬುದು ನಮಗೆ ಗಮನಕ್ಕೆ ಬರುತ್ತದೆ. ಅಂದಿಗೆ ಗ್ರಾಮಗಳಲ್ಲಿ ನಡೆಯುತ್ತಿದ್ದ ಊರೊಟ್ಟಿನ ಕೆಲಸ ಗ್ರಾಮಸಮಾಜದ ಅನನ್ಯತೆಯನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ. ಬ್ರಿಟಿಷರ ಆಡಳಿತದಲ್ಲಿ ಕೋರ್ಟು ಮತ್ತು ಮಧ್ಯವರ್ತಿಗಳ ಉಗಮವನ್ನು

ನೋಡಬಹುದು. ಆ ಕಾಲಕ್ಕೆ ಗ್ರಾಮಸಮಾಜದಲ್ಲಿ ಪ್ರಾಮಾಣಿಕತೆ ಕಡಿಮೆಯಾಗಿ ಲಂಚಗುಳಿತನ ವಂಚನೆಯ ಪ್ರಕರಣಗಳು ಮೂಡಿ ಬಂದಿರುವುದನ್ನು ಗುರುತಿಸಬಹುದು. ಇದಕ್ಕೆ ಜೊತೆಯಾಗಿ ಬ್ರಿಟಿಷ್ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ರೈತರಿಂದ ಕಂದಾಯ ರೂಪದಲ್ಲಿ ರೈತರ ಯೋಗ್ಯತೆಗೆ ಮೀರಿದಷ್ಟು ಹಣವನ್ನು ಗ್ರಾಮಗಳಲ್ಲಿ ದರೋಡೆ ಮಾಡುತ್ತಿದ್ದರು. ಬೆಳೆಯ ಬೆಲೆಗಿಂತ ಕಂದಾಯದ ಬೆಲೆ ಜಾಸ್ತಿಯಾಗಿ ರೈತರ ಬದುಕು ಉಸಿರುಗಟ್ಟಿ ಭೂಮಿಯನ್ನು ಮಾರುವ ಸ್ಥಿತಿಗೂ ಒಳಗಾದ ದುರಂತವನ್ನು ಗ್ರಾಮಸಮಾಜದಲ್ಲಿ ಕಾಣಬಹುದು. ಬೃಹತ್ ಕೈಗಾರಿಕಾ ಘಟಕಗಳು ನಗರಗಳಲ್ಲಿ ಬ್ರಿಟಿಷರಿಂದ ಪ್ರಾರಂಭವಾದ ನಂತರ ಗ್ರಾಮೀಣ ಸಮಾಜದ ಗುಡಿ ಕೈಗಾರಿಕೆಗಳು ಸ್ಥಗಿತವಾದವು ಎಂಬ ಮಾತು ಸಹ ಸತ್ಯವಾದುದು.

ಕೈಗಾರಿಕಾ ಕ್ರಾಂತಿಯಿಂದ ಯಂತ್ರಗಳ ಪ್ರಭಾವ ಗ್ರಾಮೀಣ ಸಮಾಜದಲ್ಲಿ ಹೆಚ್ಚಾಯಿತು. ಇದು ಸಹ ಗ್ರಾಮೀಣ ಸಮಾಜದಲ್ಲಿ ಅದುವರೆವಿಗೆ ಪ್ರಚಾರದಲ್ಲಿದ್ದ ಗುಡಿಕೈಗಾರಿಕೆಗಳು ಕ್ಷೀಣಿಸುವುದಕ್ಕೆ ಕಾರಣವಾಯ್ತು. ಗ್ರಾಮಸಮಾಜದಲ್ಲಿ ಚಮ್ಮಾರರ ಬದುಕು, ಕೈಮಗ್ಗದ ಬಳಕೆ, ಆಲೆಮನೆಗಳ ಚಟುವಟಿಕೆ ಕ್ರಮೇಣ ಕಣ್ಮರೆಯಾಗಿ ಗ್ರಾಮೀಣ ಜನರ ಆರ್ಥಿಕ ಸ್ವಾವಲಂಬಿತನ ಕುಂಟಿತವಾಯಿತು. ಔದ್ಯೋಗೀಕರಣ ಗ್ರಾಮೀಣ ಜನರನ್ನು ನಗರಗಳ ಕಡೆಗೆ ಅನಿವಾರ್ಯವಾಗಿ ವಲಸೆ ಹೋಗಲು ಪ್ರೇರೇಪಣೆ ನೀಡಿತು. ಮಳೆಯ ಅನಿಶ್ಚಿತತೆಯು ಕೃಷಿ ಜೀವನದಲ್ಲಿ ಅಧೈರ್ಯವನ್ನು ಮೂಡಿಸಿತು. ಹೀಗೆ ಗ್ರಾಮಸಮಾಜದಲ್ಲಿ ಒಂದು ರೀತಿಯ ಪಲ್ಲಟ ತಾನಾಗಿ ಮೂಡಿತು. ಗ್ರಾಮೀಣ ಬದುಕಿನಲ್ಲಿ ಅದುವರೆವಿಗೆ ಕಾಣುತ್ತಿದ್ದ ಅವಿಭಕ್ತ ಕುಟುಂಬವು ಸಹ ಕ್ರಮೇಣವಾಗಿ ಕಣ್ಮರೆಯಾಯಿತು. ನವೋದಯ ಸಾಹಿತ್ಯದಲ್ಲಿ ಗ್ರಾಮಜೀವನದ ಅವನತಿಯ ಈ ಚಿತ್ರವನ್ನು ಯಥಾವತ್ತಾಗಿ ಕಾಣಬಹುದು. ಕಾರಂತರು, ಕುವೆಂಪು, ಗೊರೂರವರು, ಎಚ್.ಎಲ್. ನಾಗೇಗೌಡರು ಇಂತಹ ಗ್ರಾಮಜೀವನದ ಚಿತ್ರವನ್ನು ತಮ್ಮ ಸಾಹಿತ್ಯದಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಗೊರೂರವರ ಸಾಹಿತ್ಯದಲ್ಲಿ ಗ್ರಾಮಜೀವನದ ಚಿತ್ರಣ ಯಥೋಚಿತವಾಗಿ ಮೂಡಿಬಂದಿದೆ ಎಂದು ವಿಮರ್ಶಕರು ಗುರುತಿಸಿರುವುದು ಗಮನಾರ್ಹವಾದದ್ದು. ಗ್ರಾಮಜೀವನದ ದುರಂತವನ್ನು ಹೇಳುವಾಗಲು ಗೊರೂರವರು ವ್ಯಗ್ರರಾಗದೆ ಹಾಸ್ಯದ ಹಿನ್ನೆಲೆಯಲ್ಲಿಯೇ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಇಂತಹ ವಲಸೆಯ ಜೀವನದಿಂದ ಕುಟುಂಬದ ಸಂಬಂಧ ಜಾಳಾಯಿತು ಎಂಬ ಮಾತು ಅಷ್ಟೇ ಸತ್ಯವಾದದ್ದು. ಅವಿಭಕ್ತ ಕುಟುಂಬಗಳು 'ಅಣು ಕುಟುಂಬ'ಗಳಾದವು ಎಂಬ ಮಾತು ಎಷ್ಟು ಸತ್ಯವೋ ಅವಿಭಕ್ತ ಕುಟುಂಬಗಳಲ್ಲಿ ಒಳವ್ಯಾಜ್ಯಗಳು ಮೂಡಿತು ಎಂಬ ಮಾತು ಅಷ್ಟೇ ಸಹಜವೆನಿಸುತ್ತದೆ.

ಕೈಗಾರಿಕೀಕರಣದಿಂದ ಗ್ರಾಮೀಣ ಸಮಾಜದಲ್ಲಿ ದಲಿತರ ಬದುಕಿಗೆ ಒಂದು ಹೊಸ ಬೆಳಕು ಬಂದಿತು. ಅಸ್ಪೃಶ್ಯತಾ ಭಾವನೆ ಸ್ವಲ್ಪಮಟ್ಟಿಗೆ ಕಡಿಮೆಯಾಗಿ ಜಾತಿಯ ಒಡಕುಗಳು ಕಡಿಮೆಯಾಯಿತು. ಆದರೆ ರಾಜಕೀಯವಾಗಿ ಪಕ್ಷಗಳ ಬಲಾಬಲ ನಿರ್ಧಾರವಾಗುವಾಗ ಜಾತಿಪದ್ಧತಿ ಮತ್ತೊಂದು ದೃಷ್ಟಿಯಲ್ಲಿ ಪ್ರಬಲವಾಯ್ತು ಎಂಬ ಮಾತು ನಮಗೆ ಕೇಳಿ ಬರುತ್ತದೆ. ಇಂಥಹ ಜಾತಿಯ ವ್ಯವಸ್ಥೆ ಗ್ರಾಮಸಮಾಜದಲ್ಲಿ

ನೋವನ್ನು ತಂದಿರುವುದಕ್ಕಿಂತ ನಗರ ಸಮಾಜದಲ್ಲಿ ಹೆಚ್ಚು ದುರಂತವನ್ನು ಉಂಟು ಮಾಡಿದೆ ಎಂಬ ಸಮಾಜಶಾಸ್ತ್ರಜ್ಞರ ಅಭಿಪ್ರಾಯ ಒಪ್ಪುವಂತಹದಾಗಿದೆ.

ಗ್ರಾಮೀಣ ಸಮಾಜದಲ್ಲಿ ಶಿಕ್ಷಣದ ಪಾತ್ರ ವಿಚಾರಣೀಯವಾದುದು. ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತೆಯ ಪ್ರಮಾಣ ಕಡಿಮೆ ಇದೆ. ಗ್ರಾಮೀಣ ಸಮಾಜದಲ್ಲಿ ಶಿಕ್ಷಣ ಸಾರ್ವಜನಿಕವಾಗಿ ಹೆಚ್ಚು ಪ್ರಚಾರವಾಗಲಿಲ್ಲ. ಪುರಾತನ ಕಾಲದಿಂದ ವಿದ್ಯೆಯನ್ನು ಕೆಲವರು ತಮ್ಮ ಸ್ವತ್ತಾಗಿಸಿಕೊಂಡು ಮಡಿವಂತಿಕೆಯಿಂದ ಜನಸಾಮಾನ್ಯರಿಗೆ ಶಿಕ್ಷಣವನ್ನು ಭಾರತದಲ್ಲಿ ಬಹುಸಂಖ್ಯಾತರನ್ನು ವಂಚಿಸಿದ್ದಾರೆ. ಹಿಂದೂ ಧರ್ಮದ ಜಡಗೊಂಡ ಸಂಪ್ರದಾಯಸ್ಥ ಸಮಾಜದಲ್ಲಿ ಸಮಾಜದ ಕೆಳವರ್ಗದವರಾದ ದಲಿತರು, ಮಹಿಳೆಯರಿಗೆ ಶಿಕ್ಷಣ ಕಲಿಯಲು ಅವಕಾಶವಿರಲಿಲ್ಲ. ಬ್ರಿಟಿಷರು ಬರುವವರೆಗೆ ಶಿಕ್ಷಣ ಸಾರ್ವಜನಿಕವಾಗಿ ಜಾರಿಗೆ ಬರಲಿಲ್ಲ. ಬ್ರಿಟಿಷರ ಕಾಲದಲ್ಲಿಯೂ ಕೂಡ ಶಿಕ್ಷಣದ ಸೌಲಭ್ಯಗಳು ಗ್ರಾಮೀಣ ಪ್ರದೇಶಗಳಿಗೆ ತಲುಪಿದ್ದು ತೀರಾ ತಡವಾಗಿಯೇ ಎಂದು ಹೇಳಬೇಕು. ಭಾರತೀಯ ಗ್ರಾಮೀಣ ಪ್ರದೇಶದ ಜನ ಹೀಗೆ ಅನಕ್ಷರಸ್ಥರಾಗಿಯೇ ಉಳಿಯುವಂತಾಯಿತು. ಮೇಲ್ಜಾತಿಯ ಬ್ರಾಹ್ಮಣರಿಗೆ ಮಾತ್ರ ಗ್ರಾಮೀಣ ಸಮಾಜದಲ್ಲಿ ಶಿಕ್ಷಣದ ಅವಕಾಶವಿತ್ತು. ಇಷ್ಟೇ ಅಲ್ಲದೆ ಆಂಗ್ಲರು ಭಾರತೀಯಗೆ ಕೊಟ್ಟ ಶಿಕ್ಷಣವು ಅವರ ಆಡಳಿತದ ಅನುಕೂಲಕ್ಕೆ ಅನುಗುಣವಾಗಿತ್ತು. ಕ್ರಿಶ್ಚಿಯನ್ ಸಂಸ್ಥೆಗಳು ನೀಡಿದ ಶಿಕ್ಷಣ ಗ್ರಾಮೀಣ ಸಮಾಜದಲ್ಲಿ ವಿಚಾರಗಳ ಸಂಘರ್ಷವನ್ನು ಉಂಟು ಮಾಡಿತ್ತು. ಇಂಗ್ಲೀಶರು ಕೊಟ್ಟ ಶಿಕ್ಷಣ ಬಹುಮಟ್ಟಿಗೆ ಮತೀಯವಾಗಿತ್ತು. ಇಂತಹ ಶಿಕ್ಷಣ ನೀತಿಯನ್ನು ಗಾಂಧೀಜಿಯವರು ಮತ್ತು ರವೀಂದ್ರನಾಥ ಠಾಗೂರರು ಖಂಡಿಸುವುದರಲ್ಲಿ ನ್ಯಾಯವಿದೆ ಎನ್ನಬಹುದು. ಗಾಂಧೀಜಿಯವರು ಮೂಲ ಶಿಕ್ಷಣವನ್ನು ಪ್ರಾದೇಶಿಕ ಭಾಷೆಗಳಲ್ಲಿ, ಮಾತೃ ಭಾಷೆಗಳಲ್ಲಿ ನೀಡಬೇಕೆಂದು ಹೇಳುತ್ತಿದ್ದರು. ಕೆಳಶೂದ್ರ ಜಾತಿಗಳು ಬಹುಶಃ ಇಂಗ್ಲೀಷ್ ಶಿಕ್ಷಣವನ್ನು ಸ್ವಾಗತಿಸುತ್ತಿದ್ದರು. ಆಂಗ್ಲ ಶಿಕ್ಷಣ ಪದ್ಧತಿ ಕೆಳಜಾತಿಯವರಿಗೆ ಅಮಾನವೀಯತೆಯ ವಿರುದ್ಧ ಮಾತನಾಡುವ ಶಕ್ತಿಯನ್ನು ನೀಡಿತು. ಆಂಗ್ಲರ ಶಿಕ್ಷಣ ನೀತಿ ಗ್ರಾಮಸಮಾಜದಲ್ಲಿ ಹೊಸ ಚಿಂತನೆಯನ್ನು ಮೂಡಿಸಿತು. ಆಧುನಿಕ ಶಿಕ್ಷಣದ ಫಲವಾಗಿ ಭಾರತೀಯರಿಗೆ ಬೇರೊಂದು ಭಾಷೆಯ ಸಾಹಿತ್ಯ-ಸಂಸ್ಕೃತಿ-ವಿಚಾರಧಾರೆಯು ಸಿಗುವಂತಾಯಿತು. ಆ ಮೂಲಕ ಗ್ರಾಮೀಣ ಜನರಲ್ಲಿ ಹಳೆಯ ತಲೆಮಾರಿನವರಿಗೂ ಯುವ ಪೀಳಿಗೆಯವರಿಗೂ ವಿಚಾರಗಳಲ್ಲಿ ಸಂಘರ್ಷವನ್ನು ವೈರುಧ್ಯವನ್ನು ಶಿಕ್ಷಣ ಒದಗಿಸಿಕೊಟ್ಟಿತು. ವಸಾಹತು ಶಿಕ್ಷಣ ತಂದ ಆಧುನಿಕತೆ ಹಾಗೂ ಬದಲಾವಣೆಯ ಪ್ರಕ್ರಿಯೆಗಳಿಗೆ ಗ್ರಾಮಸಮಾಜ ಮುಖಾಮುಖಿಯಾಯಿತು. ಇದರಿಂದ ಉಂಟಾದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ವೈಯಕ್ತಿಕ ಹೊಸ ಚಿಂತನೆಗಳು ತಳೆದ ಭಿನ್ನ ಧೋರಣೆಗಳು ಸಮಾಜದಲ್ಲಿ ಘಟಿಸಿದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕಾರಂತರು, ಕುವೆಂಪು, ಮಾಸ್ತಿ, ಗೊರೂರವರ ಕೃತಿಗಳಲ್ಲಿ ಗುರುತಿಸಬಹುದು.

ಭಾರತಕ್ಕೆ ಬ್ರಿಟಿಷ್ ವಸಾಹತು ಮೂಲಕ ಆಗಮನವಾದ ಆಧುನಿಕತೆ ಶಿಕ್ಷಣದ ಮೂಲಕ ಪ್ರವೇಶ ಮಾಡಿದೆ. ಇದು ಸಂಪ್ರದಾಯ ಸಮಾಜಕ್ಕೆ ತೊಂದರೆಯಾಗಿ ಪರಿಣಮಿಸಿದಂತೆ ಭಾರತದಲ್ಲಿ ಹೊಸ ಸಮಾಜದ ಹುಟ್ಟಿಗೆ ನಾಂದಿಯಾಯಿತು. ಆಧುನಿಕತೆ ತಂದ ಸೌಲಭ್ಯಗಳಿಗೆ ಗ್ರಾಮಸಮಾಜದಿಂದ ಮುಖಾಮುಖಿಯಾದಾಗ ಒಂದು ಬಗೆಯ ತಲ್ಲಣಗಳಿಗೆ ಕುತೂಹಲಕ್ಕೆ ಗ್ರಾಮಸಮಾಜ ಒಳಗಾಯಿತು. ಇಂಥಹ ಆಧುನಿಕತೆಯ ವಾತಾವರಣಕ್ಕೆ ಸ್ಪಂದಿಸಿದ ಮನ ಮಾರುಹೋದ ಗ್ರಾಮೀಣ ಪಾತ್ರಗಳ ಚಿತ್ರವನ್ನು ನವೋದಯ ಸಾಹಿತಿಗಳ ಕೃತಿಗಳಲ್ಲಿ ನಾವು ಚೆನ್ನಾಗಿ ಕಾಣಬಹುದು. ಇದರ ಜೊತೆಗೆ ಗ್ರಾಮೀಣ ಸಮಾಜದಲ್ಲಿ ಆಧುನಿಕತೆಯ ನಡುವೆ ನಡೆದ ಸಂಘರ್ಷದ ಚಿತ್ರವನ್ನು ಕುವೆಂಪು, ಕಾರಂತರ ಕೃತಿಗಳಲ್ಲಿ ನೋಡಬಹುದು. ಬ್ರಿಟಿಷರು ಕ್ರೈಸ್ತ ಧರ್ಮಕ್ಕೆ ಮತಾಂತರದ ಉದ್ದೇಶದಿಂದ ಜಾರಿಗೆ ತಂದ ಶಿಕ್ಷಣ ಗ್ರಾಮ ಸಮಾಜದಲ್ಲಿ ಹಲವು ಬಗೆಯ ಸಾಂಸ್ಕೃತಿಕ ಸಂಘರ್ಷಗಳಿಗೆ ಕಾರಣವಾಯಿತು. ಸಾಮಾಜಿಕವಾಗಿ ಏಣಿ ಶ್ರೇಣಿಯನ್ನು ಅನುಭವಿಸಿದ ದಲಿತರಿಗೆ ಆಧುನಿಕತೆ ಬಿಡುಗಡೆಯಾಗಿ ಕಂಡಿತು. ಮೇಲ್ಜಾತಿಗಳಿಗೂ ಕೂಡ ಆಧುನಿಕತೆ ಬಿಗಿಯಾದ ಸಂಪ್ರದಾಯದ ಕಂದಾಚಾರಗಳಿಂದ ಹೊರಬರಲು ಅನುಕೂಲವಾಯಿತು.

ಗಾಂಧೀಜಿ ಗ್ರಾಮಸ್ವರಾಜ್ಯದ ಭಾವನೆಯನ್ನು ಮೂಡಿಸುವುದರ ಜೊತೆಗೆ ಗ್ರಾಮದ ಏಳಿಗೆಯನ್ನು ವಿಚಾರ ಮಾಡಿರುವುದು ಮುಖ್ಯ ಸಂಗತಿಯಾಗಿದೆ. ಗ್ರಾಮದ ಉದ್ಧಾರವೇ ದೇಶದ ಉದ್ಧಾರ. ರಾಮರಾಜ್ಯ ವೆಂದರೆ ಗ್ರಾಮೀಣ ಬದುಕಿನ ಪ್ರಗತಿ ಎಂಬುದು ಗಾಂಧಿ ಸಿದ್ಧಾಂತದಲ್ಲಿ ಸ್ಪಷ್ಟವಾಗಿದೆ. ಇದನ್ನೇ 'ಗ್ರಾಮ ಸ್ವರಾಜ್ಯ'ವೆಂದು ಗಾಂಧಿ ಕರೆದಿದ್ದಾರೆ. ಯಂತ್ರ ಸಂಸ್ಕೃತಿ ಉಂಟುಮಾಡಿದ ಅನೇಕ ತೊಡಕುಗಳಿಗೆ ಗಾಂಧೀಜಿ ಗ್ರಾಮಸ್ವರಾಜ್ಯದ ಮೂಲಕ ಉತ್ತರಗಳನ್ನು ಸೂಚಿಸಿದ್ದಾರೆ. ಈ ಕಾರಣದಿಂದಲೇ ಗಾಂಧೀಜಿಯವರು ಹಿಂದೂ ಸ್ವರಾಜ್ಯದಲ್ಲಿ ಯಂತ್ರ ಸಂಸ್ಕೃತಿಯನ್ನು ವಿರೋಧಿಸಿ ಸಣ್ಣ ಕೈಗಾರಿಕೆಗಳ ಪ್ರಗತಿಗೆ ಗ್ರಾಮೀಣ ಪರಿಸರದಲ್ಲಿ ಮಾನ್ಯತೆಯನ್ನು ತಂದುಕೊಟ್ಟಿದ್ದಾರೆ. ನವೋದಯ ಸಾಹಿತ್ಯದಲ್ಲಿ ಬಂಡವಾಳಶಾಹಿ ವರ್ಗದ ವಿರುದ್ಧವಾಗಿ ದನಿಯನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿಯೇ ಗಾಂಧಿಯವರು ಹಳ್ಳಿಯನ್ನು - ಗ್ರಾಮಗಳನ್ನು ಭಾರತದ ಹೃದಯ ಎಂದು ಕರೆದಿದ್ದಾರೆ. ಆರ್ಥಿಕ ಹಾಗೂ ಆಡಳಿತ ರೀತಿಯಲ್ಲಿ ಗಾಂಧೀಜಿಯವರು ವಿಕೇಂದ್ರೀಕರಣವನ್ನು ಮಾಡಿದ್ದಾರೆ. ಸ್ವಯಂಪೂರ್ಣ ಗ್ರಾಮ ನಿರ್ಮಾಣ ಮಾಡುವುದು ಗಾಂಧೀಜಿಯವರ ಗುರಿಯಾಗಿತ್ತು. ಇದಕ್ಕಾಗಿಯೇ ಗಾಂಧೀಜಿಯವರು ಸ್ವದೇಶಿ ಚಳುವಳಿಯನ್ನು ಸತ್ಯಾಗ್ರಹದಷ್ಟೇ ತೀವ್ರಗೊಳಿಸಿದರು. ಗಾಂಧೀಜಿಯವರು ಘೋಷಿಸಿದ ಸರ್ವೋದಯ ಸಿದ್ಧಾಂತದ ಹಿರಿಮೆಯನ್ನು ಕನ್ನಡದ ನವೋದಯ ಸಾಹಿತಿಗಳಲ್ಲಿ ನಾವು ನಿಶ್ಚಯವಾಗಿ ನೋಡಬಹುದು. ಕುವೆಂಪುರವರ 'ಇದು ಸರ್ವ ಸಮಾನರ ಕಾಲ' ಎಂಬ ಮಾತು ಮೇಲಿನ ಅರ್ಥದಲ್ಲಿ ಅತ್ಯುತ್ತಮ ಹಿನ್ನೆಲೆಯಾಗಿದೆ. ದುಡಿಮೆಯ ಬದುಕು ಸರ್ವೋದಯ ತತ್ತ್ವದ ಭದ್ರ ಬುನಾದಿ ಎನ್ನಬಹುದು. ಸರ್ವೋದಯ ತತ್ತ್ವದಲ್ಲಿ ಸಹಕಾರ ತತ್ತ್ವ, ಸಾಮಾಜಿಕ ಪ್ರಜ್ಞೆ ಅಂತರ್ಗತವಾಗಿದೆ ಎಂಬುದನ್ನು ನಾವು

ನವೋದಯ ಸಾಹಿತ್ಯದ ಮೂಲಕ ಮನವರಿಕೆ ಮಾಡಿಕೊಳ್ಳಬಹುದು. ಹೀಗೆ ಗಾಂಧೀಜಿಯವರ ಸರ್ವೋದಯ ಮಂತ್ರ ವಿಶ್ವ ಶಾಂತಿಗೆ ಪ್ರೇರಕ ಮಂತ್ರವಾಯಿತು ಎಂಬುದನ್ನು ಒಪ್ಪಲೇಬೇಕಾಗುತ್ತದೆ. 'ದಲಿತೋದ್ಧಾರ', 'ಗ್ರಾಮಗಳಿಗೆ ಮರಳಿ' ಎಂಬ ಗಾಂಧೀಜಿಯವರ ಘೋಷಣೆ ಗೊರೂರವರ ಸಾಹಿತ್ಯದಲ್ಲಿ ಉಜ್ವಲವಾಗಿ ಮೂಡಿಬಂದಿದೆ. ಇದಕ್ಕೆ ಉದಾಹರಣೆ ಅವರ 'ಹೇಮಾವತಿ' ಕೃತಿ. ಜಾತಿಯಲ್ಲಿ ಉತ್ತಮ ಮತ್ತು ಕೀಳು ವರ್ಗ ಭೇದವನ್ನು ನವೋದಯ ಸಾಹಿತಿಗಳು ಕಿತ್ತು ಹಾಕಿದ್ದಾರೆ. ಭ್ರಷ್ಟಾಚಾರದ ನಿರ್ಮೂಲನೆ ಮತ್ತು ಆಡಳಿತದ ವಿಕೇಂದ್ರೀಕರಣ ನವೋದಯ ಸಾಹಿತ್ಯದ ಮೂಲ ಉದ್ದೇಶವಾಗಿತ್ತು. ವಿನೋಬಾ ಬಾವೆಯವರ ಭೂದಾನ ಚಳುವಳಿಯು ಸಹ ಗಾಂಧಿ ಸಿದ್ಧಾಂತಕ್ಕೆ ಬೆಂಬಲವಾಗಿದೆ. ಗ್ರಾಮ ಸ್ವರಾಜ್ಯದ ಬಗ್ಗೆ ಅಂಬೇಡ್ಕರ್ ಅವರು ಗಾಂಧಿಯವರ ಚಿಂತನೆಗಳಿಗೆ ವಿರುದ್ಧವಾಗಿ ಆಲೋಚನೆಗಳನ್ನು ಮಂಡಿಸುತ್ತಾರೆ. ಇವರಿಬ್ಬರ ಚಿಂತನೆಗಳು ಭಿನ್ನವಾಗಿರುವುದಕ್ಕೆ ಐತಿಹಾಸಿಕ ಸತ್ಯಗಳಿವೆ. ಅಂಬೇಡ್ಕರ್ ಹುಟ್ಟಿ ಬಂದ ಸಾಂಸ್ಕೃತಿಕ ಪರಿಸರವೇ ಗಾಂಧಿ ಮತ್ತು ಸಮಾಜವಾದಿ ಗಳ ವಿರುದ್ಧದ ಚಿಂತನೆಗೆ ಕಾರಣವಾಗಿದೆ. ಗಾಂಧಿ ಮತ್ತು ಸಮಾಜವಾದಿಗಳು ವಿಕೇಂದ್ರೀಕರಣವನ್ನು ಬಹುಮಟ್ಟಿಗೆ ಅಪೇಕ್ಷಿಸುತ್ತಾರೆ. ಆದರೆ ಅಂಬೇಡ್ಕರ್ ಗ್ರಾಮ ಸ್ವರಾಜ್ಯವನ್ನು ಮತ್ತು ವಿಕೇಂದ್ರೀಕರಣವನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಇಂತಹ ಸಂಘರ್ಷದ ಚಿಂತನೆ ಚಿತ್ರಣ ನವೋದಯ ಸಾಹಿತ್ಯಕ್ಕೆ ಗುರುತ್ವವನ್ನು ತಂದುಕೊಟ್ಟಿದೆ. ಈ ಹಿನ್ನೆಲೆಯಲ್ಲಿಯೇ ಗ್ರಾಮೀಣ ಸಮಾಜದ ಚಿತ್ರಣ ನವೋದಯ ಸಾಹಿತ್ಯದ ತಿರುಳು ಎಂದು ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ. ಗಾಂಧೀಜಿಯವರು ಹಳ್ಳಿಯಿಂದ ದೆಲ್ಲಿ ಎಂಬ ವ್ಯಾಪಕ ಸಿದ್ಧಾಂತವನ್ನು ಕೊಟ್ಟಿರುವುದು ಗ್ರಾಮೀಣ ಸಮಾಜದ ಪ್ರಗತಿಗೆ ಪರಿಪೂರ್ಣತೆಗೆ ಸಹಾಯಕ ಅಂಶವಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬಹುದು. ಮಾಸ್ತಿ, ಕುವೆಂಪು, ಕಾರಂತ, ಗೊರೂರವರು ಶ್ರೀ ಸಾಮಾನ್ಯರಿಗೆ ಸಾಹಿತ್ಯದಲ್ಲಿ ಕೊಟ್ಟಿರುವ ಮಾನ್ಯಸ್ಥಾನ ನಮಗೆ ಅರ್ಥಪೂರ್ಣವಾಗಿದೆ ಎನಿಸುತ್ತದೆ.

ಎರಡನೆಯ ಮಹಾಯುದ್ಧದ ನಂತರ ನವವಸಾಹತುಶಾಹಿ ಕಂಪನಿಗಳು ವಿಶ್ವದ ತೃತೀಯ ಜಗತ್ತಿನ ದೇಶಗಳ ಆರ್ಥಿಕ ವಲಯದಲ್ಲಿ ಬೀರಿರುವ ಪರಿಣಾಮಗಳು ಗಮನಾರ್ಹವಾದದ್ದು. ಬಹುರಾಷ್ಟ್ರೀಯ ಕಂಪನಿಗಳು ಕಚ್ಚಾ ವಸ್ತುಗಳನ್ನು ತೃತೀಯ ಜಗತ್ತಿನ ದೇಶಗಳ ಮೂಲಕ ಖರೀದಿಸಿ ಇಂತಹ ಅದೇ ದೇಶಗಳಿಗೆ ಸಿದ್ಧ ವಸ್ತುಗಳನ್ನು ತಮ್ಮದೇ ಆದ ಮಾರುಕಟ್ಟೆಯ ಮೂಲಕ ತಲುಪಿಸಿ ಹೆಚ್ಚಿನ ಲಾಭಗಳನ್ನು ಗಳಿಸಿರುವುದನ್ನು ನೋಡಬಹುದು. ಬಹುರಾಷ್ಟ್ರೀಯ ಕಂಪನಿಗಳ ಇಂತಹ ಚಟುವಟಿಕೆಗಳು ಮುಂದುವರೆದಂತೆಲ್ಲಾ ವಿಶ್ವದ ತೃತೀಯ ಜಗತ್ತಿನ ದೇಶಗಳಲ್ಲಿ ಆರ್ಥಿಕ ಅಸಮಾನತೆ ತಲೆದೋರಿ ಅಲ್ಲಿ ರಾಷ್ಟ್ರೀಯ ಸಮಸ್ಯೆಗಳಿಗೆ ಕಾರಣವಾಗಿರುವುದನ್ನು ಇಂದು ಕಾಣಬಹುದು. ಇಂದಿನ ಮಾರುಕಟ್ಟೆಯಲ್ಲಿ ಪ್ರಚಾರ ಮಾಧ್ಯಮಗಳ ಪಾತ್ರವೂ ಅತ್ಯಂತ ಪ್ರಧಾನವಾಗಿದೆ. ವಸ್ತುವಿನ ಬಗ್ಗೆ

ಮಾಡುವ ಪ್ರಚಾರ ವಸ್ತುವಿನ ಸಹಜ ಗುಣವನ್ನು ಮರೆಸುವಷ್ಟು ವೈಭವೀಪೂರಿತವಾಗಿದೆ. ಇಂತಹ ಪ್ರಚಾರಗಳ ಅಬ್ಬರ ಆಕರ್ಷಣೆಗಳಿಗೆ ಬಲಿಯಾದ ಗ್ರಾಹಕರು ತಮ್ಮ ಆರ್ಥಿಕ ಶಕ್ತಿಗೂ ಮೀರಿ ವ್ಯಾಪಾರ ಮಾಡುವ ಹುಚ್ಚುತನಕ್ಕೆ ಮುಂದಾಗುತ್ತಿರುವುದನ್ನು ಇಂದು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚೆನ್ನಾಗಿ ಗಮನಿಸುತ್ತಿದ್ದೇವೆ. ಸ್ವದೇಶಿ ವಸ್ತುಗಳ ಅಭಿಮಾನ ಇಂದು ಕಡಿಮೆಯಾಗಿದೆ ಎನ್ನುವುದಕ್ಕಿಂತ ಅನೇಕ ಸಂದರ್ಭಗಳಲ್ಲಿ ಇಲ್ಲ ಎನಿಸುವಷ್ಟರ ಮಟ್ಟಿನ ವಿದೇಶ ವಸ್ತುಗಳ ಮೋಹ ನಮ್ಮನ್ನು ಕಾಡಿ ನಮ್ಮ ವಿವೇಕವನ್ನು ಬಲಿ ತೆಗೆದುಕೊಳ್ಳುತ್ತಿದೆ. ನವೋದಯ ಸಾಹಿತಿಗಳು ಸಮಾಜದ ವ್ಯಕ್ತಿಗಳ ಈ ವಿದೇಶಿ ವಸ್ತುಗಳ ಮೋಹವನ್ನು ಅನೇಕ ಸಂದರ್ಭಗಳಲ್ಲಿ ಪ್ರಾಸಂಗಿಕವಾಗಿ ಖಂಡಿಸಿ ಎಚ್ಚರಿಸಿದ್ದಾರೆ. ಈ ಮೂಲಕ ನಮ್ಮ ಆರ್ಥಿಕ ಸ್ಥಿತಿಯ ಸೋರುವಿಕೆಯನ್ನು ತಡೆಗಟ್ಟಲು ಪ್ರಯತ್ನಿಸಿರುವುದನ್ನು ಗಮನಿಸಬಹುದು. ಈ ದಿಶೆಯಲ್ಲಿ ಸ್ವಲ್ಪಮಟ್ಟಿಗೆ ನಮ್ಮಲ್ಲಿ ವಿದ್ಯಾವಂತರು ಜಾಗೃತರಾದರೂ ಸಮಾಜದ ಮಧ್ಯಮ ವರ್ಗದವರು ವಿದೇಶಿ ಉತ್ಪಾದಿತ ವಸ್ತುಗಳಿಗೆ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಮರುಳಾಗುತ್ತಿರುವುದು ವಾಸ್ತವ ವಿಷಾದನೀಯ ಸಂಗತಿ. ಗೊರೂರರವರು ಗ್ರಾಮೀಣ ಬದುಕಿನಲ್ಲಿ ಆಧುನಿಕ ಬೆಡಗಿನ ಜೀವನ ಹೇಗೆ ಸಮಾಜದ ಸಾಮಾನ್ಯ ಜನರನ್ನು ಮರಳು ಮಾಡುತ್ತಿದೆ ಎಂಬುದನ್ನು ಅತ್ಯಂತ ವ್ಯಂಗ್ಯ ರಸಿಕ ನುಡಿಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಕೃಷಿಯಲ್ಲಿಯೇ ಈ ರೀತಿಯ ವಿದೇಶಿ ರೀತಿ ಇಣುಕು ಹಾಕುತ್ತಿರುವುದನ್ನು ಗೊರೂರರವರು ಗ್ರಾಮೀಣ ಜೀವನದಲ್ಲಿ ಚಿತ್ರಿಸಿದ್ದಾರೆ. ಇಂದು ನಮ್ಮಲ್ಲಿಯ ಕಚ್ಚಾವಸ್ತುಗಳನ್ನು ಹೇಗೆ ಅತಿ ಅಲ್ಪ ಬೆಲೆಗೆ ವಿದೇಶಿ ಕಂಪನಿಗಳಿಗೆ ಮಾರಿ ಮೋಸ ಹೋಗುತ್ತಿದ್ದೇವೆ ಎಂಬುದನ್ನು ಗಮನಿಸಬಹುದು. ಹೆಚ್ಚಿನ ಉತ್ಪಾದನೆಯ ಮೂಲಕ ನಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದು ಒಂದು 'ಗುಣ ಮಾರ್ಗ'ವಾದರೆ ನಮ್ಮದೇ ಆದ ಕಚ್ಚಾವಸ್ತುಗಳ ಮೂಲಕ ನಮ್ಮ ಅವಶ್ಯಕ ವಸ್ತುಗಳನ್ನು ನಾವೇ ತಯಾರಿ ಮಾಡಿಕೊಳ್ಳುವುದು ನಮ್ಮ ಆರ್ಥಿಕ ಪ್ರಗತಿಯ ಮತ್ತೊಂದು ಗುಣಮುಖವಾಗುತ್ತದೆ. ಅರ್ಥಶಾಸ್ತ್ರಜ್ಞರು ರಾಷ್ಟ್ರದ ಆರ್ಥಿಕ ಸ್ಥಿತಿಯ ಸುಧಾರಣೆಯ ಬಗ್ಗೆ ಎಚ್ಚರದ ಮಾತುಗಳನ್ನು ತಿಳಿಸುವಾಗ ವಿಶ್ವದ ತೃತೀಯ ಜಗತ್ತಿನ ದೇಶಗಳಿಗೆ ಇಂತಹ ಸೂಚನೆಗಳನ್ನು ಕೊಟ್ಟಿದ್ದಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಾವು ದಿನನಿತ್ಯ ಕಾಣುವುದು ನ್ಯಾಯವಾದ ಪ್ರಗತಿಗೆ ಬದಲಾಗಿ ವಿಚಿತ್ರ ಸ್ಪರ್ಧೆಯನ್ನೇ ಹೆಚ್ಚಾಗಿ ಕಾಣುತ್ತಿದ್ದೇವೆ. ಗ್ರಾಮೀಣ ಜೀವನದ ಬದುಕಿನಲ್ಲಿ ಸಾಂಸ್ಕೃತಿಕ ಸೋಲು, ಆರ್ಥಿಕ ಪ್ರಗತಿಯ ಇಳಿಮುಖ ಇಂದು ಭಾರತೀಯ ಸಮಾಜದಲ್ಲಿಯು ಕ್ರಮ ಕ್ರಮವಾಗಿ ಇಣುಕು ಹಾಕುತ್ತಿರುವುದು ಪ್ರಜ್ಞಾಪೂರ್ಣ ದೃಷ್ಟಿಗೆ ಮಾತ್ರ ಗೋಚರವಾಗುತ್ತದೆ.

'ಜಾಗತೀಕರಣ' ಇತ್ತೀಚಿನ ದಿನಗಳಲ್ಲಿ ಬಹು ವಿಷಯಗಳ ಚರ್ಚೆಗೆ ಬಂಡವಾಳವಾಗಿದೆ. ರಾಜಕೀಯ, ಆರ್ಥಿಕ, ಮಾರುಕಟ್ಟೆ, ವ್ಯಾಪಾರ ವಹಿವಾಟು, ಕೃಷಿ, ಕೈಗಾರಿಕೆ, ಮಾಹಿತಿ ತಂತ್ರಜ್ಞಾನ. ಸಾಹಿತ್ಯ - ಸಂಸ್ಕೃತಿ ಮೊದಲಾದ ಕ್ಷೇತ್ರಗಳ ಆಕರ್ಷಕ ವಿಷಯವಾಗಿದೆ. ಜಾಗತೀಕರಣ, ಖಾಸಗೀಕರಣ,

ಉದಾರೀಕರಣ ತೊಂಭತ್ತರ ದಶಕದಲ್ಲಿ ಉದಾರವಾದಿ ಆರ್ಥಿಕತೆಗೆ ಸಂಬಂಧಿಸಿದ್ದೆಂದು ತಿಳಿದರೂ ಅದರ ಮೂಲ ಬೇರು ವಸಾಹತುಶಾಹಿ ನೀತಿಯಿಂದಲೇ ಬೇರೆ ರೂಪಗಳನ್ನು ಪಡೆದುಕೊಂಡಿದೆ ಎನ್ನಬಹುದು. ಜಾಗತೀಕರಣವನ್ನು ವಿವಿಧ ವಲಯಗಳಲ್ಲಿ ಬೇರೆ ಬೇರೆಯಾಗಿ ಅರ್ಥೈಸಿಕೊಳ್ಳಲಾಗುತ್ತದೆ. ಜಾಗತೀಕರಣವನ್ನು ಸ್ವಾಗತಿಸುವಂತೆ ವಿರೋಧಿಸುವುದು ಇದೆ. ಸಂಸತ್ತು ರಾಜಕಾರಣದಲ್ಲಿ ದೇಶದ ಪ್ರಗತಿಗೆ ಅಗತ್ಯವೆಂದು ತಿಳಿದರೆ ಎಡಪಂಥೀಯ ಸಂಘಟನೆಗಳು ವಿರೋಧಿಸುತ್ತವೆ. ಸಾಹಿತ್ಯ-ಸಂಸ್ಕೃತಿ ಕ್ಷೇತ್ರದಲ್ಲಿ ಜಾಗತೀಕರಣವು ಉಂಟು ಮಾಡುವ ಭೀಕರತೆಗಳನ್ನು ಚರ್ಚಿಸಲಾಗುತ್ತಿದೆ. ಪ್ರಾದೇಶಿಕ ಸಂಸ್ಕೃತಿಯಲ್ಲಿ ಇದುವರೆವಿಗೆ ಕಾಣುತ್ತಿದ್ದ ವೈವಿಧ್ಯತೆ ಇಂದು ಜಾಗತೀಕರಣದಿಂದ ಕಣ್ಮರೆಯಾಗುತ್ತಿದೆ. 'ಜಾಗತೀಕರಣ'ದಿಂದ 'ವಿಶ್ವಗ್ರಾಮ' (Global Village) ಎಂಬ ಹೊಸ ಪರಿಕಲ್ಪನೆ ಇಂದು ನಮ್ಮಲ್ಲಿ ಉಂಟಾಗಿ ಗ್ರಾಮಸಮಾಜದ ಬೆಳವಣಿಗೆಗೆ ಹೊಸ ಆಯಾಮವನ್ನುಂಟು ಮಾಡಿದೆ ಎಂಬ ಅಭಿಪ್ರಾಯವು ವಿಚಾರಣೀಯವಾದುದು. ವಿಶ್ವಗ್ರಾಮ ವಿಶ್ವಬ್ಯಾಂಕಿನಿಂದ ಐ.ಎಂ.ಎಫ್, ಅಂತರರಾಷ್ಟ್ರೀಯ ವರ್ಲ್ಡ್ ಬ್ಯಾಂಕ್, ಹುಡ್ಕೋದಿಂದ ನೆರವು ಪಡೆಯುತ್ತಿರುವುದು ಗ್ರಾಮಸಮಾಜದ ಒಂದು ಹೊಸ ಸ್ವರೂಪಕ್ಕೆ ಕಾರಣವಾಗಿದೆ. ಗ್ರಾಮೀಣ ಪರಿಸರದಲ್ಲಿ ಇಂದು ಹೊಸ ಬೆಳವಣಿಗೆಯ ಲಕ್ಷಣಗಳನ್ನು ಕಾಣುತ್ತಿದ್ದಂತೆ ಹೊಸ ಸಮಸ್ಯೆಗಳ ಸೆಳೆತಕ್ಕೂ ಒಳಗಾಗಿದ್ದೇವೆ. ಗ್ರಾಮ ನೈರ್ಮಲ್ಯ, ಕುಟುಂಬ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಯೋಜನೆ, ಕೃಷಿ ಮುಂತಾದವು ಇಂದಿನ ಸರ್ಕಾರದಲ್ಲಿ ಪ್ರಮುಖವಾಗಿ ಕಾಣುವ ಚಟುವಟಿಕೆಗಳಾಗಿವೆ. ಇಂದು ಗ್ರಾಮೀಣ ಉದ್ಯೋಗ ರಾಷ್ಟ್ರವ್ಯಾಪಿ ಗುರುತ್ವವನ್ನು ಪಡೆದಿದೆ.

ಸ್ವಾತಂತ್ರ್ಯಾ ನಂತರದ ದಿನಗಳಲ್ಲಿ ಕೇಂದ್ರ ರಾಜ್ಯ ಸರ್ಕಾರಗಳು ಗ್ರಾಮಸಮಾಜದ ಅಭಿವೃದ್ಧಿಗೆ ಹೆಚ್ಚು ಮಹತ್ವವನ್ನು ನೀಡಿರುವುದನ್ನು ಕಾಣಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ಕೇಂದ್ರೀಕೃತ ಆಡಳಿತವನ್ನು ಹೆಚ್ಚು ಪ್ರೋತ್ಸಾಹಿಸುತ್ತಿದ್ದರಿಂದ ಗ್ರಾಮೀಣ ಪ್ರದೇಶಗಳ ಆಡಳಿತ ಸಂಸ್ಥೆಗಳಿಗೆ ಹೆಚ್ಚು ಸ್ವಾಯತ್ತತೆ ಸಿಗಲಿಲ್ಲ. ಆದ್ದರಿಂದ ರಾಷ್ಟ್ರದ ಆಡಳಿತದ ಅಭಿವೃದ್ಧಿಯಲ್ಲಿ ವಿಕೇಂದ್ರೀಕರಣ ಜಾರಿಗೆ ಬಂದಿತು. ೧೯೫೭ ರಲ್ಲಿ ಬಳವಂತರಾಯ ಮೆಹತಾ ಅವರ ಸಮಿತಿ ಅದುವರೆವಿಗೆ ಭಾರತದಲ್ಲಿ ಇದ್ದ ಕೇಂದ್ರೀಕೃತ ಆಡಳಿತ ಬಗ್ಗೆ ಚರ್ಚೆ ಮಾಡಿ ಭಾರತದ ಆರ್ಥಿಕ ಪ್ರಗತಿಗೆ ವಿಕೇಂದ್ರೀಕೃತ ಆಡಳಿತ ಪದ್ಧತಿ ಒಂದೇ ಉತ್ತಮ ಮಾರ್ಗ ಎಂಬುದನ್ನು ಸೂಚಿಸಿತು. ಇದರ ಫಲವಾಗಿ ಗ್ರಾಮೀಣ ಪರಿಸರದಲ್ಲಿಯೂ ಸರ್ಕಾರದ ಆಡಳಿತ ಯಂತ್ರದ ಪರಿಚಯ ಗ್ರಾಮೀಣ ಜನತೆಗೂ ಉಂಟಾಯಿತು. ಗ್ರಾಮಗಳ ಸುಧಾರಣೆಗೆ ಕನಸು ಕಾಣುತ್ತಿದ್ದ ಗ್ರಾಮೀಣ ಜನತೆ ಅನುಕೂಲವಾದ ಮಾರ್ಗಗಳನ್ನು ಕಂಡುಕೊಂಡು ಸಫಲರಾಗಲು ಈ ವಿಕೇಂದ್ರೀಕರಣ ಆಡಳಿತ ಒಂದು ಶಕ್ತಿಪೂರ್ಣ ವರವಾಯಿತು. ದೆಹಲಿಯ ಆಡಳಿತಕ್ಕೆ ಹಳ್ಳಿಯ ಆಡಳಿತ ಮೂಲ ಶಕ್ತಿ ಎಂಬ ರಾಜಕೀಯ ಜಾಗೃತಿಯ ಮಾತು ಈ ಸಂದರ್ಭದಲ್ಲಿ ಔಚಿತ್ಯಪೂರ್ಣವಾಯಿತು. ಸ್ವಾತಂತ್ರ್ಯ ರಾಷ್ಟ್ರದಲ್ಲಿ ಪ್ರತಿಯೊಬ್ಬ ಪ್ರಜೆಯು ಆಳ್ವಿಕೆಯ ವಿಚಾರದಲ್ಲಿ ಪ್ರಜ್ಞಾಪೂರ್ಣನಾಗಬೇಕು ಮತ್ತು

ರಾಷ್ಟ್ರದ ಹೊಣೆಗಾರಿಕೆಯಲ್ಲಿ ಸಕ್ರಿಯ ಪಾಲುಗಾರನಾಗಬೇಕು ಎಂಬುದು ಸ್ವಾತಂತ್ರ್ಯ ಭಾರತದ ಮೊದಲಿನ ರಾಷ್ಟ್ರೀಯ ನೇತಾರರ ಸಂದೇಶವಾಗಿತ್ತು ಎಂಬುದನ್ನು ನಾವು ಇಲ್ಲಿ ನೆನೆಪು ಮಾಡಿಕೊಳ್ಳಬಹುದು. ಗ್ರಾಮೀಣ ಪ್ರಗತಿಗೆ ಮಹತ್ವ ನೀಡುತ್ತ ಸರ್ಕಾರಗಳು ಈ ದಿಶೆಯಲ್ಲಿ ಕೃಷಿಯ ಪ್ರಗತಿ, ಭೂ ಸುಧಾರಣೆ, ಗ್ರಾಮೀಣ ಗೃಹ ನಿರ್ಮಾಣ, ಕುಡಿಯುವ ನೀರು, ಖಾದಿ, ಗ್ರಾಮ ಮತ್ತು ಗುಡಿ ಕೈಗಾರಿಕೆಗಳ ತರಬೇತಿ, ಬಡತನ ನಿವಾರಣಾ ಕಾರ್ಯಕ್ರಮಗಳು, ಪ್ರಾಥಮಿಕ ಶಿಕ್ಷಣ, ಕಡ್ಡಾಯ ಶಿಕ್ಷಣ, ಉಚಿತ ಶಿಕ್ಷಣ, ಗ್ರಂಥಾಲಯಗಳು, ವಯಸ್ಕರ ಮತ್ತು ಅನೌಪಚಾರಿಕ ಶಿಕ್ಷಣ, ತಾಂತ್ರಿಕತೆಯ ತರಬೇತಿ, ವೃತ್ತಿ ಶಿಕ್ಷಣ, ಗ್ರಾಮ ನೈರ್ಮಲ್ಯ, ಆರೋಗ್ಯ ಇನ್ನೂ ಮೊದಲಾದ ಯೋಜನೆಗಳನ್ನು ಗ್ರಾಮೀಣ ಪ್ರದೇಶದ ಸುಧಾರಣೆಗಾಗಿ ಯೋಜಿಸಲಾಗಿದೆ.

ಗ್ರಾಮೀಣ ಜನರಿಗೆ ಸ್ವಯಂ ಉದ್ಯೋಗದಡಿಯಲ್ಲಿ ಕಡಿಮೆ ಬಡ್ಡಿದರಲ್ಲಿ ಸಾಲ, ಸಬ್ಸಿಡಿಗಳನ್ನು ನಿರುದ್ಯೋಗಿಗಳು ಕೈಗೊಳ್ಳುವಂತೆ ಯೋಜನೆಗಳನ್ನು ರೂಪಿಸಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ, ಜವಾಹರ ರೋಜಗಾರ್ ಯೋಜನೆ, ಪಶುಸಂಗೋಪನೆ, ಕುಶಲ ಕರ್ಮಿಗಳಿಗೆ ನೆರವು ಇವು ಗ್ರಾಮೀಣ ಪ್ರದೇಶಗಳ ಜನರಿಗೆ ಕೈಗೊಂಡ ಕಾರ್ಯಕ್ರಮಗಳಲ್ಲಿ ಪ್ರಮುಖವಾದವುಗಳು. ಸರ್ಕಾರ ಇಷ್ಟೆಲ್ಲಾ ಯೋಜನೆಗಳನ್ನು ನಿರೂಪಿಸಿದ್ದರೂ ಗ್ರಾಮೀಣ ಜನರಿಗೆ ಸರಿಯಾದ ಕ್ರಮದಲ್ಲಿ ಮುಟ್ಟುತ್ತಿಲ್ಲ ಎಂಬ ಸಂಗತಿಗಳು ಕೇಳಿ ಬರುತ್ತಿವೆ. ಅಧಿಕಾರದ ವಿಕೇಂದ್ರೀಕರಣ ರಾಜಕೀಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಮಸ್ಯೆಗಳನ್ನು ಮೂಡಿಸಿದೆ ಎಂಬ ಮಾತು ಸತ್ಯವಾದರೂ ಇದು ರಾಜಕೀಯ ಜಾಗೃತಿಗೆ ಮೂಲ ಕಾರಣವಾಯಿತು ಎಂಬ ಮಾತು ಅಷ್ಟೇ ಪರಿಣಾಮಕಾರಿ ಸತ್ಯ ಸಂದೇಶ ಎಂಬುದನ್ನು ಇಂದು ಮನವರಿಕೆ ಮಾಡಿಕೊಳ್ಳಲು ಸಾಧ್ಯವಾಗಿದೆ. ಸಮಾಜದ ಎಲ್ಲಾ ವಲಯಗಳಲ್ಲೂ ಸ್ವಾರ್ಥಿಗಳು ದುಷ್ಟರು ಸಾಮಾಜದ ಮುಗ್ಧರನ್ನು ದಿಕ್ಕು ತಪ್ಪಿಸುತ್ತಾರೆ ಹಾಗೂ ವಂಚಿಸುತ್ತಾರೆ ಎಂಬುದನ್ನು ಕಂಡಾಗ ಅದರ ಬಗ್ಗೆ ತೋರಿಸುವ ಎಚ್ಚರವನ್ನು ಪ್ರತಿಭಟನೆಯನ್ನು ರಾಜಕೀಯ ವಲಯದಲ್ಲಿಯು ಇಂದು ಅನಿವಾರ್ಯವಾಗಿ ಮಾಡಲೇಬೇಕಾಗಿದೆ ಎಂಬ ನಿಜಾಂಶವನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲ. ಪರಿಹರಿಸಲು ಸಾಧ್ಯವಾಗುವಂತಹ ಅಲ್ಪದೋಷಗಳನ್ನು ದೊಡ್ಡ ತೊಡಕೆಂದು ಭಾವಿಸಿ ರಾಜಕೀಯದಲ್ಲಿ ವಿಕೇಂದ್ರೀಕರಣವೇ ಬೇಡ ಎಂದು ಹೇಳುವುದು ಅತಿ ಅಪಾಯದ ಮಾತಾಗುತ್ತದೆ.

ವಿಕೇಂದ್ರೀಕರಣದ ಪರಿಣಾಮದಿಂದ ಗ್ರಾಮಪಂಚಾಯ್ತಿಗಳು ಜನ್ಮ ತಾಳಿದವು. ಈ ಗ್ರಾಮ ಪಂಚಾಯ್ತಿಗಳಲ್ಲಿ ಬಹುಮಟ್ಟಿನ ಅಧಿಕಾರ ಮೇಲ್ಜಾತಿಯವರ ಕೈಯಲಿತ್ತು. ಕೆಳಜಾತಿಯವರು ಅಧಿಕಾರದ ಗದ್ದುಗೆಯನ್ನು ಸಂಪಾದಿಸಿಕೊಂಡರು ಸಹ ಅವರು ತಮ್ಮ ಅಧಿಕಾರವನ್ನು ಸ್ವಾತಂತ್ರವಾಗಿ ನಿರ್ವಹಿಸಲು ಕಷ್ಟಪಡುತ್ತಿದ್ದರು. ಇದನ್ನು ಮನಗಂಡು ಇಂದು ಗ್ರಾಮ ಪಂಚಾಯ್ತಿಗಳಲ್ಲಿ ಮೀಸಲಾತಿಯ ಮೂಲಕ

ಎಲ್ಲ ವರ್ಗದವರಿಗೂ ಆಳ್ವಿಕೆಯ ಅವಕಾಶವನ್ನು ಕಲ್ಪಿಸಿಕೊಟ್ಟು ಅವರಿಗೆ ಆಡಳಿತ ಪ್ರತಿಕ್ರಿಯೆಯ ಬಗ್ಗೆ ಸೂಕ್ತ ತರಬೇತಿಯನ್ನು ಕೊಡುವ ಯೋಜನೆ ಇಂದು ಗ್ರಾಮ ಪಂಚಾಯ್ತಿಗಳಲ್ಲಿ ರೂಢಿಗೆ ಬಂದಿರುವುದು ಅಧಿಕಾರದ ವಿಕೇಂದ್ರೀಕರಣದ ಸಫಲತೆಗೆ ಸಾರ್ಥಕತೆಗೆ ನಾಂದಿ ಆಗಿದೆ ಎಂಬುದನ್ನು ಸಂತೋಷದಿಂದ ಒಪ್ಪಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಇಂದು ಶಿಕ್ಷಣದ ಕ್ರಾಂತಿ ಭವಿಷ್ಯದಲ್ಲಿ ಅಧಿಕಾರದ ವಿಕೇಂದ್ರೀಕರಣಕ್ಕೆ ಮತ್ತು ಅಧಿಕಾರ ವಿಕೇಂದ್ರೀಕರಣದ ಆಳ್ವಿಕೆಗೆ ಶಕ್ತಿಯನ್ನು ತುಂಬಿಕೊಡಬಲ್ಲದು ಎಂಬುದು ಶಿಕ್ಷಣ ತಜ್ಞರ ಅಭಿಪ್ರಾಯವಾಗಿದೆ. ವಯಸ್ಕರ ಶಿಕ್ಷಣ, ಸ್ತ್ರೀ ಶಿಕ್ಷಣ ಈ ದಿಶೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ. ಗ್ರಾಮ ಪಂಚಾಯ್ತಿಗಳಲ್ಲಿ ಆಡಳಿತ ಸುಧಾರಣೆಗೆ ಸಫಲತೆಗೆ ಅನುಗುಣವಾಗಿ ನಡೆಸಬೇಕಾದ ಸಭೆಗಳನ್ನು ಕಟ್ಟುನಿಟ್ಟಾಗಿ ನಡೆಸಲೇಬೇಕು ಎಂಬ ಅಂಶವನ್ನು ಮರೆಯುವಂತಿಲ್ಲ. ಪಂಚಾಯತ್ ರಾಜ್ಯಗಳು ಗ್ರಾಮೀಣ ಪರಿಸರದಲ್ಲಿ ಒಡಕು ಮೂಡಿಸಬಾರದು. ಭ್ರಷ್ಟ ಅಧಿಕಾರಿಗಳನ್ನು ಖಂಡಿಸುವ, ತಿದ್ದುವ ಕಾರ್ಯದಲ್ಲಿ ಪಂಚಾಯ್ತಿ ಸದಸ್ಯರುಗಳು ಕಾರ್ಯೋನ್ಮುಖರಾಬೇಕು. ಆಗ ಮಾತ್ರ ಪಂಚಾಯತ್ ರಾಜ್ಯ ಯಾವ 'ಪಂಚಾಯಿತಿಕೆ'ಯೂ ಇಲ್ಲದೆ ಸುಸೂತ್ರವಾಗಿ ಕಾರ್ಯವನ್ನು ನಿರ್ವಹಿಸಬಹುದು.

ಭಾರತದಲ್ಲಿ ರೈತ ಪರವಾದ ಹೋರಾಟಗಳು ಇತಿಹಾಸದ ಉದ್ದಕ್ಕೂ ಕಂಡುಬಂದಿದ್ದರು ಅವು ಪರಿಣಾಮಕಾರಿಯಾಗಿ ಹೋರಾಟದ ಸ್ವರೂಪ ಪಡೆದುಕೊಂಡದ್ದು ಮೊಗಲರ ಕೊನೆಯ ದಿನಗಳಲ್ಲಿ. ಅದರ ಸ್ಪಷ್ಟತೆ ಕಂಡುಬಂದಿದ್ದು ಬ್ರಿಟಿಷರ ಕಾಲದಲ್ಲಿ. ಗ್ರಾಮೀಣ ರೈತರು ಜಮೀನ್ದಾರರ, ಸಾಹುಕಾರರ, ಮಧ್ಯವರ್ತಿಗಳ, ಸರಕಾರಿ ಅಧಿಕಾರಿಗಳ ಶೋಷಣೆಗೆ ಒಳಗಾಗುವ ಸಾಧ್ಯತೆಗಳು ಹೆಚ್ಚು. ಬ್ರಿಟಿಷರ ಕಾಲದಲ್ಲಿ ಮುಖ್ಯವಾಗಿ ಕಂದಾಯ ಹೆಚ್ಚಿಸಿದಾಗ ಮತ್ತು ಬ್ರಿಟಿಷರು ಕಡ್ಡಾಯವಾಗಿ ವಿಧಿಸಿದ ನೀಲಿ ಬೆಳೆ ಬೆಳೆಯುವುದನ್ನು ವಿರೋಧಿಸಿ ರೈತರು ಹೋರಾಟ ಮಾಡಿದ್ದರು. ಕರ್ನಾಟಕದಲ್ಲಿ ರೈತ ಹೋರಾಟಗಳು "ಹದಿನೇಳನೆಯ ಶತಮಾನದಲ್ಲಿ ಮೈಸೂರು ಜಿಲ್ಲೆ ಮತ್ತು ಸುತ್ತಮುತ್ತಣ ಜನ, ಚಿಕ್ಕದೇವರಾಜ ಒಡೆಯರು ವಿಧಿಸಿದ ಹತ್ತೊಂಬತ್ತು ವಿವಿಧ ಸುಂಕಗಳ ವಿರುದ್ಧ ರೈತ ಹೋರಾಡಿದರು". (ಶೂದ್ರ ಶ್ರೀನಿವಾಸ(ಸಂ)೧೯೯೦;ಪು.೧೦೫) ಭಾರತದಲ್ಲಿ ರೈತ ಹೋರಾಟಗಳು ನಡೆದಿದ್ದರೂ ಅವುಗಳು ದಾಖಲಾಗಿರುವುದು ಕಡಿಮೆ. ಕ್ರಿ.ಶ. ೧೯೪೦ರ ನಂತರ ಕರ್ನಾಟಕದಲ್ಲಿ ರೈತ ಚಳುವಳಿಗಳು ಪ್ರಾಮುಖ್ಯತೆಯನ್ನು ಪಡೆದವು. ಶಿವಮೊಗ್ಗ ಜಿಲ್ಲೆಯ ಕಾಗೋಡು ಸತ್ಯಾಗ್ರಹದ ನಂತರ ರೈತರ ಮೇಲೆ ಸೋಷಿಯಲಿಸ್ಟರ ಪ್ರಭಾವ ಗಾಢವಾಗಿ ಪರಿಣಾಮ ಬೀರಿತು. ರೈತರ ಹೋರಾಟಗಳಿಗೆ ಸೋಷಿಯಲಿಸ್ಟರು, ಸಿ.ಪಿ.ಎಂ.ರ ಸಂಪರ್ಕವು ದೊರೆಯಿತು. ಸರ್ಕಾರಗಳು ರೈತ ಪರವಾಗಿ ಅನೇಕ ಸುಧಾರಣೆಯ ಅಂಶಗಳನ್ನು ಜಾರಿಗೆ ತಂದಿದ್ದರೂ ಅವುಗಳ ಲಾಭ ಸಣ್ಣ ರೈತ, ಅತಿ ಸಣ್ಣ ರೈತ ಹಾಗೂ ಕೃಷಿ ಕೂಲಿಗಳಿಗೆ ತಲುಪುತ್ತಿಲ್ಲ ಎಂಬ ಕೂಗು ಇನ್ನೂ ಕೇಳಿಬರುತ್ತಿದೆ. ಉಳುವವನೇ ಭೂ ಒಡೆಯ, ಕೃಷಿ ಕೂಲಿ ದರದಲ್ಲಿ ಹೆಚ್ಚಳ,

ಬೇಸಾಯ ಕ್ರಮದಲ್ಲಿ ಸುಧಾರಿತ ತಳಿಗಳು, ಯಾಂತ್ರಿಕ ಬೇಸಾಯ ನಡೆದಿದ್ದರೂ ಪ್ರಯೋಜನ ಕಡಿಮೆ ಎಂದೇ ಹೇಳಬೇಕಾಗಿದೆ.

ಗ್ರಾಮಸಮಾಜದ ಕ್ರಿಯಾತ್ಮಕ ಚಟುವಟಿಕೆಗಳಿಗೆ ರೈತ ಸಂಘದ ಸಹಕಾರ ಅತ್ಯಂತ ಪ್ರಧಾನವಾದದ್ದು. ರೈತ ಸಂಘಗಳು ಗ್ರಾಮೀಣ ಸಮಾಜದ ರೈತರಿಂದಲೇ ರೂಪಿತವಾದವು. ಸರ್ಕಾರದ ಅಧಿಕಾರಿಗಳು ಸರ್ಕಾರದ ಜನ ಪ್ರತಿನಿಧಿಗಳು ಗ್ರಾಮೀಣ ಜನರ ಸಮಸ್ಯೆಗಳಿಗೆ ಸ್ಪಂದಿಸಿದರೂ ಅವರಿಂದ ಪೂರ್ಣ ಪ್ರಮಾಣದ ಲಾಭ ಪ್ರಯೋಜನ ರೈತರಿಗೆ ದೊರೆಯಲಿಲ್ಲ. ಇದನ್ನು ಮನಗಂಡ ರೈತರು ರೈತ ಸಂಘಗಳಿಗೆ ಮೊರೆಹೋದರು. ರೈತಸಂಘ ಸರ್ಕಾರದ ಜನಪ್ರತಿನಿಧಿಗಳೊಂದಿಗೆ ನಿಕಟವಾದ ಬಾಂಧವ್ಯವನ್ನು ಹೊಂದಿರುತ್ತದೆ. ಗ್ರಾಮದ ಸೌಲಭ್ಯಗಳ ಬಗ್ಗೆ ಸರ್ಕಾರದ ಜನಪ್ರತಿನಿಧಿಗಳು ಸ್ಪಂದಿಸಿ ಕ್ರಿಯಾಶೀಲರಾದರೆ ರೈತಸಂಘಗಳು ನೇರವಾಗಿ ರೈತನ ಕೃಷಿಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿಕೊಂಡಿದೆ. ಇಷ್ಟೇ ಅಲ್ಲದೆ ರೈತನ ಉತ್ಪಾದನಾ ವಸ್ತುಗಳಿಂದ ಯೋಗ್ಯ ಬೆಲೆಯನ್ನು ತಂದು ಕೊಡುವುದರಲ್ಲಿ ರೈತಸಂಘಗಳು ಕೃಷಿ ಉತ್ಪನ್ನ ಮಾರುಕಟ್ಟೆಯ ಮೂಲಕ ನಡೆಸುವ ಕಾರ್ಯ ಜವಾಬ್ದಾರಿ - ವೈಖರಿ ಅತ್ಯಂತ ಪ್ರಧಾನವಾದದ್ದು ಮತ್ತು ಅಷ್ಟೇ ಪರಿಣಾಮಕಾರಿಯಾದದ್ದು. ರೈತರು ಬೆಳೆದ ಬೆಳೆಗೆ ಕನಿಷ್ಟ ಸೂಕ್ತ ಬೆಲೆಯೂ ದೊರೆಯದಿದ್ದಾಗ ಹತಾಶನಾದ ರೈತ ಆತ್ಮಹತ್ಯೆಗೆ ಶರಣಾದ ಸಂಗತಿಯನ್ನು ನಾವು ಇತ್ತೀಚೆಗೆ ಗ್ರಾಮಸಮಾಜದಲ್ಲಿ ಸಾಕಷ್ಟು ಗುರುತಿಸಿದ್ದೇವೆ. ರೈತ ಸಮಾಜದ ಈ ದೊಡ್ಡ ದುರಂತವನ್ನು ತಪ್ಪಿಸಲು ರೈತ ಸಮಾಜದವರು ತಮ್ಮ ಬೆಳೆಗೆ ಕನಿಷ್ಟ ಸೂಕ್ತ ಬೆಲೆಯನ್ನು ಸರ್ಕಾರದಿಂದ ಆಗ್ರಹಿಸಿದರು. ಇದರ ಪರಿಣಾಮವಾಗಿ ಸರ್ಕಾರ ರೈತರ ಬೆಳೆಗೆ ಸಮಂಜಸ ಬೆಲೆಯನ್ನು ನಿಗದಿಪಡಿಸಿ ಆ ಮೂಲಕ ರೈತರ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಪರಿಹರಿಸಿರುವುದು ಗಮನಾರ್ಹ ಅಂಶವಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆಯ ಮೂಲಕ ರೈತರು ತಮ್ಮ ಬೆಳೆಯನ್ನು ತಾವೇ ನೇರವಾಗಿ ಮಾರಾಟ ಮಾಡಲು ಸದಾವಕಾಶ ದೊರೆಯಿತು. ಮಧ್ಯವರ್ತಿಗಳ ವಂಚನೆ ಕಾಟಗಳಿಂದ ರೈತರು ಸ್ವಲ್ಪಮಟ್ಟಿಗೆ ಮುಕ್ತರಾದರು. ರೈತರು ಬೆಳೆಯ ವಿಚಾರವನ್ನು ಪರಿಶೀಲಿಸುವಾಗ ರೈತಸಂಘದವರ ಅಭಿಪ್ರಾಯವನ್ನು ಸರ್ಕಾರ ಮಾನ್ಯ ಮಾಡಿ ರೈತರ ಬಗ್ಗೆ ತೀರ್ಮಾನವನ್ನು ಕೈಗೊಳ್ಳುವಾಗ ನಡೆಸುವ ವಿಚಕ್ಷಣ ರೀತಿ ರೈತರ ಪಾಲಿಗೆ ಕ್ಷೇಮವಾಗಿದೆ ಎಂದು ನಾವು ಇಂದು ಮನವರಿಕೆ ಮಾಡಿಕೊಂಡಿದ್ದೇವೆ.

ಸರ್ಕಾರ ರೈತರ ಕನಿಷ್ಠ ಬೇಡಿಕೆಗಳಿಗೆ ಸ್ಪಂದಿಸದೇ ಇದ್ದಾಗ ರೈತರು ನಡೆಸಿದ ಚಳುವಳಿಗಳು ಅತ್ಯಂತ ಮುಖ್ಯವಾದದ್ದು. ಇದರಲ್ಲಿ ಪ್ರಮುಖವಾದದ್ದು ರಸ್ತೆತಡೆ ಚಳುವಳಿ, ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ, ವಿಧಾನಸೌಧ ಚಲೋ ಗಮನಾರ್ಹವಾದುವು. ಅನೇಕ ಸಂದರ್ಭಗಳಲ್ಲಿ ರೈತರ ಈ ಚಳುವಳಿಗಳಿಗೆ ಸರ್ಕಾರದ ಇತರ ರಾಜಕೀಯ ಪಕ್ಷಗಳು ಅನಿವಾರ್ಯವಾಗಿ ಬೆಂಬಲ ಕೊಟ್ಟಿರುವುದನ್ನು ಗಮನಿಸಬಹುದು. ಈ ದೃಷ್ಟಿಯಲ್ಲಿ ರೈತಸಂಘಗಳನ್ನು ರಾಜಕೀಯ ಪಕ್ಷಗಳ ಒಂದು ಅಘೋಷಿತ ಸಂಘ

ಎಂದು ಕರೆದಿರುವುದು ಸಮರ್ಪಕ ಎನಿಸುತ್ತದೆ. ಆದರೆ ಯಾವ ಕಾರಣದಿಂದಲೂ ರೈತ ಸಂಘಗಳನ್ನು ರಾಜಕೀಯ ಪಕ್ಷಗಳ ಅಧೀನ ಅಂಗ ಎಂದು ತೀರ್ಮಾನ ಕೈಗೊಳ್ಳುವಂತೆ ಇಲ್ಲ. ಹೀಗೆ ನಮ್ಮ ಪ್ರಜಾಪ್ರಭುತ್ವದಲ್ಲಿ ರೈತ ಸಂಘವು ತನ್ನದೇ ಆದ ಸ್ವಾಯತ್ತತೆಯನ್ನು ಉಳಿಸಿಕೊಂಡಿದೆ ಎಂದು ನಿರ್ಭಯವಾಗಿ ತಿಳಿಸಬಹುದು.

ಸಮಾಜದ ನೈಸರ್ಗಿಕ ಬದಲಾವಣೆ ಸಮಾಜದ ಸಲ್ಲಕ್ಷಣ. ಇದು ನಮ್ಮ ಗ್ರಾಮೀಣ ಸಮಾಜದಲ್ಲಿಯು ಕಾಣಬಹುದಾದ ಪ್ರಮುಖ ಲಕ್ಷಣವಾಗಿದೆ. ಸಮಾಜದಲ್ಲಿ ಕಂಡುಬರುವ ಬಹುಮಟ್ಟಿನ ಬದಲಾವಣೆಗಳು ಸಮಾಜದ ಕ್ಷೇಮಕ್ಕೆ ಬಹುಮಟ್ಟಿಗೆ ಪೂರಕವಾಗಿರುತ್ತದೆ. ಬೇರೆ ಸಮಾಜದ ಒತ್ತಡದಿಂದ ಒಂದು ಸಮಾಜದಲ್ಲಿ ನಿರ್ಬಂಧಿತ ಬದಲಾವಣೆ ಮೂಡಿ ಬಂದರೂ ಸಹ ಅದು ಕೇವಲ ತಾತ್ಕಾಲಿಕವಾಗಿ ಕಾಣುತ್ತದೆಯೇ ಹೊರತು ಸ್ಥಿರವಾಗಿ ಉಳಿಯುವುದಿಲ್ಲ. ಸಮಾಜದಲ್ಲಿ ಕಂಡುಬರುವ ಬದಲಾವಣೆಗಳು ಸಾಮಾಜಿಕ ಜೀವನಕ್ಕೆ ಅನುಕೂಲಕಾರಿಯಾಗಿದ್ದಾಗ ಮಾತ್ರ ಅಂತಹ ಸ್ಥಿತ್ಯಂತರಗಳು ಜೀವಂತವಾಗಿ ಉಳಿಯಬಲ್ಲದು ಎಂಬುದು ಎಲ್ಲ ಸಮಾಜಶಾಸ್ತ್ರಜ್ಞರ ಒಮ್ಮತ ಅಭಿಪ್ರಾಯವಾಗಿದೆ. ಸಮಾಜಕ್ಕೆ ಮಾರಕವಾದ ಬದಲಾವಣೆಗಳು ತಮಗೆ ತಾವೇ ನಶಿಸಿ ಹೋಗುತ್ತವೆ ಅಥವಾ ಪ್ರತಿಭಟನೆಗಳ ಮೂಲಕ ಮಾಯವಾಗುತ್ತವೆ. ಇಂದು ಗ್ರಾಮೀಣ ಸಮಾಜದ ಮೇಲೆ ನಗರದ ಪ್ರಭಾವಗಳನ್ನು ಸಾಕಷ್ಟು ಗುರುತಿಸಬಹುದು. ಇದಕ್ಕೆ ಮುಖ್ಯ ಕಾರಣ ಗ್ರಾಮಗಳು ನಗರದೊಂದಿಗೆ ಹೆಚ್ಚಿನ ಮಟ್ಟದ ಸಂಪರ್ಕವನ್ನು ಗಳಿಸಿಕೊಂಡಿವೆ. ಸಾರಿಗೆ ಸಂಪರ್ಕ ಇಂದು ಗ್ರಾಮಸಮಾಜವನ್ನು ನಗರ ಸಮಾಜದೊಂದಿಗೆ ಪರಿಣಾಮಕಾರಿ ಯಾಗಿ ಬೆಸೆದಿದೆ ಎಂಬ ಮಾತು ಗಮನಾರ್ಹವಾದದ್ದು. ಗ್ರಾಮಗಳ ವ್ಯಾವಹಾರಿಕ ಜೀವನ ಮತ್ತು ಸಾಂಸ್ಕೃತಿಕ ಜೀವನ ಎರಡೂ ಅಂಶಗಳಲ್ಲಿ ನಗರಸಮಾಜದ ನಿಚ್ಚಳ ಬಹುಮತವನ್ನು ನೋಡಬಹುದು.

ಗ್ರಾಮೀಣ ಸಮಾಜದಲ್ಲಿ ಇಂದು ಬೇಸಾಯದ ಜಮೀನು ಕಟ್ಟಡಗಳ ನಿರ್ಮಾಣಕ್ಕೆ ಬಳಕೆಯಾಗುತ್ತಿರುವುದನ್ನು ಪಟ್ಟಣಕ್ಕೆ ಸಮೀಪವಾದ ಗ್ರಾಮಗಳಲ್ಲಿ ಕಾಣಬಹುದು. ಇದು ನಮ್ಮ ಗ್ರಾಮಗಳ ಮೇಲೆ ನಗರ ಸಮಾಜ ಪ್ರಧಾನವಾಗಿ ಮೂಡಿಸಿರುವ ಪರಿಣಾಮಕಾರಿ ಪ್ರಭಾವ ಎಂಬುದನ್ನು ಹೇಳಬಹುದು. ಇಂತಹ ನಗರೀಕರಣದಿಂದ ನಮ್ಮ ಗ್ರಾಮಸಮಾಜದಲ್ಲಿ ನಾವು ಹೆಚ್ಚಿನ ಲಾಭ-ಸುಖವನ್ನೇ ಗುರುತಿಸಬಹುದು. ರೈತರ ಬೇಸಾಯದ ಜಮೀನಿಗೆ ಹೆಚ್ಚಿನ ಬೆಲೆ ದೊರೆತಾಗ ಆತ ಸ್ವಾವಲಂಬಿ ಉದ್ಯೋಗಗಳನ್ನು ಪ್ರಾರಂಭಿಸಲು ಕಾರಣವಾಯಿತು. ಗ್ರಾಮಗಳಲ್ಲಿಯು ಸಹ ಕೃಷಿ ಜೀವನದ ಜತೆಗೆ ಹೊಸಹೊಸ ವೃತ್ತಿ ಜೀವನಗಳು ಇಂದು ಪ್ರಾರಂಭವಾಯಿತು. ಹೀಗೆ ಗ್ರಾಮಜೀವನಕ್ಕೆ ಹೊಸ ಮುಖ ಪ್ರಾಪ್ತವಾಯಿತು ಎಂದು ಸಮಾಜಶಾಸ್ತ್ರಜ್ಞರು ತಿಳಿಸಿದ್ದಾರೆ.

ಗ್ರಾಮಸಮಾಜದಲ್ಲಿ ಹನ್ನೆರಡು ಮಂದಿ ಆಯಗಾರರು ಪ್ರಾಚೀನ ಕಾಲದಿಂದಲೂ ಇದ್ದರೆಂದು ತಿಳಿದುಬರುತ್ತದೆ. ಗ್ರಾಮಸಮಾಜದಲ್ಲಿ ನರನಾಡಿಗಳಂತೆ ತಮ್ಮ ಪಾಲಿನ ಕೆಲಸಗಳನ್ನು ಗೌಡ, ಬಣಕಾರ,

ಬಡಗಿ, ಕಮ್ಮಾರ, ಅಕ್ಕಸಾಲಿ, ಕುಂಬಾರ, ನಾಯಿಂದ, ಬಾರಿಕೆ, ತಳವಾರ, ಅಗಸ, ಚಲವಾದಿ, ಮಾದಿಗ ಈ ಜಾತಿಗಳವರು ನಿರ್ವಹಿಸುತ್ತಿದ್ದರು. ಸಮಾಜದಲ್ಲಿ ಒಂದು ಜಾತಿ, ಒಂದು ವೃತ್ತಿಗೆ ಅನುಗುಣವಾಗಿ ಮೂಡಿಬಂದ ಸಾಮೂಹಿಕ ಸಂಘಟನೆಗಳನ್ನೇ 'ಆಯ ಪದ್ಧತಿ' ಎಂದು ಕರೆಯುವುದು. ಗ್ರಾಮಸಮಾಜದ ಒಕ್ಕೂಟಗಳಲ್ಲಿ ಬೇರೆ ಆಯ ವರ್ಗದ ಜನ ಪ್ರತಿನಿಧಿಗಳು ಇರುತ್ತಿದ್ದರು. ಇವರೆಲ್ಲರ ಸಹಕಾರದಿಂದ ಗ್ರಾಮ ಜೀವನ ಅರ್ಥಪೂರ್ಣವಾಗಿ ಪ್ರಗತಿಪರವಾಗಿತ್ತು. 'ಆಯಪದ್ಧತಿ' ಗ್ರಾಮಸಮಾಜದಲ್ಲಿ ವಿಶಿಷ್ಟ ಸಾಮಾಜಿಕ, ಆರ್ಥಿಕ ಭದ್ರತೆ ಒದಗಿಸುವ ಕ್ರಮವಾಗಿದೆ. ಆದರೆ ಇಂದು ಈ ಪದ್ಧತಿ ಗ್ರಾಮಗಳಲ್ಲಿ ಇಲ್ಲ. ಗ್ರಾಮೀಣ ಆಯಗಾರರು ವಂಶಪಾರಂಪರಿಕವಾಗಿ ಬಂದ ತಮ್ಮ ವೃತ್ತಿಯನ್ನು ನಂಬಿಕೊಳ್ಳದೇ ಮತ್ತು ಅದೇ ಉದ್ಯೋಗವೇ ಇಂದು ಬೇರೆ ರೂಪ ಪಡೆದು ಪಟ್ಟಣಗಳಲ್ಲಿ ಸೇರಿ ಹೆಚ್ಚು ಸಂಭಾವನೆ ತಂದುಕೊಡುವ ವೃತ್ತಿಗಳಾಗಿವೆ. ಅಗಸರು ಪೇಟೆಗಳಿಗೆ ಸೇರಿ 'ಡ್ರೈ ಕ್ಲೀನರ್' ಅಂಗಡಿಗಳನ್ನು ತೆರೆಯುತ್ತಿದ್ದಾರೆ. ಹಳ್ಳಿಯ ನಾಯಿಂದ, ಕಮ್ಮಾರ ಮೊದಲಾದ ಕಸುಬುದಾರರು ಗ್ರಾಮದೊಂದಿಗಿನ ಸಂಬಂಧವನ್ನು ಕಳೆದುಕೊಂಡು ಪೇಟೆಗಳಲ್ಲಿ ಹೆಚ್ಚು ದುಡಿಯಲು ಉತ್ಸುಕರಾಗಿದ್ದಾರೆ.

ಆಧುನಿಕ ತಂತ್ರಜ್ಞಾನ ಗ್ರಾಮೀಣ ಸಮಾಜದಲ್ಲಿ ಕೃಷಿಕ ಜೀವನಕ್ಕೆ ಹಾಗೂ ಬೇರೆ ಬೇರೆ ವೃತ್ತಿ ಜೀವನಕ್ಕೆ ಸಹಕಾರಿಯಾಗಿರುವುದನ್ನು ಕಾಣಬಹುದು. ಇಂದು ಗ್ರಾಮೀಣ ಸಮಾಜದಲ್ಲಿ ಕೃಷಿ ಒಂದು ಪ್ರಧಾನ ವೃತ್ತಿಯಾದಂತೆ ಹೈನುಗಾರಿಕೆ, ಕೋಳಿ ಸಾಗಾಣಿಕೆ ಸಹ ಅಷ್ಟೇ ಮುಖ್ಯವಾಗಿದೆ. ಈ ಹೈನುಗಾರಿಕೆಯಲ್ಲಿ ಸ್ತ್ರೀಯರ ಪ್ರಮುಖ ಪಾತ್ರವನ್ನು ಗುರುತಿಸಬಹುದು. ಹೀಗೆ ಗ್ರಾಮೀಣ ಸಮಾಜದಲ್ಲಿ ಇಂದು ಸ್ತ್ರೀಯ ಪಾತ್ರವೂ ಆರ್ಥಿಕ ದೃಷ್ಟಿಯಿಂದ ಅತ್ಯಂತ ಮುಖ್ಯ ಪಾತ್ರವೆಂದು ತಿಳಿಯಬಹುದು. ಆಧುನಿಕ ತಂತ್ರಜ್ಞಾನಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಹೊಸ ಕೈಗಾರಿಕಾ ಕೇಂದ್ರಗಳು ಮೂಡಿ ಬಂದಿದೆ. ಇಷ್ಟೇ ಅಲ್ಲದೆ ಶೈಥಲೀಕರಣ ಉಪಕರಣಗಳ ಬಳಕೆಯ ಮೂಲಕ ಇಂದು ಗ್ರಾಮೀಣ ಸಮಾಜದಲ್ಲಿ ರೈತ ಬೆಳೆದ ಬೆಳೆಯನ್ನು ತರಕಾರಿ, ಹಣ್ಣು, ಹಂಪಲುಗಳನ್ನು ಬಹುಕಾಲದವರೆಗೆ ಸಂರಕ್ಷಿಸಿಕೊಳ್ಳಲು ಅನುಕೂಲಕಾರಿಯಾಗಿದೆ. ಆಧುನಿಕ ತಂತ್ರಜ್ಞಾನ ಗ್ರಾಮೀಣ ಪ್ರದೇಶಕ್ಕೆ ಲಭ್ಯವಾಗಿ ಸಂಚಾರ-ಸಂಪರ್ಕ ವ್ಯವಸ್ಥೆಗಳು ಅನುಕೂಲಗಳು ಗ್ರಾಮ-ನಗರಗಳ ಅಂತರವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಕೃಷಿ ಇಂದು ಆಹಾರ ಬೆಳೆಯಾಗಿ ಮಾತ್ರ ಉಳಿಯದೆ ಮಾರುಕಟ್ಟೆಯ ಬೆಳೆಯಾಗಿ ಮಾರ್ಪಟ್ಟಿದೆ. ಇಷ್ಟಾದರೂ ಸಹ ಗ್ರಾಮೀಣ ಪ್ರದೇಶದ ಕೃಷಿಕನ ಜೀವನ ಸುಧಾರಿಸಿಲ್ಲ ಎಂದೇ ಹೇಳಬಹುದು.

ಭಾರತದಲ್ಲಿ ಗ್ರಾಮಸಮಾಜ ನಿರಂತರವಾಗಿ ಬದಲಾವಣೆಗೆ ಒಳಪಟ್ಟಿದೆ. ವಸಾಹತುಶಾಹಿ ಆಡಳಿತದಿಂದ ಗ್ರಾಮಸಮಾಜದಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ಗ್ರಾಮಸಮಾಜದ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಕೂಡ ಅನೇಕ ಬದಲಾವಣೆಗಳ ಜತೆಗೆ ತಲ್ಲಣ, ಸಂಕಟಗಳಿಗೆ

ಒಳಗಾಗಿದೆ. ಜಾಗತೀಕರಣ ಗ್ರಾಮೀಣ ಸಮಾಜಕ್ಕೆ ವರವಾದಂತೆ ಪೀಡೆಯು ಆಗಿದೆ. ಇಂತಹ ಸ್ಥಿತಿ ಅನಿವಾರ್ಯ ಎಂಬುದನ್ನು ನಾವು ಯೋಚನೆ ಮಾಡಿದಾಗ ನಮಗೆ ಮನವರಿಕೆಯಾಗುತ್ತದೆ. ಎಷ್ಟೇ ಎಚ್ಚರಿಕೆಯಿಂದ ಇದ್ದರು ಹಿಂದೆ ಕ್ರೂರವಾದ ವಸಾಹತುಶಾಯಿಯ ಕಡಿವಾಣದಿಂದ ನಾವು ತಪ್ಪಿಸಿಕೊಳ್ಳಲು ಹೇಗೆ ಅಸಮರ್ಥರಾಗಿದ್ದೇವೋ ಇಂದು ಅದೇ ರೀತಿಯಲ್ಲಿ ಜಾಗತೀಕರಣದ ಪ್ರಭಾವದಿಂದ ನಾವು ಮುಕ್ತರಾಗಲು ಸೋತಿದ್ದೇವೆ ಎಂಬುದು ಸತ್ಯವಾದ ಮಾತಾಗಿದೆ. ಹಿಂದೆ ಊಳಿಗಮಾನ್ಯ ಸ್ಥಿತಿ ನಮ್ಮ ಗ್ರಾಮೀಣ ಸಮಾಜವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದ್ದಂತೆ ಇಂದು ಜಾಗತೀಕರಣ ನಮ್ಮ ಗ್ರಾಮೀಣ ಸಮಾಜವನ್ನು ಅನೇಕ ನಿರ್ಬಂಧಗಳಲ್ಲಿ ಕಟ್ಟಿ ಹಾಕಿದೆ. ನಾವು ಸಾಂದರ್ಭಿಕವಾಗಿ ಗೊರೂರವರ ಕೃತಿಗಳಲ್ಲಿಯು ಸಹ ವಸಾಹತುಶಾಹಿಯ ಹಲವು ಪ್ರಭಾವಗಳನ್ನು ಗುರುತಿಸಿ ಚರ್ಚಿಸಿದ್ದೇವೆ. ಈ ಅಭಿಪ್ರಾಯಗಳನ್ನು ಹಾಗೂ ಗ್ರಾಮಸಮಾಜದ ಸ್ವರೂಪವನ್ನು ಗೊರೂರವರ ಕೃತಿಗಳಲ್ಲಿ ಸೈದ್ಧಾಂತಿಕವಾಗಿ ವಿಚಾರ ಮಾಡಿರುವಂತೆ ಪ್ರಾತ್ಯಕ್ಷಿಕವಾಗಿಯೂ ವಿಚಾರ ಮಾಡಿದ್ದೇವೆ. ಈ ದೃಷ್ಟಿಯಿಂದ ಗೊರೂರವರ ಸಾಹಿತ್ಯದ ಅಧ್ಯಯನ ಗ್ರಾಮಸಮಾಜದ ಅಧ್ಯಯನದ ದೃಷ್ಟಿಯಲ್ಲಿ ಅರ್ಥಪೂರ್ಣವಾಗಿದೆ ಎಂದು ನಿಶ್ಚಯಿಸಬಹುದು.

ಗ್ರಾಮಸಮಾಜದ ಸ್ವರೂಪ ವಿಶೇಷತೆಗಳನ್ನು ಗೊರೂರವರ ಕೃತಿಗಳಲ್ಲಿ ಸಮಯೋಚಿತವಾಗಿ ಸಾಕಷ್ಟು ಪ್ರಮಾಣದಲ್ಲಿ ನೋಡಬಹುದು. ಗ್ರಾಮಸಮಾಜದ ಜನರ ಮನೋಧರ್ಮವನ್ನು ಗುರುತಿಸುವುದರಲ್ಲಿ ಗೊರೂರವರು ಎಷ್ಟು ನಿಪುಣರೋ ಅದನ್ನು ನಿರೂಪಿಸುವುದರಲ್ಲಿ ಅವರು ತೋರಿಸುವ ಜಾಣ್ಮೆ ರಸಿಕತೆಯಿಂದ ಕೂಡಿ ಅಷ್ಟೇ ನವುರಾಗಿದೆ. ಪ್ರಾತಿನಿಧಿಕವಾಗಿ ಈ ವಿಷಯಕ್ಕೆ ಸಂಬಂಧಿಸಿದ ಕೆಲವು ನಿದರ್ಶನಗಳನ್ನು ಕೆಲವು ಕೃತಿಗಳ ಮೂಲಕ ತಿಳಿಸಿಕೊಡಬಹುದು. ಗೊರೂರವರ ಸಾಹಿತ್ಯದ ಜೀವಾಳ, ಸತ್ತ್ವ, ಸೊಗಡು ಗ್ರಾಮ ಜೀವನದ ಸ್ಥಿತಿ ಚಿತ್ರ ಮತ್ತು ಗ್ರಾಮೀಣರ ಜೀವನ ಕಲೆ ಆಗಿರುವುದರಿಂದ ಅವರ ಬಹುಮಟ್ಟಿನ ಎಲ್ಲಾ ಕೃತಿಗಳಲ್ಲಿಯೂ ಇದಕ್ಕೆ ಅನ್ವಯವಾದ ಭಾವನೆಗಳನ್ನು ಗುರುತಿಸಬಹುದು. ಅನೇಕ ಸಂದರ್ಭಗಳಲ್ಲಿ ಈ ಭಾವನೆಗಳು ಪುನರಾವರ್ತನೆಗೊಂಡಿದ್ದರು ಸಹ ಸಂದರ್ಭ ಸನ್ನಿವೇಶದ ಹಿನ್ನೆಲೆಯಲ್ಲಿ ಗ್ರಾಮಸಮಾಜದ ಚಿತ್ರಣ ವಿಶೇಷವೆಂದೇ ಎನಿಸುತ್ತದೆ.

ಗೊರೂರವರು ಹೇಮಾವತಿ ಪರಿಸರದ ಗ್ರಾಮೀಣ ಬದುಕಿನ ಚಿತ್ರವನ್ನು ಜೀವಂತವಾಗಿ ನೀಡಿದ್ದಾನೆ ಎಂಬುದು ವಾಸ್ತವ ಸಂಗತಿ. ಸಾಹಿತಿ ಸಮಾಜದ ಪ್ರತಿನಿಧಿ ಎಂಬ ಮಾತು ಮತ್ತು ಸಾಹಿತ್ಯ ಸಮಾಜದ ಪ್ರತಿಬಿಂಬ ಎಂಬ ಮಾತು ಸತ್ಯವಾದದ್ದು. ಗೊರೂರವರ ಸಾಹಿತ್ಯದಲ್ಲಿ ಕಾಣುವ ಗ್ರಾಮೀಣ ಚಿತ್ರ ಎಷ್ಟು ವೈಚಾರಿಕವಾಗಿದೆಯೋ ಅಷ್ಟೇ ವಿಶಿಷ್ಟವಾಗಿದೆ. ಗ್ರಾಮೀಣ ಚಿತ್ರದಲ್ಲಿ ಗ್ರಾಮದ ಸಮಸ್ಯೆಗಳಿಗೆ ಲೇಖಕರು ಪರಿಹಾರವನ್ನು ಸೂಚಿಸಿರುವುದು ಅಷ್ಟೇ ಮುಖ್ಯವಾದ ಸಂಗತಿಯಾಗಿದೆ. ಈ ಕಾರಣದಿಂದಲೇ ಗ್ರಾಮೀಣ ಜೀವನದ ಹಿನ್ನೆಲೆಯಲ್ಲಿ ಗೊರೂರವರ ಸಾಹಿತ್ಯದ ಅಧ್ಯಯನ ಕುತೂಹಲಕಾರಿಯಾಗಿ

ಇರುವುದಷ್ಟೇ ಅಲ್ಲದೆ ಅರ್ಥಪೂರ್ಣವಾಗಿದೆ. ವಿಷಯ ನಿರೂಪಣೆಯಲ್ಲಿ ಸಾಹಿತ್ಯದ ಸೊಗಡಿನ ಜತೆ ವಾಸ್ತವದ ಸ್ಪಷ್ಟತೆ ನಮಗೆ ಮನವರಿಕೆಯಾಗುತ್ತದೆ.

ಗೊರೂರವರ ಗ್ರಾಮೀಣ ಚಿತ್ರಗಳಲ್ಲಿ ಸ್ವಾತಂತ್ರ್ಯಪೂರ್ವ ಗ್ರಾಮೀಣ ಚಿತ್ರಣ ಪ್ರಧಾನವಾಗಿ ಕಂಡುಬರುತ್ತದೆ. ಸ್ವಾತಂತ್ರ್ಯಪೂರ್ವ ಗ್ರಾಮೀಣ ಜೀವನದಲ್ಲಿ ಲೋಪದೋಷಗಳು ಇದ್ದಂತೆ ಅನೇಕ ಗುಣಗಳು ಇತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಹಳ್ಳಿಗಳು ಬಹುಮಟ್ಟಿಗೆ ನಾಗರಿಕತೆಯ ಸೋಂಕಿನಿಂದ ದೂರವಾಗಿದ್ದವು. ಅವರಿಗೆ ಪರಂಪರೆಯಿಂದ ಬಂದ ನಂಬಿಕೆ ಜೀವನದ ಆಚರಣೆಗಳಲ್ಲಿ ಸಂಪೂರ್ಣವಾದ ಶ್ರದ್ಧೆ ಇತ್ತು. ಪ್ರತಿಯೊಬ್ಬ ಗ್ರಾಮೀಣ ವ್ಯಕ್ತಿಗೂ ತನ್ನ ಹಳ್ಳಿ ತನಗೆ ಸರ್ವಸ್ವ ಎಂಬ ಭಾವನೆ ಮನದಾಳದಲ್ಲಿ ಬೇರೂರಿತ್ತು. ಯಾವುದೇ ರೀತಿಯ ನಗರದ ಮೋಹ ಅವರಲ್ಲಿ ಕಾಡುತ್ತಿರಲಿಲ್ಲ. ತಮ್ಮ ಶ್ರಮದ ಬದುಕಿನಲ್ಲಿ ಗ್ರಾಮೀಣ ಜನ ಸಂತೋಷವನ್ನು ಕಾಣುತ್ತಿದ್ದರು. ಗ್ರಾಮೀಣ ಜನರು ತಮ್ಮ ಬದುಕಿನಲ್ಲಿ ಪರಿಪೂರ್ಣತೆಯನ್ನು ಕಂಡುಕೊಂಡಿದ್ದರು. ಸ್ವಾವಲಂಬಿತನದಲ್ಲಿ ಬದುಕನ್ನು ಸಾಗಿಸುತ್ತಿದ್ದರು. ಗ್ರಾಮೀಣ ಜನರಲ್ಲಿ ಪರಸ್ಪರ ಸಹಕಾರ ಮನೋಧರ್ಮ ಇತ್ತು. ದುಡಿಮೆಯಲ್ಲಿ ನಿಷ್ಠೆಯ ಜತೆಗೆ ಪ್ರಾಮಾಣಿಕತೆ ಇತ್ತು. ಹೊರನೋಟಕ್ಕೆ ಗ್ರಾಮೀಣ ಜನರ ಬದುಕು ಅಂಧಶ್ರದ್ಧೆಯ ಬದುಕಾಗಿ ಕಂಡರು ಅಂತಹ ಬದುಕಿನಲ್ಲಿಯೂ ಅರ್ಥ ಇತ್ತು ಎಂಬುದನ್ನು ತಿಳಿಯಬಹುದು. ವರ್ಣಾಶ್ರಮ ಧರ್ಮ ಗ್ರಾಮೀಣ ಜನರ ಬದುಕಿನಲ್ಲಿ ರೂಢ ಮೂಲವಾಗಿ ಇದ್ದದ್ದನ್ನು ಗಮನಿಸಿದಾಗ ಅದು ಕೆಲವು ದೃಷ್ಟಿಯಲ್ಲಿ ದೋಷವೆಂದು ನಮಗೆ ಭಾಸವಾದರೂ ಹಲವು ದೃಷ್ಟಿಯಲ್ಲಿ ಪ್ರಯೋಜನಕಾರಿಯಾಗಿತ್ತು ಎಂಬುದು ಮನವರಿಕೆಯಾಗುತ್ತದೆ. ಗ್ರಾಮೀಣ ಜನರಲ್ಲಿ ಕಂಡುಬರುವ ಮೂಢನಂಬಿಕೆಗಳು - ಬದುಕಿನ ಆಚರಣೆಗಳು ಅವರ ಬದುಕನ್ನು ನೋವಿಗೆ ಒಳಗು ಮಾಡಿತ್ತು ಎಂಬುದು ಗೊರೂರವರ ಸಾಹಿತ್ಯವನ್ನು ಓದಿದಾಗ ನಮಗೆ ಗೋಚರವಾಗುತ್ತದೆ. ಜಾತಿ ಪದ್ಧತಿಯ ಕಟ್ಟು ಕಟ್ಟಳೆಗಳು ಹಲವು ಸಂದರ್ಭದಲ್ಲಿ ಗ್ರಾಮೀಣ ಜನರ ಉಸಿರು ಕಟ್ಟಿಸಿದೆ. ಸ್ತ್ರೀ ಪುರುಷರ ಬಗ್ಗೆ ಇದ್ದ ಮೇಲು ಕೀಳು ಎಂಬ ಭಾವನೆ ಉತ್ತಮ ಜಾತಿ ಮತ್ತು ಕೀಳು ಜಾತಿಯವರಲ್ಲಿದ್ದ ಭೇದ ಭಾವನೆಯನ್ನು ಲೇಖಕರು ತಮ್ಮ ಕೃತಿಗಳಲ್ಲಿ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಒಂದು ಕಾಲಕ್ಕೆ ಅನೇಕ ಗ್ರಾಮಗಳಲ್ಲಿ ಸಹಕಾರಿ ಮನೋಧರ್ಮವನ್ನು ಗುರುತಿಸಬಹುದಾಗಿತ್ತು. ಇದರ ಜತೆಗೆ ಪರಾವಲಂಬಿ ಪ್ರವೃತ್ತಿ ಗ್ರಾಮೀಣ ಜನರ ಬದುಕಿನಲ್ಲಿ ತಲೆ ಎತ್ತಿರುವುದನ್ನು ಗೊರೂರವರು ಸೂಚಿಸಿದ್ದಾರೆ.

ಆಂಗ್ಲರ ಆಳ್ವಿಕೆಯಲ್ಲಿ ಅವರ ಆಳ್ವಿಕೆಗೆ ಅನುಕೂಲಕರವಾದ ಹಲವು ತಂತ್ರಗಳನ್ನು ಹಾಗೂ ಕಾನೂನುಗಳನ್ನು ಗ್ರಾಮೀಣ ಬದುಕಿನಲ್ಲಿ ಒತ್ತಾಯ ಪೂರ್ವಕವಾಗಿ ಹೇರಿರುವುದು ನಮ್ಮ ಗಮನಕ್ಕೆ ಬರುತ್ತದೆ. ಆಂಗ್ಲರ ಈ ಸ್ವಾರ್ಥ ವರ್ತನೆ ಗ್ರಾಮೀಣ ಜನರಲ್ಲಿ ಹಲವು ರೀತಿಯ ನಿಗೂಢ ತೊಡಕು ಗಳನ್ನು ಸೃಷ್ಟಿ ಮಾಡಿದೆ. ಗ್ರಾಮಸಮಾಜದಲ್ಲಿ ಶಿಕ್ಷಣದ ಸೌಲಭ್ಯ, ವೈದ್ಯಕೀಯ ಸೌಲಭ್ಯ, ಸಾರಿಗೆ

ಸಂಪರ್ಕ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಕಡಿಮೆಯಾಗಿರುವುದು ನಮಗೆ ವೇದ್ಯವಾಗುತ್ತದೆ. ಈ ಕಾರಣಗಳಿಂದ ಗ್ರಾಮೀಣ ಪ್ರತಿಭೆ ಬಹುಮಟ್ಟಿಗೆ ವಂಚಿತವಾಗಿರುವುದನ್ನು ಗುರುತಿಸಬಹುದು. ಗೊರೂರವರು ಬಹುಮುಖ್ಯವಾಗಿ ಗ್ರಾಮೀಣ ಜೀವನದಲ್ಲಿ ಕಂಡುಬರುವ ಶಿಕ್ಷಣ ಪದ್ಧತಿಯನ್ನು ವಿಚಾರ ಮಾಡಿದ್ದಾರೆ. ಸ್ವಾತಂತ್ರ ಪೂರ್ವದಲ್ಲಿ ಹಳ್ಳಿಯ ಶಾಲೆಗಳ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಮೂಲ ಶಿಕ್ಷಣಕ್ಕೂ ಅನುಕೂಲವಿಲ್ಲದಂತಹ ಅನೇಕ ಹಳ್ಳಿಗಳನ್ನು ಗೊರೂರವರು ಗುರುತಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಜನರಿಗೆ ಉನ್ನತ ಶಿಕ್ಷಣ ದುರ್ಬಲವಾಗಿತ್ತು. ಪ್ರಾಥಮಿಕ ಶಿಕ್ಷಣದ ಸ್ಥಿತಿಯನ್ನು ಹೇಳುವಾಗ ಹಳ್ಳಿಯ ಶಾಲೆಯ ದುರಂತ ಸ್ಥಿತಿಯನ್ನು ಗೊರೂರವರು ಪ್ರಾಮಾಣಿಕವಾಗಿ ಕೊಟ್ಟಿದ್ದಾರೆ. ಶಾಲೆಗೆ ಸರಿಯಾದ ಕಟ್ಟಡ ಇಲ್ಲದಿರುವುದು, ಪೀಠೋಪಕರಣ ವ್ಯವಸ್ಥೆ ಇಲ್ಲದಿರುವುದು, ಅರ್ಹ ಪ್ರಮಾಣದಲ್ಲಿ ಶಿಕ್ಷಕರು ಇಲ್ಲದಿರುವುದು ಹಳ್ಳಿಯ ಶಾಲೆಗಳ ದುಸ್ಥಿತಿಯಾಗಿತ್ತು. ಹಳ್ಳಿಯ ಶಾಲೆಯ ಶಿಕ್ಷಕರು ಸಹ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸದೆ ಶಿಕ್ಷಣ ಸೇವೆಗೆ ಅಪಚಾರ ಮಾಡಿರುವುದನ್ನು ಗೊರೂರವರು ತಿಳಿಸಿದ್ದಾರೆ. ಶಿಕ್ಷಣದ ಮಹತ್ವವನ್ನು ಗ್ರಾಮೀಣ ಜನಕ್ಕೆ ಅರ್ಥ ಮಾಡಿಕೊಡದೆ ಇರುವುದು ಆಂಗ್ಲರು ಮಾಡಿದ ದೊಡ್ಡ ಅಪರಾಧ ಎನ್ನುವುದನ್ನು ಗೊರೂರವರ ಚಿಂತನೆಗಳಲ್ಲಿ ಸ್ಪಷ್ಟವಾಗಿ ನೋಡಬಹುದು. ಗ್ರಾಮೀಣ ಸಮಾಜದಲ್ಲಿ ಕಾಣುವ ಮೌಢ್ಯತೆಗೆ ಇಂತಹ ಒಂದು ಶಿಕ್ಷಣ ಪದ್ಧತಿಯೂ ಕಾರಣ ಎನ್ನುವುದು ನಿರ್ವಿವಾದ ಸಂಗತಿ. ಈ ಕಾರಣದಿಂದ ಗೊರೂರವರು ಅಭಿಪ್ರಾಯ ಪಡುವಂತೆ ಗ್ರಾಮೀಣ ಸ್ಥಿತಿಗತಿಗೂ ನಗರದ ಸ್ಥಿತಿಗತಿಗೂ ದೊಡ್ಡ ಒಂದು ಕಂದರ ಏರ್ಪಟ್ಟಿತ್ತು ಎಂಬುದು ಸ್ಪಷ್ಟ ಸಂಗತಿಯಾಗಿದೆ.

ಗ್ರಾಮೀಣ ಜನರ ಬದುಕಿನಲ್ಲಿ ಮೌಢ್ಯತನ ಹಾಗೂ ಅವೈಜ್ಞಾನಿಕ ವರ್ತನೆ ಹಾಸುಹೊಕ್ಕಾಗಿತ್ತು. ಈ ವಿಷವರ್ತುಲದಲ್ಲಿ ಗ್ರಾಮೀಣ ಜನರ ಬದುಕು ಬಹುಮಟ್ಟಿಗೆ ನಲುಗಿ ಹೋಗಿತ್ತು. ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯ ಹಂತದಲ್ಲಿ ಮೊದಲಿಗೆ ಗ್ರಾಮೀಣ ಜನರ ಬದುಕಿನ ಸುಧಾರಣೆಗೆ ಸಂಬಂಧಿಸಿದಂತೆ ಕೆಲವು ಕ್ರಾಂತಿಕಾರಿ ಚಳುವಳಿಗಳನ್ನು ಮಾಡಿರುವುದು ನಮ್ಮ ಗಮನಕ್ಕೆ ಬರುತ್ತದೆ. 'ಭಾರತ ಹಳ್ಳಿಗಳ ದೇಶ- ರೈತ ಭಾರತದ ಬೆನ್ನೆಲುಬು' ಎಂಬ ಘೋಷಣೆಯನ್ನು ಕೊಟ್ಟು ಹಳ್ಳಿಯ ಉದ್ಧಾರ ಆಗದ ಹೊರತು ದೇಶ ಉದ್ಧಾರ ಆಗುವುದಿಲ್ಲ ಎಂಬ ಸತ್ಯಾಂಶವನ್ನು ತಿಳಿಸಿದ್ದಾರೆ. 'ಹಳ್ಳಿಯ ಯಶಸ್ಸು ದಿಲ್ಲಿಯ ಸೊಗಸು' ಎಂದು ಗಾಂಧೀಜಿಯವರು ಗ್ರಾಮೋದ್ಧಾರದ ಸಮಯದಲ್ಲಿ ಸುಂದರ ಸಂದೇಶವನ್ನು ನೀಡಿದ್ದಾರೆ. 'ಬೇರಿನ ಭದ್ರತೆ ಕಾಂಡದ ಸೊಗಸಿಗೆ ಕಾರಣ' ಎಂದು ಸಿದ್ಧವನಹಳ್ಳಿಯ ಕೃಷ್ಣಶರ್ಮರು ಸಹ ಗ್ರಾಮೋದ್ಧಾರದ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ರೈತನ ಬದುಕಿನಲ್ಲಿ ಆಗಬೇಕಾದ ಸುಧಾರಣೆ ಕೇವಲ ಮಾತಿನ ಘೋಷಣೆಯಾಗಬಾರದು. ಇದಕ್ಕೆ ಬದಲಾಗಿ ವಾಸ್ತವಿಕ ಚಟುವಟಿಕೆಯಾಗ ಬೇಕೆಂದು ಗಾಂಧಿ ಅನುಯಾಯಿಯಾದ ಗೊರೂರವರು ತಿಳಿಸಿದ್ದಾರೆ. ಮೂಲ ಶಿಕ್ಷಣದ ಸವಲತ್ತಿನ ಜತೆಗೆ ಉನ್ನತ ಶಿಕ್ಷಣ ಸೌಲಭ್ಯವೂ ಗ್ರಾಮೀಣ ಜನಕ್ಕೆ ದೊರೆಯಬೇಕು ಎಂಬುದು ಗಾಂಧೀಜಿಯವರ ಶಿಕ್ಷಣ

ಕ್ರಾಂತಿಯ ಸಂದೇಶವಾಗಿದೆ. ಶಿಕ್ಷಣ ವ್ಯಕ್ತಿಯ ಜೀವನವನ್ನು ಪರಿಷ್ಕರಿಸುವುದರ ಜೊತೆಗೆ ಸಾಮಾಜಿಕ ಜೀವನವನ್ನು ಸುಧಾರಿಸುತ್ತದೆ ಎಂಬುದು ಗಾಂಧೀಜಿಯವರ ಸ್ಪಷ್ಟ ನಿಲುವು. ಗ್ರಾಮೀಣ ಜನರ ಆರ್ಥಿಕ ದುರ್ಬಲತೆಯ ಬಗ್ಗೆ, ಸ್ವಾವಲಂಬಿತನದ ಬಗ್ಗೆ ಗಾಂಧಿಯವರು ಕೊಡುವ ಕಾರಣ ಸಲಹೆಗಳು ವೈಚಾರಿಕ ವಾಗಿದೆ. ಗ್ರಾಮೀಣ ಜನರಲ್ಲಿ ಮೊದಲಿಗೆ ಇದ್ದ ಸಹಕಾರಿ ಮನೋಧರ್ಮ, ಸ್ವಾವಲಂಬಿತನ ಬ್ರಿಟಿಷರ ಕಾಲದಲ್ಲಿ ಕಣ್ಮರೆಯಾಯಿತು. ಹೀಗೆ ವಸಾಹತುಶಾಹಿ ಪ್ರಭಾವವು ಗ್ರಾಮೀಣ ಜನರನ್ನು ಬಹುಮಟ್ಟಿಗೆ ಶೋಷಿಸಿತ್ತು. ಅನೇಕ ಕಚ್ಚಾ ಪದಾರ್ಥಗಳು ಹಳ್ಳಿಯಲ್ಲಿಯೇ ಬಳಕೆಯಾಗುವುದರ ಬದಲು ನಗರಕ್ಕೆ ಹೋಗುತ್ತಿತ್ತು. ಈ ಕಾರಣದಿಂದ ಗ್ರಾಮೀಣ ಪ್ರದೇಶದ ಆರ್ಥಿಕ ಬಂಡವಾಳ ಕ್ಷೀಣಿಸಿ ಹಲವು ರೀತಿಯ ಸಾಲದ ಬಲೆಗೆ ಗ್ರಾಮೀಣ ಜನರು ಒಳಗಾಗಿರುತ್ತಾರೆ. ಸುಖದ ಅನುಭವಕ್ಕಿಂತ ಸಾಲದ ಶೂಲ ಗ್ರಾಮೀಣ ಜನರಿಗೆ ತೀವ್ರವಾಗಿದೆ ಎಂಬುದನ್ನು ಗಮನಿಸಬಹುದು.

ಗ್ರಾಮಸಮಾಜದಲ್ಲಿ ವೈದ್ಯಕೀಯ ಸೌಲಭ್ಯಗಳು ಅತ್ಯಂತ ವಿಚಿತ್ರವಾಗಿವೆ. ಅನಾರೋಗ್ಯಕ್ಕೆ ಮೂಲ ಕಾರಣ ನೈರ್ಮಲ್ಯದ ಅಭಾವ. ಬಹಳ ಹಿಂದೆ ಗ್ರಾಮ ನೈರ್ಮಲ್ಯವನ್ನು ಗ್ರಾಮೀಣ ಜನರು ತಮ್ಮೆಲ್ಲರ ಬದುಕಿನ ಮುಖ್ಯ ಚಟುವಟಿಕೆಯೆಂದು ಭಾವಿಸಿ ಗ್ರಾಮದ ನೈರ್ಮಲ್ಯಕ್ಕಾಗಿ ಒಟ್ಟಿಗೆ ದುಡಿಯುತ್ತಿದ್ದ ಚಿತ್ರವನ್ನು ಲೇಖಕರು ಕೊಟ್ಟಿದ್ದಾರೆ. ರಸ್ತೆ ನಿರ್ಮಾಣ ಮತ್ತು ಚರಂಡಿಯ ನಿರ್ಮಾಣ ಗ್ರಾಮ ನೈರ್ಮಲ್ಯಕ್ಕೆ ಸಂಬಂಧಪಟ್ಟ ಕಾರ್ಯ ನಿರ್ವಹಣೆಯನ್ನು ಗ್ರಾಮೀಣ ಜನರು ಊರೊಟ್ಟಿನ ಕೆಲಸವೆಂದು ಎಲ್ಲರು ಸೇರಿ ದುಡಿದು ಫಲವನ್ನು ಹಂಚಿಕೊಂಡಿರುವುದನ್ನು ಗೊರೂರರವರು ನೆನಪು ಮಾಡಿಕೊಡುತ್ತಾರೆ. ಆರೋಗ್ಯದ ಬಗ್ಗೆ ಹಳ್ಳಿಯ ಜನರಲ್ಲಿದ್ದ ಮೂಢನಂಬಿಕೆಗೆ ಶಿಕ್ಷಣದ ಅಭಾವವೇ ಮೂಲ ಕಾರಣವೆಂದು ಗೊರೂರರವರು ಸ್ಫುಟಪಡಿಸಿದ್ದಾರೆ. ಇಷ್ಟೇ ಅಲ್ಲದೆ ಉತ್ತಮ ಶಾಲೆಗಳು ಹಳ್ಳಿಗಳಲ್ಲಿ ಇಲ್ಲದಿರುವಂತೆ, ಉತ್ತಮ ವೈದ್ಯಕೀಯ ಸೌಲಭ್ಯಗಳು ಹಳ್ಳಿಗರಿಗೆ ದೊರೆಯದಿರುವುದು ದುರಂತವೆಂದು ಗೊರೂರರವರು ತಿಳಿಸಿದ್ದಾರೆ. ಔಷಧಿ ಉಪಚಾರಗಳ ಅಭಾವ, ವೈದ್ಯರ ಅಭಾವ ಗ್ರಾಮೀಣ ಪ್ರದೇಶದ ಸಹಜ ಸ್ಥಿತಿಯಾಗಿದೆ. ಇಂಥಹ ಪರಿಸ್ಥಿತಿಯಲ್ಲಿ ಸಮಾಜ ಘಾತಕರು ಮೂಢನಂಬಿಕೆಗಳನ್ನು ಗ್ರಾಮೀಣ ಜನರ ಮನಸ್ಸಿನಲ್ಲಿ ಬಿತ್ತಿ ಅವರನ್ನು ದಿಕ್ಕು ತಪ್ಪಿಸಿರುವುದು ಘೋರ ದುರಂತ ಎಂದು ಗೊರೂರರವರು ಕಥಾತ್ಮಕವಾಗಿ ತಮ್ಮ ಕೃತಿಗಳಲ್ಲಿ ತಿಳಿಸಿದ್ದಾರೆ. ಗ್ರಾಮೀಣ ಜನರಲ್ಲಿ ವ್ಯಾವಹಾರಿಕವಾಗಿ ಒಂದು ರೀತಿಯಲ್ಲಿ ಮುಗ್ಧತೆ ಇತ್ತು. ಈ ಮುಗ್ಧತೆಯನ್ನು ನಗರದ ಚಾಣಕ್ಯ ವ್ಯವಹಾರಿಗಳು ಭಗ್ನಪಡಿಸಿರುವುದನ್ನು ಗೊರೂರರವರು ತಮ್ಮ ಕೃತಿಗಳಲ್ಲಿ ತಿಳಿಸಿದ್ದಾರೆ.

ಗ್ರಾಮೀಣ ಜನರಲ್ಲಿ ಒಂದು ಕಾಲಕ್ಕೆ ಪರಸ್ಪರ ಮೈತ್ರಿ ಸೌಹಾರ್ದ ಭಾವನೆಯು ಇತ್ತು. ಹಳ್ಳಿಯ ರಥೋತ್ಸವಗಳಲ್ಲಿ ಎಲ್ಲ ವರ್ಗದ ವ್ಯಕ್ತಿಗಳು ಕೂಡಿ ಸಂಭ್ರಮದಿಂದ ಆಚರಣೆ ಮಾಡುವುದು ಗೊರೂರರವರ ಕೃತಿಗಳಲ್ಲಿ ಮುಖ್ಯವಾದ ಅಂಶವಾಗಿದೆ. ಮುಸಲ್ಮಾನ ಭಾರತದ ಕಾವ್ಯ ವಾಚನ

ಮಾಡುವುದು, ಊರ ಒಡ್ಡರ ಸಮ್ಮುಖದಲ್ಲಿ ರಥ ಎಳೆಯುವುದು, ಎಲ್ಲಾ ಜಾತಿಯವರಿಗೆ ಹಬ್ಬ ಹರಿದಿನಗಳಲ್ಲಿ ಉತ್ತಮ ಜಾತಿಯವರು ಪ್ರಸಾದ ಹಂಚುವುದು ಮತ್ತು ಬಯಲು ನಾಟಕಗಳಲ್ಲಿ ಹಳ್ಳಿಯ ಸಮಸ್ತ ಜನರು ಒಂದುಗೂಡಿ ಸಾಂಸ್ಕೃತಿಕ ಉತ್ಸವದ ಆನಂದವನ್ನು ಅನುಭವಿಸುವುದು ಗೊರೂರವರ ಕೃತಿಗಳಲ್ಲಿ ಗುರುತಿಸಬಹುದು. ಗ್ರಾಮೀಣ ಕಲೆ ಗ್ರಾಮೀಣ ಜನರ ಒಂದು ಅವಿಭಾಜ್ಯ ಅಂಗವಾಗಿದೆ. ಈ ಕಲೆಗೆ ಪ್ರೋತ್ಸಾಹ ಗ್ರಾಮಸಮುದಾಯದಿಂದ ದೊರೆಯುತ್ತಿತ್ತು. ಗ್ರಾಮೀಣ ಜನರಲ್ಲಿ ಕಾರಣಾಂತರಗಳಿಂದ ದ್ವೇಷ, ಅಸೂಯೆ ಮೂಡಿ ಬಂದರು ಸಹ ಅವರ ಸಾಂಸ್ಕೃತಿಕ ಉತ್ಸವಗಳಲ್ಲಿ ಮನಸ್ಸಿನ ಕಲ್ಮಷ ದೂರವಾಗಿ ಸೌಹಾರ್ದ ಭಾವನೆಯನ್ನು ಸಹಜೀವನವನ್ನು ಕಾಣಬಹುದು.

ಗ್ರಾಮೀಣ ಜೀವನದಲ್ಲಿ ಕಂಡುಬಂದ ಸುಧಾರಣೆಗಳನ್ನು ಗೊರೂರವರು ಮೆಚ್ಚಿಕೊಂಡು ಅದನ್ನು ತನ್ನ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ. ಗ್ರಾಮ ಸಮಾಜದಲ್ಲಿ ಮೂಡಿ ಬಂದ ರಾಜಕೀಯ ಪ್ರಜ್ಞೆ ಹಳ್ಳಿಯ ಕ್ರಾಂತಿಕಾರಿ ಪರಿವರ್ತನೆಗೆ ಹೇಗೆ ಕಾರಣವಾಯಿತು ಎಂಬುದನ್ನು ಲೇಖಕರ ಕೃತಿಗಳಲ್ಲಿ ನೋಡಬಹುದು. ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯ ಮೂಲಕ ಬಿತ್ತಿದ ದೇಶ ಪ್ರೇಮ ಭಾವನೆ ನಂತರ ಗ್ರಾಮೀಣ ಪರಿಸರದಲ್ಲಿ ಉಳಿದು ಬೆಳೆಯಿತು. ವಿಶ್ವದ ಪ್ರಗತಿಯೊಂದಿಗೆ ಒಂದಾಗಬೇಕು ಎಂಬ ಭಾವನೆ ಗ್ರಾಮೀಣ ಜನರಲ್ಲಿಯೂ ಅವತರಿಸುವುದನ್ನು ಗೊರೂರವರ ಕೃತಿಗಳಲ್ಲಿ ಗುರುತಿಸಬಹುದು. ವರ್ಣಾಶ್ರಮದ ಕಟ್ಟಳೆ ಬಹುಮಟ್ಟಿಗೆ ಕಳಚಿ ಹೋದರು ಇಂದು ನಾವು ವಿಶ್ವಮಾನವತೆಯ ವಿಕಾಸ ತತ್ತ್ವವನ್ನು ಗ್ರಾಮೀಣ ಬದುಕಿನಲ್ಲಿ ಕಾಣಬಹುದು. ಹೀಗೆ ಗೊರೂರವರು ಗ್ರಾಮೀಣ ಜೀವನದಲ್ಲಿ ಒಂದಾಗಿ ಸಕ್ರೀಯ ಪಾತ್ರ ವಹಿಸಿ ಅವರ ಪರಿಸರದ ಹಳ್ಳಿಯ ಚಿತ್ರವನ್ನು ತಮ್ಮ ಕೃತಿಗಳಲ್ಲಿ ನೈಜವಾಗಿ ಮೂಡಿಸಿದ್ದಾರೆ. ಉತ್ತಮ ಜಾತಿಯವರಾದರು ಗೊರೂರವರು ಗ್ರಾಮೀಣ ಪರಿಸರದಲ್ಲಿ ಎಲ್ಲರೊಂದಿಗೆ ಮೈತ್ರಿ ಭಾವದಿಂದ ಒಂದಾಗಿ ಬಾಳಿದ ಕಾರಣದಿಂದಲೇ ಅವರ ಕೃತಿಗಳಲ್ಲಿ ಗ್ರಾಮೀಣ ಚಿತ್ರಣ ವಾಸ್ತವತೆಯಿಂದ ಕೂಡಿದೆ.

ಗ್ರಾಮೀಣ ಬದುಕಿನಲ್ಲಿ ಗಾಂಭೀರ್ಯದ ಜತೆಗೆ ರಸಿಕತೆಯನ್ನು ಅಲ್ಲಿಯ ಜನರ ಮನಸ್ಸಿನ ಅವಿಭಾಜ್ಯ ಗುಣವನ್ನಾಗಿ ನೋಡಬಹುದು. ಜನ್ಮತಃ ರಸಿಕ ಮನೋಧರ್ಮದ ವ್ಯಕ್ತಿಗಳಾದ ಗೊರೂರವರ ಕೃತಿಗಳಲ್ಲಿ ಹಳ್ಳಿಯ ಜನರ ಬದುಕಿನ ರಸಿಕತೆ ಅಷ್ಟೇ ನೈಜವಾಗಿ ನವಿರಾಗಿ ಮೂಡಿಬಂದಿದೆ. ಸಂಪ್ರದಾಯದ ಆಚರಣೆಯಲ್ಲಿ, ಆಡುಮಾತಿನ ಬಳಕೆಯಲ್ಲಿ, ಗಾದೆ ಮಾತಿನ ಬಳಕೆಯಲ್ಲಿ, ಲೋಕೋಕ್ತಿಗಳ ಪ್ರಯೋಗದಲ್ಲಿ ಗೊರೂರವರು ತೋರಿಸಿರುವ ಜಾನಪದ ಬನಿ, ವೈಭವ ಅವರ ಎಲ್ಲ ಕೃತಿಗಳಿಗೆ ಅನನ್ಯತೆಯನ್ನು ತಂದುಕೊಟ್ಟಿದೆ.

ಸಮಾಜಶಾಸ್ತ್ರಜ್ಞ ಕೊಡುವ ಗ್ರಾಮೀಣ ಚಿತ್ರಣಕ್ಕೆ - ಸೂತ್ರಕ್ಕೆ 'ಗೊರೂರವರ ಸಾಹಿತ್ಯ ಹಲವು ಕಡೆ ಸಾಕ್ಷಿಯಾಗಿದ್ದರೆ ಮತ್ತೆ ಕೆಲವು ಕಡೆ ವ್ಯಾಖ್ಯೆ'ಯಾಗಿ ಮೂಡಿ ಬಂದಿದೆ. ಸಮಾಜಶಾಸ್ತ್ರ ಅಧ್ಯಯನ ಮಾಡುವಾಗ ನಾವು ಒಂದು ಜನಾಂಗದ ಸಂಸ್ಕೃತಿ ಹಾಗೂ ನಾಗರಿಕತೆಯ ಚಿಂತನೆಯನ್ನು ಮಾಡುತ್ತೇವೆ.

ಸಂಸ್ಕೃತಿ ಮತ್ತು ನಾಗರಿಕತೆಯನ್ನು ಸಮಾಜಶಾಸ್ತ್ರಜ್ಞರು ಬೇರೆ ಬೇರೆಯಾಗಿ ಭಾವಿಸಿ ಇವುಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಸಮಾಜಶಾಸ್ತ್ರಜ್ಞರ ಪ್ರಕಾರ ಸಂಸ್ಕೃತಿ ಒಂದು ಜನಾಂಗದ ಅಂತರಂಗಕ್ಕೆ ಸಂಬಂಧಪಟ್ಟ ಗುಣ. ನಾಗರಿಕತೆ ಒಂದು ಜನಾಂಗದ ಹೊರಗಿನ ಜೀವನಕ್ಕೆ ಸಂಬಂಧಿಸಿದ ವಿಷಯ. ಗ್ರಾಮಸಮಾಜದಲ್ಲಿ ನಾವು ಬಹುಮಟ್ಟಿಗೆ ಸಂಸ್ಕೃತಿಯ ಸೊಗಸನ್ನು ನೋಡಬಹುದು. ನಾಗರಿಕತೆಯ ದೃಷ್ಟಿಯಿಂದ ಗ್ರಾಮೀಣ ಜನ ಹಿಂದುಳಿದ ವ್ಯಕ್ತಿಗಳಾಗಿರಬಹುದು. ನಗರಜೀವನದಲ್ಲಿ ಇದಕ್ಕೆ ವ್ಯತಿರಿಕ್ತವಾದ ಅಂಶವನ್ನು ಗುರುತಿಸಬಹುದು. ಪಟ್ಟಣದ ಜನ ಉಡುಗೆ - ತೊಡುಗೆ ಆಹಾರ ವಿಷಯಗಳಲ್ಲಿ ನಾಗರಿಕರಾಗಿದ್ದರು ಸಂಸ್ಕೃತಿಯ ದೃಷ್ಟಿಯಲ್ಲಿ ಹಿಂದುಳಿದ ಜನರಾಗಿರುತ್ತಾರೆ. ಉತ್ತಮ ಸಂಸ್ಕೃತಿ ಉತ್ತಮ ನಾಗರಿಕತೆ ಈ ಎರಡೂ ಗುಣಗಳ ಪೂರ್ಣ ರೂಪವನ್ನೇ ಉತ್ತಮ ಸಮಾಜದ ಲಕ್ಷಣವೆಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ವ್ಯಕ್ತಿಯ ಪರಿಪೂರ್ಣ ಜೀವನದಲ್ಲಿಯೂ ಈ ಗುಣಗಳ ಸಮ್ಮಿಲನವನ್ನು ಗುರುತಿಸಬಹುದು. ಸಮಾಜಶಾಸ್ತ್ರಜ್ಞರು ಒಂದು ಜನಾಂಗದ ಒಂದು ಕಾಲದ ಸಮಾಜವನ್ನು ಪರಿಶೀಲಿಸಿ ಹೇಳುವಾಗ ಸಂಸ್ಕೃತಿ ನಾಗರಿಕತೆಗಳ ಸಮತೋಲನವನ್ನು ನೆನಪು ಮಾಡಿಕೊಡುತ್ತಾರೆ. ಇದನ್ನೇ 'ಸಮತೋಲನ ಜೀವನ' ಎಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿರುವುದು. ಸಾಮಾಜಿಕ ಅಧ್ಯಯನ ಮಾಡುವಾಗ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಮಾಜಶಾಸ್ತ್ರಜ್ಞರು ಅಧ್ಯಯನ ನಡೆಸಿದ್ದಾರೆ. ಸಾಹಿತಿ ತನ್ನ ಚಿಂತನೆಯಲ್ಲಿಯೂ ಸಂಸ್ಕೃತಿ ಮತ್ತು ನಾಗರಿಕತೆಗಳ ವಿಷಯಗಳನ್ನು ಚರ್ಚಿಸುತ್ತಾನೆ. ಸಾಹಿತ್ಯ ಜೀವನದ ಪ್ರತಿಬಿಂಬ ಎಂಬುದಾಗಿ ಹೇಳಿದಾಗ ಅದರಲ್ಲಿ ಸಂಸ್ಕೃತಿ ಮತ್ತು ನಾಗರಿಕತೆಗಳ ಒಮ್ಮುಖ ಚಿಂತನೆ ನಡೆದಿರುವುದು ನಮ್ಮ ಗಮನಕ್ಕೆ ಬರುತ್ತದೆ. ಒಂದು ಕಾಲದ ಸಾಹಿತ್ಯವನ್ನು ಪರಾಮರ್ಶೆ ಮಾಡುವಾಗ ಆ ಸಂದರ್ಭದಲ್ಲಿಯು ಸಹ ಒಂದು ನಿರ್ದಿಷ್ಟ ಜನಾಂಗದ ಸಂಸ್ಕೃತಿ-ನಾಗರಿಕತೆಗಳ ಚಿತ್ರಣ ಸಾಹಿತ್ಯದಲ್ಲಿ ಅನಿವಾರ್ಯವಾಗಿ ಕಂಡುಬರುತ್ತದೆ. ಗೊರೂರವರ ಸಾಹಿತ್ಯದಲ್ಲಿಯೂ ನಾಗರಿಕತೆಯ ವಿವೇಚನೆಯ ಜೊತೆಗೆ ಸಾಂಸ್ಕೃತಿಕ ಅಧ್ಯಯನ ಕೂಡಿ ನಡೆದಿರುವುದನ್ನು ಗಮನಿಸಬಹುದು. ಗೊರೂರವರು ಗ್ರಾಮೀಣ ಬದುಕನ್ನು ಮೆಚ್ಚಿಕೊಂಡಿರುವುದಕ್ಕೆ ಆ ಪರಿಸರದಲ್ಲಿ ಕಾಣುವ ಸುಸಂಸ್ಕೃತ ಜೀವನವೇ ಮೂಲ ಕಾರಣ ಮತ್ತು ಮುಖ್ಯ ಕಾರಣ ಎನ್ನಬಹುದು.

ಗ್ರಾಮಸಮಾಜದಲ್ಲಿ ಆಧುನಿಕತೆ ಕಂಡುಬರಲು ಬಸ್ಸುಗಳ ಪ್ರವೇಶ ಅತಿ ಮುಖ್ಯವಾದದ್ದು. ಗೊರೂರವರು ತಮ್ಮ ಊರಿಗೆ ಬಸ್ಸು ಬಂದ ಪ್ರಸಂಗವನ್ನು ಸ್ವಾರಸ್ಯವಾಗಿ ವಿವರಿಸುತ್ತಾರೆ. ಬಸ್ಸು ಊರಿನ ಜನರ ಜೀವನದೊಂದಿಗೆ ಬಹಳ ಪರಿಣಾಮಕಾರಿಯಾಗಿ ಹೊಂದಿಕೊಂಡಿತ್ತು. ಗ್ರಾಮೀಣ ಜನರಿಗೂ, ಬಸ್ಸಿಗೂ ಮತ್ತು ಬಸ್ಸಿನ ಡ್ರೈವರಿಗೂ ಇದ್ದ ಸಂಬಂಧ ಎಷ್ಟು ರೋಚಕ ಎಂಬುದನ್ನು ಗೊರೂರವರು 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಬಸ್ಸಿನ ಬಳಕೆ ಗ್ರಾಮೀಣ ಜನರಿಗೆ ಎಷ್ಟು ಅವಶ್ಯವಾಗಿತ್ತೋ, ಸುಖಕರವಾಗಿತ್ತೋ ಅದರೊಂದಿಗೆ ಹೊಂದಿಕೊಂಡಿದ್ದ ಭಾವನೆಗಳು

ಗ್ರಾಮೀಣ ಜನರಿಗೆ ಅತ್ಯಂತ ಸ್ವಾರಸ್ಯಕರವಾಗಿತ್ತು. ಇದಕ್ಕೆ ಸಾಕ್ಷಿಯಾದ ಮಾತುಗಳನ್ನು ಈ ಕೃತಿಯಲ್ಲಿ ಹೀಗೆ ಕಾಣಬಹುದು. "ನಮ್ಮ ಊರ ಬಸ್ಸು ಒಂದು. ಬಸ್ಸು ನಮ್ಮೂರಿಗೆ ಗಡಿಯಾರದ ಹಾಗೆ. ಅದು ಮೂರು ಸಲ ನಮ್ಮೂರಿಗೆ ಬರುತ್ತದೆ. ಬೆಳಿಗ್ಗೆ ಎಂಟು ಗಂಟೆಗೆ ಮೊದಲನೆಯ ಸಲ. ಇದು ಹೆಂಗಸರಿಗೆಲ್ಲಾ ನದಿಗೆ ಪಾತ್ರೆ ಬೆಳಗುವುದಕ್ಕೂ, ಬಟ್ಟೆ ಒಗೆಯುವುದಕ್ಕೂ ಹೋಗುವುದಕ್ಕೆ ಗುರುತು. ಬಸ್ಸು ಎರಡನೆ ಸಲ ಮಧ್ಯಾಹ್ನದ ಒಂದು ಗಂಟೆಗೆ ಬರುತ್ತದೆ. ಇದು ಎಲ್ಲರಿಗೂ ಊಟದ ಕಾಲ. ಮಧ್ಯಾಹ್ನದ ಬಸ್ಸು ಬಂದ ಕೂಡಲೆ "ಬಸ್ಸು ಬಂತು, ಗಂಡಸರೆಲ್ಲಾ ಊಟಕ್ಕೆ ಬರುತ್ತಾರೆ" ಎಂಬುದಾಗಿ ಸ್ತ್ರೀಯರು ತಮ್ಮ ತಮ್ಮ ಮನೆಗಳಿಗೆ ಓಡುತ್ತಾರೆ. ಸಾಯಂಕಾಲದ ಬಸ್ಸು ಸುಮಾರು ಆರುವರೆ ಗಂಟೆಗೆ ಬರುತ್ತದೆ. ಇದು, ಜೋಡಿದಾರರ ಮನೆಯ ಬಾಗಿಲಿನಲ್ಲಿ ಎಲೆ ಹಚ್ಚುತ್ತಾ, ಮಾತಾಡುತ್ತಾ, ಹಾಡುಗಳನ್ನು ಹಾಡುತ್ತಾ ಕುಳಿತಿರುವ ಹೆಂಗಸರಿಗೆ ಮನೆಗೆ ಹೋಗುವುದಕ್ಕೆ ಸೂಚನೆ. ಅರ್ಚಕನು ಸಾಯಂಕಾಲದ ಬಸ್ಸು ಬಂದ ಕೂಡಲೆ ದೇವಸ್ಥಾನಕ್ಕೆ ಪೂಜೆಗೆ ಹೋಗುತ್ತಾನೆ. ಬೆಟ್ಟ ಗುಡ್ಡಗಳಲ್ಲಿ ಮೇಯುತ್ತಿರುವ ದನ ಗಳನ್ನೂ, ಕುರಿ ಆಡುಗಳನ್ನೂ ಹೊಡೆದುಕೊಂಡು ಒಕ್ಕಲಿಗರ ಹುಡುಗರೂ ಹುಡುಗಿಯರೂ ಮನೆಗಳಿಗೆ ಬರುತ್ತಾರೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೧;ಪು.೫) ಬಹಳ ಹಿಂದೆ ಗ್ರಾಮಸಮಾಜದಲ್ಲಿ ಸೂರ್ಯನನ್ನು ನೋಡಿ ದಿನದ ಕಾಲವನ್ನು ಹೇಳುವ ರೂಢಿಯಿತ್ತು. ಆದರೆ ಬಸ್ಸು ಬಂದ ಮೇಲೆ ಆ ಬಸ್ಸಿನ ವೇಳೆಯನ್ನು ಗುರುತಿಸಿ ದಿನದ ಕಾಲವನ್ನು ಚಟುವಟಿಕೆಯನ್ನು ಗುರುತಿಸಿ ಹೇಳುವುದು ಹೊಸ ರೀತಿಯಾಯಿತು. ಈ ದೃಷ್ಟಿಯಿಂದ ಹಳ್ಳಿಯವರ ಪಾಲಿಗೆ ಬಸ್ಸು ಉಪಯುಕ್ತ ಸಾಧನವಾಯಿತು. ಬಸ್ಸಿನ ವೇಳೆಗೆ ನಿಯೋಜಿತವಾದ ಚಟುವಟಿಕೆಗಳು ಹಳ್ಳಿಯಲ್ಲಿ ತಪ್ಪದೆ ನಡೆಯುತ್ತಿತ್ತು ಎಂಬುದನ್ನು ಗೊರೂರವರು ಮೇಲಿನ ಮಾತುಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಗ್ರಾಮೀಣ ಜನರೊಂದಿಗೆ ಬಸ್ಸಿನ ಡ್ರೈವರ್ ಇಟ್ಟುಕೊಂಡಿದ್ದ ಸಂಬಂಧ ಹೆಚ್ಚು ಆತ್ಮೀಯವಾಗಿತ್ತು. ಡ್ರೈವರ್ ತೋರಿಸುವ ಸಹಕಾರಿ ಮನೋಭಾವನೆ ಗ್ರಾಮೀಣ ಜನರಿಗೆ ಅತ್ಯಂತ ಪ್ರಿಯವಾಗಿತ್ತು. "ನಮ್ಮ ಹುಡುಗರು ಹಾಸನ ಹೈಸ್ಕೂಲಿನಲ್ಲಿ ಓದುತ್ತಿದ್ದಾರಲ್ಲ ಅವರು ಕೊಡುವ ಕಾಗದಗಳನ್ನು ರಾಜಯ್ಯಂಗಾರಿ ನಮ್ಮೂರಿನಲ್ಲಿ ಅವರವರ ಮನೆಗಳಿಗೆ ತಲುಪಿಸುತ್ತಾನೆ. ನಾವು ಯಾವುದಾದರೂ ತಿಂಡಿ ಹುಡುಗರಿಗೆ ಕಳುಹಿಸಿದರೆ ತೆಗೆದುಕೊಂಡು ಹೋಗಿ, ಕಡಿಮೆ ಮಾಡದೆ ಅವರಿಗೆ ಮುಟ್ಟಿಸುತ್ತಾನೆ. ಊರಿನ ಹುಡುಗರನ್ನೆಲ್ಲಾ ನಿತ್ಯ ಒಂದು ಸಲ ಬಸ್ಸಿನಲ್ಲಿ ಕೂರಿಸಿಕೊಂಡು ಬೀದಿಗಳಲ್ಲಿ ತಿರುಗಿಸುತ್ತಾನೆ. ಹುಡುಗರು ಸಂತೋಷದಿಂದ "ರಾಜಯ್ಯಂಗಾರಿಕಿ ಜೈ" ಎಂದು ಕೂಗ್ತವೆ". (ಅದೇ;ಪು.೭) ಹೀಗೆ ನಮ್ಮೂರಿನ ಬಸ್ಸಿನ ಡ್ರೈವರ್ ನಮ್ಮೂರಿನ ಜನರೊಂದಿಗೆ ಅತಿ ನಿಕಟ ಆತ್ಮೀಯ ಸ್ನೇಹ ಸಂಬಂಧಿಯಾಗಿದ್ದನು. ಊರಿನವರ ಪಾಲಿಗೆ ಬಸ್ಸು ಕೇವಲ ಸಂಪರ್ಕ ಸಾಧನವಾಗಿ ಉಳಿಯದೆ ರಾಜಯ್ಯಂಗಾರಿಯ ಮೂಲಕ ನಿಕಟ ಜನೋಪಕಾರಿಯಾಯಿತು. ಇಂತಹದೇ ಬಾಂಧವ್ಯವನ್ನು ಅಂದಿನ ಕಾಲಕ್ಕೆ ಎಲ್ಲಾ ಗ್ರಾಮೀಣ ಸಮಾಜದಲ್ಲು ಕಾಣಬಹುದಾಗಿತ್ತು.

ಗೊರೂರವರು ತಮ್ಮ ಊರಿಗೆ ಬಸ್ಸು ಬಂದಾಗ "ನಮ್ಮೂರಿಗೂ ಒಂದು ಬಸ್ ಬಂದಿತು. ನಾಗರಿಕತೆಯ ತುದಿಯನ್ನು ಏರಿಬಿಟ್ಟೆವು ನಾವು" ಎಂದು ನಾನು ಕುಣಿದಾಡತೊಡಗಿದೆ ಎನ್ನುತ್ತಾರೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೯೮) ಗ್ರಾಮೀಣ ಸಮಾಜದಲ್ಲಿ ಒಂದು ಹೊಸ ವಾಹನದ ಪ್ರವೇಶ ಅವರ ಮನಸ್ಸಿನಲ್ಲಿ ಎಷ್ಟು ಆನಂದ ಉಂಟುಮಾಡುತ್ತಿತ್ತು ಎಂಬುದು ಇಲ್ಲಿ ವ್ಯಕ್ತವಾಗುತ್ತದೆ. 'ಹಳ್ಳಿಯ ಚಿತ್ರಗಳು' ಕೃತಿಯಲ್ಲಿ ಗೊರೂರವರು ಅವರ ಊರಿನ ಡಕೋಟಾ ಬಸ್ಸಿನಲ್ಲಿ ಪ್ರಯಾಣ ಮಾಡಿದ ಘಟನೆಯನ್ನು ಅಷ್ಟೇ ಸ್ವಾರಸ್ಯವಾಗಿ ವಿವರಿಸಿದ್ದಾರೆ. ಇಂತಹ ಸ್ವಾರಸ್ಯದ ಅನುಭವಗಳಿಗೆ ದನಿ ಕೊಡುವುದರಲ್ಲಿ ಗೊರೂರವರು ಗಟ್ಟಿಗರು ಎಂಬುದು ನಮಗೆ ಮನವರಿಕೆಯಾಗುತ್ತದೆ. ಬಸ್ಸಿನ ಸ್ಥಿತಿಯೊಂದಿಗೆ ಊರಿನ ಜನರ ವರ್ತನೆಯನ್ನು ಹೊಂದಿಸಿ ಹೇಳುವಾಗ ಲೇಖಕರು ಆಡುವ ಮಾತು "ನಮ್ಮ ಹಳ್ಳಿಯಲ್ಲಿ ಯಾರಾದರೂ ಗಟ್ಟಿಯಾಗಿ ಕಿರಿಚಿದರೆ "ಬಸ್ಸು ಕಿರಿಚಿದಂತೆ ಅವನು ಕಿರಿಚುತ್ತಾನೆ" ಎನ್ನುತ್ತಾರೆ. (ಅದೇ;ಪು.೯೯)

'ಮರೆಯಾದ ಮಾರಮ್ಮ' ಕೃತಿಯಲ್ಲಿ ಗೊರೂರವರು ಸರ್ಕಾರಿ ಬಸ್ಸಿನ ಡ್ರೈವರ್ ರಂಗನ ಪಾತ್ರವನ್ನು ಚಿತ್ರಿಸುವ ರೀತಿ ಸ್ವಾರಸ್ಯಕರವಾಗಿದೆ. ರಂಗ ಬಸ್ಸನ್ನು ನೋಡಿಕೊಳ್ಳುವ ರೀತಿ ಅತಿ ಜಾಗರೂಕವಾಗಿದೆ. ತನ್ನ ಸ್ವಂತ ವಸ್ತುವನ್ನು ಕಾಪಾಡಿಕೊಳ್ಳುವಾಗ ತೋರಿಸುವ ಎಚ್ಚರವನ್ನು ಆ ಸರ್ಕಾರಿ ಬಸ್ಸಿನೊಂದಿಗೆ ರಂಗ ಹೊಂದಿರುವುದು ಎಷ್ಟು ಆಶ್ಚರ್ಯದ ಸಂಗತಿಯೋ ಅಷ್ಟೇ ಸತ್ಯದ ಸಂಗತಿ. ಗ್ರಾಮೀಣ ಸಮಾಜದಲ್ಲಿ ಇಂಥಹ ಸಾರ್ವಜನಿಕ ಉಪಯೋಗದ ವಾಹನಗಳು ಬಂದಾಗ ಅವರು ತೋರಿಸುತ್ತಿದ್ದ ಉತ್ತಮ ನಡುವಳಿಕೆಯ ರೀತಿಯನ್ನು ಗೊರೂರವರು ಮೆಚ್ಚಿ ನುಡಿದ್ದಾರೆ. ಬಸ್ಸಿನಲ್ಲಿ ಶಿಸ್ತನ್ನು ಪಾಲಿಸುವ ರಂಗನ ಜಾಣ್ಮೆ ಅಷ್ಟೇ ನವುರಾಗಿದೆ. "ಗಾಡಿಯಲ್ಲಿ ಬೀಡಿ ಚುಟ್ಟ ಸೇದುವುದಕ್ಕೆ ಎಂದಿಗೂ ಅವಕಾಶ ಕೊಡುತ್ತಿರಲಿಲ್ಲ. ಹಾಗೂ ಯಾರಾದರೂ ಪ್ರಬಲರೂ ಅಸಂಸ್ಕೃತರೂ ಪೋಕರಿಗಳೂ ದುಡ್ಡಿನ ಕೊಬ್ಬಿನವರೂ ಬೇಜವಾಬ್ದಾರರೂ ಸೇದಲು ಪ್ರಾರಂಭಿಸಿದರೆ ರಂಗ, ಮಾತನಾಡದೆ ಗಾಡಿಯನ್ನು ನಿಲ್ಲಿಸಿ, ಸೀಟಿನಿಂದ ಇಳಿದು, ನೆಲದ ಮೇಲೆ ಕುಳಿತುಬಿಡುತ್ತಿದ್ದ. ಪ್ರಯಾಣಿಕರೆಲ್ಲ ಬತ್ತಿ ಸೇದುವ ಚಟದವರನ್ನು ಬೈದು ಅವನು ಬೀಡಿ ಎಸೆದ ಮೇಲೆಯೇ ರಂಗ ಮತ್ತೆ ಬಸ್ ಹತ್ತಿ ಪ್ರಯಾಣ ಮುಂದುವರೆಸುತ್ತಿದ್ದ". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೭೯) ಇಲ್ಲಿ ರಂಗನ ಚಟುವಟಿಕೆ ಸಾಧಾರಣ ಎನಿಸಿದರೂ ಸಮಯೋಚಿತವಾಗಿ ವಿಚಾರ ಮಾಡಿದಾಗ ಪ್ರಶಂಸನೀಯ ಎನಿಸುತ್ತದೆ. ಆದರ್ಶ ಇಟ್ಟುಕೊಂಡ ವ್ಯಕ್ತಿ ತನ್ನ ಆದರ್ಶದ ಪಾಲನೆಯಲ್ಲಿ ಜಾಣ್ಮೆಯನ್ನು ತೋರಿಸ ಬೇಕಾಗುತ್ತದೆ ಎಂಬುದಕ್ಕೆ ಡ್ರೈವರ್ ರಂಗ ಉತ್ತಮ ಉದಾಹರಣೆಯಾಗಿದ್ದಾನೆ. ಗ್ರಾಮೀಣ ಸಮಾಜದಲ್ಲಿ ಇದಕ್ಕೆ ಸಂವಾದಿಯಾದ ನಿದರ್ಶನಗಳನ್ನು ಬಹುಪಾಲು ನಾವು ಗುರುತಿಸಬಹುದು.

ಗ್ರಾಮಸಮಾಜದಲ್ಲಿ ಸೇವೆ ಮಾಡುವ ಸರ್ಕಾರಿ ನೌಕರರ ಅನುಭವವನ್ನು ಪ್ರತ್ಯಕ್ಷವಾಗಿ ಕಂಡು ಅನುಭವಿಸಿರುವ ಗೊರೂರವರು ಅದನ್ನು ವಿವರಿಸುವ ರೀತಿ ಅತ್ಯಂತ ಮನನೀಯವಾಗಿದೆ. ಸರ್ಕಾರಿ ಅಧಿಕಾರಿಗಳು ತಮ್ಮ ಸ್ಥಾನಮಾನದ ಗಮ್ಮತ್ತನ್ನು ಹಳ್ಳಿಯ ಜನರೊಂದಿಗೆ ಕೆಲ ಕಾಲದವರೆವಿಗೆ ನಡೆಸಿದ್ದರು ನಂತರದಲ್ಲಿ ಗ್ರಾಮೀಣ ಜನರೊಂದಿಗೆ ಅವರ ಬಾಂಧವ್ಯ ಗಾಢವಾದಾಗ ಅಧಿಕಾರಿಗಳ ವರ್ತನೆ ಹೆಚ್ಚು ಆತ್ಮೀಯವಾಗುತ್ತದೆ. ಇದು ಗ್ರಾಮೀಣ ಜನರು ಅಧಿಕಾರಿಗಳ ಹೃದಯವನ್ನು ಗೆದ್ದು ಕೊಂಡ ವಿಶೇಷ ರೀತಿಯೆಂದು ಗೊರೂರವರು ಉಲ್ಲೇಖಿಸಿದ್ದಾರೆ. 'ಬೈಲಹಳ್ಳಿ ಸರ್ವೆ' ಕೃತಿಯಲ್ಲಿ ಇದಕ್ಕೆ ಒಂದು ನಿದರ್ಶನವನ್ನು ಕಾಣಬಹುದು. ಬೈಲಹಳ್ಳಿಗೆ ಬಂದ ಸರ್ಕಾರಿ ಅಧಿಕಾರಿ ಮೋಜಿಮದಾರರು ತಮ್ಮ ಕಾರ್ಯವನ್ನು ನಿರ್ವಹಿಸಿ ಹೊರಡುವ ಸಂದರ್ಭದಲ್ಲಿ ಹಳ್ಳಿಯವರೊಂದಿಗೆ ಆಡಿದ ಮಾತು "ನನ್ನ ಇಷ್ಟು ವರ್ಷದ ಅನುಭವದಲ್ಲಿ ನೂರಾರು ಗ್ರಾಮಗಳನ್ನು ನೋಡಿದ್ದೇನೆ, ಅಳೆದಿದ್ದೇನೆ. ಎಲ್ಲ ಕಡೆಯೂ ಒಂದೇ ಸಮ ಒಂದೇ ಗೋಳು. ಒಂದೇ ದಾರಿದ್ರ್ಯ, ಒಂದೇ ಕೊಳಕು, ಅಜ್ಞಾನ. ಬೈಲಹಳ್ಳಿಯಲ್ಲೂ ಅದೇ ಅಜ್ಞಾನ, ಅದೇ ಗೋಳು. ಆದರೆ ನಿಮ್ಮ ಉತ್ಸಾಹದಿಂದ ಆ ಗೋಳು ಸ್ವಲ್ಪ ತಲೆತಗ್ಗಿಸಿತು. ಅಳುವುದಕ್ಕೆ ಸಾವಿರ ಕಾರಣಗಳಿದ್ದು ನಗುವುದಕ್ಕೆ ಒಂದು ಕಾರಣವಿದ್ದರೆ ಆ ಒಂದು ಕಾರಣವನ್ನೇ ನೀವು ಬಲಪಡಿಸಿ ನಗುತ್ತಿದ್ದೀರಿ. ನಾವು ಗೋಳುಗಳ ಹಿಂದೆ ಹೊಂಚು ಹಾಕುತ್ತಿರುವ ನಗೆಯನ್ನು ಹಿಡಿಯುವುದೇ ಜೀವನದ ತಿರುಳು. ಅದೇ ನಮ್ಮ ಮುಂದಲ ಉತ್ಸಾಹಕ್ಕೆ ದಾರಿ, ಲೋಕವನ್ನು ಸೃಷ್ಟಿಸಿದ ಭಗವಂತನ ಗುರಿಯೂ ಅದೇ ಅಂತ ಕಾಣುತ್ತದೆ. ಅದನ್ನು ನೀವು ನನಗೆ ತೋರಿಸಿದ ದಾರಿಯನ್ನು ನಾನೆಂದೂ ಮರೆಯಲಾರೆ. ನೀವು ನನ್ನನ್ನು ಮರೆತರೂ ಮರೆಯಬಹುದು. ನಾನೇನೋ ಈ ಪ್ರಯಾಣ, ನಿಮ್ಮೂರು, ಈ ಪದಗಳು, ಆ ಕತೆಗಳು, ಸುಬ್ಬೇಗೌಡ, ಸಣ್ಣಪ್ಪ ಯಾರನ್ನೂ ಮರೆಯುವಂತೆ ಇಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪;ಪು.೧೧೪) ಸಾವಿರ ನೋವಿನ ಹಿಂದೆ ಅಡಗಿರುವ ನಲಿವನ್ನು ಕಾಣುವ, ಕಂಡು ಅನುಭವಿಸುವ ಜಾಣ್ಮೆಯನ್ನು ನಾವು ಗ್ರಾಮೀಣ ಜನತೆಯ ಮೂಲಕ ತಿಳಿದುಕೊಳ್ಳಬೇಕು ಎಂಬ ಅಂಶವನ್ನು ಗೊರೂರವರು ಇಲ್ಲಿ ನಿಚ್ಚಳವಾಗಿ ತಿಳಿಸಿಕೊಟ್ಟಿದ್ದಾರೆ. ಗ್ರಾಮೀಣ ಜನತೆಯ ಸುಸಂಸ್ಕೃತ ಜನರಿಂದ ಎಷ್ಟು ಉತ್ತಮ ವರ್ತನೆಗಳನ್ನು ಕಲಿತುಕೊಂಡು ಜೀವನಕ್ಕೆ ಅಳವಡಿಸಿಕೊಳ್ಳುತ್ತಾರೆಯೋ ಅಷ್ಟೇ ಔದಾರ್ಯ ಭಾವನೆಯಿಂದ ನಗರ ಜೀವನದ ವ್ಯಕ್ತಿಗಳು ಗ್ರಾಮೀಣ ಜನರ ಜೀವನದಲ್ಲಿ ಗುರುತಿಸುವ ಗುಣಗಳನ್ನು ತಮ್ಮ ಜೀವನದಲ್ಲಿ ರೂಢಿಸಿಕೊಳ್ಳುವುದು ಅತ್ಯವಶ್ಯ ಎಂಬುದನ್ನು ಲೇಖಕರು ಕಿವಿ ಮಾತಾಗಿ ಇಲ್ಲಿ ತಿಳಿಸಿದ್ದಾರೆ.

ಗ್ರಾಮೀಣ ಸಮಾಜದಲ್ಲಿ ಶಿಕ್ಷಣ ಪದ್ಧತಿ ಅನೇಕ ಲೋಪದೋಷಗಳನ್ನು ಹೊಂದಿರುವಂತೆ ವೈದ್ಯಕೀಯ ಸೌಲಭ್ಯದಲ್ಲಿಯೂ ಅನೇಕ ತೊಡಕುಗಳನ್ನು ಕಾಣಬಹುದು. ಗ್ರಾಮಗಳಲ್ಲಿ ಆರೋಗ್ಯ ಕೇಂದ್ರಗಳು ಇದ್ದರು ಸಹ ಅಲ್ಲಿ ಎಲ್ಲಾ ರೀತಿಯ ಯಂತ್ರ ತಂತ್ರಜ್ಞಾನ ಸೌಲಭ್ಯತೆ ಇರುವುದಿಲ್ಲ.

ಆರೋಗ್ಯ ಕೇಂದ್ರಗಳಲ್ಲಿ ಸರ್ಕಾರಿ ಅಧಿಕಾರಿಗಳ ಸಂಖ್ಯೆ ಕೂಡ ಅತಿ ನಿಯಮಿತವಾಗಿರುತ್ತದೆ. ಇಂತಹ ಆರೋಗ್ಯ ಕೇಂದ್ರಗಳಿಂದ ಉತ್ತಮ ವೈದ್ಯಕೀಯ ಸೇವೆಯನ್ನು ನಿರೀಕ್ಷಿಸುವುದು ಸಹಜವಾಗಿಯೇ ಅಸಾಧ್ಯ ಎನಿಸುತ್ತದೆ. ಇಷ್ಟಾದರೂ ಸೀತಾಲಕ್ಷ್ಮಿಯಂತಹ ಸೇವಾಮನೋಧರ್ಮದ ವ್ಯಕ್ತಿಗಳು ಗ್ರಾಮೀಣ ಸಮಾಜ ದಲ್ಲಿ ಇರುವುದರಿಂದ ಅಲ್ಲಿಯ ರೋಗಗ್ರಸ್ಥ ವ್ಯಕ್ತಿಗಳಿಗೆ ಆಶಾಕಿರಣ ದೊರೆತಂತೆ ಆಗುತ್ತದೆ. ಸೀತಾಲಕ್ಷ್ಮಿ ರೋಗಿಗಳಿಗೆ ಉಪಚಾರ ಮಾಡುವುದರಲ್ಲಿ ಎಷ್ಟು ನಿಷ್ಣಾತಳೋ ಅಷ್ಟೇ ಉತ್ಸಾಹಿ. ಆರೋಗ್ಯ ಕೇಂದ್ರದಲ್ಲಿ ರೋಗಿಗಳು ಸೀತಾಲಕ್ಷ್ಮಿಯನ್ನು ಗಮನಿಸಿ ಮಾನ್ಯ ಮಾಡುತ್ತಾರೆಯೋ ಹೊರತು ವೈದ್ಯರನ್ನಲ್ಲ. ಇದು ಗ್ರಾಮ ಸಮಾಜದಲ್ಲಿ ನಾವು ಕಾಣುವ ಸೇವಾಮನೋರ್ಧಮದ ಒಂದು ಪ್ರತ್ಯೇಕ ಚಿತ್ರ. ಸರ್ಕಾರದ ಸಂಬಳವನ್ನು ಕೈ ತುಂಬ ತೆಗೆದುಕೊಂಡು ಲಂಚಕ್ಕೂ ಬಹಳ ನಿರೀಕ್ಷೆ ಇಟ್ಟುಕೊಂಡು ಕಾಲು ಚಾಚಿಕೊಂಡು ಕಾಲ ಕಳೆಯುವ ವೈದ್ಯರೇ ಗ್ರಾಮೀಣ ಆರೋಗ್ಯ ಕೇಂದ್ರಗಳಲ್ಲಿ ಹೆಚ್ಚು. ವೈದ್ಯಕೀಯ ಸಹಾಯವನ್ನು ಅಪೇಕ್ಷಿಸಿ ಬಂದ ರೋಗಿಗೆ ಇಂಥ ಸೋಮಾರಿ ವೈದ್ಯರು ಕೊಡುವ ಅನೇಕ ಕಾರಣಗಳಲ್ಲಿ ಒಂದು, ತಮಗೆ ಆರೋಗ್ಯವಿಲ್ಲ ಎಂದು ಹೇಳುವುದು ಸಾಮಾನ್ಯ ವಿಷಯ. ಕಾಸು ಇಲ್ಲದ ರೋಗಿ ಗ್ರಾಮೀಣ ಆರೋಗ್ಯ ಕೇಂದ್ರಗಳಲ್ಲಿ ತನ್ನ ಕಾಯಿಲೆಯ ಜತೆಗೆ ಆ ವಾತಾವರಣದಲ್ಲಿರುವ ಅಸಭ್ಯ ವರ್ತನೆಯ ನೋವನ್ನು ಸೇರಿಸಿ ಅನುಭವಿಸಬೇಕಾಗುತ್ತದೆ. ಗೊರೂರರವರು ಗ್ರಾಮೀಣ ಆರೋಗ್ಯ ಕೇಂದ್ರಗಳ ಈ ಸ್ಥಿತಿ ಚಿತ್ರವನ್ನು ಅವರು ತನ್ನ ಕೃತಿಗಳಾದ 'ಊರ್ವಶಿ' ಹಾಗೂ 'ಕಮ್ಮಾರ ವೀರಭದ್ರಾಚಾರಿ' ಕೃತಿಗಳಲ್ಲಿ ಕೆಲವು ನಿದರ್ಶನಗಳ ಮೂಲಕ ಚಿತ್ರಿಸಿದ್ದಾರೆ. ಸರ್ಕಾರ ಗ್ರಾಮೀಣ ಜನತೆಯ ಆರೋಗ್ಯ ರಕ್ಷಣೆಗಾಗಿ-ಪಾಲನೆಗಾಗಿ ಸಾಕಷ್ಟು ಹಣವನ್ನು ವ್ಯಯಮಾಡಿದರೂ ಅದು ಸಾರ್ಥಕವಾಗದೆ ವ್ಯರ್ಥವಾಗುತ್ತಿದೆಯಲ್ಲ ಎಂಬುದು ಗೊರೂರರವರ ಸಂಕಟವಾಗಿದೆ. ವೈದ್ಯರಂತೆಯೇ ಆರೋಗ್ಯ ಕೇಂದ್ರದ ಮಿಕ್ಕ ಸೇವಕರು ಸಹ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿಸುವುದು ಸಾಮಾನ್ಯ ಸಂಗತಿಯಾಗಿದೆ. ಇಂಥಹ ಆರೋಗ್ಯ ಕೇಂದ್ರಗಳನ್ನು ಗಮನಿಸಿಯೇ ಸರ್ಕಾರಿ ಆಸ್ಪತ್ರೆಗಳಿಗೆ ಹೋದ ರೋಗಿಗಳನ್ನು ಸ್ಮಶಾನಕ್ಕೆ ಹೋದ ಹೆಣಕ್ಕೆ ಸಮ ಎಂದು ಅನೇಕ ವೇಳೆ ಜನ ಗೇಲಿ ಮಾಡಿದರು ಇದು ವಾಸ್ತವದ ಸಂಗತಿ ಎನಿಸುತ್ತದೆ.

ಸರ್ಕಾರಿ ಆಸ್ಪತ್ರೆಯ ದುರಂತ ಚಿತ್ರಕ್ಕೆ ಒಂದು ಉದಾರಣೆಯನ್ನು ಗೊರೂರರವರ 'ಊರ್ವಶಿ' ಕೃತಿಯಲ್ಲಿ ಕಾಣಬಹುದು. ಯುಗಾದಿಯ ಹಬ್ಬದ ದಿನ ಕಮಲಮ್ಮನ ಮನೆಗೆ ಸೀತಾಲಕ್ಷ್ಮಿ ಬಂದಿದ್ದಾಳೆ. ಆಕೆ ಅಪರೂಪಕ್ಕೆ ವಿರಾಮವಾಗಿ ಕಾಲ ಕಳೆಯುತ್ತಿರುವಾಗ ಹೊರಗಿನಿಂದ ರೈತನ ಆರ್ತನಾದ ಕೇಳಿ ಬರುತ್ತದೆ. ಸೀತಾಲಕ್ಷ್ಮಿ ಆ ನಾದಕ್ಕೆ ಸ್ಪಂದಿಸಿ ಕರ್ತವ್ಯ ಮುಖಿಯಾಗುತ್ತಾಳೆ. ಆದರೆ ಕಮಲಮ್ಮನ ಮನಸ್ಸು ತಡೆಯದೆ ಆರೋಗ್ಯ ಕೇಂದ್ರದ ವೈದ್ಯರ ಬಗ್ಗೆ ಕಿಡಿಕಾರುತ್ತಾ "ಹೋಗಿ ಆ ಸರ್ಕಾರಿ ಸಂಬಳ ತಿಂದ್ಕೊಂಡು ದಿನ ದಿನಕ್ಕೆ ಹೆಗ್ಣದಂತೆ ಮೈ ಬೆಳೆಸಿಕೊಳ್ಳೋ ಡಾಕ್ಟರಮ್ಮನನ್ನು ಕರ್ಕೊಂಡು ಹೋಗು" ಎಂದಳು. ರೈತನು ಪದ್ಧತಿಯಂತೆ "ಡಾಕ್ಟರಮ್ಮ ನಂಗೆ ಹುಷಾರಿಲ್ಲ ಅಂದಳವ್ವ. ನಮ್ಮಂತ ಬಡವರಿಗೆ

ಆ ಯಮ್ಮ ಬರ್ತಾಳಾ? ನಿಮ್ದಮ್ಮಯ್ಯ ಇಕೊ! ನಿಮ್ಮ ಪಾದ ಹೊರ್ತೇನೆ, ಈಗ ನೀವೇ ನನ್ನ ದೇವರು, ದಯಮಾಡಿ ಅವ್ವ" ಎಂದು ಅಂಗಲಾಚಿದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೨೫೦) ಇಂತಹ ವೈದ್ಯಕೀಯ ವಾತಾವರಣ ಗ್ರಾಮೀಣ ಆರೋಗ್ಯ ಕೇಂದ್ರಗಳಲ್ಲಿ ಹೇರಳವಾಗಿ ಕಂಡುಬರುತ್ತವೆ.

ಗ್ರಾಮೀಣ ಸಮಾಜದಲ್ಲಿ ರಾಜಕೀಯ ವ್ಯಕ್ತಿಗಳ ಬೂಟಾಟಿಕೆಯ ಚಟುವಟಿಕೆಗಳು ಸಾಕಷ್ಟು ಕಂಡು ಬರುತ್ತವೆ. ವ್ಯಕ್ತಿಯ ಪ್ರತಿಷ್ಠೆಯನ್ನು ಮೆರೆಯುವುದಕ್ಕಾಗಿ ರಾಜಕೀಯ ವ್ಯಕ್ತಿಗಳು ಕಛೇರಿ ಕಟ್ಟಡಗಳನ್ನು ಉದ್ಘಾಟಿಸುತ್ತಾರೆ ಅಥವಾ ಅನೇಕ ಕಟ್ಟಡಗಳಿಗೆ ಅಸ್ತಿಭಾರ ಶಿಲೆಯನ್ನು ಹಾಕುತ್ತಾರೆ. ಈ ಮೂಲಕ ಶಂಕುಸ್ಥಾಪನೆಯ ಬೆಡಗನ್ನು ಮೆರೆಯುತ್ತಾರೆ. ಇದು ಒಂದು ದಿನದ ಚಟುವಟಿಕೆಯಾಗಿ ನಂತರದಲ್ಲಿ ಅದೇ ರಾಜಕೀಯ ವ್ಯಕ್ತಿಗಳ ಅಲಕ್ಷ್ಯದಿಂದ ಮರೆತ ಘಟನೆಯಾಗಿ ಶಂಕುಸ್ಥಾಪನೆಯ ಕಲ್ಲಿನಿಂದ ಹೇಗೆ ದುರಂತ ಸಂಭವಿಸುತ್ತದೆ ಎಂಬುದನ್ನು 'ಕಮ್ಮಾರ ವೀರಭದ್ರಾಚಾರಿ' ಕೃತಿಯ ಉದಾಹರಣೆಯ ಮೂಲಕ ಗೊರೂರವರು ತಿಳಿಸುತ್ತಾರೆ. ಕಾಳ ತನ್ನ ಮಗಳ ಮದುವೆಯ ಬಟ್ಟೆಯನ್ನು ತರಲು ಹಾಸನಕ್ಕೆ ಹೋಗಿ ರಾತ್ರಿ ಹಿಂತಿರುಗುವಾಗ ಗುಡ್ಡದ ಹಳ್ಳದ ಹತ್ತಿರ ಅವನ ಎತ್ತಿನ ಗಾಡಿ ಶಂಕುಸ್ಥಾಪನೆಯ ಕಲ್ಲಿಗೆ ತಾಗಿ ಉರುಳುತ್ತದೆ. ಆಗ ಕಾಳ ಶಂಕುಸ್ಥಾಪನೆಯ ಕಲ್ಲನ್ನು ಕುರಿತು ಆಡುವ ಮಾತು "ಶಂಕು ಸ್ಥಾಪನೆಯಂತೆ ಶಂಖು ಸ್ಥಾಪನೆ, ಇವನ ತಲೆ, ಶಂಖ ಸ್ಥಾಪನೆ! ಶಂಖ ವಾದ್ಯ ಸ್ಥಾಪನೆ!" ಎಂದು ಕಿರುಚಿದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪;ಪು.೯೮) ಇಂತಹ ದುರ್ಘಟನೆಗಳು ಗ್ರಾಮೀಣ ಪ್ರದೇಶದಲ್ಲಿ ಬಹಳ ಸಾಮಾನ್ಯ. ಇದಕ್ಕೆ ಪರಿಹಾರವಿಲ್ಲವೆಂಬಂತೆ ಗೊರೂರವರು ಇಂಥಹ ಘಟನೆಗಳ ಹಿನ್ನೆಲೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ವಸಾಹತುಶಾಹಿ ಅಧಿಕಾರವಿದ್ದಾಗ ಬ್ರಿಟಿಷ್ ಅಧಿಕಾರಿಗಳು ಗ್ರಾಮಸಮಾಜದ ಮೇಲೆ ತೋರಿಸುತ್ತಿದ್ದ ದವಲತ್ತು ಕ್ರೌರ್ಯ ಮಿತಿಮೀರಿತ್ತು. ಮಾನವೀಯತೆಯನ್ನು ಮರೆತು ಹಿರಿಯ ಅಧಿಕಾರಿಗಳು ವರ್ತಿಸುತ್ತಿದ್ದರು. ಕಂದಾಯ ಇಲಾಖೆಯಲ್ಲಿ ಶ್ಯಾನುಭೋಗರು ಹಿರಿಯ ಅಧಿಕಾರಿಗಳಿಗೆ ಅತಿ ಹೆಚ್ಚಾಗಿ ಅಂಜಿ ತಲೆಬಾಗಬೇಕಿತ್ತು. ಅಮಲ್ದಾರರು ಹೆಚ್ಚಿನ ಬಡ್ತಿಯನ್ನು ಪಡೆಯಲು ಕಂದಾಯ ವಸೂಲಿಯಲ್ಲಿ ಹೆಚ್ಚಿನ ಪ್ರಗತಿಯನ್ನು ತೋರಿಸಲೇಬೇಕಾಗಿತ್ತು. ಇದಕ್ಕಾಗಿ ಅಮಲ್ದಾರರು ಶ್ಯಾನುಭೋಗರ ಮೇಲೆ ಹೇರುತ್ತಿದ್ದ ಒತ್ತಡ ತೋರಿಸುತ್ತಿದ್ದ ದೌರ್ಜನ್ಯ ಅತಿ ಕ್ರೂರವಾಗಿತ್ತು. ಕಂಪನಿಯ ಅಧಿಕಾರಿಗಳಿಗೆ ಕಂದಾಯ ವಸೂಲಿ ಒಂದೇ ಮುಖ್ಯ ಗುರಿಯಾಗಿತ್ತು. ಅಮಲ್ದಾರರು ಹಿರಿಯ ಅಧಿಕಾರಿಗಳ ಆದೇಶಕ್ಕೆ ತಲೆಬಾಗಿ ಶ್ಯಾನುಭೋಗರನ್ನು ರೈತರನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದರು. ಕಂದಾಯದ ವಸೂಲಿಗಾಗಿ ರೈತನ ಬೆಳೆಯನ್ನು ಪೂರ್ಣವಾಗಿ ಕಟಾವು ಮಾಡಿಸಿ ಹರಾಜು ಹಾಕುತ್ತಿದ್ದರು. "ಕಂದಾಯ ವಸೂಲಿ ಎಂದರೆ ಅಮಲ್ದಾರರ ಪಾಲಿಗೆ ಮಹಮ್ಮದ್ ಬಿನ್ ತೊಗಲಕ್ಕನ ದರ್ಬಾರು. ಅವನು ಹೇಗೆ ಜನರನ್ನು ಬೇಟೆಯಾಡುತ್ತಿದ್ದನೆಂದು ಚರಿತ್ರೆಕಾರರು ಹೇಳುತ್ತಾರೋ, ಅಮಲ್ದಾರ್ ಆಕಾಶರಾಯರ ಕಡೆಯ ಅಧಿಕಾರಿಗಳೂ ಹಾಗೆ ಜನರನ್ನು

ಬೇಟೆಯಾಡುತ್ತಿದ್ದರು. ಸರ್ಕಾರದ ದೃಷ್ಟಿಯಲ್ಲಿ ಕಂದಾಯ ವಸೂಲಿ ಒಂದು ಯುದ್ಧ ಕಾಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೫;ಪು.೩೩) ದನ ಹರಾಜು ಮಾಡುವುದು, ಮನೆ ಹಂಚನ್ನು ಕೆಳಗೆ ಇಳಿಸುವುದು ಸರ್ಕಾರದ ಕಾನೂನಿನ ರೀತಿಯಲ್ಲಿ ನಿಷೇಧವಾಗಿದ್ದರು ಕೇವಲ ತಮ್ಮ ಬಡ್ತಿಯ ಸಲುವಾಗಿ ಅಮಲ್ದಾರರು ಈ ಕೆಲಸಗಳನ್ನು ನಿಷ್ಕರುಣೆಯಿಂದ ಮಾಡುತ್ತಿದ್ದರು. ಅಧಿಕಾರಿಗಳ ಈ ವರ್ತನೆಯನ್ನು ಕಂಡಾಗ ಮಹಮ್ಮದ್ ಬಿನ್ ತೊಗಲಕ್ಕನ ಹುಚ್ಚು ದರ್ಬಾರು ಎಂದು ಗೊರೂರರವರು ವರ್ಣಿಸಿರುವುದು ಅರ್ಥವತ್ತಾಗಿದೆ. ಈ ದೃಷ್ಟಿಯಲ್ಲಿ ಸರ್ಕಾರಿ ಅಧಿಕಾರಿಗಳಿಂದ ಗ್ರಾಮಸ್ಥರು ಅನುಭವಿಸಿದ ನೋವು ಅಸಹನೀಯವಾದದ್ದು ಎಂಬ ಮಾತು ಪೂರ್ಣಸತ್ಯ.

ಕಂದಾಯ ವಸೂಲಿ ಸಮಯದಲ್ಲಿ ಸರ್ಕಾರಿ ಅಧಿಕಾರಿಗಳು ನಡೆದುಕೊಳ್ಳುತ್ತಿದ್ದ ರೀತಿ ಕ್ರೌರ್ಯವಷ್ಟೇ ಅಲ್ಲದೆ ಅತಿ ದರೋಡೆಯು ಆಗಿತ್ತು ಎಂಬುದನ್ನು ಹೇಳುವಾಗ 'ಮೆರವಣಿಗೆ' ಕೃತಿಯಲ್ಲಿ ಕಂಡುಬರುವ ಈ ಮಾತುಗಳು ಅತ್ಯಂತ ಗಮನಾರ್ಹವಾದದ್ದು. "ಶ್ಯಾನುಭೋಗ ಪಟೇಲ ಅಮಲ್ದಾರ ಎಲ್ಲರೂ ಒಂದಾಗಿ ಅವನನ್ನು ಮಟ್ಟ ಹಾಕುತ್ತಾರೆ - ಎಲ್ಲರೂ ಒಟ್ಟಾಗಿ ಅವನ ಉಳುವ ಎತ್ತನ್ನು ಉಣ್ಣುವ ರಾಗಿಯನ್ನು ಕರೆಯುವ ಹಸುವನ್ನು ಹರಾಜು ಹಾಕಿ, ಕಂದಾಯವನ್ನು ಒಂದು ಗಳಿಗೆಯೂ ವಾಯದೆ ಕೊಡದೆ ವಸೂಲ್ಮಾಡುತ್ತಾರೆ. ಈ ಕಾರಣದಿಂದ ಯಾವ ರೈತನಿಗೂ ಅಧಿಕಾರಿಗಳಲ್ಲಿ ನಂಬಿಕೆಯೂ ವಿಶ್ವಾಸವೂ ಉಂಟಾಗುವುದಿಲ್ಲ. "ಇದೊಂದು ದರೋಡೆಗಾರರ ಗುಂಪು. ಒಬ್ಬೊಬ್ಬನ ಕೈಯಲ್ಲಿ ಒಂದೊಂದು ಚೀಲ ಇರುತ್ತದೆ. ಅವರವರಿಗೆ ದೊರೆತಷ್ಟು ಅವರವರು ತುಂಬಿಕೊಂಡು ಹೋಗುತ್ತಾರೆ. ಶ್ಯಾನುಭೋಗನ ಚೀಲ ಸಣ್ಣದು. ಅಮಲ್ದಾರ್ರ ಚೀಲ ದೊಡ್ಡದು. ಡೈಪ್ಯುಟಿ ಕಮಿಶನರ ಚೀಲ ಅದಕ್ಕೂ ದೊಡ್ಡದು". (ಅದೇ; ಪು.೪೧) ಗೊರೂರರವರು ಇಲ್ಲಿ ಸರ್ಕಾರಿ ಅಧಿಕಾರಿಗಳ ದರೋಡೆಯ ರೀತಿಯನ್ನು ನಿರೂಪಿಸಿರುವ ಮಾತುಗಳಲ್ಲಿ ಮೇಲುನೋಟಕ್ಕೆ ವ್ಯಂಗ್ಯವನ್ನು ಗುರುತಿಸಿ ನಕ್ಕರೂ ಸಹ ಆ ಮಾತುಗಳ ಅಂತರಾರ್ಥದಲ್ಲಿ ಅಡಗಿರುವ ನೋವು ನಮ್ಮನ್ನು ಖಿನ್ನಮಸ್ಕರನ್ನಾಗಿಸುತ್ತದೆ.

ಗ್ರಾಮಸಮಾಜದಲ್ಲಿ ಶ್ಯಾನುಭೋಗನ ಪಾತ್ರ ಅತ್ಯಂತ ಮುಖ್ಯವಾದದ್ದು. ಹಳ್ಳಿಯ ಎಲ್ಲ ವ್ಯಕ್ತಿಗಳ ಜಮೀನಿನ ಜಾತಕ ಇವನಲ್ಲಿರುತ್ತದೆ. ಜಮೀನಿನ ಒಡೆಯನಿಗೆ ತನ್ನ ಜಮೀನಿನ ಬಗ್ಗೆ ಪೂರ್ಣ ಮಾಹಿತಿ ಇರದಿದ್ದರು ಊರಿನ ಶ್ಯಾನುಭೋಗನಿಗೆ ಎಲ್ಲ ಮಾಹಿತಿಯು ತಿಳಿದಿರುತ್ತದೆ. ಸರ್ಕಾರದ ಕಂದಾಯವನ್ನು ವಸೂಲು ಮಾಡಲು ಶ್ಯಾನುಬೋಗನೆ ಪ್ರಧಾನ ವ್ಯಕ್ತಿಯಾಗಿ ಇರುತ್ತಿದ್ದನು. ಈತನು ಗ್ರಾಮದ ಜನರಲ್ಲಿ ಕಂಡುಬರುವ ಒಳ ಜಗಳಗಳನ್ನು ನ್ಯಾಯ ಸಮ್ಮತವಾಗಿ ಪರಿಹರಿಸಿ ಊರಿನಲ್ಲಿ ಸೌಹಾರ್ದ ವಾತಾವರಣ ಮೂಡಿ ಬರಲು ಸಹಾಯಕ ವ್ಯಕ್ತಿಯಾಗಿದ್ದನು. ಹೀಗೆ ಶ್ಯಾನುಭೋಗ ಗ್ರಾಮದವರ ಪಾಲಿಗೆ ಅಧಿಕಾರಿಯೂ ಆಗಿ ಹಿತೈಷಿಯೂ ಆಗಿದ್ದನು. ಗೊರೂರರವರು ಶ್ಯಾನುಭೋಗರನ್ನು 'ತಳದ ತಾಯಿ' ಎಂದು ಕರೆದಿದ್ದಾರೆ. ಶ್ಯಾನುಭೋಗ ಗ್ರಾಮವನ್ನು ತನ್ನ ಮನೆಯಾಗಿ ಇಟ್ಟುಕೊಂಡಿದ್ದನು.

ಈತ ಹಳ್ಳಿಯಲ್ಲಿ ಅನಭಿಷಿಕ್ತ ರಾಜನಾಗಿ ಇದ್ದನು. ಹಳ್ಳಿಯ ಪ್ರಗತಿಗೆ ರೈತರ ಕ್ಷೇಮಕ್ಕೆ ಶ್ಯಾನುಭೋಗರು ಕೊಡುತ್ತಿದ್ದ ಸಹಕಾರ ವಿಶೇಷವೆಂದೇ ಹೇಳಬಹುದು. ಇಂದು ಗ್ರಾಮಸಮಾಜದಲ್ಲಿ ಶ್ಯಾನುಭೋಗರಿಗೆ ಬದಲಾಗಿ ಆ ಸ್ಥಾನಕ್ಕೆ ಸರ್ಕಾರ ಬೇರೆ ಅಧಿಕಾರಿಯನ್ನು ನಿಯಮಿಸಿದೆ. "ಇವರಲ್ಲಿ ಹಿಂದಿನ ಕಾಲದ ಶ್ಯಾನುಭೋಗ ಪಟೇಲರ ಸೇವಾ ಬುದ್ಧಿ ಇಲ್ಲ. ಪ್ರಾಮಾಣಿಕ ಸರ್ಕಾರಿ ಅಧಿಕಾರಿಗಳ ಕಾರ್ಯ ದಕ್ಷತೆ, ಶಿಸ್ತು, ಶ್ರದ್ಧೆ ಇಲ್ಲ. ಇವರಿಗೆ ಯಾವ ಲೆಕ್ಕವೂ ಪವಿತ್ರವಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪;ಪು.೧೩) ಶ್ಯಾನುಭೋಗರ ಬಗ್ಗೆ ಗೊರೂರವರು ಕೊಟ್ಟಿರುವ ಈ ಅಭಿಪ್ರಾಯ ಉಚಿತವಾಗಿದೆ.

ಗ್ರಾಮೀಣ ಸಮಾಜದಲ್ಲಿ ಯಾವ ಒಂದು ಕುಟುಂಬಕ್ಕೆ ಕಂಟಕ ಒದಗಿ ಬಂದರೂ ಊರಿವನರೇ ಸೇರಿ ಸಂಕಟವನ್ನು ಪರಿಹರಿಸುವದು ವಿಶೇಷ ಸಂಗತಿಯಾಗಿದೆ. ಇದಕ್ಕೆ ಉದಾಹರಣೆಯನ್ನು 'ವೈಯಾರಿ' ಕಥಾ ಸಂಕಲನದ 'ಬೂತಯ್ಯನ ಮಗ ಅಯ್ಯು' ಕತೆಯ ಮೂಲಕ ತಿಳಿಯಬಹುದು. ಅಯ್ಯುವಿನ ಕುಟುಂಬ ಪ್ರವಾಹದಲ್ಲಿ ಬಲಿ ಆಗಬೇಕಿತ್ತು. ಆ ಸಂದರ್ಭದಲ್ಲಿ ಗುಳ್ಳ ಅಯ್ಯುವಿನ ಕುಟುಂಬವನ್ನು ಕಾಪಾಡುತ್ತಾನೆ. ಅಷ್ಟೇ ಅಲ್ಲದೆ ಅಯ್ಯುವಿನ ಬಗ್ಗೆ "ಬೇಕಾದ್ದು ಬರಲಿ ಅಯ್ನೋರು ಆತ್ಕೊತಾರೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೪೮) ಎಂದು ಅಯ್ಯುವಿನ ಬಗ್ಗೆ ಮೆಚ್ಚುಗೆಯ ಮಾತನ್ನು ಆಡುತ್ತಾರೆ. ಒಳ್ಳೆಯ ವ್ಯಕ್ತಿಗಳು ಹಳ್ಳಿಯ ಸಾಮಾನ್ಯ ವ್ಯಕ್ತಿಗಳ ಮನಸ್ಸನ್ನು ಪರಿವರ್ತಿಸಬಲ್ಲರು ಎಂಬುದನ್ನು ಸಹ ಅಯ್ಯುವಿನ ವ್ಯಕ್ತಿತ್ವದಲ್ಲಿ ಗುರುತಿಸಬಹುದು. ಗ್ರಾಮಸಮಾಜದಲ್ಲಿ ದ್ವೇಷವನ್ನು ಒಳ್ಳೆಯತನದಿಂದ ಗೆಲ್ಲಲು ಸಾಧ್ಯವಿದೆ ಎಂಬ ಅಂಶ ಗೊರೂರವರ ಕತೆಯ ಮೂಲಕ ಸಾಬೀತಾಗಿದೆ.

ಗ್ರಾಮಸಮಾಜದ ವ್ಯಕ್ತಿಗಳಲ್ಲಿ ಕಾಣುವ ಔದಾರ್ಯದ ಭಾವನೆಗಳು ಎಷ್ಟು ಚಿತ್ತಾಕರ್ಷಕವಾಗಿದೆಯೋ ಅಷ್ಟೇ ಚಿರಸ್ಮರಣೀಯ, ಅನುಕರಣೀಯ ಅಂಶವೂ ಆಗಿದೆ. 'ವೈಯಾರಿ' ಕೃತಿಯಲ್ಲಿ ಹಾವಿನ ಅಯ್ಯ ಉತ್ತಮ ಸಾಕ್ಷಿಯಾಗಿದ್ದಾನೆ. ಇವನಿಗೆ ಹಾವಿನ ವಿಷದವೈದ್ಯ ಚೆನ್ನಾಗಿ ಗೊತ್ತಿತ್ತು. ಈತನಿಗೆ ಮಕ್ಕಳಿಲ್ಲದಿದ್ದರು ಹಾವಿನ ವಿಷಕ್ಕೆ ಬಲಿಯಾಗಬೇಕಾಗಿದ್ದ ಅನೇಕ ಮಕ್ಕಳನ್ನು ತನ್ನ ವಿದ್ಯೆಯ ಮೂಲಕ ಉಳಿಸಿದ್ದಾನೆ. ಆತ ಹೆಮ್ಮೆಯಿಂದ "ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಲ್ಲದಿದ್ದರೇನು? ದೇವರ ದಯದಿಂದ ನಾನು ಹಾವು ಕಡಿದ ಹದಿನಾಲ್ಕು ಮಕ್ಕಳನ್ನು ಉಳಿಸಿದ್ದೇನೆ. ಅವರೇ ನನ್ನ ಮಕ್ಕಳು. ಪ್ರತಿಯೊಂದು ಮಗುವನ್ನು ಉಳಿಸಿದಾಗಲೂ ಕೂಡ, ಇವನೊಬ್ಬ ನನ್ನ ಮಗ ಎಂಬ ಭಾವನೆ ನನ್ನ ಮನಸ್ಸಿನಲ್ಲಿ ದೃಢವಾಗದೆ ಇಲ್ಲ". (ಅದೇ; ಪು. ೧೬೮) ಈ ಮಾತುಗಳಲ್ಲಿ ನಾವು ವ್ಯಕ್ತಿಯ ಹಿರಿಯ ಗುಣವನ್ನು ಗುರುತಿಸಬಹುದು.

ನಗರ ಜೀವನದ ಕುಟುಂಬಗಳಲ್ಲಿ ಬಿರುಕು ಮೂಡಿದಾಗ ಅವರಲ್ಲಿ ಮತ್ತೆ ಮೈತ್ರಿಯನ್ನು ಕಾಣುವುದು ಕಷ್ಟ. ದ್ವೇಷ ಅಸೂಯೆಗಳ ಕಾರಣ ಆಗುವುದರ ಜತೆಗೆ ಪೊಳ್ಳು ಪ್ರತಿಷ್ಠೆಗಳು ನಗರ ಕುಟುಂಬಗಳ ಸುಖ ಶಾಂತಿಯ ಬಿರುಕಿಗೆ ಕಾರಣವಾಗುತ್ತದೆ. ಇಂತಹ ಕುಟುಂಬಗಳ ವಾತಾವರಣವನ್ನು ತಿಳಿಗೊಳಿಸಲು ಕಷ್ಟ ಎನ್ನುವುದಕ್ಕಿಂತ ಅಸಾಧ್ಯ ಎನ್ನುವುದೇ ಬಹುಪಾಲಿನ ಸತ್ಯಾಂಶವಾಗುತ್ತದೆ. ಹಳ್ಳಿಯ

ಜನ ಮೂಢರಾದರು ಮುಗ್ಧರು. ಅವರ ಹೃದಯದ ಈ ಮುಗ್ಧತೆ ಅವರನ್ನು ತಪ್ಪಿನಿಂದ ಬೇಗ ಎಚ್ಚರಗೊಳಿಸುವುದರಲ್ಲಿ ಸಫಲವಾಗುತ್ತದೆ. ಗೊರೂರರವರ ಸಾಹಿತ್ಯ ಕೃತಿಗಳಲ್ಲಿ ಗ್ರಾಮಸಮಾಜದ ಸ್ವರೂಪವನ್ನು ವಿಚಾರ ಮಾಡಿದಾಗ ವಿಶ್ಲೇಷಿಸಿದಾಗ ಮೇಲಿನ ಅಂಶವನ್ನು ಯಥಾವತ್ತಾಗಿ ನೋಡಬಹುದು. ಗ್ರಾಮೀಣ ಕುಟುಂಬಗಳಲ್ಲಿ ಕಾಣುವ ಒಡಕಿಗೆ ಉದಾಹರಣೆಯನ್ನು 'ಹೇಮಾವತಿ' ಕೃತಿಯಲ್ಲಿ ಕಂಡು ಬರುವ ರಾಮಣ್ಣ ಪೆರುಮಾಳರ ಸಂಸಾರದ ಸಂಗತಿ ಒಂದು ನಿದರ್ಶನವಾಗಿದೆ. ರಾಮಣ್ಣ ಪೆರುಮಾಳರು ಎರಡನೆಯ ಮದುವೆಯನ್ನು ಮಾಡಿಕೊಂಡ ನಂತರ ಕುಟುಂಬದಲ್ಲಿ ಪಡುವ ಪಾಡು ಅತಿ ದುಷ್ಕರವಾದುದು. ಅವರ ಎರಡನೆಯ ಹೆಂಡತಿ ರಂಗನಾಯಕಿ ಮತ್ತು ಅವಳ ಅಕ್ಕ ಮನೆಯ ಶಾಂತಿಗೆ ಪೂರ್ಣ ಭಂಗ ತರುತ್ತಾರೆ. ರಾಮಣ್ಣ ಪೆರುಮಾಳರ ಮಗಳು ಹೇಮಾವತಿ ಮಲತಾಯಿಯ ಕಾಟದಿಂದ ಸಾಕಷ್ಟು ಬಳಲುತ್ತಾಳೆ. ಅವಳಿಗೆ ಮದುವೆ ಆಗುವುದು ಕಷ್ಟವಾಗುತ್ತದೆ. ಸಂಪ್ರದಾಯದ ಸುಸಂಸ್ಕೃತ ಬದುಕನ್ನು ಬಾಳುತ್ತಿದ್ದ ರಾಮಣ್ಣ ಪೆರುಮಾಳರಿಗೆ ಮನೆಯ ವಾತಾವರಣದಲ್ಲಿ ಬಂದ ಅತಿಥಿಗಳನ್ನು ಸತ್ಕರಿಸುವುದು ಕಷ್ಟವಾಗುತ್ತದೆ. ಇದು ರಾಮಣ್ಣ ಪೆರುಮಾಳರಿಗೆ ತಾಳಿಕೊಳ್ಳಲಾರದ ಮನೋವೇದನೆ ಆಗುತ್ತದೆ. ರಾಮಣ್ಣ ಪೆರುಮಾಳರಿಗೆ ಎರಡನೆಯ ಮದುವೆ ಒರಳು ಕಲ್ಲಿಗೆ ತಲೆ ಉರುಳು ಕೊಟ್ಟಷ್ಟು ವೇದನೆ ಆಗುತ್ತದೆ. ಮನೆ ಬಿಟ್ಟು ಹೋಗುವ ವಿರಕ್ತ ಭಾವನೆ ಬಂದರೂ ರಾಮಣ್ಣ ಪೆರುಮಾಳರು ಹೇಮಾವತಿಯ ಮೇಲಿನ ಪ್ರೀತಿಗಾಗಿ ಸಂಸಾರದ ಸಂಕೋಲೆಯಲ್ಲಿ ಉಳಿಯುತ್ತಾರೆ. ರಾಮಣ್ಣ ಪೆರುಮಾಳರ ಸಂಸಾರದ ಅಶಾಂತಿಗೆ ರಂಗನಾಯಕಿಯ ಅಕ್ಕ ಕಾರಣವಾದಂತೆ ಅವಳ ತಮ್ಮ ರಾಮಸ್ವಾಮಿಯು ಬಹುಮಟ್ಟಿಗೆ ಕಾರಣವಾಗುತ್ತಾನೆ. ರಾಮಸ್ವಾಮಿ ಅಯೋಗ್ಯನಾದರೂ ಹೇಮಾವತಿಯನ್ನು ಪ್ರೀತಿಸುವವಷ್ಟು ಮೂರ್ಖನು ಆಗಿದ್ದನು. ಈ ದುಷ್ಟ ವ್ಯಕ್ತಿಗಳ ಕಾಟದಿಂದ ರಾಮಣ್ಣ ಪೆರುಮಾಳರ ಸಂಸಾರ ಚೇಳು ಕುಟುಕಿದ ಮನೆಯಂತೆ ಅಶಾಂತಿಯ ನೆಲೆಯಾಯಿತು. ರಾಮಣ್ಣ ಪೆರುಮಾಳರು ಹೇಮಾವತಿಯ ವಿವಾಹದ ನಂತರ ಬಹಿಷ್ಕಾರಕ್ಕೆ ಒಳಗಾದ ಮೇಲೆ ದೇಶಾಂತರ ಹೊರಟು ಹೋಗುತ್ತಾನೆ. ಒಟ್ಟಿನಲ್ಲಿ ರಾಮಣ್ಣ ಪೆರುಮಾಳರ ಜೀವನ ದುರಂತದ ಛಾಯೆಯ ಬದುಕಾಗುತ್ತದೆ. ಸುಂದರರಾಜನ ಜತೆಯಲ್ಲಿ ವಿವಾಹವಾಗಿ ಮೊದಲಿಗೆ ಹೇಮಾವತಿ ನೋವನ್ನು ಅನುಭವಿಸಿದ್ದರೂ ಅಂತ್ಯದಲ್ಲಿ ಸುಖವನ್ನು ಕಾಣುತ್ತಾಳೆ. ಸುಂದರರಾಜನು ಸಹ ಹೇಮಾವತಿಗೆ ಯೋಗ್ಯ ವರವಲ್ಲ ಎಂಬುದು ಕತೆಯ ಕೊನೆಯಲ್ಲಿ ಮನವರಿಕೆಯಾಗುತ್ತದೆ. ಒಟ್ಟಿನಲ್ಲಿ 'ಹೇಮಾವತಿ' ಕೃತಿಯಲ್ಲಿ ಭಿನ್ನಮನಸ್ಸಿನ ವ್ಯಕ್ತಿಗಳ ಕಾಟವನ್ನು ಗ್ರಾಮೀಣ ಬದುಕಿನಲ್ಲಿ ಕಾಣಬಹುದು.

ಗ್ರಾಮಸಮಾಜದ ಕುಟುಂಬಗಳ ವ್ಯಕ್ತಿಗಳಲ್ಲಿ ಹಲವು ರೀತಿಯ ಚಟಗಳನ್ನು ಕಾಣಬಹುದು. ಇದು ವ್ಯಕ್ತಿಯ ಚಟವಾದಂತೆ ಸಮೂಹದಲ್ಲಿ ನೋಡುವವರ ಕಣ್ಣಿಗೆ ಹಾಸ್ಯಾಸ್ಪದ ದೃಶ್ಯವಾಗಿರುತ್ತದೆ. 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಸೀನಪ್ಪ ಕಬ್ಬು ಜಗಿಯುವುದು ಒಂದು ರಸಪೂರ್ಣ ಸನ್ನಿವೇಶವಾದರೆ ಮಾದ ಎಲೆ ಅಡಿಕೆ ಚಟದಿಂದ ಪರದಾಡುವ ಘಟನೆ ಮತ್ತೊಂದು ರಸಘಟ್ಟವಾಗಿದೆ.

ಗ್ರಾಮಸಮಾಜದ ಕುಟುಂಬಗಳಲ್ಲಿ ಎಲೆ ಅಡಿಕೆಯ ತೆವಲು ಸರ್ವೇಸಾಮಾನ್ಯ. ಕುಟುಂಬದ ಯಜಮಾನಿ ವಾರಕ್ಕೆ ಒಂದು ದಿನ ಸಂತೆಯಲ್ಲಿ ಎಲೆ ಅಡಿಕೆಯನ್ನು ಕುಟುಂಬದವರಿಗೆಲ್ಲ ಹಂಚಿಕೊಡುವುದು ಸಾಮಾನ್ಯ ಸಂಗತಿಯಾಗಿದೆ. ಅವರೆಲ್ಲರು ತಮ್ಮ ಪಾಲಿನ ಎಲೆ ಅಡಿಕೆಯನ್ನು ಜೋಪಾನವಾಗಿ ಕಾಯ್ದಿಟ್ಟು ಕೊಳ್ಳುವುದು ವಿಶೇಷವಾದ ಸಂಗತಿ. ಅವರು ಎಲೆ ಅಡಿಕೆ ಹಾಕಿಕೊಳ್ಳುವುದನ್ನು ಗೊರೂರರವರು ತಮ್ಮ ಕೃತಿಯಲ್ಲಿ ವರ್ಣಿಸಿರುವ ರೀತಿ ಹೀಗಿದೆ. "ಒಕ್ಕಲಿಗನು ಒಂದೊಂದು ಸಲಕ್ಕೆ ಹಾಕಿಕೊಳ್ಳುವ ಎಲೆ, ಅಡಿಕೆ ಎಷ್ಟು ಗೊತ್ತೆ? ಅರ್ಧ ಎಲೆ ಅರ್ಧ ಗೋಟು ಅಡಿಕೆ; ಮುದಿ ಅಡಿಕೆ. ಆ ಅಡಿಕೆಯನ್ನು ಕಲ್ಲಿನ ಮೇಲಿಟ್ಟು ಇನ್ನೊಂದು ಕಲ್ಲಿನಿಂದ ಶಕ್ತಿಯನ್ನೆಲ್ಲಾ ಬಿಟ್ಟು ಹೊಡೆಯುತ್ತಾನೆ. ಹೀಗೆ ನಾಲ್ಕಾರು ಸುತ್ತಿಗೆಯ ಏಟು ಕೊಟ್ಟು ನಂತರ ಅಡಿಕೆಯು ಅರ್ಧವಾಗುತ್ತದೆ. ಆ ಅರ್ಧವನ್ನು ಬಾಯಿಗೆ ಹಾಕಿಕೊಂಡು, ಕಣ್ಣನ್ನು ಮುಚ್ಚಿ ಹಲ್ಲುಗಳನ್ನು ಬಲವಾಗಿ ಕಡಿದ ಒಡನೆಯೇ ಗೆಜ್ಜಗವನ್ನು ಒಡೆದಂತೆ ಶಬ್ದವಾಗುತ್ತದೆ. ಅವನ ಕಣ್ಣುಗುಡ್ಡೆಯು ಹಾರಿ ಹೋಯಿತೇನೋ ಎಂದು ನಮಗೆ ಅನ್ನಿಸುತ್ತದೆ. ಬಾಯಲ್ಲಿರುವ ಹಲ್ಲುಗಳೆಲ್ಲಾ ಪುಡಿ ಪುಡಿಯಾಗಿರಬೇಕೆಂದು ತೋರುತ್ತದೆ. ಎಷ್ಟೋ ಸಲ ಆ ಸದ್ದನ್ನು ಕೇಳಿ ನಾನು ಗಾಬರಿಯಿಂದ ಸುತ್ತಲೂ ನೋಡಿದುದುಂಟು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು. ೧೨) ಮಾದ ಇಲ್ಲಿ ಎಲೆ ಅಡಿಕೆ ಹಾಕಿಕೊಳ್ಳುವ ವೈಖರಿ ಅವನ ಪಾಲಿಗೆ ಮೋಜಾದರೆ ನೋಡುವವರ ಕಣ್ಣಿಗೆ ರಸಿಕ ನೋಟ ಎಂಬಂತೆ ಗೊರೂರರವರು ಕಲಾತ್ಮಕವಾಗಿ ವರ್ಣಿಸಿದ್ದಾರೆ. ಇಂತಹ ಗ್ರಾಮೀಣ ಜನರ ತೆವಲನ್ನು ಚಟುವಟಿಕೆಯನ್ನು ಯಥಾವತ್ತಾಗಿ ನಿರೂಪಿಸುವುದರಲ್ಲಿ ಲೇಖಕರು ಸಿದ್ಧಹಸ್ತರು ಮತ್ತು ಪರಮ ಉತ್ಸಾಹಿಗಳು. ಕತೆಯ ಸಂದರ್ಭಕ್ಕೆ ಇಂತಹ ನಿರೂಪಣೆ ನೈಜತೆಯ ಸೊಗಸನ್ನು ತುಂಬಿಕೊಡುತ್ತದೆ.

ಗ್ರಾಮೀಣ ಪರಿಸರದಲ್ಲಿ ಕಾಫಿ ಕುಡಿಯುವುದು ಒಂದು ಚಟ ಆದಂತೆ ಒಂದು ಪ್ರತಿಷ್ಠೆಯ ಸಂಗತಿಯೂ ಆಗಿತ್ತು. ಗೊರೂರರವರು 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಕಾಫಿ ಪ್ರತಿಷ್ಠೆಯ ಬಗ್ಗೆ ಆಡುವ ಮಾತುಗಳು ಅತ್ಯಂತ ರಂಜನೀಯವಾಗಿದೆ. ಗೊರೂರಿನಲ್ಲಿ ಪ್ರತಿ ಮನೆಯಲ್ಲಿಯೂ ಕಾಫಿ ಕುಡಿಯುವ ಅಭ್ಯಾಸವಿತ್ತು. ಕೆಲವರ ಪಾಲಿಗಂತೂ ಅದು ಚಟವೇ ಆಗಿತ್ತು. ಆ ಊರಿನ ಹೆಣ್ಣು ಮಕ್ಕಳು ಬೆಳಗ್ಗೆ ಎದ್ದು ತಮ್ಮ ಕೆಲಸವನ್ನು ಪ್ರಾರಂಭ ಮಾಡಬೇಕಾದರೆ ಕಾಫಿ ತಿಂಡಿ ಆಗದ ಹೊರತೂ ಮುಂದಿನ ಕೆಲಸಕ್ಕೆ ಕೈ ಹಾಕುತ್ತಿರಲಿಲ್ಲ. ಹೆಣ್ಣು ಮಕ್ಕಳ ಪಾಲಿಗೆ ಹೀಗೆ ಕಾಫಿ ದಿನದ ಚಟುವಟಿಕೆಗೆ ಚೈತನ್ಯದ ವಸ್ತುವಾಗಿತ್ತು. ಕಾಫಿ ಕುಡಿಯದ ಹೆಣ್ಣು ಮಕ್ಕಳು ಗೊರೂರಿಗೆ ಸೊಸೆಯಾಗಿ ಬಂದರೆ ಅವರಿಗೂ ಕಾಫಿ ಅಭ್ಯಾಸ ಆಗುತ್ತಿತ್ತು. ಗೊರೂರಿನ ಜೋಯಿಸರ ಮನೆಯ ಸೊಸೆ ತನಗೆ ಕಾಫಿ ಅಭ್ಯಾಸವಿಲ್ಲದಿದ್ದರು ಮನೆಯ ಪ್ರತಿಷ್ಠೆಯ ಸಲುವಾಗಿ ಹೊಳೆಯಲ್ಲಿ ಮಿಕ್ಕ ಹೆಣ್ಣುಮಕ್ಕಳ ಜತೆಯಲ್ಲಿ ಆಕೆ ಕಾಫಿ ಕುಡಿದು ಬಂದೆ ಎಂದು ಹೇಳುತ್ತಿದ್ದಳು. ವಾಸ್ತವವಾಗಿ ಜೋಯಿಸರ ಸೊಸೆ ಬೆಳಗ್ಗೆ ಎದ್ದ ತಕ್ಷಣ ತಂಗಳನ್ನಕ್ಕೆ ಮೊಸರು ಉಪ್ಪಿನ ಕಾಯಿ ಹಾಕಿಕೊಂಡು ತಿಂದು ಬರುತ್ತಿದ್ದಳು. ಮಿಕ್ಕ ಹೆಣ್ಣು ಮಕ್ಕಳಿಗೆ ಈ ನಿಜಾಂಶ

ಗೊತ್ತಿದ್ದರು ಜೋಯಿಸರ ಸೊಸೆಯನ್ನು ಕೆದಕುತ್ತಿರಲಿಲ್ಲ. ಜೋಯಿಸರ ಸೊಸೆಯ ತವರುಮನೆಯಲ್ಲಿ ಕಾಫಿ ಕುಡಿಯುವುದು ಒಂದು ಮೈಲಿಗೆಯ ಕೆಲಸ. "ತವರು ಮನೆಯಲ್ಲಿ ಅವಳ ಅಣ್ಣನಿಗೆ ಯಾವತ್ತಾದರೂ 'ಔಷಧಿ' ಎಂದು ಕಾಫಿ ಬೇಕಾದರೆ, ಕೊಟ್ಟಿಗೆ ಒಲೆಯಲ್ಲಿ ಕಾಫಿ ಕಾಸಿ ಆ ಪಾತ್ರೆಗೆ ಮುವ್ವತ್ತೆರಡು ಹುಳಿ ಮತ್ತು ಮುವ್ವತ್ತೆರಡು ಸಗಣಿ ಹಾಕಿದ್ದಲ್ಲದೆ ಒಳಕ್ಕೆ ಉಪಯೋಗಿಸುತ್ತಿರಲಿಲ್ಲವಂತೆ!". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು. ೬೦) ಇದು ಕಾಫಿ ಕುಡಿಯುವವರ ಬಗ್ಗೆ ಮೈಲಿಗೆಯ ಮನೋಧರ್ಮ ಎಂದು ಗೊರೂರವರು ಇಲ್ಲಿ ಗೇಲಿ ಮಾಡಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಹೀಗೆ ಕಾಫಿಯ ವಿಷಯ ಗ್ರಾಮೀಣ ಸಮಾಜದಲ್ಲಿ ಪ್ರತಿಷ್ಠೆಯ ವಿಷಯವೂ ಆಗಿತ್ತು, ಚಟವೂ ಆಗಿತ್ತು ಹಾಗೂ ಮೈಲಿಗೆಯ ಸಂಗತಿಯು ಆಗಿತ್ತು ಎಂಬುದನ್ನು ಗೊರೂರವರು ನವುರಾಗಿ ತಿಳಿಸಿಕೊಟ್ಟಿದ್ದಾರೆ.

ಗೊರೂರವರ ಗ್ರಾಮೀಣ ಚಿತ್ರಣಕ್ಕೆ ಅನನ್ಯ ಚೆಲುವಿದೆ. ಗ್ರಾಮೀಣ ಬದುಕಿನ ಅಡಿಪಾಯ ಎಂಬ ಹಿನ್ನೆಲೆಯಿಂದಲೇ ಸೃಷ್ಟಿಯಾಗಿರುವ ಅವರ ಸಾಹಿತ್ಯ ಶ್ರೇಷ್ಠ ದರ್ಜೆಯದು. ಗೊರೂರವರ ಬರವಣಿಗೆ ಹಳ್ಳಿಯನ್ನು ಎಂಥ ರಮ್ಯ ಬಣ್ಣಗಳಲ್ಲಿ ಚಿತ್ರಿಸುತ್ತದೆ ಎಂದರೆ, ಅಲ್ಲಿ ಹಳ್ಳಿಯ ಬದುಕಿನ ಘರ್ಷಣೆಗಳು, ಹಿಂಸೆ, ಬಡತನ ಬಹುಮಟ್ಟಿಗೆ ಕಾಣುವುದೇ ಇಲ್ಲ. ಈ ದೃಷ್ಟಿಯಲ್ಲಿ ಪೂರ್ಣಚಂದ್ರ ತೇಜಸ್ವಿ ಹಾಗೂ ಬೆಸಗರಹಳ್ಳಿ ರಾಮಣ್ಣನವರ ಹಳ್ಳಿಗಳಿಗೂ, ಗೊರೂರವರ ಹಳ್ಳಿಗಳಿಗೂ ಇರುವ ವ್ಯತ್ಯಾಸ ತುಂಬಾ ಮೂಲಭೂತವಾದದ್ದು. ಬೆಸಗರಹಳ್ಳಿ ರಾಮಣ್ಣನವರ ಹಳ್ಳಿ ನಮ್ಮನ್ನು ದಿಗ್ಭ್ರಮೆಗೊಳಿಸುತ್ತವೆ. ಹುತ್ತದೊಳಕ್ಕೆ ಹೊಕ್ಕ ಹಾಗಾಗುತ್ತದೆ. ಆದರೆ ಗೊರೂರವರ ಹಳ್ಳಿ ಹಾಗಲ್ಲ. ಇದಕ್ಕೆ ಉದಾಹರಣೆಯನ್ನು 'ನಮ್ಮೂರಿನ ರಸಿಕರು' ಕೃತಿಯಲ್ಲಿ ಕಂಡುಬರುವ ಪ್ರಕೃತಿ ಚಿತ್ರವನ್ನು ನೋಡಬಹುದು.

ಗೊರೂರವರ ಗ್ರಾಮಸಮಾಜದಲ್ಲಿ ಬಡತನ, ದಬ್ಬಾಳಿಕೆ, ಹಿಂಸೆ, ಶೋಷಣೆ, ಘರ್ಷಣೆ ಕಂಡು ಬರುವುದು ಕಡಿಮೆ ಎಂಬ ಪ್ರಶ್ನೆ ಓದುಗನನ್ನು ಕಾಡುವುದು ಸಹಜವಾಗಿದೆ. ಈ ಪ್ರಶ್ನೆಗೆ ಗೊರೂರವರೇ ಕೊಡುವ ಉತ್ತರ ಹೀಗಿದೆ, "ಹಳ್ಳಿಗಳಲ್ಲಿ ಘರ್ಷಣೆಯ ಅರಿವು ಇತ್ತು. ಆದರೆ ಈಗಿನವರಂತೆ ಒಂದು ತತ್ವಕ್ಕೆ ಬಿದ್ದು ಅದನ್ನು ಅತಿಶಯ ಮಾಡಲಿಲ್ಲ. ಹಳ್ಳಿಗಳಲ್ಲಿ ಬರೀ ಘರ್ಷಣೆ ಇದ್ದರೆ ಎರಡು ಸಾವಿರ ವರ್ಷಗಳಿಂದ ಅವು ಬದುಕಿರುತ್ತಿರಲಿಲ್ಲ. ಈಗಿನವರಿಗೆ ಹಳ್ಳಿ ಹಾಗೆ ಕಂಡಿದೆ ಅಷ್ಟೇ. ಕೆಟ್ಟಿದ್ದನ್ನು ನೋಡಲಿಲ್ಲ ಅಂತಲ್ಲ, ಕೆಟ್ಟಿದ್ದನ್ನೇ ಹುಡುಕುತ್ತಾ ಹೋಗಲಿಲ್ಲ. ಈಗಿವನರ ಹಳ್ಳಿ ಕ್ಷಯರೋಗದ ಆಸ್ಪತ್ರೆ ಇದ್ದಹಾಗೆ, ಆದರೆ ಹಳ್ಳಿಗಳ ಬದುಕಿನಲ್ಲಿ ದೇವರಿಗೂ ಶಯನೋತ್ಸವ ಇಟ್ಟಿದ್ದಾರೆ. ದೇವರನ್ನು ಹೀಗೆ ತೋರಿಸುವುದು ತುರುಕರಿಗೆ ವಿರೋಧ ತಾನೆ. ಆದರೆ ಸಾಬರ ಹೆಂಗಸರು ಕೂಡಾ ಇದನ್ನು ಎಂಜಾಯ್ ಮಾಡೋರು. ಏನಯ್ಯಾ ಇದು ಅಂತ ಕೇಳಿದರೆ, ನಮ್ಮದು ಇಲ್ಲಿ ಯಾವ ಉತ್ಸವಾನು ಇಲ್ವಲ್ಲ, ಅದಕ್ಕೆ ಇರೋದನ್ನೇ ಎಂಜಾಯ್ ಮಾಡ್ತೀವಿ ಅನ್ನೋರು ನಮ್ಮ ಹಳ್ಳಿ ಅಷ್ಟು ಕೆಟ್ಟಿದ್ದರೆ, ನಮ್ಮ

ಜನ ಅಲ್ಲಿ ಬದುಕ್ತಾ ಇದ್ರು ಸ್ವಾಮಿ. ನಮ್ಮ ಊರಿನ ಇತಿಹಾಸದಲ್ಲಿ ೭-೮ ಖೂನಿ ಆಗಿರಬಹುದು ಆದರೆ ಬೆಂಗಳೂರಿನಲ್ಲಿ? ಕೋರ್ಟುಗಳಿಂದ ಆಗಿರೊ ನಷ್ಟ ಜಾತೀಯತೆಯಿಂದ ಆಗಿಲ್ವಲ್ಲ. ನಮ್ಮ ಆಧುನಿಕರು ಹಳ್ಳಿಯಲಿರೋ ಕೆಟ್ಟದ್ದಕ್ಕೂ ಅತಿಶಯೋಕ್ತಿ ಮಾಡ್ತಾ ಇದ್ದಾರೆ. ಗ್ರಾಮಾಂತರ ಬದುಕು ಅಷ್ಟು ಕ್ರೂರವಾಗಿಲ್ಲ, ಪಟ್ಟಣಕ್ಕಿಂತ ಸಾವಿರ ಪಾಲು ಉತ್ತಮ" (ನಾಗರಾಜ್ ಡಿ.ಆರ್;೧೯೮೪;ಪು.೩೬-೩೭) ಎಂಬುದು ಗೊರೂರವರ ಸ್ಪಷ್ಟ ನಂಬಿಕೆಯಾಗಿದೆ.

ಗ್ರಾಮಸಮಾಜದಲ್ಲಿ ಒಂದು ಸಾಮಾನ್ಯ ಹೆಣ್ಣಿನ ಆದರ್ಶವನ್ನು ಗೊರೂರವರು ಗುರುತಿಸಿ ತಮ್ಮ 'ಮರೆಯಾದ ಮಾರಮ್ಮ' ಕೃತಿಯಲ್ಲಿ ದಾಖಲಿಸಿದ್ದಾರೆ. ಹಳ್ಳಿಯವರನ್ನು ವಂಚಿಸಿ ಪೂಜಾರಿ ನಿರ್ವಾಣಿ ಸಾಕಷ್ಟು ಹಣವನ್ನು ಗಳಿಸಿಕೊಂಡಿರುತ್ತಾನೆ. ಈತ ತನ್ನ ಪ್ರೇಯಸಿಯಾದ ಹೊನ್ನಿಗೆ ತನ್ನ ಗಳಿಕೆಯ ಗಂಟನ್ನು ಕೊಟ್ಟು ಎಲ್ಲಿಗಾದರೂ ಓಡಿ ಹೋಗೋಣ ಎಂದು ಹೇಳುತ್ತಾನೆ. ಆಗ ಹೊನ್ನಿ ಆಡುವ ಮಾತು "ಬೇಡಿ ಬೇಡಿ ನೀವು ಕೊಡುವ ಹಣ ನಾನು ಮುಟ್ಟುವುದೂ ಇಲ್ಲ. ಅದು ನೀವು ದೇವರ ಹೆಸರಿನಲ್ಲಿ ಮೋಸ ಮಾಡಿ ಜನರ ಕಷ್ಟ ಕಣ್ಣೀರಿನಿಂದ ಸೆಳೆದ ಹಣ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೫೨) ಎಂದು ಪ್ರತಿಭಟಿಸಿ ನುಡಿಯುತ್ತಾಳೆ. ಇಲ್ಲಿ ಹೊನ್ನಿ ಆದರ್ಶಕ್ಕಾಗಿ ತೋರಿಸುವ ಪ್ರತಿಭಟಿಸುವ ದನಿ ಗಮನಾರ್ಹವಾದದ್ದು. ಹೆಣ್ಣಿನ ಆದರ್ಶದ ನಿಲುವು ದಿಟ್ಟತನಕ್ಕೆ ಹೊನ್ನಿ ಉತ್ತಮ ಉದಾಹರಣೆಯಾಗಿದ್ದಾಳೆ. ಇದೇ ಸಂದರ್ಭದಲ್ಲಿ ಹಳ್ಳಿಯ ಮುಗ್ಧ ವಾತಾವರಣದಲ್ಲಿ ಕಪಟ ಪೂಜಾರಿಗಳು ನಡೆಸಿದ ವಂಚನೆಯು ನಮಗೆ ಬಯಲಾಗುತ್ತದೆ. ಮುಗ್ಧ ವಾತಾವರಣದಲ್ಲಿ ಕಲ್ಮಷದ ಕಸ ಹೇಗೆ ತೂರಿ ಬರುತ್ತದೆ ಎಂಬುದಕ್ಕೆ ನಿರ್ವಾಣಿಯ ಪಾತ್ರ ನಿದರ್ಶನವಾಗಿದೆ.

ಗ್ರಾಮೀಣ ಜನತೆಯಲ್ಲಿ ಧಾರ್ಮಿಕ ಮೌಲ್ಯಗಳನ್ನು ಕಂಡಾಗ ಆಶ್ಚರ್ಯ ಪಡುತ್ತೇವೆ. ಜತೆಗೆ ಆನಂದವನ್ನು ಪಡುತ್ತೇವೆ. ನಗರ ಜೀವನದಲ್ಲಿ ಇಂಥಹ ವಾತಾವರಣ ಕಾಣುವುದು ಅಪರೂಪವೆಂದೇ ಹೇಳಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಗ್ರಾಮೀಣ ಜನ ನಗರದ ನಾಗರಿಕತೆಗೆ ಮೇಲ್ಪಂಕ್ತಿಯಾಗಬೇಕು ಎಂಬುದು ಗೊರೂರವರ ಆಶಯವಾಗಿದೆ. ಗೊರೂರವರ ಕೃತಿಗಳಲ್ಲಿ ಆದರ್ಶ ಜೀವನಕ್ಕೆ ಉತ್ತಮ ಜೀವನಕ್ಕೆ ಮೇಲ್ಪಂಕ್ತಿಯ ಮಾತುಗಳನ್ನು ನೋಡಬಹುದು. ಇಂಥಹ ಧಾರ್ಮಿಕ ಸಾತ್ವಿಕ ಬದುಕನ್ನು ಗ್ರಾಮೀಣ ಜನರಲ್ಲಿ ಕಂಡಾಗ ಇದನ್ನೇ ಗ್ರಾಮೀಣ ಜೀವನದ 'ಸೊಗಡು-ಬನಿ' ಎಂದು ಕರೆಯುವುದು. ಆದರ್ಶ ಜೀವನಕ್ಕೆ ಉದಾಹರಣೆಯಾಗಿ 'ಗೋಪುರದ ಬಾಗಿಲು' ಕಥಾಸಂಕಲನದ 'ಸತ್ಯಂವದ' ಕತೆಯಲ್ಲಿ ನಾರಣಪ್ಪನ ಪಾತ್ರದ ಮೂಲಕ ತಿಳಿಯಬಹುದು. ನಾರಣಪ್ಪ ಒಂದು ಕಾಲಕ್ಕೆ ಜೋಡಿದಾರರಾಗಿದ್ದರು. ಅಂದಿಗೆ ಅವನ ಮನೆಯಲ್ಲಿ ಅನೇಕ ವಿದ್ಯಾರ್ಥಿಗಳು ವಸತಿ ಪಡೆದು ಊಟೋಪಚಾರಗಳೊಂದಿಗೆ ವ್ಯಾಸಂಗ ಮಾಡುತ್ತಿದ್ದರು. ಇಷ್ಟೇ ಅಲ್ಲದೆ ಕಷ್ಟದಲ್ಲಿದ್ದವರಿಗೆ ಕೈ ಎತ್ತಿ ದಾನ ಮಾಡುವುದು ನಾರಣಪ್ಪನ ಹುಟ್ಟು ಗುಣವಾಗಿತ್ತು ಮತ್ತು ಜೀವನದ ಉತ್ಸಾಹದ ಚಟುವಟಿಕೆಯಾಗಿತ್ತು. ನಾರಣಪ್ಪ ನ್ಯಾಯ ನಿಷ್ಠುರ

ವ್ಯಕ್ತಿ. ಜೋಡಿದಾರಿಕೆಯ ಭೂಮಿ ಸರ್ಕಾರದ ಕಾನೂನಿನಿಂದ ರೈತರ ಪಾಲಾದಾಗ ನಾರಣಪ್ಪ ಆರ್ಥಿಕವಾಗಿ ಸಾಮಾನ್ಯ ವ್ಯಕ್ತಿಯಾಗುತ್ತಾನೆ. ನಾರಣಪ್ಪನ ಮಗ ಕೇಶವ ಹಾಗೂ ಹೆಂಡತಿಯ ತಮ್ಮ ವಾಮನ ಜೋಡಿದಾರಿಕೆಯ ಹಕ್ಕಿನ ಭೂಮಿಗಾಗಿ ಕೋರ್ಟು ಹತ್ತುತ್ತಾರೆ. ಆಗ 'ಸತ್ಯಂವದ' ಎಂಬ ಆರ್ಯ ನುಡಿಗೆ ಅನುಗುಣವಾಗಿ ನಾರಣಪ್ಪ ಕೋರ್ಟಿನಲ್ಲಿ ತನ್ನ ಭೂಮಿಯ ಬಗ್ಗೆ ಸತ್ಯದ ಮಾತನ್ನು ಹೇಳುತ್ತಾನೆಯೇ ಹೊರತು ರೈತರಿಂದ ಭೂಮಿಯನ್ನು ಮತ್ತೆ ಪಡೆದುಕೊಳ್ಳಲು ವಂಚನೆಯ ಮಾತನ್ನು ಆಡುವುದಿಲ್ಲ. ಇಂಥಹ ಘಟನೆಯಲ್ಲಿ ನಾರಣಪ್ಪನ ಪ್ರಾಮಾಣಿಕತೆಯನ್ನು ಕಂಡು ನ್ಯಾಯವಾದಿಗಳು ವಿಸ್ಮಿತರಾಗುತ್ತಾರೆ. ಕಳೆದುಕೊಂಡ ಜಮೀನನ್ನು ಪಡೆಯಲು ನಾರಣಪ್ಪ ಅಧರ್ಮ ಹಾದಿಯನ್ನು ಹಿಡಿಯದಿರುವುದು ಇಲ್ಲಿ ಗಮನಿಸಬಹುದಾದ ಅಂಶ. ನಾರಣಪ್ಪ ಬಡವನಾದಾಗ ಅವನ ಮನೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಸಂಕೋಚವಾಗುತ್ತದೆ. ಆಗ ನಾರಣಪ್ಪ ಆಡುವ ಸಾಂತ್ವನದ ಮಾತು "ನಾನು ಕುಡಿಯುವ ಅಂಬಲಿ ನಿಮಗೂ ಸಿದ್ಧವಾಗಿದೆ. ನಿಸ್ಸಂಕೋಚವಾಗಿ ಇರಿ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೪;ಪು.೧೦೩) ಎಂದು ತನ್ನ ದಾನದ ಗುಣದ ದಿಟ್ಟತನವನ್ನು ವ್ಯಕ್ತಪಡಿಸುತ್ತಾನೆ. ನಾರಣಪ್ಪನ ಈ ಗುಣಗಳು ಗ್ರಾಮೀಣ ಜನತೆಯ ಪ್ರಾತಿನಿಧಿಕ ಗುಣಗಳೆಂದು ನಾವು ಪರಿಭಾವಿಸಬಹುದು.

ಜನಪದ ನುಡಿ 'ತಪ್ಪು ಮಾಡ್ದವರು ಯಾರವರೆ; ತಪ್ಪೇ ಮಾಡ್ದವರು ಎಲ್ಲವ್ರೆ' ಎಂಬ ಮಾತನ್ನು ಗೊರೂರವರು ರಂಗೇಗೌಡನ ಪಾತ್ರದ ಮೂಲಕ ನೆನಪು ಮಾಡಿಕೊಡುತ್ತಾರೆ. ರಂಗೇಗೌಡ ಲೋಯರ ಸೆಕೆಂಡರಿ ಪರೀಕ್ಷೆಯಲ್ಲಿ ಆರು ಬಾರಿ ಫೇಲ್ ಆಗುತ್ತಾನೆ. ಆಗ ಅವನು ಮತ್ತೆ ಪರೀಕ್ಷೆಗೆ ಕಟ್ಟುವ ಯೋಚನೆಯನ್ನು ಕೈಬಿಡುತ್ತಾನೆ. ಆದರೆ ಶೀನಪ್ಪನ ಮಾತಿನಂತೆ ಗೊರೂರವರು ಪಾಠ ಹೇಳಿ ರಂಗೇಗೌಡನಿಗೆ ಧೈರ್ಯ ತುಂಬಿ ಪಾಸು ಮಾಡಿಸುತ್ತಾರೆ. ಎಡವದ ಮನುಷ್ಯ ಯಾರು ಇಲ್ಲ, ಎಡವಿದ ಮೇಲೆ ನಾಚಿಕೆ ಪಟ್ಟುಕೊಳ್ಳದೆ ಮರಳಿ ಪ್ರಯತ್ನದಿಂದ ಗೆಲುವನ್ನು ಕಾಣಬೇಕು ಎಂಬ ಅಂಶವನ್ನು ರಂಗೇಗೌಡನ ಪಾತ್ರದ ಮೂಲಕ ತಿಳಿಯಬೇಕಾದ ಪಾಠ.

ಜಾತಿಯಲ್ಲಿ ತಾರತಮ್ಯ ವೈಷಮ್ಯದ ಭಾವನೆ ಹಳ್ಳಿಗಳಲ್ಲಿ ಕಂಡುಬರುವುದಿಲ್ಲ. ಇದು ನಗರ ಮತ್ತು ಪಟ್ಟಣಗಳಲ್ಲಿ ಕಾಣಬಹುದಾದ ಕಲ್ಮಷ ಭಾವನೆಗಳು. ಸೌಹಾರ್ದ ಬದುಕಿನ ನೆಲೆಗಟ್ಟಿನಿಂದ ಗ್ರಾಮೀಣ ಜನ ಸಂಪೂರ್ಣ ಜಾರಿಲ್ಲ ಎಂಬುದು ಗೊರೂರವರ ಅಭಿಪ್ರಾಯವಾಗಿದೆ. ಇಂಥಹ ಸೌಹಾರ್ದಿಕ ಮಧುರ ಬಾಂಧವ್ಯಕ್ಕೆ ಗೊರೂರವರ ಕೃತಿಗಳಲ್ಲಿ ಉದಾಹರಣೆಯನ್ನು ಕಾಣಬಹುದು. 'ಹಳೆಯ ಪಳೆಯ ಮುಖಗಳು' ಕೃತಿಯ 'ಸಂಚಾರಿ ಚಲನಚಿತ್ರಗಳು' ಪ್ರಬಂಧದಲ್ಲಿ ಮುಸಲ್ಮಾನ ರಾಮನ ಪಾತ್ರವನ್ನು ಮಾಡುವ ರೀತಿಯನ್ನು ನೋಡಬಹುದು. ರಾಮನ ಪಾತ್ರಧಾರಿ ಮುಸಲ್ಮಾನನಾದರು ಆತ ಶ್ರದ್ಧೆಯಿಂದ ಅಚ್ಚುಕಟ್ಟಾಗಿ ಪಾತ್ರದ ಅಭಿನಯವನ್ನು ನಿರ್ವಹಿಸುತ್ತಿದ್ದನು. ಎಲ್ಲಿ ರಾಮಾಯಣದ ನಾಟಕ,

ಯಕ್ಷಗಾನ ಸುತ್ತಲ ಹಳ್ಳಿಗಳಲ್ಲಿ ಆದರೂ ಅದೇ ಮುಸಲ್ಮಾನ ಪಾತ್ರಧಾರಿ ಅಭಿನಯಿಸುತ್ತಿದ್ದ. ಗ್ರಾಮೀಣ ಪರಿಸರದಲ್ಲಿ ನಾಟಕ ಕಲಿಯುವಾಗ ಆ ಜನರಲ್ಲಿ ಕಾಣುವ ಒಗ್ಗಟ್ಟು ಸ್ನೇಹ ಜಾತಿ ಮತಗಳ ಭೇದದ ಕಳಂಕದಿಂದ ಮೀರಿ ನಿಂತಿದ್ದನ್ನು ಗಮನಿಸಬಹುದು. ಗ್ರಾಮೀಣ ಜನತೆ ಮೌಲ್ಯಾಧಾರಿತ ಗುಣಗಳಲ್ಲಿ ವರ್ತನೆಯಲ್ಲಿ ಹೇಗೆ ಉತ್ತಮರಾಗಿದ್ದಾರೆ ಎಂಬುದನ್ನು ಗೊರೂರರವರು ಈ ಉದಾಹರಣೆಯ ಮೂಲಕ ನಮ್ಮ ಲಕ್ಷ್ಯಕ್ಕೆ ತಂದಿದ್ದಾರೆ.

ಗ್ರಾಮೀಣ ಜನತೆಯಲ್ಲಿ ಕಾಣಬಹುದಾದ ಅನೇಕ ಉತ್ತಮ ಗುಣಗಳಲ್ಲಿ ಒಂದು - ಗ್ರಾಮೀಣ ಜನರು ಎಂದಿಗೂ ತಮ್ಮ ಹುಟ್ಟು ಊರಿನ ಸವಿ ನೆನಪುಗಳನ್ನು ಮರೆಯಲಾರರು. ಕಾರಣಾಂತರಗಳಿಂದ ಪಟ್ಟಣಗಳಿಗೆ ವಲಸೆ ಹೋಗಿದ್ದರು ಅವರ ಮನಸ್ಸು ತಮ್ಮ ಗ್ರಾಮೀಣ ಸವಿ ಬದುಕನ್ನು ಸದಾ ಮೆಲಕು ಹಾಕುತ್ತಲೇ ಇರುತ್ತದೆ. ಪೇಟೆಯಲ್ಲಿ ವಾಸ ಮಾಡುವ ಗ್ರಾಮೀಣ ಜನರು ಹಬ್ಬ, ಜಾತ್ರೆ, ಸುಗ್ಗಿಯ ಸಲುವಾಗಿ ತಮ್ಮ ಗ್ರಾಮಗಳಿಗೆ ಹಿಂತಿರುಗಿದಾಗ ಅವರಿಗೆ ಮತ್ತೆ ನಗರಗಳಿಗೆ ತೆರಳಲು ಕಷ್ಟ ಎಂಬುದು ಬಹುಮಟ್ಟಿನ ಸುವಿದಿತ ಸತ್ಯ. 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಪೇಟೆಯ ಗುಂಡ ಹಳ್ಳಿಗೆ ಹಿಂತಿರುಗಿದಾಗ ಹಳ್ಳಿಯ ಸುಖಜೀವನ ಅವನ ಮನಸ್ಸನ್ನು ಮಾರುಗೊಳ್ಳುತ್ತದೆ. ಪಟ್ಟಣದ ಯಾಂತ್ರಿಕ ಜೀವನದಿಂದ ಜಡವಾಗಿದ್ದ ಅವನ ಜೀವನಕ್ಕೆ ಚೈತನ್ಯದ ಕಳೆ ತನ್ನ ಹಳ್ಳಿಯಲ್ಲಿ ತುಂಬಿ ಬರುತ್ತದೆ. ನಗರಕ್ಕೆ ಹೊಂದಿಕೊಂಡ ಜನಕ್ಕೆ ಹಳ್ಳಿಯ ಜೀವನ ಹಿಡಿಸುವುದಿಲ್ಲ ಎಂಬ ಮಾತು ಹೇಗೆ ಸತ್ಯವೋ ಹಳ್ಳಿಯ ಬದುಕಿನ ಸವಿಯನ್ನು ಉಂಡಿರುವ ಗ್ರಾಮೀಣ ಜನ ನಗರದಲ್ಲಿದ್ದರೂ ಹಳ್ಳಿಯನ್ನು ಮರೆಯಲಾರರು ಎಂಬ ಅಂಶವನ್ನು ಗೊರೂರರವರು ಈ ಸಂದರ್ಭದಲ್ಲಿ ಸ್ಫುಟಪಡಿಸಿದ್ದಾರೆ. ಇದು ಸಣ್ಣ ವಿಷಯವಾದರು ಅರ್ಥಮಾಡಿಕೊಂಡು ನೆನಪಿಸಿಕೊಂಡಾಗ ಮನ ಮೈನೆವರೇರಿಸುತ್ತದೆ.

ಗ್ರಾಮೀಣ ಸಮಾಜದಲ್ಲಿ ಹೆಣ್ಣು-ಗಂಡಿನ ಪಾತ್ರ ತನ್ನದೇ ಅನನ್ಯತೆಯಿಂದ ಶ್ರೀಸಾಮಾನ್ಯರ ಮನಸ್ಸನ್ನು ಆಕರ್ಷಿಸಿರುತ್ತದೆ. ಇಲ್ಲಿಯ ಹೆಣ್ಣು-ಗಂಡು ತಮ್ಮ ವಯೋಮಾನಕ್ಕೆ ಅನುಗುಣವಾಗಿ ಹಾಗೂ ತಮ್ಮ ಮತ ಜಾತಿಗೆ ಅನುಗುಣವಾಗಿ ಬೆಳೆಯುವ ರೀತಿಯಲ್ಲಿ ವಿಶಿಷ್ಟತೆಯನ್ನು ಗಳಿಸಿಕೊಂಡಿದ್ದಾರೆ. ಇಬ್ಬರಲ್ಲಿಯು ಬದುಕಿನ ದಿಟ್ಟತವನ್ನು ಜೀವನೋತ್ಸಾಹವನ್ನು ಚೆನ್ನಾಗಿ ಗುರುತಿಸಬಹುದು. ಆಡುವ ವಯಸ್ಸಿನಲ್ಲಿ ಮಕ್ಕಳ ನಿರ್ಮಲ ಮನಸ್ಸು ಮೇಲೆದ್ದು ಕಾಣುತ್ತದೆ. ದುಡಿಯುವ ಕಾಲಕ್ಕೆ ಬಂದಾಗ ಹೊಣೆಗಾರಿಕೆಯನ್ನು ಹೊತ್ತ ಹೆಣ್ಣು-ಗಂಡು ಪ್ರತಿ ಹಂತದಲ್ಲಿಯೂ ದುಡಿಮೆಯಲ್ಲಿ ಕೌಶಲ್ಯವನ್ನು ದಿಟ್ಟತನವನ್ನು ವ್ಯಕ್ತಪಡಿಸುತ್ತಾರೆ. ಈ ಕಾರಣದಿಂದಲೇ ಗ್ರಾಮೀಣ ಕುಟುಂಬಗಳಲ್ಲಿ ಹೆಣ್ಣು-ಗಂಡು ಇಬ್ಬರು ಸಹ ಸಮರ್ಥ ವ್ಯಕ್ತಿಗಳು ಎನಿಸಿದ್ದಾರೆ. ನಗರ ಜೀವನದಲ್ಲಿ ಹೆಣ್ಣು-ಗಂಡುಗಳ ಪಾತ್ರ ಇಷ್ಟರಮಟ್ಟಿಗೆ ವೈವಿಧ್ಯಪೂರ್ಣ ಎನಿಸುವುದಿಲ್ಲ. ಪಟ್ಟಣದ ಬದುಕಿನಲ್ಲಿ ನಾವು ಹೆಣ್ಣು ಹಾಗೂ ಗಂಡು ಮಕ್ಕಳಲ್ಲಿ ಬೆಡಗಿನ ಜೀವನವನ್ನು ಕಾಣಬಹುದೇ ಹೊರತು ಅವರ ಬದುಕಿನಲ್ಲಿ ವಾಸ್ತವ 'ಬನಿ'ಯನ್ನು

ಗುರುತಿಸಲಾಗುವುದಿಲ್ಲ. ಈ ದೃಷ್ಟಿಯಿಂದಲೇ ಗ್ರಾಮೀಣ ಪರಿಸರದ ಹೆಣ್ಣು-ಗಂಡು ನಮ್ಮ ಮನಸ್ಸನ್ನು ಅನೇಕ ರೀತಿಯಲ್ಲಿ ಆಕರ್ಷಿಸಿ ಸೆರೆ ಹಿಡಿದು ನಿಲ್ಲಿಸುತ್ತದೆ. ಈ ರೀತಿಯ ವೈಶಿಷ್ಟ್ಯಪೂರ್ಣವಾದ ಬದುಕಿಗೆ ಗ್ರಾಮದ ಪರಿಸರವೇ ಕಾರಣವೆಂದು - ಪ್ರಚೋದನಕಾರಿ ಎಂದು ಗೊರೂರರವರು ತಮ್ಮ ಕೃತಿಗಳಲ್ಲಿ ಸಾಧಿಸಿ ತೋರಿಸಿರುವುದನ್ನು ಕಾಣಬಹುದು. ಗೊರೂರರವರ 'ವೈಯಾರಿ' ಕೃತಿಯ 'ಪುಟ್ಟಮಲ್ಲಿಗೆ' ಕತೆಯಲ್ಲಿ ಹೆಣ್ಣು-ಗಂಡಿನ ಚಿತ್ರಣವನ್ನು ಸಹಜವಾಗಿ ನೋಡಬಹುದು. ಗ್ರಾಮಸಮಾಜದ ಹೆಣ್ಣು-ಗಂಡು ಸಂಸಾರಕ್ಕೆ ಕೀರ್ತಿ ಕಳಶವಾದರೆ ಸಮಾಜಕ್ಕೆ ಅಮೂಲ್ಯ ಶಕ್ತಿಯ ನೆಲೆ ಎಂಬುದು ಲೇಖಕರ 'ಪುಟ್ಟಮಲ್ಲಿಗೆ' ಕತೆಯ ಮೂಲಕ ಅನಾವರಣಗೊಂಡಿದೆ. ಅಸಹಾಯಕ ಪರಿಸ್ಥಿತಿ ಒದಗಿ ಬಂದಾಗ ಹಿಟ್ಟಿಗಾಗಿ ಮತ್ತೊಬ್ಬರಿಗೆ ತಲೆ ತಗ್ಗಿಸದೆ ಬಾಳುವ ರೀತಿಯನ್ನು ನಿಂಗನ ಹೆಂಡತಿ ಮತ್ತು ಪುಟ್ಟ ಮಲ್ಲಿಗೆ ಪಾತ್ರದಲ್ಲಿ ಗುರುತಿಸಬಹುದು. ಬೇಸಾಯ ಕೆಲಸವನ್ನು ಮಾಡುವುದರಲ್ಲಿ ಹೆಣ್ಣು ಮಕ್ಕಳು ಸಹ ಗಟ್ಟಿಗರಾಗಿದ್ದರು. ಪಶುಪಾಲನೆ ಕೆಲಸ ಹೆಣ್ಣು ಮಕ್ಕಳಿಗೆ ಗ್ರಾಮೀಣ ಪರಿಸರದಲ್ಲಿ ಉತ್ಸಾಹದ ಕೆಲಸವೇ ಆಗಿತ್ತು. ಹಳ್ಳಿಯ ಹೆಣ್ಣು ಮಕ್ಕಳು ಶಾರೀರಿಕವಾಗಿ ದೃಢಕಾಯರು ಆರೋಗ್ಯವಂತರು ಆಗಿರುತ್ತಿದ್ದರು. ಹಳ್ಳಿಯ ಹೆಣ್ಣು ಮಕ್ಕಳು ಯಾವ ವಯಸ್ಸಿನಲ್ಲಿಯೂ ಸೋಮಾರಿಗಳಾಗಿ ಉಳಿಯುವುದಿಲ್ಲ. ಅವರ ವಯಸ್ಸಿಗೆ ಅನುಗುಣವಾಗಿ ಬೇಸಾಯದ ಕೆಲಸದಲ್ಲಿ ತಮ್ಮ ಹೊಣೆಗಾರಿಕೆಯನ್ನು ನಗುಮುಖದಿಂದ ಹೊತ್ತು ತೀರಿಸುತ್ತಾರೆ. "ಸರಳದ (ಶರೀರದ) ಬೆವ್ರ ಹರಿಸಿ, ಮಾಡೋರ್‍ಗೆ ಯಾರ್‍ದೇನು ಭಯ, ಯಾರ್‍ದೇನು ಹಂಗು?". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೧೦೫) ಗೊರೂರರವರು ಹಳ್ಳಿಯ ಹೆಣ್ಣು ಮಕ್ಕಳ ಬಗ್ಗೆ ಆಡಿರುವ ಈ ಧೋರಣೆಯ ಮಾತು ಪೂರ್ಣಸತ್ಯ. ಹಳ್ಳಿಯ ಹೆಣ್ಣು ಮಕ್ಕಳಲ್ಲಿ ದುಡಿಮೆಯ ಉತ್ಸಾಹದ ಜತೆಗೆ ಔದಾರ್ಯದ ಗುಣವನ್ನು ಗುರುತಿಸಬಹುದು. ಪುಟ್ಟಮಲ್ಲಿಗೆ ತಾನೇ ಬೆಳೆದಿದ್ದ ತನ್ನ ತೋಟದ ಹೂ ಹಣ್ಣನ್ನು ಬೇರೆಯವರಿಗೆ ಉದಾರವಾಗಿ ಕೈ ಎತ್ತಿ ದಾನ ಮಾಡಿ ಆನಂದಪಡುತ್ತಿದ್ದಳು. ಆ ಹಳ್ಳಿಯ ಹೆಣ್ಣು ಮಗಳು ಮನೆಯ ಹರಿದ ಬಟ್ಟೆಗಳನ್ನು ಹೊಲೆದುಕೊಂಡು ಒಪ್ಪ ಮಾಡಿಕೊಳ್ಳುವುದರಲ್ಲಿ ತೋರಿಸುವ ಜಾಣ್ಮೆ ಹಳ್ಳಿಯ ಹೆಣ್ಣು ಮಕ್ಕಳ ಕುಶಲತೆಗೆ ಸ್ಪಷ್ಟ ಸಾಕ್ಷಿಯಾಗಿದೆ. ಹಳ್ಳಿಯ ಹೆಣ್ಣು ಮಕ್ಕಳು ಊಟದ ಎಲೆಯನ್ನು ಸಿದ್ಧಪಡಿಸುವ ರೀತಿಯೇ ವಿಶಿಷ್ಟವಾದದ್ದು. ಹಬ್ಬ ಹರಿದಿನಗಳಲ್ಲಿ ಅವರು ಹಾಕುವ ರಂಗವಲ್ಲಿಯ ಕೌಶಲ್ಯ ಯಾವ ಚಿತ್ರಗಾರನ ಚಿತ್ರರೇಖಾ ಕೌಶಲ್ಯವನ್ನು ಮೀರಿಸುವುದಾಗಿತ್ತು.

ಗ್ರಾಮೀಣ ಸಮಾಜದಲ್ಲಿ ಗಂಡು, ಹೆಣ್ಣಿನ ಮೇಲೆ ಕ್ರೂರದರ್ಪ ತೋರಿಸುವುದು ಅಪರೂಪ. ಸರಸ ವಿನೋದದ ಮಾತಿನ ಮೂಲಕ ಗಂಡು ಹೆಣ್ಣನ್ನು ತನ್ನ ದುಡಿಮೆಯ ಜತೆಯಲ್ಲಿ ಸೇರಿಸಿಕೊಳ್ಳುವ ಕುಶಲ ರೀತಿಗೆ ಉದಾಹರಣೆಯ ಮಾತಾಗಿ "ನಿನ್ನಾಗಿ ಆರಿಪ್ಪತ್ತು (ಆರು ಇಪ್ಪತ್ತು ಎಂದರೆ ನೂರಿಪ್ಪತ್ತು ರೂಪಾಯಿ) ತೆತ್ತಿಲ್ವೆ, ಗೊಬ್ಬರ ಹೊರೋಕೆ ಬಾ" (ಅದೇ; ಪು. ೧೦೬) ಎಂದು ಪ್ರೀತಿಯಲ್ಲಿ

ಕರೆಯುತ್ತಾನೆ. ಹೆಣ್ಣು- ಗಂಡಿನ ಬದುಕಿನಲ್ಲಿ ಕಾಣುವ ಈ ಸರಸವೇ ಅವರ ಬದುಕಿನ ಬಾಂಧವ್ಯಕ್ಕೆ ಶಕ್ತಿಯೂ ಹೌದು, ಸವಿಯು ಹೌದು ಎಂಬುದನ್ನು ಗೊರೂರವರು ಮನ ತುಂಬಿ ನುಡಿದಿದ್ದಾರೆ. ಹಳ್ಳಿಯ ಹೆಣ್ಣು ಮಕ್ಕಳ ಕೃಷಿಯ ಕೆಲಸ ಅವರ ಪಾಲಿಗೆ ಎಷ್ಟರ ಮಟ್ಟಿಗೆ ಉತ್ಸಾಹದ ಕೆಲಸವೋ ನೋಡುವವರ ಕಣ್ಣಿಗೂ ಅಷ್ಟೇ ಕುತೂಹಲದ ಚಟುವಟಿಕೆಯಾಗಿ ರಂಜಿಸುತ್ತದೆ. ಅದೇ ಕೃತಿಯಲ್ಲಿ ಕಾಣುವ ಚಿತ್ರ ಹೀಗಿದೆ "ಅವರು ಪೈರನ್ನು ಕುಯ್ಯುವುದನ್ನು ನೋಡಿದರೆ, ಅದು ಒಂದು ವಿಧವಾದ ಆಟದಂತೆ ತೋರುವುದೇ ಹೊರತು ಕಷ್ಟವಾದ ಕೆಲಸದಂತೆ ತೋರುವುದಿಲ್ಲ. ಆಗ ಅವರ ನಗುವೇನು, ಉತ್ಸಾಹವೇನು, ತಮ್ಮ ಕಷ್ಟದಿಂದ ಬೆಳೆದ ಪೈರನ್ನು ಕುಯ್ಯುತ್ತಿರುವಾಗ ಉಂಟಾಗುವ ಸ್ವಾವಲಂಬನದ ಹೆಮ್ಮೆಯೇನು? ಭೂಮಿ ತಾಯಿಯೂ ತೋಳ ಬಲವೂ ಇರುವವರೆಗೆ ಹೆದರುವುದಿಲ್ಲವೆಂದುಕೊಳ್ಳುತ್ತಿರುವ ಅವರ ಮುಖದ ಧೈರ್ಯವೇನು! ಹೆದರುವುದಿಲ್ಲವೆಂಬ ಧೈರ್ಯವು ಅವರಿಗೆ ಇರುವಷ್ಟು ಪಟ್ಟಣದ ನಾಗರಿಕರಿಗೆ ಎಲ್ಲಿಂದ ಬಂದೀತು!". (ಅದೇ;ಪು.೧೦೮) ಇಲ್ಲಿ ಹೆಣ್ಣು ಮಕ್ಕಳಿಗೆ ಕೃಷಿ ಚಟುವಟಿಕೆ ಆಟದಷ್ಟು ಆನಂದದಾಯಿಯಾಗಿತ್ತು ಎಂಬುದು ನಮಗೆ ಮನವರಿಕೆಯಾಗುತ್ತದೆ. ಇಂಥಹ ರಸಪೂರ್ಣ ಸನ್ನಿವೇಶಗಳು, ದೃಶ್ಯಗಳು ಗ್ರಾಮಸಮಾಜಕ್ಕೆ ಮಾತ್ರ ಮೀಸಲು.

ಗ್ರಾಮಸಮಾಜದಲ್ಲಿ ಕಾಣುವ ಒಗ್ಗಟ್ಟು ಮೆಚ್ಚುವ ಗುಣವಾಗಿದೆ. ಜಾತ್ರೆ ರಥೋತ್ಸವಗಳಲ್ಲಿ ಎಲ್ಲಾ ಜನರು ಸಹಕಾರವನ್ನು ತೋರಿಸಿ ಊರಿನ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳುತ್ತಾರೆ. ಕೃಷಿ ಸಮಯದಲ್ಲಿ ಅವರು ಪರಸ್ಪರ ಕೂಡಿ ದುಡಿಯುವುದು ಅವರ ಒಗ್ಗಟ್ಟಿನ ಲಕ್ಷಣವಾಗಿದೆ. ಹಬ್ಬ ಹರಿದಿನಗಳಲ್ಲಿ ಒಬ್ಬರ ಮನೆಯ ಮಂಗಳ ಕಾರ್ಯದಲ್ಲಿ ಹತ್ತಾರು ಜನ ಸೇರಿ ಕೆಲಸ ಮಾಡುತ್ತಾರೆ. ಹಳ್ಳಿಯಲ್ಲಿ ಇಂತಹ ಒಗ್ಗಟ್ಟು ಅನಿವಾರ್ಯ ಎನಿಸುತ್ತದೆ. ಈ ಒಗ್ಗಟ್ಟಿನ ಬಲವೇ ಗ್ರಾಮದ ಶ್ರೇಯಸ್ಸಿಗೆ ಮೂಲ ಕಾರಣವೆಂದು ಗೊರೂರವರು ಖಚಿತಪಡಿಸಿದ್ದಾರೆ. ಗ್ರಾಮೀಣ ಜೀವನದಲ್ಲಿ ಗುರುತಿಸಿದ ಈ ಗುಣಗಳು ನಿಜಕ್ಕೂ ವಿಶಿಷ್ಟಪೂರ್ಣವಾಗಿದೆ.

ಗ್ರಾಮೀಣ ಸಮಾಜದಲ್ಲಿ ಕಂಡುಬರುವ ಅನೇಕ ಸಂಪ್ರದಾಯಗಳ ಅನುಸರಣೆಯ ಬಗ್ಗೆ ಗೊರೂರವರು ವ್ಯಕ್ತಪಡಿಸಿರುವ ದೃಷ್ಟಿ ವೈಚಾರಿಕತೆಯ ಹಿನ್ನೆಲೆಯಲ್ಲಿ ಅರ್ಥಪೂರ್ಣ ಎನಿಸುತ್ತದೆ. ಎಲ್ಲ ಸಂದರ್ಭಗಳಲ್ಲಿಯು ವೈಚಾರಿಕತೆ ಸಂಪ್ರದಾಯದ ನಂಬಿಕೆಗಳನ್ನು ಮೆಟ್ಟಿ ನಿಲ್ಲಲ್ಲು ಸಾಧ್ಯವಿಲ್ಲವೆಂಬ ಲೇಖಕರ ಅಂತರಂಗದ ದನಿ ಅವರ ಕೃತಿಗಳಲ್ಲಿ ಕೇಳಿಬರುತ್ತದೆ. ಸಂಪ್ರದಾಯದ ಅನುಸರಣೆ ಎಲ್ಲ ಕಾಲಕ್ಕೂ ಕೆಲವು ಹಂತದಲ್ಲಿ ಅನಿವಾರ್ಯವಾಗಿ ಪಾಲನೆಯಾಗಬೇಕು ಎಂಬುದು ಗೊರೂರವರ ಸ್ಪಷ್ಟ ಅಭಿಮತವಾಗಿದೆ. ಗ್ರಾಮಸಮಾಜದಲ್ಲಿ ವಿಧವಾ ವಿವಾಹ ಅತ್ಯಂತ ಗಹನವಾದ ವಿಷಯವಾಗಿದೆ. ಸಂಪ್ರದಾಯ ದೃಷ್ಟಿಯಲ್ಲಿ ಹೆಣ್ಣು ವಿಧವೆಯಾದರೆ ಆಕೆಗೆ ಮಾಡುವ ಸಂಸ್ಕಾರಗಳು ಮತ್ತು ಆಕೆಯ ಬಂಧು ಬಳಗ ಹಾಗೂ ಸಮಾಜ ಆಕೆಯನ್ನು ನೋಡುವ ದೃಷ್ಟಿ ಅತ್ಯಂತ ಕ್ರೂರವಾಗಿರುತ್ತದೆ. ಜನರ

ಈ ವರ್ತನೆಗೆ ಧರ್ಮದ ಹಿನ್ನೆಲೆಯನ್ನು ಕೊಟ್ಟು ಹೇಳುವುದು ಒಂದು ವಾಡಿಕೆಯಾಗಿದೆ. ಗೊರೂರವರು ಎಲ್ಲ ನವೋದಯ ಸಾಹಿತಿಗಳಂತೆ ವಿಧವೆಯ ಬದುಕನ್ನು ಅನುಕಂಪೆಯ ಭಾವದಲ್ಲಿ ನೋಡಿದ್ದಾರೆ. ಅವಳ ದುರಂತಕ್ಕೆ ಕರ್ಮ ಕಾರಣವಾದರೂ ಅವಳು ಯಾವ ರೀತಿಯಲ್ಲಿಯೂ ಕುಟುಂಬಕ್ಕಾಗಲಿ ಸಮಾಜಕ್ಕಾಗಲಿ ಎಂದೆಂದಿಗೂ ಪಾಪದ ಹೆಣ್ಣಾಗುವುದಿಲ್ಲ. ಅಷ್ಟೇ ಅಲ್ಲದೆ ಅಶುಭದ ಹೆಣ್ಣಂತೂ ಆಕೆ ಅಲ್ಲ. ಗೊಡ್ಡು ಸಂಪ್ರದಾಯಗಳಿಂದ ಆಕೆ ಅನೇಕ ಮಂಗಳಗಳಿಂದ ವಂಚಿತಳಾಗಿದ್ದಾಳೆ ಎನ್ನುವುದು ಕಟು ವಾಸ್ತವ. ವಿಧವೆಯಾದ ಹೆಣ್ಣು ಎಷ್ಟೇ ದಿಟ್ಟ ವ್ಯಕ್ತಿಯಾದರು ಸಂಪ್ರದಾಯದ ಅನೇಕ ಉರುಳಿಗೆ ಬಲಿ ಆಗಲೇಬೇಕು ಎಂಬುದು ನಿರ್ವಿವಾದ ಸತ್ಯ. ಗ್ರಾಮೀಣ ಸಮಾಜದಲ್ಲಿ ವಿಧವೆಯ ಈ ದುಸ್ಥಿತಿಗೆ ಸುಧಾರಣೆಯ ದನಿ ಕೇಳಿಬಂದರೂ ವಾಸ್ತವವಾಗಿ ಸುಧಾರಣೆ ಆಗುತ್ತಿರುವುದು ಅತಿ ಕಡಿಮೆ ಎಂದೇ ಹೇಳಬೇಕು. ಹೆಣ್ಣಿನ ಶೋಷಣೆಗಿಂತ ದುರಂತಕ್ಕೆ ಒಳಗಾದ ಹೆಣ್ಣಿಗೆ ಸಂಕಟ ಅತಿ ತೀವ್ರ ಎಂಬುದನ್ನು ಗೊರೂರವರು ತಮ್ಮ ಕೃತಿಗಳಲ್ಲಿ ಸಹೃದಯರ ಮನ ಕರಗಿಸುವಂತೆ ಒಮ್ಮೊಮ್ಮೆ ಮನ ಕೆರಳುವಂತೆ ಚಿತ್ರಿಸಿದ್ದಾರೆ.

ಗ್ರಾಮಸಮಾಜದಲ್ಲಿ ಬಾಲ್ಯವಿವಾಹ ಒಂದು ಕಾಲಕ್ಕೆ ಪ್ರತಿಷ್ಠಿತ ಸಂಗತಿಯಾಗಿತ್ತು. ಇದು ಸಂಪ್ರದಾಯವೂ ಆಗಿತ್ತು. ಬಾಲ್ಯವಿವಾಹದ ದುರಂತ ಪರಿಣಾಮವೇ ಬಹುಮಟ್ಟಿಗೆ ಹೆಣ್ಣಿಗೆ ಅತಿ ಚಿಕ್ಕ ವಯಸ್ಸಿನಲ್ಲಿಯೇ ವೈಧವ್ಯವನ್ನು ತಂದುಕೊಟ್ಟಿತು. ಬಾಲ್ಯವಿವಾಹದ ಸಂಭ್ರಮದಲ್ಲಿ ಪಾಲ್ಗೊಂಡು ಸಂತೋಷದಲ್ಲಿ ಬಂಧು ಬಳಗದವರು ಕುಣಿದು ಕುಪ್ಪಳಿಸಿದರೇ ಹೊರತು ಪುಟ್ಟ ವಿಧವೆಗೆ ಸ್ಪಂದಿಸಿದ ಜನರು ಬಹಳ ಕಡಿಮೆ. ಇಂದು ಸ್ತ್ರೀ ಪರ ಸಂಘಟನೆಗಳು ವಿಧವೆಯರ ದುರಂತವನ್ನು ಗಮನಿಸಿ ಅದಕ್ಕೆ ಚಳುವಳಿಯ ಮೂಲಕ ಅನೇಕ ರೀತಿಯ ಪರಿಹಾರವನ್ನು ತಂದುಕೊಟ್ಟಿದೆ. ಇಂತಹ ಚಳುವಳಿಗಳು ಸ್ವಾತಂತ್ರ್ಯ ಚಳುವಳಿಯಷ್ಟೇ ಪರಿಣಾಮಕಾರಿಯಾಗಿ ನಡೆಯಿತು ಎಂಬುದನ್ನು ಗೊರೂರವರು ದಾಖಲಿಸಿದ್ದಾರೆ. ವಿಧವೆಯರ ದುರಂತ ಬದುಕಿನ ಸಂಕಟವನ್ನು ಕಳೆಯಲು ವಿಧವಾ ವಿವಾಹದ ಚಿಂತನೆ ಸಮಾಜದ ಕ್ರಾಂತಿ ದೃಷ್ಟಿ ವ್ಯಕ್ತಿಗಳಲ್ಲಿ ಮೂಡಿತು. ವಿಧವಾ ವಿವಾಹ ಸಮಾಜದಲ್ಲಿ ದೊಡ್ಡ ಗೊಂದಲವನ್ನೇ ಉಂಟು ಮಾಡಿತು. ಇದನ್ನು ಸಮ್ಮತಿಸುವ ಜನಕ್ಕಿಂತ ಪ್ರತಿಭಟನೆ ಮಾಡುವ ಜನರ ಗುಂಪೇ ಜಾಸ್ತಿ ಇತ್ತು. ಇಷ್ಟಾದರು ವಿಧವಾ ವಿವಾಹಗಳು ನವೋದಯ ಕಾಲಕ್ಕೆ ಸಾಕಷ್ಟು ಪ್ರಚಾರಕ್ಕೆ ಬಂತು ಎಂಬುದು ವಾಸ್ತವ ಸಂಗತಿಯಾಗಿದೆ. ವಿಧವಾ ವಿವಾಹದ ಮೂಲಕ ನೊಂದ ಹೆಣ್ಣು ಜೀವನದಲ್ಲಿ ಮತ್ತೆ ನಗುವನ್ನು ಕಾಣಬಹುದು, ಅಬಲೆಯಾದವಳು ಸಬಲಳಾಗಬಹುದು ಎಂಬುದು ಕ್ರಾಂತಿ ದೃಷ್ಟಿಯ ವ್ಯಕ್ತಿಗಳ ಸಂದೇಶವಾಗಿದೆ.

ಗೊರೂರವರು 'ನಮ್ಮೂರಿನ ರಸಿಕರು' ಕೃತಿಯಲ್ಲಿ ಚಿತ್ರಿಸಿರುವ ಕಮಲಮ್ಮನ ಪಾತ್ರ ಎಷ್ಟು ವೈಚಾರಿಕವಾಗಿದೆಯೋ ಅಷ್ಟೇ ಅನುಕಂಪೆಗೆ ಅನುಗುಣವಾದ ಪಾತ್ರವಾಗಿದೆ. ಆಕೆ ಹತ್ತನೇ ವರ್ಷಕ್ಕೆ

ವಿವಾಹವಾಗಿ ಐದು ತಿಂಗಳಿಗೆ ವಿಧವೆಯಾಗಿ ಕಷ್ಟದ ಬದುಕಿಗೆ ಬಲಿಯಾಗುತ್ತಾಳೆ. ಬಾಲ್ಯದ ಕಮಲಮ್ಮ ಆಟ ಆಡುವ ವಯಸ್ಸಿನಲ್ಲಿಯೇ ತೀವ್ರ ನೋವಿಗೆ ಬಲಿಯಾಗುವುದು ಯಾರಿಗಾದರೂ ಸಂಕಟದ ವಿಷಯವೆ. ತಂದೆ ತಾಯಿ ಗಂಡನನ್ನು ಕಳೆದುಕೊಂಡ ಕಮಲಮ್ಮ ಗೊರೂರಿನ ಅನಾಥೆಯಾದಳು. ಅವಳ ದುರಾದುಷ್ಟ ಈ ರೀತಿ ಮುಪ್ಪರಿ ಆಯಿತು. ಕೂಲಿ ಮಾಡಿಕೊಂಡು ಬದುಕುವ ಕಮಲಮ್ಮನನ್ನು ಕುರಿತು ಗೊರೂರರವರು ಆಡುವ ಮಾತು "ಅವಳು ಒಂದು ದಿವಸವೂ ಅತ್ತುದನ್ನೂ ಕಾಣೆ, ನಕ್ಕುದನ್ನೂ ಕಾಣೆ, ಬೈದುದನ್ನೂ ಕಾಣೆ, ಹೊಗಳಿದುದನ್ನೂ ಕಾಣೆ, ಕೋಪಿಸಿಕೊಂಡುದನ್ನೂ ಕಾಣೆ. ಅವಳನ್ನು ಕಂಡರೆ ಊರಿನವರಿಗೆಲ್ಲಾ ಒಂದು ವಿಧವಾದ ಗೌರವ. ಅವಳು ಗಡಿಯಾರದಂತೆ, ಯಂತ್ರದಂತೆ, ತನ್ನ ಕೆಲಸವನ್ನು ತಾನು ಮಾಡಿಕೊಂಡು ಹೋಗುತ್ತಾಳೆ. ದಿನಗಳು ತಿಂಗಳುಗಳಾಗುವುದೂ, ತಿಂಗಳುಗಳು ವರ್ಷಗಳಾಗುವುದೂ ಅವಳಿಗೆ ಗೊತ್ತಾಗುವುದಿಲ್ಲ. ಕಾಲವೆಂಬ ಪ್ರವಾಹದಲ್ಲಿ ತೇಲಿ ಹೋಗುವ ಹುಲ್ಲಿನಂತೆ ಅವಳು ಜೀವನ ವನ್ನು ಸಾಗಿಸುತ್ತಾಳೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೧;ಪು.೭೮) ಬಾಲ್ಯವಿವಾಹದ ಪರಿಣಾಮವಾಗಿ ಬಾಲ್ಯದಲ್ಲಿಯೇ ವಿಧವೆಯಾದ ಎಲ್ಲಾ ವಿಧವೆಯರ ಬದುಕಿನ ಗತಿಸ್ಥಿತಿಯೂ ಇದೇ ಆಗಿತ್ತು ಎಂಬುದನ್ನು ಗೊರೂರರವರು ವಿಷಾದದಿಂದ ತಿಳಿಸುತ್ತಾರೆ. ಕಮಲಮ್ಮನಿಗೆ ಮಕ್ಕಳನ್ನು ಕಂಡರೆ ಬಹಳ ಪ್ರೀತಿ. ಆಕೆ ತನ್ನ ಗೆಳತಿ ಸೀತೆಯೊಂದಿಗೆ ಆಡುವ ಮಾತು ಹೀಗಿದೆ. "ಸೀತೆ, ನನಗೆ ಬಾಲ್ಯ ದಿಂದಲೂ ಚೆನ್ನಾಗಿ ಸಂಸಾರ ಮಾಡಬೇಕೆಂಬ ಆಸೆಯಿತ್ತು. ಚೆನ್ನಾಗಿ ಸಂಸಾರ ಮಾಡಬಲ್ಲೆನೆಂಬ ನಂಬಿಕೆಯು ಇತ್ತು" (ಅದೇ;ಪು.೭೯) ಎಂದು ತನ್ನ ನೋವನ್ನು ವ್ಯಕ್ತಪಡಿಸಿದಾಗ ಗೊರೂರರವರಿಗೆ ಬಾಲ್ಯ ವಿಧವೆಯಾದ ಕಮಲಮ್ಮನನ್ನು ಕಂಡು ಕರಳು ಹಿಂಡಿದಂತಾಗುತ್ತದೆ. ಈ ಒಂದು ಪಾತ್ರದ ಮೂಲಕ ಕಮಲಮ್ಮನ ಮಾನಸಿಕ ತೊಳಲಾಟವನ್ನು ಲೇಖಕರು 'ನಮ್ಮೂರಿನ ರಸಿಕರು' ಕೃತಿಯಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಮಕ್ಕಳನ್ನು ಕಂಡರೆ ಹಂಬಲಿಸುವ ಕಮಲಮ್ಮನಿಗೆ "ನಾನು ಅನೇಕ ವೇಳೆ ನನಗೆ ಒಂದು ಮಗುವಿರುವಂತೆ ಕನಸು ಕಾಣುತ್ತೇನೆ". (ಅದೇ.) ಇಲ್ಲಿ ಕಮಲಮ್ಮನ ಮನಸ್ಸಿನಲ್ಲಿ ಮಕ್ಕಳ ಮೇಲಿನ ಆಸೆ ಹಾಗೂ ಆ ಬಗ್ಗೆ ಉಂಟಾದ ತೀವ್ರ ಸಂಕಟ ಎಷ್ಟು ಗಾಢವಾಗಿತ್ತು ಎಂಬುದನ್ನು ಗೊರೂರರವರು ಮನೋವಿಜ್ಞಾನಿಯಂತೆ ಕೃತಿಯಲ್ಲಿ ವಿಶ್ಲೇಷಿಸುವ ರೀತಿ ಅವರ ಮನೋವೈಜ್ಞಾನಿಕ ದೃಷ್ಟಿಗೆ ಉತ್ತಮ ನಿರ್ದಶನವಾಗಿದೆ. ಈ ಹಂತದಲ್ಲಿಯೂ ಸಹ ವಿಧವೆಯ ನೋವನ್ನು ಲೇಖಕರು ಪರಿಣಾಮಕಾರಿ ಯಾಗಿ ಚಿತ್ರಿಸಿದ್ದಾರೆ. ಕಮಲಮ್ಮನಂತಹ ವಿಧವೆಯರ ಮಾನಸಿಕ ತೊಳಲಾಟವನ್ನು ಚಿತ್ರಿಸುವುದರ ಮೂಲಕ ಗೊರೂರರವರು ಮುಂದೆ ತಮ್ಮ ಕೃತಿಗಳಲ್ಲಿ ವಿಧವಾ ವಿವಾಹಕ್ಕೆ ಸಮರ್ಥ ಪೀಠಿಕೆಯನ್ನು ಹಾಕಿ ಕಾರಣವನ್ನು ಕೊಟ್ಟಿದ್ದಾರೆ.

'ವೈಯಾರಿ' ಕೃತಿಯಲ್ಲಿ ವಿಧವೆ ವೈಯಾರಿಯನ್ನು ರಾಮಸ್ವಾಮಿ ಮದುವೆಯಾಗುವ ಘಟನೆಯನ್ನು ಕಾಣಬಹುದು. ಹೂವನ್ನು ಮುಡಿದು ಆನಂದವಾಗಿ ಬದುಕಬೇಕಾಗಿದ್ದ ವೈಯಾರಿಗೆ ವೈಧವ್ಯ ಪ್ರಾಪ್ತವಾಯಿತು.

ಹೊಳೆಯ ಕಡೆಗೆ ಹೋದಾಗ ಯಾರಿಗೂ ಕಾಣದಂತೆ ತಾನು ಹೂವನ್ನು ಮುಡಿದುಕೊಂಡು ಸಂತೋಷವನ್ನು ಅನುಭವಿಸುತ್ತಿದ್ದ ವೈಯಾರಿಯ ಏಕಾಂತ ವರ್ತನೆಯನ್ನು ರಾಮಸ್ವಾಮಿ ಕಂಡು ಮರಗುತ್ತಾನೆ. ಪದವೀಧರನಾದ ರಾಮಸ್ವಾಮಿಗೆ ರೂಪು ಲಾವಣ್ಯಗಳು ಅವನ ಮನಸ್ಸಿಗೆ ಎಷ್ಟು ಆಕರ್ಷಕವಾಗಿತ್ತೋ ಅವಳ ವಿಧವಾ ಸ್ಥಿತಿ ಅವನಿಗೆ ಅಷ್ಟೇ ಅನುಕಂಪೆಯನ್ನು ಅಂತರಾಳದಲ್ಲಿ ಮೂಡಿಸಿತ್ತು. ತಾನು ಮದುವೆಯಾದರೆ ಇವಳ ಹೊರತು ಮತ್ತೆ ಯಾರನ್ನೂ ವಿವಾಹವಾಗಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬರುತ್ತಾನೆ. ಇವನ ತೀರ್ಮಾನವನ್ನು ಅವನ ತಂದೆ ತಾಯಿಗಳು ಮೊದಲು ಒಪ್ಪುವುದಿಲ್ಲ. ಆದರೆ ಕೊನೆಗೆ ಹಿರಿಯರೆಲ್ಲರ ಒಪ್ಪಿಗೆಯನ್ನು ಪಡೆದು ರಾಮಸ್ವಾಮಿ ವೈಯಾರಿಯನ್ನು ಮದುವೆಯಾಗುತ್ತಾನೆ. ಇಲ್ಲಿ ರಾಮಸ್ವಾಮಿ ವಿಧವೆ ವೈಯಾರಿಗೆ ಬಾಳನ್ನು ಕೊಡುತ್ತಾನೆ. "ಇವಳನ್ನು ಮದುವೆಯಾಗದಿದ್ದರೆ ಬೇರೆ ನನಗೆ ಸುಖವಿಲ್ಲ" (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೨೬೦) ಎಂದು ಭಾವಿಸಿದ ರಾಮಸ್ವಾಮಿಗೆ ಜೀವನದ ಆಸೆಯು ಪರಿಪೂರ್ಣವಾಗುತ್ತದೆ. ವಿಧವಾ ವಿವಾಹದಲ್ಲಿ ಇಂತಹ ಅಪೂರ್ವ ಘಟನೆಗಳು, ಸಂತೋಷ ಸಮಾಧಾನಗಳನ್ನು ಗುರುತಿಸಬಹುದು ಎಂಬುದನ್ನು ಗೊರೂರರವರು ಸ್ಪಷ್ಟಪಡಿಸಿದ್ದಾರೆ.

ಇದೇ ಕೃತಿಯಲ್ಲಿ ವಿಧವೆ ಲಕ್ಕಿಯ ಮದುವೆಯನ್ನು ನೋಡಬಹುದು. ಇಲ್ಲಿಯು ಸಹ ಲಕ್ಕಿ ವಿಧವೆಯಾದರು ಸಂಸಾರದ ಹೊಣೆಗಾರಿಕೆಯನ್ನು ಹೊತ್ತು ನಡೆಸುವ ಧೀಮಂತ ವ್ಯಕ್ತಿಯಾಗಿದ್ದಾಳೆ. ಲಕ್ಕಿ ತನಗೆ ಗಂಡಸಿನ ದಿಕ್ಕು ತನ್ನ ಸಂಸಾರ ನಿರ್ವಹಣೆಗೆ ಅಗತ್ಯವೆನಿಸಿದಾಗ ಆಕೆ ಮದುವೆಯಾಗಲು ಇಚ್ಛೆ ಪಡುತ್ತಾಳೆ. ಆದರೆ ಸಮಾಜದ ಕಟ್ಟುಕಟ್ಟಳೆಗಳಿಗೆ ಹೆದರಿ ತನ್ನ ಬಯಕೆಯನ್ನು ಅಂತರಂಗದಲ್ಲಿ ಹುದುಗಿಟ್ಟುಕೊಂಡಿರುತ್ತಾಳೆ. ಒಮ್ಮೆ ಲಕ್ಕಿ ತನ್ನ ಗೆಳತೆಯ ಒತ್ತಾಯಕ್ಕಾಗಿ ಸಂತೆಗೆ ಹೋದಾಗ ಹನುಮನನ್ನು ಭೇಟಿ ಆಗುತ್ತಾಳೆ. ಲಕ್ಕಿ ಆಸ್ತಿವಂತಳಾಗಿದ್ದಾಳೆ. ಅವಳ ಆಸ್ತಿಯ ಮೇಲೆ ಕಣ್ಣು ಹಾಕಿದ ಅನೇಕ ಗಂಡಸರು ಅವಳನ್ನು ಮದುವೆಯಾಗಲು ಬಯಸಿದ್ದುಂಟು. ಹನುಮ ಲಕ್ಕಿಯನ್ನು ಬಯಸಿದ್ದು ಕೇವಲ ಅವಳ ಮೇಲಿನ ಪ್ರೀತಿಗಾಗಿ. ಅವನು ತನ್ನ ಆಸೆಯನ್ನು ತನ್ನ ತಂದೆ ತಾಯಿಗೆ ತಿಳಿಸುತ್ತಾನೆ. ಆದರೆ ಹನುಮನ ತಂದೆ ತಾಯಿ ಮದುವೆಗೆ ಮೊದಲು ಸಮ್ಮತಿ ಕೊಡುವುದಿಲ್ಲ. ಹನುಮನ ತಾತ ದೊಡ್ಡ ಬೋರ ಮೂರು ಹೆಂಡಿರನ್ನು ನುಂಗಿಕೊಂಡು ನಾಲ್ಕನೆಯ ಮದುವೆಗಾಗಿ ಪ್ರಾಯದ ಲಕ್ಕಿಯನ್ನು ಬಯಸುತ್ತಾನೆ. ಹನುಮನ ತಂದೆ ದೊಡ್ಡ ಬೋರನಿಗೆ ವಿವೇಕ ಹೇಳುತ್ತಾನೆ. ಆದರೆ ದೊಡ್ಡ ಬೋರನು ತಾನೇ ಲಕ್ಕಿಯನ್ನು ಮದುವೆಯಾಗುವುದಾಗಿ ಆಮಂತ್ರಣ ಪತ್ರವನ್ನು ಸಿದ್ಧಮಾಡಿ ಊರಿಗೆಲ್ಲಾ ಹಂಚುತ್ತಾನೆ. ಮದುವೆಯ ದಿನ ಬಂದಾಗ ಮದುವೆಯ ಮಂಟಪದಲ್ಲಿ ಎಲ್ಲರಿಗೂ ಅಚ್ಚರಿ ಉಂಟಾಗುವಂತೆ ಹನುಮನಿಗೆ ಲಕ್ಕಿಯನ್ನು ಕೊಟ್ಟು ಮದುವೆ ಮಾಡಿಸುತ್ತಾನೆ. ಇಲ್ಲಿಯು ವಿಧವಾ ವಿವಾಹ ಹೆಣ್ಣಿನ ಬದುಕಿನ ಭದ್ರತೆಗಾಗಿ ನಡೆದಿದೆ ಎಂಬುದನ್ನು ಗುರುತಿಸಬಹುದು. ಇದರ ಜೊತೆಗೆ ಆಸ್ತಿಯ ಆಸೆಯ ಸಲುವಾಗಿ ವಿಧವೆಯನ್ನು ಮದುವೆ ಆಗಲು ಅನೇಕರು ಬರುತ್ತಿದ್ದರು ಎಂಬ ಸೂಚನೆಯು ಲಕ್ಕಿ ಮದುವೆಯ ಪ್ರಸಂಗದಲ್ಲಿ ಸೂಚ್ಯವಾಗಿದೆ.

'ಮರೆಯಾದ ಮಾರಮ್ಮ' ಕೃತಿಯಲ್ಲಿ 'ಜಯಮ್ಮನಿಗೆ ಬಂದ ಭಾಗ್ಯ' ಒಂದು ಅತ್ಯುತ್ತಮ ಕತೆ. ಕಥಾನಾಯಕಿಯಾದ ಜಯಮ್ಮ ಗುಜ್ಜಯ್ಯನ ಹೆಂಡತಿ. ಗುಜ್ಜಯ್ಯ ವಿದ್ಯಾವಂತನಾಗಿ ಹಳ್ಳಿಯಲ್ಲಿ ಶಿಕ್ಷಕನಾಗಿ ಸರ್ಕಾರಿ ನೌಕರಿ ಗಿಟ್ಟಿಸಿದ ವ್ಯಕ್ತಿ. ಜಯಮ್ಮನಿಗೆ ಸರ್ಕಾರಿ ನೌಕರಿಯಲ್ಲಿ ಇರುವ ವ್ಯಕ್ತಿಯನ್ನು ಕೈ ಹಿಡಿಯಬೇಕೆಂಬ ಆಸೆ ಮೊದಲಿನಿಂದಲೂ ಇತ್ತು. ಗುಜ್ಜಯ್ಯ ರೋಗಿಷ್ಠ. ಆದರೆ ಜಯಮ್ಮನನ್ನು ಮದುವೆಯಾಗಿ ಕೆಲವು ವರ್ಷಗಳ ಕಾಲ ಜೀವನ ನಡೆಸುತ್ತಾನೆ. ಬಂದ ಹಣದಲ್ಲಿ ಒಳ್ಳೆಯ ಆಸ್ತಿಯನ್ನು ಮಾಡುತ್ತಾನೆ. ಸ್ವಂತಕ್ಕೆ ಮನೆಯನ್ನು ಕಟ್ಟಿಸಿಕೊಂಡು ಮೇಲೆ ಮಾಳಿಗೆ ಹಾಕಿಸಿಕೊಂಡು ಬಾಡಿಗೆ ಕೊಡುತ್ತಾನೆ. ಈ ಮಧ್ಯೆ ಅನಾರೋಗ್ಯದಿಂದ ಗುಜ್ಜಯ್ಯ ಸಾವಿಗೀಡಾಗುತ್ತಾನೆ. ಜಯಮ್ಮ ವಿಧವೆಯಾಗಿ ಸಂಸಾರದ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ. ಪುಟ್ಟಸ್ವಾಮಿ ಜಯಮ್ಮನ ಹಳೆಯ ವಿಶ್ವಾಸಿ. ಪುಟ್ಟುಸ್ವಾಮಿಗೆ ಜಯಮ್ಮನನ್ನು ಮದುವೆ ಆಗಬೇಕೆಂಬ ಆಸೆ ಇದ್ದರು ಅದು ಮೊದಲಿಗೆ ಕೈಗೂಡಿರಲಿಲ್ಲ. ಜಯಮ್ಮನ ಮೇಲಿನ ಆಸೆಯಲ್ಲಿ ಪುಟ್ಟಸ್ವಾಮಿ ಜಯಮ್ಮನನ್ನು ಭೇಟಿ ಆದಾಗ ಅವಳ ಬದುಕಿನ ದುರಂತ ಪುಟ್ಟಸ್ವಾಮಿಗೆ ಮನವರಿಕೆಯಾಗುತ್ತದೆ. ಪುಟ್ಟಸ್ವಾಮಿ ನಿರ್ಲಜ್ಜೆಯಿಂದ ತನ್ನ ಹಳೆಯ ಆಸೆಯನ್ನು ಜಯಮ್ಮನಿಗೆ ಪ್ರಕಟಪಡಿಸುತ್ತಾನೆ. ಒಂದು ಕಾಲಕ್ಕೆ ಸರ್ಕಾರಿ ಉದ್ಯೋಗದ ಮೇಲಿನ ಮೋಹದಿಂದ ರೋಗಿಷ್ಠನನ್ನು ಕೈಹಿಡಿದ ಜಯಮ್ಮನಿಗೆ ತನ್ನ ತಪ್ಪಿನ ಅರಿವು ಮನವರಿಕೆಯಾಗುತ್ತದೆ. ಪುಟ್ಟಸ್ವಾಮಿಯ ಅಂತರಂಗದ ಆಸೆಯ ಪ್ರಾಮಾಣಿಕತೆಯು ಸ್ಪಷ್ಟವಾಗುತ್ತದೆ. ಆಕೆ ಅತ್ಯಂತ ತೃಪ್ತ ಸಂತೋಷ ಭಾವದಲ್ಲಿ ಅತ್ಯಂತ ಸೂಚ್ಯವಾಗಿ ಮೌನವಾಗಿ ತನ್ನ ಒಪ್ಪಿಗೆಯನ್ನು ಪುಟ್ಟಸ್ವಾಮಿಗೆ ತಿಳಿಸುತ್ತಾಳೆ. ಇಲ್ಲಿಯು ಸಹ ವಿಧವಾ ವಿವಾಹ ಹೆಣ್ಣಿನ ಅಂತರಂಗದ ಗುಪ್ತ ಬಯಕೆಯ ಭಾವನೆಯಾಗಿರುವುದು ನಮಗೆ ತಿಳಿದುಬರುತ್ತದೆ. ಈ ಕತೆ ಅತ್ಯಂತ ಕುತೂಹಲ ರೀತಿಯಲ್ಲಿ ರೂಪಿತವಾಗಿರುವುದು ಸಹೃದಯರಿಗೆ ಬಹಳ ಮೆಚ್ಚುಗೆಯಾಗಲು ಕಾರಣವಾಗಿದೆ.

ಗೊರೂರರವರು ವಿಧವಾ ವಿವಾಹವನ್ನು ತಮ್ಮ ಸಾಹಿತ್ಯದಲ್ಲಿ ತಂದಾಗ ಅದಕ್ಕೆ ಸಂಯೋಜಿಸುವ ಅರ್ಥ ವಿಶೇಷ ಒಪ್ಪುವಂತಹದಾಗಿದೆ. ಹೆಣ್ಣಿನ ಮಾನಸಿಕ ತುಮುಲವನ್ನು ಗಂಡಿನ ಮನಸ್ಥಿತಿಯನ್ನು ಸೆರೆಹಿಡಿಯುವುದರಲ್ಲಿ ಒಂದರೊಡನೆ ಮತ್ತೊಂದನ್ನು ಹೊಂದಿಸಿರುವುದರಲ್ಲಿ ಲೇಖಕರು ತೋರಿಸುವ ಕೌಶಲ್ಯ ವೈಚಾರಿಕವಾಗಿ ಒಪ್ಪುವಂತಹದಾಗಿದೆ. ವಿಧವಾ ವಿವಾಹದ ಬಗ್ಗೆ ಗೊರೂರರವರು ಸ್ಪಂದಿಸುವ ರೀತಿ ಸ್ತ್ರೀಪರ ಸಂವೇದನೆಗೆ ಪೋಷಕವಾಗಿದೆ ಎಂಬುದನ್ನು ನಾವು ನಿರ್ವಿವಾದವಾಗಿ ಹೇಳಬಹುದು. ಸಾಹಿತ್ಯದಲ್ಲಿ ಮೂಡಿಬಂದ ಇಂತಹ ವೈಚಾರಿಕ ಅಭಿಪ್ರಾಯಗಳನ್ನು ಸಹೃದಯರು ಪುನರ್ಮನನ ಮಾಡಿಕೊಂಡು ವಾಸ್ತವದ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು. ಆಗಲೇ ಸಾಹಿತಿಯ ಸಂದೇಶ ಸಫಲವಾಗುತ್ತದೆ.

ಗೊರೂರವರ ಗ್ರಾಮಸಮಾಜವನ್ನು ಕುರಿತು ಮಳಲಿ ವಸಂತ ಕುಮಾರ್‌ರವರು ಆಡುವ ಮಾತು ಹೀಗಿದೆ. "ಗೊರೂರರಿಗೆ ಪರಿಸರದೊಂದಿಗೆ ತಾದಾತ್ಮ್ಯವಿದೆ. ಅವರು ಜನರ ನಿತ್ಯದ ಬದುಕಿನ ಸರಳತೆ, ಸ್ವಚ್ಛತೆ, ನೋವು, ನಗೆ ಎಲ್ಲವನ್ನು ನಮ್ಮ ಕಣ್ಮುಂದೆ ತಂದಿದ್ದಾರೆ. ಗ್ರಾಮಸಮಾಜದ ಹತ್ತಾರು ಜನಾಂಗಗಳ ಜೀವನದ ವೈವಿಧ್ಯದ ನಿಕಟ ಪರಿಚಯ ಅವರಿಗಿದೆ. ಅವರಿಗಿರುವ ಒಳ್ಳೆಯ ಅಧ್ಯಯನ, ಜನಪದ ಗೀತೆಗಳ ಒಲವು, ಸಂಸ್ಕೃತ ಸಾಹಿತ್ಯದ ಅರಿವು, ಸದಭಿರುಚಿ, ರಸಿಕತೆ ಅವರ ಪ್ರಬಂಧಗಳ ಶಕ್ತಿಯನ್ನು ಹೆಚ್ಚಿಸಿವೆ. ಆ ಪ್ರಬಂಧಗಳು ಒಂದು ಸಂಕೀರ್ಣತೆಯನ್ನು ಪಡೆದುಕೊಂಡಿವೆ. ಎಲ್ಲಕ್ಕಿಂತ ಹೆಚ್ಚಾಗಿ ಹೇಮಾವತಿ ನದಿ ಅವರ ಬಹಳಷ್ಟು ಪ್ರಬಂಧಗಳ ಜೀವನಾಡಿಯಾಗಿದೆ. ಯಾವುದೇ ಭಾಷೆಯಲ್ಲಿ ಒಂದು ನದಿಯ ಜೀವನವನ್ನು ಸಾಹಿತ್ಯದ ತುಂಬ ಸರ್ವತ್ರವಾಗಿ ಉಸಿರಾಡಿಸಿದ ಸಾಹಿತಿ ಇಲ್ಲವೆಂದೇ ಹೇಳಬೇಕು. ಬದುಕಿನಲ್ಲಾಗಲಿ ಬರಹದಲ್ಲಾಗಲಿ ಹೇಮಾವತಿ ನದಿಗೂ ಗೊರೂರವರಿಗೂ ಇರುವ ಸಂಬಂಧ ಅನನ್ಯವಾದುದು. ವಾಸ್ತವವಾಗಿ ಹೇಮಾವತಿ ನದಿಯಲ್ಲಿ ಒಂದು ಸಂಸ್ಕೃತಿ ಅಡಗಿದೆ. ಅದರ ನದಿಯ ತೀರದ ಜನರ ಸಾಹಸ ಜೀವನಕ್ಕೆ ಮಾಡಿಟ್ಟ ರಂಗಭೂಮಿ" (ಮಳಲಿ ವಸಂತ ಕುಮಾರ್; ೧೯೭೭; ಪು.೬೭-೬೮) ಎಂದು ಗೊರೂರವರ ಬರವಣಿಗೆಗೆ ಅರ್ಥಪೂರ್ಣವಾದ ವಿಮರ್ಶೆಯ ಮಾತುಗಳನ್ನು ವ್ಯಕ್ತಪಡಿಸಿದ್ದಾರೆ.

ಗೊರೂರವರು ಕೊಡುವ ಗ್ರಾಮಸಮಾಜದ ಸ್ವರೂಪ ಅಂದಿನ ಕಾಲಕ್ಕೆ ಸಂಬಂಧಿಸಿದ ಸಂಗತಿಗಳಾಗಿವೆ. ಕಾಲ ಬದಲಾದಂತೆ ಶಿಕ್ಷಣ ಪ್ರಗತಿ ಆದಂತೆ ಕಾನೂನು ಕಟ್ಟಳೆಗಳು ಹೆಚ್ಚಿದಂತೆ ಗ್ರಾಮೀಣ ಸಮಾಜದಲ್ಲಿ ಇವುಗಳಿಗೆ ಅನುಗುಣವಾಗಿ ವ್ಯತ್ಯಯಗಳು ಕಂಡುಬರುವುದು ಸಾಮಾನ್ಯ ಸಂಗತಿಯಾಗಿದೆ. ಆದ್ದರಿಂದ ಗೊರೂರವರ ಅಭಿಪ್ರಾಯಗಳನ್ನು ವರ್ತಮಾನಕ್ಕೆ ಸಲ್ಲದ ಅಭಿಪ್ರಾಯಗಳೆಂದು ನಿಶ್ಚಿಯಿಸಬಾರದು. ಕೃತಿಯಲ್ಲಿ ಸಾರ್ವಕಾಲಿಕ ಮೌಲ್ಯಗಳ ಸಂಗತಿಗಳು ಎಷ್ಟು ಮಹತ್ವಪೂರ್ಣವಾಗಿರುತ್ತವೋ ಅಂದಂದಿನ ವರ್ತಮಾನದ ಸಂಗತಿಗಳಾಗಿ ದಾಖಲೆಯಷ್ಟೇ ಬೆಲೆಯುಳ್ಳವಾಗಿರುತ್ತವೆ.

ಗ್ರಾಮಸಮಾಜದ ಸ್ವರೂಪಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರತ್ಯೇಕ ಘಟಕಗಳಾಗಿ ವಿಂಗಡಿಸಿ ಮಹಾ ಪ್ರಬಂಧದಲ್ಲಿ ಸವಿಸ್ತಾರವಾಗಿ ಚರ್ಚಿಸಲಾಗಿದೆ. ಆ ವಿಸ್ತೃತ ಚರ್ಚೆಗಳ ಸಮಗ್ರ ಸ್ವರೂಪವನ್ನು ಪ್ರಸ್ತುತ ಘಟಕದಲ್ಲಿ ಕಾಣಲಾಗಿದೆ. ಕೆಲವು ಹಂತದಲ್ಲಿ ಮಹಾಪ್ರಬಂಧದಲ್ಲಿ ಚರ್ಚಿಸಲ್ಪಟ್ಟಿರುವ ವಿಷಯಗಳು ಪುನರಾವರ್ತನೆಯಾಗಿ ಕಂಡುಬಂದರು ಇಂತಹ ಪುನರಾವರ್ತನೆ ಸ್ಥೂಲಾಂಶವಾಗಿ ಸೂಕ್ಷ್ಮವಾಗಿ ಮಾತ್ರ ಮೂಡಿಬಂದಿದೆ. ವಿಷಯ ನಿರೂಪಣೆಯಲ್ಲಿ ಪುನರ್ ನವೀಕರಣವನ್ನು ಕೊಡುವಾಗ ಇಂಥ ಪುನರಾವರ್ತನೆಗಳು ಸೂಕ್ಷ್ಮ ರೂಪದಲ್ಲಿ ಕಂಡುಬರುವುದು ಅನಿವಾರ್ಯವೆಂದು ಸಹೃದಯರು ಭಾವಿಸಬೇಕು.

ಗೊರೂರವರು ತಮ್ಮ ಕೃತಿಗಳಲ್ಲಿ ಗ್ರಾಮೀಣ ಸಮಾಜದ ಸ್ವರೂಪವನ್ನು ವಿಶ್ಲೇಷಿಸುವಾಗ ವಸಾಹತುಶಾಹಿಯ ಪ್ರಭಾವವನ್ನು ಗುರುತಿಸಿ ಅವರು ಪ್ರತಿಕ್ರಿಯಿಸಿರುವ ಬಗೆಯನ್ನು ಸ್ಪಷ್ಟಪಡಿಸಿದ್ದಾರೆ.

ವಿಶ್ವ ಪರಿಸರದಲ್ಲಿ ಅನಿವಾರ್ಯವಾಗಿ ಗುರುತಿಸಬಹುದಾದ ಎಲ್ಲ ರೀತಿಯ ಸಾಮಾಜಿಕ ಪಲ್ಲಟಗಳು ಭಾರತೀಯ ಸಮಾಜದಲ್ಲಿಯೂ ಕಂಡುಬರುವುದು ಅತಿ ಸಹಜ. ನಿತ್ಯ ಪರಿವರ್ತನಾಶೀಲತೆ ಪ್ರಗತಿಪರ ಸಮಾಜದ ಉಸಿರು ಎನ್ನಬಹುದು. ಆದರೆ ಮೌಲ್ಯವರ್ಧಿತ ಅಂಶಗಳನ್ನು ನಮ್ಮ ಸಮಾಜದಲ್ಲಿ ಕಾಪಾಡಿಕೊಳ್ಳುವ ಜವಾಬ್ದಾರಿಯು ನಮ್ಮದಾಗಿದೆ. ಇದು ಎಲ್ಲಾ ಸಾಹಿತಿಗಳ ಎಚ್ಚರದ ಸಂದೇಶವೂ ಆಗಿದೆ. ಇಂದು ಜಾಗತೀಕರಣದಿಂದ ಅನೇಕ ಸಾಮಾಜಿಕ ಸಮಸ್ಯೆಗಳು ಪರಿಹಾರವಾಗಿರುವಂತೆ ಹೊಸ ಹೊಸ ಸಮಸ್ಯೆಗಳು ಸಮಾಜದಲ್ಲಿ ಆವಿರ್ಭವಿಸಿರುವುದು ಅನಿವಾರ್ಯವೆನಿಸಿದೆ. ಪ್ರಗತಿಪರ ಚಿಂತಕರು ಸಮಾಜದ ವ್ಯಕ್ತಿಗಳನ್ನು ವರ್ತಮಾನದ ಕಡೆಗೆ ಕಣ್ತೆರೆಸುವ ಸಾರ್ವಕಾಲಿಕ ಮೌಲ್ಯಗಳನ್ನು ನೆನಪಿಸಿ ವರ್ತಮಾನದ ಸುಧಾರಣೆಯ ಕಡೆಗೆ ನಮ್ಮ ಮನಸ್ಸಿನ ಒಲವನ್ನು ಸದ್ ರೀತಿಯಲ್ಲಿ ತಿದ್ದುತ್ತಾರೆ. ಇದು ಸಮಾಜ ವಿಜ್ಞಾನಿಗಳ ಗುರಿಯು ಆಗಿದೆ. ಇಂದಿನ ನಮ್ಮ ಜೀವನದಲ್ಲಿ ನಮ್ಮ ಸಂಸ್ಕೃತಿಯ ಮೂಲ ಬೇರು ತಾಯಿ ಬೇರಾಗಿ ಉಳಿದು ವಸಾಹತುಶಾಹಿ ಹಾಗೂ ಜಾಗತೀಕರಣದ ಉತ್ತಮ ಪ್ರಭಾವ ಚೆಲುವಿನ ಕವಲು ಗೊಂಬೆಗಳಾಗಿ ಕಂಗೊಳಿಸಿದಾಗ ನಮ್ಮ ಸಾಮಾಜಿಕ ಬದುಕು ನಿಜವಾದ ಅರ್ಥದಲ್ಲಿ ಸಾಂಸ್ಕೃತಿಕ ಬದುಕಾಗಿರುವುದರಲ್ಲಿ ಸಫಲವಾಗುತ್ತದೆ. ಡಿ.ವಿ.ಜಿ. ಯವರು ಹೇಳಿರುವಂತೆ 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು' ಎಂಬ ಮಾತು ನಮ್ಮ ಸಾಂಸ್ಕೃತಿಕ ಜೀವನಕ್ಕೂ ಪೂರ್ಣ ಅನ್ವಯವಾಗುತ್ತದೆ. ನಮ್ಮ ಸಮಾಜ ಜಾಗತೀಕರಣದಲ್ಲಿ ಕಂಡುಬರುವ ದೋಷಗಳಿಂದ ಮುಕ್ತವಾಗಿರಬೇಕು ಎಂಬ ಎಚ್ಚರ ನಮಗೆ ನಿಚ್ಚಳವಾಗಿರಬೇಕು. ಗೊರೂರವರ ಕೃತಿಗಳಲ್ಲಿ ವಸಾಹತುಶಾಹಿ ಪ್ರಭಾವವನ್ನು ಪೂರ್ಣ ಪ್ರಮಾಣದಲ್ಲಿ ಗುರುತಿಸಬಹುದು. ಇದು ವ್ಯಕ್ತಿ ಜೀವನದಲ್ಲಿ ಪ್ರಾರಂಭವಾಗಿ ಸಾಮಾಜಿಕ ಜೀವನದವರೆಗೆ ವ್ಯಾಪಕವಾಗಿ ಹರಡಿಕೊಂಡಿದೆ. ಇಂದು ಜಾಗತೀಕರಣದ ಪ್ರಭಾವ ನಮ್ಮ ಸಾಮಾಜಿಕ ಜೀವನದಲ್ಲಿ ಪರಿಣಾಮಕಾರಿಯಾಗಿ ಮೂಡುತ್ತಿರುವುದರಿಂದ ನಮ್ಮ ದೇಸಿತನ ಕ್ರಮೇಣ ಮರೆಯಾಗಬಹುದು ಎಂಬ ಭ್ರಮೆ ಭ್ರಾಂತಿಯ ಭಯ ನಮಗೆ ಕಾಡಿದರೂ ಆಶ್ಚರ್ಯವಿಲ್ಲ. ಆದರೆ ಒಂದು ಸಮಾಜದ ಮೂಲ ಸಂಸ್ಕೃತಿ ಯಾವತ್ತಿಗೂ ಹೊಳೆದಂಡೆಯ ಗರಿಕೆಯಂತೆ ಶಾಶ್ವತ ಎಂಬುದನ್ನು ನಾವು ಒಪ್ಪಲೇಬೇಕು. ಗೊರೂರವರು ನಮ್ಮ ಸಾಮಾಜಿಕ ಜೀವನದ ಪರಿವರ್ತನೆಯ ಲಕ್ಷಣವನ್ನು ಗುರುತಿಸುವಾಗ ಈ ವಾಸ್ತವಾಂಶವನ್ನು ಪ್ರಾಸಂಗಿಕವಾಗಿ ನೆನಪಿಸಿದ್ದಾರೆ. ಗೊರೂರವರ ಕೃತಿಗಳು ಶುದ್ಧ ತಾತ್ತ್ವಿಕ ನೆಲೆಗಟ್ಟಿನಲ್ಲಿ ರೂಪಿತವಾಗಿರುವುದರಿಂದ ಸಾಮಾಜಿಕ ಜೀವನದಲ್ಲಿ ಅದರ ಸಾಂಸ್ಕೃತಿಕ ಅಧ್ಯಯನ ವ್ಯಾಪಕ ದೃಷ್ಟಿಯನ್ನು, ಪೂರ್ಣ ದೃಷ್ಟಿಯನ್ನು ಮತ್ತು ಭವಿಷ್ಯದ ದೃಷ್ಟಿಯನ್ನು ಹೊಂದಿದೆ ಎಂದು ತೀರ್ಮಾನಿಸಬಹುದು. ಗ್ರಾಮ ಸಂಸ್ಕೃತಿಗೊಂದು ಪರ್ಯಾಯ ಗೊರೂರವರು ಅಂದರೆ ಹೆಚ್ಚು ಸಮಂಜಸವಾಗುತ್ತದೆ ಮತ್ತು ಅದು ಧ್ವನಿಪೂರ್ಣವಾಗುತ್ತದೆ.

ಅಧ್ಯಾಯ ೪

ಗೊರೂರವರು ಒಂದು ಅವಲೋಕನ

೪.೧. ಗೊರೂರವರ ವ್ಯಕ್ತಿತ್ವ

೪.೨. ಗೊರೂರವರ ಕೃತಿಗಳು

ಅಧ್ಯಾಯ ೪

ಗೊರೂರವರು ಒಂದು ಅವಲೋಕನ

ಸಾಹಿತ್ಯ ಕೃತಿಯ ಪ್ರೌಢ ಅಧ್ಯಯನ ಸಾಹಿತ್ಯ ಪ್ರಪಂಚದಲ್ಲಿ ಎಷ್ಟು ಗಂಭೀರವಾದ ಚಟುವಟಿಕೆಯಾಗಿದೆಯೋ ಅಷ್ಟೇ ಪ್ರಯೋಜನಕಾರಿಯು ಆಗಿದೆ. ಸಾಹಿತ್ಯ ಕೃತಿ ಪ್ರಬುದ್ಧ ಮನಸ್ಸಿನ ಸಾಹಿತಿಯ ಚಿಂತನೆಯ ಫಲ ಹಾಗೂ ಸಮಾಜವನ್ನು ಕುರಿತ ಸೂಕ್ಷ್ಮ ದೃಷ್ಟಿಯ ಪರಿಪೂರ್ಣ ರೂಪ. ಪ್ರೌಢ ಕೃತಿಯನ್ನು ಕುರಿತು ಮಿಕ್ಕ ಸಾಹಿತ್ಯ ಚಿಂತಕರು ನಡೆಸುವ ಚಿಂತನೆ ಒಂದು ದೃಷ್ಟಿಯಲ್ಲಿ ಅತಿ ಗಹನ ಎಂದು ಹೇಳಿದರೆ ಕೇವಲ ಸಾಹಿತ್ಯಾಸಕ್ತರು ನಡೆಸುವ ಚಿಂತನೆ ಸಾಮಾನ್ಯವಾಗಿ ಕಂಡುಬಂದರೂ ಅದು ವಿಶಿಷ್ಟ ರೀತಿಯದ್ದಾಗಿರುತ್ತದೆ. ಪ್ರೌಢ ಪ್ರಬಂಧದಲ್ಲಿ ಸಾಹಿತ್ಯಾಸಕ್ತಿಯ ಈ ಎರಡೂ ರೀತಿಯ ಚಿಂತನೆಯ ಸಮ್ಮಿಲನವನ್ನು ಗುರುತಿಸಬಹುದು. ಕೃತಿಯ ಅವಲೋಕನವನ್ನು ಮಾಡುವಾಗ ಕೃತಿಕಾರನ ಬದುಕಿನ ಪ್ರಧಾನ ಘಟನೆಗಳನ್ನು ಗಮನಿಸುವುದು ಮುಖ್ಯ ಸಂಗತಿಯಾಗಿರುತ್ತದೆ. ಕೃತಿಕಾರನ ಸಾಮಾಜಿಕ ದೃಷ್ಟಿ ಧೋರಣೆಗಳು ಒಂದು ಕೃತಿಯ ಅವಲೋಕನದಲ್ಲಿ ಮಿಳಿತವಾಗಿರುತ್ತದೆ. ಸಾಹಿತ್ಯ ಯುಗ ಧರ್ಮದ ಅವಿಭಾಜ್ಯ ಅಂಗ ಎಂದಾಗ ಯುಗಧರ್ಮ ಲಕ್ಷಣದ ಚಿಂತನೆಯು ಅವಲೋಕನದಲ್ಲಿ ಸೇರಿಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಗೊರೂರವರ ಕೃತಿಗಳ ಅವಲೋಕನ ಹಲವು ಅಂಶಗಳಲ್ಲಿ ಸಾಧಾರಣ ಸಾಮಾನ್ಯ ಸಂಗತಿಯಾದರೆ ಕೆಲವು ವಿಶಿಷ್ಟ ದೃಷ್ಟಿಕೋನದ ಹಿನ್ನೆಲೆಯಲ್ಲಿ ಪ್ರೌಢ ಅಧ್ಯಯನವು ಆಗಿರುತ್ತದೆ.

ವ್ಯಕ್ತಿಯಾಗಿ ಗೊರೂರವರ ಬದುಕನ್ನು ಅವಲೋಕಿಸಿದಾಗ ಅವರು ಗ್ರಾಮೀಣ ಪರಿಸರದಲ್ಲಿ ಬದುಕಿ ಬಾಳಿದ ಸರಳ ಮನೋಧರ್ಮದ ಸಾಹಸ ಪ್ರವೃತ್ತಿಯ ಸ್ನೇಹಮಹಿ ವ್ಯಕ್ತಿ. ಸ್ವಾತಂತ್ರ್ಯದ ಹೋರಾಟದ ಸಮಯದಲ್ಲಿ ಬದುಕಿದ ಗೊರೂರವರಲ್ಲಿ ಗಾಂಧೀಜಿಯವರ ಪ್ರಭಾವ ಸ್ವಾತಂತ್ರ್ಯದ ಕೆಚ್ಚು ಉತ್ಸಾಹಗಳು ಸಂಪೂರ್ಣವಾಗಿ ಮೈತುಂಬಿ ಬಂದಿರುವುದನ್ನು ಗುರುತಿಸಬಹುದು. ದೇಶಿಯ ಒಲವು, ಮಾನವ ಧರ್ಮದ ಮೂಲ ಅಂಶವಾದ ಮಾನವೀಯತೆ ಗೊರೂರವರ ವ್ಯಕ್ತಿತ್ವದಲ್ಲಿ ಮಿಂಚಿದ ಮೇಲ್ಮೆಯ ಗುಣಗಳಾಗಿವೆ. ಸರಳವಾದ ಬದುಕಿನಲ್ಲಿ ಇಂತಹ ಶ್ರೀಮಂತ ಚಿಂತನೆಗಳು ಮಿಳಿತವಾಗಿರುವುದ ರಿಂದಲೇ ಗೊರೂರವರ ವ್ಯಕ್ತಿತ್ವ ಅವರ ಸಾಹಿತ್ಯ ಕೃತಿಗಳು ಉನ್ನತವಾಗಿವೆ. ಹೀಗೆ ವ್ಯಕ್ತಿಯಾಗಿ ಗೊರೂರವರು ಕ್ರಿಯಾಶೀಲರಾಗಿ, ದೇಶಭಕ್ತರಾಗಿ, ದೇಸಿತನದ ವ್ಯಕ್ತಿಯಾಗಿ ಮತ್ತು ಹಿರಿಯ ಚಿಂತಕರಾಗಿ ನಮಗೆ ಗೋಚರವಾಗಿದ್ದಾರೆ. ಗೊರೂರವರ ವ್ಯಕ್ತಿತ್ವದ ಈ ಅಪೂರ್ವ ಅಂಶಗಳು ಅವರ ಸಾಹಿತ್ಯ

ಕೃತಿಗಳಲ್ಲಿ ಅಭಿವ್ಯಕ್ತವಾಗಿರುವ ಅನುಭವಗಳಿಗೆ ನೈಜತೆಯನ್ನು ತಂದುಕೊಡುವುದರ ಜತೆಗೆ ಅನನ್ಯತೆಯನ್ನು ತುಂಬಿಕೊಟ್ಟಿದೆ.

ಗೊರೂರವರ ಕೃತಿಗಳನ್ನು ಸಾಹಿತ್ಯಕ ಮೌಲ್ಯ ದೃಷ್ಟಿಯಲ್ಲಿ ಪರಿಭಾವಿಸಿದಾಗ ಎಲ್ಲ ಕೃತಿಗಳು ಸಹೃದಯರ ಮನಸ್ಸನ್ನು ಸ್ಪಂದಿಸುವ ಸಾಹಿತ್ಯದ ನೈಜಗುಣದೊಂದಿಗೆ ಉತ್ತಮ ಕೃತಿಗಳೆನಿಸಿವೆ. ಈ ಕಾರಣದಿಂದಲೇ ಗೊರೂರವರ ಸಾಹಿತ್ಯ ಶ್ರೀಸಾಮಾನ್ಯರಿಗೆ ಚೈತನ್ಯದಾಯಿಯೂ ಚೇತೋಹಾರಿಯು ಆಗಿದೆ. ಗೊರೂರವರ ಕೃತಿಗಳಲ್ಲಿ ವ್ಯಕ್ತಿ ಜೀವನದ ಮೌಲ್ಯವನ್ನು ಸಾಮಾಜಿಕ ಜೀವನ ಮೌಲ್ಯವನ್ನು ನಾವು ಒಟ್ಟಾಗಿ ನೋಡುತ್ತೇವೆ. ವ್ಯಕ್ತಿ ವೈಯಕ್ತಿಕವಾಗಿ ಉತ್ತಮವಾಗಿ ಬದುಕಿದಾಗಲೇ ಸಾಮಾಜಿಕ ಜೀವನದಲ್ಲಿಯು ಅವನ ಪಾತ್ರ ಪ್ರಭಾವೀಪೂರ್ಣವಾಗುತ್ತದೆ. ಸಾಮಾಜಿಕ ಜೀವನದಲ್ಲಿ ಆತ ಮಾನ್ಯ ನಾಗುತ್ತಾನೆ ಎಂಬ ಅಂಶವನ್ನು ಗೊರೂರವರ ಕೃತಿಗಳು ಖಚಿತಪಡಿಸುತ್ತದೆ. ಗೊರೂರವರ ಕೃತಿಗಳಲ್ಲಿ ವರ್ತಮಾನದ ಸ್ಥಿತಿ ಚಿತ್ರವನ್ನು ಕಾಣುವುದರ ಜತೆಗೆ ನಮ್ಮ ಸಂಸ್ಕೃತಿಯ ಪರಂಪರೆಯ ವೈಭವವನ್ನು ನೋಡಬಹುದು. ಇದರ ಜತೆಗೆ ನಮ್ಮ ಭವಿಷ್ಯ ಜೀವನದ ಸೊಗಸಿಗೆ ಸಾರ್ಥಕತೆಗೆ ಸ್ಫೂರ್ತಿ ಅಂಶಗಳನ್ನು ನಾವು ಗೊರೂರವರ ಕೃತಿಗಳ ಮೂಲಕ ಪಡೆಯಬಹುದು. ಈ ಸಾಹಿತ್ಯಕ ಮೌಲ್ಯ ಗೊರೂರವರ ಕೃತಿಗಳ ಅವಲೋಕನದಲ್ಲಿ ನಿಚ್ಚಳವಾಗಿ ಮೂಡಿಬಂದಿದೆ. ಗೊರೂರವರ ಸಾಹಿತ್ಯ ಎಷ್ಟು ರಸಿಕತೆಯಿಂದ ರಂಜನೀಯವಾಗಿದೆಯೋ ಅಷ್ಟೇ ಸಾರ್ಥಕ ಅಂಶಗಳಿಂದ ಚಿಂತನಪರ ಕೃತಿಗಳೂ ಆಗಿದೆ. ಸಾರ್ವಕಾಲಿಕ ಮೌಲ್ಯವನ್ನು ಅವರ ಕೃತಿಗಳು ವಸ್ತು ಮತ್ತು ರೀತಿ ದೃಷ್ಟಿಯಿಂದ ಪರಿಪೂರ್ಣವಾಗಿ ಗಳಿಸಿಕೊಂಡಿದೆ. ಗೊರೂರವರ ಕೃತಿಗಳ ಈ ರೀತಿಯ ತಾತ್ವಿಕ ನೆಲೆಗಟ್ಟಿನ ಅವಲೋಕನ ಕಾರ್ಯ ಮಹಾಪ್ರಬಂಧದ ವಿಷಯಕ್ಕೆ ಅನುಗುಣವಾಗಿ ಚರ್ಚಿತವಾಗಿದೆ. ಗೊರೂರವರು ವ್ಯಕ್ತಿಯಾಗಿ ಹೇಗೆ ಸ್ನೇಹಜೀವಿಗಳಾಗಿದ್ದರೋ ಸಾಹಿತ್ಯ ಪ್ರಪಂಚದಲ್ಲಿ ಅವರ ಕೃತಿಗಳು ಸಹೃದಯರ ಪಾಲಿಗೆ ಅಷ್ಟೇ ಸ್ನೇಹಪರವಾಗಿವೆ.

೪.೧. ಗೊರೂರವರ ವ್ಯಕ್ತಿತ್ವ

ಒಂದು ಕೃತಿಯನ್ನು ಕುರಿತು ಆಳವಾದ ಅಧ್ಯಯನ ಮಾಡುವಾಗ - ವಿಮರ್ಶೆ ಮಾಡುವಾಗ ಕೃತಿಯನ್ನು ಹತ್ತು ಹಲವು ದೃಷ್ಟಿಕೋನಗಳಲ್ಲಿ ನೋಡುವುದು ಉತ್ತಮ ಅಧ್ಯಯನ ಎನಿಸುತ್ತದೆ. ಇದನ್ನೆ ಸಮರ್ಪಕ ಅಧ್ಯಯನ ಎಂದು ಕರೆಯುತ್ತಾರೆ. ಕೃತಿಯ ಅಧ್ಯಯನವನ್ನು ಪರಿಸರ, ಕೃತಿ ರಚನೆಯಾದ ಕಾಲದ ಹಿನ್ನೆಲೆಯಲ್ಲಿ ಕೈಗೊಳ್ಳಲಾಗುತ್ತದೆ. ಇದರ ಜೊತೆಗೆ ಪರಂಪರೆಯ ಹಿನ್ನೆಲೆಯಲ್ಲಿ ನಿರ್ದಿಷ್ಟ ಕೃತಿಯನ್ನು ಅವಲೋಕನ ಮಾಡುವುದುಂಟು. ಇದನ್ನೆ ಕೃತಿಯ ವ್ಯಾಪಕ ಅಧ್ಯಯನದ ಒಂದು ದೃಷ್ಟಿ ಕೋನ ಎಂದು ಕರೆಯುವುದು. ಈ ರೀತಿಯ ಅಧ್ಯಯನಕ್ಕೆ ಒಂದು ವ್ಯಾಪಕ ಸಿದ್ಧಾಂತ, ನೆಲೆಗಟ್ಟು ಇಲ್ಲದಿದ್ದರು ಆಯಾ ಕೃತಿಗೆ ಅನುಗುಣವಾದ ನೆಲೆಗಟ್ಟುಗಳನ್ನು ಕಾಣಬಹುದು. ಸಾಹಿತಿ ಸಮಾಜದಿಂದ ಪ್ರೇರಿತವಾಗಿ ಕೃತಿ ರಚನೆ ಮಾಡುತ್ತಾನೆ ಎಂದಾಗ ಇಲ್ಲಿ ಪ್ರೇರಣೆ ಎಂಬುದು ವರ್ತಮಾನದ ಪ್ರೇರಣೆಯೂ

ಆಗಬಹುದು ಅದರ ಜೊತೆಗೆ ಸಂಪ್ರದಾಯದ, ಪರಂಪರೆಯ - ಇತಿಹಾಸದ ಪ್ರಭಾವದ ಪ್ರೇರಣೆಯೂ ಆಗಿರಬಹುದು. ಈ ರೀತಿಯ ಪ್ರೇರಣೆಗೆ ದೇಶಿಯ ಸ್ಥಿತಿಗತಿಗಳು ಕಾರಣವಾದರೆ ಅನ್ಯದೇಶಿಯ ಪ್ರೇರಣೆಯೂ ಹಲವು ವಿಷಯಗಳಲ್ಲಿ ಕಾರಣವಾಗುತ್ತದೆ. ಈ ದೃಷ್ಟಿಯಿಂದಲೇ ಒಂದು ಸಾಹಿತ್ಯ ಕೃತಿಯನ್ನು 'ಘಟನೆಗಳ ಮೂರ್ತಿ ರೂಪ' ಎಂದು ಕರೆಯುವುದು.

ಕೃತಿಯಲ್ಲಿ ವರ್ತಮಾನದ ಪ್ರೇರಣೆಯನ್ನು ಗುರುತಿಸುವಾಗ ಕೆಲವು ಸೈದ್ಧಾಂತಿಕ ವಿಷಯಗಳು ನಮಗೆ ಗೋಚರವಾಗುತ್ತದೆ. ಈ ಸೈದ್ಧಾಂತಿಕ ವಿಷಯಗಳು ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ, ತಾತ್ವಿಕ ವಿಷಯಗಳಲ್ಲಿ ಒಂದಾಗಿರಬಹುದು ಅಥವಾ ಹಲವು ವಿಷಯಗಳು ಆಗಿರಬಹುದು. ಸಾಹಿತ್ಯ ಚಿಂತಕರು ಇಂತಹ ಸೈದ್ಧಾಂತಿಕ ವಿಷಯಗಳ ಪ್ರಭಾವ ಪರಂಪರೆಯನ್ನು ಕುರಿತು ವಿಚಾರ ಮಾಡುವಾಗ ಸಾಹಿತ್ಯ ಕೃತಿ ಕಾಲಗರ್ಭದಿಂದ ಅವತರಿಸಿ ಬಂದ ವಿಶಿಷ್ಟ ಕೃತಿ ಎನ್ನುತ್ತಾರೆ. ಇಂಥಹ ಪ್ರೇರಣೆ ಕೃತಿಗೆ ಒಂದು ವೈಶಿಷ್ಟ್ಯವನ್ನು ತಂದು ಕೊಡುವುದರ ಜೊತೆಗೆ ಪರಂಪರೆಯ ಬೆರಗು, ಸೊಗಸನ್ನು ತುಂಬಿ ಕೊಡುತ್ತದೆ. ಪರಂಪರೆಯ ಗರ್ಭದಲ್ಲಿ ಅವತರಿಸಿ ಬಂದ ಎಲ್ಲ ಕಲಾಕೃತಿಗಳು ತನ್ನದೇ ಆದ ಅನನ್ಯತೆಯನ್ನು ಉಳಿಸಿಕೊಂಡಿರುತ್ತದೆ.

ಸಾಹಿತಿ ತನ್ನ ಕೃತಿಯನ್ನು ಪರಂಪರೆಯ ಮಾಲೆಯಲ್ಲಿ ಸೇರಿಸುವುದಕ್ಕೆ ಇಷ್ಟಪಡುವುದಿಲ್ಲ. ಪರಂಪರೆಯಲ್ಲಿ ಮೂಡಿ ಬಂದಿದ್ದರು ತನ್ನ ಕೃತಿ ಹಲವು ರೀತಿಯಲ್ಲಿ ಪ್ರತಿಷ್ಠಿತ ಕೃತಿಯಾಗಬೇಕು ಎಂಬ ಬಯಕೆ ಸಾಹಿತಿಗೆ ಇದ್ದೇ ಇರುತ್ತದೆ. ಹೀಗೆ ಪರಂಪರೆಯೊಂದಿಗೆ ಸಂಬಂಧ ಇಟ್ಟುಕೊಂಡ ಕೃತಿ ಸಹೃದಯನಿಗೆ ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ ಎಂಬ ಮಾತು ಪೂರ್ಣಸತ್ಯ. ಇಲ್ಲಿ ಸಾಹಿತಿಯ ಮೂಲಕ ಜನಮನದ ಭಾವನೆಗಳ ಬೆಳವಣಿಗೆಯನ್ನು ನೋಡುತ್ತೇವೆ. ಈ ದೃಷ್ಟಿಯಲ್ಲಿ ಒಂದು ಉತ್ತಮ ಕೃತಿ ತ್ರಿಕಾಲ ಸಂಬಂಧವನ್ನು ಹೊಂದಿರುವ ಶ್ರೇಷ್ಠ ಕೃತಿ ಎನ್ನುತ್ತಾರೆ. ಕೃತಿಯಲ್ಲಿ ಭೂತಕಾಲ, ವರ್ತಮಾನ ಕಾಲದ ಸಂಗತಿಗಳನ್ನು ವಿಚಾರಗಳನ್ನು ಗುರುತಿಸುವುದರ ಮೂಲಕ ಭವಿಷ್ಯತ್ ಕಾಲಕ್ಕೆ ಸಂಬಂಧಿಸಿದ ದೃಷ್ಟಿ ಧೋರಣೆಗಳನ್ನು ಕಾಣಬಹುದು. ಇಂಥಹ ತ್ರಿಕಾಲ ದೃಷ್ಟಿಯನ್ನು ಮೈತುಂಬಿಕೊಂಡಿರುವ ಸಾಹಿತ್ಯ ಕೃತಿಗಳನ್ನು ಪರಿಪೂರ್ಣ ದೃಷ್ಟಿಯ ಕೃತಿಗಳೆಂದು ವಿದ್ವಾಂಸರು ಕರೆದಿದ್ದಾರೆ. ಈ ಪರಿಪೂರ್ಣ ದೃಷ್ಟಿ ಕೃತಿಗೆ ಕವಿಯ ಅಂತರಂಗ ಬಹುಮುಖವಾದ ಪ್ರೇರಣೆಯ ಶಕ್ತಿಯನ್ನು ತುಂಬಿಕೊಡುತ್ತದೆ. ಇಂತಹ ಕೃತಿಗಳಲ್ಲಿ ವಿಶಿಷ್ಟ ಸೊಗಸನ್ನು ಗಮನಿಸುತ್ತೇವೆ.

ಕೃತಿ ರಚನೆಯಲ್ಲಿ ಪರಿಸರ ಪರಂಪರೆಯ ಪ್ರಭಾವವನ್ನು ಕಂಡಂತೆ ಸಾಹಿತಿಯ ಮನೋಧರ್ಮದ ಪ್ರಭಾವವನ್ನು ಕಾಣಬಹುದು. ಈ ಕಾರಣದಿಂದಲೆ ಸಾಹಿತಿಗೂ ಅವನು ರಚಿಸಿದ ಕೃತಿಗೂ ಅವಿನಾಭಾವ ಸಂಬಂಧ ಇದೆ ಎಂಬ ಮಾತನ್ನು ವಿಮರ್ಶಕರು ಹೇಳುವುದುಂಟು. ಕೃತಿ ಜನಮನಕ್ಕೆ ಹಿಡಿದ ಕನ್ನಡಿಯಂತೆ ಕವಿ ಮನಕ್ಕೆ ಹಿಡಿದ ಕನ್ನಡಿ ಎಂದು ಅರ್ಥಪೂರ್ಣವಾಗಿ ತಿಳಿಸಿದ್ದಾರೆ. ಅಂದರೆ ಕವಿ ಕೃತಿಯಲ್ಲಿ ಜನ

ಜೀವನದ ಪ್ರತಿರೂಪವನ್ನು ಕಾಣುವಂತೆ ಕವಿ ಮನದ ಅಭೀಪ್ಸೆಯನ್ನು ಗುರುತಿಸುತ್ತೇವೆ. ಈ ದೃಷ್ಟಿಯಿಂದಲೆ ಕೃತಿಯನ್ನು ಕವಿ ಮನದ ಅಂತರಾಳದ ಸ್ಪಷ್ಟ ಬೆಳಕು ಎಂದು ಕರೆಯುವುದು.

ಜೀವನ ಭಾವಿಸಿದಂತೆಯೂ ಇರಬಹುದು, ಬಂದಂತೆಯೂ ಇರಬಹುದು. ಸಂಪ್ರದಾಯವಾದಿಗಳು ಹೇಳುವಂತೆ ವಿಧಿ ಬರೆದಂತೆಯೂ ಇರಬಹುದು. ಈ ಎಲ್ಲ ಕಾರಣಗಳಿಂದ ಜೀವನದಲ್ಲಿ ವೈವಿಧ್ಯತೆಯನ್ನು ಅನಿವಾರ್ಯವಾಗಿ ಕಾಣಬಹುದು. ವ್ಯಕ್ತಿಜೀವನ ಈ ಅಂಶಗಳಿಂದ ಕುತೂಹಲಕಾರಿಯಾದಂತೆ ಅರ್ಥ ಪೂರ್ಣವೂ ಆಗಿರುತ್ತದೆ. ಸಾಹಿತಿಯ ಜೀವನದ ಸ್ಥಿತಿಗತಿಗಳೆಲ್ಲವನ್ನು ನಾವು ಗುರುತಿಸಬಹುದು ಎನ್ನುವುದಕ್ಕಿಂತ ಕೃತಿಯಲ್ಲಿ ಸಹಜವಾಗಿ ಆವಿರ್ಭವಿಸಿರುತ್ತದೆ ಎಂದು ಸಿದ್ಧಾಂತವಾಗಿ ಹೇಳಬಹುದು. ಈ ವಿಚಾರಗಳು ಕೃತಿಯಲ್ಲಿ ಇದ್ದಾಗಲೆ ಕೃತಿಗೆ ನೈಜತೆಯ ಸೊಗಸು ತುಂಬಿ ಬರುತ್ತದೆ.

ವ್ಯಕ್ತಿ ನಿಸರ್ಗದತ್ತವಾದ ಬುದ್ಧಿ ಭಾವನೆಗಳಿಂದ ತನ್ನದೇ ಆದ ಬದುಕಿನ ರೀತಿ ನೀತಿಗಳನ್ನು ತಾನು ರೂಪಿಸಿಕೊಳ್ಳುತ್ತಾನೆ. ಆಸೆ-ಆಕಾಂಕ್ಷೆಗಳನ್ನು ಗುರುತಿಸಿಕೊಳ್ಳುತ್ತಾನೆ. ಇದು ಅವನ ವೈಯಕ್ತಿಕ ಗುಣ ಎನಿಸುತ್ತದೆ. ವ್ಯಕ್ತಿ ಕುಟುಂಬದ ಸದಸ್ಯನಾದಂತೆ ಪರಿಸರದ ಶಿಶುವೂ ಹೌದು. ವ್ಯಕ್ತಿಯಲ್ಲಿ ಕುಟುಂಬದವರೆಲ್ಲರ ಗುಣ ಪ್ರಭಾವಗಳನ್ನು ಗುರುತಿಸಬಹುದು. ಇದು ಬಹಮಟ್ಟಿಗೆ ರಕ್ತಗತವಾಗಿ ಬಂದ ಗುಣಾಂಶಗಳಾಗಿರುತ್ತದೆ. ನಿರ್ದಿಷ್ಟ ಕುಟುಂಬದಲ್ಲಿ ಬೆಳೆಯುವಾಗ ಅವರ ಗುಣಗಳನ್ನು ಅನುಸರಿಸುವುದು, ಅನುಕರಿಸುವುದು ವ್ಯಕ್ತಿಯ ಸ್ವಭಾವವಾಗಿರುತ್ತದೆ. ಈ ದೃಷ್ಟಿಯಿಂದಲೇ ಒಂದು ಕೃತಿಯಲ್ಲಿ ವಂಶ ಪಾರಂಪರ್ಯ ಗುಣ ಮೌಲ್ಯಗಳನ್ನು ಗುರುತಿಸಬಹುದೆಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಕೃತಿಗೂ-ಕವಿಗೂ ಅನನ್ಯ, ಅನ್ಯೋನ್ಯ ಬಾಂಧವ್ಯ ಇದೆ ಎಂದು ವಿಮರ್ಶಕರು ಹೇಳುವ ಮಾತು ನಮಗೆ ಸಮರ್ಪಕ ಎನಿಸುತ್ತದೆ. ತನಗೂ ತನ್ನ ಮನೋಧರ್ಮಕ್ಕೂ ಬೇರೆಯಾಗಿ ಸ್ವತಂತ್ರವಾಗಿ ಕೃತಿ ನಿಲ್ಲುತ್ತದೆ ಎಂಬುದು ಒಂದು ಸಿದ್ಧಾಂತವಾದರೆ ಕವಿಯ ಕೃತಿ ಕವಿಯ ಮನಸ್ಸಿಗಿಂತ ಬೇರೆಯಾಗಿ ಉಳಿಯದ-ಉಳಿಯಲಾಗದ ಅನ್ಯೋನ್ಯ ಸಂಬಂಧಿ ಎಂಬ ಸಿದ್ಧಾಂತ ಎರಡೂ ಒಪ್ಪಿತವಾದದ್ದು. ನಾವು ಕೃತಿಯನ್ನು ಅಧ್ಯಯನ ಮಾಡುವಾಗ ಕವಿಯ ಮನಸ್ಸಿನ ಅಧ್ಯಯನ, ಕವಿಯ ಕಾಲದ ಪರಿಸರದ ಅಧ್ಯಯನ ಎರಡನ್ನು ಜೊತೆಯಲ್ಲಿಯೇ ಮಾಡಿದಾಗ ಕೃತಿಯ ಬಗ್ಗೆ ನಿಷ್ಪಷ್ಟ ಭಾವನೆಗಳನ್ನು ಪಡೆಯಬಹುದು. ಈ ಸಂದರ್ಭದಲ್ಲಿ ಸಹೃದಯ ವಿಮರ್ಶಕ ನಿಷ್ಪಕ್ಷಪಾತ ಆಗಿರುವುದರ ಜೊತೆಗೆ ಪ್ರಾಮಾಣಿಕನು ಆಗಿರಬೇಕು. ಕವಿಗೂ ಕೃತಿಗೂ ಇರುವ ಸಂಬಂಧವನ್ನು ಹೇಳುವಾಗ ರಾಷ್ಟ್ರಕವಿ ಕುವೆಂಪುರವರು 'ಶ್ರೀ ರಾಮಾಯಣ ದರ್ಶನಂ' ಕೃತಿಯಲ್ಲಿ ಹೇಳುವ ಪ್ರಸಿದ್ಧವಾದ ಮಾತು 'ಕುವೆಂಪು ಸೃಜಿಸಿದ ರಾಮಾಯಣ ಕುವೆಂಪುವ ಸೃಜಿಸಿತು' ಎಂದು ಹೇಳುತ್ತಾರೆ. ಇಲ್ಲಿ ಕವಿಯ ಅಂತರಂಗ ಕವಿ ಕೃತಿಗೆ ಹೇಗೆ ಒಂದು ರೂಪ ಕೊಟ್ಟಿದೆಯೋ ಅದೇ ರೀತಿಯಲ್ಲಿ ಕವಿಯ ಪ್ರತಿಭಾ ಶಕ್ತಿಯಿಂದ ಮೂಡಿ ಬಂದ ಕಲಾಕೃತಿ ಕವಿಗೆ ಒಂದು ಹೊಸ ವ್ಯಕ್ತಿತ್ವವನ್ನು ತಂದು ಕೊಡುತ್ತದೆ ಎಂಬ ಮಾತು ಅತ್ಯಂತ ಮಹತ್ವಪೂರ್ಣವಾದ ದಿವ್ಯ ಸತ್ಯ ಎನ್ನಬಹುದು.

ಗೊರೂರವರು ನವೋದಯ ಕಾಲದ ವಿಶಿಷ್ಟ ಲೇಖಕರಾಗಿದ್ದಾರೆ. ಅವರ ಸಾಹಿತ್ಯದಲ್ಲಿ ಕವಿ ಮನೋಧರ್ಮವನ್ನು ಸಮಕಾಲೀನ ಪರಿಸರದ ಪ್ರಭಾವವನ್ನು ಗುರುತಿಸಬಹುದು. ಗೊರೂರವರು ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ ಬಂದ ವ್ಯಕ್ತಿ. ಇಲ್ಲಿ ಸಂಪ್ರದಾಯದ ನಿಷ್ಠೆ ಅವರ ಸಾಹಿತ್ಯದಲ್ಲಿ ಕಂಡುಬರುತ್ತದೆ. ಗೊರೂರವರು ತಮ್ಮ ವೈಯಕ್ತಿಕ ಜೀವನದಲ್ಲಿ ಅನೇಕ ಸಂಪ್ರದಾಯಗಳಿಗೆ ಮಾನ್ಯತೆಯನ್ನು ಕೊಟ್ಟಿರುವುದು ನಮಗೆ ಗೋಚರವಾಗುತ್ತದೆ. ಗೊರೂರವರಲ್ಲಿ ವೈಚಾರಿಕ ದೃಷ್ಟಿಗೆ ಅನುಗುಣವಾಗಿ ಹೊಸ ಬದುಕಿನ ಸಂಗತಿಗಳನ್ನು ಕಾಣಬಹುದು. ಲೇಖಕರ ಮನೋಭಾವವನ್ನು ನವೀನ ದೃಷ್ಟಿಯಿಂದ ನಾವು ಬಹುಮಟ್ಟಿಗೆ ಪರಿಭಾವಿಸುತ್ತೇವೆ. ಹಲವರ ಅಭಿಪ್ರಾಯದಲ್ಲಿ ಇದು ಕ್ರಾಂತಿ ದೃಷ್ಟಿಯೂ ಆಗಿರುತ್ತದೆ. ಬದುಕಿನಲ್ಲಿ ಸಂಪ್ರದಾಯದ ಸದಂಶಗಳನ್ನು ಪರಿಪಾಲಿಸುವುದು ಎಷ್ಟು ಅವಶ್ಯವೋ ಹೊಸ ಪರಿಸರದ ಸದಂಶಗಳನ್ನು ಅರ್ಥಪೂರ್ಣವಾಗಿ ಬದುಕಿನಲ್ಲಿ ಅಳವಡಿಸಿಕೊಳ್ಳುವುದರಲ್ಲಿಯೂ ಔಚಿತ್ಯವಿದೆ, ಅನಿವಾರ್ಯತೆ ಇದೆ ಎಂಬುದನ್ನು ಗೊರೂರವರು ತಮ್ಮ ಕೃತಿಗಳಲ್ಲಿ ಪ್ರಧಾನವಾಗಿ ಅಭಿವ್ಯಕ್ತಪಡಿಸಿದ್ದಾರೆ. ಲೇಖಕರ ಕೃತಿಗಳಲ್ಲಿ ಕಂಡುಬರುವ ಮೌಲ್ಯಗಳ ಮಾನ್ಯತೆಗೆ ಅವರ ಸಂಪ್ರದಾಯದ ಗುಣ ಕಾರಣವಾಗುತ್ತದೆ. ನಾಗರಿಕತೆಯ ಕೆಲವು ಅಂಶಗಳನ್ನು ಮೆಚ್ಚಿ ನುಡಿಯುವಾಗ ಗೊರೂರವರ ಹೊಸ ದೃಷ್ಟಿ ನಮಗೆ ಮನವರಿಕೆಯಾಗುತ್ತದೆ. ಅಂತರ್ಜಾತಿಯ ವಿವಾಹ, ಜಾತಿ ಸಮಾನ ದೃಷ್ಟಿ ಗೊರೂರವರ ಹೊಸ ದೃಷ್ಟಿಗೆ ವಿಚಾರವಾದಕ್ಕೆ ಸ್ಪಷ್ಟ ಸಂಕೇತಗಳಾಗಿವೆ. ಗೊರೂರವರ ವೈಯಕ್ತಿಕ ಜೀವನದಲ್ಲಿ ಗಾಂಧೀಜಿಯವರ ಪ್ರಭಾವ ವಿಶೇಷವಾಗಿದೆ. ಗಾಂಧಿ ಅವರ ಸ್ವಾತಂತ್ರ್ಯ ಚಳುವಳಿಯನ್ನು ಗೊರೂರವರು ಮೆಚ್ಚಿಕೊಂಡಂತೆ ಸ್ವದೇಶಿ ಚಳುವಳಿಯನ್ನು ಸಹ ಪೂರ್ಣ ಅರ್ಥದಲ್ಲಿ ಇವರು ಮಾನ್ಯ ಮಾಡಿ ಅದಕ್ಕನುಗುಣವಾಗಿ ಬದುಕಿದ್ದಾರೆ. ಗೊರೂರವರು ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದಿರುವುದು ಅಷ್ಟೇ ಅಲ್ಲದೆ ಗ್ರಾಮೀಣ ಜೀವನವನ್ನು ಮೆಚ್ಚಿಕೊಂಡು ಬಾಳಿದ ವ್ಯಕ್ತಿ. ಗ್ರಾಮೀಣ ಬದುಕಿನಲ್ಲಿ ಗೊರೂರವರು ಕಂಡು ಮೆಚ್ಚಿಕೊಂಡಿರುವ ವಿಷಯಗಳು ಎಂದರೆ ಪ್ರಾಮಾಣಿಕತೆ, ಶ್ರದ್ಧಾಪೂರ್ಣ ದುಡಿಮೆ, ಸಾಂಸ್ಕೃತಿಕ ಬದುಕಿನತ್ತ ಮತ್ತು ಸಹಕಾರ ತತ್ತ್ವ ಪ್ರಧಾನ ವಿಷಯಗಳಾಗಿವೆ. ಇವರು ಬದುಕಿನಲ್ಲಿ ತೋರಿಸಿದ ಔದಾರ್ಯ ಬಹುಮುಖವಾಗಿದೆ. ಮಾನವೀಯ ದೃಷ್ಟಿ ಒಂದು ಪ್ರಧಾನ ಗುಣವಾದರೆ ಪರಿಸರ ಪ್ರಜ್ಞೆ, ರಾಷ್ಟ್ರೀಯ ಮನೋಧರ್ಮ ಇತರ ಪ್ರಮುಖ ಅಂಶಗಳಾಗಿವೆ. ಇತರರನ್ನು ಬದುಕಿಸಿ ತಾನು ಬಾಳಬೇಕೆಂಬ ವಿಶಾಲ ತತ್ತ್ವ ಭಾರತೀಯ ಸಂಸ್ಕೃತಿಯ ಮೂಲ ಗುಣವಾದರೆ ಇದು ವೈಚಾರಿಕ ಬದುಕಿನ ಮುಖ್ಯ ವಿಷಯವೂ ಆಗಿದೆ.

ಗೊರೂರವರ ವ್ಯಕ್ತಿತ್ವದ ವಿಶಿಷ್ಟತೆಯನ್ನು ಶಿವರಾಮೇಗೌಡ ನಾಗವಾರ ಅವರು ಈ ರೀತಿ ಹೇಳುತ್ತಾರೆ. "ಸಾಂಸ್ಕೃತಿಕ ಪರಂಪರೆಯಲ್ಲಿ ಆಳವಾಗಿ ಬೇರು ಬಿಟ್ಟ ಒಬ್ಬ ಲೇಖಕ ಹೊಸ ಗಾಳಿ ಬೆಳಕಿನಲ್ಲಿ ಹೇಗೆ ಕಾಲಕ್ಕೆ ತಕ್ಕಂತೆ ಸಂವೇದಿಸಬಲ್ಲ ಎಂಬುದು ಗೊರೂರರ ಸಾಹಿತ್ಯವನ್ನು ಪೂರ್ವಾಗ್ರಹ ರಹಿತರಾಗಿ ಅಧ್ಯಯನ ಮಾಡಿದಾಗ ತಿಳಿಯುತ್ತದೆ. ಗೊರೂರರ ಸಾಹಿತ್ಯದಲ್ಲಿ ಮೇಲುನೋಟಕ್ಕೆ

ಸಂಪ್ರದಾಯಬದ್ಧ ಹಾಗೂ ನವೋದಯದ ಛಾಯೆ ಸ್ವಲ್ಪಮಟ್ಟಿಗೆ ಇದೆ ಎಂದು ಕಂಡರೂ 'ಭವನಿಮಜ್ಜನಚಾತುರ್ಯ ಲಘಿಮಾ ಕೌಶಲ' ಅವರಿಗೆ ಕರತಲಾಮಲಕ. ಆದ್ದರಿಂದ ಗೊರೂರರನ್ನು ನವೋದಯ, ನವ್ಯ, ಅನವ್ಯ ಈ ಯಾವ ಪಂಥದ ವಟುವಾಗಿಯೂ ಬಂಧಿಸದೆ, ಒಂದು ವಿಶಿಷ್ಟ ಪರಂಪರೆಯನ್ನು ರೂಢಿಸಿಕೊಂಡ ಪರಿಸರದಲ್ಲೇ ಗಮನಿಸಬೇಕಾಗುತ್ತದೆ" (ಶಿವರಾಮೇಗೌಡ ನಾಗವಾರ; ೧೯೭೭; ಪು-vii) ಎಂದು ತಮ್ಮ ಅಭಿಪ್ರಾಯವನ್ನು ವೈಶಿಷ್ಟ್ಯಪೂರ್ಣವಾಗಿ ತಿಳಿಸಿದ್ದಾರೆ.

ಗೊರೂರರವರು ಹುಟ್ಟಿನಿಂದ ರಸಿಕ ವ್ಯಕ್ತಿ. ಜೀವನದ ಎಲ್ಲ ಘಟನೆಗಳನ್ನು ಸಂತೋಷದಿಂದ ಸ್ವಾಗತಿಸಿ ಬದುಕುವ ಮನೋಧರ್ಮ, ಅದಕ್ಕೆ ಅನುಗುಣವಾಗಿ ಬದುಕುವುದು ಗೊರೂರರವರ ಜೀವನ ಧರ್ಮವಾಗಿತ್ತು. ಸುಖವನ್ನು ಸ್ವೀಕರಿಸುವಾಗ ಅವರು ತೋರಿಸುವ ಸಂಭ್ರಮ ಜೀವನದಲ್ಲಿ ದುರಂತವನ್ನು ಸ್ವೀಕರಿಸುವಾಗ ತೋರಿಸುವ ಮನೋಸ್ಥೈರ್ಯ ಅಪೂರ್ವ ಗುಣವಾಗಿದೆ. ರಾಷ್ಟ್ರಕ್ಕಾಗಿ ಅವರ ಮಗ ಪ್ರಾಣಾರ್ಪಣೆ ಮಾಡಿದಾಗ ಗೊರೂರರವರು ಕಿಂಚಿತ್ತು ಕದಲದೆ ತಮ್ಮ ಚಳುವಳಿಯ ಕಾರ್ಯವನ್ನು ಅದೇ ಉತ್ಸಾಹದಲ್ಲಿ ಮುಂದುವರೆಸಿರುವುದು ಉತ್ತಮ ಉದಾಹರಣೆಯಾಗಿದೆ. ಇವರಲ್ಲಿ ಕಾಣುವ ಸಂಯಮ ಗುಣ ಅವರ ಸ್ಥೈರ್ಯದ ಕ್ರಿಯಾಶೀಲತೆಯ ಮತ್ತೊಂದು ಮುಖವಾಗಿದೆ. ಸಮರಸ ಜೀವನ ಗೊರೂರರವರ ಬದುಕಿನ ಒಂದು ಲಕ್ಷಣವಾದರೆ ಸಾಮೂಹಿಕ ಜೀವನದಲ್ಲಿ ಅವರು ತೋರಿಸುವ ತಾದಾತ್ಮ್ಯ ಭಾವನೆ ವಿಶೇಷವಾಗಿದೆ. ಗೊರೂರರವರ ಜೀವನದಲ್ಲಿ ವಿಚಕ್ಷಣ ಪ್ರಜ್ಞೆ ಮತ್ತೊಂದು ಮುಖ್ಯವಾದ ಗುಣ. ವ್ಯಕ್ತಿ ಸಂಬಂಧಗಳಲ್ಲಾಗಲಿ, ಬದುಕಿನ ಕ್ರಿಯಾಶೀಲತೆಯಲ್ಲಾಗಲಿ ಗೊರೂರರವರು ವಿಚಕ್ಷಣೆಯನ್ನು ತೋರಿಸಿ ಉತ್ತಮ ಬದುಕನ್ನು ಬದುಕಿದ್ದಾರೆ. ಗೊರೂರರವರ ಕಾದಂಬರಿ, ಕತೆ ಹಾಗೂ ಪ್ರಬಂಧಗಳಲ್ಲಿ ಈ ಗುಣಕ್ಕೆ ಸಾಟಿಯಾದ ಪಾತ್ರಗಳನ್ನು ಕಾಣುತ್ತೇವೆ. ಸಾಮಾನ್ಯ ಬದುಕಿಗೆ ಜೀವನೋತ್ಸಾಹ ಎಷ್ಟು ಅಗತ್ಯವೋ ಬದುಕಿನ ಮಹತ್ತರ ಸಾಧನೆಗಳಿಗೆ ಇಂಥಹ ಜೀವನೋತ್ಸಾಹ ತುಂಬ ಅನಿವಾರ್ಯ ಎನಿಸುತ್ತದೆ. ಜೀವನೋತ್ಸಾಹ ಇಲ್ಲದ ಬದುಕು ಮೌಲ್ಯ ಕಳೆದುಕೊಂಡ ಕುರುಡು ಬದುಕು ಎಂಬುದೇ ಗೊರೂರರವರ ಸಿದ್ಧಾಂತ. ಜೀವನೋತ್ಸಾಹಕ್ಕೆ ಬೇಕಾದ ಅರಿವು ಮತ್ತು ತಾಳ್ಮೆ ಲೇಖಕರಲ್ಲಿ ನಿಚ್ಚಳವಾಗಿದೆ. ಜೀವನೋತ್ಸಾಹದಿಂದ ಸಾಧನೆಯ ಬದುಕನ್ನು ಬದುಕುವಾಗ ವ್ಯಕ್ತಿಗೆ ಉಂಟಾದ ಸೋಲು ಸೋಲೇ ಅಲ್ಲ ಎಂಬುದನ್ನು ಗೊರೂರರವರು ಸ್ಪಷ್ಟಪಡಿಸಿದ್ದಾರೆ.

ಪರಂಪರೆ ಪ್ರಗತಿಯ ಹಾದಿಗಳು ಎರಡು ಸ್ವಾಗತಾರ್ಹವಾದವು. ಪರಂಪರೆ ಪ್ರಗತಿಯ ಹೊಸತನದೊಂದಿಗೆ ಕೂಡಿದಾಗ ಬದುಕು ಬನಿವುಳ್ಳ ಬದುಕಾಗುತ್ತದೆ ಎಂಬುದು ಗೊರೂರರವರ ಕೃತಿಗಳಲ್ಲಿ ನಾವು ಕಾಣುವ ಜೀವನಾದರ್ಶನವಾಗಿದೆ. ಯಾವುದೇ ಒಂದು ಮಾರ್ಗಕ್ಕೆ ಹೊಂದಿಕೊಂಡು ಮತ್ತೊಂದು ಮಾರ್ಗವನ್ನು ತ್ಯಾಜ್ಯ ಮಾಡಿದರೆ ಬದುಕು ಅಪೂರ್ಣವಾಗುತ್ತದೆ ಎಂದು ಗೊರೂರರವರು ತಮ್ಮ ಪಾತ್ರಗಳ ಮೂಲಕ ಸ್ಪಷ್ಟಪಡಿಸುತ್ತಾರೆ. ಜಾತಿ ಪದ್ಧತಿಯನ್ನು ಗೊರೂರರವರು ಪುರಸ್ಕಾರ ಮಾಡುತ್ತಾರೆ ಅನ್ನುವುದಕ್ಕಿಂತ

ಜಾತಿ ಪದ್ಧತಿಯಲ್ಲಿ ಸತ್ತ್ವ ಗುಣವನ್ನು ಮಾನ್ಯ ಮಾಡುತ್ತಾರೆ ಎಂದು ಹೇಳಬಹುದು. ಮನುಷ್ಯನ ಬದುಕಿನ ಉತ್ತಮ ರೀತಿಯನ್ನೇ ಉತ್ತಮ ಜಾತಿಯೆಂದು ಗೊರೂರರವರು ದೃಢವಾಗಿ ತೀರ್ಮಾನಿಸಿದ್ದಾರೆ. ಶಾಲುಸಾಬಿಯನ್ನು ಗೊರೂರರವರು ಗೌರವದಿಂದ ಕಾಣುವುದು, ಒಡ್ಡರಿಗೆ ಮರ್ಯಾದೆ ತೋರಿಸುವುದು ಗೊರೂರರವರಿಗೆ ಸಂಭ್ರಮದ ಸಂಗತಿಯಾಗಿತ್ತೆ ಹೊರತು ಮುಜುಗರದ ಸಂಗತಿಯಾಗಿರಲಿಲ್ಲ. ಇದು ಅವರ ವಿಶಾಲ ಮನೋಧರ್ಮದ ಮೂಲ ಪ್ರೇರಣೆ ಎನ್ನಬಹುದು. ಮಹಿಳಾ ಸ್ವಾತಂತ್ರ್ಯದ ಬಗ್ಗೆ ಲೇಖಕರಿಗೆ ಪೂರ್ಣ ವಿಶ್ವಾಸವಿತ್ತು. ಕುಟುಂಬದಲ್ಲಾಗಲಿ, ಸಾಮಾಜಿಕ ಜೀವನದಲ್ಲಾಗಲಿ ಮತ್ತು ರಾಷ್ಟ್ರದ ರಾಜಕೀಯ ಜೀವನದಲ್ಲಾಗಲಿ ಮಹಿಳೆ ಸಮರ್ಥ ವ್ಯಕ್ತಿಯಾಗಿ ದುಡಿಯಬಲ್ಲಳು ಎಂಬುದು ಗೊರೂರರವರ ದೃಢ ವಿಶ್ವಾಸವಾಗಿತ್ತು. ಈ ದೃಷ್ಟಿಯಿಂದಲೇ ಅವರ ಮಹಿಳಾ ಪಾತ್ರಗಳು ಸಹೃದಯರ ಪಾಲಿಗೆ ಮುಖ್ಯವೂ ವಿಚಾರಣೀಯ ಪಾತ್ರಗಳೂ ಆಗಿವೆ.

ಗೊರೂರರವರ ಅಭಿಪ್ರಾಯದ ಪ್ರಕಾರ - "ಯಾವುದನ್ನೂ ಸಾಹಿತ್ಯದಲ್ಲಿ ಅತಿ ಮಾಡಬಾರದು. ಸಮತೆ, ಸೌಹಾರ್ದಕ್ಕೆ ಸಾಹಿತ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಸಾಹಿತ್ಯ ಅಪ್ರತ್ಯಕ್ಷವಾಗಿ ಬೋಧೆ ಮಾಡಬೇಕು, ಸಾಹಿತ್ಯಕ್ಕೊಂದು ಗಾಂಭೀರ್ಯ ಮೂಡಬೇಕು. ನುಗ್ಗಿರೊ, ನುಗ್ಗಿರೊ ಅಂತ ಬರೆದರೆ ಏನಾಗುತ್ತೆ? ಕೊಲೆ ಆಗ್ತಾ ಇರುವಾಗ ಒಬ್ಬ ಪೋಲೀಸಿನವನು ಕೂಡಾ ಬರೋಲ್ಲ. ಇನ್ನು ಹಸಿವಿನಿಂದ ಸತ್ತೋರು ನುಗ್ಗೋದೆಲ್ಲಿ? ವಿದ್ಯೆ ಕೆಳವರ್ಗದವರಿಗೆ ಬರಬೇಕು. ಮೂಢನಂಬಿಕೆ, ಕ್ರೌರ್ಯ ಎಲ್ಲಾ ಹೋಗಬೇಕು" ಎನ್ನುತ್ತಾರೆ. (ನಾಗರಾಜ ಡಿ.ಆರ್.; ೧೯೮೪; ಪು.೩೭) ಗೊರೂರರವರು ಒಂದು ಕಾಲಕ್ಕೆ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಒಂದು ಹಂತದಲ್ಲಿ ರಾಜಕಾರಣ ಮತ್ತು ಸಾಹಿತ್ಯಗಳೆರಡನ್ನು ಜೊತೆ ಜೊತೆಗೆ ನಡೆಸಿದರು. ಗಾಂಧೀವಾದ ಕೂಡಾ ಸಾಹಿತ್ಯವನ್ನು ಆಯುಧದಂತೆ ಬಳಸಿಕೊಂಡಿದೆ. ಆದರೆ 'ಸಾಹಿತ್ಯ ಎಂದಿಗೂ ಆಯುಧ ಅಲ್ಲ, ಅದು ಆ ಕೆಲಸ ಮಾಡಲಾರದು. ಹಾಗಂತ ಬರೆಯುವವನು ಭಾವಿಸಬಹುದು ಅಷ್ಟೆ. ಅಕ್ಷರಸ್ಥರ ಸಂಖ್ಯೆ ನಮ್ಮ ದೇಶದಲ್ಲಿ ಎಷ್ಟಿದೆ? ಪುಸ್ತಕಗಳು ವ್ಯಾಪಾರವಾಗೋ ಸಂಖ್ಯೆ ನೋಡಿದರೆ ಈ ಬಗ್ಗೆ ಸತ್ಯ ಏನು ಅಂತ ತಿಳಿಯುತ್ತೆ' ಎನ್ನುತ್ತಾರೆ ಗೊರೂರರವರು.

ಆಸ್ತಿಕ ಮನೋಧರ್ಮ ಜೀವನದ ನೆಮ್ಮದಿಗೆ ಭದ್ರಸೋಪಾನ ಎಂಬುದು ಗೊರೂರರವರ ಸ್ಪಷ್ಟ ನಿಲುವಾಗಿತ್ತು. ಆದರೆ ಆಸ್ತಿಕತೆಯ ಹೆಸರಿನಲ್ಲಿ ಮೌಢ್ಯತನವನ್ನು ಮತ್ತು ಕುರುಡು ಸಂಪ್ರದಾಯಗಳನ್ನು ನಾವು ಉಳಿಸಿಕೊಳ್ಳಬಾರದೆಂದು ಗೊರೂರರವರ ಎಚ್ಚರಿಕೆಯ ರೀತಿಯಾಗಿತ್ತು. ಹಳ್ಳಿಯಲ್ಲಿ ನಡೆಯುವ ಸಂಭ್ರಮದ ಚಟುವಟಿಕೆಯನ್ನು ಗೊರೂರರವರು ಸ್ವಾಗತಿಸಿದ್ದಾರೆ. ಎಲ್ಲ ಜನಾಂಗದವರು ಆಚರಿಸುವ ಧಾರ್ಮಿಕ ಹಬ್ಬಗಳು ಜನರ ಬದುಕಿಗೆ ಸೌಹಾರ್ದತೆಯ ಅಂಶವನ್ನು ತುಂಬಿಕೊಡುತ್ತದೆ. ಇದಕ್ಕಾಗಿ ಗೊರೂರರವರ ಕೃತಿಗಳಲ್ಲಿ ಸಾಂಗಿಕ ಚಟುವಟಿಕೆ ವ್ಯಕ್ತಿ ಜೀವನದ ಮುಖ್ಯ ಅಂಶವಾಗಿದೆ ಎಂಬುದು

ಪ್ರಮುಖ ಸಂಗತಿಯಾಗಿದೆ. ವ್ಯಕ್ತಿ ವಿಕಾಸದಲ್ಲಿ, ಶ್ರೀಸಾಮಾನ್ಯನ ಬದುಕು ಹೇಗೆ ಪ್ರಧಾನವಾಗಿದೆಯೋ ಅದೇ ರೀತಿಯಲ್ಲಿ ಸಮಷ್ಟಿ ಪ್ರಜ್ಞೆಯ ಸಂದರ್ಭದಲ್ಲಿಯೂ ಗೊರೂರರವರು ಸಮಾನ ಒಲವನ್ನು ತೋರಿದ್ದಾರೆ. ನಗರೀಕರಣದ ಕಡೆಗೆ, ನಾಗರಿಕತೆಯ ಕಡೆಗೆ ಇವರ ಒಲವು ಅವರ ಎಲ್ಲಾ ಪಾತ್ರಗಳ ಮೂಲಕ ಸ್ಫುಟವಾಗಿದೆ. ಜೀವನದಲ್ಲಿ ರಸಿಕತೆ ಕೊಂಕಿನ ಗುಣವಾಗಬಾರದು, ಸಂಯಮದ ಲಕ್ಷಣವಾಗಬೇಕು. ಇಂಥಹ ರಸಿಕತೆಯಿಂದ ಯಾರಿಗೂ ನೋವಾಗುವುದಿಲ್ಲ. ಇದಕ್ಕೆ ಬದಲಾಗಿ ಹೃದಯದ ಭಾರ ಕಮ್ಮಿಯಾಗಿ ಬಾಂಧವ್ಯಗಳು ಬಂಧುರವಾಗುತ್ತವೆ. ಸಾಹಿತಿಯಾಗಿ ಗೊರೂರರವರು ವಿಶಿಷ್ಟ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ. ಸಂಪ್ರದಾಯ ಸಾಹಿತ್ಯ, ನವೋದಯ ಸಾಹಿತ್ಯ, ನವ್ಯಸಾಹಿತ್ಯ ಹಾಗೂ ಪ್ರತಿಭಟನೆಯ ಸಾಹಿತ್ಯ ಎಲ್ಲ ರೀತಿಯ ಸಾಹಿತ್ಯದಲ್ಲಿಯೂ ಅದಕ್ಕೆ ತನ್ನದೇ ಆದ ಅನನ್ಯತೆ ಇದೆ ಎಂಬ ಮಾತು ಎಷ್ಟು ಸತ್ಯವೋ ಎಲ್ಲ ಉತ್ತಮ ಸಾಹಿತ್ಯವು ಸಮರ್ಥ ಎನ್ನುವುದು ಅಷ್ಟೇ ಸತ್ಯ ಎಂಬ ಮಾತನ್ನು ಗೊರೂರರವರು ತಮ್ಮ ಕೃತಿಗಳ ಮೂಲಕ ಖಚಿತಪಡಿಸಿದ್ದಾರೆ. ಗೊರೂರರವರ ದೃಷ್ಟಿಯಲ್ಲಿ ಸಾಹಿತ್ಯ ಯಾವುದೇ ಆಗಿರಲಿ ಅದು ಚೇತೋಹಾರಿಯಾಗಿ ಇರಬೇಕು ಹಾಗೂ ಚೈತನ್ಯಪೂರ್ಣವಾಗಿ ಇರಬೇಕು ಎಂಬುದು ಮೂಲ ತತ್ತ್ವವಾಗಿದೆ. ಸಾಹಿತ್ಯದ ಭಾಷೆಯ ಬಗ್ಗೆ ಗೊರೂರರವರು ಹೇಳುವಾಗ ಭಾಷೆ ಭಾವಕ್ಕೆ ಬಂಧನ ಆಗದೆ ಬಂಧುರವಾಗಿರಬೇಕು ಎಂಬ ಶೈಲಿ ಸಿದ್ಧಾಂತವನ್ನು ಅವರು ಪುರಸ್ಕರಿಸುತ್ತಾರೆ. ಸಾಹಿತ್ಯ ಜೀವನಕ್ಕೆ ಪ್ರೇರಕವಾಗಿರಬೇಕು ಎಂಬುದು ಅವರ ಎಲ್ಲ ಸಾಹಿತ್ಯದ ಸಂದೇಶವಾಗಿದೆ. ಹೀಗೆ ಗೊರೂರರವರ ವ್ಯಕ್ತಿತ್ವ ಸಾಹಿತ್ಯಕವಾಗಿ, ವೈಯಕ್ತಿಕವಾಗಿ ಅರ್ಥಪೂರ್ಣ ಅನುಕರಣೀಯ ವ್ಯಕ್ತಿತ್ವ ಎಂದು ಗುರುತಿಸಬಹುದು.

ಕರ್ನಾಟಕದಲ್ಲಿ ಹಾಸನ ಜಿಲ್ಲೆ ಬೇಲೂರು ಹಳೇಬೀಡುಗಳ ಮೂಲಕ ಶಿಲ್ಪಕಲೆಯ ವೈಭವದಲ್ಲಿ ಪ್ರಖ್ಯಾತವಾಗಿದೆ, ಅಷ್ಟೇ ವಿಶ್ವವಿಖ್ಯಾತವಾಗಿದೆ. ಸಾಹಿತ್ಯಿಕ ದೃಷ್ಟಿಯಿಂದ ಹಾಸನ ಜಿಲ್ಲೆ ಗೊರೂರರವರ ಅಪೂರ್ವ ಕೃತಿಗಳಿಂದ ಪ್ರಸಿದ್ಧವಾಗಿದೆ. ಕನ್ನಡದ ಹಾಸ್ಯ ಲೇಖಕರಲ್ಲಿ ಮೇಲ್ಪಂಕ್ತಿಗೆ ಸೇರಿದ ಗೊರೂರರವರು ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಕರ್ನಾಟಕ ಸಂಸ್ಕೃತಿ ಪ್ರಚಾರ ಕಾರ್ಯದಲ್ಲಿ ಮತ್ತು ಜನಪದ ಸಾಹಿತ್ಯ ಸಂಗ್ರಹ ಕಾರ್ಯದಲ್ಲಿ ಗೊರೂರರವರು ತಮ್ಮ ಕೃತಿಗಳ ಮೂಲಕ ಅದ್ವಿತೀಯ ರೆನಿಸಿಕೊಂಡಿದ್ದಾರೆ. ಹೇಮಾವತಿ ಗೊರೂರಿಗೆ ಜೀವನದಿಯಾದರೆ ಕನ್ನಡದ ಹಾಸ್ಯ ಸಾಹಿತ್ಯಕ್ಕೆ ಗೊರೂರರವರ ಕೃತಿಗಳು ಜೀವನಾಡಿಯಾಗಿವೆ.

ಕರ್ನಾಟಕ ಇತಿಹಾಸದಲ್ಲಿ ಸ್ಮರಣೀಯ ವ್ಯಕ್ತಿಗಳಾದ ಗೊರೂರರವರು ದಿ.೦೪.೦೭.೧೯೦೪ ರಲ್ಲಿ ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸ ಅಯ್ಯಂಗಾರ್, ತಾಯಿ ಲಕ್ಷ್ಮಮ್ಮ. ಗೊರೂರರವರ ಮನೆತನ ವೈದಿಕ ಮನೆತನ. ಶ್ರೀ ವೈಷ್ಣವ ಪಂಗಡಕ್ಕೆ ಸೇರಿದ ಹೆಮ್ಮಿಗೆ ಕುಟುಂಬಕ್ಕೆ ಸೇರಿದವರು. ತುಂಬು ಸಂಸಾರಿಯಾದ ಗೊರೂರರವರ ತಂದೆ ತಾಯಿಗೆ ಹನ್ನೆರಡು ಜನ ಮಕ್ಕಳಿದ್ದರು. ಗಂಡು ಮಕ್ಕಳಲ್ಲಿ ಗೊರೂರರವರು ಎರಡನೆಯವರು. ಶ್ರೀನಿವಾಸ ಅಯ್ಯಂಗಾರ್ ಅವರು

ಭಾರತೀಯ ಸಂಸ್ಕೃತಿಯ ಅಭಿಮಾನಿಗಳು ಹಾಗೂ ಸಂಸ್ಕೃತ ಭಾಷಾಪಂಡಿತರು. ಗೊರೂರರವರು ಸ್ವಾವಲಂಬಿ ಬದುಕನ್ನು ಅವರ ತಂದೆಯವರ ಮೂಲಕ ಕಲಿತಿದ್ದರು. ಶಿಸ್ತಿನ ಜೀವನ ಅವರಿಗೆ ಮನೆತನದಲ್ಲಿ ಹುಟ್ಟಿನಿಂದ ಬಂದ ಗುಣ. ತುಂಬು ಕುಟುಂಬದಲ್ಲಿ ಸಂತೃಪ್ತ ಜೀವನವನ್ನು ನಡೆಸುವ ಕಲೆಗಾರಿಕೆಯನ್ನು ಗೊರೂರರವರು ಬದುಕಿನಲ್ಲಿ ಕುಟುಂಬದ ವಾತಾವರಣದಲ್ಲಿ ಮೊದಲೇ ಕಲಿತ ಗುಣವೂ ಆಗಿತ್ತು, ಪಾಠವೂ ಆಗಿತ್ತು. ಗೊರೂರರವರಿಗೆ ಮುಂದಿನ ಸಾಂಸರಿಕ ಜೀವನದಲ್ಲಿ, ಸಾಮಾಜಿಕ ಜೀವನದಲ್ಲಿ ಮತ್ತು ರಾಷ್ಟ್ರೀಯ ಜೀವನದಲ್ಲಿ ತುಂಬು ಉತ್ಸಾಹ ಕೆಚ್ಚು ಮೂಡಿ ಬರಲು ಅವರ ಕುಟುಂಬದ ವಾತಾವರಣ, ಹಿರಿಯರ ಗುಣ ಮೂಲಶಕ್ತಿ ಸ್ಫೂರ್ತಿಯಾಗಿತ್ತು ಎಂಬುದರಲ್ಲಿ ಎಳ್ಳಷ್ಟು ಸಂಶಯವಿಲ್ಲ.

ಗೊರೂರರವರ ವಿದ್ಯಾಭ್ಯಾಸ ಸಾಂಪ್ರದಾಯಿಕವಾಗಿ ಇರಲಿಲ್ಲ. ಶಾಲಾ ಕಾಲೇಜುಗಳಲ್ಲಿ ಕಲಿತ ಪಾಠಕ್ಕಿಂತ ಅವರ ತಂದೆಯವರ ಮೂಲಕ ಮನೆಯಲ್ಲಿ ಕಲಿತ ಸಂಸ್ಕೃತ ಪಾಠವೇ ಮುಖ್ಯವಾಗಿತ್ತು. ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆಗಳ ಪರಿಚಯ ಗೊರೂರರವರಿಗೆ ತಂದೆಯವರ ಮೂಲಕ ಬಾಲ್ಯದಲ್ಲಿಯೇ ಬಾಯಿಪಾಠವಾಯಿತು. ಎನ್.ಎಸ್. ಸುಬ್ಬರಾಯರ ಸಾಂದರ್ಭಿಕ ಒತ್ತಾಯದಿಂದ ಗೊರೂರರವರು ಮದರಾಸು (ಚೆನ್ನೈ) ವಿಶ್ವವಿದ್ಯಾಲಯದ ಕನ್ನಡ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆ ಆದದ್ದು ಮಾತ್ರ ಗೊರೂರರವರಿಗೆ ವಿಶೇಷವಾಗಿ ಅಧಿಕೃತ ಲೌಕಿಕ ವಿದ್ಯಾ ಪದವಿಯಾಗಿತ್ತು. ಇವರು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ರಾಷ್ಟ್ರೀಯ ಚಳುವಳಿಗೆ ಪದಾರ್ಪಣ ಮಾಡಿದರು. ಇಂತಹ ಸಂದರ್ಭದಲ್ಲಿ ಗಾಂಧೀಜಿಯವರ ರಾಷ್ಟ್ರೀಯ ಚಳುವಳಿ ಗೊರೂರರವರ ಬದುಕಿನ ಗತಿಯನ್ನು ಬದಲಾಯಿಸಿತು. ಸಾಮಾಜಿಕ ಜೀವನದಲ್ಲಿ ಹಿರಿಯ ವ್ಯಕ್ತಿಗಳ ಸಂಪರ್ಕದಿಂದ ಗೊರೂರರವರು ಸಂಪಾದಿಸಿದ ಲೌಕಿಕ ಜ್ಞಾನ, ವ್ಯವಹಾರಿಕ ಜ್ಞಾನ ಬೆರಗುಗೊಳಿಸುವಂತಹದಾಗಿದೆ. ಈ ಅನುಭವ ಶಕ್ತಿಯಿಂದಲೇ ಗೊರೂರರವರ ಸಾಹಿತ್ಯ ಸೃಷ್ಟಿ ವೈಶಿಷ್ಟ್ಯಪೂರ್ಣವಾಗಿದೆ. ಇವರ ಗೆಳೆಯರಾದ ರಂಗೇಗೌಡನ ತಂದೆ ಶಾಲೆಯ ವಿದ್ಯಾಭ್ಯಾಸದ ಬಗ್ಗೆ ಆಡಿದ ಮಾತು "ಸ್ಕೂಲಿಗೆ ಹೋಗಿ ಯಾವ ಮಗನೂ ಪಾಠ ಕಲಿಯಲಿಲ್ಲ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೧೦೫) ಎಂಬ ಸಂಗತಿ ಗೊರೂರರವರ ಪಾಲಿಗೆ ಬಹುಪಾಲು ಸತ್ಯ ಎನಿಸುತ್ತದೆ.

ಗೊರೂರರವರ ಜೀವನದಲ್ಲಿ ಕಾಣುವ ವಿಶೇಷ ಗುಣ ವರ್ತನೆಗಳಿಗೆ ಅವರು ಪಡೆದ ಸಂಸ್ಕಾರವೇ ಪ್ರಧಾನ ಕಾರಣವಾದರೆ ಕೌಟುಂಬಿಕ ಪರಿಸರದಲ್ಲಿ ವ್ಯಕ್ತಿಗಳಿಂದ ಪಡೆದ ಸಹಕಾರ ಪ್ರಭಾವವು ಮೂಲ ಕಾರಣ ಎನಿಸುತ್ತದೆ. ಕೌಟುಂಬಿಕ ವಾತಾವರಣದಲ್ಲಿ ಗೊರೂರರವರು ಸೌಹಾರ್ದ ಜೀವನವನ್ನು ಕಲಿತು ಕೊಂಡು ಅವರು ಪಾಲಿಸಿಕೊಂಡು ಬಂದರು. ತಂದೆಯವರಿಂದ ಅವಿಭಕ್ತ ಕುಟುಂಬದ ನಿರ್ವಹಣೆಯ ಜಾಣ್ಮೆಯನ್ನು ಕೆಚ್ಚನ್ನು ಕಲಿತು ಕೌಟುಂಬಿಕ ಜೀವನದಲ್ಲಿ ಯಶಸ್ವಿಯಾದರು. ಔದಾರ್ಯ, ಸಹಜೀವನದ,

ಸಹಬಾಳ್ವೆಯ ಪ್ರಾಮುಖ್ಯತೆಯನ್ನು ಗೊರೂರವರು ಎಳೆತನದಿಂದಲೇ ಅರಿತಿದ್ದರು. ಜೀವನದ ಕೊನೆಯ ವರೆವಿಗೂ ಈ ಗುಣಗಳು ಗೊರೂರವರಲ್ಲಿ ಉಳಿದು ಬೆಳೆದು ಬಂದಿತು. ಈ ದಿಶೆಯಲ್ಲಿ ಅವರ ಸಹಧರ್ಮಿಣಿ ಶೇಷಮ್ಮನವರ ಪಾತ್ರ ಸ್ಮರಣೀಯವಾದದ್ದು. ತುಂಬಿದ ಮನೆಗೆ ಸೊಸೆಯಾಗಿ ಕಾಲಿಟ್ಟ ಶೇಷಮ್ಮನವರು ಮನೆಯಲ್ಲಿ ಹಿರಿಯರನ್ನು ಅನುಸರಿಸುವುದರ ಜೊತೆಗೆ ಯಜಮಾನರ ಮನೋಧರ್ಮವನ್ನು ಆತ್ಮೀಯತೆಯಿಂದ ಅನುಸರಿಸುವುದನ್ನು ಶೇಷಮ್ಮನವರ ಬದುಕಿನದ್ದುಕ್ಕೂ ಕಾಣಬಹುದಾದ ಸಹಜ ಸ್ವಾಭಾವಿಕ ಗುಣ ಅವರದಾಗಿತ್ತು. ಕುಟುಂಬದ ಶ್ರೇಯಸ್ಸಿಗೆ ಗಂಡನ ಸಂತೋಷ ನೆಮ್ಮದಿಗಳಿಗೆ ಗೃಹಣಿಯ ಪಾತ್ರ ಅತಿ ಪ್ರಧಾನವಾದದ್ದು ಎಂಬುದನ್ನು ಹಿಂದೂ ಸಂಸ್ಕೃತಿ ಸಾರಿ ಹೇಳುತ್ತದೆ. ಪತ್ನಿಯ ಸಹಕಾರದಿಂದಲೇ ಪತಿಯ ಬದುಕು ಅರ್ಥಪೂರ್ಣವಾಗುತ್ತದೆ ಎಂಬುದಕ್ಕೆ ಗೊರೂರವರ ದಂಪತಿಗಳ ಬದುಕು ಸ್ಪಷ್ಟ ಉದಾಹರಣೆಯಾಗಿದೆ. ಗೊರೂರವರಲ್ಲಿ ಸ್ವಾಭಿಮಾನ ಅವರ ಹುಟ್ಟು ಗುಣವಾಗಿತ್ತು. ಎಲ್ಲ ಹಂತದಲ್ಲಿಯು ಎಂಥಹ ಪರಿಸ್ಥಿತಿಯಲ್ಲಿಯೂ ಗೊರೂರವರು ಸ್ವಾಭಿಮಾನವನ್ನು ಕಳೆದುಕೊಂಡ ವ್ಯಕ್ತಿ ಆಗಿರಲಿಲ್ಲ. ಈ ದಿಶೆಯಲ್ಲಿ ಶೇಷಮ್ಮನವರು ನೀಡಿದ ನೈತಿಕ ಬೆಂಬಲ ಮೆಚ್ಚುವಂತಹುದು. ಗೊರೂರವರು ಅಂತ್ಯ ಕಾಲದಲ್ಲಿ ಅನಾರೋಗ್ಯದಲ್ಲಿದ್ದರು ಶೇಷಮ್ಮನವರು ಹಾಗೂ ಗೊರೂರವರು ಸರ್ಕಾರದ ನೆರವನ್ನು ನಿರಾಕರಿಸಿದ್ದು ಅವರ ಸ್ವಾಭಿಮಾನದ ಗುಣಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಜೀವನದ ಅಂತ್ಯದಲ್ಲಿ ಅತೀ ಅನಿವಾರ್ಯತೆಯ ಕಾರಣದಿಂದ ಶೇಷಮ್ಮನವರು ಸರ್ಕಾರದ ನೆರವನ್ನು ಒಪ್ಪಿ ಸ್ವೀಕರಿಸಿದ್ದು ಅನಿವಾರ್ಯತೆಗೆ ಕಾರಣವಾಗಿತ್ತೆ ವಿನಹ ಅವರ ಸ್ವಾಭಿಮಾನಕ್ಕೆ ಕುಂದು ತಂದಿತು ಎನ್ನುವಂತದ್ದು ಅಲ್ಲ.

ಗೊರೂರವರ ಹೃದಯ ವೈಶಾಲ್ಯಕ್ಕೆ ಹುಟ್ಟಿನಿಂದ ಬಂದ ಸಂಸ್ಕಾರ ಒಂದು ರೀತಿಯಲ್ಲಿ ಕಾರಣವಾದರೆ ಗಾಂಧೀಜಿಯವರ ಪ್ರೇರಣೆ, ಶ್ರೀವೈಷ್ಣವ ಧರ್ಮದ ಪ್ರಭಾವ ಮತ್ತು ಶ್ರೀ ರಾಮಾನುಜರ ಸಿದ್ಧಾಂತದ ಪ್ರೇರಣೆ ಮೂಲ ಕಾರಣ ಎಂಬುದು ನಿರ್ವಿವಾದ ಸಂಗತಿ. ಗೊರೂರವರ ದಾಂಪತ್ಯ ಜೀವನ ಮೂವತ್ತಾರು ವರ್ಷಗಳಷ್ಟು ಸುದೀರ್ಘವಾದದ್ದು. ಈ ದಂಪತಿಗಳಿಗೆ ಐದು ಮಕ್ಕಳು. ನಾಲ್ಕು ಗಂಡು ಮತ್ತು ಒಂದು ಹೆಣ್ಣು ಮಗು. ಅವರ ಕೌಟುಂಬಿಕ ಜೀವನದಲ್ಲಿ ಮೂರು ಗಂಡು ಮಕ್ಕಳ ಸಾವು ಒಂದು ರೀತಿಯಲ್ಲಿ ತೀವ್ರಘಾತಕ್ಕೆ ಕಾರಣವಾದರೂ ಮತ್ತೊಂದು ರೀತಿಯಲ್ಲಿ ಮಕ್ಕಳ ಸಾವು ಬದುಕಿನಲ್ಲಿ ಸಾಂತ್ವನದ ಪಾಠವನ್ನು ಕಲಿಸಿಕೊಟ್ಟಿತು. ರಾಮಚಂದ್ರನ ಸಾವು ಸ್ವಾತಂತ್ರ್ಯದ ಹೋರಾಟಕ್ಕೆ ವಿಧಿ ತಮ್ಮ ಕುಟುಂಬದ ಮೂಲಕ ಕೊಟ್ಟ ಕಾಣಿಕೆಯೆಂದು ಗೊರೂರವರು ಭಾವಿಸುತ್ತಾರೆ. ಸೀತಾರಾಮ ಮತ್ತು ಶ್ರೀನಿವಾಸಮೂರ್ತಿ ಮಕ್ಕಳ ಸಾವಿನ ಹಿನ್ನೆಲೆಯಲ್ಲಿಯೇ ವಿಧಿವಿಲಾಸವನ್ನು ಕಾಣುವುದರ ಜೊತೆಗೆ ಆ ಮಕ್ಕಳಿಗೆ ತಂದೆ ತಾಯಿನ ಬಗ್ಗೆ ಇದ್ದ ಪ್ರೀತಿ ಗೌರವಗಳು ಸ್ಫುಟವಾಗುತ್ತವೆ. ಪುತ್ರಶೋಕ ನಿರಂತರ ದುಃಖಕ್ಕೆ ಕಾರಣವಾದರೂ ಅದನ್ನು ಸಹಿಸಿಕೊಂಡ ಗೊರೂರರ ದಂಪತಿಗಳ ಮನಸ್ಸಿನ ದಿಟ್ಟತನ ಎಂಥವರನ್ನು ಸಹ ಮೂಕಗೊಳಿಸುತ್ತದೆ.

ಗೊರೂರವರ ಜೀವನದಲ್ಲಿ ಶಾರೀರಿಕ ಆರೋಗ್ಯ ಮೆಚ್ಚುವಂತಹುದು. ಜೀವನದ ಕೊನೆಯ ಎರಡು ವರ್ಷಗಳು ಬಿಟ್ಟರೆ ಗೊರೂರವರು ಚಟುವಟಿಕೆಯ ಚಿಲುಮೆಯಾಗಿದ್ದರು. ಯಾವುದೇ ರೀತಿಯ ಅನಾರೋಗ್ಯ ರೋಗ ರುಜುನುಗಳಿಗೆ ಒಳಗಾಗದೆ ಆರೋಗ್ಯಶಾಲಿಗಳಾಗಿ ಇದ್ದದ್ದು ಅವರ ಶುದ್ಧ ಶಿಸ್ತಿನ ಜೀವನಕ್ಕೆ ಸಾಕ್ಷಿಯಾಗಿದೆ. ಖಾದಿ ವಸ್ತ್ರಾಲಯದ ಸಾಲವನ್ನು ತೀರಿಸುವ ಸಂದರ್ಭದಲ್ಲಿ ಶೇಷಮ್ಮನವರು ಗೊರೂರವರಿಗೆ ಕೊಟ್ಟ ಸಹಕಾರ ಮೆಚ್ಚುವಂತಹುದು. ಖಾದಿ ಬೋರ್ಡಿನ ಸಾಲದಿಂದ ಮುಕ್ತರಾದ ಗೊರೂರವರು ಮುಂದಿನ ಜೀವನದಲ್ಲಿ ತೋರಿಸಿದ ಉತ್ಸಾಹ ದಿಟ್ಟ ಮನಸ್ಸಿನ ವ್ಯಕ್ತಿಯ ವರ್ತನೆಗೆ ಉದಾಹರಣೆಯಾಗಿದೆ.

ಗೊರೂರವರಲ್ಲಿ ಕಾಣುವ ಮಾನವತಾವಾದ ಅವರ ಜೀವನದಲ್ಲಿ ಘೋಷಣೆಯಾಗಿ ಉಳಿಯದೆ ಅನುಭವ ಜನ್ಯವಾದ ಮೂಲ ಗುಣವಾಗಿ ಕಾಣಿಸಿಕೊಂಡಿದೆ. ಅಮೇರಿಕಾದಲ್ಲಿ ಗೊರೂರವರು ಪ್ರವಾಸ ಮಾಡಿದಾಗ ಅಲ್ಲಿಯ ವಿದ್ಯಾರ್ಥಿಗಳಲ್ಲಿ ಮೂಡಿಸಿದ ದಿವ್ಯಭಾವಗಳು ಯಾವ ಭವ್ಯ ಸಂದೇಶಕ್ಕೂ ಕಡಿಮೆಯಾಗಿಲ್ಲ. "The two hours you spent with us, will make our classroom work so much more meaningful, the message that you left with us by sharing with us your thoughts about peace, self respect and courage are words of wisdom, that we will not forget". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೩೧೧) ವಿದ್ಯಾರ್ಥಿಗಳ ಈ ಅಭಿವಂದನೆಯ ಮಾತುಗಳು ಗೊರೂರವರು ಶುದ್ಧ ಮಾನವತಾವಾದಿ ಸ್ನೇಹ ಸೌಜನ್ಯವ್ಯಕ್ತಿ ಎನ್ನುವುದಕ್ಕೆ ಪ್ರಾಮಾಣಿಕ ನುಡಿಯಾಗಿದೆ. ಗೊರೂರವರು ಶುದ್ಧ ಜನಪದ ಪ್ರತೀಕ ಎನ್ನುವುದನ್ನು ಹೇಳುವಾಗ ಸುಧಾಕರ ಅವರು ಹೇಳುವ ಮಾತು "ಗೊರೂರವರನ್ನು ನೋಡಿದ ಯಾರಿಗಾದರೂ ಇವರೊಬ್ಬ ಲೇಖಕರು ಎನ್ನಿಸುವುದಕ್ಕಿಂತ ಒಬ್ಬ ಹಳ್ಳಿಯ ರೈತನನ್ನು ನೋಡಿದ ಭಾವನೆ ಬರುತ್ತದೆ. ಅಷ್ಟು ಸರಳ ನಡೆಯಲ್ಲಿ; ಅಷ್ಟು ಸಹಜ ನುಡಿಯಲ್ಲಿ. ಬಹುಶಃ ನಮ್ಮ ಲೇಖಕರು ವೇಷದಲ್ಲಲ್ಲದಿದ್ದರೂ ನಡೆನುಡಿ ಮನೋಧರ್ಮದಲ್ಲಾದರೂ ರೈತ ಗುಣವನ್ನು ರಕ್ತಗತ ಮಾಡಿಕೊಂಡರೆ ಒಳ್ಳೆಯ ಸಾಹಿತ್ಯವನ್ನು ನೀಡದಿದ್ದರೂ ಒಳ್ಳೆಯ ಬದುಕನ್ನು-ಅನುಕರಣ ಅಥವಾ ಸೋಗಿನ ಬದುಕನ್ನು ಬಿಟ್ಟು ಪ್ರಾಮಾಣಿಕ ಸಹಜ ಬದುಕನ್ನು ಬದುಕಬಲ್ಲರು ಎನ್ನಿಸುತ್ತದೆ, ಗೊರೂರರಂಥವರನ್ನು ಕಂಡಾಗಲೆಲ್ಲ. ಆದ್ದರಿಂದಲೇ ಅವರ ಸಾಹಿತ್ಯವೂ ಸಹ ಸೋಗಿನದಲ್ಲ; ಅನುಕರಣದ್ದಲ್ಲ; ಸಹಜವಾದದ್ದು; ಸರಸವಾದದ್ದು; ನಮ್ಮ ನೆಲದ ಸಂಸ್ಕೃತಿ ಕೆನೆಯಂತೆ ಇರುವಂಥದು" ಎಂಬ ಮಾತು ಅಕ್ಷರಸಹ ಸತ್ಯ ಎನಿಸುತ್ತದೆ. (ನಾಯಕ ಹಾ.ಮಾ. (ಸಂ); ೧೯೭೩; ಪು.೪೨೪-೪೨೫)

ಆಚಾರ, ಅನುಸರಣೆ ಅನೇಕ ಸಂದರ್ಭಗಳಲ್ಲಿ ವ್ಯಕ್ತಿಯ ಸಿದ್ಧಾಂತಗಳಿಗೆ ವಿರುದ್ಧವಾಗುವ ಪ್ರಸಂಗಗಳು ಉಂಟು. ಮಾನವತಾವಾದಿಯ ಜೀವನದಲ್ಲಿ ಇದಕ್ಕೆ ಉದಾಹರಣೆಗಳನ್ನು ಕಾಣಬಹುದು.

ಸ್ವತಃ ಗೊರೂರವರೇ ಮಡಿಯ ಬಗ್ಗೆ ಮೂಡಿ ಬಂದ ಸಮಸ್ಯೆಗಳನ್ನು ತಾತ್ವಿಕವಾಗಿ, ವೈಚಾರಿಕವಾಗಿ ಹಾಗೂ ಸಾಹಿತ್ಯಿಕವಾಗಿ 'ಕಮ್ಮಾರ ವೀರಭದ್ರಾಚಾರಿ' ಕೃತಿಯ 'ಮಡಿ' ಕತೆಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಗಮನಾರ್ಹವಾದುವು. ಗೊರೂರವರಂತಹ ವಿಚಾರವಾದಿಗಳಿಗೆ ಇಂತಹ ಘಟನೆಗಳು ಜೀವನದಲ್ಲಿ ಒದಗಿ ಬರುವುದು ಆಶ್ಚರ್ಯ ಸಂಗತಿಯಲ್ಲ. ಇಂಥಹ ಪ್ರಸಂಗಗಳಲ್ಲಿ ಲೇಖಕರು ವಿಷಯವನ್ನು ವಿಶ್ಲೇಷಿಸುವ ರೀತಿ ಅತ್ಯಂತ ಸಮರ್ಪಕವಾಗಿದೆ. ವಿಶಿಷ್ಟವಾದ ಗೊರೂರವರ ವ್ಯಕ್ತಿತ್ವಕ್ಕೆ ಈ ವಿಶ್ಲೇಷಣೆ ಉದಾಹರಣೆಯಾಗಿದೆ. ಗೊರೂರವರ ಮಾವನ ಮಗ ಗೋಪಿಯ ವರ್ತನೆಯನ್ನು ಹೇಳುತ್ತಾರೆ. ಗೋಪು ಗೊರೂರವರ ಗೆಳೆಯ ಶಾಸ್ತ್ರಿಯವರ ಊಟದ ಎಲೆಯನ್ನು ಎತ್ತುವ ಪ್ರಸಂಗದಲ್ಲಿ ಪಟ್ಟ ಮುಜುಗರವನ್ನು ಅರಿತು ಅದನ್ನು ಪರಿಹರಿಸುವುದಕ್ಕಾಗಿ ಶಾಸ್ತ್ರೀ ಒಂದು ವಿನೋದದ ಕತೆಯನ್ನು ಹೇಳುತ್ತಾರೆ. ಈ ಪ್ರಸಂಗದಲ್ಲಿ ಮಡಿಯ ಬಗ್ಗೆ ಗೊರೂರವರ ವ್ಯಾಖ್ಯಾನ ಗೀತೆಯ ಹಿನ್ನೆಲೆಯಲ್ಲಿ ಶೌಚಗುಣ ಎಂದಾಗಿದೆ. ಗಾಂಧೀಜಿಯವರ ಹಿನ್ನೆಲೆಯಲ್ಲಿ ಪರಿಶುದ್ಧತೆ ಎಂದಾಗಿದೆ. ಈ ಹಿನ್ನೆಲೆಯಲ್ಲಿ ಮಡಿಯನ್ನು ಪರಿಭಾವಿಸಬೇಕೆ ಹೊರತು ಕೇವಲ ಕುರುಡು ಆಚರಣೆಯಲ್ಲಿ ಅಲ್ಲ ಎಂಬುದು ಗೊರೂರವರ ಸ್ಪಷ್ಟ ಅಭಿಪ್ರಾಯವಾಗಿದೆ. ಹೀಗೆ ಲೇಖಕರು ತಮ್ಮ ಸತ್‌ಪ್ರಭುದ್ಧ ವಿಚಾರವಾದವನ್ನು ಸಮರ್ಥಿಸಿಕೊಳ್ಳುವ ರೀತಿ ಅವರ ಕೃತಿಗಳಲ್ಲಿ ಮತ್ತು ಅವರೊಡನೆ ನಡೆಸಿದ ಸಂವಾದಗಳಲ್ಲಿ ಸ್ಪಷ್ಟವಾಗಿದೆ.

ವ್ಯಕ್ತಿಯ ವ್ಯಕ್ತಿತ್ವದ ಉತ್ಕರ್ಷಕ್ಕೆ ವ್ಯಕ್ತಿಯ ಜ್ಞಾನ, ಸಾಧನೆ ಮತ್ತು ಪರಿಸರ ಒಂದು ರೀತಿಯಲ್ಲಿ ಕಾರಣವಾದರೆ ಅವನ ಬದುಕಿನ ಕಾಲಕ್ಕೆ ಸಾಮಾಜಿಕವಾಗಿ ಮೂಡಿ ಬಂದ ಘಟನೆಗಳು ಮತ್ತೊಂದು ರೀತಿಯಲ್ಲಿ ಪ್ರತ್ಯಕ್ಷ ಪ್ರಬಲ ಕಾರಣ ಆಗಬಹುದು. ಸಂದರ್ಭ ವ್ಯಕ್ತಿಯನ್ನು ಮೇಲಕ್ಕೆ ಎತ್ತುತ್ತದೆ ಎಂಬ ಮಾತು ಇಲ್ಲಿ ನೆನಪಿಗೆ ಬರುತ್ತದೆ. ಭಾರತದಲ್ಲಿ ಮೂಡಿ ಬಂದ ಸ್ವಾತಂತ್ರ್ಯ ಚಳುವಳಿ ಈ ಹಿನ್ನೆಲೆಯಲ್ಲಿ ಒಂದು ಅಭೂತಪೂರ್ವವಾದ ಘಟನೆ-ಕ್ರಾಂತಿ. ಈ ಚಳುವಳಿಯಲ್ಲಿ ಅನೇಕ ವ್ಯಕ್ತಿಗಳ ವ್ಯಕ್ತಿತ್ವ ಸ್ಫುಟವಾಯಿತು, ಪರಿವರ್ತನೆ ಆಯಿತು, ಪಕ್ವವಾಯಿತು, ಪ್ರತಿಷ್ಠಿತವಾಯಿತು ಮತ್ತು ಪ್ರಭಾವೀಪೂರ್ಣವಾಯಿತು. ಸ್ವಾತಂತ್ರ್ಯ ಚಳುವಳಿಯ ಹೋರಾಟ ಅನೇಕರ ಪಾಲಿಗೆ ವ್ಯಕ್ತಿತ್ವದ ನಿಷ್ಕರ್ಷಗೆ 'ದಿಬ್ಯ'ವಾಯಿತು. ಗೊರೂರವರ ವ್ಯಕ್ತಿತ್ವವೂ ಸಹ ಸ್ವಾತಂತ್ರ್ಯ ಚಳುವಳಿಯ ಮೂಲಕ ವಿಶಿಷ್ಟವಾಯಿತು. ಚಳುವಳಿಗೆ ಮೂಲ ಪ್ರೇರಣೆಯಾದ ಗಾಂಧಿಯವರ ವ್ಯಕ್ತಿತ್ವವೂ ಸಹ ಗೊರೂರವರಿಗೆ ವಿಶೇಷ ಪ್ರಭಾವವನ್ನು ತಂದುಕೊಟ್ಟಿತು. ಭಾರತೀಯ ಸಂಸ್ಕೃತಿಯ ಪರಿಚಯದೊಂದಿಗೆ ಉತ್ತಮ ನಡವಳಿಕೆಯನ್ನು ಅನುಷ್ಠಾನಕ್ಕೆ ತಂದುಕೊಂಡಿದ್ದ ಗೊರೂರವರಿಗೆ ಸ್ವಾತಂತ್ರ್ಯ ಚಳುವಳಿ-ಗಾಂಧೀಜಿಯವರ ಪ್ರಭಾವ ವಿಶಿಷ್ಟ ರೀತಿಯಲ್ಲಿ ಪುಟ ಕೊಟ್ಟಿತು. ಗಾಂಧೀಜಿ ಹೇಳಿದ ಆದರ್ಶಗಳು ಎಲ್ಲ ಅನುಯಾಯಿಗಳ ಪಾಲಿಗೆ ಅರಿವಿನ ಅನುಭವದ ಬೆಳಕಾದಂತೆ ಗೊರೂರವರ ಪಾಲಿಗೂ ವಿಶೇಷ ಬೆಳಕಾಯಿತು. ಗ್ರಾಮೀಣ ಬದುಕಿನೊಂದಿಗೆ ಸಹಜವಾಗಿ ನಿಜ ಜೀವನದಲ್ಲಿ ಹೊಂದಿಕೊಂಡು ಬಾಳುತ್ತಿದ್ದ ಗೊರೂರವರು ತಮ್ಮ ನೆಲೆಯಲ್ಲಿ ಗಟ್ಟಿತನವನ್ನು ಕಂಡುಕೊಂಡರು. ಆ ಮೂಲಕ ಗ್ರಾಮೀಣ ವಾತಾವರಣದಲ್ಲಿ ಹೊಸ ಸ್ಫೂರ್ತಿಯನ್ನು ಮೂಡಿಸಿದರು.

ವೇದ ಸಂಸ್ಕೃತಗಳಲ್ಲಿ ಉಲ್ಲೇಖಿತವಾಗಿರುವ ಆದರ್ಶಗಳನ್ನು ಲೇಖಕರು ಗಾಂಧಿ ಭಾವನೆಗಳ ಹಿನ್ನೆಲೆಯಲ್ಲಿ ಗ್ರಾಮೀಣ ಜನತೆಗೆ ಸ್ಪಷ್ಟಪಡಿಸುವುದರ ಜೊತೆಗೆ ಸ್ಥಿರಪಡಿಸಿದರು. 'ವ್ಯಕ್ತಿಯ ಸುಖಕ್ಕಿಂತ ಸಾಮಾಜಿಕ ಸೌಖ್ಯ ಮತ್ತು ರಾಷ್ಟ್ರದ ಘನತೆ ಗಂಭೀರವಾದದ್ದು' ಎಂಬ ಮಾತನ್ನು ಗೊರೂರವರು ತಮ್ಮ ಕೃತಿಗಳ ಪಾತ್ರಗಳ ಮೂಲಕ ಕಥೆಯಾಗಿ ತಿಳಿಸುವುದರ ಜತೆಗೆ ಹಾಸ್ಯದ ಮೆರಗಿನ ಮೂಲಕ ಚಿರಕಾಲ ನೆನಪು ಉಳಿಯುವಂತೆ ಮಾಡಿದ್ದಾರೆ. ವೇದ ಸಂಸ್ಕೃತಿಯ ತತ್ತ್ವ ಸಾರುವಂತೆ ವ್ಯಕ್ತಿ ತನಗಾಗಿ ತಾನು ಬದುಕ ಬಾರದು ಸಮಾಜಕ್ಕಾಗಿ ಬದುಕಬೇಕು ಎಂಬುದನ್ನು ಲೇಖಕರು ನೆನಪು ಮಾಡಿಕೊಡುತ್ತಾರೆ. ಮಹಾತ್ಮ ಗಾಂಧೀಜಿಯವರ ಸ್ವದೇಶಿ ಚಳುವಳಿಯನ್ನು ಗೊರೂರವರು ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ತಮ್ಮ ಗೆಳೆಯರೊಂದಿಗೆ ಯಶಸ್ವಿಯಾಗಿ ನಡೆಸಿದರು. ವಿದೇಶಿ ವಸ್ತು ಮತ್ತು ವಸ್ತ್ರಗಳಿಗೆ ಬಹಿಷ್ಕಾರ ಹಾಕಿದರು. ಗ್ರಾಮೀಣ ಪ್ರಗತಿಯೊಂದೇ ರಾಷ್ಟ್ರದ ಪ್ರಗತಿಗೆ ಅಡಿಪಾಯ ಎಂದು ಹೇಳಿ ಅದಕ್ಕೆ ಪೂರಕವಾದ ಸ್ವಾವಲಂಬಿತನವನ್ನು ಗೊರೂರವರು ತಮ್ಮ ಜೀವನದಲ್ಲಿ ಅನುಸರಣೆಗೆ ತರುವುದರ ಜೊತೆಗೆ ಗ್ರಾಮೀಣ ಪರಿಸರದಲ್ಲಿಯೂ ಗಾಂಧೀಜಿಯವರ ಈ ಭಾವನೆಯನ್ನು ಪ್ರಚುರಪಡಿಸಿದರು - ಸ್ಥಾಪಿಸಿದರು. ಜನಮನ ದಲ್ಲಿ ಕವಿದಿರುವ ಮೌಢ್ಯದ ಕತ್ತಲೆಯನ್ನು ಕಳೆಯಲಾಗದ ಹೊರತು ಜನಜಾಗೃತಿ ಜನರ ನಿಜವಾದ ಪ್ರಗತಿ ಸಾಧ್ಯವಿಲ್ಲವೆಂಬ ಗಾಂಧೀಜಿಯವರ ಅಭಿಪ್ರಾಯವನ್ನು ಮತ್ತು ಸ್ವಾತಂತ್ರ್ಯ ಚಳುವಳಿಯ ಮೂಲ ಮಂತ್ರವನ್ನು ಗೊರೂರವರು ತಮ್ಮ ಕೃತಿಗಳ ಮೂಲಕ ಗ್ರಾಮೀಣ ಜನಕ್ಕೆ ಸ್ಪಷ್ಟಪಡಿಸಿದರು. ವಿದ್ಯಾಭ್ಯಾಸದಲ್ಲಿ ಮಾತೃಭಾಷಾ ಶಿಕ್ಷಣ ಎಷ್ಟು ಪ್ರಭಾವಕಾರಿ ಎಂಬುದನ್ನು ಗೊರೂರವರು ಅನೇಕ ಸಂದರ್ಭಗಳಲ್ಲಿ ವಿಷದಪಡಿಸಿದ್ದಾರೆ.

ಗೊರೂರವರ ಮೊತ್ತ ಸಾಹಿತ್ಯ ಅವರ ವ್ಯಕ್ತಿ ವಿಶೇಷತೆಯ ವಿಶಿಷ್ಟದ ಪ್ರತೀಕವಾಗಿದೆ. ಇಷ್ಟೇ ಅಲ್ಲದೆ ಗೊರೂರವರ ಬರಹ ಅವರ ಬದುಕಿನ ಜೀವಂತಿಕೆಯ ಪ್ರತೀಕವಾಗಿದೆ. ಹೀಗೆ ಗೊರೂರವರು ಬದುಕಿದಂತೆ ಬರೆದಿದ್ದಾರೆ ಬರೆದಂತೆ ಬದುಕಿದ್ದಾರೆ. 'ಸಾಹಿತ್ಯ ಜೀವನದ ಪ್ರತಿಬಿಂಬ-ಗತಿಬಿಂಬ' ಎಂಬ ವ್ಯಾಖ್ಯಾನ ಗೊರೂರವರಂತಹ ಸಾಹಿತಿಗಳ ಕೃತಿಗಳನ್ನು ಕಂಡಾಗ ಸ್ಪಷ್ಟವಾಗುತ್ತದೆ ಹಾಗೂ ಸತ್ಯ ಎನಿಸುತ್ತದೆ. ಯುಗಧರ್ಮದ ಪ್ರಭಾವದ ಪ್ರಾತಿನಿಧಿಕ ವ್ಯಕ್ತಿ ಎಂದು ಗೊರೂರವರನ್ನು ನಾವು ನಿರ್ದಾಕ್ಷಿಣ್ಯವಾಗಿ ಕರೆಯಬಹುದು. ಗೊರೂರವರು ತಮ್ಮ ಬದುಕಿಗೆ ಪ್ರೇರಣೆ ತಂದುಕೊಟ್ಟ ಅಂಶಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿ ಮುಂದಿನ ಜನಾಂಗಕ್ಕೂ ಪ್ರೇರಣೆ ತಂದುಕೊಡುವ ಹಾಗೆ ಕೃತಿ ರಚಿಸಿದ್ದಾರೆ. ದೀಪದಿಂದ ದೀಪ ಬೆಳಗಿಸುವ ಔದಾರ್ಯದ ಚಟುವಟಿಕೆಗೆ ಗೊರೂರವರ ಕೃತಿಗಳು ಸಹಜ ಮೇಲ್ಮೆಯಾಗಿದೆ. ಈ ದೃಷ್ಟಿಯಿಂದ ಗೊರೂರವರ ಸಾಹಿತ್ಯವನ್ನು ಮೌಲಿಕ ಸಾಹಿತ್ಯವೆಂದು ಹಾಗೂ ಪ್ರೇರಕ ಸಾಹಿತ್ಯವೆಂದು ಸ್ಪಷ್ಟಪಡಿಸಬಹುದು. ಅವರ ಸಾಹಿತ್ಯವನ್ನು ಕೇವಲ ಹಾಸ್ಯಕ್ಕಾಗಿ ಓದದೆ ವಿಷಯ ವೈವಿಧ್ಯತೆಯ ದೃಷ್ಟಿಯಿಂದ ಅಭ್ಯಾಸ ಮಾಡಿದರೆ ಅದು ಅವರ ಕೃತಿಗಳಿಗೆ ತಂದುಕೊಟ್ಟ ನಿಷ್ಠೆಯ ಸಾಹಿತ್ಯ ಅಭ್ಯಾಸವಾಗುತ್ತದೆ. ಅನೇಕ ಮಂದಿ ವಿಮರ್ಶಕರು ಗೊರೂರವರ ಸಾಹಿತ್ಯದ ಈ ಅಂತಸ್ಸತ್ತ್ವವನ್ನು

ಗಮನಿಸದೆ ಅವರ ಕೃತಿಯಲ್ಲಿನ ನವುರಾದ ಹಾಸ್ಯ ಭಾವಗಳನ್ನು ಉಲ್ಲೇಖಿಸಿ ಅವರ ಕೃತಿಗಳನ್ನು ಉತ್ತಮ ರೀತಿಯಲ್ಲಿ ಪರಿಭಾವಿಸದೆ ಕೈಬಿಟ್ಟಿರುವುದು ವಿಷಾದನೀಯ ಸಂಗತಿಯಾಗಿದೆ. ಗೊರೂರರವರು ಕೇವಲ ತಮಾಷೆಯ ಬರಹಗಾರರಲ್ಲ. ತಾತ್ವಿಕ ಚಿಂತನೆಯ ನಿಗೂಢ ವ್ಯಕ್ತಿ ಎಂಬುದು ಪ್ರಜ್ಞಾವಂತ ಸಹೃದಯರಿಗೆ ಎಂದೆಂದಿಗೂ ಮನವರಿಕೆಯಾಗುತ್ತದೆ. ಈ ಮಾತಿಗೆ ಸಾಕ್ಷಿಯನ್ನು ಗೊರೂರರವರ ಎಲ್ಲಾ ಸಾಹಿತ್ಯ ಕೃತಿಗಳಲ್ಲಿಯೂ ನಾವು ನಿಚ್ಚಳವಾಗಿ ಕಾಣಬಹುದು. ಗೊರೂರರವರ ಸಾಹಿತ್ಯದ ಸತ್ವ ವೈಶಿಷ್ಟ್ಯಪೂರ್ಣವಾದದು. ಅವರ ಕೃತಿಗಳ ಅಂತಸ್ಸತ್ವದ ಕಂಪು ನಮಗೆ ಕೃತಿಯನ್ನು ಅನುಸಂಧಾನ ಮಾಡಿದ ತಕ್ಷಣ ಅನುಭವ ವೇದ್ಯವಾಗುತ್ತದೆ. ಗೊರೂರರವರ ಸಾಹಿತ್ಯದ ಸತ್ವ ವೈಭವಕ್ಕೆ ವೈವಿಧ್ಯತೆಗೆ ಕಾರಣ ಅವರಿಗೆ ನಮ್ಮ ಸಂಸ್ಕೃತಿ ಛಾಪಿಸಿದ ಪ್ರಭಾವ, ಅಂದಿನ ಕಾಲದ ಸ್ವಾತಂತ್ರ್ಯ ಚಳುವಳಿಯ ಪ್ರೇರಣೆ ಹಾಗೂ ಗಾಂಧಿ ತಿಲಕರಂತಹ ರಾಷ್ಟ್ರನಾಯಕರ ದಿವ್ಯ ಸ್ಫೂರ್ತಿ ಮೂಲ ಕಾರಣವೆಂದರೆ ನಿರ್ವಿವಾದ ಸತ್ಯ ಸಂಗತಿ ಆದೀತು.

ಪಾಟೀಲ ಪುಟ್ಟಪ್ಪನವರು ಗೊರೂರರವರ ಬಗ್ಗೆ ಈ ರೀತಿ ಅಭಿಪ್ರಾಯಪಡುತ್ತಾರೆ. "ಗಾಂಧೀಜಿಯವರು ಮಣ್ಣನ್ನು ತೆಗೆದುಕೊಂಡು ಮನುಷ್ಯರನ್ನು ಮಾಡಿದರೆನ್ನುವ ಪವಾಡವನ್ನು ನಾವು ಗೊರೂರರವರಲ್ಲಿ ಕಾಣುತ್ತೇವೆ. ಅವರ ಜೀವನವು ಖಾದಿ, ಗ್ರಾಮೋದ್ಯೋಗ ಹಾಗೂ ಜಾನಪದಗಳಿಂದ ರೂಪುಗೊಂಡಿದೆ. ಪರಂಪರಾಗತ ಭಾರತದ ಬೆಲೆಗಳೆಲ್ಲವೂ ಕರಗಿ ಮೂರ್ತಿಗೊಂಡಂತೆ ಅವರ ವ್ಯಕ್ತಿತ್ವದ ನಿರ್ಮಾಣವಾಗಿದೆ" ಎಂದು ಅರ್ಥಪೂರ್ಣವಾಗಿ ಸ್ಪಷ್ಟಪಡಿಸಿದ್ದಾರೆ. (ಪಾಟೀಲ ಪುಟ್ಟಪ್ಪ; ೨೦೦೨; ಪು.೫೮)

ಗೊರೂರರವರ ಸಾಹಿತ್ಯ ಅವರ ದೇಶಭಕ್ತಿಯ ಪ್ರತಿರೂಪ. ಮಹಾತ್ಮಗಾಂಧೀಜಿಯವರ ಸುವರ್ಣ ವಿಚಾರಧಾರೆಯನ್ನು ಗೊರೂರರವರು 'ಭಾರತ ಭಾಗ್ಯವಿಧಾತ', 'ಪೂರ್ಣ ಸ್ವದೇಶಿ', 'ಸ್ವಾತಂತ್ರ್ಯವೇ ಧರ್ಮ', 'ಮಹಾತ್ಮಗಾಂಧೀಯವರ ದಕ್ಷಿಣ ಯಾತ್ರೆ', 'ಮಹಾದೇವ ದೇಸಾಯಿಯವರ ಕೃತಿಗಳು', 'ತಾಯ್ನುಡಿಯಲ್ಲಿ ಶಿಕ್ಷಣ' ಇನ್ನು ಮೊದಲಾದ ಕೃತಿಗಳಲ್ಲಿ ಉಜ್ವಲವಾಗಿ ಪ್ರತಿಪಾದಿಸಿದ್ದಾರೆ. ಗಾಂಧೀಜಿ ಯವರ ಜೀವನ ಚಿಂತನೆಯಲ್ಲಿ ಕಾಣುವ ಸ್ವದೇಶಿ ಅಭಿಮಾನ, ಸರಳತೆ, ಅಹಿಂಸೆ, ಸಮನ್ವಯ, ಸರ್ವೋದಯ, ಧಾರ್ಮಿಕ ಬದ್ಧತೆ, ಕರ್ಮಬದ್ಧತೆ, ವ್ಯಕ್ತಿಯಲ್ಲಿ ಚಾರಿತ್ರ್ಯ, ಪ್ರಾಮಾಣಿಕತೆ ಇವುಗಳೆಲ್ಲವೂ ಗೊರೂರರವರ ಜೀವನದಲ್ಲಿ ಅವರ ಕೃತಿಗಳಲ್ಲಿ ಪರಿಪೂರ್ಣವಾಗಿ ಪ್ರತಿಫಲಿತವಾಗಿದೆ. ಹೀಗೆ ಗೊರೂರರವರು ಕೇವಲ ಸಾಹಿತಿ ಹಾಗೂ ಗಾಂಧೀ ಜೀವನ ಚಿಂತಕ ಮಾತ್ರವಾಗಿ ಉಳಿಯದೆ ಸಮಾಜ ವಿಜ್ಞಾನಿಯೂ, ಜಾನಪದ ತಜ್ಞರು ಆಗಿದ್ದಾರೆ ಎಂಬುದು ಸಹೃದಯರಿಗೆ ಸಂತೋಷ ತಂದುಕೊಡುವ ಸಂಗತಿಯಾಗಿದೆ. ರಾಷ್ಟ್ರವಾದಿ ಹಾಗೂ ಮಾನವತಾವಾದಿಯ ಸಮ್ಮಿಶ್ರ ವ್ಯಕ್ತಿಯಾದ ಗೊರೂರರವರು ಭಾರತೀಯ ಸಂಸ್ಕೃತಿಯ ಪೂರ್ಣ ವ್ಯಕ್ತಿತ್ವದ ಒಂದು ಸ್ಪಷ್ಟ ಉದಾಹರಣೆ ಎನ್ನಬಹುದು. ಗೊರೂರರವರ ವ್ಯಕ್ತಿತ್ವದ ವೈವಿಧ್ಯತೆಗೆ ಬೆಳವಣಿಗೆಗೆ ಗಟ್ಟಿತನಕ್ಕೆ ಅವರ ತೆರದ ಹೃದಯ ಮತ್ತು ಮುಕ್ತ ಮನಸ್ಸು ಮೂಲಕಾರಣ ಎನ್ನಬಹುದು. ಇದರ ಜತೆಗೆ ಸಮನ್ವಯ ಪ್ರಜ್ಞೆ ಗೊರೂರರವರ ಬದುಕಿನ ಹಾದಿಯನ್ನು ಸ್ಫುಟಗೊಳಿಸಿತು.

ಗೊರೂರರವರು ಯಾವ ಹಂತದಲ್ಲಿಯೂ ತಾವೇ ರೂಢಿಸಿಕೊಂಡ ತಮ್ಮತನದ ಗಟ್ಟಿ ನೆಲಗಟ್ಟಿನಲ್ಲಿ ಉಳಿದು ಬಂದಿರುವುದು ಸಾಹಿತಿಯಾಗಿ ಅವರ ವ್ಯಕ್ತಿತ್ವಕ್ಕೆ ಅನನ್ಯತೆಯನ್ನು ತಂದುಕೊಟ್ಟಿದೆ. ಪರಿಸರದ ಪ್ರೀತಿ ಆದರಗಳಿಗೆ ಗೊರೂರರವರ ನಿಶ್ಚಲ ವ್ಯಕ್ತಿತ್ವ - ಸತ್‌ಪ್ರೇರಣಾ ಶಕ್ತಿ ಮೂಲ ಎಂಬುದು ಮರೆಯಲಾಗದ ಸತ್ಯಾಂಶವಾಗಿದೆ.

ದುಡಿಮೆ ಮತ್ತು ದೇಶಾಭಿಮಾನದ ಬಗ್ಗೆ ಗೊರೂರರವರ ನಿಲುವು ವಿಶೇಷವಾಗಿತ್ತು. ಬುದ್ಧಿ ಭಾವನಾಶಕ್ತಿಯನ್ನು ವಿಶೇಷವಾಗಿ ಹೊಂದಿರುವ ಮಾನವನು ತನ್ನ ಬದುಕಿನ ನಿರ್ವಹಣೆಗೆ ಅಗತ್ಯವಾದಷ್ಟು ಜ್ಞಾನವನ್ನು ಸಂಪಾದಿಸಿಕೊಂಡು ಬದುಕಬೇಕು ಎಂಬುದು ಗೊರೂರರವರ ನಿಶ್ಚಿತ ನಿಲುವಾಗಿದೆ. ವ್ಯಕ್ತಿಯಲ್ಲಿ ಬುದ್ಧಿ ಭಾವನೆಗಳು ಬೆಳೆದಿದ್ದರೆ ಆತನಲ್ಲಿ ಗುಲಾಮಗಿರಿಯತನ ಖಂಡಿತ ಬರಲಾರದು. ದೇಶಾಭಿಮಾನಕ್ಕೆ ಮೊದಲ ಪಾಠ ಸ್ವಾವಲಂಬಿತನದ ಬದುಕು ಎಂಬುದನ್ನು ಗೊರೂರರವರು ತಿಳಿಸಿಕೊಟ್ಟಿದ್ದಾರೆ. ದುಡಿಯದ ವ್ಯಕ್ತಿ ಬದುಕಲು ಅನರ್ಹ ಎಂಬುದು ಅವರ ಅಭಿಪ್ರಾಯವಾಗಿದೆ. ದೇಶಾಭಿಮಾನ ಕೇವಲ ಘೋಷಣೆ ಅಷ್ಟೇ ಆಗಬಾರದು ಕವಿಯ ಬದುಕಿನ ವರ್ತನೆಯಲ್ಲಿ ಅದು ನಿಶ್ಚಳವಾಗಿರಬೇಕು ಎಂಬುದು ಗೊರೂರರವರ ಆಶಯವಾಗಿದೆ. ಆದರೆ ವಾಸ್ತವ ದುರಂತ ಎಂದರೆ ಇಂದು ಸಹ ಅನೇಕ ಮಂದಿಯಲ್ಲಿ ದೇಶಾಭಿಮಾನ ವ್ಯಕ್ತಿಯ ಕೇವಲ ಘೋಷಣೆಯಾಗಿದೆಯೇ ಹೊರತು ಗುಣವಾಗಿಲ್ಲ. ಇದನ್ನು ಮನಗಂಡ ಗೊರೂರರವರು ಸ್ವಾತಂತ್ರ್ಯ ಚಳುವಳಿ ಹಾಗೂ ಅನಂತರದ ಜೀವನದಲ್ಲಿ ದೇಶಾಭಿಮಾನದ ಬದುಕನ್ನು ಬದುಕಿ ಗ್ರಾಮೀಣ ಜನಕ್ಕೆ ಮೇಲ್ಪಂಕ್ತಿಯಾಗಿದ್ದಾರೆ ಹಾಗೂ ಸ್ಫೂರ್ತಿಯನ್ನು ತಂದಿದ್ದಾರೆ. ಬದುಕಿನ ಕಷ್ಟಗಳಿಗೆ ಎದೆಗುಂದಬಾರದು ಎಂಬುದು ಗೊರೂರರವರ ವ್ಯಕ್ತಿತ್ವದ ಸಂದೇಶವಾಗಿದೆ. ಕೌಟುಂಬಿಕ ಪರಿಸರದಲ್ಲಿ ಆಗಲಿ ಮತ್ತು ಸಾಮಾಜಿಕ ನೆಲೆಯಲ್ಲಿ ಆಗಲಿ ಗೊರೂರರವರು ತಮ್ಮ ಜೀವನದ ಹಾದಿಯಲ್ಲಿ ಎಂದೂ ಕಷ್ಟಗಳಿಗೆ ಅಂಜಿದ ವ್ಯಕ್ತಿಯಾಗಿ ಕಂಡುಬರುವುದಿಲ್ಲ. ಬದುಕಿನಲ್ಲಿ ಮನೋಸ್ಥೈರ್ಯಕ್ಕೆ ದಿಟ್ಟತನವೆ ಮೂಲಮಂತ್ರ ಎಂಬುದು ಲೇಖಕರ ವಾದವಾಗಿದೆ. ಇಂತಹ ಮನೋಸ್ಥೈರ್ಯವನ್ನು ಗೊರೂರರವರು ತಮ್ಮ ಜೀವನದ ಹಾದಿಯಲ್ಲಿ ನಿಶ್ಚಳವಾಗಿ ತೋರಿಸಿಕೊಟ್ಟಿದ್ದಾರೆ. ಇವರ ಬದುಕಿನ ವ್ಯಕ್ತಿತ್ವದಲ್ಲಿ ಮನೋಸ್ಥೈರ್ಯದ ಪಾತ್ರ ಪ್ರಮುಖವಾಗಿ ಇದ್ದುದ್ದರಿಂದಲೇ ಅವರ ಕೃತಿಗಳಲ್ಲಿ ಅನೇಕ ಪಾತ್ರಗಳು ಮನೋಸ್ಥೈರ್ಯದ ಮೂರ್ತಿ ರೂಪಗಳಾಗಿವೆ. "ನಿಜವಾಗಿ ದೇಶಾಭಿಮಾನ ಇರುವ ವ್ಯಕ್ತಿ ಕಷ್ಟಪಟ್ಟು ಕೆಲಸ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು" (ಕೃಷ್ಣಮೂರ್ತಿ ಕೆ.ಎನ್.(ಸಂ); ೧೯೭೧; ಪು.೨೩) ಎಂದು ಗೊರೂರರವರು ಹೇಳುತ್ತಾರೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧಿ ಕೊಟ್ಟ ಸಂದೇಶ ಮನೆಗಿಂತ ದೇಶ ಮುಖ್ಯ, ವ್ಯಕ್ತಿಗಿಂತ ಸಮಾಜ ಮುಖ್ಯ ಎಂಬ ತತ್ತ್ವವನ್ನು ಗೊರೂರರವರು ಒಪ್ಪಿ ಅದಕ್ಕೆ ಅನುಗುಣವಾಗಿ ಬದುಕಿದ್ದಾರೆ. ರಾಜಕೀಯದಲ್ಲಿ ಬುದ್ಧಿಜೀವಿಗಳ ಪಾತ್ರವನ್ನು ಕುರಿತು ಆಡುವ ಮಾತು "ಅವರು ರಾಜಕೀಯಕ್ಕೆ ಬರದೇ ಹೋದರೆ, ಉದಾಸೀನದಿಂದ 'ನಮಗ್ಯಾಕಪ್ಪ ಅಂತ ತಮ್ಮ ಪಾಡಿಗೆ ತಾವು ಇದ್ದರೆ ಮೂರ್ಖರಿಂದ ಆಳಿಸಿಕೊಳ್ಳಬೇಕಾಗುತ್ತದೆ" ಎಂದಿದ್ದಾರೆ ಗೊರೂರರವರು. (ಅದೇ; ಪು.೨೧)

ಗೊರೂರವರು "ಖಾದಿ ಗ್ರಾಮೋದ್ಯೋಗಗಳನ್ನು ಪ್ರಾರಂಭಿಸುವ ಮೂಲಕ ಗಾಂಧಿ ತತ್ತ್ವಗಳಿಗೆ ಚಾಲನೆ ಇತ್ತರು. ಸ್ವದೇಶಿ ತತ್ತ್ವಗಳನ್ನು ಎತ್ತಿ ಹಿಡಿದರು. ಬೆಂಗಳೂರಿನ ಅಖಿಲ ಭಾರತ ಚರಕ ಸಂಘದ ಖಾದಿ ವಸ್ತ್ರಾಲಯದ ಜವಾಬ್ದಾರಿಯನ್ನು ಹೊತ್ತು ಅಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡಿದರು. ಈ ಕೆಲಸ ಅವರಿಗೆ ಅತ್ಯಂತ ಪ್ರಿಯವಾಗಿದ್ದು, ಆ ಮೂಲಕ ದೇಶ ಸೇವೆ ಮಾಡುತ್ತಿರುವ ತೃಪ್ತಿ ಗೊರೂರವರಿಗೆ ಇತ್ತು" (ವೆಂಕಟಯ್ಯ ಸಿ.ಜಿ.; ೨೦೦೨; ಪು.೪೪೯) ಎಂದು ಗೊರೂರವರ ಬಗ್ಗೆ ಸಿ.ಜಿ. ವೆಂಕಟಯ್ಯನವರು ಆಡುವ ಮಾತು ಅರ್ಥಪೂರ್ಣವಾಗಿದೆ.

ಗೊರೂರವರ ಜೀವನ ಮತ್ತು ಸಾಹಿತ್ಯವನ್ನು ಅರ್ಥಪೂರ್ಣ ಬೆಸುಗೆ ಎಂದು ಕರೆದಿದ್ದಾರೆ. "ಜೀವನದಲ್ಲಿ ಒಳ್ಳೆಯದ್ದೇನಿದೆ, ವಿಚಿತ್ರವಾದದ್ದೇನಿದೆ, ಸ್ವಾರಸ್ಯವಾದದ್ದೇನಿದೆ ಅದನ್ನು ಬರೆದೆ. ಆಮೇಲೆ ಸಣ್ಣ ಕಿರುಕುಳಗಳನ್ನು ನಾನು ಯೋಚಿಸ್ತಿರಲಿಲ್ಲ. ಯಾವ ತತ್ತ್ವವನ್ನು ಹಿಡಿದು ಬರೀಲಿಲ್ಲ. ಜೀವನದ ಅನುಭವಾನ್ನ ಹಾಗೇ ಬರೆದೆ. ಲವಲವಿಕೆ, ಮಾನವೀಯತೆಯ ಉತ್ತಮ ಅಂಶಗಳನ್ನು ಕಂಡು ಬರೆದಿದ್ದೇನೆ. ಕಷ್ಟ ನಮ್ಮನ್ನು ತುಳಿಯೋಕೆ ಬಿಡಬಾರದು" (ನಾಗರಾಜ ಡಿ.ಆರ್;೧೯೮೪;ಪು.೩೬-೩೭) ಎನ್ನುವ ಗೊರೂರವರು ಕಷ್ಟವನ್ನು ಗೆಲ್ಲುವ ರೀತಿಯನ್ನು ತಮ್ಮ ಕೃತಿಗಳಲ್ಲಿ ತಿಳಿಸಿದ್ದಾರೆ. ಸಾಹಿತ್ಯದಿಂದ ಸಂಸ್ಕಾರ ಮೂಡಿ ಬರಬೇಕೆ ಹೊರತು ಸಂಸ್ಕೃತಿ ನಾಶವಾಗಬಾರದು ಎಂಬುದು ಸಾಹಿತಿಗಳಿಗೆ ಗೊರೂರವರು ಕೊಡುವ ಎಚ್ಚರ ಸಾಧುವಾದದ್ದು. ಈ ಆದರ್ಶದ ಹಿನ್ನೆಲೆಯಲ್ಲೆ ಗೊರೂರವರ ಎಲ್ಲಾ ಕೃತಿಗಳು ಮೂಡಿ ಬಂದಿದೆ. ಗೊರೂರವರು ಸಾಹಿತಿಯಾಗಿ ಬೇರೆ ಸಾಹಿತಿಗಳ ಕೃತಿಗಳಲ್ಲಿರುವ ಉತ್ತಮಾಂಶವನ್ನು ತಮ್ಮ ಬದುಕಿಗೆ ಅಳವಡಿಸಿಕೊಂಡು ಮೆಚ್ಚಿಕೊಳ್ಳುವ ಔದಾರ್ಯದ ವ್ಯಕ್ತಿಗಳಾಗಿದ್ದರು. ಗೊರೂರವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಿ ಗ್ರಾಮೀಣ ಪರಿಸರದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸುವುದರ ಮೂಲಕ ನಾಡಿನ ದಿಟ್ಟ ಸ್ವಾತಂತ್ರ್ಯ ಹೋರಾಟಗಾರರು ಎನಿಸಿ ಕೊಂಡರು. ಇವರ ಸ್ವಾತಂತ್ರ್ಯದ ಅಭಿಮಾನದ ಫಲವೇ 'ಮೆರವಣಿಗೆ' ಕೃತಿ ಎಂಬುದು ಗಮನಾರ್ಹ ಅಂಶವಾಗಿದೆ.

ಗೊರೂರವರ ಬಹುಮುಖ ವ್ಯಕ್ತಿತ್ವದ ವಿಶ್ಲೇಷಣೆಯನ್ನು ಮಾಡುವಾಗ ಡಾ. ಹಾ.ಮಾ.ನಾ. ಅವರು ಆಡುವ ಮಾತುಗಳು "ಗೊರೂರರ ಶಕ್ತಿ ಸಾಮರ್ಥ್ಯಗಳು ಕೇವಲ ಸಾಹಿತ್ಯ ಸೃಷ್ಟಿಗೆ ಮೀಸಲಾದವಲ್ಲ. ಅವರು ಸಾಮಾಜಿಕ ಕ್ಷೇತ್ರದಲ್ಲಿ, ರಾಜಕೀಯ ರಂಗದಲ್ಲಿ ಸಾಕಷ್ಟು ಓಡಿಯಾಡಿದ್ದಾರೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿ ಕಷ್ಟನಷ್ಟಗಳಿಗೆ ಒಳಗಾಗಿದ್ದಾರೆ; ಅಪಾರ ತ್ಯಾಗ ಮಾಡಿದ್ದಾರೆ. ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ರಾಜ್ಯದ ವಿಧಾನಪರಿಷತ್ತುಗಳಲ್ಲಿ ಅನೇಕ ವರ್ಷ ಸದಸ್ಯರಾಗಿದ್ದು ಅಲ್ಲಿನ ಚರ್ಚೆಗಳಿಗೆ ರಚನಾತ್ಮಕತೆಯನ್ನು, ಜೀವಕಳೆಯನ್ನು ನೀಡಿದ್ದಾರೆ. ವಯಸ್ಕರ ಶಿಕ್ಷಣ, ಗ್ರಾಮ ಸುಧಾರಣೆ, ಮದ್ಯಪಾನ ನಿರೋಧ, ಖಾದಿ ಪ್ರಚಾರ ಮೊದಲಾದ ವಿಚಾರಗಳಲ್ಲಿ ಅವರಿಗೆ

ವಿಶೇಷವಾದ ಆಸಕ್ತಿ. ಈ ಕ್ಷೇತ್ರಗಳಲ್ಲಿ ಅವರು ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಎಳವೆಯಲ್ಲಿಯೇ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ, ಅವರ ಸನ್ನಿಧಿಯಲ್ಲಿ ಕೆಲ ಸಮಯವನ್ನು ಕಳೆದ ಗೊರೂರವರು ಅಪ್ಪಟ ಗಾಂಧೀವಾದಿಯಾಗಿದ್ದಾರೆ. ಅವರಂಥ ಗಾಂಧೀವಾದಿಗಳು ಇಂದು ರಾಷ್ಟ್ರದಲ್ಲಿ ಅನೇಕರಿಲ್ಲ. ಗಾಂಧೀಜಿ ಗೊರೂರರಿಗೆ ಮುಖವಾಡವಾಗಲಿಲ್ಲ; ಗಾಂಧಿತತ್ತ್ವ ಗೊರೂರರ ಜೀವನದ ಉಸಿರಾಗಿದೆ.......

ವ್ಯಕ್ತಿಯಾಗಿ ಗೊರೂರರು ಅದ್ವಿತೀಯರು. ಒಮ್ಮೆ ಅವರನ್ನು ಕಂಡರೆ ಮರೆಯುವುದು ಸಾಧ್ಯವಿಲ್ಲ. ಹಸುಳೆ ಹೃದಯದ ಈ ಸಾತ್ವಿಕರು ಈ ಲೋಕದ ಸಣ್ಣತನಗಳಿಂದ ದೂರಾದವರು. ಕರುಣೆ ಔದಾರ್ಯ ಹೃದಯ ವೈಶಾಲ್ಯ ಪರಿಶುದ್ಧ ಅಂತಃಕರಣಗಳು ಗೊರೂರವರನ್ನು ಎತ್ತರದ ವ್ಯಕ್ತಿಯನ್ನಾಗಿಸಿವೆ". (ನಾಯಕ ಹಾ.ಮಾ.;(ಸಂ);೧೯೭೩; ಪು.೦೨) ಹಾಮಾನಾ ಅವರ ಮಾತುಗಳು ಗೊರೂರವರ ವ್ಯಕ್ತಿತ್ವಕ್ಕೆ ವಿಶ್ಲೇಣೆಯಾಗಿದೆ ಮತ್ತು ತಿಲಕಪ್ರಾಯವಾಗಿದೆ.

ಗೊರೂರವರು ಬಹುಮಟ್ಟಿಗೆ ಬದುಕನ್ನು ಪ್ರೀತಿಸಿ ಹಾಗೂ ಬದುಕನ್ನು ಬಾಳಿದ ಧೀಮಂತ ವ್ಯಕ್ತಿ. ಈ ಗುಣಗಳು ಇದ್ದಾಗಲೇ ವ್ಯಕ್ತಿ ತನ್ನ ಬದುಕಿನಲ್ಲಿ ಸಾರ್ಥಕತೆಯನ್ನು ಮತ್ತು ಮಾನ್ಯತೆಯನ್ನು ಸಂಪಾದಿಸಿಕೊಳ್ಳಬಹುದು ಎಂಬುದು ಅವರ ದೃಢ ವಿಶ್ವಾಸವಾಗಿತ್ತು. ಸ್ವಾತಂತ್ರ್ಯ ಸಂಗ್ರಾಮದ ಚಿತ್ರವನ್ನು ಯಥಾವತ್ತಾಗಿ ನಿರೂಪಿಸುವ 'ಮೆರವಣಿಗೆ' ಕೃತಿಯಲ್ಲಿ ಗೊರೂರವರು ಆಡುವ ಮಾತು "ನಮ್ಮ ದೇವರು, ನಮ್ಮ ಶಾಸ್ತ್ರ, ನಮ್ಮ ಸಂಸ್ಕೃತಿ ಇವುಗಳಲ್ಲಿ ನಂಬಿಕೆ ಕಡಿಮೆಯಾಗುತ್ತಿರುವುದರ ಜತೆಗೆ ನಮ್ಮ ಜನರ ಧೈರ್ಯವೂ ಕುಗ್ಗುತ್ತಿದೆ. ಜೀವನದೊದಿಗೆ ಕಾದಾಡುವ, ಬರುವ ಕಷ್ಟವನ್ನು ಎದುರುಗೊಳ್ಳುವ, ಬಂದುದನ್ನು ಅನಿವಾರ್ಯವೆಂದು ಧೈರ್ಯದಿಂದ ಎದುರಿಸುವ ಸಾಮರ್ಥ್ಯ ಬರಬೇಕಾದರೆ ನಮಗೆ ಜೀವನದಲ್ಲಿ ಒಂದು ನಂಬಿಕೆ ಒಂದು ಭಕ್ತಿ ಇರಬೇಕು. ಈ ಒಂದು ನಂಬಿಕೆ ಇಲ್ಲದಿದ್ದರೆ ನಮ್ಮ ಜೀವನಕ್ಕೆ ಅರ್ಥವಿಲ್ಲದುದಾಗುತ್ತದೆ. ನಮ್ಮ ಇಂದಿನವರ ಹೇಡಿತನವನ್ನು ಆಚರಣೆಗಳನ್ನು ನೋಡಿ ನಮ್ಮ ಪೂರ್ವಿಕರು ಎಂದಿಗೂ ಹೀಗೆ ಹೇಡಿಗಳಾಗಿರಲಿಲ್ಲವೆಂಬ ಭಾವ ನಮಗೆ ಬರುವುದಕ್ಕೆ ಇದೇ ಕಾರಣ. ಜೀವನಕ್ಕೆ ಅರ್ಥವನ್ನು ಕೊಡುವುವು ಕೆಲವು ಭಾವಗಳು, ಕೆಲವು ನಂಬಿಕೆಗಳು. ಆ ನಂಬಿಕೆಗಳಿಗೆ ಸರಿಯಾದ ಆಧಾರವಿದೆಯೇ ಇಲ್ಲವೇ ಎಂಬುದು ಬೇರೆ ಪ್ರಶ್ನೆ. ಆ ನಂಬಿಕೆಯನ್ನಿಟ್ಟುಕೊಂಡಿದ್ದ ನಮ್ಮ ಹಿರಿಯರು ಆ ನಂಬಿಕೆಯೇ ಇಲ್ಲದಿರುವ ನಮಗಿಂತ ಹೆಚ್ಚು ಧೀರರೂ, ಶೂರರೂ ಆಗಿದ್ದರೆಂಬುದರಲ್ಲಿ ಸಂದೇಹವಿಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು.೧೩೬) ಹೀಗೆ ಗೊರೂರವರು ಬದುಕನ್ನು ಪ್ರೀತಿಸಿ ಬಾಳಿದ ವ್ಯಕ್ತಿ. "ಗೊರೂರವರ ರಾಷ್ಟ್ರೀಯ ಜಾಗೃತಿಯನ್ನು ರಾಜಕೀಯ ಆಧ್ಯಾತ್ಮ" ಎಂದು ಎನ್. ಬೋರಲಿಂಗಯ್ಯನವರು ಕರೆದಿರುವುದು ಯಥೋಚಿತವಾಗಿದೆ. (ನಾಯಕ ಹಾ.ಮಾ;(ಸಂ); ೧೯೭೩; ಪು.೯೧)

ಗೊರೂರವರು ವ್ಯಕ್ತಿ ಜೀವನದಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದರು. ಇದಕ್ಕೆ ಮುಖ್ಯ ಕಾರಣ ಸಂಗೀತ ಹೃದಯ ಸಾಮರಸ್ಯಕ್ಕೆ ಸೇತು ಎಂಬ ಭಾವನೆ ಅವರಲ್ಲಿತ್ತು. ಅವರ 'ಮೂಲೆಗೆ ಬಿದ್ದ ವೀಣೆ', 'ಹೇಮಾವತಿ' ಮುಂತಾದ ಕಥೆ ಕಾದಂಬರಿಗಳಲ್ಲಿ ಸಂಗೀತ ಕಲೆಯ ಅನನ್ಯ ಶಕ್ತಿಯನ್ನು ಗುರುತಿಸಬಹುದು. 'ಹೇಮಾವತಿ'ಯ ದಲಿತರ ಚೆನ್ನಿ ಸಂಗೀತ ಸಾಧನೆಯಲ್ಲಿ ತೊಡಗಿ 'ಗಾನವಿಶಾರದೆ' ಎಂದು ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿರುವುದು ವಿಶೇಷ ಸಂಗತಿಯಾಗಿದೆ. ಸಂಗೀತದ ಮೂಲಕ ಗೊರೂರವರು ಜಾತ್ಯತೀತ ಮನೋಧರ್ಮವನ್ನು ಹೇಮಾವತಿ ಕೃತಿಯ ಮೂಲಕ ಎತ್ತಿ ಹಿಡಿದಿರುವುದು ಅವರ ಸಂಗೀತದ ಒಲವನ್ನು ಸ್ಪಷ್ಟಪಡಿಸುತ್ತದೆ. ಹೀಗೆ ಕಲೆ ಮಾನವನ ಮನಸ್ಸನ್ನು ಸಂಸ್ಕಾರಗೊಳಿಸುತ್ತದೆ.

ಗೊರೂರವರು ಗಾಂಧೀಜಿಯವರನ್ನು ತಮ್ಮ ಹೃದಯದ ಬೆಳಕು ಎಂದು ಭಾವಿಸಿದ್ದರು. ಇದಕ್ಕೆ ಸಂಬಂಧಿಸಿದಂತೆ ಅವರು ಆಡುವ ಮಾತು "ನನ್ನ ಸ್ವಂತ ವಿಷಯಗಳಲ್ಲಿ ಸಹ ನಾನು ಗಾಂಧೀಜಿಯನ್ನು ಮಾರ್ಗದರ್ಶಕ ಗುರುವಾಗಿಟ್ಟುಕೊಂಡು ಅವರಿಗೆ ಸಮಸ್ಯೆಗಳನ್ನು ತಿಳಿಸಿ ಪರಿಹಾರಗಳನ್ನು ಕೇಳುತ್ತಿದ್ದೆ. ಗಾಂಧೀಜಿ ನನ್ನ ಹೃದಯದಲ್ಲಿಯೇ ಕುಳಿತಿದ್ದ ಜ್ಯೋತಿಯಾಗಿದ್ದರು. ನಾನು ಪ್ರತಿಯೊಂದು ಕಾರ್ಯ ಮಾಡುವಾಗಲೂ "ಗಾಂಧೀಜಿ ಇದಕ್ಕೆ ಏನು ಹೇಳಬಹುದು ಎಂದು ಯೋಚಿಸುತ್ತಿದ್ದೆ". (ಅದೇ; ಪು.೧೮)

ಗೊರೂರವರ ಓದಿನ ಆಸಕ್ತಿ ಮೆಚ್ಚುವಂತಹುದು. ಅವರೇ ಹೇಳುವಂತೆ "ನನಗೆ ಗ್ರಂಥಗಳನ್ನು ಓದುವುದೇ ಒಂದು ಹುಚ್ಚು ಆಗಿದ್ದಿತು. ನನ್ನ ಇಪ್ಪತ್ತೈದನೆ ವಯಸ್ಸಿನ ವೇಳೆಗೆ ಅದುವರೆವಿಗೆ ಲಭ್ಯವಾಗಿದ್ದ ಕನ್ನಡ ಕತೆ, ಕಾದಂಬರಿಗಳ ಜೊತೆಗೆ ಅನೇಕ ಕನ್ನಡದ ಕಾವ್ಯಗಳನ್ನು ಓದಿದೆ. ಆ ವ್ಯಾಸಂಗದಲ್ಲಿ ಒಂದು ಕ್ರಮ ಇರಲಿಲ್ಲ. ನನಗೆ ನಾನೇ ಉಪಾಧ್ಯಾಯ. ಅನೇಕ ಇಂಗ್ಲೀಷ್ ಕಾದಂಬರಿ ಕತೆ ಪುಸ್ತಕಗಳನ್ನು ನಾನು ಓದಿದೆ. ವರ್ತಮಾನ ಪತ್ರಿಕೆಗಳನ್ನು ಓದುವ ಚಟ ನನಗೆ ಬಹಳವಾಗಿತ್ತು. ಹೀಗಾಗಿ ಯಾವ ವಿಷಯದ ಮೇಲಾದರು ನಾನು ಬರೆಯಬಲ್ಲೆನೆಂಬ ನಂಬಿಕೆ ನನಗೆ ಇತ್ತು". (ಅದೇ; ಪು.೧೯) ಗೊರೂರವರ ಮಾತುಗಳು ಭಾವ ಶ್ರೀಮಂತಿಕೆಗೆ, ಜ್ಞಾನಪಾಂಡಿತಕ್ಕೆ ಕಾರಣಗಳನ್ನು ತಿಳಿಸಿಕೊಡುತ್ತದೆ. ಅವರೇ ಹೇಳುವಂತೆ ಓದುವುದು ಅವರಿಗೆ ಒಂದು ಹವ್ಯಾಸವಾಗದೆ ಒಂದು ಹುಚ್ಚಾಗಿತ್ತು ಎಂಬ ಮಾತು ಅವರ ಕೃತಿಗಳ ವಿಚಾರಧಾರೆ ನಮಗೆ ಸ್ಫುಟಪಡಿಸುತ್ತದೆ.

ಗೊರೂರವರು 'ಮೆರವಣಿಗೆ' ಕೃತಿಯಲ್ಲಿ ತಮ್ಮ ಕುತೂಹಲ ವ್ಯಕ್ತಿತ್ವಕ್ಕೆ ಸಹಜವಾಗಿ ಅಂದು ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆವಾಸವನ್ನು ಅನುಭವಿಸಿದ ಚಳುವಳಿಗಾರರ ಬಗ್ಗೆ ಆಡುವ ಮಾತು ಐತಿಹಾಸಿಕ ದಾಖಲೆಯಾಗಿದೆ. ಖೈದಿಗಳಿಗೆ ರಾಮಾಯಣ, ಮಹಾಭಾರತ, ಭಾಗವತ ಕೃತಿಗಳ ಕಥೆಗಳನ್ನು ಹೇಳುವ ಸಂಪ್ರದಾಯ ಇತ್ತು. ಇದು ಒಂದು ರೀತಿಯಲ್ಲಿ ಖೈದಿಗಳ ಮನರಂಜನೆಗೆ ಕಾರಣವಾದರೆ ಮತ್ತೊಂದು ರೀತಿಯಲ್ಲಿ ಮನಃಪರಿವರ್ತನೆಗೂ ಕಾರಣವಾಯಿತು ಎಂದು ಗೊರೂರವರು ಭಾವಿಸುತ್ತಾರೆ. ಇದರ ಜೊತೆಗೆ ರಾಜಕೀಯ ವಿಷಯಗಳನ್ನು ತಿಳಿಸುವ ವ್ಯವಸ್ಥೆಯೂ ಇತ್ತು. ಜ್ಯೋತಿಷ್ಯ, ಆಯುರ್ವೇದ

ಚಿಕಿತ್ಸಾ ವಿಧಾನವನ್ನು ಸೆರೆಮನೆವಾಸಿಗಳಿಗೆ ತಜ್ಞರು ತಿಳಿಸಿಕೊಡುತ್ತಿದ್ದರು. ವ್ಯಕ್ತಿಯ ಮನಃಪರಿವರ್ತನೆಯಲ್ಲಿ ಆಸಕ್ತರಾದ ಗೊರೂರರವರು ಸೆರೆಮನೆಯ ಸ್ಥಿತಿ ಚಿತ್ರವನ್ನು ಯಥಾವತ್ತಾಗಿ ಚಿತ್ರಿಸಿರುವುದು ವಿಷಯ ದೃಷ್ಟಿಯಿಂದ ಎಷ್ಟರಮಟ್ಟಿಗೆ ಸತ್ಯ ಸಂಗತಿಯಾಗಿದೆಯೋ ವಿಷಯದ ಸ್ವಾರಸ್ಯದ ದೃಷ್ಟಿಯಿಂದ ಅಷ್ಟೇ ಸಾಹಿತ್ಯಿಕವಾಗಿದೆ. ಗೊರೂರರವರ ಕುತೂಹಲ ಪ್ರವೃತ್ತಿಗೆ ಎಲ್ಲೆ ಕಾಣುವುದು ಕಷ್ಟ ಎಂಬ ಮಾತು ಇಂತಹ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಯುವಕರು ವಹಿಸಿದ ಪಾತ್ರವನ್ನು ಕುರಿತು ಗೊರೂರರವರು ಆಡಿದ ಮಾತುಗಳು ಅತ್ಯಂತ ಅರ್ಥಪೂರ್ಣವಾಗಿವೆ. ಶಾಲಾ ಕಾಲೇಜುಗಳನ್ನು ಬಿಟ್ಟು ಗಾಂಧೀಜಿ ಆಶ್ರಮಕ್ಕೆ ಯುವಕರು ನುಗ್ಗುವುದನ್ನು ಗಾಂಧೀಜಿಯವರೇ ಸ್ವತಃ ನಿಯಂತ್ರಿಸಿದ್ದರು. ತಮ್ಮ ಹಳ್ಳಿಯಲ್ಲೇ ಉಳಿದು ರಚನಾತ್ಮಕ ಕಾರ್ಯಗಳನ್ನು ನಿರ್ವಹಿಸುವುದರ ಮೂಲಕ ಚಳುವಳಿಗೆ ಯಶಸ್ಸನ್ನು ತಂದುಕೊಡಬೇಕೆಂದು ಗಾಂಧೀಜಿಯವರ ಅಭಿಮತವಾಗಿತ್ತು. ಇದೇ ಅಭಿಪ್ರಾಯವನ್ನು ಮೆಚ್ಚಿಕೊಂಡ ಗೊರೂರರವರು ಗ್ರಾಮೀಣ ಯುವಕರನ್ನು ಗ್ರಾಮೀಣ ಚಟುವಟಿಕೆಗಳಲ್ಲಿ ಸ್ವಾತಂತ್ರ್ಯ ಪೂರಕ ಚಟುವಟಿಕೆಗಳಲ್ಲಿ ಹುರಿದುಂಬಿಸುವುದರ ಮೂಲಕ ಅವರು ಚಳುವಳಿಗೆ ನಿಜವಾದ ಒಂದು ವಿಶೇಷ ಶಕ್ತಿಯನ್ನು ತುಂಬಿದರು. ಗಾಂಧೀಜಿಯವರ ತತ್ತ್ವ ನಿಷ್ಠೆಗಳನ್ನು ಅನುಷ್ಠಾನಕ್ಕೆ ತರಬೇಕು ಎಂಬುದೇ ಗೊರೂರರವರ ಉತ್ಸಾಹವಾಗಿತ್ತು. ಗೊರೂರರವರ ಈ ವಿಚಾರ ಸರಣಿಯನ್ನು ಅವರ 'ಮೆರವಣಿಗೆ' ಕೃತಿಯಲ್ಲಿ ನಾವು ಸ್ಫುಟವಾಗಿ ಕಾಣಬಹುದು. ಯುದ್ಧ ಭೂಮಿಯಲ್ಲಿ ಗುಂಡಿಗೆ ಎದೆ ಕೊಟ್ಟು ಪ್ರಾಣಾರ್ಪಣೆ ಮಾಡುವುದು ಒಂದು ರೀತಿಯಲ್ಲಿ ದೇಶಭಕ್ತಿಯಾದರೆ ಗಾಂಧೀಜಿಯವರ ಧ್ಯೆಯೋದ್ದೇಶಗಳನ್ನು ಗ್ರಾಮೀಣ ಜನರಲ್ಲಿ ಮನಗತ ಮಾಡಿಸುವುದು ಅಷ್ಟೇ ಪ್ರಭಾವಿ ಕಾರ್ಯ ಎಂಬುದನ್ನು ಲೇಖಕರು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

ಗೊರೂರರವರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವರ ಮೇಲೆ ಗಾಂಧಿ ಬೀರಿದ ಪ್ರಭಾವವೇ ಮೂಲ ಕಾರಣ ಎಂಬುದು ಪೂರ್ಣಸತ್ಯ. ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯ ಮೂಲ ಉದ್ದೇಶವನ್ನು ಭಾರತೀಯರಿಗೆ ಮನಮುಟ್ಟುವಂತೆ ಮನವರಿಕೆ ಮಾಡಿಕೊಟ್ಟರು. "ಪ್ರಪಂಚದ ಇತರ ಜನಾಂಗಗಳಿಗೆ ಹೇಗೋ ಹಾಗೆ ಭಾರತಕ್ಕೂ ಪೂರ್ಣವಾಗಿ ಬೆಳೆಯಲು ಅವಕಾಶ ಬೇಕು. ಜೀವನ ಅವಶ್ಯಕತೆಗಳೂ, ತಮ್ಮ ಶ್ರಮದ ಫಲಗಳೂ, ಸ್ವಾತಂತ್ರ್ಯವೂ ಭಾರತೀಯರ ಹಕ್ಕು. ಯಾವುದಾದರೂ ಸರಕಾರ ಜನರ ಈ ಹಕ್ಕುಗಳನ್ನು ಕಿತ್ತುಕೊಂಡರೆ ಅಥವ ಜನರ ಮೇಲೆ ದಬ್ಬಾಳಿಕೆ ನಡೆಸಿದರೆ, ಜನರಿಗೆ ಆ ಸರ್ಕಾರವನ್ನು ಬದಲಾಯಿಸುವ ಅಥವ ನಾಶ ಮಾಡುವ ಹಕ್ಕು ಇದೆಯೆಂದು ನಂಬುತ್ತೇವೆ. ಭಾರತದಲ್ಲಿ ಬ್ರಿಟಿಷ್ ಸರ್ಕಾರ, ಭಾರತೀಯರ ಸ್ವಾತಂತ್ರ್ಯವನ್ನು ನಾಶ ಮಾಡಿರುವುದು ಮಾತ್ರವಲ್ಲದೆ ಜನರ ಲೂಟಿಯ ಮೇಲೆಯೇ ಅವಲಂಬಿಸಿ ಭಾರತವನ್ನು ಆರ್ಥಿಕ ರಾಜಕೀಯ ಸಾಂಸ್ಕೃತಿಕ ನೀತಿಯ ದೃಷ್ಟಿಯಿಂದ ಪೂರ್ಣವಾಗಿ ತುಳಿದಿದೆ; ಆದುದರಿಂದ ಭಾರತವು ಬ್ರಿಟಿಷ್ ಸಂಬಂಧವನ್ನು ತ್ಯಜಿಸಿ

ಪೂರ್ಣ ಸ್ವರಾಜ್ಯ ಅಥವ ಸ್ವಾತಂತ್ರ್ಯವನ್ನು ಹೊಂದಬೇಕೆಂದು ನಂಬುತ್ತೇನೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು.೩೬೭) ಎಂಬ ಗಾಂಧೀಜಿಯವರ ಅಭಿಪ್ರಾಯವನ್ನು ಗ್ರಾಮೀಣ ಜನರಿಗೆ ಸ್ಪಷ್ಟವಾಗಿ ಗೊರೂರರವರು ತಿಳಿಸಿಕೊಟ್ಟರು. ಭಾರತದಲ್ಲಿ ಆರ್ಥಿಕ ಅಸ್ಥಿರತೆ ಋಣದ ಹೊರೆ ಹೆಚ್ಚುತ್ತಿದೆ ಎಂಬ ಅಂಶವನ್ನು ಗೊರೂರರವರು ತಿಳಿಸಿ ಯುವಕರನ್ನು ಜಾಗೃತಗೊಳಿಸಿದರು. ಬ್ರಿಟಿಷರ ಸುಧಾರಣೆಗಳೆಲ್ಲವು ಭಾರತೀಯರ ವ್ಯಕ್ತಿತ್ವಕ್ಕೆ ಅವನತಿಗೆ ಸಂಪೂರ್ಣ ಮಾರಕವಾಗಿದೆ ಎಂಬ ವಿಷಯವನ್ನು ಲೇಖಕರು ಪ್ರಚುರ ಪಡಿಸಿದರು. ಸ್ವರಾಜ್ಯ ಸ್ಥಾಪನೆಗಾಗಿ ಅಂದು ಕಾಂಗ್ರೆಸ್‌ನವರು ಕೈಗೊಂಡ ಕಾರ್ಯಗಳನ್ನು ಪ್ರತಿಜ್ಞೆಗಳನ್ನು ಗೊರೂರರವರು ಗ್ರಾಮೀಣ ಪ್ರದೇಶದಲ್ಲಿ ಪರಿಣಾಮಕಾರಿಯಾಗಿ ಯಶಸ್ವಿಗೊಳಿಸಿದರು. ಸ್ವಾತಂತ್ರ್ಯ ಪ್ರತಿಜ್ಞೆ, ಉಪ್ಪಿನ ಸತ್ಯಾಗ್ರಹ ಬ್ರಿಟಿಷರಿಗೆ ಭಾರತೀಯರು ತೋರಿಸಿದ ಅಸಹಕಾರ ಚಳುವಳಿ, ದೇಶಿಯ ಚಳುವಳಿ ಬ್ರಿಟಿಷರಿಗೆ ಭಾರತೀಯರು ಗಾಂಧೀಜಿಯವರ ನೇತೃತ್ವದಲ್ಲಿ ಕೊಟ್ಟ ದೊಡ್ಡ ಪೆಟ್ಟು ಎನ್ನಬಹುದು. ಇಷ್ಟಾದರೂ ಗಾಂಧೀಜಿಯವರ ಅಭಿಮತದಂತೆ ಭಾರತೀಯರು ನಡೆದುಕೊಂಡ ಅಹಿಂಸಾ ಮಾರ್ಗವನ್ನು ಕಂಡು ಲಂಡನ್ ಡೇಲಿ ಹೆರಾಲ್ಡ್ ಪತ್ರಿಕೆಯ ಜಾರ್ಜ್ ಸ್ಲೊಕೋಂರವರು ಬರೆದ ಮಾತುಗಳನ್ನು ಗೊರೂರರವರು 'ಮೆರವಣಿಗೆ' ಕೃತಿಯಲ್ಲಿ ಉಲ್ಲೇಖಿಸುತ್ತಾರೆ. "ವಾಡಲದ ಹತ್ತಿರ ಒಂದು ಜಾಗದಿಂದ ನಾನು ನಡೆದುದನ್ನೆಲ್ಲಾ ನಿರೀಕ್ಷಿಸುತ್ತಿದ್ದೆ. ಭಾವನಾ ಪೂರಿತರಾಗಿ ಅತ್ಯಂತ ಸ್ನೇಹದಿಂದಿದ್ದ ಸ್ವಯಂ ಸೇವಕರ ಮತ್ತು ಜನರ ಮಧ್ಯ ನಿಂತುಕೊಂಡು, ನನ್ನ ದೇಶದ ಪ್ರತಿನಿಧಿಗಳು ಈ ಹಾಸ್ಯಾಸ್ಪದವೂ ಅವಮಾನಕರವೂ ಆದ ಕೆಲಸದಲ್ಲಿ ತೊಡಗಿರುವುದನ್ನು ನೋಡುವುದು, ಇಂಗ್ಲಿಷ್ ಮನುಷ್ಯನಿಗೆ ಅತ್ಯಂತ ನಾಚಿಕೆಯನ್ನುಂಟು ಮಾಡುವುದಾಗಿದ್ದಿತು" ಎನ್ನುತ್ತಾರೆ. (ಅದೇ; ಪು.೩೭೩-೩೭೪) ಆಗ ಬ್ರಿಟಿಷರಿಗೆ ಭಾರತದಲ್ಲಿ ನಮ್ಮ ಸ್ಥಾನ ಭದ್ರವಾಗಿಲ್ಲ ಎಂಬ ಸತ್ಯ ಮನವರಿಕೆ ಆದುದ್ದನ್ನು ಗೊರೂರರವರು ಸ್ವಾತಂತ್ರ್ಯ ಹೋರಾಟಗಾರರಿಗೆ ಚೆನ್ನಾಗಿ ಅರ್ಥೈಸಿ ಚಳುವಳಿಗೆ ತೀವ್ರತೆಯನ್ನು ತಂದುಕೊಟ್ಟರು. ಹೀಗೆ ಗೊರೂರರವರು ತಾವಷ್ಟೆ ಗಾಂಧಿ ಚಳುವಳಿಯ ಮಾರ್ಗದಲ್ಲಿ ಹೆಜ್ಜೆ ಇಟ್ಟು ಮುನ್ನಡೆಯದೆ ಗ್ರಾಮೀಣ ಜನತೆಯನ್ನು ಮುನ್ನಡೆಸಿರುವುದು ಅವರ ಸಮರ್ಥ ವ್ಯಕ್ತಿತ್ವಕ್ಕೆ ಪೂರ್ಣ ಸಾಕ್ಷಿಯಾಗಿದೆ.

ಸುದರ್ಶನಂತಹ ಸ್ವಯಂ ಸೇವಕ ಚಳುವಳಿಗಾರರು ಬ್ರಿಟಿಷರ ವಿರುದ್ಧ ನಡೆದುಕೊಂಡ ದಿಟ್ಟತನವನ್ನು ಗೊರೂರರವರು ಈ ಕೃತಿಗಳಲ್ಲಿ ವರ್ಣಿಸುವ ರೀತಿ ಯಾರಲ್ಲೇ ಆಗಲಿ ಎಂದೇ ಆಗಲಿ ಸ್ವಾತಂತ್ರ್ಯದ ಕೆಚ್ಚನ್ನು ನೆನಪು ಮಾಡಿಕೊಡುತ್ತದೆ. ಬ್ರಿಟಿಷ್ ಅಧಿಕಾರಿಗಳು ಗುಂಡಿನ ಬೆದರಿಕೆಯನ್ನು ಮುಂದಿಟ್ಟಾಗಲು ಪಟೇಲ ಬೊಮ್ಮೇಗೌಡ ಸುದರ್ಶನ ನಿಗೆ ತಮ್ಮ ಮನೆಯಲ್ಲಿ ಆಶ್ರಯವನ್ನು ಕೊಟ್ಟರು. ಕರದ ಸಲುವಾಗಿ ಬೊಮ್ಮೇಗೌಡನ ಆಸ್ತಿಯನ್ನೆಲ್ಲವನ್ನು ಹರಾಜು ಮಾಡಿದಾಗ ಶವಸಂಸ್ಕಾರದ ಸಮಯದಲ್ಲಿ ಮೂಕ ಪ್ರೇಕ್ಷಕರಂತೆ ಬಂಧುಗಳ ಹಾಗೆ ಹಳ್ಳಿಯ ಜನ ನಿಂತಿದ್ದನ್ನು ಗೊರೂರರವರು ನೆನಪು ಮಾಡಿಕೊಟ್ಟು ರಾಷ್ಟ್ರೀಯ ಸ್ವಯಂ ಸೇವಕ ಚಳುವಳಿಗಾರರಲ್ಲಿ ಇದ್ದ ಕೆಚ್ಚಿನ ತೀವ್ರತೆಯನ್ನು ಶ್ಲಾಘಿಸಿದ್ದಾರೆ. ಕರ್ನಾಟಕದ ಜನತೆಯಲ್ಲಿ ಕಂಡ ಈ ದೇಶಭಕ್ತಿಯ ದಿವ್ಯ ಕೆಚ್ಚನ್ನು ವಲ್ಲಬಾಯಿ

ಪಟೇಲರು ಗುಜರಾತಿನ ರೈತರಿಗೆ ಉದಾಹರಣೆಯಾಗಿ ಹೇಳಿರುವುದನ್ನು ಗೊರೂರರವರು ಹೆಮ್ಮೆಯಿಂದ ಮೆಚ್ಚಿಕೊಂಡಿದ್ದಾರೆ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಬ್ರಿಟಿಷರು ಮಹಾಯುದ್ಧವನ್ನು ಸಮರ್ಥಿಸಿಕೊಂಡ ರೀತಿ "ಈ ಯುದ್ಧ ಜಗತ್ತಿನ ಸ್ವಾತಂತ್ರ್ಯಕ್ಕಾಗಿ" ಎಂದರು. (ಅದೇ; ಪು. ೪೨೧) ಆಗ ಗಾಂಧೀಜಿಯವರು ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವ ನೀವು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಿ ಎಂದು ಪ್ರತಿ ಸವಾಲಿನ ಘೋಷಣೆಯನ್ನು ಕೊಡುತ್ತಾರೆ. ಈ ಮಾತು ಸಹ ಭಾರತೀಯರ ಸ್ವಾತಂತ್ರ್ಯದ ಧ್ವನಿಗೆ ಸ್ಫೂರ್ತಿ ತಂದಿತು, ಶಕ್ತಿ ತುಂಬಿತು. ಸ್ವಾತಂತ್ರ್ಯ ಚಳುವಳಿಯ ಜೀವನಾಡಿ, ಜೀವನುಡಿ, 'ಮಾಡಿ ಇಲ್ಲವೆ ಮಡಿ' ಎಂಬುದು ಸ್ವಾತಂತ್ರ್ಯ ಹೋರಾಟಗಾರರಿಗೆಲ್ಲಾ ಗಾಯಿತ್ರಿ ಮಂತ್ರವಾಗಿತ್ತು ಎಂದು ಗೊರೂರರವರು ನೆನಪು ಮಾಡಿಕೊಡುತ್ತಾರೆ. ಸ್ವಾತಂತ್ರ್ಯೋತ್ತರವು ಸಹ ಈ ಸಂದೇಶಕ್ಕೆ ಪೂರ್ಣ ಅರ್ಥವಿದೆ. ರಾಷ್ಟ್ರ ಪ್ರಗತಿಗಾಗಿ ಪ್ರತಿಯೊಬ್ಬ ಭಾರತೀಯನು ದುಡಿಯಬೇಕು ಅದಕ್ಕಾಗಿ ಮಡಿಯಬೇಕು ಎಂಬ ಭಾವನೆ ಇಂದಿನ ಅತ್ಯುತ್ತಮ ರಾಷ್ಟ್ರೀಯ ಸಾಹಿತ್ಯದಲ್ಲಿ ಪ್ರತಿಧ್ವನಿತವಾಗಿದೆ.

ಗೊರೂರರವರ ಮೃದು ಹೃದಯಕ್ಕೆ ಸಾಕ್ಷಿ ಎಂದರೆ ಸ್ವಾತಂತ್ರ್ಯದ ಹೋರಾಟದ ಸಮಯದಲ್ಲಿ ಬ್ರಿಟಿಷರು ಎಳೆಯ ಮಕ್ಕಳನ್ನು ಜೈಲಿಗೆ ಕಳುಹಿಸಿದಾಗ ಅವರು ಪ್ರತಿಕ್ರಿಯಿಸಿದ ರೀತಿ ವಿಶೇಷವಾಗಿದೆ. ಹಾಸನದಲ್ಲಿಯೇ ೭-೮ ವಯಸ್ಸಿನ ಮಕ್ಕಳನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿದಾಗ ತಗಡೂರು ರಾಮಚಂದ್ರರಾಯರು ಇಂಥ ಎಳೆಯ ಮಕ್ಕಳಿಗೆ ಜೈಲಿನಲ್ಲಿ ತೊಟ್ಟಿಲನ್ನು ಕಟ್ಟಿ ತೂಗಿರಿ ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಹೀಗೆ ಗೊರೂರರವರು ಅಪೂರ್ವ ಸ್ವಾತಂತ್ರ್ಯ ಚಳುವಳಿಯ ವೈಭವವನ್ನು ದಾಖಲಿಸಿದ್ದಾರೆ. ಸ್ವಾತಂತ್ರ್ಯ ಚಳುವಳಿಯ ನಿಷ್ಠೆ, ಉತ್ಸಾಹ ಹಿರಿಯರಲ್ಲಿ ಒಂದು ಧ್ಯೇಯ ವರ್ತನೆಯಾದರೆ ಇದನ್ನು ಗಮನಿಸಿದ ಎಳೆಯರು ತಮ್ಮ ಹಿರಿಯರ ವರ್ತನೆಯನ್ನು ಆಟವಾಗಿ ಆಡಿ ತಾವು ನಲಿದು ನಲಿಸಿದ ಘಟನೆಯನ್ನು ಗೊರೂರರವರು 'ಮೆರವಣಿಗೆ' ಕಾದಂಬರಿಯಲ್ಲಿ ದಾಖಲಿಸಿದ್ದಾರೆ. ಲೇಖಕರು ಎಳೆಯ ವಯಸ್ಸಿನ ಮಕ್ಕಳಲ್ಲಿ ಹಿರಿತನವನ್ನು ಕಂಡು ಮೆಚ್ಚಿಕೊಳ್ಳುವಲ್ಲಿ ಅತ್ಯಂತ ಉತ್ಸಾಹಿಗಳಾಗಿದ್ದರು.

ಬ್ರಿಟಿಷರ ಸೇವೆಯಲ್ಲಿದ್ದ ಅನೇಕ ಭಾರತೀಯರು ಸ್ವಾತಂತ್ರ್ಯದ ಚಳುವಳಿಯ ಹೋರಾಟದಲ್ಲಿ ಭಾರತೀಯರನ್ನು ದಂಡಿಸಿದ ನಿದರ್ಶನಗಳುಂಟು. ಆದರೆ ಅವರಲ್ಲಿಯೇ ಮನಃಪರಿವರ್ತನೆ ಆದ ನಿದರ್ಶನವನ್ನು ಗೊರೂರರವರು 'ಶಿವರಾತ್ರಿ' ಕಥಾಸಂಕಲನದಲ್ಲಿ ಒಂದು ಘಟನೆಯ ಮೂಲಕ ಉದಾಹರಿಸಿದ್ದಾರೆ. ಇನಿಸ್ಪೆಕ್ಟರ್ ಕೃಷ್ಣರಾಯ ಚಳುವಳಿಯಲ್ಲಿ ನಿರತರಾಗಿದ್ದ ಭಾರತೀಯ ಮಹಿಳೆಯರ ಮೇಲೆ ಲಾಟಿಚಾರ್ಜಿಗೆ ತಾಕೀತು ಮಾಡುತ್ತಾನೆ. ತಾನು ಒಂದು ಹೆಣ್ಣಿನ ತಲೆಗೆ ಲಾಟಿಯ ಪೆಟ್ಟನ್ನು ಕೊಡುತ್ತಾನೆ. ತನ್ನಿಂದ ಪೆಟ್ಟು ತಿಂದ ಹೆಣ್ಣು ತನ್ನ ಹೆಂಡತಿ ಎಂದು ಮನವರಿಕೆಯಾದಾಗ ಕೃಷ್ಣರಾಯನಿಗೆ ನಾಚಿಕೆಯಾಗುತ್ತದೆ. ಹೆಂಡತಿಯ ದೇಶಪ್ರೇಮ ಇನಿಸ್ಪೆಕ್ಟರ್ ಕೃಷ್ಣರಾಯನ ಮನಸ್ಸನ್ನು ಪರಿವರ್ತಿಸಿದ ಘಟನೆಯನ್ನು ಗೊರೂರರವರು ಮೆಚ್ಚಿಕೊಂಡು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಹೀಗೆ ಅನೇಕ

ಸಂಸಾರಗಳಲ್ಲಿ ಭಿನ್ನಭಾವದ ವ್ಯಕ್ತಿಗಳು ಸ್ವಾತಂತ್ರ್ಯ ಚಳುವಳಿ ಮೂಲಕ ಏಕಮನಸ್ಸಿನ ವ್ಯಕ್ತಿಗಳಾದರು ಎಂಬ ವಿಷಯವನ್ನು ನಾವು ಮೆಚ್ಚಿಕೊಳ್ಳಬಹುದು. ಗೊರೂರರವರು ತಮ್ಮ 'ಮೆರವಣಿಗೆ' ಕೃತಿಯಲ್ಲಿ ಸೆರೆಮನೆಗಳ ಸುಧಾರಣೆಯ ಬಗ್ಗೆ ಆಡುವ ಮಾತು ಸಾರ್ವಕಾಲಿಕ ಎಚ್ಚರದ ಮಾತು. ಆಕಸ್ಮಿಕವಾಗಿ ಅಪರಾಧವನ್ನು ಮಾಡಿದ ಎಳೆಯರನ್ನು ಕ್ರೂರವಾಗಿ ಶಿಕ್ಷಿಸಿ ಅನಂತರ ಬಿಡುಗಡೆ ಮಾಡುವುದು ಉಚಿತವಲ್ಲ ಎಂಬುದು ಗೊರೂರರವರ ಅಭಿಪ್ರಾಯವಾಗಿದೆ. ಮಕ್ಕಳ ಮನಸ್ಸನ್ನು ತಿದ್ದಬೇಕಾದರೆ ಆ ಮಕ್ಕಳಿಗೆ ತಾವು ಮಾಡಿದ ಅಪರಾಧದ ಅರಿವು ಆಗಬೇಕು. ಈ ರೀತಿಯಲ್ಲಿ ಮಕ್ಕಳ ಮನಸ್ಸನ್ನು ಪರಿವರ್ತಿಸುವಲ್ಲಿ ಸೆರೆಮನೆಗಳು ಸುಧಾರಿತವಾಗಬೇಕು ಎಂಬ ಸಂಗತಿಯನ್ನು ಲೇಖಕರು ಹೇಳುವುದರ ಮೂಲಕ ಅವರು ತಮ್ಮ ಮನಸ್ಸಿನ ಸೂಕ್ಷ್ಮ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದಾರೆ. ಲೇಖಕರು ತಮ್ಮ ವ್ಯಕ್ತಿತ್ವ ಗುಣ ವಿಶೇಷಗಳಿಗೆ ಸಾಹಿತ್ಯವನ್ನು ಮಾಧ್ಯಮವನ್ನಾಗಿ ಮಾಡಿಕೊಂಡಿರುವುದು ಅವರ ಕೃತಿಗಳಿಗೆ ಹೆಚ್ಚಿನ ಮೌಲ್ಯವನ್ನು ತಂದುಕೊಟ್ಟಿದೆ.

ಗೊರೂರರವರಲ್ಲಿ ಗಾಂಧಿ ತತ್ತ್ವ ಪರಿಪಾಲನೆ ಕೇವಲ ಮಾತಷ್ಟೇ ಆಗಿರಲಿಲ್ಲ. ಅದು ಅವರ ಅನುಷ್ಠಾನದಲ್ಲಿ ಸತತವಾಗಿ ಕಂಡುಬರುವ ಗುಣವಾಗಿತ್ತು. ಇದಕ್ಕೆ ವಿರುದ್ಧವಾಗಿ ಗಾಂಧಿ ತತ್ತ್ವವನ್ನು ತೋರಿಕೆಗಾಗಿ ಪ್ರದರ್ಶಿಸುವ ನಕಲಿ ಗಾಂಧಿವಾದಿಗಳನ್ನು ಗೊರೂರರವರು ಗೇಲಿ ಮಾಡಿದ್ದಾರೆ ಹಾಗೂ ಖಂಡಿಸಿದ್ದಾರೆ. ಇದಕ್ಕೆ ಉದಾಹರಣೆಯನ್ನು 'ಶಿವರಾತ್ರಿ' ಕೃತಿಯಲ್ಲಿ ಕಾಣಬಹುದು. ಕರುಣಾ ಅಪ್ಪಟ ಗಾಂಧಿವಾದಿ. ಗಾಂಧಿ ಸಂದೇಶಗಳನ್ನು ಪ್ರಚಾರ ಮಾಡುವುದು ಹಾಗೂ ಕಾರ್ಯರೂಪಕ್ಕೆ ತರುವುದು ಕರುಣಾಳ ಧ್ಯೇಯವಾಗಿತ್ತು. ಮಲ್ಲಿಗೆಹಳ್ಳಿಯ ಯುವಕರು ಕರುಣಾಳನ್ನು ಕಂಡಾಗ ಅವಳ ರೂಪಕ್ಕೆ ಮರುಳಾಗಿ ಅವಳ ಮನಸ್ಸನ್ನು ಸಂತೋಷಪಡಿಸಬೇಕೆಂಬ ಒಂದೇ ಒಂದು ಕಾರಣಕ್ಕಾಗಿ ಕರುಣಾ ಪ್ರಚಾರ ಮಾಡಿದ ಗಾಂಧಿ ತತ್ತ್ವಗಳನ್ನು ಆಚರಣೆಯಲ್ಲಿ ಕೆಲ ಕಾಲ ತಂದರು. ಖಾದಿ ಬಳಕೆ, ವಿಧವಾ ವಿವಾಹ, ಗ್ರಾಮೋದ್ಧಾರ ಚಟುವಟಿಕೆಗಳು ಮಲ್ಲಿಗೆಹಳ್ಳಿಯಲ್ಲಿ ಯುವಕರಿಂದ ಅತ್ಯುತ್ಸಾಹದಲ್ಲಿ ಮುಂದುವರೆಯಿತು. ಕೆಲಕಾಲ ನಂತರ ಕರುಣಾ ಮಲ್ಲಿಗೆಹಳ್ಳಿಯನ್ನು ಬಿಟ್ಟು ಹೊರಡುತ್ತಾಳೆ. ಮಲ್ಲಿಗೆಹಳ್ಳಿಯ ಯುವಕರು ಮತ್ತೆ ಯಥಾಪ್ರಕಾರ ಗಾಂಧಿತತ್ತ್ವಗಳನ್ನು ಮರೆತು ಮೊದಲಿನಂತೆ ನಿಸ್ತೇಜ ವ್ಯಕ್ತಿಗಳಾದರು. ಇದನ್ನು ಕಂಡು ಗೊರೂರರವರು ಪುರೋಹಿತರ ಬಾಯಿಯಲ್ಲಿ ಆಡಿಸುವ ಮಾತು "ಇವರಿಗೆ ಬೇಕಾಗಿರುವುದು ವಿಧವೆಯ ಹೊರತು ವಿಧವಾ ವಿವಾಹವಲ್ಲ" ಎಂದು ಗೊಣಗುಟ್ಟಿದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೯೯; ಪು.೬೮) ಇಂತಹ ತಾತ್ಕಾಲಿಕ, ಸ್ವಾರ್ಥಪೂರಿತ ಮನಃಪರಿವರ್ತನೆ ಬೇಕಿಲ್ಲ ಎಂದು ಲೇಖಕರು ಅರ್ಥಪೂರ್ಣವಾಗಿ ನುಡಿಯುತ್ತಾರೆ. ಗೊರೂರರವರು ಎಷ್ಟು ಸತ್ಯದರ್ಶಿಗಳಾಗಿದ್ದರೋ ಅಷ್ಟೇ ಅನ್ಯಾಯಗಳನ್ನು ಪ್ರತಿಭಟಿಸುವ ಖಂಡಿತವಾದಿಗಳು ಆಗಿದ್ದರು. ತಮ್ಮಂತಹ ನಿಜವಾದ ಗಾಂಧಿ ಅನುಯಾಯಿಗಳನ್ನು ಲೇಖಕರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಅಧಿಕಾರಿಗಳ ಲಂಚಗುಳಿತನ ಕರ್ತವ್ಯ ಲೋಪಗಳನ್ನು ಕಂಡಾಗ ಗೊರೂರರವರು ಸಹಜವಾಗಿ ಉಗ್ರರೂಪ ತಾಳುತ್ತಾರೆ. ಇದು ಗೊರೂರರವರ

ಹಿರಿಮೆಯ ಗುಣ. ಮಲ್ಲಿಗೆಹಳ್ಳಿಗೆ ಸೀತಾಲಕ್ಷ್ಮಿ ತಾನು ಕಲಿತ ಆಯುರ್ವೇದ ವಿದ್ಯೆಯ ಮೂಲಕ ಜನಸೇವೆಗೆ ಬಂದಾಗ ಆಕೆಯ ಸೇವೆಯನ್ನು ಗೊರೂರರವರು ಮೆಚ್ಚಿಕೊಳ್ಳುತ್ತಾರೆ. ವಿದ್ಯೆಯನ್ನು ಕಲಿತ ವ್ಯಕ್ತಿಗಳು ತಮ್ಮ ವಿದ್ಯೆಯನ್ನು ಗ್ರಾಮೀಣ ಪರಿಸರಕ್ಕೆ ಪ್ರಯೋಜನಕಾರಿಯಾಗಿ ಬಳಸಿಕೊಳ್ಳಬೇಕು ಎಂಬ ಗಾಂಧಿ ಸಂದೇಶಕ್ಕೆ ಸೀತಾಲಕ್ಷ್ಮಿಯ ಸೇವೆ ಸಾಕ್ಷಿಯಾಗಿದೆ. ಸೀತಾಲಕ್ಷ್ಮೀಯ ಸೇವೆಯನ್ನು ಭ್ರಷ್ಟ ವೈದ್ಯಾಧಿಕಾರಿಗಳ ಹೀನ ವರ್ತನೆಯೊಂದಿಗೆ ಗೊರೂರರವರು ಸಮರ್ಥ ರೀತಿಯಲ್ಲಿ 'ಊರ್ವಶಿ' ಕಾದಂಬರಿಯಲ್ಲಿ ಹೋಲಿಸಿದ್ದಾರೆ.

ಬದುಕನ್ನು ವಿಸ್ತಾರದಲ್ಲಿ ಬಾಳಬೇಕು. ಬದುಕಿನಲ್ಲಿ ಅನುಭವಗಳ ಆಳಕ್ಕೆ ಇಳಿಯಬೇಕು ಎಂಬ ಆದರ್ಶ ಗೊರೂರರವರಲ್ಲಿ ಇತ್ತು. ಈ ಆದರ್ಶಕ್ಕೆ ಮೂಲ ಪ್ರೇರಣೆ ಗಾಂಧೀಜಿಯವರೇ ಆಗಿದ್ದರು. ಗಾಂಧೀಜಿಯ ಪರಿಸರದಲ್ಲಿದ್ದ ಎಲ್ಲ ಪ್ರಜ್ಞಾವಂತ ವ್ಯಕ್ತಿಗಳು ಗಾಂಧೀಜಿಯವರ ಈ ಗುಣವನ್ನು ತಮ್ಮಲ್ಲಿ ರೂಢಿಸಿಕೊಂಡರು. "ಗಾಂಧೀಜಿ ತಮ್ಮ ಅನುಯಾಯಿಗಳನ್ನು ಹೊಸಬಾಳಿಗೂ ಹೊಸ ಆದರ್ಶಕ್ಕೂ ಸದಾ ಸಿದ್ಧಗೊಳಿಸುತ್ತಿದ್ದರು. ಅವರ ಹಿಂಬಾಲಕರಾಗಿ ಕೆಲಸ ಮಾಡುವಾಗ ಆ ನಿಯಮಬದ್ಧ ಜೀವನ, ಕತ್ತಿನ ಅಲಗಿನಂತೆ ಅಪಾಯಕಾರಿಯಾಗಿ ಕಂಡರೂ, ಕಷ್ಟವಾಗಲಿಲ್ಲ. ಇದಕ್ಕೆ ಮುಖ್ಯವಾಗಿ, ಗಾಂಧೀಜಿಯಲ್ಲಿದ್ದ ಅಪೂರ್ವವಾದ ಆಕರ್ಷಣೆ, ಸ್ಫಟಿಕ ಶಿಲೆಯಂತಹ ಪಾವಿತ್ರ್ಯ ಮತ್ತು ಪಾರಿಶುದ್ಧತೆ, ಉದಾರತೆ, ಕರುಣೆ, ಮಾನವೀಯತೆ, ವಿನೋದ ಸ್ವಭಾವ, ಸಣ್ಣ ಕೆಲಸ ದೊಡ್ಡ ಕೆಲಸ ಯಾವುದರಲ್ಲಿಯೂ ಒಂದು ವಿಧದ ಅಚ್ಚುಕಟ್ಟು, ಜೀವನವನ್ನೆ ಕಲೆಯಾಗಿ ಬಾಳುವ ಕರ್ಮ ಕೌಶಲ - ಇವು ಕಾರಣವಾಗಿದ್ದವು. ಅವರು ಯಾವ ಕೆಲಸವನ್ನು ಎಚ್ಚರಿಕೆಯಿಂದ, ಮುಂದಾಲೋಚನೆಯಿಂದ ಮಾಡುತ್ತಿದ್ದರು. ಸಹನೆಯಿಂದ ಪರಿಣಾಮಕ್ಕಾಗಿ ಕಾಯುತ್ತಿದ್ದರೇ ಹೊರತು ಫಲಕ್ಕಾಗಿ ಆತುರರಾಗುತ್ತಿರಲಿಲ್ಲ. ...... ಗಾಂಧೀಜಿ ಒಂದು ಸಂಕೀರ್ಣ ಮತ್ತು ಪೂರ್ಣ ವ್ಯಕ್ತಿ. ಪರಸ್ಪರ ವಿರುದ್ಧ ಎಂದು ತೋರುವ ಸಂಗತಿಗಳೆಲ್ಲಾ ಅವರ ಬಾಳಿನಲ್ಲಿ ಮಧುರವಾಗಿ ಸಮ್ಮಿಳಿತವಾಗಿದ್ದವು. ಗಾಂಧೀಜಿಯ ಮಾನವೀಯ ಗುಣ ಅವರ ಶತ್ರುಗಳನ್ನು ಸಹ ಆಕರ್ಷಿಸುತ್ತಿತ್ತು. ಮನುಷ್ಯನಿಗೆ ಮನುಷ್ಯನಾಗಿಯೇ ಒಂದು ಮೌಲ್ಯವಿದೆ; ಇದು ಅವನ ಜಾತಿ, ಕುಲ, ಬುಡಕಟ್ಟು, ದೇಶ, ಬಣ್ಣ, ಐಶ್ವರ್ಯ ಇವುಗಳೆಲ್ಲದುದರಿಂದ ಬೇರೆಯಾದುದು ಮತ್ತು ಇದೆಲ್ಲವನ್ನು ಮೀರಿದುದು. ಪ್ರತಿಯೊಬ್ಬ ಮಾನವನಲ್ಲಿಯೂ ಸಮಾನವಾಗಿರುವ ಹಸಿವು, ಬಾಯಾರಿಕೆ, ನೋವು - ಪ್ರೀತಿ - ಈ ಗುಣಗಳಿಗಾಗಿಯೇ ಮಾನವನನ್ನು ಪ್ರೀತಿಸುವುದು ಮಾನವೀಯತೆಯ ಹಕ್ಕು. ಪ್ರತಿಯೊಬ್ಬ ಮನುಷ್ಯನಿಗೂ ಅವನು ಎಲ್ಲಿಯೇ ಇರಲಿ, ಹೇಗೆಯೇ ಇರಲಿ, ಮಾನವೀಯತಾ ಹಕ್ಕು ಬಾಧ್ಯತೆ ದೊರೆಯಬೇಕೆಂಬುದಕ್ಕಾಗಿ ಗಾಂಧೀಜಿ ಸತತ ಪ್ರಯತ್ನ ಮಾಡಿದರು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೭೯-೮೦) ಹೀಗೆ ಗಾಂಧೀಜಿಯವರ ವ್ಯಕ್ತಿತ್ವದ ಮೂಸೆಯಲ್ಲಿ ಮಿನುಗಿದ ಅಪೂರ್ವ ವ್ಯಕ್ತಿತ್ವ ಗೊರೂರರವರದ್ದಾಗಿದೆ.

ಗೊರೂರರವರಿಗೆ ಹಿಂದೂ ಧರ್ಮದ ಬಗ್ಗೆ ಅಭಿಮಾನವಿತ್ತು ಎಂಬುದು ನಿರ್ವಿವಾದ ಸಂಗತಿ. ಆದರೆ ಹಿಂದೂ ಧರ್ಮದ ಅಂಧ ಕಂದಾಚಾರಗಳ ಬಗ್ಗೆ ರೋಷವೂ ಇತ್ತು, ಜಿಗುಪ್ಸೆಯೂ ಇತ್ತು. ಹಿಂದೂ ಧರ್ಮದ ಮಠ ಗುರುಗಳ ಬಗ್ಗೆ 'ಮೆರವಣಿಗೆ' ಕಾದಂಬರಿಯಲ್ಲಿ ಗೊರೂರರವರು ಆಡುವ ಖಂಡನೀಯ ಮಾತುಗಳು ಗಮನಾರ್ಹವಾದವು. "ಕಾಲಾನುಕಾಲಕ್ಕೆ ಧರ್ಮವನ್ನು ಮತ ಪದ್ಧತಿಗಳನ್ನು ಬದಲಾಯಿಸಿ ಸಮಾಜವನ್ನು ಆಧುನಿಕವಾಗಿ ಮಾಡುತ್ತಿದ್ದ ಆ ಪೂರ್ವದ ಋಷಿಗಳೆಲ್ಲಿ? ಈಗಿನ ಈ ಮಠಾಧಿಪತಿಗಳಾದರೂ ಏನು ಮಾಡುತ್ತಿದ್ದಾರೆ? ಸಂಸಾರಿಕರಂತೆ ತಾವೂ ಅರಮನೆಗಳ ಮುಂದೆಯೂ ಅಧಿಕಾರಿಗಳ ಮುಂದೆಯೂ ಬಾಲ ಬಡಿಯುತ್ತಾ ಶಿಷ್ಯರೆನಿಸಿಕೊಳ್ಳುವ ಕುರಿಗಳ ತಲೆ ಒಡೆದು ಒಂದೊಂದು ಆಳು ಎತ್ತರದ ಕೊಳಗದಪ್ಪಲೆಗಳಲ್ಲಿ ಪಾಯಸ, ಜಿಲೇಬಿ ಮಾಡಿಸಿ ಮೋಟಾರಿನಲ್ಲಿ ತಿರುಗುತ್ತಾ ತಮ್ಮ ಮೆರವಣಿಗೆಗಳನ್ನು ಮಾಡಿಸಿಕೊಳ್ಳುವ ಈ ಮಠದ ಪಾಳೆಗಾರರು, ಆಧುನಿಕ ಜಗತ್ತಿನ ಬದಲಾಯಿಸಿದ ಪರಿಸ್ಥಿತಿಗಳು ಎದುರಿಗೆ ಎದ್ದು ನಿಂತಾಗ, ಯಾವ ಹಳೆಯ ಓಲೆಗರಿ ಪುಸ್ತಕದ ಧೂಳನ್ನು ಕೊಡುವುತ್ತಿದ್ದಾರೆ? ನಾವು ಹಿಂದೂಗಳಲ್ಲವೆ? ನಮ್ಮ ಧರ್ಮದಲ್ಲಿ ತಿರಳು ಯಾವುದು, ಜಳ್ಳು ಯಾವುದು? ಈ ಸಮಾಜದ ಅಸ್ತಿತ್ವ ಉಳಿಯಬೇಕಾದರೆ ನಾವು ಅವಲಂಬಿಸಬೇಕಾದ ಆಧುನಿಕ ಮಾರ್ಗಗಳಾವುವು? ತ್ಯಜಿಸಬೇಕಾದ ಪ್ರಾಚೀನ ರೋಗಗಳಾವುವು? ಧರ್ಮವನ್ನು ವಿಜ್ಞಾನವನ್ನೂ ಬೆರೆಸುವುದು ಹೇಗೆ? ಇವುಗಳನ್ನೆಲ್ಲಾ ಈ ಗುರುಗಳು ಎನ್ನಿಸಿಕೊಳ್ಳುವವರು ತಮ್ಮ ಮಠಗಳನ್ನೇ ಪ್ರಯೋಗ ಕ್ಷೇತ್ರಗಳಾಗಿ ಮಾಡಿಕೊಂಡು ಜನಕ್ಕೆ ತೋರಿಸಬೇಡವೇ? ಅದು ಬಿಟ್ಟು ಏನು ಬರಲಿ ಏನು ನಡೆಯಲಿ ಯಾವ ಪ್ರಶ್ನೆ ಏಳಲಿ ಎಲ್ಲದಕ್ಕೂ ಸಾವಿರ ವರ್ಷಗಳ ಕೆಳಗೆ ಹೇಳಿದ ಬುಕ್ಕಿನಲ್ಲಿ ಏನಿದೆ? ಅದಕ್ಕೆ ಸರಿ ಹೋಗುತ್ತಿದೆಯೋ? ಅದಕ್ಕೆ ಸರಿ ಹೋಗುದುದಕ್ಕೆ ಸಮಾಜದಲ್ಲಿ ಜಾಗವೇ ಇಲ್ಲ. ಸಮಾಜವನ್ನು ಸುಧಾರಿಸುವುದಿಲ್ಲ. ಸಮಾಧಿ ಮಾಡುತ್ತೇವೆ ಎಂದು ಮೆರೆಯುವ ಗುರುಗಳಿಂದ ಏನು ಪ್ರಯೋಜನ" ಎಂದು ತಮ್ಮ ಅಭಿಪ್ರಾಯವನ್ನು ಗೊರೂರರವರು ಅನಾವರಣಗೊಳಿಸಿದ್ದಾರೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು.೨೧೩)

ಅನೇಕ ಹಿಂದೂ ಧರ್ಮದವರು ಆ ಧರ್ಮದ ಆಚರಣೆಯಲ್ಲಿ ಸಮಸ್ಯೆಗಳ ಸುಳಿಗೆ ಸಿಕ್ಕಿದಾಗ ಪಾರುಗಾಣದೆ ಕ್ರಿಸ್ತರ ಮತಾಂತರ ಪ್ರಭಾವದಿಂದ ಕ್ರೈಸ್ತಮತಕ್ಕೆ ಸೇರಿದ್ದನ್ನು, ಕ್ರೈಸ್ತ ಧರ್ಮದಲ್ಲಿ ಅನುಭವಿಸಿದ ಯಾತನೆಯ ವಿಷಯವನ್ನು ತಿಳಿಸಿದ್ದಾರೆ. "ನಾವು ಕ್ರಿಸ್ತರೇನೋ ಆಗಿಬಿಟ್ಟೆವು. ಈ ರೀತಿ ಮತ ಬದಲಾಯಿಸುವಾಗ ಹಿಂದೂ ಮತೀಯರ ಮೇಲಿನ ದ್ವೇಷದಿಂದ ಹಾಗೆ ಮಾಡಿದೆವೇ ಹೊರತು ಕ್ರಿಸ್ತಮತದ ಅಭಿಮಾನದಿಂದಲ್ಲ" ಎಂದಿದ್ದಾರೆ. (ಅದೇ; ಪು. ೨೧೩-೨೧೪) ಹಾಗೂ ಹಿಂದೂಗಳು ಪಾಶ್ಚಾತ್ತಾಪ ಪಟ್ಟಿದ್ದನ್ನು "ಹಿಂದೂ ಮತದಲ್ಲಿ ಅಸ್ಪೃಶ್ಯರಾಗಿದ್ದರೂ ನಾವು ಮನುಷ್ಯರಾಗಿದ್ದೆವು. ಇಲ್ಲಿ ನಾವು ದನ ನಾಯಿಗಳಿಗಿಂತ ಕಡಿಮೆಯಾಗಿದ್ದೇವೆ" (ಅದೇ; ಪು. ೨೧೬) ಎಂದು ಹರಿಜನರು ಕೊರಗು ವುದನ್ನು ಗೊರೂರರವರು ಎಚ್ಚರಿಕೆಯ ಮಾತಾಗಿ ತಿಳಿಸಿದ್ದಾರೆ. ಮತಾಂತರದಲ್ಲಿ ಕಂಡುಬಂದ ದೋಷ ವಂಚನೆಗಳನ್ನು ಗೊರೂರರವರು ನಿರ್ಭೀತಿಯಿಂದ 'ಮೆರವಣಿಗೆ' ಕೃತಿಯಲ್ಲಿ ಚರ್ಚಿಸಿದ್ದಾರೆ. ಗೊರೂರರವರು

ಅಭಿಪ್ರಾಯ ಮಂಡನೆಯಲ್ಲಿ ತಮ್ಮ ಪ್ರಾಮಾಣಿಕತೆಯನ್ನು ವ್ಯಕ್ತಪಡಿಸುವುದರ ಜೊತೆಗೆ ಸಕಾರಣಗಳನ್ನು ಕೊಡುವುದರಲ್ಲಿ ತಮ್ಮ ದಿಟ್ಟತನವನ್ನು ತೋರಿಸಿರುವುದರಲ್ಲಿ ಮೆಚ್ಚುಗೆಯನ್ನು ಪಡೆದಿದ್ದಾರೆ.

ಲೇಖಕರು ತಮ್ಮ ಮನೋಸ್ಥೈರ್ಯವನ್ನು ಜೀವನದ ಎಲ್ಲಾ ಸ್ಥರದಲ್ಲಿಯೂ ಪ್ರಕಟಿಸಿದ್ದಾರೆ. ಕುಟುಂಬದ ಕಷ್ಟಗಳಲ್ಲಿ, ಸಾಮಾಜಿಕ ಸಮಸ್ಯೆಗಳಲ್ಲಿ, ರಾಷ್ಟ್ರೀಯ ಚಳುವಳಿಯಲ್ಲಿ ಅವರು ಇಟ್ಟ ದಿಟ್ಟ ಹೆಜ್ಜೆ ಅನುಕರಣೀಯವಾದದ್ದು. ಅವರ ಸಾಹಿತ್ಯ ಕೃತಿಗಳಲ್ಲಿ ಅನೇಕ ಪಾತ್ರಗಳು ಗೊರೂರರವರ ಮನೋಸ್ಥೈರ್ಯದ ಪ್ರತೀಕಗಳಾಗಿವೆ. ಇವರ ಮನೋಸ್ಥೈರ್ಯ ಸಂದರ್ಭೋಚಿತವಾಗಿ ಕಾಣಿಸಿಕೊಂಡಿರುವುದು ವಿಶೇಷ ಸಂಗತಿಯಾಗಿದೆ. ಇದಕ್ಕೆ ಉದಾಹರಣೆಯಾಗಿ 'ಹಳ್ಳಿಯ ಚಿತ್ರಗಳು' ಕೃತಿಯಲ್ಲಿ ಕಂಡುಬರುವ ಹರಿಗೋಲಿನ ಘಟನೆ. ಹರಿಗೋಲು ಆಯ ತಪ್ಪಿದಾಗ "ಆದದ್ದಾಯಿತು, ದೇವರೇ ಗತಿ ಎಂದು ನಾವು ನಿರಾಶರಾಗಿ ಬಂದದ್ದನ್ನು ಅನುಭವಿಸಲು ಸಿದ್ಧರಾದೆವು" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೮) ಎಂದು ಗೊರೂರರವರು ನುಡಿಯುತ್ತಾರೆ. ಬದುಕಲು ಉತ್ಸಾಹವನ್ನು ತೋರಿಸುವ ವ್ಯಕ್ತಿ ಮಾತ್ರ ಸಾವಿಗೂ ಸಿದ್ಧನಾಗಿ ಸ್ಥೈರ್ಯವನ್ನು ತೋರಿಸಬಲ್ಲ ಎಂಬುದಕ್ಕೆ ಲೇಖಕರ ಈ ಮಾತೇ ಸಾಕ್ಷಿಯಾಗಿದೆ. ಈ ಮಾತು ಘಟನೆಯ ಹಿನ್ನೆಲೆಯಲ್ಲಿ ಎಷ್ಟು ಗಮನಾರ್ಹವೋ ಅಷ್ಟೇ ಗಂಭೀರವಾಗಿ ಗೊರೂರರವರ ವ್ಯಕ್ತಿತ್ವಕ್ಕೆ ಶೋಭೆ ತಂದುಕೊಟ್ಟಿದೆ.

ಎಸ್.ವಿ. ಶ್ರೀನಿವಾಸರಾವ್ ಗೊರೂರರವರನ್ನು ಕುರಿತು ಆಡುವ ಮಾತು "ಗೊರೂರುತನ ಒಂದು ಮಂತ್ರಶಕ್ತಿ. ಅದು ಸಾಮಾನ್ಯರನ್ನು ಅಸಾಮಾನ್ಯರನ್ನಾಗಿಸುತ್ತದೆ. ಅವರಿಂದ ಪ್ರಭಾವಿತರಾಗಿರುವವರು ಅಗಣಿತ ಸಂಖ್ಯೆಯಲ್ಲಿದ್ದಾರೆ. ಸ್ವಚ್ಛ, ನಿರ್ಮಲ ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿ ಮೂಡಿಬರುವ ಲಘುಹಾಸ್ಯದ ಸೊಗಡು ಲಹರಿ ಎಂಥಹವರ ಕಲುಷಿತ ಚಿತ್ತವನ್ನು ಕಲಕಿ, ಶುದ್ಧಗೊಳಿಸಿ ಆಹ್ಲಾದವನ್ನು ನೀಡುವಲ್ಲಿ ಸಮರ್ಥವಾಗಿದೆ. ಈ ವಿಶೇಷ ಶಕ್ತಿಯೇ ಅವರ ಯಶಸ್ಸಿನ ಗುಟ್ಟು" ಎಂದು ಸಮಂಜಸವಾಗಿ ವಿಚಾರ ಮಾಡಿದ್ದಾರೆ. (ಶ್ರೀನಿವಾಸರಾವ್ ಎಸ್.ವಿ.; ೨೦೦೪; ಪು.೬)

ಭಾರತೀಯ ಸಂಸ್ಕೃತಿಯ ಪ್ರಚಾರ ಗೊರೂರರವರ ಸಾಹಿತ್ಯದಲ್ಲಿ ಕಾಣಬಹುದಾದ ಪ್ರಧಾನ ವಿಷಯಗಳಲ್ಲಿ ಒಂದಾಗಿದೆ. ಭವ್ಯವಾದ ಹಿಂದೂ ಸಂಸ್ಕೃತಿಯನ್ನು ಗೊರೂರರವರು ನಮ್ಮ ಹೆಮ್ಮೆಯ ಆಸ್ತಿ ಎಂದು ತಿಳಿಸಿದ್ದಾರೆ. ಸಂಸ್ಕೃತಿಯ ಪರಿಚಯವಾಗದ ಹೊರತು ನಮಗೆ ರಾಷ್ಟ್ರಾಭಿಮಾನ ಮೂಡುವುದು ಕಷ್ಟ. ಲೇಖಕರು ಸಂಸ್ಕೃತ ವಿದ್ಯಾಭ್ಯಾಸವನ್ನು ಅದರ ಹಿರಿಮೆಯನ್ನು ತಿಳಿಸುವಾಗ ಸಂಸ್ಕೃತ ವಿದ್ಯಾಭ್ಯಾಸ ನಮ್ಮ ಸಂಸ್ಕೃತಿಯನ್ನು ಅರಿಯಲು ಒಂದು ಬೆಳಕಿನ ಕಿಂಡಿ ಎನ್ನುತ್ತಾರೆ. ಸಂಸ್ಕೃತ ಸಾಹಿತ್ಯ ವಿಶ್ವಮಾನ್ಯವಾದದ್ದು. ಈ ಕಾರಣಕ್ಕಾದರೂ ನಾವು ನಮ್ಮ ಸಂಸ್ಕೃತ ಭಾಷೆ, ಸಾಹಿತ್ಯವನ್ನು ರಕ್ಷಿಸಿಕೊಳ್ಳಬೇಕು ಹಾಗೂ ಸಂಸ್ಕೃತಾಭಿಮಾನಿಗಳಾಗಬೇಕು. ನಮ್ಮ ಪುರಾಣ ಕಾವ್ಯಗಳೆಲ್ಲವು ಬಹುಮಟ್ಟಿಗೆ ಸಂಸ್ಕೃತ ಭಾಷೆಯಲ್ಲಿ ಲಿಖಿತವಾಗಿವೆ. ವೇದ ಉಪನಿಷತ್ತಿನ ಸಂಸ್ಕೃತಿ, ಪುರಾಣ ಕಾವ್ಯಗಳ ಸಂಸ್ಕೃತಿ ಸತ್ತ್ವ

ಮೇಲ್ಮೆಯ ದೃಷ್ಟಿಯಲ್ಲಿ ಒಂದಕ್ಕಿಂತ ಒಂದು ಮಿಗಿಲೆನಿಸಿದೆ, ಅಪೂರ್ವವೆನಿಸಿದೆ. ಮಲ್ಲಿಗೆಹಳ್ಳಿಯಂತಹ ಒಂದು ಹಳ್ಳಿಯಲ್ಲಿ ಗೊರೂರರವರು ಕಂಡ ಸಂಸ್ಕೃತ ಅಭಿಮಾನವನ್ನು 'ಮೆರವಣಿಗೆ' ಕೃತಿಯಲ್ಲಿ ಯಜಮಾನರ ಪಾತ್ರದ ಮೂಲಕ ಸ್ಪಷ್ಟಪಡಿಸಿದ್ದಾರೆ. ಯಜಮಾನರು ಸಂಸ್ಕೃತ ಭಾಷೆಯನ್ನು ಕಲಿತದ್ದು ಸಂಸ್ಕೃತಿಯ ಅರಿವಿಗಾಗಿ ವರ್ಧನೆಗಾಗಿ ಎಂದು ಗೊರೂರರವರು ತಿಳಿಸುತ್ತಾರೆ. ಗೊರೂರರವರ ಕಾಲಕ್ಕೆ ಬ್ರಾಹ್ಮಣರ ಧರ್ಮ ವಿದ್ಯೆ ಕಲಿಯುವುದಾಗಿತ್ತು. ಅವರು ಕಲಿತ ವಿದ್ಯೆ ಬಹುಮಟ್ಟಿಗೆ ಸಂಸ್ಕೃತ ಮಾತ್ರ ಆಗಿತ್ತು. ವ್ಯಕ್ತಿ ಜೀವನಕ್ಕೆ ಸಂಸ್ಕೃತ ವಿದ್ಯೆ ಪೂರಕವೂ ಅಲ್ಲ, ಲಾಭದಾಯಕವಂತೂ ಅಲ್ಲವೇ ಅಲ್ಲ. ಇಷ್ಟಾದರು ಸಂಸ್ಕೃತ ಅಭಿಮಾನಿಗಳು ನಮ್ಮಲ್ಲಿ ಇದ್ದಾರೆ ಎಂದು ಗೊರೂರರವರು ಅಭಿಮಾನದಿಂದ ಹೇಳುತ್ತಾರೆ. ನಾವು ಕಲಿಯುವ ಇಂಗ್ಲಿಷ್ ವಿದ್ಯೆ ಅಧಿಕಾರ ದೊರಕಿಸಿ ಕೊಡಬಹುದು. ಆದರೆ ನಾವು ಸುಸಂಸ್ಕೃತರಾಗಲು ಸಾಧ್ಯವಿಲ್ಲ ಎಂಬುದು ಸಂಸ್ಕೃತಾಭಿಮಾನಿಗಳ ಅಭಿಪ್ರಾಯವಾಗಿದೆ. ನಮ್ಮ ಕುಲ ಕಸುಬಿನ ವಿದ್ಯೆ ನಮಗೆ ಅನ್ನ ದೊರಕಿಸಿಕೊಟ್ಟರೆ ಸಂಸ್ಕೃತ ವಿದ್ಯೆ ನಮಗೆ ವ್ಯಕ್ತಿತ್ವವನ್ನು ತಂದುಕೊಡುತ್ತದೆ ಎಂಬುದು ಲೇಖಕರ ನಿಲುವು. ಸಂಸ್ಕೃತ, ಸಂಸ್ಕೃತಿ ನಮ್ಮಲ್ಲಿ ಮೈಗೂಡಬೇಕು ಎಂಬುದು ಗೊರೂರರವರ ಅಭಿಲಾಷೆಯಾಗಿದೆ. ಸಂಸ್ಕೃತ ಕಲಿತವರ ಮನೆಯಲ್ಲಿ ನಡೆಯುವ ಶಾಸ್ತ್ರ ಪುರಾಣ ಪ್ರವಚನ ಚರ್ಚೆಗಳು ಆ ಕುಟುಂಬಗಳ ಘನತೆಗೆ ಕಾರಣವಾಗಿತ್ತು. ಮಲ್ಲಿಗೆಹಳ್ಳಿಯ ಶ್ಯಾನುಭೋಗರು ಒಳ್ಳೆಯ ಸಂಸ್ಕೃತ ವಿದ್ಯಾವಂತರು. ಈ ಕಾರಣದಿಂದಲೇ ಅವರು ಎಲ್ಲ ಹಿರಿಯ ಅಧಿಕಾರಿಗಳನ್ನು ತನ್ನ ವಿಶ್ವಾಸದಲ್ಲಿ ಉಳಿಸಿಕೊಂಡಿದ್ದರು. ಸಂಸ್ಕೃತ ಭಾಷಾ ಅಭಿಮಾನದ ಬಗ್ಗೆ ಗೊರೂರರವರು ಆಡುವ ಎಲ್ಲಾ ಮಾತುಗಳು ಅವರ ಸಂಸ್ಕೃತದ ಹಿರಿಮೆಯನ್ನು ಕುರಿತು ಹೇಳುವಂತಹ ಮಾತುಗಳಾಗಿವೆ ಎಂದು ತೀರ್ಮಾನಿಸಬಹುದು. ಸಂಸ್ಕೃತ ಭಾಷೆಯ ಮೇಲಿನ ಅಭಿಮಾನದ ಜೊತೆಗೆ ಅವರಿಗೆ ಪ್ರಾಂತೀಯ ಭಾಷೆ, ರಾಷ್ಟ್ರೀಯ ಭಾಷೆ, ಅಂತರ್ರಾಷ್ಟ್ರೀಯ ಭಾಷೆಗಳ ಮೇಲೂ ಸಹಜವಾದ ಅಭಿಮಾನ ಇದ್ದೇ ಇತ್ತು. ಎಲ್ಲಾ ಭಾಷೆಗಳನ್ನು ಸಾಹಿತ್ಯವನ್ನು ಆತ್ಮೀಯತೆಯಿಂದ ಅಭಿಮಾನದಿಂದ ಸೌಜನ್ಯದಿಂದ ಕಲಿಯುವ ಉತ್ಸಾಹ ಗೊರೂರರವರಿಗೆ ವಿಶೇಷವಾಗಿತ್ತು. ಭಾಷೆಗಳ ಬಗ್ಗೆ ಗೊರೂರರವರು ತೋರಿಸುವ ಈ ಔದಾರ್ಯವೇ ಅವರ ವ್ಯಕ್ತಿತ್ವದ ಹಿರಿಮೆಗೆ ಅವರ ಸಾಹಿತ್ಯದ ಗರಿಮೆಗೆ ಕಾರಣವಾಗಿತ್ತು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. "ಸಂಸ್ಕೃತ ನಮ್ಮ ದೇಶದ ಪ್ರತಿಯೊಬ್ಬರ ಭಾಷೆ. ಅದರ ಮಾಧುರ್ಯ, ಗಾಂಭೀರ್ಯ, ಲಾಲಿತ್ಯ ಜಗತ್ತಿನ ಮತ್ತಾವ ಭಾಷೆಗೂ ಇಲ್ಲ. ನಮ್ಮ ದೇಶದ ಕಲ್ಯಾಣಕ್ಕಾಗಿಯೂ ಜಗತ್ತಿನ ಕಲ್ಯಾಣಕ್ಕಾಗಿಯೂ ಆ ಭಾಷೆಯನ್ನು ಎಂದೆಂದಿಗೂ ಸಂರಕ್ಷಿಸಬೇಕು" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು. ೨೫೮) ಎಂಬ ಲೇಖಕರ ಅಭಿಪ್ರಾಯ ನಿತ್ಯ ಸತ್ಯ ಎಚ್ಚರಿಕೆಯ ಮಾತಾಗಿದೆ.

ಗೊರೂರರವರ ವ್ಯಕ್ತಿತ್ವದಲ್ಲಿ ಕಾಣುವ ವಿಶೇಷ ಗುಣ ಎಂದರೆ ಗುಣಗ್ರಾಹಿತನ ಮತ್ತು ಕಲಾದರ್ಶಿ ಗುಣ. ಅವರ ಕುತೂಹಲ ಪ್ರಜ್ಞೆ ಸುಸಂಸ್ಕೃತ ಮನಸ್ಸು ಅವರಿಗೆ ಮೇಲಿನ ಗುಣಗಳನ್ನು ತುಂಬಿಕೊಟ್ಟಿದೆ. ಇದಕ್ಕೆ ಉದಾಹರಣೆಯಾಗಿ 'ಶಿವರಾತ್ರಿ' ಕಥಾಸಂಕಲನದಲ್ಲಿ ಸುಶ್ರಾವ್ಯ ಕಂಠದ ಮಲ್ಲಮ್ಮನ ಗಾನ

ಪ್ರಸಂಗವನ್ನು ನಾವು ನೋಡಬಹುದು. ಆಕೆ ಬಹು ಕುರೂಪಿ ಇದ್ದಾಳೆ. ಆಕೆ ಎಷ್ಟು ಕುರೂಪಿ ಆಗಿದ್ದರು ಅವಳ ಕಂಠ ಮಾಧುರ್ಯ ಅವಳ ಕುರೂಪವನ್ನು ಮರೆಸಿ ಎಲ್ಲರನ್ನು ಗಾನಲೀಲೆಯಲ್ಲಿ ಮೈಮರೆಸುತ್ತಿತ್ತು. ಶಿವರಾತ್ರಿಯ ಜಾಗರಣೆಗೆ ಮಲ್ಲಮ್ಮನ ಗೀತಗಾಯನ ಒಂದು ಅಪೂರ್ವ ಶೋಭೆಯಾಗಿತ್ತು. ಲೇಖಕರು ಮಲ್ಲಮ್ಮನ ಗೀತ ಮಾಧುರ್ಯವನ್ನು ಮೆಚ್ಚಿಕೊಳ್ಳುವುದಕ್ಕೆ ಅವರಿಗಿದ್ದ ಕಲಾಸಕ್ತಿ ಹೃದಯ ಸಂಪನ್ನತೆ ಮೂಲ ಕಾರಣವಾಗಿತ್ತು ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಮಲ್ಲಮ್ಮನ ಪ್ರಸಂಗದಲ್ಲಿ ಗೊರೂರರವರು ದೇವರ ಸೃಷ್ಟಿಯನ್ನು ಕುರಿತು ಆಡುವ ಮಾತು "ನನ್ನ ಸೃಷ್ಟಿ ಯಾವುದೂ ವ್ಯರ್ಥವಲ್ಲ. ಪ್ರತಿಯೊಂದಕ್ಕೂ ಉದ್ದೇಶವಿದೆ, ಪ್ರತಿಯೊಂದಕ್ಕೂ ಕೆಲಸವಿದೆ, ಉಪಯೋಗವಿದೆ. ಉದ್ಧತನಾದ ನೀನು ಇದು ಯಾಕೆ ಎಂದು ಕೇಳಬಹುದು. ನಿನಗೆ ತಿಳಿಯುವ ಬುದ್ಧಿಯಿದ್ದರೆ, ನೋಡುವ ಕಣ್ಣು ಇದ್ದರೆ ಗೊತ್ತಾಗುತ್ತದೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೫೫; ಪು.೧೪೩) ಎನ್ನುತ್ತಾರೆ. ಗುಲಾಬಿ ಗಿಡದ ಸಾರವೆಲ್ಲ ಹೂವಿನಲ್ಲಿ ಬರುವಂತೆ ಮಲ್ಲಮ್ಮನ ಮಾನವತ್ವವೆಲ್ಲ ಗಾನ ಒಂದರಲ್ಲಿ ಹೊರಗೆ ಬಂದಿತು ಎಂದು ಗೊರೂರರವರು ಹೇಳುವ ಮಾತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿರುವ ವಿಶೇಷ ಶಕ್ತಿಯನ್ನು ಸೂಚಿಸುತ್ತದೆ ಎಂಬ ಸತ್ಯ ನಮಗೆ ಇಲ್ಲಿ ವಿದಿತವಾಗುತ್ತದೆ. ಯಾವ ವ್ಯಕ್ತಿಯನ್ನೇ ಆಗಲಿ ಅವನ ಸಾಮರ್ಥ್ಯವನ್ನು ತಿಳಿಯದೆ, ಕಾಣದೆ ಉಪೇಕ್ಷೆ ಮಾಡುವುದು ಉಚಿತವಲ್ಲ ಎಂಬ ಸತ್ಯಾಂಶವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಸಂಪ್ರದಾಯದಲ್ಲಿ ಶ್ರದ್ಧಾವಂತ ವ್ಯಕ್ತಿಗಳಾಗಿದ್ದ ಗೊರೂರರವರು ವೈಚಾರಿಕತೆಯಲ್ಲಿಯೂ ಅಷ್ಟೇ ಪ್ರಾಮಾಣಿಕ ವ್ಯಕ್ತಿಗಳಾಗಿದ್ದರು. ಈ ಎರಡೂ ಗುಣಗಳ ಸಾರವೇ ಗೊರೂರರವರ ಸಾಹಿತ್ಯದ ಸತ್ವದ ಹಿರಿಮೆ ಎನ್ನಬಹುದು. ನಮ್ಮ ಸಮಾಜದಲ್ಲಿ ಮತಮತಗಳ ಘರ್ಷಣೆ, ಧರ್ಮಗಳ ಘರ್ಷಣೆ ಎಲ್ಲಾ ಕಾಲದಲ್ಲಿಯೂ ಕಂಡುಬರುತ್ತದೆ. ಅನೇಕ ಸಂದರ್ಭಗಳಲ್ಲಿ ಇಂತಹ ಘರ್ಷಣೆಗಳಿಗೆ ಗುರುಮಠಗಳು ಕಾರಣವಾಗಬಹುದು. ವಿಚಾರವಂತ ಗೊರೂರರವರು ಗುರುಮಠಗಳ ಕರ್ತವ್ಯವನ್ನು ಕುರಿತು ಅವರ 'ಕತೆಗಳು ಮತ್ತು ವಿನೋದ ಚಿತ್ರಗಳು' ಕಥಾ ಸಂಕಲನದ 'ಸದ್ಗುರು' ಕತೆಯಲ್ಲಿ ವಿಚಾರ ಮಾಡಿದ್ದಾರೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳ ಬಗ್ಗೆ ನಡೆದ ವಾದವಿವಾದವೇ 'ಸದ್ಗುರು' ಕತೆಯ ಸಾರವಾಗಿದೆ. ಮಧುರೆಯಲ್ಲಿ ಗೊರೂರರವರು ಸ್ವಾಮಿಗಳ ಪ್ರವಚನವನ್ನು ಕೇಳಿದರು. ಅದರ ಸಾರ ಹೀಗಿದೆ. "ಶ್ರೇಷ್ಠ ಧರ್ಮ ತತ್ತ್ವಗಳು ಒಂದೇ. ದಯೆ, ಸತ್ಯ, ಅನಾಸಕ್ತಿಗೆ ವಿರೋಧವಾಗಿ ಯಾವ ಮತದಲ್ಲಿ ಏನು ಹೇಳಿದರು ಅದನ್ನು ನಂಬಬೇಕಾಗಿಲ್ಲ. ಮತ ಮತ್ತು ಧರ್ಮ ಎರಡನ್ನು, ಮನುಷ್ಯನ ಆತ್ಮೋನ್ನತಿಗಾಗಿಯೂ ಪರಸ್ಪರ ಸ್ನೇಹ ಸೌಹಾರ್ದ ಸಹಾನುಭೂತಿ ಬೆಳವಣಿಗೆಗಾಗಿಯೂ ಉಪಯೋಗಿಸಬೇಕು. ಬೇರೆ ಬೇರೆ ಮಾಡುವುದಕ್ಕಲ್ಲ" ಎಂದು ಹೇಳಿದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು.೧೩೧) ಗೊರೂರರವರ ಸಾಹಿತ್ಯವನ್ನು ಶುದ್ಧ ವೈಚಾರಿಕ ದೃಷ್ಟಿಯಿಂದ ವಿಶ್ಲೇಷಿಸುವುದಕ್ಕೆ ಅವರ ಕೃತಿಗಳಲ್ಲಿ ಕಂಡುಬರುವ ಇಂತಹ ವಿಶ್ಲೇಷಣಾತ್ಮಕ ಹೇಳಿಕೆಗಳು ಮೂಲ ಸಾಧನವಾಗುತ್ತದೆ.

ಅವರ ಕೃತಿಗಳಲ್ಲಿ ವೈಚಾರಿಕತೆಯ ಕ್ರಾಂತಿ ನಿಚ್ಚಳವಾಗಿದೆ ಎಂಬುದನ್ನು ನಾವು ಸ್ಥಾಪಿಸಬಹುದು. ಗೊರೂರರವರ ಸಾಹಿತ್ಯ ಕೃತಿಗಳನ್ನು ವಿಮರ್ಶೆ ಮಾಡುವಾಗ ಇವರ ಈ ದೃಷ್ಟಿಯನ್ನು ಮರೆತರೆ ಲೇಖಕರಿಗೆ ಮತ್ತು ಅವರ ಕೃತಿಗಳಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ.

ಗ್ರಾಮೀಣ ಪರಿಸರದಲ್ಲಿ ಶಾಂತಚಿತ್ತ ಹಾಗೂ ವ್ಯಕ್ತಿಯ ಸಹಕಾರ ಗುಣವನ್ನು ಗೊರೂರರವರು ಮೆಚ್ಚಿಕೊಳ್ಳುತ್ತಾರೆ. ಒಮ್ಮೆ ಗೊರೂರರವರು ನಿಶ್ಚಲಾನಂದ ಸ್ವಾಮಿಯನ್ನು ಭೇಟಿಯಾದಾಗ ಅವರ ಉಪದೇಶವನ್ನು ಕೇಳಿ ಉಪದೇಶದ ಔಚಿತ್ಯಕ್ಕೆ ಸಮ್ಮತಿಸಿದ ಅವರು ಗ್ರಾಮೀಣ ಜನತೆಗೆ ಇಂತಹ ವ್ಯಕ್ತಿಗಳ ಸಾನಿಧ್ಯ ವಿವೇಕದ ಮಾತು ಎಂತಹ ಶುದ್ಧ ದೃಷ್ಟಿಯನ್ನು ತರಬಲ್ಲದು ಎಂದು ಭಾವಿಸುತ್ತಾರೆ. "ಒಬ್ಬರೇ ಒಬ್ಬರು, ಸಾಧು ಸತ್ಪುರುಷರು ಯೋಗ್ಯರು ನಿಷ್ಪಕ್ಷಪಾತಿಗಳು ಊರಿನಲ್ಲಿದ್ದರೆ - ಅವರು ಮಾತನಾಡದಿದ್ದರೂ ಬೇಡ. ಏನನ್ನೂ ಮಾಡದಿದ್ದರೂ ಬೇಡ - ಅವರೇ ಪ್ರತಿಯೊಬ್ಬನ ಹೃದಯದಲ್ಲಿಯೂ ಒಬ್ಬೊಬ್ಬ ನೀತಿ ಬೋಧಕನಂತೆ ಇದ್ದುಕೊಂಡು, ಎಂತಹ ಅಲೌಕಿಕ ಧರ್ಮಜ್ಯೋತಿಯಾಗಬಲ್ಲರು" ಎಂದು ಗೊರೂರರವರು ಅಭಿಪ್ರಾಯಪಡುವುದು ಪ್ರಾಮಾಣಿಕ ಅನುಭವದ ಮಾತು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೨೦೩) ಮುಗ್ಧ ಜನಕ್ಕೆ ಪ್ರಾಮಾಣಿಕ ಮಾರ್ಗದರ್ಶನ ಎಷ್ಟು ಅನಿವಾರ್ಯ ಎಂಬುದನ್ನು ಅವರು ಇಲ್ಲಿ ನೆನಪು ಮಾಡಿಕೊಡುತ್ತಾರೆ. ಗ್ರಾಮೀಣ ಸಂಸ್ಕೃತಿಯ ಪುನರುತ್ಥಾನಕ್ಕೆ ಲೇಖಕರು ಕಂಡುಕೊಂಡ ಹಲವು ಮಾರ್ಗಗಳಲ್ಲಿ ಸಾಧುಗಳ ಮಾರ್ಗದರ್ಶನವೂ ಒಂದು ಪ್ರಬಲವಾದ ಕ್ರಿಯೆಯಾಗಿದೆ.

ಗಾಂಧೀಜಿಯವರ ವ್ಯಕ್ತಿತ್ವದ ಪರಿಪೂರ್ಣತೆಗೆ ವೈಭವಕ್ಕೆ ನಮ್ಮ ಪುರಾಣ ಕತೆಗಳು ಬಹುಮಟ್ಟಿಗೆ ಕಾರಣವಾಗಿದ್ದವು. ಪುರಾಣದ ಕತೆಯಲ್ಲಿ ಬದುಕಿನ ಬೆಳಕನ್ನು ಕಂಡುಕೊಳ್ಳುವ ಗುಣ ಇದ್ದಾಗ ನಮ್ಮ ಪುರಾಣಗಳು ಸಾರ್ಥಕ - ನಾವು ಪುರಾಣವನ್ನು ಓದಿದ್ದು ಸಾರ್ಥಕವಾಗುತ್ತದೆ. ವಿಷ್ಣುವಿನ ದಶಾವತಾರಗಳಲ್ಲಿ ವಾಮನಾವತಾರವೂ ಒಂದು. ಈ ಅವತಾರದಲ್ಲಿ ವಿಷ್ಣು ಬಲಿಯ ಅಹಂ ಅನ್ನು ಕಳೆದು ಆತನನ್ನು ತನ್ನ ಅಪೂರ್ವ ಭಕ್ತನನ್ನಾಗಿ ಮಾಡಿಕೊಳ್ಳುತ್ತಾನೆ. ಬಲಿಯ ತಲೆಯ ಮೇಲೆ ಪಾದವನ್ನು ಇಟ್ಟು ವಿಷ್ಣು ಬಲಿಯನ್ನು ಪಾವನಗೊಳಿಸುತ್ತಾನೆ. ವಿಷ್ಣು ಬಲಿ ಚಕ್ರವರ್ತಿ ಮನೆಯ ಸೇವಕನಾಗುತ್ತಾನೆ. ಭಗವಂತನಲ್ಲಿ ನಂಬಿಕೆ ಇಟ್ಟುಕೊಂಡು ತಾಳ್ಮೆಯಿಂದ ಇದ್ದ ಕಾರಣ ಬಲಿಗೆ ಈ ರೀತಿಯಲ್ಲಿ ದೈವ ಕೃಪೆ ಉಂಟಾಯಿತು, ಮಹಾಭಾಗ್ಯ ದೊರೆಯಿತು. ಇಂಥಹ ಆಸ್ತಿಕ ಮನೋಧರ್ಮ ಮತ್ತು ಸಹನೆ ಎಲ್ಲ ವ್ಯಕ್ತಿಗಳಿಗೂ ಜೀವನದಲ್ಲಿ ಇರಬೇಕು ಎಂಬುದನ್ನು ಗಾಂಧಿ ತಿಳಿಸಿಕೊಟ್ಟಿದ್ದಾರೆ. ಗಾಂಧಿಯವರ ಪುರಾಣ ಪ್ರಜ್ಞೆಯನ್ನು ಗೊರೂರರವರು ಅನುಸರಿಸಿರುವುದು ಅವರ ವ್ಯಕ್ತಿತ್ವದ ಶ್ರೇಷ್ಠತನಕ್ಕೆ ಕಾರಣವಾಗಿದೆ ಎಂಬುದನ್ನು ನಿಸ್ಸಂಶಯವಾಗಿ ಹೇಳಬಹುದು. ಪುರಾಣ ಇತಿಹಾಸದ ಕತೆಗಳು ಕೇವಲ ಕಾಲಹರಣಕ್ಕೆ ಮಾತ್ರ ಬಳಕೆಯಾಗದೆ ಜೀವನಕ್ಕೆ ಬೆಳಕಾಗಿ ನಮಗೆ ಉಳಿಯಬೇಕು ಎಂಬುದು ಗಾಂಧೀಜಿ ತಿಳಿಸಿದ ಸತ್ಯವನ್ನು

ಲೇಖಕರು ಒಪ್ಪಿಕೊಂಡು ಗ್ರಾಮೀಣ ಜನತೆಗೆ ಈ ನೀತಿ ಮಾರ್ಗವನ್ನು ಪರಿಚಯಿಸಿರುವುದರಲ್ಲಿ ಯಶಸ್ವಿಯಾಗಿದ್ದಾರೆ. "ಮಹಾತ್ಮರ ವಿಜಯಗಳೆಲ್ಲ ಆತ್ಮಕ್ಕೆ ಸಂಬಂಧಿಸಿದವು. ಅವರ ಅಪಜಯಗಳು ಹೊರಕ್ಕೆ ಕಂಡರೂ ಅದು ಅಪಜಯವಲ್ಲ. ಸತ್ಯವನ್ನು ಅನುಸರಿಸುವವರಿಗೆ ಎಂದಿಗೂ ಅಪಜಯವಿಲ್ಲ. ಗಾಂಧೀಜಿ, ಬಲಿಯ ಮಾರ್ಗವನ್ನೇ ಅನುಸರಿಸಿ ಈ ದೇಶದ ಜನತೆಯನ್ನು ಉಜ್ಜೀವನಗೊಳಿಸಿದರು. ಅವರ ಮಾರ್ಗವನ್ನು ಅನುಸರಿಸಿದರೆ ಭಾರತ ಎಂದಿಗೂ ಅಜೇಯವಾಗಿ ಬಾಳುವುದು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು.೪೨) ಪುರಾಣ ಪ್ರಿಯರೆಲ್ಲರ ದೃಷ್ಟಿ ಹೀಗೆ ಸ್ವಚ್ಛವಾಗಿದ್ದು ಆತ್ಮೋದ್ಧಾರಕ್ಕೆ ಹೇತುವಾಗಿ ಇರಬೇಕು ಎಂಬುದು ಗೊರೂರರವರ ಸಂಕಲ್ಪವಾಗಿದೆ.

ಹಿಂದೂ ಹಬ್ಬಗಳು ಕೇವಲ ಸವಿ ಊಟದ ಪ್ರಸಂಗಗಳು ಅಷ್ಟೇ ಅಲ್ಲ. ಪ್ರತಿ ಹಬ್ಬದ ಹಿನ್ನೆಲೆಯನ್ನು ವಿಚಾರ ಮಾಡಿದಾಗ ನೆನಪು ಮಾಡಿಕೊಂಡಾಗ ಹಬ್ಬಗಳಲ್ಲಿ ಅಡಗಿರುವ ಸಾತ್ವಿಕ ಸಾಂಸ್ಕೃತಿಕ ಬೆಳಕು ನಮಗೆ ಗೋಚರವಾಗುತ್ತದೆ. ಹಬ್ಬಗಳ ಆಚರಣೆಯಲ್ಲಿ ಈ ಆಂತರಿಕ ಮೌಲ್ಯವನ್ನು ಅರಿತುಕೊಳ್ಳದೆ ಅನುಸರಿಸದೆ ಮಾಡುವ ಹಬ್ಬಗಳು ಕೇವಲ ದುಂದುವೆಚ್ಚ ಬಾಯಿ ಚಪಲಕ್ಕಾಗಿ ಮಾಡುವ ಮೋಜಿನ ಚಟುವಟಿಕೆ, ಪ್ರತಿಷ್ಠೆಯ ಸಂಕೇತವಾಗಿ ಉಳಿಯುತ್ತದೆ. ದೀಪಾವಳಿಯ ಅಂತರಾರ್ಥ ನಮ್ಮ ಅಂತರಂಗದ ಅಧ್ಯಾತ್ಮಿಕ ಬೆಳಕು ಉಜ್ವಲವಾಗಬೇಕು ಎಂಬುದು. ನಮ್ಮ ಹೊರದೃಷ್ಟಿ ಅಷ್ಟೇ ನಮ್ಮ ಅಂತರಂಗದ ದೃಷ್ಟಿಯೂ ಪ್ರಜ್ವಲವಾಗಬೇಕು. ಆಗ ನಮಗೆ ನಮ್ಮ ಬದುಕಿಗೆ ಬೇಕಾದ ಪೂರ್ಣ ದೃಷ್ಟಿ ಲಭ್ಯವಾಗುತ್ತದೆ ಎಂಬ ಅಂಶವನ್ನು ಗೊರೂರರವರು 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ. "ದೀಪಾವಳಿ ಹಬ್ಬ ನಮ್ಮ ಬಾಳ ಪತಕ್ಕೆ ಬೆಳಕು ಕಾಣಲಿ ಎಂಬ ಉದ್ದೇಶದಿಂದ ಆಚರಿಸುವ ಹಬ್ಬ." (ಅದೇ; ಪು.೩೧)

ಗೊರೂರರವರಿಗೆ ಋಷಿವಾಣಿಯಲ್ಲಿ ಇರುವಷ್ಟೇ ಅಭಿಮಾನ ವಿಜ್ಞಾನವಾಣಿಯ ಮೇಲೂ ಇದೆ. ಋಷಿವಾಣಿ ವಿಜ್ಞಾನವಾಣಿಗಳು ಮನುಷ್ಯನಿಗೆ ಎರಡು ದೃಷ್ಟಿಗಳಾಗಿ ಆತನ ಸುಖ ನೆಮ್ಮದಿಗೆ ಪೂರಕ ಆಗಬೇಕು. ಯಾವ ಒಂದು ದೃಷ್ಟಿ ಇಲ್ಲವಾದರೂ ಮನುಷ್ಯ ದೃಷ್ಟಿ ದೋಷಕ್ಕೆ ಗುರಿಯಾಗುತ್ತಾನೆ. ಪ್ರಕೃತಿಯ ಮಧ್ಯೆ ಆನಂದ ಹೃದಯಿಗಳಾಗಿ ಬದುಕಿದ ಗೊರೂರರವರು ಪ್ರಕೃತಿಯನ್ನು ಚಿರಚಿನ್ಮಯಿ ಎಂದು ಮೆಚ್ಚಿಕೊಳ್ಳುತ್ತಾರೆ. ಪ್ರಾಣಿಗಳು ಕೆಲಮಟ್ಟಿಗೆ ಪ್ರಕೃತಿಯ ಪರಿಸರದಲ್ಲಿ ಜಡವಾಗಿ ಕಂಡುಬಂದರೂ ಮನುಷ್ಯ ಮಾತ್ರ ಜಡವಾಗಬಾರದು ಎಂಬುದು ಎಲ್ಲರ ಕವಿವಾಣಿಯು ಆಗಿದೆ.

"ಬೆಳಕು ಬಾಳ ಬಿಚ್ಚುತಿರಲು,
ಜೀವಕರ್ಮ ಕೇಳುತಿರಲು
ಆತ್ಮವಂತ ಕರಣಪಟವು -
ಏನು ಗೈವನುದಯದಿ?

ಹಕ್ಕಿ ಹೂಗಳಂತೆ ತಾನೂ

ಎದ್ದು ನಲಿವನೊ?

ಮಿಕ್ಕ ಸೃಷ್ಟಿಯಂತೆ ತಾನೂ

ನಲವಿಗೇಳ್ವನೊ?" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೨೦)

ಎಂದು ಪು.ತಿ.ನ ಹೇಳುವಂತೆ ಮಾನವ ಪ್ರಕೃತಿಯೊಂದಿಗೆ ಚೈತನ್ಯಮಹಿಯಾಗಿ ಬದುಕಬೇಕು ಎಂಬುದು ಗೊರೂರವರ ಸಂದೇಶವಾಗಿದೆ. ಜೀವಿಯಾದ ಮಾನವ ಜಡವಾಗಬಾರದು ಚೇತೋಹಾರಿಯಾಗ ಬೇಕು. ಹೀಗೆ ಋಷಿವಾಣಿಗೆ ಉತ್ತರಾಧಿಕಾರಿಗಳಾಗಿ ಉಳಿದಾಗಲೇ ಮನುಜ ಸಮಾಜ ಸಾರ್ಥಕತೆಯನ್ನು ಕಂಡುಕೊಳ್ಳಬಹುದು ಎನ್ನುತ್ತಾರೆ ಲೇಖಕರು.

ಬದುಕನ್ನು ಕಂಡು ಅನುಭವಿಸಿ ಅದರ ಸತ್ತ್ವವನ್ನು ತಿಳಿಯುವ ಸುಂದರ ಬದುಕಿನ ಕಲೆಯನ್ನು ಗೊರೂರವರು ಅರಿತು ಬದುಕಿದ್ದಾರೆ. ಇಂತಹ ಬದುಕನ್ನು ಕಂಡುಕೊಳ್ಳಲು ಅವರಿಗೆ ವೇದ ಸಂಸ್ಕೃತಿ ಪುರಾಣ ಕಾವ್ಯಗಳ ಪರಿಚಯ ಎಷ್ಟು ಅನಿವಾರ್ಯವಾಗಿದೆಯೋ ಅಷ್ಟೇ ಗ್ರಾಮೀಣ ಜನಜೀವನದ ಪರಿಚಯವು ಅನಿವಾರ್ಯ ಎನಿಸುತ್ತದೆ. ಗ್ರಾಮೀಣ ಜನ ಮುಗ್ಧ ಜನ, ಅವರ ಮುಗ್ಧ ಬದುಕು ಸುಸಂಸ್ಕೃತ ಮೇಲ್ಪಂಕ್ತಿಯ ಬದುಕಿಗೆ ಸಾಟಿಯಾಗಿರುತ್ತದೆ. ವಿದ್ಯಾವಂತರ ಬದುಕು ಕೇವಲ ಸುಸಂಸ್ಕೃತವಾದದ್ದು ಎಂಬ ಭ್ರಮೆಯನ್ನು ಅವರು ತಮ್ಮ ಕೃತಿಗಳ ಮೂಲಕ ಖಚಿತಪಡಿಸಿದ್ದಾರೆ. ವ್ಯಕ್ತಿಗೆ ಜ್ಞಾನಕ್ಕಿಂತ ಮುಖ್ಯವಾದದ್ದು ಪ್ರಾಪಂಚಿಕ ಅರಿವು, ಜೀವನಾನುಭವಗಳು. ಗೀತೆಯಲ್ಲಿ ಕಾಣುವ ಸ್ಥಿತಪ್ರಜ್ಞನ ಲಕ್ಷಣಕ್ಕೆ ಉದಾಹರಣೆಯಾಗಿ ಪುರಾಣ ಕಾವ್ಯಗಳಲ್ಲಿ ಪಾತ್ರಗಳನ್ನು ಗುರುತಿಸಬಹುದು. ಅದೇ ರೀತಿಯಲ್ಲಿ ಗ್ರಾಮೀಣ ಪರಿಸರದಲ್ಲಿ ಮುಗ್ಧ ಗ್ರಾಮೀಣ ಜನರ ಬದುಕಿನಲ್ಲಿಯೂ ಕಾಣಬಹುದು. ಬದುಕನ್ನು ಭಾವಿಸಿ ಬದುಕುವುದು ಒಂದು ರೀತಿಯಾದರೆ ಬದುಕನ್ನು ಬಂದಂತೆ ಬದುಕುವುದು (ಅದಂದಿನ ಘಟನೆಗಳಿಗೆ ಅನುಗುಣವಾಗಿ) ವಿಶಿಷ್ಟ ಬದುಕಾಗಿರುತ್ತದೆ. ಬದುಕಿಗೆ ಸಹನೆ, ಸ್ಥೈರ್ಯ ಮೂಲ ಶಕ್ತಿಯಾಗಿ ಇದ್ದರೆ ಬದುಕು ಬಹುಮಟ್ಟಿಗೆ ಉಪಕೃತವಾಗುತ್ತದೆ, ಅರ್ಥಪೂರ್ಣವಾಗುತ್ತದೆ. ಗೊರೂರವರು ಇಂಥ ರೀತಿಯಲ್ಲಿ ಬದುಕಿ ತಮ್ಮ ಬದುಕನ್ನು ಸಾರ್ಥಕ ಮಾಡಿಕೊಂಡಿದ್ದಾರೆ. ಅವರ ಕೃತಿಗಳ ಉತ್ತಮ ಪಾತ್ರಗಳೆಲ್ಲವು ಈ ಮೇಲ್ಪಂಕ್ತಿಯಲ್ಲಿಯೇ ರೂಪಿತವಾಗಿದೆ. ಉದಾಹರಣೆಗೆ ಬೆಸ್ತರ ಕರಿಯನ ಪಾತ್ರ ಸಾರ್ಥಕ ವ್ಯಕ್ತಿಯ ಪಾತ್ರಕ್ಕೆ ಸ್ಥಿತಪ್ರಜ್ಞನ ಪಾತ್ರಕ್ಕೆ ನಿಚ್ಚಳ ಉದಾಹರಣೆಯಾಗಿದೆ. ಕರಿಯ ಪಾತ್ರವನ್ನು ಅವನ ಬದುಕಿನ ರೀತಿಯ ಹಿನ್ನೆಲೆಯಲ್ಲಿ ಗೊರೂರವರು ವಿವರಿಸುವ ಬಗ್ಗೆ ವಿಶೇಷವಾಗಿದೆ. ಕರಿಯನಿಗೆ ಬಾಲ್ಯವೂ ಇಲ್ಲ, ಮುಪ್ಪು ಇಲ್ಲ. ಕರಿಯನ ಆರೋಗ್ಯಕ್ಕೆ ಅವನ ಕಸುಬೇ ಕಾರಣವಾಗಿದೆ. ಆತ ಕರ್ಮದಲ್ಲಿ ಕುಶಲ ನಾಗಿರುವುದು ಯೋಗಿಯ ಲಕ್ಷಣವಾಗಿದೆ. ಈ ಹಿನ್ನೆಲೆಯಲ್ಲೇ ಗೊರೂರವರು ಬೆಸ್ತರ ಕರಿಯ ಯೋಗಿಯೇ? ಎಂಬ ಪ್ರಶ್ನೆಯಿಂದಲೇ ಕರಿಯನ ಚಿತ್ರಣವನ್ನು ಆರಂಭಿಸುತ್ತಾರೆ. ಕರಿಯನಿಗೆ ಭಯ

ಎಂಬುದೇ ಇಲ್ಲ. "ಕರಿಯನಿಗೆ ಶತ್ರುಗಳೂ ಇಲ್ಲ, ಮಿತ್ರರೂ ಇಲ್ಲ. ಹಳೆಯ ಹೆಂಡತಿ ಸತ್ತ ದುಃಖವೂ ಇಲ್ಲ; ಹೊಸ ಹೆಂಡತಿ ಬಂದ ಆನಂದವೂ ಇಲ್ಲ. ಅವನನ್ನು ಬಯ್ಯುವವರೂ ಇಲ್ಲ, ಹೊಗಳುವವರೂ ಇಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೮; ಪು.೮೪) ಗೊರೂರರವರ ಈ ಮಾತುಗಳೆಲ್ಲವು ಕರಿಯನ ಪಾತ್ರ ಚಿತ್ರಣಕ್ಕಾಗಿಯೇ ಆಲೋಚಿಸಿ ಬರೆದ ಮಾತುಗಳು ಖಂಡಿತ ಅಲ್ಲ. ಅವರು ಚಿತ್ರಿಸಿರುವ ಕರಿಯ ಅವರು ನೇರ ಕಂಡ ಕರಿಯ ಎಂಬುದನ್ನು ಎಂದೂ ಮರೆಯಬಾರದು. ಹೀಗೆ ಗೊರೂರರವರ ಸಾಹಿತ್ಯ ಕೇವಲ ಕಲ್ಪನೆಯ ಕುಂಚದಿಂದ ಮೂಡಿಬಂದ ಕೃತಿ ಚಿತ್ರವಾಗಿ ಉಳಿಯದೆ ಜೀವಂತಿಕೆಯಿಂದ ನೈಜತೆಯಿಂದ ಸತ್ಯಪಾತ್ರಗಳೆನಿಸಿಕೊಂಡಿವೆ. ಹೀಗಿದ್ದರು ಗೊರೂರರವರ ಕೃತಿಗಳನ್ನು ನೈಜತೆಯ ಗುಣ ದೃಷ್ಟಿಯಿಂದ ವಿಮರ್ಶೆ ಮಾಡದೆ ಇರುವುದು ವಿಷಾದನೀಯ ಸಂಗತಿಯಾಗಿದೆ.

ಗೊರೂರರವರ ವಿಶ್ವವಿಶಾಲ ದೃಷ್ಟಿ ಅವರ ಕೃತಿಗಳ ಕಣ್ಣಾಗಿದೆ. ಇದಕ್ಕೆ ಪೂರಕವಾಗಿ ಅವರ ಕೃತಿಗಳ ಬಗ್ಗೆ ಆಳವಾದ ಅಧ್ಯಯನ ಮಾಡಿ ಪ್ರೌಢ ಸಂಶೋಧನಾ ಕೃತಿಯನ್ನು ರಚಿಸಿರುವ ವಿಮರ್ಶಕ ಡಾ. ಸಿ.ಜಿ. ವೆಂಕಟಯ್ಯನವರು ತಮ್ಮ ಮಹಾಪ್ರಬಂಧದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಅವರ ಪರಿಶುದ್ಧ ಮನಸ್ಸಿಗೂ ಗೊರೂರರವರ ಅಪೂರ್ವ ವ್ಯಕ್ತಿತ್ವಕ್ಕೂ ಹಿಡಿದ ಕನ್ನಡಿಯಾಗಿದೆ. ಡಾ. ವೆಂಕಟಯ್ಯನವರ ಮಾತುಗಳು "ಗೊರೂರರಲ್ಲಿ ಅತ್ಯಂತ ಮಾನವೀಯವಾದ ವಿಶ್ವವಿಶಾಲ ಜೀವನ ದೃಷ್ಟಿಯು ನೆಲೆಗೊಂಡಿದ್ದು, ಅನುಭವದ ಸಮೃದ್ಧಿಯೂ ಇದೆ. ಕೆಳವರ್ಗದವರ, ಗ್ರಾಮೀಣರ, ದಲಿತರ, ವಿಧವೆಯರ ಸ್ಥಿತಿಯನ್ನು ಬದಲಿಸುವ ಹೊಣೆಗಾರಿಕೆಗಳನ್ನು ನಿರ್ವಹಿಸುವುದೂ ಗೊರೂರರ ಮುಖ್ಯ ಸಾಂಸ್ಕೃತಿಕ ಗುರಿ. ಹೀಗಾಗಿ, ತಾವು ಭಾಗವಹಿಸುವಿಕೆಯ (INVOLVEMENT) ಕಾರಣದಿಂದ, ಅನುಭವ ಸ್ವೀಕಾರದ ಆರಂಭದ ಹಂತದಲ್ಲಾಗುವ ಸಿಟ್ಟು, ತಳಮಳ, ಕುದಿತಗಳಿಂದ ಅದು ಪಕ್ವಗೊಂಡು, ಕಲಾತ್ಮಕ ಎತ್ತರಿಂದ, ನಿರ್ಲಿಪ್ತತೆಯ ತಣ್ಣನೆಯ ಸ್ಥಿತಿಯಲ್ಲಿ ಅನುಭವವನ್ನು ಪುನಃ ಸೃಷ್ಟಿ ಮಾಡುತ್ತಾರೆ. ಇದರ ಮೂಲ ಅವರ ಸುಧಾರಣಾವಾದಿ ನಿಲುವು. ಗೊರೂರರ ಮಾನವತೆಯ ಕ್ಷೇಮ ಜನಪರವಾದದ್ದು. ಅಂಬೇಡ್ಕರರು ತಮ್ಮ ಸಾಮಾಜಿಕ ವೇದಾಂತವು ಸ್ವಾತಂತ್ರ್ಯ, ಸೋದರತೆ, ಸಮಾನತೆಗಳೆಂಬ ಮೂರು ಪದಗಳಲ್ಲಿ ಅಡಕವಾಗಿದೆಯೆಂದು ಹೇಳುತ್ತಿದ್ದರು. ಗಾಂಧೀಜಿ ಕೂಡಾ ಇವುಗಳನ್ನು ತಮ್ಮ ಬದುಕಿನಲ್ಲಿ ಪ್ರತಿಪಾದಿಸಿದ್ದನ್ನು ಗೊರೂರರು ಅರ್ಥ ಮಾಡಿಕೊಂಡಿದ್ದರು. ....

ಗ್ರಾಮೀಣ ಜನರ ಬದುಕಿನಲ್ಲಿ ಆಗಬೇಕಾದ ಸುಧಾರಣೆಗಳ ಸ್ಪಷ್ಟ ಅರಿವಿದ್ದ ಗೊರೂರರು, ಆ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ದುಡಿದು ಒಂದು ಹೊಸ ಆಯಾಮವನ್ನೇ ಸೃಷ್ಟಿ ಮಾಡಿದರು. ಗ್ರಾಮ ಜೀವನವನ್ನು ಸದಾ ವಹಿಸಿಕೊಳ್ಳುವ, ಅದರ ಪರವಾಗಿ ವಕಾಲತ್ತು ವಹಿಸುವ ಗೊರೂರರ ಮನೋಧರ್ಮ ಮೆಚ್ಚುವಂಥದು. ಗ್ರಾಮೀಣ ಸಂಸ್ಕೃತಿಯಲ್ಲಿ, ಭಾರತೀಯ ಸಂಸ್ಕೃತಿಯನ್ನು ಕಂಡವರು ಗೊರೂರರು. ಮಾನವೀಯತೆಯ ಆರಾಧನೆಯೇ ನಮ್ಮ ಸಾಹಿತ್ಯದ ಗುರಿಯೆಂದು ಬರೆಯ ಹೊರಟ ನವೋದಯ

ಕಾಲದ ಲೇಖಕರಲ್ಲಿ ಗೊರೂರರು ಒಬ್ಬರು. ಪಾಶ್ಚಾತ್ಯ ಸಂಸ್ಕೃತಿಯ ಸಂಸ್ಕಾರ, ಆಧುನಿಕತೆಯ ಪ್ರವಾಹದಲ್ಲಿ ಇಡೀ ಸಾಮಾಜಿಕ ಜೀವನ ಬದುಕುತ್ತಿರುವಾಗ ಮಾನವನ ಜೀವನ ಮೌಲ್ಯಗಳಲ್ಲಿ ಬದಲಾವಣೆಗಳು ವ್ಯಕ್ತವಾಗುತ್ತಾ ಬಂದವು. ಹಳೆಯ ಮೌಲ್ಯಗಳು, ಹೊಸ ಮೌಲ್ಯಗಳು ಎಂದು. ಈ ಹಳತು ಹೊಸತುಗಳ ಸುಳಿಯಲ್ಲಿ ಸಿಕ್ಕಿ ನಲಗುತ್ತಿರುವ ಸಂದರ್ಭದಲ್ಲಿ ಗೊರೂರರವರು ಒಬ್ಬ ಬರಹಗಾರರಾಗಿ, ಒಬ್ಬ ಸುಧಾರಣವಾದಿಯಾಗಿ ಬೆಳೆಯಬೇಕಾಯಿತು". (ವೆಂಕಟಯ್ಯ ಸಿ.ಜಿ.; ೨೦೦೨; ಪು.೪೫೫-೪೫೬) ಸಿ.ಜಿ. ವೆಂಕಟಯ್ಯನವರು ಗೊರೂರರವರ ಬಗ್ಗೆ ವ್ಯಕ್ತಪಡಿಸಿರುವ ಈ ಭಾವನೆಗಳು ಸ್ವಚ್ಛ ಸ್ಪಷ್ಟ ಮನಸ್ಸಿನ ವಿಮರ್ಶೆಯ ಮಾತುಗಳಾಗಿವೆ.

ಗೊರೂರರವರು ತಮ್ಮ ವಾಚಾಳಿತನ ಮಾತಿನ ವೈಖರಿ ಇದನ್ನು ಕುರಿತು ಮಾತಾಡುವಾಗ ಪೂಟ್ ಲಾಯರನ್ನು ಜ್ಞಾಪಿಸಿಕೊಳ್ಳುವುದು ಅತ್ಯಂತ ಹಾಸ್ಯಾಸ್ಪದ ಸಂಗತಿಯಾದರೂ ಅದರಲ್ಲಿ ಸ್ವಲ್ಪಮಟ್ಟಿನ ಸತ್ಯಾಂಶವು ಇದೆ. ನಿರುದ್ಯೋಗಿಯಾಗಿದ್ದಾಗ ಲೇಖಕರು ಜೀವನ ನಿರ್ವಹಣೆಗಾಗಿ ಹಲವು ಮಾರ್ಗ ಗಳನ್ನು ಆಲೋಚಿಸಿದಾಗ ಪೂಟ್‌ಲಾಯರಿ ಚಿಂತೆಯೂ ಇವರಿಗೆ ಬಂತು. ಯಾವ ವಿಷಯವನ್ನೇ ಆಗಲಿ ನಿರ್ಭೀತಿಯಿಂದ ಚಾಣಾಕ್ಷತನದಿಂದ ಅತ್ಯಂತ ತಾರ್ಕಿಕವಾಗಿ ಮಾತನಾಡುವ ದಿಟ್ಟತನ ಗೊರೂರರವರಿಗೆ ಇತ್ತು. ಆಗಿನ ಕಾಲಕ್ಕೆ ಅನೇಕ ಪೂಟ್‌ಲಾಯರುಗಳು ಲಾಯರಿಗಳಿಗಿಂತ ಹೆಚ್ಚು ಶ್ರೀಮಂತರಾಗಿದ್ದರು ಎಂದು ಚೇಷ್ಟೆ ಮಾಡುತ್ತ ಲೇಖಕರು ಪೂಟ್‌ಲಾಯರಿ ವೃತ್ತಿಯನ್ನು ಸಮರ್ಥಿಸಿಕೊಳ್ಳುತ್ತಾರೆ. "ನನ್ನದು ಬಹಳ ರಡ್ಡುವಾದ. ಸತ್ಯಾಂಶದಿಂದ ಗೆಲ್ಲುವುದಕ್ಕಾಗದಿದ್ದರೆ ಕೂಗಿ ಗದ್ದಲ ಮಾಡಿ ಮುಖದಲ್ಲಿ ಬೆವರು ಹರಿಸಿ ತಿದಿಯಂತೆ ಏದಿ ಎದುರಾಳಿಯ ಧ್ವನಿಯನ್ನು ನನ್ನ ಬೊಬ್ಬೆಯಲ್ಲಿ ಅಡಗಿಸಿಬಿಡುತ್ತಿದ್ದೆ. ವಾದ ವೆಂಬುದು ನನಗೆ ಒಂದು ಕುಸ್ತಿ, ಗರಡಿ ಸಾಧನೆಯೇ ಆಗಿತ್ತು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೨೫೮) ಪೂಟ್‌ಲಾಯಿರಿತನವು ಸಂಪಾದನೆಯ ಮಾರ್ಗವೆಂದು ಗೊರೂರರವರು ಹೇಳಿರುವುದು ಹಾಸ್ಯವಾದರೂ ಇಂದಿಗೂ ಅನೇಕರ ಪಾಲಿಗೆ ಸತ್ಯ ಸಂಗತಿಯಾಗಿದೆ ಎಂಬುದನ್ನು ಮರೆಯುವಂತಿಲ್ಲ. ಗೊರೂರರವರು ವಿಷಯವನ್ನು ಕುರಿತು ಚೆನ್ನಾಗಿ ವಾದ ಮಾಡುತ್ತಿದ್ದರೆ ಹೊರತು ಎಂದಿಗೂ ಪೂಟ್‌ಲಾಯರಿ ಆಗಿರಲಿಲ್ಲ.

ಗೊರೂರರವರಲ್ಲಿ ಹಾಸ್ಯ ಪ್ರವೃತ್ತಿ ಅವರ ಜೀವನದ ಜೀವಂತಿಕೆಯ ಗುಣವಾಗಿತ್ತು. ಹಾಸ್ಯ ಮಾಡಲು ಪೂರಕವಾದ ರಸಿಕ ದೃಷ್ಟಿ ನವುರಾದ ಅರ್ಥಪೂರ್ಣವಾದ ಶಬ್ದಭಂಡಾರ ಗೊರೂರರವರಿಗೆ ಸಮೃದ್ಧವಾಗಿತ್ತು. ಆದರೆ ಅವರ ಹಾಸ್ಯ ಯಾರ ಮನಸ್ಸಿಗೂ ಸಂಕಟ ತರುವಂತಹುದು ಆಗಿರಲಿಲ್ಲ. ತಪ್ಪಿತಸ್ಥರನ್ನು ಹಾಸ್ಯ ಮಾಡಿ ಅವರನ್ನು ತಿದ್ದುವ ಚಿಕಿತ್ಸಕ ಗುಣ ಗೊರೂರರವರ ಹಾಸ್ಯಕ್ಕೆ ಇತ್ತು. ಇಂತಹ ರಸಿಕರಾದ ಅವರು ಸಂದರ್ಭ ಒದಗಿ ಬಂದಾಗ ತಮ್ಮನ್ನು ತಾವು ಗೇಲಿ ಮಾಡಿಕೊಳ್ಳುವುದರಲ್ಲಿಯೂ ಅಷ್ಟೇ ಉದಾರ ಮನಸ್ಸಿನವರಾಗಿದ್ದರು. ಇಂತಹ ಅವರ ಅಪರೂಪದ ಗುಣಕ್ಕೆ ಸಾಕ್ಷಿಯಾಗಿ

'ಗರುಡಗಂಬದ ದಾಸಯ್ಯ' ಕೃತಿಯಲ್ಲಿ ಗೊರೂರವರು ತಮ್ಮ ಊರಿನ ಆದಿ ಕರ್ನಾಟಕ ಪಂಗಡದವರಿಗೆ ಭಜನೆಗೆ ಗರುಡಗಂಬವನ್ನು ತಂದ ಸಂದರ್ಭವನ್ನು ಉದಾಹರಿಸುತ್ತಾರೆ. ಲೇಖಕರು ಬೆಂಗಳೂರಿನಲ್ಲಿ ಗರುಡಗಂಬವನ್ನು ಕೈಯಲ್ಲಿ ಹಿಡಿದುಕೊಂಡು ಹೊರಟಾಗ ರಸ್ತೆಯಲ್ಲಿ ಎಲ್ಲರು ಇವರನ್ನು ನೋಡುತ್ತಿದ್ದರು. "ಇವರು ನನ್ನನ್ನೇ ಕುರಿತು ನೋಡುವಷ್ಟು ನಾನೇನು ಸುಂದರನಲ್ಲವಲ್ಲ" ಎಂದುಕೊಳ್ಳುತ್ತಾರೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೨) ಈ ಒಂದು ಲಘುಮಾತಿನ ಮೂಲಕವೇ ಗೊರೂರವರು ತಮ್ಮ ರೂಪವನ್ನು ತಾವೇ ಹಾಸ್ಯ ಮಾಡಿಕೊಳ್ಳುತ್ತಾರೆ. "ನನ್ನ ವೇಷವೇನೋ ಸ್ವಲ್ಪ ಮಟ್ಟಿಗೆ ಜಾಗಟೆ, ಜೋಳಿಗೆಯ ಗುರುವಿಗೆ ಸಮಾನವಾಗಿಯೇ ಇದ್ದಿತು. ಮಾಸಿದ ಒಂದು ಬಿಳಿಯ ಖಾದಿ ದಟ್ಟಿ, ಮಿತಿಮೀರಿ ಬೆಳೆದ ದೇಹಕ್ಕೆ, ಬಿಗಿಯಾಗಿ ಮೇಲಕ್ಕಾಗಿದ್ದ ಒಂದು ಅಂಗಿ. ಅದರ ಮೇಲೆ ಹೊದೆದುಕೊಂಡಿದ್ದ ಕೊಳೆಯಾದ ಅಂಗವಸ್ತ್ರ. ಹೆಗಲ ಮೇಲೆ ನೇತಾಡುತ್ತಿದ್ದ ಅದರ ತುದಿಯಲ್ಲಿ ಕಟ್ಟಿದ್ದ ಸೌತೆಕಾಯಿಯ ಗಂಟು. ವೈದಿಕರಾದ ನಮ್ಮ ತಂದೆಯವರು ಬೆಂಗಳೂರಿಗೆ ಬರುವರೆಂದು ವದಂತಿ ಇದ್ದುದರಿಂದ ಮುಖ ಕ್ಷೌರ ಮಾಡಿಸದೆ ಬೆಳೆಸಿದ್ದ, ಚೂಪಾದ ಅರದಂತಿದ್ದ ಕರಿಯ ಗಡ್ಡ, ಇವು ಆಗಿನ ನನ್ನ ವೇಷದ ಕೆಲವು ವೈಚಿತ್ರ್ಯಗಳು". (ಅದೇ.) ಈ ಮಾತುಗಳಲ್ಲಿ ಗೊರೂರವರು ತಮ್ಮ ಹಳ್ಳಿಯ ವೇಷವನ್ನು ಸ್ವಲ್ಪವೂ ಸಂಕೋಚವಿಲ್ಲದೆ ಹೇಳಿಕೊಂಡು ಸಹೃದಯರು ನಗಲು ತಮ್ಮನ್ನೇ ವಸ್ತುವನ್ನಾಗಿ ಮಾಡಿಕೊಂಡಿರುವುದು ಮೆಚ್ಚುವ ಸಂಗತಿಯಾಗಿದೆ. ಗೊರೂರವರು ರೈಲಿನಲ್ಲಿ ಪ್ರಯಾಣ ಮಾಡುವಾಗ ಎದುರಿಗೆ ಕೂತ ದೊಡ್ಡ ಮನುಷ್ಯನು ನನ್ನನ್ನು ದಾಸಯ್ಯನೆಂದು ತಿಳಿಯಬಾರದೆಂದು ನಾನು ಅವನೊಂದಿಗೆ ಇಂಗ್ಲೀಷಿನಲ್ಲಿ ಮಾತನಾಡಿದೆ ಎನ್ನುತ್ತಾರೆ. ಲೇಖಕರು ತಮ್ಮ ಊರಿನ ರೈಲ್ವೆ ಸ್ಟೇಷನ್‌ಗೆ ಬಂದಾಗ ಸ್ಟೇಷನ್ ಮಾಸ್ಟರು "ಅದ್ಯಾರೋ ದಾಸಯ್ಯ ಟಿಕೆಟಿಲ್ಲದೆ ಆ ಕಡೆಯಿಂದ ಓಡ್ತಿರೋನು" ಎಂದು ಕೂಗಿದರು. ನನ್ನ ಹೊಟ್ಟೆಯಲ್ಲಿ ಅಡಗಿದ್ದ ಸಿಟ್ಟೆಲ್ಲವೂ ಹೊರಗೆ ಬಂದು "ನಿಮ್ಮಪ್ಪ ದಾಸಯ್ಯ" ಎಂದು ಟಿಕೆಟ್ಟನ್ನು ಎಸೆದು ದೆವ್ವ ಹಿಡಿಯಲ್ಪಟ್ಟವನಂತೆ ಮನೆಗೆ ಓಡಿ ಹೋದೆನು". (ಅದೇ; ಪು.೪) ಈ ಮಾತುಗಳಲ್ಲಿ ಸಹ ಗೊರೂರವರು ತಮಗೆ ಬಂದ ಕೋಪವನ್ನು ಸಹಜ ಹಾಸ್ಯದಲ್ಲಿಯೇ ವ್ಯಕ್ತಪಡಿಸಿದ್ದಾರೆ. ಇಲ್ಲಿ ಅವರ ಶುಭ್ರ ಸರಳ ರಸಿಕ ಮನೋಪ್ರವೃತ್ತಿ ಹೃದಯಂಗಮವಾಗಿ ವ್ಯಕ್ತವಾಗಿದೆ.

ಗೊರೂರವರೇ ಹಾಸ್ಯದ ಬಗ್ಗೆ 'ಹಳೆಯ ಪಳೆಯ ಮುಖಗಳು' ಕೃತಿಯಲ್ಲಿ ಆಡಿರುವ ಮಾತು "ಹಾಸ್ಯ ಒಂದು ಮಿಂಚಿನ ಹೊಳಹಿನಂತೆ ಅದನ್ನು ಅನುಭವಿಸಿ ಸುಖಿಸಿ ಮನಸ್ಸನ್ನು ಹಗುರ ಮಾಡಿ ಕೊಂಡು ಬಿಟ್ಟು ಬಿಡಬೇಕು. ಸ್ವಾಭಾವಿಕವಾಗಿ ಹಾಸ್ಯವನ್ನು ಅನುಭವಿಸುವ ಶಕ್ತಿ ಇಲ್ಲದವರ ಮೇಲೆ ಆ ರಸ ಪ್ರಯೋಗ ವ್ಯರ್ಥವಾಗುತ್ತದೆ. ಇಲ್ಲಿ ನೋಡಿ ಎಂದು ಹೇಳಿ ವಿವರಿಸಿ ನಗಿಸುವುದಕ್ಕೆ ಸಾಧ್ಯವೇ? ಹಾಸ್ಯ ಮಗುವಿನ ಲೀಲೆಯಂತೆ ಲಲ್ಲೆಯಂತೆ ನಗೆಯಂತೆ, ತತ್‌ಕ್ಷಣವೇ ಬಿಸಿ ಆರುವುದಕ್ಕೆ ಮುಂಚೆಯೇ ನಮ್ಮ ಹೃದಯವನ್ನು ಮುಟ್ಟಬೇಕು. ಮತ್ತೊಬ್ಬರ ಮನಸ್ಸಿಗೆ ನೋವನ್ನುಂಟುಮಾಡಿ ನಗುವುದು ಹಾಸ್ಯವೇ ಅಲ್ಲ. 'ಅಕಾರಣ ಹಾಸ್ಯ' ಹಾಸ್ಯ ಮಾಡುವವನನ್ನೇ ಲಘುವಾಗಿ ಮಾಡುತ್ತದೆ" (ಗೊರೂರು

ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೬೨) ಎಂದು ಸಂಸ್ಕೃತ ನುಡಿಯೊಂದಿಗೆ ಹಾಸ್ಯದ ಬಗ್ಗೆ ಗೊರೂರವರು ಎಚ್ಚರಿಕೆಯ ಮಾತನ್ನು ಆಡುತ್ತಾರೆ. ಲೇಖಕರ ಈ ಮಾತುಗಳಲ್ಲಿ ಹಾಸ್ಯದ ಸೂತ್ರದ ವಿವರ ಸಮರ್ಪಕವಾಗಿ ಮೂಡಿಬಂದಿದೆ. ಹೀಗೆ ಹಾಸ್ಯಪ್ರಜ್ಞೆ ಸಾಹಿತ್ಯದಲ್ಲಿಯೂ ನಿಜ ಜೀವನದಲ್ಲಿಯೂ ಎಚ್ಚರಿಕೆಯಿಂದ ಇರಬೇಕು ಎಂಬುದು ಗೊರೂರವರ ಅನುಭವ ವೇದ್ಯ ಎಚ್ಚರದ ಮಾತಾಗಿದೆ.

ಕುವೆಂಪು ಗೊರೂರವರ ವ್ಯಕ್ತಿತ್ವದ ಬಗ್ಗೆ ಆಡುವ ಮಾತುಗಳು ಅರ್ಥಗರ್ಭಿತವಾಗಿದೆ. "ಚಾರ್ಲ್ಸ್ ಡಿಕನ್ಸ್, ಆಲಿವರ್ ಗೋಲ್ಡ್‌ಸ್ಮಿತ್, ಎ.ಜಿ. ಗಾರ್ಡಿನರ್ ಮುಂತಾದ ಇಂಗ್ಲೀಷ್ ಲೇಖಕರ ಬರವಣಿಗೆಯನ್ನು ಓದಿ ಅಲ್ಲಿನ ವಿವಿಧ ರೀತಿಯ ಹಾಸ್ಯವನ್ನು ಚಪ್ಪರಿಸಿದ್ದ ನಮಗೆ ಕನ್ನಡದಲ್ಲಿ ಅಂಥ ಹಾಸ್ಯದ ಅರಕೆ ದೊಡ್ಡ ಕೊರಗನ್ನೇ ಉಂಟು ಮಾಡಿತ್ತು. ಆ ಅರಕೆಯನ್ನು ಹೋಗಲಾಡಿಸಿದ ಕೆಲವೇ ಲೇಖಕರಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ನಿಶ್ಚಯವಾಗಿಯೂ ಅಗ್ರಸ್ಥಾನದಲ್ಲಿದ್ದಾರೆ. ....

ಹತ್ತಿರ ಹತ್ತಿರ ನಲವತ್ತು ವರ್ಷಗಳ ಕಾಲ ಶ್ರೀ ಗೊರೂರರ ಬರಹಗಳನ್ನು ಓದಿ ಅವುಗಳ ಸ್ವಾರಸ್ಯವನ್ನು ಸವಿಯುತ್ತಾ ಬಂದಿದ್ದೇನೆ. ಎಂಥ ಸ್ಫಟಿಕ ಸ್ವಚ್ಛವಾದ ಹಾಸ್ಯ ಅವರದು! ಅಲ್ಲಿ ಯಾವ ಬಗೆಯ ಕೊಂಕು ಇಲ್ಲ, ಯಾವ ವಿಷದ ಬಾಲದ ಕುಟುಕೂ ಇಲ್ಲ, ಮೊನಚಾಗಿ ಒಳ ಹೊಕ್ಕು ಅಲ್ಲೇ ಮುರಿದುಕೊಳ್ಳುವ ಮುಳ್ಳೂ ಇಲ್ಲ. ಕೃತಕತೆ ಇಲ್ಲದ, ಬದುಕಿನ ಘಟನೆಗಳಿಂದ ತನಗೆ ತಾನೇ ಒಡೆದು ಮೂಡುವ, ಮೂಡಿ ಮನದುಂಬುವ, ಮನದುಂಬಿ ನಕ್ಕು ನಲಿಸುವ ಶುದ್ಧವಾದ ಹಾಸ್ಯ ಅವರದು................

ಅವರ ಬರವಣಿಗೆಯಲ್ಲಿ ನಾನು ಮನಸಾರ ಮೆಚ್ಚಿರುವ ಮತ್ತೊಂದು ಅಂಶ ಹೆಚ್ಚು ಕಡಿಮೆ ಈಗ ಸಂಪೂರ್ಣವಾಗಿ ಕಣ್ಮರೆಯಾಗಿ ಹೋಗಿರುವ ನಮ್ಮ ಗ್ರಾಮೀಣ ಜೀವನದ ವಿವಿಧ ಮುಖಗಳ ನಿರ್ಮಲವಾದ ವರ್ಣನೆ. ಅಲ್ಲಿನ ಬದುಕಿನೊಂದಿಗೆ ಅನಿವಾರ್ಯವಾಗಿ ಲೀನವಾಗಿಯೂ ಅಲ್ಲಿಂದ ಹೊರ ನಿಂತು ಬದುಕಿನ ವಿವಿಧ ಘಟನೆಗಳನ್ನು ಅವರಂತೆ ಅಲಿಪ್ತವಾಗಿ ನೋಡಿರುವ ಲೇಖಕರು ವಿರಳ. ನೀರಸ ಎಂದು ತೋರುವ ಗ್ರಾಮೀಣ ಜೀವನದ ಸ್ವಾರಸ್ಯಕರ ಅಂಶಗಳನ್ನು ಎತ್ತಿ ತೋರಿಸಿ ಗೊರೂರರು ಅವುಗಳನ್ನು ಅಮರಗೊಳಿಸಿದ್ದಾರೆ, ತಮ್ಮೂಲಕ ತಾವೂ ಅಮರರಾಗಿದ್ದಾರೆ" (ನಾಯಕ ಹಾ.ಮಾ. (ಸಂ); ೧೯೭೩; ಪು.೪೫೭) ಎನ್ನುವ ಹಾ.ಮಾ.ನಾಯಕ ಅವರ ಮಾತುಗಳು ಸಾರ್ವಕಾಲಿಕ ಸತ್ಯದ ನುಡಿಗಳಾಗಿವೆ.

ಗೊರೂರವರು ತಮ್ಮ ಜೀವನದಲ್ಲಿ ತಮಗೆ ದೊರೆತ ಸರ್ಕಾರಿ ಹುದ್ದೆಯ ಬಗ್ಗೆ ಅದರ ಅನುಭವದ ಬಗ್ಗೆ ಆಡಿಕೊಳ್ಳುವ ಮಾತು ಕುತೂಹಲಕಾರಿಯಾಗಿದೆ. ತಾವು ಸರ್ಕಾರಿ ಹುದ್ದೆಗೆ ಹೋಗುವುದಕ್ಕೆ ಮುಂಚೆ ತಾವು ಕಳೆದ ಶ್ರಮಜೀವನದ ಬಗ್ಗೆ ಆಡುವ ಮಾತುಗಳು "ನಾನು ಬಹಳ ಚೆನ್ನಾಗಿ ಬೆಳೆದು ಧಾಂಡಿಗನಾಗಿದ್ದೆ. ಗುದ್ದಲಿ ಪಿಕಾಸಿಗಳನ್ನು ತೆಗೆದುಕೊಂಡು ಮೈಯಲ್ಲಿ ಬೆವರು

ಕಡೆಯುವವರೆಗೆ ಕೆಲಸ ಮಾಡಿದ ಹೊರತು ನನ್ನ ಮೈನವೆ ತೀರುವಂತೆ ಇರಲಿಲ್ಲ. ಹುಟ್ಟಿದ ಲಾಗಾಯಿತು, ಹಳ್ಳಿಯಲ್ಲಿ ಅಗೆಯುವುದು, ಸೌದೆ ಒಡೆಯುವುದು, ಬಾಳೆಗುಣಿ ತೆಗೆಯುವುದು, ಪೋಲಿ ಕುದುರೆ ಸವಾರಿ ಮಾಡುವುದು, ನದಿಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಈಜುವುದು - ಹೀಗೆ ಏನೇನೂ ಮಾಡಿದರೂ ನನಗೆ ಮಾತ್ರ ಆಯಾಸವಾಗುತ್ತಿರಲಿಲ್ಲ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೭೦) ಎನ್ನುತ್ತಾರೆ. ಗೊರೂರರವರ ಈ ಮಾತುಗಳಲ್ಲಿ ಅವರ ಗಟ್ಟಿತನವನ್ನು ಶ್ರಮಜೀವನವನ್ನು ಚೆನ್ನಾಗಿ ತಿಳಿಯಬಹುದು. ಗೊರೂರರವರು ತಾಲೂಕು ಕಛೇರಿಯ ರಿಕಾರ್ಡು ಕೀಫರ್ ಆಗಿ ಸರ್ಕಾರಿ ಕೆಲಸಕ್ಕೆ ಸೇರುತ್ತಾರೆ. ಆ ಕೋಣೆಯ ಕತ್ತಲು ವಾತಾವರಣ, ಕಟ್ಟಿಹಾಕಿ ಕೂರಿಸಿದ ಕೆಲಸದ ಸ್ಥಿತಿ ಎರಡೂ ಸಹ ಗೊರೂರರವರಿಗೆ ಕಿಂಚಿತ್ತು ಸಮಾಧಾನ ತರುವಂತೆ ಇಲ್ಲ ಎಂಬುದನ್ನು ಅವರೇ ಸ್ಪಷ್ಟಪಡಿಸಿ ಸರ್ಕಾರಿ ಕೆಲಸದಿಂದ ಮುಕ್ತರಾಗಿ ಸ್ವತಂತ್ರ ವೃತ್ತಿಯಲ್ಲಿ ಉಳಿಯುತ್ತಾರೆ. ಸರ್ಕಾರಿ ವೃತ್ತಿಯು ಸಹ ಲೇಖಕರ ಪಾಲಿಗೆ ಹೊಸ ಅನುಭವ ರಸಿಕ ಅನುಭವವಾಗಿದೆ. ಬದುಕಿನ ಘಟನೆಗಳಿಗೆ ಅನುಭವಗಳಿಗೆ ಗೊರೂರರವರು ಸ್ಪಂದಿಸುವ ರೀತಿಯೇ ಅತ್ಯಂತ ಕುತೂಹಲಕಾರಿಯಾಗಿದೆ.

ಗೊರೂರರವರು ತಮ್ಮ ವ್ಯಕ್ತಿತ್ವದ ಬಗ್ಗೆ ಕೊಡುವ ವಿವರಣೆ ಅತ್ಯಂತ ಸಮಂಜಸವಾಗಿದೆ. ಎಲ್ಲರು ಅವರನ್ನು ಉತ್ತಮ ಸಾಹಿತಿ ಎಂದು ಗುರುತಿಸಿದರೂ ಅವರು ತಮ್ಮ ಬಗ್ಗೆ ಹೇಳಿಕೊಳ್ಳುವಾಗ "ನಾನು ಸಾಹಿತಿಗಿಂತ ಹೆಚ್ಚಾಗಿ ಜನಸಾಮಾನ್ಯರ ಮನುಷ್ಯ. ರಾಜಕೀಯದಲ್ಲಿ ಗಾಂಧೀಜಿಯವರ ಅದಮ್ಯ ಚೇತನ ಶಕ್ತಿ ತ್ಯಾಗ ಆದರ್ಶಗಳಿಂದ ಪ್ರೇರಿತನಾಗಿ ಆ ಕ್ಷೇತ್ರದಲ್ಲಿ ನನ್ನಿಂದಾದ ಸೇವೆ ಸಲ್ಲಿಸಲು ಹೊರಟವ". (ನಾಯಕ ಹಾ.ಮಾ.; (ಸಂ); ೧೯೭೩; ಪು.೩೭) ಈ ಮಾತುಗಳಲ್ಲಿ ಲೇಖಕರಿಗೆ ಇರುವ ಸಾಮಾಜಿಕ ಜೀವನದ ಒಲವು ನಮಗೆ ಮನವರಿಕೆಯಾಗುತ್ತದೆ. ಸ್ವತಂತ್ರ ಸಾರ್ಥಕ ಬದುಕಿನ ಹಂಬಲ ಅವರ ಆಸೆ ಎಂಬುದನ್ನು ಇಲ್ಲಿ ಚೆನ್ನಾಗಿ ತಿಳಿಯಬಹುದು.

ಬದುಕನ್ನು ಅನುಭವಿಸಿ ಬದುಕಿದ ಗೊರೂರರವರಿಗೆ ಬದುಕು ಕಲಿಸಿಕೊಟ್ಟ ಪಾಠ ಎಷ್ಟು ಅಮೂಲ್ಯವಾದದ್ದೋ ಬದುಕಿನ ವೈವಿಧ್ಯಪೂರ್ಣ ಅನುಭವಗಳು ಅಷ್ಟೇ ಸ್ವಾರಸ್ಯವಾಗಿದ್ದವು. ಬದುಕನ್ನು ಆತ್ಮೀಯವಾಗಿ ಕಾಣುವ ಗುಣ ಅವರದ್ದಾಗಿದೆ. ಈ ಕಾರಣದಿಂದಲೇ ಬದುಕಿನ ಸಿಹಿ ಅವರ ಮನಸ್ಸನ್ನು ತಣಿಸಿದಂತೆ ಬದುಕಿನ ಕಹಿಯೂ ಸಹ ಅವರ ಮನಸ್ಸಿನಲ್ಲಿ ಸಿಹಿಯಾಗಿ ಪರಿವರ್ತಿತವಾಗಿದೆ. ಇಂತಹ ವಿಶೇಷವಾದ ಬದುಕು ಗೊರೂರರವರಲ್ಲಿ ಸಹಜವಾಗಿ ಇದ್ದ ಹುಟ್ಟಿನ ಗುಣ ರಸಿಕತೆಯನ್ನು ಬೆಳೆಸಿದೆ. ಈ ರಸಿಕ ಗುಣದಿಂದ ಅವರು ತಮ್ಮ ಬದುಕನ್ನು ಉಲ್ಲಸಿತ ಮಾಡಿಕೊಳ್ಳುವುದರ ಜೊತೆಗೆ ಸಹ ಜೀವಿಗಳ ಬದುಕಿಗೂ ಉಲ್ಲಾಸವನ್ನು ತಂದುಕೊಟ್ಟಿದ್ದಾರೆ. ನಕ್ಕು ನಗಿಸುವ ಪರಮ ಧರ್ಮ ಲೇಖಕರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಅವರ ಹಾಸ್ಯ ಸಭ್ಯಹಾಸ್ಯವಾಗಿದೆ. ಈ ಕಾರಣದಿಂದಲೇ ಅವರು ಕನ್ನಡದ ಹಾಸ್ಯ ಲೇಖಕರಲ್ಲಿ ಅಗ್ರಸ್ಥಾನವನ್ನು ಸಂಪಾದಿಸಿಕೊಂಡಿದ್ದಾರೆ. ಕೈಲಾಸಂ ಅವರ ಬರವಣಿಗೆಯಲ್ಲಿ ಹಾಸ್ಯ ಮಾತಿನ

ಚಾಟಿಯಾಗಿದ್ದರೆ, ಬೀಚಿ ಅವರ ಹಾಸ್ಯ ಕಚಗುಳಿಯಾಗಿದ್ದರೆ ಗೊರೂರವರ ಹಾಸ್ಯ ಮೆಲುದನಿಯ ಮೃದು ನುಡಿಯಾಗಿದೆ. ಅವರ ಹಾಸ್ಯವನ್ನು ಪಿಸು ಧ್ವನಿಯ ನಲ್ನುಡಿಯೆಂದು ಕರೆಯಬಹುದು. ಗೊರೂರವರ ಹಾಸ್ಯ ನವಿರಾಗಿರುವಂತೆ ಸರಳವೂ ಸ್ಪಷ್ಟವೂ ಆಗಿದೆ. ಕನ್ನಡದ ಹಿರಿಯ ವಿದ್ವಾಂಸರಲ್ಲಿ ಒಬ್ಬರಾದ ಪ್ರಭುಶಂಕರ ಅವರು ಗೊರೂರವರ ವ್ಯಕ್ತಿತ್ವವನ್ನು ಕುರಿತು ಆಡುವ ಮಾತುಗಳು "ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ನಮ್ಮ ಹಾಸ್ಯ ಲೇಖಕರ ಅಗ್ರಪಂಕ್ತಿಯಲ್ಲಿ ಇದ್ದಾರಷ್ಟೆ. ಅವರ ಯಶಸ್ಸಿಗೆ ಕಾರಣವಾಗಿರುವ ಅಂಶಗಳು ಹಲವು: ನಿಷ್ಕಪಟವಾದ, ಎಂದರೆ ಯಾವ ಕೊಂಕೂ ಇಲ್ಲದ ಹಾಸ್ಯ. ಎರಡನೆಯದು ಅಪ್ರಯತ್ನಪೂರ್ವಕವಾದ ಹಾಸ್ಯ ಎಂದರೆ ಕಲಾತ್ಮಕವಾಗಿ ಅವರು ಹಾಸ್ಯ ಸಂದರ್ಭಗಳನ್ನು ಸಹಜವಾಗಿಯೇ ಹಾಸ್ಯಮಯವಾಗಿರುವ ಸಂದರ್ಭಗಳನ್ನು ಯಥಾವತ್ತಾಗಿ ದೃಷ್ಟಿಸುವುದು. ಮೂರನೆಯದು ಕಾಲ ಮತ್ತು ಪರಿಸರಗಳ ದೃಷ್ಟಿಯಿಂದ ಸಂಪ್ರದಾಯಸ್ಥರಾಗಿರಬೇಕಾದವರು ಪ್ರಾಚೀನ ಮತ್ತು ಅರ್ವಾಚೀನ ನಡೆವಳಿಕೆಗಳೆಲ್ಲವನ್ನು ನಿಷ್ಪಾಕ್ಷಿಕವಾಗಿ ನೋಡಿರುವುದು. ಎಂದರೆ ಅವರಿಗೆ ಯಾವ "ಕಮಿಟ್‌ಮೆಂಟೂ" ಇಲ್ಲ. ನಾಲ್ಕನೆಯದು, ತುಂಬಾ ಮುಖ್ಯವಾದದ್ದು, ಕಂಡದ್ದನ್ನು ಅಥವಾ ಕಲ್ಪಿಸಿಕೊಂಡಿದ್ದನ್ನು, ಮೊದಲನೆಯದೇ ಹೆಚ್ಚು, ಸ್ವಾರಸ್ಯವಾಗಿ ನಿರೂಪಿಸುವುದು. ಈ ನಿರೂಪಣೆಯಲ್ಲೂ ಸಹಜತೆಯಿದೆಯೇ ಹೊರತು ಕಲೆಯ ಸೃಷ್ಟಿಗೆ ಇರಬೇಕಾದ ಕೃಷಿಯಿಲ್ಲ. ಇತರರಲ್ಲಿ ಅರಕೆಯಾಗಬೇಕಾದ ಈ ಅಂಶ ಗೊರೂರರ ಬರವಣಿಗೆಗೆ ಭೂಷಣವಾಗಿದೆ ಎಂಬುದು ಗಮನಿಸಬೇಕಾದ ವಿಷಯ. ಐದನೆಯದು, ಕಥೆಯ ಓಟಕ್ಕೆ ಭಂಗ ತರುತ್ತದೆ ಎಂಬ ಭಯವು ಕಿಂಚಿತ್ತೂ ಇಲ್ಲದೆ ಉಪಕತೆಗಳನ್ನು, ಇತರ ವೃತ್ತಾಂತಗಳನ್ನು ಹೇಳುತ್ತಾ ಹೋಗುವುದು". (ಅದೇ; ೧೯೭೩; ಪು.೫೭) ಹಾ.ಮಾ.ನಾಯಕ ಅವರ ಈ ವಿಮರ್ಶಾತ್ಮಕ ಮಾತುಗಳು ಅತ್ಯಂತ ಔಚಿತ್ಯಪೂರ್ಣವಾಗಿದೆ.

'ಬೈಲಹಳ್ಳಿ ಸರ್ವೆ' ಕೃತಿಯಲ್ಲಿ ಲೇಖಕರ ಹಾಸ್ಯ ಶಕ್ತಿ ಪರಿಪೂರ್ಣವಾಗಿ ವ್ಯಕ್ತವಾಗಿದೆ. ಗೊರೂರವರ ಕೃತಿಗಳಲ್ಲಿ ಕಳೆದುಹೋದ ಒಂದು ಸಮಾಜದ ಚಿತ್ರವನ್ನು ಗ್ರಾಮ ಜೀವನವನ್ನು ನಾವು ಪುನರ್ ಸೃಷ್ಟಿಸಬಹುದು ಎಂಬುದಕ್ಕೆ ಅವರ ಹಾಸ್ಯಭರಿತ ಕೃತಿಗಳು ಕಾರಣವಾಗುವಂತೆ ವಿಶಿಷ್ಟತೆಗೆ ಸಾಕ್ಷಿಯೂ ಆಗಿದೆ.

ಗೊರೂರವರ ಹಾಸ್ಯ ವ್ಯಕ್ತಿಯ ಮನಸ್ಸಿನ ಪರಿವರ್ತನೆಗೆ ಮಂತ್ರಶಕ್ತಿಯಾಗಿದೆ. "ಮಾಸ್ತಿಯವರು ಹೇಳುವಂತೆ ಗೊರೂರವರ ಹಾಸ್ಯ - ಕೊಳ್ಳುವ ಮಾರುವ ವ್ಯವಹಾರದ ನಿಲುವಿನಿಂದ ನಮ್ಮ ಮನಸ್ಸು ಜನರ ವಿಷಯದಲ್ಲಿ ಪ್ರೇಮದ ನಿಲುವಿಗೆ ತಿರುಗುವಂತೆ ಮಾಡುತ್ತದೆ". (ವೆಂಕಟಯ್ಯ ಸಿ.ಜಿ.; ೨೦೦೧; ಪು.೭೫) ಮಾಸ್ತಿಯವರ ಅಭಿಪ್ರಾಯವನ್ನು ಸಿ.ಜಿ. ವೆಂಕಟಯ್ಯನವರು ಸರಿಯಾಗಿ ಅರ್ಥೈಸುವುದರ ಜತೆಗೆ ಅಭಿಪ್ರಾಯಕ್ಕೆ ವಿಶೇಷತೆಯನ್ನು ತುಂಬಿಕೊಟ್ಟಿದ್ದಾರೆ. ಈ ಸಂದಂರ್ಭದಲ್ಲಿ ಗೊರೂರವರ ಸಾಹಿತ್ಯ ವ್ಯಕ್ತಿತ್ವದ ಆತ್ಮಜ್ಯೋತಿಯ ಪ್ರಜ್ವಲತೆಗೆ ತೈಲರೂಪಿಯಾಗಿದೆ ಎಂದು ಭಾವಿಸಬಹುದು.

ಬದುಕನ್ನು ಬಿಚ್ಚು ಮನಸ್ಸಿನಲ್ಲಿ ಪೂರ್ಣ ದೃಷ್ಟಿಯಲ್ಲಿ ಪರಿಭಾವಿಸಿದ ಗೊರೂರರವರು ಬದುಕಿನ ಬಗ್ಗೆ ಆಡುವ ಮಾತುಗಳು ಬದುಕಿನ ಬದ್ಧತೆಗೆ ಬೆನ್ನೆಲುಬಿನ ನುಡಿಯು ಆಗಿರಬಹುದು, ವ್ಯಕ್ತಿಗಳ ಸಾಮರಸ್ಯಕ್ಕೆ ಪೂರಕವಾದ ಸಾಂತ್ವನ ನುಡಿಯೂ ಆಗಿರಬಹುದು. ಹೀಗೆ ಗೊರೂರರವರ ಸಾಹಿತ್ಯದ ಗುಣ ಅವರ ಜೀವನದ ಗುಣದೊಂದಿಗೆ ತದ್ರೂಪಿಯಾಗಿದೆ. "ವಿವಿಧ ಜಾತಿಯ, ವರ್ಗದ ಜನರನ್ನು ವರ್ಣಿಸುವಾಗ ಅವರಲ್ಲಿ ಅಂಧಾಭಿಮಾನಕ್ಕಾಗಲೀ, ಪೂರ್ವಾಗ್ರಹಕ್ಕಾಗಲೀ, ಜಿಗುಪ್ಸೆಗಾಗಲೀ ಎಳ್ಳಷ್ಟೂ ಅವಕಾಶವಿಲ್ಲ. ಎಲ್ಲರಲ್ಲಿಯೂ ಒಳ್ಳೆಯದನ್ನೇ ಕಾಣುವ ಹಿರಿತನ ಮತ್ತು ಸಜ್ಜನಿಕೆ ಅವರ ಸ್ವಭಾವವಾಗಿದೆ". (ಅದೇ; ಪು. ೭೯) ಸಿ.ಜಿ. ವೆಂಕಟಯ್ಯನವರು ಕೊಟ್ಟಿರುವ ಈ ಅಭಿಪ್ರಾಯ ಅತ್ಯಂತ ಉಚಿತವಾಗಿದೆ.

ಗೊರೂರರವರು ಧ್ಯೇಯವಾದಿಗಳು. ಅವರ ಜೀವನದಲ್ಲಿ ಎದುರಾದ ಘಟನೆಗಳು ಈ ಹೇಳಿಕೆಯನ್ನು ಪುಷ್ಟೀಕರಿಸುತ್ತದೆ. ಜೀವನೋತ್ಸಾಹ ಇರುವ ವ್ಯಕ್ತಿಗೆ ಅದಕ್ಕೆ ಪೂರಕವಾಗಿ ವ್ಯಕ್ತಿ ತನ್ನ ಬದುಕಿನಲ್ಲಿ ಆಸೆ ಆಕಾಂಕ್ಷೆಗಳನ್ನು ಕಟ್ಟಿಕೊಳ್ಳುತ್ತಾನೆ, ರೂಪಿಸಿಕೊಳ್ಳುತ್ತಾನೆ. ಹೀಗೆ ಗುರಿಯಿಂದ ಬದುಕಿಗೆ ಅರ್ಥ ತಂದುಕೊಳ್ಳುವುದು ಅಷ್ಟೇ ಅಲ್ಲದೆ ಜೀವನೋತ್ಸಾಹವನ್ನು ಲೇಖಕರು ತುಂಬಿಕೊಂಡಿದ್ದಾರೆ. ಅವರ ಬದುಕಿನ ಅನನ್ಯತೆಗೆ ಭಾರತೀಯ ಸಂಸ್ಕೃತಿ ಒಂದು ರೀತಿಯಲ್ಲಿ ಮೂಲ ಕಾರಣವಾದರೆ ಅವರ ಗ್ರಾಮೀಣ ಬದುಕು ಮತ್ತೊಂದು ರೀತಿಯಲ್ಲಿ ಕಾರಣವಾಗುತ್ತದೆ. ಗೊರೂರರವರು ಸಮಾಜದ ಎಲ್ಲ ವ್ಯಕ್ತಿಗಳೊಂದಿಗೆ ಒಂದಾಗಿ ಕೂಡಿ ಬಾಳಿದ ವ್ಯಕ್ತಿ. ಹೀಗಾಗಿ ಅವರು ಬದುಕಿನಲ್ಲಿ ಗಳಿಸಿಕೊಂಡ ಅನುಭವ ಶ್ರೀಮಂತಿಕೆ - ಭಾವಶ್ರೀಮಂತಿಕೆ ಅವರ ಬದುಕನ್ನು ನಿಜವಾದ ಅರ್ಥದಲ್ಲಿ ಶ್ರೀಮಂತಗೊಳಿಸಿದೆ. ಗೊರೂರರವರಲ್ಲಿ ಕಾಣುವ ಸಂಯಮ ಗುಣ, ವಿಚಕ್ಷಣ ಪ್ರಜ್ಞೆ ಅವರ ಬದುಕಿನ ಮೇಲ್ಮೆಗೆ ಪುಟ ಕೊಟ್ಟಿದೆ ಎಂಬ ಮಾತು ನಿರ್ವಿವಾದ. ಅವರ ಎಲ್ಲ ಕೃತಿಗಳಲ್ಲಿಯೂ ಅವರ ವ್ಯಕ್ತಿತ್ವದ ಈ ಚಿತ್ರ ಕೃತಿಯ ಆಕರ್ಷಕ ಪಾತ್ರಗಳಾಗಿ ಕಂಗೊಳಿಸಿದೆ. ಗೊರೂರರವರು ಗ್ರಾಮೀಣ ಜನತೆಗೆ ವಿಶೇಷವಾಗಿ ಸ್ಪಂದಿಸಿದಂತೆ ಸ್ತ್ರೀ ವರ್ಗದವರೊಂದಿಗೂ ಹೆಚ್ಚು ಸ್ಪಂದಿಸಿದ್ದಾರೆ. ಹೆಣ್ಣಿನ ಬದುಕನ್ನು ಎಲ್ಲಾ ಘಟ್ಟಗಳಲ್ಲಿ ಎಲ್ಲಾ ದೃಷ್ಟಿಕೋನಗಳಿಂದ ಕಂಡು ಹೆಣ್ಣಿನ ಬದುಕಿನ ಪೂರ್ಣ ರೂಪವನ್ನು ತಮ್ಮ ಕೃತಿಗಳಲ್ಲಿ ನೀಡಿ ಅವರು ಸ್ತ್ರೀಪರ ಸಾಹಿತಿ ಎನಿಸಿ ಕೊಳ್ಳುವಷ್ಟರ ಮಟ್ಟಿಗೆ ಸಮಾಜದಲ್ಲಿ ಆಳವಾಗಿ ಹೆಣ್ಣಿನ ಬಗ್ಗೆ ಚಿಂತಿಸಿದ್ದಾರೆ, ಸ್ಪಂದಿಸಿದ್ದಾರೆ, ಪ್ರತಿಕ್ರಿಯಿಸಿ ದ್ದಾರೆ ಹಾಗೂ ಹೆಣ್ಣಿನ ಬದುಕಿಗೊಂದು ಮಾರ್ಗವನ್ನು ಸೂಚಿಸಿದ್ದಾರೆ ಎಂದರೆ ಅದು ಅತಿಶಯೋಕ್ತಿ ಯಾಗಲಾರದು. ಬದುಕಿನ ಬದ್ಧತೆಗೆ ಗೊರೂರರವರು ಗಳಿಸಿಕೊಂಡಿರುವ ಜೀವನ ಮೌಲ್ಯಗಳು ವೇದ ಸಂಸ್ಕೃತಿಯಿಂದ ಹಿಡಿದು ವರ್ತಮಾನದ ವಿಶ್ವ ಸಾಹಿತ್ಯದವರೆಗೆ ವ್ಯಾಪಕವಾಗಿದೆ. ಮಾನವ ಧರ್ಮ ಗೊರೂರರವರ ಜೀವನ ಮೌಲ್ಯಗಳ ಸಾರಭೂತ ಅಂಶವಾಗಿದೆ. ಈ ಕಾರಣದಿಂದಲೇ ಗೊರೂರರವರು "ಹುಟ್ಟುತ್ತಾ ಬ್ರಾಹ್ಮಣರು, ಬರೆಯುತ್ತಾ ಕನ್ನಡಿಗರು, ಬದುಕುತ್ತಾ ಭಾರತೀಯರಾದರು". (ಅದೇ; ಪು.೮೯) ಎಂದು ಸಿ.ಜಿ. ವೆಂಕಟಯ್ಯನವರು ಗೊರೂರರವರ ವ್ಯಕ್ತಿತ್ವವನ್ನು ಸೂತ್ರೀಕರಿಸಿರುವುದು ಅರ್ಥಪೂರ್ಣವಾಗಿದೆ.

ದೇಜಗೌರವರು ಗೊರೂರವರನ್ನು ಕುರಿತು ಆಡುವ ಮಾತುಗಳು "ಶ್ರೀ ರಾಮಸ್ವಾಮಿ ಅಯ್ಯಂಗಾರ್ ಅವರಂತೆ ತಾವು ಹುಟ್ಟಿದ ನೆಲದ ಬಾಳನ್ನೆಲ್ಲ ಸಾಹಿತ್ಯದಲ್ಲಿ ಭಟ್ಟಿಯಿಳಿಸಿದ ಸಾಹಿತಿಗಳು ತೀರ ವಿರಳ. ಗೊರೂರಿನ ಸುತ್ತಮುತ್ತಣ ಪ್ರದೇಶದಲ್ಲಿ, ಸುಮಾರು ಐದಾರು ಮೈಲಿ ಫಾಸಲೆಯ ವಿಸ್ತೀರ್ಣದಲ್ಲಿ ಅವರು ಇಡೀ ಜಗತ್ತಿನ ಪ್ರತಿಬಿಂಬವನ್ನು ಕಂಡರು. ಅವರ ಕಂಡದ್ದೆಲ್ಲ ಅನುಭವವಾಯಿತು, ಅನುಭವವೆಲ್ಲ ಸಾಹಿತ್ಯವಾಯಿತು. ಪ್ರಹ್ಲಾದನಿಗೆ ಕಂಬದಲ್ಲಿಯೂ ವಿಷ್ಣು ಕಾಣಿಸಿಕೊಂಡಂತೆ ಪ್ರತಿಯೊಂದು ವಸ್ತುವಿನಲ್ಲಿಯೂ ಇವರ ಕಣ್ಣಿಗೆ ವಿಶೇಷಾನುಭವ ಹೊಳೆದಿದೆ. ಅವರ ಪ್ರತಿಭಾ ಚಕ್ಷುವಿನಿಂದ ತಪ್ಪಿಸಿಕೊಂಡ ವಸ್ತುವಿಲ್ಲ. ಅವರು ಬರೆದದ್ದು ಭಾರತವಲ್ಲ, ಡಿಳ್ಳಿಯ ಕೃತಕ ಜೀವನವನ್ನಲ್ಲ; ಶೀನಪ್ಪ ರಂಗೇಗೌಡರ ಭಾರತ, ಹಳ್ಳಿಯ ಸದ್ದುಗದ್ದಲಗಳಿಲ್ಲದ ಸಹಜವಾದ ಬಾಳು. ನಾಗರಿಕನ ದೃಷ್ಟಿಗೆ ಯಾವುದು ಕ್ಷುದ್ರವಾಗಿ ತೋರುತ್ತಿತ್ತೊ ಅದೆಲ್ಲ ಇವರ ದೃಷ್ಟಿಯಲ್ಲಿ ಭದ್ರವಾಗಿ ಕಂಡಿವೆ. ಸಾಮಾನ್ಯರ ದೃಷ್ಟಿಯಲ್ಲಿ ನೀರಸವಾಗಿ ಕಾಣಬಹುದಾಗಿದ್ದ ಜೀವನ ಇವರ ದೃಷ್ಟಿಯಲ್ಲಿ ರಸದ ಊಟೆಯಾಗಿದೆ. ಇವರಿಗೆ ಗೊರೂರೇ ಹಸ್ತಿನಾವತಿ ಹಾಗೂ ಇಂದ್ರಪ್ರಸ್ಥ; ಅಲ್ಲಿಯ ಜೀವನದ ಕತೆಯೆ ಭಾರತ; ಶೀನಪ್ಪ ರಂಗೇಗೌಡ ವೀರಭದ್ರಾಚಾರಿ ಶಾಲುಸಾಬಿ ಮೊದಲಾದವರೇ ಅಲ್ಲಿ ಬರುವ ಪಾತ್ರ ವರ್ಗ. ಹಳ್ಳಿಯ ಬದುಕಿನ ವಿಶ್ವರೂಪ ಇವರ ಕೃತಿಗಳಲ್ಲಿ ಪಡಿಮೂಡಿದೆ" ಎನ್ನುತ್ತಾರೆ. ಇವರ ವಿಮರ್ಶೆಯ ಮಾತುಗಳು ಅಕ್ಷರಶಃ ಸತ್ಯವೆನಿಸುತ್ತದೆ. (ನಾಯಕ ಹಾ.ಮಾ. (ಸಂ); ೧೯೭೩; ಪು.೪೮೫)

ಗಾಂಧೀಜಿಯವರ ಆದರ್ಶದ ಬೆಳಕಿನಲ್ಲಿ ಗೊರೂರವರು ಬದುಕಿದ ಎಂಬತ್ತೇಳು ವರ್ಷದ ಪೂರ್ಣ ಆಯುಷ್ಯ ಸಾರ್ಥಕವಾಯಿತು. ಮಿಕ್ಕವರ ಪಾಲಿಗೆ ಅನುಕರಣೀಯವಾಯಿತು ಎಂದು ಹೇಳಿದರೆ ಸತ್ಯದ ಭಾವನೆಯಾಗುತ್ತದೆ. ಗೊರೂರವರಿಗೆ ಜನತೆಯಿಂದ ಸರ್ಕಾರದಿಂದ ಸಂದ ಸ್ಥಾನಮಾನ ಸನ್ಮಾನ ಗಳು ಅತ್ಯಂತ ಸಮರ್ಪಕ ಎಂದು ನಾವು ಪರಿಭಾವಿಸಬಹುದು. ಒಟ್ಟಿನಲ್ಲಿ ಗೊರೂರವರ ವ್ಯಕ್ತಿತ್ವ ಸಾಹಿತ್ಯದ ಲಕ್ಷಣಕ್ಕೆ ಪರಸ್ಪರ ಪೂರಕವಾಗಿದೆ ಮತ್ತು ಅವಿನಾಭಾವ ಸಂಬಂಧವನ್ನು ಹೊಂದಿದೆ ಎಂದು ಹೇಳಬಹುದು.

೪.೨. ಗೊರೂರವರ ಕೃತಿಗಳು

ನವೋದಯ ಸಾಹಿತ್ಯದಲ್ಲಿ ಸಾಹಿತಿಗಳು ವ್ಯಕ್ತಿ ಜೀವನವನ್ನು ಸಾಮಾಜಿಕ ಜೀವನವನ್ನು ಪರಿಭಾವಿಸುವಾಗ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಪ್ರಾಸಂಗಿಕವಾಗಿ ವಿಚಾರ ಮಾಡಿದ್ದಾರೆ. ಆಧುನಿಕ ಕಾಲದಲ್ಲಿ ವ್ಯಕ್ತಿ ಸುಖದ ಅಪೇಕ್ಷೆಯನ್ನು ಹೆಚ್ಚಾಗಿ ಹೊಂದಿರುವಂತೆ ಸೋಗಿನ ಬದುಕಿನ ಕಡೆಗೆ ಉತ್ಸುಕನಾಗಿರುವುದು ನಮಗೆ ಸ್ಪಷ್ಟವಾಗುತ್ತದೆ. ಸೌಜನ್ಯದ ಬದುಕಿಗಿಂತ ಪ್ರತಿಷ್ಠೆಯ ಬದುಕು ಇಂದು ಸಮಾಜದಲ್ಲಿ ಮೇಲೆದ್ದು ಕಾಣುತ್ತಿದೆ. ಈ ಕಾರಣದಿಂದಲೇ ಮಾನವೀಯ ಸಂಬಂಧಗಳು ಶಿಥಿಲವಾಗಿ ಅದಕ್ಕನುಗುಣವಾದ ನೋವು ಸಮಸ್ಯೆಗಳನ್ನು ಕುಟುಂಬದ ವಾತಾವರಣದಲ್ಲಿಯೂ, ಪರಿಸರದ

ವಾತಾವರಣದಲ್ಲಿಯೂ ಇಂದು ನಾವು ಕಾಣುತ್ತೇವೆ. ಕವಿ ಬೇಂದ್ರೆಯವರು ಇಂತಹ ಬದುಕನ್ನೇ ಕಣ್ಣಿದ್ದು ಕುರುಡರಾಗಿ, ಕಿವಿ ಇದ್ದು ಕೆಪ್ಪನಾಗಿ, ಮನಸಿದ್ದು ದಯ್ಯನ ಹಾಗೆ ಬದುಕಬೇಡಿ ಎಂದು ಸಮಾಜವನ್ನು ಎಚ್ಚರಿಸಿದ್ದಾರೆ. ಕಾರಂತರು ಹೃದಯವಂತಿಕೆಯ ಬಗ್ಗೆ ಜಾಗೃತಿಯನ್ನು ಮೂಡಿಸುವಾಗ ಇದೇ ಅಭಿಪ್ರಾಯವನ್ನು ತಮ್ಮ ಕಾದಂಬರಿಗಳಲ್ಲಿ ಸಂದೇಶವಾಗಿ ನೀಡಿದ್ದಾರೆ. 'ಬೆಟ್ಟದ ಜೀವ' ಕಾದಂಬರಿಯಲ್ಲಿ ಗೋಪಾಲಯ್ಯನ ಪಾತ್ರ ಶ್ರಮದ ಬದುಕಿಗೆ ಸಂಕೇತವಾದರೆ 'ಅಳಿದ ಮೇಲೆ' ಕಾದಂಬರಿಯಲ್ಲಿ ಯಶವಂತರಾಯನ ಪಾತ್ರ ಸಾರ್ಥಕ ಬದುಕಿಗೆ ಸಂಕೇತವಾಗಿದೆ. 'ಚೋಮನದುಡಿ'ಯಲ್ಲಿ ಚೋಮನ ಪಾತ್ರ ನಿಷ್ಕರುಣೆಗೆ ಬಲಿಯಾದ ದುರಂತ ವ್ಯಕ್ತಿಯ ಪಾತ್ರಕ್ಕೆ ಪ್ರತೀಕವಾಗಿದೆ. ರಾವ್‌ಬಹದ್ದೂರ್‌ರವರ ಬೃಹತ್ ಕಾದಂಬರಿ 'ಗ್ರಾಮಾಯಣ' ದಲ್ಲಿಯೂ ಸಂಸ್ಕೃತಿಯ ಅವನತಿಯ ನೋವನ್ನು ನಾವು ಕಾಣಬಹುದು. 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಯಲ್ಲಿ ಕುವೆಂಪು ಅವರು ಹೂವಯ್ಯನ ಪಾತ್ರದ ಮೂಲಕ ಆದರ್ಶ ಬದುಕಿನ ಚಿತ್ರವನ್ನು ಕೊಟ್ಟಿರುವುದು ಜನಜಾಗೃತಿಯ ಸಲುವಾಗಿ ಎಂಬುದನ್ನು ಗುರುತಿಸಬಹುದು.

ನವೋದಯ ಪಂಥಕ್ಕೆ ಒಳಗಾದ ಗೊರೂರರವರು ಸಹ ಸೋಗಿನ ಬದುಕನ್ನು ಖಂಡಿಸಿ ಸಂಸ್ಕೃತಿಯ ಬನಿವುಳ್ಳ ಬದುಕಿಗೆ ಹಂಬಲಿಸಿರುವುದನ್ನು ಅವರ ಕತೆ, ಪ್ರಬಂಧ, ಕಾದಂಬರಿಗಳಲ್ಲಿ ಚೆನ್ನಾಗಿ ಮನಗಾಣ ಬಹುದು. ಸೋಗಿನ ಬದುಕನ್ನು ನಾಗರಿಕ ಬದುಕು ಎಂಬುದಾಗಿ ಇವತ್ತಿನ ಕೆಲವು ಜನ ವ್ಯಾಖ್ಯಾನ ಮಾಡುವುದನ್ನು ಗೊರೂರರವರು ಅರ್ಥಪೂರ್ಣವಾಗಿ ಅಪಹಾಸ್ಯ ಮಾಡಿದ್ದಾರೆ. ಸಂಸ್ಕೃತಿ ಇಲ್ಲದ ನಾಗರಿಕ ಬದುಕು ಶವಕ್ಕೆ ಮಾಡಿದ ಶೃಂಗಾರದಂತೆ ವ್ಯರ್ಥ ಎಂದು ಸ್ಪಷ್ಟಪಡಿಸಿದ್ದಾರೆ. ನಾಗರಿಕತೆಯ ಆಕರ್ಷಣೆಗೆ ಸಂಸ್ಕೃತಿಯ ಜೀವಂತಿಕೆಯ ಸೊಗಸು ಸೇರಿದಾಗಲೆ ಅದು ಪರಿಪಕ್ವವಾದ ಬದುಕು ಎಂಬುದನ್ನು ಲೇಖಕರು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ - ಪ್ರತಿಷ್ಠಾಪಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಗೊರೂರರವರು ಜನಪದ ಸಂಸ್ಕೃತಿಯನ್ನು ಜನಪದ ಸಾಹಿತ್ಯದ ಮೂಲಕ ನಮಗೆ ನೆನಪು ಮಾಡಿಕೊಟ್ಟಿರುವುದು ವಿಶೇಷ ವಿಷಯವಾಗಿದೆ.

ಗೊರೂರರವರ ಕೃತಿಗಳು ಒಂದು ಕಾಲದ ಜೀವನ ವಿಧಾನ ಹಾಗೂ ಅಲ್ಲಿಯ ಪರಿಸರವನ್ನು ಕಟ್ಟಿಕೊಡುವ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ದಾಖಲೆಗಳು. 'ಸಾಹಿತ್ಯ ಸಮಾಜದ ಪ್ರತಿಬಿಂಬ ಮಾತ್ರವಲ್ಲ ಗತಿಬಿಂಬವೂ ಹೌದು' ಎಂಬ ಮಾತಿಗೆ ಗೊರೂರರವರ ಒಟ್ಟು ಸಾಹಿತ್ಯ ಒಂದು ಉತ್ತಮ ಉದಾಹರಣೆ ಯಾಗಿದೆ. ಜಗತ್ತಿನ ಸಂಸ್ಕೃತಿಯ ಒಂದು ಉತ್ತಮ ಭಾಗ ಹೇಮಾವತಿ ನದಿತೀರದ ಗೊರೂರಿನಲ್ಲಿ ದಾಖಲುಗೊಂಡಿದೆ. 'ನದಿಯೇ ಹೀಗೆ ಒಂದು ಗ್ರಾಮಕ್ಕೆ ನಾಯಕಿಯಾಗುತ್ತಾಳೆ'. ಈ ಹಳ್ಳಿ ಕರ್ನಾಟಕ ಜನಜೀವನದ ಸಾಹಿತ್ಯ, ಸಂಸ್ಕೃತಿ, ಭಾಷೆ ಹಾಗೂ ಬದುಕಿನ ಉತ್ತಮ ಮಾದರಿಯಂತಿದೆ. ಈ ಹಳ್ಳಿಯ ಜೀವಿತದಲ್ಲಾಗುತ್ತಿರುವ ಸ್ಥಿತ್ಯಂತರಗಳ ಜೊತೆಗೆ ಗ್ರಾಮೀಣ ಭಾರತದಲ್ಲಾಗುತ್ತಿರುವ ಬದಲಾವಣೆಯನ್ನು ಗೊರೂರರವರು ಗುರುತಿಸಿದ್ದಾರೆ. ಹೀಗೆ ನಮಗೆ ಲೇಖಕರು ತಮ್ಮ ಬರವಣಿಗೆಯ ಮೂಲಕ ಒಂದು ಸಾಹಿತ್ಯ ಮಾದರಿಯನ್ನು ಸಾಂಸ್ಕೃತಿಕ ಮಾದರಿಯನ್ನು ನೀಡಿದ್ದಾರೆ.

ಗೊರೂರವರ ಒಟ್ಟು ಸಾಹಿತ್ಯವನ್ನು ಕಥೆ, ಕಾದಂಬರಿ, ಪ್ರಬಂಧ, ಸಂಗ್ರಹ, ಅನುವಾದ ಕೃತಿಗಳು ಎಂದು ವಿಭಾಗ ಮಾಡಿಕೊಳ್ಳಬಹುದು. ಗದ್ಯ ಸಾಹಿತ್ಯದಲ್ಲಿ ತೀರ ಗಂಭೀರ ಸಾಹಿತಿಯಾಗದಿದ್ದರೂ ಕೇವಲ ಲಘು ಸಾಹಿತಿಯೂ ಆಗದೆ, ಎರಡರ ಸಮನ್ವಯದಲ್ಲಿ ಸಾಹಿತ್ಯ ಸೃಷ್ಟಿ ಮಾಡಿದ ಗೊರೂರವರು ಸುಮಾರು ೧೫೫ ಕತೆಗಳನ್ನು ಬರೆದಿದ್ದಾರೆ. ಪ್ರಾಯಶಃ ಮಾಸ್ತಿಯವರನ್ನು ಬಿಟ್ಟರೆ ಇಷ್ಟೊಂದು ಕತೆ ಬರೆದವರು ಗೊರೂರವರೆ. ಅಶ್ವತ್ಥರೂ ಸ್ವಲ್ಪಮಟ್ಟಿಗೆ ಈ ಸಾಲಿನಲ್ಲಿ ಬರುತ್ತಾರೆ. ಆದರೆ ಮಾಸ್ತಿಯವರ ಕಥೆಯ ಧಾಟಿ, ಶೈಲಿಯೇ ಬೇರೆ, ವಸ್ತುವಿನ ಆಯ್ಕೆಯೂ ಬೇರೆ. ಎಲ್ಲ ಸಾಹಿತಿಗಳಲ್ಲೂ ಸಾಮಾನ್ಯವಾಗಿ ಒಳ್ಳೆಯ ಹಾಗೂ ಕೆಟ್ಟ ಸಾಹಿತ್ಯದ ರಚನೆ ಕಂಡುಬರುವಂತೆ ಗೊರೂರವರಲ್ಲಿಯೂ ಒಳ್ಳೆಯ ಮತ್ತು ಕೆಟ್ಟ ಕಥೆಗಳೂ ಇವೆ. ಬಹುಪಾಲು ಕಥೆಗಳು ಕಲಾತ್ಮಕ ಲಕ್ಷಣವನ್ನು ಪಡೆಯದೆ ಪ್ರಬಂಧದ ಚೌಕಟ್ಟಿನಲ್ಲೆ ಉಳಿದು ಬಿಟ್ಟಿವೆ. ಹೀಗೆ ಹೇಳಿದ ಮಾತ್ರಕ್ಕೆ ಗೊರೂರವರ ಕತೆಯ ಅಸ್ತಿತ್ವವನ್ನು ಅಲ್ಲಗಳೆದಂತೆಲ್ಲ. ಸಾಹಿತ್ಯಕ ಮೌಲ್ಯ ನಿರ್ಮಿತಿಯ ಸಂದರ್ಭದಲ್ಲಿ ಅನಿವಾರ್ಯವಾಗಿ ಈ ಮಾತನ್ನು ಹೇಳಲೇಬೇಕಾಗುತ್ತದೆ.

ಕನ್ನಡ ಸಾಹಿತ್ಯದಲ್ಲಿ ಮಾಸ್ತಿಯವರನ್ನು ಸಣ್ಣ ಕತೆಗಳ ಪ್ರವರ್ತಕ, ಪೋಷಕರೆಂದು ಕರೆಯುವುದುಂಟು. ಅವರ ಕತೆಗಳಲ್ಲಿ ವಸ್ತು ವೈವಿಧ್ಯತೆಯನ್ನು ಬದುಕಿನ ಆಳ-ಅಗಲವನ್ನು ಗಮನಿಸಬಹುದು. ತಂತ್ರದ ದೃಷ್ಟಿಯಿಂದ ಮಾಸ್ತಿಯರವರ ಕತೆಗಳು ವೈಶಿಷ್ಟ್ಯಪೂರ್ಣವಾಗಿವೆ. ಕತೆ ಕಟ್ಟುವ ಕಲೆ ಎಂಬುದನ್ನು ಮಾಸ್ತಿ ತಮ್ಮ ಸಣ್ಣ ಕತೆಗಳಲ್ಲಿ ಖಚಿತಪಡಿಸಿದ್ದಾರೆ. ಕತೆಯನ್ನು ಹೇಳುವ ಕಲೆಗಾರಿಕೆಯಲ್ಲಿ ಮಾಸ್ತಿ ಸಿದ್ಧಹಸ್ತರು. ಈ ಕಾರಣದಿಂದಲೇ ಮಾಸ್ತಿಯವರನ್ನು ವಿಶ್ವಸಾಹಿತ್ಯದ ಕತೆಗಾರರ ಪಂಕ್ತಿಯಲ್ಲಿ ಗುರುತಿಸಿ ವಿಶೇಷತೆಯನ್ನು ಹೇಳುವುದಕ್ಕೆ ಸಾಧ್ಯವಾಗಿದೆ. ಮಾಸ್ತಿಯವರಿಂದ ಪ್ರಭಾವಿತರಾಗಿ ಮುಂದೆ ಕತೆಗಾರರು ಕನ್ನಡದಲ್ಲಿ ಸಣ್ಣಕತೆಗಳನ್ನು ರಚಿಸಿದ್ದಾರೆ. ಆನಂದಕಂದ, ಅ.ನ.ಕೃ ಅವರ ಕತೆಗಳು ಬಹುಮಟ್ಟಿಗೆ ಮಾಸ್ತಿಯವರ ಕತೆಗಳಿಂದ ಪ್ರೇರಿತವಾಗಿವೆ. ಲಂಕೇಶರ ಸಣ್ಣಕತೆಗಳನ್ನು ವಿಶೇಷವಾಗಿ ಗುರುತಿಸುವುದುಂಟು. ಇದಕ್ಕೆ ಕಾರಣ ಲಂಕೇಶರ ಕತೆಗಳು ತಂತ್ರ ದೃಷ್ಟಿಯಿಂದ ಮಾಸ್ತಿಯವರ ಕತೆಗಳಿಗಿಂತ ತೀರ ಭಿನ್ನವಾಗಿವೆ. ಶ್ರೀನಿವಾಸರಿಗೆ ಸರಿಸಮ ಪ್ರಮಾಣದಲ್ಲಿ ಅಲ್ಪ ಕಾಲಾವಧಿಯಲ್ಲಿ ಗಮನಾರ್ಹ ಪ್ರಮಾಣದಲ್ಲಿ ಸಣ್ಣಕತೆ ಗಳನ್ನು ರಚಿಸಿದ ಮೇಲ್ಮೆ ಗೊರೂರವರಿಗೆ ಸಲ್ಲುತ್ತದೆ. ಗೊರೂರವರ ಸಣ್ಣಕತೆಗಳಲ್ಲಿ ಹಳ್ಳಿಯ ಜೀವನ ವನ್ನು ನಗರ ಜೀವನವನ್ನು ದಾಖಲಿಸಬಹುದು. ಗ್ರಾಮೀಣ ಕತೆಗಳಲ್ಲಿ ಗ್ರಾಮಜೀವನದ ಪರಿಚಯ ಗ್ರಾಮೀಣ ಪಾತ್ರಗಳ ಪ್ರತಿರೂಪವನ್ನು ಕಾಣುತ್ತೇವೆ. 'ಬೂತಯ್ಯನ ಮಗ ಅಯ್ಯು', 'ಗಂಡು ಬೀರಿ ಹೊಸಬಿ'; 'ನಮ್ಮೂರಿನ ರಸಿಕರು' ಗೊರೂರವರ ಅತ್ಯುತ್ತಮ ಸಣ್ಣಕತೆಗಳಿಗೆ ಉದಾಹರಣೆಯೆನ್ನಬಹುದು. 'ನಮ್ಮೂರಿನ ರಸಿಕರು' ಪ್ರಬಂಧದ ಛಾಯೆಯಲ್ಲಿರುವ ಒಂದು ಅತ್ಯುತ್ತಮ ಸಣ್ಣಕತೆ. ಇಲ್ಲಿಯ ಕತೆಗಳು ಮಲ್ಲಿಗೆಹಳ್ಳಿ ಪ್ರಾಂತ್ಯಕ್ಕೆ ಸುತ್ತಲಿನ ಪರಿಸರಕ್ಕೆ ಪ್ರಾತಿನಿಧಿಕ ಕತೆಗಳಾಗಿವೆ. ಹಳ್ಳಿ ಕೇಂದ್ರಬಿಂದುವಾಗಿ ಗ್ರಾಮೀಣ ಜೀವನ ಗೊರೂರವರ ಕತೆಗಳ ವಸ್ತುವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ನಡೆಸುವ ಬದುಕು ಎಷ್ಟು ಕುತೂಹಲಕಾರಿಯಾಗಿದೆಯೋ ಅಷ್ಟೇ ಸಾಹಸಮಯವಾಗಿದೆ ಎಂಬುದನ್ನು ಲೇಖಕರು ತಮ್ಮ

ಕತೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಮಲ್ಲಿಗೆಹಳ್ಳಿಯ ಪರಿಸರದ ಸಮಾಜ ಒಪ್ಪಿಕೊಂಡಿರುವ ಸಾಮಾಜಿಕ ಮೌಲ್ಯವೇ ಗೊರೂರವರ ಸಣ್ಣ ಕಥೆಗಳಲ್ಲಿ ವ್ಯಕ್ತವಾಗಿರುವ ಮೌಲ್ಯಗಳಾಗಿವೆ.

ಗೊರೂರವರ ಕಥೆಗಳನ್ನು ಕುರಿತು ಬರೆಯುತ್ತಾ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ಹೀಗೆ ಹೇಳಿದ್ದಾರೆ. "ಗೊರೂರರ ಕಥೆಗಳಲ್ಲಿ ಉದ್ದೇಶಿತ ಕಲೆ ಇಲ್ಲ. ಆಧುನಿಕ ಸಂವೇದನೆಗೆ ಪ್ರಿಯವಾದ ಬಿಗಿಯಾದ ಬಂಧ, ಸೂಕ್ಷ್ಮತೆ, ಸಂಕೇತ ಪ್ರತಿಮೆಗಳ ಬಳಕೆ ಇಲ್ಲ. ಎಷ್ಟೋ ಸಾರಿ ಕಥೆಗಾರರು ನೇರವಾಗಿ ಪ್ರವೇಶ ಮಾಡಿ ಅಭಿಪ್ರಾಯ ನೀಡುವುದುಂಟು. ತೀರ್ಮಾನ ಸೂಚಿಸುವುದುಂಟು. ಹಲವು ಕಥೆಗಳು ಬರಿಯ ಪ್ರಬಂಧಗಳೇ ಆಗಿ ಉಳಿಯುತ್ತವೆ. ತಂತ್ರದ ಬಗೆಗೆ ಅವರು ಹೆಚ್ಚು ಯೋಚನೆ ಮಾಡಿದವರೇ ಅಲ್ಲ ಎಂದು ತೋರುತ್ತದೆ. ಎದುರಿಗೆ ಕುಳಿತು ಸ್ನೇಹಿತರಿಗೆ ಕಥೆ ಹೇಳುವ ರೀತಿ ಅವರದು. ಪ್ರಾಸಂಗಿಕ ವಾಗಿ ಬಂದ ಅಂಶಗಳನ್ನು ಎತ್ತಿಕೊಂಡಾಗ ಕಥೆ ಅತ್ತ ಇತ್ತ ಹರಿಯುವುದುಂಟು. ಇಷ್ಟಾದರೂ ಅವರ ಕಥೆಗಳು ಆಳವಾದ ಪರಿಣಾಮವನ್ನುಂಟು ಮಾಡುವುದು ಹೇಗೆ ಎಂಬುದು ಕುತೂಹಲಕರವಾದ ಪ್ರಶ್ನೆ" (ನಾಯಕ ಹಾ.ಮಾ.; (ಸಂ); ೧೯೭೩; ಪು. ೧೬೮) ಎಂದು ಅಭಿಪ್ರಾಯ ನೀಡಿದ್ದಾರೆ. ವಿಮರ್ಶಕರ ಈ ಅಭಿಪ್ರಾಯವನ್ನು ಪರಿಮಿತ ಭಾವನೆಯಲ್ಲಿ ಸಂದರ್ಭದಲ್ಲಿ ಒಪ್ಪಬಹುದಾಗಿದೆ. ಎಲ್.ಎಸ್. ಶೇಷಗಿರಿರಾವ್‌ರವರು 'ಪುಟ್ಟಮಲ್ಲಿಗೆ' ಕತೆಯನ್ನು ತಮ್ಮ ವಿಮರ್ಶೆಗೆ ಬಳಸಿಕೊಂಡಿದ್ದಾರೆ. ಇಲ್ಲಿ ಕತೆ ನಿಧಾನವಾಗಿ ಸಾಗಿದರು ಯಾವುದೇ ರೀತಿಯ ವರ್ಣನೆ ಕಂಡು ಬಂದಿಲ್ಲ. ಇದೇ ಕತೆಯಲ್ಲಿ ಪುಟ್ಟ ಮಲ್ಲಿಗೆಯ ಪ್ರಣಯದ ಪ್ರಸಂಗ ಸಣ್ಣ ಪ್ರಮಾಣದಲ್ಲಿದೆ. "ಇಲ್ಲಿ ನಮ್ಮ ಹಳ್ಳಿಗಾಡಿನ ಹುಡುಗ ಹುಡುಗಿಯರ ಬೆಳವಣಿಗೆಯನ್ನು ಕುರಿತು ಎರಡು ಮಾತು ಹೇಳಬೇಕು" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೦೩) ಎಂದು ಗೊರೂರವರು ಹೇಳುತ್ತಾರೆ. ಈ ಕತೆಯಲ್ಲಿ ಸಂಪ್ರದಾಯದ ಅಂಶವನ್ನು ವಿವಾಹ ಚಿತ್ರಣದಲ್ಲಿ ಸಂಪೂರ್ಣವಾಗಿ ಗುರುತಿಸಬಹುದು. ಮದುವೆಯ ವರ್ಣನೆಗಾಗಿ ಕತೆಯಲ್ಲಿ ಮೂರನೇ ಒಂದು ಪಾಲು ಮೀಸಲಾಗಿದೆ. ಗೊರೂರವರು ಈ ಕತೆಯಲ್ಲಿ ಆಗ ತಾನೆ ಮರೆಯಾಗುತ್ತಿರುವ ಗ್ರಾಮೀಣ ಪರಿಸರದ ಒಂದು ಸಾಮಾಜಿಕ ವ್ಯವಸ್ಥೆಯನ್ನು ನೆನಪು ಮಾಡಿಕೊಟ್ಟಿದ್ದಾರೆ. ಇವರ ಸಣ್ಣ ಕತೆಗಳಲ್ಲಿ ಗ್ರಾಮೀಣ ಚಿತ್ರಣದ ಜೊತೆಗೆ ನಗರ ಜೀವನದ ಚಿತ್ರಣವೂ ಜೊತೆಯಲ್ಲಿಯೇ ಮೂಡಿ ಬಂದಿದೆ. ಯುಗಾದಿ, ದೀಪಾವಳಿ ಹಬ್ಬಗಳನ್ನು ಇಡೀ ಸಮುದಾಯ ಒಂದಾಗಿ ಆಚರಿಸುವ, ಸುಖ-ದುಃಖ-ವಿರಾಮ-ವಿನೋದ-ಆಟಗಳನ್ನು ಒಂದಾಗಿ ಅನುಭವಿಸುವ ಗ್ರಾಮೀಣ ಸಮಾಜದ ಸ್ವರೂಪವನ್ನು ಗೊರೂರವರ ಕಥೆಗಳಲ್ಲಿ ಕಂಡಾಗ ಇದು ಪುನರಾವರ್ತನೆಯಾಗಬಾರದೆ ಎಂದು ಓದುಗನಿಗೆ ಅನಿಸುವುದು ಅತ್ಯಂತ ಸಹಜ. ಈ ದೃಷ್ಟಿಯಲ್ಲಿ ಗೊರೂರವರು ತಮ್ಮ ಸಣ್ಣ ಕಥೆಗಳ ಮೂಲಕ-ನಮ್ಮನ್ನು ಸರಳ ಜಗತ್ತಿಗೆ ಕೊಂಡೊಯ್ದಿದ್ದಾರೆ ಎಂದು ಹೇಳಬಹುದು. ಈ ಕತೆಯಲ್ಲಿ ಬರುವ ಪುಟ್ಟಮಲ್ಲಿಗೆ, ಬಸವಯ್ಯ ಆಳುಗಳೊಂದಿಗೆ ಒಂದಾಗಿ ಸೇರಿ ಹೋಗುವ ಸಂದರ್ಭ ಹೃದಯಸ್ಪರ್ಶಿಯಾಗಿದೆ. ಈ ಕಥೆಯಲ್ಲಿ ಹಳ್ಳಿಯವರ ಜೀವನೋತ್ಸಾಹವನ್ನು, ಧೈರ್ಯ ಪ್ರಜ್ಞೆಯನ್ನು ಎತ್ತಿ ತೋರಿಸಿದ್ದಾರೆ. ಬಸವಯ್ಯ,

ಪುಟ್ಟಮಲ್ಲಿಗೆ ಸಾಮಾಜಿಕ ಜೀವನದಲ್ಲಿ ಮಿಳಿತವಾಗಿ ಪರಸ್ಪರ ಸಂತೋಷ ಮೀರಿ ಸಂತೋಷಪಡುವ ಅಪರೂಪದ ವ್ಯಕ್ತಿಗಳಾಗಿದ್ದಾರೆ. ಗ್ರಾಮೀಣ ಜನರಲ್ಲಿ ಕಂಡುಬರುವ ಈ ಔದಾರ್ಯವನ್ನು ಗೊರೂರರವರು ಗುರುತಿಸಿ ಮೆಚ್ಚಿಕೊಂಡಿದ್ದಾರೆ. ಬಸವಯ್ಯ ತನ್ನ ಅಹಂಭಾವಕ್ಕೆ ಕಡಿವಾಣ ಹಾಕಿ ಗ್ರಾಮೀಣ ಪರಿಸರದಲ್ಲಿ ಭಾಗವಹಿಸುವುದು ಆದರ್ಶದ ನಡವಳಿಕೆಯಾಗಿದೆ. ಶಕುನದ ಮುದುಕಿಯ ಬಗ್ಗೆ ಗೊರೂರರವರು ಆಡುವ ಮಾತು "ಮುದುಕಿಯ ಶಕುನ ಕೇಳುವುದರಲ್ಲಿ ಹಳ್ಳಿಯವರಿಗೆಲ್ಲಾ ಬಹಳ ಉತ್ಸಾಹವುಂಟಾಗಿತ್ತು. ಮುದುಕಿಯು ಸಾಧಾರಣವಾಗಿ ಅವರವರ ಸ್ವಭಾವಗಳನ್ನು ಅರಿತು ಎಲ್ಲರಿಗೂ ಒಳ್ಳೆಯ ಶಕುನಗಳನ್ನೇ ಹೇಳುತ್ತಿದ್ದಳು. ಇದರಿಂದ ಜನರಿಗೆ ಅವಳಲ್ಲಿ ಕುತೂಹಲದ ಜತೆಗೆ ವಿಶ್ವಾಸವೂ ಉಂಟಾಯಿತು" (ಅದೇ; ಪು.೧೧೭) ಎನ್ನುವ ಮಾತು ಗ್ರಾಮೀಣ ಜನರ ನಂಬಿಕೆಯ ಭಾವನೆಯನ್ನು ಗೊರೂರರವರು ಈ ಮೂಲಕ ಅನಾವರಣಗೊಳಿಸಿದ್ದಾರೆ. ಗ್ರಾಮೀಣ ಜನರಿಗೆ ತಮ್ಮ ಸಾಹಸಮಯ ಜೀವನದಲ್ಲಿ ಇಂತಹ ನಂಬಿಕೆಗಳು ಅನಿವಾರ್ಯವಾಗಿತ್ತು ಎಂಬ ಭಾವನೆಯನ್ನು ಗೊರೂರರವರು ಒಪ್ಪಿಕೊಂಡಂತೆ ನಮಗೆ ಗೋಚರವಾಗುತ್ತದೆ. 'ಪುಟ್ಟಮಲ್ಲಿಗೆ' ಕತೆಯನ್ನು ಇಬ್ಬರು ಪ್ರಣಯಿಗಳ ಕತೆ ಎಂದು ಮಾತ್ರ ನೋಡದೆ ಸಮಷ್ಟಿ ಜೀವನ ವ್ಯಕ್ತಿ ಜೀವನಗಳ ಸಂಬಂಧದ ಚಿತ್ರ ಎಂದು ಗುರುತಿಸಿದಾಗ ಈ ಕತೆಯಲ್ಲಿ ಹಾಸ್ಯಕ್ಕೆ ನೆಲೆಯಾದ ವಿವಾಹ ವೈಖರಿಗೆ ಅರ್ಥ ಬರುತ್ತದೆ. ಗೊರೂರರವರು ಈ ಮೂಲಕ ಸಮಷ್ಟಿ ಜೀವನವೇ ಸಹ್ಯ, ಸುಂದರ ರಸಮಯ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ವಿವಾಹದ ಮಂತ್ರ ಅರ್ಥವಾಗದಿದ್ದರು ಒಕ್ಕಲಿಗರು ತಮ್ಮ ಮನೆಯ ಮದುವೆಯಲ್ಲಿಯೂ ಮಂತ್ರಬೇಕು ಎಂದು ಹಂಬಲಿಸಿದಾಗ ಈ ಮಂತ್ರಗಳೇ ಮಂಗಳ ವಿವಾಹಕ್ಕೆ ಅಸ್ತಿಭಾರ ಶಿಲೆ ಎಂಬ ಭಾವನೆ ಗ್ರಾಮೀಣ ಜನರಲ್ಲಿ ಇದೆ ಎಂದು ಗೊರೂರರವರು ಒಪ್ಪಿ ನುಡಿದಿದ್ದಾರೆ.

ಗೊರೂರರವರ ಕತೆಗಳಲ್ಲಿ ವ್ಯಕ್ತಿಯ ಅಹಂಭಾವದ ಸೋಲು ಕಥಾವಸ್ತುವಾಗಿರುತ್ತದೆ. ಕತೆಯ ಅಂತ್ಯದಲ್ಲಿ ಶಾಂತಿಯ ಚಿತ್ರ ಸಹಜವಾಗಿ ಮೂಡಿ ಬರುತ್ತದೆ. ಶ್ರೀನಿವಾಸರು ಸಮಾಜವನ್ನು ಪರಿಣಾಮ ಕಾರಿಯಾಗಿ ಚಿತ್ರಿಸಿರುವಂತೆ ಗೊರೂರರವರು ಸಹ ಅಷ್ಟೇ ಪರಿಣಾಮಕಾರಿಯಾಗಿ ಚಿತ್ರಿಸಿರುವುದು ಅನನ್ಯ ಸಂಗತಿಯಾಗಿದೆ. ವ್ಯಕ್ತಿ ಸಮಷ್ಟಿ ಜೀವನದಿಂದ ಭಾವ ಶ್ರೀಮಂತರಾಗಬಹುದು ಎಂಬ ಅಭಿಪ್ರಾಯವನ್ನು ಗೊರೂರರವರು ತಮ್ಮ ಕತೆಗಳಲ್ಲಿ ಅನಾವರಣ ಮಾಡಿದ್ದಾರೆ. 'ಗರುಡಗಂಬದದಾಸಯ್ಯ' ಕೃತಿಯಲ್ಲಿ ಕಂಡು ಬರುವ 'ಮಲ್ಲಿಗೆಹಳ್ಳಿಯಲ್ಲಿ ಬಯಲಾಟ' ಎಂಬ ಕಥೆ ಒಂದು ಪರಿಸರದ ಸಾಂಸ್ಕೃತಿಕ ಅನನ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಈ ಕತೆಯಲ್ಲಿ ಒಬ್ಬ ಮುಸಲ್ಮಾನನು ಆಂಜನೇಯನ ಪಾತ್ರವನ್ನು ನಿರ್ವಹಿಸಿ ಪ್ರಸಿದ್ಧನಾಗಿರುವುದು ಕತೆಗೆ ಹಾಸ್ಯದ ಪರಿಸರವನ್ನು ತಂದುಕೊಟ್ಟಿದೆ. ಹಳ್ಳಿಯ ಬಯಲಾಟದ ಅಸಂಬದ್ಧತೆ ಗಳೆಲ್ಲವು 'ಮಲ್ಲಿಗೆಹಳ್ಳಿಯಲ್ಲಿ ಬಯಲಾಟ' ಕತೆಗೆ ಹಾಸ್ಯದ ಹೂರಣವನ್ನು ತುಂಬಿಕೊಟ್ಟಿದೆ.

ಗ್ರಾಮೀಣ ಜೀವನದಲ್ಲಿ ಪ್ರಾಮಾಣಿಕತೆ ಜೀವಂತವಾಗಿದೆ ಎಂಬುದನ್ನು ಗೊರೂರರವರು 'ಮರೆಯಾದ ಮಾರಮ್ಮ' ಕಥಾಸಂಕಲನದ 'ಡ್ರೈವರ್ ರಂಗನ ಅಗ್ನಿಪರೀಕ್ಷೆ' ಕತೆಯಲ್ಲಿ ತಿಳಿಸಿದ್ದಾರೆ. ಸರ್ಕಾರಿ ಅಧಿಕಾರಿಗಳು ಮುಗ್ಧ ವ್ಯಕ್ತಿಗಳ ಸುಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳದೆ ದೌರ್ಜನ್ಯ ಮಾಡುವ ಸಂಗತಿಯನ್ನು ಗೊರೂರರವರು ಅನೇಕ ಕತೆಗಳಲ್ಲಿ ವಸ್ತುವನ್ನಾಗಿ ಮಾಡಿಕೊಂಡಿರುವಂತೆ ಈ ಕತೆಯಲ್ಲಿ ಚಿತ್ರಿಸಿದ್ದಾರೆ. ಗ್ರಾಮೀಣ ಜೀವನದಲ್ಲಿ ಮುಗ್ಧ ಜನರು ದಬ್ಬಾಳಿಕೆಯ ಜನ ಮಾಡುತ್ತಿರುವ ಅನ್ಯಾಯಗಳನ್ನು ಗಮನಿಸಿದರು ಅನಿವಾರ್ಯವಾಗಿ ಮೌನಿಗಳಾಗಿದ್ದಾರೆ ಎಂಬ ಸತ್ಯಾಂಶವನ್ನು ಗೊರೂರರವರು ಗುರುತಿಸಿದ್ದಾರೆ. ಇದನ್ನು ಅವರು ಸಭ್ಯತೆಯ ಸೋಲು ಎಂದು ಅನೇಕ ಘಟನೆಗಳಲ್ಲಿ ದಾಖಲಿಸಿದ್ದಾರೆ. ಹಣದ ವಿಷಯದಲ್ಲಿ ಮೋಸ ಮಾಡಿ ಸೆರೆಮನೆವಾಸ ಅನುಭವಿಸಿ ಬಂದವನು ಹಳ್ಳಿಯೊಂದರ ಮಂಟಪದಲ್ಲಿ ಕುಳಿತು, ದೊಡ್ಡ ಸನ್ಯಾಸಿ ಎನ್ನಿಸಿಕೊಂಡು, ಹಳ್ಳಿಯ ಜನರ ಮೂಢನಂಬಿಕೆಗಳನ್ನು ಉಪಯೋಗಿಸಿಕೊಂಡು ಹಳ್ಳಿಯಲ್ಲಿ ಮೆರೆಯುವುದು. ಕಡೆಗೆ ಆಕಸ್ಮಿಕವಾಗಿ ಅವನ ತೇಜೋವಧೆಯಾಗುವುದನ್ನು 'ಮರೆಯಾದ ಮಾರಮ್ಮ' ಕೃತಿಯಲ್ಲಿ ಗುರುತಿಸಬಹುದು. ಹಳ್ಳಿಯ ಜೀವನ, ಮೂಢನಂಬಿಕೆಗಳು, ಮಾರಿಗೆ ಕುರಿ ಇಡುವ ರೀತಿ ಇವು, ಗಂಭೀರ ದೃಷ್ಟಿ - ಹಾಸ್ಯ ದೃಷ್ಟಿಗಳನ್ನು ಕೂಡಿಕೊಂಡು ನಿರೂಪಣೆ ಸ್ವಾರಸ್ಯವಾಗಿ ಅನಾವರಣಗೊಂಡಿದೆ.

'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯ 'ಬೆಸ್ತರ ಕರಿಯ' ಕತೆಯಲ್ಲಿ ಕರಿಯನ ಪಾತ್ರ ಕಾಲಾತೀತವಾಗಿ ಮೂಡಿಬಂದಿರುವುದು ಆಕರ್ಷವಾಗಿದೆ. "ನಾನು ನೋಡಿದ ನಲವತ್ತು ವರುಷದಿಂದಲೂ ಅವನು ಒಂದೇ ಸಮನಾಗಿದ್ದಾನೆ. ಒಂದೊಂದು ಸಲ ಎಂಭತ್ತು ವರುಷದ ಮುಪ್ಪಿನ ನಮ್ಮ ತಂದೆಯವರೂ ಸಹ ತಾವು ನೋಡಿದಂದಿನಿಂದ ಕರಿಯ ಹೀಗೆಯೇ ಇದ್ದಾನೆ" ಎಂದು ಹೇಳಿದುದುಂಟು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೮; ಪು. ೭೬) ಊರಿನಲ್ಲಿ ಯಾವುದೇ ರೀತಿಯ ವೈಪರೀತ್ಯಗಳು ಉಂಟಾದರೂ ಕರಿಯ ಮಾತ್ರ ನಿಶ್ಚಿಲಯೋಗಿಯಂತೆ ಇದ್ದಾನೆ ಎಂಬ ಗೊರೂರರವರ ಮಾತು ವ್ಯಕ್ತಿ ವಿಶೇಷತೆಯನ್ನು ತಿಳಿಯಪಡಿಸುತ್ತದೆ. ನಿಶ್ಚಿಲ ಮನಸ್ಸಿಗೆ ಸಂಕಲ್ಪ ಒಂದೇ ಶಕ್ತಿ ಎಂಬುದನ್ನು ಲೇಖಕರು ಕರಿಯನ ಪಾತ್ರದ ಮೂಲಕ ನೆನಪು ಮಾಡಿಕೊಟ್ಟಿದ್ದಾರೆ. "ಕರಿಯ ಮಾಡುವ ನೂಲು ಉಕ್ಕಿನ ತಂತಿಯಂತೆ ಗಟ್ಟಿ. ಆ ನೂಲನ್ನು ನೋಡಿ ನಮ್ಮೂರು ಪುರೋಹಿತರು, 'ಜನಿವಾರಕ್ಕೆ ಈ ತರಹ ನೂಲು ಮಾಡಬೇಕಯ್ಯ, ಒಳ್ಳೆ ರೇಷ್ಮೆ ಹಾಗೆ. ಆದರೆ ಏನು ಮಾಡುವುದು - ಇವ ಬೆಸ್ತ. ಇವನ ಕೈಲಿ ಜನಿವಾರ ಮಾಡಿಸೋಕೆ ಆಗದು' ಎನ್ನುತ್ತಾರೆ. (ಅದೇ; ಪು. ೮೦) ಇಲ್ಲಿ ಕರಿಯನ ಕುಶಲಗಾರಿಕೆ ಸ್ಫುಟವಾಗಿದೆ.

'ಬೆಸ್ತರ ಕರಿಯ' ಕಥಾ ಸಂಕಲನದ[೧] 'ನಾಯಿ ಬಾಲ' ಕತೆಯಲ್ಲಿ ಕಂಡುಬರುವ ತೂರನ ಪಾತ್ರ ಕರಿಯನ ಪಾತ್ರದಷ್ಟೇ ಅನನ್ಯವಾಗಿದೆ. ಅವನು ದಡ್ಡ ಜೊತೆಗೆ ಕೀಳುಜಾತಿಯವನು. ಊರಿನವರೆಲ್ಲಾ ಅವನನ್ನು ಕೀಳಾಗಿ ಕಂಡರೂ ತಮ್ಮ ದನಗಳನ್ನು ಅವನ ದನಗಳೊಂದಿಗೆ ಕಳುಹಿಸಿ ನಿಶ್ಚಲರಾಗಿರುತ್ತಾರೆ. ತೂರ ಪ್ಲೇಗ್ ರೋಗಕ್ಕೆ ತುತ್ತಾಗಿ ನರಳುತ್ತಿದ್ದಾಗ ಊರಿನವರಿಗೆಲ್ಲಾ ಅವನ ಅಸ್ತಿತ್ವದ ಬೆಲೆ ಗೊತ್ತಾಗುತ್ತದೆ. ಇದನ್ನೇ ಗೊರೂರರವರು ಕತೆಯಲ್ಲಿ ಪ್ರತ್ಯೇಕವಾಗಿ ಉಲ್ಲೇಖಿಸುತ್ತಾರೆ. ತೂರನಿಗೆ ನಿಜನಾಮ ರಂಗ ಎಂದು ಇದ್ದರೂ ಅವನಿಗೆ ತೂರ ಎಂದು ಕರೆಸಿಕೊಳ್ಳುವುದರಲ್ಲಿಯೇ ಹೆಚ್ಚು ಒಲವು. ಗ್ರಾಮೀಣ ಪ್ರದೇಶದಲ್ಲಿ ಇಂಥಹ ಮುಗ್ಧ ಮನೋಭಾವದ ವ್ಯಕ್ತಿಗಳನ್ನು ಗುರುತಿಸಿ ಕತೆ ಹೇಳಿರುವುದು ಅತ್ಯಂತ ಸೊಗಸಾಗಿದೆ. ಕರಿಯನಂತೆ ತೂರನಂತೆ ಬಾಳಿಗೆ ಅಂಟಿಯೂ ಅಂಟದಂತೆ ಬದುಕುವುದು ಕಷ್ಟ ಎಂಬ ಭಾವನೆಯನ್ನು ಗೊರೂರರವರು ಅಭಿವ್ಯಕ್ತಪಡಿಸಿದ್ದಾರೆ. "ಗೊರೂರರ ಕಥೆಗಳಲ್ಲಿ ನಮಗೇ ಅರಿವಿಲ್ಲದಂತೆ, ಕಥೆಗಾರರು 'ಹರಟೆ ಹೊಡೆಯುತ್ತಿದ್ದಾರೆ' ಎಂದು ಕಾಣುವಂತಹ ಭಾಗಗಳಲ್ಲಿ ಪಾತ್ರಗಳನ್ನು ಹತ್ತಾರು ಜನರ ಮಧ್ಯೆ, ಪೀಳಿಗೆಗಳ ಹಿನ್ನೆಲೆಯಲ್ಲಿ ಕಾಣುತ್ತೇವೆ" (ನಾಯಕ ಹಾ.ಮಾ.;(ಸಂ);೧೯೭೩; ಪು.೧೭೮) ಎಂಬ ಅಭಿಪ್ರಾಯವನ್ನು ಎಲ್.ಎಸ್. ಶೇಷಗಿರಿರಾವ್‌ರವರು ನೀಡಿದ್ದಾರೆ.

ವ್ಯಕ್ತಿಯಲ್ಲಿ ಕಂಡುಬರುವ ಅಹಂಭಾವ ವ್ಯಕ್ತಿ ಜೀವನವನ್ನು ಸಮಷ್ಟಿ ಜೀವನವನ್ನೂ ಕಲಕುತ್ತದೆ ಎಂಬುದನ್ನು 'ವೈಯಾರಿ' ಕಥಾಸಂಕಲನದ 'ಗಂಡು ಬೀರಿ ಹೊಸಬಿ', 'ಪುಟ್ಟ ಮಲ್ಲಿಗೆ' ಕತೆಗಳಲ್ಲಿ ಗೊರೂರರವರು ಸ್ಪಷ್ಟವಾಗಿ ತಿಳಿಯಪಡಿಸಿದ್ದಾರೆ. 'ಕಮ್ಮಾರ ವೀರಭದ್ರಾಚಾರಿ' ಕತೆಯಲ್ಲಿ ವೀರಭದ್ರಾಚಾರಿ ಚೈತನ್ಯದ ಚಿಲುಮೆಯಾಗಿ ನಮ್ಮ ಕಣ್ಣಮುಂದೆ ನಿಲ್ಲುತ್ತಾನೆ. 'ಬೂತಯ್ಯನ ಮಗ ಅಯ್ಯು' ಕತೆ ವಸ್ತು ತಂತ್ರದ ದೃಷ್ಟಿಯಿಂದ ಅತ್ಯಂತ ಸ್ವಾರಸ್ಯ ಪೂರ್ಣವಾದ ಕತೆಯಾಗಿದೆ. ಮನುಷ್ಯನ ಸ್ವಭಾವದಲ್ಲಿ ಕೆಟ್ಟತನ ಎಷ್ಟಿರಬಹುದು, ಗಟ್ಟಿತನ ಎಷ್ಟಿರಬಹುದು ಎಂಬುದನ್ನು ಗೊರೂರರವರು ಈ ಕತೆಯಲ್ಲಿ ಅಳೆದು ತೋರಿಸಿದ್ದಾರೆ. ಕ್ರೂರ ಮನಸ್ಸಿನ ಬೂತಯ್ಯನಿಗೆ ಹಣ ಒಂದೇ ಸರ್ವಸ್ವ. ಅವನು ಅಯ್ಯುವಿಗೆ, ರೈತರಿಗೆ ಅಯ್ಯೋ ಎಂದರೆ ಸಾಕು ಆರು ತಿಂಗಳು ಪಾಪ ಸುತ್ತಿಕೊಳ್ಳುತ್ತದೆ ಎಂದು ನೀತಿ ಮಾತನ್ನು ಹೇಳಿ ಪ್ರಾಣ ಬಿಡುತ್ತಾನೆ. ಇದಕ್ಕನುಗುಣವಾಗಿ ಅಯ್ಯು ಬದುಕುತ್ತಾನೆ. ಬೂತಯ್ಯನ ಕ್ರೌರ್ಯಕ್ಕೆ ಬಲಿಗಳಾದ ರೈತರ ವಿಷಯದಲ್ಲಿಯೂ ಕಥೆಯಲ್ಲಿ ಯಾವ ಸರಳೀಕರಣವಿಲ್ಲ. ಬೂತಯ್ಯ ಕ್ರೌರ್ಯಮೂರ್ತಿ ರೈತರು ಸಹಾಯಹೀನ ಸಜ್ಜನರು ಎಂಬ ಸುಲಭವಾದ ಪಕ್ಷ - ಪ್ರತಿ ಪಕ್ಷಗಳ ಚಿತ್ರಣ ಇಲ್ಲಿ ಇಲ್ಲ. "ರೈತನಿಗೆ

---

೧. 'ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಪ್ರಬಂಧ ಸಂಕಲನದಲ್ಲಿ 'ಬೆಸ್ತರ ಕರಿಯ' ಪ್ರಬಂಧವಾಗಿ ಸೇರಿಕೊಂಡಿದ್ದು ಮುಂದೆ ಅದೇ ಬರವಣಿಗೆ 'ಬೆಸ್ತರ ಕರಿಯ' ಎಂದು ಕಥಾಸಂಕಲನದಲ್ಲಿ ಸೇರಿಕೊಂಡಿದೆ. ಗೊರೂರರವರ ಬರವಣಿಗೆಯಲ್ಲಿ ಕತೆಗೂ, ಲಲಿತ ಪ್ರಬಂಧಕ್ಕೂ ಅಷ್ಟೊಂದು ಅಂತರ ಕಂಡುಬರುವುದಿಲ್ಲ. ಇದು ನಮ್ಮ ಪ್ರಕಾರ ವಿಮರ್ಶೆಯ ಸಮಸ್ಯೆಯೂ ಹೌದು.

ಮರೆತೂ ಒಂದು ಒಳ್ಳೆಯ ಮಾತನ್ನು ಆಡಬೇಡ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೮) ಎಂಬ ಬೂತಯ್ಯನ ಬುದ್ಧಿವಾದ ನ್ಯಾಯವಾದದ್ದೆ ಎನ್ನಿಸುವಂತೆ ಮಗ ನಡೆದುಕೊಳ್ಳುತ್ತಾನೆ. ಈ ಕತೆಯಲ್ಲಿ ಬರುವ ಬೂತಯ್ಯ, ಅಯ್ಯು ಅವರ ಪ್ರತಿಪಕ್ಷದ ಸಂಕೇತ, ಅವರ ಹಠ ದ್ವೇಷಗಳಿಗೆ ಪ್ರತಿಯಾಗಿ ಬಂದ ಹಠ ದ್ವೇಷಗಳ ಮೂರ್ತಿಗುಳ್ಳ. "ಜಾಲಹಳ್ಳಿಯಲ್ಲಿ ಗುಳ್ಳನು ಕೀಚಕನಾಗಿದ್ದನು. .....ಅವನು ಹೆದರುತ್ತಿದ್ದುದು ಬೂತಯ್ಯನವರೊಬ್ಬರಿಗೆ ಮಾತ್ರ......ಗುಳ್ಳನಿಗೂ, ರೈತರು ಕುರಿಗಳು, ಅವರನ್ನು ತಿನ್ನಬೇಕು, ಅವರು ಇರುವುದೇ ನಮಗಾಗಿ, ಎಂಬ ನಂಬಿಕೆ ಇದ್ದಿತು". (ಅದೇ; ಪು.೧೩) ಇದು ಗೊರೂರವರು ಚಿತ್ರಿಸಿರುವ ಗುಳ್ಳನ ಪಾತ್ರ. 'ಬೂತಯ್ಯನ ಮಗ ಅಯ್ಯು' ಕತೆಯಲ್ಲಿ ದ್ವೇಷದ ಪರಾಕಾಷ್ಠತೆಯನ್ನು ವಿಚಿತ್ರವನ್ನು ಗೊರೂರವರು ಗ್ರಾಮೀಣ ಸಮಾಜದಲ್ಲಿ ಕಂಡಂತೆ ಚಿತ್ರಿಸಿದ್ದಾರೆ. ಗ್ರಾಮೀಣ ಪರಿಸರದ 'ಸ್ಥಿತಿ ಚಿತ್ರ'ದ ಪ್ರತಿರೂಪ, ಪೂರ್ಣರೂಪ ಗೊರೂರವರ ಸಾಹಿತ್ಯ ಎಂಬುದಕ್ಕೆ ಈ ಕತೆಯು ಒಂದು ಸಾಕ್ಷಿಯಾಗಿದೆ ಎಂಬುದನ್ನು ಉದಾಹರಿಸಬಹುದು. 'ಬೂತಯ್ಯನ ಮಗ ಅಯ್ಯು' ಕತೆ ತಿಳಿಯಾದ ಪ್ರಶಾಂತವಾದ ಸ್ನೇಹ ವಿಶ್ವಾಸ ತುಂಬಿದ ವಾತಾವರಣದಲ್ಲಿ ಮುಕ್ತಾಯವಾಗುತ್ತದೆ. ಪ್ರಕೃತಿಯಲ್ಲಿ ಅಲ್ಲೋಲ ಕಲ್ಲೋಲ ಕಾಣುವಂತೆ ಮನುಷ್ಯನ ಜಗತ್ತಿನಲ್ಲಿಯೂ ಅಲ್ಲೋ ಕಲ್ಲೋಲ ಉಂಟಾಗಿ ಅಂತ್ಯದಲ್ಲಿ ಶಾಂತಿ ಮೂಡಿಯೇ ಮೂಡುತ್ತದೆ ಎಂಬ ವಿಶೇಷ ಸಂಗತಿಯನ್ನು ಗೊರೂರವರು ಈ ಕತೆಯಲ್ಲಿ ವಿವರಿಸಿದ್ದಾರೆ. ಈ ಕತೆಯಲ್ಲಿ ಒಂದು ಸಂಕೀರ್ಣ ಅನುಭವವನ್ನು ಗುರುತಿಸಬಹುದು. ಮನುಷ್ಯ ಸ್ವಭಾವದ ಚಿತ್ರಣ ವಾಸ್ತವಿಕತೆಯ ಹಿನ್ನೆಲೆಯಲ್ಲಿ 'ಬೂತಯ್ಯನ ಮಗ ಅಯ್ಯು' ಕತೆಯಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

ಪಟ್ಟಣದ ಬದುಕನ್ನು ವಸ್ತುವಾಗಿ ಇರಿಸಿಕೊಂಡ ಕತೆಗಳನ್ನೂ ಗೊರೂರವರು ಬರೆದಿದ್ದಾರೆ. ಇಂತಹ ಕತೆಗಳಲ್ಲಿ ಕೇಂದ್ರ ವ್ಯಕ್ತಿ ಒಂದು ಜಗತ್ತಿನಿಂದ ಇನ್ನೊಂದು ಜಗತ್ತಿಗೆ ಕಾಲಿಟ್ಟು ಹಿಂದಿರುಗುತ್ತಾನೆ. 'ಕನ್ಯಾಕುಮಾರಿ ಮತ್ತು ಇತರ ಕಥೆಗಳು' ಕಥಾಸಂಕಲನ 'ಮುಳ್ಳು ಗಿಡ' ಕತೆಯಲ್ಲಿ ಕಂಡುಬರುವ ಸೂರಪ್ಪನ ಪಾತ್ರ ಮನ ಮಿಡಿಯುವಂತಹುದು. ತಪ್ಪಿನ ಅರಿವಾದ ಸೂರಪ್ಪ ಮನೆಗೆ ಹೋಗಿ, ಹೆಂಡತಿಯ ಮುಂದೆ ಕಣ್ಣೀರನ್ನು ಸುರಿಸಿ, ಅವಳು ಔದಾರ್ಯದ ಮುದ್ದೆಯಾಗಿ ಅವನನ್ನು ಕ್ಷಮಿಸಿ ಇಬ್ಬರೂ ಕಣ್ಣೀರಿನ ಕೋಡಿ ಹರಿಸುವ ಪ್ರಸಂಗ ಭಾವಾತಿರೇಕದಿಂದ ಮುಕ್ತಾಯವಾಗಿರುವುದು ಗಮನಾರ್ಹ ಅಂಶವಾಗಿದೆ. ಇದೇ ಕಥಾ ಸಂಕಲನದ 'ಕೋರ್ಟಿನಲ್ಲಿ ಗೆದ್ದ ಎತ್ತು' ಕತೆಯಲ್ಲಿ ಕಂಡುಬರುವ ವಿದ್ಯಾಶಂಕರ ಸಾಧು ಸ್ವಭಾವದ ಬಡಪಾಯಿ. ಖಾದಿರನನ್ನು ಮುಗ್ಧ ಶಂಕರ ಬೇರೆಯವರ ಮಾತನ್ನು ಕೇಳಿ ಕೋರ್ಟಿಗೆ ಎಳೆದು ನಂತರ ಖಾದಿರನ ಸ್ಥಿತಿಯನ್ನು ಕಂಡು ಮರಗುತ್ತಾನೆ. ಅನ್ಯಾಯಕ್ಕೆ ಪ್ರತೀಕಾರವನ್ನು ಮಾಡಬಾರದು ಎಂಬ ಮಹಾತ್ಮರ ವಾಕ್ಯ ನಮಗೆ ತಿಳಿದಿರಬೇಕು ಎಂಬ ಸಂದೇಶವನ್ನು ಗೊರೂರವರು ಈ ಕತೆಯ ಮೂಲಕ ತಿಳಿಸಿದ್ದಾರೆ. 'ಉಸುಬು' ಕಥಾಸಂಕಲನದ 'ಮಧ್ಯಮ ತರಗತಿ' ಕತೆಯಲ್ಲಿ ಮಧ್ಯಮವರ್ಗದ ಸೀತಾರಾಮುವಿನ ಪಾತ್ರದ ಮೂಲಕ ಅವರ ತೊಳಲಾಟ ಚಿತ್ರಿತವಾಗಿದೆ. ಸಂಬಳದ ದಿನ ಮಧ್ಯಮ

ವರ್ಗದವರಿಗೆ ಸಂತೋಷದ ದಿನಕ್ಕಿಂತ ಬಹುಪಾಲು ಸಂಕಟದ ದಿನವೇ ಆಗಿರುತ್ತದೆ ಎಂಬುದನ್ನು ಗೊರೂರರವರು ಈ ಕತೆಯಲ್ಲಿ ನವುರಾಗಿ ಚಿತ್ರಿಸಿದ್ದಾರೆ. ಸೀತಾರಾಮು ಬಸ್ಸಿನಲ್ಲಿ ಸಿಕ್ಕಿದ ಹೊಸ ಪರ್ಸ್‌ನ್ನು ಅನಿವಾರ್ಯವಾಗಿ ಕೈಗೆತ್ತಿಕೊಂಡು ಪಡುವ ಪಾಡು ಅವನ ಮಾನಸಿಕ ತೊಳಲಾಟಕ್ಕೆ ನಿದರ್ಶನವಾಗಿದೆ. ಈ ಕತೆಯಲ್ಲಿ ಹಾಸ್ಯಕ್ಕೆ ಜೊತೆಯಾಗಿ ಅನುಕಂಪೆಯ ಭಾವನೆಯು ಕೂಡಿ ಬಂದಿರುವುದು ವಿಶೇಷವಾದ ಸಂಗತಿ. ಗೊರೂರರವರಿಗೆ ಸಮಾಜದಲ್ಲಿ ಕಂಡುಬರುವ ಓರೆಕೋರೆಗಳನ್ನು ಕಂಡಾಗ, ಮುಗ್ಧತೆಯನ್ನು ಕಂಡಾಗ, ಅಜ್ಞಾನವನ್ನು ಕಂಡಾಗ ಸಹಾನುಭೂತಿ ಭಾವನೆ ತುಂಬಿ ಬರುತ್ತದೆ. ಜೀವನದಲ್ಲಿ ಜೀವನೋತ್ಸಾಹ ಇದ್ದರೆ ಅಂತಹ ವ್ಯಕ್ತಿಯಲ್ಲಿ ನೂರು ದೋಷಗಳು ಇದ್ದರೂ ಅಂತಹ ದೋಷಗಳನ್ನು ಕಡೆಗಣಿಸುತ್ತಾರೆ ಎಂಬುದು ಅವರ ಕತೆಗಳಿಂದ ಮನಗಾಣಬಹುದು. ವಿಚಿತ್ರ, ವಿರುದ್ಧ ಪರಿಸರದಲ್ಲಿಯೂ ವ್ಯಕ್ತಿ ಶಾಂತಿಯನ್ನು ಸಾಧಿಸಬೇಕು ಎಂಬುದು ಗೊರೂರರವರ ಮೂಲ ಮಂತ್ರವಾಗಿದೆ. ಪ್ರಕ್ಷುಬ್ಧ ಜೀವನದಲ್ಲಿಯೂ ಶಾಂತಿ ಸ್ಥಿತಿಯನ್ನು ಪಡೆಯುವಾಗ ತಿಳಿಹಾಸ್ಯ ವ್ಯಕ್ತಿಗೆ ಚೈತನ್ಯವಾಗಬಹುದು ಎಂಬುದನ್ನು ಅರಿತುಕೊಂಡ ಲೇಖಕರು ಎಲ್ಲಾ ಕಥೆಗಳಲ್ಲಿಯೂ ತಿಳಿಹಾಸ್ಯದ ಮಿಂಚನ್ನು ಮಿಂಚಿದ್ದಾರೆ.

"ಗೊರೂರರ 'ಬೆಸ್ತರ ಕರಿಯ', 'ಶಿವರಾತ್ರಿ' ಸಂಗ್ರಹದಲ್ಲಿಯೂ ಕೆಲವು ಕಥೆಗಳಿವೆ. ಆದರೆ ಗೊರೂರರ ಹಾಸ್ಯ ಪ್ರತಿಭೆ ವಿಷಯಾಂತರಗಳಲ್ಲಿ ತೊಡಗಿರುವುದರಿಂದ ಕಥೆಗಳ ಕಟ್ಟು ಒಮ್ಮೊಮ್ಮೆ ಕಳಚಿ ಬೀಳುತ್ತದೆ. ಹಾಸ್ಯ ಪ್ರವಾಹ ಹೊನಲಾಗಿ ಹರಿದು ಬಿಡುತ್ತದೆ. ಹೀಗಾಗಿ ಇವರ ಸಣ್ಣಕತೆಗಳು, ಉಪಕತೆಗಳ ಗೊಂಚಲಾಗಿ ಪರಿಣಮಿಸುತ್ತವೆ. ಗೊರೂರ ಬರವಣಿಗೆಯಲ್ಲಿಯ ಇಂಥ ಪ್ರಿಯವಾದ ಅವಸ್ಥೆ ಯಲ್ಲಿಯೂ 'ಹಾರುವಯ್ಯ ಹಜಾಮನಾದದ್ದು', 'ಆಚಾರ ಕೆಟ್ಟರೂ ಆಕಾರ ಕೆಡಬಾರದು' (ಪ್ರಬಂಧಗಳು) ಮತ್ತು 'ಡೊಂಕುಬಾಲ'ದಂತಹ ಉಜ್ವಲ ಕಥೆಗಳು ಸಿಗುತ್ತವೆ". (ಕೀರ್ತನಾಥ ಕುರ್ತಕೋಟಿ; ೨೦೦೨; ಪು. ೧೪೯-೧೫೦) ಈ ಹೇಳಿಕೆಯಲ್ಲಿ ಗಮನಿಸಬೇಕಾದದ್ದು ಕಥಾಸಂಕಲನ ಎಂದು ಹೆಸರು ಇಟ್ಟುಕೊಂಡಿದ್ದರೂ ಹಲವು ಕಥೆಗಳಲ್ಲ ಎಂಬುದು. ಈ ಮಾತನ್ನು ಸ್ವಲ್ಪಮಟ್ಟಿಗೆ ಒಪ್ಪಬಹುದು. ಉದಾಹರಣೆಗೆ 'ಬೆಸ್ತರ ಕರಿಯ' ಇದು ಕತೆ ಎನ್ನುವುದಕ್ಕಿಂತ ವ್ಯಕ್ತಿಚಿತ್ರ ಎಂದು ಕರೆದರೆ ಹೆಚ್ಚು ಉಚಿತವಾಗುತ್ತದೆ. ಈ ಕತೆಯಲ್ಲಿ ವ್ಯಕ್ತಿ ಚಿತ್ರದ ಉತ್ತಮ ಲಕ್ಷಣಗಳಿವೆಯೇ ಹೊರತು ಕಥೆಯ ಲಕ್ಷಣಗಳಿಲ್ಲ. ಇಷ್ಟಾದರೂ ಗೊರೂರವರಲ್ಲಿ 'ಡೊಂಕುಬಾಲ', 'ಪುಟ್ಟ ಮಲ್ಲಿಗೆ', 'ಬೂತಯ್ಯನ ಮಗ ಅಯ್ಯು', 'ಕಮ್ಮಾರ ವೀರಭದ್ರಾಚಾರಿ' ಮೊದಲಾದ ಉತ್ತಮ ಕಥೆಗಳು ಕಂಡುಬರುತ್ತವೆ. ಒಟ್ಟಾರೆಯಾಗಿ ಗೊರೂರವರು ಕತೆಗಳು ಪಾತ್ರಗಳೊಂದಿಗೆ ಸೇರಿ ಬಿಡುವುದರಿಂದ ಕಲಾತ್ಮಕ ಸೋಲು ಅನಿರೀಕ್ಷಿತವಲ್ಲ, ಆಶ್ಚರ್ಯಪಡುವಂಥದ್ದೂ ಅಲ್ಲ.

ಗೊರೂರವರ ಸಾಹಿತ್ಯ ಸೃಷ್ಟಿಯ ಪ್ರಜ್ಞೆಯು ಎಷ್ಟರಮಟ್ಟಿಗೆ ಪ್ರಜ್ಞಾಪೂರ್ವಕವಾಗಿದೆ ಎಂಬುದಕ್ಕೆ ಅವರ 'ಶಿವರಾತ್ರಿ' ಕೃತಿಯ 'ರೋಡ್ ಇಂಜಿನ್' ಕತೆ ಒಂದು ಉತ್ತಮ ಉದಾಹರಣೆಯಾಗಿದೆ. ಕೆಲವೊಮ್ಮೆ ಕಥೆಯ ಮೂಲವಸ್ತು ಗಾಂಧೀಜಿಯವರೇ ಆಗಿದ್ದಾರೆ ಎಂಬ ಅಭಿಪ್ರಾಯ ಬರುತ್ತದೆ.

ರೋಡ್ ಇಂಜಿನ್‌ನಲ್ಲಿ ಇಂಜಿನಿಯರ್ ಆದ ವ್ಯಕ್ತಿ ಬದುಕಿನ ಗಂಡಾಂತರಕ್ಕೆ ಒಳಗಾಗಿ ಮತ್ತೆ ವಾಪಸ್ ನೆಮ್ಮದಿಯ ಬದುಕಿಗೆ ಹಿಂದಿರುಗುತ್ತಾನೆ. ಅವನು ಡ್ರೈವರ್ ಆಗಿ ಗೌರವಯುತ ಜೀವನಕ್ಕೆ ಪ್ರಯತ್ನಿಸುತ್ತಾನೆ. ಈ ಪಾತ್ರ ಕತೆಗಾಗಿ ಮಾಡಿಸಿದ್ದು ಎನಿಸುತ್ತದೆ. ಯಾವುದೇ ವೃತ್ತಿ ಗೌರವಯುತವಾದದ್ದು ಎಂಬ ಬಸವ-ಗಾಂಧಿಯವರ ಪರಿಕಲ್ಪನೆಯನ್ನು ಪ್ರತಿಪಾದಿಸಲು ಇಂಜಿನಿಯರ್ ಯುವಕನನ್ನು ಬಳಸಿಕೊಂಡಂತೆ ಇದೆ. ಕಡಿಮೆ ಎತ್ತರ ಮತ್ತು ಸ್ಪರ್ಧೆಯ ಪಾತ್ರಗಳನ್ನು ತೆಗೆದುಕೊಂಡಾಗ ವೃತ್ತಿ ಗೌರವವನ್ನು ಗೌರವಿಸುವುದು ಕಷ್ಟವಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಇಂಜಿನಿಯರ್ - ಡ್ರೈವರ್ ಆಗಿ ದುಡಿದು ನಮಗೆ ವೃತ್ತಿ ಗೌರವ ಉಪದೇಶ ಮಾಡುತ್ತಿದ್ದಾನೆ. ಹಾಗೆಯೇ ಅದೇ ಕೃತಿಯ 'ಪ್ರಾಯಶ್ಚಿತ್ತ' ಕತೆಯ ಜಾನಕಿ ಗಂಡನಿಗಿಂತ ಮೇಲೆ ನಿಂತು ಸ್ವಾತಂತ್ರ್ಯ ಸ್ವಾಭಿಮಾನದ ವ್ಯಕ್ತಿತ್ವದಲ್ಲಿ ನಮ್ಮ ಎದುರಿಗೆ ನಿಂತು ಸ್ವಾತಂತ್ರ್ಯ ಸಮರಕ್ಕೆ ನಮ್ಮೆಲ್ಲರನ್ನು ಅಣಿಗೊಳಿಸುವ ನಾಯಕಿಯಾಗಿದ್ದಾಳೆ. ನಮ್ಮ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸಾಮಾನ್ಯ ಪಾತ್ರಗಳೂ ಮಹತ್ವದ್ದಾಗುತ್ತವೆ ಎಂಬುದನ್ನು ಗೊರೂರರವರು ತೋರಿಸಿದ್ದಾರೆ. ಸ್ವಾತಂತ್ರ್ಯ ಎಂಬುದು ದೇಶದ ಎಲ್ಲಾ ಪ್ರಜೆಗಳಿಗೂ ಇರುವ ಈ ಮೊದಲು ಮರೆಯಾಗಿದ್ದ ಸ್ವದೇಶಿ ವ್ಯಕ್ತಿತ್ವಗಳನ್ನು ತೆರೆದು ತೋರಿಸುವ ಚಟುವಟಿಕೆ ಎಂಬುದನ್ನು ಲೇಖಕರು ಮನದಟ್ಟು ಮಾಡಿಕೊಟ್ಟಿದ್ದಾರೆ.

ಗೊರೂರರವರು 'ಕಥೆಗಳು ಮತ್ತು ವಿನೋದ ಚಿತ್ರಗಳು', 'ಕನ್ಯಾಕುಮಾರಿ ಮತ್ತು ಇತರ ಕತೆಗಳು', 'ಕಮ್ಮಾರ ವೀರಭದ್ರಾಚಾರಿ'; 'ಉಸುಬು', 'ಶಿವರಾತ್ರಿ', 'ಬೆಸ್ತರ ಕರಿಯ', 'ವೈಯಾರಿ', 'ಗೋಪುರದ ಬಾಗಿಲು', 'ಮರೆಯಾದ ಮಾರಮ್ಮ' - ಇಷ್ಟು ಕಥಾ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. (ಇವುಗಳಲ್ಲಿ ಕೆಲವು ಪ್ರಬಂಧಗಳೂ ಇವೆ.) ಮಾನವ ಸ್ವಭಾವದಲ್ಲಿ ಪ್ರಾಮಾಣಿಕವಾದ, ಸಹಜವಾದ, ಶಕ್ತಿಯುತವಾದ, ಲವಲವಿಕೆಯ ಆಸಕ್ತಿ ಇರುವುದರಿಂದ ಅವರು ಸೃಷ್ಟಿಸಿದ ಪಾತ್ರಗಳ ಸೃಷ್ಟಿಯ ವೈವಿಧ್ಯ ಆಶ್ಚರ್ಯಕರವಾದದ್ದು. ಅವರಿಗೆ ಲೋಕವನ್ನು ತಮ್ಮ ತತ್ತ್ವಕ್ಕನುಗುಣವಾಗಿ ಪುನರ್ನಿರ್ಮಾಣ ಮಾಡುವ ಅವಸರವಿಲ್ಲ. ಓರೆಕೋರೆಗಳಲ್ಲಿ ಮುಗ್ಧತೆ ಅಜ್ಞಾನಗಳಲ್ಲಿ ಸಹಾನುಭೂತಿ ತೋರಿಸಬಲ್ಲರು. ಇತರರನ್ನು ಮನುಷ್ಯರೆಂದು ಪರಿಗಣಿಸದೆ ಬರಿಯ ಸಾಧನಗಳೆಂದು ಪರಿಗಣಿಸುವ ಸ್ವಾರ್ಥ ಅವರಿಗೆ ಆಗದು. ಬಂಡಾಯವೇ ಜೀವಂತಿಕೆಯ ಲಕ್ಷಣ, ಸಾಕ್ಷ್ಯ ಎನ್ನುವ ಭಾವನೆ ಬೆಳೆಯುತ್ತಿರುವ ಕಾಲದಲ್ಲಿ ಗೊರೂರರವರ ಕತೆಗಳು ವಿಲಕ್ಷಣವಾಗಿ ಕಂಡುಬರುತ್ತವೆ. ಜೀವನದಲ್ಲಿ, ಸಾಹಿತ್ಯದಲ್ಲಿ ಪ್ರಕ್ಷುಬ್ಧತೆಯೇ ಬೆಳೆಯುತ್ತಿರುವ ಈ ದಿನಗಳಲ್ಲಿ ತಿಳಿಹಾಸ್ಯ, ಅಹಂಭಾವಕ್ಕೆ ಕಡಿವಾಣ ಹಾಕಿ ಸಾಧಿಸಿದ ಶಾಂತಿ - ಇವುಗಳಿಂದ ಶ್ರೀಮಂತವಾದ ಅನುಭವವನ್ನು ನೀಡುವ ಕತೆಗಳನ್ನು ವಿಶಿಷ್ಟವಾಗಿ ನೋಡುತ್ತೇವೆ. ಗೊರೂರರವರ ಎಷ್ಟೋ ಕತೆಗಳು ಒಳ್ಳೆಯ ಕಥೆಗಳಷ್ಟೇ ಎಂದರೂ ಉತ್ತಮ ಕತೆಗಳು ಎನ್ನಬಹುದಾದದ್ದು ತಕ್ಕಷ್ಟು ಸಂಖ್ಯೆಯಲ್ಲಿ ಅವರಿಂದ ಮೂಡಿ ಬಂದಿವೆ.

ಗೊರೂರವರ ಕತೆಗಳಲ್ಲಿ ನಿರೂಪಕನ ಬಳಕೆ ವಿಶಿಷ್ಟವಾದ ಮಹತ್ವವನ್ನು ಹೊಂದಿದೆ. ಸುತ್ತಲಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಾಸ್ತವಾಂಶಗಳನ್ನು ದಾಖಲೆ ಮಾಡುತ್ತಲೇ ಅದರ ಮೂಲಕ ಕಥೆಗಾರ ತನ್ನ ಆಶಯಗಳನ್ನು ನಿರೂಪಿಸಲು ಈ ತಂತ್ರ ಬಳಕೆಯಾಗಿದೆ. ಗೊರೂರವರ ಕತೆಗಳಲ್ಲಿ ಬರಹಗಾರ ಮತ್ತು ಓದುಗನ ಸಂಬಂಧ ಕತೆ ಹೇಳುವವನ ಮತ್ತು ಕೇಳುವವನ ಸಂಬಂಧದಂತೆ ಆತ್ಮೀಯವಾಗಿರುವುದನ್ನು ಗುರುತಿಸಬಹುದು. ಇವರ ಎಲ್ಲ ಕತೆಗಳ ಒಟ್ಟು ಆಶಯ ಅನ್ಯಾಯ ವಿರೋಧಿಯಾದ ಆರೋಗ್ಯಕರ ಬದುಕನ್ನು ಹಾರೈಸುವುದೇ ಆಗಿದೆ. ಗೊರೂರವರು ಎಲ್ಲಾ ಜಾತಿ ವರ್ಗಗಳ ಗುಣದೋಷಗಳನ್ನು ಚಿಕಿತ್ಸಕ ದೃಷ್ಟಿಯಿಂದ, ಅಷ್ಟೇ ಸಹಾನುಭೂತಿಯಿಂದ ಚಿತ್ರಿಸಿದ್ದಾರೆ. ಕನ್ನಡ ಸಾಹಿತ್ಯದ ಕತೆಗಾರರ ಪೈಕಿ ಮಾಸ್ತಿಯ ವರನ್ನು ಬಿಟ್ಟರೆ ಎರಡನೆಯ ಸ್ಥಾನ ಗೊರೂರವರಿಗೆ ಲಭಿಸುತ್ತದೆ. ನೈಸರ್ಗಿಕ ಮಾರ್ಗಗಳಲ್ಲಿ ಹೊಳೆ ಹರಿಯುವಂತೆ ಇವರ ಕತೆಗಳೂ ಹರಿಯುತ್ತವೆ. ಗೊರೂರವರು ತಮ್ಮ ಕಾಲದ ಸಹೃದಯರ ಮನೋ ಧರ್ಮಕ್ಕೆ ಆ ಪರಿಸರಕ್ಕೆ ಸ್ಪಂದಿಸಿದ್ದಾರೆ ಎಂಬುದು ನಿರ್ವಿವಾದ ಸತ್ಯವಾಗಿದೆ.

ಪ್ರಬಂಧಗಳ ರಚನೆಯಲ್ಲಿ ಗೊರೂರವರು ಪೂರ್ಣಸಿದ್ಧಿಯನ್ನು ಪಡೆದುಕೊಂಡಿದ್ದಾರೆ. ಅವರ ಪ್ರಬಂಧಗಳು ಜೀವಂತಿಕೆಯ ಲಕ್ಷಣದಿಂದ ಕೂಡಿದ್ದು ಓದುಗರಲ್ಲಿ ಉತ್ಸಾಹವನ್ನು ಉಂಟುಮಾಡುತ್ತವೆ. ತಮ್ಮ ಸುತ್ತಮುತ್ತಲಿನ ಜೀವನ ಚಿತ್ರಣವನ್ನು ಗೊರೂರವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ತಮ್ಮ ಊರು, ಕೆರೆ, ದೇವಾಲಯ, ಹೊಳೆ, ಬೆಟ್ಟಗುಡ್ಡ, ತಮ್ಮ ಮನೆ, ಬೀದಿ ಮತ್ತು ತಮ್ಮ ಊರಿನಲ್ಲಿ ವಾಸ ಮಾಡುತ್ತಿರುವ ನಾನಾ ಮಾರ್ಗದ ಜನ, ಎಲ್ಲವನ್ನೂ ವಿವರವಾಗಿ ಕೊಡುತ್ತಾರೆ. ಇವುಗಳೆಲ್ಲದರ ಜೀವಂತಿಕೆಯ ಸಂಕೇತವಾಗಿ ಹೇಮಾವತಿ ನದಿ ಬರುತ್ತದೆ. ಜೀವಂತಿಕೆಯೇ ಎಲ್ಲಾ ಚಟುವಟಿಕೆಗಳಿಗೆ ಆಧಾರ. ಹುಚ್ಚು ಹೊಳೆ ಬಂದಾಗ, ಮಂಡಿಯವರೆಗೆ ನೀರಿದ್ದಾಗ, ಗೊರೂರಿನ ಜನರ ಹಾಗೂ ಸುತ್ತಮುತ್ತಲ ಗ್ರಾಮೀಣ ಜನರ ಬದುಕು, ಹೀಗೆ ಎಲ್ಲ ವಿಷಯಗಳ ಜೊತೆಗೆ ಗೊರೂರವರು ಸಮೀಪ ಸಂಬಂಧ ಪಡೆದುಕೊಂಡಿದ್ದಾರೆ. ಸಾಹಿತ್ಯದ ಇತರ ಅನೇಕ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕೆಲಸ ಮಾಡಿದ್ದರೂ ಕಾರಂತರು ಹೇಗೆ ಪ್ರಮುಖವಾಗಿ ಕಾದಂಬರಿಕಾರರೊ, ಬೇಂದ್ರೆ ಅವರು ಹೇಗೆ ಭಾವಗೀತಕಾರರೊ, ಮಾಸ್ತಿ ಹೇಗೆ ಸಣ್ಣಕತೆಗಾರರೋ ಹಾಗೆಯೇ ಗೊರೂರವರು ಮುಖ್ಯವಾಗಿ ಪ್ರಬಂಧಕಾರರು. ಅವರು ಸಂಪೂರ್ಣವಾಗಿ ತಮ್ಮತನವನ್ನು ಕಂಡುಕೊಂಡದ್ದು ಮತ್ತು ಅದನ್ನು ಅಭಿವ್ಯಕ್ತಪಡಿಸಿಕೊಂಡಿದ್ದು ಪ್ರಬಂಧಗಳ ಮೂಲಕವೇ. ಅವರ ಅಪಾರವಾದ ಜನಪ್ರಿಯತೆಗೆ ಪ್ರಬಂಧಗಳು ಬಹಳ ಮಟ್ಟಿಗೆ ಕಾರಣವಾಗಿದೆ.

ಸಿ.ಪಿ. ಕೃಷ್ಣಕುಮಾರ್‌ರವರು ಗೊರೂರವರ ಪ್ರಬಂಧಗಳನ್ನು ಕುರಿತು ಅಭಿಪ್ರಾಯಪಡುವಂತೆ "ಗೊರೂರರು ಪ್ರಧಾನವಾಗಿ ಪ್ರಬಂಧಕಾರರೆಂದು ಲೇಖಕರ ನಿರ್ಣಯ. ಪ್ರಬಂಧ ಒಂದರ್ಥದಲ್ಲಿ ಸೀಮಿತವಾದ ಪ್ರಕಾರವಾದರೂ ಇನ್ನೊಂದು ರೀತಿಯಲ್ಲಿ ಚಿತ್ರ, ಕಥೆ, ಕವಿತೆಗಳ ಗುಣಗಳನ್ನು

ಮೈಗೂಡಿಸಿಕೊಳ್ಳಬಲ್ಲ ವ್ಯಾಪಕ ಪ್ರಕಾರವೂ ಹೌದು. ಅದು ಅಳ್ಳಕವೇನೋ ನಿಜ; ಆದ್ದರಿಂದಲೇ ಅದರಲ್ಲಿ ಹೆಚ್ಚಿನ ಸಾಧ್ಯತೆಗಳು ಉಂಟಲ್ಲವೆ ಎಂಬುದು ವಿಚಾರಣೀಯ. ಗೊರೂರರ ಬರವಣಿಗೆ ತಂತ್ರ ನಿಷ್ಠವಲ್ಲ, ಜೀವನ ನಿಷ್ಠ ಎಂಬ ವಿಮರ್ಶೆಯಲ್ಲಿ ತಥ್ಯವಿದೆ. ಅದೇ ಗೊರೂರರ ಸಾಹಿತ್ಯದ ಓರಿಮೆ. "Art consists in concealing art" ಎಂಬ ಹೇಳಿಕೆ ಇಂತಹ ಸಾಹಿತ್ಯಕ್ಕೆ ಚೆನ್ನಾಗಿ ಅನ್ವಯಿಸುತ್ತದೆ" ಎನ್ನುತ್ತಾರೆ. (ಶಿವರಾಮೇಗೌಡ ನಾಗವಾರ; ೧೯೭೮; ಪು. xi)

ಗೊರೂರವರ ಪ್ರಬಂಧಗಳ ಬಗ್ಗೆ ಎಂ.ಸಿ. ವಸಂತಕುಮಾರ್‌ರವರ ಅಭಿಪ್ರಾಯ ಹೀಗಿದೆ. "ಗೊರೂರರು ತಮ್ಮ ಪ್ರಬಂಧಗಳಲ್ಲಿ ಗ್ರಾಮಜೀವನದ ಸ್ವಚ್ಛ ಶುಭ್ರ ಜೀವನವನ್ನು ಮಾತ್ರ ಪರಿಚಯಿಸಿದ್ದಾರೆಯೇ ಹೊರತು ಆ ಜನರ ಬದುಕಿನ ಸಂಕೀರ್ಣ ವ್ಯವಸ್ಥೆಯ ಕೆಸರನ್ನಾಗಲಿ, ಘಾಟುಗಳನ್ನಾಗಲಿ ಇದುವರೆಗೆ ಚಿತ್ರಿಸಲು ಸಾಧ್ಯವಾಗಲಿಲ್ಲ. ಎನಿಸುತ್ತದೆ. ಹಳ್ಳಿಯ ಬಾಳಿನ ಒಂದು ವಿಶಿಷ್ಟವಾದ ಕಂಪು, ನೆಲದ ಕಮ್ಮೆನ್ನುವ ವಾಸನೆ ಇವರ ಪ್ರಬಂದದಲ್ಲಿ ಮೂಗಿಗೆ ಬಡಿಯುವುದಿಲ್ಲ. ಇದು ಅನಿವಾರ್ಯವೂ ಹೌದು, ಏಕೆಂದರೆ ಅವರು ಹುಟ್ಟಿ ಬೆಳೆದದ್ದು ಬ್ರಾಹ್ಮಣ ಸಮಾಜದಲ್ಲಿ. ಆದ್ದರಿಂದ ಇವರು ಆ ಸಮಾಜದಲ್ಲಿದ್ದು ಅದರ ಒಳಹೊರಗನ್ನು, ಅದರ ಮೇಲೇರಿ ಇತರ ಸಮಾಜ ಗಳನ್ನು ನೋಡಲು ಸಾಧ್ಯವಾಗಿದೆಯೇ ಹೊರತು ಇತರ ಸಮಾಜದವರ ಬದುಕಿನಲ್ಲಿ ಮುಳುಗಿ ಅವರಲ್ಲಿ ತಾವೂ ಒಬ್ಬರಾಗಿ ನೋಡಲು ಸಾಧ್ಯವಾಗಿಲ್ಲ. ಇದನ್ನು ನಾವು ನಿರೀಕ್ಷಿಸುವಂತೆಯೂ ಇಲ್ಲ." (ನಾಯಕ ಹಾ.ಮಾ.; (ಸಂ);೧೯೭೩; ಪು. ೨೧೨-೨೧೩) ಇವರ ಆಕ್ಷೇಪವನ್ನು ಪರಿಮಿತ ಪ್ರಮಾಣದಲ್ಲಿ ಒಪ್ಪಿಕೊಳ್ಳಬಹುದು. ಆದರೆ ಹೀಗೆ ಹೇಳುವುದು ಉಚಿತವಲ್ಲ. ನಮ್ಮ ಜಾತಿ ಬದ್ಧ ಸಮಾಜ ಬರಹಗಾರನ ಮೇಲೆ ಮಿತಿ ಏರುವುದು ನಿಜ. ಆ ಮಿತಿ ಬರಹಗಾರನೊಬ್ಬನಲ್ಲೂ ಅದೇ ಪ್ರಮಾಣದಲ್ಲಿ ಇರಬೇಕೆಂದೇನೂ ಇಲ್ಲ. ಗೊರೂರವರು ಗಾಂಧಿ ತತ್ತ್ವ ಪ್ರೇರಣೆಯಿಂದ ಮುಕ್ತ ಆಲೋಚನೆಯನ್ನು ಬೆಳೆಸಿಕೊಂಡವರು. ಅವರು ಗ್ರಾಮವನ್ನು ನೋಡುವಾಗ ಬ್ರಾಹ್ಮಣ ಕಣ್ಣಿಂದ ನೋಡಿಲ್ಲ. ಮನಸ್ಸು ಪೂರ್ವಸಿದ್ಧಿಯ ವಿಷಯವಾಗಿರುವುದರಿಂದ ಕೆಲವು ಪರಿಮಿತಿಗಳು ಇರಬಹುದು. ಈ ಪರಿಮಿತಿಗಳು ಎಲ್ಲ ವರ್ಗ ಜಾತಿಯ ಬರಹಗಾರರಿಗೂ ಇರುತ್ತವೆ. ಆದರೆ ಗೊರೂರವರು ತಮ್ಮ ಪರಿಮಿತಿಯ ಮಿತಿಯಲ್ಲಿ ಬರೆದಿಲ್ಲ. ಬದಲಾಗಿ ಮಾನವೀಯ ನೆಲೆಯಲ್ಲಿ ಬರೆದಿದ್ದಾರೆ.

ಗೊರೂರವರಂತೆಯೇ ಯು.ಆರ್. ಅನಂತಮೂರ್ತಿ, ಶಿವರಾಮ ಕಾರಂತ ಇವರೆಲ್ಲಾ ಅಪ್ಪಟ ಬ್ರಾಹ್ಮಣ ಬರಹಗಾರರು. ಇವರ ಕೃತಿಗಳಾದ ಸಂಸ್ಕಾರ, ಚೋಮನದುಡಿ ಮೊದಲಾದವುಗಳು ರೂಪು ಗೊಂಡದ್ದು ಆ ಆವರಣದಲ್ಲಿಯೇ ಎಂಬುದನ್ನು ಗಮನಿಸಬೇಕು. ಈ ವಿಷಯದ ಬಗ್ಗೆ ಸಿ.ಪಿ. ಕೃಷ್ಣ ಕುಮಾರ್‌ರವರು ಮಾತುಗಳು ಹೀಗಿವೆ - "ಕುವೆಂಪು, ಕಾರಂತ, ಗೊರೂರರಂಥವರಲ್ಲಿ 'ಮಣ್ಣಿನ ವಾಸನೆ' ಇಲ್ಲವೆಂದರೆ ಅದು ಮತ್ತಾರಲ್ಲೂ ಇಲ್ಲವೆನ್ನಬೇಕಾಗುತ್ತದೆ" ಎಂಬ ಅಭಿಪ್ರಾಯ ಅರ್ಥಪೂರ್ಣವಾದುದು.

(ಶಿವರಾಮೇಗೌಡ ನಾಗವಾರ; ೧೯೭೮; ಪು. IX) ಗೊರೂರವರ ಪ್ರಬಂಧಗಳಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದದ್ದು ಅವರ ನಿರ್ದಾಕ್ಷಿಣ್ಯವಾದ ಪ್ರವೃತ್ತಿ ಮತ್ತು ನಿರ್ಮಲವಾದ ಮನಸ್ಸು. ಅವರು ಒಂದು ಪ್ರದೇಶದ ದಲಿತ, ಹಾರುವ, ಒಕ್ಕಲಿಗ, ಬೆಸ್ತ, ಅಗಸ, ತುರುಕ, ಹಜಾಮ, ಕಮ್ಮಾರ, ಕುಂಬಾರ, ಬಡಗಿ ಮೊದಲಾದ ನಾನಾ ವರ್ಗದವರ ಬದುಕಿನಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುವ ಅಜ್ಞಾನ, ಅವಿವೇಕ, ಸ್ವಾರ್ಥತೆ, ಸಂಕುಚಿತ ಭಾವನೆ, ಹೀನ ಪ್ರವೃತ್ತಿ ಮೊದಲಾದ ಎಲ್ಲಾ ದೌರ್ಬಲ್ಯಗಳನ್ನು ತುಂಬಾ ಮಾರ್ಮಿಕವಾಗಿ ವಿಡಂಬಿಸಿದ್ದಾರೆ. ಆದರೆ ಈ ವಿಡಂಬನೆಗಳು ಚಿಕಿತ್ಸಕ ದೃಷ್ಟಿಯಿಂದ ಕೂಡಿದವುಗಳೇ ಹೊರತು ಮತೀಯ ಮೂದಲಿಕೆಗಳಾಗಿಲ್ಲ. ಹೀಗಾಗಿ ಅವರ ಪ್ರಬಂಧಗಳ ಬಗ್ಗೆ ಯಾವ ಮತದವರಿಗೂ ದ್ವೇಷವಿಲ್ಲ.

ಗೊರೂರವರ ಸಾಹಿತ್ಯ ರಚನೆಯ ಲಕ್ಷಣವೆಂದರೆ ತಮ್ಮ ಕೃತಿಗಳಲ್ಲಿ ಎಲ್ಲೂ ಸಮಸ್ಯೆಗಳನ್ನು ಮುಖಾಮುಖಿಯಾಗಿಸುವುದೇ ಇಲ್ಲ. ಅವರ ಸಾಹಿತ್ಯದಲ್ಲಿ ಘರ್ಷಣೆಗೆ ಆಸ್ಪದವಿಲ್ಲದ್ದರಿಂದ ಅವರ ಕೃತಿಗಳಲ್ಲಿ ಕಂಡುಬರುವ ಸಂಕೀರ್ಣಗಳು ಗಂಭೀರತೆಯನ್ನು ಪಡೆದುಕೊಳ್ಳದೆ ಹಾಸ್ಯಕ್ಕೆ ವಸ್ತುಗಳಾಗುತ್ತವೆ. ಗೊರೂರವರ ಬಹಳಷ್ಟು ಕತೆಗಳು ಕಥಾತಂತ್ರದಿಂದ ಹೊರಗೆ ಉಳಿಯಲು ಇದೇ ಕಾರಣವಿರಬಹುದು. ಅವೆಲ್ಲ ಒಂದು ರೀತಿಯಲ್ಲಿ ಸಾಂದರ್ಭಿಕ ಅಭಿವ್ಯಕ್ತಿಗಳಾಗಿರುವುದರಿಂದ ಆ ಸಂದರ್ಭ ಎಷ್ಟನ್ನು ಒತ್ತುತ್ತದೆ ಮತ್ತು ಒಳಗೊಳ್ಳುತ್ತದೆ ಎನ್ನುವುದರ ಮೇಲೆ ಕತೆ ಬೆಳೆಯುತ್ತದೆ. ಇತರ ಅನೇಕ ಕತೆಗಳು ಈ ರೀತಿಯ ಘಟನೆಗಳು. ಗೊರೂರರ ಕತೆಗಳು ಮತ್ತು ಪ್ರಬಂಧಗಳು ವ್ಯತ್ಯಾಸ ಬಹಳಷ್ಟು ಇಲ್ಲದಿರಲು ಇದೇ ಕಾರಣವಾಗಿದೆ.

ಗೊರೂರವರ ಸಾಹಿತ್ಯವನ್ನು ಜಾನಪದ ಮತ್ತು ನಾಗರಿಕತೆಯ ನಡುವಿನ ರಸ ಸೇತುವೆ ಎನ್ನಬಹುದು. ಈ ಕಾರಣದಿಂದಲೇ ಇವರ ಸಾಹಿತ್ಯ ಎಲ್ಲಾ ಮಟ್ಟದ ಎಲ್ಲಾ ವರ್ಗದ ಜನರಿಗೆ ಪ್ರಿಯವಾಗಿದೆ. ಗೊರೂರವರ ಸಾಹಿತ್ಯ ಸೃಷ್ಟಿಯ ಪೂರ್ಣಸಿದ್ಧಿ ಬಹುಮಟ್ಟಿಗೆ ಅವರ ಪ್ರಬಂಧಗಳಲ್ಲಿ ಕಂಡುಬರುತ್ತದೆ. ಈ ಕಾರಣದಿಂದಲೇ ಅವರನ್ನು ಪ್ರಬಂಧಕಾರರು ಎಂದು ನಾವು ವಿಶೇಷವಾಗಿ ಗುರುತಿಸುವುದು. ಗೊರೂರವರ ಜನಪ್ರಿಯತೆಗೆ ಅವರ ಉತ್ತಮ ಪ್ರಬಂಧಗಳೇ ಮೂಲಕಾರಣ ಎಂಬ ಮಾತು ಪೂರ್ಣಸತ್ಯ. ಅವರ ಪ್ರಬಂಧಗಳಲ್ಲಿ ಕೆಲವು ಕಡೆ ಹರಟೆಯ ಲಕ್ಷಣವನ್ನು ಕಾಣುತ್ತೇವೆ. ಅವರ ಪ್ರಬಂಧ ಸಂಕಲನಗಳಲ್ಲಿ ಹೆಚ್ಚಾಗಿ ಚಿತ್ರಗಳಿವೆ. ಚಿತ್ರಗಳಲ್ಲಿ ಜೀವನ ಚಿತ್ರಗಳನ್ನೂ, ವ್ಯಕ್ತಿ ಚಿತ್ರಗಳನ್ನೂ ಕಾಣುತ್ತೇವೆ. ಗೊರೂರವರ ಪ್ರಬಂಧಗಳು 'ಹಳ್ಳಿಯ ಚಿತ್ರಗಳು', 'ನಮ್ಮ ಊರಿನ ರಸಿಕರು', 'ಬೈಲಹಳ್ಳಿ ಸರ್ವೆ', 'ಗರುಡಗಂಬದದಾಸಯ್ಯ', 'ಬೆಸ್ತರ ಕರಿಯ', 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು', 'ಹಳೆಯ ಪಳೆಯ ಮುಖಗಳು' ಮುಂತಾದ ಸಂಕಲನಗಳಲ್ಲಿ ಸೇರಿಕೊಂಡಿವೆ. 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು'

ಕೃತಿಯಲ್ಲಿ 'ಬಿಂದಿಗಮ್ಮನ ಜಾತ್ರೆ', 'ಸಂಚಾರಿ ಚಲನಚಿತ್ರಗಳು' ಪ್ರಬಂಧಗಳು ಸೇರಿಕೊಂಡಿವೆ. ಸಾಹಿತ್ಯ ಅಕಾಡೆಮಿಗೆ ಗೊರೂರರವರು ಸಂಗ್ರಹಿಸಿರುವ ಪ್ರಬಂಧಗಳ ಗುಣಮಟ್ಟವನ್ನು ಗಮನಿಸಿದಾಗ ಅವರಿಗೆ ಪ್ರಬಂಧ ಕಲೆಯ ಪೂರ್ಣ ಪರಿಚಯ ಇತ್ತು ಎಂಬುದು ನಮಗೆ ಖಚಿತವಾಗುತ್ತದೆ. ಹೀಗೆ ಪ್ರಬಂಧ ಪ್ರಕಾರದಲ್ಲಿ ಪೂರ್ಣ ಪರಿಶ್ರಮವನ್ನು ಪಡೆದಿರುವ ಗೊರೂರರವರಿಗೆ ಉತ್ತಮ ಪ್ರಬಂಧವನ್ನು ಬರೆಯುವುವಲ್ಲಿ ಯಾವುದೇ ರೀತಿಯ ತೊಡಕು ಉಂಟಾಗಿಲ್ಲ ಎಂಬುದು ಖಚಿತವಾಗುತ್ತದೆ.

ಗೊರೂರರವರಿಗೆ ಇರುವ ಜನಪದ ಸಾಹಿತ್ಯದ ಪರಿಚಯ ಅವರ ಪ್ರಬಂಧ ಸಾಹಿತ್ಯದ ವೈವಿಧ್ಯಕ್ಕೆ ಗಟ್ಟಿತನಕ್ಕೆ ಕಾರಣವಾಗಿದೆ. ಇವರ ಪ್ರಬಂಧಗಳಲ್ಲಿ ಹೇಮಾವತಿ ನದಿಯ ಪರಿಸರದ ಪ್ರಭಾವ ವೈವಿಧ್ಯಮಯವಾಗಿ ಮೂಡಿಬಂದಿದೆ. ಹೇಮಾವತಿ ನದಿಯ ತೀರದ ಸೊಗಸು, ಪರಿಸರದ ಪ್ರಭಾವ ಗೊರೂರರವರಿಗೆ ಜೀವಂತಿಕೆಯನ್ನು ತಂದುಕೊಟ್ಟು ವಿಶಿಷ್ಟ ಭಾವ, ಅನುಭವಗಳ ಸ್ಫುರಣೆಗೆ ಕಾರಣವಾಗಿದೆ. ಹೇಮಾವತಿ ನದಿಯಲ್ಲಿ ಪರಿಸರದಲ್ಲಿ ಅಡಗಿರುವ ಸಂಸ್ಕೃತಿಯ ವೈಭವವನ್ನು ಗೊರೂರರವರ ಸಾಹಿತ್ಯದಲ್ಲಿ ಕಾಣುವಂತೆ ಅವರ ಪ್ರಬಂಧಗಳಲ್ಲಿ ಹೆಚ್ಚು ಮನೋಜ್ಞವಾಗಿ ನೋಡುತ್ತವೆ. ಒಂದು ನದಿ ಒಂದು ಜನಾಂಗದ ಜೀವನಾಡಿ, ಸಂಸ್ಕೃತಿಯ ತೊಟ್ಟಿಲು ಆಗಬಲ್ಲದು ಎಂಬ ಸತ್ಯಾಂಶ ಗೊರೂರರವರ ಸಾಹಿತ್ಯದ ಮೂಲಕ ನಮಗೆ ಮನವರಿಕೆಯಾಗುತ್ತದೆ. ಅವರ ಕತೆ, ಕಾದಂಬರಿ, ಪ್ರಬಂಧಗಳಲ್ಲಿ ಕಂಡುಬರುವ ಘಟನೆಗಳೆಲ್ಲವೂ ಹೇಮಾವತಿಯ ಮಡಿಲಿನಿಂದ ಮೂಡಿಬಂದ ಸಾಹಿತ್ಯ ಚಿತ್ರಗಳು. ಅಸ್ಪೃಶ್ಯತಾ ನಿವಾರಣೆ, ಭಾವಾಕ್ಯತಾ ಭಾವನೆ ಮೂಡಿಸುವಲ್ಲಿ ಗೊರೂರರವರ ಪ್ರಬಂಧಗಳು ಯಶಸ್ವಿಯಾಗಿವೆ. ಸಮಾಜದ ಎಲ್ಲಾ ವರ್ಗದ ಜನ, ವೃತ್ತಿಯ ಜನ ಒಟ್ಟಾಗಿ ಕಲೆತು ಉತ್ಸಾಹದಿಂದ ಬದುಕುವುದನ್ನು ಇವರ ಪ್ರಬಂಧಗಳಲ್ಲಿ ಗುರುತಿಸಬಹುದು.

ಗೊರೂರರವರು ತಾವು ಚಿತ್ರಿಸಿರುವ ಹಳ್ಳಿಗಾಡಿನ ಜನಪದ ಸಂಸ್ಕೃತಿಯ ಜೀವಂತ ಪ್ರತಿನಿಧಿಗಳು. ಈ ಕಾರಣದಿಂದಲೇ ಅವರ 'ಹಳ್ಳಿಯ ಚಿತ್ರಗಳು' ಪ್ರಬಂಧ ಸಂಕಲನದಿಂದ ಮೊದಲುಗೊಂಡು ಆನಂತರದ ಕತೆ - ಕಾದಂಬರಿಗಳಲ್ಲಿ ಜನಪದ ಜೀವನದ ಸರಳತೆ, ಮುಗ್ಧತೆ, ರಸಿಕತೆ, ಜೀವನ ಶ್ರದ್ಧೆ, ಸಜ್ಜನಿಕೆ, ಪಾರಮಾರ್ಥಕತೆ, ನಿರಾಡಂಬರತೆ, ವಿನೋದಪರತೆ ಮುಂತಾದ ಸದ್ಗುಣಗಳ ಪರಿಣಾಮ ರಮಣೀಯತೆಯನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ವೈಶಿಷ್ಟ್ಯತೆಯಿಂದಲೇ ಗೊರೂರರವರು ಸಹೃದಯರ ಮನಸ್ಸಿನಲ್ಲಿ ಆತ್ಮೀಯ ವ್ಯಕ್ತಿಗಳಾಗಿ ಉಳಿದಿದ್ದಾರೆ. ವಿಶೇಷವಾಗಿ ಅವರ ಪ್ರಾದೇಶಿಕ ಕೃತಿಗಳು ಕಾಲದಿಂದ ಮಾಸದ ಮೇಲ್ಮೆಯನ್ನು, ಸತ್ತ್ವವನ್ನು ಸಂಪಾದಿಸಿಕೊಂಡಿವೆ. ಹಳ್ಳಿಯ ಚಿತ್ರಗಳಲ್ಲಿ ಕಂಡುಬರುವ ಪ್ರಕೃತಿಯ ವರ್ಣನೆ, ಜನಜೀವನದ ವರ್ಣನೆ ಅಸಂಭವ ಎನಿಸುವಂತೆ ಸಹೃದಯರಿಗೆ ಭಾಸವಾಗುವುದಿಲ್ಲ. ಸಮಕಾಲೀನ ಜನಜೀವನದ ಚಿತ್ರಣ ಹಳ್ಳಿಯ ಚಿತ್ರಗಳಲ್ಲಿ ಮನೋಹರವಾಗಿ ಮೂಡಿ ಬಂದಿದೆ. ಹಳ್ಳಿಯ ಚಿತ್ರಗಳಲ್ಲಿ ಕೊಡುವ ಬದುಕಿನ ವೈವಿಧ್ಯಪೂರ್ಣವಾದ

ನೋಟ ಮುಖ್ಯ ಅಮುಖ್ಯಗಳ ಎಲ್ಲೆಯನ್ನು ಧಾಟಿ ಮಾನವೀಯ ದೃಷ್ಟಿಗೆ ಮೋಹಕವಾಗಿ ಉಳಿದಿದೆ. ಗಾಡಿಯ ಪ್ರಮಾಣಕ್ಕೆ ಒಗ್ಗಿದ ಜನಕ್ಕೆ ಮೊತ್ತಮೊದಲಿಗೆ ಬಸ್ಸು ಕಂಡಾಗ ಆಗುವ ಅನುಭವ ಅಪರೂಪ ವಾದದ್ದು ಎಂಬುದನ್ನು ಗೊರೂರರವರು 'ನಮ್ಮ ಊರಬಸ್ಸು' ಎಂಬ ಪ್ರಬಂಧದಲ್ಲಿ ಚಿತ್ರಿಸಿದ್ದಾರೆ. ಮನುಷ್ಯ ಸ್ವಭಾವಕ್ಕೆ ಬಸ್ಸಿನ ಚಿತ್ರ ಹೊಂದಾಣಿಕೆಯಾಗುವಂತೆ ಗೊರೂರರವರು ಚಿತ್ರಿಸಿದ್ದಾರೆ.

ಮಡಿವಂತಿಕೆ ಗೊರೂರರವರ ಕೃತಿಗಳಲ್ಲಿ ಅನೇಕ ಸಂದರ್ಭಗಳಲ್ಲಿ ಉಲ್ಲೇಖಿತ ವಿಚಾರವಾಗಿದೆ. ಇದಕ್ಕೆ ಉದಾಹರಣೆಯನ್ನು 'ಹಳ್ಳಿಯ ಚಿತ್ರಗಳು' ಕೃತಿಯಲ್ಲಿ ನಾವು ಗುರುತಿಸಬಹುದು. ನಮ್ಮ ಜಾತಿಯನ್ನು ನಾವು ಉಳಿಸಿಕೊಳ್ಳುವುದಕ್ಕೆ ನಾವೇ ಅಡಿಗೆ ಮಾಡಲು ಒಪ್ಪಿದೆವು ಎಂದು ಅದರ ಪರಿಣಾಮವಾಗಿ ಹಳೇಬೀಡಿನ ದೇವಸ್ಥಾನದ ಸೊಬಗನ್ನೇ ನೋಡದ ನಿರ್ಭಾಗ್ಯಶಾಲಿಗಳಾದೆವು ಎಂದು ತಮ್ಮ ಸ್ಕೌಟ್ ಕ್ಯಾಂಪಿನ ವಿಷಯವನ್ನು ಹೇಳುವಾಗ ಗೊರೂರರವರು ತಿಳಿಸುವುದು ಗಮನಾರ್ಹ. 'ಹಳ್ಳಿಯ ಚಿತ್ರಗಳು' ಕೃತಿಗೆ ಮುನ್ನುಡಿಯಾಗಿ ಮಾಸ್ತಿಯವರು ಆಡಿರುವ ಮಾತು ಗೊರೂರರವರ ಗ್ರಾಮೀಣ ಚಿತ್ರದ ನೈಜ ನಿರೂಪಣೆಗೆ ಸ್ಪಷ್ಟ ನುಡಿಗಳಾಗಿವೆ. "ಗೊರೂರು ಸುಲಭವಾಗಿ ಮಾಡುವ ವರ್ಣನೆಗಳು, ನಾವು ಕನಸಿನಲ್ಲಿ ಕಂಡು ನಿಜವಾದೀತೇ ಎಂದು ಆಶಿಸುವ ಒಂದು ಪ್ರಪಂಚವನ್ನು ನಮ್ಮ ಎಚ್ಚರದ ದೃಷ್ಟಿಯ ಮುಂದೆ ತಂದು ನಿಲ್ಲಿಸುತ್ತವೆ. ಈ ಊರುಗಳು, ಊರುಗಳ ಈ ಜನಗಳು, ಈ ಹೊಲಗದ್ದೆ ಪೈರುಗಳು, ಹೊಳೆ ಕೆರೆ ದೇವಾಲಯಗಳು, ಸರಳವಾದ ಸುಂದರವಾದ ಈ ನಡೆ ನುಡಿ, ಈ ಬಾಳು - ಇವೆಲ್ಲಾ ನಮಗೆ ಹೊಸವಲ್ಲದಿದ್ದರೂ ಹೊಸದಾಗಿ ಕಂಡು ಮನಸ್ಸನ್ನು ಮುಗ್ಧವಾಗಿ ಮಾಡುತ್ತವೆ. ಗ್ರಂಥಕರ್ತರು ಸುತ್ತಣ ಪ್ರಪಂಚವನ್ನು ಚೆನ್ನಾಗಿ ನೋಡಿ ಅದರ ಅಂದ ಚೆಂದಕ್ಕೆ ಮನಸ್ಸಿನಲ್ಲಿ ಎಡೆಗೊಟ್ಟು ಅದರ ಬದುಕಿನಲ್ಲಿ ತಮ್ಮ ಬದುಕನ್ನು ಬೆರೆಸಿ ತಾವೇ ಅದು ಎಂಬಂತೆ ಅದರೊಂದಿಗೆ ಸೇರಿ ಹೋಗಿದ್ದಾರೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪;ಪು.iii) ಎಂದು ಮಾಸ್ತಿಯವರು ಮೆಚ್ಚುಗೆಯ ಮಾತನ್ನು ಆಡಿದ್ದಾರೆ. ಇಲ್ಲಿ ಗೊರೂರರವರಲ್ಲಿ ತಾನು ಚಿತ್ರಿಸಿರುವ ಚಿತ್ರದೊಂದಿಗೆ ತನ್ಮಯ ಹೊಂದುವ ಅಂಶವನ್ನು ಮಾಸ್ತಿಯವರು ಗುರುತಿಸಿದ್ದಾರೆ. ಗೊರೂರರವರ ಹಾಸ್ಯ ದೃಷ್ಟಿ-ಹಾಸ್ಯ ಸೃಷ್ಟಿಯೂ ಆಗಿದೆ. 'ನಗೆಯ ನೀತಿ', 'ನಮ್ಮ ಊರು ಬಸ್ಸು', 'ನಮ್ಮ ಜೋಡಿದಾರರ ಕೆಲವು ಚಿತ್ರಗಳು' ಮೊದಲಾದ ಪ್ರಬಂಧಗಳಲ್ಲಿ ಇದನ್ನು ನೋಡುತ್ತೇವೆ. ಐಯ್ಯಂಗಾರರು ನಾಮ ಹಾಕಿಕೊಳ್ಳುವ ವೈಖರಿಯನ್ನು ಹಾಸ್ಯಮಯವಾಗಿ ಚಿತ್ರಿಸಿದ್ದಾರೆ. ಹತ್ತು ಉಂಡೆ ನಾಮ, ಒಂದು ಸೇರು ಕುಂಕುಮ ಬಳಸಿ ಐಯ್ಯಂಗಾರರು ನಾಮ ಹಾಕಿಕೊಳ್ಳುವುದನ್ನು ಗೊರೂರರವರು ಹಳ್ಳಿಯ ಚಿತ್ರಗಳಲ್ಲಿ ಆತ್ಮೀಯವಾಗಿ ಹಾಸ್ಯ ಮಾಡಿದ್ದಾರೆ. ಇಂತಹ ಹಾಸ್ಯ ಪ್ರವೃತ್ತಿಯನ್ನು ಅವರು ಎಲ್ಲರೊಂದಿಗೆ ಉಳಿಸಿ ಕೊಂಡಿದ್ದಾರೆ. ಮೊಹರಂ ಹಬ್ಬದ ಹುಲಿ ವೇಷಕ್ಕೂ ಅಯ್ಯಂಗಾರರ ನಾಮ ವೈಖರಿಗೂ ಸಂಬಂಧ ಕಲ್ಪಿಸಿರುವುದು ಗಮನಾರ್ಹ ಸಂಗತಿ. ಗೊರೂರರವರು "ನಗೆಯ ಹೆಣ್ಣು ಔಚಿತ್ಯವನ್ನೇ ಅರಿಯಳು" (ಅದೇ; ಪು.೭೪) ಎಂಬ ಮಾತನ್ನು ಇದೇ ಪ್ರಬಂಧ ಸಂಕಲನದ 'ನಗೆಯ ನೀತಿ' ಪ್ರಬಂಧದಲ್ಲಿ ಹೇಳಿರುವುದು

ಕೆಲವು ಸಂದರ್ಭದಲ್ಲಿ ಹಾಸ್ಯ ಗಾಂಭೀರ್ಯದ ಎಲ್ಲೆಯನ್ನು ತುಸು ಮಟ್ಟಿಗೆ ಧಾಟಿರುವುದಕ್ಕೆ ಅವರು ಕೊಡುವ ಸಮಜಾಯಿಷಿ ಮಾತಾಗಿದೆ.

ಗೊರೂರವರು ಸುತ್ತಲ ಸಮಾಜವನ್ನು ವಿಡಂಬನಕಾರನ ದೃಷ್ಟಿಯಲ್ಲಿ ನೋಡದೆ ಹಾಸ್ಯ ದೃಷ್ಟಿಯಲ್ಲಿ ನೋಡಿದ್ದಾರೆ. "ಇವರ ಹಾಸ್ಯ ಚೇಳಿನ ಕೊಂಡಿಯಂತೆ ಕುಟುಕುವುದಿಲ್ಲ, ಮುಳ್ಳು ಹಂದಿಯಂತೆ ಮುಳ್ಳು ಬಿಚ್ಚಿ ಬೆದರಿಸುವುದಿಲ್ಲ. ಅವರ ಹಾಸ್ಯದ್ದು ಕರಡಿಮುದ್ದಿನ ಕಚಗುಳಿಯಲ್ಲ; ಸ್ನೇಹದ ಚೇಷ್ಟೆಯದು. ಅವರ ಹಾಸ್ಯಪ್ರಪಂಚ ಕಾಮನ ಹುಣ್ಣಿಮೆಯ ರಂಗಿನ ಓಕುಳಿಯಾಟದಂತೆ; ಓಕುಳಿ ಚೆಲ್ಲುವವರಿಗೆ ಹೇಗೆ ವಿನೋದವೋ, ಚೆಲ್ಲಿಸಿಕೊಂಡವರಿಗೂ ಅಷ್ಟೇ ವಿನೋದ" (ನಾಯಕ ಹಾ.ಮಾ.; (ಸಂ); ೧೯೭೩; ಪು. ೪೮) ಎಂದು ಎಂ.ವಿ. ಸೀತಾರಾಮಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಗೊರೂರವರು ತಮ್ಮ ಹಾಸ್ಯದ ಮೂಲಕ "ಜನರ ವಿಷಯದಲ್ಲಿ, ನಾಡ ವಿಷಯದಲ್ಲಿ ತಮಗಿರುವ ಪ್ರೇಮವನ್ನು ಸೂಚಿಸಿ ಅದೇ ಪ್ರೇಮವನ್ನು ಓದುವವರಲ್ಲಿ ಉಂಟು ಮಾಡಿದ್ದಾರೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.vi) ಎಂದು ಮಾಸ್ತಿಯವರು ಮುನ್ನುಡಿಯಲ್ಲಿ ಸಮಂಜಸವಾಗಿ ನುಡಿದ್ದಾರೆ.

ಗೊರೂರವರು ಲೋಕಾನುಭವವನ್ನು ತಮ್ಮ ಪ್ರಬಂಧಗಳಲ್ಲಿ ವ್ಯಕ್ತಪಡಿಸುವಾಗ ಸುಭಾಷಿತಗಳಂತಹ ಮಾತುಗಳನ್ನು ಆಡುತ್ತಾರೆ. ಉದಾಹರಣೆಗೆ "ಹರಿಗೋಲಿನಲ್ಲಿರುವಾಗ ಅಂಬಿಗನ ಹತ್ತಿರ, ಕೇಸು ನಡೆಯುತ್ತಿರುವಾಗ ಲಾಯರ ಹತ್ತಿರ, ಕ್ಷೌರ ಮಾಡುತ್ತಿರುವಾಗ ಹಜಾಮನ ಹತ್ತಿರ ವಿರೋಧವನ್ನು ಕಟ್ಟಿಕೊಳ್ಳುವುದು ತರವಲ್ಲ" (ಅದೇ; ಪು. ೧೭) ಎಂಬುದು ಸಾಕ್ಷಿಯಾಗಿದೆ. "ಅಪಾಯವು ಸನ್ನಿಹಿತವಾದಾಗ ಉಪಾಯವು ತಾನಾಗಿಯೇ ತೋರುತ್ತದೆ". (ಅದೇ; ಪು.೮೨) "ನಗೆಗೆ ನೀತಿಯೇ ಇಲ್ಲ". (ಅದೇ; ಪು.೯೧) ಇಂತಹ ಅಪೂರ್ವ ಹೇಳಿಕೆಗಳ ಜತೆಗೆ ಸಂದರ್ಭೋಚಿತವಾಗಿ ಎಲ್ಲರಿಗೂ ಪರಿಚಿತವಾದ ಗಾದೆ ಮಾತುಗಳೂ ಕೂಡಿಕೊಂಡು ಅವರ ಪ್ರಬಂಧಗಳು ರಚಿತವಾಗಿವೆ.

ಹಳ್ಳಿಯ ಬಾಳು ಸಪ್ಪೆಯಲ್ಲ, ಸ್ವಾರಸ್ಯಕರವಾದುದು ಹಾಗೂ ಅದು ಲೋಕ ಕ್ಷೇಮಾಕಾಂಕ್ಷಿ ಎಂಬುದು ಗೊರೂರವರಿಗೆ ಸ್ವಾನುಭವವನ್ನುಂಟು ಮಾಡಿದೆ. ಸಾಹಿತ್ಯಕ್ಕೆ ಪ್ರೇರಣೆಯನ್ನು ಕೊಡುವ ಸತ್ತ್ವ ಗ್ರಾಮೀಣ ಬದುಕಿನಲ್ಲಿ ಇದೆ ಎಂಬುದನ್ನು ಗೊರೂರವರು 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಖಚಿತಪಡಿಸಿದ್ದಾರೆ. ಗೊರೂರವರ ಪಾಲಿಗೆ ಹಳ್ಳಿಯ ಬದುಕು ಹಲವು ರೀತಿಯ ಅನುಭವಗಳ ಗಣಿ ಎನ್ನುವುದಕ್ಕೆ ಈ ಕೃತಿ ಸಾಕ್ಷಿಯಾಗಿದೆ. ಹಳ್ಳಿಯ ಜನರಲ್ಲಿ ಜೀವನ ಶ್ರದ್ಧೆ, ಸರಸಗುಣ ನೈಜವಾಗಿದೆ ಎಂಬುದಕ್ಕೆ 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದ ಪಾತ್ರಗಳು ಉದಾಹರಣೆಯಾಗಿವೆ. ಈ ಕೃತಿಯಲ್ಲಿ ಬರುವ ವ್ಯಕ್ತಿಗಳು ಬಿಡಿಬಿಡಿಯಾಗಿ ಕಂಡರು ಅವರೆಲ್ಲರೂ ವಿಶಿಷ್ಟ ಜೀವನದ ಪರಸ್ಪರ ಸಂಬಂಧವುಳ್ಳ ಗ್ರಾಮಸಮಾಜದ ಅವಯವಗಳಾಗಿ ಪ್ರಬಂಧಗಳಲ್ಲಿ ವ್ಯಾಪಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ 'ನಮ್ಮೂರಿನ ರಸಿಕರು' ಕೃತಿಯ ಪಾತ್ರಗಳು ಸಹೃದಯರ ಮನಸ್ಸಿನಲ್ಲಿ ಸ್ಥಾಯಿ ರಸಿಕ ಪಾತ್ರಗಳಾಗಿ

ಉಳಿದು ಬಂದಿವೆ. ಈ ಕೃತಿಯಲ್ಲಿ ಕಂಡುಬರುವ ಶೀನಪ್ಪ ಊರಿಗೆ ಯಜಮಾನನಂತೆ ಕಂಡು ಬರುತ್ತಾನೆ. ಎಲ್ಲರೂ ಅವನನ್ನು ಹಾಸ್ಯ ಮಾಡುತ್ತಾರೆ, ಯಾರಿಗೂ ಅವನ ಮೇಲೆ ಖಾರ ಇರುವುದಿಲ್ಲ. ಪುರೋಹಿತ ಶೀನಪ್ಪನನ್ನು "ಹೌದಯ್ಯ ಮಂಗಳಾರತಿಗೆ ಬರುವುದಕ್ಕೆ ತಡವಾಯಿತು. ಹುಳಿಯನ್ನಕ್ಕೆ ಬರುವುದಕ್ಕೆ ತಡವಾಗಲಿಲ್ಲ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೧೬೨) ಎಂದು ಹಂಗಿಸುತ್ತಾರೆ. ಇಲ್ಲಿ ಗೊರೂರರವರ ನವಿರಾದ ಹಾಸ್ಯ ಕಂಡುಬರುತ್ತದೆ. 'ನಮ್ಮೂರಿನ ರಸಿಕರು' ಕೃತಿಯಲ್ಲಿ ಶಾಲುಸಾಬಿ ಹಿಂದು ಮುಸ್ಲಿಂ ಬಾಂಧವ್ಯಕ್ಕೆ ಸಾಕ್ಷಿಯಾಗಿದ್ದಾನೆ. ಊರಿನ ವ್ಯಾಜ್ಯವನ್ನು ತೀರ್ಮಾನಿಸುವಲ್ಲಿ ಶಾಲುಸಾಬಿಯ ಘನತೆಯನ್ನು ಗೊರೂರರವರು ನೆನಪು ಮಾಡಿಕೊಟ್ಟಿದ್ದಾರೆ. ಈ ಪ್ರಬಂಧದಲ್ಲಿ ಕಂಡುಬರುವ ದೇವರನ್ನು ಮಾತಾಡಿಸುವ ಕರಡಿ ಬೆಟ್ಟದ ಪೂಜಾರಿ ಸಾತಾನಿ ನಾರಾಯಣಯ್ಯ, ಎಲೆ ಅಡಿಕೆಯ ತೆವಲಿನ ಮಾದ, ಪದವೀಧರ ಗುಂಡ, ಜೋಡಿದಾರರು, ನಾಣಿ ವಿಶಿಷ್ಟ ವ್ಯಕ್ತಿಗಳಾಗಿದ್ದಾರೆ. ಹಳ್ಳಿಗಳಲ್ಲಿ ನಡೆಯುವ ಹೆಣ್ಣು ಮಕ್ಕಳ ಸಭೆ ಪತಿವ್ರತಾ ಧರ್ಮದ ಸ್ವರೂಪಕ್ಕೆ ಸಾಕ್ಷಿ ಎನ್ನುವುದನ್ನು ಈ ಕೃತಿಯಲ್ಲಿ ಗೊರೂರರವರು ವಿಚಾರ ಮಾಡಿದ್ದಾರೆ. ಗ್ರಾಮೀಣ ಸಮಾಜದಲ್ಲಿಯೂ ಕೋಮು ಸಾಮರಸ್ಯ, ಸ್ತ್ರೀಗೆ ಸಮಾನವಾದ ಸ್ಥಾನ ಇತ್ತು ಎಂಬುದಕ್ಕೆ ಗೊರೂರರವರ 'ನಮ್ಮೂರಿನ ರಸಿಕರು' ಸ್ಪಷ್ಟ ನಿದರ್ಶನ ಕೃತಿಯಾಗಿದೆ. ಹಳ್ಳಿಯ ಕಂದಾಚಾರಗಳು, ಹಬ್ಬ-ಹರಿದಿನಗಳಲ್ಲಿ ಆಚರಿಸುವ ರೂಢಿಗಳು, ಮದುವೆಯ ಸಂಪ್ರದಾಯಗಳು, ಜಾತ್ರೆಯಲ್ಲಿ ನಡೆಯುವ ಹರಿಸೇವೆ, ಬಯಲಾಟದ ವಿವರಗಳು, ರೈತರ ಮನೆಯ ಉಪ್ಪಿಟ್ಟಿನ ಅಂದ ಚಂದಗಳನ್ನು ಗೊರೂರರವರು ಈ ಕೃತಿಯಲ್ಲಿ ತದ್ವತ್ತಾಗಿ ಚಿತ್ರಿಸಿದ್ದಾರೆ. "ಗ್ರಾಮಜೀವನ ಹತ್ತಾರು ಮಹಾಭಾರತಗಳಿಗೆ ವಸ್ತುವಾಗುತ್ತದೆ; ನೂರಾರಲ್ಲ ಸಾವಿರಾರು ಸಮಾಜದ ವಿಜ್ಞಾನದ ವಿದ್ಯಾರ್ಥಿಗಳಿಗೆ ಗ್ರಾಸವಾಗುತ್ತದೆ. ಅದೊಂದು ಅಕ್ಷಯ ನಿಧಿ. ಆದರೆ ಅದನ್ನು ನೋಡುವ ಕಣ್ಣಿರಬೇಕು, ಗ್ರಹಿಸುವ ಮನಸ್ಸಿರಬೇಕು, ಜತೆಗೆ ಸಹಾನುಭೂತಿ ಬೇಕು" (ನಾಯಕ ಹಾ.ಮಾ.; (ಸಂ); ೧೯೭೩; ಪು. ೫೬) ಎಂದು ದೇಜಗೌ ಅವರು 'ನಮ್ಮೂರಿನ ರಸಿಕರು' ಕೃತಿಯ ಬಗ್ಗೆ ಆಡಿರುವ ಮಾತು ಗೊರೂರರವರ ಎಲ್ಲ ಪ್ರಾದೇಶಿಕ ಕೃತಿಗಳಿಗೂ ಅನ್ವಯವಾಗುತ್ತದೆ. ಗೊರೂರರವರ ಹಾಸ್ಯ ಕೃತಿಗಳು ಕನ್ನಡಿಗರ ಪಾಲಿಗೆ ಅಪೂರ್ವ ಆಸ್ತಿ ಎಂಬುದು ನಿರ್ವಿವಾದ ಸಂಗತಿ. ಕನ್ನಡ ಸಾಹಿತ್ಯದ ಹಾಸ್ಯ ಬರಹಗಾರರಲ್ಲಿ ಅದ್ವಿತೀಯ ರಾದಂತೆ ಕತೆ, ಪ್ರಬಂಧಗಳ ಮೂಲಕ ಹಾಸ್ಯ ರಸವನ್ನು ಮೂಡಿಸುವಲ್ಲಿ ಗೊರೂರರವರು ಅದ್ವಿತೀಯರಾಗಿದ್ದಾರೆ. ಬಿಚೀ ಅವರ ಬರವಣಿಗೆಯಲ್ಲಿಯೂ ಗೊರೂರರವರ ಹಾಸ್ಯದ ಪ್ರಭಾವವನ್ನು ಗುರುತಿಸಬಹುದು. ಇಂದಿನ ನಗೆಯ ಲಾಸ್ಯದ ತರಂಗಕ್ಕೆ ಗೊರೂರರವರು ಪರೋಕ್ಷವಾಗಿ ಪ್ರೇರಣೆ ಎಂಬ ಮಾತನ್ನು ನಾವು ನಿರ್ಭಯವಾಗಿ ಹೇಳಬಹುದು.

ಗೊರೂರರವರ ಪ್ರಬಂಧಗಳ ಯಶಸ್ಸಿಗೆ ಅವರ ಅನನುಕರಣೀಯವಾದ ಶೈಲಿ ಮತ್ತು ನವುರಾದ ಹಾಸ್ಯ ಬಹಳ ಮಟ್ಟಿಗೆ ಕಾರಣ. ವಾಸ್ತವವಾಗಿ ಅವರು ಕನ್ನಡ ಸಾಹಿತ್ಯದ ಅತ್ಯುತ್ತಮ ಗದ್ಯಕಾರರಲ್ಲಿ ಒಬ್ಬರು. ಸರಳವಾಗಿ, ತೀರ ಸಹಜವಾಗಿ, ನಿರಲಂಕಾರವಾಗಿ ಬರೆದುಕೊಂಡು ಹೋಗುವುದು ಅವರ

ಜಾಯಮಾನ. ಅವರ ಇಂತಹ ಸ್ವಾಭಾವಿಕವಾದ ಬರವಣಿಗೆಯಲ್ಲಿಯೇ ಒಂದು ಆಕರ್ಷಣೆಯಿದೆ, ಬನಿಯಿದೆ, ಸೊಗಸಿದೆ ಹಾಗೂ ಮಾರ್ಮಿಕವಾಗಿ ಹೇಳುವ ಜಾಣ್ಮೆ ಇದೆ. ಆತ್ಮೀಯತೆಯ ಗುಣ ಮತ್ತು ಚಿತ್ರ ಕಟ್ಟುವ ಕಲೆ ಅವರಿಗೆ ಸಿದ್ಧಿಸಿದೆ. ಹೀಗಾಗಿ ಅವರ ಪ್ರಬಂಧಗಳು ಓದಿಸಿಕೊಂಡು ಹೋಗುತ್ತವೆ. "Style is that by which one personality moves another" ಎನ್ನುವಂಥದು ಅವರ ಶೈಲಿ. ಎಂಥದೇ ಒಳ್ಳೆಯ ವಸ್ತುವಿದ್ದರೂ, ವಿಷಯ ಸಂಗ್ರಹವಿದ್ದರೂ ಕೆಲವರು ಅಭಿವ್ಯಕ್ತಿಯ ಸಾಮರ್ಥ್ಯವಿಲ್ಲದೆ ಸೋತುಬಿಡುತ್ತಾರೆ. ಆದರೆ ಗೊರೂರರು ತೀರ ಸಾಮಾನ್ಯ ವಿಷಯಗಳಿಗೂ ಸಾಮರ್ಥ್ಯವನ್ನು ತುಂಬಿ ಸಾಹಿತ್ಯ ಕ್ಷೇತ್ರದಲ್ಲಿ ಸ್ಥಾನವನ್ನು ಒದಗಿಸುತ್ತಾರೆ ತಮ್ಮ ಸುಂದರವಾದ ಶೈಲಿಯ ಸಹಾಯದಿಂದ. ಗೊರೂರವರ ಭಾಷೆ ಜನ ಭಾಷೆಗೆ ಹತ್ತಿರವಾಗಿದೆ. ಅಲ್ಲಿ ಒಳ್ಳೆಯ ಲಯವಿದೆ. ಆಡುನುಡಿ, ಗಾದೆ ಮತ್ತು ಉತ್ತಮ ಉಪಮಾನಗಳಿಂದ ಕೂಡಿದೆ. ಒಂದನ್ನು ಹೇಳಿ ಆ ಮೂಲಕ ಮತ್ತೊಂದನ್ನು ಧ್ವನಿಸುವ ಶಕ್ತಿ ಇದೆ. ಲಲಿತವಾದ ನಿರೂಪಣೆ ಮತ್ತು ಸುಸಂಸ್ಕೃತವಾದ ಹಾಸ್ಯದಿಂದಾಗಿ ಅವರ ಪ್ರಬಂಧಗಳು ಎಂಥಹವರನ್ನು ಬಹುಬೇಗ ಆಕರ್ಷಿಸುತ್ತವೆ.

ಗೊರೂರವರ ಪ್ರಾದೇಶಿಕ ಕೃತಿಗಳಲ್ಲಿ ನಾವು ಕಳೆದು ಹೋಗಿರುವ ಗ್ರಾಮಸಮಾಜದ ಚಿತ್ರವನ್ನು ಕಾಣುತ್ತೇವೆ. ಪುರಾತನ ಸಂಸ್ಕೃತಿಯಲ್ಲಿ ಆಸಕ್ತಿಯನ್ನು ಹೊಂದಿರುವ ವ್ಯಕ್ತಿಗಳಿಗೆ ಗೊರೂರವರ ಕೃತಿಗಳು ಪೂರ್ಣ ತೃಪ್ತಿಯನ್ನು ತಂದುಕೊಡುತ್ತದೆ. ಕುವೆಂಪು ಅವರ 'ಕಾನೂರುಸುಬ್ಬಮ್ಮ ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ಮಲೆನಾಡಿನ ನಿಸರ್ಗದ ವೈಭವ ಹೇಗೆ ಚಿರಸ್ಥಾಯಿಯಾಗಿ ಉಳಿದು ಬಂದಿದೆಯೋ ಅದೇ ರೀತಿಯಲ್ಲಿ ಗ್ರಾಮೀಣ ಪರಿಸರದ ರಸಿಕ ಜೀವನಚಿತ್ರ ಗೊರೂರವರ ಕೃತಿಗಳಲ್ಲಿ ಸ್ಥಾಯಿಯಾಗಿ ಉಳಿದುಬಂದಿದೆ.

ಗೊರೂರವರ ಕೃತಿಗಳನ್ನು 'ಹಾಸ್ಯ ಸವಿಜೇನಿನ ಗೂಡು' ಎಂದು ಕರೆಯಬಹುದು. ರಸಿಕತೆಯ ಗುಣ, ಪರಿಸರದ ಚಿತ್ರಣ ಸನ್ನಿವೇಶಗಳ ಸಮ್ಮಿಲನ ಇತ್ಯಾದಿ ವಿಶಿಷ್ಟ ಅಂಶಗಳು ಅವರ ಕೃತಿಗಳಿಗೆ ಮಹತ್ವವನ್ನು ತಂದುಕೊಟ್ಟಿದೆ. ಈ ಕಾರಣದಿಂದಲೇ ಗೊರೂರವರ ಕೃತಿಗಳು ಒಟ್ಟು ದೃಷ್ಟಿಯಲ್ಲಿ ಹಾಸ್ಯ ರಸದ ಪುತ್ಥಳಿಯಾಗಿ ಸಹೃದಯರ ಮನಸ್ಸನ್ನು ಆಕರ್ಷಿಸಿದೆ. ಗೊರೂರವರ ಕೃತಿಗಳಲ್ಲಿ ಈ ಮೂಲಕ ರಸಾನಂದ ಸಹೃದಯರಿಗೆ ಅನುಭವಿಸಿದಷ್ಟು ತುಂಬಿ ಬರುತ್ತದೆ. ಉತ್ತಮ ಸಾಹಿತ್ಯದ ಈ ಗುಣ ಅವರ ಕೃತಿಗಳಲ್ಲಿ ಅಪ್ರಯತ್ನ ಪೂರ್ವಕವಾಗಿ ಸಿದ್ಧಿಸಿದೆ - ಶೋಭಿಸಿದೆ.

ಗೊರೂರವರ ಪ್ರಬಂಧಗಳಲ್ಲಿ ಅವರ ನಿರ್ದಾಕ್ಷಿಣ್ಯದ ಪ್ರವೃತ್ತಿ ಅವರ ನಿರ್ಮಲವಾದ ಮನಸ್ಸು ಯಥಾವತ್ತಾಗಿ ಪ್ರತಿಬಿಂಬಿತವಾಗಿದೆ. ಎಲ್ಲ ವರ್ಗದವರ ಗುಣ ದೋಷಗಳನ್ನು ಕಂಡು ಅವುಗಳಿಗೆ ತಮ್ಮ ಕೃತಿಗಳಲ್ಲಿ ನಿಷ್ಪಕ್ಷಪಾತ ಕನ್ನಡಿ ಹಿಡಿದಿದ್ದಾರೆ. ವ್ಯಕ್ತಿ ಸಮಾಜದಲ್ಲಿ ಕಾಣುವ ಹೀನ ಪ್ರವೃತ್ತಿಯನ್ನು ದೌರ್ಬಲ್ಯಗಳನ್ನು ಲೇಖಕರು ಮಾರ್ಮಿಕವಾಗಿ ವಿಡಂಬಿಸಿದ್ದಾರೆ. ಅವರ ವಿಡಂಬನೆಗಳು ಹಾಸ್ಯದ

ಕಜ್ಜಾಯಗಳೇ ಹೊರತು ಮತೀಯ ಮೂದಲಿಕೆಗಳಲ್ಲ. ಈ ವಿಡಂಬನೆಗಳ ಹಿನ್ನೆಲೆಯಲ್ಲಿ ಗೊರೂರವರ ಸುಧಾರಣೆಯ ಸದಾಶಯವನ್ನು ಕಾಣಬಹುದು. ಗೊರೂರವರು ತಮ್ಮ ಜ್ಞಾನದ ಕೋಲಿನಿಂದ ಜನತೆಯನ್ನು ತಿದ್ದಿದ್ದಾರೆ, ಹಾಸ್ಯದ ಚಾಟಿಯಿಂದ ಜಾಗೃತಗೊಳಿಸಿದ್ದಾರೆ. ಇದಕ್ಕೆ 'ಗರುಡಗಂಬದದಾಸಯ್ಯ' ಕೃತಿಯಲ್ಲಿನ 'ಆಚಾರ ಕೆಟ್ಟರು ಆಕಾರ ಕೆಡಬಾರದು', 'ನಮ್ಮ ಊರಿನ ಹಾರವರ ಶೌರ್ಯ', 'ಹಾರುವಯ್ಯ ಹಜಾಮನಾದುದು' ಪ್ರಬಂಧಗಳು ಒಳ್ಳೆಯ ಉದಾಹರಣೆಗಳಾಗಿವೆ. 'ಕ್ಷೌರ' ಪ್ರಬಂಧದಲ್ಲಿ ವಿಧವೆಗೆ ಮುಡಿ ತೆಗೆಯುವ ಅನಿಷ್ಟ ಸಂಪ್ರದಾಯವನ್ನು ಗೊರೂರವರು ತೀಕ್ಷ್ಣವಾಗಿ ಟೀಕಿಸಿದ್ದಾರೆ. 'ಮಡಿ' ಎಂಬ ಪ್ರಬಂಧದಲ್ಲಿ ಮಡಿಯ ಬಗ್ಗೆ ಬ್ರಾಹ್ಮಣರು ಹೊಂದಿರುವ ವಿಕೃತ ಭಾವನೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ವೈದಿಕರು ಹೇಳುವ ಶಾಸ್ತ್ರ ಸಮ್ಮತ ಭಾವಗಳು ಬಹುಮಟ್ಟಿಗೆ ಮೂಢ ನಂಬಿಕೆಗಳಾಗಿವೆ ಎಂಬ ವಿಷಯವನ್ನು ಗೊರೂರವರು ತಮ್ಮ ಪ್ರಬಂಧಗಳಲ್ಲಿ ಪ್ರತಿಪಾದಿಸಿದ್ದಾರೆ. ಇಂತಹ ಮೂಢನಂಬಿಕೆಗಳೇ ಸಾಮಾಜಿಕ ಮತ್ತು ನೈತಿಕ ಏರುಪೇರುಗಳಿಗೆ ಕಾರಣವಾಗುತ್ತದೆ ಎಂಬುದು ಅವರ ಸ್ಪಷ್ಟ ಅಭಿಮತವಾಗಿದೆ. ಇಂತಹ ಮೂಢನಂಬಿಕೆಗಳನ್ನು ಕಳಿಯುವಲ್ಲಿ ಗೊರೂರವರು ತೋರಿಸುವ ನಿಷ್ಪಕ್ಷಪಾತ ದೃಷ್ಟಿ ಅನುಕರಣೀಯವಾದದ್ದು.

ಗೊರೂರವರ ಸುಧಾರಣಾವಾದದ ಸಮರ್ಥನೆಗೆ 'ಕತೆಗಳು ಮತ್ತು ವಿನೋದ ಚಿತ್ರಗಳು' ಕೃತಿ ಒಂದು ಉತ್ತಮ ನಿದರ್ಶನವಾಗಿದೆ. ಇಲ್ಲಿ ಬರುವ ಪ್ರಬಂಧಗಳು ಬಹುಮಟ್ಟಿಗೆ ಆಂತರ್ಯದಲ್ಲಿ ನೀತಿಯನ್ನು ಇಟ್ಟುಕೊಂಡ ಸುಧಾರಣಾವಾದದ ಅಭಿವ್ಯಕ್ತಿಗಳು. 'ಸೀತಮ್ಮನ ಸಾಹಸ' ವಿಧವೆಯೊಬ್ಬಳು ಸಾಂಪ್ರದಾಯಿಕ ಆಚರಣೆಗಳನ್ನು ಪ್ರಶ್ನಿಸಿಕೊಳ್ಳುತ್ತಾ ವಾಸ್ತವ ಬದುಕಿನ ಕಡೆಗೆ ಚಲಿಸುವಂತಹದಾದರೆ 'ಅಳಿಯನ ದೀಪಾವಳಿ' ಬ್ರಾಹ್ಮಣ ಸಮಾಜದಲ್ಲಿಯ ಅಳಿಯಂದಿರ ಶೋಷಣೆಯನ್ನು ವಿವರಿಸುತ್ತದೆ. 'ಚೋರತಂತ್ರ' ವ್ಯಾಪಾರ ಬದುಕುವ ಲಾಭವಾಗದೆ ಶೋಷಣೆ ಮಾಡುವ ಉದ್ಯೋಗವನ್ನು ಖಂಡಿಸುತ್ತದೆ. 'ಸತ್ತವನ ಸೇಡು' ಸಾಂಪ್ರದಾಯಿಕ ಜೀವನಕ್ಕೆ ಸವಾಲನ್ನು ಒಡ್ಡಿ ಆ ಸವಾಲನ್ನು ನಿರಂತರವಾಗಿಸುತ್ತದೆ. 'ಬುದ್ಧ ಕಥಾಮೃತ' ಬದುಕುವ ಮಾರ್ಗಕ್ಕೆ ದಾರಿಯಾಗಲು ಹೊರಡುತ್ತದೆ. 'ಲಂಚ ತ್ರಿವಿಕ್ರಮ' ಅಧಿಕಾರ ವರ್ಗದ ಬಗ್ಗೆ ಅಸಹ್ಯಪಟ್ಟುಕೊಳ್ಳುವ ಚಿತ್ರಣವನ್ನು ಹೊಂದಿದೆ. 'ಗೃಹಣೀಗೃಹಮುಚ್ಚಿತೇ' ದಾಂಪತ್ಯದಲ್ಲಿ ಹೆಂಗಸಿನ ಸರಿಯಾದ ಮಾರ್ಗದ ಕಡೆಗೆ ಬೆಳಕು ಚೆಲ್ಲುತ್ತದೆ. 'ಉದರ ವೈರಾಗ್ಯ' ನ್ಯಾಯವಾದಿಗಳ ನ್ಯಾಯ, ಅನ್ಯಾಯವನ್ನು ತಿಳಿಸುತ್ತದೆ. ಈ ಮೇಲಿನ ಬರಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಗೊರೂರವರು ಸಮಾಜದ ಜೊತೆ ನೇರವಾಗಿ ಮಾತನಾಡುತ್ತಿರುವಂತೆ ತಿಳಿದುಬರುತ್ತದೆ. ಈ ರೀತಿ ನೇರವಾಗಿ ಮಾತನಾಡುವ ವ್ಯಕ್ತಿತ್ವ ಏಕೆ ಸಾಧ್ಯವಾಗಿದೆ ಎಂದರೆ ಗೊರೂರವರು ಜನರಿಂದ ಬಂದು ಜನರಿಗಾಗಿಯೇ ಬದುಕಿದವರು. ಶಿಷ್ಟ ಕವಿಯ ಹಾಗೆ ಅವರು ಸಾಹಿತ್ಯಕ್ಕಾಗಿ ಸಾಹಿತ್ಯ ರಚನೆ ಮಾಡುವುದಿಲ್ಲ. ಓದಗರನ್ನು ಬದಿಗಿಟ್ಟು ಕಾವ್ಯರಚಿಸಿದಂತೆ ಇಲ್ಲ. ಸಾಮಾನ್ಯರೊಂದಿಗೆ ಮುಖಾಮುಖಿಯಾಗು ವುದೇ ಅವರ ಸಾಹಿತ್ಯದ ಅನನ್ಯತೆ. ಈ ಮುಖಾಮುಖಿಯಾಗುವಿಕೆ ಸಂಘರ್ಷದ ಮೂಲಕ ಅಲ್ಲ. ಈ

ಸಂಪ್ರದಾಯದ ಜತೆಗೆ ಹೊಂದಾಣಿಕೆ ಮಾಡಿಕೊಂಡು ಅದರಲ್ಲಿರುವ ತಪ್ಪುಗಳನ್ನು ತಿದ್ದುತ್ತಾ ಹೋಗುವ ಸುಧಾರಕ ಮನೋಧರ್ಮ. ಈ ಕತೆಗಳನ್ನು ಹೇಳುವಾಗ ಗೊರೂರರವರು ನೀತಿಯನ್ನು ಹೇಳುತ್ತಿದ್ದಾರೆಯೇ ಎನ್ನುವ ಪ್ರಶ್ನೆ ಬರುತ್ತದೆ. ಪರಿಮಿತ ಪ್ರಮಾಣದಲ್ಲಿ ಇದು ನಿಜ ಎನಿಸಿದರೂ ಪೂರ್ಣವಾಗಿ ಅವರು ನೀತಿಯನ್ನು ಹೇಳುತ್ತಿದ್ದಾರೆ ಎಂದು ತಿಳಿಯಬಾರದು. ಸಮಾಜ ಸುಧಾರಣೆಯಲ್ಲಿ ಅವರು ನೇರವಾಗಿ ಭಾಗವಹಿಸುವುದರಿಂದ ಅವರ ಸಾಹಿತ್ಯಕ್ಕೆ ಈ ಪರಿಸ್ಥಿತಿ ಬಂದಿದೆ. ಆದ್ದರಿಂದಲೇ ಅವರ ಕಥೆ ಮತ್ತು ಪ್ರಬಂಧಗಳನ್ನು ಬೇರೆ ಬೇರೆಯಾಗಿ ಗುರುತಿಸುವುದು ಕಷ್ಟಸಾಧ್ಯವಾಗುತ್ತದೆ. ಗೊರೂರರವರ ಕೃತಿಗಳನ್ನು ಓದುವ ಅನೇಕರು ಇವರ ಬಗ್ಗೆ ಎತ್ತುವ ಸಾಮಾನ್ಯ ಪ್ರಶ್ನೆ ಇದೇ ಆಗಿದೆ. ಗೊರೂರರವರು ಪ್ರಬಂಧವನ್ನು ರಚಿಸುವಾಗ ಕೂಡ ಅಲ್ಲಿ ಸಾಹಿತ್ಯಕ ಸ್ವಾರಸ್ಯವನ್ನು ಪ್ರಧಾನವಾಗಿ ಹೇಳುತ್ತಾರೆ ಎಂಬುದನ್ನು ಮರೆಯಬಾರದು. ಇವರು ಒಪ್ಪಿಕೊಂಡ ಜೀವನ ಗಾಂಧೀಜಿಯವರ ಸರಳಜೀವನ ಮತ್ತು ಅವರ ದೃಷ್ಟಿ ಕೂಡ ಅವರ ಬರವಣಿಗೆಯ ಸರಳೀಕರಣಕ್ಕೆ ಕಾರಣವಿರಬಹುದು. ಇದೇ ಸಂಕಲನದ 'ಸದ್ಗುರು', 'ಬುದ್ಧಕಥಾಮೃತ' ಮುಂತಾದ ಪ್ರಬಂಧಗಳನ್ನು ಓದಿದಾಗ ನಮಗೆ ಗೊರೂರರವರು ಕತೆಯೊಳಗೆ ಪ್ರಬಂಧವನ್ನು ಪ್ರಬಂಧದೊಳಗೆ ಕತೆಯನ್ನು ರಚಿಸುತ್ತಿದ್ದಾರೆ ಎನಿಸುತ್ತದೆ. ಅವರ ರಾಜಕೀಯ ಜೀವನ ಆಶಯವು 'ಜೋಡಿ ಬಂದೂಕದ ಗುರಿಕಾರರು', 'ಪ್ರಥಮ ವಿಮೆಯ ಪ್ರಾರಂಭೋತ್ಸವ', 'ಯದ್ವಾತದ್ವ', 'ವಿನೋದ ಲಹರಿ' ಮುಂತಾದ ಕತೆಯೊಳಗಿನ ಪ್ರಬಂಧಗಳಾಗಿ ಕಾಣುತ್ತವೆ.

ಒಳ್ಳೆಯ ಆರಂಭ ಮತ್ತು ಒಳ್ಳೆಯ ಮುಕ್ತಾಯ ಪ್ರಬಂಧ ರಚನೆಯ ಮುಖ್ಯ ಲಕ್ಷಣಗಳಲ್ಲೊಂದು. ಇದು ಗೊರೂರರವರಿಗೆ ಚೆನ್ನಾಗಿ ಸಿದ್ಧಿಸಿದೆ. ಅವರ ಯಾವುದೇ ಪ್ರಬಂಧ ಇದಕ್ಕೆ ನಿದರ್ಶನವಾಗಬಲ್ಲದು. "ಹೇಮಾವತಿ ನದಿಯು ನಮ್ಮೂರ ಉಸಿರು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೮; ಪು.೧) ಇದು 'ಹೇಮಾವತಿಯ ತೀರದಲ್ಲಿ' ಎಂಬ ಪ್ರಬಂಧದ ಆರಂಭ. "ಬೆಸ್ತರ ಕರಿಯ ನಿಜವಾಗಿಯೂ ಯೋಗಿಯೇ?." (ಅದೇ; ಪು.೭೬) ಇದು 'ಬೆಸ್ತರ ಕರಿಯ' ಎಂಬ ಪ್ರಬಂಧದ ಆರಂಭ. 'ನಮ್ಮ ಎಮ್ಮೆಗೆ ಮಾತು ತಿಳಿಯುವುದೆ' ಎಂಬ ಪ್ರಬಂಧದ ಆರಂಭವನ್ನು ನೋಡಿ "ನಮ್ಮನಾಡು ಎಮ್ಮೆನಾಡು. ಮಹಿಷ ಮಂಡಲವೆಂಬುದು ನಾವು ಹೆಮ್ಮೆಯಿಂದ ಹೇಳಿಕೊಳ್ಳುವ ಹೆಸರು". (ಅದೇ; ಪು.೬೬) ಈ ಪ್ರಬಂಧದ ಮೊದಲ ಪಂಕ್ತಿಯೇ ಪ್ರಬಂಧದ ವಸ್ತುವಾದ ಎಮ್ಮೆಯ ಬಗ್ಗೆ ಒಂದು ವಿಶೇಷವಾದ ಆಸಕ್ತಿಯನ್ನು ತಂದುಕೊಡುತ್ತದೆ. ಜೊತೆಯಲ್ಲಿ ಪ್ರಬಂಧದ ಮತ್ತೊಂದು ಗುಣವಾದ ಹಾಸ್ಯವೂ ತಲೆ ಹಾಕುತ್ತದೆ. ನಮ್ಮನಾಡು ಎಮ್ಮೆನಾಡು ಎಂದರೆ ಯಾರು ಭುಜ ತಟ್ಟಿಕೊಳ್ಳುತ್ತಾರೆ? ನಾಚಿ ಅಪಮಾನಗೊಳ್ಳುತ್ತಾರೆ. ವಸ್ತುಸ್ಥಿತಿ ಏನೇ ಇದ್ದರೂ ಅನಪೇಕ್ಷಿತವಾದುದ್ದನ್ನೆ ವಿಶಿಷ್ಟ ಗುಣವೆಂದಾಗ ನಗು ಬರುವುದು ಸಹಜ. ಆದರೆ ತಾವು ಪ್ರತಿಪಾದಿಸಲಿರುವ ವಿಷಯಕ್ಕೆ ಆ ಮೂಲಕ ಒಂದು ಮಹತ್ವವನ್ನು ತಂದುಕೊಟ್ಟು ಓದುಗರ ಮನಸ್ಸನ್ನು ಆಕರ್ಷಿಸಿ ಅವರನ್ನು ಆತ್ಮೀಯತೆಗೆ ತೆಗೆದುಕೊಳ್ಳಬೇಕಾಗಿರುವುದು ಪ್ರಬಂಧಕಾರರ ಪ್ರಮುಖ ಗುರಿ. ಅದನ್ನು ಗೊರೂರರವರು ಸಾಧಿಸಿ ತಮ್ಮ ಪ್ರಬಂಧಗಳಲ್ಲಿ ತೋರಿಸಿದ್ದಾರೆ.

'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯಲ್ಲಿ ಬರುವ 'ಸಫಲ ಜೀವನ' ಅತ್ಯುತ್ತಮ ಪ್ರಬಂಧ. ಕರ್ಮಯೋಗದ ರಹಸ್ಯವನ್ನು ಅರಿತು ಅನುಷ್ಠಾನಗೊಳಿಸಿದ ವೆಂಕಟರಾಯನ ಪಾತ್ರ ಈ ಪ್ರಬಂಧದಲ್ಲಿ ಪ್ರಧಾನವಾದದ್ದು. ದುಡಿಮೆ ಇಲ್ಲದೆ ಮಾಡಿದ ಪೂಜೆ ನೀರಿನಲ್ಲಿ ಮಾಡಿದ ಹೋಮದಂತೆ ನಿರರ್ಥಕವಾಗುತ್ತದೆ ಎಂಬುದನ್ನು ಈ ಪ್ರಬಂಧ ಸೂಚಿಸುತ್ತದೆ. ಒಬ್ಬನ ದುಡಿಮೆಯಿಂದ ಹಳ್ಳಿಯ ಜನ ಆನಂದಪಡುವುದಾದರೇ ಇಡೀ ಹಳ್ಳಿಯ ಜನ ದುಡಿಮೆಯ ವ್ಯಕ್ತಿಗಳಾದರೆ, ಅಂತಹ ಹಳ್ಳಿ ಸ್ವರ್ಗ ಆಗಬಲ್ಲದು ಎಂಬ ಸಂದೇಶ ಈ ಪ್ರಬಂಧದಲ್ಲಿ ಸೂಚ್ಯವಾಗಿದೆ. 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯ 'ಬಿಂದಿಗಮ್ಮನ ಜಾತ್ರೆ' ಪ್ರಬಂಧದಲ್ಲಿ ಜನಪದ ಜೀವನದ ಚಿತ್ರ ಇದೆ. ಇಡೀ ಪ್ರಬಂಧ ರಂಗ ಮತ್ತು ಬಿಂದಿಗಮ್ಮ ದೇವರುಗಳ ಸುತ್ತ ಬಳಸಿಕೊಂಡಿರುವ ಕತೆಯಾಗಿದೆ. ಆಚಾರ ವಿಚಾರಗಳ ಚರ್ಚೆ ಈ ಪ್ರಬಂಧದಲ್ಲಿದೆ. ಹಳ್ಳಿಗಳಲ್ಲಿ ನಡೆಯುವ ಜಾತ್ರೆ ಗ್ರಾಮೀಣ ಜನಕ್ಕೆ ಸಂತೋಷದ ವಾತಾವರಣವನ್ನು ತಂದು ಕೊಡುವುದರ ಜತೆಗೆ ಸದ್ವಿವೇಕವನ್ನು ಮೂಡಿಸುತ್ತದೆ ಎಂಬುದು ಈ ಪ್ರಬಂಧದ ಮೂಲಕ ನಮಗೆ ಮನವರಿಕೆ ಆಗುತ್ತದೆ. 'ಪಾಕಶಾಲೆಯಲ್ಲಿ' ಎಂಬ ಪ್ರಬಂಧ ಎಷ್ಟು ಸರಳವಾಗಿದೆಯೋ ಅಷ್ಟೇ ಸುಂದರವಾಗಿದೆ. ವಿವಾಹಿತ ಪುರುಷ ಪಾಕಶಾಲೆಗೆ ಹೋಗಬೇಕಾದ ಘಟನೆ ಒದಗಿ ಬಂದಾಗ ಪಡುವ ಪರಿಪಾಟವನ್ನು ಈ ಪ್ರಬಂಧದಲ್ಲಿ ಗೊರೂರರವರು ಕಲಾತ್ಮಕವಾಗಿ ಚಿತ್ರಿಸಿದ್ದಾರೆ. 'ಸೇತುವೆ' ಪ್ರಬಂಧದಲ್ಲಿ ಗೊರೂರರವರು ನಾಗರಿಕತೆಯ ಪ್ರಭಾವ ಜಾನಪದದ ನಾಶಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಸೇತುವೆ ಕಟ್ಟಿದಾಗ ಹಳ್ಳಿಯ ಜನಕ್ಕೆ ಆನಂದ ಉಂಟಾಗಿದ್ದು ಎಷ್ಟು ಸಹಜವೋ ನಿಸರ್ಗದ ಸಂಬಂಧದಿಂದ ನಾವು ದೂರವಾದೆವು ಎಂಬ ಸಂಕಟ ಅಷ್ಟೇ ಸಹಜವಾಗಿ ಉಂಟಾಗಿದೆ ಎಂಬುದನ್ನು ಲೇಖಕರು ಈ ಪ್ರಬಂಧದಲ್ಲಿ ಪರಿಣಾಮಕಾರಿಯಾಗಿ ತಿಳಿಸಿದ್ದಾರೆ. ನದಿಯ ಮೇಲೆ ಬಿದ್ದ ಸೇತುವೆ ನದಿಗೂ ನಮಗೂ ನಡುವೆ ಬಿದ್ದಂತೆ ಭಾಸವಾಯಿತು ಎಂಬ ಮಾತು ಗ್ರಾಮೀಣ ಜೀವನದ ಪ್ರಾತಿನಿಧಿಕ ವ್ಯಕ್ತಿಯಾದ ಗೊರೂರರವರ ಅಂತರಂಗದ ತೊಳಲಾಟದ ಮಾತಾಗಿದೆ.

'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯ 'ಬೆಟ್ಟದ ಮನೆಯಲ್ಲಿ' ಪ್ರಬಂಧದಲ್ಲಿ ಸಾಹಸ ಜೀವನದ ವರ್ಣನೆ ಇದೆ. ಬದುಕಿಗೆ ತಾತ್ವಿಕ ಚಿಂತನೆಯಷ್ಟೇ ಸಾಹಸ ಪ್ರವೃತ್ತಿಯೂ ಅತ್ಯವಶ್ಯಕ ಎಂಬುದನ್ನು ಈ ಪ್ರಬಂಧದ ಹಿನ್ನೆಲೆಯಲ್ಲಿ ಮನವರಿಕೆ ಮಾಡಿಕೊಳ್ಳಬಹುದು. 'ಕನ್ನಡ ಮೌಲ್ವಿ' ಪ್ರಬಂಧ ಗೊರೂರರವರ ಭಾವೈಕ್ಯ ದೃಷ್ಟಿಗೆ ಸ್ಪಷ್ಟ ಸಾಕ್ಷಿಯಾಗಿದೆ. ಪ್ರಾಮಾಣಿಕ ರೈತನಲ್ಲಿ ಅಡಗಿರುವ ನಿರ್ಮಲ ಸಂಸ್ಕೃತಿಯನ್ನು ನಮ್ಮ ಪ್ರಾಣವಾಯು ಎಂದು ಗೊರೂರರವರು ತಮ್ಮ ಗ್ರಾಮೀಣ ಜೀವನದ ಅನುಭವದಿಂದ ಪಡೆದುಕೊಂಡ ಸತ್ಯದ ಬೆಳಕಾಗಿದೆ. ಗೊರೂರರವರ ಸಾಹಿತ್ಯದಲ್ಲಿ ಅವರದೇ ಆದ ವಿಶಿಷ್ಟ, ಅನುಕರಣೀಯ ಶೈಲಿಯನ್ನು ಕಾಣಬಹುದು. ಅವರ ಭಾಷೆ ಪರಿಸರದ ಜನರ ಆಡುಭಾಷೆ. ಅಲ್ಲಿ ಕಾಣುವ ನುಡಿಗಟ್ಟು, ವೇದೋಕ್ತಿಗೆ ಸಮನಾದ ಅನುಭವದ ಮಾತುಗಳು ಕೃತಿಗೆ ವಿಶೇಷ

ಮೌಲ್ಯವನ್ನು ತಂದುಕೊಟ್ಟಿದೆ. ಪ್ರಬಂಧಗಳಲ್ಲಿ ಔಚಿತ್ಯಕ್ಕೆ ಅನುಗುಣವಾಗಿ ಗೊರೂರರವರು ಬಳಸಿರುವ ಜನಪದ ಗೀತೆಗಳ ತುಣುಕು ವಿಶೇಷ ಅರ್ಥಕ್ಕೆ ಕಾರಣವಾಗಿದೆ. ಹೀಗೆ ವೈವಿಧ್ಯಮಯ ಅನುಭಗಳ ಚಿತ್ರ ಶಾಲೆಯಾಗಿ ಗೊರೂರರವರ ಪ್ರಬಂಧಗಳು ಮೂಡಿ ಬಂದಿವೆ. 'ಕನ್ನಡ ಮೌಲ್ವಿ' ಪ್ರಬಂಧದಲ್ಲಿ ಮೌಲ್ವಿಯ ಅಪರಮಿತ ಕನ್ನಡ ಅಭಿಮಾನವನ್ನು ವಿಶದಪಡಿಸುವಾಗ ಗೊರೂರರವರು ತಮ್ಮ ಗಂಭೀರ ಮುಖವನ್ನು ಸಾಕ್ಷಿಪಡಿಸಿದ್ದಾರೆ. ಇದೇ ಪ್ರಬಂಧ ಸಂಕಲನದ 'ಒಂದು ಸಂಜೆ' ಪ್ರಬಂಧದಲ್ಲಿ ಕಂಡು ಬರುವ ಪ್ರಕೃತಿಯ ವರ್ಣನೆ ಇಡೀ ಗದ್ಯವನ್ನು ಕಾವ್ಯದ ಮಟ್ಟಕ್ಕೆ ಏರಿಸುತ್ತದೆ. 'ಕತೆಗಳು ಮತ್ತು ವಿನೋದ ಚಿತ್ರಗಳು' ಕೃತಿಯ 'ಸೀತಮ್ಮನ ಸಾಹಸ' ಪ್ರಬಂಧದಲ್ಲಿ ಪುಟ್ಟ ಮಕ್ಕಳ ಕಾಟವನ್ನು ತಡೆಯಲಾರದೆ ಗೋಕುಲಾಷ್ಟಮಿಯ ಹಬ್ಬವನ್ನು ಆಚರಿಸುವ ಸೀತಮ್ಮನ ಸಾಹಸ ಓದುಗರ ಕಣ್ಣಲ್ಲಿ ನೀರು ತರುತ್ತದೆ. 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಪ್ರಬಂಧ ಸಂಕಲನದ 'ಹೇಮಾವತಿಯ ತೀರದಲ್ಲಿ' ಪ್ರಬಂಧ ದಲ್ಲಿ ಬರುವ ಘಟನೆ - ಊರಿನ ಧೀರರು ಮಟ್ಟೆ ಕಲ್ಲಿಗೆ ಹೋಗಿ ದೀಪ ಹತ್ತಿಸಿ ಬರುವುದು, ಅನಂತರ ಊರ ಜನ ನದಿಯಲ್ಲಿ ದೀಪ ತೇಲಿ ಬಿಡುವುದು ಊರಿನ ಜನಕ್ಕೆ ಸಂಭ್ರಮದ ಉತ್ಸವ. ಈ ಘಟನೆಯನ್ನು ಹೇಳುವಾಗಲೂ ಭಾವಗೀತಾತ್ಮಕ ಶೈಲಿಯನ್ನು ಕಾಣಬಹುದು. ಈ ಕಾರಣದಿಂದಲೇ ಗೊರೂರರವರ ಬರಹದ ಮೋಹಕತೆ ಎಂದಿಗೂ ಮಂಕಾಗುವುದಿಲ್ಲ ಎನ್ನಬಹುದು. ಇವರು ತಮ್ಮ ಕೃತಿಗಳಲ್ಲಿ ಜನಪದ ಸಾಹಿತ್ಯವನ್ನು ಬೆರೆಸಿ ಆ ಮೂಲಕ ಗ್ರಾಮಜೀವನದ ವಿಶ್ವರೂಪದ ರಸ ನೋಟವನ್ನು ಮೂಡಿಸಿದ್ದಾರೆ. 'ಬಿಂದಿಗಮ್ಮನ ಜಾತ್ರೆ' ಮತ್ತು 'ಮಲ್ಲಿಗೆಹಳ್ಳಿಯಲ್ಲಿ ಬಯಲಾಟ' ಪ್ರಬಂಧಗಳಲ್ಲಿ ಇದಕ್ಕೆ ಉದಾಹರಣೆ ಗಳನ್ನು ಗುರುತಿಸಬಹುದು. ಬಿಂದಿಗಮ್ಮನನ್ನು ತಲೆಯಲ್ಲಿ ಹೊರುವಾಗ ಪೂಜಾರಿಗೆ ಬರುವ ಆವೇಶವನ್ನು ಲೇಖಕರು ವರ್ಣಿಸುವುದನ್ನು ನಾವು ಎಂದಿಗೂ ಮರೆಯಲಾಗುವುದಿಲ್ಲ. ಗೊರೂರರವರು ಹಾಸ್ಯ 'ಸಾಮ್ಯವಾದಿ' ಸಂದರ್ಭೋಚಿತವಾಗಿ ಎಲ್ಲರನ್ನು ನಕ್ಕಿನಗಿಸಿ ತಾನು ಆನಂದಪಡುವ ಶುಚಿ ಹಾಸ್ಯದ ಉದಾರ ಗುಣವನ್ನು ಅವರ ಕೃತಿಗಳಲ್ಲಿ ಕಾಣುತ್ತೇವೆ. ಇವರ ಹಾಸ್ಯ ಜನಮನದ ಕೊಳೆಯನ್ನು ಕಳೆದು ಬೆಳಗಿಸುತ್ತದೆ. ಜನಪದ ಜೀವನದಲ್ಲಿ ಹುದುಗಿದ್ದ ಹಾಸ್ಯದ ಹೊಳೆಯನ್ನು ಗೊರೂರರವರು ತಮ್ಮ ಸ್ವಭಾವ ಸಿದ್ಧವಾದ ವಚನ ವೈಖರಿಯಲ್ಲಿ ವಿಜೃಂಭಿಸಿದ್ದಾರೆ.

"ಗೊರೂರರ ಸಿದ್ಧಿ, ಪ್ರಸಿದ್ಧಿಗಳಿಗೆ ಮುಖ್ಯವಾದ ಆಧಾರ, ಅವರ ಪ್ರಬಂಧಗಳು. ಅವು ದಶಕಗಳಿಂದ ಕನ್ನಡಿಗರಿಗೆ ಶುದ್ಧ ಸಂತೋಷವನ್ನು ನೀಡಿದೆ. ಇಂದಿಗೂ ಅವುಗಳ ಸ್ವಾರಸ್ಯ ಬತ್ತಿಲ್ಲ. ತಮ್ಮ ಪ್ರಬಂಧ ಸಾಹಿತ್ಯದಿಂದ ನಾಡನ್ನು ನಗಿಸಿ ನಲಿದಿದ್ದಾರೆ ಗೊರೂರರು. ಹಾಗೆ ನೋಡಿದರೆ, ನಮ್ಮ ಜನತೆಗೆ ನಗೆಯನ್ನು ಕಲಿಸಿದವರಲ್ಲಿ ಅವರು ಪ್ರಮುಖರು ಎನ್ನಬಹುದು. ಗೊರೂರರದು ಹಾಸ್ಯಯೋಗ" ಎಂದು ಗೊರೂರರವರ ಬಗ್ಗೆ ಸಿ.ಪಿ. ಕೃಷ್ಣಕುಮಾರ್‌ರವರು ಮೌಲ್ಯಯುತ ಮಾತನ್ನು ಆಡಿದ್ದಾರೆ. (ಸಿದ್ಧಲಿಂಗಯ್ಯ ಜಿ.ಎಸ್., ಕೃಷ್ಣಯ್ಯ ಎಂ.ಎಚ್.(ಸಂ);೧೯೯೦;ಪು.೧೬೦)

‘ಗರುಡಗಂಬದದಾಸಯ್ಯ’ ಕೃತಿಯ ಮುನ್ನುಡಿಯಲ್ಲಿ ದ.ರಾ.ಬೇಂದ್ರೆಯವರು ಹೀಗೆಂದಿದ್ದಾರೆ. “ಒಬ್ಬ ಅರಸುಗಳೆ, ಹಜಾಮರೆ, ಹಾರುವರೆ, ತುರುಕರೆ, ದಾಸಯ್ಯಗಳೆ, ಬಯಲಾಟದವರೆ, ಸುಭೇದಾರರೆ, ಶ್ಯಾನುಭೋಗರೆ, ಹೊಲೆಯರೆ - ಇವರೆಲ್ಲರನ್ನೂ ಒಂದು ಮಾಲೆಯಲ್ಲಿ ಪೋಣಿಸಿದ ವಿಕಟ ಕವಿತ್ವವು ಪ್ರಶಂಸನೀಯವೆಂದು ಯಾರು ಹೇಳಲಿಕ್ಕಿಲ್ಲ? ಹಾಸ್ಯವು ಸಾಮ್ಯವಾದಿ; ವ್ಯಂಗ್ಯ ಸರಣಿಯ ಗಾದೆ ಮಾತಿನ ಲೇಹ್ಯಗಳು, ಕಟಕಿ ಮಾತಿನ ತಿರುಪಿನ ಕಷಾಯಗಳು, ಹಾಸ್ಯ ಗರ್ಭಿತ ಉಪಮೆ ದೃಷ್ಟಾಂತಗಳ ಪಾಚಕ ರೇಚಕಗಳು, ಅತಿಶಯೋಕ್ತಿಯ ಗುಳಿಗೆಗಳು, ತತ್ವದ ಭಸ್ಮಗಳು - ಇವೆಲ್ಲವು ಸಾಮಾಜಿಕ ರುಗ್ಣತೆಯನ್ನು ಕಳೆಯುವ ಇವರ ಹಾಸ್ಯ - ವೈದ್ಯಕದಲ್ಲಿ ಉಚಿತ ಪ್ರಯೋಜನಕಾರಿಯಾದುದನ್ನು ಅಡಿಗಡಿಗೆ ಕಂಡು ಹೀಗೆಯೇ ಈ ಕಲೆಯು ನಮ್ಮ ಜನಮನದ ಕೊಳೆಯನ್ನು ಕಳೆದು ಬೆಳಗುವಂತಿರಲಿ ಎಂದು ಹರಸು ವಂತಾಗುವುದು. ಗೊರೂರವರ ಕಲೆಯು ಎಲ್ಲಿಂದಲೊ ರಫ್ತಾಗಿ ಬಂದ ಸೀಮೆ ಛಾಪಿನ ಸರಕಲ್ಲ. ಅದು ಜಾನಪದ ಜೀವನದಲ್ಲಿ ಹುದುಗಿದ್ದರೂ ಹರಿಯುತ್ತಿದ್ದ ಹಾಸ್ಯದ ಹೊಳೆಯನ್ನು ಕಂಡು ಹಿಡಿದು ಅದನ್ನು ಬಣ್ಣಿಸಬಲ್ಲ ಸ್ವಭಾವ ಸಿದ್ಧವಾದ ವಚನ ವೈಖರಿಯು”. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.ii-iii) ಇದು ಗೊರೂರವರ ಸಾಹಿತ್ಯಕ್ಕೆಲ್ಲ ಅನ್ವಯಿಸಬಲ್ಲ ಹೇಳಿಕೆ.

ಗೊರೂರವರ ಕೃತಿಗಳು ವಸ್ತುವಿನ ಆಯ್ಕೆಯಲ್ಲಿ ಹಾಗೂ ಬರವಣಿಗೆಯ ಧಾಟಿಯಲ್ಲಿ ಕನ್ನಡ ನವೋದಯ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿವೆ. ಆದರೂ ಅವರ ಕೃತಿಗಳ ಬಗ್ಗೆ ನಡೆಯಬೇಕಾದಷ್ಟು ವಿಚಾರ ವಿಮರ್ಶೆ ನಡೆದಿಲ್ಲ, ಅವು ಒಂದು ರೀತಿಯಲ್ಲಿ ಅಸಡ್ಡೆಗೆ ಒಳಗಾಗಿವೆ. ‘ನಡೆದು ಬಂದ ದಾರಿ’ಯಲ್ಲಿ ಕುರ್ತಕೋಟಿಯವರು ಅಪರೂಪಕ್ಕೆ ಎನ್ನುವಂತೆ ತೇಲಿಸಿ ಒಂದೆರಡು ಮಾತನಾಡಿದ್ದಾರೆಯೇ ಹೊರತು ಅವರ ಸಮಗ್ರ ಕೃತಿಗಳ ಆಳವಾದ ವಿವೇಚನೆಯನ್ನು ನಡೆಸಿಲ್ಲ. ಉದಾಹರಣೆಗೆ, ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯುಳ್ಳ, ಸುಮಾರು ಆರು ನೂರು ಐವತ್ತು ಪುಟಗಳಷ್ಟು ವಿಸ್ತಾರವಾದ ‘ಮೆರವಣಿಗೆ’ ಕಾದಂಬರಿಯನ್ನು ಕಾಟಾಚಾರಕ್ಕೆ ಹೆಸರಿಸಿ ಕೈತೊಳೆದುಕೊಂಡಿದ್ದಾರೆಯೇ ಹೊರತು, ಅದರ ವಸ್ತು ವಿನ್ಯಾಸದ ಬಗ್ಗೆ ಗುಣ ವಿಶೇಷಣ ಅಥವಾ ಲೋಪದೋಷಗಳ ಬಗ್ಗೆ ತಿಳಿಸಿಲ್ಲ. ಅಷ್ಟೇ ಅಲ್ಲದೆ ಗ್ರಾಮಜೀವನದ ಸಮಗ್ರ ಮುಖಗಳನ್ನು ಮುಖ್ಯವಾಗಿ ಸಂಸ್ಕೃತಿ ಮುಖವನ್ನು ಅವರ ಕೃತಿಗಳು ಹೇಗೆ ಪ್ರತಿಬಿಂಬಿಸುತ್ತವೆ, ಜಾನಪದ ಸತ್ತ್ವವನ್ನು ಹೇಗೆ ಮೈದುಂಬಿಕೊಂಡಿವೆ ಇತ್ಯಾದಿ ವಿಷಯಗಳ ಬಗ್ಗೆ ಹೆಚ್ಚಿಗೆ ಏನನ್ನೂ ಹೇಳಲು ಹೋಗಿಲ್ಲ.

ನಗರ ಜೀವನ ಚಿತ್ರಣದ ಕಥೆ ಕಾದಂಬರಿಗಳೇ ನವ್ಯ ಎಂಬ ತಪ್ಪು ಗ್ರಹಿಕೆ ತಾಂಡವವಾಡುತ್ತಿರುವ ಪ್ರಸ್ತುತ ಸಮಯದಲ್ಲಿ ಹಳ್ಳಿಗಾಡಿನ ಜೀವನವನ್ನು ಕುರಿತ ಗೊರೂರವರ ಕೃತಿಗಳು ಅಸಡ್ಡೆ, ಅವಜ್ಞೆಗಳಿಗೆ ಗುರಿಯಾದುದರಲ್ಲಿ ಅಚ್ಚರಿಯಿಲ್ಲ. ಭಾರತವೆಂದರೆ ಬಹುಮಟ್ಟಿಗೆ ಗ್ರಾಮಭಾರತ. ಆದ್ದರಿಂದ ಯಥೇಚ್ಛವಾಗಿ ತಾಯಿ ಬೇರಿನಂತಿರುವ ಗ್ರಾಮೀಣ ಬದುಕನ್ನು ವಸ್ತುವಾಗುಳ್ಳ ಸಾಹಿತ್ಯ ಸೃಷ್ಟಿಯಾಗಬೇಕು. ಆದರೆ

ಗ್ರಾಮೀಣ ಬದುಕಿನ ಒಳ ಹೊರಗುಗಳನ್ನು ಆಳ ಅಗಲಗಳನ್ನು ಬಲ್ಲ ಅಥವಾ ಹತ್ತಿರದಿಂದ ಆತ್ಮೀಯವಾಗಿ ನೋಡಿದ, ಅವರ ನಡುವೆಯೇ ಬಾಳಿದ ಕಷ್ಟ ಸುಖಗಳನ್ನು ಅನುಭವಿಸಿದ ಲೇಖಕರಿಂದ ಸತ್ತ್ವಯುತವಾದ ಸಾಹಿತ್ಯ ಸೃಷ್ಟಿಯಾಗಬಹುದು. ಅದಲ್ಲದೆ ನಗರದಲ್ಲಿ ನಾಲ್ಕು ಗೋಡೆಯ ನಡುವಿನ ಕೊಠಡಿಯಲ್ಲಿ ಕುಳಿತು ಗ್ರಾಮ ಜೀವನಾನುಭವದ ಗಂಧವೇ ಇಲ್ಲದೆ ಬರೆಯಲು ಹೊರಟರೆ ಅದು ನಿರ್ಜೀವ ಹಾಗೂ ಕೃತಕವಾಗುತ್ತದೆ. ಯಾವುದೇ ಕಲಾಕೃತಿಗೆ ಕೇವಲ ಅನುಭವಗಳಷ್ಟರಿಂದ ಅಥವಾ ತಂತ್ರ, ವಸ್ತು, ಭಾಷೆ ಒಂದರಿಂದ ಮಹತ್ವದ್ದಾಗಲಾರದು. ಎಲ್ಲದರ ಸಾವಯವ ಸಮನ್ವಯತೆ ಬೇಕಾಗುತ್ತದೆ. ಗೊರೂರರವರು ತಮ್ಮ ನಾಲ್ಕು ಕಾದಂಬರಿಗಳಲ್ಲೂ ಕಥಾವಸ್ತುವಿಗೆ ಹೆಚ್ಚು ಒತ್ತು ಕೊಟ್ಟಿರುವುದನ್ನು ಗುರುತಿಸಬಹುದು. ಆದರ್ಶದ ಹಾದಿಯಲ್ಲಿ ಇವರ ಲೇಖನಿ ಸಾಗಿದೆ. ಪಾತ್ರಗಳನ್ನು ತಮ್ಮಷ್ಟಕ್ಕೆ ವಿಕಾಸವಾಗಲು ಬಿಡದೆ ಮಧ್ಯೆ ಮಧ್ಯೆ ಇಣುಕಿ ತಾವು ಪಾತ್ರವಾಗುತ್ತಾರೆ. ತಾಂತ್ರಿಕತೆ ಇವರ ಬರವಣಿಗೆಯಲ್ಲಿ ಬಹುಮಟ್ಟಿಗೆ ಕಡಿಮೆಯೆಂದೆ ಹೇಳಬಹುದು. ಹೀಗಾಗಿ ಇವರ ಕಾದಂಬರಿಗಳು ಅನುಭವದ ಇಲ್ಲವೆ ಕಲ್ಪನೆಯ ಅಭಿವ್ಯಕ್ತಿಯಷ್ಟೇ ಆಗಿಬಿಡುತ್ತವೆ. ಗೊರೂರರವರ ಕಾದಂಬರಿಗಳನ್ನು ಕುರಿತು ಹೇಳುತ್ತಾ "ಗೊರೂರರು ವಿನೋದವನ್ನು ಇರುವಿಕೆಯ ವಿಧಾನದಲ್ಲಿಯೇ ಹುಡುಕಿ ತೆಗೆದು 'ನಮ್ಮೂರಿನ ರಸಿಕರು' ಪ್ರಕಟವಾದ ಮೇಲೆ ಅವರ 'ಮೆರವಣಿಗೆ' ಹಾಗೂ 'ಹೇಮಾವತಿ'ಯಂಥ ಕಾದಂಬರಿಗಳನ್ನು ಬರೆದಿದ್ದಾರೆ. ಆದರೆ ಅವು ಉದ್ದೇಶಪೂರ್ವಕವಾಗಿ ಕಥೆಯನ್ನು ಹೇಳಹೊರಟಿದ್ದರಿಂದಲೇ ಅಯಶಸ್ವಿಯಾಗಿವೆ. ಜೀವನದ ಸ್ವಚ್ಛಂದತೆ ಅವುಗಳಲ್ಲಿಲ್ಲ. 'ನಮ್ಮೂರಿನ ರಸಿಕರು' Mrs. Gaskell Cranford ಕಾದಂಬರಿಯನ್ನು ನೆನಪಿಗೆ ತರುತ್ತದೆ. ಆದರೂ ಅದಕ್ಕಿಂತ ಹೆಚ್ಚು ಆಳವಾಗಿದೆ. ಗೊರೂರರು ತಮ್ಮ ಪಾತ್ರಗಳೊಂದಿಗೆ ಪಡೆಯುವಷ್ಟು ಆತ್ಮೀಯತೆಯನ್ನು ಇನ್ನಾರು ಪಡೆಯಲಾರರು. ಅದಲ್ಲದೆ ಅವರು ಬರವಣಿಗೆಯ ಸುಖವನ್ನು ಉತ್ಸವದ ಸುಖದಂತೆ ಅನುಭವಿಸುತ್ತಾರೆ. .....ಪಾತ್ರಗಳ ಬಗ್ಗೆ ಹೇಗೋ ಹಾಗೆ ಗೊರೂರರು ವಸ್ತುವಿನ ಬಗ್ಗೆಯೂ ಸ್ವಾತಂತ್ರ್ಯವಹಿಸುತ್ತಾರೆ. ಇದು ಕಾದಂಬರಿಯೇ ಎಂದು ಸಂಶಯ ಬರುವಷ್ಟು ಈ ಕೃತಿಯ (ನಮ್ಮೂರಿನ ರಸಿಕರು) ಬಂಧ ಸಡಿಲವಾಗಿದೆ; 'Pikc Wick Paper'ನ ನೆನಪು ತಂದುಕೊಡುತ್ತದೆ. ಆದರೆ ಗೊರೂರರ ವಿಷಯಾಂತರಗಳು ಎಂದೂ ದಾರಿ ತಪ್ಪಿಸುವುದಿಲ್ಲ. ಓದುಗರ ಕುತೂಹಲವನ್ನು ಅಡಗಿಸುವುದಿಲ್ಲ. ಪಾತ್ರಗಳ ಪರಿಚಯವನ್ನು ಹೆಚ್ಚು ಆಳವಾಗಿಸುವುದು, ವಿನೋದದ ತೀವ್ರತೆಯನ್ನು ಹೆಚ್ಚಿಸುವುದು ಅವುಗಳ ಉದ್ದೇಶವಾಗಿದೆ. ಆರೋಗ್ಯಕರವಾದ ಬಯಲು ಹವೆಯಲ್ಲಿ ತಿರುಗಾಡಿದಷ್ಟು ಬೇಕೆನ್ನುಸುವಂತೆ ಈ ಕಾದಂಬರಿಯ ಅನುಭವ ಮತ್ತೆ ಮತ್ತೆ ಪಡೆಯುವಂಥಾಗಿದೆ" ಎಂದಿದ್ದಾರೆ. (ಕೀರ್ತಿನಾಥ ಕುರ್ತಕೋಟಿ; ೨೦೦೨; ಪು.೨೩೫-೨೩೬) ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದದ್ದು ಪ್ರಬಂಧ ಸಂಕಲನವನ್ನು (ನಮ್ಮೂರಿನ ರಸಿಕರು) ಕಾದಂಬರಿ ಎಂದು ತಪ್ಪಾಗಿ ಭಾವಿಸಿರುವುದು. ಈ ತಪ್ಪಿಗೆ ಬಹುಶಃ ಅವರೇ ಹೇಳಿದಂತೆ 'ತನ್ಮಯತೆ' ಬಂದು ಬಿಡುವಂತಹ ಬರವಣಿಗೆ ಕಾರಣವಿರಬಹುದು. ಉಳಿದಂತೆ ಅವರ ಹೇಳಿಕೆಯನ್ನು ಅನುಮೋದಿಸಬಹುದು.

ಕುವೆಂಪು, ಶಿವರಾಮಕಾರಂತ, ಎಚ್.ಎಲ್. ನಾಗೇಗೌಡ ಮತ್ತು ರಾವ್‌ಬಹುದ್ದೂರರು, ಗ್ರಾಮೀಣ ಜೀವನವನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಇವರೆಲ್ಲರೂ ಗೊರೂರರ ಸಮಕಾಲೀನರು ಎಂಬುದು ಒಂದು ವಿಶೇಷ ಸಂಗತಿಯಾಗಿದೆ. ಕುವೆಂಪು ಅವರು ಹಳ್ಳಿಯ ಜೀವನವನ್ನೇ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಳ್ಳದೇ ಹೋದರೂ ತಾಯಿ ಬೇರು ಅದೇ ಎಂಬುದನ್ನು ಗಮನಿಸಬಹುದು. ಅದರಲ್ಲೂ ಅವರ ಗದ್ಯ ಕೃತಿಗಳಾದ 'ಮಲೆಗಳಲ್ಲಿ ಮದುಮಗಳು', 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆನಾಡಿನ ಚಿತ್ರಗಳು' ಈ ಕೃತಿಗಳಲ್ಲಿ ಮಲೆನಾಡಿನ ಗ್ರಾಮೀಣ ಜೀವನವನ್ನು ಚಿತ್ರಿಸಿದ್ದಾರೆ. ಮೊಟ್ಟಮೊದಲ ಬಾರಿಗೆ ಶೂದ್ರ ಬರಹಗಾರರೊಬ್ಬರು ಹೇಗೆ ಗ್ರಾಮೀಣ ಬದುಕಿನ ವಿವರಗಳನ್ನು ಸೂಕ್ಷ್ಮವಾಗಿ ಕೊಡಬಲ್ಲರು ಎಂಬುದನ್ನು ಕುವೆಂಪು ಸಮರ್ಥವಾಗಿ ತೋರಿಸಿಕೊಟ್ಟರು. ರಾವ್‌ಬಹುದ್ದೂರರು ಉತ್ತಮ ಸಾಹಿತಿಗಳು. ಅವರ 'ಗ್ರಾಮಾಯಣ' ಕಾದಂಬರಿಯಲ್ಲಿ ಹಳ್ಳಿಯ ಜೀವನದ ಬಗ್ಗೆ ಸಾಕಷ್ಟು ವಿವರಗಳು ದೊರಕುತ್ತವೆ.

ಎಚ್.ಎಲ್. ನಾಗೇಗೌಡರು ಕುವೆಂಪು ನಂತರ ಆ ದಿಕ್ಕಿನಲ್ಲಿಯೇ ಸಾಗಿ ಬಯಲು ಸೀಮೆಯ ಒಕ್ಕಲಿಗರ ಜೀವನವನ್ನು ತಮ್ಮ 'ದೊಡ್ಡ ಮನೆ' ಮತ್ತು 'ನನ್ನೂರು' ಕೃತಿಗಳಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾರೆ. ಜೀವನ ದೃಷ್ಟಿಗೆ ಹೆಚ್ಚು ಒತ್ತುಕೊಟ್ಟು ಅಭಿವ್ಯಕ್ತಿಸಿದ ಮತ್ತೊಬ್ಬ ಸಾಹಿತಿ ಎಂದರೆ ಶಿವರಾಮ ಕಾರಂತರು. ಇವರು ಬ್ರಾಹ್ಮಣರಾದ್ದರಿಂದ ಕೋಟ ಸುತ್ತಮುತ್ತಲ ಬ್ರಾಹ್ಮಣರ ಜೀವನವನ್ನೇ ತಮ್ಮ ಬಹುಪಾಲು ಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಗ್ರಾಮೀಣ ಜೀವನಕ್ಕೆ ಸಂಬಂಧಿಸಿದಂತೆ 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಚೋಮನ ದುಡಿ', 'ನಂಬಿದವರ ನಾಕನರಕ', 'ಮೂಕಜ್ಜಿಯ ಕನಸುಗಳು' ಇವೇ ಮೊದಲಾದ ಕೃತಿಗಳಲ್ಲಿ ಹೆಚ್ಚು ವಿವರಗಳು ದೊರೆಯುತ್ತವೆ. ಆದರೆ ಉಳಿದ ಅವರ ಎಲ್ಲ ಕೃತಿಗಳಲ್ಲಿಯೂ ಒಂದಲ್ಲ ಒಂದು ಸಂದರ್ಭದಲ್ಲಿ ಪ್ರಾದೇಶಿಕ ಚಿತ್ರಣ ಕಂಡುಬರುತ್ತದೆ.

ಮೇಲೆ ಹೇಳಿದ ಮೂವರು ಸಾಹಿತಿಗಳ ಜಾಡಿನಲ್ಲಿ ಗೊರೂರರವರು ಸಾಗಿ ಕುವೆಂಪು ಚಿತ್ರಿಸಿದ ಜೀವನದ ಗಾಢ ಅನುಭವ, ಕಲಾತ್ಮಕ ಸಿದ್ಧಿ ಹಾಗೂ ಕಾರಂತರು ಚಿತ್ರಿಸಿದ ಜೀವನ ಕಾಳಜಿ ಗೊರೂರರವರಲ್ಲಿಯೂ ಗುರುತಿಸಬಹುದಾಗಿದೆ. ನಾಗೇಗೌಡರಂತೆ ಗ್ರಾಮಜೀವನ ಸೂಕ್ಷ್ಮ ವಿವರಗಳನ್ನು ನಿತ್ಯದ ವ್ಯವಹಾರವನ್ನು ಗೊರೂರರವರು ತಮ್ಮ ಕೃತಿಗಳಲ್ಲಿ ನೀಡಿದ್ದಾರೆ. ಮೇಲಿನ ಸಾಹಿತಿಗಳು ಕಾದಂಬರಿ, ವ್ಯಕ್ತಿ ಚಿತ್ರ, ಪ್ರಾದೇಶಿಕ ಚಿತ್ರಗಳಲ್ಲಿ ಗ್ರಾಮೀಣ ಜೀವನವನ್ನು ವಿವರಿಸಲು ಸಾಧ್ಯವಾದರೆ, ಗೊರೂರರವರಿಗೆ ಅವರ ಉಳಿದೆಲ್ಲ ಮಾಧ್ಯಮಗಳಿಗಿಂತ ಪ್ರಬಂಧ ಮಾಧ್ಯಮದಲ್ಲಿ ಸಾಧ್ಯವಾಯಿತು. ಒಟ್ಟಾರೆಯಾಗಿ ಗೊರೂರರವರ ಕಟ್ಟಾ ಗಾಂಧೀವಾದಿತ್ವ ಅವರ ಕಾದಂಬರಿಗಳನ್ನು ದುರಂತಕ್ಕೆ ಈಡು ಮಾಡುವುದಿಲ್ಲ. ಆದರ್ಶಮಯವಾಗಿಯೇ ಮುಕ್ತಾಯವಾಗುತ್ತವೆ. ಗೊರೂರರವರ ಎಲ್ಲಾ ಕಾದಂಬರಿಗಳು ಚೆನ್ನಾಗಿ ಓದಿಸಿ ಕೊಂಡು ಹೋಗುತ್ತವೆ. ಹರಿಜನರ ಸಮಸ್ಯೆಯನ್ನು ಕುರಿತು ಹೇಳುವಾಗ, ರಾಜಕೀಯ ವಿಡಂಬನೆ

ಮೊದಲಾದ ವಿಷಯಗಳಲ್ಲಿ, ಉಳಿದ ಕಾದಂಬರಿಕಾರರಿಗಿಂತ ಸಂಪೂರ್ಣ ಭಿನ್ನರಾಗಿ, ವಿಶಿಷ್ಟತೆಯನ್ನು ಮೆರೆಯುತ್ತಾರೆ. ತಮ್ಮ ಪರಿಸರವನ್ನು ಇವರಷ್ಟರ ಮಟ್ಟಿಗೆ ಬಳಸಿಕೊಂಡ ಲೇಖಕರು ಬಹಳ ಅಪರೂಪ ಎಂದು ಹೇಳಬಹುದು.

ಗೊರೂರರವರ ಪಾತ್ರಗಳು ಸಿದ್ಧಪಡಿಸಿದ ಪಾತ್ರಗಳಲ್ಲ. ಅವು ತಾವಾಗಿ ರೂಪಗೊಂಡ ಪಾತ್ರಗಳು. ಉದಾಹರಣೆಗೆ 'ಪುನರ್ಜನ್ಮ' ಕಾದಂಬರಿಯಲ್ಲಿ ಕಂಡುಬರುವ ಗೋಪಾಲ ಹಾಗೂ ವತ್ಸಲೆಯ ಪಾತ್ರ. ಗೋಪಾಲ ತನ್ನ ತಾಯಿಯ ತ್ಯಾಗದಿಂದ ವಿದ್ಯಾವಂತನಾದ. ಸಂಗೀತದ ಆಸಕ್ತಿಯಿಂದ ಶ್ರೀಮಂತರ ಮಗಳಾದ ವತ್ಸಲೆಯನ್ನು ವಿವಾಹವಾಗುತ್ತಾನೆ. ನಗರದಲ್ಲಿ ತನ್ನ ಜೀವನವನ್ನು ಪ್ರಾರಂಭಿಸುತ್ತಾನೆ. ನಗರ ಜೀವನದ ಕೃತ್ರಿಮಕ್ಕೆ ಬೇಸತ್ತು ಗೋಪಾಲ ಹಳ್ಳಿಗೆ ಹಿಂತಿರುಗುತ್ತಾನೆ. ಶ್ರೀಮಂತಿಕೆಯ ಸೊಕ್ಕಿನಲ್ಲಿ ನಡೆದುಕೊಳ್ಳುತ್ತಿದ್ದ ವತ್ಸಲೆ ಹಳ್ಳಿಯವರ ಪಾಲಿಗೆ ನಿಕೃಷ್ಟ ವ್ಯಕ್ತಿಯಾಗಿ ಕಾಣುತ್ತಾಳೆ. ಆದರೆ ಸ್ವಾತಂತ್ರ್ಯದ ಚಳುವಳಿಯ ಕಾವು ತೀವ್ರವಾಗಿ ಗೋಪಾಲನ ಹಳ್ಳಿಯ ಕಡೆಗೂ ಬೀಸಿ ಬಂದಾಗ ವಿದ್ಯಾವಂತ ಗೋಪಾಲ ಮನೆ ಮಠ ಕುಟುಂಬವನ್ನು ಬಿಟ್ಟು ಚಳುವಳಿಗೆ ಧುಮುಕಿ ಚಳುವಳಿಯಲ್ಲಿಯೇ ಮುಂದಾಗುತ್ತಾನೆ. ವತ್ಸಲೆ ತನ್ನ ಗಂಡನ ಮನಸ್ಸಿನ ನಿರ್ಧಾರವನ್ನು ಅರ್ಥಮಾಡಿಕೊಂಡು ತಾನು ಸಹ ಚಳುವಳಿಯಲ್ಲಿ ಸಕ್ರೀಯವಾಗಿ ಕ್ರಿಯಾಶೀಲಳಾಗುವುದಕ್ಕೆ ನಿರ್ಧರಿಸುತ್ತಾಳೆ. ತನ್ನ ಶ್ರೀಮಂತಿಕೆಯ ಪ್ರತೀಕವಾದ ಎಲ್ಲ ಒಡವೆಗಳನ್ನು, ಸಿರಿಯನ್ನು ಸ್ವಾತಂತ್ರ್ಯ ಚಳುವಳಿಯ ಸ್ವಯಂ ಸೇವಕರಿಗೆ ಸಮರ್ಪಿಸಿ ವತ್ಸಲೆ ತೋರಿಸುವ ರಾಷ್ಟ್ರದ ಭಕ್ತಿ ಮನನೀಯವಾದದ್ದು. ಗಾಂಧೀಜಿಯವರು ಪ್ರಾರಂಭಿಸಿದ ಚಳುವಳಿ ಎಷ್ಟು ಪರಿಣಾಮಕಾರಿಯಾದದ್ದು ಎಂಬುದಕ್ಕೆ ಗೋಪಾಲ ಹಾಗೂ ವತ್ಸಲೆಯಲ್ಲಿ ಆದ ಮನೋ ಪರಿವರ್ತನೆಯೇ ಸ್ಪಷ್ಟ ಸಾಕ್ಷಿಯಾಗಿದೆ. ಈ ದೃಷ್ಟಿಯಲ್ಲಿ ಗೊರೂರರವರು ಕಾದಂಬರಿಗೆ ಕೊಟ್ಟಿರುವ 'ಪುನರ್ಜನ್ಮ' ಎಂಬ ಹೆಸರು ಅರ್ಥಪೂರ್ಣ ವಾಗಿದೆ. ವ್ಯಕ್ತಿಯ ಗುಣಮನೋಧರ್ಮದ ಪರಿವರ್ತನೆಯೇ ಅರ್ಥಪೂರ್ಣವಾದ 'ಪುನರ್ಜನ್ಮ' ಎಂದು ಗೊರೂರರವರು ವ್ಯಾಖ್ಯಾನಿಸಿ ಹೇಳುವುದು ನಿಜವಾಗಿಯೂ ಪುನರ್ಜನ್ಮದ ಕಲ್ಪನೆಗೆ ವಿಶೇಷತೆ ತಂದು ಕೊಟ್ಟಂತೆ ಆಗಿದೆ. ಇಲ್ಲಿ ಗೊರೂರರವರ ಪಾತ್ರ ಚಿತ್ರಣ ಸಂದರ್ಭ ಸನ್ನಿವೇಶಕ್ಕೆ ಅನುಗುಣವಾಗಿ ಸಹಜ ರೀತಿಯಲ್ಲಿ ರೂಪಾಂತರ ಹೊಂದಿರುವುದು ಪಾತ್ರ ಸೃಷ್ಟಿಯ ದೃಷ್ಟಿಯಿಂದ ಗಮನಾರ್ಹವಾದದ್ದು. ಈ ಕಾದಂಬರಿಯಲ್ಲಿ ಪಾತ್ರಗಳ ಮನೋಧರ್ಮ ಕೃತಿಯನ್ನು ಓದಿ ಮುಗಿಸಿದ ಮೇಲೆಯೂ ಓದುಗರ ಮನಸ್ಸನ್ನು ಕಾಡುತ್ತದೆ. ಇಂತಹ ಕಾಡುವ ಕ್ರಿಯೆ ಇರುವುದರಿಂದಲೇ ಗೊರೂರರವರ ಕಾದಂಬರಿಗಳನ್ನು ಸಾಹಿತ್ಯ ದೃಷ್ಟಿಯಿಂದ ಉತ್ತಮ ಕೃತಿಗಳೆಂದು ಹೇಳಬಹುದು. ಗೊರೂರರವರ ಕಥನ ಕಲೆಯ ಸೊಗಸು - ಅವರು ಹುಟ್ಟು ಕತೆಗಾರರು ಎಂಬುದನ್ನು 'ಪುನರ್ಜನ್ಮ' ಕೃತಿಯ ಮೂಲಕ ಖಚಿತ ಮಾಡಿಕೊಳ್ಳಬಹುದು.

ಗೊರೂರರವರ ಒಂದು ಪಾತ್ರ, ಒಂದು ಕೃತಿ ಯಾವುದೇ ರೀತಿಯ ಸಮಗ್ರ ದರ್ಶನವನ್ನು ಪ್ರತಿಬಿಂಬಿಸಲಾಗದಿದ್ದರೂ ಒಂದೊಂದು ಪಾತ್ರವೂ ಜೀವನದ ಸಮಾಜದ ಒಂದೊಂದು ವೈವಿಧ್ಯತೆಯನ್ನು

ಪ್ರತಿಬಿಂಬಿಸುವ ಕಾರ್ಯದಲ್ಲಿ ಯಶಸ್ವಿಯಾಗಿವೆ. ಗೊರೂರರವರ ಕೃತಿಗಳಲ್ಲಿ ಕಂಡುಬರುವ ಕಲ್ಪನೆ ವಾಸ್ತವ ಸತ್ಯದ ನೆಲಗಟ್ಟಿನ ಮೇಲೆ ರೂಪಿತವಾಗಿದೆ ಎಂಬುದನ್ನು ಅವರ 'ಮೆರವಣಿಗೆ' ಕಾದಂಬರಿಯಲ್ಲಿ ಚೆನ್ನಾಗಿ ಮನಗಾಣಬಹುದು. ಈ ಕೃತಿಯಲ್ಲಿ ಗೊರೂರರವರು ಸ್ವಾನುಭವವನ್ನು ಪರಂಪರೆಯ ಅಂಶಗಳೊಂದಿಗೆ ಹೊಂದಾಣಿಕೆ ಮಾಡಿರುವುದರಲ್ಲಿ ಯಶಸ್ವಿಯಾಗಿದ್ದಾರೆ. ಪರಂಪರೆಯಲ್ಲಿ ಕಂಡುಬರುವ ಬದುಕಿನ ಮೌಲ್ಯಕ್ಕೆ ಗೊರೂರರವರು ಹೆಚ್ಚಿನ ಮಾನ್ಯತೆಯನ್ನು ಕೊಡುತ್ತಾರೆ.

ಬದುಕು ಒಂದು ಮೆರವಣಿಗೆ ಸಮಾಜದ ಸ್ಥಿತಿ ಗತಿ ಬಿಂಬದ ಒಂದು ಕುತೂಹಲದ ಮೆರವಣಿಗೆ ಎಂಬ ಅಂಶವನ್ನು ಗೊರೂರರವರು 'ಮೆರವಣಿಗೆ' ಕೃತಿಯಲ್ಲಿ ಮನೋಜ್ಞವಾಗಿ ರೂಪಿಸಿದ್ದಾರೆ. ಬದುಕಿನಲ್ಲಿ ಸಮಾಜದಲ್ಲಿ ಕಲಿಯಬಹುದಾದ ಪಾಠ ಅನೂಹ್ಯ ಎಂಬುದನ್ನು ಈ ಕೃತಿಯ ಮೂಲಕ ಅರಿಯಬಹುದು. ಗೊರೂರರವರಿಗೆ ಬದುಕಿನ ನಿಗೂಢ ತತ್ತ್ವಗಳನ್ನು ಬಿಡಿಸುವುದರಲ್ಲಿ ಇರುವ ಆಸಕ್ತಿಗಿಂತ ಸಾಮಾನ್ಯ ಬದುಕಿನ ವೈವಿಧ್ಯತೆಯನ್ನು ಸರಳ ರೀತಿಯಲ್ಲಿ ನಿರೂಪಿಸುವುದರಲ್ಲಿ ಹೆಚ್ಚು ಆಸಕ್ತಿ ಇರುವುದನ್ನು ಅವರ ಕೃತಿಗಳ ಮೂಲಕ ತಿಳಿಯಬಹುದು. 'ಮೆರವಣಿಗೆ' ಕೃತಿಯಲ್ಲಿ ಬದುಕಿನ ಹಲವು ಅನುಭವಗಳು ಪ್ರತ್ಯೇಕವಾಗಿ ಎಷ್ಟು ಆಕರ್ಷಕವಾಗಿದೆಯೋ ಈ ಎಲ್ಲ ಅನುಭವಗಳ ಬಂಧನದಲ್ಲಿಯೂ ವಿಶಿಷ್ಟ ಆಕರ್ಷಣೆಯನ್ನು ಕಾಣಬಹುದು. ಇದಕ್ಕೆ 'ಮೆರವಣಿಗೆ' ಕೃತಿ ಒಳ್ಳೆಯ ಉದಾಹರಣೆಯಾಗಿದೆ. ಸಾಂಸ್ಕೃತಿಕ ಜೀವನ, ಸ್ವಾತಂತ್ರ್ಯ ಚಳುವಳಿಯ ಮೇಲ್ಮೈ ಎರಡನ್ನು ಉತ್ತಮ ರೀತಿಯಲ್ಲಿ ಸಮ್ಮಿಶ್ರ ಮಾಡಿ ಕತೆಯ ಹಂದರವನ್ನು ಗೊರೂರರವರು ಚಿತ್ರಿಸಿರುವುದು ಅವರ ಕೃತಿಗಳ ಮೂಲಕ ಸ್ಪಷ್ಟವಾಗುತ್ತದೆ. ಇಂತಹ ಕೃತಿಗಳು ವ್ಯಕ್ತಿತ್ವ ವಿಕಾಸಕ್ಕೆ ಪ್ರೇರಕವಾಗಬಹುದು - ಬೆಳಕಾಗಬಹುದು. ಈ ಮಾತು ಗೊರೂರರವರ ಎಲ್ಲ ಕೃತಿಗಳಿಗೂ ಬಹುಮಟ್ಟಿಗೆ ಅನ್ವಯವಾಗುತ್ತದೆ.

ಜನಪದ ಹೆಣ್ಣು ಕಂದನನ್ನು ಲಾಲಿಸಿ ಪೋಷಿಸಿ ಬೆಳಸುವಂತೆ ಗೊರೂರರವರು ಸಹ ತಮ್ಮ ಪ್ರಾದೇಶಿಕ ಕೃತಿಗಳ ಮೂಲಕ ವ್ಯಕ್ತಿ ವಿಕಾಸವನ್ನು ಸರಳ ಸುಂದರ ರೀತಿಯಲ್ಲಿ ಸಮರ್ಥ ರೀತಿಯಲ್ಲಿ ಸಾಧಿಸಿದ್ದಾರೆ. ಅರಿವು, ಆನಂದ ಸಾಹಿತ್ಯದ ಮೂಲೋದ್ದೇಶ ಎಂಬುದನ್ನು ಗೊರೂರರವರ ಕೃತಿಗಳ ಮೂಲಕ ಖಚಿತ ಮಾಡಿಕೊಳ್ಳಬಹುದು. ಗೊರೂರರವರ ಸಾಹಿತ್ಯದ ಬೇರು ಜನಪದ ಸಂಸ್ಕೃತಿಯಲ್ಲಿ ಉಳಿದು ಪರಿಸರದ ಬದುಕಿನ ಚಿತ್ರದೊಂದಿಗೆ ಬೆಳೆದು ಮಾನವತೆಯ ಸಾರ್ಥಕತೆಯಲ್ಲಿ ಪುಷ್ಪಿತವಾಗಿದೆ ಎಂಬ ಮಾತನ್ನು ನಿಸ್ಸಂಕೋಚವಾಗಿ ಹೇಳಬಹುದು.

ಗ್ರಾಮೀಣ ಸಮಾಜದ ಅನಕ್ಷರತೆಯ ವಿಷಯವನ್ನು ಪ್ರಸ್ತಾಪಿಸುವ ಸಮಯದಲ್ಲಿ ಗೊರೂರರವರು ಆಡುವ ಮಾತು ಗಮನಾರ್ಹ. 'ಮೆರವಣಿಗೆ' ಕೃತಿಯಲ್ಲಿ ಕಂಡುಬರುವ ಈ ಮಾತುಗಳು ಉತ್ತಮ ಉದಾಹರಣೆಯಾಗಿವೆ. "ಆ ನೆರೆಯುವ ವಿದ್ವಾಂಸರೆಲ್ಲಾ ಸರಸ್ವತಿಯ ಅವತಾರಗಳೇ. ಒಬ್ಬನು ಮಿತಾಕ್ಷರೀ, ಒಬ್ಬನು ಹತಾಕ್ಷರೀ, ಒಬ್ಬನು ಅಕ್ಷರ ಲಂಬಕ, ಒಬ್ಬನು ಅಕ್ಷರ ಹಿಂಸಕ, ಇನ್ನೊಬ್ಬನು

ಅಕ್ಷರ ಭಕ್ಷಕ. ಯಾರ ಬಾಯಲ್ಲೂ ಮಾತುಗಳು ಸರಿಯಾಗಿ ಹೊರಡುವುದಿಲ್ಲ. ಒಬ್ಬನ ಕೈಯಲ್ಲಿ ರುಜು ಹಾಕು ಎಂದು ಕಡ್ಡಿ ಕೊಟ್ಟರೆ ತೀರಿತು. ಮುಖವನ್ನು ವಿಕಾರ ಮಾಡಿಕೊಂಡು ಕಾಗದ ಹರಿಯುವಂತೆ ಕಡ್ಡಿಯಿಂದ ಸದ್ದು ಮಾಡುತ್ತಾ ರೊಯ್ ಶಬ್ದ ಹೊರಡಿಸುತ್ತಾನೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು. ೫) ಈ ಮಾತಿನ ಧಾಟಿಯಲ್ಲಿಯೇ ಹಾಸ್ಯದ ಜೊತೆಗೆ ಅನಕ್ಷರತೆಯ ಸ್ಥಿರಚಿತ್ರ ಒಡಮೂಡಿ ಬಂದಿದೆ.

ಗೊರೂರವರು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಕೊಡುವ ವಿಚಾರಧಾರೆ ಅತ್ಯಂತ ಸೂಕ್ತವಾದದ್ದು. ಶಿಕ್ಷಣ ವ್ಯಕ್ತಿ ವಿಕಾಸಕ್ಕೆ ಕಾರಣವಾದಂತೆ ಪರಿಸರದ ಪ್ರಗತಿಗೂ ಕಾರಣವಾಗಬೇಕು ಎಂಬ ಗಾಂಧಿ ತತ್ತ್ವವನ್ನು ನಂಬಿ ಅದರ ಅನುಷ್ಠಾನದಲ್ಲಿ ದುಡಿದ ವ್ಯಕ್ತಿಗಳಲ್ಲಿ ಗೊರೂರವರು ಒಬ್ಬರಾಗಿದ್ದಾರೆ. ಹಳ್ಳಿಯನ್ನು ರಾಷ್ಟ್ರದ ತಾಯಿ ಬೇರು ಎಂದು ಕರೆದಾಗ ಹಳ್ಳಿಗಾಡಿನಲ್ಲಿ ಯೋಗ್ಯವಾದ ಶಿಕ್ಷಣ ಪ್ರಸಾರವಾಗಬೇಕು ಎಂಬುದು ಲೇಖಕರ ಅಭಿಪ್ರಾಯ. ಕಲಿಯುವ ವ್ಯಕ್ತಿ ಕಲಿಸುವ ವ್ಯಕ್ತಿ ಕಲಿಯುವ ಪರಿಸರ ಇವುಗಳಲ್ಲಿ ಸೂಕ್ತ ಸುಧಾರಣೆ ಆಗಬೇಕು ಎಂಬುದು ಗೊರೂರವರ ಆಶಯ. ಅಧಿಕಾರಿಗಳ ಯಾವುದೇ ರೀತಿಯ ದರ್ಪಗಳಿಂದ ಉತ್ತಮ ಶಿಕ್ಷಣ ಸಾಧಿತವಾಗಲಾರದು ಎಂಬ ಸತ್ಯಾಂಶವನ್ನು ಗೊರೂರವರು ತಮ್ಮ ಕೃತಿಗಳಲ್ಲಿ ಪ್ರಾಸಂಗಿಕವಾಗಿ ತಿಳಿಸಿದ್ದಾರೆ. 'ಮೆರವಣಿಗೆ' ಕೃತಿಯಲ್ಲಿಯೂ ಗೊರೂರವರು ಈ ಅಭಿಪ್ರಾಯವನ್ನು ಅನಾವರಣಗೊಳಿಸಿದ್ದಾರೆ.

ಹಳ್ಳಿಯಲ್ಲಿ ಉಳಿದು ರಾಷ್ಟ್ರೀಯ ಪ್ರಜ್ಞೆಯನ್ನು ಗ್ರಾಮೀಣ ಪರಿಸರದಲ್ಲಿ ಮೂಡಿಸುವುದರಲ್ಲಿ ಗೊರೂರವರು 'ಹೇಮಾವತಿ' ಕಾದಂಬರಿಯಲ್ಲಿ ಯಶಸ್ವಿಗಳಾಗಿರುವುದನ್ನು ಕಾಣಬಹುದು. ಗೊರೂರವರು ಹೇಳಿರುವ ಹಳ್ಳಿ ಮಲ್ಲಿಗೆಹಳ್ಳಿಯಾಗಿರಬಹುದು, ಹೊಸ ಅಗ್ರಹಾರ ಆಗಿರಬಹುದು, ನಮ್ಮೂರು ಎನಿಸಿಕೊಂಡಿರುವ ಗೊರೂರೇ ಆಗಿರಬಹುದು. ಗೊರೂರವರಿಗೆ ಹೇಮಾವತಿ ಹೊಳೆ ಅದರ ಪರಿಸರದ ಬದುಕು ಅವರ ಸಾಹಿತ್ಯ ಸೃಷ್ಟಿಗೆ ಜೀವನಾಡಿಯಾಗಿದೆ. 'ಹೇಮಾವತಿ' ಕಾದಂಬರಿಯಲ್ಲಿ ರಾಜಕೀಯ ದಾಸ್ಯವನ್ನು ಕಳಿಯುವುದು ಒಂದು ಗುರಿಯಾದರೆ ಅದರ ಜೊತೆಗೆ ಕಂದಾಚಾರಗಳನ್ನು ಅಂಧ ಸಂಪ್ರದಾಯಗಳನ್ನು ಕಳಿಯುವುದರಲ್ಲಿ ಗೊರೂರವರು ತೋರಿಸುವ ಉತ್ಸಾಹ ನಿಚ್ಚಳವಾಗಿದೆ. 'ಹೇಮಾವತಿ' ಕೃತಿಯಲ್ಲಿ ಹೇಮಾವತಿಯ ಕಷ್ಟದ ಬದುಕನ್ನು ಕಂಡಾಗ ಓದುಗನ ಮನಸ್ಸು ತೀವ್ರವಾಗಿ ಮಿಡಿಯುತ್ತದೆ. ಕೃತಿಯ ಅಂತ್ಯದಲ್ಲಿ ಹೇಮಾವತಿ ಕಷ್ಟದಿಂದ ಮುಕ್ತಳಾದಳು ಎಂಬ ಮಾತು ಓದುಗರಿಗೆ ಸಹಜವಾಗಿ ನಿರಾಳವನ್ನು ತಂದುಕೊಡುತ್ತದೆ. ಈ ಕಾದಂಬರಿಯಲ್ಲಿ ಕಂಡುಬರುವ ಪೆರುಮಾಳರು ವಿಶಿಷ್ಟ ವ್ಯಕ್ತಿಗಳಾಗಿದ್ದಾರೆ. ಇವರು ಸಂಗೀತ ಕಲೆಯಲ್ಲಿ ಪರಿಣಿತರು ಹಾಗೂ ವ್ಯವಸಾಯದಲ್ಲಿ ನಿಷ್ಣಾತರು. ತಮ್ಮ ಭೂಮಿಯನ್ನು ತಮ್ಮ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸಿ ಬಾಳಿದವರು. ರಾಜ ಪೂಜೆ ದೊರೆತರು ಬೇಸಾಯ ವೃತ್ತಿಯನ್ನು ಮತ್ತು ಹಳ್ಳಿಯ ಜೀವನವನ್ನು ಬಿಡದ ನಿಷ್ಠಾವಂತ ವ್ಯಕ್ತಿ ಪೆರುಮಾಳರು.

ಅರಮನೆ ಸಂಬಳ, ಅರಮನೆಯ ಸನ್ಮಾನ ಪೆರುಮಾಳರಿಗೆ ತಮ್ಮ ಕೃಷಿಕ ಬದುಕಿಗೆ ಹೋಲಿಸಿಕೊಂಡಾಗ ಕ್ಷುಲ್ಲಕ ಎನಿಸುತ್ತದೆ. ಗೊರೂರವರು ಗ್ರಾಮೀಣ ಸಮಾಜದಲ್ಲಿ ಇಂಥಹ ನಿಷ್ಠಾವಂತ ವ್ಯಕ್ತಿಗಳನ್ನು ಗುರುತಿಸಿ ತಮ್ಮ ಕೃತಿಯ ಮೂಲಕ ಸಮಾಜಕ್ಕೆ ಪರಿಚಯ ಮಾಡಿಕೊಟ್ಟಿದ್ದಾರೆ. ಪೆರುಮಾಳರಿಗೆ ವಿರುದ್ಧವಾದ ವ್ಯಕ್ತಿ ಸಾಹುಕಾರ ಶಠಾರಿಯವರು. ಸಾಧ್ಯವಾದಷ್ಟು ಊರಿನ ಒಳ್ಳೆಯ ಜಮೀನನ್ನು ಪಡೆದು ಸಾಹುಕಾರಿಕೆಯಲ್ಲಿ ಬೀಗ ಬೇಕು ಎಂಬುದು ಇವರ ಆಸೆ. ಜಮೀನಿನಲ್ಲಿ ದುಡಿಯುವ ಉತ್ಸಾಹ ಇವರಿಗೆ ಕಿಂಚಿತ್ತೂ ಇಲ್ಲ. ಸಜ್ಜನ ಮುಖವಾಡವನ್ನು ಹಾಕಿಕೊಂಡು ಬದುಕುವ ಲಫಂಗ ಸುಬ್ಬಾಭಟ್ಟನು ಈ ಕಾದಂಬರಿಯಲ್ಲಿ ಕಂಡುಬರುತ್ತಾನೆ. ಪಂಚಮನಾಗಿದ್ದರು ಕಾಳ ಕಾಸಿನ ನಿರೀಕ್ಷೆ ಇಲ್ಲದೆ ಜೀತ ಮಾಡುವ ನಿಸ್ಪೃಹ ವ್ಯಕ್ತಿಯನ್ನು ಈ ಕೃತಿಯಲ್ಲಿ ಗುರುತಿಸುತ್ತೇವೆ. ಇಂಥ ವೈವಿಧ್ಯ ಪಾತ್ರಗಳ ಮೂಲಕ ಗೊರೂರವರು ತಮ್ಮ ಜೀವನಾನುಭವವನ್ನು ವ್ಯಕ್ತಪಡಿಸಿದ್ದಾರೆ.

ಗೊರೂರವರು ಜೀವನಾನುಭವದಿಂದ ಪಡೆದ ಜ್ಞಾನ ಸುತ್ತಲ ವ್ಯಕ್ತಿಗಳ ಜೀವನೋದ್ಧಾರಕ್ಕೆ ಒಂದು ಶಕ್ತಿ ಪೂರ್ಣ ಬೆಳಕಾಗಿದೆ. ಪಂಚಮರ ಉದ್ಧಾರ ಆದರ್ಶ ಪೂರ್ಣವಾದ ಕೇವಲ ಭಾಷಣದಿಂದ ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿ ಪಂಚಮರಿಗೆ ವಿದ್ಯೆಯನ್ನು ಕೊಟ್ಟು ಆರೋಗ್ಯದ ವಾತಾವರಣವನ್ನು ತಂದು ಅವರಲ್ಲಿ ಬದುಕುವ ಧೈರ್ಯವನ್ನು ಮೂಡಿಸಿ ಅವರನ್ನು ಪ್ರೀತಿಯಿಂದ ಕಂಡಾಗ ಮಾತ್ರ ಹರಿಜನೋದ್ಧಾರ ಸಾಧಿತವಾಗುತ್ತದೆ ಎಂಬ ಅಂಶವನ್ನು ಗೊರೂರವರು 'ಹೇಮಾವತಿ' ಕಾದಂಬರಿಯಲ್ಲಿ ಸ್ಪಷ್ಟವಾಗಿ ಪಡಿಮೂಡಿಸಿದ್ದಾರೆ. ಗಾಂಧೀಜಿಯವರ ಸಂಪರ್ಕದಿಂದ ಗೊರೂರವರು ಪಡೆದ ಈ ಹರಿಜನೋದ್ಧಾರ ಭಾವನೆಯನ್ನು ಕಾರ್ಯರೂಪಕ್ಕೆ ತಮ್ಮ ಗ್ರಾಮೀಣ ಪರಿಸರದಲ್ಲಿ ತಂದು ತಮ್ಮ ಕೃತಿಗಳ ಮೂಲಕ ಲೇಖಕರು ದಾಖಲಿಸಿದ್ದಾರೆ. ಇದು ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯ ಜತೆಗೆ ಸ್ವದೇಶಿ ಚಳುವಳಿ ಕೂಡಿ ಬಂದಂತೆ ಗ್ರಾಮೀಣ ಉದ್ಧಾರದ ಚಳುವಳಿ, ಹರಿಜನೋದ್ಧಾರದ ಕ್ರಾಂತಿ ಕೂಡಿ ಬಂದಿತ್ತು ಎಂಬುದನ್ನು ಗಾಂಧಿತತ್ತ್ವದ ಅನುಯಾಯಿಗಳಾದ ಗೊರೂರವರು ಈ ತತ್ತ್ವಗಳನ್ನು ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನಕ್ಕೆ ತಂದಿರುವುದು ಮೆಚ್ಚುವ ಸಂಗತಿಯಾಗಿದೆ. ಈ ದೃಷ್ಟಿಯಿಂದ ಗೊರೂರವರನ್ನು ನಿಷ್ಠಾವಂತ ಗಾಂಧಿತತ್ತ್ವದ ಅನುಯಾಯಿ, ಸ್ವಾತಂತ್ರ್ಯ ಹೋರಾಟಗಾರ ಎಂದು ಗುರುತಿಸಬಹುದು. ಗೊರೂರವರು ಗಾಂಧಿತತ್ತ್ವಗಳಿಗೆ ಜೀವತುಂಬಿ ಅವುಗಳನ್ನು ತಮ್ಮ ಕೃತಿಗಳಲ್ಲಿ ಒಂದು ಪಾತ್ರವಾಗಿ ಸೃಷ್ಟಿಸಿರುವುದು ಸ್ಮರಣಾರ್ಹ ಸಂಗತಿಯಾಗಿದೆ. ಈ ಕಾರಣದಿಂದಲೇ ಗೊರೂರವರ ಕೃತಿಗಳಲ್ಲಿ ಇತಿಹಾಸದ ಸಂಗತಿ (ಸ್ವಾತಂತ್ರ್ಯ ಚಳುವಳಿ) ಸಾಹಿತ್ಯದ ಕಂಪಿನಿಂದ ಸಹೃದಯರ ಮನಸ್ಸನ್ನು ಸೂರೆಗೊಂಡಿದೆ.

ದುರಾಸೆಯಲ್ಲಿ ವಿವೇಕವನ್ನು ಕಳೆದುಕೊಂಡ ಬ್ರಾಹ್ಮಣರು ಸಮಾಜಕ್ಕೆ ಕಂಟಕಪ್ರಾಯರು ಎಂಬ ಸಂಗತಿಯನ್ನು ರಾಮಕೃಷ್ಣ, ದೇವಕಿಪ್ರಿಯ ಪಾತ್ರಗಳ ಮೂಲಕ 'ಹೇಮಾವತಿ' ಕಾದಂಬರಿಯಲ್ಲಿ

ಚಿತ್ರಿಸಿದ್ದಾರೆ. ಈ ಕಾದಂಬರಿಯಲ್ಲಿ ಬರುವ ಚೆನ್ನಿಯ ಪಾತ್ರದಲ್ಲಿ ಕಾಣುವ ಸಂಗೀತ ಕಲಾ ವೈಭವ ನಿರಂತರ ಆಸಕ್ತಿಯಿದ್ದರೆ ಯಾರು ಬೇಕಾದರೂ ಕಲಾ ಪರಿಪೂರ್ಣ ವ್ಯಕ್ತಿಗಳು ಆಗಬಹುದು ಎಂಬ ಅಂಶವನ್ನು ನಾವು ಮನಗಾಣಬಹುದು. ಗೊರೂರರವರಲ್ಲಿ ಅನ್ಯಾಯವನ್ನು ಪ್ರತಿಭಟಿಸುವ ಗುಣವನ್ನು ಅವರ ಉಪಹಾಸದ ಹಿನ್ನೆಲೆಯಲ್ಲಿ ಕಾಣುತ್ತೇವೆ. ಹಳ್ಳಿಯ ವಾತಾವರಣದಲ್ಲಿ ಯಾರಾದರೂ ಕೆಟ್ಟರೆ ಹಲವರ ಪಾಲಿಗೆ ಅದು ಸ್ವಾರಸ್ಯದ ಸಂಗತಿ. ಅಂಥವರನ್ನು ಸುದ್ದಿ ಮಾಡಿಕೊಂಡು ಗೇಲಿ ಮಾಡುವುದು ಹಲವರ ಪ್ರವೃತ್ತಿಯಾಗಿದೆ. ಇಂಥಹ ಪ್ರವೃತ್ತಿಯನ್ನು "ನಾಯಿ ಪುನಃ ಪುನಃ ತನ್ನ ವಾಂತಿಗೆ ಹಿಂತಿರುಗಿ ದಂತೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೧೬೫) ಜಿಗುಪ್ಸೆಯ ನಡವಳಿಕೆಯೆಂದು ಗೊರೂರರವರು ಭಾವಿಸಿದ್ದಾರೆ. ಲೇಖಕರು ಸಂಪ್ರದಾಯದ ಅನುಸರಣೆಯಲ್ಲಿ ಧರ್ಮದ ಅನುಸರಣೆಯಲ್ಲಿ ಸಮಾಜದ ಉನ್ನತ ವರ್ಗದವರು ಮಾಡುತ್ತಿರುವ ಶೋಷಣೆಯನ್ನು ಪ್ರಾಸಂಗಿಕವಾಗಿ ತಮ್ಮ ಕೃತಿಗಳಲ್ಲಿ ವಿಚಾರ ಮಾಡಿದ್ದಾರೆ. ಇದಕ್ಕೆ ನಿದರ್ಶನವಾಗಿ ವಿವಾಹಕ್ಕೆ ಗಂಟು ಬಿದ್ದಿರುವ ವರದಕ್ಷಿಣೆಯ ಪೀಡೆಯನ್ನು ಧಾರ್ಮಿಕ ಸಮಾರಂಭಗಳಲ್ಲಿ ಪ್ರತ್ಯಕ್ಷವಾಗಿ ಪುರೋಹಿತರು ಮಾಡುವ ಆರ್ಥಿಕ ಶೋಷಣೆಯನ್ನು ಕಾಣಬಹುದು. ಇಂಥಹ ದುಷ್ಟ ವರ್ತನೆ ಬ್ರಾಹ್ಮಣ ಸಮಾಜದಲ್ಲಿ ನಾವು ಯಥೇಚ್ಛವಾಗಿ ಕಾಣಬಹುದೆಂದು ಗೊರೂರರವರು ಹೇಳಿರುವುದರಲ್ಲಿ ಅವರ ನಿಷ್ಪಕ್ಷಪಾತ ದೃಷ್ಟಿಯನ್ನು ಮೆಚ್ಚಬೇಕು.

ಗೊರೂರರವರ ದೃಷ್ಟಿಯಲ್ಲಿ ಸುಧಾರಣೆ ಎನ್ನುವುದು ವಿವೇಕದ ಜಾಗೃತಿಯಾಗಬೇಕೆ ಹೊರತು ಸಂಪ್ರದಾಯದ ಸದ್ವರ್ತನೆಗಳನ್ನು ಖಂಡಿಸುವ ಹುಚ್ಚುತನ ಆಗಬಾರದು. ಇಂದು ವೈಚಾರಿಕತೆಯ ಸೋಗಿನಲ್ಲಿ ವಿವೇಕವನ್ನು ಕಳೆದುಕೊಂಡ ಅನೇಕ ಮಂದಿ ಸಮಾಜಕ್ಕೆ ಕಂಟಕಪ್ರಾಯರಾಗಿರುವುದನ್ನು ಗಮನಿಸಿ ಗೊರೂರರವರು ಕ್ರಾಂತಿ ದೃಷ್ಟಿಯ ಬಗ್ಗೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಗೊರೂರರವರ 'ಹೇಮಾವತಿ' ಕಾದಂಬರಿಯಂತೆ 'ಊರ್ವಶಿ' ಕಾದಂಬರಿಯು ಸಹ ಹಳ್ಳಿಯ ಮಧ್ಯಮವರ್ಗದ ಜೀವನವನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ. ಈ ಕತೆಯಲ್ಲಿ ಸೀತಾಲಕ್ಷ್ಮಿಯ ಪಾತ್ರ ಮೊದಲಿಗೆ ದುರಂತಕ್ಕೆ ಒಳಗಾದರೂ ನಂತರದಲ್ಲಿ ದುರಂತದ ಅಪವಾದದಿಂದ ಮುಕ್ತಳಾಗಿ ಮಲ್ಲಿಗೆಹಳ್ಳಿಯ ಜನ ಸೇವೆಗಾಗಿ ವೈದ್ಯವನ್ನು ಕಲಿತು ಮುಂದಾಗಿರುವುದನ್ನು ನೋಡುತ್ತೇವೆ. ಈ ಕೃತಿಯಲ್ಲಿ ಸೀತಾಲಕ್ಷ್ಮಿ ವ್ಯಕ್ತಪಡಿಸುವ ಪಶ್ಚಾತ್ತಾಪ ಆಕಸ್ಮಿಕ ದುರಂತಕ್ಕೆ ಒಳಗಾದ ಎಲ್ಲ ವ್ಯಕ್ತಿಗಳಿಗೂ ಎಚ್ಚರ ಕೊಡಬಹುದು, ಸಾತ್ವಿಕ ಧೈರ್ಯವನ್ನು ತುಂಬಿ ಕೊಡಬಹುದು. ಮಹಾಕಾವ್ಯದಲ್ಲಿ ಅಹಲ್ಯೆಯ ಉದ್ಧಾರದ ಕತೆಗಿಂತ ಸೀತಾಲಕ್ಷ್ಮಿಯ ಕತೆ ವಿಶೇಷವಾದದ್ದು ಎಂಬುದನ್ನು ಗೊರೂರರವರು ಸೂಚಿಸಿದ್ದಾರೆ. ಸಮಾಜದಲ್ಲಿ ಪುರುಷ ಸ್ತ್ರೀಯರಿಬ್ಬರಿಗೂ ಸಮಾನವಾದ ನ್ಯಾಯ, ಶಿಕ್ಷೆ ಇಲ್ಲ ಎಂಬುದನ್ನು ದುರಂತಕ್ಕೆ ಒಳಗಾದ ಊರ್ವಶಿಯ ಪಾತ್ರದ ಮೂಲಕ ಗೊರೂರರವರು ಸ್ಪಷ್ಟಪಡಿಸಿದ್ದಾರೆ. ಸೀತಾಲಕ್ಷ್ಮಿಗೆ ಈ ಕಾದಂಬರಿಯಲ್ಲಿ ಶ್ರೀನಿವಾಸ ಮತ್ತು ಕಮಲಮ್ಮನವರು ತೋರಿಸುವ ಸಹಾನುಭೂತಿ, ಕನಿಕರ ಎಷ್ಟು ಗಮನಾರ್ಹವಾದದ್ದೋ ಆಕೆ

ಸಂಗೀತ ಮೂಲಕ ತನ್ನ ನೋವನ್ನು ಮರೆತಿರುವುದು ಅಷ್ಟೇ ವಿಶಿಷ್ಟ ಸಂಗತಿ. ಆಕೆ ಪ್ರಾಣಾಚಾರ್ಯರಿಂದ ಆಯುರ್ವೇದ ವಿದ್ಯೆಯನ್ನು ಕಲಿತು ಮಲ್ಲಿಗೆಹಳ್ಳಿಯಲ್ಲಿ ಜನಸೇವೆಗೆ ನಿಂತಿರುವುದು ಒಂದು ಹೆಣ್ಣು ದಿಟ್ಟತನದಿಂದ ಇಡಬಹುದಾದ ಒಂದು ಆದರ್ಶದ ಹೆಜ್ಜೆಗೆ ಸಾಕ್ಷಿಯಾಗಿದೆ. ಒಂದು ಊರಿನ ಆರಾಧ್ಯ ದೇವತೆ ಎನಿಸಿ ತವರು ಮನೆಗೂ ಅತ್ತೆಯ ಮನೆಗೂ ಒಂದು ಕಾಲಕ್ಕೆ ಬೇಕಾಗಿದ್ದ ಸೀತಾಲಕ್ಷ್ಮಿ ದುರಂತಕ್ಕೆ ಒಳಗಾದಾಗ ಯಾರಿಗೂ ಬೇಡವಾದ ವ್ಯಕ್ತಿಯಾಗಿ ಉಳಿದಾಗ ಗೊರೂರರವರು ಆ ಪಾತ್ರ ಚಿತ್ರಣದಲ್ಲಿ ತೋರಿಸುವ ಪರಿವರ್ತನೆ ಅನನ್ಯವಾಗಿದೆ. ಗೊರೂರರವರು 'ಊರ್ವಶಿ' ಕಾದಂಬರಿಯಲ್ಲಿ ಪುನರುತ್ಥಾನದ ಭಾವನೆಯನ್ನು ತುಂಬಿಕೊಟ್ಟಿದ್ದಾರೆ.

ಹಳೆಯ ಮೈಸೂರು ಕನ್ನಡ ಶುದ್ಧ ಶೈಲಿ ಗೊರೂರರವರ ಗದ್ಯ ಬರಣಿಗೆಯ ವೈಶಿಷ್ಟ್ಯ. ಗೊರೂರರವರಿಗೆ ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳ ನುಡಿಗಟ್ಟುಗಳ ಜತೆಗೆ ಜನಪದ ಗಾದೆಗಳೆಂದರೆ ಬಹಳ ಇಷ್ಟ. ತಮ್ಮ ಬರವಣಿಗೆಯ ಉದ್ದಕ್ಕೂ ಇಂಥ ಗಾದೆ ಮಾತುಗಳನ್ನು ಔಚಿತ್ಯವರಿತು ಬಳಸಿದ್ದಾರೆ. ಪ್ರಾಸಪ್ರಿಯತೆ ಮತ್ತು ವಿನೋದಪ್ರಿಯತೆ ಇವರ ಗದ್ಯ ನಿರೂಪಣೆಯ ಇನ್ನೊಂದು ವೈಶಿಷ್ಟ್ಯ. ಸಮಯವರಿತು ಬಳಸುವ ಹಾಸ್ಯೋಕ್ತಿಗಳು, ಸಮಂಜಸ ಹೋಲಿಕೆಗಳು ಇವರ ಗದ್ಯಕ್ಕೆ ವಿಶೇಷ ಮೆರಗು ಕೊಟ್ಟಿವೆ.

ಹೇಳುವುದನ್ನು ಸ್ಪಷ್ಟವಾಗಿ ಹೇಳುವುದು ಗೊರೂರವರ ಬರವಣಿಗೆಯ ಉದ್ದೇಶ. ಬೇಕೆಂದು ಉದ್ದನೆಯ ವಾಕ್ಯಗಳನ್ನು ಉದ್ಧರಿಸುವುದು, ಕೃತಿಗೆ ಅನವಶ್ಯಕವಾದ ವರ್ಣನೆಗಳನ್ನು ತಂದು ತುರುಕುವುದು, ಕಲ್ಪನೆಗಳನ್ನು ತರಲು ಯತ್ನಿಸುವುದು ಇವು ಗೊರೂರುವರಿಗೆ ಇಷ್ಟವಾಗುದುದು. ಇದರಿಂದಾಗಿ ವಾಕ್ಯ ರಚನೆಯಲ್ಲಿ ಕ್ಲಿಷ್ಟತೆಯಾಗಲಿ, ಅರ್ಥಗೊಂದಲವಾಗಲಿ ಉಂಟಾಗುವುದಿಲ್ಲ. ಖಚಿತವಾದ ವಿಷಯಜ್ಞಾನ, ಲೋಕಾನುಭವ, ಸರಳವಾದ ಭಾಷೆ, ಸರಸವಾದ ನಿರೂಪಣೆ ಈ ಗುಣಗಳಿಂದ ಅವರ ಕೃತಿಗಳು ಓದುಗರಿಗೆ ಪ್ರಿಯವಾಗುತ್ತವೆ.

ಗೊರೂರರವರು ಕಥೆ, ಕಾದಂಬರಿ, ಪ್ರಬಂಧಗಳಲ್ಲಿ ತಮ್ಮ ಸಿದ್ಧ ಹಸ್ತದ ವಿಶೇಷತೆಯನ್ನು ಮೆರೆದಿರುವಂತೆ ಅವರ ಜೀವನ ಚಿತ್ರಗಳು, ಅನುವಾದಿತ ಕೃತಿಗಳು, ಗಾಂಧಿತತ್ತ್ವವನ್ನು ನಿರೂಪಿಸುವ ಕೃತಿಗಳಲ್ಲಿಯೂ ಸಹ ಸಾಹಿತ್ಯಿಕ ಮೌಲ್ಯವನ್ನು ಪೂರ್ಣ ಪ್ರಮಾಣದಲ್ಲಿ ಗುರುತಿಸಬಹುದು. ಗೊರೂರವರ 'ಜಗತ್ತಿನ ಮಹದ್ವ್ಯಕ್ತಿಗಳು', 'ಸತೀ ಕಸ್ತೂರಿ ಬಾ' ಮತ್ತು 'ಮೌಲಾನಾ ಅಬುಲ್ ಕಲಾಂ ಅಜಾದ್' ಕೃತಿಗಳು ಉತ್ತಮ ಜೀವನ ಚಿತ್ರಗಳಾಗಿವೆ. ಈ ವ್ಯಕ್ತಿಗಳಲ್ಲಿ ಗೊರೂರರವರು ಕಂಡಿರುವ ಉದಾತ್ತ ಗುಣಗಳು, ಮಾನವೀಯ ಮೌಲ್ಯಗಳು ಲೇಖಕರ ಸತ್ಯಾನ್ವೇಷಣೆ ಮತ್ತು ಸತ್ತ್ವಾನ್ವೇಷಣೆ ಬುದ್ಧಿಗೆ ಸಾಕ್ಷಿಯಾಗಿದೆ. ಜಗತ್ತಿನ ಮಹದ್ವ್ಯಕ್ತಿಗಳ ಜೀವನದಲ್ಲಿ ಒದಗಿ ಬಂದ ಪರೀಕ್ಷೆಯ ಘಟನೆಗಳನ್ನು ನಿರೂಪಿಸುವಾಗ ಗೊರೂರರವರು ಮಹಾತ್ಮರ ಗುಣಕ್ಕೆ ಮನಮಾರಿ ಭಾವ ಪರವಶರಾಗಿರುವುದನ್ನು ಅವರ

ಕೃತಿಗಳಲ್ಲಿ ಕಾಣುತ್ತೇವೆ. 'ಜಗತ್ತಿನ ಮಹದ್ವ್ಯಕ್ತಿಗಳು' ಕೃತಿಯಲ್ಲಿನ ಬರಹಗಳು 'ಬೊಂಬಾಯಿಯ ಪ್ರಬೋಧಕ' ಎಂಬ ಕನ್ನಡ ಮಾಸಪತ್ರಿಕೆಯಲ್ಲಿ ಆಗಿಂದಾಗ್ಗೆ ಪ್ರಕಟವಾದವು ಎಂದು ತಿಳಿದುಬರುತ್ತದೆ. ಗೊರೂರರವರು ಈ ರೇಖಾಚಿತ್ರಗಳನ್ನು ಓದುವಲ್ಲಿ ಅವರ ಶೈಲಿ ಈ ಮಹನೀಯರ ಮಹಾತ್ಮೆಯನ್ನು ಎಷ್ಟು ಸರಳವಾಗಿ ಪರಿಚಯ ಮಾಡಿಕೊಡುತ್ತದೆ ಎಂಬುದನ್ನು ಗಮನಿಸಬಹುದು. ಏಳು ಲೇಖನಗಳನ್ನು ಕಾಣಬಹುದು. ಅವು ಯಾವುವು? ಎಂದರೆ 'ಮಹಾತ್ಮ ಸಾಕ್ರೆಟೀಸ್', 'ಶೂರನಾದ ಬಿಲ್ಲಾಳು', 'ಮಹಾತ್ಮಾ ಟಾಲ್‌ಸ್ಟಾಯಿ', 'ಅಮೆರಿಕದ ಕೋಟ್ಯಾಧಿಪತಿ ಹೆನ್ರಿ ಫೋರ್ಡ್', 'ಸಿದ್ಧಾರ್ಥನು ಬುದ್ಧನಾದುದು', 'ಜೋನ್ ಆಫ್ ಆರ್ಕ್' ಮತ್ತು 'ಮಹಾತ್ಮಾಗಾಂಧಿ' ಈ ಮಹಾನ್ ವ್ಯಕ್ತಿಗಳಲ್ಲಿ ದೇಶಭಕ್ತರನ್ನು, ಕೋಟ್ಯಾಧಿಪತಿಗಳನ್ನು, ತತ್ತ್ವಜ್ಞಾನಿಗಳನ್ನು, ಆದರ್ಶ ಸಾಹಿತಿಗಳನ್ನು ಕಾಣಬಹುದು. ಮನುಷ್ಯನ ಬದುಕು ಸಾರ್ಥಕವಾಗಬೇಕಾದರೆ ಇಂತಹ ಮಹಾನ್ ವ್ಯಕ್ತಿಗಳ ಜೀವನ ಪರಿಚಯ ಅಗತ್ಯ ಎಂಬುದು 'ಜಗತ್ತಿನ ಮಹದ್ವ್ಯಕ್ತಿಗಳು' ಕೃತಿಯನ್ನು ಓದಿದಾಗ ನಮಗೆ ಮನವರಿಕೆ ಆಗುತ್ತದೆ. ಸಾಕ್ರೆಟೀಸ್ ಸರಳ ಜೀವನವನ್ನು ನಡೆಸಿ ಸತ್ಯ ಪ್ರಿಯತೆಯನ್ನು ತತ್ತ್ವನಿಷ್ಠೆಯನ್ನು ತನ್ನ ಬದುಕಿನ ಮೂಲಕ ಲೋಕಕ್ಕೆ ಸಾರಿದ್ದಾನೆ. ಸಾಕ್ರೆಟೀಸ್‌ನ ತತ್ತ್ವ ವಿರೋಧಿಗಳು ಅವನನ್ನು ವಿಚಾರಣೆಗೆ ಗುರಿಮಾಡಿ ವಿಷ ಉಣಿಸಿ ಸಾಯಿಸಲು ನಿರ್ಧರಿಸುತ್ತಾರೆ. ಈ ಹೃದಯಸ್ಪರ್ಶಿ ಸನ್ನಿವೇಶವನ್ನು ಗೊರೂರರವರು ಚಿತ್ರಿಸಿರುವ ರೀತಿ "ಕೊನೆಯ ದಿವಸವು ಬಂದಿತು. ಸಾಕ್ರೆಟೀಸನಿಗೆ ಸ್ವಲ್ಪವಾಗಲಿ ದುಃಖವಿರಲಿಲ್ಲ. ಅವನ ಶಕ್ತಿಯೂ ಶಾಂತಿಯೂ ಒಂದು ವಿಧವಾದ ಜ್ಯೋತಿಯಾಗಿ ತುರಂಗವನ್ನೆಲ್ಲ ವ್ಯಾಪಿಸಿದಂತೆ ತೋರುತ್ತಿದ್ದಿತು. ಆ ದಿನವೆಲ್ಲ ಅವನು ಸ್ನೇಹಿತರೊಂದಿಗೆ ಪ್ರೇಮದಿಂದ ಮಾತನಾಡಿದನು. ಒಂದು ಸಲ ಕ್ರಿಟೋವು "ನಿನ್ನನ್ನು ಹೇಗೆ ಸಮಾಧಿ ಮಾಡಬೇಕು" ಎಂದು ಕೇಳಿದನು. ಸಾಕ್ರೆಟೀಸನು ನಗುತ್ತಾ "ನನ್ನನ್ನು ನೀವು ಹಿಡಿಯಬಲ್ಲಿರಾದರೆ ಹೇಗೆ ಬೇಕೋ ಹಾಗೆ ಸಮಾಧಿ ಮಾಡಿ. ನಾನು ಹೋದ ಮೇಲೆ ಉಳಿಯುವುದು ನಾನಲ್ಲ. ಬರಿಯ ದೇಹ ಮಾತ್ರ. ಆದುದರಿಂದ ಸಂತೋಷದಿಂದ ಸಂಪ್ರದಾಯವೇನೋ ಅಥವಾ ನಿಮಗೆ ಯಾವುದೇ ಉತ್ತಮವೆಂದು ತೋರುವುದೋ ಹಾಗೆ ಮಾಡಿ" ಎಂದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೫೫; ಪು.೧೭)

ಸ್ಥಿತಪ್ರಜ್ಞ ಸಾಕ್ರೆಟೀಸನ ವ್ಯಕ್ತಿಚಿತ್ರವನ್ನು ಗೊರೂರರವರು ಮುಗಿಸುವ ರೀತಿ ಅಷ್ಟೇ ಪರಿಣಾಮಕಾರಿಯಾಗಿದೆ. "ಸಾಕ್ರೆಟೀಸನು ಪಾಶ್ಚಾತ್ಯ ತತ್ತ್ವ ಪ್ರವಾಹಗಳಿಗೆ ಮೂಲಸ್ಥಾನ. ಈಗ ತತ್ತ್ವಜ್ಞಾನದಿಂದ ಮೋಕ್ಷವನ್ನು ಪಡೆದಿರುವವರೆಲ್ಲರೂ ಸಾಕ್ರೆಟೀಸನಿಗೆ ಋಣಿಗಳು. ಸಾಕ್ರೆಟೀಸನ ಕ್ರಮವನ್ನನುಸರಿಸಿ ಆತನ ಬೋಧನೆಯಿಂದ ಮುಂದುವರಿದು ಪ್ಲೇಟೋ ತಾನೆ ಒಂದು ಘನ ತತ್ತ್ವ ಪ್ರಪಂಚವನ್ನು ನಿರ್ಮಿಸಿದನು. ತತ್ತ್ವಾನ್ವೇಷಣೆ ಎಲ್ಲಿಯವರೆಗೆ ಜಗತ್ತಿನಲ್ಲಿ ನಡೆಯುವುದೋ ಅಲ್ಲಿಯವರೆಗೆ ಸಾಕ್ರೆಟೀಸನ ಹೆಸರು ಪ್ರಪಂಚದಲ್ಲಿ ಶಾಶ್ವತವಾಗಿರುವುದು". (ಅದೇ; ಪು.೧೯) ಸಾಕ್ರೆಟೀಸನ ಜೀವನ ಸಾರವನ್ನು, ಸಾಧನೆಯನ್ನು ಗೊರೂರರವರು ಈ ಅರ್ಥಪೂರ್ಣ ನುಡಿಗಳಲ್ಲಿ ಅಡಗಿಸಿ ಇಟ್ಟಿದ್ದಾರೆ.

'ಮಹಾತ್ಮಾ ಟಾಲ್‌ಸ್ಟಾಯಿ' ಲೇಖನದಲ್ಲಿ ಗೊರೂರರವರು ಮಹಾಪುರುಷನ ಜೀವನವನ್ನು ಹಂತ ಹಂತವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಅವರ ಕೃತಿಗಳ ಹಿನ್ನೆಲೆಯನ್ನು ಸ್ಪಷ್ಟಪಡಿಸಿದ್ದಾರೆ. ಟಾಲ್‌ಸ್ಟಾಯ್ ಬಡವರಿಗೆ ತೋರಿಸಿದ್ದ ಅನುಕಂಪೆ, ರಷ್ಯಾದ ರೈತರೊಡನೆ ಆತ ನಡೆದುಕೊಂಡ ರೀತಿ, ರೈತರಲ್ಲಿ ಟಾಲ್‌ಸ್ಟಾಯ್ ಮೂಡಿಸಿದ ಜಾಗೃತ ಪ್ರಜ್ಞೆ ಅವಿಸ್ಮರಣೀಯವಾದದ್ದು ಎಂಬುದನ್ನು ಗೊರೂರರವರು ಸ್ಪಷ್ಟಪಡಿಸಿದ್ದಾರೆ. "ಆತನು ಯೋಧರಲ್ಲಿ ಯೋಧ; ಸಾಹಿತಿಗಳಲ್ಲಿ ಸಾಹಿತಿ; ವಿಚಾರಪರರಲ್ಲಿ ವಿಚಾರಪರ; ಬಡವರಲ್ಲಿ ಬಡವ; ತ್ಯಾಗಿಗಳಲ್ಲಿ ತ್ಯಾಗಿ; ರೈತರಲ್ಲಿ ರೈತ. ಪ್ರಕೃತಿಯ ಸೌಂದರ್ಯೋಪಾಸಕನೂ ಹೌದು; ಮಾನವರ ಗುಣಗ್ರಾಹಿಯೂ ಹೌದು. ಟಾಲ್‌ಸ್ಟಾಯಿಯ ಬರವಣಿಗೆಯಲ್ಲಿ ಕಂಡುಬರುವ ಜೀವನ ದರ್ಶನ ಮಹಿಮಾಸ್ಪದವಾದುದು. ಆತನು ಧರ್ಮವನ್ನು ಕಂಡುಕೊಂಡ ಕ್ರಮವಂತೂ ಹೇಳಲಸದಳವಾದದ್ದು. "ಎಂದಿಗೂ ಕೋಪಗೊಳ್ಳಬೇಡ, ವ್ಯಭಿಚಾರ ಮಾಡಬೇಡ, ಆಣೆ ಮಾಡಬೇಡ, ಆತ್ಮ ಸಂರಕ್ಷಣೆಗಾಗಿ ಪಶುಬಲವನ್ನು ಉಪಯೋಗಿಸಬೇಡ, ಯುದ್ಧ ಮಾಡಬೇಡ". (ಅದೇ; ಪು.೪೩) ಈ ಪಂಚಶೀಲಗಳು ಗೊರೂರರವರ ಮಾತಿನಲ್ಲಿ ಸೂತ್ರಪ್ರಾಯವಾಗಿ ಬಂದಿವೆ. ಪಾಶ್ಚಾತ್ಯ ಮಹಾಪುರುಷರನ್ನು ಮೆಚ್ಚಿಸುವುದರಲ್ಲಿ ಲೇಖಕರ ಮನಸ್ಸು ಸಂತೃಪ್ತವಾಗಿ ಆ ಮೂಲಕ ಮಾತೃಭೂಮಿಯ ಮುನ್ನಡೆಯನ್ನು ಆಲೋಚಿಸುವ ರಾಷ್ಟ್ರಪ್ರೇಮ 'ಜಗತ್ತಿನ ಮಹದ್ವ್ಯಕ್ತಿಗಳು' ಕೃತಿಯ ಮೂಲಕ ನಮಗೆ ವೇದ್ಯವಾಗುತ್ತದೆ.

ಜೋನ್ ಆಫ್ ಆರ್ಕ್‌ಳನ್ನು ಅತಿಮಾನುಷಳೆಂದು ಭಾವಿಸಿದ ಜನ ಅವಳನ್ನು ದೈವದ್ರೋಹಿ, ಮಾಟಗಾತಿ, ವಿಗ್ರಹಾರಾಧಕಿ ಎಂಬ ಆಪಾದನೆಗಳಿಗೆ ಗುರಿ ಮಾಡಿ ಕೈಯಾರೆ ಬೆಂಕಿ ಇಟ್ಟು ಸುಟ್ಟರು. ಇಂಥಹ ವೀರನಾರಿಯ ಬಗ್ಗೆ ಲೇಖಕರು ಲೇಖನದ ಕೊನೆಯಲ್ಲಿ ಆಡುವ ಮಾತು ಜೋನ್ ಆಫ್ ಆರ್ಕ್‌ಳ ಅಮರತ್ವವನ್ನು ಸಾರಿ ಹೇಳುವ ಶಿಲಾ ಸಂದೇಶವಾಗಿದೆ. "ಜೋನಳು ಫ್ರಾನ್ಸಿನಲ್ಲಿ ಎಬ್ಬಿಸಿದ ಉತ್ಸಾಹದ ಕಿಡಿ ಅವಳೊಡನೆ ಆರಲಿಲ್ಲ. ಅವಳು ಹುತಾತ್ಮಳಾದ ಹತ್ತೊಂಬತ್ತು ವರ್ಷಗಳೊಳಗೆ ಫ್ರೆಂಚರು ಇಂಗ್ಲೀಷರನ್ನು ಫ್ರಾನ್ಸಿನಿಂದ ಓಡಿಸಿದರು. ಯಾರಿಗಾಗಿ ಅವಳು ಪ್ರಾಣವನ್ನು ಕೊಟ್ಟಳೋ ಆ ಚಾರಲ್ಸನು ನಿರುಪದ್ರವನಾಗಿ ಸಿಂಹಾಸನವನ್ನೇರಿದನು. ಆಗ ಚಾರಲ್ಸನು ಪಶ್ಚಾತ್ತಾಪದಿಂದಲೋ ಅಥವಾ ಬಂದಿದ್ದ ಕೆಟ್ಟ ಹೆಸರನ್ನು ಹೋಗಲಾಡಿಸಿಕೊಳ್ಳುವ ಉದ್ದೇಶದಿಂದಲೋ ಜೋನಳ ವಿಚಾರಣೆಯನ್ನು ಮತ್ತೆ ನಡೆಸಿದನು. 'ರೂಯಿನ್'ನಲ್ಲಿ ಆಗ ಬದುಕಿದ್ದವರೆಲ್ಲ ಬಂದು ಸಾಕ್ಷಿ ಹೇಳಿದರು. ಹಿಂದೆ ಅವಳಿಗೆ ವಿರೋಧಿಗಳಾಗಿದ್ದವರೆಲ್ಲ ಈಗ ಅವಳ ಪರವಾಗಿಯೇ ಸಾಕ್ಷಿ ಕೊಟ್ಟರು. ಅದರ ಫಲವಾಗಿ ಕ್ರಿ.ಶ. ೧೪೫೬ರಲ್ಲಿ ಜೋನಳು ನಿರಪರಾಧಿಯೆಂದು ಸಾರಲಾಯಿತು. ಅಂದಿನಿಂದ ಜೋನಳು ಫ್ರಾನ್ಸಿನ ಒಬ್ಬ ರಕ್ಷಾದೇವತೆಯೆಂದು ಪರಿಗಣಿಸಲ್ಪಟ್ಟಳು. ಪೋಪರು ಅವಳಿಗೆ 'ಸೇಂಟ್ ಜೋನ್ ಆಫ್ ಆರ್ಕ್' ಎಂದು ನಾಮಕರಣ ಮಾಡಿ ಚರ್ಚು ಅವಳ ಸದ್ವೃತ್ತಿಯನ್ನು ಒಪ್ಪಿತೆಂಬ ಮುದ್ರೆಯನ್ನು ಹಾಕಿದರು". (ಅದೇ; ಪು. ೧೦೨)

ಗಾಂಧೀಜಿಯವರ ಬದುಕಿನಲ್ಲಿ ಅವರ ಪತ್ನಿ ಕಸ್ತೂರಿ ಬಾ ಅವರ ಪಾತ್ರ ಮಹತ್ತರವಾದುದು. ಆಕೆಯ ಮರಣದ ತರುಣದಲ್ಲಿ ಕನ್ನಡದಲ್ಲಿ ಅವರ ಬಗ್ಗೆ ಒಂದೆರಡು ಕೃತಿಗಳು ಪ್ರಕಟವಾದವು. ಅವುಗಳಲ್ಲಿ ಗೊರೂರರವರ 'ಸತೀ ಕಸ್ತೂರ ಬಾ' ಒಂದಾಗಿದೆ. 'ಸತಿ ಕಸ್ತೂರಿ ಬಾ' ಕೃತಿಯಲ್ಲಿ ಗೊರೂರರವರು ಕಸ್ತೂರಿ ಬಾ ಅವರ ವ್ಯಕ್ತಿತ್ವವನ್ನು ಮನೋಜ್ಞವಾಗಿ ವಿವರಿಸಿದ್ದಾರೆ. ಎಲೆ ಮರೆಯ ಹೂವಿನ ಕಸ್ತೂರಿ ಬಾ ವ್ಯಕ್ತಿತ್ವ ಗೊರೂರರವರ ಕೃತಿಯಲ್ಲಿ ಸುಂದರವಾಗಿ ಅರಳಿದೆ. ಗೊರೂರರವರು ಕಸ್ತೂರಿ ಬಾ ಅವರ ಮರಣಕ್ಕಾಗಿ ಕಂಬನಿಯನ್ನು ಸಮರ್ಪಿಸುವುದರ ಮೂಲಕ ಕೃತಿಯನ್ನು ಪ್ರಾರಂಭಿಸುತ್ತಾರೆ. ಭಾವಪೂರ್ಣವಾದ ಪ್ರಾರಂಭದಿಂದಲೇ ಕೃತಿಯ ಮೌಲ್ಯ ಅಧಿಕವಾಗುತ್ತದೆ. "ಶ್ರೀರಾಮಚಂದ್ರನನ್ನು ಸೀತೆ ಅನುಸರಿಸಿದಂತೆ ಕಸ್ತೂರಿ ಬಾ ಅವರು ಗಾಂಧಿಯನ್ನು ಅನುಸರಿಸಿದರು. ಆಂಜನೇಯ ರಾಮನ ಸೇವೆ ಮಾಡಿದಂತೆ ಗಾಂಧಿಯವರ ಸೇವೆ ಮಾಡಿದರು. ಕೊನೆಗೆ ಸೌಭಾಗ್ಯವತಿಯಾಗಿ ಸುಮಂಗಲಿಯಾಗಿ ಗಂಡನ ತೊಡೆಯ ಮೇಲೆ ತಲೆಯಿಟ್ಟುಕೊಂಡು ನಗುನಗುತ್ತಾ ಪರಮಾತ್ಮನ ಸಾನಿಧ್ಯವನ್ನು ಸೇರಿದರು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೪೪; ಪು.೨) ಗೊರೂರರವರ ಈ ಮಾತುಗಳು ಕಸ್ತೂರಿ ಬಾ ಮತ್ತು ಗಾಂಧಿಯವರ ಸಮಾನ ಮನಸ್ಸಿನ ಸಾರ್ಥಕ ಬದುಕಿಗೆ ಸಾಕ್ಷಿಯಾಗಿದೆ. ಸತಿ-ಪತಿಗಳಿಬ್ಬರು ದೇಶ ಸೇವೆಗೆ ತಮ್ಮ ಬದುಕನ್ನು ಮೀಸಲಿಟ್ಟು ಪುಟಇಟ್ಟಬಂಗಾರದಂತೆ ಕಂಗೊಳಿಸಿದರು. ಗಾಂಧಿಯವರು ಸ್ತ್ರೀಯರನ್ನು ಚಳುವಳಿಗೆ ಸೇರುವಂತೆ ಪ್ರೇರೇಪಿಸಿದರು. ತಮ್ಮ ಪತ್ನಿಗೆ ತಾವಾಗಿ ಹೇಳಿರಲಿಲ್ಲ. ಆಗ ಕಸ್ತೂರಿ ಬಾ ತಾವಾಗಿ ಮುಂದೆ ಬಂದು "ಇದನ್ನೆಲ್ಲಾ ನೀವು ಯಾಕೆ ನನಗೆ ಹೇಳುವುದಿಲ್ಲ. ನನಗೆ ನೋವಾಗುತ್ತದೆ. ಸೆರೆಮನೆಗೆ ಹೋಗಲು ನನಗೆ ಅರ್ಹತೆಯಿಲ್ಲವೇ? ಇತರರು ಯಾವ ಮಾರ್ಗದಲ್ಲಿ ಹೋಗುವಂತೆ ನೀವು ಬಯಸುತ್ತೀರೋ ನಾನೂ ಆ ಮಾರ್ಗವನ್ನೇ ಹಿಡಿಯುತ್ತೇನೆ' ಎಂದರು. (ಅದೇ; ಪು.೧೪) ಕಸ್ತೂರಿ ಬಾ ರವರ ಈ ಮಾತುಗಳನ್ನು ಓದುಗ ಮೆಚ್ಚಿಕೊಳ್ಳುತ್ತಾನೆ. ಕಸ್ತೂರಿ ಬಾ ಆದರ್ಶ ಪತ್ನಿಯಾಗಿ ಗಾಂಧೀಜಿಯವರ ಸೇವಾಕ್ಷೇತ್ರಕ್ಕೆ ವೈಶಾಲ್ಯವನ್ನು ತಂದುಕೊಟ್ಟಳು. ಮಹಾತ್ಮರ ಕಷ್ಟದ ಬದುಕಿನಲ್ಲಿ ಕಸ್ತೂರಿ ಬಾ ಪರಿಪಕ್ವ ವ್ಯಕ್ತಿಯಾದಳು. ಗೊರೂರರವರು ಕಸ್ತೂರಿ ಬಾ ಅವರ ಬದುಕಿನ ಅಂತ್ಯವನ್ನು ಕುರಿತು ಆಡುವ ಮಾತು "ಕಸ್ತೂರಿ ಬಾ ಎಪ್ಪತ್ತನಾಲ್ಕು ವರುಷದ ಆಯಸ್ಸನ್ನು ಕಳೆದರು. ಈ ನಾಡಿಗಾಗಿ ಜೀವ ತೇದರು. ಈ ನಾಡಿನ ಮಕ್ಕಳನ್ನು ಹರಸಿದರು. ಇಂಥವರ ತ್ಯಾಗ ಎಂದಿಗೂ ವ್ಯರ್ಥವಾಗುವುದಿಲ್ಲ." (ಅದೇ; ಪು.೪೦) ಸಣ್ಣ ಪುಸ್ತಕದಲ್ಲಿ ಗೊರೂರರವರು ಕಸ್ತೂರಿ ಬಾ ರವರ ವ್ಯಕ್ತಿತ್ವವನ್ನು ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ.

'ಮೌಲಾನಾ ಅಬುಲ್ ಕಲಾಂ ಆಜಾದ್' ಕೃತಿ ದೇಶಭಕ್ತ ಆಜಾದ್‌ರ ಬದುಕನ್ನು ಸಮರ್ಥ ರೀತಿಯಲ್ಲಿ ಪರಿಚಯಿಸುವ ಕೃತಿ. ಕೃತಿಯ ಪ್ರಾರಂಭದಲ್ಲಿ ಆಜಾದ್‌ರವರ ಮನೆತನದ ಹಿರಿಮೆಯನ್ನು ಗೊರೂರರವರು ಪ್ರಸ್ತಾಪಿಸಿರುತ್ತಾರೆ. ಆಜಾದ್‌ರ ಹಿರಿಯರು ಧರ್ಮ ಬೀರುಗಳು. ಧರ್ಮಕ್ಕೆ ವಿರುದ್ಧವಾದದನ್ನು ಪ್ರತಿಭಟಿಸುವ ಮಹಾನ್ ಕಲಿಗಳಾಗಿದ್ದರು. ಆಜಾದ್‌ರವರು ಅರಾಬಿಕ್, ಪರ್ಷಿಯನ್ ಮತ್ತು ಉರ್ದು

ಭಾಷೆಯಲ್ಲಿ ಪ್ರಾವೀಣ್ಯವನ್ನು ಪಡೆದಿದ್ದ ಮಹಾಪಂಡಿತರು. ಇವರು ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಕುರಾನ್‌ನನ್ನು ಕರಗತ ಮಾಡಿಕೊಂಡಿದ್ದರು. ಸಂಪ್ರದಾಯದ ಮನೆತನದಲ್ಲಿ ಆಜಾದ್ ಹುಟ್ಟಿದ್ದರು ಅವರು ಸ್ವತಂತ್ರ ವಿಚಾರಶಕ್ತಿಯಿಂದ ಭರತಖಂಡದ ರಾಜಕೀಯ ಮತ್ತು ರಾಷ್ಟ್ರೀಯ ಮುಸಲ್ಮಾನ ಬಂಧುಗಳಲ್ಲಿ ಹೇಗೆ ಗಣ್ಯರಾದರು ಎಂಬುದನ್ನು ಗೊರೂರರವರು ತಮ್ಮ ಕೃತಿಯಲ್ಲಿ ನಿದರ್ಶನ ಸಹಿತ ಪ್ರತಿಪಾದಿಸಿದ್ದಾರೆ. ಆಜಾದ್‌ರವರಿಗೆ ಎಂದಿಗೂ ಕೋಮುಭಾವನೆ ಸಂಕುಚಿತ ಮನಸ್ಸು ಇದ್ದಿಲ್ಲ ಎಂಬುದನ್ನು ಲೇಖಕರು ಮುಗ್ಧ ಮನಸ್ಸಿನಿಂದ ತಿಳಿಸಿದ್ದಾರೆ. ಆಜಾದ್‌ರವರು ತೋರಿಸುವ ಹೃದಯ ವೈಶಾಲ್ಯ "ಭಾರತದಲ್ಲಿ ಹಿಂದೂ ಧರ್ಮಕ್ಕೆ ಯಾವ ಸ್ಥಾನವೋ ಇಸ್ಲಾಂ ಧರ್ಮಕ್ಕೂ ಅದೇ ಸ್ಥಾನ. ಹಿಂದೂ ಧರ್ಮ ಇಲ್ಲಿಯವರ ಅನೇಕ ಸಾವಿರ ವರ್ಷಗಳ ಮತವಾಗಿದ್ದರೆ ಇಸ್ಲಾಂ ಧರ್ಮವೂ ಒಂದು ಸಾವಿರ ವರ್ಷಗಳ ಮತವಾಗಿದೆ. ಹೇಗೆ ಹಿಂದುವಾದವನು ನಾನು ಭಾರತೀಯ ಹಿಂದೂ ಧರ್ಮದ ಅನುಯಾಯಿ ಎಂದು ಹೆಮ್ಮೆಯಿಂದ ಹೇಳಬಹುದೋ ಹಾಗೆಯೇ ಮುಸಲ್ಮಾನನೂ ನಾನು ಭಾರತೀಯ, ಇಸ್ಲಾಂ ಅನುಯಾಯಿ ಎಂದು ಹೇಳಬಹುದು. ಈ ಆವರಣವನ್ನು ನಾನು ಇನ್ನೂ ಹೆಚ್ಚು ವಿಸ್ತಾರ ಮಾಡುತ್ತೇನೆ. ಭಾರತದ ಕ್ರಿಶ್ಚಿಯನ್ನರೂ ಸಹ, ನಾನು ಭಾರತೀಯ, ಭಾರತದ ಒಂದು ಧರ್ಮವಾದ ಕ್ರಿಸ್ತ ಧರ್ಮವನ್ನು ಅನುಸರಿಸುತ್ತೇನೆ ಎಂದು ಹೇಳಬಹುದು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೫೩; ಪು.೧೦೩-೧೦೪) ಆಜಾದ್‌ರ ಜೀವನ ಚಿತ್ರಣದಲ್ಲಿ ಗೊರೂರರವರು ತೋರಿಸಿರುವ ದೇಶಭಕ್ತಿ ಭಾವನೆ ಎಲ್ಲಾ ಭಾರತೀಯರಿಗೂ ಆದರ್ಶಪ್ರಾಯವಾಗಿದೆ. ಭಾರತದ ಮುಸ್ಲಿಂ ಬಂಧುಗಳಿಗೆ ಅನುಕರಣೀಯವಾಗಿದೆ. ಇಂತಹ ಮಹಾನ್ ವ್ಯಕ್ತಿಗಳ ಚರಿತ್ರೆಯನ್ನು ಗೊರೂರರವರು ಸರಳ ಸುಂದರ ಸಮಗ್ರವಾಗಿ ತಮ್ಮ ಪುಟ್ಟ ಕೃತಿಗಳ ಮೂಲಕ ನೀಡಿರುವುದು ಸಹ ಗೊರೂರರವರ ವಿಶೇಷ ಕನ್ನಡ ಸೇವೆಯಾಗಿದೆ. ಇವರ ಈ ಕೃತಿಗಳ ಶೈಲಿ ಎಷ್ಟು ಆಕರ್ಷಣೀಯವಾಗಿದೆಯೋ ಆ ಕೃತಿಯಲ್ಲಿ ಕಂಡುಬರುವ ಗೊರೂರರವರ ವಿಷಯ ಸಂಗ್ರಹ ಕೌಶಲವನ್ನು ಮೆಚ್ಚಲೇಬೇಕಾಗುತ್ತದೆ.

ಗೊರೂರರವರ ಅನುವಾದಿತ ಕತೆಗಳು ಅವರ ಸ್ವಂತ ಕತೆಗಳಂತೆಯೇ ಸತ್ತ್ವಪೂರ್ಣವಾಗಿದೆ, ಸುಂದರವಾಗಿದೆ. ಕನ್ನಡಗರಿಗೆ ಉತ್ತಮ ಕೃತಿಗಳನ್ನು ಈ ಅನುವಾದಿತ ಕತೆಗಳ ಮೂಲಕ ಗೊರೂರರವರು ಪರಿಚಯ ಮಾಡಿಕೊಟ್ಟಿದ್ದಾರೆ. ಈ ಅನುವಾದಿತ ಕತೆಗಳನ್ನು ಕಂಡಾಗ ಅವರಿಗೆ ಇರುವ ಗುಣಗ್ರಹಣ ಶಕ್ತಿಯ ಹಿರಿಮೆಯನ್ನು ಚೆನ್ನಾಗಿ ಮನಗಾಣಬಹುದು. 'ಪಾಶ್ಚಾತ್ಯರ ಪುರಾತನ ಕಥೆಗಳು' ಎಂಬ ಕಥಾ ಸಂಕಲನವನ್ನು ಗೊರೂರರವರು ಇಂಗ್ಲೀಷ್ ಭಾಷೆಯಿಂದ ಅನುವಾದ ಮಾಡಿದ್ದಾರೆ. 'ಕೊನಷ್ಟೈ ಕತೆಗಳು' ಎಂಬ ಕೃತಿಯನ್ನು ಗೊರೂರರವರು ತಮಿಳು ಭಾಷೆಯಿಂದ ಅನುವಾದಿಸಿದ್ದಾರೆ.

ಈ ಎರಡು ಕೃತಿಗಳಲ್ಲಿ ಕಂಡುಬರುವ ಕತೆಗಳು ವಸ್ತು ರೀತಿಯಿಂದ ವಿಭಿನ್ನವಾಗಿವೆ. ಶೌರ್ಯ, ಶೃಂಗಾರ, ಧರ್ಮಗಳನ್ನು ವಸ್ತುವನ್ನಾಗಿವುಳ್ಳ 'ಪಾಶ್ಚಾತ್ಯರ ಪುರಾತನ ಕಥೆಗಳು' ಅಂದಿನ ಜನತೆಯ

ಬಾಳಿನ ಒಲವನ್ನು, ವಿಚಾರವಂತಿಕೆಯನ್ನು ಪ್ರತಿಬಿಂಬಿಸುತ್ತದೆ. ಈ ಕೃತಿಯಲ್ಲಿ ಆರು ಕತೆಗಳಿವೆ. ಹುಡುಗರಿಗೆ ನೀತಿ ಕತೆಗಳನ್ನು ಹೇಳುವ ಸಂದರ್ಭ ಒದಗಿ ಬಂದಾಗ ಪಾಶ್ಚಾತ್ಯ ಸಾಹಿತ್ಯದಿಂದ ಈ ಕತೆಗಳನ್ನು ಆರಿಸಿರುವುದಾಗಿ ಗೊರೂರವರು ಹೇಳಿರುವ ಮಾತು ಗಮನಾರ್ಹವಾದುದು. ಈ ಕತೆಗಳು ಬೇರೊಂದು ಸಮಾಜದ ಚಿತ್ರಣ ಆಗಿರುವುದರಿಂದ ಇಲ್ಲಿ ಅದರದೇ ಆದ ರೀತಿಯ ವೈವಿಧ್ಯತೆ ಇದೆ. ಪ್ರಪಂಚದ ಬೇರೆ ಜನಾಂಗಗಳ ಆದರ್ಶ ತಿಳುವಳಿಕೆ ಮಕ್ಕಳಿಗೆ ಆಗಬೇಕು ಎಂಬ ಗೊರೂರವರ ಆಸೆ ಅನನ್ಯವಾದುದು. 'ಕಷ್ಟಕ್ಕೆ ಒಳಗಾದ ಪತಿ' ಇದು ಪ್ರಸಿದ್ಧಳಾದ ಜಿನಿವೀವಳ ಕತೆ. ನಮ್ರಳು, ಮಧುರ ಸ್ವಭಾವದವಳು, ಪರಿಶುದ್ಧಿಯೂ, ಮಹಾ ಚಲುವೆಯೂ, ಅಪೂರ್ವ ಗುಣವತಿಯೂ ಆದ ಜಿನಿವೀವಳ ಬದುಕಿನ ಅದೃಷ್ಟದ ವಿಲಾಸ ಕತೆಯ ವಸ್ತು. ಕಥಾನಾಯಕಿ ಜೀವನದಲ್ಲಿ ಅನುಭವಿಸಿದ ನೋವು ತೀವ್ರವಾದದ್ದು. ತನ್ನದಾದ ಯಾವ ತಪ್ಪು ಇಲ್ಲದಿದ್ದರೂ ಬದುಕಿನಲ್ಲಿ ಬಂದ ಕಷ್ಟ ಪರಂಪರೆಯನ್ನು ಎದುರಿಸುವಾಗ ಕ್ರಿಸ್ತನನ್ನು ನೆನಪು ಮಾಡಿಕೊಂಡು ಧೈರ್ಯಶಾಲಿಯಾಗುತ್ತಾಳೆ. ಕಥಾನಾಯಕಿಯ ಗಂಡ ಕತೆಯ ಅಂತ್ಯದಲ್ಲಿ ಪ್ರೇಮದಲ್ಲಿ ನೊಂದು ವಿರಕ್ತನಾದ ಚಿತ್ರ ನಾಯಕಿಯ ಕತೆಯಷ್ಟೇ ಹೃದಯ ಸ್ಪರ್ಶಿಯಾಗಿದೆ. ಸಂಕಷ್ಟಗಳ ನಡುವೆ ಸತಿಪತಿಗಳು ಒಂದಾದರೂ ಎಂಬ ಚಿತ್ರ ಅಷ್ಟೇ ಆಕರ್ಷಕವಾಗಿದೆ. ಕತೆಯಲ್ಲಿ ನಾವು ಉತ್ತಮ ಪಾತ್ರ ಚಿತ್ರಣವನ್ನು ಕಾಣಬಹುದು. ವಿಧಿವಿಲಾಸದ ನಂಬಿಕೆ ಇರುವ ಭಾರತೀಯರಿಗೆ ಈ ಕತೆ ಹೃದಯ ಸ್ಪರ್ಶಿಯಾಗಿದೆ ಎಂಬ ಗೊರೂರವರ ಮಾತು ಪೂರ್ಣ ಸತ್ಯ. ಕತೆಯಲ್ಲಿ ನಿರಾಂಡಬರ ಶೈಲಿಯನ್ನು ಉತ್ತಮ ಪಾತ್ರ ಚಿತ್ರಣವನ್ನು ಗುರುತಿಸಬಹುದು.

'ಮೋಸಗಾರ ಸೇವಕ' ಕತೆ ಸೇವಕನ ಮೋಸವನ್ನು ಸ್ಪಷ್ಟಪಡಿಸುತ್ತದೆ. ದಯಾಗುಣದಿಂದ ಮೂವರು ಖೈದಿಗಳಿಗೆ ರಾಜಕುಮಾರ ಸಹಾಯ ಮಾಡಿ ಗಡಿ ಪಾರಾಗುತ್ತಾನೆ. ಆ ಸಮಯದಲ್ಲಿ ರಾಜಕುಮಾರನ ಸೇವಕನೇ ರಾಜಕುಮಾರನಿಗೆ ಮೋಸ ಮಾಡುತ್ತಾನೆ. ನಂತರ ತನ್ನ ಸಾಹಸ ಚಾತುರ್ಯಗಳಿಂದ ರೋಸ್ವಾಲನು ರಾಜಕುಮಾರಿಯ ಪ್ರೇಮಕ್ಕೆ ಪಾತ್ರನಾಗುತ್ತಾನೆ. ದಯೆ ಮತ್ತು ಪರೋಪಕಾರ ಗುಣಕ್ಕೆ ಎಂದಿಗಾದರೂ ಸತ್ಫಲ ದೊರೆಯುತ್ತದೆ ಎಂಬುದಕ್ಕೆ ಈ ಕತೆ ನಿದರ್ಶನವಾಗಿದೆ. 'ಒಂದು ಪುರಾತನ ಕತೆ'ಯಲ್ಲಿ ನಾಯಕ ನಾಯಕಿ ಪರಸ್ಪರ ಶೌರ್ಯ ಸೌಂದರ್ಯದಿಂದ ಆಕರ್ಷಿತರಾಗಿ ಹಿರಿಯರ ಸಹಾಯ ಇಲ್ಲದೆ ಪರಸ್ಪರ ಅಗಲುತ್ತಾರೆ. ದೇಶಾಂತರಕ್ಕೆ ಹೋದ ಪೀಟರ್ ತನ್ನ ಶೌರ್ಯವನ್ನು ಮೆರೆಯುತ್ತಾನೆ. ಮಾಗ್ದಲೋನ ಸನ್ಯಾಸಿಯಂತೆ ಬಾಳಿ ಕೆಲಕಾಲ ದೀನ ದಲಿತರ ಸೇವೆಯನ್ನು ಮಾಡುತ್ತಾಳೆ. ಕತೆಯ ಕೊನೆಯಲ್ಲಿ ನಾಯಕ ನಾಯಕಿ ಒಂದಾಗುತ್ತಾರೆ. 'ಶೂರ ಸರದಾರ' ಕತೆಯು ಸಹ ಬಹುಮಟ್ಟಿಗೆ ಒಂದು ಪುರಾತನ ಕತೆಯನ್ನು ಹೋಲುತ್ತದೆ. ಸಾಮಾನ್ಯ ಸರದಾರನೊಬ್ಬ ಚೆಲುವೆಯಾದ ರಾಜಕುಮಾರಿಯನ್ನು ತನ್ನ ಶೌರ್ಯ ಸಾಹಸಗಳಿಂದ ಮೆಚ್ಚಿಸುವ ಪ್ರಸಂಗ ಇಲ್ಲಿದೆ. ಈ ಕೃತಿಯ ಉಳಿದೆರಡು ಕತೆಗಳು 'ಸಹನಾಶೀಲಳಾದ ಸತಿ' ಮತ್ತು 'ಗರ್ವಿಷ್ಠನಾದ ದೊರೆ' ಸ್ವಾರಸ್ಯಪೂರ್ಣವಾಗಿದೆ. 'ಸಹನಾಶೀಲಳಾದ ಸತಿ' ಕತೆಯಲ್ಲಿ ಗುಣವತಿಯಾದ ಸತಿಯ ನೋವನ್ನು ಕಾಣಬಹುದು. ಅವಳ ನೋವಿಗೆ ಕಾರಣ ಆಕೆಯ

ಗಂಡ ತಿಳುವಳಿಕೆವುಳ್ಳವನಾದರೂ ಕ್ರೂರಿಯಾಗಿದ್ದ ಎಂಬುದು. ಸತಿಯ ಸಹನೆಯನ್ನು ಮೆಚ್ಚಿ ಪತಿಯ ಕ್ರೂರ ಮನಸ್ಸು ಪರಿವರ್ತನೆಯಾಗಿರುವ ಅಂಶ ಈ ಕತೆಯಲ್ಲಿ ಸುಂದರವಾಗಿ ಮೂಡಿ ಬಂದಿದೆ. 'ಗರ್ವಿಷ್ಠನಾದ ದೊರೆ' ಕತೆಯಲ್ಲಿ ದೊರೆಯ ಗರ್ವವನ್ನು ಇಳಿಸಲು ದೇವದೂತ ಮಾಡಿದ ತಂತ್ರ ಇಲ್ಲಿದೆ. ಮಾನವ ದೈವಕ್ಕೆ ವಿಧೇಯನಾಗಲೇಬೇಕು ಎಂಬಂತ ಸತ್ಯಾಂಶ ಇಲ್ಲಿ ಸ್ಫುಟವಾಗಿದೆ.

'ಕೊನಷ್ಟೈ ಕತೆಗಳು' ಸಮಸ್ತವನ್ನು ಹಾಸ್ಯ ದೃಷ್ಟಿಯಿಂದ ಕಂಡು ಹೊಸ ರೀತಿಯಲ್ಲಿ ಚಿತ್ರಿಸುವ ಕಲೆಯಲ್ಲಿ ಸಿದ್ಧಹಸ್ತರಾದ ರಸಿಕ ಲೇಖಕ ಕೊನಷ್ಟೈ ಅವರ ಕತೆಗಳು ಸಮಾನ ಮನೋಧರ್ಮ ಹೊಂದಿರುವ ಗೊರೂರವರನ್ನು ಆಕರ್ಷಿಸಿರುವುದು ಅತ್ಯಂತ ಸಹಜ ಎನಿಸುತ್ತದೆ. ಗೊರೂರವರ ಹಾಸ್ಯ ಬರವಣಿಗೆಯನ್ನು ಸ್ವಾಗತಿಸಿ ಆನಂದಪಟ್ಟಿರುವ ಸಹೃದಯರು ಕೊನಷ್ಟೈ ಕತೆಗಳನ್ನು ಅದೇ ರೀತಿಯಲ್ಲಿ ಓದಿ ಆನಂದಪಟ್ಟಿದ್ದಾರೆ. 'ಕೊನಷ್ಟೈ ಕತೆಗಳು' ಕೃತಿಯಲ್ಲಿ ಹದಿನೆಂಟು ಕತೆಗಳಿವೆ. 'ಜ್ಯೋತಿಷ್ಯ' ಎಂಬುದು ಸ್ವಾರಸ್ಯಪೂರ್ಣವಾದ ಕತೆ. ಗೆಳತಿಯರ ವಾದ ವಿವಾದದ ಮೂಲಕ ಕತೆ ಪ್ರಾರಂಭವಾಗಿ ಮುಂದೆ ಪ್ರಣಯದ ವೃತ್ತಾಂತವನ್ನು ಕಾಣಬಹುದು. ಜ್ಯೋತಿಷ್ಯರ ಅಂತರಾಳವನ್ನು ಬಯಲಿಗೆ ಎಳೆಯುವ ಪ್ರಯತ್ನವನ್ನು ಈ ಕತೆಯಲ್ಲಿ ಲೇಖಕರು ಮಾಡಿದ್ದಾರೆ. 'ಕಮೀಷನರ ಕೊರಗು' ಕತೆಯಲ್ಲಿ ವಿನೋದ ಪೂರ್ಣ ಶೈಲಿಯನ್ನು ವಿಶೇಷವಾಗಿ ಕಾಣಬಹುದು.

'ಕತೆ ಬರೆಯುವ ರೀತಿ', 'ಅರವತ್ತು ಮೂರು', 'ಪತ್ತೇದಾರಿ', 'ಕುತ್ತಾಲಂ' ಎಂಬ ಕತೆಗಳು ಕೊನಷ್ಟೈ ದಂಪತಿಗಳ ನಡುವಣ ಪ್ರಣಯ ಸಂಸಾರದ ಚಿತ್ರವನ್ನು ಮೋಹಕವಾಗಿ ಹೇಳುತ್ತದೆ. ಇಂಗ್ಲೀಷ್ ವಿದ್ಯಾಭ್ಯಾಸದ ಹುಚ್ಚು ಮೋಹವನ್ನು ಲೇಖಕರು ಇಲ್ಲಿ ಛೇಡಿಸಿದ್ದಾರೆ. 'ಕುತ್ತಾಲಂ' ಕತೆಯಲ್ಲಿ ಸಂಭಾಷಣೆಯ ಸ್ವಾರಸ್ಯವನ್ನು ನಾವು ಕಾಣಬಹುದು. 'ಯಯಾತಿಯ ಯೌವನ', 'ಯಾಗ ಭಂಗ', 'ಸಾವಿರದ ಎರಡನೆಯ ಕತೆ'ಗಳು ಅಪೂರ್ವವಾದ ಕಲ್ಪನೆಯಿಂದ ಕೂಡಿವೆ. ಲೇಖಕರು ಹಿಂದಿನ ಕಾವ್ಯ ಪುರಾಣಗಳನ್ನು ಹಾಸ್ಯದ ಕನ್ನಡಿಯಲ್ಲಿ ನೋಡಿರುವುದು ಇಲ್ಲಿ ನಮಗೆ ಮನವರಿಕೆಯಾಗುತ್ತದೆ. 'ಹಟಮಾರಿ', 'ಸಂಗೀತ' ಕತೆಗಳಲ್ಲಿ ಸಂಗೀತಕ್ಕೆ ಇರುವ ದಿವ್ಯಶಕ್ತಿಯನ್ನು ಅದರ ಅಲೌಕಿಕ ಪ್ರಭಾವದಿಂದ ಮಾನವನ ದೌರ್ಬಲ್ಯಗಳು ಹೇಗೆ ದೂರವಾಗುತ್ತದೆ ಎಂಬುದನ್ನು ಈ ಕತೆಗಳಲ್ಲಿ ಕಾಣಬಹುದು. 'ಉದ್ಯೋಗ' ಕತೆಯಲ್ಲಿ ನಿರುದ್ಯೋಗಿ ಉತ್ಸಾಹಿ ತರುಣನ ಪತ್ತೇದಾರಿ ಕಾರ್ಯ ನಮಗೆ ಪರಿಚಯವಾಗುತ್ತದೆ. ಕತೆಯ ಬೆಳವಣಿಗೆಯಲ್ಲಿ ಅನಿರೀಕ್ಷಿತ ತಿರುವನ್ನು ಗುರುತಿಸಬಹುದು.

'ತಾರಾ ಪೂಜೆ' ಒಂದು ಶ್ರೇಷ್ಠವಾದ ಕತೆ. ಏನೂ ಅರಿಯದ ಒಬ್ಬ ಅಘೋರಂ ಐಯ್ಯರ್ ಅವರ ಪೇಚಾಟವನ್ನು ಈ ಕತೆಯಲ್ಲಿ ಕಾಣಬಹುದು. ತಾರೆಗಳಿಗೆ ತೆರೆಯ ಮೇಲೆ ಇರುವ ಅಪೂರ್ವ ಕಾಂತಿ ಗಾಂಭೀರ್ಯಗಳು ನಿಜ ಜೀವನದಲ್ಲಿ ಇರುವುದಿಲ್ಲ ಎಂಬ ಅರಿವನ್ನು ಕತೆಗಾರ ಈ ಕತೆಯಲ್ಲಿ ಸ್ಪಷ್ಟಪಡಿಸಿದ್ದಾರೆ. 'ವನಮಾಲಿ' ಕತೆಯಲ್ಲಿ ತಾರೆಯರ ಜೀವನದ ಉತ್ತಮ ಮುಖವನ್ನು ಕಾಣಬಹುದು.

ಊರ್ವಶಿಯನ್ನು ಕುರಿತ ಎರಡು ಕತೆಗಳು ನಾಟಕೀಯವಾಗಿವೆ. ಹಾಸ್ಯ ಭೂಮಿಕೆಯಲ್ಲಿ ಎಂತಹ ವಿಚಿತ್ರ ವ್ಯಕ್ತಿಗಳಾಗಿದ್ದರು ಮಾನವೀಯತೆಯನ್ನು ಪಡೆಯಬಹುದು ಎಂಬುದಕ್ಕೆ ಈ ಕತೆ ಸಾಕ್ಷಿಯಾಗಿದೆ. ಒಟ್ಟಿನಲ್ಲಿ 'ಕೊನಷ್ಟೈ ಕತೆಗಳು' ವಸ್ತುತಂತ್ರದಲ್ಲಿ ಹೊಸತನವನ್ನು ಮೂಡಿಸಿದೆ. ಗೊರೂರರವರ ಅನುವಾದ ಕೃತಿಗಳಲ್ಲಿ ಮೂಲ ಕೃತಿಯ ನೈಜತೆ ಪಡಿಯಚ್ಚಾಗಿರುವುದು ವಿಶೇಷವಾದ ಅಂಶ. ಮೂಲಕೃತಿಯ ವಸ್ತುತಂತ್ರವನ್ನು ತಮ್ಮದಾಗಿಸಿಕೊಳ್ಳುವ ಕೌಶಲ್ಯ ಗೊರೂರರವರಿಗೆ ಪೂರ್ಣ ಸಿದ್ಧಿಸಿರುವುದು ಅವರ ಅನುವಾದಗಳಲ್ಲಿ ನಮಗೆ ಮನವರಿಕೆಯಾಗುತ್ತದೆ. ಈ ಕಾರಣದಿಂದಲೇ ಗೊರೂರರವರ ಕೃತಿಗಳು ನೈಜತೆಯ ಶೋಭೆಯಿಂದ ಕಂಗೊಳಿಸಿವೆ.

ಗೊರೂರರವರ 'ಕ್ರೌಂಚ ವಧ' ಮರಾಠಿಯ ಪ್ರಸಿದ್ಧ ಲೇಖಕರಾದ ವಿ.ಎಸ್. ಖಾಂಡೇಕರ್ ಅವರ ಮೂಲ ಕೃತಿಯ ಕನ್ನಡ ಅನುವಾದ ಕೃತಿ. ಐತಿಹಾಸಿಕ ಹಿನ್ನೆಲೆಗಿಂತ ಸಮಾಜದ ತತ್ಕಾಲಿನ ಸಮಸ್ಯೆಗಳ ಚಿತ್ರಣ ಈ ಕೃತಿಯಲ್ಲಿದೆ. 'ಕ್ರೌಂಚ ವಧ' ಕೃತಿ ಬಹುಮಟ್ಟಿನ ಭಾರತೀಯ ಭಾಷೆಗಳಲ್ಲಿ ಅನುವಾದಗೊಂಡಂತೆ ಕನ್ನಡದಲ್ಲೂ ಗೊರೂರರವರಿಂದ ಉತ್ತಮ ರೀತಿಯಲ್ಲಿ ಅನುವಾದಗೊಂಡಿದೆ. ಕೇವಲ ಪ್ರೇಮ ದಾಂಪತ್ಯಕ್ಕೆ ಇಲ್ಲಿಯ ಕತೆ ಸೀಮಿತವಾಗದೆ ಅದಕ್ಕಿಂತ ಪ್ರಮುಖವಾದ ವರ್ತಮಾನಕ್ಕೆ ಸಂಬಂಧಿಸಿದ ರಾಷ್ಟ್ರೀಯತೆ - ಸ್ವಾತಂತ್ರ್ಯ ಚಳುವಳಿಗೂ ಸಂಬಂಧಿಸಿದ ಕೃತಿಯಾಗಿದೆ. ಈ ಕಾದಂಬರಿಯಲ್ಲಿ ಸುಲೋಚನೆಯ ಪಾತ್ರ ಪ್ರಧಾನವಾದದ್ದು. ಇವಳಲ್ಲಿ ವೈಚಾರಿಕ ದೃಷ್ಟಿಯನ್ನು ಕಾಣಬಹುದು. ತಂದೆಯ ಮೂಢ ಸಂಪ್ರದಾಯಗಳ ಅನುಕರಣೆಯನ್ನು ನೋಡುತ್ತೇವೆ. ಸುಲೋಚನೆ ದಿನಕರನನ್ನು ಮೆಚ್ಚಿಕೊಂಡ ರೀತಿ ಅರ್ಥಪೂರ್ಣವಾಗಿದೆ. ಸ್ವಪ್ರತಿಭೆ ಸಾಹಸದಿಂದ ಭವ್ಯ ಭವಿಷ್ಯತ್ತನ್ನು ರೂಢಿಸಿಕೊಂಡ ಡಾ. ಭಗವಂತರಾವ್ ಈ ಕಾದಂಬರಿಯಲ್ಲಿ ಆಕರ್ಷಕ ವ್ಯಕ್ತಿಯಾಗಿದ್ದಾನೆ. ಸಾಹಸದ ವ್ಯಕ್ತಿ ಬಡತನವನ್ನು ಮೆಟ್ಟಿ ಹೇಗೆ ಮುಂದಕ್ಕೆ ಬರಬಹುದು ಎಂಬುದಕ್ಕೆ ಡಾ. ಭಗವಂತರಾವ್ ಪಾತ್ರ ಮೇಲ್ಪಂಕ್ತಿಯಾಗಿದೆ. ದಿನಕರನ ಪಾತ್ರದಲ್ಲಿ ಕಂಡುಬರುವ ಸಂದೇಶ "ಪ್ರಪಂಚದಲ್ಲಿ ಹಣಕ್ಕೆ ಗೌರವವಿರಬಹುದು; ಆದರೆ ಧ್ಯೇಯಕ್ಕೂ ಗೌರವ ಇದ್ದೇ ಇದೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್;೧೯೫೭;ಪು.೩೧೭) ಎಂಬುದು ಮನವರಿಕೆಯಾಗುತ್ತದೆ. ದಿನಕರ, ಪ್ರೊ. ಅಪ್ಪಣ್ಣನವರ ವ್ಯಕ್ತಿತ್ವದಲ್ಲಿ ಬುದ್ಧಿಭಾವಗಳ ಸಮನ್ವಯದ ಕೊರತೆ ಇರುವುದನ್ನು ಸೂಚಿಸಿ ಬರೆದ ಪತ್ರದ ಮಾತು "ಜ್ಞಾನವನ್ನು ಪೂಜಿಸುವುದೆಂದರೆ ಭಾವನೆಗಳನ್ನು ಅರೆದು ಕೊಲ್ಲುವುದೆ? ನಿಮ್ಮ ಆಯುಷ್ಯ ಪೂರ್ತಿ ಈ ರೀತಿ ತಾನೆ ನಡೆಯಿತು?" (ಅದೇ; ಪು.೨೭೩) ಎಂದು ಎಚ್ಚರಿಸುತ್ತಾನೆ. ಮೂಲ ಕಾದಂಬರಿ ಯಲ್ಲಿ ಎಲ್ಲಾ ಪಾತ್ರಗಳು ಹೇಗೆ ಮಹತ್ವಪೂರ್ಣವಾಗಿಯೋ ಹಾಗೆಯೇ ಗೊರೂರರವರ ಅನುವಾದ ಕೃತಿಯಲ್ಲಿಯೂ ಅದೇ ಲಕ್ಷಣವನ್ನು ಕಾಣಬಹುದು. ಜೀವನದ ವಿವಿಧ ನೆಲೆಯಲ್ಲಿ ವ್ಯಕ್ತಿಗಳ ಹೋರಾಟಕ್ಕೆ 'ಕ್ರೌಂಚ ವಧ' ಕೃತಿ ಕನ್ನಡಿಯಾಗಿದೆ. ಕತೆಯ ಬೆಳವಣಿಗೆ ಪಾತ್ರಗಳ ಮುಖಾಂತರ ನಡೆದಿರುವುದು ತಂತ್ರ ದೃಷ್ಟಿಯಿಂದ ಮೆಚ್ಚುವಂತಹದ್ದಾಗಿದೆ. ಪಾತ್ರಗಳ ಮಾನಸಿಕ ತುಮುಲ ಕಾದಂಬರಿಯಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಮನೋವೈಜ್ಞಾನಿಕ ದೃಷ್ಟಿಯಿಂದ ಈ ಕಾದಂಬರಿ ವಿಶೇಷವಾಗಿದೆ.

ಮೂಲ ಕೃತಿಯಲ್ಲಿ ಕಂಡುಬರುವ ಸಂದೇಶ ವಾಕ್ಯಗಳು ಮೂಲ ಭಾಷೆಯಲ್ಲಿ ಹೇಗೆ ಪರಿಣಾಮಕಾರಿಯಾಗಿ ಮೂಡಿ ಬಂದಿದೆಯೋ ಅಷ್ಟೇ ಪರಿಣಾಮಕಾರಿಯಾಗಿ ಗೊರೂರವರ ಅನುವಾದಿತ ಕೃತಿಯಲ್ಲಿಯೂ ಮೂಡಿ ಬಂದಿದೆ.

ಗೊರೂರವರ 'ಕ್ರೌಂಚ ವಧ' ಅನುವಾದ ಕೃತಿಯನ್ನು ಓದಿ ಆನಂದಪಟ್ಟ ಸಹೃದಯರಿಗೆ ಇದೇ ರೀತಿಯಲ್ಲಿ ವಿಶ್ವ ಸಾಹಿತ್ಯದ ಅಮೂಲ್ಯ ಕೃತಿಗಳು ಕನ್ನಡಕ್ಕೆ ಅನುವಾದವಾಗಿ ಮೂಡಿ ಬರಬಾರದೆ! ಎಂಬ ಆಸೆ ಕನ್ನಡಿಗರಿಗೆ ಮೂಡುವುದು ಸಹಜ. ಗೊರೂರವರ ಅನುವಾದ ಅನುವಾದಕರಿಗೆ ಒಂದು ಉತ್ತಮ ಮೇಲ್ಪಂಕ್ತಿಯಾಗಿದೆ. 'ಸಾಮರ್ಥ್ಯ ಇರುವ ವ್ಯಕ್ತಿ ಸದುದ್ದೇಶದಿಂದ ಮಾಡಿದ ಎಲ್ಲ ಕೆಲಸಗಳು ಸಾರ್ಥಕ' ಎಂಬ ಮೇಲ್ಮೆಯ ಮಾತಿಗೆ ಗೊರೂರವರ ಸಾಹಿತ್ಯ ಸೇವೆಯನ್ನು ನಾವು ಸೇರಿಸಬಹುದು.

ಕೆ.ಎಂ. ಮುನ್ಷಿ ಅವರು ಈ ಶತಮಾನದ ಭಾರತದ ಹಿರಿಯ ಚಿಂತಕರು ಸಾಹಿತಿಗಳಲ್ಲಿ ಒಬ್ಬರಾಗಿದ್ದಾರೆ. ಗುಜರಾತಿನ ಶ್ರೇಷ್ಠ ಸಾಹಿತಿಗಳಲ್ಲಿ ಇವರು ಒಬ್ಬರು. ಇವರ ಸಾಮಾಜಿಕ ಕಾದಂಬರಿಗಳು, ಐತಿಹಾಸಿಕ ಕಾದಂಬರಿಗಳು ಸಮಪ್ರಮಾಣದಲ್ಲಿ ಜನಮನ್ನಣೆಯನ್ನು ಗಳಿಸಿಕೊಂಡಿವೆ. ಗುಜರಾತಿನ ಸಹೃದಯ ವರ್ಗ ಮುನ್ಷಿ ಅವರ ಸಾಹಿತ್ಯವನ್ನು ಅರಿತು ಕೊಂಡಿದ್ದಾರೆ. ಮುನ್ಷಿ ಅವರು ಗುಜರಾತಿನಲ್ಲಿ ಕಾದಂಬರಿ, ನಾಟಕ, ಕತೆ, ವಿಮರ್ಶೆ, ನಿಬಂಧ, ಜೀವನ ಚರಿತ್ರೆ, ಸಾಹಿತ್ಯ ಚರಿತ್ರೆ, ಇತಿಹಾಸ, ಪ್ರವಾಸ ಸಾಹಿತ್ಯ, ನೆನಹುಗಳು, ಭಾಷಣಗಳು ಮತ್ತು ಲೇಖನಗಳು ಈ ರೀತಿಯ ಎಲ್ಲ ಸಾಹಿತ್ಯ ಪ್ರಕಾರವನ್ನು ಸೃಷ್ಟಿಸಿ ಭಾರತೀಯ ಸಂಸ್ಕೃತಿಗೆ ವೈಭವಪೂರ್ಣ ಪ್ರಚಾರವನ್ನು ತಂದಿದ್ದಾರೆ. ಭಾರತೀಯ ಸಾಹಿತ್ಯಕ್ಕೆ ಮುನ್ಷಿಯವರ ಕೊಡುಗೆ ವಿಶೇಷವಾದದ್ದು.

'ಭಗವಾನ್ ಕೌಟಿಲ್ಯ' ಮುನ್ಷಿ ಅವರ ಪ್ರತಿಸಿದ್ಧ ಐತಿಹಾಸಿಕ ಕಾದಂಬರಿ. ಇಲ್ಲಿಯೂ ಭಾರತೀಯ ಸಂಸ್ಕೃತಿಯ ಮೂಲ ಸ್ವರ ಮಿಡಿದಿರುವುದನ್ನು ಕಾಣಬಹುದು. ಐತಿಹಾಸಿಕ ಸತ್ಯ ಮತ್ತು ಕಲ್ಪನೆಯ ಸುವರ್ಣ ಸಂಯೋಗವನ್ನು ಐತಿಹಾಸಿಕ ಕಾದಂಬರಿಯಲ್ಲಿ ತಿಳಿಯಬಹುದು. ಮುನ್ಷಿ ಅವರ ಐತಿಹಾಸಿಕ ಕಾದಂಬರಿಗಳಲ್ಲಿಯೂ ಈ ಗುಣ ಪೂರ್ಣವಾಗಿದೆ. ಇಷ್ಟೇ ಅಲ್ಲದೆ ಮುನ್ಷಿ ಅವರ ಐತಿಹಾಸಿಕ ಕಾದಂಬರಿಗಳನ್ನು ಐತಿಹಾಸಿಕ ರೊಮಾನ್ಸ್ ಎಂದು ವಿಶೇಷವಾಗಿ ಕರೆದಿರುವುದು ಸಮಂಜಸವಾಗಿದೆ. 'ಭಗವಾನ್ ಕೌಟಿಲ್ಯ' ಕಾದಂಬರಿಯಲ್ಲಿ ಮೇಧಾವಿ ಚಾಣಕ್ಯನ ಬದುಕನ್ನು ನೋಡುತ್ತೇವೆ. ಚಾಣಕ್ಯ ವೈದಿಕ ಸಂಸ್ಕೃತಿಯ ಪುನರುದ್ಧಾರಕ, ಶಾಸ್ತ್ರಕಾರ, ಮಹಾನ್ ಮೇಧಾವಿ. ಮೌರ್ಯ ಸಾಮ್ರಾಜ್ಯದ ಸ್ಥಾಪನೆಯ ಸಂಗತಿ ಈ ಕೃತಿಯಲ್ಲಿ ಸ್ಫುಟವಾಗಿ ಮೂಡಿ ಬಂದಿದೆ. ಚಾಣಕ್ಯನ ತಪಸ್ಸಿನ ಬಲದ ಶಕ್ತಿ ಈ ಕೃತಿಯಲ್ಲಿ ವಿಶೇಷವಾಗಿ ಮೂಡಿ ಬಂದಿರುವುದರಿಂದ ಮುನ್ಷಿ ಅವರು ಕೃತಿಗೆ 'ಭಗವಾನ್ ಕೌಟಿಲ್ಯ' ಎಂದು ಔಚಿತ್ಯಪೂರ್ಣ ನಾಮಕರಣ ಮಾಡಿದ್ದಾರೆ. ಐತಿಹಾಸಿಕ ಕಾದಂಬರಿಯಲ್ಲಿ ನಾವು ಗುರುತಿಸುವ ರಚನಾತ್ಮಕ ಪ್ರತಿಭೆಯನ್ನು 'ಭಗವಾನ್ ಕೌಟಿಲ್ಯ'ದಲ್ಲೂ ಕಾಣಬಹುದು. ಕಲ್ಪನೆಯ ಹೂರಣದೊಂದಿಗೆ ಚರಿತ್ರೆಯ

ಒದಿಕೆಯನ್ನು ಗುರುತಿಸಬಹುದು. 'ಭಗವಾನ್ ಕೌಟಿಲ್ಯ' ಕಾದಂಬರಿಯಲ್ಲಿ ಇತಿಹಾಸ ಮತ್ತು ಪುರಾಣದ ಮಧುರ ಸಂಗಮವನ್ನು ನೋಡುತ್ತೇವೆ. ಈ ಕಾದಂಬರಿಯಲ್ಲಿ ಮುನ್ನಿ ಅವರ ಕಥನ ಕಲೆಯನ್ನು ಕಾಣಬಹುದು. ಕತೆಯಲ್ಲಿ ಕಂಡುಬರುವ ವರ್ಣನೆಗಳು ಸಂದರ್ಭಕ್ಕೆ ಔಚಿತ್ಯ ಪೂರ್ಣವಾಗಿದೆ. ಮಹಾ ಮೇಧಾವಿ ಕೌಟಿಲ್ಯನ ಅಂತರಂಗ ಜೀವನದ ಎತ್ತರದ ಚಿತ್ರವನ್ನು 'ಭಗವಾನ್ ಕೌಟಿಲ್ಯ' ಕೃತಿಯಲ್ಲಿ ಗಮನಿಸಬಹುದು. ಇಂತಹ ವಿಶಿಷ್ಟ ಕಾದಂಬರಿಯನ್ನು ಅನುವಾದ ಮಾಡುವುದರಲ್ಲಿ ಗೊರೂರವರ ಪ್ರಾಮಾಣಿಕ ಪ್ರಯತ್ನ ಫಲಪ್ರದವಾಗಿದೆ.

'ಮಲೆನಾಡವರು' ಕಾದಂಬರಿ ಜಗದ್ವಿಖ್ಯಾತ ರಷ್ಯನ್ ಕಾದಂಬರಿಕಾರನಾದ ಟಾಲ್‌ಸ್ಟಾಯ್‌ನ 'ಕಾಸೆಕ್ಸ್' (Cossacks) ಕಾದಂಬರಿಯ ಅನುವಾದವಾಗಿದೆ. ನಿಸರ್ಗದ ಮಡಿಲಲ್ಲಿ ಬೆಳೆಯುವ ಜನರ ಬಾಳು ಒಂದೇ ಆಗಿರುತ್ತದೆ ಎಂಬುದನ್ನು ಟಾಲ್‌ಸ್ಟಾಯ್ ಈ ಕೃತಿಯ ಮೂಲಕ ಸೂಚಿಸಿದ್ದಾರೆ. ಟಾಲ್‌ಸ್ಟಾಯ್ ಕತೆಯಲ್ಲಿ ಮಾನವ ಪ್ರೇಮ, ವಿಶ್ವಾಸ, ಕುಟುಂಬ ಜೀವನ ನೆಮ್ಮದಿ ಮುಂತಾದ ಮೌಲ್ಯಗಳನ್ನು ಕಂಡ ಗೊರೂರವರು ಟಾಲ್‌ಸ್ಟಾಯ್ ಕೃತಿಗಳಿಗೆ ಆಕರ್ಷಿತರಾದರು. ಟಾಲ್‌ಸ್ಟಾಯ್ ಭೋಗಜೀವನದಲ್ಲಿ ನೈತಿಕ ಕ್ರಾಂತಿಯನ್ನು ಕಂಡು ಸರಳ ಜೀವನಕ್ಕೆ ಪರಿವರ್ತನೆ ಆಗಿರುವುದು ಮತ್ತು ರೈತರ ಸೇವೆಗಾಗಿ ಸಮಾಜದ ಸುಧಾರಣೆಗಾಗಿ ತಮ್ಮ ಬಾಳನ್ನು ಮುಡಿಪಿಟ್ಟಿರುವುದು ಅವರ ಕೃತಿಗಳಲ್ಲಿ ವ್ಯಕ್ತವಾಗಿದೆ. ಗ್ರಾಮೀಣ ಜೀವನದಲ್ಲಿ ಆನಂದವನ್ನು ಕಾಣುವ ಗೊರೂರವರಿಗೆ ಟಾಲ್‌ಸ್ಟಾಯ್ ಅವರ ಕೃತಿ ಮೆಚ್ಚುಗೆಯಾಗಿ ಭಾಷಾಂತರಕ್ಕೆ ಪ್ರೇರಣೆ ಕೊಟ್ಟಿರುವುದು ಸಹಜ ಎನಿಸುತ್ತದೆ.

'ಮಲೆನಾಡವರು' ಕಥೆಯ ವಸ್ತು ನಮ್ಮ ಸಮಾಜದ ಸಾಮಾನ್ಯರ ಮನಸ್ಸನ್ನು ಆಕರ್ಷಿಸುವುದರಲ್ಲಿ ಆಶ್ಚರ್ಯವಿಲ್ಲ. 'ಮಲೆನಾಡವರು' ಅನುವಾದ ಕೃತಿ ಮೂಲ ಕೃತಿಯೊಂದಿಗೆ ತಾದಾತ್ಮ್ಯವನ್ನು ಹೊಂದಿದೆ. 'ಮಲೆನಾಡವರು' ಕೃತಿ ಅನುವಾದದ ಅನುವಾದ. ಮೂಲ ರಷ್ಯನ್ ಭಾಷೆಯಿಂದ ಈಗಾಗಲೇ ಅನುವಾದಗೊಂಡಿದ್ದ ಕೃತಿಯನ್ನು ಗೊರೂರವರು ಕನ್ನಡಕ್ಕೆ ತಂದಿದ್ದಾರೆ. ಇಂಗ್ಲೀಷ್ ಭಾಷಾಂತರಕಾರರಾದ ರವೀಂದ್ರನಾಥ ಠಾಗೂರವರು ಟಾಲ್‌ಸ್ಟಾಯ್‌ರವರ ಮೂಲ ಕೃತಿಯನ್ನು ಶುದ್ಧವಾದ ಪೂರ್ಣವಾದ ಕಲೆ ಎಂದು ತಿಳಿಸಿದ್ದಾರೆ. 'ಕಾಸೆಕ್ಸ್' ಕತೆಯಲ್ಲಿಯೂ ನಾವು ಪ್ರೇಮವನ್ನು ಕಾಣಬಹುದು. ಮಾಸ್ಕೋ ನಗರದ ಕೃತಕ ಜೀವನದಿಂದ ಬೇಸತ್ತ ತರುಣ ಪ್ರೀತಿಗಾಗಿ ಹಂಬಲಿಸುವುದು ಕತೆಯ ವಸ್ತು. ಕಥಾ ನಾಯಕ ಓರ್ವ ತರುಣಿಯ ಪ್ರೇಮಕ್ಕೆ ಸಿಕ್ಕಿ ತಾನು ಅವಳನ್ನು ಪ್ರೀತಿಸಲಾರದೆ ನಿರಾಶನಾಗುವ ಅಂತ ಕತೆಯಲ್ಲಿ ಅಡಗಿದೆ. ನಂತರದಲ್ಲಿ ಎಲ್ಲರಂತೆ ಪ್ರೀತಿಸಿ ತನ್ನ ಸುತ್ತಲ ಸಮಾಜಕ್ಕೆ ಹೊಂದಿಕೊಂಡು ಬಾಳಬೇಕೆಂಬ ಆಸೆ ನಾಯಕನಲ್ಲಿ ಮಿಡಿಯುವುದು ಹೊಸಬಾಳಿನ ಹಂಬಲಿಗಾಗಿ. ಕಾಕಸಸ್ ಪ್ರಾಂತ್ಯಕ್ಕೆ ಕಥಾನಾಯಕ ಸಿಪಾಯಿಯಾಗಿ ಹೋಗುವ ಪ್ರಸಂಗ ಕಾದಂಬರಿಯಲ್ಲಿ ಪ್ರಧಾನವಾದದ್ದು. ಕಾಕಸಸ್ ಪರ್ವತಗಳ ತಪ್ಪಲಿನ ಗ್ರಾಮೀಣ ಜೀವನ ಕಥಾನಾಯಕನ ಮನಸ್ಸನ್ನು ಆಕರ್ಷಿಸುತ್ತದೆ. ಕತೆಯಲ್ಲಿ ಕಂಡುಬರುವ ಒಲೆನಿನ್

ಮತ್ತು ಮರ್ರ್ಯಂಕಳ ಗಾಢವಾದ ಪ್ರೀತಿ ಗಮನಾರ್ಹವಾದದ್ದು. ಹಳ್ಳಿಯ ಹುಡುಗಿಯಾದರು ಆಕೆಯಲ್ಲಿ ಕಾಣುವ ದಿಟ್ಟತನ ಆಕೆಯ ಮೋಹಕ ರೂಪಿನಷ್ಟೇ ಕಥಾನಾಯಕನ ಮನಸ್ಸನ್ನು ಸೂರೆಗೊಳ್ಳುತ್ತದೆ. 'ಶ್ರೇಷ್ಠ ಸಂಸ್ಕೃತಿ'ಯ ಜನ ಹಿಂದುಳಿದ ಜನರ ಮೇಲೆ ಪ್ರಭುತ್ವವನ್ನು ಸಾಧಿಸಲಾರರು ಎಂಬುದು ಈ ಕಾದಂಬರಿಯಲ್ಲಿ ಮರ್ರ್ಯಂಕಳ ಪಾತ್ರದ ಮೂಲಕ ನಮಗೆ ಮನವರಿಕೆಯಾಗುತ್ತದೆ. ಕಾದಂಬರಿಯಲ್ಲಿ ಕಂಡುಬರುವ ಸರಸಿ ವಿರೋಷ್ಕ ಪಾತ್ರ ಗಮನಾರ್ಹವಾಗಿದೆ. 'ಮಲೆನಾಡವರು' ಕೃತಿಯಲ್ಲಿ ಕಂಡುಬರುವ ಗ್ರಾಮೀಣ ಚಿತ್ರ, ಪಾತ್ರಗಳ ವರ್ತನೆ ನಮ್ಮ ಸಮಾಜದ ಗ್ರಾಮೀಣ ಜೀವನದ ಅನುಭವವನ್ನು ನೆನಪು ಮಾಡಿಕೊಡುತ್ತದೆ. ಮೂಲಕತೆಯಲ್ಲಿ ಕಾಣುವ ಕತೆಯ ಓಟವನ್ನು ಗೊರೂರರವರ ಅನುವಾದ ಕೃತಿಯಲ್ಲಿ ಕಾಣಬಹುದು. 'ಮಲೆನಾಡವರು' ಅನುವಾದ ಕೃತಿಯ ಶ್ರೇಷ್ಠತೆಯನ್ನು ನಾವು ಕಂಡಾಗ ಇಂತಹ ಅತ್ಯುತ್ತಮ ಅನುವಾದ ಕೃತಿಗಳಿಂದಲೂ ಕನ್ನಡ ಸಾಹಿತ್ಯ ಶ್ರೀಮಂತವಾಗಬಲ್ಲದು ಎಂಬ ಸತ್ಯಾಂಶವನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ.

ರಾಮಚಂದ್ರ ಠಾಕೂರರ 'ರಾಜನರ್ತಕಿ' ಆಮ್ರಪಾಲಿಯ ಕತೆಯನ್ನು ಒಳಗೊಂಡಿರುವ ಕಾದಂಬರಿ. ವರ್ಣಸಂಕರದ ಒತ್ತಡದ ಹಿನ್ನೆಲೆಯಲ್ಲಿ ಆಮ್ರಪಾಲಿಯ ಕತೆ ಮೂಡಿಬಂದಿದೆ. ಆಮ್ರಪಾಲಿ ಅಪೂರ್ವ ಸೌಂದರ್ಯದ ಪೂರ್ಣರೂಪ. ಅವಳ ಈ ಸೌಂದರ್ಯಕ್ಕೆ ಮರುಳಾದ ಅಸಂಖ್ಯಾತ ಲಿಚ್ಛವೀ ರಾಜಕುಮಾರರು ವ್ಯಾಮೋಹಿತರಾಗುತ್ತಾರೆ. ಆ ಸಂದರ್ಭದಲ್ಲಿ ರಾಜ್ಯದ ಹಿತದೃಷ್ಟಿಯಿಂದ ರಾಜನರ್ತಕಿಯಾಗಿ ಆಮ್ರಪಾಲಿ ತನ್ನ ದೇಶಪ್ರೇಮವನ್ನು ತೋರಿಸಿ ರಾಜ ಮಹಾರಾಜರುಗಳು ಮಾಡಬಹುದಾದ ಕಾರ್ಯಕ್ಕಿಂತ ಉನ್ನತವಾದ ಕಾರ್ಯವನ್ನು ಸಾಧಿಸಿ ವಿಶಿಷ್ಟ ವ್ಯಕ್ತಿಯಾಗುತ್ತಾಳೆ. ಆಮ್ರಪಾಲಿ ಕಲೋಪಾಸಕಳು, ಉತ್ಕಟ ದೇಶಪ್ರೇಮಿ. ದೇಶ-ದೇಶಗಳ ಮಧ್ಯದಲ್ಲಿ ಇದ್ದ ವಿರಸಗಳನ್ನು ಮರೆಸಿ ರಸರಸತೆಯನ್ನು ಸಾಧಿಸಿದ ಮಹಾಯೋಗಿನಿ ಹಾಗೂ ಅಷ್ಟೇ ಮಹಾತ್ಯಾಗಿ. ಇಂಥಹ ವಿಶಿಷ್ಟವಾದ ಬದುಕಿನಿಂದ ಇತಿಹಾಸವನ್ನು ನಿರ್ಮಿಸಿರುವ ಆಮ್ರಪಾಲಿಯ ಕತೆಯನ್ನು ಕುರಿತ ಅತ್ಯುತ್ತಮವಾದ ಗ್ರಂಥಗಳು ಭಾರತೀಯ ಸಾಹಿತ್ಯದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಕಂಡುಬಂದಿದೆ. ಆಮ್ರಪಾಲಿ ಮಹಾನಾಮರ ಕಣ್ಮಣಿಯಾಗಿ ಬೆಳೆಯುತ್ತಾಳೆ. ಈಕೆಯ ಸೌಂದರ್ಯಕ್ಕೆ ಮನಮಾರಿದ ಲಿಚ್ಛವೀ ಸಾಮಂತರು ಆಮ್ರಪಾಲಿಗಾಗಿ ಪರಸ್ಪರ ಹೊಡೆದಾಡಿ ಕೆಲವರು ಸಾವನ್ನು ಅಪ್ಪುತ್ತಾರೆ. ರಾಜನರ್ತಕಿಯಾದ ಆಮ್ರಪಾಲಿ ತನ್ನ ಪಾತಿವ್ರತ್ಯ ಭಂಗ ತಂದುಕೊಳ್ಳದೆ ತನ್ನ ಕರ್ತವ್ಯವನ್ನು ಪಾಲಿಸುತ್ತಾ ಕೊನೆಗೆ ಬುದ್ಧನ ಶರಣು ಹೋಗಿ ಸನ್ಯಾಸಿಯಾಗುತ್ತಾಳೆ. ಮಗಧ ರಾಜನಾದ ಬಿಂಬಸಾರನಿಗೂ ಆಮ್ರಪಾಲಿಯ ಮೇಲೆ ಮೋಹವುಂಟಾಗುತ್ತದೆ. ಅದೇ ಸಂದರ್ಭದಲ್ಲಿ ನೀಚನಾದ ಅಭಯನ ಹದ್ದಿನ ಕಣ್ಣು ಆಮ್ರಪಾಲಿಯ ಮೇಲೆ ಬೀಳುತ್ತದೆ. ಇಷ್ಟಾದರೂ ಆಮ್ರಪಾಲಿಯಿಂದ ವಿದ್ವತ್ತು, ಸೌಂದರ್ಯ ಮತ್ತು ಅದ್ಭುತ ತೇಜಸ್ಸು ಅವಳನ್ನು ಅಪೇಕ್ಷಿಸಿದ ವ್ಯಕ್ತಿಗಳಲ್ಲಿ ಇಲ್ಲದಿದ್ದ ಕಾರಣ ಆಕೆಯನ್ನು ಯಾರು ಜಯಸಿರಲಿಲ್ಲ. ಕಾದಂಬರಿಯ ಎಲ್ಲ ಕಾರ್ಯ ಚಟುವಟಿಕೆಗಳಿಗೆ ಹಿನ್ನೆಲೆಯಾಗಿ ಬುದ್ಧನ ವರ್ಚಸ್ಸು ಪ್ರಭಾವ ಹರಿದು ಬಂದಿರುವುದನ್ನು ಮರೆಯುವಂತಿಲ್ಲ. ಆಮ್ರಪಾಲಿ

ಲಿಚ್ಛವೀಯವರ ರಸಿಕತೆಯನ್ನು ತಿಳಿಸುವ ರೂಪ ಸುಧಾಮೂರ್ತಿಯಾಗಿದ್ದಂತೆ ಆತ್ಮೋದ್ಧಾರದ ಹಾದಿಯಲ್ಲಿ ಆಕೆ ಸಾಗಿದಳು. ತನ್ನವರಿಗೆಲ್ಲಾ ಈ ಆತ್ಮಾನಂದದ ಸುಖವನ್ನು ನೀಡಿ ರಾಜನರ್ತಕಿಯಾದ ಆಮ್ರಪಾಲಿ ಅಂತ್ಯದಲ್ಲಿ ದೇವಿ ಆಮ್ರಪಾಲಿಯಾಗುತ್ತಾಳೆ. ಅಪೂರ್ವರೂಪ ಸಂಪನ್ನೆ ದೇಶ ಕಲ್ಯಾಣ ಕಾರ್ಯದಲ್ಲಿ ಎಂಥ ಮಹತ್ತರ ಪಾತ್ರವನ್ನು ವಹಿಸಿದಳು ಎಂಬುದಕ್ಕೆ ಆಮ್ರಪಾಲಿಯ ಕತೆ ಅಪೂರ್ವ ಉದಾಹರಣೆಯಾಗಿದೆ. ಗುಜರಾತಿ ಮೂಲದ 'ರಾಜ ನರ್ತಕಿ' ಕಾದಂಬರಿಯನ್ನು ಅತ್ಯುತ್ತಮ ರೀತಿಯಲ್ಲಿ ಗೊರೂರರವರು ಅನುವಾದ ಮಾಡಿ ಕನ್ನಡಕ್ಕೆ ಒಂದು ಅನನ್ಯ ಕಾಣಿಕೆಯನ್ನು ನೀಡಿದ್ದಾರೆ.

ಗೊರೂರರವರ 'ಮಹಾತ್ಮಾಗಾಂಧಿಯವರ ದಕ್ಷಿಣಯಾತ್ರೆ' ಕೃತಿ ಮಹಾತ್ಮಗಾಂಧಿಯವರ ಪ್ರವಾಸದ ಕಥನದ ಕನ್ನಡಾನುವಾದ. ಈ ಕೃತಿಯಲ್ಲಿ ಲೇಖಕರು ಪ್ರಾಸಂಗಿಕವಾಗಿ ಮೂರ್ತಿ ಪೂಜೆಯ ಬಗ್ಗೆ "ಮೂರ್ತಿ ಮುಂದೆ ಪೂಜೆ ಮಾಡುವುದು ಹಿಂದೂ ಧರ್ಮದಲ್ಲಿ ಒಂದು ಮುಖ್ಯಭಾಗ. ಇಂತಹ ಪೂಜೆಗೆ ಪ್ರತಿಯೊಬ್ಬನ ಹೃದಯಲ್ಲಿಯೂ ಸ್ಥಳವುಂಟು" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೪೫; ಪು.೧೭೩) ಎಂದಿದ್ದಾರೆ. ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ ಗಾಂಧೀಜಿಯವರ ಮೂಲಮಂತ್ರವಾಗಿತ್ತು. ಈ ಕೃತಿಯೂ ಸಹ ಮಹಾತ್ಮ ಗಾಂಧೀಜಿಯವರ ಒಂದು ಜೀವನಚಿತ್ರವಾಗಿದೆ. ಮಹಾತ್ಮ ಗಾಂಧಿಯವರು ನಿಷೇಧಕ್ಕೆ ಕೂಡ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದರು. ನಮ್ಮ ಪೂರ್ಣ ವಿಕಾಸಕ್ಕೆ ನಮ್ಮ ಮಾತೃಭಾಷೆಯ ಬೆಳವಣಿಗೆ ಅವಶ್ಯಕ ಎಂಬ ಗಾಂಧಿ ಅವರ ಅಭಿಪ್ರಾಯವನ್ನು ಲೇಖಕರು ಈ ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

'ಆತ್ಮಕಥೆ ಅಥವಾ ಸತ್ಯಾನ್ವೇಷಣೆ' ಗಾಂಧೀಯವರ ಬರಹಗಳು ಈ ಕೃತಿಯಲ್ಲಿ ಅನುವಾದಗೊಂಡಿವೆ. ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಇತಿಹಾಸದಲ್ಲಿ ವಿಶ್ವಕಂಡ ಮಹಾನ್ ವ್ಯಕ್ತಿ ಗಾಂಧಿ ಎಂಬುದನ್ನು ಗೊರೂರರವರು ಈ ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಗಾಂಧಿಯವರು ಈ ಆತ್ಮಕತೆಯಲ್ಲಿ ಸತ್ಯ ಶೋಧನೆಯ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಿದ್ದಾರೆ. ಈ ಆತ್ಮಕತೆಯ ಪ್ರತಿ ಪುಟವೂ ಅಹಿಂಸೆ ಇಲ್ಲದೆ ಸತ್ಯ ಸಾಕ್ಷಾತ್ಕಾರ ಸಾಧ್ಯವಿಲ್ಲ ಎಂಬುದನ್ನು ಸಾರಿ ಏಳುತ್ತದೆ. ಗಾಂಧೀಜಿಯವರ ದೃಷ್ಟಿಯಲ್ಲಿ ತಾತ್ವಿಕ ವಿಷಯಗಳು ಚರ್ಚೆಯ ವಿಷಯಗಳಾಗಿ ಉಳಿಯದೆ ಜೀವನದಲ್ಲಿ ಅನ್ವಯವಾಗುವ ಪರಮ ಸತ್ಯಗಳಾಗಬೇಕು ಎಂಬ ಅಂಶ ಇಲ್ಲಿ ವಿದಿತವಾಗಿದೆ. ಗಾಂಧೀಜಿಯವರು ನನ್ನ ನೆನಪಿನಲ್ಲಿ ಇರುವುದೆಲ್ಲಾ ನಾನು ಈ ಆತ್ಮಕತೆಯಲ್ಲಿ ಹೇಳಲಾಗಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ. ಈ ಆತ್ಮಕತೆ ಧಾರವಾಹಿ ಯಾಗಿ ಪ್ರಕಟವಾಗುತ್ತಿದ್ದಾಗ ಗಾಂಧೀಜಿಯವರ ಮತ್ತು ವಾಚಕರ ನಡುವೆ ಎಂಥ ಮಧುರ ಆತ್ಮೀಯಾ ಸಂಬಂಧ ಇತ್ತು ಎಂಬುದು ಈ ಕೃತಿಯ ಮೂಲಕ ನಮಗೆ ಅರಿವಾಗುತ್ತದೆ. ಇಷ್ಟೇ ಅಲ್ಲದೆ ಗಾಂಧಿ ವೃತ್ತಿಯಿಂದ ಅಲ್ಲದಿದ್ದರು ಪ್ರವೃತ್ತಿಯಿಂದ ಸಾಹಿತಿಯಾಗಿದ್ದರು ಎಂಬುದು ಅವರ ಬರವಣಿಗೆಯ ಮೂಲಕ ನಾವು ಖಚಿತ ಮಾಡಿಕೊಳ್ಳಬಹುದು. ಈ ಕೃತಿಯ ಶೈಲಿ ಗಾಂಧೀಜಿಯವರ ಪದ ಸಂಪತ್ತನ್ನು,

ಪದಗಳ ಬಳಕೆಯಲ್ಲಿ ಅವರು ತೋರಿಸಿರುವ ಕೌಶಲ್ಯವನ್ನು ನಮಗೆ ತಿಳಿಯಪಡಿಸುತ್ತದೆ. ಗಾಂಧಿಯವರ ಬರವಣಿಗೆಯಲ್ಲಿ ಕಾಣುವ ಉಪಮಾನ ಉಪಮೇಯಗಳು ಕೇವಲ ಅಲಂಕಾರಕ್ಕೆ ಬಳಕೆಯಾಗಿಲ್ಲ. ಈ ಕೃತಿಯಲ್ಲಿ ಮುಕ್ತಕಗಳನ್ನು ಕಾಣಬಹುದು. ಗಾಂಧೀಜಿಯವರ 'ಆತ್ಮಕತೆ' ಮೊದಲಿಗೆ ಗುಜರಾತಿ ಭಾಷೆಯಲ್ಲಿ ಮೂಡಿಬಂದಿದೆ. ಈ 'ಆತ್ಮಕತೆಯ ಅನುವಾದ'ವನ್ನು ಹೊಂದಿಲ್ಲದಿರುವ ಯಾವುದೇ ಒಂದು ಜೀವಂತ ಭಾಷೆ ಇಲ್ಲ ಎಂಬ ಮಾತು ಇಂದು ಸತ್ಯನುಡಿಯೇ ಹೊರತು ಅತಿಶಯೋಕ್ತಿಯಲ್ಲ. ಗೊರೂರರವರು 'ಆತ್ಮಕತೆ'ಯ ಇಂಗ್ಲೀಷ್ ಆವೃತ್ತಿಯನ್ನು ಆಧಾರವಾಗಿಟ್ಟುಕೊಂಡು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಗಾಂಧಿಯವರ 'ಆತ್ಮಕತೆ'ಯ ಅನುವಾದವನ್ನು ಗೊರೂರರವರು ಅತ್ಯುತ್ತಮವಾದ ರೀತಿಯಲ್ಲಿ ಮಾಡಿದ್ದಾರೆ ಎಂದು ಎಂ. ಯಮುನಾಚಾರ್ಯರು ಕೃತಜ್ಞತೆಯ ಮಾತನ್ನು ಆಡಿದ್ದಾರೆ. ಈ ಅನುವಾದ ಕೃತಿ ಕನ್ನಡದ ಸ್ವತಂತ್ರ ಕೃತಿಯಂತೆ ಶೋಭಾಮಯವಾಗಿದೆ.

'ಭಾಷಣಗಳು ಮತ್ತು ಹೇಳಿಕೆಗಳು' ಕೃತಿ ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ನಡೆಸಿದ ಸತ್ಯಾಗ್ರಹ ಮತ್ತು ಅಲ್ಲಿ ಪಡೆದ ವಿಜಯದ ಚಿತ್ರ ಈ ಕೃತಿಯಲ್ಲಿ ಇದೆ. ಗಾಂಧೀಜಿಯವರು ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಮೂವತ್ತೊಂಬತ್ತು ಭಾಷಣಗಳ ಅನುವಾದ ಕೃತಿ ಇದಾಗಿದೆ. ಈ ಭಾಷಣಗಳಲ್ಲಿ ವಿಷಯ ಗಾಂಭೀರ್ಯವನ್ನು ಚಿಂತನಾ ಪರತೆಯನ್ನು ಭಾವ ಶ್ರೀಮಂತಿಕೆಯನ್ನು ಸಮರ್ಥ ರೀತಿಯಲ್ಲಿ ಗೊರೂರರವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಗಾಂಧಿಯವರ ವಿಚಾರ ಪ್ರಚೋದನೆ, ಭಾಷಣದ ಪ್ರತಿ ಘಟ್ಟದಲ್ಲಿಯೂ ಕಾಣಬಹುದಾದ ವಿಶೇಷ ಲಕ್ಷಣವಾಗಿದೆ. ರಾಷ್ಟ್ರ ಜೀವನದ ಬಗ್ಗೆ, ಜ್ವಲಂತ ಸಮಸ್ಯೆಗಳ ಬಗ್ಗೆ ಗಾಂಧಿಯವರ ಮನಸ್ಸಿನಲ್ಲಿದ್ದ ತೀವ್ರ ಕಳವಳ ಈ ಕೃತಿಯಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ. ಈ ಕೃತಿಯನ್ನು ಓದಿದಾಗ ಗಾಂಧಿಯವರು ಒಂದು ವ್ಯಕ್ತಿಯಾಗಿ ಉಳಿಯದೆ ಇದಕ್ಕಿಂತ ಮಿಗಿಲಾಗಿ ಸಾಮೂಹಿಕ ಜೀವನದ ಚೇತನ ಶಕ್ತಿಯಾಗಿದ್ದರು ಎಂಬ ಅಂಶ ನಮಗೆ ಖಚಿತವಾಗುತ್ತದೆ. ಗೊರೂರರವರ ಭಾಷಾಂತರದಲ್ಲಿ ಸಹಜತೆ ಇದೆ. ನುಡಿಯ ಸ್ವಾಭಾವಿಕ ಓಟವಿದೆ, ಭಾಷೆಯ ಸೊಗಸನ್ನು ಸಹ ಗುರುತಿಸಬಹುದು. ಗಾಂಧಿಯವರು ಕನ್ನಡ ಭಾಷೆಯಲ್ಲಿಯೇ ಮಾತನಾಡುತ್ತಿದ್ದಾರೆಯೋ ಎಂಬ ಭಾಸ ಮೂಡಿಸುವಂತೆ ಗೊರೂರರವರ ಕೃತಿ ಇದೆ. ದಕ್ಷಿಣ ಆಫ್ರಿಕಾದ ಭಾರತೀಯರ ಸ್ಥಿತಿ ಚಿತ್ರ ಈ ಕೃತಿಯಲ್ಲಿ ವಿವರವಾಗಿ ಮೂಡಿ ಬಂದಿದೆ. ಭಾರತ ತನ್ನ ಆತ್ಮಶಕ್ತಿಯಿಂದ ಮನುಷ್ಯ ಪ್ರಪಂಚವನ್ನು ಅಖಿಲ ಜಗತ್ತನ್ನು ಆಲಂಗಿಸಿಕೊಳ್ಳಬಹುದು ಎಂಬ ಭಾವನೆ ಪ್ರತಿಯೊಬ್ಬ ಭಾರತೀಯನಲ್ಲಿಯೂ ಮೂಡುವಂತೆ ಗಾಂಧೀಯವರ ಭಾಷಣಗಳು ಇವೆ. ನೈತಿಕ ತಳಹದಿ ಇಲ್ಲದ ಸಹಕಾರ ಬಡವರಿಗೆ ಶೂಲ ಇದ್ದಂತೆ ಎಂದು ಗಾಂಧಿ ತಮ್ಮ ಭಾಷಣದಲ್ಲಿ ಎಚ್ಚರಿಸಿದ್ದಾರೆ. ಗಾಂಧೀಜಿ ಅಂತರಂಗದ ಶೋಧನೆಯ ಬಗ್ಗೆ ಮಾಡಿರುವ ಭಾಷಣ ಅತ್ಯಂತ ಭಾವಪೂರ್ಣವಾಗಿದೆ. 'ಭಾಷಣಗಳು ಮತ್ತು ಹೇಳಿಕೆಗಳು' ಈ ಎಲ್ಲ ಅಂಶಗಳಿಂದ ಸತ್ತ್ವಪೂರ್ಣ ಕೃತಿಯಾಗಿದೆ.

'ಸತ್ಯ-ಅಹಿಂಸೆ' ಕೃತಿಯಲ್ಲಿ ಗಾಂಧೀಜಿಯವರು ಸತ್ಯ-ಅಹಿಂಸೆಗಳ ಬಗ್ಗೆ ವ್ಯಕ್ತಪಡಿಸಿರುವ ಭಾವನೆಗಳನ್ನು ಗುರುತಿಸಬಹುದು. ಈ ಕೃತಿಯಲ್ಲಿ ಸಂಪದ್ಗಿರಿರಾಯರು ಮೊದಲ ಒಂಬತ್ತು ಅಧ್ಯಾಯಗಳನ್ನೂ ಗೊರೂರವರು ನಾಲ್ಕು ಅಧ್ಯಾಯಗಳನ್ನು ಕನ್ನಡಿಸಿದ್ದಾರೆ. ಈ ಅನುವಾದ ಕೃತಿಯಲ್ಲಿಯೂ ಗೊರೂರವರ ಸ್ವೋಪಜ್ಞತೆಯನ್ನು ಕಾಣಬಹುದು. ಸತ್ಯಸಂದತೆಯ ಅಹಿಂಸಾ ಮಾರ್ಗವನ್ನು ಗಾಂಧಿಯವರು ವೈಯಕ್ತಿಕ ಹಾಗೂ ರಾಷ್ಟ್ರಜೀವನವನ್ನು ಶುದ್ಧಪಡಿಸುವ ಹಾಗೂ ಮೇಲೆತ್ತುವ ಮಹಾಶಕ್ತಿಗಳು ಎಂದು ತಿಳಿಸಿದ್ದಾರೆ. "ಸತ್ಯ ನನಗೆ ಸ್ವಾಭಾವಿಕವಾಗಿ ಬಂದಿತ್ತು. ಅಹಿಂಸೆಯನ್ನು ಹೋರಾಟದಿಂದ ಗಳಿಸಿಕೊಂಡೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೫೮; ಪು.೪೭೫) ಎಂದು ಗಾಂಧಿ ಸ್ಪಷ್ಟಪಡಿಸಿದ್ದಾರೆ. ಅಹಿಂಸೆ ಎಂದರೆ ಹಿಂಸೆ ಮಾಡದಿರುವುದು. ಕಾಯಕ ಹಿಂಸೆಯೇ ಹಿಂಸೆಯಲ್ಲ, ವಾಚಿಕ ಮಾನಸಿಕ ಹಿಂಸೆಯೂ ಹಿಂಸೆಯೇ ಎಂಬ ಸೂಕ್ಷ್ಮ ಭಾವನೆಯನ್ನು ಗಾಂಧಿಯವರು ಈ ಕೃತಿಯಲ್ಲಿ ವಿಶದಪಡಿಸಿದ್ದಾರೆ. ಮನುಷ್ಯ ಪ್ರಾಣಿಯಾಗಿ ಹಿಂಸೆ, ಆತ್ಮವಾಗಿ ಅಹಿಂಸೆ ಎಂಬ ತತ್ತ್ವವನ್ನು ಗಾಂಧಿ ಈ ಸಂದರ್ಭದಲ್ಲಿ ಸೂತ್ರರೂಪವಾಗಿ ಹೇಳಿದ್ದಾರೆ. ಗಾಂಧಿಯವರ ಬರಹಗಳನ್ನು ಭಾಷಣಗಳನ್ನು ವಿಚಾರ ಮಾಡಿದಾಗ ಅವರ ವಿಚಾರ ಧಾರ್ಮಿಕ ಹಿನ್ನೆಲೆಯಲ್ಲಿ, ವೈಚಾರಿಕವಾಗಿ ವೈಜ್ಞಾನಿಕವಾಗಿ ಮೂಡಿಬಂದಿದೆ ಎಂದು ನಿರ್ದಿಷ್ಟವಾಗಿ ತಿಳಿಯಬಹುದು. ಈ ದೃಷ್ಟಿಗಳ ಅಪೂರ್ವ ಸಂಗಮ ಗಾಂಧಿಯವರಲ್ಲಿ ಕಾಣುವ ವಿಶೇಷ ಅಂಶವಾಗಿ ಉಳಿದಿದೆ. ಈ ಮೂರು ದೃಷ್ಟಿಗಳ ಸಂಯೋಗ ಇವರ ದೃಷ್ಟಿಗೆ ಅನನ್ಯತೆಯನ್ನು ವ್ಯಾಪಕತೆಯನ್ನು ತಂದು ಕೊಟ್ಟಿದೆ. ಗೊರೂರವರು ಗಾಂಧೀಜಿಯವರ ದೃಷ್ಟಿಯನ್ನು ಪೂರ್ಣದೃಷ್ಟಿ ಎಂದು ಕರೆದಿರುವುದರಲ್ಲಿ ಅರ್ಥ ಇದೆ. ವ್ಯಕ್ತಿ ಜೀವನ ಪರಿಪೂರ್ಣದ ಕಡೆಗೆ ಸಾಗಬೇಕಾದರೆ ಇಂತಹ ಪೂರ್ಣದೃಷ್ಟಿ ಅನಿವಾರ್ಯ ಎಂಬುದನ್ನು ಗಾಂಧೀಜಿಯವರು ನಮಗೆ ನೆನಪು ಮಾಡಿಕೊಟ್ಟಿದ್ದಾರೆ. ಅರವಿಂದರ ದೃಷ್ಟಿಯಲ್ಲಿಯೂ ಇಂತಹ ಪರಿಪೂರ್ಣ ದೃಷ್ಟಿಯನ್ನು ಕಾಣಬಹುದು. ವ್ಯಕ್ತಿ, ಸಮಾಜ ಮತ್ತು ರಾಷ್ಟ್ರ ಈ ಪರಿಪೂರ್ಣ ದೃಷ್ಟಿಯ ಎಳೆಯಲ್ಲಿ ಉಳಿಯಬೇಕು ಎಂಬುದು ಗೊರೂರವರ ಅಭಿಪ್ರಾಯವೂ ಆಗಿದೆ.

ಗಾಂಧೀಜಿಯವರ ಪೂರ್ಣ ದೃಷ್ಟಿಯ ಪರಿಕಲ್ಪನೆಯನ್ನು ಅರ್ಥೈಸುವಾಗ ರಾಷ್ಟ್ರಕವಿ ಕುವೆಂಪುರವರು ಮನುಷ್ಯ ಆತ್ಮಶ್ರೀಮಂತನಾಗದ ಹೊರತು (ಆತ್ಮಶ್ರೀ) ಅವನ ಇಹಲೋಕದ ಬದುಕು ಸಾರ್ಥಕವಾಗುವುದಿಲ್ಲ. ಅವನಿಗೆ ಪರಲೋಕದಲ್ಲಿ ಸದ್ಗತಿಯೂ ಸಹ ಸಾಧಿತವಾಗಲಾರದು ಎಂಬ ಸತ್ಯಾಂಶವನ್ನು ಘೋಷಣೆಯ ಮೂಲಕ ಸಾರಿದ್ದಾರೆ. ಬೇಂದ್ರೆಯವರು ತಮ್ಮ ಚಿಂತನೆಯಲ್ಲಿ 'ಪರಿಪೂರ್ಣದ ಎಡೆಗೆ' ಎಂಬ ವಿಷಯವನ್ನು ವಿವರಿಸುವಾಗ ಗಾಂಧೀಜಿಯವರ ನೆನಪು ಚಿಂತನೆಗೆ ಪೂರಕ ಎಂದಿದ್ದಾರೆ. ಗೊರೂರವರು ಮಹಾಕವಿಗಳ ಚಿಂತನೆಗಳಲ್ಲೆಲ್ಲಾ ಗಾಂಧೀಜಿ ದೃಷ್ಟಿಯ ಬೆಳಕನ್ನು ಕಾಣಬಹುದು ಎಂದು ಹೇಳಿರುವುದು ಅರ್ಥವತ್ತಾಗಿದೆ ಎನ್ನಬಹುದು. ಗಾಂಧೀಜಿಯವರು ತಮ್ಮನ್ನು ವ್ಯಾವಹಾರಿಕ 'ಧ್ಯೇಯವಾದಿ' ಎಂದು ಕರೆದುಕೊಂಡಿರುವುದು ಅವರ ಆತ್ಮಸ್ಥೈರ್ಯದ ಮಾತಾಗಿದೆ ಎಂದು ಗೊರೂರವರು ತಮ್ಮ ಬರವಣಿಗೆಯಲ್ಲಿ

ವ್ಯಕ್ತಪಡಿಸಿದ್ದಾರೆ. ಅಹಿಂಸೆಯ ಲಕ್ಷಣಗಳಾದ ಸತ್ಯ-ಸಾಮರಸ್ಯ-ಭ್ರಾತೃತ್ವ-ನ್ಯಾಯ ಇವುಗಳನ್ನು ಗೊರೂರರವರು ಗಾಂಧೀಜಿಯವರ ಅನುಯಾಯಿಗಳಾಗಿ ಹೇಳುವುದರಲ್ಲಿ ನಾವು ಪೂರ್ಣ ಔಚಿತ್ಯವನ್ನು ಕಾಣಬಹುದು.

'ಸ್ವಾತಂತ್ರ್ಯವೇ ಧರ್ಮ' ಇದು ಗೊರೂರರವರು ಸಂಗ್ರಹ ಮಾಡಿರುವ ಹದಿಮೂರು ಲೇಖನಗಳ ಒಂದು ಕೃತಿ. ಸಿ.ಎಫ್.ಆಂಡ್ರೂಸ್, ಲಾಲಾ ಲಜಪತರಾಯ್, ಜವಹಾರಲಾಲ್‌ನೆಹರೂ, ಲಿನ್‌ಯು ಟಾಂಗ್ ಮತ್ತು ಟಾಗೋರ್ ಬರೆದ ಲೇಖನಗಳು ಇಲ್ಲಿವೆ. ಈ ಲೇಖನಗಳಲ್ಲಿ ಗಾಂಧೀಜಿಯವರ ವಿಚಾರಧಾರೆಯನ್ನು ಪ್ರಧಾನವಾಗಿ ಕಾಣುತ್ತೇವೆ. ಸ್ವಾತಂತ್ರ್ಯ ಎಲ್ಲದಕ್ಕಿಂತ ಹೆಚ್ಚು ಅಮೂಲ್ಯ ಎಂಬ ಭಾವನೆ ಈ ಕೃತಿಯಲ್ಲಿ ಪ್ರತಿಪಾದಿತವಾಗಿದೆ. ಗೊರೂರರವರು ಹುಟ್ಟು ಸ್ವಾತಂತ್ರ್ಯ ಹೋರಾಟಗಾರರು. ಅವರ ಕೃತಿಗಳಲ್ಲಿ ಅವರ ಹೋರಾಟದ ನೇರ ಪರಿಚಯವನ್ನು ನೋಡುತ್ತೇವೆ. ಕೆಲವು ಕೃತಿಗಳಲ್ಲಿ ಸ್ವಾತಂತ್ರ್ಯದ ಬಗ್ಗೆ ಅತ್ಯುತ್ತಮ ಪ್ರಚೋದನೆಯನ್ನು ಗುರುತಿಸಬಹುದು.

ಗಾಂಧೀಜಿಯವರ ಆಪ್ತಕಾರ್ಯದರ್ಶಿಗಳಾಗಿದ್ದ ಮಹಾದೇವ ದೇಸಾಯಿಯವರು ಬರೆದ ಲೇಖನಗಳ ಒಂದು ಸಂಕಲನವನ್ನು ಗೊರೂರರವರು 'ಮಹಾದೇವ ದೇಸಾಯಿಯವರ ಕೃತಿಗಳು' ಎಂಬ ಹೆಸರಿನಲ್ಲಿ ಅನುವಾದಿಸಿ ಸಿದ್ಧಪಡಿಸಿದ್ದಾರೆ. ದೇಸಾಯಿಯವರು ಗಾಂಧೀಜಿಯವರ ಸಂಭಾಷಣೆಗಳನ್ನು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. 'ಮಹಾದೇವ ದೇಸಾಯಿಯವರ ಕೃತಿಗಳು' ಕೃತಿಯಲ್ಲಿ ಉತ್ತಮ ವ್ಯಕ್ತಿಗಳ ಪರಿಚಯವನ್ನು ತಿಳಿಯಬಹುದು. ಕೆಲವು ಲೇಖನಗಳು ಪರಿಸರದ ಚಿತ್ರಣಕೊಡುವಂತೆ ಸಮಸ್ಯೆಗಳ ಚರ್ಚೆಯನ್ನು ಒಳಗೊಂಡಿದೆ. ಮಹಾತ್ಮರ ಸಂಪರ್ಕದಿಂದ ಅಂದಿನ ವಾತಾವರಣದ ಪ್ರಭಾವದಿಂದ ತಮ್ಮ ಪ್ರವೃತ್ತಿಗಳನ್ನು, ಆಲೋಚನೆಗಳನ್ನು ಪರಿವರ್ತಿಸಿಕೊಂಡವರ ಪೈಕಿ ಗೊರೂರರವರು ಒಬ್ಬರಾಗಿದ್ದಾರೆ ಎಂಬುದು ಈ ಕೃತಿಯ ಮೂಲಕ ನಮಗೆ ಮನವರಿಕೆಯಾಗುತ್ತದೆ.

'ಮದ್ಯಪಾನದಿಂದ ವಿಮೋಚನೆ' ಗಾಂಧೀಜಿಯವರು ಮದ್ಯಪಾನದ ವಿಮೋಚನೆಯ ಬಗ್ಗೆ ನಡೆಸಿದ ಹಲವು ಕಾಲದ ಚಿಂತನೆ ಈ ಕೃತಿಯ ವಸ್ತುವಾಗಿದೆ. ಬಂಗಾಳದ ಗೌರ್ನರ್ ಆಗಿದ್ದ ಮುಖರ್ಜಿ ಯವರು ಇಂಗ್ಲೀಷ್‌ನಲ್ಲಿ ರಚಿಸಿದ 'Prohibition why?' ಎಂಬ ಕೃತಿಯ ಕನ್ನಡ ಅನುವಾದ ಗೊರೂರರವರ ಕೃತಿಯಾಗಿದೆ. ಮೂಲ ಲೇಖಕರ ವಿಚಾರಧಾರೆಯನ್ನು ಸ್ಪಷ್ಟಪಡಿಸುವುದರ ಜೊತೆಗೆ ಗೊರೂರರವರು ತಮ್ಮ ಸುದೀರ್ಘ ಚರ್ಚೆಯನ್ನು ಈ ಕೃತಿಯಲ್ಲಿ ಮಂಡಿಸಿದ್ದಾರೆ. ಗೊರೂರರವರು ಸರಳ ಶೈಲಿಯಲ್ಲಿ ಮದ್ಯಪಾನದ ದುಷ್ಪರಿಣಾಮವನ್ನು ಈ ಕೃತಿಯಲ್ಲಿ ತಿಳಿಸಿರುವುದು ಅತ್ಯಂತ ಸ್ವಾಗತಾರ್ಹ ವಿಷಯವಾಗಿದೆ. ಗೊರೂರರವರು ಮಹಾನ್ ವ್ಯಕ್ತಿಗಳ ವಿಚಾರಧಾರೆಯನ್ನು ತಮ್ಮದಾಗಿಸಿಕೊಂಡು ಬರೆದಿರುವಂತಹ ವೈಚಾರಿಕ ಕೃತಿಗಳು ಅವರ ವ್ಯಕ್ತಿತ್ವಕ್ಕೆ ಭಾಷಾಂತರ ಕಲೆಗೆ ಹಿಡಿದ ಸ್ಪಷ್ಟ ಕನ್ನಡಿಯಾಗಿದೆ. ಭಾಷಾಂತರಕಾರನಿಗೆ ಭಾಷೆಯ ಮೇಲೆ ಪ್ರಭುತ್ವ ಇರಬೇಕು ಮತ್ತು ಭಾಷಾಂತರ ಕೃತಿಯ ಭಾವವನ್ನು ತಮ್ಮದಾಗಿಸಿಕೊಳ್ಳುವ ನೈಪುಣ್ಯತೆ ಇರಬೇಕು. ಈ ಎರಡು ಅಂಶಗಳಲ್ಲಿ ಗೊರೂರರವರು ಸಿದ್ಧಹಸ್ತರಾಗಿರು ವುದನ್ನು ಅವರ ಭಾಷಾಂತರ ಕೃತಿಗಳಲ್ಲಿ ಗುರುತಿಸಬಹುದು.

‘ಪೂರ್ಣಸ್ವದೇಶಿ’ ಕೃತಿಯನ್ನು ಗೊರೂರರವರು ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ‘ಪೂರ್ಣಸ್ವದೇಶಿ’ ಕೃತಿಯನ್ನು ಓದುವಾಗ ಎಲ್ಲಿಯೂ ಅದು ಅನುವಾದ ಕೃತಿ ಎಂದು ಅನಿಸುವುದಿಲ್ಲ. ಈ ಕೃತಿಯಲ್ಲಿ ಗಾಂಧಿಯವರ ಸ್ವದೇಶಿಯ ಅಭಿಮಾನವನ್ನು ನೋಡಬಹುದು. ಸ್ವಾತಂತ್ರ್ಯ ಚಳವಳಿಯಲ್ಲಿ ಸ್ವದೇಶ ಚಳವಳಿಯೂ ಅತ್ಯಂತ ಪ್ರಮುಖ ವಾಹಿನಿಯಾಗಿತ್ತು. ಗಾಂಧಿವಾದಿಯಾದ ಗೊರೂರರವರು ಸ್ವದೇಶಿ ಚಳವಳಿ ರಾಷ್ಟ್ರದ ಆರ್ಥಿಕ ಭದ್ರತೆಗೆ ಹೇಗೆ ಪೂರಕವಾಗಿದೆ ಎಂಬುದನ್ನು ನಾವು ಗೊರೂರರವರ ಅಭಿಪ್ರಾಯಗಳಲ್ಲಿ ಮನವರಿಕೆ ಮಾಡಿಕೊಳ್ಳಬಹುದು. ಸ್ವದೇಶಿ ಚಳುವಳಿಯನ್ನು ಪ್ರಾರಂಭದಲ್ಲಿ ಕೆಲವರು ಒಪ್ಪದೇ ಇದ್ದುದ್ದನ್ನು ಗೊರೂರರವರು ಈ ಕೃತಿಯಲ್ಲಿ ವಿಚಾರ ಮಾಡಿದ್ದಾರೆ.

ಗೊರೂರರವರ ಅನುವಾದಿತ ಕೃತಿಗಳಲ್ಲಿ ಗಾಂಧಿ ಸಾಹಿತ್ಯಕ್ಕೆ ಪ್ರಮುಖ ಸ್ಥಾನವಿದೆ. ಹಾಗೆಯೇ ಇವರು ‘ಭಾರತ ಭಾಗ್ಯವಿಧಾತ’ ಎಂಬ ಸ್ವತಂತ್ರ ಗಾಂಧಿ ಸಾಹಿತ್ಯ ಕೃತಿಯನ್ನು ಚಿತ್ರಿಸಿದ್ದಾರೆ. ವಿಶ್ವಮಾನ್ಯ ವ್ಯಕ್ತಿಯಾದ ಗಾಂಧೀಜಿಯವರ ವ್ಯಕ್ತಿತ್ವ ತೇಜೋಮಯವಾದದ್ದು. ಅವರು ತಮ್ಮ ಮಾತು, ಕಾರ್ಯ, ವರ್ಚಸ್ಸಿನ ಮೂಲಕ ಸಹಸ್ರ ಮಂದಿಯ ಮನಸ್ಸನ್ನು ಸೂರೆಗೊಂಡಿದ್ದಾರೆ. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಕೇಂದ್ರವ್ಯಕ್ತಿಯಾಗಿ-ಶಕ್ತಿಯಾಗಿ, ಚೈತನ್ಯರೂಪಿಯಾಗಿ ಮಹಾತ್ಮಗಾಂಧಿಯವರು ಬದುಕಿದ ಬಾಳು ಅಪೂರ್ವ, ಅರ್ಥಪೂರ್ಣ ಅಮೋಘವಾದದ್ದು. ಗಾಂಧೀಜಿಯ ವ್ಯಕ್ತಿತ್ವಕ್ಕೆ, ಸ್ವಾತಂತ್ರ್ಯ ಚಳವಳಿಯ ಆಯಸ್ಕಾಂತಕ್ಕೆ ಒಳಗಾದ ಭಾರತೀಯರಲ್ಲಿ ಗೊರೂರರವರು ಒಬ್ಬರಾಗಿದ್ದಾರೆ. ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಜೀವತುಂಬಿ ಗಾಂಧೀಜಿಯವರ ತತ್ತ್ವ ಧ್ಯೆಯೋದ್ದೇಶಗಳನ್ನು ಜನಮನಕ್ಕೆ ವಿಶೇಷವಾಗಿ ಗ್ರಾಮೀಣ ಪರಿಸರದಲ್ಲಿ ಸಮರ್ಥ ರೀತಿಯಲ್ಲಿ ಪ್ರಚಾರ ಮಾಡಿದ ದೇಶಭಕ್ತರಲ್ಲಿ ಗೊರೂರರವರು ಸಮರ್ಥರಾಗಿದ್ದಾರೆ. ಗೊರೂರರವರು ಗಾಂಧಿಯ ಸಂಪರ್ಕದಿಂದ ಗಾಂಧಿತತ್ತ್ವಗಳನ್ನು ಮನಗತ ಮಾಡಿಕೊಂಡಿದ್ದರು. ಚಳುವಳಿಯನ್ನು ಸಕ್ರಿಯಗೊಳಿಸಿದ್ದರು. ಹೀಗೆ ನಿಜವಾದ ಅರ್ಥದಲ್ಲಿ ಪೂರ್ಣ ಗಾಂಧೀಜಿಯವರ ಅನುಯಾಯಿಯಾಗಿದ್ದ ಗೊರೂರರವರು ಗಾಂಧಿಯವರನ್ನು ಕುರಿತು ಬರೆದ ಕೃತಿಗಳಾಗಲೀ, ಲೇಖನಗಳಾಗಲಿ ಅರ್ಥಪೂರ್ಣ ಬರಹಗಳಾಗಿವೆ. ಇವು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಸಾಹಿತ್ಯ ಕೃತಿಗಳಾಗಿವೆ.

‘ಭಾರತ ಭಾಗ್ಯವಿಧಾತ’ ಕೃತಿಯಲ್ಲಿ ಗಾಂಧೀಜಿಯವರ ಜೀವನದ ಬಹುಮುಖವನ್ನು ಕಾಣಬಹುದು. ಬೇರೆ ಬೇರೆ ಕಾಲದಲ್ಲಿ ಗೊರೂರರವರು ಬರೆದು ಪ್ರಕಟಿಸಿದ ಲೇಖನಗಳು ಇಲ್ಲಿದೆ. ಗಾಂಧೀಜಿ ಬದುಕಿನ ಪ್ರಧಾನ ಮೈಲಿಗಲ್ಲುಗಳು ಎಂದು ಇಲ್ಲಿನ ಲೇಖನಗಳನ್ನು ಕರೆಯಬಹುದು. ಕೃತಿಯ ಮೊದಲಿಗೆ ಕಾಣುವ ಗಾಂಧೀಜಿಯ ಭೇಟಿಯ ಸನ್ನಿವೇಶದ ಚಿತ್ರ ಅತ್ಯಂತ ಆಕರ್ಷಕವಾಗಿದೆ. ಗಾಂಧೀಜಿಯವರಿಗೆ ಬಂದ ಟಪಾಲಿನ ದೊಡ್ಡ ಚೀಲವನ್ನು ಕಂಡ ಗೊರೂರರವರಿಗೆ ಗಾಂಧೀಜಿಯವರನ್ನು ಕಂಡಷ್ಟೆ ವಿಸ್ಮಯವಾಗುತ್ತದೆ. ನಿಗೂಢವಾಗಿರುವ ಆ ಪತ್ರಗಳ ಹಿನ್ನೆಲೆಯಲ್ಲಿ ಲೇಖಕರು ಗಾಂಧೀಜಿಯವರ ವ್ಯಕ್ತಿತ್ವವನ್ನು ಅರಿತುಕೊಳ್ಳಲು

ಅಳೆಯಲು ಪ್ರಯತ್ನಿಸುವುದು ಸಹಜವಾಗಿಯೇ ಕುತೂಹಲದ ಸಂಗತಿಯಾಗಿದೆ. ಗೊರೂರರವರು ಮೊದಲ ಭೇಟಿಯಲ್ಲಿಯೇ ಗಾಂಧಿಯವರನ್ನು ವರ್ಣಿಸುವ ರೀತಿ "ಸ್ವತಃ ಗಾಂಧಿಯೇ ಭಗವಂತ ಸೃಷ್ಟಿಸಿರುವ ಅದ್ಭುತ ಕಾವ್ಯ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೫೬; ಪು.೫) ಎಂದು ಆಡಿರುವ ಮಾತು ಸಮಂಜಸ ಎನಿಸುತ್ತದೆ. ಮೊದಲ ಅಧ್ಯಾಯಕ್ಕೆ 'ನಂದಿ ಬೆಟ್ಟದಲ್ಲಿ ಸ್ಥಾಣು' ಎಂದು ಶೀರ್ಷಿಕೆ ಕೊಟ್ಟಿರುವುದು ವಿಶೇಷ ಅರ್ಥದಲ್ಲಿ ಒಪ್ಪಿತವಾಗಿದೆ. 'ಭಾರತ ಇತಿಹಾಸದ ಒಂದು ನೋಟ' ಅಧ್ಯಾಯ ದಲ್ಲಿ ಭಾರತದ ರಾಜಕೀಯ ಸಾಂಸ್ಕೃತಿಕ ಇತಿಹಾಸವನ್ನು ಗೊರೂರರವರು ನೀಡಿದ್ದಾರೆ. ಗಾಂಧೀಜಿಯವರ ಆಗಮನಕ್ಕೆ ಮುನ್ನ ಭಾರತ ಸ್ಥಿತಿ ಹೇಗಿತ್ತು ಎಂಬುದರ ಚಿತ್ರ ಇಲ್ಲಿದೆ. ಗಾಂಧಿ ಅದಮ್ಯ ಆಧ್ಯಾತ್ಮಿಕ ಶಕ್ತಿಯ ಪ್ರತಿನಿಧಿ ಎಂಬುದು ಈ ಭಾಗದಲ್ಲಿ ವ್ಯಕ್ತವಾಗುತ್ತದೆ. ಇದೇ ಅಧ್ಯಾಯದಲ್ಲಿ ಗಾಂಧೀಜಿಯ ವ್ಯಕ್ತಿತ್ವದ ಸಮಗ್ರ ಚಿತ್ರವನ್ನು ನೋಡುತ್ತೇವೆ.

ಗಾಂಧೀಜಿಯವರ ಕರ್ಮಯೋಗದ ಬಗ್ಗೆ ಗೊರೂರರವರು ಗಾಂಧೀಜಿಯವರ ದಲಿತ ನಾರಾಯಣ ಸೇವೆಯನ್ನು ಆದರ್ಶವಾಗಿ ಹೇಳಿದ್ದಾರೆ. ಸ್ಥಿತಪ್ರಜ್ಞನ ಲಕ್ಷಣದೊಂದಿಗೆ ಗಾಂಧೀಜಿಯವರ ಕರ್ಮಕೌಶಲ್ಯ ಆದರ್ಶಪ್ರಾಯವಾದದ್ದು ಎನ್ನುತ್ತಾರೆ. ಗಾಂಧೀಜಿ ತಮ್ಮ ಬದುಕಿನ ಆಚರಣೆಯ ಮೂಲಕ ತಮ್ಮ ಸಂದೇಶವನ್ನು ಸ್ಪಷ್ಟ ಮಾಡಿದ್ದಾರೆ. ಅಸ್ಪೃಶ್ಯತೆಯ ಬಗ್ಗೆ ಗಾಂಧಿ ಆಡಿದ ಮಾತು "ನಾನು ನನ್ನ ಹೆಂಡತಿ ಯನ್ನು ಮದುವೆಯಾಗುವುದಕ್ಕೆ ಮುಂಚೆಯೇ ಅಸ್ಪೃಶ್ಯತಾ ನಿವಾರಣೆಯನ್ನು ಮದುವೆಯಾದೆ. ನನ್ನ ಬಾಳಿನಲ್ಲಿ ಎರಡು ಕಠಿಣ ಪರಿಸ್ಥಿತಿ ಬಂದಿತ್ತು. ಇಲ್ಲ ಹರಿಜನರಿಗಾಗಿ ಕೆಲಸ ಮಾಡಬೇಕು. ಇಲ್ಲ ಹೆಂಡತಿಯನ್ನು ಬಿಡಬೇಕು. ನಾನೇನೋ ಮೊದಲನೆಯದನ್ನೇ ಆರಿಸಿಕೊಳ್ಳುತ್ತಿದ್ದೆ. ಆದರೆ ನನ್ನ ಹೆಂಡತಿಯ ಸೌಜನ್ಯದಿಂದ ಅದು ತಪ್ಪಿತು". (ಅದೇ; ಪು.೪೪) ಗಾಂಧೀಜಿ ಆಚರಿಸಿದ ಬ್ರಹ್ಮಚರ್ಯೆ ಶುಕಮುನಿಯ ಬ್ರಹ್ಮಚರ್ಯೆಯಲ್ಲ, ಸತ್ಯನಿಷ್ಠ ಸಂಸಾರಿಯ ಬ್ರಹ್ಮಚರ್ಯೆ. ಗಾಂಧೀಜಿ ಸಂಪೂರ್ಣ ಅರ್ಥದಲ್ಲಿ ಅಜಾತಶತ್ರು. ಗಾಂಧಿಯವರು ರಾಜಕೀಯ ಮತ್ತು ಧರ್ಮವನ್ನು ಯಥಾರ್ಥವಾಗಿ ಬೆಸೆದಿದ್ದಾರೆ. ಗಾಂಧೀಜಿ ಸ್ವಾತಂತ್ರ್ಯದ ನಂತರ ದೇಶ ವಿಭಜನೆಯಾದದ್ದನ್ನು ಕಂಡು ಅಪಾರವಾಗಿ ಕೊರಗಿದರು. ಸತ್ಯಾಗ್ರಹದ ಮೂಲಕ ಸ್ವಾತಂತ್ರ್ಯವನ್ನು ಸಂಪಾದಿಸಿದ ಹೆಮ್ಮೆ ಗಾಂಧಿಯವರಿಗೆ ಇದ್ದರೂ ಸಹ ಅವರಿಗೆ ಅನಿರೀಕ್ಷಿತ ಅಘಾತವನ್ನು ಉಂಟುಮಾಡಿತು. ಮಹಾತ್ಮ ಗಾಂಧಿಯವರ ಮರಣ ಭೌತಿಕ ಶರೀರಕ್ಕೆ ಹೊರತು ಎಂದಿಗೂ ಅವರ ತತ್ತ್ವ ಆದರ್ಶಗಳಿಗೆ ಇಲ್ಲ. ಗೊರೂರರವರು ಗಾಂಧಿಯವರನ್ನು "ಮಹಾತ್ಮ ಗಾಂಧಿ ಭಾರತಕ್ಕೆ ಮಾತ್ರ ಸೇರಿದವರಲ್ಲ. ಅವರು ಮನುಷ್ಯ ಪ್ರಪಂಚಕ್ಕೆ ಸೇರಿದವರು. ರಾಜ್ಯದಲ್ಲಿ ಅಧಿಕಾರ ಸ್ಥಾನದಲ್ಲಿಲ್ಲದಿದ್ದರೂ, ಜಗತ್ತಿನ ಎಲ್ಲ ರಾಷ್ಟ್ರಗಳ ಬಾವುಟಗಳನ್ನು ಒಬ್ಬ ಖಾಸಗೀ ವ್ಯಕ್ತಿಯಾಗಿ ತಗ್ಗಿಸಿದ ಉದಾಹರಣೆ ಮತ್ತೆಲ್ಲಿಯೂ ಇಲ್ಲ. ಜಗತ್ತಿನ ಎಲ್ಲ ರಾಷ್ಟ್ರಗಳೂ ತನ್ನ ರಾಜ್ಯಾಂಗ ಸಭೆಗಳಲ್ಲಿ ನಿಂತು ಗಾಂಧಿಯವರ ನಿಧನಕ್ಕಾಗಿ ಶೋಕ ಪ್ರದರ್ಶನ ಮಾಡಿದವು. ಪರಮಾತ್ಮನ ವಿಷಯ ದಲ್ಲಿ ಹೇಗೆ ನಾಲ್ಕು ವೇದಗಳೂ ನೂರೆಂಟು ಉಪನಿಷತ್ತುಗಳೂ ಹೊಗಳಿದರೂ ಮುಗಿಯುವುದಿಲ್ಲವೆಂದು

ಹೇಳುತ್ತಾರೆಯೋ ಪರಮಾತ್ಮನ ಭಕ್ತರಾದ ಗಾಂಧಿಯವರ ವಿಷಯವೂ ಹಾಗೆಯೇ". (ಅದೇ; ಪು.೩೮೫) ವಿಶ್ವ ಜ್ಯೋತಿಗೆ ವಿಶ್ವವರ್ಷಿಸಿದ ಭಾಷ್ಪಾಂಜಲಿ ಎಂದು ಗೊರೂರವರು ವಿಶ್ವದ ಕಣ್ಣೀರನ್ನು ಅರ್ಥೈಸುತ್ತಾರೆ. ಗಾಂಧಿಯವರು ಭಾರತೀಯ ಸಂಸ್ಕೃತಿಯ ತಿರುಳು ಎಂಬುದನ್ನು ಗೊರೂರವರು 'ಭಾರತ ಭಾಗ್ಯವಿಧಾತ' ಕೃತಿಯಲ್ಲಿ ಸ್ಫುಟವಾಗಿ ಚಿತ್ರಿಸುವುದರ ಮೂಲಕ ಭಾರತೀಯ ಸಂಸ್ಕೃತಿ ಹಾಗೂ ಗಾಂಧೀಜಿ ಯವರ ವ್ಯಕ್ತಿತ್ವ ದರ್ಶನವನ್ನು ಈ ಕೃತಿಯಲ್ಲಿ ಲೇಖಕರು ಸ್ಪಷ್ಟಪಡಿಸಿದ್ದಾರೆ.

'ಶರೀರ ಸಾಧನಯೋಗ ಅಥವಾ ಸೌಖ್ಯದ ಗುಟ್ಟು' ಎಸ್. ಸುಂದರಮ್ ಅವರ 'Yogic Physical Culture' ಎಂಬ ಕೃತಿಯ ಭಾಷಾಂತರ ಪುಸ್ತಕ 'ಶರೀರಯೋಗ ಅಥವಾ ಸೌಖ್ಯದ ಗುಟ್ಟು'. ಈ ಪುಸ್ತಕದಲ್ಲಿ ಹದಿನಾರು ಆಸನಗಳ ವಿಧಾನ ಮತ್ತು ಅವುಗಳಿಂದಾಗುವ ಪ್ರಯೋಜನವಿದೆ. ಸ್ವತಃ ಯೋಗಾಭ್ಯಾಸದಲ್ಲಿ ಆಸಕ್ತಿಯನ್ನು ಹೊಂದಿರುವ ಗೊರೂರವರು ಈ ಕೃತಿಯನ್ನು ಭಾಷಾಂತರಿಸುವಲ್ಲಿ ಶ್ರದ್ಧೆ ಉತ್ಸಾಹಗಳನ್ನು ತೋರಿಸಿದ್ದಾರೆ. ಸ್ತ್ರೀಪುರುಷರು ಯೋಗಾಸನಗಳನ್ನು ಮಾಡುವುದರಿಂದ ಆರೋಗ್ಯ ಸುಧಾರಣೆ ಆಗುತ್ತದೆ ಎಂಬುದನ್ನು ಗೊರೂರವರು ಈ ಕೃತಿಯಲ್ಲಿ ಖಚಿತವಾಗಿ ತಿಳಿಸಿದ್ದಾರೆ. ಯೋಗಾಸನ ಗಳ ಜತೆಯಲ್ಲಿ ಪ್ರಾಣಾಯಾಮದ ಅಗತ್ಯವನ್ನು ವಿವರಿಸಿದ್ದಾರೆ. ಈ ಕೃತಿಯನ್ನು ಎಲ್ಲರೂ ಓದಿ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಸರಳ ರೀತಿಯಲ್ಲಿ ಪರಿಚಯಾತ್ಮಕ ರೀತಿಯಲ್ಲಿ ರಚಿತವಾಗಿದೆ. ಶರೀರ ಸ್ವಾಸ್ಥ್ಯ ಗೊರೂರವರಿಗೆ ಅವರ ವೈಯಕ್ತಿಕ ಜೀವನದಲ್ಲಿ ಅತಿ ಆಸಕ್ತ ವಿಷಯ ಎಂಬುದನ್ನು 'ಶರೀರ ಸಾಧನೆಯೋಗ' ಅಥವಾ 'ಸೌಖ್ಯದ ಗುಟ್ಟು' ಕೃತಿ ನಮಗೆ ತಿಳಿಯಪಡಿಸುತ್ತದೆ.

'ಮಕ್ಕಳ ಪೋಷಣೆ' ಕೃತಿ ಚಕ್ರವರ್ತಿ ರಾಜಗೋಪಾಲಚಾರ್ಯರ ಕೃತಿಯ ಭಾಷಾಂತರ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಮಕ್ಕಳ ಪೋಷಣೆಯ ಬಗ್ಗೆ ರಾಜಗೋಪಾಲಚಾರ್ಯರು ತಮಿಳಿನಲ್ಲಿ ಬರೆದ ಪ್ರಬಂಧಗಳ ಕನ್ನಡ ಅನುವಾದ 'ಮಕ್ಕಳ ಪೋಷಣೆ' ಕೃತಿ. ಮಕ್ಕಳನ್ನು ತಂದೆ ತಾಯಿ ಹೇಗೆ ಪ್ರೀತಿಸಬೇಕು ಎಂಬ ಅಂಶ ಈ ಕೃತಿಯಲ್ಲಿ ಚರ್ಚಿತವಾಗಿದೆ. "ಬಾಳಿನಲ್ಲಿ ಸಂಭವಿಸುವ ಅನೇಕ ದುಃಖಗಳಿಗೆ ಹೆತ್ತವರ ಅಲಕ್ಷ್ಯವೂ ವಿವೇಕ ಹೀನತೆಯೂ ಕಾರಣವಾಗುವುದು" (ಗೊರೂರು ರಾಮಸ್ವಾಮಿ ಅಯ್ಯಂಗಾರ್: ೧೯೫೨; ಪು.೭) ಎಂದು ಕೃತಿಯಲ್ಲಿ ಪ್ರಸ್ತಾಪಿಸಲಾಗಿದೆ. ಶಾಸ್ತ್ರೀಯವಾದ ವಿಷಯವನ್ನು ಗೊರೂರವರು ಅರ್ಥವಾಗುವಂತೆ ತಿಳಿಗನ್ನಡದಲ್ಲಿ ಹೇಳುವುದು ಈ ಕೃತಿಯ ವಿಶೇಷ ಗುಣ.

'ತಾಯ್ನುಡಿಯಲ್ಲಿ ಶಿಕ್ಷಣ' ಸುಪ್ರಸಿದ್ಧ ಗಾಂಧಿವಾದಿಗಳಾದ ಶ್ರೀಮನ್ನಾರಾಯಣ ಅಗರ್‌ವಾಲರು ಇಂಗ್ಲೀಷ್‌ನಲ್ಲಿ ಬರೆದಿರುವ 'Medium of Instruction' ಕೃತಿಯ ಅನುವಾದ 'ತಾಯ್ನುಡಿಯಲ್ಲಿ ಶಿಕ್ಷಣ' ಎಂಬ ಕೃತಿ. ಶ್ರೀಮನ್ನಾರಾಯಣ ಅಗರ್‌ವಾಲರು ಅಪೂರ್ವ ಗಾಂಧಿವಾದಿಗಳು ಅಷ್ಟೇ ಅಲ್ಲದೆ ಅರ್ಥಶಾಸ್ತ್ರಜ್ಞರು ಹಾಗೂ ಶಿಕ್ಷಣ ತಜ್ಞರು ಆಗಿದ್ದರು. ಭಾರತದಲ್ಲಿ ಪ್ರಚಲಿತವಾಗಿರುವ ಶಿಕ್ಷಣ ಕ್ರಮದ ಬಗ್ಗೆ ಈ ಕೃತಿಯಲ್ಲಿ ವೈಜ್ಞಾನಿಕ ವೈಚಾರಿಕ ವಿಚಾರಧಾರೆಯನ್ನು ಗುರುತಿಸಬಹುದು. ಶ್ರೀಮನ್ನಾರಾಯಣ

ಅಗರ್‌ವಾಲರು ಕಾಲು ಶತಮಾನದ ಹಿಂದೆ ಶಿಕ್ಷಣ ಕ್ರಮದ ಬಗ್ಗೆ ಕೊಟ್ಟಿರುವ ಅಭಿಪ್ರಾಯಗಳು ಇಂದಿಗೂ ಅಗತ್ಯವಾದ ವಿಚಾರಧಾರೆಯಾಗಿದೆ ಎಂದು ಗೊರೂರರವರು ತಿಳಿಸುತ್ತಾರೆ. ಮಗುವಿನ ದೇಹದ ಬೆಳವಣಿಗೆಗೆ ತಾಯಿ ಹಾಲು ಹೇಗೆ ಅವಶ್ಯವೋ ಹಾಗೆಯೇ ಮನುಷ್ಯನ ಬುದ್ಧಿಯ ಬೆಳವಣಿಗೆಗೆ ಮಾತೃ ಭಾಷೆ ಅತ್ಯವಶ್ಯ ಎಂದು ಶ್ರೀಮನ್ನಾರಾಯಣ ಅಗರ್‌ವಾಲರು ಕೃತಿಯ ಪೀಠಿಕೆಯಲ್ಲಿಯೇ ಸ್ಪಷ್ಟಪಡಿಸಿದ್ದಾರೆ. ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ತಾಯ್ನುಡಿಗೆ ನಾವು ಆದ್ಯತೆ ಕೊಟ್ಟಂತೆ ಇಂಗ್ಲೀಷ್ ಭಾಷೆಯನ್ನು ಬಹಿಷ್ಕರಿಸುವುದು ಸಾಧುವಲ್ಲ ಎಂಬ ಮಾತನ್ನು ಲೇಖಕರು ಈ ಕೃತಿಯಲ್ಲಿ ಪರಿಣಾಮಕಾರಿಯಾಗಿ ಪ್ರತಿಪಾಸಿದ್ದಾರೆ. ಮೂಲ ಕೃತಿಯ ಗಹನವಾದ ವಿಷಯದೊಂದಿಗೆ ಗೊರೂರರವರು ತಮ್ಮ ಕೃತಿಯಲ್ಲಿ ಸಾಕಷ್ಟು ವಿವರಣೆಯನ್ನು ಕೊಟ್ಟು ಮೂಲ ಲೇಖಕರ ಆಶಯ ಸ್ಪಷ್ಟವಾಗುವಂತೆ ಮಾಡಿರುವುದು ಅವರ ಅನುವಾದ ಕೃತಿಯ ವಿಶೇಷ ವಿಷಯವಾಗಿದೆ.

'ಜಗದ್ಗುರುಗಳ ದಿವ್ಯ ಬೋಧೆ' ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳು ಹನ್ನೊಂದು ವರ್ಷಗಳ ಹಿಂದೆ ಮದ್ರಾಸಿನಲ್ಲಿ (ಚೆನ್ನೈ) ಸಾರ್ವಜನಿಕರನ್ನುದ್ದೇಶಿಸಿ ಮಾಡಿದ ಪ್ರವಚನಗಳ ಕನ್ನಡ ರೂಪವೇ 'ಜಗದ್ಗುರುಗಳ ದಿವ್ಯ ಬೋಧೆ' ಎಂಬ ಕೃತಿ. ಗುರುಗಳ ಪ್ರವಚನಗಳನ್ನು ಕೇಳುವ ಅವಕಾಶ ವಿಲ್ಲದ, ಕೇಳಿದರೂ ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕೆಂಬ ಹಾಗೂ ಧರ್ಮ ಸಂಬಂಧವಾಗಿ ತಲೆದೋರುವ ಯಾವುದೇ ಸಂಶಯವನ್ನು ಸುಲಭವಾಗಿ ಪರಿಹರಿಸಿಕೊಳ್ಳಬಯಸುವ ಜನಗಳಿಗೆ 'ಜಗದ್ಗುರುಗಳ ದಿವ್ಯ ಬೋಧೆ' ಉಪಯುಕ್ತ ಪುಸ್ತಕವಾಗಿದೆ. ಅರವತ್ತು ಅಧ್ಯಾಯಗಳಿಂದ ಕೂಡಿ, ಇನ್ನೂರ ಎಪ್ಪತ್ತು ಪುಟಗಳ ವಿಸ್ತಾರದಲ್ಲಿ ಹಬ್ಬಿರುವ ಈ ಕೃತಿಯಲ್ಲಿ ಧರ್ಮ, ನೀತಿ, ಆಚಾರ, ಆದರ್ಶಗಳನ್ನು ಕುರಿತ ಆಲೋಚನೆ ಗಳು ಕಂಡುಬರುತ್ತವೆ. ಕ್ರೈಸ್ತ, ಇಸ್ಲಾಂ ಮುಂತಾದ ಮತಗಳ ಹಾಗೆ ಅಲ್ಲ ಸನಾತನ ಧರ್ಮ. ನಮ್ಮ ಧರ್ಮಕ್ಕೆ ಹಿಂದೂ ಧರ್ಮ ಎಂಬ ಹೆಸರು ಬಂದದ್ದಾದರೂ ಇತ್ತೀಚೆಗೆ. ವಾಸ್ತವವಾಗಿ ಇದು ಸನಾತನ ಧರ್ಮ. ಶಾಶ್ವತವಾದ ತತ್ತ್ವಗಳನ್ನು ಬೋಧಿಸುವ ಧರ್ಮವೇ ಸನಾತನ ಧರ್ಮ ಎನ್ನುವುದು ಗುರುವಿನ ನುಡಿ. ಇದರ ಶಕ್ತಿ ಇರುವುದು ಈ ಧರ್ಮದ ನಿಯಮಗಳನ್ನು ಪಾಲಿಸುವ ವ್ಯಕ್ತಿಗಳು ಇರುವುದರಿಂದಲೆ. "ಹಿಂದೂ ಧರ್ಮ, ಇತರ ಮತಗಳಿಂದ ತನ್ನ ಮತಕ್ಕೆ ಜನರನ್ನು ಮತಾಂತರಗೊಳಿಸುವುದನ್ನು ಒಪ್ಪಲಿಲ್ಲ. ಈ ಕಾರಣದಿಂದಲೇ ಹಿಂದೂ ಧರ್ಮಶಾಸ್ತ್ರದಲ್ಲಿ ಎಲ್ಲಿಯೂ ಮತಾಂತರದ ಪ್ರಸ್ತಾಪವಿಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೭; ಪು. ೧೩-೧೪) ಗುರುಗಳು ತಮ್ಮ ಮಾತಿಗೆ ವ್ಯಾಖ್ಯಾನ ಎಂಬಂತೆ ಮುಂದುವರಿದು, ಹಿಂದೂ ಧರ್ಮವನ್ನು ಸನಾತನ ಧರ್ಮವೆಂದು ಹೇಳುವುದಕ್ಕೆ ಕಾರಣ ತಿಳಿಸುತ್ತಾ, ಅದು ಎಂದಿಗೂ ನಿಂತ ನೀರಾಗದೇ, ನಿರಂತರವಾಗಿ ಪರಿವರ್ತನಾಶೀಲತೆಯನ್ನು ಹೊಂದಿದೆ ಎನ್ನುತ್ತಾರೆ. "ವೇದ ಧರ್ಮವೇ ಅತ್ಯಂತ ಪ್ರಾಚೀನವಾದುದು ಎಂಬುದಕ್ಕೆ ಆಧಾರವಿದೆ. ಅದು ಜಗತ್ತಿನ ಇತರ ಭಾಗಗಳಿಗೂ ವ್ಯಾಪಿಸಿದ್ದಿತು. ಈಚೆಗೆ ಆ ದೇಶಗಳಲ್ಲಿ ಇತರ ಮತಗಳೂ ಹರಡಿವೆ. ಹಿಂದೂ ಧರ್ಮ ಈಗ ಭಾರತದಲ್ಲಿ ಮಾತ್ರ ಪ್ರಚಾರದಲ್ಲಿದೆ. ಈ ಹೊಸ ಧರ್ಮಗಳು ಹೇಗೆ ಹಬ್ಬಿದವು? ಹೇಗೆ ಬೆಳೆದವು?

ಇದಕ್ಕೆ ಕಾರಣ, ಹಿಂದೂ ಮತದಲ್ಲಿ ಹಿಂದೂಗಳಿಗೆ ಶ್ರದ್ಧೆ ಇಲ್ಲದಿರುವುದೇ ಮತ್ತು ಹಿಂದೂ ಧರ್ಮಾನುಯಾಯಿಗಳು ಕರ್ಮಾನುಷ್ಠಾನ ಮತ್ತು ಧಾರ್ಮಿಕ ಆಚರಣೆಗಳನ್ನು ಕ್ರಮವಾಗಿ ಮಾಡದೆ ಇರುವುದೇ ಆಗಿದೆ. ನಮ್ಮ ಧರ್ಮ ಸತ್ತ್ವಹೀನವಾದುದಕ್ಕೆ ಅಥವಾ ಅಶಕ್ತವಾದುದಕ್ಕೆ ಕಾರಣ, ನಾವು ಧರ್ಮವನ್ನು ಹೊರಗೆ ಅಥವಾ ಬೇರೆ ದೇಶದವರಿಗೆ ಪ್ರಚಾರ ಮಾಡಲಿಲ್ಲ ಎಂಬುದಲ್ಲ. .... ಧರ್ಮಶಕ್ತಿ ಇರುವುದು ಅದರ ಅನುಯಾಯಿಗಳ ಸಂಖ್ಯೆ ಎಷ್ಟು ಎಂಬುದರ ಮೇಲೆ ಅಲ್ಲ. ಅನುಯಾಯಿಗಳ ಆಚರಣೆ ಮೇಲೆ. ಹಿಂದೂ ಧರ್ಮದ ಅತ್ಯಂತ ಶ್ರೇಷ್ಠ ಪ್ರಚಾರಕ ಯಾರೆಂದರೆ, ಆ ಧರ್ಮದ ತತ್ತ್ವಗಳಿಗನುಸಾರವಾಗಿ ಯಾರು ಜೀವಿಸುತ್ತಾನೆಯೋ ಅವನೇ. ಅಂತಹ ಮಹಾನ್‌ಗಳು ಕಡಿಮೆ ಸಂಖ್ಯೆಯಲ್ಲಿದ್ದರೂ ಚಿಂತೆಯಿಲ್ಲ. ಇಂದಿಗೂ ಹಿಂದೂ ಧರ್ಮ ಉಳಿದಿರುವುದು ಇಂತಹ ಸಂತರಿಂದಲೇ" ಎನ್ನುತ್ತಾರೆ ಸ್ವಾಮೀಜಿ. (ಅದೇ; ಪು.೧೮) ಹೀಗೆ ಸನಾತನ ಧರ್ಮದ ಈ ವ್ಯಾಪಕ ಚಿತ್ರವನ್ನು ನೀಡಿರುವ ಸ್ವಾಮಿಗಳಿಗೆ ಹಿಂದೂಗಳು ಇತರ ಮತಗಳೊಂದಿಗೆ ಸ್ಪರ್ಧಿಸುವ ಮನೋಭಾವ ಒಪ್ಪಿಗೆಯಾಗುವುದಿಲ್ಲ.

ಅನೇಕ ಇಂಥ ವಿಶಾಲಭಾವ ತಳೆದಿರುವ ಸನಾತನ ಧರ್ಮದಲ್ಲಿ ದೇವರುಗಳಿಗೂ, ಹಲವು ಮಾರ್ಗಗಳಿಗೂ ಕೊರತೆಯಿಲ್ಲ. ಇವುಗಳ ಜತೆಯಲ್ಲಿ ನಾಸ್ತಿಕರನ್ನು ಈ ಧರ್ಮ ಸಹಿಸುತ್ತದೆ. ಜೈನ, ಬೌದ್ಧ, ಕ್ರೈಸ್ತ, ಇಸ್ಲಾಂ ಮತಗಳನ್ನು ಗೌರವಿಸುತ್ತದೆ. ಇದು ಹಿಂದೂ ಧರ್ಮದ ಮತ ಸಹಿಷ್ಣುತೆಗೆ ನಿದರ್ಶನ ಕೂಡ. ಹೀಗೆ ಭಾರತೀಯ ಸಂಸ್ಕೃತಿಯ ಪ್ರತೀಕವಾದ ಹಿಂದೂ ಧರ್ಮದ ಮಹತ್ವವನ್ನು ವಿಶದಪಡಿಸುತ್ತದೆ. ಜನಸಾಮಾನ್ಯರನ್ನು ಉದ್ದೇಶಿಸಿ ಹಲವು ದಿನಗಳ ಕಾಲ ಮಾಡಿದ ಉಪನ್ಯಾಸಗಳು ಇವು. ಆದ್ದರಿಂದ ಆಯಾ ಸಂದರ್ಭಕ್ಕೆ ಅನುಗುಣವಾಗಿ ಪ್ರವಚನಕಾರರ ಮನಸ್ಸಿನಲ್ಲಿ ಮೂಡಿದ ಸಂಗತಿಗಳಾಗಿದ್ದರಿಂದ ಈ ಕೃತಿಯ ಕೆಲವು ಭಾಗಗಳು ಜಾಳಾಗಿಯೂ ಮತ್ತೆ ಕೆಲವು ಒತ್ತಾಗಿಯೂ ಇರುವುದು ಅನಿವಾರ್ಯ. ಈ ಪ್ರವಚನಗಳನ್ನು ಅನುವಾದಿಸಿರುವ ಗೊರೂರರವರು ಇಂಥ ವಿಚಾರಗಳಲ್ಲಿ ಆಸಕ್ತರಾದವರಿಗೆಲ್ಲ ಉಪಕಾರ ಮಾಡಿದ್ದಾರೆ ಎನ್ನಬಹುದು. ಅನುವಾದದ ಭಾಷೆ ನೇರವೂ ಸರಳವೂ ಆಗಿದೆ. ಮೊದ ಮೊದಲ ಪುಟಗಳಂತೂ ಪಾದರಸದಂತೆ ಅದು ಪುಟಿಯುತ್ತದೆ. ಪ್ರವಚನಗಳನ್ನು ಆಲಿಸಿರುವ, ಅಧ್ಯಾತ್ಮ ವಿಚಾರವನ್ನು ಕುರಿತು ಅಭ್ಯಾಸ ಮಾಡಿರುವ ಗೊರೂರು 'ಜಗದ್ಗುರುಗಳ ದಿವ್ಯ ಬೋಧೆ'ಗೆ ಅಲ್ಲಿಲ್ಲಿ ತಮ್ಮ ಸ್ವಂತಿಕೆಯ ಮೆರಗನ್ನು ಕೊಟ್ಟಿದ್ದಾರೆ.

ಗೊರೂರರವರು ತಮ್ಮ 'ಭಕ್ತಿಯೋಗ' ಕೃತಿಯಲ್ಲಿ ವಿವೇಕಾನಂದರ ವಿಚಾರಧಾರೆಗಳನ್ನು ಕನ್ನಡಿಸಿದ್ದಾರೆ. 'ಭಕ್ತಿಯೋಗ' ಕೃತಿಯಲ್ಲಿ ಭಕ್ತಿಯೋಗಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡಲು ಕಾರಣವೇನು? ಕರ್ಮಯೋಗ, ರಾಜಯೋಗ, ಜ್ಞಾನಯೋಗಕ್ಕಿಂತ ಭಕ್ತಿಯೋಗ ಜನಪ್ರಿಯವಾಗಲು ಕಾರಣವೇನು? ಎಂಬುದನ್ನು ವಿವೇಕಾನಂದರು ತಮ್ಮ ಕೃತಿಯನ್ನು ವಿಶದಪಡಿಸಿದ್ದಾರೆ. ವಿವೇಕಾನಂದರು ಮೂಲ ಕೃತಿಯಲ್ಲಿ ಕೊಟ್ಟಿರುವ ಕೆಲವು ಸಂಸ್ಕೃತ ಮೂಲ ಶ್ಲೋಕಗಳನ್ನು ಅಷ್ಟೇ ಅರ್ಥಪೂರ್ಣವಾಗಿ ಗೊರೂರರವರು ತಮ್ಮ ಕನ್ನಡ ಅನುವಾದದಲ್ಲಿ ಸೇರಿಸಿದ್ದಾರೆ.

ಗೊರೂರರವರ 'ಸಾಹಿತ್ಯದ ಜೀವಾಳ' ಒಂದು ಅನುವಾದ ಕೃತಿ ಷೋಪನ್ ಹೌರನ ನಾಲ್ಕು ಪ್ರಬಂಧಗಳ ಅನುವಾದ ಈ ಕೃತಿಯಲ್ಲಿದೆ. ಷೋಪನ್ ಹೌರನು ಇಂಡಿಯಾದ ಉಪನಿಷತ್ತು ಮತ್ತು ಬೌದ್ಧ ಧರ್ಮಗಳ ತತ್ತ್ವಗಳಿಂದ ಪ್ರಭಾವಿತನಾದವನು. ಈತ ಸಾಹಿತ್ಯಕಲೆಗಳಲ್ಲಿಯೂ ಆಸಕ್ತನಾದ ತತ್ತ್ವಶಾಸ್ತ್ರಜ್ಞ. ಈ ಕಾರಣದಿಂದಲೇ ಇವನ ಲೇಖನಗಳಲ್ಲಿ ಸಾಹಿತ್ಯದ ಚಿಂತನೆ ತಾತ್ವಿಕ ದೃಷ್ಟಿಯ ಹಿನ್ನೆಲೆಯಲ್ಲಿ ಮೂಡಿಬಂದಿದೆ. ಈ ಕೃತಿಯಲ್ಲಿ 'ಲೇಖನಕಲೆ', 'ತನ್ನಷ್ಟಕ್ಕೆ ತಾನು ಆಲೋಚನೆ ಮಾಡುವುದು', 'ಗ್ರಂಥಗಳು ಮತ್ತು ಅವುಗಳ ವ್ಯಾಸಂಗ', 'ಶೈಲಿ' ಹೀಗೆ ನಾಲ್ಕು ಪ್ರಬಂಧಗಳನ್ನು ಕಾಣಬಹುದು. ಈ ಎಲ್ಲ ಲೇಖನಗಳಲ್ಲಿಯೂ ಸಾಹಿತ್ಯದ ಚಿಂತನೆ ಮೂಲ ಅಂಶವಾಗಿದೆ. 'ಲೇಖನ ಕಲೆ' ಪ್ರಬಂಧದಲ್ಲಿ ಬರವಣಿಗೆಯ ಮೂಲ ಉದ್ದೇಶವನ್ನು ಷೋಪನ್ ಹೌರನು ತಿಳಿಯಪಡಿಸಿದ್ದಾನೆ. ಜನರಿಗೆ ತಿಳಿಸಬೇಕಾದ ವಿಷಯ ಇದ್ದಾಗ ಮಾತ್ರ ಸಾಹಿತಿ ಬರೆಯಬೇಕೆ ಹೊರತು ಹಣ ಸಂಪಾದನೆಗಾಗಿ ಕೃತಿ ರಚಿಸಬಾರದು ಎಂಬ ಎಚ್ಚರದ ಮಾತನ್ನು ಆಡಿದ್ದಾನೆ. ಈ ಎಚ್ಚರ ಎಲ್ಲಾ ಕಾಲದ ಎಲ್ಲ ಲೇಖಕರಿಗೂ ಇದ್ದಾಗ ಸಾಹಿತ್ಯದ ಸೃಷ್ಟಿ ಸಾರ್ಥಕವಾಗುತ್ತದೆ. ಲೇಖನ ಕಲೆಯ ಈ ಮೂಲೋದ್ದೇಶ ಪ್ರಮುಖವಾದದ್ದು. ಷೋಪನ್ ಹೌರನು ಲೇಖಕರನ್ನು ಮೂರು ಬಗೆಯಾಗಿ ವಿಂಗಡಿಸಿರುವುದನ್ನು ಗೊರೂರರವರು ಸ್ಪಷ್ಟಪಡಿಸಿದ್ದಾರೆ. ಹೇಗೆಂದರೆ "ಯೋಚನೆ ಮಾಡದೆ ಬರೆಯುವವರು ಮೊದಲನೆಯವರು". ಅವರು ಮನಸ್ಸಿನಲ್ಲಿ ತುಂಬಿರುವ ನೆನಪುಗಳಿಂದ ಬರೆಯುತ್ತಾರೆ. ಅನೇಕ ವೇಳೆ ಇತರರ ಪುಸ್ತಕದಿಂದಲೇ ನೇರವಾಗಿ ತೆಗೆದು ಬರೆಯಬಹುದು. ಆ ಗುಂಪೆ ಬಹಳ ದೊಡ್ಡದು. ಬರೆಯುತ್ತಿರುವಾಗ ಆಲೋಚನೆ ಮಾಡುವವರದು ಎರಡನೆಯದು. ಅವರು ಆಲೋಚನೆ ಮಾಡುವುದು ಬರೆಯುವುದಕ್ಕಾಗಿಯೇ. ಅವರ ಸಂಖ್ಯೆಯಾದರೂ ಕಡಿಮೆ ಇಲ್ಲ. ಬರವಣಿಗೆಯನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಯೋಚನೆ ಮಾಡುವ ಗ್ರಂಥಕರ್ತರೆ, ಕೊನೆಯ ಪಂಗಡದವರು. ಅವರು ಬಹಳ ವಿರಳ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೪೨; ಪು-೨) ಕೃತಿಕಾರರು ಕೊನೆಯ ಪಂಗಡದ ಲೇಖಕರನ್ನೇ ನಿಜವಾದ ಲೇಖಕರೆಂದು ಗುರುತಿಸುತ್ತಾನೆ. ಶ್ರೇಷ್ಠ ಗ್ರಂಥಕರ್ತರೆಲ್ಲ ಈ ಜಾತಿಗೆ ಸೇರಿರುತ್ತಾರೆ. ಹೊಸ ಗ್ರಂಥಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಡುವಾಗ ಕೇವಲ ಹಣದಾಸೆಗಾಗಿ ಹುಟ್ಟಿದ ಗ್ರಂಥಗಳು ಇವು ಎಂದು ಹೌರನು ಹೇಳುತ್ತಾನೆ. ಹೊಸದಾದ ಮಾತ್ರಕ್ಕೆ ಯಾವ ಗ್ರಂಥವೂ ಶ್ರೇಷ್ಠವಾಗಲಾರದು. ಅಂತೆಯೇ ಅನೇಕ ವೇಳೆ ಶ್ರೇಷ್ಠವಾದ ಹಳೆಯ ಗ್ರಂಥಗಳು ಸಹ ಮಾನ್ಯವಾದದ್ದು ಎಂದು ಹೌರನು ಅಭಿಪ್ರಾಯ ಪಡುತ್ತಾನೆ. ಒಂದು ಕೃತಿಯ ಮೇಲೆ ಬರೆದಿರುವ ವಿಮರ್ಶೆ ಗ್ರಂಥಗಳನ್ನು ಓದುವಾಗ ಮೂಲ ಗ್ರಂಥವನ್ನು ಮೊದಲು ಓದಬೇಕೆಂದು ಹೌರನು ಎಚ್ಚರ ಕೊಡುತ್ತಾನೆ. ಸಾಹಿತ್ಯದ ವಸ್ತು ಹಾಗೂ ರೂಪವನ್ನು ಕುರಿತು ಹೌರನು ಕೊಡುವ ಅಭಿಪ್ರಾಯ ಮುಖ್ಯವಾದದ್ದು. ಕೃತಿಯ ವಸ್ತುವಿಗಿಂತ ಕವಿಯೇ ಆ ವಸ್ತುವಿಗೆ ತಂದುಕೊಡುವ ಸತ್ತ್ವ ಮುಖ್ಯ ಎಂದು ಹೇಳಿ ಉತ್ತಮ ಸಾಹಿತ್ಯದಲ್ಲಿ ರೂಪ ತಾನಾಗಿ ಮೂಡಿ ಬರುತ್ತದೆ ಎಂದು ಹೇಳುತ್ತಾನೆ. ಸತ್ತ್ವಪೂರ್ಣವಾದ ವಸ್ತು ಸುಂದರ ರೀತಿಯಲ್ಲಿ ಮೂಡಿಬರುವುದು ಸಹಜ ಕ್ರಿಯೆ ಎಂಬುದನ್ನು ಗೊರೂರರವರು ಒಪ್ಪಿಕೊಂಡಿದ್ದಾರೆ.

ಹೌರನು ತನ್ನ ಎರಡನೆಯ ಪ್ರಬಂಧದಲ್ಲಿ ಆಲೋಚನೆಯ ಬಗ್ಗೆ ವಿಚಾರವನ್ನು ಮಂಡಿಸಿದ್ದಾನೆ. ಸಾಹಿತಿ ತಾನು ಓದಿದ್ದನ್ನು ಚೆನ್ನಾಗಿ ಆಲೋಚನೆ ಮಾಡಿ ತಾನು ಕೃತಿ ರಚಿಸಬೇಕು ಎಂಬ ಮಾತು ಎಷ್ಟು ಸತ್ಯವೋ ಓದುಗನು ಸಹ ಕೃತಿಯಲ್ಲಿ ಕಂಡ ವಿಷಯವನ್ನು ಪುನರ್ ಆಲೋಚನೆ ಮಾಡಬೇಕು ಎಂಬುದು ಅಷ್ಟೇ ಮುಖ್ಯವಾದ ವಿಷಯ. ನಿಜವಾದ ಸಾಹಿತಿಯನ್ನು ಗುರುತಿಸಿ ಹೇಳುವಾಗ ಹೌರನು ಹೇಳುವ ಮಾತು "ಪುಸ್ತಕಗಳ ಪುಟಗಳಲ್ಲಿ ತಮ್ಮ ವ್ಯಾಸಂಗವನ್ನು ನಡೆಸಿರುವವರೆ ಪಂಡಿತರು. ಆದರೆ ಪ್ರಕೃತಿಯ ಪುಸ್ತಕವನ್ನು ನೇರವಾಗಿ ಹೋಗುವವರೇ ಆಲೋಚನಾಪರರು ಮತ್ತು ಪ್ರತಿಭಾಶಾಲಿಗಳು. ಪ್ರಪಂಚಕ್ಕೆ ಜ್ಞಾನದ ಬೆಳಕನ್ನು ಕೊಟ್ಟು ಅದನ್ನು ಮುಂದಕ್ಕೆ ನಡೆಸಿಕೊಂಡು ಹೋಗುವವರೇ ಅವರು." (ಅದೇ; ಪು-೧೧) ಗೊರೂರವರ ಸಾಹಿತ್ಯವನ್ನು ಅಭ್ಯಾಸ ಮಾಡಿದಾಗ ಅವರು ತತ್ತ್ವಕ್ಕೆ ಬದ್ಧರಾಗಿರುವುದು ನಮ್ಮ ಗಮನಕ್ಕೆ ಬರುತ್ತದೆ. ನಮ್ಮ ಸ್ವಂತ ಆಲೋಚನೆಗಳಿಂದ ಸಂಪಾದಿಸಿದ ಸತ್ಯ ನಮ್ಮ ಸ್ವಂತ ಅವಯವದ ಹಾಗೆ ಎಂಬ ಹೌರನ ಅಭಿಪ್ರಾಯವನ್ನು ಗೊರೂರವರು ತಮ್ಮ ಕೃತಿಗಳಲ್ಲಿ ಸಾಬೀತು ಪಡಿಸಿದ್ದಾರೆ. ಗೊರೂರವರ ಕೃತಿಗಳು ಜನಮನದ ಕೃತಿಗಳು ಆಗುವುದಕ್ಕೆ ಮೂಲ ಕಾರಣ ಅವರ ಕೃತಿಯಲ್ಲಿ ಕಂಡುಬರುವ ಸ್ವಂತ ಆಲೋಚನೆಗಳ ನೈಜ ಸೊಗಸು ಎಂಬುದು ನಮಗೆ ವಿದಿತವಾಗುತ್ತದೆ. ವಿಚಾರ ಮಾಡಿ ತೀರ್ಮಾನಕ್ಕೆ ಬರುವವರಿಗಿಂತ ಸುಮ್ಮನೆ ನಂಬುವ ಮಾರ್ಗವನ್ನು ಅನುಸರಿಸುವವರೇ ಜಗತ್ತಿನಲ್ಲಿ ಹೆಚ್ಚು ಎಂದು ಹೌರ ಎಚ್ಚರದ ಮಾತನ್ನು ಆಡಿದ್ದಾನೆ. ಬೇರೆಯವರ ಭಾವನೆಗಳನ್ನು ಕುರಿತ ಸಾಹಿತ್ಯವನ್ನು ಓದುವವರಲ್ಲಿಯೇ ನಮ್ಮ ಮನಸ್ಸು ಪೂರ್ಣ ಮಗ್ನ ಆಗಬಾರದು ಇದಕ್ಕೆ ಜತೆಯಾಗಿ ಹಲವು ವಿಷಯಗಳನ್ನು ಕುರಿತು ಸ್ವಂತ ಆಲೋಚನೆ ಮಾಡುವ ಶಕ್ತಿಯನ್ನು ನಮ್ಮ ಮನಸ್ಸು ಬೆಳೆಸಿಕೊಂಡು ಬರಬೇಕು ಎಂಬ ಹೌರನ ಅಭಿಪ್ರಾಯವನ್ನು ಗೊರೂರುವರು ಪುರಸ್ಕರಿಸುತ್ತಾರೆ-ಅನುಸರಿಸುತ್ತಾರೆ. ಲೋಕದ ದೃಷ್ಟಿಗೆ ಸ್ವಾನುಭವದ ಬೆಳಕು ಮೈಗೂಡಿದಾಗ ಮಾತ್ರ ನಮ್ಮ ಸಾಹಿತ್ಯ ಸ್ವೋಪಜ್ಞತೆಯ ಗುಣಶಕ್ತಿಯನ್ನು ಪಡೆಯುತ್ತದೆ ಎಂಬುದು ಹೌರನ ಅಭಿಮತವಾಗಿದೆ. ಹಣ ಸಂಪಾದನೆಗಾಗಿ ಲೇಖಕರು, ಪ್ರಕಾಶಕರು ಮತ್ತು ವಿಮರ್ಶಕರು ಒಂದಾಗಿ ಪಿತೂರಿ ನಡೆಸಿ ಕುಕಾವ್ಯಗಳನ್ನು ಪ್ರಚಾರಮಾಡುವುದುಂಟು. ಇಂತಹ ಕುಕಾವ್ಯಗಳು ಸಹೃದಯನ ಹಣವನ್ನು ಹಾಗೂ ಸಮಯವನ್ನು ಅಪಹರಿಸುತ್ತದೆ ಎಂದು ಹೌರ ಎಚ್ಚರಿಸಿ ನುಡಿದಿದ್ದಾನೆ.

'ಶೈಲಿ' ಪ್ರಬಂಧದಲ್ಲಿ ಹೌರ ಸರಳ ಸ್ಪಷ್ಟ ಶೈಲಿಯನ್ನು ಎತ್ತಿ ಹಿಡಿದಿದ್ದಾನೆ. ಒಳ್ಳೆಯ ಶೈಲಿ ಲೇಖಕನ ಮನಸ್ಸಿನ ಪ್ರತಿರೂಪವಾಗಿರುತ್ತದೆ ಎಂದು ಹೌರನು ಅಭಿಪ್ರಾಯ ಪಡುತ್ತಾರೆ. ಶೈಲಿಯ ಬಗ್ಗೆ ವಿಚಾರ ಮಾಡುತ್ತಾ ಹೌರ ಆಡುವ ಮಾತು "ಯಾರಿಗೂ ಅರ್ಥವಾಗದಂತೆ ಬರೆಯುವುದಕ್ಕಿಂತ ಸುಲಭವಾದದು ಯಾವುದೂ ಇಲ್ಲ. ಹಾಗೆಯೇ ಎಲ್ಲರಿಗೂ ತಿಳಿಯುವಂತೆ ಗಹನವಾದ ವಿಚಾರಗಳನ್ನು ಸರಿಯಾದ ಸುಲಭವಾದ ರೀತಿಯಲ್ಲಿ ಬರೆಯುವುದು ಬಹಳ ಕಷ್ಟ" (ಅದೇ; ಪು-೩೨) ಎಂಬ ಮಾತಿನಲ್ಲಿ ಹೌರ ಶೈಲಿಯ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ಮಂಡಿಸಿದ್ದಾನೆ. ತತ್ತ್ವಶಾಸ್ತ್ರ ಜ್ಞಾನನಾದ ಹೌರ ಉತ್ತಮ

ಸಾಹಿತ್ಯದ ಬಗ್ಗೆ ಕೊಟ್ಟಿರುವ ಅಭಿಪ್ರಾಯಗಳನ್ನು ಗೊರೂರುವರು ಸರಳ ಸುಂದರ ವಿವರಣೆಯ ಮೂಲಕ ಕನ್ನಡಿಗರಿಗೆ ನೀಡಿರುವುದು ಉಪಯುಕ್ತವಾಗಿದೆ. ಗೊರೂರುವರು ವಿಶ್ವದ ಉತ್ತಮ ಸಾಹಿತ್ಯವನ್ನು ಓದಿ ಪರಿಪುಷ್ಟರಾಗಿ ಕನ್ನಡಕ್ಕೆ ವಿಶಿಷ್ಟ ಕೃತಿಗಳನ್ನು ನೀಡಿದ್ದಾರೆ. ಬೆಳೆಯಿಂದ ಬೆಳೆ, ಬೆಳಕಿನಿಂದ ಬೆಳಕು ಎಂಬ ತತ್ತ್ವಕ್ಕೆ ಅನುಗುಣವಾಗಿ ಸಾಹಿತಿಯಿಂದ ಸಾಹಿತಿ ಬೆಳೆಯುತ್ತಾನೆ ಮತ್ತು ಬೆಳಗುತ್ತಾನೆ ಎಂಬುದಕ್ಕೆ ಗೊರೂರುವರು ನಿತ್ಯ ಸಾಕ್ಷಿಯಾಗಿದ್ದಾರೆ. ಪ್ರತಿಭೆ ಸಾಹಿತಿಗೆ ಎಷ್ಟು ಅವಶ್ಯವೋ ವ್ಯುತ್ಪತ್ತಿ ಅಷ್ಟೇ ಅವಶ್ಯ ಎಂಬ ತತ್ತ್ವವನ್ನು ಇಲ್ಲಿ ಮನವರಿಕೆ ಮಾಡಿಕೊಳ್ಳಬಹುದು. ಗೊರೂರವರ ಇಂತಹ ಅನುವಾದ ಕೃತಿಗಳನ್ನು ಕಂಡು ಮೆಚ್ಚಿಕೊಂಡಿರುವ ಹಿರಿಯ ವಿಮರ್ಶಕರು ಕನ್ನಡಕ್ಕೆ ಇದೇ ಮಟ್ಟದ ಅನುವಾದ ಕೃತಿಗಳು ಇನ್ನಷ್ಟು ತುಂಬಿ ಬರಲಿ ಎಂದು ಅಪೇಕ್ಷಿಸುವುದು ಮತ್ತು ಆಶಿಸುವುದು ಸಹಜ ಎನಿಸುತ್ತದೆ.

ಗೊರೂರವರ 'ಸಾಹಿತ್ಯ ರಶ್ಮಿ' ಕೃತಿ ಅವರ ಸಾಹಿತ್ಯದ ವೈಚಾರಿಕ ದೃಷ್ಟಿಗೆ ಕನ್ನಡಿ ಸ್ವರೂಪವಾಗಿದೆ. ಈ ಕೃತಿಯಲ್ಲಿ ಸಾಹಿತ್ಯ ಚಿಂತನೆಯ ಜೊತೆಗೆ ಲೇಖಕರು ಶಿಲ್ಪಕಲೆ, ಚಿತ್ರಕಲೆ, ಶಿಕ್ಷಣ, ವೃತ್ತಪತ್ರಿಕೆ, ಜೀವನ ತತ್ತ್ವ - ಹೀಗೆ ಇನ್ನು ಅನೇಕ ವಿಷಯಗಳನ್ನು ವಿಚಾರ ಮಾಡಿದ್ದಾರೆ. ಈ ಸಂಕಲನದಲ್ಲಿ ಇಪ್ಪತ್ನಾಲ್ಕು ಲೇಖನಗಳನ್ನು ಕಾಣಬಹುದು. ಈ ಲೇಖನಗಳೆಲ್ಲವು ಗೊರೂರವರ ಬಹು ಭಾಷಾಭಿಜ್ಞತೆಗೆ ಮತ್ತು ಪಾಂಡಿತ್ಯಕ್ಕೆ ವಿಚಾರ ವಿಮರ್ಶನಾ ಪ್ರವೃತ್ತಿಗೆ ಸ್ಪಷ್ಟ ಸಾಕ್ಷಿಗಳಾಗಿವೆ. ಸಾಹಿತ್ಯ ಪ್ರಪಂಚದಲ್ಲಿ ಕವಿ ನೀಡುವ ಕೃತಿಗಳು ಒಂದು ಅಪೂರ್ವ ಕಾಣಿಕೆಯಾದರೆ ಆ ಸಾಹಿತಿ ಸಾಹಿತ್ಯ ಪ್ರಪಂಚದಲ್ಲಿ ಎಂಥ ರೀತಿಯಲ್ಲಿ ವಿಹಾರ ಮಾಡಿದ್ದಾನೆ ಎಂಬುದು ಮುಖ್ಯವಾದ ಸಂಗತಿ. ಗೊರೂರವರು ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೃತಿಗಳ ಸಂಖ್ಯೆ ಗಮನಾರ್ಹವಾದುದು. ಆದರೆ ಅವರು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಮಾಡಿರುವ ಮತ್ತು ವಿಶ್ವ ಸಾಹಿತ್ಯ ಪ್ರಪಂಚದಲ್ಲಿ ಮಾಡಿರುವ ವಿಹಾರ ವಿಚಾರವಂತಿಕೆ ಗಣನೀಯವಾದುದು. ಈ ಸಾಧನೆಯ ಫಲದಿಂದಲೇ ಗೊರೂರವರು 'ಸಾಹಿತ್ಯ ರಶ್ಮಿ' ಕೃತಿಯಲ್ಲಿ ರಚಿಸಿದ್ದಾರೆ. ಲೇಖಕರಿಗೆ ಇದ್ದ ಅನುಭವ ಶ್ರೀಮಂತಿಕೆ ಅಪೂರ್ವ ಪ್ರತಿಭೆಯ ಜೊತೆಗೆ ಶ್ರೇಷ್ಠ ಸಾಹಿತ್ಯದ ಪ್ರಭಾವವೂ ಸೇರಿ ಅವರಿಂದ ಅತ್ಯುತ್ತಮ ಕೃತಿಗಳು ಮೂಡಿಬರಲು ಕಾರಣವಾಗಿದೆ. 'ಸಾಹಿತ್ಯ ರಶ್ಮಿ' ಕೃತಿಯಲ್ಲಿ ಗೊರೂರವರ ಪಾಂಡಿತ್ಯ ಸಹೃದಯತೆ ಸ್ಫುಟವಾಗಿದೆ. ಸಾಹಿತಿ ಹಿರಿಯ ಸಾಹಿತಿಗಳ ಸಾಹಿತ್ಯ ಕೃತಿಗಳನ್ನು ಓದಿ ಬೆಳೆಯಬೇಕು ಎಂಬ ಭಾವನೆಯಲ್ಲಿ ಗೊರೂರವರಿಗೆ ಪೂರ್ಣವಿಶ್ವಾಸವಿದೆ. ಈ ಗುಣದಿಂದಲೇ ಗೊರೂರವರ ಸಾಹಿತ್ಯ ಸತ್ತ್ವ, ಸಮರ್ಥ, ವೈಭವಪೂರ್ಣ ಸಾಹಿತ್ಯವಾಗಿದೆ. ಗೊರೂರವರು ಬೇರೆ ಕಡೆ ಅನುಭವವನ್ನು ಪಡೆದರು ಆ ಅನುಭವಗಳು ಗೊರೂರವರ ಪ್ರತಿಭಾ ಮಿಂಚಿನಿಂದ ವಿಶೇಷ ಕಳೆಯನ್ನು ಪಡೆದಿರುವುದನ್ನು ಅವರ ಸಾಹಿತ್ಯದಲ್ಲಿ ಗುರುತಿಸಬಹುದು.

'ಸಾಹಿತ್ಯ ರಶ್ಮಿ' ಕೃತಿಯಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನಗಳ ಜೊತೆಗೆ ಪಾಶ್ಚಾತ್ಯ ಸಾಹಿತ್ಯದಲ್ಲಿ ಮೂಡಿಬಂದಿರುವ ಸಾಹಿತ್ಯ ತತ್ತ್ವವನ್ನು ವಿಚಾರಮಾಡಿದ್ದಾರೆ. ಈ ಕೃತಿಯಲ್ಲಿ ಕಾವ್ಯ

ಸ್ವರೂಪ, ಕಾವ್ಯ ತತ್ತ್ವವನ್ನು ಕುರಿತು ಬೇರೆಯವರ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಹೇಳುವಾಗ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಗೊರೂರವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುವುದು ಗಮನಾರ್ಹ ಸಂಗತಿ. 'ಕಾವ್ಯವನ್ನು ಕುರಿತು' ಲೇಖನದಲ್ಲಿ ಕಾವ್ಯದ ಗುರಿ, ತಂತ್ರಕೌಶಲ್ಯ, ಉತ್ಕೃಷ್ಟ ಕಾವ್ಯದ ಗುಣಗಳು, ಕವಿ ದಾರ್ಶನಿಕ ವಿಜ್ಞಾನಿಗಳ ಸಂಬಂಧ ಮತ್ತು ವಾಸ್ತವಿಕತೆ ವಿಷಯಗಳನ್ನು ಕುರಿತು ಪರಂಪರಾಗತ ವಿಚಾರವನ್ನು ಕ್ರೂಢೀಕರಿಸಿದ್ದಾರೆ. "ಆತ್ಮಾನಂದವನ್ನು ಕೊಡುವವರಿಗೆ ಕಾವ್ಯ ತನ್ನ ಕರ್ತವ್ಯವನ್ನು ಪೂರ್ಣವಾಗಿ ಮಾಡಿದಂತೆ ಆಗುವುದಿಲ್ಲ." (ಗೊರೂರು ರಾಮಸ್ವಾಮಿಯ ಅಯ್ಯಂಗಾರ್; ೧೯೬೩; ಪು. ೧೪೮) ಇದು ಗೊರೂರವರ ಅಭಿಪ್ರಾಯ. ತಂತ್ರದ ಬಗ್ಗೆ ಹೇಳುವಾಗ ಕಾವ್ಯ ಸೃಷ್ಟಿಯ ಕಾವಿನಲ್ಲಿ ತಂತ್ರ ಗೌಣ ಸ್ಥಾನವನ್ನು ಹೊಂದುತ್ತದೆ ಎಂಬುದು ಅವರ ಅಭಿಪ್ರಾಯವಾಗಿದೆ. ಕಾವ್ಯದ ಉತ್ಕೃಷ್ಟತೆಗೆ ಮೂರು ಗುಣಗಳ ಸಾಮರಸ್ಯ ಅವಶ್ಯ ಎಂದು ಹೇಳಿ ಛಂದಸ್ಸಿನ ಪರಿಪೂರ್ಣತೆ, ಮಾತು ಭಾವಗಳ ಪಾರಿಶುದ್ಧತೆ, ಉತ್ಕೃಷ್ಟ ವಸ್ತು - ಸತ್ಯದ ದಿವ್ಯದರ್ಶನ ಮುಖ್ಯ ಎನ್ನುತ್ತಾರೆ ಗೊರೂರವರು.

'ಕನ್ನಡ ಗ್ರಂಥಗಳಲ್ಲಿ ಗದ್ಯರಚನೆ' ಲೇಖನದಲ್ಲಿ ಕನ್ನಡ ಗದ್ಯ ಸಾಹಿತ್ಯದ ಬೆಳವಣಿಗೆಯನ್ನು ಕಾಣಬಹುದು. 'ವಡ್ಡಾರಾಧನೆ'ಯನ್ನು ಕುರಿತು ಹೇಳುವಾಗ "ಕನ್ನಡವನ್ನು ಸಂಸ್ಕೃತದ ಅಡಿಯಾಳು ಮಾಡದೆ ತನ್ನ ಕಾಲಿನ ಮೇಲೆ ತಾನು ನಿಲ್ಲುವಂತೆ ಮಾಡಿದ ಕೃತಿ ವಡ್ಡಾರಾಧನೆ" ಎಂದಿದ್ದಾರೆ. (ಅದೇ; ಪು. ೫) ಎ.ಆರ್. ಕೃಷ್ಣಶಾಸ್ತ್ರಿಗಳ ಗದ್ಯವನ್ನು ಹೊಸಗನ್ನಡ ಗದ್ಯದ ಒಂದು ಮಾದರಿ ಎಂದು ಹೇಳಬಹುದೇ ಹೊರತು ಅಲ್ಲಿಯ ಎಲ್ಲ ವೈವಿಧ್ಯಗಳನ್ನು ಕಾಣಲಾಗುವುದಿಲ್ಲ ಎಂದು ಗೊರೂರವರು ಅಭಿಪ್ರಾಯಪಟ್ಟಿದ್ದಾರೆ.

'ಊರ್ವಶಿ ಶಾಪ' ಲೇಖನದಲ್ಲಿ ಕುಮಾರವ್ಯಾಸ ಭಾರತದ ಊರ್ವಶಿಯ ಪ್ರಸಂಗವನ್ನು ವಿಚಾರಮಾಡಿದ್ದಾರೆ. 'ಕವಿ ಲಕ್ಷ್ಮೀಶ' ಎಂಬ ಲೇಖನದಲ್ಲಿ ಲಕ್ಷ್ಮೀಶನ ಕಾವ್ಯದಲ್ಲಿ ಕಂಡುಬರುವ ಹಾಸ್ಯದ ಔಚಿತ್ಯವನ್ನು ಹಾಗೂ ಗಾಂಭೀರ್ಯವನ್ನು ವಿಚಾರಮಾಡಿದ್ದಾರೆ. 'ರತ್ನಾಕರ' ಎಂಬ ಲೇಖನದ ಭರತೇಶ ವೈಭವದ ವಿಶೇಷತೆಯನ್ನು ಗೊರೂರವರು ವಿಚಾರ ಮಾಡಿದ್ದಾರೆ. ರತ್ನಾಕರನ ಸ್ವೋಪಜ್ಞತೆಯನ್ನು ಈ ಲೇಖನದಲ್ಲಿ ನಿದರ್ಶನ ಸಹಿತ ಲೇಖಕರು ಪ್ರತಿಪಾದಿಸಿದ್ದಾರೆ. 'ಬೇಂದ್ರೆಯವರ ವ್ಯಕ್ತಿತ್ವ' ಲೇಖನದಲ್ಲಿ ಬೇಂದ್ರೆಯವರ ವ್ಯಕ್ತಿತ್ವದ ಜತೆಗೆ ಬೇಂದ್ರೆಯವರ ಕಾವ್ಯವನ್ನು ಸೊಗಸಾಗಿ ಪರಿಚಯಿಸಿದ್ದಾರೆ. ಲೇಖನದ ಮೊದಲಿಗೆ ಕಾಣುವ ಬೇಂದ್ರೆಯವರ ವ್ಯಕ್ತಿಚಿತ್ರ ಹಾಸ್ಯ ಪೂರ್ಣವಾಗಿದೆ. ಬೇಂದ್ರೆಯವರ ಲೇಖನವನ್ನು ಕುರಿತು ಕೊನೆಯಲ್ಲಿ ಆಡುವ ಮಾತುಗಳು "ಬೇಂದ್ರೆಯವರ ಕಲೆ, ಕಲ್ಪನೆಯು, ಸಚ್ಚಿದಾನಂದದ ಬ್ರಹ್ಮದಲ್ಲಿ ಭೃಂಗದ ಬೆನ್ನೇರಿ ಬರುತ್ತಿದ್ದರೂ ಅವರ ಬೇರು ಜನಪದದಲ್ಲಿಯೇ ಇದೆ" (ಅದೇ; ಪು.೫೯) ಎಂಬ ಗೊರೂರವರ ವಿಮರ್ಶೆಯ ಮಾತು ಸಮಂಜಸವಾಗಿದೆ. 'ನಿಕಟ ಪರಿಚಯ' ಲೇಖನದಲ್ಲಿ ಮುಳಿಯ ತಿಮ್ಮಪ್ಪಯ್ಯನವರ ವ್ಯಕ್ತಿತ್ವ ಮತ್ತು ವಾಙ್ಮಯದ ಸ್ವರೂಪವನ್ನು ಲೇಖಕರು

ಅಚ್ಚುಕಟ್ಟಾಗಿ ತಿಳಿಸಿದ್ದಾರೆ. 'ಶ್ರೀನಿವಾಸರ ಸಣ್ಣ ಕತೆಗಳು' ಎಂಬ ಲೇಖನ ವಿಷಯಕ್ಕೆ ಅತ್ಯುತ್ತಮ ಪ್ರವೇಶಿಕೆಯಂತೆ ಇದೆ. ಶ್ರೀನಿವಾಸರ ಕತೆಗಳನ್ನು ಓದಿದ ನಂತರ ಒಂದು ಬಗೆಯ ಗಂಭೀರವಾದ ವಾತಾವರಣ ನಮ್ಮನ್ನು ಮುತ್ತಿಕೊಳ್ಳುತ್ತದೆ ಎಂದು ಗೊರೂರರವರು ಅಭಿಪ್ರಾಯ ಪಡುತ್ತಾರೆ. 'ಹೊಸಗನ್ನಡ ಸಣ್ಣಕಥೆಗಳು' ಲೇಖನದಲ್ಲಿ ಸಣ್ಣಕತೆಯ ಸ್ವರೂಪವನ್ನು ಕುರಿತು ಗೊರೂರರವರು ಕೆಲವು ಅಂಶಗಳನ್ನು ಹೇಳಿದ್ದಾರೆ. ಈಗ ಕನ್ನಡದಲ್ಲಿ ಬಂದಿರುವ ಕತೆಗಳಲ್ಲಿ ಅತ್ಯುತ್ತಮವಾದವು ಭಾರತದ ಇತರ ಭಾಷೆಗಳ ಉತ್ತಮ ಕತೆಗಳಿಗೂ ಅನೇಕ ಪಾಶ್ಚಾತ್ಯ ಉತ್ತಮ ಕತೆಗಳಿಗೂ ಯಾವ ವಿಧದಲ್ಲಿಯೂ ಕಡಿಮೆ ಇಲ್ಲ ಎಂದು ಕೊಟ್ಟಿರುವ ಅಭಿಪ್ರಾಯ ಮೆಚ್ಚುವಂತಹದು.

'ಸಾಹಿತ್ಯ ರಶ್ಮಿ' ಕೃತಿಯಲ್ಲಿ ಬೇರೆ ಭಾಷೆಯ ಕೃತಿಗಳಿಗೆ ಸಂಬಂಧಿಸಿದ ಲೇಖನಗಳನ್ನು ಕಾಣುತ್ತೇವೆ. ತಮಿಳು ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ಸರ್ವಾಂತರ್ಯಾಮಿ' ಮತ್ತು 'ನಾಲಡಿಯಾರ್' ಲೇಖನಗಳನ್ನು ಕಾಣಬಹುದು. ಈ ಲೇಖನಗಳಲ್ಲಿ ಆಳ್ವಾರ್‌ರರ ಭಾಗವತ ಕಲ್ಪನೆಯನ್ನು ಮತ್ತು ನಾಯನ್ ಮಾರುಗಳ ಶೈವ ಸಿದ್ಧಾಂತ ಕಲ್ಪನೆಯನ್ನು ನೋಡುತ್ತೇವೆ. ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೂರು ಲೇಖನಗಳು ಈ ಕೃತಿಯಲ್ಲಿವೆ. 'ಸಂಸ್ಕೃತದ ಕೆಲವು ಸರಸೋಕ್ತಿಗಳು' ಲೇಖನ ಒಂದು ಸುಭಾಷಿತ ಮಾಹಿತಿಯಂತಿದೆ. 'ಒಂದು ಭಕ್ತಿಗೀತೆ' ಲೇಖನದಲ್ಲಿ ಯಮುನಾಚಾರ್ಯರ ಆಳವಂದಾರ್ ಸ್ತೋತ್ರದ ಪರಿಚಯವನ್ನು ನೋಡುತ್ತೇವೆ. ಆಳವಂದಾರ್ ಸ್ತೋತ್ರವನ್ನು ಭಕ್ತಿ ಪಂತದವರ ಭಗವದ್ಗೀತೆ ಎಂದು ಗೊರೂರರವರು ಭಾವಿಸಿದ್ದಾರೆ. ಶಾಂತರಸ ಮತ್ತು ಭಕ್ತಿ ರಸಕ್ಕೆ ಈ ಒಂದು ಸ್ತೋತ್ರವನ್ನು ಉದಾಹರಣೆಯೆಂದು ಗೊರೂರರವರು ಅಭಿಪ್ರಾಯ ಪಟ್ಟಿದ್ದಾರೆ. 'ವಿಶ್ವಗುಣಾದರ್ಶ' ಎಂಬ ಲೇಖನ ವೆಂಕಟಾಧ್ವರಿ ಕವಿ ರಚಿಸಿದ ಕಾವ್ಯವನ್ನು ಕುರಿತದ್ದು. ಪ್ರಸಿದ್ಧವಲ್ಲದರ ಒಂದು ಒಳ್ಳೆಯ ಕೃತಿಯನ್ನು ಪರಿಚಯಿಸಿದ ಮೇಲ್ಮೆ ಗೊರೂರರವರಿಗೆ ಸಲ್ಲುತ್ತದೆ. 'ರವೀಂದ್ರನಾಥ ಠಾಗೂರರು' ಲೇಖನ ಠಾಗೂರರ ಸಾಹಿತ್ಯದ ಒಂದು ಸಂಕ್ಷಿಪ್ತ ಸಮಗ್ರ ಸಿಂಹಾವಲೋಕನವಾಗಿದೆ. ಠಾಗೂರರ ವಿಶ್ವಕುಟುಂಬ ಭಾವನೆಯನ್ನು ಸ್ವಾತಂತ್ರ್ಯದ ಕಲ್ಪನೆಯನ್ನು ಗೊರೂರರವರು ಈ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಪಾಶ್ಚಾತ್ಯ ಹಿರಿಯ ಸಾಹಿತಿಗಳಾದ ಗಯಟೆ, ಹಾರ್ಡಿ, ವಿಟ್ಮನ್ನರಂಥ ಸಾಹಿತಿಗಳ ವಿಚಾರಧಾರೆಯನ್ನು ಈ ಕೃತಿಯಲ್ಲಿ ಸೇರಿಸಿದ್ದಾರೆ. ಹಾರ್ಡಿಯ ಕಾದಂಬರಿಗಳು ಗೊರೂರರವರ ಮನಸ್ಸಿನ ಮೇಲೆ ಪ್ರಭಾವ ಬೀರಿದೆ. ಗೊರೂರರವರು ತಮ್ಮ ಸಾಹಿತ್ಯ ಕೃತಿಗಳಲ್ಲಿ ಪ್ರಾದೇಶಿಕತೆಯನ್ನು ಹಿನ್ನೆಲೆಯಾಗಿ ಬಳಸಿಕೊಂಡಿರುವುದಕ್ಕೆ ಹಾರ್ಡಿ ಕೃತಿಗಳು ಒಂದು ಅಂಶದಲ್ಲಿ ಪ್ರೇರಣೆಯಾಗಿದೆ ಎಂಬುದು ನಮಗೆ ವಿದಿತವಾಗುತ್ತದೆ. ಇದಕ್ಕೆ ನಿದರ್ಶನ ಗೊರೂರರವರೇ ಹೇಳುವಂತೆ "ಹಾರ್ಡಿ ನಮ್ಮೆದುರಿಗೆ ತನ್ನ ಕಾಲದ ವೆಸೆಕ್ಸ್‌ನ್ನು ಚಿತ್ರಿಸಿದ್ದಾರೆ. ಜನಭಾಷೆ ಉಡುಗೆ ತೊಡುಗೆ ದುಡಿಮೆ ವಿಶ್ರಾಂತಿ ಇವೆಲ್ಲ ವೆಸೆಕ್ಸ್‌ಗೆ ಸಂಬಂಧಿಸಿದುದು. ಆದರೆ ಆ ಜನತೆಯ ಅದೃಷ್ಟ ಪ್ರಾದೇಶಿಕವಾದುದಲ್ಲ. ಅವರ ದುಃಖ ಕತೆಗಳು ಜಗತ್ತಿನ ಯಾವುದೇ ಭಾಗದ

ಜನತೆಯಲ್ಲಿ ವ್ಯಕ್ತವಾಗಬಹುದಾದ ಪ್ರೀತಿ ದ್ವೇಷ ದುಃಖ ಇವುಗಳ ಸುತ್ತನೆಯ್ದುಕೊಂಡಿವೆ". (ಅದೇ; ಪು.೨೩೦) ಈ ವಿಮರ್ಶೆಯಲ್ಲಿ ಹಾರ್ಡಿಯ ಸಾಹಿತ್ಯದ ಹಿರಿಮೆಯನ್ನು ಗೊರೂರರವರು ಅನಾವರಣ ಗೊಳಿಸಿದ್ದಾರೆ. ಜನತೆಯ ಕವಿ ವಿಟ್ಮನ್ನನ ಕೃತಿಯ ಪ್ರಭಾವವು ಗೊರೂರರವರ ಮೇಲಾಗಿದೆ. ಆತ ಛಂದೋಬದ್ಧವಾದ ಕವಿತೆಯನ್ನು ಕೃತಕವಾದ ಒಣ ಆಡಂಬರದ ಹೊರ ಬೆಡಗಿನ ಶೈಲಿಯನ್ನು ಮೀರುವುದನ್ನು ಗೊರೂರರವರು ಮೆಚ್ಚಿಕೊಂಡು "ಜನತೆಯ ಮಾತೇ ಅವನ ಶೈಲಿಯಾಯಿತು" (ಅದೇ; ಪು.೨೪೫) ಎಂದು ಗೊರೂರರವರು ಸ್ಪಷ್ಟಪಡಿಸಿದ್ದಾರೆ. "ಪ್ರಜಾತಂತ್ರ, ವ್ಯಕ್ತಿಗಳನ್ನು ಉತ್ತಮಗೊಳಿಸುವುದು, ಪ್ರಜಾತಂತ್ರದಲ್ಲಿಯೇ ವ್ಯಕ್ತಿ ತನ್ನ ಗುರಿಯನ್ನು ಸಾಧಿಸುವುದು - ಈ ಧ್ಯೇಯೆ ವಿಟ್ಮನ್ನರ ಕವನಗಳ ಗುರಿ" (ಅದೇ; ಪು. ೨೫೫) ಎಂದು ಹೇಳಿ ವಿಟ್ಮನ್ನರ ಕೃತಿಯ ಅನನ್ಯತೆಯನ್ನು ಗೊರೂರರವರು ವಿಚಾರ ಮಾಡಿದ್ದಾರೆ. ಗೊರೂರರವರು ರಾಷ್ಟ್ರೀಯ ಚಳುವಳಿಯ ಸಂಗತಿಯನ್ನು ತಮ್ಮ ಗ್ರಾಮೀಣ ಜನಜೀವನದ ಹಿನ್ನೆಲೆಯೊಂದಿಗೆ ಸೇರಿಸಿಕೊಂಡು ಕೃತಿ ರಚಿಸಿರುವುದನ್ನು ಕಂಡಾಗ ವಿಟ್ಮನ್ನನ ಪ್ರಭಾವ ನಮಗೆ ಸುಸ್ಪಷ್ಟವಾಗುತ್ತದೆ.

'ಭಾರತದ ಶಿಲ್ಪ ಮತ್ತು ಚಿತ್ರಕಲೆ' ಲೇಖನದಲ್ಲಿ ಗೊರೂರರವರು ಅಜಂತಾ ಎಲ್ಲೋರದಲ್ಲಿ ಕಾಣುವ ಚಿತ್ರ ಹಾಗೂ ಶಿಲ್ಪಕಲೆಗಳ ವೈಭವವನ್ನು ಸಮೀಕ್ಷೆ ಮಾಡಿದ್ದಾರೆ. ಆಕೃತಿಗಳಲ್ಲಿ ಹೊರತೋರುವ ಬಾಳಿನ ಉತ್ಸಾಹ, ಜೀವನವು ಮಹೋತ್ಸವವೆಂಬ ಭಾವನೆಯನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ. ಬಾಳಿನ ವೈಭವದ ಕಡೆಗೆ ನೋಟಕರ ಮನಸ್ಸನ್ನು ಸೆಳೆಯುತ್ತದೆ ಎಂಬ ಗೊರೂರರವರ ಮಾತು ಸ್ಪಷ್ಟ ವಿಮರ್ಶೆಯಾಗಿದೆ. ಇದನ್ನು ಮತ್ತಷ್ಟು ಒತ್ತಿ ಹೇಳುವಾಗ "ಚಿತ್ರಗಳಲ್ಲಿರುವ ರೇಖೆಗಳು ಹರಿಯುತ್ತಿರುವ ರಕ್ತನಾಳಗಳೋ, ಮುಂದಲ ಗಳಿಗೆಯಲ್ಲಿ ಎದ್ದು ಜೀವಗೊಂಡು, ಓಡಾಡುವುವೋ ಎಂಬಂತೆ ತೋರುವುದು" (ಅದೇ; ಪು. ೬೫) ಎಂಬ ವಿಮರ್ಶೆಯ ಮಾತು ಮನನೀಯವಾದುದು. ಇಲ್ಲಿ ಗೊರೂರರವರ ಕವಿ ಹೃದಯಕ್ಕೆ ಚಿತ್ರಕಲೆ, ಶಿಲ್ಪಕಲೆ ಕಾಣಿಸಿರುವ ಕಾಣ್ಕೆ ಮೆಚ್ಚುವಂತಹದು. ಸಂಸ್ಕಾರಗೊಂಡ ಮನಸ್ಸಿಗೆ ಸಂಸ್ಕೃತಿಯ ಅಂಶ ಎಲ್ಲೇ ಇದ್ದರು ಗೋಚರವಾಗುತ್ತದೆ ಎಂಬ ಸತ್ಯಕ್ಕೆ ಗೊರೂರರವರ ಈ ಮಾತುಗಳೇ ಉತ್ತಮ ನಿದರ್ಶನಗಳು. ಶಿಲ್ಪಕಲೆ ಮತ್ತು ಚಿತ್ರಕಲೆ ಗೊರೂರರವರ ಪಾಲಿಗೆ ಬದುಕನ್ನು ಅರ್ಥೈಸುವ ಒಂದು ಮಾಧ್ಯಮವಾಗಿ ಉಳಿಯುತ್ತದೆ. ಗೊರೂರರವರ ಸಾಹಿತ್ಯದ ಆಳವನ್ನು ಇಂಥ ಲೇಖನಗಳ ಮೂಲಕವೂ ನಾವು ವಿಶೇಷವಾಗಿ ಅರಿಯಬಹುದು. ಸ್ಪಂದಿಸುವ ಮನಸ್ಸು ಸಾಹಿತಿಯ ಮೂಲ ಶಕ್ತಿ ಎಂದು ಕಾವ್ಯ ಮೀಮಾಂಸೆಯಲ್ಲಿ ಹೇಳುವ ಮಾತು ಇಂಥ ಸನ್ನಿವೇಶಗಳಲ್ಲಿ ಅರ್ಥಪೂರ್ಣ ಎನಿಸುತ್ತದೆ.

'ರಾಷ್ಟ್ರೀಯ ಸಾಹಿತ್ಯ ಮತ್ತು ಕಲೆ' ಈ ಲೇಖನದಲ್ಲಿ ಒಂದು ರಾಷ್ಟ್ರದ ಜನಜೀವನವನ್ನು ಆ ರಾಷ್ಟ್ರದ ಸಾಹಿತ್ಯಕ್ಕೂ, ಕಲೆಗಳಿಗೂ ಇರುವ ಸಂಬಂಧವನ್ನು ಜಾಗತಿಕ ವ್ಯಾಪ್ತಿಯಲ್ಲಿ ಗೊರೂರರವರು ವಿಚಾರ ಮಾಡಿರುವುದು ನಮಗೆ ಗೋಚರವಾಗುತ್ತದೆ. ಸಾಹಿತ್ಯ ಮತ್ತು ಕಲೆಗಳ ವೈಭವದ ಕಾಲವೇ

ರಾಷ್ಟ್ರದ ಅಭ್ಯುದಯದ ಕಾಲ ಎಂಬ ಸತ್ಯಾಂಶವನ್ನು ಲೇಖಕರು ಈ ಲೇಖನದಲ್ಲಿ ಪ್ರತಿಪಾದಿಸಿದ್ದಾರೆ. "ರಾಷ್ಟ್ರದ ಕಲೆಯಲ್ಲಿ ಅದ್ಭುತವಾದ ಕಾಂತಿಯು ಕೆಲವು ವೇಳೆ ರಾಷ್ಟ್ರದ ವೈಭವ ಸೂರ್ಯನ ಅಸ್ತಮಯ ಕಾಲದಲ್ಲಿ ಮಾತ್ರ ಪ್ರಕಟವಾಗುತ್ತದೆ" (ಅದೇ; ಪು. ೯೮) ಎಂಬ ಭಾವನೆಯನ್ನು ಗೊರೂರುವರು ಇಲ್ಲಿ ಹೇಳಿರುವುದು ಗಮನಾರ್ಹ. ಗೊರೂರವರ ಈ ಲೇಖನದಲ್ಲಿ ಕೊಟ್ಟಿರುವ ಕರೆ "ನಿಮಗೆ ಬರೆಯುವ ಶಕ್ತಿ ಇದ್ದರೆ ನಿಮ್ಮ ದೇಶದ ರಾಷ್ಟ್ರದ ಜೀವನವನ್ನು ಕುರಿತು ನಿಮ್ಮ ಭಾಷೆಯಲ್ಲಿ ಬರೆಯಿರಿ..... ಪ್ರತಿ ಭಾರತೀಯನೂ ಅವನು ಎಲ್ಲಿದ್ದರೂ ಸರಿಯೆ ಸುಂದರವಾದುದನ್ನೂ ರಾಷ್ಟ್ರೀಯವಾದುದನ್ನೂ ಪ್ರೀತಿಸುವ ಮನೋಭಾವವನ್ನು ಬೆಳಸಿಕೊಳ್ಳಲಿ" (ಅದೇ; ಪು. ೧೦೫-೧೦೬) ಎಂದು ವೈಚಾರಿಕವಾಗಿ ಗೊರೂರವರು ನುಡಿದಿದ್ದಾರೆ.

'ನಮ್ಮ ಶಿಕ್ಷಣದ ರೂಪರೇಖೆಗಳು' ಇದು ವ್ಯಾವಹಾರಿಕ ದೃಷ್ಟಿಯಿಂದ ಅತ್ಯುಪಯುಕ್ತವಾದ ಲೇಖನ. ಗೊರೂರುವರು ಶಿಕ್ಷಣದ ಬಗ್ಗೆ ಮಾಡಿರುವ ಚಿಂತನೆ, ನೀಡಿರುವ ವಿಚಾರಧಾರೆ ಅತ್ಯಂತ ಅಮೂಲ್ಯವಾದದ್ದು. ರಾಷ್ಟ್ರದ ಚಿಂತಕರಿಗೆ ಶಿಕ್ಷಣದ ವಿಚಾರ ಅಷ್ಟೇ ಗಹನವಾಗುತ್ತದೆ. ಗೊರೂರವರ ಬರವಣಿಗೆಯಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟ ಅಮೂಲ್ಯ ಭಾವನೆಗಳನ್ನು ಬಹುಮಟ್ಟಿನ ಪ್ರಸಂಗಗಳಲ್ಲಿ ಗುರುತಿಸಬಹುದು. ವ್ಯಕ್ತಿತ್ವ ವಿಕಾಸ ರಾಷ್ಟ್ರದ ಪ್ರಗತಿ ಎರಡೂ ಉತ್ತಮ ಶಿಕ್ಷಣದಿಂದಲೇ ಸಾಧಿತವಾಗುತ್ತದೆ ಎಂಬುದನ್ನು ಗಾಂಧಿಯವರು ನಂಬಿ ನುಡಿದಿದ್ದಾನೆ. ಗಾಂಧಿ ಅನುಯಾಯಿಗಳಾದ ಗೊರೂರವರು ಸಹ ಇದೇ ನಂಬಿಕೆಯನ್ನು ಇಟ್ಟುಕೊಂಡು ಬೆಳೆದವರು. ಶಿಕ್ಷಣ ಮಾತೃಭಾಷೆಯಲ್ಲಿ ಇದ್ದಾಗ ಹೆಚ್ಚು ಪರಿಣಾಮಕಾರಿ ಮತ್ತು ಪೂರ್ಣ ಫಲಕಾರಿ ಎಂಬ ಅಂಶವನ್ನು ಗೊರೂರವರು ಸವಿಸ್ತಾರವಾಗಿ ವಿಚಾರ ಮಾಡಿದ್ದಾರೆ. "ದೇಶದ ಅವಶ್ಯಕತೆಯನ್ನರಿತು ವಿದ್ಯೆಯನ್ನು ಕೊಡಬೇಕು. .... ಸುಮ್ಮನೆ ಶಾಲೆಗಳ ಮತ್ತು ಕಾಲೇಜುಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ನಮ್ಮ ದೇಶದ ಶಿಕ್ಷಣ ಸಮಸ್ಯೆ ಸಮರ್ಕವಾಗಿ ಪರಿಹಾರವಾಗುವುದಿಲ್ಲ" (ಅದೇ; ಪು. ೧೧೯) ಎಂಬ ಗೊರೂರವರ ಅಭಿಪ್ರಾಯ ಸಮಂಜಸವಾಗಿದೆ. ಈ ಎಚ್ಚರ ಇಲ್ಲದೆ ಸರ್ಕಾರ ಶಿಕ್ಷಣಕ್ಕಾಗಿ ಮಾಡುವ ಖರ್ಚು ವ್ಯರ್ಥ ಎಂಬುದನ್ನು ಎಲ್ಲ ಶಿಕ್ಷಣ ತಜ್ಞರು ಒಪ್ಪಿ ನುಡಿದಿದ್ದಾರೆ. ಶಿಕ್ಷಣದ ಗುರಿ ನೀತಿ ಜೀವನವನ್ನು ಕಲಿಸುವುದೇ ಆಗಿರಬೇಕು ಎಂಬುದು ಗೊರೂರವರ ಅಭಿಪ್ರಾಯ. ಇದು ಸಾಮಾಜಿಕ ಜೀವನದ ಕಟ್ಟಡದ ಭದ್ರವಾದ ಅಡಿಗಲ್ಲು ಎಂಬುದು ನಿರ್ವಿವಾದ. ಗೊರೂರವರ ದೃಷ್ಟಿಯಲ್ಲಿ ಆರ್ಥಿಕ ಅಭಿವೃದ್ಧಿ ಬುದ್ಧಿಯ ಬೆಳವಣಿಗೆ ಎರಡು ಒಂದೇ ನಾಣ್ಯದ ಎರಡು ಮುಖಗಳು. ಶಿಕ್ಷಣದಲ್ಲಿ ವಿಜ್ಞಾನದ ಸ್ಥಾನವನ್ನು ಕುರಿತು ಹೇಳುವಾಗ "ನಮ್ಮ ವಿಜ್ಞಾನ ಜ್ಞಾನವನ್ನು ನಿತ್ಯದ ಬಾಳ್ವಿಕೆಗೆ ಹೊಂದಿಸಿಕೊಳ್ಳಬೇಕು" (ಅದೇ; ಪು. ೧೨೫) ಎಂದು ಗೊರೂರವರು ಎಚ್ಚರಿಸಿದ್ದಾರೆ. ಈ ಸಂದರ್ಭದಲ್ಲಿ ಭಾರತೀಯರ ವೇದಾಂತ, ವಿಜ್ಞಾನದ ಬೆಳವಣಿಗೆಯನ್ನು ಎಂದಿಗೂ ತಡೆಯಲಿಲ್ಲ ಎಂದು ಗೊರೂರವರು ಆಡಿರುವ ಮಾತು ಭಾರತೀಯರಿಗೆ ಶಿಕ್ಷಣದಲ್ಲಿದ್ದ ಪೂರ್ಣದೃಷ್ಟಿಯನ್ನು ನೆನಪು ಮಾಡಿಕೊಡುತ್ತದೆ. ಶಿಕ್ಷಣದ ಮಹತ್ವವನ್ನು ಕುರಿತು ಗೊರೂರವರು ಆಡುವ ಮಾತು "ನಮ್ಮ

ಶಿಕ್ಷಣ ಸಂಸ್ಥೆಗಳು ಈ ವಿಶಾಲ ಭಾವನೆಗಳನ್ನು ಪ್ರಚಾರಪಡಿಸುವ ಕೇಂದ್ರಗಳಾಗಬೇಕು......... ಜ್ಞಾನಾರ್ಜನೆಗೆ ಹತ್ತಿರದ ಕಾಲುದಾರಿ ಇಲ್ಲ. ಜನಾಂಗದ ಮುಂದಲ ನಾಯಕರಾಗುವವರು ನಿಷ್ಠೆಯಿಂದ ಜ್ಞಾನ ಸಂಪಾದನೆ ಮಾಡಬೇಕು. .... ನಿಜವಾದ ಜ್ಞಾನವಿಲ್ಲದವರ ಕೈಲಿ ದೇಶದ ಆಳ್ವಿಕೆ ಸಿಕ್ಕಿದರೆ ಪ್ರಜಾಪ್ರಭುತ್ವ ಮರೆಯಾಗುವುದು". (ಅದೇ; ಪು.೧೩೦) ಗೊರೂರವರ ಈ ಎಚ್ಚರದ ಮಾತು ಅತಿ ಗಂಭೀರವಾದ ಮಾತಾಗಿದೆ. 'ಸಾಹಿತ್ಯ ರಶ್ಮಿ' ಕೃತಿಯ ಲೇಖನಗಳು ಗೊರೂರವರ ವಿಮರ್ಶಾತ್ಮಕ ದೃಷ್ಟಿಯನ್ನು ಪರಿಚಯ ಮಾಡಿಕೊಡುವಲ್ಲಿ ಯಶಸ್ವಿಯಾಗಿವೆ.

ಗೊರೂರವರು ಸನಾತನ - ನೂತನಗಳ, ಮೂಡಣ - ಪಡುವಣಗಳ ಸಾಮರಸ್ಯದಿಂದ ಹಸನಾದ ವ್ಯಕ್ತಿತ್ವ ಎಂಬುದು ಇಲ್ಲಿ ಖಚಿತವಾಗುತ್ತದೆ. ಅವರ ಋಜುತ್ವ, ನಿರ್ಮಲತೆಗಳು ಈ ಮೂಲಕ ನಮಗೆ ಸ್ಪಷ್ಟವಾಗುತ್ತದೆ. 'ಸಾಹಿತ್ಯ ರಶ್ಮಿ' ವಿಮರ್ಶಾತ್ಮಕ ಕೃತಿಯಲ್ಲಿ ನಾವು ಹದವಾದ ಆಕರ್ಷಕವಾದ ಶೈಲಿಯನ್ನು ಗುರುತಿಸಬಹುದು. ಸಾಹಿತ್ಯ ಕೃತಿಗಳನ್ನು ಕುರಿತು ಬರೆದ ಇಲ್ಲಿ ಲೇಖನಗಳ ವಿಮರ್ಶೆ ಪ್ರಧಾನವಾಗಿ ಪರಿಚಯಾತ್ಮಕ ಅಥವಾ ವರ್ಣನಾತ್ಮಕವಾಗಿದೆ ಎಂದು ಹೇಳಬಹುದು.

ಗೊರೂರವರು ಜಾನಪದ ಕೃತಿಗಳು ಅವರ ಜಾನಪದ ವಿದ್ವತ್ತಿಗೆ ಜಾನಪದ ಸಾಹಿತ್ಯದ ಆಸಕ್ತಿಗೆ ಮೈಲುಗಲ್ಲುಗಳಾಗಿವೆ. ಹಳ್ಳಿಯ ಬಾಳಿನ ಬನಿಯನ್ನು ಬವಣೆಯನ್ನು ನಿಜ ಜೀವನದಲ್ಲಿ ಗೊರೂರವರು ಚೆನ್ನಾಗಿ ಅನುಭವಿಸಿ ತಿಳಿದುಕೊಂಡಿದ್ದಾನೆ. ಜಾನಪದ ಕೃತಿಯ ಪ್ರಕಟಣೆ ವೈಜ್ಞಾನಿಕ ದೃಷ್ಟಿಯಿಂದ ಅತಿ ಗಂಭೀರವಾದ ಕೆಲಸ. ಗೊರೂರವರು ತಾವು ಜನಪದ ಸಾಹಿತ್ಯದಲ್ಲಿ ಕಂಡ ವಿಶೇಷತೆಯನ್ನು ತಮ್ಮ ಜಾನಪದ ಕೃತಿಗಳ ಮೂಲಕ ಪ್ರಚಾರಪಡಿಸಿ ಕನ್ನಡಿಗರಲ್ಲಿ ಜಾನಪದ ಸಾಹಿತ್ಯದ ಬಗ್ಗೆ ಒಲವಿನ ಕಣ್ಣನ್ನು ತೆರೆಸಿರುವುದು ಅಷ್ಟೇ ಅಲ್ಲದೆ ಅಧ್ಯಯನದ ದೃಷ್ಟಿಯಿಂದ ಹೊಸ ದೃಷ್ಟಿಯನ್ನು ಮೂಡಿಸಿದ್ದಾರೆ. ವಿದ್ವಾಂಸರು ಜನಪದ ಸಾಹಿತ್ಯವನ್ನು ಪುರಸ್ಕರಿಸಿರುವುದರ ಜತೆಗೆ ಅಭಿಮಾನದಿಂದ ಕಾಣಬೇಕು ಎಂಬುದು ಗೊರೂರವರ ಅಂತರಂಗದ ಹಂಬಲವಾಗಿದೆ. ಇಂದು ಜಾನಪದ ಅಧ್ಯಯನ ವೈಜ್ಞಾನಿಕವಾಗಿ ನಡೆಯುತ್ತಿರುವುದು ಎಷ್ಟು ಸುತ್ಯರ್ಹವಾಗಿದೆಯೋ ಗೊರೂರವರು ಈ ಕಾರ್ಯವನ್ನು ಎರಡು ಮೂರು ದಶಕಗಳ ಮೊದಲೇ ಮಾಡಿರುವುದು ಗಮನಾರ್ಹ ಸಂಗತಿ. ಪ್ರಚಾರ ಮಾಧ್ಯಮಗಳಲ್ಲಿ ಮತ್ತು ಜಾನಪದ ಗೋಷ್ಠಿಗಳಲ್ಲಿ ಗೊರೂರವರಿಗೆ ಆದ್ಯ ಸ್ಥಾನವನ್ನು ಕೊಟ್ಟಿರುವುದು ಜಾನಪದ ಕ್ಷೇತ್ರದಲ್ಲಿ ಗೊರೂರವರಿಗೆ ಇರುವ ಒಲವು ಪರಿಶ್ರಮಕ್ಕೆ ಸಾಕ್ಷಿಯಾಗಿದೆ. ಈ ದೃಷ್ಟಿಯಲ್ಲಿ ಗೊರೂರವರ ವಾಣಿಯನ್ನು ಅಧಿಕಾರ ವಾಣಿಯೆಂದು ಜಾನಪದ ತಜ್ಞರು ಪರಿಗಣಿಸಿದ್ದಾರೆ.

'ಹಳ್ಳಿಯ ಹಾಡುಗಳು' ಕೇವಲ ಮುಗ್ಧರು ಹಾಡುವ ಹಾಡಷ್ಟೇ ಅಲ್ಲ. ಪ್ರಾಜ್ಞರನ್ನು ಕಣ್ಣು ಅರಳಿಸುವ ಶಕ್ತಿ ಜನಪದ ಸಾಹಿತ್ಯಕ್ಕೆ ಇದೆ ಎಂಬುದು ಗೊರೂರವರ ಸ್ವಾನುಭವದ ನುಡಿ. 'ಹಳ್ಳಿಯ ಹಾಡುಗಳು' ಒಂದು ಉತ್ತಮ ಜನಪದ ಗೀತ ಸಂಕಲನ. ಕನ್ನಡ ಸಾಹಿತ್ಯದ ನವೋದಯ ಕಾಲಕ್ಕಾಗಲೇ

ಕನ್ನಡದಲ್ಲಿ ಇಂಥಹ ಜನಪದ ಸಾಹಿತ್ಯ ಸಂಗ್ರಹ ಕಾರ್ಯ ಸಮರ್ಥ ರೀತಿಯಲ್ಲಿ ನಡೆದಿತ್ತು. ಕರ್ನಾಟಕದ ಉತ್ತರ ಕರ್ನಾಟಕದಲ್ಲಿ 'ಹಳ್ಳಿಯ ಹಾಡುಗಳು' ಸಂಗ್ರಹವಾಗುವುದರ ಮೊದಲಿಗೆ ಮೈಸೂರು ಪ್ರಾಂತ್ಯ ದಲ್ಲಿ ಗೊರೂರರವರಿಂದ 'ಹಳ್ಳಿಯ ಹಾಡುಗಳು' ಸಂಗ್ರಹ ಆದದ್ದು ವಿಶೇಷ ಸಂಗತಿಯಾಗಿದೆ. ಈ ರೀತಿಯಲ್ಲಿ 'ಹಳ್ಳಿಯ ಹಾಡುಗಳು' ದಕ್ಷಿಣ ಕರ್ನಾಟಕದ ಪ್ರಾತಿನಿಧಿಕ ಕೃತಿಯಾಗಿದೆ. 'ಹಳ್ಳಿಯ ಹಾಡುಗಳು' ಸಂಕಲನದಲ್ಲಿ ಹೆಣ್ಣಿನ ಜೀವನದ ನೋವು - ನಲಿವಿನ ಎರಡು ಮುಖಗಳನ್ನು ಕಾಣಬಹುದು. ಇಲ್ಲಿಯ ಹಾಡುಗಳು ತ್ರಿಪದಿಯಲ್ಲಿವೆ. ಈ ತ್ರಿಪದಿಗಳಲ್ಲಿ ಭಾವಗೀತೆಯ ಸೊಗಸನ್ನು ಪೂರ್ಣ ಪ್ರಮಾಣದಲ್ಲಿ ಗುರುತಿಸುತ್ತೇವೆ. ಗೊರೂರರವರು ಜನಪದ ಸಾಹಿತ್ಯಕ್ಕೆ ಸ್ಪಂದಿಸಲು ಮುಖ್ಯ ಕಾರಣ ಆ ಹಾಡುಗಳಲ್ಲಿರುವ ಭಾವಗೀತೆಯ ಸೊಗಸು ಮತ್ತು ಜೀವನದ ಬಹುಮುಖ ಅನುಭವದ ನೈಜ ಚಿತ್ರಣ.

ಹಳ್ಳಿಯ ಹಾಡುಗಳಲ್ಲಿ ವಿಷಯಕ್ಕೆ ಅನುಗುಣವಾಗಿ ವಿಂಗಡಣೆಯನ್ನು ನೋಡುತ್ತೇವೆ. ಅವು ಯಾವುವು? ಎಂದರೆ ದೇವರು, ವರ್ಣನೆ ಮತ್ತು ಸಂಸಾರ. ಇಲ್ಲಿಯ ಹಾಡುಗಳೆಲ್ಲಾ ಬಹುಮಟ್ಟಿಗೆ ಮೈಸೂರು ಮತ್ತು ಹಾಸನ ಜಿಲ್ಲೆಯಲ್ಲಿ ಪ್ರಚಲಿತವಾಗಿರುವ ಹಾಡುಗಳು. ಗ್ರಾಮೀಣ ಜೀವನದಲ್ಲಿ ದೈವಭಕ್ತಿ ಆ ಜನರ ಬದುಕಿನ ಮೂಲ ಶಕ್ತಿಯಾಗಿದೆ. ಬದುಕಿನ ಸುಖ ದುಃಖಗಳೆರಡನ್ನು ದೈವಕ್ಕೆ ಸಮರ್ಪಿಸುವುದು ಗ್ರಾಮೀಣ ಜನರ ಪ್ರಾಮಾಣಿಕ ರೀತಿಯಾಗಿದೆ. ವೇದ ಉಪನಿಷತ್ತಿನಲ್ಲಿ ದೇವರ ಬಗ್ಗೆ ನಾವು ಕಾಣುವ ಉದಾತ್ತ ಭಾವನೆಗಳನ್ನು ಅತ್ಯುತ್ತಮ ಕಲ್ಪನೆಗಳನ್ನು ಜನಪದ ಗೀತೆಗಳಲ್ಲಿಯೂ ಗುರುತಿಸಬಹುದು ಎಂಬುದನ್ನು ಗೊರೂರರವರು ತಮ್ಮ ಕೃತಿಯಲ್ಲಿ ಸಾಕ್ಷಾಧಾರಗಳ ಮೂಲಕ ಖಚಿತಪಡಿಸಿದ್ದಾರೆ. ಪರಮಾತ್ಮ ಸರ್ವಾಂತರ್ಯಾಮಿ, ಸಾಮರ್ಥ್ಯಶಾಲಿ ಎಂಬ ವಿಷಯವನ್ನು ಹಳ್ಳಿಯ ಜನ ಮುಗ್ಧ ಮನಸ್ಸಿನಿಂದ ಕೊಂಡಾಡಿದ್ದಾರೆ. 'ತೇನವಿನ ತೃಣ ಮಪಿನಚುತಿ' ಎಂಬ ಸತ್ಯ ಹಳ್ಳಿಯ ಹಾಡುಗಳಲ್ಲಿ ಅಷ್ಟೇ ಪರಿಣಾಮಕಾರಿಯಾಗಿ ಮೂಡಿಬಂದಿದೆ. ದೇವರೊಂದಿಗೆ ಮುಗ್ಧ ಮನಸ್ಸಿನ ಗ್ರಾಮೀಣ ಜನರು ಇಟ್ಟುಕೊಂಡಿರುವ ಸಂಬಂಧ ಈ ಹಾಡುಗಳಲ್ಲಿ ಮನೋಹರವಾಗಿ ಮೂಡಿಬಂದಿದೆ. ನವವಿಧ ಭಕ್ತಿಭಾವನೆಯಲ್ಲಿ ಕಾಣುವ ಸಖಭಾವ, ದಾಸ್ಯಭಾವ ಹಳ್ಳಿಯಹಾಡುಗಳಲ್ಲಿ ಮೇಲೆದ್ದು ಕಾಣುತ್ತದೆ. ಗ್ರಾಮೀಣ ಜನಕ್ಕೆ ಆರಾಧ್ಯ ದೈವದ ಬಗ್ಗೆ ಭಯಕ್ಕಿಂತಲೂ ಅಭಿಮಾನ ಹೆಚ್ಚಾಗಿ ಇರುವುದನ್ನು ಈ ಹಳ್ಳಿಯಹಾಡುಗಳಲ್ಲಿ ಚೆನ್ನಾಗಿ ಗುರುತಿಸಬಹುದು. ಹಳ್ಳಿಯ ಜನರ ಪೂಜೆ ಆಡಂಬರದಿಂದ ಮುಕ್ತವಾಗಿ ಪ್ರಾಮಾಣಿಕತೆಯಿಂದ ಶೋಭಿಸುವುದನ್ನು ನಾವು ಗೊರೂರರವರ ಸಂಕಲನ ಗೀತೆಗಳಲ್ಲಿ ಚೆನ್ನಾಗಿ ಮನಗಾಣಬಹುದು. ಬಾಹ್ಯದ ಮಡಿ ಮೈಲಿಗೆ ಗ್ರಾಮೀಣ ಜನರಿಗೆ ಮುಖ್ಯವಾಗಿಲ್ಲ. ತಿಳಿಮನದ ಶುದ್ಧ ಸಂವೇದನೆ ಭಗವಂತನಿಗೆ ಅತಿ ಪ್ರಿಯ ಎಂಬುದನ್ನು ಗೊರೂರರವರು ತಾವು ಸಂಗ್ರಹಿಸಿದ ಗೀತೆಗಳಲ್ಲಿ ಪ್ರತಿಪಾದಿತವಾಗಿದೆ. ತಮ್ಮ ಪ್ರಾಂತ್ಯದ ದೇವರುಗಳ ಜಾತ್ರೆಯ ವೈಭವದಲ್ಲಿ ಹಾಡುವ ಹಾಡುಗಳು ಹಳ್ಳಿಯಹಾಡಿನಲ್ಲಿ ಸಂಗ್ರಹವಾಗಿದೆ.

ಸಂಸಾರ ವಿಷಯಕ್ಕೆ ಸಂಬಂಧಿಸಿದಂತೆ ಹಳ್ಳಿಯ ಹಾಡುಗಳಲ್ಲಿ ಗ್ರಾಮೀಣ ಜನರು ವಾಸ್ತವ ಬದುಕಿನ ಬಗ್ಗೆ ತೋರಿಸುವ ಒಲವು ಉತ್ಸಾಹಗಳು ನಮಗೆ ಚೆನ್ನಾಗಿ ಮನವರಿಕೆಯಾಗುತ್ತದೆ. ಬದುಕನ್ನು ಬಾಳಬೇಕು ಎಂಬ ಜೀವನೋತ್ಸಾಹ ಗ್ರಾಮೀಣ ಜನರಲ್ಲಿ ಮೈತುಂಬಿದ ಜೀವಂತ ಗುಣವಾಗಿತ್ತು. ಬದುಕು ನಿರ್ಮಲವಾಗಿರಬೇಕು ಮತ್ತು ನಿಷ್ಠೆಯಿಂದ ಕೂಡಿರಬೇಕು ಎಂಬ ಅಂಶವನ್ನು ಗ್ರಾಮೀಣ ಜನರ ಸಾಂಸಾರಿಕ ಗೀತೆಗಳಲ್ಲಿ ಸ್ಪಷ್ಟವಾಗಿ ನೋಡುತ್ತೇವೆ. ಜೀವನದ ಎಲ್ಲಾ ಸಂದರ್ಭಗಳಿಗೆ ಮಹೋತ್ಸವಗಳಿಗೆ ಸಂಬಂಧಿಸಿದ ಹಾಡುಗಳನ್ನು 'ಹಳ್ಳಿಯ ಹಾಡುಗಳು' ಸಂಕಲನದಲ್ಲಿ ಗುರುತಿಸಬಹುದು. ಜನಪದ ಗೀತೆಗಳ ಸಂಗ್ರಹ ಕಾರ್ಯ ವೈಜ್ಞಾನಿಕವಾಗಿ ಆಗಬೇಕಾದರೆ ಎಷ್ಟು ಪ್ರಾಮಾಣಿಕವಾಗಿ ನಡೆಯಬೇಕು ಎಂಬುದನ್ನು ಗೊರೂರರವರು ತಮ್ಮ ಸಂಗ್ರಹ ಕಾರ್ಯದ ಮೂಲಕ ನಮಗೆ ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಪರಿಸರದ ಭಾಷೆ, ಪರಿಸರದ ಆಚರಣೆ ರೀತಿ ನೀತಿಗಳನ್ನು ಅರಿತು ಅವುಗಳ ಹಿನ್ನೆಲೆಯಲ್ಲಿ ಸಂಗ್ರಹಿಸಿದ ಜನಪದ ಗೀತೆಗಳು ಪ್ರಾದೇಶಿಕ ಮಹತ್ವವನ್ನು ಪಡೆಯುತ್ತದೆ ಎಂಬುದು ತಜ್ಞ ಜನಪದ ಸಾಹಿತಿಯಾದ ಗೊರೂರರವರ ಅಭಿಪ್ರಾಯವಾಗಿದೆ.

'ಹಳ್ಳಿಯ ಹಾಡುಗಳು' ಕೃತಿಗೆ ಗೊರೂರರವರು ಬರೆದಿರುವ ವಿದ್ವತ್‌ಪೂರ್ಣವಾದ ಮುನ್ನುಡಿ ಜನಪದ ಸಾಹಿತ್ಯದ ವೈಜ್ಞಾನಿಕ ಅಧ್ಯಯನಕ್ಕೆ ಮಾರ್ಗಸೂಚಿ ನುಡಿಗಳಾಗಿವೆ. ಯಾವುದೇ ಜನಪದ ಸಾಹಿತ್ಯವನ್ನು ನಾವು ಸಂಗ್ರಹಿಸಿದಾಗ ಅದಕ್ಕೆ ಸಂಬಂಧಿಸಿದ ಪ್ರಾಮಾಣಿಕ ಮುನ್ನುಡಿ ಅಗತ್ಯ ಎಂಬುದನ್ನು ಗೊರೂರರವರು ತಿಳಿಸಿದ್ದಾರೆ. ಹಳ್ಳಿಯಹಾಡುಗಳನ್ನು ಕುರಿತು ಸಂಶೋಧನೆ ಮಾಡುವ ಮುಂದಿನ ಸಂಶೋಧಕರಿಗೆ ಇಂತಹ ಪೀಠಿಕೆ ದಿಕ್ಸೂಚಿ ಆಗುವುದರ ಜತೆಗೆ ಸುಭದ್ರ ತಳಹದಿಯೂ ಆಗುತ್ತದೆ. ಜನಪದ ಸಾಹಿತ್ಯ ಸಂಗ್ರಹಕನಿಗೆ ಉತ್ಸಾಹದ ಜತೆಗೆ ತನ್ನ ಕಾರ್ಯದ ಧ್ಯೇಯೋದ್ದೇಶಗಳು ಮನದಟ್ಟಾಗಿರ ಬೇಕು. ಗೊರೂರರವರಲ್ಲಿ ಈ ಗುಣ ಪರಿಪೂರ್ಣವಾಗಿತ್ತು. ಪ್ರಾದೇಶಿಕ ಭಾಷೆಯನ್ನು ಗೊರೂರರವರು ಚೆನ್ನಾಗಿ ಅರಿತುಕೊಂಡು ಹಳ್ಳಿಯಹಾಡುಗಳಲ್ಲಿ ಮೂಲ ಭಾಷೆ ಉಳಿದು ಬರುವಂತೆ ಎಚ್ಚರವಹಿಸಿದ್ದಾರೆ. ಗ್ರಾಮೀಣ ಜನರು ಪ್ರಕೃತಿಯನ್ನು ವರ್ಣಿಸುವ ರೀತಿ ತಮ್ಮ ಜೀವನಕ್ಕೆ ಪ್ರಕೃತಿಯನ್ನು ಹೊಂದಿಸಿಕೊಳ್ಳುವ ರೀತಿ ವಿನೂತನವೂ ಅತ್ಯಂತ ಸಮಂಜಸವು ಆಗಿರುತ್ತದೆ. ಇಂತಹ ವರ್ಣನೆಯ ಸೊಗಸನ್ನು ಗೊರೂರರವರು ಸಂಪಾದಿಸಿರುವ ಹಳ್ಳಿಯಹಾಡುಗಳಲ್ಲಿ ನಾವು ಸೊಗಸಾಗಿ ನೋಡಬಹುದು.

'ಹಳ್ಳಿಯ ಬಾಳು' ಕೃತಿಯಲ್ಲಿ ಎರಡು ಮಹಾಯುದ್ಧಗಳ ಪರಿಣಾಮವನ್ನು ತಿಳಿಯಬಹುದು. ಸ್ವಾತಂತ್ರ್ಯ ಚಳುವಳಿಯ ಪ್ರಭಾವ ರೈತನ ಬದುಕಿನ ಮೇಲೆ ಆದ ರೀತಿಯನ್ನು ಈ ಕೃತಿಯಲ್ಲಿ ಗುರುತಿಸ ಬಹುದು. ಗ್ರಾಮೀಣ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿಯ ತಾಯಿ ಬೇರು ಎಂಬುದು ಈ ಕೃತಿಯಲ್ಲಿ ಸ್ಫುಟವಾಗುತ್ತದೆ. ಜನಪದ ಸಾಹಿತ್ಯದ ಅರ್ಥವೈಶಾಲ್ಯವನ್ನು 'ಹಳ್ಳಿಯ ಬಾಳು' ಕೃತಿ ಪೂರ್ಣ ಪ್ರಮಾಣದಲ್ಲಿ ಹೊಂದಿದೆ. 'ಹಳ್ಳಿಯ ಬಾಳು' ಕೃತಿ ಗೊರೂರರವರ ಜನಪದ ಜೀವನದ ಅಭೀಪ್ಸೆಗೆ

ದ್ಯೋತಕ ಕೃತಿಯಾಗಿದೆ. ನಗರ ಜೀವನ ಗ್ರಾಮಜೀವನ ಎರಡು ವಲಯಗಳಲ್ಲಿ ಲೇಖಕರು ಕಂಡ ವ್ಯತ್ಯಾಸವನ್ನು ಸಾಂದರ್ಭಿಕವಾಗಿ ನಿದರ್ಶನ ಸಹಿತ ಕೃತಿಯಲ್ಲಿ ಹಂಚಿಕೊಂಡಿದ್ದಾರೆ. ಭಾರತೀಯ ಸಂಸ್ಕೃತಿಯ ಮೂಲ ವೈಭವವನ್ನು ನೆನಪು ಮಾಡಿಕೊಡುವುದರ ಜತೆಗೆ ಪರದೇಶದ ನಾಗರಿಕತೆಯ ವಿಚಿತ್ರ ಸ್ವಭಾವದ ಪರಿಣಾಮವನ್ನು ಈ ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ನಾವು ನಮ್ಮ ಸ್ವಾಭಿಮಾನವನ್ನು ಬಿಟ್ಟು ಪರಕೀಯರ ರೀತಿ ನೀತಿಗಳನ್ನು ಅನುಸರಣೆ ಮಾಡುತ್ತಿರುವುದು ಎಷ್ಟು ಶೋಚನೀಯ ಸ್ಥಿತಿಯಾಗಿದೆ ಎಂಬುದನ್ನು 'ಹಳ್ಳಿಯ ಬಾಳು' ಕೃತಿಯನ್ನು ಓದಿದಾಗ ನಾವು ಚೆನ್ನಾಗಿ ತಿಳಿಯಬಹುದು. ಇಷ್ಟಾದರೂ ನಮ್ಮ ಹಳ್ಳಿಗಳ ಸಂಸ್ಕೃತಿ ಇನ್ನು ಶುದ್ಧವಾಗಿದೆ ಎಂಬುದು ಗೊರೂರರವರ ಅಭಿಮತ. ರೈತನ ದುಡಿಮೆಯ ಉತ್ಸಾಹ ಶುದ್ಧ ಬದುಕು ನಮಗೆ ಮನವರಿಕೆ ಆಗಬೇಕಾದರೆ ರೈತನೊಂದಿಗೆ ನಾವು ಸಹಾನುಭೂತಿಯಲ್ಲಿ ಬಾಳಬೇಕು ಎಂಬುದನ್ನು ಗೊರೂರರವರು ಈ ಕೃತಿಯಲ್ಲಿ ತಿಳಿಯಪಡಿಸಿದ್ದಾರೆ.

ರೈತನಿಗೆ ದೇವರೊಂದಿಗೆ ಇರುವ ಭಕ್ತಿ ಭಾವನೆ ಅನನ್ಯವಾದದು. ಮಾದೇವ ನಿನ್ನ ಹೊರತು ನಾನು ಯಾರನ್ನು ನಂಬಲ್ಲ ನನ್ನ ಸರ್ವಸ್ವವನ್ನು ನೀನೇ ನಡೆಸು ಎಂದು ರೈತ ಅನನ್ಯ ಭಾವನೆಯಲ್ಲಿ ದೇವರನ್ನು ಬೇಡುತ್ತಾನೆ. ರೈತನ ಭಕ್ತಿ ಗೆಳೆತನದ ಭಾವನೆಯಲ್ಲಿ ಬೆಳೆದು ಬಂದಿರುವುದನ್ನು ಜನಪದ ಗೀತೆಯಲ್ಲಿ ಕಾಣಬಹುದು. ಪ್ರಕೃತಿಯೊಂದಿಗೆ ರೈತನ ಭಾಂದವ್ಯ ಅತಿ ಗಾಢವು ಮಧುರವೂ ಆಗಿರುತ್ತದೆ. ದಿನನಿತ್ಯದ ಬೇಸಾಯದ ಚಟುವಟಿಕೆಯಲ್ಲಿ ರೈತ ದೇವರನ್ನು ಸ್ತುತಿಸುವುದು ಅವನ ಅನನ್ಯ ಭಕ್ತಿ ಭಾವನೆಗೆ ಸ್ಪಷ್ಟ ಸಾಕ್ಷಿಯಾಗಿದೆ. ಗಣಪನ ಸ್ತುತಿ ರೈತನ ಬದುಕಿನಲ್ಲಿ ಮೂಲ ಸ್ತುತಿಯಾದಂತೆ ಸರಸ್ವತಿಯ ಸ್ತುತಿಯೂ ಅಷ್ಟೇ ಪ್ರಮುಖವಾಗಿದೆ. "ನಾಲಗೆಗೆ ಅಕ್ಷರವ ನೆಲಸವ್ವ| ಗುಟ್ಟಿನಲಿ ಮತಿಯ ನೆಲಸವ್ವ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೯೯; ಪು.೧೧) ಎಂದು ಶಾರದೆಯನ್ನು ಸ್ತುತಿ ಮಾಡುತ್ತಾರೆ. ಜನಪದ ಹೆಣ್ಣು ಜೋಗುಳ ಹಾಡುವ ಸಲುವಾಗಿ ವಿದ್ಯೆಯನ್ನು ಬಯಸುತ್ತಾಳೆ. ಅದಕ್ಕಾಗಿ ಸರಸ್ವತಿಯನ್ನು ಸ್ತುತಿ ಮಾಡುತ್ತಾರೆ. ಜೋಗುಳ ಹಾಡಿದರೆ ಅಳುವ ಕಂದ ಆಡಿ ನಲಿಯುತ್ತದೆ. ಬೀಸುವ ಸಮಯದಲ್ಲಿ ಸುಮ್ಮನೆ ಬೀಸಿದರೆ ರಾಗಿಯೂ ಸರಿಯಾಗಿ ಹಿಟ್ಟಾಗುವುದಿಲ್ಲ ಎಂದು ಜನಪದರು ನಂಬಿದ್ದಾರೆ. ನಿದರ್ಶನಕ್ಕಾಗಿ ಗೊರೂರರವರು ಕೊಡುವ ಜನಪದ ಗೀತೆ -

"ಸುಮ್ಮಾನೆ ಬೀಸಿದರೆ ಬೀಳಾದೊ ಈ ಕಲ್ಲು
ನಾಗಸೊರದಂತೆ ದನಿ ಎತ್ತಿ - ಹಾಡಿದರೆ
ಗಮ್ಮನೆ ಬೀಳ್ವದು ಈ ಕಲ್ಲು" (ಅದೇ; ಪು.೧೨)

ಎಂದು ಜನಪದ ಹೆಣ್ಣು "ಪದ"ಕ್ಕಾಗಿ ಶಾರದೆಯನ್ನು ಬೇಡುತ್ತಾಳೆ. ಜನಪದ ಗೀತೆಗಳಲ್ಲಿ ತಿರುಪತಿ ತಿಮ್ಮಪ್ಪನ ಸ್ತುತಿ, ಬಿಳಿಗಿರಿ ರಂಗನ ಸ್ತುತಿ, ನಂಜುಂಡೇಶ್ವರ ಸ್ತುತಿ ನಮಗೆ ಮುಖ್ಯವಾಗಿ ಕಂಡುಬರುತ್ತದೆ. ಮಲೆಯ ಮಹದೇಶ್ವರನನ್ನು ತುಂಬು ಹೃದಯದಲ್ಲಿ ರೈತರು ಸ್ತುತಿ ಮಾಡುವುದನ್ನು

ಜನಪದ ಗೀತೆಗಳಲ್ಲಿ ಕಾಣಬಹುದು. ಜಾತ್ರೆಯ ಸಮಯದಲ್ಲಿ ಊರದೇವತೆಯನ್ನು ಸ್ತುತಿ ಮಾಡುವುದು ಗ್ರಾಮೀಣ ಜನರಲ್ಲಿ ವಾಡಿಕೆಯ ಸಂಗತಿಯಾಗಿದೆ. ಈ 'ಪದ'ಗಳಲ್ಲಿ ಶಿವಪಾರ್ವತಿಯವರ ಗಂಗೆಯ ಸಂಬಂಧವನ್ನು ಸ್ವಾರಸ್ಯವಾಗಿ ಗುರುತಿಸಬಹುದು. ಸಂಸಾರದ ತೊಡಕನ್ನು ಕಳೆದುಕೊಳ್ಳಲು ನಂಜುಂಡೇಶ್ವರನನ್ನು ಮೊರೆಹೋಗುವುದು ಮತ್ತು ಚಾಮುಂಡಿಯನ್ನು ಸ್ತುತಿಸುವುದನ್ನು ಜನಪದ ಗೀತೆಗಳಲ್ಲಿ ನೋಡುತ್ತೇನೆ.

ಬೆವರಿನ ಆಳಾಗಿ ದುಡಿಮೆಯ ವ್ಯಕ್ತಿಯಾಗಿ ಭೂಮಿ ತಾಯಿಯ ಆರಾಧಕವಾಗಿ ರೈತ ತನ್ನ ಬಾಳನ್ನು ಸಾರ್ಥಕಪಡಿಸಿಕೊಳ್ಳಲು ಹಂಬಲಿಸುತ್ತಾನೆ. ಇಂಥಹ ರೈತ ಮಳೆರಾಯನನ್ನು ಸ್ತುತಿ ಮಾಡುವುದು ಸಹಜವೆನಿಸುತ್ತದೆ. ರೈತ ತನ್ನ ದುಡಿಮೆಯ ಫಲವನ್ನು ತನ್ನ ಸಮಾಜದ ಬಂಧುಗಳೊಡನೆ ಉತ್ಸಾಹದಿಂದ ಹಂಚಿಕೊಳ್ಳುತ್ತಾನೆ. ಇದಕ್ಕಾಗಿಯೇ 'ಲೋಕದ ಬಂಧು' ಎಂದು ರೈತನನ್ನು ಕರೆಯುವುದು. ಸುಗ್ಗಿಯ ಕಾಲದಲ್ಲಿ ರೈತ ನಿರ್ವಂಚನೆಯಿಂದ ತನ್ನ ಬೆಳೆಯನ್ನು ಎಲ್ಲರೊಂದಿಗೆ ಹಂಚಿಕೊಳ್ಳುತ್ತಾನೆ. ಚೆನ್ನಾಗಿ ಬದುಕಬೇಕು, ರಸಿಕನಾಗಿ ಬಾಳಬೇಕು ಮತ್ತು ಈಸಬೇಕು - ಇದ್ದು ಜೈಸಬೇಕು ಎಂಬುದು ರೈತನ ಸಂಕಲ್ಪವಾಗಿದೆ. ಇದಕ್ಕಾಗಿಯೇ 'ತಿಮ್ಮಪ್ಪ ಸೋಲಿಸಬೇಡ ಗೆಲಿಸಯ್ಯ' ಎಂದು ರೈತ ದೇವರಲ್ಲಿ ಮೊರೆಯಿಡುತ್ತಾನೆ.

ರೈತನ ಜೀವನದ ಸವಿ ಸೊಗಸುಗಳನ್ನು ಅವನ ಜೀವನ ಮತ್ತು ಜನಪದ ಸಾಹಿತ್ಯದ ಗಂಟು - ನಂಟನ್ನು, ಜನ ಜೀವನವನ್ನು ರೂಪಿಸುವಲ್ಲಿ ಆ ಸಾಹಿತ್ಯದ ಪಾತ್ರವನ್ನು ಕುರಿತು ವಿವರವಾಗಿ ಗೊರೂರವರು ಚರ್ಚಿಸಿದ್ದಾರೆ. 'ದೇವರೊಂದಿಗೆ ಗೆಳತನ', 'ಬೆವರಿನ ಆಳು', 'ಲೋಕದ ಬಂಧು', 'ಗಂಡ, ಹೆಂಡತಿ, ಪ್ರೇಮ, ಸಂಸಾರ', 'ಈ ಸಾಹಿತ್ಯದ ಸೊಗಸು' ಮುಂತಾದ ಅಧ್ಯಾಯಗಳಲ್ಲಿ ಗೊರೂರವರು ನಮ್ಮ ಜನಪದ ಸಾಹಿತ್ಯದ ವಿಸ್ತಾರವಾದ ವಿವೇಚನೆಯನ್ನು ಮಾಡಿದ್ದಾರೆ. ಜನಪದ ಸಾಹಿತ್ಯದ ಮೂಲಕ ರೈತನ ಜೀವನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ವಿಶ್ಲೇಷಣೆಗೆ ಹೇರಳವಾಗಿ ಜನಪದ ಗೀತೆಗಳನ್ನು ಗೊರೂರವರು ಬಳಸಿಕೊಂಡಿದ್ದಾರೆ. ನಮ್ಮ ಜನಪದ ಸಾಹಿತ್ಯದ ಅರ್ಥ ವೈಶಾಲ್ಯದ ಮೇಲೆ ಬೆಳಕು ಚೆಲ್ಲುವ ಕೃತಿಗಳಲ್ಲಿ ಗೊರೂರವರ 'ಹಳ್ಳಿಯಬಾಳು' ಅತ್ಯುತ್ತಮ ಕೃತಿಯಾಗಿದೆ. ಹೀಗೆ 'ಹಳ್ಳಿಯಬಾಳು' ಕೃತಿ ಎಲ್ಲಾ ದೃಷ್ಟಿಯಿಂದಲೂ ವೈಶಿಷ್ಟ್ಯಪೂರ್ಣ ಎನಿಸಿಕೊಂಡಿದೆ.

'ಜನಪದ ಜೀವನ ದರ್ಶನ' ಕೃತಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಆಹ್ವಾನದ ಮೇರೆಗೆ ಗೊರೂರವರು ನೀಡಿದ ಮೂರು ವಿಶೇಷ ಉಪನ್ಯಾಸಗಳನ್ನು ಒಳಗೊಂಡಿದೆ. ೧೯೭೪ ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಗೊರೂರವರು ಜನಪದ ಸಾಹಿತ್ಯವನ್ನು ಮೂರು ದೃಷ್ಟಿಗಳಿಂದ ನೋಡಿದ್ದಾರೆ. ಅವು ಎಂದರೆ - ಜನಪದ ಸಾಹಿತ್ಯದಲ್ಲಿ ಪೌರಾಣಿಕ ಪ್ರಜ್ಞೆ ಮತ್ತು ಮೌಲ್ಯ, ಜನಪದ ಕಥೆಗಳು ಹಾಗೂ ಜನಪದ ಜೀವನ ದರ್ಶನ. ಈ ಮೂರು ವಿಷಯಗಳನ್ನು ಕುರಿತು ಗೊರೂರವರ ದೃಷ್ಟಿಕೋನ ಅನನ್ಯ ವಾಗಿದೆ. ಜನಪದ ಸಾಹಿತ್ಯ ಸಂದರ್ಭದಲ್ಲಿ ಗೊರೂರವರ ಈ ಕೃತಿಗೆ ಹೆಚ್ಚು ಮಾನ್ಯತೆ ಸಂದಿದೆ.

ಸಾಹಿತ್ಯ ಅಕಾಡೆಮಿಗಾಗಿ 'ಹೊಸಗನ್ನಡ ಪ್ರಬಂಧ ಸಂಕಲನ'ವನ್ನು ಗೊರೂರರವರು ೧೯೬೧ರಲ್ಲಿ ಸಂಪಾದಿಸಿ ಕೊಟ್ಟಿದ್ದಾರೆ. ಕನ್ನಡ ಸಾಹಿತ್ಯದ ಹಲವಾರು ಹೆಸರಾಂತ ಸಾಹಿತಿಗಳ ಪ್ರಬಂಧಗಳನ್ನು ಈ ಕೃತಿಯಲ್ಲಿ ನೋಡುತ್ತೇನೆ. ಈ ಎಲ್ಲ ಪ್ರಬಂಧಗಳಲ್ಲಿ ಪ್ರಬಂಧಕಾರರು ಪ್ರಬಂಧ ಲಕ್ಷಣಗಳನ್ನು ಪರಿಚಯಿಸುವುದರ ಜತೆಗೆ ತಮ್ಮದೇ ಆದ ವಿಶೇಷತೆಯನ್ನು ಎತ್ತಿ ಹಿಡಿದಿದ್ದಾರೆ. ಎ.ಎನ್.ಮೂರ್ತಿರಾಯರ ಲಲಿತ ಹಾಸ್ಯ, ಕಾ.ಕು.ಅವರ 'ಉದ್ಧರಣ ವ್ಯಾಖ್ಯಾನ ಪದ್ಧತಿ' ಹಾಗೂ ಗೊರೂರರವರ ಪರಿಸರ ತನ್ಮತೆಯನ್ನು ಕಟ್ಟಿಕೊಡುವ ಪ್ರಬಂಧಗಳು ಮತ್ತು ಡಿ.ವಿ.ಜಿ., ಕುವೆಂಪು, ಬೇಂದ್ರೆ, ವಿ.ಸೀ, ಜಿ.ಪಿ. ರಾಜರತ್ನಂ ಮೊದಲಾದವರ ಪ್ರಬಂಧಗಳು ಹಾಗೂ ಅವರ ಅಭಿಪ್ರಾಯಗಳು ಈ ಕೃತಿಯಲ್ಲಿ ಅನಾವರಣ ಗೊಂಡಿವೆ. ಪ್ರಬಂಧ ಎನ್ನುವುದು ಅಡಿಸನ್ ಹೇಳುವಂತೆ ಒಂದು ಬಗೆಯ ಮುನ್ನುಡಿ. ಮುನ್ನುಡಿ ನೇರವಾಗಿ ಓದುಗನೊಂದಿಗೆ ಸಂವಾದ ಮಾಡುತ್ತದೆ. ಇಂಗ್ಲೀಷ್‌ನಲ್ಲಿ ಯಾವುದನ್ನು "ಎಸ್ಸೆ" ಎಂದು ಕರೆಯುತ್ತಾರೆಯೋ ಆ ಪ್ರಕಾರಕ್ಕೆ ಪ್ರಬಂಧಗಳು ಸೇರಿದವು. ಇಂಗ್ಲೀಷಿನ ಈ "ಎಸ್ಸೆ" ಎಂಬ ಸಾಹಿತ್ಯ ಪ್ರಕಾರಕ್ಕೆ ಹೊಂದುವ ಬರವಣಿಗೆ ಭಾರತೀಯ ಸಾಹಿತ್ಯದಲ್ಲಿ ಒಂದಲ್ಲ ಒಂದು ರೂಪದಲ್ಲಿವೆ. ಪ್ರಬಂಧದ ಶೈಲಿಯ ಬಗ್ಗೆ ಗೊರೂರರವರ ಅಭಿಪ್ರಾಯ ಹೀಗಿದೆ. "ಎಸ್ಸೆ'ಯಲ್ಲಿ ಶೈಲಿ ಇರಬೇಕು. ವಿಷಯ ನಿರೂಪಣೆಯಲ್ಲಿ ಸ್ಪಷ್ಟತೆ, ಮರ್ಯಾದೆಯನ್ನು ಮೀರದ ಹಾಸ್ಯ ಕೃತಕವಲ್ಲದ ಚಮತ್ಕಾರ, ಸಹಾನುಭೂತಿ, ಸರಸತೆ, ಸಜ್ಜನಿಕೆ, ಆಕರ್ಷಗಳ ದೃಷ್ಟಿ, ಆಳವಾದ ಜ್ಞಾನ ಇವೆಲ್ಲಾ ಉತ್ತಮ 'ಎಸ್ಸೆ'ಯ ನಿಜವಾದ ಲಕ್ಷಣಗಳು. ಆದರೆ ಅವುಗಳಷ್ಟರಿಂದಲೇ ಒಂದು ಒಳ್ಳೆಯ ಎಸ್ಸೆ ಆಗುವುದಿಲ್ಲ. ಉತ್ತಮವಾದ 'ಎಸ್ಸೆ' ಎಂಬುದು ವೈಯಕ್ತಿಕ ಭಾವನೆಗಳ ಪದವಿನ್ಯಾಸ. ಒಂದು ವಿಷಯ ಮೇಲೆ ಲೇಖಕನಿಗೆ ಏನು ಹೊಳೆಯುತ್ತದೆಯೋ ಆ ಭಾವನೆಗಳನ್ನು ಗುರುತಿಸುವ ಒಂದು ಆತ್ಮೀಯ ನಿರೂಪಣೆ ಭಾವ ಗದ್ಯ." (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೧; ಪು.VIII)

ಶಾಸ್ತ್ರೀಯ, ಚಾರಿತ್ರಿಕ, ವಿಮರ್ಶಾತ್ಮಕ, ತರ್ಕ ವಿಜ್ಞಾನ, ನಿಬಂಧಗಳಿಗೂ, ಎಸ್ಸೆಗಳಿಗೂ ಒಂದು ವ್ಯತ್ಯಾಸವಿದೆ. ಲಘು ಪ್ರಬಂಧ ಹೆಚ್ಚಾಗಿ ವ್ಯಕ್ತಿಗತ, ಆತ್ಮಾನುಭವ, ಇದರಲ್ಲಿ ಲೇಖಕ ಓದುಗನನ್ನು ಚಿರಪರಿಚಿತನಂತೆ ಭಾವಿಸಿ ಅವನೆದುರು ತನ್ನ ಸ್ನೇಹದ ರೀತಿಯನ್ನು ಬಿಚ್ಚುವನು. ಇದರಲ್ಲಿ ಓದುಗನಿಗೂ ಲೇಖಕನಿಗೂ ಆತ್ಮೀಯತೆ ಬೆಳೆಯುವುದು. ಇದರಿಂದ ನಿರ್ದಿಷ್ಟವಾದ ಎಸ್ಸೆ ಹುಟ್ಟುವುದು. ಲಘುಪ್ರಬಂಧಕ್ಕೆ ವಿಷಯ ಇಂತಹುದೇ ಆಗಬೇಕೆಂಬ ನಿಯಮವಿಲ್ಲ. ಸಣ್ಣ ವಿಷಯ, ದೊಡ್ಡ ವಿಷಯ ಯಾವುದು ಬೇಕಾದರು ಆಗಬಹುದು. ಗಂಭೀರ್ಯ ವಿಚಾರ, ವೇದಾಂತ, ಕಲ್ಪನಾ ವೈಚಿತ್ರ್ಯ, ಹಾಸ್ಯ, ಕಟಕಿ, ಭಾವವೇಶ, ಭೂಷಣೆ, ದೂಷಣೆ ಅದರ ಆಕಾರ ಹೇಗೆ ಬೇಕಾದರೂ ಇರಲಿ, ಸಣ್ಣ ಕಥೆಯಂತಿರಲಿ, ಶಬ್ದ ಚಿತ್ರದಂತಿರಲಿ, ಸ್ಥೂಲವಾದ ರೇಖಾಚಿತ್ರದಂತಿರಲಿ, ಆತ್ಮಕಥೆಯ ಖಂಡವಾಗಲಿ, ಕೊನೆಗೆ ಹಾಳು ಹರಟೆಯಂತಿರಲಿ ಒಟ್ಟಿನಲ್ಲಿ ನಿರೂಪಣಾಕ್ರಮ ಆಕರ್ಷಕವಾಗಿರಬೇಕು. ಈ ವಿಷಯದ ಬಗ್ಗೆ ಗೊರೂರರವರ ಮಾತುಗಳು ಹೀಗಿವೆ. "ಅದು ನಮ್ಮ ಬಾಳಿನ ಮೇಲೂ ಜೀವನದ ಮೇಲೂ ಹೊಸ ಬೆಳಕನ್ನು

ಸ್ವಲ್ಪವಾದರೂ ಬೀರಬೇಕು. ಪದಗಳು ಮಿತವಾಗಿ ಅರ್ಥಪೂರ್ಣವಾಗಿ ಮಧುರವಾಗಿರಬೇಕು. ಪ್ರಬಂಧದ ಆಕೃತಿ ಸಣ್ಣದಾಗಿದ್ದರೂ ಸಮುದ್ರದ ಒಂದು ಹನಿ ನೀರಿನಲ್ಲಿ ಪೂರ್ತ ಸಮುದ್ರದ ಲಕ್ಷಣವಿರುವಂತೆ, ಅದು ಅಪಾರವಾಗಿ ಅನಂತವಾಗಿ ತೋರಬೇಕು" ಎನ್ನುತ್ತಾರೆ. (ಅದೇ; ಪು.IV)

ಲಘು ಪ್ರಬಂಧವನ್ನು ಓದಿದ ಕೂಡಲೆ ತೃಪ್ತಿಯ ಮನೋಭಾವ ಉಂಟಾಗಬೇಕು. ಹೇಳುವುದನ್ನೆಲ್ಲಾ ಹೇಳಿಯಾಯಿತು ಎಂಬಂತೆ ಸುಮ್ಮನೆ ಇರಬಾರದು. ಒಂದು ದೃಷ್ಟಿಯಿಂದ ಪೂರ್ಣವಾಗಿ ತೋರಿದರೂ ಮತ್ತೊಂದು ದೃಷ್ಟಿಯಿಂದ ಹೆಚ್ಚಿನ ಜ್ಞಾನಕ್ಕೆ ಅದು ಅವಕಾಶ ಮಾಡಿಕೊಡಬೇಕು. "ಉತ್ತಮವಾದ ಪ್ರಬಂಧ ನಮ್ಮನ್ನು ನಲಿಸಲೂ ಬೇಕು. ಬುದ್ಧಿಯನ್ನು ಪ್ರಚೋದನೆಗೊಳಿಸಬೇಕು. ಭಾವನೆಗಳನ್ನು ಬೆಳೆಸಬೇಕು. ಸಚೇತನವಾದ ಭಾವನೆಗಳು, ಅನುಭವಗಳು, ಹಾಸ್ಯ ನಗೆ ಇವು ಉದ್ದಕ್ಕೂ ಮಿಂಚುತ್ತಿರಬೇಕು. ಆದರೆ ಎಲ್ಲವೂ ಸಹಜವಾಗಿರಬೇಕು ನಾನಾ ವಿಧವಾದ ಪುಷ್ಪಗಳ ಸುಗಂಧವಿರುವ ಉದ್ಯಾನದಲ್ಲಿ ನಡೆಯುತ್ತಿರುವಂತೆ ಗುರಿ ಮುಟ್ಟುವುದೊಂದೇ ಮುಖ್ಯವಲ್ಲ ಮಾರ್ಗ ಪ್ರಯಾಣವೂ ಆಕರ್ಷಕವಾಗಿರಬೇಕು" ಎಂಬುದು ಗೊರೂರರವರ ಸ್ಪಷ್ಟ ನಿಲುವಾಗಿದೆ. (ಅದೇ; ಪು.V)

'ಅಮೆರಿಕದಲ್ಲಿ ಗೊರೂರು' ಒಂದು ಉತ್ತಮ ಪ್ರವಾಸ ಕಥನವಾಗಿದೆ. ಕನ್ನಡ ಸಾಹಿತ್ಯದಲ್ಲಿ ಪ್ರವಾಸ ಸಾಹಿತ್ಯವನ್ನು ಪರಿಮಿತ ಪ್ರಮಾಣದಲ್ಲಿ ಗುರುತಿಸಬಹುದು. ಪ್ರವಾಸ ಸಾಹಿತ್ಯ ತನ್ನದೇ ಆದ ವಿಶಿಷ್ಟ ಲಕ್ಷಣವನ್ನು ಹೊಂದಿರುತ್ತದೆ. ಪ್ರವಾಸ ಸಾಹಿತ್ಯದಲ್ಲಿ ಲೇಖಕರು ಒಂದು ಪರಿಸರದ ಭೌಗೋಳಿಕ ವಿಷಯಗಳನ್ನು ಪ್ರಮುಖವಾಗಿ ಪರಿಗಣಿಸಿ ಅದನ್ನು ವಿವರಿಸಬಹುದು. ಇದಕ್ಕೆ ಜೊತೆಯಾಗಿ ಒಂದು ಪ್ರದೇಶದ ಜನಜೀವನದ ಸಂಸ್ಕೃತಿಯನ್ನು ವಿವರಿಸಬಹುದು. ಜನಜೀವನದ ಸಂಸ್ಕೃತಿಯನ್ನು ವಿವರಿಸುವಾಗ ಲೇಖಕರು ತಾವು ಪ್ರವಾಸ ಹೋದ ಪ್ರದೇಶವನ್ನೇ ಹೆಚ್ಚು ವರ್ಣಿಸಬಹುದು. ಇದಕ್ಕೆ ಜೊತೆಯಾಗಿ ಲೇಖಕರು ತಮ್ಮ ತಾಯಿನಾಡಿನ ಸ್ಥಿತಿ ಸಂಗತಿಯನ್ನು ತೌಲನಿಕವಾಗಿ ವಿಚಾರ ಮಾಡಬಹುದು. ಇಂಥಹ ಸಂದರ್ಭದಲ್ಲಿ ಲೇಖಕರು ಪರದೇಶದ ಮೋಹಕ್ಕೆ ಬಲಿಯಾಗುವುದು ಸ್ವದೇಶವನ್ನು ತಾತ್ಸಾರಮಾಡಿ ಮಾತನಾಡುವ ಅಂಶವನ್ನು ಕೆಲವು ಸಂದರ್ಭಗಳಲ್ಲಿ ನೋಡಬಹುದು. ಉತ್ತಮ ಪ್ರವಾಸ ಸಾಹಿತ್ಯದಲ್ಲಿ ಇಂಥ ರೀತಿಯ ವೈಪರೀತ್ಯಗಳು ಇರುವುದಿಲ್ಲ. ವಸ್ತುನಿಷ್ಠವಾಗಿ ನಿಷ್ಪಕ್ಷಪಾತವಾಗಿ ವಿಷಯವನ್ನು ಮಂಡಿಸುವಂತಹ ಪ್ರವಾಸ ಸಾಹಿತ್ಯವನ್ನು ಉತ್ತಮ ಪ್ರವಾಸ ಸಾಹಿತ್ಯವೆಂದು ಪರಿಗಣಿಸಬಹುದು. ಅಮೆರಿಕದಲ್ಲಿ ಪ್ರವಾಸ ಮಾಡಿ ತಮ್ಮ ಅನುಭವಗಳನ್ನು ಪ್ರಭುಶಂಕರ ಅವರು 'ಅಮೇರಿಕಾದಲ್ಲಿ ನಾನು ಶಾಂತಿ', ಶಿವರಾಮ ಕಾರಂತರು 'ಪಾತಾಳಕ್ಕೆ ಪಯಣ' ವಿನಾಯಕರ 'ಇಂದಿಲ್ಲ ನಾಳೆ', ಬಿ.ಜಿ.ಎಲ್. ಸ್ವಾಮಿಯವರ 'ಅಮೇರಿಕಾದಲ್ಲಿ ನಾನು', ನಾಡಿಗ ಕೃಷ್ಣಮೂರ್ತಿಯವರ 'ನಮ್ಮ ಕಾಗದಗಳು' ಮುಂತಾದವರು ತಮ್ಮ ಕೃತಿಗಳಲ್ಲಿ ಹಂಚಿಕೊಂಡಿದ್ದಾರೆ.

ಗೊರೂರರವರ 'ಅಮೆರಿಕ ಪ್ರವಾಸ' ವೈಶಿಷ್ಟ್ಯಪೂರ್ಣವಾಗಿದೆ. ಗೊರೂರರವರು ಪರಿಸರದಲ್ಲಿ ಒಂದಾಗಿ ಬದುಕುವ ಕುತೂಹಲ ಕೌಶಲ್ಯವನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿ. ಎಲ್ಲ ಪರಿಸರದೊಂದಿಗೆ ಎಲ್ಲಾ ಮನೋಧರ್ಮದ ವ್ಯಕ್ತಿಗಳೊಂದಿಗೆ ಸ್ಪಂದಿಸುವ, ಹೊಂದಿಕೊಳ್ಳುವ ಮನೋಧರ್ಮ ಗೊರೂರರವರಿಗೆ ಇದೆ ಎಂಬುದು ಅವರ ಮಿಕ್ಕ ಸಾಹಿತ್ಯದಲ್ಲಿ ಸ್ಪುಟವಾದಂತೆ ಈ ಪ್ರವಾಸ ಸಾಹಿತ್ಯದಲ್ಲಿಯೂ ಚೆನ್ನಾಗಿ ಸ್ಫುಟವಾಗಿದೆ. ಗೊರೂರರವರು ತಮ್ಮ ಪ್ರವಾಸ ಕಥನದ ಉದ್ದೇಶವನ್ನು ಹೇಳುವಾಗ "ಅಮೆರಿಕ-ಕೆನಡ ವಿಸ್ತಾರವಾದ ರಾಷ್ಟ್ರಗಳು ಸಮೃದ್ಧ ರಾಷ್ಟ್ರಗಳು. ಅವುಗಳ ಚರಿತ್ರೆ ಸಂಸ್ಕೃತಿ, ನಾಗರಿಕತೆ, ಜೀವನ ದರ್ಶನ ಇದಾವುದನ್ನು ಹೇಳುವುದು ನನ್ನ ಉದ್ದೇಶವೇ ಅಲ್ಲ. ಇದು ಅಮೆರಿಕವನ್ನು ನೋಡಿದ ನನ್ನ ಅನುಭವ ಅಷ್ಟೆ. ಇದರಲ್ಲಿ ನಾನು ನನ್ನ ಮಮಕಾರವೇ ಜಾಸ್ತಿ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು. XVII) ತಮ್ಮ ಪ್ರವಾಸ ಸಾಹಿತ್ಯ ಮಿಕ್ಕ ಪ್ರವಾಸ ಸಾಹಿತ್ಯಗಳಂತೆ ಕೇವಲ ನಿರೂಪಣೆಯ ಸಾಹಿತ್ಯ ಅಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಗೊರೂರರವರು ಎಲ್ಲದರಲ್ಲಿಯೂ ಸಹಜ ಕುತೂಹಲ ಚಿಂತನೆಯನ್ನು ವ್ಯಕ್ತಪಡಿಸಿರುವಂತೆ ಅಮೆರಿಕದ ಪ್ರವಾಸದಲ್ಲಿಯೂ ಇದೇ ಭಾವನೆಗೆ ಅನುಗುಣವಾಗಿ ಅಮೆರಿಕದಲ್ಲಿ ಆದ ತಮ್ಮ ಅನುಭವವಷ್ಟನ್ನೇ ಹೇಳಿದ್ದಾರೆ. ಪ್ರತಿಹಂತದಲ್ಲಿಯೂ ಅವರ ದೃಷ್ಟಿಕೋನದ ಸ್ವೋಪಜ್ಞತೆಯನ್ನು ಅವರ ಸ್ವಾಭಿಮಾನದ ಅಂಶವನ್ನು ಗುರುತಿಸಬಹುದು. ಅಲ್ಪ ಕಾಲಾವಧಿಯಲ್ಲಿ ಪ್ರವಾಸ ಮಾಡಿದ ಗೊರೂರರವರು ತಮ್ಮ ಪ್ರವಾಸದ ಬಗ್ಗೆ ಮುಂದುವರೆದು ಹೇಳುವ ಮಾತು "ಅಮೆರಿಕದವರ ಜೀವನ ದರ್ಶನ, ಜೀವನಮೌಲ್ಯ ಇವಾವನ್ನೂ ತಿಳಿದುಕೊಳ್ಳಲು ನಾನು ಪ್ರಯತ್ನಿಸಲಿಲ್ಲ ಎಂಬುದು ಮಾತ್ರ ನನ್ನ ಕಣ್ಣಿಗೆ ಬೆಳ್ಳಂಬೆಳಕಾಗಿ ತೋರುತ್ತಿತ್ತು. ಪ್ರತಿಯೊಬ್ಬರಿಗೂ ವಿದ್ಯೆ, ಉದ್ಯೋಗ, ಟೆಲಿಫೋನು, ಟೆಲಿವಿಷನ್, ಮನೆ, ಕಾರು, ವೈದ್ಯ ಸೌಲಭ್ಯ ಇವೆಲ್ಲವುಗಳನ್ನು ಅಂಗಡಿಗಳಲ್ಲಿ ಬಾಳೆಹಣ್ಣು ಅಥವಾ ಬೊಂಡಾಗಳನ್ನು ಕೊಂಡುಕೊಳ್ಳುವಂತೆ ಕೊಳ್ಳಬಹುದು. ಇವು ಸರ್ವರಿಗೂ ಸಮಾನ. ಇದರಲ್ಲಿ ಹಿಂದುಳಿದವ ಮುಂದೆ ಬಂದವ ಎಂಬ ತಾರತಮ್ಯವಿಲ್ಲ. "ಸರ್ವೇ ವೈ ಸುಖಿನಸ್ಸಂತು" ಇದನ್ನು ಅಮೆರಿಕನ್ನರು ಸ್ವಾಭಾವಿಕವಾಗಿ ಯಾವ ಬೊಬ್ಬಾಟ, ಘೋಷಣೆ, ಪ್ರಚಾರ, ಆಡಂಬರದ ಮೆರವಣಿಗೆ, ರಸ್ತೆಗಳೆಲ್ಲೆಲ್ಲೂ ದೊಡ್ಡ ದೊಡ್ಡ ಫಲಕಗಳು ಇವುಗಳಿಲ್ಲದೆ ಮೌನವಾಗಿ ಸಾಧಿಸಿದ್ದಾರೆ. ಅವರು ಬಹುಮಟ್ಟಿಗೆ ಪ್ರಾಮಾಣಿಕರು, ಕಷ್ಟ ಜೀವಿಗಳು, ನಿರಸೂಯರು, ಪ್ರತಿಯೊಬ್ಬರೂ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ. ಆಳ್ವಿಕೆ, ನಿತ್ಯ ವ್ಯವಹಾರಗಳಲ್ಲಿ ಪ್ರಾಮಾಣಿಕತೆ ಇದೆ. ಅತಿ ಮೇಲ್ಮಟ್ಟದಲ್ಲಿ ರಾಜಕೀಯ ಭ್ರಷ್ಟಾಚಾರ ಇರಬಹುದು. ಆದರೆ ಭ್ರಷ್ಟಾಚಾರ ಜೀವನದ ಕಾರ್ಯಕ್ರಮಗಳ ಒಂದು ಅಂಗೀಕೃತ ಅಂಶವಾಗಿಲ್ಲ". (ಅದೇ; ಪು. iii-iv) ಇವು ಗೊರೂರರವರು ಕೊಡುವ ಅಮೆರಿಕದ ಒಂದು ತುಣುಕು ಚಿತ್ರ. ಈ ಮಾತಿನಲ್ಲಿ ನಮ್ಮ ದೇಶದ ಹಲವು ಭ್ರಷ್ಟಚಾರಗಳ ಸಂಗತಿಯನ್ನು ಗೊರೂರರವರು ಧ್ವನಿಪೂರ್ಣವಾಗಿ ಸೂಚಿಸಿದ್ದಾರೆ. ಅಮೆರಿಕದ ಜನತೆ ಪ್ರಾಮಾಣಿಕ ಶ್ರಮಜೀವನದಿಂದ ಶ್ರಿಮಂತವಾಗಿದ್ದಾರೆ ಎಂಬುದು ಗೊರೂರರವರ ಮಾತುಗಳಲ್ಲಿ ಸ್ಪಷ್ಟವಾಗಿದೆ. ಇಪ್ಪತ್ತು ಅಧ್ಯಾಯಗಳ ಗೊರೂರರವರ ಕೃತಿಯಲ್ಲಿ

ಮೊದಲ ಅಧ್ಯಾಯದಲ್ಲಿ ತಮ್ಮ ವಿಮಾನಯಾನದ ಅನುಭವವನ್ನು ಸೂಚಿಸಿದ್ದಾರೆ. ಪ್ರಯಾಣದ ಸಂದರ್ಭದಲ್ಲಿ ಇಂಗ್ಲೆಂಡ್‌ನ್ನು ಕಂಡಾಗ ಗೊರೂರರವರಿಗೆ ಬಂದ ಭಾವನೆ ಹಲವು ಮನಸ್ಥಿತಿಯ ಸಮ್ಮಿಲನದ ಭಾವನೆಯಾಗಿದೆ. ಇಂಗ್ಲೆಡ್ ಬಗ್ಗೆ ಕನಿಕರ - ತಿರಸ್ಕಾರ ಎರಡೂ ಇದೆ. ಬ್ರಿಟಿಷರು ನಮ್ಮನ್ನು ಆಳಿದ್ದು, ನಮ್ಮ ದೇಶವನ್ನು ಬಿಟ್ಟು ಹೋದದ್ದು ನೆನಪಿಗೆ ಬರುವಂತೆ ಗಾಂಧೀಜಿಯ ಹತ್ಯೆಯೂ ಕೂಡ ಅವರ ನೆನಪಿಗೆ ಬರುತ್ತದೆ.

ನ್ಯೂಯರ್ಕ್ ನಗರ ಒಂದು ದೊಡ್ಡ ಯಂತ್ರದಂತೆ, ಬ್ರಹ್ಮರಾಕ್ಷಸನಂತೆ ನನಗೆ ಕಂಡುಬಂತು ಎಂದು ಗೊರೂರರವರು ಹೇಳುವುದರ ಮೂಲಕ ಆ ನಗರದ ಯಾಂತ್ರಿಕ ಜೀವನವನ್ನು ಅರ್ಥಪೂರ್ಣವಾಗಿ ಸೂಚಿಸಿದ್ದಾರೆ. ಅಮೆರಿಕದಲ್ಲಿ ಇರುವ ಸೌಲಭ್ಯಗಳು ಶ್ರೀಸಾಮಾನ್ಯರಿಗೂ ಅನುಭವಿಸಲು ಕೈಗೆ ಎಟಕುವಂತೆ ಇದೆ. ನಮ್ಮಲ್ಲಿ ಅದು ಇಲ್ಲ ಎಂದು ಗೊರೂರರವರು ವಿಷಾದ ಪಡುತ್ತಾರೆ. ಅಮೆರಿಕದಲ್ಲಿ ಜನಸಾಮಾನ್ಯರ ಬಗ್ಗೆ ಕಾಣುವ ಹೆಚ್ಚಿನ ಕಾಳಜಿಯನ್ನು ಗೊರೂರರವರು ಮೆಚ್ಚಿಕೊಂಡಿದ್ದಾರೆ. ನ್ಯೂಯಾರ್ಕ್‌ನ್ನು ವಿಶ್ವಮಾನವ ನಗರ ಎಂಬ ಭಾವನೆಯಲ್ಲಿ ಗೊರೂರರವರು ವರ್ಣಿಸುತ್ತಾರೆ. ಅಮೆರಿಕ ಶ್ರೀಮಂತ ರಾಷ್ಟ್ರವಾದರೂ ಒಂಟಿತನದ ಭಯದಿಂದ ಸೊರಗುತ್ತಿದೆ ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಪರಿಸರ ಪ್ರೇಮಿಯಾದ ಗೊರೂರರವರಿಗೆ ಅಮೆರಿಕನ್ನರ ಸ್ವಚ್ಛತಾ ದೃಷ್ಟಿ ಅತ್ಯಂತ ಪ್ರಿಯವಾಯಿತು. ಆ ಸಂದರ್ಭದಲ್ಲಿ ಭಾರತೀಯರಲ್ಲಿ ಈ ಗುಣ ಇಲ್ಲವಲ್ಲ ಎಂದು ಗೊರೂರರವರ ಮನಸ್ಸು ನೊಂದುಕೊಳ್ಳುತ್ತದೆ. ಎಂಪೈರ್ ಸ್ಟೇಟ್ ಭವನದ ಬಗ್ಗೆ ಗೊರೂರರವರ ಅಭಿಪ್ರಾಯ ಹೀಗಿದೆ. "ಭಾರತದವರಿಗೆ ಕುತುಬ್ ಮೀನಾರ್, ಈಜಿಪ್ಟ್‌ನವರಿಗೆ ಪಿರಮಿಡ್‌ಗಳು, ಫ್ರಾನ್ಸಿನವರಿಗೆ 'ಎಫಲ್ ಟವರ್' ಹೇಗೋ ಹಾಗೆ ಅಮೆರಿಕದವರಿಗೆ ಎಂಪೈರ್ ಸ್ಟೇಟ್ ಭವನ" ಎನ್ನುತ್ತಾರೆ. (ಅದೇ; ಪು.೪೬) ಮಾನವ ನಿರ್ಮಿತ ಅತಿ ಎತ್ತರದ ಕಟ್ಟಡಗಳಲ್ಲಿ ಇದು ಒಂದು. ಈ ಕಟ್ಟಡವನ್ನು ಕಂಡಾಗ "ನಾನು ನನ್ನ ಸಣ್ಣ ಹಳ್ಳಿ ಇವೆಲ್ಲಾ ಮರತೇ ಹೋಗಿ ನಾನು ವಿಶಾಲ ಜಗತ್ತಿನ ಭಾಗವೂ ಅಖಿಲಮಾನವ ಕೋಟಿಯ ಭಾಗವೂ ಆದ ಅನುಭವವುಂಟಾಯಿತು" ಎಂದಿದ್ದಾರೆ. (ಅದೇ; ಪು. ೫೨) ಲೋಕವನ್ನು ಕಂಡಾಗ ವ್ಯಕ್ತಿಯ ಅಂತರಂಗ ವಿಸ್ತಾರವಾಗುತ್ತದೆ. ಚಿಂತನೆ ಆಕಾಂಕ್ಷೆಗಳು ಮುಗಿಲೆತ್ತರಕ್ಕೆ ಬೆಳೆಯಬಲ್ಲದು ಎಂಬುದಕ್ಕೆ ಗೊರೂರರವರ ಈ ಮಾತು ಸ್ಪಷ್ಟ ಸಾಕ್ಷಿಯಾಗಿದೆ.

ಫಿಲಿಡೆಲ್ಫಿಯಾ ಬಗ್ಗೆ ಬರೆಯುವಾಗ ಅಲ್ಲಿಯ ಸ್ವಾತಂತ್ರ್ಯದ ಹೋರಾಟಗಾರನಾದ ಬೆಂಜಮಿನ್ ಫ್ರಾಂಕ್ಲಿನ್‌ನ ವ್ಯಕ್ತಿತ್ವ ಗೊರೂರರವರಿಗೆ ನೆನಪಾಗುತ್ತದೆ. ಫ್ರಾಂಕ್ಲಿನ್ ಮತ್ತು ಗಾಂಧಿ ಸಮಾನ ಮನೋ ಧರ್ಮದ ವ್ಯಕ್ತಿಗಳು ಎಂಬುದನ್ನು ಗಾಂಧಿ ಅನುಯಾಯಿಯಾದ ಗೊರೂರರವರು ಅಭಿಮಾನದಿಂದ ಹೇಳುತ್ತಾರೆ. 'ಅಮೆರಿಕದಲ್ಲಿ ಗೊರೂರು' ಎಲ್ಲ ವಯಸ್ಸು, ಎಲ್ಲ ವೃತ್ತಿಯ, ಎಲ್ಲ ವರ್ಗದ ಹಲವು ಮನೋಧರ್ಮಗಳ ವ್ಯಕ್ತಿಗಳೊಂದಿಗೆ ಸಂಪರ್ಕ ಸಂಬಂಧವನ್ನು ಉಳಿಸಿಕೊಂಡು ತಮ್ಮ ಪ್ರವಾಸವನ್ನು

ಅರ್ಥಪೂರ್ಣ ಫಲಪ್ರದ ಮಾಡಿಕೊಂಡಿದ್ದಾರೆ. ಅಮೆರಿಕದಲ್ಲಿ ಮಹದಾಲಿಯ ಮುಷ್ಟಿ ಯುದ್ಧವನ್ನು ಕಂಡಾಗ ನಮ್ಮ ಪುರಾಣ ಕಾವ್ಯಗಳಲ್ಲಿ ಕಾಣುವ ಗದಾಯುದ್ಧ ನೆನಪಿಗೆ ಬಂದು. ಗೊರೂರರವರು ನಮ್ಮವರ ಸಾಹಸದ ಆಟವನ್ನು ಹೆಚ್ಚು ರೋಮಾಂಚಕಾರಿಯಿಂದ ಮೆಚ್ಚಿಕೊಂಡಿದ್ದಾರೆ. ಅಮೆರಿಕದ ವಿಶ್ವಸುಂದರಿಯರ ಆಯ್ಕೆ ಗೊರೂರವರಿಗೆ ನಗು ತರುತ್ತದೆ. ನಮ್ಮ ದೇಶದ ಸುಂದರಿಯರು ಅಮೆರಿಕದ ವಿಶ್ವಸುಂದರಿಯರಿಗಿಂತ ನೂರು ಪಾಲು ಮೇಲು ಎನ್ನುತ್ತಾರೆ.

ನ್ಯೂಯಾರ್ಕಿಗೆ ಸಮೀಪದಲ್ಲಿ ಕಾಣುವ ಸ್ವಾತಂತ್ರ್ಯ ವಿಗ್ರಹ ಅತಿ ಬೃಹತ್ ಆದದ್ದು. ಈ ವಿಗ್ರಹದಲ್ಲಿ ಗೊರೂರರವರು ಫ್ರಾನ್ಸ್ ಮತ್ತು ಅಮೆರಿಕ ಮೈತ್ರಿಯನ್ನು ಗುರುತಿಸಿದ್ದಾರೆ. ಈ ವಿಗ್ರಹದ ಮೂರ್ತಿಯನ್ನು ಫ್ರಾನ್ಸಿನ ಶಿಲ್ಪಿ ನಿರ್ಮಿಸಿದ್ದಾನೆ. ವಿಗ್ರಹದ ಪೀಠ ಅಮೆರಿಕನ್ನರಿಂದ ಸಿದ್ಧವಾಗಿದೆ. ವಾಷಿಂಗಟನ್‌ನಲ್ಲಿ ಲಿಂಕನ್ ಭವನದಲ್ಲಿ ಲಿಂಕನ್ ಭಾವಚಿತ್ರವನ್ನು ಕಂಡಾಗ ಆ ಭಾವಚಿತ್ರದ ಪಕ್ಕದಲ್ಲಿರುವ ಉಪದೇಶ ಗೊರೂರರವರ ಮನಸ್ಸನ್ನು ಸೆಳೆಯುತ್ತದೆ. ಈ ಉಪದೇಶ ಭಾರತೀಯರಿಗೂ ಅನ್ವಯವಾಗುತ್ತದೆ. ಅಷ್ಟೇ ಅಲ್ಲದೆ ವಿಶ್ವದ ಎಲ್ಲ ಪ್ರಜ್ಞಾವಂತ ವ್ಯಕ್ತಿಗಳೂ ತಿಳಿಯಬಹುದಾದ ಮಾತು ಎನ್ನುತ್ತಾರೆ. ಮಾನವನ ಸ್ವಾತಂತ್ರ್ಯ ಅವನ ಎಲ್ಲ ಏಳಿಗೆಗೆ ಮೂಲಶಕ್ತಿಯಾಗುತ್ತದೆ ಎಂಬುದು ಲಿಂಕನ್ನನ ಅಭಿಪ್ರಾಯ. ಲಿಂಕನ್ನನ ಸಂದೇಶ "ಮಿತವ್ಯಯವನ್ನು ಪ್ರೋತ್ಸಾಹಿಸದೆ ಅಭಿವೃದ್ಧಿಗೊಳಿಸುವುದು ಸಾಧ್ಯವಿಲ್ಲ. ಪ್ರಬಲರನ್ನು ದುರ್ಬಲಗೊಳಿಸುವುದರಿಂದ ದುರ್ಬಲರು ಪ್ರಬಲರಾಗುವುದಿಲ್ಲ. ಕೂಲಿ ಕೊಡುವವರನ್ನು ಕುಗ್ಗಿಸಿದಾಗ ಕೂಲಿ ಮಾಡಿದವನು ಹಿಗ್ಗುವುದಿಲ್ಲ. ಧನಿಕರನ್ನು ನಾಶಮಾಡುವುದರಿಂದ ಬಡತನ ಉದ್ಧಾರ ಆಗುವುದಿಲ್ಲ. ಸಾಲ ಮಾಡಿ ಸುಭದ್ರತೆ ಸ್ಥಾಪಿಸುವುದು ಸಾಧ್ಯವಿಲ್ಲ. ಸಂಪಾದಿಸುವುದಕ್ಕಿಂತ ಖರ್ಚು ಹೆಚ್ಚಾದರೆ ಕಷ್ಟ ತಪ್ಪಿದ್ದಲ್ಲ. ಮನುಷ್ಯನ ಸ್ವಾತಂತ್ರ್ಯವನ್ನು ಅಪಹರಿಸಿದರೆ ಅವನಲ್ಲಿ ಶೀಲವನ್ನು ಧೈರ್ಯವನ್ನು ತುಂಬುವುದು ಸಾಧ್ಯವಿಲ್ಲ. ಜನರು ತಮಗಾಗಿ, ತಾವು ಮಾಡಿಕೊಳ್ಳಬೇಕಾದುದನ್ನು, ಮಾಡಿಕೊಳ್ಳಬಲ್ಲುದನ್ನು ಸರ್ಕಾರ ಮಾಡುವುದರಿಂದ ಅವರಿಗೆ ಶಾಶ್ವತ ಸಹಾಯವಾಗುವುದಿಲ್ಲ". (ಅದೇ; ಪು. ೩೨೭) ಗೊರೂರರವರು ಸ್ವಾತಂತ್ರ್ಯ ಹೋರಾಟದ ವ್ಯಕ್ತಿಗಳಾಗಿ, ಸ್ವದೇಶಿ ಚಳುವಳಿಯ ಪ್ರೋತ್ಸಾಹಿಕರಾಗಿ, ರಾಷ್ಟ್ರ ಜೀವನದಲ್ಲಿ ವ್ಯಕ್ತಿ ಪ್ರಗತಿಯಲ್ಲಿ ಜಾಗೃತ ವ್ಯಕ್ತಿಯಾಗಿ ಈ ಅಭಿಪ್ರಾಯಗಳನ್ನು ಸಹಜವಾಗಿ ಮೆಚ್ಚಿಕೊಂಡು ಮನನ ಮಾಡಿರುವುದು ಗಮನಾರ್ಹ ಸಂಗತಿ.

ಗೊರೂರರವರು ಅಮೆರಿಕದಲ್ಲಿ ತಮ್ಮನ್ನು ಉದ್ದೇಶಿಸಿ ಭಾಷಣ ಮಾಡಿದಾಗ ವೇದ ಉಪನಿಷತ್ತಿನ ಅಮೂಲ್ಯ ಭಾವನೆಗಳನ್ನು ನೆನಪು ಮಾಡಿಕೊಟ್ಟಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಗ್ರಾಮೀಣ ಬದುಕನ್ನು ರಕ್ತಗತ ಮಾಡಿಕೊಂಡಿರುವ ಗೊರೂರರವರಿಗೆ ಆತ್ಮಸ್ಥೈರ್ಯ ಒಂದೇ ಅಮೂಲ್ಯ ಬಂಡವಾಳ. ಇದರಿಂದಲೇ ಅವರು ಎಲ್ಲ ವ್ಯಕ್ತಿಗಳ ಹೃದಯವನ್ನು, ಎಲ್ಲ ಪರಿಸರದ ವ್ಯಕ್ತಿಗಳನ್ನು ಗೆದ್ದಿದ್ದಾರೆ. ಗಾಂಧೀಜಿಯವರ ವಾಣಿ ಗೊರೂರರವರ ಅಂತರಂಗದ ವಾಣಿಯಾಗಿತ್ತು. ಈ ಕಾರಣದಿಂದಲೇ ಗೊರೂರರವರು

ಗಾಂಧೀಜಿಯವರ ಸಂದೇಶವನ್ನು ಅಮೆರಿಕದಲ್ಲಿ ಎಲ್ಲ ಸಂದರ್ಭಗಳಲ್ಲಿಯೂ ನೆನಪು ಮಾಡಿಕೊಟ್ಟು ಅವರ ಹೃದಯವನ್ನು ಗೆದ್ದಿದ್ದಾರೆ.

ಅಸ್ಪೃಶ್ಯತೆ ಭಾರತದಲ್ಲಿ ಧಾರ್ಮಿಕ ಮೂಲವಾಗಿ ಬಂದ ಒಂದು ಭಾವನೆ. ಪಾಶ್ಚಾತ್ಯ ದೇಶಗಳಲ್ಲಿ ಇದು ಸಾಮಾಜಿಕ ಮೂಲವಾಗಿ ಬಂದ ಒಂದು ಕಳಂಕ. ಗೊರೂರರವರು ಅಮೆರಿಕದಲ್ಲಿಯೂ ಈ ಅಸ್ಪೃಶ್ಯತಾ ಭಾವನೆಯನ್ನು ಕಂಡಾಗ ಅದನ್ನು ಖಂಡಿಸುತ್ತಾರೆ. ಗೊರೂರರವರು ಅಲೆಮಾರಿ ಮನೋಧರ್ಮದ ವ್ಯಕ್ತಿಗಳು ಎಂದು ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಎಲ್ಲಾ ವ್ಯಕ್ತಿಗಳನ್ನು ಪರಿಸರಗಳನ್ನು ಕಾಣಬೇಕು, ಆ ಮೂಲಕ ತಾವು ತಮ್ಮನ್ನು ತಿದ್ದಿಕೊಳ್ಳಬೇಕು ಮತ್ತು ಪರಿಸರವನ್ನು ತಿದ್ದಬೇಕು ಎಂಬ ಆಸೆ ಅವರ ಹೆಬ್ಬಯಕೆ. ಈ ಹಿನ್ನೆಲೆಯಲ್ಲಿಯೇ ಗೊರೂವರು ತಾವು ಎಲ್ಲೇ ಸತ್ತರು ಚಿಂತೆಯಿಲ್ಲ ಎಂದು ನಗುಮುಖದಲ್ಲಿ ಹೇಳುತ್ತಾರೆ. ರಸಿಕತೆ ತನ್ನ ಸಹಜ ಗುಣವಾಗಿರುವಾಗ ಅಮೆರಿಕ ಪ್ರವಾಸದಲ್ಲಿ ಇದ್ದಾಗಲೂ ಅಲ್ಲಿಯ ಜನರೊಂದಿಗೆ ನಕ್ಕು ನಲಿದಿದ್ದಾರೆ. ಸಂಪ್ರದಾಯದ ಇಳಿ ವಯಸ್ಸಿನ ಗೊರೂರರವರು ಅಮೆರಿಕ ಪ್ರವಾಸವನ್ನು ಆನಂದಪಟ್ಟಿರುವುದರಲ್ಲಿ, ಅರ್ಥಮಾಡಿಕೊಳ್ಳುವುದರಲ್ಲಿ ಯಶಸ್ವಿಗಳಾಗಿದ್ದಾರೆ ಎಂಬುದು ಅವರ ಪ್ರವಾಸ ಸಾಹಿತ್ಯ ಮೂಲಕ ನಮಗೆ ಮನವರಿಕೆಯಾಗುತ್ತದೆ. ಪ್ರವಾಸಕ್ಕೆ ತಿಳಿ ಮನಸ್ಸು ಹಾಗೂ ಕುತೂಹಲ, ಎರಡು ಕಣ್ಣಾಗಿ ಇರಬೇಕು ಎಂಬುದನ್ನು ಲೇಖಕರು ತಮ್ಮ ಪ್ರವಾಸದ ಅನುಭವದ ಮೂಲಕ ಸಾಬೀತುಪಡಿಸಿದ್ದಾರೆ.

'ಅಮೆರಿಕದಲ್ಲಿ ಗೊರೂರು' ಪ್ರವಾಸ ಕಥನದ ಶೈಲಿ ಸರಳವು, ನೇರವು ಆಗಿದೆ. ಲೇಖಕನ ಜೀವನ ಇದ್ದಂತೆ ಅವನ ಶೈಲಿಯೂ ಇರುತ್ತದೆ ಎಂದು ಒಂದು ಅಭಿಪ್ರಾಯವಿದೆ. ಈ ಮಾತಿಗೆ ಅನುಗುಣವಾಗಿ ಗೊರೂರರವರ ಶೈಲಿ ಇರುವುದನ್ನು ಗುರುತಿಸಬಹುದು. ಗೊರೂರರವರ ಮೇಲಿನ ಮಾತುಗಳಲ್ಲಿ ನಾವು ಅನನ್ಯತೆಯನ್ನು ನೋಡುತ್ತೇವೆ. ಹೀಗೆ ಗೊರೂರರವರ ಕೃತಿಗಳಲ್ಲಿ ವಿಷಯ ವೈವಿಧ್ಯತೆಯನ್ನು ವಿನ್ಯಾಸ ವೈವಿಧ್ಯತೆಯನ್ನು ಗುರುತಿಸುತ್ತೇವೆ. ಈ ಕಾರಣದಿಂದಲೇ ಗೊರೂರರವರ ಕೃತಿಗಳು ತನ್ನತನದೊದಿಗೆ ಸಹೃದಯರಿಗೆ ಪ್ರಿಯವಾಗಿದೆ. ಗೊರೂರರವರು ಮೆಚ್ಚಿನ ಸಾಹಿತಿಗಳಾಗಿದ್ದಾರೆ. ಇವರ ಕೃತಿಗಳಲ್ಲಿ ಕಂಡುಬರುವ ಬೆಡಗು ಕಲ್ಪನೆಯ ಬೆಡಗಲ್ಲ ವಸ್ತು ಸ್ಥಿತಿಯ ಸಹಜ ಚಿತ್ರ. ಗೊರೂರರವರ ಕೃತಿಗಳಲ್ಲಿ ಕಾಣುವ ದರ್ಶನ ಜೀವನ ದರ್ಶನವೇ ಹೊರತು ಯಾವುದೇ ಅಲೌಕಿಕ ಸಂಗತಿಯಲ್ಲ. ಈ ಎಲ್ಲ ಕಾರಣಗಳಿಂದ ಇವರ ಸಾಹಿತ್ಯ ನಮ್ಮ ಬದುಕಿಗೊಂದು ಮಂಗಳದ ಹಸೆಮಣೆ ಎಂದು ಹೇಳಬಹುದು.

ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಭಾರತೀಯ ಬದುಕಿನಲ್ಲಿ ಗಣನೀಯ ವ್ಯತ್ಯಾಸವಾಯಿತು. ಸ್ವಾತಂತ್ರ್ಯ ಸಿಗುವುದಕ್ಕೆ ಮುಂಚೆ ಇಡೀ ದೇಶ ಒಂದು ದೊಡ್ಡ ಗುರಿಯನ್ನು ಸಾಧಿಸುವುದಕ್ಕಾಗಿ ಒಗ್ಗಟ್ಟಿನಿಂದ, ತತ್ವನಿಷ್ಠೆಯಿಂದ ನಡೆದರೆ, ಇದೇ ತಾತ್ವಿಕನಿಷ್ಠೆ ಸ್ವಾತಂತ್ರ್ಯಾ ನಂತರ ಉಳಿಯಲಿಲ್ಲ. ಎಲ್ಲ ಕಡೆಯೂ ಸ್ವಾರ್ಥ ಸಾಧನೆಯೇ ಮುಖ್ಯವಾಯಿತು. ದೇಶದ ಅರಾಜಕತೆಯ ಸ್ಥಿತಿಯೂ ಗೊರೂರರವರಿಗೆ

ಹಾಗೂ ಆ ಕಾಲದ ಬರಹಗಾರರಿಗೆ ಹಿಂಸೆಯಾಯಿತು. ಸ್ವಾತಂತ್ರ್ಯಾನಂತರದ ನಮ್ಮ ರಾಷ್ಟ್ರದ ಬದುಕನ್ನು ಕಂಡರೆ ಅಸಹ್ಯ ಹೇಸಿಗೆಯಾಗುತ್ತದೆ. ಗಾಂಧೀಜಿಯ ನಂತರ 'ಗಾಂಧೀ ಇಸಂ' ಕಣ್ಮರೆಯಾಯಿತು. ಆ ವಾತಾವರಣವೇ ಇಂದು ನಮಗೆ ಮೈಪರಿಚಿಕೊಳ್ಳುವ ಕನಸಾಗಿದೆ ಎನ್ನುವುದು ಲೇಖಕರ ನಿಲುವು. ಬುಹಶಃ ಈ ಕಾರಣದಿಂದಲೋ ಏನೋ ೧೯೪೭ರ ಈಚೆಗಿನ ಯಾವುದೇ ಮುಖ್ಯ ಸಾಮಾಜಿಕ ಅನುಭವಗಳನ್ನು ಗೊರೂರವರ ಕೃತಿಗಳಲ್ಲಿ ದಟ್ಟವಾಗಿ ಕಾಣಲಾಗುವುದಿಲ್ಲ. ಈ ಭಾರತ ಗೊರೂರವರ ಸಾಹಿತ್ಯಕ್ಕೆ ಸಂಪೂರ್ಣವಾಗಿ ಅಪ್ರಸ್ತುತವಾಗಿದೆ. ಅವರ ಕೃತಿಗಳ ಸತ್ತ್ವ ಸೊಗಸು ಎಲ್ಲವೂ ಅದಕ್ಕೆ ಇಂದಿನ ಸಾಮಾಜಿಕ ಅವಧಿಗೆ ಸೇರಿದ್ದು. ಈಗಿನ ಸಾಹಿತ್ಯ ತನ್ನ ಕಾಲದ ರಾಜಕೀಯ, ಸಾಮಾಜಿಕ ಪ್ರಶ್ನೆಗಳ ಜತೆ ಗುದ್ದಾಡುವಂಥದು. ಹೀಗಾಗಿ ಸ್ವಾತಂತ್ರ್ಯೋತ್ತರ ಭಾರತದ ಬದುಕಿನ ಬಗ್ಗೆ ಗೊರೂರವರ ಬರವಣಿಗೆಯಲ್ಲಿ ಪ್ರತಿಕ್ರಿಯೆ ಇಲ್ಲ. ಈ ಬಗ್ಗೆ ಗೊರೂರವರು ಹೇಳುವ ಮಾತು "ಯಾವುದಕ್ಕೆ ರಿಯಾಕ್ಟ್ ಮಾಡಬೇಕು? ಭಾರತೀಯವಾಗಿ ಏನೂ ಆಗಿಲ್ಲ. ಎಲ್ಲಾ ರಷ್ಯಾ, ಅಮೆರಿಕ ಆಗಿ ಬಿಟ್ಟಿದೆ, ಭಾರತೀಯತ್ವವನ್ನು ನಾವೀಗ ಹುಡುಕಬೇಕಾಗಿದೆ. ಹಳ್ಳಿಗಳಲ್ಲೂ ಹೋಗಿ ಯಂತ್ರ ಹಾಕಿ ಬಿಟ್ಟಿದ್ದಾರೆ. ಯಾವುದು ನಿಜವಾದ ಗ್ರಾಮೀಣ ಭಾರತ? ಗಾಂಧಿ ಭಾರತ ಹೋಗಿ ಎಲ್ಲಾ ಪಾಶ್ಚಾತ್ಯೀಕರಣ ಆಗಿಬಿಟ್ಟಿದೆ. ಅನುಕರಣ ಪಟುಗಳು, ಸ್ತ್ರೀಯರು ಸ್ತನಬಿಟ್ಟುಕೊಂಡು ಬೀದಿಯಲ್ಲಿ ತಿರುಗ್ತಾರೆ. ಯಾವುದಕ್ಕೆ ರಿಯಾಕ್ಟ್ ಮಾಡಬೇಕು. ಎಲ್ಲ ಹುಸಿಯಾಗಿ ಕಾಣಿಸ್ತಿದೆ. ನಮ್ಮ ಭಾರತ ಅಂತ ಫೀಲಿಂಗ್ ಬರೋದೇ ಇಲ್ಲ. ಇದನ್ನು ಪ್ರೀತಿಸೋದಕ್ಕೆ ಆಗೋದೇ ಇಲ್ಲ" ಎಂದಿದ್ದಾರೆ. (ನಾಗರಾಜ ಡಿ.ಆರ್; ೧೯೮೪; ಪು. ೩೯)

ಅಧ್ಯಾಯ ೫

ಗೊರೂರವರ ಸಾಹಿತ್ಯದಲ್ಲಿ ಗ್ರಾಮಸಮಾಜದ ವಿವಿಧ ನೆಲೆಗಳು

೫.೧. ನಿಸರ್ಗ ಮತ್ತು ಗ್ರಾಮಸಮಾಜ

೫.೨. ಕೃಷಿ ಸಂಸ್ಕೃತಿ

೫.೩. ಶಿಕ್ಷಣ-ಆಧುನಿಕತೆ ಮತ್ತು ಗ್ರಾಮಸಮಾಜದ ಪಲ್ಲಟಗಳು

೫.೪. ಜಾತಿ-ವರ್ಗ-ಲಿಂಗ : ಸ್ವರೂಪ ಮತ್ತು ಸಮಸ್ಯೆಗಳು

೫.೫. ಧರ್ಮ-ನಂಬಿಕೆ-ಆಚರಣೆಗಳು

೫.೬. ಗ್ರಾಮೀಣ ಕಲೆ-ಸಂಸ್ಕೃತಿ

ಅಧ್ಯಾಯ ೫

ಗೊರೂರವರ ಸಾಹಿತ್ಯದಲ್ಲಿ ಗ್ರಾಮಸಮಾಜದ ವಿವಿಧ ನೆಲೆಗಳು

ಸಾಹಿತಿಯ ಕೃತಿಗಳನ್ನು ಅಧ್ಯಯನ ಮಾಡುವಾಗ ಆ ಕೃತಿ ಮೂಡಿಬಂದ ಪರಿಸರದ ಹಿನ್ನೆಲೆಯನ್ನು ಆ ಕಾಲದ ರಾಜಕೀಯ ಧಾರ್ಮಿಕ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯನ್ನು ಅಧ್ಯಯನ ಮಾಡಿ ಕೃತಿಯ ಮೌಲ್ಯವನ್ನು - ವಿಶೇಷತೆಯನ್ನು ನಿಷ್ಕರ್ಷಿಸುತ್ತೇವೆ. ಇದಕ್ಕೆ ಮುಖ್ಯ ಕಾರಣ ಕೃತಿಯಲ್ಲಿ ಸಾಹಿತಿಯ ಮನೋಧರ್ಮ ಅಭಿವ್ಯಕ್ತವಾಗುವುದರ ಜತೆಗೆ ಕಾಲ, ಪರಿಸರದ ಪ್ರಭಾವವು ಅಷ್ಟೆ ಪ್ರಧಾನವಾಗಿರುತ್ತದೆ. ಇಂತಹ ವೈಶಿಷ್ಟ್ಯಪೂರ್ಣವಾದ ಅಧ್ಯಯನವನ್ನೇ ಕೃತಿಯನ್ನು ಕುರಿತ ವಿವಿಧ ನೆಲೆಗಳ ರೀತಿಯ ಪರಿಪೂರ್ಣ ಅಧ್ಯಯನ ಎಂದು ವಿಮರ್ಶಕರು ಕರೆಯುವುದು. ಗೊರೂರವರ ಸಾಹಿತ್ಯದಲ್ಲಿ ವಿವಿಧ ಹಿನ್ನೆಲೆಗಳ ಪ್ರಭಾವ ಸ್ಪಷ್ಟವಾಗಿರುವುದರಿಂದ ಅವರ ಕೃತಿಗಳನ್ನು ಗ್ರಾಮಸಮಾಜದ ವಿವಿಧ ನೆಲೆಗಳ ಹಿನ್ನೆಲೆಯಲ್ಲಿ ನಾವು ಅಭ್ಯಾಸ ಮಾಡುತ್ತೇವೆ. ಗೊರೂರವರ ಸಾಹಿತ್ಯವನ್ನು ನಿಸರ್ಗ ಮತ್ತು ಗ್ರಾಮಸಮಾಜ, ಗ್ರಾಮೀಣ ಕೃಷಿ ಸಂಸ್ಕೃತಿ, ಶಿಕ್ಷಣ ಆಧುನಿಕತೆ ಮತ್ತು ಗ್ರಾಮಸಮಾಜದ ಪಲ್ಲಟಗಳು, ಜಾತಿ–ವರ್ಗ-ಲಿಂಗ : ಸ್ವರೂಪ ಮತ್ತು ಸಮಸ್ಯೆಗಳು, ಧರ್ಮ - ಆಚರಣೆ - ನಂಬಿಕೆಗಳು ಹಾಗೂ ಗ್ರಾಮೀಣ ಕಲೆ - ಸಂಸ್ಕೃತಿ ಈ ಬಹುಮುಖ ನೆಲೆಗಳ ಹಿನ್ನೆಲೆಯಲ್ಲಿ ನಾವು ಗೊರೂರವರ ಕೃತಿಗಳನ್ನು ಅಧ್ಯಯನ ಮಾಡಿದಾಗ ಈ ಕೃತಿಗಳ ವಿಶೇಷತೆ ಮತ್ತು ಸಾಹಿತ್ಯಕ ಮೌಲ್ಯ ನಮಗೆ ಮನವರಿಕೆಯಾಗುತ್ತದೆ.

ಕೃತಿ ರಚಿಸುವ ಸಾಹಿತಿಯ ಮನೋಧರ್ಮ ಮತ್ತು ಸಂಸ್ಕಾರ ಕೃತಿ ರಚನೆಗೆ ಎಷ್ಟು ಪ್ರಧಾನವೋ ಮೇಲೆ ಹೇಳಿದ ವಿವಿಧ ನೆಲೆಗಳ ಪ್ರಭಾವವು ಅಷ್ಟೇ ಪ್ರಮುಖವಾಗಿರುತ್ತದೆ. ಸಾಹಿತ್ಯ 'ಸಾಹಿತಿಯ ಮನಸ್ಸಿನ ಮೂರ್ತರೂಪ' ಎಂದಂತೆ ಯುಗಧರ್ಮದ ಪ್ರತಿಬಿಂಬ ಎಂಬ ಮಾತು ಮೇಲಿನ ಅಧ್ಯಯನದ ರೀತಿಯ ಮೂಲಕ ನಮಗೆ ಖಚಿತವಾಗುತ್ತದೆ. ಗೊರೂರವರ ಸಾಹಿತ್ಯವನ್ನು ದೇಶಿ ಚಿಂತನೆಗಳ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದರ ಜೊತೆಗೆ ನಗರ ಜೀವನದ ಆಧುನಿಕತೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದರ ಮೂಲಕ ಎರಡೂ ಸಂಸ್ಕೃತಿಗಳ ಮುಖಾಮುಖಿಯ ಚಿತ್ರವನ್ನು ಗುರುತಿಸಬಹುದು.

೫.೧ ನಿಸರ್ಗ ಮತ್ತು ಗ್ರಾಮಸಮಾಜ

ಮಾನವನ ಬದುಕಿನಲ್ಲಿ ಪರಿಸರ ಒಂದು ಪ್ರಧಾನಶಕ್ತಿ ಆದರೆ ಪ್ರಕೃತಿ ಕೂಡ ಅಷ್ಟೇ ಪ್ರಭಾವಿಶಕ್ತಿಯಾಗಿರುತ್ತದೆ. ಈ ಕಾರಣದಿಂದಲೇ ಮಾನವನನ್ನು ಪ್ರಕೃತಿ ಪರಿಸರದ ಅನ್ಯೋನ್ಯ ಜೀವಿ ಎಂದು ಅರ್ಥಪೂರ್ಣವಾಗಿ ಸಮಾಜಶಾಸ್ತ್ರಜ್ಞರು ಕರೆದಿದ್ದಾರೆ. ಈ ಸತ್ಯಾಂಶ ಆದಿಮಾನವನ ಕಾಲದಿಂದ ಇಂದಿನವರೆಗೆ ಉಳಿದುಕೊಂಡು ಹೊಂದಿಕೊಂಡು ಬೆಳೆದು ಬಂದಿದೆ. ಮಾನವನ ಬದುಕಿನಲ್ಲಿ ಅವನ ಎಲ್ಲ ಆಗುಹೋಗುಗಳಿಗೆ ಅವನ ವಿವೇಕವೆ ಮೂಲ ಕಾರಣ ಎಂದು ಹೇಳಿದಾಗ ಅವನ ವಿವೇಕ ಬೆಳೆದಂತೆ, ಬದಲಾದಂತೆ ಅವನ ಬದುಕಿನ ರೀತಿಯಲ್ಲಿಯೂ-ಆಲೋಚನಾ ವಿಧಾನದಲ್ಲಿಯೂ ಬೆಳವಣಿಗೆಯನ್ನು ಬದಲಾವಣೆಯ ಮೂಲಕ ಗುರುತಿಸಬಹುದು. ಮಾನವನಲ್ಲಿ ಚಿಂತನಕ್ರಿಯೆ ಹವ್ಯಾಹತವಾಗಿ ನಡೆಯುತ್ತಿರುವಾಗ ಇದಕ್ಕೆ ಪ್ರಧಾನ ವಿಷಯ ನಿಸರ್ಗವನ್ನು ಕುರಿತು ನಡೆಸುವ ಚಿಂತನೆ ಒಂದಾಗಿರುತ್ತದೆ. ನಿಸರ್ಗ ಸೌಂದರ್ಯದ ನೆಲೆ, ಸತ್ಯಾನ್ವೇಷಣೆಯ ನೆಲೆ, ಸಾಹಸದ ನೆಲೆ, ಸ್ಫೂರ್ತಿಯ ನೆಲೆ ಮತ್ತು ಸಾಂತ್ವನದ ನೆಲೆ ಎಂದು ದಾರ್ಶನಿಕರು ನಿರ್ಸಗದ ಶಕ್ತಿಯನ್ನು ವಿಶ್ಲೇಷಿಸಿದ್ದಾರೆ. ಈ ರೀತಿಯ ವಿಶ್ಲೇಷಣೆಯ ಫಲವನ್ನು ದಾರ್ಶನಿಕ ಗ್ರಂಥಗಳಲ್ಲಿ ಕಾಣುವುದಕ್ಕಿಂತ ಹೆಚ್ಚಾಗಿ ಸಾಹಿತ್ಯ ಕೃತಿಗಳಲ್ಲಿ ಮನಗಾಣಬಹುದು. ನಿಸರ್ಗವನ್ನು ಈ ಎಲ್ಲ ಶಕ್ತಿಗಳ ಪರಿಪೂರ್ಣ ರೀತಿಯಲ್ಲಿ ಕಂಡಾಗ ನಿಸರ್ಗ ಚಿನ್ಮಯ ಶಕ್ತಿಯಾಗುತ್ತದೆ. ಈ ಕಾರಣದಿಂದಲೇ ನಿಸರ್ಗದಿಂದ ಮಾನವನು ಹಲವು ರೀತಿಯಲ್ಲಿ ಪ್ರಯೋಜನವನ್ನು ಕಂಡುಕೊಂಡು ಗಂತವ್ಯದ ಗುರಿಯಾಗಿ ಶಾಂತಿಯನ್ನು ನಿಸರ್ಗದ ಮಡಿಲಲ್ಲಿ ಅನುಭವಿಸಿದ್ದಾನೆ.

ನಿಸರ್ಗದಲ್ಲಿ ಸೌಂದರ್ಯದ ಹಲವು ಮುಖಗಳನ್ನು ನೋಡಬಹುದು. ಪ್ರಕೃತಿಯಲ್ಲಿ ಚೆಲವು ಚೆಲ್ಲಿದೆ ಎಂದು ರಸಋಷಿಗಳು ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಚೆಲುವಿನ ಸೌಮ್ಯ ಸ್ವಭಾವ, ಶಾಂತ ಸ್ವಭಾವ, ಸುಪ್ರಸನ್ನತೆಯ ಮುಖವನ್ನು ಹಾಗೂ ರೌದ್ರಮುಖವನ್ನು ನಾವು ಗುರುತಿಸಬಹುದು. ಮಾನವನ ಮನಸ್ಸಿನ ಹಲವು ವೈವಿಧ್ಯಪೂರ್ಣ ಭಾವಗಳಿಗೆ ಪ್ರಕೃತಿ ಪಡಿಅಚ್ಚಾಗಿದೆ ಎಂದು ಹೇಳುವುದು, ಅದೇ ರೀತಿಯಲ್ಲಿ ಪ್ರಕೃತಿಯ ಹಲವು ಭಾವಗಳ ವೈಶಿಷ್ಟ್ಯತೆಗೆ ಮಾನವನ ಮನಸ್ಸು ಪ್ರತಿರೂಪವಾಗಿ ಪಡಿಅಚ್ಚಾಗಿದೆ ಎಂದು ತಿಳಿಸುವುದು ಅಷ್ಟೇ ಸಮರ್ಪಕ ಅಭಿಪ್ರಾಯವಾಗುತ್ತದೆ. ಪ್ರಕೃತಿಯ ಮಡಿಲಿನ ತರಂಗ ಮಾನವನ ಮನಸ್ಸಿನ ತರಂಗಗಳು ಈ ಅರ್ಥದಲ್ಲಿ ಒಂದೇ ಎನಿಸಿಕೊಳ್ಳುತ್ತದೆ. ಇಂತಹ ಸಾಮ್ಯಗುಣ ಇರುವುದರಿಂದಲೇ ಮಾನವನ ಮನಸ್ಸು ಪ್ರಕೃತಿಯಿಂದ ಆಕರ್ಷಿತವಾಗಿರುವುದಷ್ಟೇ ಅಲ್ಲದೆ ಪ್ರಕೃತಿಯ ಅಂತರಂಗದಲ್ಲಿ ಲೀನವಾಗಿದೆ. ಪ್ರಕೃತಿಯನ್ನು ಪರಿಭಾವಿಸಿದಂತೆಲ್ಲಾ ಮಾನವನ ಬುದ್ಧಿಗೆ ಹಲವು ಸತ್ಯಗಳು ಗೋಚರವಾಗುತ್ತದೆ. ಹೀಗೆ ಮಾನವ ಪ್ರಜ್ಞೆಗೆ ಪರಿಸರ ಕಾರಣವಾಗುತ್ತದೆ ಹಾಗೂ ಇದರ ಮೂಲಕ ಅವನು ಬೆಳೆಯಬಹುದು. ದಾರ್ಶನಿಕನಿಗೆ ನಿಸರ್ಗ ಒಂದು ಮೌನ ಕೇಂದ್ರವಲ್ಲ, ಅದು ಸತ್ಯದರ್ಶಿ. ಮಾನವನ ಸೂಕ್ಷ್ಮಮತಿಗೆ

- ಸೂಕ್ಷ್ಮ ದೃಷ್ಟಿಗೆ ನಿಸರ್ಗದ ಕಣಕಣದಲ್ಲಿಯೂ ಒಂದು ಅತೀತ ದಿವ್ಯಶಕ್ತಿಯ ಪ್ರಭೆ ಗೋಚರವಾಗುತ್ತದೆ - ಅದನ್ನು ಪರಿಭಾವಿಸಿದಂತೆಲ್ಲಾ ಆ ದಿವ್ಯಶಕ್ತಿ ಮಾನವನಿಗೆ ಮನವರಿಕೆಯಾಗುತ್ತದೆ. ಈ ಅರ್ಥದಲ್ಲಿಯೇ ಪ್ರಕೃತಿಯನ್ನೆ ದಾರ್ಶನಿಕರೆಲ್ಲರು 'ಮೊದಲ ಮಹಾದಾರ್ಶನಿಕ' ಎಂದು ತಿಳಿಸಿರುವುದು. ವರ್ಡ್ಸ್‌ವರ್ತ್ 'One peace of Vernal wood may teach you more of Man than what all can sages teach you' ಎಂದು ಘೋಷಿಸಿರುವುದನ್ನು ನಾವು ನೆನಪು ಮಾಡಿಕೊಳ್ಳಬಹುದು. ಪ್ರಕೃತಿಯು ಚಿನ್‌ಮೌನಿಯಾದರು ಅನಂತ ಚಿರಸತ್ಯದ ನೆಲೆ ಎಂಬುದು ರಸಋಷಿಗಳ ವಾಣಿಯಲ್ಲಿ ನಮಗೆ ಮನವರಿಕೆ ಯಾಗುತ್ತದೆ. ಸತ್ಯದರ್ಶಿಯಾದ, ಕ್ರಾಂತಿದರ್ಶಿಯಾದ ಕವಿ ದಾರ್ಶನಿಕನಿಗೆ ಮಾತ್ರ ವಿಶೇಷ ಅರ್ಥದಲ್ಲಿ ಪ್ರಕೃತಿ ತೆರೆದಿಟ್ಟು ಪುಸ್ತಕ - ದಿವ್ಯಗ್ರಂಥ. ಎಲ್ಲ ಸತ್ಯಾಕಾಂಕ್ಷಿಗಳು ನಿಸರ್ಗದಲ್ಲಿ ಚಿರಂತನ ಅನಂತ ಸತ್ಯಗಳನ್ನು ಅರಿಯಬಹುದು. ಅದರ ಜೊತೆಗೆ ಬದುಕನ್ನು ಒಪ್ಪ ಓರಣ ಅರ್ಥಪೂರ್ಣ ಮಾಡಿಕೊಳ್ಳಬಹುದು. ಹೀಗೆ ದಾರ್ಶನಿಕ ತನ್ನ ಬದುಕನ್ನು ಸಾರ್ಥಕ ಮಾಡಿಕೊಂಡು ತನ್ನ ಸಹಜೀವಿಗಳ ಬದುಕನ್ನು ಸಾರ್ಥಕ್ಯ ಗೊಳಿಸಬಹುದು. ಸಾಹಿತ್ಯ, ದರ್ಶನದ ಈ ಅಂಶದೊಂದಿಗೆ ವಿಶಿಷ್ಟ ಕಲೆಯಾಗಿದೆ.

ಪ್ರಕೃತಿ-ನಿಸರ್ಗ ಪ್ರಪುಲ್ಲಿತ ವ್ಯಕ್ತಿಯ ಮನಸ್ಸನ್ನು ಸಾಹಸದ ಪ್ರವೃತ್ತಿಗೆ ಪ್ರಚೋದಿಸುತ್ತದೆ- ಪರಿವರ್ತಿಸುತ್ತದೆ. ಜಡ ವಸ್ತುವಿಗೂ ಜೀವಿಗೂ ಇರುವ ಪ್ರಧಾನ ಲಕ್ಷಣಗಳನ್ನು, ವ್ಯತ್ಯಾಸಗಳನ್ನು ಗುರುತಿಸಿ ಹೇಳುವಾಗ ವಿದ್ವಾಂಸರು ಜೀವಿ ಕ್ರಿಯಾಶೀಲ ಮನೋಧರ್ಮವ್ಯಕ್ತಿ ಎಂದು ಹೇಳಿ ಸಾಹಸಿ ಎಂದು ವಿಶೇಷವಾಗಿ ಗುರುತಿಸಿದ್ದಾರೆ. ಮಾನವ ಸಾಹಸ ಮೆರೆದಂತೆಲ್ಲಾ ತನ್ನ ಜೀವನಕ್ಕೆ ವೈವಿಧ್ಯತೆಯನ್ನು ಅರ್ಥಪೂರ್ಣತೆಯನ್ನು ತಂದುಕೊಳ್ಳುತ್ತಾನೆ. ನಿಸರ್ಗ ಮನುಷ್ಯನ ಸಾಹಸ ಪ್ರವೃತ್ತಿಗೆ ಪುಟ ಹಾಕುತ್ತದೆ ಎಂಬ ಮಾತು ಪೂರ್ಣಸತ್ಯ. ಮಾನವನ ನಿರಂತರ ಅದ್ಭುತ ಸಾಹಸಕ್ಕೆ ಪ್ರಕೃತಿ ಚಿರಸಾಕ್ಷಿಯೂ ಆಗಿದೆ ಎಂಬುದನ್ನು ಮರೆಯುವಂತಿಲ್ಲ. ಪ್ರಕೃತಿ ಚಿರನೂತನ ನವನವೋನ್ಮೇಷಶಾಲಿನಿ. ಪ್ರಕೃತಿಯಿಂದ ಸ್ಫೂರ್ತಿಯನ್ನು ಪಡೆದ ವ್ಯಕ್ತಿಯೇ ಕವಿ ದಾರ್ಶನಿಕನಾಗಿರುವುದು. ಕಣ್ಣಿಟ್ಟ ಕಡೆಯಲ್ಲೆಲ್ಲಾ ಕವಿ ದಾರ್ಶನಿಕ ಪ್ರಕೃತಿಯಲ್ಲಿ ಹೊಸತನವನ್ನು ಗುರುತಿಸಬಹುದು ಮತ್ತು ಕಾಣಬಹುದು. ಸಾಹಿತಿಯ ಮನಸ್ಸನ್ನು ಬುದ್ಧಿಯನ್ನು ಪ್ರಕರ್ಷಗೊಳಿಸುವ ಶಕ್ತಿ ಪ್ರಕೃತಿಗೆ ಇರುತ್ತದೆ. ಪ್ರಕೃತಿಯನ್ನು ತಾಯಿ ಮಡಿಲಿಗೆ, ದೈವ ಸಾನಿಧ್ಯಕ್ಕೆ ಹೋಲಿಸುವುದು ವಾಡಿಕೆ. ಬದುಕಿನ ಜಂಜಾಟದಲ್ಲಿ ಬೆಂದ ವ್ಯಕ್ತಿ, ನೊಂದ ವ್ಯಕ್ತಿ - ಬದುಕಿನ ಹೋರಾಟ ದಲ್ಲಿ ಸೋತ ವ್ಯಕ್ತಿ ಪ್ರಕೃತಿಯ ಮಡಿಲಲ್ಲಿ ಸಮಾಧಾನ ಶಾಂತಿಯನ್ನು ಕಂಡುಕೊಳ್ಳುತ್ತಾನೆ. ಪ್ರಕೃತಿಯಲ್ಲಿ ಈ ಮೊದಲಿಗೆ ಗುರುತಿಸಿದ ಎಲ್ಲ ಶಕ್ತಿಗಳ ಸಂಪೂರ್ಣ ಫಲರೂಪವಾಗಿ ಸಾಂತ್ವನ ಶಕ್ತಿಯನ್ನು ಗುರುತಿಸಬಹುದು. ಹಳೆತು ಹೊಸತರ ಪರಿವರ್ತನಾ ಚಕ್ರವನ್ನು ಪ್ರಕೃತಿಯಲ್ಲಿ ಕಾಣುವುದರಿಂದ ನಿಸರ್ಗದ ಮೂಲಕ ಸಾಂತ್ವನ ಭಾವನೆಯನ್ನು ಅನುಭವಿಸಬಹುದು. ಸೋಲು, ಸಂಕಟ ಎಂದಿಗಾದರೂ ಕಣ್ಮರೆಯಾಗಿ ಅದಕ್ಕೆ ಪ್ರತಿಯಾಗಿ ಗೆಲುವು ಸಂತೋಷವನ್ನು ಜೀವನದಲ್ಲಿ ಸಾಧಿಸಿಯೇ ಸಾಧಿಸುತ್ತೇವೆ ಎಂಬ ಆಶಾ

ಭಾವನೆ ನಮಗೆ ಪ್ರಕೃತಿಯಿಂದ ಪ್ರೇರಿತವಾಗುತ್ತದೆ. ಇಂತಹ ದಿವ್ಯಜ್ಞಾನದ ಮೂಲಕ ನಿಸರ್ಗ ನೀಡುವ ಸಾಂತ್ವನ ಮಾನವನ ಪಾಲಿಗೆ ನಿಜಕ್ಕೂ ಅಮೋಘವಾದುದು.

ಇಂತಹ ಅಪೂರ್ವ ಶಕ್ತಿ ಸಂಪತ್ತಿನ ನೆಲೆಯಾದ ಪ್ರಕೃತಿಯನ್ನು ಸಾಹಿತಿಗಳು ತಮ್ಮ ಸಾಹಿತ್ಯದಲ್ಲಿ ವರ್ಣಿಸಿರುವುದು ಎಷ್ಟು ಸಹಜವೋ ಅಷ್ಟೇ ಶ್ಲಾಘನೀಯವಾದ ಸಂಗತಿಯಾಗಿದೆ. ಸಾಹಿತಿ ತನ್ನ ಸಿದ್ಧಾಂತವನ್ನು ವಿಷಯ ಪ್ರತಿಪಾದನೆಯನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸಲು ನಿಸರ್ಗ ತಳಹದಿಯೂ ಆಗಬಲ್ಲದು, ಒಂದು ಉತ್ತಮ ಹಿನ್ನೆಲೆಯೂ ಆಗಬಲ್ಲದು. ವಿಶ್ವದ ಎಲ್ಲಾ ಸಾಹಿತ್ಯದಲ್ಲಿಯೂ ಹೀಗೆ ನಿಸರ್ಗದ ಪಾತ್ರ ಅತಿ ಪ್ರಮುಖವಾಗಿದೆ. ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದ ಹಿಡಿದು ವರ್ತಮಾನ ದವರೆಗೆ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲಿಯೂ ಪ್ರಕೃತಿ ತನ್ನ ವಿಶಿಷ್ಟ ಸ್ಥಾನವನ್ನು ಉಳಿಸಿಕೊಂಡು ಬಂದಿರುವುದು ಅಷ್ಟೇ ಅಲ್ಲದೆ ವೈವಿಧ್ಯಪೂರ್ಣತೆಯನ್ನು ಗಳಿಸಿಕೊಂಡಿದೆ. ಈ ಕಾರಣದಿಂದಲೇ ಸಾಹಿತ್ಯ ದಲ್ಲಿ ಪ್ರಕೃತಿಯ ವರ್ಣನೆ ಕೇವಲ ಆನಂದಕ್ಕಾಗಿ ಅಷ್ಟೇ ಅಲ್ಲ ನಮ್ಮ ಅರಿವಿಗೂ ಕಾರಣವಾಗುತ್ತದೆ ಎಂಬುದನ್ನು ಸಾಹಿತ್ಯದಲ್ಲಿನ ಪ್ರಕೃತಿಯ ಚಿತ್ರಣದ ಅಧ್ಯಯನದ ಮೂಲಕ ಚೆನ್ನಾಗಿ ದಾಖಲಿಸಬಹುದು. ಅರಿವು ಹಾಗೂ ಆನಂದದ ಪರಿಪೂರ್ಣತೆಯಿಂದಲೆ ಪ್ರಕೃತಿಯ ಚಿತ್ರಣ ಅರ್ಥಪೂರ್ಣವಾಗುತ್ತದೆ.

ಸಾಹಿತ್ಯದಲ್ಲಿ ನಗರ ಸಮಾಜದ ಚಿತ್ರಣ ಒಂದು ಮುಖವಾದರೆ ಗ್ರಾಮಸಮಾಜದ ಚಿತ್ರಣ ಇನ್ನೊಂದು ಮುಖವಾಗಿರುತ್ತದೆ. ಗ್ರಾಮಸಮಾಜದ ವ್ಯಕ್ತಿಗಳಿಗೂ ಪ್ರಕೃತಿಗೂ ಇರುವ ಸಂಬಂಧ ಅವಿನಾ ಬಾಂಧವ್ಯ. ಪ್ರಕೃತಿಯೊಂದಿಗೆ ಗ್ರಾಮೀಣ ಜನ ನಿಕಟವರ್ತಿಗಳಾಗಿರುತ್ತಾರೆ. ಗ್ರಾಮೀಣ ಜನರ ಜೀವನದ ಮೇಲೆ ಪ್ರಕೃತಿಯ ಪ್ರಭಾವ ಗಾಢವಾಗಿರುತ್ತದೆ. ಗ್ರಾಮೀಣ ಸಮಾಜದ ನೋವು ನಲಿವು, ಶಿಸ್ತು ಸಂಯಮ, ಸಾಹಸ ಸಾರ್ಥಕತೆ ಎಲ್ಲವೂ ಆ ಸಮಾಜದ ಮೇಲೆ ಆಗಿರುವ ಪ್ರಕೃತಿಯ ಗಾಢ ಪರಿಣಾಮದಿಂದ ಬಂಧಿತವಾಗಿರುತ್ತದೆ. ನವೋದಯ ಕನ್ನಡ ಸಾಹಿತ್ಯದಲ್ಲಿ ಸಾಹಿತಿಗಳು ಪ್ರಕೃತಿಯ ಪ್ರಭಾವವನ್ನು ತನ್ನ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಉಜ್ವಲವಾಗಿ ಚಿತ್ರಿಸಿದ್ದಾರೆ. ಕನ್ನಡ ಕಾದಂಬರಿಗಳಲ್ಲಿ ಕಾದಂಬರಿಕಾರರು ನಿಸರ್ಗವನ್ನು ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಕು.ವೆಂ.ಪು. ಅವರು ಮಲೆನಾಡಿನ ಪರಿಸರವನ್ನು, ಕಾರಂತರು ಕರಾವಳಿಯ ಪರಿಸರವನ್ನು, ರಾವ್‌ಬಹುದ್ದೂರ್‌ರವರು ಬಯಲುಸೀಮೆಯ ಪರಿಸರವನ್ನು ಹಿನ್ನೆಲೆಯಾಗಿ ಬಳಸಿಕೊಂಡಿರುವಂತೆ ಗೊರೂರರವರು ತಮ್ಮ ಸಾಹಿತ್ಯದಲ್ಲಿ ಹೇಮಾವತಿಯ ಪರಿಸರವನ್ನು ಅತ್ಯುತ್ತಮವಾಗಿ ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ಗೊರೂರರವರ ಸಾಹಿತ್ಯದಲ್ಲಿ ಹಾಸ್ಯ ಒಂದು ಪ್ರಧಾನ ಲಕ್ಷಣವಾದರೆ ನಿಸರ್ಗದ ಚಿತ್ರಣ ಪ್ರಮುಖ ಲಕ್ಷಣವಾಗಿದೆ. ಗ್ರಾಮೀಣ ಜೀವನದ ಚಿತ್ರಣಕ್ಕೆ ಗ್ರಾಮೀಣ ಪರಿಸರದ ಚಿತ್ರಣ ಗೊರೂರರವರ ಸಾಹಿತ್ಯದಲ್ಲಿ ಅರ್ಥಪೂರ್ಣ ಹಿನ್ನೆಲೆಯಾಗಿದೆ. ಪಾತ್ರ ಚಿತ್ರಣಕ್ಕೆ ಸಂದರ್ಭೋಚಿತ ಘಟನೆಗಳ ಹೊಂದಾಣಿಕೆಗೆ ಈ ನಿಸರ್ಗದ ಚಿತ್ರಣ ಉಚಿತವೆನಿಸುತ್ತದೆ. ನಿಸರ್ಗ ಬಿಟ್ಟು ಬದುಕಿಲ್ಲ ಎಂಬ ಸಿದ್ಧಾಂತ ಗೊರೂರರವರ ಸಾಹಿತ್ಯವನ್ನು ಓದಿದ

ಎಲ್ಲ ಸಹೃದಯರಿಗೂ ಚೆನ್ನಾಗಿ ಮನವರಿಕೆಯಾಗುತ್ತದೆ. ಗೊರೂರವರ ಸಾಹಿತ್ಯದಲ್ಲಿ ನಿಸರ್ಗದ ಚಿತ್ರ ಕಥಾಗರ್ಭದಲ್ಲಿ ಹುದುಗಿರುವ ರಮ್ಯಚಿತ್ರವಾಗಿದೆ. ಸಾಹಿತ್ಯದ ವಿಶ್ಲೇಷಣೆಗೆ ನಿಸರ್ಗದ ಚಿಂತನೆ ಅತ್ಯಂತ ಸಹಕಾರಿ ಅಂಶವಾಗುತ್ತದೆ. ಕಥೆಯ ಹಿರಿತನಕ್ಕೆ ಹೊಸತನಕ್ಕೆ ಒಂದೊಂದು ಸಾಹಿತ್ಯ ಕೃತಿಯಲ್ಲಿಯೂ ವಿನೂತನವಾಗಿ ಕಾಣುವ ನಿಸರ್ಗದ ಚಿತ್ರಣವು ಒಂದು ಪ್ರಧಾನ ಅಂಶವಾಗುತ್ತದೆ. ಈ ದೃಷ್ಟಿಯಿಂದಲೇ ಗೊರೂರವರನ್ನು ನಿಸರ್ಗಪ್ರಿಯ ಸಾಹಿತಿಯೆಂದು ವಿಶೇಷ ಅರ್ಥದಲ್ಲಿ ವಿಮರ್ಶಕರು ಗುರುತಿಸಿದ್ದಾರೆ. ಗೊರೂರವರು ಬಾಲ್ಯದಿಂದಲೂ ನಿಸರ್ಗದೊಂದಿಗೆ ಒಡನಾಡಿ, ಪಡೆದ ಅಪೂರ್ವ ಅನುಭವಗಳನ್ನು ತಮ್ಮ ಸಾಹಿತ್ಯದ ಮೂಲಕ ಸಹೃದಯರೊಂದಿಗೆ ಹಂಚಿಕೊಂಡಿದ್ದಾರೆ. ಗೊರೂರವರ ಮಾನಸಿಕ ಮತ್ತು ದೈಹಿಕ ಗಟ್ಟಿತನಕ್ಕೆ ಅವರ ಪ್ರಕೃತಿಯ ಒಡನಾಟವೇ ಮೂಲ ಕಾರಣ ಎಂಬುದು ಅವರ ಜೀವನವನ್ನು ಅರಿತಾಗ ನಮಗೆ ಭಾಸವಾಗುತ್ತದೆ. ಅವರ ರಸಿಕ ಮನೋಲ್ಲಾಸಕ್ಕೆ ಪ್ರಕೃತಿಯ ಒಡನಾಟವೇ ಮುಖ್ಯ ಕಾರಣ. ಹೀಗೆ ಗೊರೂರವರು ಪ್ರಕೃತಿಯನ್ನು ಕಂಡು, ಭಾವಿಸಿ, ಅನುಭವಿಸಿ ತಮ್ಮ ಕೃತಿಗಳಲ್ಲಿ ಸ್ವಾನುಭವವನ್ನು ಯಥಾವತ್ತಾಗಿ ಪಡಿಮೂಡಿಸಿದ್ದಾರೆ. ಈ ಕಾರಣದಿಂದಲೇ ಗೊರೂರವರ ಕೃತಿಗಳಲ್ಲಿ ಪ್ರಕೃತಿಯ ಪಾತ್ರವು ಮಾನವ ಪಾತ್ರಗಳಷ್ಟೇ ನೈಜ ಜೀವಂತ ಪಾತ್ರಗಳಾಗಿವೆ. ತಾವು ಪ್ರಕೃತಿಯಲ್ಲಿ ಕಂಡ ರಮ್ಯತೆ, ಗಾಂಭೀರ್ಯ, ಭವ್ಯತೆಯ ಮುಖಗಳೆಲ್ಲವನ್ನು ತಮ್ಮ ಕೃತಿಗಳಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ.

ಯಾಂತ್ರಿಕ ವಾತಾವರಣದಲ್ಲಿ - ಜೀವನದಲ್ಲಿಯೂ ಪ್ರಕೃತಿಯ ಸೊಬಗನ್ನು ಕಾಣುವ ನೈಪುಣ್ಯತೆ ಗೊರೂರವರಲ್ಲಿ ಕಂಡುಬರುತ್ತದೆ. ಈ ನೈಪುಣ್ಯತೆಯನ್ನು ಪಡೆದಾಗ ಯಾಂತ್ರಿಕ ಜೀವನದ ಬರಡು ಬೇಸರತನ ನಮ್ಮಿಂದ ದೂರವಾಗಬಹುದು. ಇದಕ್ಕೆ ನಿದರ್ಶನವನ್ನು 'ಗೋಪುರದ ಬಾಗಿಲು' ಕಥಾ ಸಂಕಲನದ 'ಕಾಯುವುದರಲ್ಲಿಯೂ ಎಷ್ಟು ಸೊಗಸು!' ಎಂಬ ಕಥೆಯಲ್ಲಿ ನಿರೂಪಿತವಾಗಿದೆ. ಲೇಖಕರು ಬಸ್ಸು ನಿಲ್ದಾಣದಲ್ಲಿ ಒಮ್ಮೆ ಬಸ್ಸು ಕೆಟ್ಟ ಕಾರಣದಿಂದ ಕಾಯಬೇಕಾದ ಪ್ರಸಂಗ ಬಂದಾಗ ಅವರು ನಿಧಾನವಾಗಿ ಸುತ್ತಲೂ ಕಣ್ಣನ್ನು ಹರಿಸಿದರು. "ಭಗವಂತ ಕೊಡುಗೈಯಿಂದ ಸೌಂದರ್ಯವನ್ನು ಸಮೃದ್ಧವಾಗಿ ಸೂರೆ ಮಾಡಿದ್ದನು. ಮೇಲೆ ಸೀಮಾತೀತವಾದ ಸ್ವಚ್ಛವಾದ ಸಾಗರೋಪಮ ನೀಲಿಯ ಆಕಾಶದ ವರ್ತುಲ ಬೃಹತ್ ಗುಮ್ಮಟ. ಮಧ್ಯದಲ್ಲಿ ಪರಮಹಂಸನಂತೆ ಅತ್ಯಂತ ಎತ್ತರದಲ್ಲಿ ಹೋಗಿ ವಿಹರಿಸುತ್ತಿರುವ ಒಂದೇ ಒಂದು ಗಿಡಗ ಪಕ್ಷಿ. ದೂರದಲ್ಲಿ ಸುತ್ತಲೂ ಭೂಮಿಗೆ ತೋರಣಮಾಲೆ. ಮಧ್ಯೆ ಮಧ್ಯೆ ನಾನು ಮುಖಂಡ ಎಂದು ತೋರುವಂತಿದ್ದ ಗಿರಿಶಿಖರಗಳು. ಸುತ್ತಲೂ ರತ್ನಗಂಬಳಿ ಹಾಸಿದಂತೆ ಕಣ್ಣಿಗೆ ಹಿತವಾಗಿರುವ ವಿಸ್ತಾರವಾದ ಭತ್ತದ ಗದ್ದೆಯ ಬಯಲು. ವಸ್ತ್ರದ ಸೆರಗಿನಂತೆ ಅದನ್ನು ಸುತ್ತುವರಿದ ನದಿ. ಅನತಿ ದೂರದಲ್ಲಿ ಕಾಣುತ್ತ ಅಲೌಕಿಕವಾದ ಮತ್ತು ವಿಚಿತ್ರವಾದ ಶಾಂತಿಯನ್ನು ಉಂಟುಮಾಡುತ್ತಿರುವ ನರಸಿಂಹಸ್ವಾಮಿ ದೇವಾಲಯದ ಗೋಪುರ. ಆ ವೇಳೆಗೆ ಅಲ್ಲಿ ಮಧ್ಯಾಹ್ನದ ಪೂಜೆಯ ಗಂಭೀರವಾದ ವೃತವಾದ ಎಲ್ಲರನ್ನು ತಣಿಸುವ ಘಂಟಾನಾದ ಕೇಳಿಸಿತು. ಇದ್ದಕ್ಕಿದ್ದಂತೆ ಜಗತ್ತೇ ಒಂದು ಮನೋಹರ ಉದ್ಯಾನವನವಾಗಿ ತೋರಿ ಎಂದೆಂದಿಗೂ ಆ ಸ್ಥಳದಲ್ಲಿ ಹಾಗೆಯೇ ಕುಳಿತು

ಆನಂದವನ್ನು ಅನುಭವಿಸುವುದು ಜೀವನದ ಅತ್ಯಾದರ್ಶ ಧ್ಯೇಯವಾಗಿ ತೋರಿತು. ಪೂಜಿಸಿದರೆ ದೇವರು, ಲಾಲಿಸಿದರೆ ಮಕ್ಕಳು ಎಂಬಂತೆ ಅನುಭವಿಸಿದರೆ ಪ್ರಕೃತಿಯ ಸೊಬಗು ಆನಂದ. ಪ್ರಕೃತಿಯ ಮಕ್ಕಳಾಗಿದ್ದ ನಾವು ಈಚೆಗೆ ಯಂತ್ರಗಳ ಮಕ್ಕಳಾಗಿ ಪ್ರಕೃತಿಯಿಂದ ವಿಮುಖರಾಗಿದ್ದೇವೆ. ನಮ್ಮ ಎದುರಿಗೇ ಭಗವಂತ ಹೂಡಿರುವ ಈ ಸೊಗಸಿನ ಆಟವನ್ನು ನಾವು ಕಣ್ಣೆತ್ತಿ ನೋಡುವುದನ್ನೇ ಈಚೆಗೆ ಮರೆತೆವು. ಮಗುವಿನ ಆನಂದದಾಯಕ ಅಲೌಕಿಕ ಚೇಷ್ಟೆಗಳನ್ನು ನೋಡದೆ ಪ್ರೇಯಸಿಯ ದೈವಿಕ ಸೌಂದರ್ಯವನ್ನು ಈಕ್ಷಿಸದೆ, ಶುಷ್ಕವಾದ ಅಪ್ರಯೋಜಕವಾದ ಕ್ಷಣಿಕವಾದ ಪ್ರಾಪಂಚಿಕ ಪ್ರಯೋಜನಕ್ಕಾಗಿ ನಾವು ಓಡತೊಡಗಿದ್ದೇವೆ. ನಿಂತಲ್ಲಿ ಸುತ್ತು ಮನವೊಲಿಸುವ ಕಣ್ಣು ತಣಿಸುವ ಹೃದಯ ಸ್ಪರ್ಶಿ ಸೊಬಗು. ಆದರೆ ನಾವು ಅದರ ಕಡೆ ನೋಡುವುದೇ ಇಲ್ಲ. ನಮ್ಮ ದೃಷ್ಟಿಯೆಲ್ಲ ರಸ್ತೆಯಲ್ಲಿ ಭೂತದಂತೆ ಗಳಿಗೆ ಗಳಿಗೆಗೆ ದೂಳೆಬ್ಬಿಸುತ್ತ ಓಡುತ್ತಿರುವ ಬಸ್ ಕಡೆಗೆ. ಆ ಬಸ್ಸನ್ನು ಮರೆತು ಸುತ್ತಲೂ ಹರಡಿರುವ ಈ ಪ್ರಕೃತಿಯನ್ನು ಸ್ವಲ್ಪ ಗಮನಿಸಿದರೆ ನಮಗೆ ಎಂತಹ ನೂತನ ಸ್ಫೂರ್ತಿಯ ಅಮೃತಸೇಚನವಾದೀತು!" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೪; ಪು.೨೨೦-೨೨೧) ಎಂದು ಹೆಮ್ಮೆಯಿಂದ ಗೊರೂರರವರು ನುಡಿಯುತ್ತಾರೆ.

ಪ್ರಕೃತಿಗೆ ಕೆಲವು ವಿಶೇಷ ನಂಬಿಕೆಗಳನ್ನು ಸಂಯೋಜಿಸಿ ಗೊರೂರರವರು ತಮ್ಮ ಕೃತಿಯಲ್ಲಿ ವರ್ಣಿಸಿದ್ದಾರೆ. ಸಹಜ ಸುಂದರವಾದ ಪ್ರಕೃತಿಗೆ ಜನ ಕೊಟ್ಟಿರುವ ವಿಶೇಷ ಹಿನ್ನೆಲೆ ಪ್ರಕೃತಿಯ ಸೊಬಗನ್ನು ಮತ್ತೊಂದು ರೀತಿಯಲ್ಲಿ ಹೆಚ್ಚು ಮಾಡಿದೆ. ಆಗ ಪ್ರಕೃತಿ ಕೇವಲ ಸೌಂದರ್ಯೋಪಾಸನೆಗೆ ನೆಲೆ ಅಷ್ಟೇ ಅಲ್ಲ ಹಲವು ಪ್ರಯೋಜನಗಳಿಗೂ ಕಾರಣೀಭೂತವಾಗಿದೆ ಎಂಬ ಈ ಅಂಶವನ್ನು ಗೊರೂರರವರು ಪೂವಮ್ಮನ ಮಡುವಿನ ವರ್ಣನೆಯ ಸಂದರ್ಭದಲ್ಲಿ ನಮಗೆ ತಿಳಿಸಿದ್ದಾರೆ. ಬೆಟ್ಟದ ಮನೆಯಲ್ಲಿ ಕುಳಿತು ಪ್ರಕೃತಿಯನ್ನು ಕಂಡು ಗೊರೂರರವರು ಅನುಭವಿಸಿದ ಆನಂದ 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಎಂಬ ಪ್ರಬಂಧ ಸಂಕಲನದ ಇದೇ ಹೆಸರಿನ ಪ್ರಬಂಧದಲ್ಲಿ ವರ್ಣಿತವಾಗಿದೆ. "ಅರಣ್ಯದ ಪ್ರಕೃತಿ ಕ್ಷಣಕ್ಷಣಕ್ಕೂ ಮನೋಹರವಾಗಿ ಬದಲಾಯಿಸುವುದು. ಈ ಕಾಡಿನ ಅದ್ಭುತ ಗಂಭೀರ ಸೌಂದರ್ಯ ಅನುಭವಿಸಿದಲ್ಲದೆ ವೇದ್ಯವಾಗುವುದಿಲ್ಲ. ಇದರ ಬೀಭತ್ಸ ವೈಶಾಲ್ಯವೂ ಅನುಭವೈಕವೇದ್ಯ. ಪರ್ವತ ನದಿ ಅಂತರಿಕ್ಷ ಇವು ಮೂರು ಚಿರನೂತನವಾದವು. ಈ ಮೂರನ್ನು ನಾವು ಹೇಗೆ ಯಾವ ರೂಪದಲ್ಲಿ ನೋಡಿದರೂ, ಯವ್ವನದಂತೆ ಅವು ನಯನ ಮನೋಹಾರಿ. ಹಾಗೆಯೇ ಹಕ್ಕಿಯ ಗಾನವೂ ಸಮುದ್ರದ ಗರ್ಜನೆಯೂ ಕ್ರಿಮಿಕೀಟಗಳ ಧ್ವನಿಯೂ ಕಿವಿಗೆ ಇಂಪೇ. ನನ್ನ ಗುಡಿಸಿಲಿನ ಮುಂದೆ ಕುಳಿತರೆ, ಝರಿ ನಾನಾ ದಿಕ್ಕುಗಳಲ್ಲಿ ಕಣ್ಣಿಗೆ ಬೀಳುವುದು. ಝರಿಯ ಸುತ್ತಮುತ್ತ ಗುಡ್ಡಗಳ ಮೇಲೆ ಮರಗಳು ಅಲುಗಾಡಿದಾಗ ಗುಡ್ಡಗಳು ಕುಣಿದಾಡುತ್ತಿರುವಂತೆ ಕಾಣುವುದು. ಕೆಳಗಡೆಯ ಕಾಡಿನಿಂದ ಹುಲಿಯ ಘರ್ಜನೆ ಕೇಳಿಸುವುದು. ಇದ್ದಕ್ಕಿದ್ದಂತೆ ಕುದುರೆಯ ಸವಾರರು ದೌಡಾಯಿಸುತ್ತಿರುವಂತೆ ಕಾಡು ಕೋಣಗಳೂ ಕಡವೆಗಳೂ ಒಂದನ್ನೊಂದು ಅಟ್ಟಿಸಿಕೊಂಡು ಹೋಗುತ್ತಿರುವ ಧ್ವನಿ ಗುಡುಗುಡನೆ

ಕೇಳಿಸುವುದು. ವರ್ಷಕ್ಕೊಮ್ಮೆ ತಮ್ಮ ಪ್ರಾಂತ್ಯಕ್ಕೆ ಬರುವ ಪರ್ವತ ಹಕ್ಕಿಗಳು ತಮ್ಮ ವಿಶೇಷ ಧ್ವನಿಯಿಂದ ಎಲ್ಲರ ಮನಸೆಳೆಯುತ್ತದೆ. ರಣಹದ್ದುಗಳು ಸಾವಿರಾರು ಸಂಖ್ಯೆಯಲ್ಲಿ ಹೊರಟು ಅಂತರಿಕ್ಷಕ್ಕೆ ಎದುರಾಗಿ ಒಂದು ಕಪ್ಪು ಗೋಡೆಯನ್ನೇ ಎಬ್ಬಿಸುವುವು. ಪೂವಮ್ಮನ ಮಡಿಲಿನಲ್ಲಿ ಕಪ್ಪೆ ಇನ್ನು ಅನೇಕ ಕ್ರಿಮಿಕೀಟಗಳು ತಮ್ಮದೆ ಧ್ವನಿ ಮಾಡುತ್ತವೆ. .... ಪೂವಮ್ಮನ ಮಡುವಿಗೆ ಅಂಟಿಕೊಂಡಿರುವ ಒಂದು ಕಥೆ ಹೆಚ್ಚು ಜನಪ್ರಿಯವಾಗಿದೆ. ಪೂವಮ್ಮ ಒಮ್ಮೆ ತಮ್ಮ ಪ್ರಿಯತಮನನ್ನು ನೀನು "ನನ್ನಲ್ಲಿ ಹೆಚ್ಚಾಗಿ ಪ್ರೀತಿಸುವುದು ಯಾವುದು?" ಎಂದು ಕೇಳಿದಾಗ ಯುವಕನು ತನ್ನನ್ನೇ ನೋಡುತ್ತಿದ್ದ ಅವಳ ಕಣ್ಣುಗಳನ್ನು ಆಳವಾಗಿ ದಿಟ್ಟಿಸಿ ನೋಡಿದನು. "ನಿನ್ನ ಕಣ್ಣುಗಳನ್ನು" ಎಂದನು. ಪೂವಮ್ಮ ಎರಡು ಕೈಗಳಿಂದಲೂ ಎರಡು ಕಣ್ಣುಗಳನ್ನು ಕಿತ್ತು ಎಸೆದಳು. ಆ ಕಣ್ಣುಗಳು ಬಿದ್ದ ಸ್ಥಳದಲ್ಲಿ ಮಡುವಾಯಿತು. ಈ ಮಡುವಿನಲ್ಲಿ ಸ್ನಾನ ಮಾಡಿದವರ ರೋಗಗಳೆಲ್ಲಾ ಗುಣವಾಗುವುದೆಂದು ಹೇಳುತ್ತಾರೆ. ನಾನು ಇಲ್ಲಿ ಬಂದ ಮೇಲೆ ಒಬ್ಬ ಕುಷ್ಠರೋಗಿ ಬಂದು ಸ್ನಾನ ಮಾಡಿದ. ಅವನ ರೋಗ ಗುಣವಾಯಿತು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨;ಪು.೨೨-೨೫) ಗೊರೂರರವರು ಇಲ್ಲಿ ವಿವರಣೆಯನ್ನು ಕೊಟ್ಟು ಒಬ್ಬ ಕುಷ್ಠರೋಗಿ ಪೂವಮ್ಮನ ಮಡುವಿನಲ್ಲಿ ಸ್ನಾನ ಮಾಡಿ ರೋಗ ಮುಕ್ತನಾದ ಸಂಗತಿಯನ್ನು ಸಾಕ್ಷಿಯಾಗಿ ಹೇಳುತ್ತಾರೆ. ಇಲ್ಲಿ ನಂಬಿಕೆಯ ವಿಷಯವನ್ನು ಪ್ರಕೃತಿಯ ವಿಷಯದೊಂದಿಗೆ ಲೇಖಕರು ಸಂಯೋಜಿಸಿರುವುದು ಗಮನಾರ್ಹ ಸಂಗತಿ. ಬೆಟ್ಟದ ಮನೆಯ ವಾತಾವರಣದಲ್ಲಿರುವ ಪ್ರಕೃತಿಯ ರಮ್ಯತೆಯನ್ನು ಕಂಡ ಗೊರೂರರವರು "ಇದು ದೇವತಾ ಸ್ತ್ರೀಗಳ ನೆಲೆ" (ಅದೇ; ಪು.೨೯) ಎನ್ನುತ್ತಾರೆ. "ಇಂತಹ ಸುಂದರ ಪರಿಸರದಲ್ಲಿ ಸಾಯುವುದು ಒಂದು ಮಹಾಭಾಗ್ಯ" (ಅದೇ) ಎಂದು ಹೇಳುತ್ತಾರೆ. ಸುಂದರ ಪ್ರಕೃತಿಯಲ್ಲಿ ಸಹಬಾಳ್ವೆ ಮಾಡುವುದು ಹೇಗೆ ಮಹಾಭಾಗ್ಯವೋ ಆ ಪರಿಸರದಲ್ಲಿ ಪ್ರಾಣ ಬಿಡುವುದು ಅಷ್ಟೇ ಭಾಗ್ಯ ಎಂದು ಎಲ್ಲ ಪ್ರಕೃತಿಯ ಆರಾಧಕರು ಹೇಳುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಪ್ರಕೃತಿಯ ವೈಭವ ಶಕ್ತಿಯನ್ನು ಮನಗಂಡ ನಮ್ಮ ಪೂರ್ವಿಕರು ಪ್ರಕೃತಿಯೊಂದಿಗೆ ಪುರಾಣ ಕಾವ್ಯಗಳ ಕಥೆಯನ್ನು ಸಂಯೋಜಿಸಿ ವರ್ಣಿಸಿರುವುದನ್ನು ಅನೇಕ ಸಂದರ್ಭಗಳಲ್ಲಿ ಗುರುತಿಸುತ್ತೇವೆ. ಅದೇ ರೀತಿಯಲ್ಲಿ ಗೊರೂರರವರು 'ಹಳೆಯಪಳೆಯ ಮುಖಗಳು' ಪ್ರಬಂಧ ಸಂಕಲನದ 'ಒಂದು ಸಂಜೆ' ಪ್ರಬಂಧದಲ್ಲಿ ಕಂಡ ಪ್ರಕೃತಿಯ ದಿವ್ಯ ಶಕ್ತಿಯನ್ನು ರಾಮಾಯಣದಲ್ಲಿ ಆಂಜನೇಯನು ಸಂಜೀವಿನಿ ಪರ್ವತವನ್ನು ತಂದು ಮೂರ್ಛಿತರಾದವರನ್ನು ಬದುಕಿಸಿದ ಘಟನೆಯನ್ನು ನೆನಪು ಮಾಡುತ್ತಾರೆ. "ಪ್ರಕೃತಿಯಲ್ಲಿ ಸೌಂದರ್ಯದ ಜೊತೆಗೆ ಔಷಧಿ ಸಸ್ಯಗಳು ಇರುವುದರಿಂದ ರೋಗ ನಿವಾರಕ ಶಕ್ತಿಯೂ ಇದೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪;ಪು.೧೧೭) ಎಂದು ಗೊರೂರರವರು ಹೇಳುತ್ತಾರೆ. ಅದೇ ಪ್ರಬಂಧದಲ್ಲಿ ಮರಗಳನ್ನು ಕಡಿಯುವ ಬಗ್ಗೆ ಗೊರೂರರವರು ಆಡುವ ಮಾತು ಗಮನಾರ್ಹವಾದದ್ದು. "ನಮ್ಮ ಹಿಂದಲವರು ಮರಗಳನ್ನು ಕಡಿಯುತ್ತಿರಲಿಲ್ಲ. ಫಲ ಬಿಡುತ್ತಿದ್ದ ಮತ್ತು ಜೀವಿಸಿರುವ ಮರವನ್ನು ಕಡಿಯಲು ನಮ್ಮ ಹಿಂದಲವರು ಎಂದಿಗೂ ಒಪ್ಪುತ್ತಿರಲಿಲ್ಲ. ಅದರಿಂದ ವಂಶ ಹಾಳಾಗುವುದೆಂದು

ಅವರು ನಂಬಿದ್ದರು". (ಅದೇ; ಪು.೧೧೫) ಪುರಾತನ ನಂಬಿಕೆಗೆ ಗೊರೂರರವರು ಇಲ್ಲಿ ಮಾನ್ಯತೆ ಕೊಟ್ಟು ಮುಂದಿನ ಮಾತುಗಳಲ್ಲಿ ವೈಜ್ಞಾನಿಕ ವಿಚಾರಕ್ಕೂ ಪುರಸ್ಕಾರ ನೀಡಿದ್ದಾರೆ. ಮರ ಕಡಿಯುವುದರಿಂದ ವಂಶ ಹಾಳಾಗಲಿ ಬಿಡಲಿ ದೇಶವು ಹಾಳಾಗುವುದು ನಿಜ ಎಂಬುದು ವಾಸ್ತವದ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ವಿಶ್ವೇಶ್ವರಯ್ಯನವರು ಆಡಿದ ಮಾತನ್ನು ಗೊರೂರರವರು ಉಲ್ಲೇಖಿಸಿದ್ದಾರೆ. "ಹಿಂದೆ ಒಂದು ಭಾರೀ ಯೋಜನೆಗೆ ಹಣ ಸಾಲದೇ ಬಂದಿತಂತೆ. ಹಣಕ್ಕೆ ಏನು ಮಾಡೋಣ ಎಂದು ವಿಶ್ವೇಶ್ವರಯ್ಯನವರು ಕೆಲವು ಉನ್ನತಾಧಿಕಾರಿಗಳೊಡನೆ ಚರ್ಚಿಸುತ್ತಿದ್ದರಂತೆ. ಆಗ ಒಬ್ಬರು ರಸ್ತೆಯ ಮರಗಳನ್ನೆಲ್ಲ ಹರಾಜು ಮಾಡಿದರೆ ನಾಲ್ಕು ಕೋಟಿ ರೂಪಾಯಿ ಬರುತ್ತೆ ಎಂದರಂತೆ. ಆಗ ವಿಶ್ವೇಶ್ವರಯ್ಯ ನವರು "ಅದು ಸರಿ, ಆದರೆ ಜೀವದ ಮರಗಳನ್ನು ನಮ್ಮ ರೈತರು ಕಡಿಯುವುದಿಲ್ಲ" ಎಂದರಂತೆ. (ಅದೇ.) ಪ್ರಕೃತಿ ರಕ್ಷಣೆಯ ಬಗ್ಗೆ ನಮ್ಮ ಪುರಾತನರಿಗಿದ್ದ ಕಾಳಜಿ ಹಾಗೂ ಒಳ್ಳೆಯ ನಂಬಿಕೆಗಳನ್ನು ಗೊರೂರರವರು ಇಲ್ಲಿ ಮೆಚ್ಚಿಕೊಂಡಿದ್ದಾರೆ. ಗೊರೂರರವರು ಹೇಮಾವತಿ ತೀರದ ದಟ್ಟ ಕಾಡುಗಳು ಇಂದು ಬೋಳಾಗುತ್ತಿದೆ ಎಂದು ಪರಿತಪಿಸಿಯೂ ಇದ್ದಾರೆ. ಇದೇ ಪ್ರಬಂಧದಲ್ಲಿ ಗೊರೂರರವರು ಪ್ರಕೃತಿಯ ಸಾನಿಧ್ಯದ ವೈಭವವನ್ನು ಅತ್ಯಂತ ಕಾವ್ಯಾತ್ಮಕವಾಗಿ ತಿಳಿಸಿದ್ದಾರೆ. ಪ್ರಕೃತಿ ಮಾನವವ ಒಂಟಿತನವನ್ನು ಕಳೆಯಬಹುದು ಎಂದು ಈ ಸಂದರ್ಭದ ಮಾತಿನ ಸಾರಾಂಶವಾಗಿದೆ. "ನಾನು ಒಂಟಿಯಾಗಿದ್ದೆ ಎಂದು ಹೇಳಲು ಸಾಧ್ಯವಿಲ್ಲ. ನನ್ನ ಇಕ್ಕೆಲದಲ್ಲಿಯೂ ಒಬ್ಬ ಗೆಳತಿ ಬರುತ್ತಿದ್ದಳು. ಒಬ್ಬಳು ಕ್ಷಣಕ್ಷಣಕ್ಕೂ ರಮಣೀಯ ರೂಪವನ್ನು ಧರಿಸುತ್ತ ಬದಲಾಯಿಸುತ್ತಿರುವ ಪ್ರಕೃತಿ. ಆಕೆಯ ಸಹವಾಸದಲ್ಲಿ ಮನುಷ್ಯನಿಗೆ ಬೇಸರಿಕೆ ಇಲ್ಲ. ಎಂತಹ ಪ್ರಿಯರ ಸಹವಾಸದಲ್ಲಿ ಸಹ ಒಂದು ಗಳಿಗೆ ಜಿಗುಪ್ಸೆ ಬರಬಹುದು. ಆದರೆ ಪ್ರಕೃತಿ ಎಷ್ಟು ಸವಿದರೂ ಇನ್ನೂ ಬೇಕು ಎನ್ನುವ ಮಾಟಗಾತಿ. ನನ್ನೊಂದಿಗಿದ್ದ ನನ್ನ ಎರಡನೆಯ ಗೆಳತಿ ಕಲ್ಪನೆ. ಆಗ ನಮ್ಮ ಕಲ್ಪನೆ ಎಷ್ಟೊಂದು ನೂತನ ಸೃಷ್ಟಿಗಳನ್ನು ನಿರ್ಮಿಸುವುದೋ! ತಿರುಗಾಡುವುದಕ್ಕೆ ಹೋದಾಗ ಒಂಟಿಯಾಗಿರಬೇಕೆಂದು ಒಂದು ನುಡಿ, ಒಂಟಿಯಾಗಿ ಎಂದರೆ ಬೇರೆ ಮನುಷ್ಯರ ಜೊತೆ ಬೇಡ ಎಂದು ಅರ್ಥ. ದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ ನಮಗೆ ಮಿತ್ರರು ದೊರೆಯುತ್ತಾರೆ. ಪ್ರತಿಯೊಂದು ಮರವೂ ನಮ್ಮ ಮಿತ್ರನೇ. ಲತೆಗಳು ಪುಷ್ಪತುಟಿಗಳಿಂದ ನಮ್ಮೊಂದಿಗೆ ನಗುತ್ತವೆ. ಪ್ರತಿಯೊಂದು ಗುಡ್ಡೆಯೂ ಬಂಡೆಯೂ ನಮ್ಮೊಂದಿಗೆ ನಗುತ್ತವೆ. ಪ್ರತಿಯೊಂದು ಗುಡ್ಡೆಯೂ ಬಂಡೆಯೂ ನಮ್ಮೊಂದಿಗೆ ಒಂದೊಂದು ಕತೆ ಹೇಳುತ್ತದೆ. ಸಣ್ಣ ಕಲ್ಲುಗಳ ಮೇಲೆ ಜಳಜಳನೆ ಹರಿಯುವ ಝುರಿ ನಮ್ಮೊಂದಿಗೆ ಸರಸ ಸಂಭಾಷಣೆ ಮಾಡುತ್ತದೆ". (ಅದೇ; ಪು.೧೧೯) "ಎಲ್ಲಿ ನೋಡಿದರೂ ಪ್ರಕೃತಿಯಲ್ಲಿ ಆನಂದ. ಪಕ್ಷಿಗಳು, ಪ್ರಾಣಿಗಳು, ಕ್ರಿಮಿಕೀಟ ಎಲ್ಲವೂ ಸುಖವಾಗಿರುವುದನ್ನು ಬಲ್ಲವು. ಆದರೆ ಮನುಷ್ಯನಿಗೆ ಬಾಳುವುದೇ ತಿಳಿಯಲಿಲ್ಲವಲ್ಲ!" (ಅದೇ; ಪು.೧೨೦) ಎಂದು ಗೊರೂರರವರು ಮಾನವನ ಮನಸ್ಸಿನ ಸ್ಥಿತಿಯ ಬಗ್ಗೆ ಉದ್ಗಾರ ಮಾಡುತ್ತಾರೆ.

ಇಂದಿನ ವೈಜ್ಞಾನಿಕ ಯುಗದಲ್ಲಿ "ಸರ್ವರಿಗೂ ಸುಖವಾಗಲಿ. ಎಲ್ಲರೂ ನಿರೋಗಿಗಳಾಗಲಿ. ಸರ್ವರಿಗೂ ಮಂಗಳ ದರ್ಶನವಾಗಲಿ. ಯಾರಿಗೂ ದುಃಖ ಬೇಡ" (ಅದೇ; ಪು.೧೨೨) ಎಂಬ ಭಾರತೀಯ ಸಂಸ್ಕೃತಿಯ ಆದರ್ಶವನ್ನು ನಾವು ಗುರಿ ಮುಟ್ಟಬೇಕಾದರೆ ನಮಗೆ ಶಾಂತಿ ಬೇಕು, ಮಾನವೀಯತೆ ಬೇಕು. ಇಂತಹ ಮಾನವೀಯತೆ ಪ್ರಕೃತಿಯ ಸಂಸರ್ಗದಿಂದ ಮಾತ್ರ ಸಾಧ್ಯ ಎಂಬುದನ್ನು ಗೊರೂರರವರು ಖಚಿತಪಡಿಸಿದ್ದಾರೆ. "ಒಂದು ಸಂಜೆಯ ಮಳೆಯ ಅನುಭವ ವ್ಯಕ್ತಿಗೆ ಗಂಗಾಸ್ನಾನ ಮಾಡಿದ ಆನಂದ ತರಬಹುದು. ಮಳೆಯ ಹನಿ ಜಗತ್ತನ್ನೇ ಅರಳಿಸಿದೆ ಎಂದು ನಮಗೆ ಭಾಸವಾಗಬಹುದು". (ಅದೇ; ಪು.೧೧೮) ಗೊರೂರರವರ ಪ್ರಕೃತಿ ಪರವಾದ ಈ ಮಾತುಗಳು ಕೇವಲ ವರ್ಣನೆಯ ಮಾತುಗಳಲ್ಲ, ಚಿರಸತ್ಯದ ಸಂದೇಶಗಳು. ಪ್ರಕೃತಿಯ ರಮ್ಯತೆಯನ್ನು ಗೊರೂರರವರು ವಿವಿಧ ನೆಲೆಯಲ್ಲಿ ನಿಂತು ವರ್ಣಿಸಿದ್ದಾರೆ. ಬಿಂದಿಗಮ್ಮನ ಜಾತ್ರೆ ಸಂದರ್ಭದಲ್ಲಿ ರಂಗನ ಬೆಟ್ಟದ ಮೇಲಿಂದ ಲೇಖಕರು ಸುತ್ತಲ ಪ್ರಕೃತಿಯನ್ನು ನೋಡಿ ವರ್ಣಿಸುವ ವೈಖರಿ ಚಿತ್ತಾಕರ್ಷಕವಾಗಿದೆ. "ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಗಗನ ಚುಂಬಿಗಳಾದ ವೃಕ್ಷಗಳು, ಕೆಳಗಡೆಯ ಕಣಿವೆಯಲ್ಲಿ ಹರಿಯುತ್ತಿರುವ ಕರಗಿದ ಬೆಳ್ಳಿಯಂತಹ ಬಣ್ಣದ ನೀರುಳ್ಳ ಝುರಿಗಳು, ಹಸಿರು ಜಮಖಾನವನ್ನು ಹಾಸಿದಂತಹ ಕಾಫಿ ತೋಟದ ಬಯಲು, ದೂರ ದೂರದಲ್ಲಿ ನೆಲದ ಮೇಲೆ ಇಟ್ಟಿರುವ ಕನ್ನಡಿಗಳಂತೆ ಹೊಳೆಯುತ್ತಿರುವ ಕೊಳಗಳು ಕೆರೆಗಳು ಮನೋಹರ ವಾಗಿವೆ". (ಅದೇ; ಪು.೧೪೨) ಇಂಥ ವರ್ಣನೆಗಳು ಪುನರಾವರ್ತನೆಗೊಂಡರು ಸವಿ ಎನಿಸುತ್ತದೆ.

ಗೊರೂರರವರಲ್ಲಿ ಕಾಣುವ ಅಭೂತಪೂರ್ವ ನಿಸರ್ಗ ಮೋಹಕ್ಕೆ ಹೇಮಾವತಿ ಮೂಲ ಪ್ರೇರಣೆ. ಈ ಕಾರಣದಿಂದಲೇ ಹೇಮಾವತಿಯ ಬಗ್ಗೆ ಗೊರೂರರವರು ಅಭಿಮಾನದಿಂದ ಹೀಗೆ ನುಡಿಯುತ್ತಾರೆ. "ಹೇಮಾವತೀ ನದಿ ನಮ್ಮೂರ ಉಸಿರು. ನದಿಯ ದಡದಲ್ಲಿ ನಿಂತುಕೊಂಡು ನೋಡಿದರೆ ನದಿ ನಮ್ಮೂರ ಬಳಿ ಇರುವಷ್ಟು ಸುಂದರವಾಗಿ ಸೊಗಸಾಗಿ ಮತ್ತೆಲ್ಲೂ ಇಲ್ಲವೆಂದು ಯಾರಿಗಾದರೂ ತೋರುವುದು. ನರಸಿಂಹಸ್ವಾಮಿ ದೇವಸ್ಥಾನದ ಮುಂದುಗಡೆಯಿಂದ ಎಡಗಡೆಯೂ ಬಲಗಡೆಯೂ ನೋಡಿದರೆ ನೂರಾರು ತೋಪುಗಳ ಗೊಂಚಲುಗಳು ಕಣ್ಣಿಗೆ ವಿಶ್ರಾಂತಿಯನ್ನು ಕೊಡುವುವು. ನದಿಯ ಎರಡು ದಡಗಳಲ್ಲೂ ಮರಗಳ ಕೊಂಬೆಗಳು ನದಿಯ ಮೇಲೆ ಬಾಗಿದ್ದು ನೀರನ್ನು ಮುತ್ತಿಡುತ್ತಾ ನದಿಯ ರೆಪ್ಪೆಗಳಂತೆ ಕಾಣುವುವು. ನದಿಯಿಂದ ಮೇಲೆ ಪಶ್ಚಿಮಕ್ಕೆ ಒಂದು ಮೈಲಿ ಹೋದರೆ ಈಶ್ವರನನ್ನು ತಪಸ್ಸಿಗೆ ಆಕರ್ಷಿಸುವಷ್ಟು ರಮಣೀಯವೂ ಶಾಂತವೂ ಆದ ಸಂಗಮ ಮತ್ತು ತೋಪು. ಹೇಮಾವತಿ ನದಿಯು ನಮ್ಮ ಪ್ರಾಂತ್ಯಕ್ಕೇ ಜೀವವನ್ನು ಕೊಡುವ ಜೀವನಾಡಿ. ಅದರ ಸ್ಪರ್ಶದಿಂದ ಪವಿತ್ರವೂ ಚೆನ್ನೂಆದ ನಮ್ಮ ನಾಡು ದೇವಲೋಕದ ನಂದನವನಕ್ಕೆ ಎಣೆಯಾದುದು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೮; ಪು.೧) ಈ ಮಾತು ಹೇಮಾವತಿ ತೀರದ ಜನಕ್ಕೆ ಮಾತ್ರ ಅನ್ವಯಿಸುವ ಮಾತಲ್ಲ. ಎಲ್ಲ ಸುಂದರ ಪ್ರಕೃತಿ ಪರಿಸರದ ಜನಕ್ಕೂ ಅನ್ವಯಿಸುವ ಮಾತು. ಪ್ರಕೃತಿಯೇ ಉಸಿರು, ಪ್ರಕೃತಿಯೇ ಚೈತನ್ಯ ಮತ್ತು ಪ್ರಕೃತಿಯೇ ಚಿನ್ಮಯಶಕ್ತಿ ಎಂಬ ಧ್ವನಿ ಸಂದೇಶ ಗೊರೂರರವರ ಈ ಮಾತುಗಳಲ್ಲಿ ಅಡಕವಾಗಿದೆ.

ಹೇಮಾವತಿಯ ಪರಿಸರಕ್ಕೆ ನರಸಿಂಹಸ್ವಾಮಿಯ ಸನ್ನಿಧಿ ತೀರ್ಥಕ್ಷೇತ್ರದ ಮಹಿಮೆಯನ್ನು ತಂದುಕೊಟ್ಟಿದೆ. ಹೇಮಾವತಿ ಊರಿನ ಉಸಿರು ಜನರ ಜೀವನಾಡಿ ಎಂದಾಗ ಆ ಪರಿಸರದ ಜನರ ಬದುಕೆಲ್ಲವು ಹೇಮಾವತಿಯ ಕೃಪೆಯಿಂದ ಸಾಧಿತವಾಗಿದೆ ಎಂಬುದು ಗೊರೂರವರ ಮಾತುಗಳಲ್ಲಿ ಸ್ಪಷ್ಟವಾಗಿದೆ.

ಗೊರೂರವರಿಗೆ ಹೇಮಾವತಿಯ ನಂಟು ಅತ್ಯಂತ ಮಧುರವಾದ ಮರೆಯಲಾಗದ ನಂಟು. "ನನ್ನ ಬಾಲ್ಯದಲ್ಲಿ ಒಂದು ಸಲ ಪೂರ್ಣ ಪ್ರವಾಹದಲ್ಲಿ ನಾವು ೧೧-೧೨ ಜನ ಸ್ನೇಹಿತರು ಹೊಳೆಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಈಜಿ ದಾಟಿದೆವು. ಅಲ್ಲಿಗೂ ಇಲ್ಲಿಗೂ ಮಧ್ಯೆ ಅನೇಕ ವರುಷಗಳು ಉರುಳಿ ಹೋದವು. ಸ್ನೇಹಿತರೆಲ್ಲಾ ಬೊಂಬಾಯಿ, ಮದರಾಸು, ಕಲ್ಕತ್ತಾ, ಸಿಲೋನು ಮುಂತಾದ ಕಡೆಗಳಲ್ಲಿ ಜೀವನಕ್ಕಾಗಿ ಹೋಗಿ ನೆಲೆಸಿದ್ದಾರೆ. ಈ ಕಡೆ ಅವರಿಗೆ ಹೆಚ್ಚು ಸಂಪರ್ಕವಿಲ್ಲ ದಿರುವುದರಿಂದ ಅವರಲ್ಲಿ ಕೆಲವರನ್ನು ಮರೆಯುತ್ತಾ ಬಂದಿದ್ದೇನೆ. ಆದರೆ ಆರು ತಿಂಗಳಿಗೆ ಒಂದು ವರುಷಕ್ಕೆ ಒಂದೊಂದು ಸಲ ಅಪರೂಪವಾಗಿ ಅವರಿಂದ ಒಂದೊಂದು ಕಾಗದ ಬರುತ್ತದೆ. ಜೀವನದ ಈ ಹೋರಾಟದಲ್ಲಿ ಅಶಾಂತಿಯಲ್ಲಿ ಅವರು "ನದಿಯಲ್ಲಿ ಈಜಿದುದು ಜ್ಞಾಪಕವಿದೆಯೆ?" ಎಂದು ಕೇಳುತ್ತಾರೆ. ಬಿಸಿಲುಗುದುರೆಯಂತೆ ಓಡುತ್ತಿರುವ ಸುಖವನ್ನು ಅರಸಿ ನಿರಾಶರಾಗುತ್ತಿರುವ ನಮಗೆ, ಇರುವ ಒಂದು ಸುಖವೇ ಆ ಬಾಲ್ಯದ ನೆನಪು. ಸ್ನೇಹಿತರ 'ನೆನಪಿದೆಯೆ?' ಎಂಬುದರ ಧ್ಯಾನದಲ್ಲಿ ನನ್ನ ದೇಹದಿಂದ ೨೦-೩೦ ವರುಷಗಳು ಕಳಚಿ ಬಿದ್ದು ಹೋಗಿ ಆ ಬಾಲ್ಯದ ನಂದನ ವನವು ನನ್ನ ಕಣ್ಣಿಗೆ ಕಾಣುವುದು. ....

ಹೇಮಾವತಿ ನದಿಯು ನಮ್ಮ ಜೀವದ ಉಸಿರು. ನಮ್ಮ ನಾಡಿನ ರಕ್ತ, ನಮ್ಮ ಊರಿನ ಬೀದಿ. ಅದರ ಮೇಲೆ ಬೀಸಿ ಬರುವ ಗಾಳಿ ಜೀವರಸದಿಂದ ತುಂಬಿರುತ್ತದೆ. ನದಿ ನಮ್ಮ ಊರಲ್ಲಿ ಇಲ್ಲದಿದ್ದರೆ ಊರು ಇರುತ್ತಲೇ ಇರಲಿಲ್ಲ. ಈ ನದಿಯು ಇಲ್ಲಿಂದ ಹೋಗುವುದಕ್ಕೆ ಮುಂಚೆ ಊರೇ ಕಣ್ಮರೆಯಾಗಲಿ. ಅಲ್ಲಿಯವರೆಗೆ ಸ್ನೇಹಿತರು ಆರು ತಿಂಗಳಿಗೊಮ್ಮೆ ವರುಷಕ್ಕೆ ಒಮ್ಮೆಯಾದರೂ ಚಿಂತೆಯಿಲ್ಲ, "ನೆನಪಿದೆಯೆ?"ಎಂದು ಬರೆಯುತ್ತಿರಲಿ". (ಅದೇ; ಪು.೨೫) ಬೇಂದ್ರೆಯವರು ಸಖಿಗೀತದಲ್ಲಿ ನನಗೂ ನಿನಗೂ ಅಂಟಿದ ನಂಟಿನ ಸವಿಯನ್ನು ಬಲ್ಲವರ್ಯಾರು ಎಂದು ಪ್ರಶ್ನಿಸಿದ ಮಾತನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಪ್ರಕೃತಿಯ ನಂಟು ಸವಿ ಬಿಡಿಸಲಾಗದ ನಂಟು ಎಂಬ ಭಾವನೆಯನ್ನು ಗೊರೂರವರು ಸ್ಪಷ್ಟಪಡಿಸಿದ್ದಾರೆ. ಪ್ರಕೃತಿಯೊಂದಿಗೆ ಕಳೆದ ರಸ ಕ್ಷಣಗಳಿಗೆ ಕಾಲದ ಮುಸುಕು ಇರುವುದಿಲ್ಲ. ಎಂದಿನ ಘಟನೆಯನ್ನು ಎಂದೋ ನೆನಪಿಸಿ ಕೊಂಡಾಡಲು ಮನಸ್ಸಿಗೆ ಅಂದಿನ ಹೊಚ್ಚಹೊಸ ಸಂತಸದ ನೆನಪೆ ಆಗುತ್ತದೆ ಎಂದು ಗೊರೂರವರು ಇಲ್ಲಿ ಹೇಳಿರುವುದು ಪ್ರಕೃತಿಯ ಮೋಹಕ ಶಕ್ತಿಗೆ ಸಾಕ್ಷಿಯಾಗಿದೆ. ಪ್ರಕೃತಿ ಇಲ್ಲದಿದ್ದರೆ ಮಾನವನಿಗೆ ಬದುಕು ಬರಡಷ್ಟೆ ಅಲ್ಲ ಬದುಕಿಗೆ ಅರ್ಥವೇ ಇರುವುದಿಲ್ಲ ಎಂಬ ಸತ್ಯ ಮೇಲಿನ ಮಾತುಗಳಲ್ಲಿ ಸ್ಪಷ್ಟವಾಗಿದೆ.

ಇದೇ ಪ್ರಬಂಧ ಸಂಕಲನದ 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ?' ಎಂಬ ಪ್ರಬಂಧದಲ್ಲಿ ಪ್ರಕೃತಿಯನ್ನು ಕುರಿತು ಗೊರೂರರವರು ಆಡಿರುವ ಮಾತುಗಳು ಅರ್ಥಪೂರ್ಣವಾಗಿವೆ. "ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಸುಮ್ಮನೆ ನೋಡಬೇಕು. ಸಾಧ್ಯವಾದರೆ ಅನುಸರಿಸಬೇಕು. ನಮ್ಮ ಪೂರ್ವದ ಋಷಿಗಳು ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ಅದನ್ನು ಅನುಸರಿಸಿದವರು; ಅದರ ಪೂಜಾರಿಗಳಾದರು. ಎಮ್ಮೆ ಪ್ರಕೃತಿಯಂತೆ; ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಸುಮ್ಮನೆ ಅನುಸರಿಸಬೇಕು. ಮಹಾತ್ಮ ಗಾಂಧಿಯಂತಹ ಭಾರತ ಭಾಗ್ಯವಿಧಾತರಿಗೆ ಸಹ ಎಮ್ಮೆ ಅರ್ಥವಾಗಿಲ್ಲ". (ಅದೇ; ಪು.೬೭) ಎಮ್ಮೆಯನ್ನು ಕುರಿತು ಈ ಲಘು ಪ್ರಬಂಧದಲ್ಲಿ ಗೊರೂರರವರು ಎಮ್ಮೆಯ ಸ್ವಭಾವ, ಜಾಣ್ಮೆಯನ್ನು ಅತ್ಯಂತ ರಸಿಕ ಮಾತುಗಳಲ್ಲಿ ವಿವರಿಸಿದ್ದಾರೆ. ವಿಷಯ ನಿರೂಪಣೆಯಲ್ಲಿ ಕೆಲವು ಸಂದರ್ಭಗಳಲ್ಲಿ ವಿಷಯದ ಸ್ವರೂಪಕ್ಕೆ ಅನುಗುಣವಾಗಿ ಗಾಂಭೀರ್ಯ ಶೈಲಿಯನ್ನು ಕಾಣುವುದರ ಜತೆಗೆ ಸರಸ ರಸಿಕ ಶೈಲಿಯನ್ನು ನೋಡಬಹುದು. ಇಂತ ಶೈಲಿಯಲ್ಲಿಯೂ ಸಹ ಗೊರೂರರವರು ಗಂಭೀರ ವಿಷಯಗಳನ್ನು ನಿರೂಪಣೆ ಮಾಡಿರುವುದು ಅವರ ವಿಶೇಷತೆ.

ಗೊರೂರರವರ ಪಾಲಿಗೆ ಹೇಮಾವತಿ ಸಾಹಸ ಸ್ಫೂರ್ತಿಯ ನೆಲೆಯಾಗಿತ್ತು. ವೈಜ್ಞಾನಿಕ ಅಡೆತಡೆಯ ಮೂಲಕ ಪ್ರಕೃತಿಯ ಸಂಬಂಧ ದೂರವಾಗುತ್ತಿದೆ ಎಂಬ ಭಾವನೆಯನ್ನು ಇದೇ ಪ್ರಬಂಧ ಸಂಕಲನದ 'ಸೇತುವೆ' ಪ್ರಬಂಧದಲ್ಲಿ ವ್ಯಕ್ತಪಡಿಸಿದ್ದಾರೆ. "ನಮ್ಮ ಊರ ಮುಂದೆ ನದಿ ಹರಿಯುತ್ತಿದ್ದರೂ ಸೇತುವೆ ಬಂದುದರಿಂದ ನಮಗೆ ಅದು ಸ್ವಲ್ಪ ದೂರವಾದಂತೆ ಆಗಿದೆ. ಸೇತುವೆ ಇಲ್ಲಿ ಆಗುವುದಕ್ಕೆ ಮುಂಚೆ ನಮ್ಮ ಕಾಲದ ಹುಡುಗರಿಗೆಲ್ಲಾ ಈಜಿಕೊಂಡು ಹೊಳೆ ದಾಟಬೇಕು ಎಂಬುದೇ ಒಂದು ಹಿರಿಯ ಗುರಿಯಾಗಿದ್ದಿತು. ಹೊಳೆಯನ್ನು ನೋಡಿದಾಗಲೆಲ್ಲಾ ಇದು ನಮ್ಮನ್ನು ಕರೆಯುತ್ತಿದೆ; ನಮ್ಮನ್ನು ಪ್ರತಿಭಟಿಸುತ್ತಿದೆ; ಇದನ್ನು ಈಜಿ ದಾಟಬೇಕು ಎಂಬ ಆಶೆಯಿಂದ ಹುಡುಗರು ಈಜು ಕಲಿಯುತ್ತಿದ್ದರು. ಅದರಲ್ಲಿಯೂ ಮಳೆಗಾಲದಲ್ಲಿಯೂ ಪ್ರವಾಹ ಬಂದ ಕಾಲದಲ್ಲಿಯೂ ಹೊಳೆಯ ದಡದಲ್ಲಿ ಹೋಗಿ ಆ ಗಾಳಿ ಚಳಿಯಲ್ಲಿ ಹೊಡೆಸಿಕೊಂಡು ಬೆಸ್ತರು ದೋಣಿಯನ್ನು ತರುವವರೆಗೆ ಕಾಯುತ್ತಿರುವಾಗಲಂತೂ, "ನಮಗೆ ಇನ್ನು ಚೆನ್ನಾಗಿ ಈಜು ಬಂದಿದ್ದರೆ?" ಎಂಬ ಭಾವ ಬಂದು ಆ ಬೇಸುಗೆಯಲ್ಲೆಲ್ಲಾ ನಮಗೆ ಹೊಳೆಯನ್ನು ಒಂದು ಕಡೆಯಿಂದ ಒಂದು ಕಡೆಗೆ ತೋಳಿನಲ್ಲಿ ದಾಟುವುದೇ ಮುಖ್ಯವಾದ ಆನಂದವಾಗಿ ಆಗುತ್ತಿದ್ದಿತು. ಈಗಿನ ಹುಡುಗರಿಗೆ ಈ ಭಾವ ಬರುವುದೇ ಇಲ್ಲ. ಅದರ ಫಲವಾಗಿ ಅವರಿಗೆ ನಮ್ಮಂತೆ ಈಜುವುದೂ ಬರುವುದಿಲ್ಲ. ಆ ಕಾಲದಲ್ಲಿ ವರುಷಕ್ಕೆ ಒಂದೊಂದು ಸಲ ಯಾರಾದರೂ ಧೀರರು ಪೂರ್ಣ ಪ್ರವಾಹ ಮುಕ್ಕಾಲು ಪ್ರವಾಹಗಳಲ್ಲಿ ಹೊಳೆಯನ್ನು ದಾಟಿಯೇ ದಾಟುತ್ತಿದ್ದರು. ಪ್ರವಾಹ ಎಷ್ಟೆಷ್ಟು ಬರುತ್ತಿದೆ -ಇವತ್ತು ಎಷ್ಟು - ನಿನ್ನೆ ಎಷ್ಟು - ಈಗ ಈಜಬಹುದೇ ಇಲ್ಲವೇ? - ಹೀಗೆ ಹೊಳೆ ನಮ್ಮ ಬಾಳಿಗೆ ಸೇರಿಕೊಂಡು ಗೆಳೆಯನಾಗಿ ನಾವು ಅದರೊಂದಿಗೆ ನಿತ್ಯ ಸಂಭಾಷಣೆ ನಡೆಸುತ್ತಿದ್ದೆವು". (ಅದೇ;

ಪು.೧೨೧) ಇಲ್ಲಿ ಹೇಮಾವತಿ ಹೊಳೆಯ ಬಾಂಧವ್ಯದ ಸೊಗಸನ್ನು ಹೇಳುವಾಗ ಗೊರೂರರವರು ಪ್ರಕೃತಿ ಬಾಂಧವ್ಯದ ವಿಶೇಷತೆಯನ್ನು ಸೂಚಿಸಿದ್ದಾರೆ. "ಹೊಳೆಗೆ ಸೇತುವೆ ಬಂದದ್ದು ಅದಕ್ಕೂ ನಮಗೂ ನಡುವೆ ಇದ್ದ ಬಾಂಧವ್ಯ ಕಡಿಮೆಯಾದಂತೆ ತೋರುತ್ತದೆ" (ಅದೇ; ಪು. ೧೨೬) ಎನ್ನುತ್ತಾರೆ. ವೈಜ್ಞಾನಿಕ ಪ್ರಗತಿ ಪ್ರಕೃತಿಯ ಬಾಂಧವ್ಯಕ್ಕೆ ಊನು ತಂದಿತು ಎಂಬ ಭಾವನೆ ಇಲ್ಲಿ ಗಮನಿಸಬೇಕಾದ ಅಂಶ.

ಮಲ್ಲಿಗೆಹಳ್ಳಿಯಲ್ಲಿ ಹೇಮಾವತಿಯ ಮತ್ತೊಂದು ಶೋಭೆಯನ್ನು ಗೊರೂರರವರು ಸೊಗಸಾಗಿ ಚಿತ್ರಿಸಿದ್ದಾರೆ. "ಹೇಮಾವತಿ ತೀರದ ಮಲ್ಲಿಗೆಹಳ್ಳಿ ಬಹು ಫಲವತ್ತಾದ ಗ್ರಾಮ. ಪ್ರಕೃತಿ ಎರಡು ಕೈಗಳಿಂದಲೂ ಅಲ್ಲಿ ಸಮೃದ್ಧಿಯನ್ನು ಚೆಲ್ಲಿದೆ. ಅಲ್ಲಿಯ ನೆಲ ಅತ್ಯಂತ ರಸವತ್ತಾದದು. ರಾಗಿ, ಭತ್ತ, ತೆಂಗು, ಅಡಿಕೆ, ಮಾವು, ಸಂಪಿಗೆ, ಜಾಜಿ, ಸೇವಂತಿಗೆ, ಕಿತ್ತಲೆ, ಕಾಫಿ, ಏಲಕ್ಕಿ, ಮೆಣಸು ಇವುಗಳಿಗೆ ಆ ಪ್ರಾಂತ ಆಗರ. ಅಲ್ಲಿಯ ತೋಟದ ಬಯಲು ಯಾವಾಗಲೂ ಭಗವಂತನ ಆರಾಧನೆಗೆ ಫಲ, ಪುಷ್ಪ ಕಾಯಿಗಳನ್ನು ಎತ್ತಿ ಹಿಡಿದಿರುವ ಭಕ್ತನಂತೆ ಕಾಣುವುದು. ವಸಂತಕಾಲದಲ್ಲಿ ತೋಟಗಳಲ್ಲಿ ತಿರುಗಾಡ ಬೇಕಾದರೆ ಮಂಡಿಯುದ್ದ ಸಂಪಿಗೆ ಹೂವಿನ ರಾಶಿಯಲ್ಲಿ ಹಾಯಿದುಕೊಂಡು ಹೋಗಬೇಕು. ರಸಿಕ ಸೂರ್ಯನು ಉಷಾ ಸ್ತ್ರೀಯನ್ನು ಅನುಸರಿಸಿಕೊಂಡು ಹೋಗುತ್ತಾ ಜಗತ್ತಿನ ಬಾಗಿಲನ್ನು ತೆರೆದು ಚಿನ್ನದ ಬುಟ್ಟಿಯನ್ನು ಕೈಯಲ್ಲಿ ಹಿಡಿದುಕೊಂಡು ಹೊರಡುವನು. ಬೆಳಗಿನ ಪ್ರಭೆ, ಅಪರಂಜಿ ವರ್ಣದ ಮಾವಿನ ಹಣ್ಣಿನ ಮೇಲೆ ಬಿದ್ದಾಗ ಹಣ್ಣುಗಳು ಅಮೃತ ರಸವನ್ನು ತುಂಬಿಕೊಂಡ ಭೂಮಾತೆಯ ಸುವರ್ಣ ಸ್ತನ ಕಲಶಗಳಂತೆ ಹೊಳೆಯುವುವು. ಹೇಮಾವತಿ ನದಿ ಗ್ರಾಮದ ಅಧಿದೇವತೆಯಾಗಿ ಜೀವರಸವನ್ನು ತುಂಬಿ ಕೊಂಡು, ತೀರದ ನರಸಿಂಹಸ್ವಾಮಿ ದೇವಸ್ಥಾನವನ್ನು ಕುಡುಗೋಲಿನ ಅಲಗಿನಂತೆ ಬಳಸಿಕೊಂಡು, ತೋಪಿನ ಬಳಿ ಎರಡು ಬಾಹುಗಳಾಗಿ ಕವಲೊಡೆದು ಅದನ್ನು ಬಾಚಿ ತಬ್ಬಿಕೊಂಡು, ಅಗಲಿ ಹೋಗಲು ಇಷ್ಟವಿಲ್ಲದ ಗೆಳೆಯನಂತೆ ನಿಧಾನವಾಗಿ ಮುಂದಕ್ಕೆ ಹೋಗುತ್ತದೆ. ಹೇಮಾವತಿ ನದಿಗೆ ಮಲ್ಲಿಗೆಹಳ್ಳಿಯನ್ನು ಬಿಟ್ಟು ಓಡಬೇಕೆಂಬುದು ಯಾವಾಗಲೂ ಉದ್ದೇಶವಿಲ್ಲ. ಮಳೆಗಾಲದಲ್ಲಿ ಪೂರ್ಣಪ್ರವಾಹದಿಂದ ನದಿಯ ಎರಡು ದಡಗಳೂ ಬಿರಿಯುತ್ತಿದ್ದರೂ ಮಲ್ಲಿಗೆಹಳ್ಳಿಯ ದೇವಸ್ಥಾನದ ಹತ್ತಿರದ ತೋಪಿನಲ್ಲಿ ನದಿ ಇಬ್ಭಾಗವಾಗುವುದರಿಂದ ಪ್ರವಾಹ ನಿಧಾನವಾಗಿ ಊರ ಕಡೆಗೆ ನೋಡುತ್ತಾ ಮುಂದೆ ಸಾಗುತ್ತದೆ. ಸುಗ್ಗಿಯ ಕಾಲದಲ್ಲಿ ನದಿಯ ತೀರದಲ್ಲಿ ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಚಿನ್ನದ ರಾಶಿಯಂತೆ ಭತ್ತ ಕಣಗಳಲ್ಲಿ ರಾಶಿ ರಾಶಿಯಾಗಿ ಬಿದ್ದಿರುತ್ತದೆ. ಮನುಷ್ಯ, ತನ್ನ ಸ್ವಾಭಾವಿಕವಾದ ಚುರುಕು, ಧೈರ್ಯ, ಎದೆಗಾರಿಕೆ, ಕಷ್ಟಸಹಿಷ್ಣುತೆ, ತೃಪ್ತಿ ಇವುಗಳನ್ನು ಕಾಲ ಧರ್ಮ ಸಂಯೋಗದಿಂದ ಕಳೆದುಕೊಳ್ಳುತ್ತಿದ್ದರೂ, ಪ್ರಕೃತಿ ಎಂದಿನಂತೆ ಉದಾರಿಯೂ ದಿನದಿನವೂ ಹೊಸ ಹೊಸ ಬೆಡಗಿನಿಂದ ಇವನನ್ನು ಆಕರ್ಷಿಸುವುದೂ ಆಗಿರುತ್ತದೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೫;ಪು.೧) ಪ್ರಕೃತಿಯ ಈ ವರ್ಣನೆಯಲ್ಲಿ ಆಧ್ಯಾತ್ಮಿಕ ಚಿತ್ರವನ್ನು ಗುರುತಿಸಬಹುದು. ರಸಿಕ ಸೂರ್ಯನ ವಿಷಯವನ್ನು ಹೇಳುವಾಗ ಶೃಂಗಾರದ ಭಾವನೆಯನ್ನು ಕಾಣುತ್ತೇವೆ. ಪ್ರಕೃತಿಗೆ ಮಾನವನನ್ನು ಬಿಟ್ಟು ಅಗಲಲು ಮನಸ್ಸಿಲ್ಲ ಎಂಬ ಭಾವನೆಯನ್ನು

ಇಲ್ಲಿ ಕಾಣುತ್ತೇವೆ. ಮಾನವನಲ್ಲಿ ಕಾಲ ಧರ್ಮ ಸಂಯೋಗದಿಂದ ಗುಣ ವ್ಯತ್ಯಯ ಆದರೂ ಪ್ರಕೃತಿಯಲ್ಲಿ ಅಂತಹ ವ್ಯತ್ಯಯ ಆಗುವುದಿಲ್ಲ ಎಂಬ ಭಾವನೆಯನ್ನು ಗೊರೂರವರು ಸ್ಪಷ್ಟ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾರೆ. ಪ್ರಕೃತಿ ನಿಶ್ಚಲ ಮನಸ್ಸಿನ ನಿಶ್ಚಲ ಗುಣದ ನೆಲೆ ಎಂಬುದಕ್ಕೆ ಲೇಖಕರ ಮಾತು ಪುಷ್ಟಿ ಕೊಡುತ್ತದೆ. ಪರೋಕ್ಷವಾಗಿ ಮಾನವನು ಸಹ ಪ್ರಕೃತಿಯಿಂದ ಈ ನಿಶ್ಚಲ ಮನೋಧರ್ಮವನ್ನು ಕಲಿಯಬೇಕೆಂಬ ಸದಾಶಯವನ್ನು ಲೇಖಕರು ಇಲ್ಲಿ ತಿಳಿಯಪಡಿಸಿದ್ದಾರೆ. ಪ್ರಕೃತಿಯ ಹೊಂದಾಣಿಕೆಯಿಂದ ಮಾನವನಿಗೆ ಇಂತಹ ಗುಣ ಲಾಭಗಳು ಸಾಕಷ್ಟು ಆಗುತ್ತದೆ ಎಂಬುದನ್ನು ಎಲ್ಲ ಪ್ರಕೃತಿ ಪ್ರೇಮಿಗಳು ನಮಗೆ ಖಚಿತಪಡಿಸಿದ್ದಾರೆ.

"ಮಲ್ಲಿಗೆಹಳ್ಳಿಯಂತಹ ನದೀತೀರದ ಅರ್ಧ ಮಲೆನಾಡಿನ ಗುಡ್ಡಗಿಡಗಳಲ್ಲಿ ವಾಸಿಸುವ ಜನರಿಗೆ ಪ್ರಕೃತಿಯ ಬಗೆಬಗೆಯ ಮನೋಧರ್ಮಗಳೂ ವ್ಯಾಪಾರಗಳೂ ವೇಷ ಬದಲಾವಣೆಗಳೂ ಚೆನ್ನಾಗಿ ಗೊತ್ತಾಗಿರುತ್ತವೆ. ಅಲ್ಲಿಯ ಮರಗಳು ಬಿರುಗಾಳಿಯಲ್ಲಿ ಘರ್ಜಿಸುವುದೂ, ವಸಂತದ ತಂಗಾಳಿ ಬಂದಾಗ ಮೆತ್ತಗೆ ಉಸಿರು ಬಿಡುವುದೂ ಅವರ ಅನುಭವಕ್ಕೆ ಬರುತ್ತದೆ. ಪ್ರತಿಯೊಂದು ಮರದ ಒಳಗಡೆ ನಡೆಯುವ ವ್ಯಾಪಾರಗಳೂ ಅವರಿಗೆ ಸ್ನೇಹಿತನ ಮನೋಧರ್ಮದಂತೆ ಚೆನ್ನಾಗಿ ಕಾಣುತ್ತದೆ. ಮಲ್ಲಿಗೆಹಳ್ಳಿಯ ಜನ ರಾತ್ರಿ ಮಲಗುವಾಗ ಹೊರತು ಉಳಿದ ತನ್ನ ಕಾಲವನ್ನು ಮನೆಯಿಂದ ಹೊರಗೆ ಪ್ರಕೃತಿಯ ಜತೆಯಲ್ಲಿಯೇ ಕಳೆಯುತ್ತಾರೆ. ಆದುದರಿಂದ ಪ್ರಕೃತಿಯ ಸ್ವಭಾವದ ಗುಟ್ಟೆಲ್ಲಾ ಅವರಿಗೆ ಚೆನ್ನಾಗಿ ಗೊತ್ತಾಗಿದೆ". (ಅದೇ; ಪು.೧-೨) ಪ್ರಕೃತಿ ಹಾಗೂ ಮಾನವನ ಒಡನಾಟದ ಮೈತ್ರಿಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಾಗಿಲ್ಲ.

ಭಗವಂತ ತನ್ನ ಅದ್ಭುತ ಶಕ್ತಿಯ ವಿಜಯ ಯಾತ್ರೆಯನ್ನು ಪ್ರಕೃತಿಯ ಸಂಬಂಧದೊಂದಿಗೆ ಸ್ಪಷ್ಟಪಡಿಸಿದ್ದಾನೆ. ಪ್ರಕೃತಿ ದೈವ ಸೃಷ್ಟಿ ಎಂಬ ಅಭಿಮಾನದ ಜೊತೆಗೆ ಅದ್ಭುತ ಸೃಷ್ಟಿ ಎಂಬ ಅರಿವು ನಮಗೆ ಇರಬೇಕು ಎಂಬುದು ಪ್ರಕೃತಿಯ ಆರಾಧಕರಾದ ನಮಗೆ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ನಮಗೂ ಹಾಗೂ ಪ್ರಕೃತಿಗೂ ಇರುವ ಬಾಂಧವ್ಯದ ಮಧುರತೆ ಹೆಚ್ಚು ಗಾಢವಾಗಿರುತ್ತದೆ ಎಂಬ ಅಭಿಪ್ರಾಯವನ್ನು ಗೊರೂರವರು ನೀಡಿದ್ದಾರೆ. "ಪ್ರಕೃತಿಯ ಆ ಆರ್ಭಟದಲ್ಲಿ ಮನುಷ್ಯನ ಆರ್ಭಟವೂ ಹೆಚ್ಚು. ನಮಗೇನೋ ಹಳ್ಳಿಗಳ, ಮನೆಗಳ, ಪಟ್ಟಣಗಳ, ಬಾಳು ಅಭ್ಯಾಸವಾಗಿದೆ. ಜೀವವು, ಮನೆ ಮಠ, ಆಸ್ತಿ, ಬ್ಯಾಂಕು, ಬಿರುದು ಬಾವಲಿಗಳಿಗೆ ಹೊಂದಿಕೊಂಡು ಬೇಡಿಯಾಗಿದೆ. ಆದರೆ ವಾಸ್ತವವಾಗಿ ಜೀವಕ್ಕೂ ಹಕ್ಕಿಯಂತೆ ಪ್ರಕೃತಿಯಲ್ಲಿ ಕಾಡುಮೇಡುಗಳಲ್ಲಿ ಬೆಟ್ಟ ಗುಡ್ಡಗಳಲ್ಲಿ ಇರುವುದೇ ಹೆಚ್ಚು ಹಿತವಾದದ್ದು ಎಂಬುದು ತೋರುತ್ತದೆ". (ಅದೇ;ಪು.೩೧೫) ಇಲ್ಲಿ ಭಗವಂತ ಕೊಟ್ಟಿರುವ ಅಚ್ಚುಕಟ್ಟಾದ ಪರಿಸರದೊಂದಿಗೆ ವಿಶಾಲಭಾವದಲ್ಲಿ ನಾವು ಬಾಳಬೇಕು ಎಂಬುದು ಗೊರೂರವರ ಸೂಚನೆಯಾಗಿದೆ. ರವೀಂದ್ರನಾಥ ಠಾಗೂರ್‌ರವರ ಅಭಿಪ್ರಾಯವು ಮೇಲಿನ ಮಾತುಗಳಿಗೆ ಸಂವಾದಿಯಾಗಿದೆ. ರವೀಂದ್ರನಾಥ ಠಾಗೂರ್ - "ಹೇ ಪ್ರಭು ನನ್ನ ಕೊನೆಯ ಪ್ರಯಾಣಕ್ಕೆ ನಿನ್ನ ದಯೆ ಮತ್ತು ಕ್ಷಮೆಯನ್ನು ಅಪಾರನಿಧಿ

ಯಿಂದ ತೆಗೆದುಕೊಳ್ಳುತ್ತೇನೆ. ಮರ್ತ್ಯದ ಬಂಧನಗಳು ಕರಗಲಿ, ವಿಶಾಲವಾದ ಬ್ರಹ್ಮಾಂಡ ನನ್ನನ್ನು ತನ್ನ ಬಾಹುಗಳಲ್ಲಿ ಅಪ್ಪಿಕೊಳ್ಳಲಿ. ಆ ಮಹತ್ತರವಾದ ತಿಳಿಯದಿರುವ ಶಕ್ತಿಯ ಎದುರಿಗೆ ನಿರ್ಭಯವಾಗಿ ನಿಂತುಕೊಳ್ಳುವ ಯೋಗ ನನಗೆ ಉಂಟಾಗಲಿ" (ಅದೇ; ಪು.೩೧೬) ಎಂಬ ಠಾಗೂರರ ಪ್ರಾರ್ಥನೆ ಸಾವನ್ನು ಗೆಲ್ಲುವುದಕ್ಕೆ ಮಾನವನಿಗೆ ಪ್ರಕೃತಿ ಮಹಾಸಾಧಕ ಎಂಬ ಸತ್ಯಾಂಶ ಇಲ್ಲಿ ಸ್ಫುಟವಾಗಿದೆ. ಪ್ರಕೃತಿ ಆನಂದಮಯ ಈ ಜಗ ಹೃದಯ ಅಷ್ಟೆ ಅಲ್ಲ ಮಾನವನಿಗೆ ಆಧ್ಯಾತ್ಮಿಕ ಜೀವನದಲ್ಲಿ ನಂಟಾಗಬಲ್ಲದು ಎಂಬುದನ್ನು ಗೊರೂರರು ಈ ಮಾತುಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

"ಡಿ.ವಿ.ಜಿ.ಯವರು ರಾಮಸ್ವಾಮಿ ಅಯ್ಯಂಗಾರರ ಬಿಂಬಗ್ರಾಯಿಯಂತ್ರವು ಮಸಕು ಹೀಗೆಯೇ - ಮಸಕು ಮುರುಕುಗಳಿಲ್ಲದೆ, ಆತುರ ಕಾತುರತೆಗಳಿಲ್ಲದೆ ಕೆಲಸ ಮಾಡುತ್ತಿರಲಿ. ನಮ್ಮ ಜನರ ಮನಸ್ಸಿನ ಉಲ್ಲಾಸಕ್ಕೂ ಆತ್ಮವಿಮರ್ಶೆಯ ತಿಳಿನಗೆಗೂ ಅನುಕೂಲ ಮಾಡಲಿ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.vii ಮುನ್ನುಡಿಯಿಂದ) ಎಂದು ಗೊರೂರವರ ವ್ಯಕ್ತಿತ್ವವನ್ನು ಕಂಡು ಡಿ.ವಿ.ಜಿ. ಮುನ್ನುಡಿಯಲ್ಲಿ ನುಡಿಯುತ್ತಾರೆ. ಪ್ರಕೃತಿ ಪರವಾದ ಕತೆ, ಪ್ರಬಂಧಗಳಲ್ಲಿ ಗೊರೂರರ ಭಾವನೆಗಳು ಪುನರಾವರ್ತನೆಯಾದಾಗ ಈ ಪುನಾರಾವರ್ತನೆ ಓದುಗರ ಮರುಚಿಂತನೆಗೆ ಕಾರಣವಾಗಬಲ್ಲವು ಎಂಬುದನ್ನು ನಾವು ಮರೆಯಬಾರದು. "ಗೊರೂರು ಚಿಕ್ಕದಾದರೂ ಅದರಲ್ಲಿ ಪ್ರಕೃತಿಯ ಬಗೆಬಗೆಯ ಬೆಡಗುಗಳು ಅಡಕವಾಗಿವೆ. ನಮ್ಮೂರಿನ ರಸಿಕತೆಗೆ ಪ್ರಕೃತಿಯ ವಿಶೇಷ ಗುಣಗಳೆ ಪ್ರೇರಕ" (ಅದೇ;ಪು.೧) ಎಂಬ ಮಾತನ್ನು ಗೊರೂರವರು ಉದ್ದೇಶಪೂರ್ವಕವಾಗಿ ತಿಳಿಸಿದ್ದಾರೆ. ಈ ಮಾತು ಗೊರೂರರಂತಹ ಎಲ್ಲ ಪ್ರಕೃತಿ ಪ್ರೇಮಿಗಳಿಗೂ ಸ್ವಾನುಭವದಲ್ಲಿ ಮನವರಿಕೆ ಹಾಗೆಯೇ ಆಗುತ್ತದೆ. ಡಿ.ವಿ.ಜಿ.ಯವರು ಮೇಲೆ ಹೇಳಿರುವಂತೆ ಗೊರೂರವರ ಪ್ರತಿಭಾ ಬಿಂಬಗ್ರಾಯಿಯಂತ್ರ ಪ್ರಕೃತಿಯ ಹಲವು ಚಿತ್ರಗಳನ್ನು ಹಲವು ದೃಷ್ಟಿಕೋನದಲ್ಲಿ ಹಿಡಿಯಾಗಿ ಘಟಕ ಘಟಕವಾಗಿ ಸೂಕ್ಷ್ಮಾತಿ ಸೂಕ್ಷ್ಮವಾಗಿ ಸೆರೆಹಿಡಿದಿದೆ. "ನಮ್ಮೂರ ತೋಪುಗಳ ನಡುವೆ ಇರುವ ಊರನ್ನು ಯಾವುದರ ಮಧ್ಯದಲ್ಲಿ ಇದೆ ಎಂಬುದನ್ನು ಕಂಡುಹಿಡಿಯುವುದು ಕಷ್ಟವಾಗುತ್ತದೆ. ಆದರೆ ಮನೆಗಳಿಂದ ಹೊರಡುವ ಹೊಗೆ ನಮ್ಮೂರಿನ ಕೈಮರ". (ಅದೇ;) ಇಲ್ಲಿ ಮಲೆನಾಡಿನ ಸೊಬಗು ಸೂಕ್ಷ್ಮವಾಗಿ ಆದರೂ ಸ್ಪಷ್ಟವಾದ ರೀತಿಯಲ್ಲಿ ಆಗಿದೆ.

ಗೊರೂರವರು ಪ್ರಕೃತಿಯ ಸೌಂದರ್ಯವನ್ನು ವರ್ಣಿಸಿದಂತೆ ಅದರ ಇನ್ನೊಂದು ಮುಖವಾದ ಭೀಕರತೆಯನ್ನು ವರ್ಣಿಸಿದ್ದಾರೆ. ಅವರು ಹೊನ್ನೂರಿಗೆ ಅಕ್ಕನ ಮಗಳ ಮದುವೆಗೆ ಹರಿಗೋಲಿನಲ್ಲಿ ಹೋಗುವಾಗ ಪಡೆದ ಅನುಭವವನ್ನು 'ಹಳ್ಳಿಯ ಚಿತ್ರಗಳು' ಎಂಬ ಪ್ರಬಂಧ ಸಂಕಲನದಲ್ಲಿ ಸವಿಸ್ತಾರ ವಾಗಿ ವಿವರಿಸಿದ್ದಾರೆ. ಹರಿಗೋಲಿನ ಪ್ರಯಾಣ ಎಷ್ಟು ಭಯಂಕರ ಎಂಬುದು ಈ ಸಂದರ್ಭದಲ್ಲಿ ಸುವಿದಿತವಾಗುತ್ತದೆ. "ಭಯಂಕರವಾದ ಬಿರುಗಾಳಿ ಎದ್ದಿತು. ಕರಿಯ ಮೋಡವು ಆಕಾಶವನ್ನು ಭೂಮಿಯನ್ನು ಒಂದು ಮಾಡಿ, ಮಧ್ಯಾಹ್ನವೇ ರಾತ್ರಿಯಂತೆ ತೋರಿತು. ಮೋಡಗಳು ಕ್ರೂರವಾದ

ಧ್ವನಿಯಿಂದ ಗುಡುಗುತ್ತಿದ್ದವು. ಈಶಾನ್ಯ ದಿಕ್ಕಿನಲ್ಲಿ ಮಿಂಚು ಸಹಸ್ರ ನಾಲಗೆಯ ಹಾವುಗಳಂತೆ ಮೋಡವನ್ನು ಕಚ್ಚುತ್ತಿದ್ದಿತು. ಸಿಡಿಲು ಪ್ರಳಯ ಕಾಲದ ಸಿಡಿಲಿಗೆಣೆಯಾಗಿದ್ದಿತು. ಮೃತ್ಯುವು ಅಸಂಖ್ಯಾತವಾದ ಬಾಯಿಗಳಿಂದ ನಮ್ಮನ್ನು ನುಂಗುವುದಕ್ಕೆ ಬರುತ್ತಿರುವಂತೆ ತೋರಿತು. ನಮ್ಮ ಹರಿಗೋಲು ಅಲೆಗಳಿಗೂ ಸುಳಿಗಳಿಗೂ ಸಿಕ್ಕಿ ಬುಗುರಿಯಂತೆ ಗಿರಗಿರನೆ ತಿರುಗುತ್ತಿದ್ದಿತು. ಸುತ್ತಲೂ ಆಕಾಶವು ಭರಣಿಯ ಮುಚ್ಚಳ ದಂತೆ ನಮ್ಮ ಮೇಲೆ ಕವಿದುಕೊಂಡು, ನಾವು ನದಿಯ ಮೇಲೆ ಸೆರೆಯಾಳುಗಳಾದಂತೆ ತೋರುತ್ತಿದ್ದಿತು. ಮಂತ್ರದಿಂದ ಮುಗ್ಧರಾದವರಂತೆ ಅಂಬಿಗರು ಹುಟ್ಟೆಯನ್ನು ಹರಿಗೋಲಿನಲ್ಲಿಟ್ಟು ನಿರಾಶರಾಗಿ ನಿಂತುಬಿಟ್ಟರು. ಹರಿಗೋಲು ವಾಯುವೇಗದಿಂದ ಬಂಡೆಯ ಕಡೆಗೆ ಹೊರಟಿತು. ತಾವು ಅಪಾಯದಿಂದ ದೂರವಾಗಿದ್ದಿದ್ದರೆ, ಪ್ರಕೃತಿಯ ಅದೊಂದು ಬೆಡಗಿನ ಕೌರ್ಯಮುದ್ರೆಯ ಆ ಆನಂದವನ್ನು ನಾವು ಅನುಭವಿಸಬಹುದಾಗಿದ್ದಿತು. ಕಣ್ಣಿಗೆ ಕಾಣುವವರೆಗೆ ಕೆಂಪಾದ ನೀರು, ನೋಡುವುದಕ್ಕೆ ಅವ್ಯವಸ್ಥಿತವಾಗಿ ತೋರುತ್ತಿದ್ದರೂ ಕ್ರಮವರಿತು ನೆಗೆಯುತ್ತಿದ್ದ ಅಲೆಗಳ ಒಟ್ಟು ಗರ್ಜನೆಯಿಂದ ಹೊರಡುತ್ತಿದ್ದ ಒಂದು ಬಗೆಯ ಗಾನ; ರಾಶಿ ರಾಶಿಯಾಗಿ ತೇಲಿ ಹೋಗುತ್ತಿದ್ದ ಬಿಳಿಯ ನೊರೆಯ ಗುಂಪುಗಳು; ಕಣ್ಣಿಗೆ ತೋರುವವರೆಗೆ ಒಂದೇ ಸಮನಾಗಿ ಹರಿಯುತ್ತಾ ಸಮುದ್ರದ ಜ್ಞಾಪಕವನ್ನು ತರುತ್ತಿದ್ದ ನದಿಯ ನೀರಿನ ರಾಶಿ ಇವುಗಳೆಲ್ಲ ಉಳಿದ ವೇಳೆಯಲ್ಲಾದರೆ ನಮಗೆ ಅತ್ಯಂತ ಆನಂದವನ್ನೇ ಕೊಡುತ್ತಿದ್ದವು. ಆದರೆ ಈಗ ಅವುಗಳನ್ನು ಕುರಿತು ಯೋಚಿಸುವುದು, ಮರಣ ದಂಡನೆಗೆ ಗುರಿ ಮಾಡಲ್ಪಟ್ಟವನು ತನ್ನ ಆಯುಷ್ಯದ ವಿಷಯದಲ್ಲಿ ಜ್ಯೋತಿಷ್ಯವನ್ನು ಕೇಳಿದಂತೆಯೇ ಆಗುತ್ತಿದ್ದಿತು. ಮುಂದಲ ಅಪಾಯದ ಗಾಬರಿಯಿಂದ ನಾವು ಅರ್ಧ ಸತ್ತವರಾಗಿದ್ದೆವು. ನದಿಯ ನೀರು ಮಹಾಕಾಳಿಯು ಈಜುತ್ತಿದ್ದ ತಳವಿಲ್ಲದ ರಕ್ತದ ಸಮುದ್ರದಂತೆ ತೋರಿತು. ಅಲೆಗಳ ಕುಣಿತವು ಪ್ರಳಯ ಕಾಲದ ಈಶ್ವರನ ನಾಟ್ಯದಂತೆ ಕಂಡಿತು. ನಾವು ಕುಳಿತಿದ್ದ ಹರಿಗೋಲೇ ನಮ್ಮನ್ನು ಕೃತಾಂತನ ಊಳಿಗಕ್ಕೆ ಸಾಗಿಸುವ ವಾಹಕವಾಗಿತ್ತು. ಆದದ್ದಾಯಿತು, ದೇವರೇ ಗತಿ ಎಂದು ನಾವು ನಿರಾಶರಾಗಿ ಬಂದದ್ದನ್ನು ಅನುಭವಿಸಲು ಸಿದ್ಧರಾದೆವು. ....

ಒಮ್ಮಿಂದೊಮ್ಮೆ ಅಂಬಿಗರು ಹೊಹೊ ಎಂದರು. ಅವರ ಮುಖದಲ್ಲಿ ಪೂರ್ಣವಾದ ನಿರಾಶೆಯೂ ಗಾಬರಿಯೂ ತೋರಿತು. ಎಲ್ಲರೂ ನದಿಯ ಮೇಲುಗಡೆಗೆ ನೋಡಲು ಪ್ರಾರಂಭಿಸಿದೆವು. ನಾವಲ್ಲಿ ಕಂಡುದು ನಮ್ಮ ದೇಹದ ರಕ್ತವನ್ನು ತಣ್ಣಗೆ ಮಾಡಿತು, ನಾಲಗೆಯು ಒಣಗಿ ಹೋಯಿತು. ಮುಖದ ಕಾಂತಿಯು ಹೀನವಾಯಿತು. ಯಮನು ಭಯಂಕರವಾದ ನೂರಾರು ಕೊಂಬೆಗಳ ಮರದ ರೂಪವನ್ನು ಧರಿಸಿ ನಮ್ಮ ಕಡೆಗೆ ಧಾವಿಸಿ ಬರುತ್ತಿದ್ದನು. ಆ ಮರವು ನದಿಯ ಒಂದು ದಡದಿಂದ ಮತ್ತೊಂದು ದಡದವರೆಗೆ ವ್ಯಾಪಿಸಿದಂತೆ ಕಂಡಿತು. ಅದಕ್ಕೇನಾದರೂ ಹರಿಗೋಲು ಸಿಕ್ಕಿಬಿಟ್ಟರೆ, ತಲೆ ಕೆಳಗಾಗಿ ನಾವೆಲ್ಲರೂ ನೀರಿನ ಪಾಲಾಗುವುದರಲ್ಲಿ ಸಂದೇಹವಿರಲಿಲ್ಲ. ಮರದಿಂದ ತಪ್ಪಿಸಿಕೊಂಡು ಹರಿಗೋಲನ್ನು ಬೇರೆ ಕಡೆಗೆ ತಿರುಗಿಸಬಹುದೆಂಬ ನಂಬಿಕೆಯು ಅಂಬಿಗರಲ್ಲಿ ಯಾರಿಗೂ ಇರಲಿಲ್ಲ. ಹರಿಗೋಲು ಅವರ ಸ್ವಾಧೀನ ತಪ್ಪಿ ಹೋಗಿದ್ದಿತು. ನಮ್ಮ ಪಾಪಕರ್ಮವೇ ಮೂರ್ತಿವೆತ್ತಂತೆ ಮರವು

ಹರಿಗೋಲಿಗಿಂತಲೂ, ಅಲ್ಲ ಮಿಂಚಿಗಿಂತಲೂ ವೇಗವಾಗಿ ಬರುತ್ತಿದ್ದಿತು. ನಾವೆಲ್ಲರೂ ಯಮನ ಲೋಕಕ್ಕೆ ಟಿಕೆಟ್ ಪಡೆದುಕೊಂಡು ಆಗಿದ್ದಿತು. ಟ್ರೇನು ಹತ್ತುವುದು ಮಾತ್ರ ಬಾಕಿ; ಟ್ರೇನೂ ಎದುರಿಗೆ ಬರುತ್ತಿದೆ ಎಂದು ಕೊಂಡೆವು. ನಮ್ಮ ಮುದುಕರು, "ನೀರಿನಲ್ಲಿ ಸತ್ತವರಿಗೆ ಕರ್ಮಾಂತರವಿಲ್ಲ; ಮೋಕ್ಷವಿಲ್ಲ. ಅಂತರ್‌ಪಿಶಾಚಿಯಾಗಿ ಅಲೆಯುತ್ತಿರಬೇಕು. ಮದುವೆಗೆ ಬಂದು ದುರ್ಮರಣವನ್ನು ಕಂಡಂತೆ ಆಯಿತು" ಎಂದು ನಿಟ್ಟುಸಿರು ಬಿಟ್ಟರು. ....

ಅಂಬಿಗರಲ್ಲೊಬ್ಬನು "ಹುಟ್ಟೆ ಹಾಕಿ ನೋಡೋಣ ಕಾವೇರಿ ತಾಯಿಯ ದಯೆ" ಎಂದನು. ವಿದ್ಯುತ್ ದೇಹದಲ್ಲಿ ಪ್ರವಹಿಸಿದಂತೆ ಅಂಬಿಗರೆಲ್ಲರೂ ಹುಟ್ಟೆಗಳನ್ನು ಕೈಗೆ ತೆಗೆದುಕೊಂಡರು. ಮರವು ಯಾವ ನೇರದಲ್ಲಿ ಬರುವುದೆಂಬುದನ್ನು ಹೇಳಲು ಸಾಧ್ಯವಿರಲಿಲ್ಲ. ಪ್ರವಾಹದ ವೇಗದಿಂದ ಅದು ಒಂದು ಸಲ ಈ ಕಡೆಗೂ ಮತ್ತೊಂದು ಸಲ ಆ ಕಡೆಗೂ ತಿರುಗುತ್ತಿತ್ತು. ಅಂಬಿಗರು ಹರಿಗೋಲನ್ನು ಒಂದು ಕಡೆಗೆ ನಡೆಸಿದರು. ಮರವು ನಮ್ಮ ಕಡೆಗೆ ಬರುತ್ತಿರುವುದನ್ನು ಕಂಡು ನಾವೆಲ್ಲರೂ ಎದುರಿಗೆ ಬರುತ್ತಿರುವ ಮೃತ್ಯುವನ್ನು ಎದುರುಗೊಳ್ಳಲಾರದೆ ಕಣ್ಣನ್ನು ಮುಚ್ಚಿದೆವು. ಮರದ ಒಂದು ಕೊಂಬೆಯ ತುದಿಯು ಹರಿಗೋಲಿಗೆ ತಗುಲಿತು. ಒಮ್ಮಿಂದೊಮ್ಮೆ ಹರಿಗೋಲು ಗಿರ್ರೆಂದು ತಿರುಗಿತು. ನಾವೆಲ್ಲರೂ ಹರಿಗೋಲಿನಲ್ಲಿ ಸೋರೆಯ ಬುರುಡೆಗಳಂತೆ ಉರುಳಾಡಿದೆವು. ಅಂಬಿಗರು 'ಕಾವೇರಿ ತಾಯಿಯು ಈ ಸಲ ಕಾಪಾಡಿದಳು' ಎಂದರು. ಸಾಯುವುದಕ್ಕಾಗಿ ಕಣ್ಣನ್ನು ಮುಚ್ಚಿದ್ದ ನಾನು, ಯಮಲೋಕದಿಂದ ಹಿಂದಿರುಗಿ ಬಂದವನಂತೆ ಕಣ್ಣನ್ನು ಬಿಟ್ಟೆ. ದೂರದಲ್ಲಿದ್ದ ಮರವು ದೊಡ್ಡ ಭೂತದಂತೆ ತೇಲಿ ಹೋಗುತ್ತಿದ್ದಿತು". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೧೭-೧೯) ಅಂಬಿಗರ ಸಾಹಸದ ಪ್ರವೃತ್ತಿ ಪ್ರಯಾಣಿಕರ ಮನಸ್ಸಿನ ತಳಮಳ ಈ ಭಾಗದ ವರ್ಣನೆಯಲ್ಲಿ ಯಥಾವತ್ತಾಗಿ ಮೂಡಿಬಂದಿದೆ. ಈ ಸ್ವಾನುಭವದ ವರ್ಣನೆ ಓದುಗನಲ್ಲಿಯೂ ತತ್ಸಮನಾದ ತಳಮಳವನ್ನು ಮೂಡಿಸದೆ ಇರದು. ಕ್ಷಣಕ್ಷಣದ ಅನುಭವವನ್ನು ಹಿಡಿದಿಡುವುದರಲ್ಲಿ ಗೊರೂರರ ನೈಪುಣ್ಯ ಮೆಚ್ಚುವಂತಹುದಾಗಿದೆ. ಪ್ರಕೃತಿಯ ಎಲ್ಲ ಅನುಭವವು ಈ ಗುಣದಿಂದಲೇ ಗೊರೂರವರ ಕೃತಿಯಲ್ಲಿ ರಮ್ಯ ಎನಿಸುತ್ತದೆ.

ಅಕ್ಕನ ಮಗಳ ಮದುವೆಗೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಗೊರೂರವರಿಗೆ ಬನ್ನೂರಿನ ಪರಿಸರದಲ್ಲಿ ಕಂಡ ಪ್ರಕೃತಿ ಮಂತ್ರಮುಗ್ಧವಾಗಿತ್ತು. ಇದರ ವರ್ಣನೆಯ ರೀತಿ ಹೀಗಿದೆ. "ಬನ್ನೂರು ಬಹಳ ಚೆಲುವಾಗಿದೆ. ಊರಿನ ಸುತ್ತಲೂ ರಸ್ತೆಯ ಎರಡು ಪಾರ್ಶ್ವಗಳಲ್ಲಿಯೂ ಕಬ್ಬಿನ ಮತ್ತು ಭತ್ತದ ಪೈರಿನ ಗದ್ದೆಗಳು; ತುಂಬಿದ ನೀರಿನ ಕಾಲುವೆ; ಹಸಿರು ಬಟ್ಟೆಯನ್ನು ಹಾಸಿದಂತೆ ಗರಿಕೆ ಬೆಳೆದ ನೆಲ; ಮತ್ತೊಂದು ಕಡೆ ರಾಗಿಯ ಹೊಲಗಳು; ಪ್ರಕೃತಿಯ ಕೈಯಿಂದ ಚಿತ್ರಿತವಾದ ಆ ಸುಂದರ ದೃಶ್ಯವನ್ನು ಕಂಡು ನನ್ನ ಬೇಸರಿಕೆಯಲ್ಲಾ ಮಾಯವಾಯಿತು. ಆ ಸೌಂದರ್ಯವನ್ನು ಕಂಡು ಮುಗ್ಧರಾಗಿ ಅದರಿಂದ ಉನ್ನತಿಗೆ ಏರದವರಾರು?" (ಅದೇ;ಪು.೪) ಎಂಬ ಗೊರೂರರ ಪ್ರಶ್ನೆಗೆ ಯಾರು ವಿರುದ್ಧ ಉತ್ತರವನ್ನು

ನೀಡಲಾರರು. ಪ್ರಕೃತಿ ಮಾನವನನ್ನು ಉನ್ನತ ಸ್ಥಿತಿಗೆ ತರುತ್ತದೆ, ಏರಿಸುತ್ತದೆ ಎಂಬುದು ಗೊರೂರರ ಅಭಿಮತ.

ಶಿವಳ್ಳಿಯಲ್ಲಿ ನಡೆಯುವ ಮದುವೆಗೆ ಮೇಲುಕೋಟೆಯ ಗುಂಡ ಮತ್ತು ಗೊರೂರರವರು ಪ್ರಯಾಣ ಮಾಡಿದಾಗ ಮಧ್ಯೆ ಬೇಲೂರಿನಲ್ಲಿ ಕಂಡ ನಿಸರ್ಗದ ಸೊಬಗನ್ನು, ಬೇಲೂರಿನ ದೇವಲಾಯದ ಸೊಬಗನ್ನು ಗೊರೂರರವರು ವರ್ಣಿಸುವಾಗ ಆಡುವ ಮಾತು ನಾವು ದಾರಿಯಲ್ಲಿ ಕಂಡ ದೃಶ್ಯಗಳ ಸೊಬಗನ್ನು ನನ್ನ ಈ ಬಡಲೇಖನಿಯು ವರ್ಣಿಸಬಲ್ಲುದೆ? ಎಂಬ ಪ್ರಶ್ನೆಯೊಂದಿಗೆ ಲೇಖಕರು ವರ್ಣನೆಯನ್ನು ಪ್ರಾರಂಭಿಸುತ್ತಾರೆ. "ಮಲೆನಾಡೆಂಬ ಒಂದೇ ಪದದಲ್ಲಿ ಪ್ರಕೃತಿಯ ಸಮಸ್ತ ಸೌಂದರ್ಯವು ಅಡಕವಾಗಿದೆ ಎಂಬುದನ್ನು ನಾವು ತಿಳಿಯಬೇಕು. ನಾನು ಹೋಗುತ್ತಿದ್ದ ರಸ್ತೆಯ ಉದ್ದಕ್ಕೂ ಹಸುರಾದ ಮರಗಳು ಸಾಲಿಟ್ಟಿದ್ದವು. ಭೂದೇವಿಯ ಕಾಂತಿಯು ದೂರಕ್ಕೆ ಚೆಲ್ಲಿ ತೋರುವಂತೆ ನೋಡಿದೆಡೆಯಲ್ಲಾ ಇಳೆಯು ಹಸುರಾಗಿದ್ದಿತು. ನೀರು ತುಂಬಿದ ಚಿಕ್ಕ ಕೊಳಗಳು ಮುತ್ತಿನ ಮಣಿಗಳಂತೆ ತೋರುತ್ತಿದ್ದವು. ಅಲ್ಲದೆ ಚಿಕ್ಕ ದೊಡ್ಡ ಬೆಟ್ಟ ಗುಡ್ಡಗಳು ಎದ್ದು ಕಾಣುತ್ತಿದ್ದವು. ಮಳೆಯ ನೀರು ಅವುಗಳ ಮೇಲಿಂದ ಕೆಳಕ್ಕೆ ಉರುಳಿ, ಕಲ್ಲುಗಳೊಡನೆ ಆಟವಾಡುತ್ತಾ ಜುಳು ಜುಳು ರವದಿಂದ ಹರಿಯುತ್ತಿದ್ದಿತು. ನಾವು ಹೊರಟ ದಿವಸ ಮಳೆ ಇರಲಿಲ್ಲ. ಸೂರ್ಯನು ಚೆನ್ನಾಗಿಯೇ ಪ್ರಕಾಶಿಸುತ್ತಿದ್ದನು. ಅವನ ಕಿರಣಗಳು ಬೆಟ್ಟದ ತುದಿಯನ್ನು ಮುತ್ತಿಡುತ್ತಿದ್ದವು; ಮರದ ಎಲೆಗಳೊಡನೆ ಮಾತನಾಡುತ್ತಿದ್ದವು. ತುಂಬಿದ ಕೊಳದ ಅಲೆಗಳೊಂದಿಗೆ ಕುಣಿದಾಡುತ್ತಿದ್ದವು. ಮೊದಲ ದಿವಸ ಮಳೆಯ ಮೋಡದ ದೆಸೆಯಿಂದ ಸೂರ್ಯನು ಕಣ್ಣಿಗೆ ಕಂಡಿರಲಿಲ್ಲ. ಈ ದಿವಸ ಬಿಸಿಲು ಸುಖವಾಗಿ ಭೂಮಿಯ ಮೇಲೆ ಒರಗಿದುದನ್ನು ಕಂಡು ಹಕ್ಕಿಗಳು ಆನಂದದಿಂದ ಗಾನ ಮಾಡುತ್ತಿದ್ದವು". (ಅದೇ; ಪು.೨೭) ಪ್ರಕೃತಿಯ ಆರಾಧಕರು ಸಮರ್ಥ ಲೇಖಕರು ಆದ ಗೊರೂರರವರಿಗೆ ಅನೇಕ ಸಂದರ್ಭಗಳಲ್ಲಿ ಪ್ರಕೃತಿಯ ಸೊಬಗನ್ನು ವರ್ಣಿಸುವಾಗ ಮಾತು ಬರಡಾಗಿ ಸೋಲಿನ ಅನುಭವ ಆಗಿರುವುದುಂಟು. ಬೇಲೂರಿನ ಪರಿಸರದಲ್ಲಿಯೂ ಇದೇ ಅನುಭವ ತಮಗೆ ಆಗುತ್ತದೆ ಎಂದು ಗೊರೂರರವರು ನಿಸ್ಸಂಕೋಚವಾಗಿ ಹೇಳುತ್ತಿದ್ದಾರೆ. ನಿಸರ್ಗದ ದಿವ್ಯ ಸೊಬಗು ಅವರ್ಣನೀಯ ಎಂಬ ಸತ್ಯ ಇಲ್ಲಿ ಸ್ಪಷ್ಟವಾಗುತ್ತದೆ. ಅಮರಶಿಲ್ಪಿ ಜಕಣಾಚಾರ್ಯ ನಿರ್ಮಿಸಿದ ಬೇಲೂರಿನ ದೇವಾಲಯದ ಶಿಲ್ಪ ಕಲಾವೈಭವವನ್ನು ವರ್ಣಿಸುವ ಗೊರೂರರವರ ರೀತಿ ಅದ್ಭುತವಾಗಿದೆ. ಸೌಂದರ್ಯ ದೃಷ್ಟಿ ಇರುವ ವ್ಯಕ್ತಿಗೆ ಪ್ರಕೃತಿಯಲ್ಲಿ ರಮ್ಯತೆ ಕಾಣುವಂತೆ ಶಿಲೆಯಲ್ಲಿಯೂ ಸೊಬಗು ಕಾಣಿಸುವುದು ಸಹಜ ಎಂಬ ಸತ್ಯಾಂಶ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ.

"ಹೆಸರನ್ನು ಕೇಳಿದೊಡನೆಯೇ ಮೈ ಪುಳಕಿತವಾಗುವಾಗ ಬೇಲೂರಿನ ದೇವಾಲಯದ ಎದುರಿಗೆ ಇದ್ದರೆ ಆನಂದದ ಅನುಭವ ಕೇಳಬೇಕೆ? ಪ್ರಾಕಾರದ ಕಲೆಯ ದಿವ್ಯರಾಶಿಯನ್ನು ನೋಡಿ ಮುಗ್ಧರಾದೆವು, ಮೂಕರಾದೆವು. ಯಾವ ಕಡೆ ಮೊದಲು ನೋಡಬೇಕು, ಯಾವ ಕಡೆ ಆಮೇಲೆ ನೋಡಬೇಕು ಎಂಬುದೇ

ನಮಗೆ ತಿಳಿಯಲಿಲ್ಲ - ಬಗೆಬಗೆಯ ತಿಂಡಿಗಳು ಎದುರಿಗೆ ಇರುವಾಗ ಯಾವುದನ್ನು ಮೊದಲು ತಿನ್ನಬೇಕೆಂದು ತಿಳಿಯದಿರುವ ಹುಡುಗನಂತೆ ದೇವಸ್ಥಾನವನ್ನು ಮೊದಲು ಒಂದು ಸುತ್ತ ತಿರುಗಿದೆವು. ಅದರಿಂದ ತೃಪ್ತರಾಗದೆ ಎರಡನೆ ಸಲ ಮತ್ತೆ ಯಾತ್ರೆಯನ್ನು ಪ್ರಾರಂಭಿಸಿದೆವು. ದೇವಸ್ಥಾನದ ಎರಡನೆ ಕಡೆಯ ಸುಂದರವಾಗಿ ಚಿತ್ರಿತವಾದ ಹೊಯ್ಸಳ ವಿಗ್ರಹಗಳು; ಒಳಗಡೆ ನವರಂಗ, ಅದರ ಸುತ್ತಲೂ ಗದ್ದುಗೆ; ಒಂದೇ ಸಮನಾಗಿ ತೋರಿದರೂ ಬೇರೆ ಬೇರೆಯಾದ ಕಲೆಯ ಬೆಡಗನ್ನುಳ್ಳ ಚಿತ್ರದ ಕಂಬಗಳು; ಕಡೆದ ಕಂಬಗಳಂತೆ ಬಗೆ ಬಗೆಯ ದುಂಡುಗಳಿಂದಲೇ ಅವು ನಿರ್ಮಿತವಾಗಿವೆ; ಸುಂದರವಾದ ಕೆತ್ತನೆಯ ಕೆಲಸದ ನೃಸಿಂಹ ಸ್ತಂಭ; ಅದರಲ್ಲಿರುವ ತ್ರಿಮೂರ್ತಿಗಳ ನಾನಾ ಅವತಾರದ ಚಿತ್ರಗಳು. ಬಳಿಯಲ್ಲಿರುವ ಗರುಡ, ವಿನತೆಯರ ಕಂಭ, ನವರಂಗದ ಹೊರಭಾಗದಲ್ಲಿ ಅಡಿಪಾಯದಿಂದ ೫ ಅಡಿಯವರೆಗೆ ಕೆತ್ತಿರುವ ಬಗೆಬಗೆಯ ವಿಗ್ರಹಗಳು; ಆನೆ, ಕುದುರೆ, ರಥ, ಲತೆ ಮತ್ತು ಮಣಿ ತೋರಣಗಳು; ಸುಂದರಿಯೊಬ್ಬಳು ಮನವೊಪ್ಪುವಂತೆ ಅಲಂಕಾರ ಮಾಡಿಕೊಂಡು ಬಳಿಯಲ್ಲಿರುವ ಕನ್ನಡಿಯಲ್ಲಿ ತನ್ನ ಮುಂಗುರುಳನ್ನು ಚೆಂದುಟಿಯನ್ನು ಹೊಳೆಯುವ ಕಣ್ಣುಗಳನ್ನು ನೋಡುತ್ತಿರುವಳು. ನರ್ತನದಲ್ಲಿ ಮನಸ್ಸು ಲೀನವಾದ ಬೇಡತಿಯ ಉಡುಪಿನ ಸೆರಗನ್ನು ಕಪಿಯೊಂದು ಹಿಡಿದು ಎಳೆಯುತ್ತಿರುವುದು. ಯೌವ್ವನ ಸ್ತ್ರೀಯೊಬ್ಬಳು ಚಿಗುರಿಗೆ ಸಮಾನವಾದ ತನ್ನ ಕರಗಳಲ್ಲಿ ತಾಂಬೂಲವನ್ನು ಹಿಡಿದು, ಮತ್ತೊಂದು ನಳಿ ತೋಳಿನ ಮೇಲೆ ಗಿಳಿಯನ್ನು ಕುಳ್ಳರಿಸಿಕೊಂಡು ಆಡಿಸುತ್ತಿರುವಳು. ಲಲನೆಯೊಬ್ಬಳು ತಾಳವನ್ನು ಹಾಕುತ್ತಿರುವಳು. ಚೆಲುವೆಯೊಬ್ಬಳು ಮೃದಂಗವನ್ನು ಬಾರಿಸುತ್ತಿರುವಳು. ಒಬ್ಬ ಲಲನಾಮಣಿಯು ರೀವಿಯಿಂದ ಬಾಣವನ್ನು ಪ್ರಯೋಗಿಸುವ ಸಾಹಸದಲ್ಲಿ ತೊಡಗಿರುವಳು. ಕಲಾ ಕೋವಿದೆಯೊಬ್ಬಳು ವೇಣುವಾದನ ಮಾಡುತ್ತಿರುವಳು. ಒಬ್ಬ ಸರಸಿಯು ಪ್ರಿಯನಲ್ಲಿ ಪ್ರಣಯ ಕೋಪವನ್ನು ನಟಿಸುತ್ತಿರುವಳು. ....

ನಮಗಂತೂ ಆ ವನಿತೆಯರ ಗಾನವು ಕೇಳುತ್ತಿದೆಯೋ ಎಂದು ಭಾಸವಾಯಿತು. ಅವರೆದುರಿಗೆ ನಿಂತಾಗ ಅವರು ನಮ್ಮನ್ನು ನೋಡಿ ನಗುವಂತೆ ತೋರಿತು. ದೇವಸ್ಥಾನದ ಯಾವ ಭಾಗವು ಮನುಷ್ಯ ನಿರ್ಮಿತವಾಗಿದ್ದಂತೆ ತೋರಲಿಲ್ಲ. ಅದು ದೇವಲೋಕದಲ್ಲಿ ರತಿಯ ಎದುರಿಗೆ ಅವಳ ಊಹೆಯಿಂದ ನಿರ್ಮಿತವಾಗಿ ಇಲ್ಲಿಗೆ ತಂದು ಇಡಲ್ಪಟ್ಟ ಕಲೆಯ ನೆಲೆಯಂತೆ ತೋರಿತು". (ಅದೇ; ಪು.೨೭-೨೯) ಶಿಲ್ಪ ಲೇಖಕನ ಪಾಲಿಗೆ ನಿರ್ಜೀವವಾಗಿ ಉಳಿಯದೆ ಚೈತನ್ಯ ಮೂರ್ತಿಯಾಗಿ ರೂಪತಾಳಿದೆ ಎಂದು ಭಾಸ ಆಗುವಂತೆ ಗೊರೂರವರು ಕಲಾ ವೈಭವವನ್ನು ವರ್ಣಿಸಿರುವ ರೀತಿ ಅತ್ಯಂತ ಹೃದಯಂಗಮವಾಗಿದೆ. ಕಲೆಯ ಎದುರಿನಲ್ಲಿ ಮಾತು ಮೌನವಾದಾಗ ಕಲೆಯ ಸೌಂದರ್ಯ ವರ್ಧಿಸುತ್ತದೆ ಎಂಬ ಸತ್ಯಾಂಶವನ್ನು ಗುಂಡ ಲೇಖಕರಿಗೆ ನೆನಪು ಮಾಡಿಕೊಟ್ಟು ಕಲೆಯ ವೈಭವವನ್ನು ಮತ್ತಷ್ಟು ದ್ವಿಗುಣಗೊಳಿಸಿದ್ದಾರೆ. ಬೇಲೂರಿನ ಶಿಲಾವೈಭವ ಗೊರೂರರ ಶಬ್ದ ರೂಪದಲ್ಲಿ ಯಥಾವತ್ತಾಗಿ ಅಚ್ಚೊತ್ತಿರುವುದು ನಮಗೆ ವಿಸ್ಮಯವಾಗಿ ಕಂಡುಬಂದರು ಮನೋಹರವಾಗಿದೆ.

ಇದೇ ಕೃತಿಯಲ್ಲಿ ಸೂರ್ಯಾಸ್ತದ ಸುಂದರ ವರ್ಣನೆ ನಮಗೆ ಕಂಡುಬರುತ್ತದೆ. ಉತ್ಸಾಹದಿಂದ ಈಜಲು ಹೋದ ಯುವಕರಿಗೆ ಸೂರ್ಯಾಸ್ತದ ಸೊಬಗು ಮತ್ತಷ್ಟು ಉತ್ಸಾಹವನ್ನು ತುಂಬಿತು. "ಸೂರ್ಯನು ಮುಳುಗುವುದರಲ್ಲಿದ್ದನು. ಅವನ ಹೊನ್ನಿನ ಕಿರಣವು ಬೆಟ್ಟದ ತುದಿಯಲ್ಲಿಯೂ, ಮರಗಳ ಎಲೆಗಳ ಅಂಚಿನಲ್ಲಿಯೂ, ಹೋಗಲೋ ಬೇಡವೋ ಎಂದು ಯೋಚಿಸುತ್ತಾ ನಿಂತಿದ್ದಿತು. ಸಂಧ್ಯಾಕಾಲಕ್ಕೆ ಸ್ವಭಾವವಾದ ಒಂದು ವಿಧವಾದ ಮೌನವೂ, ಶಾಂತಿಯೂ ಪ್ರಪಂಚವನ್ನೆಲ್ಲಾ ಆವರಿಸಿದ್ದಿತು. ಆ ಸಂಧ್ಯೆಯ ಗಾಂಭೀರ್ಯವನ್ನು ಭೇದಿಸಬಾರದೆಂದು, ಇರುಳು ಹೆಣ್ಣು ಮೆಲ್ಲಗೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತ ಬರುತ್ತಿರುವುದು ಕೇಳಿಸುವಂತಿದ್ದಿತು. ಬೆಳ್ಳ ಹಕ್ಕಿಗಳ ಸಾಲೊಂದು ಸಿಪಾಯಿಗಳೋಪಾದಿಯಲ್ಲಿ ನೇರವಾಗಿ ಪಶ್ಚಿಮದ ಕಡೆಗೆ ಹಾರುತ್ತಿದ್ದಿತು. ಕಾಳಿನಿಂದ ಬಗ್ಗಿದ ಪೈರಿನ ಮೇಲೆ ತಂಗಾಳಿ ಬೀಸಿದ ಕೂಡಲೇ, ಅದು ಆಚೆ ಈಚೆ ಬಗ್ಗಿ, ಮಧ್ಯದಲ್ಲೊಂದು ದಾರಿಯನ್ನು ಬಿಟ್ಟು, ಹೆದರಿ ಹೆದರಿ ಹೆಜ್ಜೆ ಇಕ್ಕುತ್ತಿರುವ ಇರುಳಿಗೆ ಸುಸ್ವಾಗತವನ್ನು ಮಾಡುವಂತೆ ತಲೆಯಲ್ಲಾಡಿಸುತ್ತಿದ್ದಿತು". (ಅದೇ; ಪು.೪೦) ಇಂತ ಪ್ರಕೃತಿಯ ರಮ್ಯತೆಯನ್ನು ಅಲಕ್ಷ್ಯ ಮಾಡಲು ಯಾರಿಗೂ ಸಾಧ್ಯವಿಲ್ಲ. ಪ್ರಕೃತಿ ಅಷ್ಟು ಪ್ರಭಾವಶಾಲಿ ಎಂಬ ಅಂಶವನ್ನು ಗೊರೂರರವರು ಇಲ್ಲಿ ಧ್ವನಿಪೂರ್ಣವಾಗಿ ತಿಳಿಸಿದ್ದಾರೆ. ಮಾನವನ ಅಂತರಂಗಕ್ಕೆ ಪ್ರಕೃತಿಯ ಸಂಬಂಧ ನಿತ್ಯ ಚೇತೋಹಾರಿ ಅಷ್ಟೇ ಅಲ್ಲದೆ ಚೈತನ್ಯದಾಯಿಯು ಆಗಿದೆ ಎಂಬ ಅಂಶವನ್ನು ಗೊರೂರರವರ ಪ್ರಕೃತಿ ವರ್ಣನೆಯಲ್ಲಿ ಮನವರಿಕೆ ಮಾಡಿಕೊಳ್ಳಬಹುದು.

ಇದೇ ಪ್ರಬಂಧ ಸಂಕಲನದಲ್ಲಿ ಜೋಡಿದಾರನು ಕೆರೆಯನ್ನು ದಾಟುವಾಗ ಕಂಡ ಸೂರ್ಯೋದಯದ ಸೊಬಗಿನ ವರ್ಣನೆ ಹೀಗಿದೆ. "ಅವರು ಹೊರಡುವ ವೇಳೆಗೆ ಸರಿಯಾಗಿ ಸೂರ್ಯನು ಉದಯಿಸಿ ಬರುತ್ತಿದ್ದನು. ಬೆಳಗಿನ ದೇವಿಯು, ತಳಿರಿನ ಕೈಯಲ್ಲಿ ಚಿನ್ನದ ಕುಕ್ಕೆಯನ್ನು ಹಿಡಿದುಕೊಂಡು ಅದರೊಳಗೆ ಪೂಜಾ ದ್ರವ್ಯವನ್ನು ತೆಗೆದುಕೊಂಡು ಪೂರ್ವ ದಿಕ್ಕಿನಿಂದ ಭೂಮಿಗೆ ಬರುತ್ತಿದ್ದಳು. ಇಬ್ಬನಿಯ ಹನಿಯು ಮುತ್ತಿಟ್ಟ ಮೊಗ್ಗುಗಳೆಲ್ಲಾ, ಆಗ ತಾನೆ ಅರಳುತ್ತಿದ್ದವು. ವಾಯುವು ಅವುಗಳ ಸುವಾಸನೆಯನ್ನು ಹೊತ್ತುಕೊಂಡು ಸಂಚಾರಕ್ಕೆ ಪ್ರಾರಂಭಿಸಿತ್ತು. ಹಕ್ಕಿಗಳು ಇಂಪಾದ ಗಾನದಲ್ಲಿ ಹಾಡುತ್ತಿದ್ದವು. ಪ್ರಾತಃಕಾಲವು ಮನಸ್ಸಿಗೆ ಉಲ್ಲಾಸವನ್ನು ಉತ್ಸಾಹವನ್ನು ಉಂಟು ಮಾಡುವುದಾಗಿದ್ದಿತು. ಜೋಡಿದಾರನು ಪ್ರಕೃತಿಯ ಅಂದಿನ ಆನಂದವನ್ನು ನೋಡುತ್ತಾ ಸುಮಾರು ಎರಡು ಗಂಟೆ ನಡೆದನು". (ಅದೇ; ಪು.೫೦) ಇಲ್ಲಿ ಪ್ರಕೃತಿಯ ಅಂದ ಜೋಡಿದಾರನಿಗೆ ನಡೆಯುವ ಶಕ್ತಿಯನ್ನು ಉತ್ಸಾಹವನ್ನು ತುಂಬಿಕೊಟ್ಟಿದೆ. ಪ್ರಕೃತಿ ಕವಿಯಾದ ಕುವೆಂಪುರವರು; 'ಆನಂದಮಯ ಈ ಜಗ ಹೃದಯ' ಎಂಬ ಕವನದಲ್ಲಿ "ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೊ" (ಶಿವಾರೆಡ್ಡಿ ಕೆ.ಸಿ. (ಸಂಯೋಜಕ ಸಂ); ೨೦೦೮; ಪು.೬೨೮) ಎಂದು ಆಡಿದ ಮಾತು ಈ ಸಂದರ್ಭದ ಹಿನ್ನೆಲೆಯಲ್ಲಿ ಸತ್ಯವೆನಿಸುತ್ತದೆ. ಬೇಂದ್ರೆಯವರ 'ಬೆಳಗು' ಕವನದ ಮಾತು "ಇದು ಬರಿ ಬೆಳಗಲ್ಲೋ ಅಣ್ಣಾ" (ವಾಮನಬೇಂದ್ರೆ(ಸಂ);೨೦೦೩;ಪು.೬೪) ಎಂಬ

ಉದ್ಗಾರದ ಮಾತು ಈ ಹಿನ್ನೆಲೆಯಲ್ಲಿ ನೈಜವೆನಿಸುತ್ತದೆ. ಬೆಳಕಿನ ಬೆಡಗಿನೊಂದಿಗೆ ಒಂದಾಗುವ ಮನಸ್ಸು ನಮ್ಮಲ್ಲಿ ಇದ್ದರೆ ಬೆಳಕಿನ ಸುಖ ಆನಂದ ನಮ್ಮ ಅನುಭವಕ್ಕೆ ಬರುತ್ತದೆ.

ಸೀತಾಲಕ್ಷ್ಮಿ ಸುಂದರ ರಾಜನ ಎದುರಿಗೆ ಪಿಟೀಲನ್ನು ನುಡಿಸುವುದಕ್ಕೆ ಪ್ರೇರಣೆ ಉತ್ಸಾಹ ತುಂಬಿ ಬಂದದ್ದು ಆಕೆ ನಿಸರ್ಗದ ಸೌಂದರ್ಯದಿಂದ ಪ್ರೇರಿತಳಾದಾಗ ಮಾತ್ರ ಎಂಬುದು 'ಊರ್ವಶಿ' ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಕಲೆಯಿಂದ ಕಲೆ ಉಳಿಯುತ್ತದೆ ಎಂಬ ಮಾತು ಎಷ್ಟು ಸತ್ಯವೋ ಕಲೆಯಿಂದ ಕಲೆ ಬೆಳೆಯುತ್ತದೆ ಎಂಬ ಮಾತೂ ಅಷ್ಟೇ ಸತ್ಯವೆನಿಸುತ್ತದೆ. ಕಲಾ ಪ್ರಪಂಚದ ಪ್ರಭಾವ ಎಷ್ಟೇ ವೈವಿಧ್ಯಪೂರ್ಣವಾಗಿದ್ದರು ಪರಿಣಾಮದಲ್ಲಿ ಒಂದೇ ಎಂಬ ನೈಜಾಂಶ ಇಲ್ಲಿ ವಿದಿತವಾಗಿದೆ. ಗಂಡನ ಎದುರಿಗೆ ಕುಳಿತ ಸೀತಾಲಕ್ಷ್ಮಿಗೆ ನಿಸರ್ಗದಲ್ಲಿ ಕಂಡ ಸೊಬಗು ಹೀಗಿತ್ತು. "ಸುತ್ತಲೂ ತಂಪನ್ನು ಹಚ್ಚ ಹಸಿರನ್ನು ಬೀರುತ್ತಿದ್ದ ಬಾಳೆ, ತೆಂಗು, ಅಡಿಕೆ ವೃಕ್ಷಗಳು, ವೀಳೆಯದೆಲೆಯ ಹಂಬುಗಳು, ಪುಷ್ಪಗಳ ಮತ್ತು ಅಡಿಕೆ ಹೊಂಬಾಳೆಯ ಸುಗಂಧವನ್ನು ಹೊತ್ತು ತೀಡುವ ನದಿಯ ಜಲಕಣಗಳಿಂದ ಆರ್ದ್ರವಾದ ತಂಗಾಳಿ, ಎಲ್ಲೆಲ್ಲೂ ಮಧ್ಯಾಹ್ನದ ಮೌನವಿದ್ದರೂ ಕತ್ತಲೆಯಲ್ಲಿ ಮಿಂಚಿನಂತೆ ಆ ಮೌನವನ್ನು ಕಲಕಿದ ಹಕ್ಕಿಗಳ ಹಾಡು; ಇಂತಹ ಒಂದು ಅನಂತವಾದ ಮೌನವಾದ ವಿಶಾಲ ಜಗತ್ತಿನಲ್ಲಿ ತಾವಿಬ್ಬರೇ ಇರುವಂತೆ ಸೀತಾಲಕ್ಷ್ಮಿಗೆ ಭಾಸವಾಗಿತ್ತು. ಹೇಮಾವತಿ ನದಿಯ ತುಂಬು ಪ್ರವಾಹದ ಅಗಲವಾದ ಪಾತ್ರದಲ್ಲಿ ನಡು ನೀರಿನಲ್ಲಿ ದೂರದಲ್ಲಿ ನೋಡಿದ್ದ ಎರಡು ಕೊಕ್ಕರೆಗಳ ಜ್ಞಾಪಕ ಅವಳಿಗೆ ಬಂದಿತು". (ಗೊರೂರು ರಾಮಸ್ವಾಮಿ ಅಯ್ಯಂಗಾರ; ೨೦೦೪; ಪು.೨೯) ಹೀಗೆ ಸೀತಾಲಕ್ಷ್ಮಿ ಅಂತರ್ಮುಖಿಯಾದಳು. ಮಾನವನ ಕಣ್ಣನ್ನು ತೆರೆಸುವ ನಿಸರ್ಗ ಮಾನವನನ್ನು ಅಂತರ್ಮುಖಿಯನ್ನಾಗಿಯು ಆಗಿಸುತ್ತದೆ ಎಂಬ ಮುಖ್ಯವಾದ ಅಂಶ ಇಲ್ಲಿ ಗಮನಾರ್ಹವಾದದ್ದು.

ಸೀತಾಲಕ್ಷ್ಮಿ ತೋಟದಲ್ಲಿ ಕಂಡ ಸಂಜೆಯ ವರ್ಣನೆ ಸೊಗಸಾಗಿದೆ. "ತೆಂಗು ಅಡಿಕೆ ವೃಕ್ಷಗಳ ನೆಳಲುಗಳು ಎಂದಿಗಿಂತಲೂ ನೀಳವಾಗಿ ಗದ್ದೆಯ ಬಯಲನ್ನೆಲ್ಲ ಆಕ್ರಮಿಸಿದಂತೆ ಬಿದ್ದಿದ್ದವು. ತೋಟದೊಳಗೆ ನೆರಳಾಗಿದ್ದರೂ ಸೂರ್ಯನ ಪ್ರಕಾಶ ಹೊರಗಡೆ ಇನ್ನು ಸ್ವಚ್ಛವಾಗಿ ಪ್ರಜ್ವಲಿಸುತ್ತಿತ್ತು. ಆ ಕಾಂತಿಯಲ್ಲಿ ತೋಟದ ಒಳಗಡೆಗೂ ಇದ್ದ ವ್ಯತ್ಯಾಸ ಎದ್ದು ಕಾಣುತ್ತಿತ್ತು. ತೋಟದೊಳಗೆ ಕಪ್ಪಾಗಿ ನೀಳವಾಗಿ ಆಳವಾಗಿ ಹಚ್ಚನೆಯ ಹಸುರಿನ ರತ್ನಗಂಬಳಿಯನ್ನು ಹಾಸಿದಂತೆ ತೋರುತ್ತಿತ್ತು. ತೋಟದ ಹೊರಗೆ ಹೊಂಬಣ್ಣದ ಗದ್ದೆ ಪೈರಿನ ಮೇಲೆ ಬಿದ್ದಿದ್ದ ಬಿಸಿಲು, ಬೆಳ್ಳಿಯ ಪರದೆಯ ಮೇಲೆ ರತ್ನ ಕೆಲಸವನ್ನು ಮಾಡಿದಂತೆ ಕಾಣುತ್ತಿತ್ತು. ಗರುಡ, ಗಿಡುಗ ಮುಂತಾದ ಪಕ್ಷಿಗಳು ಅತ್ಯಂತ ಎತ್ತರದಲ್ಲಿ ಹಾರುತ್ತಿದ್ದವು. ತೋಟದೊಳಗೆ ಗಾಳಿ ಮೆತ್ತಗೆ ಬೀಸುತ್ತಿತ್ತು. ಜೇನುಹುಳುಗಳು ಗುಂಪು ಗುಂಪಾಗಿ ಬಾಳೆಯನ್ನು ಮುತ್ತುತ್ತಿದ್ದವು. ಪ್ರಕೃತಿಯಲ್ಲಿ ಎಂದೂ ಇಲ್ಲದ ಒಂದು ಬಗೆಯ ಶಾಂತಿ ಅಲ್ಲಿ ಸೀತಾಲಕ್ಷ್ಮಿಗೆ ತೋರಿತು". (ಅದೇ; ಪು.೩೪) ನಿಸರ್ಗದಲ್ಲಿ ಕಂಡುಬರುವ ಸೊಗಸು ನಿತ್ಯ ಚಿರನೂತನ ಎಂಬುದಕ್ಕೆ ಅನುಗುಣವಾಗಿ ನಮ್ಮ

ಅನುಭವಕ್ಕೆ ಬಂದ ಅನುಭವಗಳು ನಮ್ಮ ಪಾಲಿಗೂ ಹೊಸತಾಗಿ ಭಾಸವಾಗುತ್ತದೆ ಎಂಬ ವಿಷಯ ಇಲ್ಲಿ ವೇದ್ಯವಾಗುತ್ತದೆ.

ಮಳೆಗಾಲದ ಸೌಂದರ್ಯ ವಿನೂತನವಾದದ್ದು. ಒಂದೊಂದು ಮಳೆಯಲ್ಲಿ ಒಂದೊಂದು ರೀತಿಯ ಸೊಬಗನ್ನು ಗುರುತಿಸಬಹುದು. ಸ್ವಾತಿ ಮಳೆಯ ಸೌಂರ್ದಯವನ್ನು ಸೀತಾಲಕ್ಷ್ಮಿ ಅನುಭವಿಸಿದ ರೀತಿ ಇಂತಿದೆ. "ಅದು ಸ್ವಾತಿಯ ಮಳೆಯ ಕಾಲ. ಇದ್ದಕ್ಕಿದ್ದಂತೆ ಮೋಡಗಳು ನೆತ್ತಿಯ ಮೇಲೆ ಒಟ್ಟಾಗ ತೊಡಗಿದವು. ಸೀತಾಲಕ್ಷ್ಮಿ ಮನೆಯನ್ನು ತಲುಪುವುದರೊಳಗಾಗಿಯೇ ಜೋರಾದ ಅಡ್ಡ ಮಳೆ ಬರುವ ಸೂಚನೆ ತೋರಿತು. ಮೊದಲೆ ಕತ್ತಲೆಯಾಗಿದ್ದ ತೋಟದ ಮೇಲೆ ಕರಿಯ ಮುಸುಕನ್ನು ಮುಚ್ಚಿದಂತಾಯಿತು. ಸ್ವಾತಿ ಮಳೆ ಯಾವಾಗಲೂ ಜೋರು. ಅದಕ್ಕೆ ಗುಡುಗು, ಮಿಂಚು ಹೆಚ್ಚು. ಮಳೆ ಇದ್ದಕ್ಕಿದ್ದಂತೆ ಪ್ರಾರಂಭವಾಗಿ ಒಳ್ಳೆ ಬಿರುಸಾಗಿ ಬಿದ್ದು ಅಂತರಿಕ್ಷ ತತ್‌ಕ್ಷಣ ಸ್ವಚ್ಛವಾಗಿ ಬಿಡುವುದು. ಆದರೆ ಮಳೆ ಹೊಡೆಯುತ್ತಿರುವಾಗ ಮಾತ್ರ ಜಗತ್ತನ್ನೇ ತೇಲಿಸಿ ಬಿಡುವಂತೆ ತೋರುವುದು". (ಅದೇ; ಪು.೩೫) ದುರಾದೃಷ್ಟವೆಂದರೆ ಈ ಸ್ವಾತಿಯ ಮಳೆಯ ಸಂದರ್ಭ ಸೀತಾಲಕ್ಷ್ಮಿಯ ಪಾತಿವ್ರತ್ಯವನ್ನು ಭಂಗ ಮಾಡಲು ಕಾರಣವಾಯಿತು ಎಂಬುದು ವಿಷಾದದ ಸಂಗತಿ. ನಿಸರ್ಗದ ಪರಿಸರದಲ್ಲಿ ಮಾನವನ ವಿಕೃತ ಮನಸ್ಸು ತನ್ನ ಹೀನಕೃತ್ಯವನ್ನು ಪೂರೈಸಿಕೊಳ್ಳಲು ಹೊಂಚು ಹಾಕುತ್ತದೆ ಎಂಬ ವಿಚಾರ ಇಲ್ಲಿ ಸೂಚ್ಯವಾಗಿದೆ.

ಸೀತಾಲಕ್ಷ್ಮಿ ತಮ್ಮ ಅಣ್ಣ ಶ್ರೀನಿವಾಸನೊಂದಿಗೆ ಮಲ್ಲಿಗೆಹಳ್ಳಿಯಿಂದ ಹೋಗುತ್ತಿರುವಾಗ ಕೆರೆಯ ಏರಿಯ ಮೇಲೆ ಹೊಂಗೆಯ ತೋಪಿನಲ್ಲಿ ಕಂಡ ನಿಸರ್ಗದ ಸೊಗಸನ್ನು ಸುಖವನ್ನು ವರ್ಣಿಸುವ ರೀತಿ ವೈಯಕ್ತಿಕವಾಗಿದ್ದರೂ ಮೋಹಕವಾಗಿದೆ. "ಶ್ರೀನಿವಾಸ ಕೆರೆಯ ಏರಿಯ ಹೊಂಗೆಯ ಮರದ ನೆರಳಿನಲ್ಲಿ ಹಿಂದಕ್ಕೆ ಒರಗಿಕೊಂಡು ಬಿದ್ದಿದ್ದನು. ಅಂತರಿಕ್ಷದಲ್ಲಿ ಒಂದಾದರೂ ಮೋಡಗಳಿಲ್ಲದೆ ಸ್ವಚ್ಛವಾಗಿತ್ತು. ಎಲ್ಲಿಯೋ ದೂರದಲ್ಲಿ ಒಂದು ಹಕ್ಕಿ ಅಪರೂಪವಾಗಿ ಕೂಗುತ್ತಿತ್ತು. ಆಗ ತಾನೆ ಹೊಡೆಗೆ ಬಂದಿದ್ದ ಹೊಲದ ಮೇಲೆ ಬೀಸುತಿದ್ದ ಗಾಳಿ ಹಚ್ಚ ಹಸುರಿನ ಸುಗಂಧದೊಡನೆ ಗಾಳಿಯಲ್ಲಿ ಹುಲ್ಲು ಬಾಗಿದಾಗ ಪಚ್ಚೆಯ ಜಮಖಾನವನ್ನು ಹಾಸಿದಂತೆ ಬಯಲು ಕಾಣುತ್ತಿತ್ತು. ಶ್ರೀನಿವಾಸನು ಆ ಹಸಿರು ರೇಶಿಮೆಯ ಮೇಲೆ ಅದರ ಸ್ವಚ್ಛವಾದ ಸುವಾಸನೆಯನ್ನು ಆಘ್ರಾಣಿಸುತ್ತಾ ಹುಲ್ಲಿನ ಬೊಡ್ಡೆಯ ಸಿಹಿಯನ್ನು ಚೀಪುತ್ತಾ, ಹೊರಳಾಡುತ್ತಿದ್ದನು. ಆಗ ತಾನೆ ಮನೆಯಿಂದ ಹೊರಕ್ಕೆ ಬಂದಿದ್ದ ಒಂದೆರಡು ಹಸುಗಳು ದೂರದಲ್ಲಿ ಬಯಲಿನ ಹುಲ್ಲನ್ನು ಆನಂದದಿಂದ ಮೇಯುತ್ತಿದ್ದವು. ಅದರ ಜತೆಯಲ್ಲಿದ್ದ ಕರುವಿನ ಕತ್ತಿನ ಗಂಟೆಯ ಸದ್ದು ಚಿರಪರಿಚಿತರ ಆಹ್ವಾನದಂತೆ ಸುತ್ತಲಿನವರನ್ನು ಆಕರ್ಷಿಸುತ್ತಿದ್ದಿತು. ಕೆರೆಯ ನೀರಿನಲ್ಲಿದ್ದ ಮೀನುಗಳು ಪದೇ ಪದೇ ಮೇಲಕ್ಕೆ ಪಳಕ್ಕನೆ ಹಾರಿದಾಗ ಅವುಗಳ ಕೆಳ ಹೊಟ್ಟೆಯ ಬೆಳ್ಳಿಗಳು ಮಿಂಚಿನ ಕುಡಿಗಳಂತೆ ಪ್ರಕಾಶಿಸುತ್ತಿದ್ದವು. ಒಟ್ಟಿನಲ್ಲಿ ಪ್ರಕೃತಿ ಆನಂದದಿಂದ ಇತ್ತು. ಪ್ರಕೃತಿ ತನ್ನ ಆನಂದದ ಈ ಛಾಯೆಯನ್ನು ಸೀತಾಲಕ್ಷ್ಮಿಯ ಮೇಲೆ ಬೀರದೆ ಇರಲಿಲ್ಲ. ಆ ಗಳಿಗೆಯಲ್ಲಿ ಸೀತಾಲಕ್ಷ್ಮಿ ತನ್ನ ದುಃ

ಖವನ್ನು ಮರೆತಳು. ಅವಳ ಕಣ್ಣೀರು, ಮಂಜಿನ ಹನಿ ಸೂರ್ಯರಶ್ಮಿಗೆ ಕರಗುವಂತೆ, ಜಗತ್ತಿನ ಆನಂದದ ಶಾಖದಲ್ಲಿ ಆರಿಹೋಯಿತು. ಅವಳು ಪುಳಕಿತಳಾಗಿ ತನ್ನನ್ನೇ ತಾನು ಮರೆತು ಹಾಡನ್ನು ಹಾಡಿಕೊಂಡಳು". (ಅದೇ; ಪು.೧೦೨) ಪ್ರಕೃತಿ ದುಃಖ ನಿವಾರಣೆ ಎಂಬುದಕ್ಕೆ ಸೀತಾಲಕ್ಷ್ಮಿಯ ಇಲ್ಲಿನ ಅನುಭವ ಪ್ರತ್ಯಕ್ಷ ಸಾಕ್ಷಿಯಾಗಿದೆ. ಸುಖ ಸಂತೋಷದಲ್ಲಿದ್ದಾಗ ನಿಸರ್ಗ ನಮ್ಮ ಆನಂದವನ್ನು ವರ್ಧಿಸುತ್ತದೆ. ಸಂಕಟದಲ್ಲಿದ್ದಾಗ ನಮ್ಮ ಸಂಕಟವನ್ನು ತಾಪವನ್ನು ಕಡಿಮೆ ಮಾಡಬಹುದು, ಕಣ್ಮರೆ ಮಾಡಬಹುದು.

ಒಮ್ಮೆ ಹೊಳೆಯ ಪರಿಸರದಲ್ಲಿ ಸೀತಾಲಕ್ಷ್ಮಿ ಕಂಡ ಪ್ರಕೃತಿಯ ಚೆಲುವು ಅನುಭವದಲ್ಲಿ ಬಾಲ್ಯದ ಸವಿನೆನಪನ್ನು ಮರುಕಳುಸಿ ಕೊಡುತ್ತಿತ್ತು. "ತೀರದ ತೋಪಿನ ಮರಗಳು ತಮ್ಮ ಹಸಿರು ಎಲೆಗಳನ್ನು ಹರಿಯುತ್ತಿದ್ದ ನೀರಿನ ಮೇಲೆ ಬಾಗಿಸಿ ನೀರಿನ ಕಲಕಲರವದ ಸಣ್ಣ ಅಲೆಗಳೊಂದಿಗೆ ಪಿಸುಮಾತನ್ನಾಡುತ್ತಿದ್ದವು. ತೀರದ ಎರಡು ಕಡೆಯ ಮರಗಳೂ, ದೂರದಲ್ಲಿ ನದಿಯ ಮೇಲೆ ಕೆಳಗೆ ಎದ್ದು ಕಾಣುತ್ತಿದ್ದ ಗುಡ್ಡಗಳ ಮೇಲಿನಿಂದ ಬಾಗಿದ್ದ ಮರಗಳೂ ಸೇರಿ ನದಿ, ಹಸಿರು ಬಯಲಿನ ಒಂದು ಸರಸ್ಸಿನಂತೆಯೇ ತೋರುತ್ತಿತ್ತು. ಊರಿನ ಮುಂದೆ ಬಾಗಿ ಹೋಗುತ್ತಿದ್ದ ನದಿ ಶುಭ್ರವಾಗಿ ಬೆಳ್ಳಿಯ ನೊರೆಯಾಗಿ ಕುಡುಗೋಲಿನಂತೆ ಕಾಣುತ್ತಿತ್ತು". (ಅದೇ; ಪು.೧೨೪) ಬಾಲ್ಯದ ಮಧುರ ನೆನಪು ವಯಸ್ಸಾದ ವ್ಯಕ್ತಿಗೆ ತನ್ನ ವಯಸ್ಸನ್ನು ಮರೆಸಿ ಹಿಂದಿನ ಆನಂದವನ್ನು ಮತ್ತೆ ನೆನಪಿಗೆ ತರುವ ಇಲ್ಲಿಯ ಘಟನೆ ನಿಸರ್ಗದ ಶಕ್ತಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಹೀಗೆ ನಿಸರ್ಗದ ನಿರಂತರ ನೆನಪುಗಳು ಮಾನವನ ಬದುಕಿನಲ್ಲಿ ಚೇತೋಹಾರಿಗಳಾಗಿ ಮಾನವನನ್ನು ಸವಿ ಸೆರೆಯಲ್ಲಿ ಉಳಿಸಿ ಕಾಪಾಡುತ್ತದೆ ಎಂಬ ನೈಜಾಂಶ ಇಲ್ಲಿ ಮೆಚ್ಚುವಂತಹುದು. ಗೊರೂರರವರು ಪ್ರಕೃತಿಯ ದಿವ್ಯಾನುಭವಕ್ಕೆ ಪರವಶರಾಗಿ ಪ್ರಕೃತಿಯನ್ನು ವರ್ಣಿಸುವ ವಿಶೇಷ ಪ್ರಸಂಗಗಳು ಅವರ ಕೃತಿಗಳಲ್ಲಿ ಕಂಡುಬಂದರೂ ಪ್ರಕೃತಿಯೊಂದಿಗೆ ಸಹಜ ಸಂಬಂಧದಲ್ಲಿ ಉಳಿದು ಬೆಳೆದ ಸಹಜ ಸಾಮಾನ್ಯ ಅನುಭವಗಳು ಗೊರೂರರವರ ಕೃತಿಗಳಲ್ಲಿ ಹೇರಳವಾಗಿ ಸಿಗುತ್ತದೆ. ಇಂತಹ ಪ್ರಕೃತಿಯ ಚಿತ್ರಣ ಸನ್ನಿವೇಶದ ಚೌಕಟ್ಟಿಗೆ ಸುಂದರ ಮೆರಗನ್ನು ತಂದುಕೊಟ್ಟಿದೆ ಎಂಬುದರಲ್ಲಿ ಮರುಮಾತಿಲ್ಲ.

ಈ ಲೋಕದ ವಸ್ತುವಿಗೆ ಅಮರಲೋಕದ ಬೆಡಗನ್ನು ತಂದುಕೊಟ್ಟ ಪ್ರಕೃತಿಯ ಚಿತ್ರ 'ಶಿವರಾತ್ರಿ' ಕಥಾಸಂಕಲನದಲ್ಲಿನ 'ಕನ್ಯಾಕುಮಾರಿ' ಎಂಬ ಕತೆಯಲ್ಲಿದೆ. ವಿರಕ್ತ ಮನಸ್ಸಿನ ಸಂನ್ಯಾಸಿಯ ಸನ್ನಿಧಿಯಲ್ಲಿ ಸೂರ್ಯಾಸ್ತ ಕಾಣಿಸಿದ ರೀತಿ ಅತ್ಯಂತ ವಿನೂತನವಾಗಿತ್ತು. ಸಂನ್ಯಾಸಿ ಹೃದಯವನ್ನು ತೆರೆದು ಭಕ್ತಿಗೀತೆಗಳನ್ನು ಹಾಡುತ್ತಿದ್ದಾಗ ಗುಡಿಯ ಪರಿಸರದಲ್ಲಿದ್ದ ಜನರು ಸಂನ್ಯಾಸಿಯ ಹಾಡಿನ ಸೊಬಗಿನಲ್ಲಿ ಮಂತ್ರಮುಗ್ಧರಾದರು. ಅವರ ಆನಂದ ಸ್ಥಿತಿಗೆ ಸೂರ್ಯಾಸ್ತದ ಸೊಬಗು ಮತ್ತಷ್ಟು ತೀವ್ರತೆಯನ್ನು ತಂದಿತು. "ಸಂಧ್ಯಾಕಾಲದ ಸೂರ್ಯನು ಮುಳುಗುವ ಅವಸರದಲ್ಲಿದ್ದನು. ಅವನ ಹೊಂಬಣ್ಣದ ಕಿರಣಗಳು ಮೃದುವಾಗಿ ಬೆಚ್ಚಗೆ ಕಾಮನಬಿಲ್ಲಿನ ಪ್ರತಿ ನೆರಳಿನಂತೆ ಆ ಸಂನ್ಯಾಸಿಯ ಮೈಮೇಲೂ ನೆರೆದಿದ್ದ ಗಂಡಸರು ಮಕ್ಕಳ ಮೇಲೂ

ಹಿಂದೆ ಹಿಂದೆ ನೋಡುತ್ತಾ ನಿಂತಿದ್ದ ಪ್ರಮದೆಯರ ಮೇಲೂ ಬೀಳುತ್ತಿದ್ದವು. ಆ ಹೊಳಪಿನಲ್ಲಿ ಆ ದೇವಾಲಯವೂ ನೆರೆದ ಜನರೂ ಎದುರಿಗೆ ಹರಿಯುತ್ತಿದ್ದ ನದಿಯೂ, ಈ ಲೋಕದ ವಸ್ತುಗಳಲ್ಲದೆ ಯಾವುದೋ ಅಮರಲೋಕದ ವಸ್ತುಗಳಾಗಿ ತೋರುತ್ತಿದ್ದವು". (ಗೊರೂರು ರಾಮಸ್ವಾಮಿ ಅಯ್ಯಂಗಾರ; ೧೯೯೯; ಪು.೯೪-೯೫) ಸಂನ್ಯಾಸಿಯ ಚಿಂತನೆ ಪ್ರಕೃತಿಯ ಪ್ರಭಾವದಿಂದ ಗಾಢವಾಯಿತು ಎಂಬ ಸಂಗತಿಯನ್ನು ಗೊರೂರರವರು ಈ ಸಂದರ್ಭದಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.

ಗೊರೂರರವರ ಸಾಹಿತ್ಯ ಬಹುಮಟ್ಟಿಗೆ ವೈಚಾರಿಕತೆಯ ವಿಷಯವನ್ನು ಸಾಮಾಜಿಕ ಚಿಂತನೆಯನ್ನು ಪ್ರಾದೇಶಿಕ ಚಿತ್ರಣವನ್ನು ಮೈಗೂಡಿಸಿಕೊಂಡಿದೆ. ಈ ಹಂತಗಳಲ್ಲಿ ಗೊರೂರರವರ ದೃಷ್ಟಿ ವಿಷಯದ ಮಂಡನೆ ಖಂಡನೆಗಳಲ್ಲಿ ಪೂರ್ಣಮಗ್ನವಾಗಿರುತ್ತದೆ. ಗೊರೂರರವರು ಹಳ್ಳಿಗಾಡಿನ ಬದುಕಿನಲ್ಲಿ ಒಂದಾಗಿ ಬಾಳಿ ಪರಿಸರದ ನೋವು ನಲಿವನ್ನು ಕಂಡು ಅನುಭವಿಸಿ ಭಾವಪುಷ್ಟಿಯನ್ನು ಪಡೆದಿರುವ ವ್ಯಕ್ತಿ. ಈ ಕಾರಣದಿಂದ ಗೊರೂರರವರ ಸಾಹಿತ್ಯ ನೈಜತೆಯಿಂದ ಶೋಭಿಸಿದೆ ಎಂದು ಹೇಳಬಹುದು. ಇದಕ್ಕೆ ಜೊತೆಯಾಗಿ ಇವರ ಕೃತಿಗಳಲ್ಲಿ ಕಂಡುಬರುವ ನಿಸರ್ಗದ ಚಿತ್ರಣ ಕಥಾ ಪ್ರಸಂಗಕ್ಕೆ ಹೊಂದಿಕೊಂಡು ಅಚ್ಚುಕಟ್ಟಾಗಿ ಮೂಡಿಬಂದಿದೆ. ಇಲ್ಲಿಯ ನಿಸರ್ಗ ಚಿತ್ರಗಳು ಬಿಡಿಯಾಗಿ ನೋಡಿದಾಗ ಎಷ್ಟು ಮನೋಹರವಾಗಿ ಅರ್ಥಪೂರ್ಣವಾಗಿ ನಮಗೆ ಗೋಚರವಾಗುತ್ತದೆಯೋ ಕಥಾ ಪರಿಸರದಲ್ಲಿ ಹೆಚ್ಚಿನ ಪ್ರಭೆಯಿಂದ ಸಹೃದಯರ ಮನಸ್ಸನ್ನು ಸೂರೆಗೊಳ್ಳುತ್ತದೆ. ಅದರಲ್ಲಿಯೂ ಗ್ರಾಮೀಣ ಜೀವನದ ಪರಿಚಯವಿಲ್ಲದ ನಗರದ ಜನರು ಗೊರೂರರವರ ಕೃತಿಗಳಲ್ಲಿ ಕಂಡುಬರುವ ಶುದ್ಧ ಪ್ರಕೃತಿಯ ವರ್ಣನೆಗಳನ್ನು ಕಂಡು ಅದಕ್ಕಾಗಿ ಅವರ ಕೃತಿಗಳಿಗೆ ಆಕರ್ಷಿತರಾಗಿದ್ದಾರೆ ಎಂದರೆ ಉತ್ಪ್ರೇಕ್ಷೆಯ ಮಾತಾಗಲಾರದು. ಗೊರೂರರವರು ಸಾಹಿತ್ಯದಲ್ಲಿ ಅಭಿವ್ಯಕ್ತಪಡಿಸಿರುವ ವೈವಿಧ್ಯಪೂರ್ಣವಾದ ಅನುಭವಗಳು ಅವರ ಸ್ವಾನುಭವ ಲೋಕಾನುಭವದ ಪ್ರತೀಕವಾಗಿದೆ. ಅದೇ ರೀತಿಯಲ್ಲಿ ಪ್ರಕೃತಿಯ ಚಿತ್ರಣ, ಕಂಡ ಅನುಭವ, ಇದು ನೇರವಾದ ಅನುಭವವಾಗಿದೆ. ಈ ಕಾರಣದಿಂದಲೇ ಗೊರೂರರವರ ನಿಸರ್ಗದ ಚಿತ್ರಣ ಆಲೋಚನೆಯಿಂದ ಮೂಡಿಬಂದ ಚಿತ್ರಣ ಅಲ್ಲ, ಬುದ್ಧಿಪೂರ್ವಕವಾಗಿ ಕಟ್ಟಿದ ಕಲ್ಪನೆಯ ಚಿತ್ರಗಳು ಅಲ್ಲ ಎಂಬ ಮಾತು ನಿರ್ವಿವಾದ ಸತ್ಯ. ಯಾವ ಪ್ರಕೃತಿಯ ಚಿತ್ರಣವು ಕಥಾ ಗರ್ಭದಿಂದ ಬೇರೆಯಾಗಿ ಉಳಿಯುವುದಿಲ್ಲ. ಕಥೆಯ ಸೌಂದರ್ಯಕ್ಕೆ ಪೋಷಕವಾಗಿ ಪೂರಕವಾಗಿ ಉಳಿಯುತ್ತದೆ. ಗೊರೂರರವರ ಗದ್ಯದ ಬರವಣಿಗೆ ಅವರದೇ ಆದ ಹಾಸ್ಯದ ರಸಪೂರ್ಣ ಶೈಲಿಯಿಂದ ವಿಶೇಷತೆಯನ್ನು ಗಳಿಸಿಕೊಂಡಿದೆ. ಇಂತಹ ಗದ್ಯದ ಸೊಗಸಿಗೆ ಅವರ ಬರವಣಿಗೆಯಲ್ಲಿ ಕಂಡುಬರುವ ನಿಸರ್ಗ ಚಿತ್ರಣದ ಸೊಗಸು ಕೃತಿಗೆ ಕಾವ್ಯದ ಸೊಗಸನ್ನು ತುಂಬಿಕೊಟ್ಟಿದೆ. ಗದ್ಯದಲ್ಲಿ ಇಂತಹ ಕಾವ್ಯಾನುಭವದ ಅಂಶ ಕಂಡುಬರುವುದು ಅತಿ ಅಪರೂಪ. ಗೊರೂರರವರ ಕೃತಿ ಮೆಚ್ಚುಗೆಗೆ ವೈಶಿಷ್ಟ್ಯಕ್ಕೆ ಪ್ರಕೃತಿಯ ಚಿತ್ರಣದಲ್ಲಿ ಇವರು ತಂದಿರುವ ಕಾವ್ಯ ರಸಲೇಪನ ಪ್ರಧಾನ ಗುಣವೆಂದು ಹೇಳಬಹುದು. ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿ ಕಂಡುಬರುವ ನಿಸರ್ಗದ ವೈವಿಧ್ಯಪೂರ್ಣ ಸೊಗಸು ಗೊರೂರರವರ ಕೃತಿಗಳಲ್ಲಿ ಔಚಿತ್ಯದೊಂದಿಗೆ ಶೋಭಾಮಯವಾಗಿದೆ.

೫.೨. ಕೃಷಿ ಸಂಸ್ಕೃತಿ

ಭಾರತ ಹಳ್ಳಿಗಳ ದೇಶ. ಭಾರತದ ಜನಜೀವನವನ್ನು ಗಮನಿಸಿದಾಗ ಗ್ರಾಮಾಂತರ ಬದುಕು ಮತ್ತು ಪಟ್ಟಣದ ಬದುಕು ಎಂದು ಎರಡು ವಿಭಾಗ ಮಾಡಬಹುದು. ಗ್ರಾಮೀಣ ಪ್ರದೇಶದಲ್ಲಿ ಜನ ಬಹುಮಟ್ಟಿಗೆ ಕೃಷಿ ಅವಲಂಬಿತರಾಗಿರುತ್ತಾರೆ. ಕೃಷಿಯ ಹೊರತು ಬೇರೆ ಉದ್ಯೋಗ ಮಾಡಿ ಬದುಕನ್ನು ನಡೆಸುವ ಜನ ತೀರ ಕಡಿಮೆ ಇರುತ್ತಾರೆ. ಚಿಪ್ಪಿಗ, ಕಮ್ಮಾರ ಮತ್ತು ಬಡಗಿ ಇಂತಹ ಸಣ್ಣ ಉದ್ಯೋಗಗಳನ್ನು ಮಾಡಿ ಬದುಕುವ ಜನ ಅತಿ ವಿರಳ. ಒಟ್ಟು ಗ್ರಾಮದವರ ಅವಶ್ಯಕತೆಯನ್ನು ಪೂರೈಸುವುದಕ್ಕೆ ಮಾತ್ರ ಅನುಕೂಲ ಪ್ರಮಾಣದಲ್ಲಿ ಬೇರೆ ಉದ್ಯೋಗಿಗಳು ಇರುತ್ತಾರೆ. ಈ ಮೂಲಕ ಗ್ರಾಮ ಸಮಾಜದಲ್ಲಿ ಸ್ವಾವಲಂಬಿತನವನ್ನು ಕಾಣಬಹುದು. ಸ್ವಾವಲಂಬಿತನದ ಬದುಕು ಸ್ಪರ್ಧಾತ್ಮಕ ಬದುಕಿನಷ್ಟೇ ಕುತೂಹಲಕಾರಿಯಾಗಿದೆ ಎಂಬುದನ್ನು ಗೊರೂರರವರ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಮನಗಾಣಬಹುದು. ಗ್ರಾಮೀಣ ಬದುಕಿನ ಹಿರಿಮೆಯನ್ನು ಹೇಳುವಾಗ ಗೊರೂರರವರು ನಗರದ ಸ್ಪರ್ಧಾತ್ಮಕ ಬದುಕನ್ನು ಕೇವಲ ನೆನಪಿಗಾಗಿ ನೆಪಕ್ಕಾಗಿ ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಹೀಗೆ ಕೃಷಿಯನ್ನೇ ಪ್ರಧಾನವಾಗಿ ಅವಲಂಬಿಸಿರುವ ಗ್ರಾಮೀಣ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಒಂದು ಗ್ರಾಮದಲ್ಲಿ ಬೇಸಾಯ ಮಾಡುವುದಕ್ಕೆ ಅನುಕೂಲ ಪ್ರಮಾಣದ ಭೂಮಿಯು ಸಾಕಷ್ಟು ಇರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕೃಷಿ ಉದ್ಯೋಗ ಮಾಡುವವರು ಬಹುಮಟ್ಟಿಗೆ ಒಕ್ಕಲಿಗರೇ ಆಗಿರುತ್ತಾರೆ. ಇವರಿಗೆ ಕೃಷಿ ವಂಶಪಾರಂಪರ್ಯವಾಗಿ ಬಂದ ಕಸುಬಾಗಿ ಇರುತ್ತದೆ. ಬೇಸಾಯಗಾರರು ಕೃಷಿಯನ್ನು ಕೇವಲ ಹೊಟ್ಟೆಯ ಪಾಡಿಗೆ ಮಾತ್ರ ಮಾಡುವುದಲ್ಲದೆ ಧನ್ಯತೆಯ ಭಾವದಲ್ಲಿ ಮಾಡುತ್ತಾರೆ. ಒಕ್ಕಲಿಗರಿಗೆ ಅನ್ನ ಕೊಡುವ ಭೂಮಿ ಪ್ರತ್ಯಕ್ಷದೇವತೆ ಹಾಗೂ ಬೇಸಾಯಕ್ಕಾಗಿ ಬಳಸುವ ಪಶುಸಂಪತ್ತು ಸಹ ದೇವರಷ್ಟೇ ಮಾನ್ಯವಾದದ್ದು. ಬೆಳಗಾಗಿ ಏಳುತ್ತಲೇ ಎಳ್ಳು ಜೀರಿಗೆ ಬೆಳೆಯುವ ಭೂಮಿ ತಾಯಿಯನ್ನು ಒಂದರಗಳಿಗೆ ರೈತ ನೆನೆದು ತನ್ನ ದಿನದ ಚಟುವಟಿಕೆಯನ್ನು ಮುಂದುವರೆಸುತ್ತಾನೆ. ಶಿವನಿಗೆ ಶರಣು ಮಾಡುವುದನ್ನು ಮರೆತರು ಬಸವನಿಗೆ ಶರಣು ಮಾಡುವುದನ್ನು ರೈತ ಮರೆಯುವುದಿಲ್ಲ. ಬೇಸಾಯದ ಎತ್ತುಗಳು ಅವನ ಪಾಲಿಗೆ ಪೂಜನೀಯ.

ಕೃಷಿ ಕಾಲದ ಹದಕ್ಕೆ ಅನುಗುಣವಾಗಿ ಮಾಡಬೇಕಾದ ವೃತ್ತಿ. ಸಾಮಾನ್ಯವಾಗಿ ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಕೃಷಿ ಕಾರ್ಯವನ್ನು ಮಳೆಯನ್ನು ಅವಲಂಬಿಸಿ ಮಾಡಬೇಕಾಗಿತ್ತು. ಕೃಷಿಕನ ಬೇಸಾಯ ಸಂಪೂರ್ಣವಾಗಿ ಮಳೆಯನ್ನು ಅವಲಂಬಿಸಿತ್ತು. ಈ ಕಾರಣದಿಂದಲೇ ಹಳ್ಳಿಯ ಬೇಸಾಯದ ಬದುಕನ್ನು 'ಮಳೆಯೊಂದಿಗೆ ಜೂಜಾಟದ ಬದುಕು' ಎಂದು ಕರೆಯುವುದು. ವೈಜ್ಞಾನಿಕ ಪ್ರಗತಿಯಿಂದ ಇಂದು ಹಳ್ಳಿಯಲ್ಲಿ ನೀರಾವರಿಯ ಸೌಲಭ್ಯ ಸಾಕಷ್ಟು ದೊರೆತಿರುವುದರಿಂದ ರೈತರು ಬೇಸಾಯವನ್ನು ವರ್ಷಪೂರ್ತಿ ಮಾಡುವ ಅವಕಾಶವನ್ನು ಸಂಪಾದಿಸಿಕೊಂಡಿದ್ದಾರೆ. ಇಂತಹ ನೀರಾವರಿ ಸೌಲಭ್ಯ ನಮ್ಮ ದೇಶದಲ್ಲಿ

ಕನಿಷ್ಠ ಪ್ರಮಾಣದ ಹಳ್ಳಿಗಳಿಗೆ ದೊರೆತಿದೆ. ಬೇಸಾಯದ ರೀತಿಯಲ್ಲಿ ಹಳೆಯ ಪದ್ಧತಿಯನ್ನು ಅನುಸರಿಸುವುದು ಒಂದು ವರ್ಗದವರ ಕ್ರಮವಾದರೆ ಆಧುನಿಕ ಬೇಸಾಯವನ್ನು ಹಲವರು ಮಾಡುತ್ತಿರುವುದು ನಮಗೆ ಗೋಚರವಾಗುತ್ತದೆ.

ಭೂ ಹಿಡುವಳಿಯಲ್ಲಿ ಸರ್ಕಾರ ಮಾಡಿರುವ ಅನೇಕ ಕಾನೂನುಗಳು ರೈತರ ಪಾಲಿಗೆ ವರವಾಗಿದೆ. ಜಮೀನ್ದಾರರ ಅಡಿಯಲ್ಲಿ ದುಡಿಯುವ ರೈತ ಕೇವಲ ಜೀತದ ಆಳಾಗಿ ಒಂದು ನಿರ್ದಿಷ್ಟ ಪ್ರಮಾಣದ ಪ್ರಯೋಜನವನ್ನು ಮಾತ್ರ ಪಡೆದುಕೊಳ್ಳುತ್ತಿದ್ದನು. ದುಡಿಮೆಗೆ ಸಂದ ಪೂರ್ಣ ಫಲ ರೈತರಿಗೆ ದೊರೆಯುತ್ತಿರಲಿಲ್ಲ. ಹೀಗಾಗಿ ರೈತ ಸಹಜವಾಗಿ ಕೃಷಿಯಲ್ಲಿ ಪೂರ್ಣ ಒಲವನ್ನು ತೋರಿಸದೆ ಕಳಪೆ ಬೇಸಾಯವನ್ನು ಮಾಡುವ ಸಾಧ್ಯತೆಗಳು ಹೆಚ್ಚಾಗಿವೆ. ಇದನ್ನು ಮನವರಿತ ಸರ್ಕಾರ ಭೂಮಿಯ ಫಲವನ್ನು ಸಂಪೂರ್ಣವಾಗಿ ಪಡೆಯಲು ಅನುಕೂಲವಾಗುವಂತೆ ರೈತನಿಗೆ ಭೂಸಾಗುವಳಿಯ ಬಗ್ಗೆ ಹೆಚ್ಚು ಅನುಕೂಲವನ್ನು ಮಾಡಿಕೊಟ್ಟಿದೆ. ಕೇವಲ ತುಂಡು ಭೂಮಿಗಳನ್ನು ಇಟ್ಟುಕೊಂಡು ಬೇಸಾಯ ಮಾಡುತ್ತಿದ್ದ ರೈತರಿಗೆ ಸರ್ಕಾರ ಒದಗಿಸಿರುವ ಅನುಕೂಲಗಳು ಅತ್ಯಂತ ಸಮರ್ಪಕವಾಗಿದೆ.

ಇಂದಿನ ಬೇಸಾಯ ಪದ್ಧತಿ ಬಹುಮಟ್ಟಿಗೆ ವೈಜ್ಞಾನಿಕವಾಗಿದೆ. ಬೇಸಾಯಕ್ಕೆ ಬಳಸುವ ಯಂತ್ರಗಳು ಉಪಕರಣಗಳು ಅತ್ಯಂತ ಆಧುನಿಕವಾಗಿವೆ. ರೈತನ ಶ್ರಮಕ್ಕಿಂತ ರೈತನ ಜಾಣ್ಮೆ ಇಂದಿನ ಬೇಸಾಯ ಪದ್ಧತಿಯಲ್ಲಿ ಮುಖ್ಯವಾದ ಸಂಗತಿಯಾಗಿದೆ. ಗೊಬ್ಬರದ ಬಳಕೆ ಮತ್ತು ಔಷಧಿಗಳ ಬಳಕೆ ಇಂದಿನ ಬೇಸಾಯದಲ್ಲಿ ಉತ್ತಮ ಪ್ರತಿಫಲಕ್ಕೆ ಮೂಲ ಕಾರಣವಾಗಿದೆ. ಉತ್ತಮ ಜಾತಿಯ ತಳಿಯನ್ನು ಬಿತ್ತಿ ಬೆಳೆಯುವುದಕ್ಕೆ ಕೃಷಿ ಇಲಾಖೆ ರೈತನಿಗೆ ನೆರವಾಗಿ ನಿಂತಿದೆ. ಅನೇಕ ಮಿಶ್ರ ತಳಿಗಳ ಪ್ರಯೋಗ ರೈತನಿಗೆ ನಿರ್ದಿಷ್ಟ ಬೆಳೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಲು ಅನುಕೂಲಕಾರಿಯಾಗಿದೆ. ರೈತನು ಬೇಸಾಯ ಕ್ರಮದಲ್ಲಿ ಆಧುನಿಕ ಕ್ರಮವನ್ನು ಅನುಸರಿಸುವುದಕ್ಕೆ ಕೃಷಿ ವಿಜ್ಞಾನ ಮಾರ್ಗದರ್ಶನ ಮಾಡುತ್ತದೆ. ಗ್ರಾಮೀಣ ಬದುಕಿನಲ್ಲಿ ಬೇಸಾಯದ ಕೆಲಸ ಬಹುಮಟ್ಟಿಗೆ ಕುಟುಂಬದವರೆಲ್ಲರ ಕೆಲಸ ಹೌದು. ಕುಟುಂಬದವರೆಲ್ಲರ ಸಹಕಾರದ ಜೊತೆಗೆ ಮಿಕ್ಕ ರೈತರ ಅನ್ಯೋನ್ಯ ಸಹಕಾರವು ಇಂದು ಹಳ್ಳಿಯಲ್ಲಿ ಅವಶ್ಯವಾಗಿ ಇದೆ. ಇಂದು ಹಳ್ಳಿಯವರ ಸಾಮೂಹಿಕ ಜೀವನಕ್ಕೆ ಸಹಕಾರ ಬದುಕಿಗೆ - ದುಡಿಮೆಗೆ ಒಂದು ರೀತಿಯಲ್ಲಿ ಪ್ರೇರಣೆಯೂ ಪ್ರೋತ್ಸಾಹದಾಯಕವೂ ಆಗಿರುತ್ತದೆ. ರೈತ ಬೆಳೆದ ಬೆಳೆಯನ್ನು ವಿತರಣೆ ಮಾಡುವುದರಲ್ಲಿ ಇಂದು ಸರ್ಕಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮೂಲಕ ನಡೆಸುತ್ತಿರುವ ಚಟುವಟಿಕೆ ಶ್ಲಾಘನೀಯವಾಗಿದೆ. ಹಳ್ಳಿಯಿಂದ ಪಟ್ಟಣದ ಪ್ರದೇಶಗಳಿಗೆ ಬೆಳೆದ ಬೆಳೆಯನ್ನು ಸಾಗಿಸಲು ಇಂದು ಸಂಚಾರ ಸೌಲಭ್ಯ ರೈತನ ಪಾಲಿಗೆ ಯಥೇಚ್ಛವಾಗಿದೆ. ಬೆಳೆದ ಬೆಳೆ ಹಾಳಾಗದಂತೆ ಕಾಪಾಡಲು ಸರ್ಕಾರ ಶೀತಲ ಉಗ್ರಾಣಗಳನ್ನು ರೈತನಿಗೆ ಒದಗಿಸಿಕೊಟ್ಟಿದೆ. ಒಂದು ಕಾಲಕ್ಕೆ ಮಧ್ಯವರ್ತಿಗಳು ಹಾಗೂ ದಳ್ಳಾಳಿಗಳು ರೈತನ ಲಾಭವನ್ನು ತಾವು ಕಬಳಿಸಿ ರೈತನಿಗೆ ಆರ್ಥಿಕ

ದುಸ್ಥಿತಿಯನ್ನು ತರುತ್ತಿದ್ದರು. ಇಂದಿನ ರೈತ ಈ ಕಷ್ಟ ಸಂಕಟದಿಂದ ಸ್ವಲ್ಪಮಟ್ಟಿಗೆ ಪಾರಾಗಿದ್ದಾನೆ. ಅಂತರರಾಷ್ಟ್ರೀಯ ಬ್ಯಾಂಕುಗಳು ರೈತರಿಗೆ ಕೊಡುತ್ತಿರುವ ಆರ್ಥಿಕ ನೆರವು ಇಂದು ಅತ್ಯಂತ ಉಪಕಾರಿಯಾಗಿದೆ. ಬೇಸಾಯಗಾರನಿಗೆ ಸಕಾಲಕ್ಕೆ ಅವಶ್ಯವಿರುವಷ್ಟು ಹಣವನ್ನು ಬ್ಯಾಂಕುಗಳು ನೀಡಿ ಅವನನ್ನು ಆರ್ಥಿಕ ಮುಗ್ಗಟ್ಟಿನಿಂದ ಮುಕ್ತಗೊಳಿಸಿವೆ. ಆರ್ಥಿಕವಾಗಿ ಬಹಳ ದುರ್ಬಲರಾಗಿರುವಂತಹ ಬಡಕೃಷಿಕರಿಗೆ ಆಧುನಿಕ ಕೃಷಿ ಉಪಕರಣಗಳನ್ನು ರಸಾಯನಿಕ ಗೊಬ್ಬರಗಳನ್ನು ಕೊಳ್ಳಲು ಶಕ್ತರಾಗಿರುವುದಿಲ್ಲವೆಂಬ ಕಾರಣಕ್ಕಾಗಿ ಸರ್ಕಾರ ಮಧ್ಯ ಪ್ರವೇಶಿಸಿ ಇವುಗಳನ್ನು ಸ್ವತಃ ಸರ್ಕಾರವೇ ಕೊಂಡು ಅನೇಕ ಸೌಲಭ್ಯಗಳ ಸಬ್ಸಿಡಿ ಯೋಜನೆಯ ಅಡಿಯಲ್ಲಿ ರೈತರಿಗೆ ಒದಗಿಸುವ ಏರ್ಪಾಡು ಇಂದು ಮಾಡುತ್ತಿದೆ. ರೈತ ಬೇಸಾಯದ ಜತೆಗೆ ಹೈನುಗಾರಿಕೆಯನ್ನು, ಕುರಿ ಸಾಗಾಣಿಕೆಯನ್ನು, ಕೋಳಿ ಸಾಗಾಣಿಕೆಯನ್ನು ಇನ್ನು ಇತರ ಉಪಕಸುಬು ಗಳನ್ನು ಉಳಿಸಿಕೊಂಡು ತನ್ನ ಆರ್ಥಿಕ ಹೊರೆಯನ್ನು ಸುಧಾರಿಸಿಕೊಳ್ಳಲು ಬ್ಯಾಂಕುಗಳು ಕಡಿಮೆ ಬಡ್ಡಿಯಲ್ಲಿ ಸಾಲದ ನೆರವನ್ನು ಕೊಡುತ್ತಿರುವುದು ರೈತನ ಪಾಲಿಗೆ ಒಂದು ವರವೇ ಆಗಿದೆ. ಹೀಗೆ ರೈತ ಉತ್ಸಾಹಶಾಲಿಯಾಗಿ ಬಹುಮುಖ ದುಡಿಮೆಯನ್ನು ಮಾಡಲು ಇಂದು ಪೂರ್ಣ ಅವಕಾಶವಿದೆ.

ಗ್ರಾಮೀಣ ಪರಿಸರದಲ್ಲಿ ಹೆಣ್ಣು ಬೇಸಾಯದ ಚಟುವಟಿಕೆಯಲ್ಲಿ ಗಂಡಿಗೆ ಸರಿಸಾಟಿಯಾಗಿ ದುಡಿಯುವುದನ್ನು ಕಾಣುತ್ತೇವೆ. ಇಂತಹ ದುಡಿಮೆ ಅವರಿಗೆ ಎಷ್ಟು ಅನಿವಾರ್ಯವಾಗಿದೆಯೋ ಅಷ್ಟೇ ಆನಂದದಾಯಕವೂ ಆಗಿರುತ್ತದೆ. ಬೇಸಾಯದಲ್ಲಿ ಪುರುಷನ ಚಟುವಟಿಕೆ ಪುರುಷನಿಗಷ್ಟೇ ಮೀಸಲಾಗಿರುತ್ತದೆ. ಹೆಣ್ಣು ಕೊಡುವ ಸಹಕಾರ ಹೊರನೋಟಕ್ಕೆ ಸಾಧಾರಣವಾಗಿ ಕಂಡರೂ ಅದು ಅಷ್ಟೇ ಅತ್ಯಾವಶ್ಯಕ ಎನಿಸುತ್ತದೆ. ಮುಂಜಾನೆಯಿಂದ ಮುಸ್ಸಂಜೆಯವರೆಗೆ ದುಡಿಯುವ ರೈತನಿಗೆ ಹೆಣ್ಣಿನ ಸಹಕಾರ ಒಡನಾಟ ಸ್ಫೂರ್ತಿದಾಯಕ ಎಂಬುದನ್ನು ಗ್ರಾಮೀಣ ಜನತೆಯ ಕುಟುಂಬದ ಬದುಕಿನಲ್ಲಿ ನಾವು ಚೆನ್ನಾಗಿ ಮನಗಾಣ ಬಹುದು. ಗ್ರಾಮೀಣ ಪರಿಸರದಲ್ಲಿ ಆಚರಿಸುವ ಎಲ್ಲಾ ಹಬ್ಬಗಳು ಅವನ ಬೇಸಾಯದ ಬದುಕಿಗೆ ಅರ್ಥಪೂರ್ಣವಾಗಿದೆ. ದೀಪಾವಳಿ, ಸಂಕ್ರಾಂತಿ ಹಾಗೂ ಯುಗಾದಿ ಹಬ್ಬಗಳಲ್ಲಿ ರೈತ ಮಾಡುವ ಎಲ್ಲ ಪೂಜೆಗಳು ಬಹುಮಟ್ಟಿಗೆ ಭೂಮಿಪೂಜೆಯಾಗಿರುತ್ತದೆ, ಧಾನ್ಯದ ಪೂಜೆ ಆಗಿರುತ್ತದೆ ಮತ್ತು ಗೋ ಸಂಪತ್ತಿನ ಪೂಜೆಯಾಗಿರುತ್ತದೆ. ಗ್ರಾಮೀಣ ಕ್ರೀಡೆಗಳು ಶ್ರಮಜೀವಿ ರೈತನ ಸಾಮರ್ಥ್ಯಕ್ಕೆ ಸವಾಲಾಗಿದೆ. ಹೀಗೆ ರೈತನ ಬದುಕಿನ ಎಲ್ಲಾ ಚಟುವಟಿಕೆಯೂ ಅವನ ಕಸುಬಿನ ಯಶಸ್ಸಿಗೆ ಪೂರಕವಾಗಿದೆ.

ರೈತರ ಸರಳ ಪ್ರಾಮಾಣಿಕ ಬದುಕಿಗೆ ಸಮಾಜದಲ್ಲಿ ಬೆಂಬಲ ಸಿಕ್ಕಿರುವಂತೆಯೇ ಇಂತಹ ಮುಗ್ಧ ರೈತರನ್ನು ಸಮಾಜದ ಸ್ಥಿತಿವಂತರು ವಿದ್ಯಾವಂತರು ಅಧಿಕಾರಿ ವರ್ಗದವರು ರಾಜಕೀಯ ವ್ಯಕ್ತಿಗಳು ಅನೇಕ ರೀತಿಯಲ್ಲಿ ಶೋಷಿಸಿರುವುದು ಒಂದು ಮಹಾ ದುರಂತ ಸಂಗತಿ. ಕೃಷಿಕ ದುಡಿಮೆಯಲ್ಲಿ ಎಷ್ಟು ಶ್ರಮಜೀವಿ ಆಗಿದ್ದಾನೋ ಆತ ಬದುಕಿನಲ್ಲಿ ಒದಗಿಬಂದ ನೋವು ಕಷ್ಟಗಳನ್ನು ಸಮಾಧಾನ ಚಿತ್ತದಲ್ಲಿ ಸಹಿಸಿಕೊಳ್ಳುವ ಸಹನಾಶೀಲನೂ ಆಗಿದ್ದಾನೆ. ತನ್ನ ನೋವಿನ ಸ್ಥಿತಿಗೆ ಆತ ಕಾರಣ ಅಲ್ಲದಿದ್ದರೂ

ನೋವನ್ನು ನಗುಮುಖದಿಂದ ಸ್ವಾಗತಿಸಿ ಎದೆಗಾರಿಕೆಯಲ್ಲಿ ಬದುಕುವುದು ರೈತನ ಸಹಜಗುಣವಾಗಿದೆ. ಅನೇಕ ಸಂದರ್ಭಗಳಲ್ಲಿ ಸೋಲುವ ಅವಕಾಶ - ಸ್ಥಿತಿ ಅವನಿಗಿರುವುದಿಲ್ಲವಾದರೂ ರೈತ ಸೋತುಗೆಲ್ಲುತ್ತಾನೆ. ಗಾಂಧೀಜಿಯವರು ರೈತನ ಈ ಉದಾರ ಗುಣವನ್ನು ಮೆಚ್ಚಿಕೊಂಡಿದ್ದಾರೆ. ಗ್ರಾಮೀಣ ಬದುಕಿನಲ್ಲಿ ರೈತನ ನೋವು ನಷ್ಟಗಳಿಗೆ ಕೆಲವೊಮ್ಮೆ ಅವನ ಅಜ್ಞಾನ ಕಾರಣವಾದರೆ ಆಶ್ಚರ್ಯವಿಲ್ಲ. ಅಜ್ಞಾನ ಅದರೊಂದಿಗೆ ಹುಟ್ಟಿಬಂದ ಕೆಲವು ಮೂಢನಂಬಿಕೆಗಳು ರೈತನ ಬದುಕನ್ನು ಸಂಕಷ್ಟಕ್ಕೆ ಒಳಗು ಮಾಡಿದೆ. ಗ್ರಾಮೀಣ ಜೀವನದಲ್ಲಿ ಸುಧಾರಣೆ ರೈತನ ಬದುಕಿನ ಅಭಿವೃದ್ಧಿಗೆ ಪೂರಕವಾಗಬೇಕು ಎಂಬ ಅಂಶವನ್ನು ನಾವು ಮರೆಯುವಂತಿಲ್ಲ. ರೈತನ ಬದುಕು ಸುರಕ್ಷಿತವಾಗಿದ್ದರೆ ಸುಖಕರವಾಗಿದ್ದರೆ ಗ್ರಾಮೀಣ ಬದುಕು ನೆಮ್ಮದಿಯಾಗಿರುತ್ತದೆ. ಗ್ರಾಮದ ನೆಮ್ಮದಿಯೇ ದೇಶದ ನೆಮ್ಮದಿಗೆ ಕಾರಣವಾಗಿರುವುದರಿಂದ ರಾಷ್ಟ್ರ ನಾಯಕರಾದ ಲಾಲ್ ಬಹದ್ದೂರ್ ಶಾಸ್ತ್ರಿಯವರು 'ಜೈ ಜವಾನ್' ಘೋಷಣೆಯೊಂದಿಗೆ 'ಜೈ ಕಿಸಾನ್' ಘೋಷಣೆಯನ್ನು ಸೇರಿಸಿ ಹೇಳಿರುವುದು ಅರ್ಥಪೂರ್ಣವಾಗಿದೆ. ಜವಾನ್ ದೇಶದ ಗಡಿಯನ್ನು ರಕ್ಷಿಸುವುದಾದರೆ ಕಿಸಾನ್ ದೇಶದ ಪ್ರಜಾಕೋಟಿಯ ಹಸಿವನ್ನು ಹೋಗಲಾಡಿಸಿ ತನ್ಮೂಲಕ ದೇಶದ ಸಂಸ್ಕೃತಿಯನ್ನು ಸಂರಕ್ಷಿಸುತ್ತಾರೆ - ಸಂವರ್ಧಿಸುತ್ತಾರೆ. ಹೀಗೆ ದೇಶಕ್ಕೆ ಗಡಿರಕ್ಷಕರು ಅನ್ನದಾತರು ದೇಶದ ಎರಡು ಕಣ್ಣುಗಳು ಇದ್ದ ಹಾಗೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಯಜ್ಞದಂಡ ಹಿಡಿದ ಯೋಗಿ ನಮ್ಮಲ್ಲಿ ಆಧ್ಯಾತ್ಮಿಕ ಭಾವನೆಗಳನ್ನು ಮೂಡಿಸಿ ನಮ್ಮನ್ನು ಸಂರಕ್ಷಿಸುವುದಾದರೆ ನೇಗಿಲನ್ನು ಹಿಡಿದು ದುಡಿಮೆ ಮಾಡಿ ಅನ್ನ ಕೊಡುವ ರೈತನ ದುಡಿಮೆಯ ಪ್ರಾಮಾಣಿಕತೆ ನಿಸ್ವಾರ್ಥ ದೃಷ್ಟಿಯಿಂದ ಯೋಗಿಗೆ ಸಮವಾಗಿ ಇರುವುದರಿಂದ ರೈತನನ್ನು 'ನೇಗಿಲ ಯೋಗಿ' ಎಂದು ಕರೆಯುವುದರಲ್ಲಿ ಸಂಪೂರ್ಣ ವಿಶ್ವಾಸ ನಮಗೆ ಕಂಡುಬರುತ್ತದೆ. ಹೀಗೆ ರೈತ ಅನ್ನದಾತನು ಹೌದು, ಕರ್ಮಯೋಗಿಯೂ ಹೌದು ಮತ್ತು ಸಂಸ್ಕೃತಿ ರಕ್ಷಕನೂ ಹೌದು. ಇವೇ ರೈತನ ಸಾರ್ಥಕ - ಸಮರ್ಥ ಬದುಕಿನ ಮೂರು ಮುಖಗಳು.

ನೈಸರ್ಗಿಕ ವಿಕೋಪದ ಕಾರಣಗಳಿಂದ ರೈತ ನಷ್ಟಕ್ಕೆ ಒಳಗಾದರೆ ಸರ್ಕಾರ ಅದಕ್ಕಾಗಿ ಮೀಸಲಾದ ಹಲವು ಹತ್ತು ಯೋಜನೆಗಳ ಮೂಲಕ ಮತ್ತು ಬೆಂಬಲಗಳ ಮೂಲಕ ರೈತನನ್ನು ಸಂರಕ್ಷಿಸುತ್ತದೆ. ರೈತನಿಗೆ ಬೆಳೆ ಸಮೃದ್ಧಿಯಾದಾಗ ಅವನಿಗೆ ಆದಾಯ ಬೆಲೆ ಕುಸಿತದ ಮೂಲಕ ಕಡಿಮೆಯಾಗುವುದು ಸ್ವಾಭಾವಿಕ. ಆಗ ರೈತನನ್ನು ಆರ್ಥಿಕವಾಗಿ ದೃಢಪಡಿಸುವುದಕ್ಕಾಗಿ ರೈತನ ಫಸಲನ್ನು ಬೆಂಬಲದ ಬೆಲೆಗೆ ಸರ್ಕಾರ ಖರೀದಿಸಿ ಸಹಾಯ ಮಾಡುವುದುಂಟು. ಇದು ರೈತರಿಗೆ ಕಷ್ಟದಿಂದ ಪಾರಾಗಲು ನೆರವಾಗುತ್ತದೆ. ನಿಸರ್ಗದ ವಿಕೋಪದಿಂದ ರೈತನ ಬೆಳೆ ನಾಶವಾದರೆ ಬೆಳೆ ವಿಮೆ ಮೂಲಕ ರೈತ ತನ್ನ ನಷ್ಟವನ್ನು ಸರಿದೂಗಿಸಿಕೊಳ್ಳುತ್ತಾನೆ. ಈ ಯೋಜನೆಯ ಫಲ ಹಿಂದಿನ ರೈತರಿಗೆ ಇರಲಿಲ್ಲ. ರೈತರಿಗೆ ಬ್ಯಾಂಕುಗಳ ಮೂಲಕ ಸಕಾಲಿಕ ಸಾಲದ ಸೌಲಭ್ಯ ದೊರೆತಿರುವಂತೆ ಅನೇಕ ವಿಷಮ ಪರಿಸ್ಥಿತಿಯಲ್ಲಿ ಸರ್ಕಾರ ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನ ಮಾಡಿರುವುದು ವಿಶೇಷ ಉಪಕಾರವಾಗಿದೆ. ಹೀಗೆ ಇಂದು ದುಡಿಯುವ ರೈತ ಆರ್ಥಿಕವಾಗಿ ಕೊರಗಬೇಕಾದ ದುಸ್ಥಿತಿಯಿಂದ ವಿಮೋಚಿತನಾಗಿದ್ದಾನೆ. ರಸಾಯನಿಕ

ಗೊಬ್ಬರಗಳು ರೈತನ ಬೆಳೆಗಳನ್ನು ಸಮೃದ್ಧಿಗೊಳಿಸಿದಂತೆ ಕೀಟನಾಶಕಗಳು ರೈತನ ಬೆಳೆಯನ್ನು ಕೀಟಗಳಿಂದ ಸಂರಕ್ಷಿಸುತ್ತದೆ. ಹೀಗೆ ರೈತನ ದುಡಿಮೆಗೆ ಉತ್ಸಾಹದ ವಾತಾವರಣವನ್ನು ಇಂದಿನ ಸಮಾಜದಲ್ಲಿ ಗುರುತಿಸ ಬಹುದು. ನಮ್ಮ ದೇಶದಲ್ಲಿ ಶೇಕಡ ೭೦ಕ್ಕಿಂತ ಹೆಚ್ಚಾಗಿ ಇಂದಿಗೂ ಸಹ ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಅವರು ತಮ್ಮ ಜೀವನೋಪಯೋಗಕ್ಕೆ ಪ್ರಮುಖವಾಗಿ ಕೃಷಿಯನ್ನೇ ನಂಬಿಕೊಂಡಿದ್ದಾರೆ. ಒಟ್ಟಾರೆಯಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಕೃಷಿ ಅಷ್ಟೇನೂ ಲಾಭದಾಯಕವಾಗಿರಲಿಲ್ಲ. ಹೀಗೆಂದು ರೈತರು ತಮ್ಮ ಜೀವನದ ಏಕೈಕ ಆಧಾರವಾಗಿದ್ದ ಕೃಷಿಯನ್ನು ಕೈಬಿಡುವಂತೆಯೂ ಇರಲಿಲ್ಲ. ಅಂದು ಇದ್ದ ಊಳಿಗಮಾನ್ಯ ಪದ್ಧತಿಯಿಂದ ಹಳ್ಳಿಯಲ್ಲಿ ಸಾಹುಕಾರರಾಗಿ ಮೆರೆಯುತ್ತಿದ್ದವರ ಬಳಿ ಹೆಚ್ಚಿನ ಬಡ್ಡಿಗೆ ಹಣವನ್ನು ಸಾಲವಾಗಿ ತಂದು, ಅದನ್ನು ಬೇಸಾಯಕ್ಕೆ ಹಾಕಿ ಬೆಳೆಯಲ್ಲಿ ನಷ್ಟ ಸಂಭವಿಸಿದಾಗ ಜಮೀನನ್ನೇ ಕಳೆದುಕೊಂಡ ಉದಾಹರಣೆಗಳು ಇವೆ.

ಕೃಷಿಕನ ಬದುಕನ್ನು ಗ್ರಾಮಜೀವನದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಜೀವನದ ಹಿನ್ನೆಲೆಯಲ್ಲಿ ನಾವು ಪರಿಭಾವಿಸಿದಂತೆ ಜಾಗತೀಕರಣದ ಹಿನ್ನೆಲೆಯಲ್ಲಿಯೂ ಕೈಗಾರಿಕಾ ಪ್ರಗತಿಯ ಹಿನ್ನೆಲೆಯಲ್ಲಿಯು ಅಧ್ಯಯನ ಮಾಡಬೇಕು. ಇದು ಕೃಷಿಯ ಬದುಕಿನ ಪರಿಪೂರ್ಣ ಅಧ್ಯಯನ ಎನಿಸಿಕೊಳ್ಳುತ್ತದೆ. ಗೊರೂರರವರು ಈ ಪೂರ್ಣದೃಷ್ಟಿಯಲ್ಲಿ ನಮ್ಮ ಗ್ರಾಮೀಣ ಪ್ರದೇಶದ ಕೃಷಿಕ ಬದುಕನ್ನು ಕತೆಯ ಹಿನ್ನೆಲೆಯಲ್ಲಿ ಪರಿಚಯಿಸಿರುವುದು ವಿಶೇಷವಾಗಿದೆ. ಕೃಷಿಕ ಬದುಕಿಗೂ ಕೃಷಿಕನ ಸಾಂಸ್ಕೃತಿಕ ಬದುಕಿಗೂ ಇರುವ ಸಂಬಂಧವನ್ನು ತೋರಿಸಿರುವುದರಲ್ಲಿ ಗೊರೂರರವರು ಸಿದ್ಧಹಸ್ತರಾಗಿದ್ದಾರೆ. ಇದಕ್ಕೆ ಮುಖ್ಯವಾದ ಉದಾಹರಣೆಗಳನ್ನು ಗೊರೂರರವರ ಕೃತಿಗಳಲ್ಲಿ ಕಾಣುವ ಹಳ್ಳಿಯ ಹಬ್ಬಗಳ ಚಿತ್ರಣ ಹಾಗೂ ಜಾತ್ರೆ ಮತ್ತು ರಥೋತ್ಸವಗಳ ಚಿತ್ರಣಗಳಲ್ಲಿ ಗುರುತಿಸಬಹುದು. ನಮ್ಮ ಕೃಷಿಕನ ಬದುಕು ಪ್ರಾಮಾಣಿಕ ದುಡಿಮೆಯ ಬದುಕಾಗಿರುವಂತೆ ಪ್ರಭಾವೀ ಪೂರ್ಣ ಕಲಾಮಯ ಸಾಂಸ್ಕೃತಿಕ ಶ್ರಮಜೀವನದ ಬದುಕು ಆಗಿದೆ. ಗೊರೂರರವರು ತಿಳಿಸಿರುವಂತೆ ಗ್ರಾಮೀಣ ಬದುಕಿನ ಸೊಗಡು ನಗರದ ಬದುಕಿನ ಏಕತಾನತೆಯನ್ನು ನೋವನ್ನು ನಿವಾಳಿಸಿ ಹಾಕುತ್ತದೆ. ಗಾಂಧೀಜಿಯವರು ಹೇಳಿರುವಂತೆ ಗ್ರಾಮೀಣ ಜನರಲ್ಲಿ ಬಡತನ ಬದುಕಿನ ಹೊರಸ್ಥಿತಿಯಾದರೆ ಸಂಸ್ಕೃತಿ ಬದುಕಿನ ಅಂತರಂಗದ ಸಂಗತಿಯಾಗಿದೆ ಎಂಬುದು ಸತ್ಯಸಂಗತಿ.

ಗೊರೂರರವರು ಚಿತ್ರಿಸಿರುವ ಕೃಷಿ ಸಂಸ್ಕೃತಿಯ ವಿವರಗಳನ್ನು ಅವರ 'ಹಳ್ಳಿಯ ಚಿತ್ರಗಳು', 'ನಮ್ಮೂರಿನ ರಸಿಕರು', 'ಬೈಲಹಳ್ಳಿ ಸರ್ವೆ', 'ಗರಡುಗಂಬದ ದಾಸಯ್ಯ', 'ಬೆಸ್ತರ ಕರಿಯ', 'ಶಿವರಾತ್ರಿ', 'ಮೆರವಣಿಗೆ', 'ಪುನರ್ಜನ್ಮ', 'ಕಮ್ಮಾರ ವೀರಭದ್ರಾಚಾರಿ', 'ಉಸುಬು', 'ಗೋಪುರದ ಬಾಗಿಲು', 'ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು', 'ವೈಯಾರಿ', 'ಹೇಮಾವತಿ', 'ಊರ್ವಶಿ', 'ಮರೆಯಾದ

ಮಾರಮ್ಮ' ಮತ್ತು 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಮುಂತಾದ ಕೃತಿಗಳಲ್ಲಿ ನಾವು ಕಾಣಬಹುದಾಗಿದೆ.[೧] ಗ್ರಾಮೀಣ ಜೀವನದಲ್ಲಿ ಅಮೂಲ್ಯ ಗುಣಗಳು ನಮ್ಮ ಮನಸ್ಸನ್ನು ಸೂರೆಗೊಂಡಂತೆ ಅವರ ಸೇಡಿನ ಜ್ವಾಲೆಯು ಸಹ ನಮ್ಮನ್ನು ತಲ್ಲಣಗೊಳಿಸುತ್ತದೆ. ಸೇಡಿಗೆ ಕಾರಣದ ವ್ಯಕ್ತಿ ಯಾರೇ ಆಗಿದ್ದರು ಸೇಡಿನ ರೋಷ ಮಾತ್ರ ವ್ಯಕ್ತಿಯಲ್ಲಿ ಜ್ವಲಂತವಾಗಿರುತ್ತದೆ. ಅಯ್ಯುವಿನ ತಂದೆ ಬೂತಯ್ಯ ಗುಳ್ಳನ ತಂದೆಗೆ ಮೋಸ ಮಾಡಿರುತ್ತಾನೆ. ಆ ಮೋಸಕ್ಕೆ ಪ್ರತಿಯಾಗಿ ಗುಳ್ಳ ಅಯ್ಯುವಿನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ನಿಶ್ಚಿಯಿಸುತ್ತಾನೆ. ಅಯ್ಯುವಿನ ತಲೆಯನ್ನು ಉರುಳಿಸಲೇಬೇಕು ಎಂಬುದು ಗುಳ್ಳನ ಹಠವಾಗಿರುತ್ತದೆ. ಇಷ್ಟಾದರೂ ಗುಳ್ಳನ ಹೆಂಡತಿ ಅತಿ ಸಾತ್ವಿಕ ಹೆಣ್ಣು. ಅವಳಿಗೆ ಗುಳ್ಳನ ರೋಷಪೂರಿತವಾದ ಸೇಡಿನ ಮನೋಧರ್ಮ ಹಿಡಿಸುವುದಿಲ್ಲ. ಈ ವಿಷಯದಲ್ಲಿ ಗುಳ್ಳನನ್ನು ಆಕೆ ಎಚ್ಚರಿಸುತ್ತಾಳೆ. ಸ್ವಾಭಾವಿಕವಾಗಿ ಒಳ್ಳೆಯವನಾದ ಗುಳ್ಳ ನೀರು ಪಾಲಾಗಬೇಕಾಗಿದ್ದ ಅಯ್ಯುವಿನ ಸಂಸಾರವನ್ನು ಕಾಪಾಡುವುದರ ಮೂಲಕ ಅವನು ತನ್ನ ಹೃದಯಾಂತರಾಳದ ಉತ್ತಮ ಗುಣವನ್ನು ವ್ಯಕ್ತಪಡಿಸಿದ್ದಾನೆ. ಇಲ್ಲಿ ಹಳ್ಳಿಯ ಜನರ ಸ್ವಾಭಾವಿಕ ಸಹಜ ಹಿರಿತನವನ್ನು ಗೊರೂರುವರು ನೆನಪು ಮಾಡಿಕೊಟ್ಟಿದ್ದಾರೆ. ಇದನ್ನು ಗೊರೂರವರು ಹಳ್ಳಿಯ ಜನರ ಮುಗ್ಧಮನಸ್ಸಿನ ಹಿರಿಯ ಸಂಸ್ಕೃತಿ ಎಂದು ಅನೇಕ ಬಾರಿ ತಿಳಿಯಪಡಿಸಿದ್ದಾರೆ. "ಅಯ್ಯನ ಬುರುಡೆ ಹಾರಿದ ಮೇಲೆ ನನ್ನ ಬುರುಡೆ ನೂರುಸಲ ಹಾರಲಿ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೭) ಎಂದು ಉದ್ವೇಗದಲ್ಲಿ ಹಾರಾಡಿದ ಗುಳ್ಳನ ಮನಸ್ಸು ಪರಿವರ್ತನೆಯಾಗುವುದು ಆಶ್ಚರ್ಯ ಎನಿಸಿದರೂ ಇಂಥ ಸಂದರ್ಭಗಳು ಹಳ್ಳಿಯ ವಾತಾವರಣದಲ್ಲಿ ಅಪರೂಪಕ್ಕಾದರೂ ನಮ್ಮ ಕಣ್ಣಿಗೆ ಬೀಳುತ್ತದೆ. ಈ ದೃಷ್ಟಿಯಲ್ಲಿ ಗ್ರಾಮೀಣ ಸಂಸ್ಕೃತಿ ನಗರ ಸಂಸ್ಕೃತಿಗಿಂತ ಭಿನ್ನ ಅಷ್ಟೇ ಅಲ್ಲ ಆದರ್ಶನೀಯ ಎಂಬುದನ್ನು ಗೊರೂರವರ ಮೂಲಕ ನಾವು ಮನವರಿಕೆ ಮಾಡಿಕೊಳ್ಳಬಹುದು. ಇಂತಹ ಹಿರಿಯ ಸಂಸ್ಕೃತಿಗೆ ತದ್ವಿರುದ್ಧವಾಗಿ ರೋಷದ ಜ್ವಾಲೆ ಹಳ್ಳಿಯ ವಾತಾವರಣವನ್ನು ಭಸ್ಮಮಾಡಿರುವುದನ್ನು ಗ್ರಾಮೀಣ ಪರಿಸರದಲ್ಲಿ ಕಾಣುತ್ತೇವೆ ಎಂಬ ಮಾತು ಸಹ ತಳ್ಳಿಹಾಕುವಂತಹದು ಅಲ್ಲ. ಗೊರೂರುವರು ಬೂತಯ್ಯನ ಪಾತ್ರದ ಮೂಲಕ ಗ್ರಾಮೀಣ ಜನತೆಯ ಕೆಲವು ಸಣ್ಣತನಗಳನ್ನು ತಿಳಿಸಿಕೊಡುತ್ತಾರೆ. "ಒಕ್ಕಲಿಗನ ಹತ್ತಿರ ಹಣವಿದ್ದರೆ ಅವನಿಗೆ ಸರಿಯಾಗಿ ನಿದ್ರೆ ಬರುವುದಿಲ್ಲ; ಊಟ ಸೇರುವುದಿಲ್ಲ. ಆ ಹಣವನ್ನು ಯಾರಿಗಾದರೂ ದಂಡತೆತ್ತ ಹೊರತು ಅವನಿಗೆ ಮನಸ್ಸಿಗೆ ನಿರಾಳವಿಲ್ಲ. ಕೈಲಿ ದುಡ್ಡಿದ್ದರೆ ಅವನು ಇಲ್ಲದ ವ್ಯಾಜ್ಯವನ್ನು ಗಂಟುಹಾಕಿಕೊಂಡು ಹಣವನ್ನು ಲಾಯರಿಗೆ ತೆತ್ತುಬಿಡುತ್ತಾನೆ. ಅನಂತರ ಅವನ ಮನಸ್ಸು ಶಾಂತವಾಗುತ್ತೆ. ಜೋರಾದವರಿಗೆ ಒಕ್ಕಲಿಗರು ದಂಡತೆತ್ತು ಬಿಡುತ್ತಾರೆ; ಮೆತ್ತಗಿರುವವರನ್ನು ತುಳಿದು ಬಿಡುತ್ತಾನೆ" (ಅದೇ; ಪು. ೧೦) ಎಂದು ಹೇಳುವ ಬೂತಯ್ಯನ ಮಾತು ಪೂರ್ಣ ಸತ್ಯ.

---

೧. ಗೊರೂರವರು ಸಂಪಾದಿಸಿರುವ ಜನಪದ ಸಾಹಿತ್ಯ ಕೃತಿಗಳಾದ 'ಹಳ್ಳಿಯ ಹಾಡುಗಳು' ಮತ್ತು 'ಹಳ್ಳಿಯ ಬಾಳು'ಗಳಲ್ಲೂ ಕೃಷಿ ಸಂಸ್ಕೃತಿಗೆ ಸಂಬಂಧಪಟ್ಟ ಅನೇಕ ವಿವರಗಳು ದೊರಕುತ್ತವೆ. ಇವುಗಳ ಬಗ್ಗೆ 'ಗೊರೂರವರ ಕೃತಿಗಳು' ಎಂಬ ನಾಲ್ಕನೆ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಗೊರೂರರವರು ತಮ್ಮ ಪ್ರಾಂತ್ಯದ ಕೃಷಿಕ ಸಮಾಜದಲ್ಲಿ ಕಂಡುಬರುವ ಒಂದು ವಿಶೇಷ ಸಂಗತಿಯನ್ನು 'ವೈಯಾರಿ' ಕೃತಿಯಲ್ಲಿ ತಿಳಿಸಿಕೊಟ್ಟಿದ್ದಾರೆ. "ವಾರದ ಎಲ್ಲ ದಿನವು ಮೂಗಿಗೆ ಕವಡೆ ಕಟ್ಟಿಕೊಂಡು ದುಡಿದು ಸೋಮವಾರ ಸ್ವಯಂ ರಜ ಘೋಷಿಸಿಕೊಳ್ಳುತ್ತಾರೆ. ಇದು ಪೂರ್ವದಿಂದಲೂ ನಡೆದು ಬಂದದ್ದು. ಸೋಮವಾರ ಎತ್ತುಗಳಿಗೂ ಕೆಲಸವಿರುವುದಿಲ್ಲ. ಆ ದಿವಸ ರೈತರು ಉಳುವುದು, ಹರತೆ ಹೊಡೆಯುವುದನ್ನು ನಿಲ್ಲಿಸಿ ಎತ್ತುಗಳ ಮೈಯನ್ನು ತೊಳೆದು ಅವುಗಳನ್ನು ಚೆನ್ನಾಗಿ ಮೇಯಿಸುತ್ತಾರೆ. ರೈತರು ಆ ದಿವಸ ಅಗಸನಿಂದ ಬಂದ ಮಡಿ ಅರಿವೆಗಳನ್ನು ಉಟ್ಟುಕೊಂಡು ಸ್ವಲ್ಪ ಶುಭ್ರವಾಗಿ ಕಾಣಲು ಪ್ರಯತ್ನ ಪಡುತ್ತಾರೆ". (ಅದೇ; ಪು. ೧೧) ಈ ಮಾತುಗಳಲ್ಲಿ ಗೊರೂರರವರು ರೈತನ ದುಡಿಮೆಗೂ ವಿಶ್ರಾಂತಿ ಅಗತ್ಯ ಎಂಬುದನ್ನು ಸೂಚಿಸಿದ್ದಾರೆ. ಅಷ್ಟೇ ಅಲ್ಲದೆ ದುಡಿಯುವ ಎತ್ತುಗಳಿಗೂ ವಾರಕ್ಕೆ ಒಂದು ದಿನವಾದರೂ ವಿಶ್ರಾಂತಿ ಬೇಕು ಎಂಬ ಭಾವನೆ ಸ್ಪಷ್ಟವಾಗಿ ನಮಗೆ ತಿಳಿದು ಬರುತ್ತದೆ. ಈ ಪದ್ಧತಿ ಹಾಸನ ಜಿಲ್ಲೆಯ ಪರಿಸರದಲ್ಲಿ ನಿಚ್ಚಳವಾಗಿ ಕಾಣಬಹುದು. ಮಿಕ್ಕ ಪ್ರಾಂತ್ಯಗಳಲ್ಲಿ ಅಷ್ಟು ಕಟ್ಟುನಿಟ್ಟಾಗಿ ಪಾಲನೆ ಆಗದಿದ್ದರು ಆಶ್ಚರ್ಯವಿಲ್ಲ. ಈ ವಾರದ ರಜಾದಿನದಲ್ಲಿ ರೈತರು ತಮ್ಮ ಕುಟುಂಬಕ್ಕೆ ಬೇಸಾಯಕ್ಕೆ ಸಂಬಂಧಪಟ್ಟ ಇತರ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ. ವಾರದ ಎಲ್ಲ ದಿನವೂ ದುಡಿದ ರೈತನಿಗೆ ವಾರದ ವಿಶ್ರಾಂತಿ ದಿನದ ಸುಖ ಹೆಚ್ಚು ಅನುಭವ ವೇದ್ಯವಾಗುತ್ತದೆ.

'ಮೆರವಣಿಗೆ' ಕೃತಿಯಲ್ಲಿ ಗೊರೂರರವರು ಚಿತ್ರಿಸಿರುವ ದ್ವೇಷಾಸೂಯೆ ಪ್ರಸಂಗ ಗಮನಾರ್ಹವಾದದ್ದು. ಇಲ್ಲಿ ಮಲ್ಲಿಗೆಹಳ್ಳಿಯ ಸಾಹುಕಾರರು ಕೃತ್ರಿಮವಾಗಿ ಗೋಪಾಲನಿಗೆ ಜೈಲುವಾಸವನ್ನು ತಂದುಕೊಡುತ್ತಾರೆ. ಗೋಪಾಲ ಕಾನೂನಿನಂತೆ ಜೈಲುವಾಸ ಅನುಭವಿಸಿ ಜೈಲಿನಿಂದ ಬಿಡುಗಡೆಯಾಗಿ ಬರುತ್ತಾನೆ. ಬಡವನಾದ ಗೋಪಾಲನಿಗೆ ಅಂತರಾಳದಲ್ಲಿ ತಾನು ನಿರ್ದೋಷಿ ಎಂಬ ನಂಬಿಕೆ ಇದ್ದರು ಸಾಹುಕಾರರ ವಂಚನೆಯಿಂದ ಜೈಲಿನ ನೋವು, ಅವಮಾನವನ್ನು ಗೋಪಾಲ ಅನುಭವಿಸಲೇಬೇಕಾಯಿತು. ಗೋಪಾಲನ ಮನೆಯವರು ಜೈಲಿನಿಂದ ಬಿಡುಗಡೆಯಾಗಿ ಬಂದ ಅವನನ್ನು ಗೌರವದಿಂದಲೇ ಕಾಣುತ್ತಾರೆ. ಆದರೆ ಸಾಹುಕಾರರು ಮಾತ್ರ ಗೋಪಾಲನ ಮೇಲಿನ ಸೇಡಿನ ಭಾವನೆಯನ್ನು ಮರೆಯುವುದೂ ಇಲ್ಲ, ಕಡಿಮೆಯೂ ಮಾಡಿಕೊಳ್ಳುವುದಿಲ್ಲ. ಗೋಪಾಲನ ಮನೆಗೆ ಹೆಣ್ಣು ಕೇಳಲು ಬಂದವರಿಗೆಲ್ಲಾ ಗೋಪಾಲ ಸೆರೆಮನೆಗೆ ಹೋಗಿ ಬಂದವನು ಎಂದು ಒಡಕು ಮಾತನ್ನು ಹೇಳಿ ಸಾಹುಕಾರರು ಮದುವೆಯನ್ನು ತಪ್ಪಿಸುತ್ತಿದ್ದರು. ಇಂತಹ ಹೀನ ಕೃತ್ಯ ಗ್ರಾಮೀಣ ಸಮಾಜದಲ್ಲಿ ಎಷ್ಟು ಜೀವಂತವಾಗಿತ್ತು ಎಂಬುದನ್ನು ಗೊರೂರರವರು ಗೋಪಾಲನ ಉದಾಹರಣೆಯ ಮೂಲಕ ಸ್ಪಷ್ಟಪಡಿಸಿದ್ದಾರೆ. ಕೋರ್ಟಿನ ದಾಖಲೆಯನ್ನು ಕೋರ್ಟಿನ ವ್ಯವಹಾರ ಮುಗಿದ ಮೇಲೆಯು ಹಳ್ಳಿಯ ಸಾಹುಕಾರರು ಬಡವರಿಗೆ ಕೊಡದೆ ವಂಚನೆ ಮಾಡುತ್ತಿದ್ದ ಮೋಸದ ಪ್ರಸಂಗಕ್ಕೂ ಈ ಘಟನೆ ಉತ್ತಮ ಉದಾಹರಣೆಯಾಗಿದೆ. ಗೊರೂರರವರು ಗ್ರಾಮೀಣ ಜೀವನದಲ್ಲಿ ಕಂಡುಬರುವ ಕೃತ್ರಿಮ ಸಂಗತಿಗಳನ್ನು ದಾಖಲಿಸಿರುವುದು ಇಲ್ಲಿ ಗಮನಾರ್ಹವಾಗಿದೆ.

ಗ್ರಾಮೀಣ ಪರಿಸರದಲ್ಲಿ ಜನಬಲ - ಧನಬಲ ಹಮ್ಮಿನ ಸ್ಪರ್ಧೆ ಆಗಾಗ ನಡೆಯುವುದುಂಟು. ಸಾಹುಕಾರ ಶಠಾರಿಯಂತವರು ಇಂತಹ ಸವಾಲನ್ನು ಒಡ್ಡಿ ಸವಾಲಿನಲ್ಲಿ ಶ್ರೀನಿವಾಸ ಪೆರುಮಾಳರಂತವರಿಗೆ ಸೋತಿರುವ ಘಟನೆಗಳುಂಟು. ಗೊರೂರವರು ಶ್ರೀನಿವಾಸ ಪೆರುಮಾಳರ ಘಟನೆಯನ್ನು ನಿದರ್ಶನವಾಗಿ ಕೊಟ್ಟಿರುವುದು 'ಹೇಮಾವತಿ' ಕಾದಂಬರಿಯಲ್ಲಿ ಗಮನಾರ್ಹ ಪ್ರಸಂಗ. ಸಾಹುಕಾರರು ಶ್ರೀನಿವಾಸ ಪೆರುಮಾಳರ ಅಭಿಮಾನದ ಜಮೀನನ್ನು ಕಬಳಿಸಲು ಪ್ರಯತ್ನಿಸಿದಾಗ ಶ್ರೀನಿವಾಸ ಪೆರುಮಾಳರು ತಮ್ಮ ಜಮೀನಿನ ಬಗ್ಗೆ ಸಾಹುಕಾರರಿಗೆ ಆಡುವ ಮಾತು "ಈ ತೋಟ ನಮ್ಮ ವಂಶಪಾರಂಪರ್ಯವಾಗಿ ಬಂದ ಆಸ್ತಿ. ನಾವು ದುಡಿದು ಊಟ ಮಾಡಬೇಕೆಂಬುದನ್ನು ಕಲಿಸಿದ ಗುರು ಇದು. ನಮ್ಮ ತಾಯಿಯೂ ಹೌದು; ಮಗನೂ ಹೌದು. ಇದು ಇರುವವರೆಗೆ ನಾವು ಯಾರ ಹಂಗಿಗೂ ಒಳಗಾಗಬೇಕಾದುದಿಲ್ಲ. ಆಶ್ರಯವನ್ನು ಬಯಸಬೇಕಾದುದಿಲ್ಲ. ಈ ಲೋಕದಲ್ಲಿರುವ ಜಮೀನುಗಳೆಲ್ಲಾ ನಿಮ್ಮದೆಯೆ. ಎಲ್ಲೆಲ್ಲೂ ಹಾಳುಗಂದಾಯ; ಆಯ್ದುಕೊಂಡು ತಿನ್ನುವ ಕೋಳಿಯ ಕಾಲು ಮುರಿದಂತೆ ಬಡಪಾಯಿಯಾದ ನನ್ನ ಮೇಲೆ ಯಾಕೆ ನಿಮ್ಮ ಕಣ್ಣು? ನನಗೆ ಇರುವ ಜಮೀನು ನಾನೇ ಗೆದ್ದು ಪಾಕಮಾಡಿ ಕೆಲಸ ಮಾಡುವಷ್ಟಿದೆ. ನಿಮಗಿರುವ ಜಮೀನಿನಲ್ಲಿ ಸಾವಿರ ಆಳು ದುಡಿದರೂ ಪೂರೈಸುವುದಿಲ್ಲ. ಇದನ್ನು ನಾನು ಕೊಡುವುದಿಲ್ಲ" ಎಂದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೮) ಶ್ರೀನಿವಾಸ ಪೆರುಮಾಳರ ಮಾತಿನಲ್ಲಿ ಗ್ರಾಮೀಣ ಜನಕ್ಕೆ ಭೂಮಿ ಮೇಲೆ ಇರುವ ನಿಶ್ಚಿತ ಒಲವು ಸ್ಪಷ್ಟವಾದಂತೆ ಸಾಹುಕಾರ ಜನ ಬಡವರ ಭೂಮಿಯನ್ನು ಹೇಗೆ ಕಬಳಿಸುವ ದುಷ್ಟತನವನ್ನು ಹೊಂದಿರುತ್ತಾರೆ ಎಂಬುದು ಈ ಘಟನೆಯಲ್ಲಿ ಸ್ಫುಟವಾಗಿದೆ. ಹಣದಿಂದ ಜನಬಲವನ್ನು ತೋರಿಸುವ ಸಂಚನ್ನು ಗೊರೂರವರು ವ್ಯಂಗ್ಯವಾಗಿ ಚಿತ್ರಿಸಿರುವುದು ಗಮನಾರ್ಹ. ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಇಂತಹ ಸಂಚಿನ ಪ್ರಸಂಗಗಳಿಗೆ ಗೊರೂರವರು ಸಾಹಿತಿಯಾಗಿ ಸ್ಪಂದಿಸಿರುವುದು ವಿಶೇಷವಾಗಿದೆ. ಜಿಲ್ಲಾಧಿಕಾರಿಗಳ ಎದುರಿನಲ್ಲಿ ಸಾಹುಕಾರ ಸೋತು ಸಪ್ಪೆ ಮುಖ ಹಾಕಿಕೊಳ್ಳುವುದು ಸಂದರ್ಭದ ರಸಿಕತೆಗೆ ಮೆರಗನ್ನು ತಂದುಕೊಟ್ಟಿದೆ.

ಗ್ರಾಮೀಣ ಪ್ರದೇಶದಲ್ಲಿ ದೂರಾಲೋಚನೆಯ ಹಾಗೂ ದುರಾಲೋಚನೆಯ ದುಷ್ಟ ಸಾಹುಕಾರರು ಹಳ್ಳಿಯ ಜನಕ್ಕೆ ಮೋಸ ಮಾಡುತ್ತಿದ್ದ ಉದಾಹರಣೆಯ ಪ್ರಸಂಗಕ್ಕೆ 'ಊರ್ವಶಿ' ಕೃತಿಯಲ್ಲಿ ಸಾಹುಕಾರ ಅಪ್ಪಾಜಿಯ ಘಟನೆ ಒಂದು ನಿದರ್ಶನವಾಗಿದೆ. ಅಪ್ಪಾಜಿ ಸುಂದರರಾಜನಿಗೆ ಹಣ ಸಾಲ ಕೊಟ್ಟು ಅವನ ಭೂಮಿ ಎಲ್ಲವನ್ನು ಮೋಸದ ರೀತಿಯಲ್ಲಿ ಕೋರ್ಟಿನ ಮೂಲಕವೇ ಕಬಳಿಸುತ್ತಾನೆ. ಸುಂದರರಾಜನಿಗೆ ಬೇರೆಯವರು ಸಾಲಕೊಟ್ಟಿದ್ದರು ಅಪ್ಪಾಜಿಯ ಮೋಸದ ಎದುರಿನಲ್ಲಿ ನಿಸ್ಸಹಾಯಕರಾದದ್ದು ಇಲ್ಲಿ ಗಮನಾರ್ಹ ಸಂಗತಿ. ಅಪ್ಪಾಜಿಯಂತಹ ದುರಾಲೋಚನೆಯ-ದೂರಾಲೋಚನೆಯ ಗ್ರಾಮೀಣ ಸಾಹುಕಾರರನ್ನು ಗೊರೂರವರು ತಮ್ಮ ಕೃತಿಗಳಲ್ಲಿ ಯಥಾವತ್ತಾಗಿ ಚಿತ್ರಿಸಿರುವುದು ವಿಶೇಷವಾಗಿದೆ. ಕೋರ್ಟಿನ ವ್ಯವಹಾರ ದಲ್ಲಿ ಹಣ ಇದ್ದವರಿಗೆ ಮಾತ್ರ ಗೆಲವು ಬಡವರಿಗೆ ಸೋಲೇ ನಿಶ್ಚಿತ ಎಂಬ ಸತ್ಯಾಂಶವನ್ನು ಗೊರೂರವರು

ಈ ಘಟನೆಯಲ್ಲಿ ಸೂಚಿಸಿದ್ದಾರೆ. ಹಳ್ಳಿಯವರ ಪಾಲಿಗೆ ನ್ಯಾಯಾಲಯ ಹೆಸರಿಗೆ ಮಾತ್ರ ನ್ಯಾಯಾಲಯ ಆಗಿರುತ್ತದೆ ಎಂಬುದು ಇಂತಹ ಸಂದರ್ಭಗಳಲ್ಲಿ ಸುಸ್ಪಷ್ಟವಾಗುತ್ತದೆ. ಈ ಪ್ರಸಂಗದಲ್ಲಿ ಸಾಹುಕಾರ ಅಪ್ಪಾಜಿಯ ವಂಚನೆಯ ತೀಕ್ಷ್ಣತೆ, ತೀವ್ರತೆಯೂ ಸಹ ನಮ್ಮನ್ನು ಬೆರಗುಗೊಳಿಸುತ್ತದೆ. ಮುಗ್ಧ ಗ್ರಾಮೀಣ ಜನ ಸಾಹುಕಾರ ಅಪ್ಪಾಜಿಯಂತಹವರ ಮೋಸ ಅರಿಯದೆ ನೋವಿಗೆ ಒಳಗಾಗುವುದರ ಬಗ್ಗೆ ಗೊರೂರವರು ಸಹಜವಾಗಿ ಅನುಕಂಪೆ ವ್ಯಕ್ತಪಡಿಸುವುದನ್ನು ಗಮನಿಸಬಹುದು. ಸಾಹುಕಾರ ಅಪ್ಪಾಜಿಯವರ ಅನ್ಯಾಯಕ್ಕೆ ಒಳಗಾದ ಸುಂದರರಾಜ ತೀವ್ರವಾದ ನೋವಿನಿಂದ ಸಾಹುಕಾರರನ್ನು ಪ್ರತಿಭಟಿಸಿ ಹೇಳುವ ಮಾತುಗಳು "ನಿಮ್ಮದು ಅನ್ಯಾಯ, ನಿತ್ಯ ಒಂದು ಮನೆ ಮುರಿಯುತ್ತೀರಿ, ನೀವು ಶುದ್ಧ ಮೋಸಗಾರರು. ನೀವು ಪ್ರೋನೋಟಿನಲ್ಲಿ ಸುಮ್ಮನೆ ರುಜುಹಾಕು. ಮೇಲಿನದನ್ನೆಲ್ಲ ನಾನು ಬರೆದುಕೊಳ್ಳುತ್ತೇನೆ" ಎಂದು ಹೇಳಿದುದರಿಂದ ನಂಬಿ ನಾನು ರುಜು ಹಾಕಿದೆ. ಮೊದಲು ಇದ್ದದ್ದು ಐನೂರು ಸಾಲ ಅಲ್ಲವೆ? ಈಚಿನದು ನೂರು. ಆರುನೂರು, ಹೇಗೆ ಸಾವಿರವಾಯಿತು? ಒಂದು ಕಡೆಯಿಂದ ಬೆಂಕಿ ಹತ್ತಿಸಿ ಲೂಟಿಮಾಡುತ್ತಿದ್ದೀರಿ" ಎಂದನು. .... ಹಿಂದೆ ಒಂದು ಸಲ ಅವರು ನಿಜವಾಗಿಯೂ ಒಂದು ಮನೆಯನ್ನು ಮುರಿಸಿ ಹಂಚುಗಳು, ಇಟ್ಟಿಗೆಗಳನ್ನೆಲ್ಲ ಹೇರಿಸಿಕೊಂಡು ಬಂದರು. ಮನೆಯ ಯಜಮಾನನೂ, ಹೆಂಡತಿಯೂ, ನಾಲ್ಕಾರು ಮಕ್ಕಳೂ ಗೊಳೊ ಎಂದು ನಡುಬೀದಿಯಲ್ಲಿ ರೋದಿಸಿದರು. ಊರವರೆಲ್ಲ ಬಂದು ಸಾಹುಕಾರರಿಗೆ ಹೇಳಿದರು. "ಮನೆಯನ್ನು ಕೀಳುವುದರಿಂದ ಆ ಬಡಪಾಯಿಗಳು ಬೀದಿಯ ಪಾಲಾಗುವುದಲ್ಲದೆ ಸಾವಿರಾರು ರೂಪಾಯಿ ಬಾಳುವ ಮನೆ ಹಂಚುಗಳು ತೆಗೆದ ಮೇಲೆ ಅನ್ಯಾಯವಾಗಿ ಹಾಳಾಗುವುದೆಂದು" ಎಷ್ಟೋ ಹೇಳಿಕೊಂಡರು. ಸಾಹುಕಾರರು ಯಾವುದೂ ಕಿವಿಗೇ ಬೀಳದವರಂತೆ ತಮ್ಮ ಕೆಲಸದಲ್ಲಿ ತೊಡಗಿದ್ದರು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೭೭) ಅನ್ಯಾಯ ಮಾಡುವುದ ರಲ್ಲಿ ಒಗ್ಗಿ ಹೋಗಿದ್ದ ಸಾಹುಕಾರನಿಗೆ ಸುಂದರರಾಜನ ದೂಷಣೆಯ ಮಾತುಗಳು ಹೊಡೆಸಿಕೊಂಡ ಹುಡುಗ ಆಡುವ ಕಳಪೆಯ ಮಾತಿಗೆ ಸದೃಶ್ಯವಾಗಿತ್ತು. ಬಡವರ ಮನೆಯನ್ನು ಹಾಳು ಮಾಡುವುದರಲ್ಲಿ ದುಷ್ಟರ ಉತ್ಸಾಹ ಎಷ್ಟು ಎಲ್ಲೆ ಮೀರಿದ್ದು ಎಂಬುದನ್ನು ಈ ಘಟನೆಯಲ್ಲಿ ಗುರುತಿಸಬಹುದು. ಸಾಹಿತಿಯಾಗಿ ಗೊರೂರವರು ಸುಂದರರಾಜನ ಮೂಲಕ ಆಡಿಸಿರುವ ಪ್ರತಿಭಟನೆಯ ಮಾತುಗಳು ಅವರ ಅಂತರಾಳದ ಪ್ರತಿಭಟನೆಯ ತೀಕ್ಷ್ಣ ನುಡಿಗಳಾಗಿವೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಗೊರೂರವರು ರಸಿಕತೆಯ ನವುರು ನುಡಿಯಲ್ಲಿ ಎಷ್ಟು ಸಮರ್ಥರೋ ಪ್ರತಿಭಟನೆಯ ಸಮರ್ಥ ನುಡಿಯಲ್ಲಿಯೂ ಅಷ್ಟೇ ಪ್ರಬುದ್ಧರು ಎಂಬುದನ್ನು ಗಮನಿಸಬಹುದು. ಹೀಗೆ ಗೊರೂರವರಿಗೆ ಶೈಲಿಯಲ್ಲಿ ಸಿದ್ಧಹಸ್ತ ಇದೆ ಎಂಬುದನ್ನು ನಿಸ್ಸಂಕೋಚವಾಗಿ ಹೇಳಬಹುದು.

ರೈತರಲ್ಲಿ ನಾವು ಧಾರಾಳತನವನ್ನು ಗುರುತಿಸುವಂತೆ ಜಿಪುಣತನವನ್ನು ಅಷ್ಟೇ ಪ್ರಮಾಣದಲ್ಲಿ ಕಾಣಬಹುದು. ಗ್ರಾಮೀಣ ಜನರ ನಾಡಿಯನ್ನು ಬಲ್ಲ ಗೊರೂರವರು ರೈತರ ಜಿಪುಣತನವನ್ನು ಅಷ್ಟೇ ಮಾರ್ಮಿಕವಾಗಿ ಕೆಲವೊಮ್ಮೆ ಬಿಚ್ಚುಮಾತಿನಲ್ಲಿಯೂ ತಮ್ಮ ಕೃತಿಗಳಲ್ಲಿ ತಿಳಿಸಿಕೊಟ್ಟಿದ್ದಾರೆ. ಗೊರೂರವರ

ಶೈಲಿಯಲ್ಲಿ ಬಿಚ್ಚುಮಾತು, ಚುಚ್ಚುಮಾತು ಹಾಗೂ ಮಾರ್ಮಿಕ ನುಡಿ ಮೂರು ಸೊಗಸಾಗಿ ಮೂಡಿಬಂದಿದೆ. ರಸಿಕರಾದ ಗೊರೂರರವರು ರೈತರಲ್ಲಿ ಕಾಣುವ ಲೋಪದೋಷಗಳನ್ನು ಹೇಳುವಾಗ ತಮ್ಮ ರಸಿಕ ಗುಣಕ್ಕೆ ಇಂಬುಕೊಟ್ಟಂತೆ ಹೇಳುವ ರೀತಿ ಮತ್ತಷ್ಟು ಸುಂದರವಾಗಿ ಸಹಜವಾಗಿ ಕಾಣುತ್ತದೆ. ನಗೆ ಹಿಂದಿರುವ ದೋಷ ರೈತನಿಗೆ ನಾಚಿಕೆಯನ್ನು ಉಂಟುಮಾಡುವಂತಹುದು ಆಗಿದೆ. ಸಹೃದಯ ರೈತನ ಜಿಪುಣತನಕ್ಕೆ ನಗುವುದು ಒಂದು ಪ್ರಮಾಣವಾದರೆ ಈ ಪ್ರಸಂಗದ ನಿರೂಪಣೆಯು ಗೊರೂರರವರ ರಸಿಕತೆಗೆ ನಗುವುದು ಇಮ್ಮಡಿ ಮುಮ್ಮಡಿಯಾಗಿಸುತ್ತದೆ. 'ಮರೆಯಾದ ಮಾರಮ್ಮ' ಕೃತಿಯ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಕತೆಯಲ್ಲಿ ಜಿಪುಣತನಕ್ಕೆ ಮಾಡಿಸಿದ ವ್ಯಕ್ತಿಯಾದ ಶಂಕರನಾರಾಯಣನ ಲೋಭಿತನ ಉತ್ತಮ ಉದಾಹರಣೆಯಾಗಿದೆ. ಆತ ಒಂದು ದಿನ ಮನೆಯಲ್ಲಿ ಕಿತ್ತಳೆ ಹಣ್ಣನ್ನು ಸುಲಿದು ತಿನ್ನುತ್ತಿದ್ದಾಗ ನದಿ ತೀರದ ತೋಪಿನಲ್ಲಿದ್ದ ದನ ಕಾಯುವ ಹುಡುಗರು ತಮಗೂ ಒಂದು ಹಣ್ಣನ್ನು ಕೊಡಬೇಕೆಂದು ಕೇಳಿದಾಗ ಶಂಕರನಾರಾಯಣ ಕೋಪದಿಂದ ತನ್ನ ಮನೆಯಲ್ಲಿದ್ದ ಕಿತ್ತಳೆಹಣ್ಣುಗಳನ್ನೆಲ್ಲಾ ಒರಳಿಗೆ ಹಾಕಿ ಕುಟ್ಟಿ ಹಾಳು ಮಾಡುತ್ತಾನೆಯೇ ಹೊರತು ಮಕ್ಕಳಿಗೆ ಕೈ ಎತ್ತಿ ಒಂದು ಹಣ್ಣನ್ನು ಕೊಡದ ಮಹಾ ಜಿಪುಣನಾಗಿದ್ದಾನೆ. ಹಳ್ಳಿಯವರ ಧಾರಾಳ ಮನಸ್ಸಿನ ವರ್ತನೆಯೊಂದಿಗೆ ಶಂಕರನಾರಾಯಣನ ಹೀನ ವರ್ತನೆಯನ್ನು ಹೋಲಿಸಿದಾಗ ನಮ್ಮಲ್ಲಿ ಅವನ ಬಗ್ಗೆ ವ್ಯಗ್ರ ನಗು ಉಂಟಾಗುತ್ತದೆ.

'ಶಿವರಾತ್ರಿ' ಕಥಾಸಂಕಲನದ 'ವಿಮೆ ಯಮನನ್ನೇ ಹೆದರಿಸಿತು' ಕಥೆಯಲ್ಲಿ ಗೊರೂರರವರು ಜಿಪುಣತನಕ್ಕೆ ಪುಟ್ಟ ಜೋಹಿಸ, ಶಾಮಾಚಾರ್ಯ, ಶಿಂಗ್ರಯ್ಯ ಹಾಗೂ ನರಸಿಂಹಾಚಾರ್ಯರ ಪಾತ್ರಗಳನ್ನು ಉದಾಹರಣೆಯಾಗಿ ಕೊಟ್ಟಿದ್ದಾರೆ. ಪುಟ್ಟ ಜೋಯಿಸ ನಲವತ್ತು ವರ್ಷಗಳ ನಶ್ಯದ ಚಟವನ್ನು ಹೊಂದಿದ್ದರು ಆತ ಒಂದು ದಿನವೂ ತನ್ನ ಪಾಲಿನ ಒಂದು ಚಿಟಿಕೆ ನಶ್ಯವನ್ನು ಕೊಂಡು ಕೊಳ್ಳುವುದಕ್ಕೆ ಒಂದು ಕಾಸನ್ನು ಖರ್ಚುಮಾಡದ ಮಹಾ ಜಿಪುಣ. ಆತನ ಪಾಲಿಗೆ ಒಂದು ಚಿಟಿಕೆ ನಶ್ಯಕ್ಕೆ ಒಂದು ಕಾಸನ್ನು ಖರ್ಚು ಮಾಡಿದರೆ ಒಬ್ಬನ ತಲೆ ಒಡೆದಂತೆ ಎಂಬ ಭಾವನೆ ಇತ್ತು. ಜಿಪುಣ ಪುಟ್ಟ ಜೋಹಿಸ ಜೀವ ವಿಮೆ ಮಾಡಿಸುವುದು ಸಹ ಜಿಪುಣತನದ ದೃಷ್ಟಿ ಹಿನ್ನೆಲೆಯಲ್ಲಿಯೇ. ಊರಿಗೆ ಪ್ಲೇಗು ಬಂದಾಗ ತಾನು ಸಾಯುವುದು ಖಂಡಿತ, ಆದರೂ ತನ್ನವರಿಗೆ ದುಡ್ಡು ಬರಲಿ ಎಂದು ಜೀವವಿಮೆ ಮಾಡಿಸುತ್ತಾನೆ. ಆದರೆ ಪುಟ್ಟ ಜೋಯಿಸನ ವಿಮೆ ಯಮನನ್ನು ಹೆದರಿಸಿತು ಎಂದು ಪುಟ್ಟ ಜೋಯಿಸ ಬದುಕಿದ್ದಕ್ಕೆ ಗೊರೂರರವರು ಲೇವಡಿ ಮಾಡುತ್ತಾರೆ. ನರಸಿಂಹಾಚಾರ್ಯರ ಜಿಪುಣತನವೂ ಅಷ್ಟೇ ವೈಶಿಷ್ಟ್ಯಪೂರ್ಣವಾಗಿದೆ. ಅವರ ಹಸು ಗರ್ಭಧರಿಸಿದಾಗ ಕೆಲವು ತಿಂಗಳ ಮಟ್ಟಿಗೆ ಹಾಲಿಗಾಗಿ ಬೇರೆ ಹಸುವನ್ನು ಕಟ್ಟಿಕೊಳ್ಳದೆ ಮಾಡುವ ಜಿಪುಣತನ ಅತ್ಯಂತ ಚಾಣಾಕ್ಷತನದಿಂದ ಕೂಡಿದ್ದಾಗಿರುತ್ತದೆ. ತಮಗೆ ತುಂಬಾ ಹಾಲು ಕರೆಯುವ ಹಸು ಬೇಕೆಂದು ಒಂದೊಂದು ಹಸವನ್ನು ಕೆಲವು ದಿನಗಳ ಮಟ್ಟಿಗೆ ವ್ಯಾಪಾರ ಮಾಡಿ ಅನಂತರ ಆ ಹಸು ತಮಗೆ ಒಪ್ಪಿತವಲ್ಲವೆಂದು ಬದಲಾಯಿಸುತ್ತಾ ಹೋಗುತ್ತಾರೆ. ಹೀಗೆ ಕೆಲವು ತಿಂಗಳಲ್ಲಿ ಹಸುಗಳನ್ನು ತಪಾಸಣೆ ಮಾಡುವ ಹೊತ್ತಿಗೆ ನರಸಿಂಹಾಚಾರ್ಯರ ಹಸು ಕರು ಹಾಕುತ್ತದೆ. ಯಾವ

ಹಸುವನ್ನು ವ್ಯಾಪಾರ ಮಾಡಿಕೊಳ್ಳದೆ ನರಸಿಂಹಾಚಾರ್ಯರು ತಮ್ಮ ಲೋಭಿತನವನ್ನು ಮೆರೆದಿದ್ದಾರೆ. ಶಿಂಗ್ರಯ್ಯ ತಮ್ಮೂರಿನ ಆಚಾರಿ ತನ್ನಲ್ಲಿ ಒಂಭತ್ತು ಆಣೆಗೆ ಅಡವಿಟ್ಟಿದ್ದ ಗಂಗಳದಲ್ಲಿ ಊಟಮಾಡಿ ಎಲೆಯ ಖರ್ಚನ್ನು ಉಳಿಸಿದ್ದು ಮತ್ತೊಂದು ಜಿಪುಣತನಕ್ಕೆ ನಿದರ್ಶನವಾಗಿದೆ. ಸೀಮೆ ಎಣ್ಣೆಯ ಖರ್ಚನ್ನು ಉಳಿಸುವ ಸಲುವಾಗಿ ಶಾಮಾಚಾರ್ಯರು ಕತ್ತಲಾಗುವ ಮುನ್ನವೇ ಊಟಮಾಡುವ ಅಭ್ಯಾಸವನ್ನು ಇಟ್ಟುಕೊಂಡಿದ್ದು ಅವರ ಜಿಪುಣತನಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಗೊರೂರವರು ತಮ್ಮ ಹಳ್ಳಿಯ ವ್ಯಕ್ತಿಗಳ ಜಿಪುಣತನವನ್ನು ತಿಳಿಸಿಕೊಡುವ ರೀತಿಯಲ್ಲಿ ಸಹಜತೆಯ ಸೊಗಸನ್ನು ತುಂಬಿಕೊಟ್ಟಿದ್ದಾರೆ.

ಗೊರೂರವರು ಉತ್ತಮ ಗುಣಗಳಿಗೆ ಮೂರ್ತಿರೂಪವಾಗಿ ಹೇಮಾವತಿ, ಸೀತಾಲಕ್ಷ್ಮೀ, ಕಮಲಮ್ಮ, ಲಲಿತೆ, ಹೊಸಬಿ, ಪುಟ್ಟ ಮಲ್ಲಿಗೆ ಮುಂತಾದ ಸ್ತ್ರೀ ಪಾತ್ರಗಳನ್ನು ಚಿತ್ರಿಸಿರುವಂತೆ ವ್ಯವಹಾರ ದೃಷ್ಟಿಯಲ್ಲಿ ಗಂಡಸಿಗೆ ಆಸ್ತಿ ವಿಭಾಗದಲ್ಲಿ ಪಾಲುದಾರರಾಗಿ ಪೈಪೋಟಿಯಾಗಿ ನಿಲ್ಲುವ ಸ್ತ್ರೀಪಾತ್ರವನ್ನು 'ಮರೆಯಾದ ಮಾರಮ್ಮ' ಕಥಾಸಂಕಲನದ 'ಪಟಿಂಗನ ಗರ್ವಭಂಗ' ಕತೆಯಲ್ಲಿ ಚಿತ್ರಿಸಿದ್ದಾರೆ. ಆ ಕಾಲಕ್ಕಾಗಲೇ ಸ್ತ್ರೀಯರಿಗೂ ಆಸ್ತಿ ವಿಭಾಗದಲ್ಲಿ ಹಕ್ಕು ಇತ್ತು ಎಂಬುದನ್ನು ಈ ಘಟನೆಯ ಮೂಲಕ ಸೂಚಿಸಿದ್ದಾರೆ. ಹೆಣ್ಣು ಹೃದಯವಂತಳಾಗಿರುವುದರ ಜೊತೆಗೆ ಗಂಡಸಿನಷ್ಟೇ ವಿಶೇಷ ವ್ಯವಹಾರ ನಿಪುಣಳಾಗಿರುತ್ತಾಳೆ ಎಂಬುದಕ್ಕೆ ಇಲ್ಲಿಯ ಹೆಣ್ಣು ಮಕ್ಕಳ ಪಾತ್ರ ನಿದರ್ಶನವಾಗಿದೆ.

'ಊರ್ವಶಿ' ಕಾದಂಬರಿಯಲ್ಲಿ ಕಮಲಮ್ಮ ಸುಂದರರಾಜನಿಗೆ ದಾನ ಮಾಡುವ ಘಟನೆ ಒಂದು ಹೆಣ್ಣಿನ ಹಿರಿಯ ಗುಣಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಸುಂದರರಾಜ ಸಾಹುಕಾರ ಅಪ್ಪಾಜಿಯ ಸಾಲದ ಕಪಿಮುಷ್ಠಿಗೆ ಕೈ ಸೆರೆಯಾಗುತ್ತಾನೆ. ಕೋರ್ಟಿನ ವ್ಯವಹಾರಕ್ಕೂ ವಿಧಿ ಇಲ್ಲದೆ ತಲೆ ಕೊಡಬೇಕಾದ ಪ್ರಸಂಗಕ್ಕೂ ಬಲಿಯಾಗುತ್ತಾನೆ. ಇದನ್ನು ಅರಿತ ಕಮಲಮ್ಮ ತಾನು ಅಸಹಾಯಕ ವಿಧವೆಯಾದರೂ ಸುಂದರರಾಜನಿಗೆ ಹಣದ ಸಹಾಯ ಮಾಡಿ ಅವನನ್ನು ಸಾಹುಕಾರನ ಋಣದಿಂದ ಮುಕ್ತಗೊಳಿಸಬೇಕೆಂದು ನಿಶ್ಚಯಿಸುತ್ತಾಳೆ. ಸುಂದರರಾಜನ ಹೆಂಡತಿ ಸೀತಾಲಕ್ಷ್ಮೀ ತನ್ನ ಪತಿಯ ಸಹಾಯಕ್ಕೋಸ್ಕರ ಸ್ವಲ್ಪ ಹಣವನ್ನು ಸೇರಿಸಿದರು ಅದಕ್ಕೆ ಜತೆಯಾಗಿ ಕಮಲಮ್ಮ ಹಣ ಕೂಡಿಸುವುದು ವಿಶೇಷ ಸಂಗತಿಯಾಗಿದೆ. ಹೆಣ್ಣಿನಲ್ಲಿ ನಾವು ಸಹಜವಾಗಿ ಕಾಣುವ ಕರುಣೆಯ ಗುಣಕ್ಕೆ ಕಮಲಮ್ಮನ ಈ ವರ್ತನೆ ಉತ್ತಮ ಉದಾಹರಣೆಯಾಗಿದೆ. ದಾನಮಾಡಬೇಕು ಎಂಬ ಭಾವನೆ ವ್ಯಕ್ತಿಯ ಮನಸ್ಸಿನಲ್ಲಿ ಸ್ಥಿರವಾಗಿ ಬಂದಾಗ ಆತ ಹೇಗೆ ಶ್ರಮಪಡುತ್ತಾನೆ ಎಂಬುದನ್ನು ಕಮಲಮ್ಮನಂತಹ ಒಂದು ಹೆಣ್ಣಿನ ಪಾತ್ರದ ಮೂಲಕ ದಾನ ಗುಣದ ಹಿರಿಮೆಯನ್ನು ಗೊರೂರವರು ಸ್ಪಷ್ಟ ಪಡೆಸಿದ್ದಾರೆ. ದಾನದ ಉದಾತ್ತಗುಣ ಯಾರಲ್ಲಿ ಬೇಕಾದರೂ ಹಾಗೂ ಯಾವ ಕ್ಷಣದಲ್ಲಿ ಬೇಕಾದರೂ ಮೂಡಿ ವ್ಯಕ್ತಿಯ ಜೀವಂತ ಕ್ರಿಯೆಯಾಗಿ ಕಾಣಿಸಿಕೊಳ್ಳಬಹುದು ಎಂಬ ವಿಷಯವನ್ನು ಗೊರೂರವರು ಈ ಸಂದರ್ಭದಲ್ಲಿ ಸ್ಫುಟಪಡಿಸಿದ್ದಾರೆ. ಸಾಮಾನ್ಯ ವ್ಯಕ್ತಿಯೂ ಸಹ ಮಾಡುವ ದಾನ ಸಂದರ್ಭದ ವಿಶೇಷತೆಯಿಂದ ಹೇಗೆ ಅತ್ಯಂತ

ಪ್ರಯೋಜನಕಾರಿಯಾಗುತ್ತದೆ ಎಂಬುದನ್ನು ಕಮಲಮ್ಮನ ಪಾತ್ರದ ಮೂಲಕ ಗೊರೂರರವರು ನಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ದಾನ ಮಾಡುವುದಕ್ಕೆ ಅನುಕೂಲಕ್ಕಿಂತ ಹೆಚ್ಚಾಗಿ ದಾನ ಮಾಡುವ ಮನಸ್ಸು ಅತಿ ಮುಖ್ಯ ಎಂಬುದು ಈ ಸಂದರ್ಭದಲ್ಲಿ ಸ್ಪಷ್ಟವಾಗುವ ಮತ್ತೊಂದು ಸತ್ಯ ಎಂಬುದನ್ನು ನಾವು ಇಲ್ಲಿ ಮರೆಯಬಾರದು.

ರೈತರ ದಾನದ ಗುಣವನ್ನು ವರ್ಣಿಸುವುದರಲ್ಲಿ ಗೊರೂರರವರಿಗೆ ಹೆಚ್ಚಿನ ಆಸಕ್ತಿ ಇದೆ. ನಗರ ಜೀವನದಲ್ಲಿ ದಾನದ ಗುಣವನ್ನು ಕಾಣುವುದು ಬಹು ಅಪರೂಪ. ಅವರು ದಾನವನ್ನು ಮಾಡಿದರು ಅದಕ್ಕೆ ಸ್ವಾರ್ಥದ ಹಿನ್ನೆಲೆ ಇರುತ್ತದೆ. ಶ್ರೀಮಂತಿಕೆಯ ತೋರಿಕೆಯ ಹುಚ್ಚು ಇರುತ್ತದೆ. ಇಂಥ ದಾನ ಗೊರೂರರವರ ಮನಸ್ಸಿಗೆ ಹಿತ ಎನಿಸುವುದಿಲ್ಲ. ಗ್ರಾಮೀಣ ಜನತೆಯ ನೈಜ ದಾನ ಅವರ ಮನಸ್ಸಿನ ನಿರ್ಮಲತೆಯ ಪ್ರತೀಕವಾಗಿದೆ. ಅವರು ದಾನ ಮಾಡುವುದು ದಾನದ ಸಂತೋಷಕ್ಕಾಗಿಯೇ. ಸರ್ವಜ್ಞ ದಾನದ ಬಗ್ಗೆ ಆಡುವ ಅಮೃತನುಡಿ -

"ಕೊಟ್ಟಿದ್ದು ತನಗೆ ಬಯ್ತಿಟ್ಟದ್ದು ಪರರಿಂಗೆ
ಕೊಟ್ಟು ಕೆಟ್ಟ ನೆನೆಬೇಡ ಮುಂದಕ್ಕೆ
ಕಟ್ಟಿಹುದು ಬುತ್ತಿ ಸರ್ವಜ್ಞ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು. ೧೧೦) ಸರ್ವಜ್ಞನ ಈ ಮಾತಿಗೆ ಅನುಗುಣವಾಗಿ ರೈತರು ಮನತುಂಬಿ ದಾನಮಾಡುತ್ತಾರೆ. ದಾನ ಕೊಡುವಾಗ ಅವರಲ್ಲಿ ಕಾಣುವ ಉತ್ಸಾಹ ದಾನ ಕೊಟ್ಟ ನಂತರವೂ ಅವರಲ್ಲಿ ಇಮ್ಮಡಿಯಾಗುತ್ತದೆ. ಜಿಪುಣತನದಿಂದ ಬಚ್ಚಿಟ್ಟ ಧನ ಯಾವ ರೀತಿಯ ಸಂತೋಷಕ್ಕೂ ಕಾರಣವಾಗುವುದಿಲ್ಲ - ತಾನೂ ತಿನ್ನದೆ ಬೇರೆಯವರಿಗೆ ದಾನವನ್ನು ಮಾಡದೆ ಬಚ್ಚಿಟ್ಟ ನಿಧಿ ವ್ಯರ್ಥ ಎಂಬುದು ಜನಪದರ ನಂಬಿಕೆ. ಜನಪದರ ದಾನ ಸಂಭ್ರಮವನ್ನು ಸುಗ್ಗಿಯ ಕಣದಲ್ಲಿ ನಾವು ಸಾಕ್ಷಾತ್ತಾಗಿ ಕಾಣಬಹುದು. ಕೊಡುವ - ಕೊಳ್ಳುವ ಎರಡೂ ವ್ಯಕ್ತಿಗಳ ಮುಖದಲ್ಲಿ ದಾನಕ್ಕೆ ಕಾರಣವಾದ ಧನ್ಯತೆಯ ನೆಮ್ಮದಿಯ ಚಿತ್ರವನ್ನು ಗುರುತಿಸಬಹುದು. ರೈತರ ಇಂತಹ ದಾನದಿಂದ ಹಳ್ಳಿಯ ಅನೇಕ ಅತಿ ಬಡವರು ವರ್ಷ ಪೂರ್ತಿ ನಿರಾಳ ಜೀವನವನ್ನು ನಡೆಸುವುದನ್ನು ನೋಡಬಹುದು. ಸಾಮಾಜಿಕ ಜೀವನದಲ್ಲಿ ಇಂತಹ ದಾನ ಸಮಾಜದ ಆರ್ಥಿಕ ವಿಷಮತೆಯನ್ನು ಸ್ವಲ್ಪ ಮಟ್ಟಿಗೆ ತೊಲಗಿಸಿ ಸಮಾಜದಲ್ಲಿ ಸಮತೋಲನವನ್ನು ತಂದು ಕೊಡುತ್ತದೆ ಎಂಬ ಅರ್ಥಶಾಸ್ತ್ರಜ್ಞರ ಅಭಿಪ್ರಾಯಕ್ಕೂ ಜನಪದರ ದಾನದ ಗುಣ ಇಂಬು ಕೊಡುತ್ತದೆ. ಹೀಗೆ ಕೃಷಿಕ ಸಂಸ್ಕೃತಿಯಲ್ಲಿ ದಾನದ ಮೂಲಕ ಧಾರ್ಮಿಕ ಪ್ರಜ್ಞೆಯ ಜೊತೆಗೆ ಸಾಮಾಜಿಕ ಪ್ರಜ್ಞೆಯನ್ನು ಗುರುತಿಸುವುದು ವಿಶೇಷ ಅಂಶವಾಗಿದೆ. ರೈತರ ಈ ದಾನದ ಗುಣ ಅವರ ದುಡಿಮೆಯ ಉತ್ಸಾಹಕ್ಕೂ ಪರೋಕ್ಷವಾಗಿ ಪ್ರೇರಣೆ ಆಗುತ್ತದೆ.

ಉತ್ತಮ ಗುಣದ ಹೃದಯ ದುಷ್ಟ ಹೃದಯವನ್ನು ಪರಿಣಾಮಕಾರಿ ನಾಚಿಸಬಲ್ಲದು ಹಾಗೂ ಪರಿವರ್ತನೆಯನ್ನು ಮಾಡಲು ಪ್ರಯತ್ನಿಸಬಹುದು ಎಂಬ ಲೋಕ ಸತ್ಯಕ್ಕೆ ಗೊರೂರವರ 'ಹೇಮಾವತಿ' ಕೃತಿಯಲ್ಲಿ ಒಂದು ಒಳ್ಳೆಯ ಸನ್ನಿವೇಶವನ್ನು ಗುರುತಿಸಬಹುದು. ಸಾಹುಕಾರ ಶಠಾರಿ ದುರುದ್ದೇಶದಿಂದ ಶ್ರೀನಿವಾಸ ಪೆರುಮಾಳರ ಕಡೆಗೆ ಬರುತ್ತಿರುತ್ತಾರೆ. ಶ್ರೀನಿವಾಸ ಪೆರುಮಾಳರು ಹಾದಿಯಲ್ಲಿ ಸಾಹುಕಾರ ಶಠಾರಿಯವರನ್ನು ತೋಟದಲ್ಲಿ ಸತ್ಕರಿಸುತ್ತಾರೆ. ಶ್ರೀನಿವಾಸ ಪೆರುಮಾಳರ ನಿರ್ಮಲ ದಾನದ ಮನಸ್ಸು ಸಾಹುಕಾರ ಶಠಾರಿಯವರ ಮನಸ್ಸನ್ನು ಕಟ್ಟಿಹಾಕುತ್ತದೆ. ಯಾರಿಗೂ ದಾನಮಾಡದ ಶಠಾರಿ ಪೆರುಮಾಳರ ಕೈತುಂಬಿದ ದಾನದ ಗುಣವನ್ನು ಕಂಡು ಆಶ್ಚರ್ಯಪಟ್ಟು ತಮ್ಮ ಗುಣವನ್ನೇ ಸಮರ್ಥಿಸಿಕೊಂಡು ಮಾತನಾಡುತ್ತಾರೆ. ಅದಕ್ಕೆ ಶ್ರೀನಿವಾಸ ಪೆರುಮಾಳರು ತಮ್ಮ ದಾನದ ಗುಣವನ್ನು ಸಮರ್ಥಿಸಿಕೊಳ್ಳುತ್ತಾ ಅದರಿಂದ ತಾವು ಪಡೆದ ಸಂತೋಷವನ್ನು ಸಾಹುಕಾರರಿಗೆ ತಿಳಿಸುತ್ತಾರೆ. ಶ್ರೀನಿವಾಸ ಪೆರುಮಾಳರ ಈ ವರ್ತನೆ ಸಾಹುಕಾರರ ಮನಸ್ಸಿನ ಮೇಲೆ ಅನಿವಾರ್ಯವಾಗಿ ಪ್ರಭಾವ ಬೀರುತ್ತದೆ. ಶ್ರೀನಿವಾಸ ಪೆರುಮಾಳರ ಜಮೀನಿನ ಮೇಲೆ ದುರಾಸೆಯ ಹದ್ದಿನ ಕಣ್ಣಿಟ್ಟಂತಹ ಸಾಹುಕಾರ ಶಠಾರಿಯವರಿಗೆ ಶ್ರೀನಿವಾಸ ಪೆರುಮಾಳರು ತಮ್ಮ ಜೀವನೋಪಾಯಕ್ಕೆ ಅವಶ್ಯಕವಾದ ಜಮೀನಿನಿಂದ ತಾವು ಬೇರೆ ಆಗಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸುತ್ತಾರೆ. ಈ ಪ್ರಸಂಗದಲ್ಲಿಯೂ ಗೊರೂರವರು ಎರಡು ವಿಭಿನ್ನ ಮನಸ್ಸುಗಳ ಚಿತ್ರಣವನ್ನು ಕೊಟ್ಟಿದ್ದಾರೆ. ನ್ಯಾಯವಾಗಿ ಶ್ರೀನಿವಾಸ ಪೆರುಮಾಳರ ಗುಣದಿಂದ ಸಾಹುಕಾರ ಶಠಾರಿಯವರ ಮನಸ್ಸು ಒಳ್ಳೆಯ ರೀತಿಯಲ್ಲಿ ಬದಲಾಗಬೇಕಿತ್ತು. ಆದರೆ ಸಾಹುಕಾರ ಶಠಾರಿಯವರು ಬದಲಾಗದಿರುವುದು ವಿಸ್ಮಯವಾದರೂ ನಮಗೆ ವಿಚಿತ್ರ ಸತ್ಯವೆನಿಸುತ್ತದೆ. ಸದ್ಗುಣಗಳಿಂದ ದೂರವಿರುವಂತಹ ಮೊಂಡು ಹಠವಾದಿಗಳು ನಮ್ಮಲ್ಲಿ ಇರುತ್ತಾರೆ ಎಂಬುದಕ್ಕೆ ಸಾಹುಕಾರ ಶಠಾರಿಯವರ ಪಾತ್ರ ಉತ್ತಮ ಉದಾಹರಣೆಯಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ರೈತ ಸಮುದಾಯದಲ್ಲಿ ಕಾಣಬಹುದಾದ ಅನೇಕ ಸದ್ಗುಣಗಳಲ್ಲಿ ದಾನವೂ ಒಂದಾಗಿದೆ. ಸಾಮರಸ್ಯದ ಬದುಕು ಅವರ ನಿತ್ಯಜೀವನದಲ್ಲಿ ಹೇಗೆ ಸಹಜವಾಗಿ ಕಂಡು ಬರುತ್ತವೆಯೋ ರೈತರಲ್ಲಿ ದಾನದ ಉತ್ಸಾಹವೂ ಸಹ ಅಷ್ಟೇ ಸಹಜವಾಗಿ ಕಂಡುಬರುತ್ತದೆ. ದುಡಿಯುವ ರೈತ ದೇಹದ ಶ್ರಮವನ್ನು ಲೆಕ್ಕಿಸದೆ ಪ್ರಾಮಾಣಿಕವಾಗಿ ದುಡಿಯುತ್ತಾನೆ. ದುಡಿಮೆಗೆ ಪ್ರತಿಫಲವಾಗಿ ಬೆಳೆಯನ್ನು ಕಂಡಾಗ ರೈತನಿಗೆ ಆಗುವ ಆನಂದ ಅವರ್ಣನೀಯ. ತನ್ನ ದುಡಿಮೆಗೆ ಹೆಚ್ಚಿನ ಪ್ರತಿಫಲವನ್ನು ಪಡೆದಾಗ ರೈತ ಆನಂದಿಸುವುದು ಎಷ್ಟು ಸಹಜವೋ ಅವನ ದುಡಿಮೆಗೆ ಕಡಿಮೆ ಪ್ರಮಾಣದ ಪ್ರತಿಫಲವನ್ನು ಪಡೆದಾಗ ರೈತ ಕೊರಗುವುದಿಲ್ಲ. ಭೂಮಿಯಿಂದ ಪಡೆದ ಪ್ರತಿಫಲವನ್ನು ದೇವರ ಕರುಣೆ ಎಂದು ಭಾವಿಸಿ ಸಂತೃಪ್ತ ಭಾವನೆಯನ್ನು ಹೊಂದಿರುವುದು ರೈತನ ಸಲ್ಲಕ್ಷಣವಾಗಿರುತ್ತದೆ. ರೈತರು ತಮ್ಮ ದುಡಿಮೆಯ ಬೆವರಿನ ಪ್ರತಿಫಲವನ್ನು ದಾನದ ರೂಪದಲ್ಲಿ ಕೆಲವರೊಂದಿಗೆ ಹಂಚಿಕೊಂಡು ಸಂತೋಷ ಪಡಬೇಕು ಎಂಬ ಹೆಬ್ಬಯಕೆಯನ್ನು ಹೊಂದಿರುತ್ತಾರೆ. 'ಕೊಟ್ಟು ಕೆಟ್ಟವರಿಲ್ಲ' ಎಂಬ ಮಾತು ರೈತನ

ಅಂತರಂಗದಲ್ಲಿ ಇದ್ದು ಅವನ ಶ್ರಮದ ಬದುಕಿಗೆ ಅನುಗುಣವಾದ ಗಾಯತ್ರಿ ಮಂತ್ರವಾಗಿದೆ. ದಾನ ಮಾಡುವುದರ ಮೂಲಕ ತನ್ನ ಸಂಪತ್ತು ಹೆಚ್ಚುತ್ತದೆ ಎಂಬುದು ರೈತನ ನಂಬಿಕೆಯಾಗಿರುತ್ತದೆ. ಕಲಿತನದ ಉತ್ಸಾಹವನ್ನು ಕಲಿ ರಣರಂಗದಲ್ಲಿ ಮೆರೆದು ಆನಂದ ಪಡುವಂತೆ ರೈತ ದಾನದ ಉತ್ಸಾಹವನ್ನು ತನ್ನ ಉಳುವ ಭೂಮಿಯಲ್ಲಿ ತೋರಿಸಿ ನೆಮ್ಮದಿಯನ್ನು ಪಡೆಯುತ್ತಾನೆ. ದಾನ ಮಾಡುವುದರ ಮೂಲಕ ತನ್ನ ಕುಲದ ಹಿರಿಯರು ಹೇಗೆ ಸಂತೋಷ ಪಡುತ್ತಾರೋ ಹಾಗೆಯೇ ತನ್ನ ಕುಲದ ಮುಂದಿನ ಮಕ್ಕಳು ಸುಖವನ್ನು ಕಾಣುತ್ತಾರೆ ಎಂಬುದು ರೈತರ ಆದರ್ಶ ಜೀವನದ ಸದ್ವರ್ತನೆಯಾಗಿರುತ್ತದೆ. ಗ್ರಾಮೀಣ ಸಂಸ್ಕೃತಿಯ ರೈತರ ಈ ಗುಣವನ್ನು ಗೊರೂರರವರು ತಮ್ಮ ಕೃತಿಗಳಲ್ಲಿ ಸಾಂದರ್ಭಿಕವಾಗಿ ಸುಂದರವಾಗಿ ನಿರೂಪಿಸಿದ್ದಾರೆ. 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಕಾಣುವ ಆಲೆಮನೆಯ ಚಿತ್ರ ರೈತನ ದಾನ ಗುಣಕ್ಕೆ ಸೊಗಸಾದ ಉದಾಹರಣೆಯಾಗಿದೆ. ರೈತ ರಂಗೇಗೌಡನ ಆಲೆಮನೆಗೆ ಪೇಟೆಯಿಂದ ಬಂದ ಗುಂಡ ಗೊರೂರರವರ ಜತೆ ಬರುತ್ತಾನೆ. ರಂಗೇಗೌಡ ಕಬ್ಬಿನ ಹಾಲು ಮತ್ತು ಬೆಲ್ಲವನ್ನು ಗುಂಡನಿಗೆ ಯಥೇಚ್ಛವಾಗಿ ಸವಿಯಲು ದಾನಮಾಡುತ್ತಾನೆ. ಗುಂಡ ರಂಗೇಗೌಡನ ಆಲೆಮನೆಯ ಆತಿಥ್ಯಕ್ಕೆ ಮನತಣಿದು 'Thanks' ಎಂದು ರಂಗೇಗೌಡನಿಗೆ ಹೇಳಿದಾಗ ರಂಗೇಗೌಡ ನಗುತ್ತಾ ಕೊಡುವ ಉತ್ತರ ಅವನ ಮುಗ್ಧ ಮನಸ್ಸಿಗೆ ಸಾಕ್ಷಿಯಾಗಿದೆ. "ಹಾಗಲ್ಲ ದೇವರು, ಪೂರ್ವಿಕರಿಂದ ಬಂದ 'ಪರ್ದಿಷ್ಟ'. ಆಲೆಮನೆಗೆ ಬಾಯಾರಿ ಬಂದವರಿಗೆ ಒಂದು ತುಂಡು ಕಬ್ಬನ್ನು ಒಂದು ಲೋಟ ಹಾಲನ್ನು ಕೊಡಲೇಬೇಕು. ನಾವು ಆಲೆ ಕಟ್ಟೋ ಹೊತ್ತಿಗೆ ಜನ ಬರ್ತಾರೆ ಹೊರ್ರು ಕಬ್ಬಿಣದ ಅಂಗಡಿಗೆ ಹೋಗ್ತಾರ್ಯೆ? ಕೊಟ್ಟು ಕೆಟ್ಟೋನ್ನ ನಾವ್ಕಂಡಿಲ್ಲ. ದಾನ ಮಾಡಿದರೆ ಕೊಡೋ ಭಗವಂತ ಒಂದ್ಕೆರೆಡು ಕೊಡ್ತಾನೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು. ೧೧೯) ಎನ್ನುತ್ತಾನೆ. ಈ ಮಾತುಗಳು ರಂಗೇಗೌಡನಂತಹ ಎಲ್ಲ ರೈತರ ಉದಾರ ಮನಸ್ಸಿಗೆ ಪ್ರತಿನುಡಿಯಾಗಿದೆ. ನಗರ ಸಂಸ್ಕೃತಿಯ ಸೋಗಿನ ವರ್ತನೆಯ 'Thanks' ಎಂಬ ಪ್ರತಿನುಡಿಯನ್ನು ರಂಗೇಗೌಡ ಗುಂಡನಿಗೆ ಕುಚೋದ್ಯ ಮಾಡುತ್ತಾನೆ. ನಗರ ಜೀವನದಲ್ಲಿ ಹೃದಯದ ಆನಂದದ ವರ್ತನೆಯನ್ನು ಕಾಣುವ ಬದಲು 'Thanks' ಎಂಬಂತಹ ಸೋಗಿನ ಮಾತುಗಳಷ್ಟೇ ಉಪಚಾರವಾಗಿ ಕಾಣಬಹುದು ಎಂದು ಲೇಖಕರು ಇಲ್ಲಿ ವ್ಯಂಗ್ಯವಾಗಿ ಸೂಚಿಸಿದ್ದಾರೆ.

ಸುಗ್ಗಿಯ ಕಾಲದಲ್ಲಿ ರೈತರು ತಾವು ಬೆಳೆದ ಬೆಳೆಯಲ್ಲಿ ಒಂದು ಭಾಗವನ್ನು ಬಡಬಗ್ಗರಿಗೆ ದಾನ ಮಾಡುವ ಒಂದು ಸದ್ವರ್ತನೆಯನ್ನು ರೈತರಲ್ಲಿ ಗುರುತಿಸಬಹುದು. ಕಡುಬಡವರ ಪಾಲಿಗೆ ರೈತರ ಈ ದಾನ ಹೆಚ್ಚು ಪ್ರಯೋಜನಕಾರಿಯಾಗಿದೆ. ಗಳಿಸಿದ್ದೆಲ್ಲವನ್ನು ತಮ್ಮದಾಗಿ ದಕ್ಕಿಸಿಕೊಂಡು ಮೆರೆಯಬೇಕು ಎಂಬುದು ರೈತರಲ್ಲಿ ಕಣ ಮಾತ್ರವೂ ಕಂಡುಬರುವುದಿಲ್ಲ. ಹಂಚಿಕೊಂಡು ಬದುಕುವ ಆನಂದಮಯ ಜೀವನವೇ ಕೃಷಿ ಸಂಸ್ಕೃತಿಯ ಸಲ್ಲಕ್ಷಣವಾಗಿದೆ. ಇಂಥಹ ಉತ್ತಮ ರೀತಿಯ ಜೀವನಕ್ಕೆ ವಿರುದ್ಧವಾಗಿ ಬದುಕುವ ರೈತನಲ್ಲಿ ನಾವು ಕಾಣುವ ನಷ್ಟವನ್ನು ನಂಜಪ್ಪನ ಬದುಕಿನ ಉದಾಹರಣೆಯ ಮೂಲಕ ಅದೇ ಕೃತಿಯಲ್ಲಿ ಗೊರೂರರವರು ಸ್ಪಷ್ಟಪಡಿಸಿದ್ದಾರೆ.

ಕೃಷಿಕ ಸಮಾಜದಲ್ಲಿ ಔದಾರ್ಯ ಶ್ಲಾಘನೀಯವಾದ ವಿಷಯ. ಭೂಮಿ ತಾಯಿಯ ಕೃಪೆಯನ್ನು ನಂಬಿ ಸ್ತುತಿಸುವ ಕೃಷಿಕರು ಅತಿಥಿ ಸತ್ಕಾರದಲ್ಲಿ ಉತ್ಸಾಹಿಗಳು. ಅನ್ನಕೊಡುವ ಭೂಮಿ ತಾಯಿ ತಮ್ಮ ದುಡಿಮೆಗೆ ಪ್ರತಿಫಲವಾಗಿ ಹೆಚ್ಚಿನ ಔದಾರ್ಯವನ್ನು ತೋರಿಸುವಾಗ ತಾವು ಆ ಭೂಮಿ ತಾಯಿ ಕೊಟ್ಟ ಆಹಾರವನ್ನು ಹಂಚಿಕೊಂಡು ಬದುಕಬೇಕು ಎಂಬುದು ಕೃಷಿಕರ ಗುರಿಯು ಆಗಿದೆ ಹಾಗೂ ಆಸೆಯೂ ಆಗಿದೆ. ಹಂಚಿಕೊಂಡು ಬದುಕಿದಷ್ಟು ಸುಖ ಸಂತೋಷ ವರ್ಧಿಸುತ್ತದೆ ಎಂಬುದು ಕೃಷಿಕರ ನಿಶ್ಚಿತ ನಿಲುವಾಗಿದೆ. ಈ ಔದಾರ್ಯ ಗುಣವನ್ನು ಜೋಡಿದಾರರ ಕುಟುಂಬದಿಂದ ಹಿಡಿದು ಸಾಮಾನ್ಯ ಕೃಷಿಕರವರೆಗೆ ಎಲ್ಲರಲ್ಲಿಯೂ ಕಾಣಬಹುದು. ಇದಕ್ಕೆ ಮೂಲ ಕಾರಣ ಮಾನವೀಯತೆಯ ಗುಣ ಭಾವ ಶ್ರೀಮಂತಿಕೆಯ ಪ್ರಭಾವವೆಂದು ನಿರ್ವಿವಾದವಾಗಿ ಹೇಳಬಹುದು. "ಹಳ್ಳಿಗಳಲ್ಲಿ ಒಕ್ಕಲಿಗರ ಮನೆಗೆ ಯಾರಾದರು ಊಟದ ವೇಳೆಗೆ ಬಂದರೆ ಊಟಕ್ಕೆ ಏಳಿ ಎಂಬುದಾಗಿ ಬಲತ್ಕರಿಸದ ಮನೆಯಿಲ್ಲ. ಒಕ್ಕಲಿಗನು ಮತ್ತೊಬ್ಬರ ಅನ್ನಕ್ಕೆ ಆಸೆ ಪಡುವುದಿಲ್ಲ. ಊಟದ ಋಣವನ್ನು ತಾನು ಯಾವ ರೀತಿಯಿಂದಲಾದರೂ ಯಾವಾಗಲಾದರೂ ತೀರಿಸೆಯೆ ಎಂಬ ನಂಬಿಕೆ ಇದ್ದರೆ ಹೊರತು ಇಲ್ಲದಿದ್ದರೆ ಅವನು ಕಂಡವರ ಮನೆಯಲ್ಲಿ ಬಾಯಿಗೆ ನೀರನ್ನು ಸಹ ಬಿಡುವುದಿಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೧೪) ಗೊರೂರವರ ಈ ಮಾತುಗಳನ್ನು ಗಮನಿಸಿದಾಗ ಗ್ರಾಮೀಣ ಜನರ ಅನ್ನದಾನದ ಗುಣದ ಜೊತೆಗೆ ಅವರ ಸ್ವಾಭಿಮಾನವೂ ನಮಗೆ ಮನವರಿಕೆಯಾಗುತ್ತದೆ. ಕೃಷಿಕ ಸಮಾಜದಲ್ಲಿ ಕೊಟ್ಟು ಪಡೆಯುವ ಗುಣ ಎಲ್ಲ ಹಂತದಲ್ಲಿಯೂ ನಾವು ಕಾಣಬಹುದಾದ ಅಪೂರ್ವ ಗುಣವೆನ್ನಬಹುದು. ಕೃಷಿಕ ಜನರ ಈ ವರ್ತನೆ ಔದಾರ್ಯಕ್ಕೆ ಸಾಕ್ಷಿಯಾದಂತೆ ಅವರ ಸಂಸ್ಕೃತಿಯ ಲಕ್ಷಣವೂ ಆಗಿದೆ.

ಕೃಷಿಕ ಸಮಾಜಕ್ಕೆ ಮಾನವೀಯ ಮೌಲ್ಯಗಳು ದುಡಿಮೆಗೆ ಚೈತನ್ಯವಾಗಿತ್ತು. ಹೆಚ್ಚು ಶ್ರಮಪಟ್ಟು ದುಡಿಯಬೇಕು ದಾನ ಧರ್ಮಗಳನ್ನು ಮಾಡಬೇಕು. ಮಾನವೀಯತೆಯಲ್ಲಿ ಉಳಿದು ಬಾಳಿ ಸಮಾಜಕ್ಕೆ ಉಪಜೀವಿಯಾಗಿ ಸತ್ಕೀರ್ತಿಯನ್ನು ಪಡೆಯಬೇಕು ಎಂಬುದೇ ಕೃಷಿಕರ ಜೀವನ ವಿಕಾಸತತ್ವವಾಗಿತ್ತು. ಇಲ್ಲಿ ಜೀವನ ವಿಕಾಸವೆಂದರೆ ಕೃಷಿಕನ ಸದ್ವರ್ತನೆ ಅವನ ತಲೆತಲಾಂತರಕ್ಕೂ ಶ್ರೀರಕ್ಷೆಯಾಗಿರುತ್ತದೆ ಎಂಬುದು ವಿಶೇಷ ಅರ್ಥವಾಗಿರುತ್ತದೆ. ಇದು ಕೃಷಿಕನ ಕೇವಲ ನಂಬಿಕೆಯ ಮಾತಲ್ಲ ಅದು ಅವನ ಜೀವನದ ಸತ್ಯ ಘಟನೆಯು ಆಗಿತ್ತು ಎಂಬುದನ್ನು ಗೊರೂರವರ ಕೃತಿಗಳಲ್ಲಿ ಚೆನ್ನಾಗಿ ಗುರುತಿಸಬಹುದು. ಹೀಗೆ ಕೃಷಿಕ ಸಮಾಜದವರು ತಾವು ಕೇಳಿ ತಿಳಿದುಕೊಂಡು ಬದುಕಿನ ಆದರ್ಶಗಳನ್ನು ತಮ್ಮ ಬದುಕಿಗೆ ಅನ್ವಯಿಸಿಕೊಂಡು ಬದುಕಿ ಬಾಳಿದ ಆದರ್ಶವ್ಯಕ್ತಿಗಳು ಎಂಬುದನ್ನು ಇಂದಿಗೂ ಮರೆಯುವಂತಿಲ್ಲ. ಆದರ್ಶ ಭಾವನೆಗಳು, ಗುಣಗಳು ಮತ್ತು ಅದರ ಪರಿಪಾಲನೆ ಕೃಷಿಕರ ಜೀವನದ ಕಣ್ಣಾಗಿದ್ದವು. ಗೊರೂರವರ ದೃಷ್ಟಿಯಲ್ಲಿ ಕೃಷಿಕ ಸಮಾಜವೆಂದರೆ ಬೇಸಾಯ ಮಾಡಿ ಬದುಕುವ ರೈತ ಸಮುದಾಯ. ಕೇವಲ ರೈತರೇ ಇಲ್ಲಿಯ ಪ್ರಧಾನ ವ್ಯಕ್ತಿಗಳು. ಗ್ರಾಮೀಣ ಸಮಜ ಎಂದರೆ ಹಳ್ಳಿಯಲ್ಲಿ ಬದುಕಿ ಬಾಳುವ ಎಲ್ಲಾ ವರ್ಗದ ಹಾಗೂ ಎಲ್ಲಾ ರೀತಿಯ ಜನರನ್ನು ಅನ್ವಯಿಸಿ ಹೇಳುವ ಮಾತು. ಈ ದೃಷ್ಟಿಯಲ್ಲಿ

ಕೃಷಿಕರ ಸಂಸ್ಕೃತಿ ಗ್ರಾಮೀಣ ಜನತೆಯ ಸಂಸ್ಕೃತಿ ಅನೇಕ ಅಂಶಗಳಲ್ಲಿ ಒಂದೇ ಆಗಿದ್ದರು ಅಪರೂಪಕ್ಕೆ ಕೆಲವು ಅಂಶಗಳಲ್ಲಿ ಭಿನ್ನವಾಗಿರುತ್ತದೆ ಎಂಬುದು ಗಮನಾರ್ಹವಾದ ಅಂಶ. ಗೊರೂರವರ ಸಾಹಿತ್ಯದಲ್ಲಿ ಈ ಎರಡು ದೃಷ್ಟಿಕೋನಗಳನ್ನು ಗುರುತಿಸಬಹುದು.

ಒಕ್ಕಲಿಗ ಎಲ್ಲರನ್ನು ಸಾಕುತ್ತಾನೆ ಎಂಬ ಮಾತು ಬಹಳ ಮಟ್ಟಿಗೆ ಸತ್ಯ. ಹಳ್ಳಿಯಲ್ಲಿ ಹಜಾಮರಿಗೆ, ಅಗಸರಿಗೆ, ಜೋಹಿಸರಿಗೆ, ಕುಂಬಾರರಿಗೆ ಧಾನ್ಯ ಒಕ್ಕುವಾಗ ಕಣದಲ್ಲಿ ಅಳೆದು ಇಡುತ್ತಾನೆ. ಅದು ತಲೆ ತಲಾಂತರದಿಂದ ಬಂದ ಪದ್ಧತಿ. ಅಷ್ಟೇ ಅಲ್ಲದೆ ಹುಲ್ಲು ಕಟ್ಟುವಾಗಲೂ ಒಂದೊಂದು ಹೊರೆ ಹುಲ್ಲನ್ನು ಕೊಡುತ್ತಿದ್ದನು. "ನರಸಿಂಹಯ್ಯ ದೇವರ ಪೂಜೆ ಮಾಡುತ್ತಿದ್ದರೂ ವ್ಯವಸಾಯಗಾರನಾದುದರಿಂದ ಊರಿನ ಜೋಹಿಸರಿಗೆ ಪದ್ಧತಿಯಂತೆ ಒಂದು ಹೊರೆ ರಾಗಿ ಹುಲ್ಲನ್ನು ಕೊಡುತ್ತಿದ್ದನು. ಅದು ಅನೇಕ ತಲೆಮಾರು ಗಳಿಂದ ನಡೆದುಕೊಂಡು ಬಂದ ಪದ್ಧತಿ". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪; ಪು.೩) ಕೃಷಿಕನಲ್ಲಿ ಕಾಣುವ ಈ ಪದ್ಧತಿ ನಾವು ಅರ್ಥಶಾಸ್ತ್ರದಲ್ಲಿ ಕಾಣುವ ಸಾಟಿ ವಿನಿಮಯ (Barting system) ಪದ್ಧತಿ ಮೇಲೆ ಬೆಳಕು ಚಲ್ಲುತ್ತದೆ. ಇಂತಹ ಪ್ರಸಂಗಗಳಲ್ಲಿ ಹಳ್ಳಿಯವರಲ್ಲಿ ಕಾಣುವ ಸಂಬಂಧ ಸೌಹಾರ್ದ ಭಾವನೆಯನ್ನು ಮೆಚ್ಚಿಕೊಳ್ಳಬಹುದು. ಕೃಷಿಕ ಸಮಾಜ ಸಾಮರಸ್ಯ ಬದುಕಿನ ಪಾಠವನ್ನು ಪರಿಣಾಮಕಾರಿಯಾಗಿ ಕಲಿಸಿಕೊಟ್ಟಷ್ಟು ನಗರ ಜೀವನ ಕಲಿಸಿ ಕೊಡಲಾರದು ಎಂಬ ಮಾತು ಪೂರ್ಣ ಸತ್ಯ. ಪಟ್ಟಣದ ಬದುಕಿನಲ್ಲಿ ಪ್ರತಿಷ್ಠೆ ಪ್ರತಿಕ್ಷಣದಲ್ಲಿಯೂ ಕಂಡುಬರುತ್ತದೆ. ಸೊಗಡಿನ ಬದುಕಿಗಿಂತ ಸೋಗಿನ ಬದುಕು ಪಟ್ಟಣದ ಬದುಕು ಎಂಬುದನ್ನು ಇಂತಹ ಕೃಷಿಕ ಸಮಾಜದ ಬದುಕಿನ ಕತೆ ಪ್ರಬಂಧಗಳ ಮೂಲಕ ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬಹುದು. ಕೃಷಿಕ ಸಮಾಜದ ಬದುಕು ಹೊರನೋಟಕ್ಕೆ ಒರಟಾಗಿ ಕಂಡರು ಆಂತರ್ಯದಲ್ಲಿ ಅತಿ ಮೃದು ಎಂಬ ಸತ್ಯಾಂಶವನ್ನು ಗೊರೂರವರು ತಮ್ಮ ಕೃತಿಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

ಕೃಷಿಕನಿಗೆ ಭೂಮಿತಾಯಿ ಮೇಲಿನ ಒಲುವು - ಕೃಷಿಯಲ್ಲಿ ನಂಬಿಕೆ ಅಭಿಮಾನ ಅನನ್ಯವಾದದ್ದು. ಇದನ್ನೇ ಕೃಷಿಕ ಸಂಸ್ಕೃತಿಯ ಮೂಲನಾಡಿ ಎನ್ನಬಹುದು - ಮಕುಟಮಣಿ ಎನ್ನಬಹುದು. ಕೃಷಿಕ ತನ್ನ ಪಾಲಿನ ಭೂಮಿಯನ್ನು ಅನರ್ಘ್ಯ ಸಂಪತ್ತು ಎಂದು ಭಾವಿಸಿ ತನ್ನ ಕೃಷಿ ವೃತ್ತಿಯನ್ನು ತನ್ನ ಪಾಲಿನ ಪರಮ ಭಾಗ್ಯವೆಂದು ಭಾವಿಸಿ ಪ್ರಾಮಾಣಿಕವಾಗಿ ಅನವರತ ಕೃಷಿ ಸೇವೆಯನ್ನು ಮಾಡಿ ಸಮಾಜಕ್ಕೆ ಅನ್ನದಾತನಾಗಿ ಜೀವನಾಡಿಯಾಗಿದ್ದಾನೆ. ಗೊರೂರವರು ರೈತರ ಈ ಅಪಾರ ಸದ್ಗುಣವನ್ನು ತಮ್ಮ ಕೃತಿಗಳಲ್ಲಿ ಸಂದರ್ಭ ಒದಗಿ ಬಂದಾಗಲೆಲ್ಲಾ ಮೆಚ್ಚಿಕೊಂಡಿದ್ದಾರೆ ಮತ್ತು ಪ್ರಾಮಾಣಿಕವಾಗಿ ಚಿತ್ರಿಸಿದ್ದಾರೆ. ಈ ದೃಷ್ಟಿಯಿಂದಲೇ ಗೊರೂರವರ ಗ್ರಾಮಜೀವನದ ಕೃತಿಗಳಲ್ಲಿ ರೈತನ ಬದುಕು ಸೊಗಡಿನಿಂದ ತುಂಬಿಬಂದಿದೆ ಎಂದು ನಿಸ್ಸಂಕೋಚವಾಗಿ ಹೇಳಬಹುದು. 'ಮರೆಯಾದ ಮರೆಯಮ್ಮ' ಕಥಾಸಂಕಲನದ 'ನೆಲದ ಕರೆ' ಎಂಬ ಕತೆಯಲ್ಲಿ ಗೊರೂರವರು ರೈತನಿಗೆ ತನ್ನ ದುಡಿಮೆಯ ಭೂಮಿಯಲ್ಲಿ ಇರುವ

ಅಭಿಮಾನವನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಮಾದಿಹಳ್ಳಿಯಲ್ಲಿ ವಾಸವಾಗಿರುವ ಕೃಷ್ಣಯ್ಯ ಶ್ರದ್ಧಾವಂತ ಬೇಸಾಯಗಾರ. ಅವನ ಮಗ ರಾಮನಾಥಯ್ಯ ಬೇಸಾಯಗಾರನಾಗಿ ತಂದೆಯನ್ನು ಮೀರಿಸಿದ ಕೃಷಿ ಅಭಿಮಾನಿಯಾಗಿದ್ದಾನೆ. ಕೃಷ್ಣಯ್ಯ ಬಾಲ್ಯದ ರಾಮನಾಥಯ್ಯನಿಗೆ ತಮ್ಮ ಭೂಮಿಯ ಮೇಲಿನ ಅಭಿಮಾನವನ್ನು ಪರಿಚಯಿಸುವ ರೀತಿ ವಿನೂತನವಾಗಿದೆ. "ಕೃಷ್ಣಯ್ಯನು ಯಾವಾಗಲೂ ಜಮೀನಿನಲ್ಲಿಯೇ ಸತತೋದ್ಯೋಗಿಯಾಗಿದ್ದನು. ಅದೇ ಅವನ ಮನೆ, ಅದೇ ಅವನ ಕಲೆ, ಅದೇ ಅವನ ಪಾಠಶಾಲೆ, ತಪೋವನದ ಆಟದ ಬಯಲು, ದೇವರು, ಗೆಳೆಯ ಎಲ್ಲ ಆಗಿದ್ದಿತು. ಅದರಲ್ಲಿಯೇ ಕೃಷ್ಣಯ್ಯ ಕಲೆ, ಜ್ಞಾನ, ಪರಮಾತ್ಮಭಕ್ತಿ, ಪ್ರಕೃತಿಯ ಸ್ವರೂಪದರ್ಶನ ಎಲ್ಲವನ್ನೂ ಸಂಪಾದಿಸಿದ್ದನು. ಅವನ ಹೆಂಡತಿ ಜಯಮ್ಮ ಅವನಿಗೆ ಎಲ್ಲ ಕಾರ್ಯಗಳಲ್ಲಿಯೂ ಅರ್ಧಾಂಗಿಯೇ ಆಗಿದ್ದಳು. ಜಮೀನನ್ನು ಬಿಟ್ಟು ತಂದೆ ತಾಯಿಗಳನ್ನು ಜ್ಞಾಪಿಸಿಕೊಳ್ಳುವುದಕ್ಕೂ ರಾಮನಾಥಯ್ಯನಿಗೆ ಸಾಧ್ಯವಾಗುತ್ತಿರಲಿಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೭೦-೧೭೧) ನಮ್ಮ ಹಳ್ಳಿಗಳಲ್ಲಿ ಕೃಷಿಕನಾದ ಕೃಷ್ಣಯ್ಯನಿಗೆ ತದ್ರೂಪಿಯಾದ ರೈತ ಕುಟುಂಬಗಳನ್ನು ನಾವು ಕಂಡಾಗ ಆಶ್ಚರ್ಯವಾಗುವ ಬದಲು ಸಹಜ ಆನಂದವನ್ನು ಪಡುತ್ತೇವೆ. ಬಾಲಕನಾದ ರಾಮನಾಥಯ್ಯನಿಗೆ ತನ್ನ ಭೂಮಿಯ ಹಿರಿಮೆಯನ್ನು ಪರಿಚಯಿಸಿ ಕೊಡುವ ರೀತಿ "ದಟ್ಟವಾದ ಕಾಡಿನ ಮಧ್ಯೆ ಇದ್ದ ತನ್ನ ಭೂಮಿಯಲ್ಲಿ ಕೃಷ್ಣಯ್ಯನು ಕೈಯಲ್ಲಿದ್ದ ಗುದ್ದಲಿಯಿಂದ ಒಂದು ಸಲ ನೆಲವನ್ನು ಅಗೆದು ಒಂದು ಬೊಗಸೆ ಮಣ್ಣನ್ನು ರಾಮನಾಥನ ಮೂಗಿಗೆ ಹಿಡಿದು ಮೂಸಿ ನೋಡು ಎಂದನು. ರಾಮನಾಥ ಕುತೂಹಲದಿಂದ ಮೂಸಿ ನೋಡಿದನು. ನಿಜವಾಗಿ ರಾಮನಾಥನ ಮೈಯಲ್ಲಿ ಅಮೃತಸೇಚನವಾದಂತೆ ಆಯ್ತು. ಆ ಮಣ್ಣಿನಲ್ಲಿ ಒಂದು ವಿಧವಾದ ಚೈತನ್ಯದಾಯಕವಾದ ಶಕ್ತಿಯೂ ಸುವಾಸನೆಯೂ ತೇಜಸ್ಸೂ ಇದ್ದವು. ತಂಗಾಳಿಯಿಂದ ಬಳಲಿದವನ ಆಯಾಸ ಪರಿಹಾರವಾಗುವಂತೆ, ಆ ವಾಸನೆಯಿಂದ ರಾಮನಾಥನ ದೇಹ ಹಕ್ಕಿಯಂತೆ ಹಗುರವಾಯಿತು". (ಅದೇ; ಪು.೧೭೨) ಈ ದೃಷ್ಟಿ ಯಿಂದಲೇ ಲೇಖಕರು ಕತೆಗೆ 'ನೆಲದ ಕರೆ' ಎಂದು ಅನ್ವರ್ಥ ಶೀರ್ಷಿಕೆಯನ್ನು ಕೊಟ್ಟಿರುವುದು. ನೆಲದ ಈ ಕರೆಯೇ ರಾಮನಾಥನನ್ನು ತನ್ನ ಹಳ್ಳಿಯ ನೆಲದ ಕಡೆಗೆ ಕಟ್ಟಿಹಾಕಿತು. ಅವನ ಸಂಸಾರ ಆ ನೆಲದಲ್ಲಿಯೇ ಅನಂದವನ್ನು ಕಂಡುಕೊಂಡಿತು. ರಾಮನಾಥನ ಬದುಕಿನ ಈ ದೃಷ್ಟಾಂತ ಕೃಷಿಕ ಸಂಸ್ಕೃತಿಗೆ ಸೆರೆಯಿಡಿದಿಟ್ಟ ವಾಸ್ತವ ಸಂಗತಿಯ ದೃಷ್ಟಾಂತವಾಗಿದೆ. ರಾಮನಾಥನ ಕುಟುಂಬಕ್ಕೆ ಮಾದಿಹಳ್ಳಿಯ ಮಡಿಲು ನೆಮ್ಮದಿಯ ಮಡಿಲಾಗಿತ್ತು ಎಂಬುದು ಎಲ್ಲ ಪ್ರಾಮಾಣಿಕ ಕೃಷಿಕರ ಮನಸ್ಸಿನ ನೆಮ್ಮದಿಯ ಜಯಧ್ವನಿ ಎನ್ನಬಹುದು.

ಗೊರೂರವರು ಉತ್ತಮ ಕೃಷಿಯನ್ನು ಸೂಚಿಸುವ ರೀತಿ ಅತ್ಯಂತ ಕಲಾತ್ಮಕವಾಗಿದೆ. ರೈತನಿಗೆ ಬೇಸಾಯ ಮಾಡುವುದು ಎಂದರೆ ಭೂಮಿಯನ್ನು ಹಸನು ಮಾಡುವುದು, ಅಂದ ಮಾಡುವುದು ಮತ್ತು ಫಲವತ್ತಾಗಿ ಸಮೃದ್ಧಿ ಮಾಡುವುದು. ಈ ಕಾರ್ಯದಲ್ಲಿ ರೈತ ತೋರಿಸುವ ದುಡಿಮೆ ಶ್ರದ್ಧೆ ಉತ್ಸಾಹ ಗಳಿಂದ ತುಂಬಿರುತ್ತದೆ. ಇದಕ್ಕೆ ಉದಾಹರಣೆಯಾಗಿ 'ನೆಲದ ಕರೆ' ಕಥೆಯಲ್ಲಿ ಕೃಷ್ಣಯ್ಯ ತೋಟ

ಮಾಡಿರುವ ರೀತಿಯನ್ನು ರಾಮನಾಥಯ್ಯನ ಮೂಲಕ ಗೊರೂರರವರು ವರ್ಣಿಸಿರುವುದು ಚಿತ್ತಾಕರ್ಷಕವಾಗಿದೆ. ರಾಮನಾಥಯ್ಯನ ಪಾಲಿಗೆ ಆ ತೋಟ ನೆಲದ ಮೇಲೆ ಮಾಡಿರುವ ಅಚ್ಚುಕಟ್ಟಾದ ಕೊಳದಂತೆ ಇತ್ತು.

'ಹಳೆಯಪಳೆಯ ಮುಖಗಳು' ಪ್ರಬಂಧ ಸಂಕಲನದ 'ಬಿಂದಿಗಮ್ಮನ ಜಾತ್ರೆ' ಪ್ರಬಂಧದಲ್ಲಿ ಕಂಡುಬರುವ ಕೃಷಿಕನ ಕೃಷಿಯ ಕೌಶಲ್ಯದ ಕೈ ಚಳಕ ಗೊರೂರರವರ ಮಾತುಗಳಲ್ಲಿ ಸೊಗಸಾಗಿ ಮೂಡಿಬಂದಿದೆ. ರೈತರಿಗೆ ಸುಗ್ಗಿಯ ಕಾಲ ಅವನ ದುಡಿಮೆಯ ಬೆವರಿಗೆ ದೊರೆತ ಸತ್ಫಲದ ಕಾಲವಾಗಿದೆ. ಸುಗ್ಗಿಯ ಕಾಲದಲ್ಲಿ ಹಳ್ಳಿಗಳಲ್ಲಿ ರೈತರ ಸಾಂಸ್ಕೃತಿಕ ಬದುಕು ಗರಿಗೆದರಿ ವಿಜೃಂಭಿಸುತ್ತದೆ. ಆತ ತನ್ನ ಬಂಧು ಬಳಗದವರೊಡನೆ ಕೂಡಿ ಹಬ್ಬ ಜಾತ್ರೆಗಳನ್ನು ಮಾಡುವುದರ ಮೂಲಕ ಆತ್ಮದ ಹಸಿವನ್ನು ಹಿಂಗಿಸಿಕೊಳ್ಳುತ್ತಾನೆ. ಈ ಕಾರಣದಿಂದಲೇ ಸುಗ್ಗಿಯ ಕಾಲವನ್ನು ರೈತರ ಪಾಲಿಗೆ ಆತ್ಮೋಲ್ಲಾಸದ ಕಾಲವೆಂದು ಕರೆಯುತ್ತಾರೆ. ಇದು ಕೃಷಿಕ ಸಂಸ್ಕೃತಿಯ ಗಂತ್ಯವದ ವೈಭವದ ಕಾಲ.

ಕೃಷಿ ಸಂಸ್ಕೃತಿಯಲ್ಲಿ ಅಣ್ಣತಮ್ಮಂದಿರ ವಿಭಿನ್ನ ಜೀವನವನ್ನು ಗೊರೂರರವರು ಸುಂದರವಾಗಿ ಅತ್ಯಂತ ಸಹಜವಾಗಿ 'ಮೆರವಣಿಗೆ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಇವರ ಈ ಚಿತ್ರಣವನ್ನು ಕಂಡಾಗ ಸಹೃದಯರಿಗೆ ಗ್ರಾಮದ ಸ್ವರೂಪ ಹಾಗೂ ಗ್ರಾಮ ಜೀವನದ ಅನುಭವ ಅತ್ಯಂತ ಪರಿಣಾಮಕಾರಿಯಾಗಿ ಉಂಟಾಗುತ್ತದೆ. ಮಲ್ಲಿಗೆಹಳ್ಳಿಯಲ್ಲಿ ಶ್ಯಾನುಭೋಗ ರಂಗಣ್ಣನವರ ಮಕ್ಕಳ ಜೀವನ ರೈತರ ವಿಭಿನ್ನ ಜೀವನಕ್ಕೆ ಉತ್ತಮ ನಿದರ್ಶನವಾಗಿದೆ. ಶ್ಯಾನುಭೋಗ ರಂಗಣ್ಣನವರ ಮಕ್ಕಳು ಶ್ರೀನಿವಾಸ ಮತ್ತು ರಾಮಕೃಷ್ಣ. ಶ್ರೀನಿವಾಸನನ್ನು ಊರಿನವರು ಯಜಮಾನ ಎಂದು ಕರೆಯುತ್ತಿದ್ದರು. ತಂದೆಯಿಂದ ಬಂದ ಪಿತ್ರಾರ್ಜಿತ ಮನೆಯಲ್ಲಿ ಸರಳ ಜೀವನವನ್ನು ನಡೆಸುವುದರಲ್ಲಿ ಶ್ರೀನಿವಾಸನು ಸಂತೃಪ್ತನಾಗಿದ್ದನು. ಪುರಾಣ ಪುಣ್ಯಕತೆಗಳನ್ನು ಹೇಳಿಕೊಂಡು ಸಾತ್ವಿಕ ಬದುಕನ್ನು ನಡೆಸಿ ಊರಿನವರಿಗೆ ಶ್ರೀನಿವಾಸ ಅಚ್ಚು ಮೆಚ್ಚಾಗಿದ್ದನು. ಯಾವುದೇ ವಿವೇಕ ವಿಚಾರ ಚರ್ಚೆಗೆ ಊರಿನ ಜನ ಶ್ರೀನಿವಾಸನಲ್ಲಿ ಸಮಾಲೋಚನೆ ಮಾಡುತ್ತಿದ್ದರು. ಹಳೆಯ ಮನೆಯಲ್ಲಿ ಅಚ್ಚುಕಟ್ಟಾದ ಬದುಕನ್ನು ನಡೆಸುವುದರಲ್ಲಿ ಶ್ರೀನಿವಾಸ ಮಾದರಿ ಯಾಗಿದ್ದನು. ರಾಮಕೃಷ್ಣ ವ್ಯವಹಾರ ಚತುರ. ಅಪ್ಪ ಕೊಟ್ಟ ಹಣವನ್ನು ವೃದ್ಧಿಗೊಳಿಸಿಕೊಳ್ಳುವುದರಲ್ಲಿ ಮಹಾನಿಪುಣ. ಊರಿನವರಿಗೆಲ್ಲಾ ಶ್ರೀನಿವಾಸನ ಸಜ್ಜನಿಕೆ ರಾಮಕೃಷ್ಣನ ವ್ಯವಹಾರ ನೈಪುಣ್ಯತೆ ಚಿರಪರಿಚಿತ ವಾಗಿತ್ತು. ರಾಮಕೃಷ್ಣನ ವ್ಯವಹಾರ ಕೌಶಲ್ಯಕ್ಕೆ ದೊಡ್ಡ ಮನೆಯೇ ಸಾಕ್ಷಿಯಾಗಿತ್ತು. ಒಮ್ಮೆ ತನ್ನ ಅಣ್ಣನ ಸಂಗಡ ತನ್ನ ವ್ಯವಹಾರ ಕೌಶಲ್ಯವನ್ನು ರಾಮಕೃಷ್ಣ ಗಮತ್ತಿನಿಂದ ಹೇಳಿಕೊಂಡಾಗ ಶ್ರೀನಿವಾಸ ಆಡುವ ಪ್ರತ್ಯುತ್ತರದ ಮಾತುಗಳು "ನಿನ್ನ ಹಾಗೆ ಹಣವನ್ನು ವೃದ್ಧಿಮಾಡುವ ಶಕ್ತಿ ನನಗೆ ಇಲ್ಲ. ಆದರೆ ನೀನು ಹಣ ಸಂಪಾದಿಸಿದುದೇ ಅಂತಹ ಮಹತ್ಕಾರ್ಯವಾಗಲಿಲ್ಲ. ಇದಕ್ಕಿಂತ ಇನ್ನೂ ಎಷ್ಟೋ ಮಹತ್ಕಾರ್ಯಗಳಿಗೆ ನಿನ್ನ ಶಕ್ತಿ ತಿರುಗಿಸಬಹುದಾಗಿದ್ದಿತು. ಇನ್ನು ಇರುವುದೇನು? ಕೊನೆಯಲ್ಲಿ ನನಗೂ ಎರಡು ಗಾಡಿ ನಿನಗೂ ಎರಡು ಗಾಡಿ ಸೌದೆ. ನೀನು ಕೂಡಿಟ್ಟಿರುವ ಹಣದಿಂದ ನಿನ್ನ ನಂತರ ನಿನ್ನ ಮಗ ಅನಂತು ಮೋಜು

ಮಾಡುವನು" ಎಂದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು. ೬೫) ಈ ಮಾತುಗಳಲ್ಲಿ ಶ್ರೀನಿವಾಸನ ವಿರಕ್ತ ಸ್ವಭಾವ ಹಾಗೂ ಬದುಕಿನಲ್ಲಿ ಹಣದ ಗಳಿಕೆಗೆ ಎಷ್ಟರ ಮಟ್ಟಿನ ಮಹತ್ವ ಕೊಡಬೇಕು ಎಂಬುದು ಸ್ಪಷ್ಟವಾಗುವುದರ ಜೊತೆಗೆ ಅನೇಕ ಸಂದರ್ಭದಲ್ಲಿ ಹಿರಿಯರು ಗಳಿಸಿದ ಹೆಚ್ಚಿನ ಹಣ ಮುಂದೆ ಮಕ್ಕಳಿಂದ ಹೇಗೆ ಅಪವ್ಯಯವಾಗುತ್ತದೆ ಎಂಬುದು ನಮಗೆ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ಹಣವೇ ಬದುಕಿನ ಸರ್ವಸ್ವವಲ್ಲ ಎಂಬುದನ್ನು ಶ್ರೀನಿವಾಸ ತನ್ನ ಮಾತುಗಳಲ್ಲಿ ಸ್ಪಷ್ಟವಾಗಿ ನಿರೂಪಣೆ ಮಾಡಿದ್ದಾನೆ. ಈ ಅಣ್ಣತಮ್ಮಂದಿರ ಜೀವನ ರೀತಿಯಲ್ಲಿ ವಿಭಿನ್ನತೆ ನಮಗೆ ಗೋಚರವಾಗುತ್ತದೆ. 'ಹಣದಿಂದ ಜೀವನ' ಎಂಬುದು ಶ್ರೀನಿವಾಸನ ಸಾಧಾರಣ ಭಾವನೆ ಆದರೆ 'ಹಣಕ್ಕೆ ಜೀವನ' ಎಂಬುದು ರಾಮಕೃಷ್ಣನ ಭಾವನೆಯಾಗಿತ್ತು.

ರಾಮಕೃಷ್ಣನಂತ ಉಪದ್ರ ಜೀವಿಗಳನ್ನು ಗ್ರಾಮೀಣ ಕುಟುಂಬಗಳಲ್ಲಿ ಬಹುಮಟ್ಟಿಗೆ ನೋಡಬಹುದು. ಆತ ಹಣಕ್ಕಾಗಿ ಯಾವ ರೀತಿಯ ದುಡಿಮೆಗೂ ಹಿಂಜರಿಯದ ಧನಪಿಶಾಚಿಯ ಮನುಷ್ಯನಾಗಿದ್ದನು. ಊರಿನವರೆಲ್ಲರೂ ರಾಮಕೃಷ್ಣನನ್ನು ಧನಪಿಶಾಚಿ ಎಂದು ಕರೆಯುವುದೇ ವಾಡಿಕೆಯಾಗಿತ್ತು. ಇವನು ಮಾಡುತ್ತಿದ್ದ ಅನ್ಯಾಯಗಳಿಗೆ ಮಿತಿ ಇರಲಿಲ್ಲ. ಅವನನ್ನು ಕಂಡರೆ ಬೆಂಕಿಯನ್ನು ಕಂಡಂತೆ ಮತ್ತು ತೊನ್ನು ಹತ್ತಿದವರನ್ನು ಕಂಡಂತೆ ಜನರು ಹೆದರುತ್ತಿದ್ದರು. ವಿಧಿಯಿಲ್ಲದ ಹೊರತು ಯಾರು ರಾಮಕೃಷ್ಣನ ಬಳಿ ವ್ಯವಹಾರ ಇಷ್ಟಪಡುತ್ತಿರಲಿಲ್ಲ. ರಾಮಕೃಷ್ಣನ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದವರು, ಜಮೀನಿನಲ್ಲಿ ಬೆಳೆ ಬೆಳೆಯಲಿ, ಬಿಡಲಿ ಮೊದಲು ರಾಮಕೃಷ್ಣನ ಗುತ್ತಿಗೆ ತಂದು ಅಳೆದು ಬಿಡುತ್ತಿದ್ದರು. ರೈತರಿಂದ ಯಾರಿಗಾದರೂ ಹಣ ಬರಬೇಕಾಗಿದ್ದರೆ ಹಣವನ್ನು ಕೇಳಿ ಸುಸ್ತಾದ ಆ ಸಾಧುಪ್ರಾಣಿ ಕೊನೆಗೆ ಒಂದು ದಿನ ಈ ಲೇವಾದೇವಿಯನ್ನು ರಾಮಕೃಷ್ಣನಿಗೆ ವಹಿಸುತ್ತೇನೆ ಎಂದರೆ, ರೈತ ಮರುದಿನವೇ ಹಣ ತಂದು ತೀರ್ಮಾನ ಮಾಡುತ್ತಿದ್ದನು. ರಾಮಕೃಷ್ಣನು ಯಾರಾದರೂ ಜಮೀನಿನ ಸಮೀಪದ ಜಮೀನನ್ನು ಕೊಂಡುಕೊಂಡರೆ ಆ ಜಮೀನಿನ ನಾಲ್ಕು ಕಡೆಯವರೂ ಹಾಸಿಗೆಯಲ್ಲಿ ಹಾವನ್ನು ಕಂಡಂತೆ ಹೆದರುತ್ತಿದ್ದರು. ಹೀಗೆ ರಾಮಕೃಷ್ಣನ ಉದ್ಧಟತನದಿಂದ ಹಳ್ಳಿಯ ಸಾಮಾನ್ಯ ಕೃಷಿಕರಿಗೆ ತೊಂದರೆಯಾಗುತ್ತಿತ್ತು ಎಂಬುದನ್ನು ಗೊರೂರವರು ಚಿತ್ರಿಸಿದ್ದಾರೆ.

'ಕಮ್ಮಾರ ವೀರಭದ್ರಾಚಾರಿ' ಕಥಾಸಂಕಲನದ 'ಬೇವು ಬೆಲ್ಲ' ಕತೆ ಅಣ್ಣತಮ್ಮಂದಿರ ಬಾಂಧವ್ಯವನ್ನು ಉತ್ತಮ ರೀತಿಯಲ್ಲಿ ನಿರೂಪಿಸುವ ಕತೆಯಾಗಿದೆ. ತಮ್ಮ ರಾಮಸ್ವಾಮಿ ಸಾತ್ವಿಕ ಬದುಕನ್ನು ನಡೆಸುತ್ತಿದ್ದನು. ಅಣ್ಣ ನರಸಿಂಹ ಉದ್ಧಟ ರೀತಿಯ ವ್ಯಕ್ತಿಯಾಗಿದ್ದನು. ಹೆಂಡತಿಯ ದುಷ್ಟ ವರ್ತನೆಯಿಂದ ನರಸಿಂಹ ತಮ್ಮನ ಮೇಲೆ ದ್ವೇಷ ಕಾರುತ್ತಾನೆ. ಆದರೆ ತಮ್ಮ ರಾಮಸ್ವಾಮಿ ತನ್ನ ಸಂಯಮದ ಮೂಲಕವೇ ತನ್ನ ಅಣ್ಣನ ಮನಸ್ಸನ್ನು ಪರಿವರ್ತಿಸುತ್ತಾನೆ. ಬಾಳು ಹೊಡೆದಾಟದ ಜೀವನಕ್ಕಿಂತ ತಮ್ಮ ಪರಸ್ಪರ ಅರಿವಿನ ಮೂಲಕ ಸವಿಯಾಯಿತು ಎಂದು ತಮ್ಮ ರಾಮಸ್ವಾಮಿ ಸಂತೋಷಪಡುವ ಪ್ರಸಂಗ

ಗಮನಾರ್ಹವಾಗಿದೆ. ಸಂಯಮದ ಮೂಲಕ ಅಣ್ಣ ತಮ್ಮಂದಿರಲ್ಲಿ ಮನಸ್ಸು ಪರಿವರ್ತನೆಯಾದ ಹಿರಿಯತನವನ್ನು ಗೊರೂರರವರು ಈ ಕೃತಿಯಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ. ಗ್ರಾಮೀಣ ಜೀವನದಲ್ಲಿ ಅಣ್ಣ ತಮ್ಮಂದಿರ ತೀವ್ರ ಭಿನ್ನಾಭಿಪ್ರಾಯವನ್ನು ನಾವು ಎಷ್ಟೇ ಕಂಡರೂ ಮರೆಯಲಾಗದ ಮೈತ್ರಿಯ ವರ್ತನೆಯನ್ನು ಕಾಣಬಹುದು ಎಂಬುದನ್ನು ಲೇಖಕರು ಅನೇಕ ಸಂದರ್ಭಗಳಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಗೊರೂರರವರ ದೃಷ್ಟಿಯಲ್ಲಿ ಮಾನವೀಯ ಮೌಲ್ಯಗಳು ಕೃಷಿಕ ಸಂಸ್ಕೃತಿಯಲ್ಲಿ ಉಜ್ವಲವಾಗಿ ಕಂಡುಬರುತ್ತದೆ ಎಂಬುದು ನಮಗೆ ಮನವರಿಕೆಯಾಗುತ್ತದೆ. ಇದನ್ನು ಕೃಷಿಕ ಸಂಸ್ಕೃತಿಯ ಅನನ್ಯತೆ ಎಂದು ಗೊರೂರರವರು ಸ್ಪಷ್ಟ ಪಡಿಸಿದ್ದಾರೆ.

ಕೃಷಿಕ ಸಮಾಜದಲ್ಲಿ ಪ್ರೇಮ ವಿವಾಹಕ್ಕೆ ಉತ್ತಮ ನಿದರ್ಶನವನ್ನು 'ಮೆರವಣಿಗೆ' ಕಾದಂಬರಿಯಲ್ಲಿ ಗುರುತಿಸಬಹುದು. ಇಲ್ಲಿ ಅಯ್ಯಣ್ಣ ಮತ್ತು ಲಕ್ಷ್ಮೀ ಪರಸ್ಪರ ಪ್ರೇಮಿಗಳು. ಇವರ ಮನಸ್ಸಿನ ತುಡಿತ ಪ್ರೇಮಿಸಿದ ತಾವು ಒಂದಾಗಿ ಬದುಕಬೇಕು ಎಂಬುದು. ಸಾಮಾಜಿಕವಾಗಿ ಅವರಿಬ್ಬರ ಅಂತಸ್ತು ಅತಿ ಸಾಮಾನ್ಯವಾದದ್ದು. ಆದರೆ ಇಬ್ಬರ ಹೃದಯ ಶ್ರೀಮಂತವಾದದ್ದು. ಒಂದು ವಿವಾಹದ ಮಂಗಳ ಕಾರ್ಯ ಸುಸೂತ್ರವಾಗಿ ನಡೆಯಬೇಕಾದರೆ ಮೊದಲಿಗೆ ಹಲವು ತೊಡಕುಗಳು ಸಂಭವಿಸುವುದು ಅಷ್ಟೇ ಸ್ವಾಭಾವಿಕ. ಅಯ್ಯಣ್ಣ ಹಾಗೂ ಲಕ್ಷ್ಮೀಯ ತಂದೆ ತಾಯಿಯವರಿಗೆ ಪ್ರೇಮಿಗಳ ವಿವಾಹ ಸಮ್ಮತಿಯಿಲ್ಲ. ಇದಕ್ಕೆ ಕಾರಣ ಹಿರಿಯರಲ್ಲಿದ್ದ ಕೋರ್ಟಿನ ವ್ಯವಹಾರದಲ್ಲಿ ಹುಟ್ಟಿ ಬಂದ ಅಸಮಾಧಾನ. ಊರಿನ ಯಜಮಾನ ಅನಂತು ಮಧ್ಯ ಪ್ರವೇಶಿಸಿ ತನ್ನ ಬಳಿ ಕೂಲಿ ಕೆಲಸ ಮಾಡುವ ಅಯ್ಯಣ್ಯ ಮತ್ತು ಲಕ್ಷ್ಮೀಯವರ ಪ್ರೇಮ ವಿವಾಹಕ್ಕೆ ಅನುಕೂಲವನ್ನುಂಟು ಮಾಡಿಕೊಡುತ್ತಾನೆ. ಇಲ್ಲಿ ಅನಂತುವಿನ ಔದಾರ್ಯದ ಗುಣವನ್ನು ಮೆಚ್ಚಬಹುದು. ಅನಂತುವಿನ ನೇತೃತ್ವದಲ್ಲಿ ಹೆಣ್ಣು ಗಂಡಿನ ಹಿರಿಯರಿಗೆ ಪರಸ್ಪರ ವೀಳ್ಯೆದೆಲೆಯ ವಿನಿಮಯ ಗಮನಾರ್ಹವಾದ ಸಾಂಸ್ಕೃತಿಕ ಕಾರ್ಯವಾಗಿದೆ. ಮಂಗಳ ಕಾರ್ಯಗಳಲ್ಲಿ ಊರ ದಣಿಯ ಸಹಕಾರ ಹೇಗೆ ಶೋಭಾಯಮಾನವಾಗಿದೆ ಎಂಬುದನ್ನು ಈ ಘಟನೆಯಲ್ಲಿ ಗುರುತಿಸಬಹುದು. ಕೃಷಿ ಸಂಸ್ಕೃತಿಯ ಎಲ್ಲ ಆಯಾಮಗಳಿಗೂ ಗೊರೂರರವರು ದನಿ ಕೊಟ್ಟಿರುವುದು ಸೂಕ್ಷ್ಮವಾದ ಸಂಗತಿಯಾಗಿದೆ.

ಗೊರೂರರವರು ರೈತನ ಯೋಗಭೂಮಿಯಾದ ಹೊಲ ಗದ್ದೆಗಳನ್ನು ಸುಗ್ಗಿಯ ಕಾಲದಲ್ಲಿ ವರ್ಣಿಸುವ ರೀತಿ ಅತ್ಯಂತ ಹೃದಯಂಗಮವಾಗಿದೆ. ರೈತನ ಸುಗ್ಗಿಯ ಕಣದಲ್ಲಿ ಎಲ್ಲ ರೀತಿಯ ಬೆಳೆಗಳ ರಾಶಿಯನ್ನು ನೋಡಬಹುದು. ಇದನ್ನು ಕಂಡ ಗೊರೂರರವರು ರೈತ ಬೆಳೆಯದ ಬೆಳೆಯಿಲ್ಲ ಎಂದು ಅರ್ಥಪೂರ್ಣವಾಗಿ ರೈತರ ಸುಗ್ಗಿಯನ್ನು ವರ್ಣಿಸುತ್ತಾರೆ. ವಸಂತ ಕಾಲದಲ್ಲಿ ಪ್ರಕೃತಿ ನೈಸರ್ಗಿಕವಾಗಿ ಎಷ್ಟು ಮನೋಹರವಾಗಿರುತ್ತದೋ ಅವನ ಸುಗ್ಗಿಯ ಕಣ ನಿಸರ್ಗದ ಚೆಲುವಿಗೆ ಶ್ರೀಮಂತಿಕೆಯ ಮೆರಗನ್ನು ತುಂಬಿಕೊಟ್ಟಂತೆ ಇರುತ್ತದೆ. ಸುಗ್ಗಿಯ ಸೊಗಡನ್ನು ಕಂಡ ಗುಂಡ ಗ್ರಾಮೀಣ ಜನರ

ದುಡಿಮೆಯ ಹಿರಿಮೆಗೆ ಮನಸ್ಸಿನಲ್ಲೇ ಕೃತಜ್ಞತಾ ವಂದನೆಯನ್ನು ಸಲ್ಲಿಸುತ್ತಾನೆ. ರೈತನ ಪಾಲಿಗೆ ದುಡಿಮೆಯ ಶ್ರಮವೂ ಸಹ ಉತ್ಸಾಹದ ಮತ್ತೊಂದು ರೂಪವಾಗಿರುತ್ತದೆ. ಸ್ತ್ರೀ ಪುರುಷರು, ಆಳು-ಯಜಮಾನ ಎಲ್ಲ ಅಂತರವನ್ನು ಮರೆತು ಕಣದಲ್ಲಿ ಒಟ್ಟಾಗಿ ದುಡಿಯುತ್ತಾರೆ. ಸುಗ್ಗಿಯ ಕಾಲದಲ್ಲಿ ರೈತ ತನ್ನ ಶರೀರದ ಆಯಾಸವನ್ನು ಮರೆಯುವುದಕ್ಕಾಗಿ ತಾನು ತೋರಿಸುವ ಸಾಂಸ್ಕೃತಿಕ ಕುಣಿತಗಳ ಚಟುವಟಿಕೆಯನ್ನು ಗೊರೂರವರು ತಮ್ಮ ಬರವಣಿಗೆಯಲ್ಲಿ ಸೆರೆಹಿಡಿದಿಟ್ಟಿದ್ದಾರೆ. ಜನಪದ ಸಾಹಿತ್ಯದ ಸೊಗಡನ್ನು ಸೌಂದರ್ಯವನ್ನು ಸುಗ್ಗಿಯ ಕುಣಿತದ ಚಟುವಟಿಕೆಯಲ್ಲಿ ನಾವು ಯಥೇಚ್ಛವಾಗಿ ಅನುಭವಿಸಬಹುದು. ರೈತನ ದುಡಿಮೆ ಕ್ರಿಯಾತ್ಮಕ ಬದುಕಿಗೆ ಒಂದು ಸಾಕ್ಷಿಯಾದರೆ ಅವನ ಸುಗ್ಗಿಯ ಕುಣಿತ ಉತ್ಸಾಹಗಳು ಅವನ ಸಾಂಸ್ಕೃತಿಕ ಬದುಕಿಗೆ ಮತ್ತೊಂದು ಉದಾಹರಣೆಯಾಗಿದೆ.

ವ್ಯಕ್ತಿಯ ಶರೀರದ ರೂಪಕ್ಕೂ ಹೃದಯದ ಗುಣಕ್ಕೂ ಅನೇಕ ವೇಳೆ ನಾವು ಸಾಮ್ಯವನ್ನು ಕಾಣಲಾಗುವುದಿಲ್ಲ. ಇದಕ್ಕೆ ಉದಾಹರಣೆಯನ್ನು ಗೊರೂರವರ 'ಹಳ್ಳಿಯ ಚಿತ್ರಗಳು' ಪ್ರಬಂಧ ಸಂಕಲನದಲ್ಲಿ ಕಾಳಿಯ ಪಾತ್ರದಲ್ಲಿ ಗುರುತಿಸಬಹುದು. ಕಾಳಿ ರೂಪು ವರ್ತನೆಯಲ್ಲಿ ಬಹುಮಟ್ಟಿಗೆ ಕಠೋರ ವ್ಯಕ್ತಿಯಾಗಿ ಇದ್ದಳು. ರಸ್ತೆಯ ಮಕ್ಕಳಿಂದ ಹಿಡಿದು ಹಳ್ಳಿಯ ಸಾಮಾನ್ಯ ಜನರವರೆಗೆ ಎಲ್ಲರು ಕಾಳಿಗೆ ಹೆದರುತ್ತಿದ್ದರು. ಚಿಕ್ಕನ ಹೆಂಡತಿ ಮಗುವಿಗೆ ಜನ್ಮ ಕೊಟ್ಟಾಗ ಆ ಕುರೂಪದ ಮಗುವನ್ನು ಊರಿನವರೆಲ್ಲಾ ಅಲಕ್ಷ್ಯ ಮಾಡಿದರು. ಕಾಳಿ ಮಾತ್ರ ಆ ಕುರೂಪಿ ಮಗುವಿನ ಮೇಲೆ ತೋರಿಸುವ ಪ್ರೀತಿ ಕರುಣೆ ವಿಶೇಷವಾದದ್ದು. ಕಾಳಿ ಚಿಕ್ಕನ ಮಗುವಿಗೆ ಹೊಸ ಬಟ್ಟೆ ಹಾಕಿ ಕೈಗೆ ಬಳೆ ತೊಡಿಸಿ ಆನಂದ ಪಟ್ಟಾಗ ಅವಳ ಈ ವರ್ತನೆ ಊರಿನ ಜನರ ಮನಸ್ಸನ್ನು ಬೆರಗುಗೊಳಿಸುತ್ತದೆ. ಕಾಳಿ ಸತ್ತ ಮೇಲೆ ಅವಳ ಮನೆಯಲ್ಲಿ ಚಿಕ್ಕನ ಮಗುವಿನ ಉಡುಪನ್ನು ಕಂಡಾಗ ಊರಿನವರೆಲ್ಲಾ ಆಶ್ಚರ್ಯ ಪಡುತ್ತಾರೆ. ಯಾವುದೋ ಒಂದು ಕಾಲಕ್ಕೆ ಕಾಳಿಯು ಸಹ ಒಂದು ಮಗುವಿನ ತಾಯಿಯಾಗಿ ಮಾತೃ ಹೃದಯ ಆನಂದವನ್ನು ಪಟ್ಟಿದ್ದನ್ನು ಊರಿನವರು ನೆನಪು ಮಾಡಿಕೊಳ್ಳುತ್ತಾರೆ. ಈ ಘಟನೆಯನ್ನು ವರ್ಣಿಸುವಾಗ ಕಠೋರ ಶರೀರದಲ್ಲಿ ಲೇಖಕರು ಕಂಡ ಕುಸುವ ಸದೃಶ ಕೋಮಲ ಭಾವನೆಗಳನ್ನು ನಾವು ಪರಿಚಯಿಸಿಕೊಂಡು ವಿಸ್ಮಯದ ಜತೆಗೆ ಆನಂದವನ್ನು ಪಡೆಯುತ್ತೇವೆ. ಸುಸಂಸ್ಕೃತ ವರ್ತನೆಯೇ ಬೇರೆ ಹಾಗೂ ತೋರಿಕೆಯ ಶರೀರದ ರೂಪವೇ ಬೇರೆ ಎಂಬುದು ಈ ಸಂದರ್ಭದ ಹಿನ್ನೆಲೆಯಲ್ಲಿ ನಾವು ಕಾಣುವ ಸತ್ಯವಾಗಿದೆ.

ಕುಟುಂಬ ಸಂಗ ಜೀವನದ ಒಂದು ಸಣ್ಣ ಘಟಕ. ಸಮಾಜ ಸಂಗ ಜೀವನದ ವಿಸ್ತೃತ ಘಟಕ. ಶಿಲಾಯುಗದ ಪ್ರಾಚೀನ ಕಾಲದಲ್ಲಿ ಬಿಡಿ ಬಿಡಿಯಾಗಿ ಬದುಕುತ್ತಿದ್ದ ಮಾನವ 'ಸಿಡಿದ' ಬದುಕಿನಲ್ಲಿ ಸುಖಕ್ಕಿಂತ ಕಷ್ಟಗಳೇ ಹೆಚ್ಚಾದಾಗ ಸಂಗ ಜೀವನದ ಕಡೆಗೆ ಆಲೋಚಿಸುತ್ತಾನೆ. ಮಾನವನಲ್ಲಿ ಸಂಗ ಜೀವನದ ಬಯಕೆ ಹೀಗೆ ಪರಿಸ್ಥಿತಿಯ ಒತ್ತಡದಿಂದ ಪ್ರಾರಂಭವಾಗಿ ಇದೇ ಕಾರಣದಿಂದ ಕಾಲದಿಂದ

ಕಾಲಕ್ಕೆ ಮಾನವನಲ್ಲಿ ಸಂಗ ಜೀವನ ವಿಸ್ತೃತವಾಯಿತು-ಪ್ರಬಲವಾಯಿತು. ಸಂಗ ಜೀವನದಲ್ಲಿ ವ್ಯಕ್ತಿಗಳ ಸುಖ ಒಂದು ಲಾಭವಾದರೆ ವ್ಯಕ್ತಿಗಳ ಬದುಕಿನಲ್ಲಿ ಸಮಸ್ಯೆಗಳ ಸುಳಿ ಕಂಡುಬರುವುದು ಸಂಗ ಜೀವನದ ಮತ್ತೊಂದು ಪರಿಣಾಮ ಎಂಬುದನ್ನು ನಾವು ಮರೆಯುವಂತಿಲ್ಲ ಅಂತೆಯೇ ಕಡೆಗಣಿಸುವಂತಿಲ್ಲ.

ಕುಟುಂಬ 'ಮೊತ್ತ' ಜೀವನದಲ್ಲಿ ಸುಖ ಕಂಡಷ್ಟು ಬಿಡಿ ಬದುಕಿನಲ್ಲಿ ಸುಖ ಕಂಡಿಲ್ಲ ಎಂಬ ಮಾತು ಸತ್ಯ. ಆದರೆ ಕುಟುಂಬದ ಹೆಚ್ಚಿನ ಸುಖ ಸಂಗಜೀವನದ ಮೂಲಕವೇ ಎಂಬ ಮಾತು ಬಹುಮಟ್ಟಿನ ಸತ್ಯದ ಮಾತೆಂದು ಒಪ್ಪಬಹುದು. ವಾಸ್ತವ ಸ್ಥಿತಿಚಿತ್ರವನ್ನು ಕಂಡಾಗ ಸಂಗ ಜೀವನದ ಒಂದು ಘಟಕವಾದ ಕುಟುಂಬದಲ್ಲಿಯೂ ನಾವು ಅನೇಕ ಸಮಸ್ಯೆಗಳನ್ನು ಕಾಣುತ್ತೇವೆ. ಇದಕ್ಕೆ ಮುಖ್ಯ ಕಾರಣ ಕುಟುಂಬದಲ್ಲಿನ ವ್ಯಕ್ತಿಗಳ ಭಿನ್ನಮತ ಸ್ಥಿತಿ ಮತ್ತು ಬುದ್ಧಿಶಕ್ತಿಯ ಅಸಮಾನತೆ. ಕೆಲವು ಬಾರಿ ವಿಚಿತ್ರ ಪರಿಸ್ಥಿತಿಗಳು ಕೆಲವು ವ್ಯಕ್ತಿಗಳ ಪ್ರಚೋದನೆಗಳು ಕುಟುಂಬದ ಸಾಮರಸ್ಯವನ್ನು ಹಾಳು ಮಾಡಬಹುದು.

ಗ್ರಾಮೀಣ ಪರಿಸರದಲ್ಲಿ ಕೌಟುಂಬಿಕ ಸುಖ ಶಾಂತಿಗಳನ್ನು ಕಾಣುವಂತೆ ಕುಟುಂಬಗಳಲ್ಲಿ ಒಡಕಿನ ದುಷ್ಪಾರಿಣಾಮವನ್ನು ಗುರುತಿಸಬಹುದು. ಇಂತಹ ಪರಿಸ್ಥಿತಿಯಲ್ಲಿ ಕುಟುಂಬದ ವ್ಯಕ್ತಿಗಳು ನೋವಿನ ಪ್ರಮಾಣವನ್ನು ಹೆಚ್ಚಾಗಿ ಅನುಭವಿಸುತ್ತಾರೆ. ಗ್ರಾಮೀಣ ವಾತಾವರಣದಲ್ಲಿ ಮನೆ ಮನೆಯ ಜಗಳ ಒಂದು ವರ್ಗದ ಅಶಾಂತಿಗೆ ಹಾಗೂ ಪರಿಣಾಮದಲ್ಲಿ ಗ್ರಾಮದ ಅಶಾಂತಿಗೆ ಕಾರಣವಾಗುವುದನ್ನು ಗಮನಿಸಬಹುದು. ಇಷ್ಟಾದರೂ ಕುಟುಂಬದ ವಾತಾವರಣವನ್ನು ತಿಳಿಮಾಡಬಹುದು. ಗ್ರಾಮೀಣ ಜೀವನದಲ್ಲಿ ದ್ವೇಷವನ್ನು ಕಡಿಮೆ ಮಾಡಿ ಮೈತ್ರಿ ವಾತಾವರಣವನ್ನು ಸುಲಭವಾಗಿ ಮೂಡಿಸಬಹುದು ಎಂಬ ಅಭಿಪ್ರಾಯವನ್ನು ಬಹುಮಟ್ಟಿಗೆ ಒಪ್ಪಬಹುದು. ಕುಟುಂಬದ ಸಾಮರಸ್ಯಕ್ಕೆ ಗ್ರಾಮೀಣ ಸಮಾಜದಲ್ಲಿ ಹೆಚ್ಚಿನ ಅನಿವಾರ್ಯತೆ ಇದೆ ಎಂಬ ಘನವಾದ ಸತ್ಯವನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಗ್ರಾಮೀಣ ಜನರಲ್ಲಿ ಮೌಢ್ಯತೆ ಯನ್ನು ಒಂದು ದೋಷವೆಂದು ಕರೆದಾಗ ಅವರಲ್ಲಿ ಸಹಜವಾಗಿ ಕಾಣುವ ಮುಗ್ಧತೆಯ ಗುಣವನ್ನು ನಾವು ನಿಜಕ್ಕೂ ಮೆಚ್ಚಬೇಕು. ಕೃತ್ರಿಮ ಬದುಕಿನಿಂದ ದೂರವಾಗಿರುವ ಮುಗ್ಧ ಗ್ರಾಮೀಣ ಜನರು ಸಾಮರಸ್ಯದ ಬದುಕಿನ ಕಡೆಗೆ ಸಂಗ ಜೀವನದ ಕಡೆಗೆ ಸುಲಭವಾಗಿ ಆಕರ್ಷಿತರಾಗುತ್ತಾರೆ. ಇಂತಹ ವಾತಾವರಣ ಗ್ರಾಮೀಣ ಪರಿಸರದಲ್ಲಿ ಕುಟುಂಬಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ಕಂಡರೂ ಚೇಳು ಕುಟುಕಿದ ಕುಟುಂಬಗಳನ್ನು ಗ್ರಾಮೀಣ ಪರಿಸರದಲ್ಲಿ ಆಗಾಗ ಅಲ್ಲಲ್ಲಿ ಕಾಣಬಹುದು.

ಕುಟುಂಬದ ಸದಸ್ಯರಲ್ಲಿ ತಲೆಮಾರಿನ ಹಿರಿಯರೊಬ್ಬರು ಅನೇಕ ವೇಳೆ ಶ್ರಮಜೀವಿಗಳಾಗಿರುತ್ತಾರೆ. ಅವರು ಶ್ರಮದ ದುಡಿಮೆಯ ಮೂಲಕ ಗಳಿಸಿ ಕೊಡಿಟ್ಟ ಹಣವನ್ನು ಆ ಕುಟುಂಬದ ಮುಂದಿನ ವ್ಯಕ್ತಿಗಳು ನಿರಾಯಾಸವಾಗಿ ವ್ಯಯ ಮಾಡಿ ವ್ಯರ್ಥ ಜೀವನದ ಬದುಕನ್ನು ಬಾಳುವುದನ್ನು ನಾವು ಗ್ರಾಮೀಣ ಕುಟುಂಬಗಳಲ್ಲಿ ಗುರುತಿಸಬಹುದು. ಇದಕ್ಕೆ ಉದಾಹರಣೆಯನ್ನು 'ಹೇಮಾವತಿ' ಕೃತಿಯಲ್ಲಿ ನೋಡಬಹುದು.

ಸಂಪತ್ತಯ್ಯಂಗಾರ್ಯರು ಶ್ರಮಜೀವಿಗಳಾಗಿ ಹಣ ಕೂಡಿಟ್ಟ ಹೊಣೆಗಾರಿಕೆಯ ವ್ಯಕ್ತಿಯಾದ್ದರು. ಆದರೆ ಅವರ ಮಗ ರಂಗಾಚಾರ್ಯ ಮತ್ತು ರಂಗಾಚಾರ್ಯರ ಮಗ ವೆಂಕ್ಟಾಚಾರ್ಯ ಹಾಗೂ ಇವನ ಮಕ್ಕಳಾದ ರಂಗನಾಯಕಿ, ಅವಳ ಅಕ್ಕ ಈಳಿಗೆ ಮಣಿ ಮತ್ತು ಮಗ ರಂಗಸ್ವಾಮಿ ಬೇಜಾವಾಬ್ದಾರಿಯ ವ್ಯಕ್ತಿಗಳಾಗಿ ತಮ್ಮ ಬದುಕನ್ನು ನಡೆಸುತ್ತಾರೆ. ಈ ಪಾತ್ರಗಳ ಕತೆಯನ್ನು ಹೇಳುವಾಗ ಲೇಖಕರು ದುಡಿಮೆಯ ಶ್ರಮದ ಹಿರಿಮೆಯನ್ನು ಸೂಚಿಸುವುದರ ಜತೆಗೆ ಬೇಜಾಬ್ದಾರಿ ಬದುಕಿನ ಸ್ಥಿರಚಿತ್ರವನ್ನು ಕೊಡುತ್ತಾರೆ. ಈ ಚಿತ್ರಣ ಮೂಲಕ ವ್ಯಕ್ತಿಯ ಪ್ರಾಮಾಣಿಕತೆಗೆ ಶ್ರಮದ ದುಡಿಮೆ ಕಾರಣವಾಗುತ್ತದೆ ಎಂಬುದನ್ನು ಗೊರೂರರವರು ಹೇಳುತ್ತಾರೆ. ತಾವು ತಿನ್ನುವ ಅನ್ನ ನಮ್ಮ ಶ್ರಮದ ದುಡಿಮೆಯ ಫಲವಾಗಿದ್ದಾಗ ನಮ್ಮಲ್ಲಿ ಒಳ್ಳೆಯತನ ತಾನಾಗಿ ಮೂಡಿಬರಲು ಸಾಧ್ಯ ಎಂಬ ಸತ್ಯವನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ. 'ತಿಂದ ಅನ್ನದಂತೆ ವ್ಯಕ್ತಿಯ ಗುಣ' ಎಂಬ ಲೋಕೋಕ್ತಿ ಈ ಸಂದರ್ಭದಲ್ಲಿ ಸಹಜವಾಗಿ ನೆನಪಿಗೆ ಬರುತ್ತದೆ.

ಗ್ರಾಮೀಣ ಪರಿಸರದಲ್ಲಿ ಕೃಷಿ ಸಂಸ್ಕೃತಿಯ ಕೆಲವು ಆಚರಣೆಗಳು ಕೌಟುಂಬಿಕ ಸಾಮರಸ್ಯದ ಸಂಕೇತಗಳಾಗಿವೆ. ಹಬ್ಬ ಜಾತ್ರೆಗಳಲ್ಲಿ ಗ್ರಾಮೀಣ ಜನ ತೋರಿಸುವ ಸಾಮೂಹಿಕ ಉತ್ಸಾಹ ಒಳ್ಳೆಯ ಉದಾಹರಣೆಯಾಗಿದೆ. ಅದೇ ರೀತಿಯಲ್ಲಿ ದುಡಿಮೆಯ ಕಾಲಕ್ಕೆ ಕುಟುಂಬದ ಎಲ್ಲ ವ್ಯಕ್ತಿಗಳು ಗ್ರಾಮದ ಎಲ್ಲ ವ್ಯಕ್ತಿಗಳೊಂದಿಗೆ ಒಟ್ಟಾಗಿ ಸೇರಿ ಬೇಸಾಯದ ಚಟುವಟಿಕೆಯಲ್ಲಿ ಭಾಗಿಗಳಾಗುವುದು ಗಮನಾರ್ಹವಾದ ಸಂಗತಿ. ಮನೆಯ ಯಜಮಾನನು ಸಹ ಸುಗ್ಗಿಯ ಕಾಲದಲ್ಲಿ ರಾತ್ರಿ ವೇಳೆಯಲ್ಲಿ ಕಣದಲ್ಲಿ ಮಲಗುವುದು ಸಾಮಾನ್ಯ ಸಂಗತಿಯಾಗಿದೆ. ಇದು ಸಾಮೂಹಿಕ ದುಡಿಮೆಯ ಹಾಗೂ ಉತ್ಸಾಹ ದುಡಿಮೆಯ ಜವಾಬ್ದಾರಿಗೆ ಸ್ಪಷ್ಟ ನಿದರ್ಶನವಾಗಿದೆ. ಕೌಟುಂಬಿಕ ಜೀವನದ ಮೂಲಕ ವ್ಯಕ್ತಿ ತೋರಿಸುವ ಹಿರಿಯ ಗುಣಕ್ಕೂ ಇದು ಉತ್ತಮ ಸಾಕ್ಷಿಯಾಗಿದೆ.

'ಹೇಮಾವತಿ' ಕಾದಂಬರಿಯಲ್ಲಿ 'ಶಿಸ್ತುಗಾರ ಪುಟ್ಟಸ್ವಾಮಿ' ಸುಂದರರಾಜ ಬೇಸಾಯ ಮಾಡುವ ರೀತಿ ಎಷ್ಟು ವೈಖರಿಯಿಂದ ಕೂಡಿದೆಯೋ ಕೆಲವು ಬಾರಿ ಅಷ್ಟೇ ವಿಚಿತ್ರ ಎನಿಸುತ್ತದೆ. ಸುಂದರರಾಜನ ತಂದೆ ಸಾಹುಕಾರ ಶಠಾರಿಯವರು ಊರಿನ ಮುಂದಿನ ಜಮೀನನ್ನು ಆಳುಗಳ ಮೂಲಕ ಬೇಸಾಯ ಮಾಡಿಸುತ್ತಿದ್ದರು. ಆಳುಗಳ ಬೇಸಾಯದಿಂದ ಸಾಹುಕಾರ ಶಠಾರಿಯವರಿಗೆ ಒಂದು ನಿಶ್ಚಿತ ಪ್ರಮಾಣದ ಬೆಳೆ ಬರುತ್ತಿತ್ತು. ಮೊದಲಿಗೆ ಪೂರ್ಣ ಅಲಕ್ಷ್ಯ ತೋರಿಸಿದ್ದ ಸುಂದರರಾಜ ಇದಕ್ಕಿದ್ದಂತೆ ತಾನು ಬೇಸಾಯದ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತೇನೆ ಎಂದು ತಂದೆಗೆ ಹೇಳಿ ಗೇಣಿಗೆ ಕೊಟ್ಟಿದ್ದ ಜಮೀನನ್ನು ಆಳುಗಳಿಂದ ಬಿಡಿಸಿಕೊಳ್ಳುತ್ತಾನೆ. ಸುಂದರರಾಜನ ಆಲೋಚನೆ ಉತ್ತಮ ಎನಿಸಿದರೂ ಸಾಹುಕಾರ ಶಠಾರಿಯವರಿಗೆ ಸುಂದರರಾಜನ ಮಾತಿನಲ್ಲಿ ನಂಬಿಕೆ ಬರುವುದು ಕಷ್ಟವಾಗುತ್ತದೆ. ಹಠಕ್ಕೆ ಮಣಿದು ಸಾಹುಕಾರ ಶಠಾರಿಯವರು ಸುಂದರರಾಜನಿಗೆ ಜಮೀನನ್ನು ರೈತರಿಂದ ಬಿಡಿಸಿಕೊಟ್ಟು ಸುಮ್ಮನಾಗುತ್ತಾರೆ. ಸುಂದರರಾಜ ಬೇಸಾಯವನ್ನು ಆಧುನಿಕ ರೀತಿಯಲ್ಲಿ ಮಾಡಲು ಆಲೋಚಿಸುತ್ತಾನೆ

- ಪ್ರವೃತ್ತನಾಗುತ್ತಾನೆ. ತಿಪ್ಪೆಗೊಬ್ಬರಕ್ಕೆ ಬದಲಾಗಿ ಸೀಮೆ ಗೊಬ್ಬರವನ್ನು ತಂದು ತನ್ನ ಭೂಮಿಗೆ ಚೆಲ್ಲುತ್ತಾನೆ. ಈ ಸಂದರ್ಭದಲ್ಲಿ ಹಳ್ಳಿಯ ರೈತರು ಸುಂದರರಾಜನ ಧೋರಣೆಯನ್ನು ಖಂಡಿಸುತ್ತಾ "ನಮ್ಮ ಭೂಮಿಗೆ ನಮ್ಮ ದನಗಳ ಗಂಜಲ ಎಲೆ ಸೊಪ್ಪಿನ ಗೊಬ್ಬರ ಸಗಣಿ ಇವುಗಳೇ ಉತ್ತಮ, ಸೀಮೆ ಗೊಬ್ಬರಕ್ಕೆ ಬೆಲೆಯೂ ಜಾಸ್ತಿ. ಇದನ್ನು ತರಿಸುವುದಕ್ಕೆ ಪ್ರಾರಂಭಿಸಿದರೆ, ಗೊಬ್ಬರ ಶೇಖರಿಸುವ ಅಭ್ಯಾಸ ಸಹ ನಮ್ಮವರಿಗೆ ಮರೆತು ಹೋಗುತ್ತೆ" ಎಂದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೫೮) ರೈತರ ಮಾತನ್ನು ಸುಂದರರಾಜ ಸಂಪೂರ್ಣವಾಗಿ ಅಲಕ್ಷಿಸುತ್ತಾನೆ. ಆಗ ರೈತರು ಸುಂದರರಾಜನನ್ನು "ಈ ಅಯ್ಯ ಮನುಸನ ಕುಲವಲ್ಲ, ದೆಯ್ಯ, ಇವನ ತಾವ ಎಷ್ಟು ತಲೆ ಚೆಚ್ಚಿಕೊಂಡರೂ ಒಂದೇ" ಎಂದು ಸುಮ್ಮನಾದರು. (ಅದೇ.) ಸುಂದರರಾಜನು ನೇಗಿಲ ಬೇಸಾಯವನ್ನು ಬಿಟ್ಟು ಟ್ರಾಕ್ಟರ್ ಮೂಲಕ ಬೇಸಾಯ ಪ್ರಾರಂಭಿಸುತ್ತಾನೆ. ಇವರ ಈ ಆಧುನಿಕ ದೃಷ್ಟಿಗೆ ವಸಾಹತುಶಾಹಿಯ ಧೋರಣೆ ಕಾರಣ ಎನ್ನಬಹುದು. ಸುಂದರರಾಜನಿಗೆ ಟ್ರಾಕ್ಟರ್ ಬೇಸಾಯ -

"ನೊಗವ ನೆತ್ತಿನ ಕೊರಳೊಳಿಡುವ ಪಾಡಿಲ್ಲ
ಬಿಗಿದ ಕುದುರೆಯ ಹೂಡುವಾಯಾಸವಿಲ್ಲ
ಮಿಗೆ ಕಾಯ್ದ ನೀರ ಹಬೆಯಿಂದ ಬಲು ಬೇಗ
ಹೊಗೆಯ ಗಾಡಿಯು ನೋಡು ಓಡುತಿಹುದೀಗ
ಸೋಲಿಪುದು ಗಾಳಿಯನು ಬಲುವೇಗದಿಂದ
ಮೇಲೆ ಬಹ ಮಳೆ ಬಿಸಿಲುಗಳ ಬಾಧೆಯಿಲ್ಲ
ಕಾಲಕ್ಕೆ ಸರಿಯಾಗಿ ಹೊರಟು ಕಂಬಿಗಳ ಮೇಲೆ
ಹಾಡನ್ನು ಹಾಡುತ್ತಾ ಹಾಡುತ್ತಾ ಆವೇಶ ಬಂದಂತೆ ಆಯಿತು. ಅವನು
ಎತ್ತೇಕೆ ಕತ್ಯೇಕೆ ಆಳ್ಗೇಕೆ ಸಾಲ
ನೇಗಿಲಯೋಗಿಗಳ ಗಂಟಲಿಗೆ ಗಾಣ
ಹುಲ್ಲಿಲ್ಲ ನೀರಿಲ್ಲ ಅರರರೆ ಇಲ್ಲ
ಟ್ರಾಕ್ಟರೇ ಬಾಳಲಿ ಜಗದೊಳಗೆ ಎಲ್ಲಾ" (ಅದೇ; ಪು. ೬೦)

ಈ ಮಾತುಗಳ ಮೂಲಕ ಸುಂದರರಾಜ ತನ್ನ ಹೊಸ ರೀತಿಯ ಬೇಸಾಯವನ್ನು ಮೇಲ್ಮೆಯಲ್ಲಿ ಹಾಡಿ ನಲಿಯುತ್ತಾನೆ. ಸುಂದರರಾಜನ ಟ್ರಾಕ್ಟರ್ ಸಕಾಲಕ್ಕೆ ಪೆಟ್ರೋಲ್ ಸಿಗದೆ ಗದ್ದೆಯಲ್ಲಿ ನಿಂತಾಗ ಅವನ ಬೇಸಾಯ ಅಲ್ಲಿಗೆ ಸ್ತಗಿತವಾಗುತ್ತದೆ. ಆಗ ಸಾಹುಕಾರ ಶಠಾರಿಯವರಿಗೆ ಊರಿನ ರೈತರ ಎದುರಿಗೆ ಮುಖಭಂಗವಾಗುತ್ತದೆ. ಬೆಳೆಯಿಲ್ಲದೆ ಸಾಹುಕಾರ ಶಠಾರಿ ಸಾಲಗಾರನಾಗಿ ಅನಂತರ ಪಟ್ಟಣಕ್ಕೆ ಹೋಗುವ ಆಲೋಚನೆ ಮಾಡುತ್ತಾರೆ. ಸುಂದರರಾಜನು ಸಹ ಬೇಸಾಯದ ಬದುಕಿಗಿಂತ ಪಟ್ಟಣದ ವ್ಯಾಪಾರ ದುಡಿಮೆ ಹೆಚ್ಚು ಲಾಭದಾಯಕ ಎಂದು ನುಡಿಯುತ್ತಾನೆ. ಈ ಘಟನೆಯಲ್ಲಿ ಗೊರೂರವರು ವಸಾಹತು

ಶಾಹಿ ಪ್ರಭಾವದಿಂದ ಬೇಸಾಯದ ಬದುಕು ಗ್ರಾಮೀಣ ಪರಿಸರದಲ್ಲಿ ನಷ್ಟ ತಂದುಕೊಟ್ಟಿದೆ ಎಂಬ ಅಂಶವನ್ನು ಹೇಳಿ ಎಚ್ಚರಿಸಿರುವುದು ಗಮನಾರ್ಹವಾಗಿದೆ. ಸುಂದರರಾಜನ ಕೃಷಿ ರೀತಿಯನ್ನು ಅಲ್ಲಿ ಕಂಡ ಸೋಲನ್ನು ಕುರಿತು ಗೊರೂರರವರು ಆಡುವ ಮಾತು "ಕೃಷಿ ಕೆಡಗು ಉಪೇಕ್ಷೆಯಲ್ಲಿ; ವ್ಯವಸಾಯ ದಿಂದ ಯಾರು ಧನಿಕರಾಗಿಲ್ಲವೆಂದೂ ಹಾಗೂ ಹಸಿದುಕೊಂಡಿರಲಿಲ್ಲ, ಹಗೇವು ತುಂಬಲಿಲ್ಲ" (ಅದೇ; ಪು. ೫೯) ಎಂಬುದು ಗೊರೂರರವರು ನೀಡುವ ವ್ಯವಸಾಯ ತತ್ವ. ಈ ತತ್ವದ ಪಾಲನೆಯಲ್ಲಿ ಕೃಷಿಕರು ವ್ಯವಸಾಯದಲ್ಲಿ ಗೆಲುವನ್ನು ಕಂಡಿದ್ದಾರೆ. ಸುಂದರರಾಜನಂತವರು ಸೋತಿದ್ದಾರೆ ಎಂಬ ಸತ್ಯಾಂಶ 'ಹೇಮಾವತಿ' ಕಾದಂಬರಿ ಮೂಲಕ ನಮಗೆ ಮನವರಿಕೆಯಾಗುತ್ತದೆ. ವಸಾಹತುಶಾಹಿ ಪ್ರಭಾವದ ಕಾಲಕ್ಕೆ ರೈತರು ತಮ್ಮ ಜಾನುವಾರಿಗೆ ಅನಾರೋಗ್ಯವಾದಾಗ ಹಳ್ಳಿಯ ಮದ್ದನ್ನು ಬಿಟ್ಟು ವೈಜ್ಞಾನಿಕ ಮದ್ದಿನ ರೀತಿಗೆ ಮಾರುಹೋದ ಸಂಗತಿಯನ್ನು ತಿಳಿಸಿ ಅದರಿಂದ ರೈತರಿಗೆ ಆದ ನಷ್ಟವನ್ನು ಲೇಖಕರು ಅದೇ ಕೃತಿಯಲ್ಲಿ ಸೂಚಿಸಿದ್ದಾರೆ.

ಗ್ರಾಮೀಣ ಸಂಸ್ಕೃತಿಯಲ್ಲಿ ಕೃಷಿ ಸಂಸ್ಕೃತಿ ಮಿಳಿತವಾಗಿರುತ್ತದೆ. ಕೃಷಿಕರು ತಮ್ಮ ವರ್ತನೆಯಲ್ಲಿ ತೋರಿಸುವ ಹಿರಿತನ ಅವರ ಸಂಸ್ಕೃತಿಗೆ ಸಾಕ್ಷಿಯಾದಂತೆ ಗ್ರಾಮೀಣ ಸಂಸ್ಕೃತಿಗೂ ನಿದರ್ಶನವಾಗುತ್ತದೆ. ತಂದೆ ಹಾಗೂ ಪೂರ್ವಿಕರು ಮಾಡಿದ ಉತ್ತಮ ಕಾರ್ಯಗಳನ್ನು ಮುಂದೆ ಮಕ್ಕಳು ಹಾಳು ಮಾಡುವುದು ಗ್ರಾಮೀಣ ವಲಯದಲ್ಲಿ ಕಾಣಬಹುದು. ಆದರೆ ಇದಕ್ಕೆ ವಿರುದ್ಧವಾಗಿ ಹಿರಿಯರು ಮಾಡಿದ ತಪ್ಪನ್ನು ಮಕ್ಕಳು ತಮ್ಮ ಕಾಲಕ್ಕೆ ತಿದ್ದಿಕೊಳ್ಳುವ ಸದ್ವರ್ತನೆಯನ್ನು ಹಳ್ಳಿಯ ವಾತಾವರಣದಲ್ಲಿ ಗುರುತಿಸಬಹುದು. ಈ ಮುಖ್ಯ ಸಂಗತಿಯನ್ನು ಗೊರೂರರವರು 'ಹೇಮಾವತಿ' ಕೃತಿಯಲ್ಲಿ ವಾಸುವಿನ ಸದ್ವರ್ತನೆಯ ಮೂಲಕ ಮನೋಜ್ಞವಾಗಿ ಚಿತ್ರಿಸಿದ್ದಾರೆ. ವಾಸು ತನ್ನ ತಂದೆ ಸುಬ್ಬಾಭಟ್ಟರು ಆಸ್ತಿಯ ಸಂಗ್ರಹಣೆಯ ಸಂದರ್ಭದಲ್ಲಿ ರಾಮಣ್ಣ ಪೆರುಮಾಳರ ವಿಷಯದಲ್ಲಿ ಮಾಡಿದ ಅಕ್ರಮವನ್ನು ಅವನು ಸಕ್ರಮಗೊಳಿಸುವುದು ವಿಶೇಷ ಸಂಗತಿ-ವರ್ತನೆಯಾಗಿದೆ. ಸುಬ್ಬಾಭಟ್ಟರು ಒಂದು ದಿನ ವಾಸುವಿನ ಹತ್ತಿರ ರಾಮಣ್ಣ ಪೆರುಮಾಳರ ಆಸ್ತಿಯನ್ನು ಸಂಗ್ರಹಿಸಿದ ರೀತಿಯನ್ನು ತಿಳಿಸುತ್ತಾನೆ. ಇದರ ಪರಿಣಾಮವಾಗಿ ಇಂದು ಹೇಮಾವತಿ ತನ್ನ ಊರಿನಲ್ಲಿ ಉಳಿಯಲು ಮನೆಯು ಇಲ್ಲದ ನಿರ್ಗತಿಕಳಾಗಿದ್ದಾಳೆ. ಹೇಮಾವತಿಯ ದುಸ್ಥಿತಿಗೆ ಮನಬೆಚ್ಚಿದ ಮನಕರಗಿದ ವಾಸು ರಾಮಣ್ಣ ಪೆರುಮಾಳರ ಜಮೀನು ಮತ್ತು ಮನೆಯನ್ನು ಹಿಂತಿರುಗಿಸಿ ಕೊಡುತ್ತಾನೆ. ಈ ಜಮೀನಿಗೆ ಹಾಗೂ ಮನೆಗೆ ಸಂಬಂಧಿಸಿದ ಪತ್ರವನ್ನು ವಾಸು ಹೇಮಾವತಿಗೆ ತಲುಪಿಸುತ್ತಾನೆ. ವಾಸುವಿನ ಈ ವರ್ತನೆ ಸುಬ್ಬಾಭಟ್ಟರು ಹಾಗೂ ಆ ಊರಿನ ಅನೇಕ ಹಿರಿಯರಿಗೆ ಕಿರಿಯರಿಗೆ ಅಚ್ಚರಿಯನ್ನು ತಂದುಕೊಡುತ್ತದೆ. ಆನಂದನು ವಾಸುವಿನ ಈ ವರ್ತನೆಯ ಬಗ್ಗೆ ವಾಸುವನ್ನೇ ಎಚ್ಚರಿಸುತ್ತಾ ದುಡುಕಿ ಜಮೀನನ್ನು ಈಗಲೇ ಹಿಂತಿರುಗಿಸಿ ಕೊಡಬೇಡ ಎಂದು ಹೇಳಿದನು. ಆಗ ವಾಸು "ಇಂತಹ ಅನ್ಯಾಯವನ್ನು ತಲೆಯ ಮೇಲೆ ಹೊತ್ತುಕೊಂಡು ನಿಮಗೆ ಹೇಗೆ ತಾನೆ ಮುಖ ತೋರಿಸಲಿ" (ಅದೇ; ಪು. ೨೮೧) ಎಂದು ಅವನು ಸಂಕೋಚದಿಂದ ಹೇಳುತ್ತಾನೆ. ಇಲ್ಲಿ ವಾಸು ತಂದೆಯ ತಪ್ಪನ್ನು

ಸರಿಪಡಿಸುವುದು ಅವನ ಉತ್ತಮ ವರ್ತನೆಗೆ ಮತ್ತು ಸಂಸ್ಕೃತಿಯ ಪ್ರಜ್ಞೆಗೂ ಒಂದು ಉದಾಹರಣೆಯಾಗಿದೆ. ಗೊರೂರವರು ಗ್ರಾಮೀಣ ಸಮಾಜದಲ್ಲಿ ಕಾಣುವ ದುಷ್ಟ ದುರಳತನವನ್ನು ಹೇಗೆ ತಮ್ಮ ಕೃತಿಗಳಲ್ಲಿ ಸೆರೆಹಿಡಿದಿಟ್ಟಿದ್ದಾರೋ ಅದೇ ರೀತಿಯಲ್ಲಿ ಗ್ರಾಮೀಣ ಸಂಸ್ಕೃತಿಯ ಉತ್ತಮ ಅಂಶಗಳನ್ನು ಮರೆಯದೇ ತಮ್ಮ ಕೃತಿಗಳಲ್ಲಿ ಜೋಡಿಸಿಟ್ಟಿರುವುದು ಕೃತಿಗಳ ಮೌಲ್ಯವನ್ನು ವರ್ಧಿಸುತ್ತದೆ. ಸಾಹಿತಿಯ ಸಾಮಾಜಿಕ ಪ್ರಜ್ಞೆ ಗೊರೂರವರಲ್ಲಿ ಪರಿಪೂರ್ಣವಾಗಿತ್ತು ಎಂಬುದಕ್ಕೆ ಇಂತಹ ಸಂದರ್ಭಗಳು ಉತ್ತಮ ಉದಾಹರಣೆ ಆಗಬಲ್ಲವು. ಕೃಷಿ ಸಮಾಜದ-ಗ್ರಾಮೀಣ ಸಮಾಜದ ಮಾನವೀಯತೆಗೆ ನಿದರ್ಶನಗಳನ್ನು ಹುಡುಕುವಾಗ ಗೊರೂರವರ ಸಾಹಿತ್ಯದಲ್ಲಿ ಇಂತಹ ಅನೇಕ ಉತ್ತಮ ಪ್ರಸಂಗಗಳನ್ನು ಕಾಣಬಹುದು.

ಗ್ರಾಮೀಣ ಸಮಾಜದಲ್ಲಿ ಬೇಸಾಯ ಬಹುಮಟ್ಟಿಗೆ ಎಲ್ಲರ ಕಸಬು ಆಗಿರುತ್ತದೆ. ಗ್ರಾಮೀಣ ಪರಿಸರದಲ್ಲಿ ವಾಸ ಮಾಡುವವರಿಗೆಲ್ಲಾ ಬೇಸಾಯದ ಸೂಕ್ಷ್ಮವಾದ ಪರಿಚಯವಾದರೂ ಇದ್ದೇ ಇರುತ್ತದೆ ಎಂಬುದನ್ನು ಬಹುಮಟ್ಟಿಗೆ ಹೇಳಬಹುದು. ಇದಕ್ಕೆ ಮುಖ್ಯ ಕಾರಣ ಅಲ್ಲಿಯ ಜನ ಸಾಮಾಜಿಕವಾಗಿ ಕಾಣುವುದು ಬೇಸಾಯದ ಚಟುವಟಿಕೆ ಅಲ್ಲದೆ ಬೇರೇನು ಅಲ್ಲ. ಉತ್ತಮ ಜಾತಿಯಿಂದ ಹಿಡಿದು ಕೀಳು ಜಾತಿಯವರಿಗೆ ಎಲ್ಲರೂ ಬೇಸಾಯದಲ್ಲಿ ಆಸಕ್ತರಾಗಿರುತ್ತಾರೆ ಮತ್ತು ವಿಶೇಷವಾಗಿ ಪರಿಣತರು ಆಗಿರುತ್ತಾರೆ. ಗೊರೂರವರ ಕೃತಿಗಳಲ್ಲಿ ಈ ಮಾತಿಗೆ ನಿದರ್ಶನವನ್ನು ತಕ್ಕ ಪ್ರಮಾಣದಲ್ಲಿ ಕಾಣಬಹುದು. ಗೊರೂರವರ ವ್ಯಕ್ತಿತ್ವವನ್ನು ಕಂಡಾಗ ಅವರ ಬಹುಮುಖ ವ್ಯಕ್ತಿತ್ವ ನಮ್ಮನ್ನು ವಿಸ್ಮಯಗೊಳಿಸುತ್ತದೆ. ಅವರ ವೈವಿಧ್ಯ ಪೂರ್ಣ ಬದುಕಿನ ಆಸಕ್ತಿಗಳು ಚಟುವಟಿಕೆಗಳು ಬೆರಗುಗೊಳಿಸುವಂತಹದು ಮತ್ತು ಅಷ್ಟೇ ಮೆಚ್ಚುವಂತಹುದು ಆಗಿದೆ. ಕ್ರಿಯಾಶೀಲ ವ್ಯಕ್ತಿಗೆ ಬದುಕಿನಲ್ಲಿ ಉತ್ಸಾಹ ಬಂಡವಾಳವಾಧಾಗ ಆತ ಅನೇಕ ರೀತಿಯ ಜ್ಞಾನವನ್ನು ಸಂಪಾದಿಸಿಕೊಂಡು ತನ್ನ ಬದುಕನ್ನು ಸತ್ವಪೂರ್ಣ ಮಾಡಿಕೊಂಡು ಅಷ್ಟೇ ಆಕರ್ಷಕ ಮಾಡಿಕೊಳ್ಳುತ್ತಾನೆ. 'ಹಳ್ಳಿಯ ಚಿತ್ರಗಳು' ಕೃತಿಯಲ್ಲಿ ಚಿತ್ರಿತವಾಗಿರುವ ಯಜಮಾನರಾದ ಗೊರೂರವರು ತಮ್ಮ ಆಳು ಬೋರನ ಜತೆಯಲ್ಲಿ ಕೃಷಿ ಚಟುವಟಿಕೆಯಲ್ಲಿ ಪೈಪೋಟಿ ಮಾಡುವ ಘಟನೆಯನ್ನು ನೋಡುತ್ತೇವೆ. ಗೊರೂರವರು ವಯಸ್ಸಿನಲ್ಲಿ ಯುವಕರು. ಬೋರ ಅರವತ್ತು ವರ್ಷದ ಮುದುಕ. ಇಬ್ಬರು ಗದ್ದೆಯಲ್ಲಿ ಕೆಲಸ ಮಾಡುವಾಗ ಯಾರು ಹೆಚ್ಚು ಕೆಲಸ ಮಾಡಬಲ್ಲರು ಎಂದು ಸ್ಪರ್ಧೆಯನ್ನು ಹಮ್ಮಿಕೊಳ್ಳುತ್ತಾರೆ. ಆಗ ಬೋರನು ಯಜಮಾನರನ್ನು ಕುರಿತು ನೀವು ಉತ್ತಮ ಜಾತಿಯ ವರು ನಿಮಗೆ ಸುಖವಾದ ಸವಿಯಾದ ಊಟವನ್ನು ಮಾಡುವ ಅಭ್ಯಾಸವಿದೆಯೇ ಹೊರತು ನಮ್ಮ ಹಾಗೆ ಶ್ರಮಜೀವಿಗಳಾಗಲು ಕಷ್ಟ ಎನ್ನುತ್ತಾನೆ. ಆದರೆ ಗದ್ದೆಯ ಕೆಲಸವನ್ನು ಮಾಡುತ್ತಿದ್ದಾಗ ಗೊರೂರವರು ತೋರಿಸುವ ಉತ್ಸಾಹ ಬೋರನನ್ನು ಗೆಲ್ಲುವ ಉತ್ಸಾಹವೇ ಆಗಿದೆ. ನಿರಾಯಾಸವಾಗಿ ಬೋರ ತನ್ನ ಪಾಲಿನ ಕೆಲಸವನ್ನು ಮೊದಲು ಮುಗಿಸಿ ಯಜಮಾನರನ್ನು ನೋಡುತ್ತಾನೆ. ಯಜಮಾನರ ಕೃಷಿ ದುಡಿಮೆಯ ಉತ್ಸಾಹ ಬೋರನಿಗೆ ಇದ್ದಷ್ಟೇ ಇತ್ತು. ಕೃಷಿವಲಯದಲ್ಲಿ ಕೆಲಸ ಮಾಡುವವರಿಗೆಲ್ಲರಿಗೂ ಒಬ್ಬರ ದುಡಿಮೆಯನ್ನು ಕಂಡು ಮತ್ತೊಬ್ಬರಿಗೂ ದುಡಿಯುವ ಉಮೇದು ತುಂಬಿಬರುವುದನ್ನು

ಸಹಜವಾಗಿಯೇ ನೋಡಬಹುದು. ಕೃಷಿ ಚಟುವಟಿಕೆ ಹೀಗೆ ಒಬ್ಬರಿಂದ ಮತ್ತೊಬ್ಬರಿಗೆ ಸ್ಫೂರ್ತಿದಾಯಿ. ಸಾಮೂಹಿಕವಾಗಿ ದುಡಿಯುವದಕ್ಕೆ ಕೃಷಿಯಲ್ಲಿ ಕಂಡುಬರುವ ಸ್ಫೂರ್ತಿಯೇ ಮೂಲಶಕ್ತಿ ಎಂಬ ಸತ್ಯವನ್ನು ಗೊರೂರರವರು ತಮ್ಮದೇ ಉದಾಹರಣೆಯ ಮೂಲಕ ಸೂಚಿಸಿದ್ದಾರೆ.

ಕೃಷಿಕರಲ್ಲಿ ವಿಶೇಷ ವ್ಯಕ್ತಿಗಳನ್ನು ಗೊರೂರರವರು 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಗುರುತಿಸಿದ್ದಾರೆ. ತಮ್ಮ ಪೂರ್ವಿಕರಾದ ಹನಮನಹಳ್ಳಿಯ ರಾಮಯ್ಯಂಗಾರ್‍ರ ವಿಷಯ ಹೇಳುವಾಗ ಇದಕ್ಕೆ ನಿದರ್ಶನವನ್ನು ಕಾಣುತ್ತೇವೆ. ರಾಮಯ್ಯಂಗಾರ್‍ರು ಜೋಡಿದಾರರು. ಅವರು ಕೃಷಿ ಮಾಡಿಸುವುದು ಒಂದು ಗತ್ತಿನ ಚಟುವಟಿಕೆಯಾಗಿತ್ತು. ಬೆಳಗಿನ ಜಾವ ಊರಿನ ಬೇಸಾಯದ ಕೂಲಿಗಾರರೆಲ್ಲಾ ರಾಮಯ್ಯಂಗಾರ್‍ರ ಗುಂಡಿನ ಧ್ವನಿ ಕೇಳುತ್ತಲೇ ಎಲ್ಲರೂ ಅವರ ಜಮೀನಿನ ಕಡೆಗೆ ಧಾವಿಸಿ ಬರುತ್ತಿದ್ದರು. ಸಂಜೆ ಆದ ಮೇಲೆ ನಿಶ್ಚಿತ ವೇಳೆಗೆ ಸರಿಯಾಗಿ ರಾಮಯ್ಯಂಗಾರ್‍ರು ಮತ್ತೊಮ್ಮೆ ಗುಂಡಿನ ಧ್ವನಿಯನ್ನು ಮಾಡಿದಾಗ ಕೂಲಿಗಾರರೆಲ್ಲಾ ಬೇಸಾಯದಿಂದ ವಿಶ್ರಾಂತಿ ಪಡೆಯುತ್ತಿದ್ದರು. ಹಳ್ಳಿಯವರೆಲ್ಲ ರಾಮಯ್ಯಂಗಾರ್‍ರರ ಬಗ್ಗೆ ಇಷ್ಟರ ಮಟ್ಟಿನ ಪ್ರಾಮಾಣಿಕತೆಯನ್ನು ಉಳಿಸಿಕೊಂಡು ಕೃಷಿ ಕೆಲಸವನ್ನು ಮಾಡುತ್ತಿದ್ದರು. ಕೃಷಿಕನ ಪ್ರಾಮಾಣಿಕತೆ ಜಮೀನ್ದಾರರ ಮತ್ತು ಬೇಸಾಯಗಾರರ ಮೈತ್ರಿ ಸಂಬಂಧಕ್ಕೆ ಸಾಕ್ಷಿಯಾಗಿದೆ. ಇಂತಹ ಮಧುರ ಸಂಬಂಧದಲ್ಲಿಯೇ ಜೋಡಿದಾರರಂತಹ ಶ್ರೀಮಂತರು ತಮ್ಮ ಜಮೀನಿನ ಬೇಸಾಯದ ಕೆಲಸವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತಿದ್ದರು. ಗ್ರಾಮೀಣ ಪರಿಸರದಲ್ಲಿ ಕೃಷಿ ಕೆಲಸ ಕೇವಲ ಹಣದ ಬಲದಲ್ಲಿ ನಡೆಯುತ್ತದೆ ಎಂಬುದನ್ನು ಮರೆಯಬೇಕು. ಶ್ರೀಮಂತರು ಕೂಲಿ ಕೆಲಸದವರಿಗೆ ತೋರಿಸುವ ವಿಶ್ವಾಸದ ಬಲ ಹಣದ ಬಲಕ್ಕಿಂತ ಗಟ್ಟಿ ಎಂಬ ಸತ್ಯಾಂಶ ಗುಂಡಿನ ರಾಮಯ್ಯಂಗಾರ್‍ರರ ಕೃಷಿ ವೈಖರಿ ಮೂಲಕ ನಮಗೆ ಮನವರಿಕೆಯಾಗುತ್ತದೆ.

ಗ್ರಾಮೀಣ ಪರಿಸರದಲ್ಲಿ ವ್ಯಕ್ತಿ ಶಾರೀರಕವಾಗಿ ದೃಢಕಾಯನಾಗಿದ್ದು ಪ್ರಸಂಗ ಬಂದಾಗ ತನ್ನನ್ನು ತನ್ನ ಕಡೆಯ ಕೆಲವರನ್ನು ರಕ್ಷಿಸಬಲ್ಲ ಸದೃಢ ಕೌಶಲ್ಯದ ವ್ಯಕ್ತಿ ಆಗಿದ್ದರೆ ಆತನಿಗೆ ಹೆಚ್ಚಿನ ಪುರಸ್ಕಾರ ಇರುತ್ತಿತ್ತು. ಗುಂಡಿನ ರಾಮಯ್ಯಂಗಾರ್‍ರರು ಇಂತಹ ವ್ಯಕ್ತಿತ್ವಕ್ಕೆ ಒಂದು ಉದಾಹರಣೆ. ಅವರು ಕೋಲು ಬೀಸುವ ನೈಪುಣ್ಯತೆಯಿಂದ ಮಹಾರಾಜರ ಮನಸ್ಸನ್ನು ಗೆದ್ದು ಅವರಿಂದ ಜೋಡಿ ಭೂಮಿಯನ್ನು ಜಹಗೀರಾಗಿ ಪಡೆದಿದ್ದರು. ಗೊರೂರರವರು ರಾಮಯ್ಯಂಗಾರ್‍ರರ ಈ ಸಾಮರ್ಥ್ಯವನ್ನು ಯುವಕರಿಗೆಲ್ಲಾ ಉದಾಹರಣೆಯಾಗಿ ಹೇಳಿ ಹುರಿದುಂಬಿಸುತ್ತಿದ್ದರು. ಈ ಘಟನೆಯಲ್ಲಿ ಗ್ರಾಮೀಣ ಕಲೆಯ ಒಂದು ವೈಶಿಷ್ಟ್ಯವಾದ ಕೋಲು ಬೀಸುವ ಕಲೆಯನ್ನು ಲೇಖಕರು ಪರಿಣಾಮಕಾರಿಯಾಗಿ ವರ್ಣಿಸಿದ್ದಾರೆ. ಹಿಂದಿನ ಮಹಾರಾಜರು ಗ್ರಾಮೀಣ ಕಲೆಗೆ ಪ್ರೋತ್ಸಾಹಕೊಟ್ಟಂತೆ ಕೃಷಿಕರಲ್ಲಿ ಕಂಡುಬರುವ ಕಲಿತನಕ್ಕೂ ಮಾನ್ಯತೆ ನೀಡಿರುವುದನ್ನು ಗುಂಡು ರಾಮಯ್ಯಂಗಾರ್‍ರರಂತಹ ವ್ಯಕ್ತಿಗಳನ್ನು ಕಂಡಾಗ ನಮಗೆ ದಿಟವೆನಿಸುತ್ತದೆ.

ಗೊರೂರರವರು ವ್ಯಕ್ತಿಗೆ ಭೂಮಿಯ ಮೇಲಿನ ಮೋಹ ಎಷ್ಟು ಸಹಜವಾಗಿ ತೀವ್ರವಾಗಿ ಮೂಡಿ ಬರಬಹುದು ಎಂಬ ಅಂಶವನ್ನು ಅವರ 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಪ್ರಬಂಧ ಸಂಕಲನದ 'ಸಫಲ ಜೀವನ' ಪ್ರಬಂಧದ ವೆಂಕಟರಾಯರ ಪಾತ್ರದ ಮೂಲಕ ಅತ್ಯಂತ ಸೊಗಸಾಗಿ ಚಿತ್ರಿಸಿದ್ದಾರೆ. ವೆಂಕಟರಾಯರು ಬ್ರಾಹ್ಮಣ ಜಾತಿಗೆ ಸೇರಿದವರು. ಅವರು ಸರ್ಕಾರಿ ವೃತ್ತಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಮೇಲೆ ಬೇಸಾಯದ ಬದುಕಿಗೆ ಪಾದಾರ್ಪಣೆ ಮಾಡುತ್ತಾರೆ. ಸಾಮಾನ್ಯವಾಗಿ ಹುಟ್ಟಿನಿಂದ ರೈತರಾದವರಿಗೆ ಬೇಸಾಯದ ಬದುಕಿನಲ್ಲಿ ಇರುವ ತಾದಾತ್ಮ್ಯವನ್ನು ವೆಂಕಟರಾಯರಲ್ಲಿ ನಾವು ಕಂಡು ಎಷ್ಟು ವಿಸ್ಮಯ ಪಡುತ್ತೆವೆಯೋ ಆ ಗುಣ ನೈಪುಣ್ಯ ವೆಂಕಟರಾಯರಲ್ಲಿ ಅಷ್ಟೇ ಅಪೂರ್ವವಾಗಿತ್ತು. ಅವರಿಗೆ ಬೇಸಾಯ ನಿವೃತ್ತ ಬದುಕಿಗೆ ಅನಿವಾರ್ಯ ವೃತ್ತಿಯಾಗಿರಲಿಲ್ಲ - ಆಸಕ್ತಿಯ ಪ್ರವೃತ್ತಿಯಾಗಿತ್ತು. ತಾವು ಸಂಪಾದಿಸಿದ ಭೂಮಿಯಲ್ಲಿ ಕೃಷಿ ಮಾಡುವುದು ಅವರಿಗೆ ಆಸಕ್ತಿಯ ಅಕ್ಕರೆಯ ಚಟುವಟಿಕೆಯಾಗಿತ್ತು. ಸರ್ಕಾರಿ ಸೇವೆಯ ಯಾಂತ್ರಿಕತೆಯ ಬೇಸರವನ್ನು ಮರೆಯಲು ಬೇಸಾಯದ ಬದುಕು ಪರ್ಯಾಯದ ಪ್ರವೃತ್ತಿಯಾಯಿತು. ಹೀಗೆ ಬೇಸಾಯದ ಪ್ರವೃತ್ತಿಯನ್ನು ಅವಲಂಬಿಸುವ ಜನ ಅಪರೂಪವೆಂದೇ ಹೇಳಬಹುದು. ಇವರು ಬ್ರಾಹ್ಮಣ ಧರ್ಮಕ್ಕಿಂತ ಕೃಷಿಕ ಧರ್ಮವನ್ನೇ ಮೇಲಾಗಿ ಭಾವಿಸಿ ತಮ್ಮ ಬೇಸಾಯದ ಭೂಮಿಯನ್ನು ಪುಣ್ಯ ಭೂಮಿ ಎಂದು ಭಾವಿಸಿದ್ದರು. ಇವರ ಪಾಲಿಗೆ "ಹಗಲು ರಾತ್ರಿ, ನಿದ್ರೆ ಸ್ವಪ್ನ, ಕೆಲಸ ವಿರಾಮ, ನಿಯಮ ನಿಷ್ಠೆ, ಸ್ನಾನ ಜಪ, ದೇವರ ಪೂಜೆ ಎಲ್ಲಾ ಜಮೀನೇ ಆಯಿತು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು.೧೨೨) ಬೇಸಾಯದಲ್ಲಿ ಕೆಲಸವನ್ನು ಮಾಡುವಾಗ ಇವರು ತೋರಿಸುತ್ತಿದ್ದ ದೈವೀ ಶ್ರದ್ಧೆ ಅಪಾರ ಪರಿಶ್ರಮದ ಫಲ ಹುಟ್ಟು ಬೇಸಾಯಗಾರರಲ್ಲಿ ಕಾಣದಂತಹ ಗುಣವಾಗಿತ್ತು. ವೆಂಕಟರಾಯಯರಿಗೆ ಕೃಷಿಯ ಕಾಯಕ ದೇವರ ಪೂಜೆಗಿಂತ ನೂರು ಮಡಿ ಆನಂದವನ್ನು ತಂದುಕೊಡುತ್ತದೆ "ಭೂಮಿಯು ಕೊಡುವುದಕ್ಕೆ ಪ್ರಾರಂಭಿಸಿದರೆ ಅದಕ್ಕೆ ಕೊನೆಯುಂಟೆ? ನೆಲಕ್ಕೆ ಬೀಜ ಅಥವಾ ಬೇರು ತಗಲಿದರೆ ಸಾಕು; ಅದು ಹೇಗೋ ಬೆಳೆದುಕೊಂಡು ಬಿಡುವುದು". (ಅದೇ; ಪು.೧೨೧) ಇದು ಬೇಸಾಯದ ಬಗ್ಗೆ ವೆಂಕಟರಾಯರು ಸ್ವಾನುಭವದಲ್ಲಿ ಪಡೆದು ಆಡಿದ ಮಾತು. ವೆಂಕಟರಾಯರು ತಮ್ಮ ತೋಟದಲ್ಲಿ ಅನೇಕ ರೀತಿಯ ಹೂವು ಹಣ್ಣುಗಳನ್ನು ಬೆಳೆದು ಊರಿನಲ್ಲಿ ದೇವಸ್ಥಾನಕ್ಕೆ ಪೂಜೆಗೆ ಸಲ್ಲಿಸುವುದರ ಜತೆಗೆ ಊರಿನ ಅನೇಕರ ಮನೆಗೆ ಪೂಜಾ ಕೈಂಕರ್ಯಕ್ಕೆ ವೆಂಕಟರಾಯ ವಿನಿಯೋಗ ಮಾಡುತ್ತಿದ್ದನು. ಕೃಷಿಕರ ಮನೆಯಲ್ಲಿ ಸಾಮಾನ್ಯವಾಗಿ ಕಾಣುವಂತೆ ಗೋಸಂಪತ್ತು ಚೆನ್ನಾಗಿತ್ತು. ಯಥೇಚ್ಛವಾಗಿ ಹಾಲು ಮೊಸರು ಬೆಣ್ಣೆ ತುಪ್ಪ ಸಂಪಾದಿಸಿ ಊರಿನವರಿಗೆಲ್ಲಾ ದಾನ ಮಾಡಿದ ಮಹಾದಾನಿ ವೆಂಕಟರಾಯ ಆಗಿದ್ದರು. ವೆಂಕಟರಾಯರು ಭೂಮಿತಾಯಿಯ ಸೇವೆಯಲ್ಲಿ ಮಗ್ನರಾಗಿ ಕೃಷಿ ಕಾಯಕವನ್ನು ದಿನವೆಲ್ಲಾ ಮಾಡುತ್ತಿರುವಾಗ ಅವರ ಧರ್ಮಪತ್ನಿಯರಿಗೆ ವೆಂಕಟರಾಯರ ವೃತ್ತಿ ಸುಖ ಹಾಗೂ ವೃತ್ತಿಯ ಹಿರಿಮೆ ಅರ್ಥವಾಗುವುದಿಲ್ಲ. ಅವರ ಪಾಲಿಗೆ ಬ್ರಾಹ್ಮಣ ಧರ್ಮಕ್ಕೆ ಅನುಗುಣವಾಗಿ ಪೂಜೆ ಪುನಸ್ಕಾರ ವನ್ನು ಮಾಡುವುದು ಮುಖ್ಯ ಕಸುಬಾಗಿತ್ತು.

ವೆಂಕಟರಾಯರು ಹಬ್ಬ ಹರಿದಿನಗಳಲ್ಲಿಯೂ ಮನೆಯಲ್ಲಿ ದೇವರಿಗೆ ಪೂಜೆ ಮಾಡದೆ ಪ್ರತಿದಿನವೂ ಕರ್ಮಯೋಗಿಯಂತೆ ಸೂರ್ಯೋದಯಕ್ಕೆ ಮುಂಚೆ ತನ್ನ ಬೇಸಾಯದ ಭೂಮಿಗೆ ಹೋಗಿ ಬೇಸಾಯದ ಚಟುವಟಿಕೆಯಲ್ಲಿ ಮಗ್ನರಾಗಿ ದುಡಿಯುವುದು ಅವರ ಸ್ವಭಾವವಾಗಿತ್ತು. ವೆಂಕಟರಾಯರು ಬೇಸಾಯವನ್ನೇ ಭಗವಂತನ ಊಳಿಗವೆಂದು ನಂಬಿ ಬಾಳಿದ ವ್ಯಕ್ತಿಯಾಗಿದ್ದರು. ಭಗವಂತನಿಗೆ ಸಾಂಪ್ರದಾಯಿಕವಾಗಿ ಮಾಡುವ ಪೂಜಾವಿಧಾನ ವೈಭವಗಳಿಗಿಂತ ಕೃಷಿಕ ಕಾರ್ಯದಲ್ಲಿ ವೆಂಕಟರಾಯರು ಪರ್ಯಾಯ ಸಂತೋಷವನ್ನು ಕಂಡುಕೊಂಡಿದ್ದರು. ಸಾಂಪ್ರದಾಯಿಕವಾಗಿ ದೇವರಿಗೆ ಮಾಡುವ ಪೂಜೆಯನ್ನು ವೆಂಕಟರಾಯರು ಅರ್ಥವಿಲ್ಲದ ಆಟವೆಂದು ಭಾವಿಸಿದ್ದರು. ಬೇಸಾಯದಲ್ಲಿ ಭೂಮಿಯು ಹದವಾದಾಗ ಬೇಸಾಯ ಮಾಡುವುದು ಪರಮ ಧರ್ಮ. ಬೆರಗು ಬಂದಾಗ ಬೇಸಾಯ ಮಾಡದಿದ್ದರೆ ನಂತರ ಮಾಡಿದ ಬೇಸಾಯದ ಕಾರ್ಯ ವ್ಯರ್ಥ ಎಂಬುದು ವೆಂಕಟರಾಯರ ಅಭಿಪ್ರಾಯವಾಗಿತ್ತು. ಇದಕ್ಕೆ ಪುಷ್ಟಿಯಾಗಿ ವೆಂಕಟರಾಯರು ಕೊಡುವ ಒಂದು ಉದಾಹರಣೆ - ಪುರೋಹಿತರು ಹೇಳಿದ ಕತೆ. ಮದುವೆ ನಿಶ್ಚಿತವಾಗಿದ್ದ ಸಮಯದಲ್ಲಿ ಬೆರಗು ಬಂದ ಭೂಮಿಯನ್ನು ಕೃಷಿ ಮಾಡಲು ಹೋದ ವರ - ಯುವಕ ರೈತ "ಬೆರಗು ಮೀರಿ ಹೋಗುತ್ತೆ, ಬಿತ್ತಿ ಬಿಟ್ಟೆ ಬರುತ್ತೇನೆ" (ಅದೇ; ಪು. ೧೨೯) ಎಂದು ಹೇಳಿ ತನ್ನ ಕೃಷಿ ಕೆಲಸವನ್ನು ಮುಗಿಸಿಕೊಂಡು ಮದುವೆಯ ಮಂಟಪಕ್ಕೆ ಸಂಜೆಗೆ ಹಿಂತಿರುಗುತ್ತಾನೆ. ಹೀಗೆ ಹೇಳಿ ವೆಂಕಟರಾಯರು ತಮ್ಮ ಕಾರ್ಯ ಚಟುವಟಿಕೆಯನ್ನು ಸಮರ್ಥಿಸಿಕೊಳ್ಳುತ್ತಾನೆ.

ಒಂದು ಯುಗಾದಿಯ ಹಬ್ಬದ ದಿನ ಎಂದಿನಂತೆ ತನ್ನ ಬೇಸಾಯದ ಚಟುವಟಿಕೆಗೆ ವೆಂಕಟರಾಯರು ಹೊರಡುತ್ತಾರೆ. ಅವರ ಹೆಂಡತಿ ಹಬ್ಬದ ದಿನವಾದರೂ ದೇವರ ಪೂಜೆಯನ್ನು ಮಾಡಲಿಲ್ಲವಲ್ಲ ಎಂದು ವೆಂಕಟರಾಯರ ಕೃಷಿಕ ಚಟುವಟಿಕೆಗೆ ತೀವ್ರವಾಗಿ ಅಡ್ಡಿ ಬರುತ್ತಾಳೆ. ಅಂದು ವೆಂಕಟರಾಯರ ಮನಸ್ಸು ವಿಚಲಿತವಾಯಿತು. ಮರುದಿನದಿಂದಲೇ ವೆಂಕಟರಾಯರು ಕೃಷಿಕ ಚಟುವಟಿಕಯನ್ನು ಬಿಟ್ಟು ಹೆಂಡತಿಯ ಮಾತಿನಂತೆ ಪೂಜಾ ಚಟುವಟಿಕೆಯಲ್ಲಿ ತೊಡಗುತ್ತಾರೆ. ಆತನಿಗೆ ಪೂಜಾ ಕಾರ್ಯ ನಗು ತರುವಂತಹುದು ಆಗಿದೆ. ಇಷ್ಟಾದರೂ ಹೆಂಡತಿಯ ಮನ ಓಲೈಸುವುದು ಅವರಿಗೆ ಮುಖ್ಯವಾದ ಸಂಗತಿಯಾಗಿತ್ತು. ಈ ರೀತಿಯಲ್ಲಿ ವೆಂಕಟರಾಯರ ಮನಪರಿವರ್ತನೆಯಾದಾಗ ಅವರ ಬೇಸಾಯದ ಭೂಮಿ ಬರಡಾಯಿತು. ಇದನ್ನು ಕಂಡ ಪುರೋಹಿತರು ಆಡುವ ಮಾತು "ಹೋದ ವರುಷ, ನಿಮ್ಮ ಜಮೀನನ್ನು ನೀವು ಮಾಡಿದ್ದೀರಿ. ಈ ವರುಷ ದೇವರೇ ಮಾಡಿದ್ದಾನೆ ನೋಡಿ. ಪಾಳುಬಿದ್ದು ಗೋಳು ಸುರಿಯುತ್ತಿದೆ" ಎಂದರು. (ಅದೇ; ಪು.೧೪೫) ಈ ಮಾತು ವೆಂಕಟರಾಯರ ಇಂದಿನ ಬದುಕನ್ನು ಕಂಡಾಗ ಯಾರಿಗಾದರೂ ದುಃಖವಾಗುವುದು ಸಹಜ. ಊರಿನವರಿಗೆಲ್ಲಾ ಪೂಜೆಗೆ ಹಣ್ಣು ಹಾಲು ಹೂವನ್ನು ಸರಬರಾಜು ಮಾಡುತ್ತಿದ್ದ ವೆಂಕಟರಾಯರ ಮನೆಯಲ್ಲಿ ಅವರ ಮನೆಯ ಉಪಯೋಗಕ್ಕೆ ಹಾಲಿನ ಅಭಾವ ಉಂಟಾಯಿತು. ಕೃಷಿಯನ್ನು ಸಂಪೂರ್ಣವಾಗಿ ವೆಂಕಟರಾಯ ಮರೆತು ಬದುಕಲು ಪ್ರಾರಂಭಿಸಿದಾಗ ಅದರ ದುಷ್ಪರಿಣಾಮಗಳನ್ನು ಅರಿತ ವೆಂಕಟರಾಯರ ಹೆಂಡತಿಗೆ ಅವಳ ತಪ್ಪಿನ ಅರಿವಾಯಿತು. ವೆಂಕಟರಾಯರು

ಮತ್ತೆ ಕೃಷಿ ಕಾಯಕ ಪ್ರಾರಂಭ ಮಾಡುತ್ತಾರೆ. "ದೈನ್ಯಾವ್ಯಸ್ಥೆಯಲ್ಲಿ ಅನಾಥವಾಗಿದ್ದ ತಮ್ಮ ಜಮೀನನ್ನು ಅವರು ಮತ್ತೆ ಪ್ರವೇಶಿಸಿದರು. ಅವರ ಕೈ, ಮಾಟಗಾರನ ಕೈ ಆಗಿತ್ತು. ಮೊದಲಿನಂತೆ ಮಲ್ಲಿಗೆಹಳ್ಳಿಯಲ್ಲಿ ಬಡ ಮಕ್ಕಳಿಗೆ ಮತ್ತು ಪೆನ್ಸನರ್‌ಗಳಿಗೆ ಕಾಫಿಗೆ ಒಳ್ಳೆಯ ಹಾಲು, ದೇವರ ಪೂಜೆಗೆ ಹೂವು ಹಣ್ಣುಗಳೂ ದೊರೆಯತೊಡಗಿದವು. ವೆಂಕಟರಾಯರು ತಮ್ಮ ಎಲ್ಲ ಕಾಲವನ್ನು ಜಮೀನಿನಲ್ಲಿಯೇ ಕಳೆಯತೊಡಗಿದರು. ಅದೇ ಅವರು ಮಾಡುವ ಪೂಜೆಯಾಯಿತು. ಅವರ ಹೆಂಡತಿ ಸಹ, ಗಂಡನಿಗೆ, ಆ ಪೂಜೆಯಲ್ಲಿ ಸಂಪೂರ್ಣ ಪಾಲುಗಾರಳಾದಳು". (ಅದೇ; ಪು.೧೫೦) ಹೀಗೆ ಗೊರೂರರವರು ವೆಂಕಟರಾಯನ ಅಪರೂಪದ ಕೃಷಿಕ ಬದುಕನ್ನು ಅತ್ಯಂತ ಮಾಂತ್ರಿಕವಾಗಿ ಚಿತ್ರಿಸಿದ್ದಾರೆ. ವೆಂಕಟರಾಯರ ಕೃಷಿಕ ಬದುಕು ಕೃಷಿಯ ಮೇಲ್ಮೆಯನ್ನು ಸಾರುವುದರ ಜತೆಗೆ ಕೃಷಿಕರೆಲ್ಲರಿಗೂ ಸ್ಫೂರ್ತಿಯ ಸಂಗತಿಯಾಗಿದೆ. ಗೊರೂರರವರು ಗ್ರಾಮೀಣ ಸಮಾಜದಲ್ಲಿ ತಾವು ಕಂಡ ಇಂತಹ ಅಪೂರ್ವ ವ್ಯಕ್ತಿ, ಸಂಗತಿ ಮತ್ತು ಸನ್ನಿವೇಶಗಳನ್ನು ಚಿತ್ರಿಸುವಲ್ಲಿ ನಿಷ್ಣಾತತೆಯನ್ನು ತೋರಿಸಿರುವುದರ ಜೊತೆಗೆ ನೈಜತೆಯ ಅವಶ್ಯಕತೆಯನ್ನು ಓದುಗರ ಅನುಭವಕ್ಕೆ ತಮ್ಮ ಕೃತಿಗಳ ಮೂಲಕ ತಂದುಕೊಟ್ಟಿದ್ದಾರೆ. ಈ ಕಾರಣದಿಂದಲೇ ಗೊರೂರರವರ ಕೃತಿಗಳಲ್ಲಿನ ಗ್ರಾಮೀಣ ಜೀವನ ನೈಜ ನರಗೆಂಪು ಚಿರಸ್ಫೂರ್ತಿಯಾಗಿ ಉಳಿದಿವೆ.

ಕೃಷಿಕ ವೆಂಕಟರಾಯರ ಬಗ್ಗೆ ಮಳಲಿ ವಸಂತಕುಮಾರ ಆಡುವ ಮಾತು ಹೀಗಿದೆ - "ವೆಂಕಟರಾಯ ತನ್ನ ಮುವತ್ತೈದು ವರ್ಷಗಳ ಪಟ್ಟಣದ ಕಾರಕೂನ ಜೀವನದಲ್ಲಿ ಪಡೆಯಲಾಗದ ನೆಮ್ಮದಿಯನ್ನು ಹಳ್ಳಿಯ ರೈತನಾಗಿ ಪಡೆದುಕೊಳ್ಳುತ್ತಾನೆ. ಒಬ್ಬನ ದುಡಿಮೆಯಿಂದ ಹಳ್ಳಿಯ ಸಾವಿರ ಜನ ಹರ್ಷಿಸಲು ಸಾಧ್ಯವಿರುವಾಗ, - ಅದೇ ಸಾವಿರ ಜನವೂ ದುಡಿದರೆ ಆ ನಾಡು ಸುಖದ ಬೀಡಾಗಲು ಸಂದೇಹವಿಲ್ಲ - ಎಂಬ ಭಾವನೆ ಇಲ್ಲಿ ಧ್ವನಿತವಾಗುತ್ತದೆ. ನೂರು ತತ್ವಗಳು ಹೇಳುವ ನೀತಿಯನ್ನು ಈ ಒಂದು ಪ್ರಬಂಧ ಪರಿಣಾಮಕಾರಿಯಾಗಿ ನೆರವೇರಿಸಿದೆ". (ಮಳಲಿ ವಸಂತಕುಮಾರ್; ೧೯೭೭; ೭೩-೭೪) ಎಂದು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ.

ಕೃಷಿಕ ಸಮಾಜದಲ್ಲಿ ಕೃಷಿಯ ಒಲವು ವ್ಯಕ್ತಿ ವ್ಯಕ್ತಿಗೂ ತಲೆ ತಲಾಂತರಕ್ಕೂ ಬೇರೆಯಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಹಿರಿಯರಲ್ಲಿ ಕಂಡುಬರುವ ಭೂಮಿಯ ಮೇಲಿನ ಒಲವು ಕಿರಿಯರಲ್ಲಿ ಕಂಡುಬರುವುದಿಲ್ಲ. ತಂದೆ ಸಂಪಾದಿಸಿಟ್ಟ ಆಸ್ತಿಯನ್ನು ಮಗ ವಿನಾಕಾರಣ ಹಾಳು ಮಾಡುವುದು ಗ್ರಾಮೀಣ ಸಮಾಜದಲ್ಲಿ ಅಪರೂಪಕ್ಕೊಮ್ಮೊಮ್ಮೆ ಜರುಗುವುದನ್ನು ಗುರುತಿಸಬಹುದು. ಅಂತಹ ಸಂದರ್ಭಗಳಲ್ಲಿ ಹಿರಿಯರ ದುಡಿಮೆ ಕಿರಿಯರಿಗೆ ಕಸಕ್ಕಿಂತ ಕೀಳಾಗಿರುತ್ತದೆ. ಇದಕ್ಕೆ ಉದಾಹರಣೆಯನ್ನು 'ಕಮ್ಮಾರ ವೀರಭದ್ರಾಚಾರಿ' ಕಥಾಸಂಕಲನದ 'ಉತ್ತರಾಧಿಕಾರಿ' ಕತೆಯಲ್ಲಿ ತಂದೆ ಸದಾಶಿವ, ಮಗ ವಿಶ್ವೇಶ್ವರನ ಪಾತ್ರಗಳಲ್ಲಿ ಕಾಣುತ್ತೇವೆ.

ಗ್ರಾಮಗಳಲ್ಲಿ ಜೋಡಿದಾರರ ಪಾತ್ರ ಅತ್ಯಂತ ಪ್ರಧಾನವಾಗಿತ್ತು. ಗ್ರಾಮದ ಆಳ್ವಿಕೆಯೇ ಜೋಡಿದಾರರ ಅಧೀನದಲ್ಲಿತ್ತು. ಜೋಡಿದಾರರು ತಮ್ಮ ಗ್ರಾಮದಲ್ಲಿಯೇ ಉಳಿದು ರೈತರ ಯೋಗ ಕ್ಷೇಮವನ್ನು ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಿದ್ದರು. ಕಾಲ ಕಳೆದಂತೆ ಜೋಡಿದಾರರು ನಗರವಾಸಿಗಳಾಗಿ ಹಳ್ಳಿಗಳಿಗೆ ತಮ್ಮ ಪರವಾಗಿ ಬೇರೆಯವರನ್ನು ಮೇಲ್ವಿಚಾರಕರನ್ನಾಗಿ ನೇಮಿಸುತ್ತಿದ್ದರು. ಹಳ್ಳಿಯಲ್ಲಿ ಇಂತಹ ಮೇಲ್ವಿಚಾರಕರ ಆಡಳಿತ ಒಂದು ರೀತಿಯಲ್ಲಿ ದಬ್ಬಾಳಿಕೆಯ ಪ್ರವೃತ್ತಿಯಾಗಿತ್ತು. ಅವರು ಕೃಷಿಕರಿಂದ ಹೆಚ್ಚಿನ ಕಂದಾಯವನ್ನು ವಸೂಲಿ ಮಾಡಿ ಪೇಟೆಯಲ್ಲಿರುವ ಜಮೀನ್ದಾರರಿಗೆ ನಿಯಮಿತ ಕಂದಾಯವನ್ನು ಕೊಟ್ಟು ಮಿಕ್ಕ ಮೊತ್ತವನ್ನು ತಾವು ಬಳಸಿಕೊಳ್ಳುತ್ತಿದ್ದರು. ಇಂತಹ ಜಮೀನ್ದಾರರ ಪ್ರತಿನಿಧಿಗಳು ಗ್ರಾಮೀಣ ಪರಿಸರದಲ್ಲಿ ಕೃಷಿಕರ ಪಾಲಿಗೆ ವಿಶ್ವಾಸದ ವ್ಯಕ್ತಿಗಳಾಗಿರಲಿಲ್ಲ. ಗೊರೂರವರು 'ಬೈಲಹಳ್ಳಿ ಸರ್ವೆ' ಪ್ರಬಂಧ ಸಂಕಲನದಲ್ಲಿ ಜಮೀನ್ದಾರರ ಪ್ರತಿನಿಧಿಗಳ ಬಗ್ಗೆ ಆಡುವ ಮಾತು "ಇದು ನಮ್ಮ ಗ್ರಾಮ. ಇಲ್ಲಿ ಇರುವವರು ನಮ್ಮ ರೈತರು. ಇವರ ಸುಖ ನಾವು ನೋಡಿಕೊಳ್ಳಬೇಕು" ಎಂಬ ಭಾವನೆಯೇ ಅವರಿಗೆ ಇದ್ದಂತೆ ತೋರಲಿಲ್ಲ. ಅವರಿಂದ ನಿಯಮಿಸಲ್ಪಟ್ಟ 'ಪೂಟ್‌ಚಾರಕರು' ರೈತರಿಂದ ಕಂದಾಯವನ್ನು ಒಂದಕ್ಕೆ ಎರಡಾಗಿ ವಸೂಲ್ಮಾಡಿ ರೈತರನ್ನು ಸಣ್ಣಗೆ ಮಾಡಿದರು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೬) ಈ ಸಂದರ್ಭದಲ್ಲಿ ಗೊರೂರವರು ಒಂದು ಕಾಲಕ್ಕೆ ಜಮೀನ್ದಾರರ ಉತ್ತಮ ವರ್ತನೆಯನ್ನು ಈಗ ಅವರ ಪ್ರತಿನಿಧಿಗಳ ವರ್ತನೆಯೊಂದಿಗೆ ಹೋಲಿಕೆ ಮಾಡಿರುವುದು ಮುಖ್ಯ ಸಂಗತಿಯಾಗಿದೆ. ಜೋಡಿದಾರರ ಕೈಯಲ್ಲಿ ಉಪಟಳಕ್ಕೆ ಒಳಗಾದ ಕೃಷಿಕರ ಬೇಸಾಯ ಚಟುವಟಿಕೆ ಅಷ್ಟರಮಟ್ಟಿಗೆ ಕುಂಟಿತವಾಯಿತು ಎಂಬುದು ಅನೇಕ ಘಟನೆಗಳಲ್ಲಿ ಕಂಡುಬರುತ್ತದೆ.

ಹಳ್ಳಿಗಳಲ್ಲಿ ಮೋಜಿಮದಾರರ ಕಾರ್ಯ ವೈಖರಿಯನ್ನು ಅದೇ ಕೃತಿಯಲ್ಲಿ ಗೊರೂರವರು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಮೋಜಿಮದಾರರು ಸರ್ವೆ ಮಾಡಿದಾಗಲೆಲ್ಲಾ ಮನಸೋ ಇಚ್ಛೆ ಕಂದಾಯ ಹಾಕುವುದು ಅವರ ಪರಿಪಾಟವಾಗಿತ್ತು. ರೈತರು ಹೇಳುವಂತೆ "ನಮ್ಮಾಲ್ಕೆ ಎರಡು ಸರ್ವೆ ಬಂದೊ, ಎರಡು ಸಲಾನೂ ಕಂದಾಯ ಹೆಚ್ಚಾಯ್ತು; ಈಗ ಮೂರನೆ ಸಲ ಬಂದಯ್ತೆ" ಎಂದು ಗೊಣಗುಟ್ಟುತ್ತಿದ್ದರು. (ಅದೇ; ಪು. ೧೦) ಇಲ್ಲಿ ರೈತರ ಈ ಗೊಣಗಾಟ ಮೋಜಿಮದಾರರ ಬಗ್ಗೆ ಮೂಕವೇದನೆಯ ಮಾತಾಗಿದೆ. ಸರ್ಕಾರಿ ಅಧಿಕಾರಿಗಳಿಂದ ರೈತರಿಗೆ ಉಪಕಾರಕ್ಕಿಂತ ಉಪಟಳವೇ ಹೆಚ್ಚಾಗಿತ್ತು ಎಂಬ ವಿಷಯವನ್ನು ಗೊರೂರವರು ಈ ಸಂದರ್ಭದಲ್ಲಿ ತಿಳಿಸಿಕೊಟ್ಟಿದ್ದಾರೆ.

ಗೊರೂರವರು ಶ್ಯಾನುಭೋಗರ ಮತ್ತು ಅಧಿಕಾರಿಗಳ ಚಿತ್ರಣ ಕೊಡುವಾಗ ಪ್ರತಿ ಹೆಜ್ಜೆಯಲ್ಲಿಯೂ ನೈಜ ಸ್ವಾನುಭವವನ್ನು ಮೂಡಿಸಿದ್ದಾರೆಯೇ ಹೊರತು ಕಲ್ಪನೆಗೆ ಎಲ್ಲಿಯೂ ಅವಕಾಶ ಮಾಡಿಕೊಟ್ಟಿಲ್ಲ. ಅವರು ಶಾರೀರಕವಾಗಿ ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಹಳ್ಳಿಯಲ್ಲಿ ಹುಟ್ಟಿ ಬೆಳೆದು ಶತಾಂಶ ಗ್ರಾಮೀಣ ವ್ಯಕ್ತಿಯಾಗಿದ್ದಾರೆ. ರೈತರ ಗುಣ ಮನೋಧರ್ಮ ಇವರಿಗೆ ಕಂಡ ವಿಷಯವಲ್ಲ-ರಕ್ತಗತವಾದ ಭಾವನೆಗಳು.

ಕುವೆಂಪು ಮತ್ತು ಕಾರಂತರಲ್ಲಿ ಕಾಣುವ ಗ್ರಾಮೀಣ ನೈಜ ಸೊಗಡು ಗೊರೂರರವರಲ್ಲಿಯೂ ಸಹ ನಮಗೆ ಮತ್ತೆ ಅನುಭವಕ್ಕೆ ಬರುತ್ತದೆ. ಅನುಭವ ಒಂದೇ ಆದರೂ ಹೇಳುವ ರೀತಿಯಲ್ಲಿ ರಸಿಕತೆಯ ಕೌಶಲ್ಯವನ್ನು ಗೊರೂರರವರಲ್ಲಿ ಮಾತ್ರ ನಾವು ವಿಶಿಷ್ಟವಾಗಿ ಗುರುತಿಸಬಹುದು. ಹಳ್ಳಿಯ ಶ್ಯಾನುಭೋಗನನ್ನು ಲೇಖಕರು ಒಬ್ಬ ಬಡಪಾಯಿಯಾಗಿ ಚಿತ್ರಿಸಿರುವಂತೆ ಒಬ್ಬ ಪ್ರಚಂಡ ವ್ಯಕ್ತಿಯಾಗಿಯೂ ಚಿತ್ರಿಸಿದ್ದಾರೆ. ಹಳ್ಳಿಯ ಜನ ಹೀಗೆ ಶ್ಯಾನುಭೋಗರನ್ನು ಕಂಡ ರೀತಿ ಬಹುಮುಖವಾಗಿದೆ. ಇಷ್ಟಾದರೂ ಹಳ್ಳಿಗರ ಪಾಲಿಗೆ ಅನಿವಾರ್ಯ ವ್ಯಕ್ತಿ ಶ್ಯಾನುಭೋಗ ಎಂಬುದು ನಮಗೆ ಮನವರಿಕೆಯಾಗುತ್ತದೆ. ಹಳ್ಳಿಯವರು ಶ್ಯಾನುಭೋಗರಿಗೆ ಸಹಕಾರವನ್ನು ಕೊಟ್ಟರೆ ಶ್ಯಾನುಭೋಗ ಅವರ ಪಾಲಿಗೆ ತಾಯಿಯಷ್ಟೇ ಮೃದು ಅನುಕಂಪೆಯ ವ್ಯಕ್ತಿಯಾಗಿರುತ್ತಾನೆ. ಉಪಟಳ ಕೊಡುವ ವ್ಯಕ್ತಿಗಳ ಪಾಲಿಗೆ ಶ್ಯಾನುಭೋಗ ಕಿರುಕುಳದ ವ್ಯಕ್ತಿಯಾಗಿರುತ್ತಾನೆ. "ಗ್ರಾಮಜೀವನದಲ್ಲಿ ಶ್ಯಾನುಭೋಗನ ಸ್ಥಾನವೇನು? ಎಂದು ಪ್ರಶ್ನಿಸಿದರೆ ಶ್ಯಾನುಭೋಗನು ಶೇಖದಾರರು ಅಮಲ್ದಾರರ ಕೈಯಲ್ಲಿ ಆಗದ ಚಪ್ಪರ ಕೆಲಸವನ್ನು ರಾತ್ರೋರಾತ್ರಿ ನಡೆಸಿ ಬಿಡುವ ಖದೀಮ". (ನಾಯಕ ಹಾ.ಮಾ. (ಸಂ);೧೯೭೩; ಪು. ೪೨೬), "ಗ್ರಾಮಗಳಲ್ಲಿರುವ ಶಾಲೆಗಳು ಹೇಗೆ ನಡೆಯುತ್ತವೆ ಎಂದು ಪ್ರಶ್ನಿಸಿದರೆ 'ಮೆರವಣಿಗೆ' ಕಾದಂಬರಿಯಲ್ಲಿ ಕಂಡುಬರುವ ಚಿತ್ರ ಸ್ವೀಕಾರ ಯೋಗ್ಯ ಅಷ್ಟೇ ಅಲ್ಲ ಸಹಜತೆಗೆ ಕುಂದುಬಾರದ ಚಿತ್ರವಾಗಿದೆ". (ಅದೇ; ಪು.೪೨೭), "ಗ್ರಾಮೀಣ ಸೊಗಡಿನ ಅನುಭವ ಸಹೃದಯರಿಗೆ ಅನುಭವವೇದ್ಯ ಆದಂತೆ ಸಹೃದಯರು ಕೃತಿಯಲ್ಲಿನ ನೈಜತೆಯನ್ನು ನಿಸ್ಸಂಕೋಚವಾಗಿ ಮೆಚ್ಚಿಕೊಳ್ಳುತ್ತಾರೆ. ಇದಕ್ಕೆ ಉದಾಹರಣೆಯನ್ನು 'ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯಲ್ಲಿ ಗೊರೂರರವರು ಕೊಡುವ ಈಜುವ ಘಟನೆಯನ್ನು ನಾವು ನಿರ್ವಿವಾದವಾಗಿ ಮೆಚ್ಚುತ್ತೇವೆ". (ಅದೇ; ಪು. ೪೩೨) ಸುಧಾಕರ ಅವರು ಕೊಟ್ಟಿರುವ ಈ ಮೇಲಿನ ಅಭಿಪ್ರಾಯಗಳು ಕೃತಿಯ ಪರಾಮರ್ಶೆಯಿಂದ ಮೂಡಿಬಂದ ಪ್ರಾಮಾಣಿಕ ವಿಚಾರಗಳು ಎನ್ನಬಹುದು. ಗ್ರಾಮಜೀವನದ ಬನಿಯನ್ನು ಅನುಭವಿಸಿ ಸುಧಾಕರ ಅವರು ಆಡುವ ಮಾತಿನಲ್ಲಿ ಸಾಪೇಕ್ಷತೆ ಹೆಚ್ಚಾಗಿ ಕಂಡುಬರುತ್ತದೆಯೇ ಹೊರತು ಉತ್ಪ್ರೇಕ್ಷೆಯಿಲ್ಲ. ಸುಧಾಕರರ ದೃಷ್ಟಿಯಲ್ಲಿ ವಿವರಣಾತ್ಮಕತೆಗಿಂತ ವಿಚಾರಾತ್ಮಕ ಅಂಶವನ್ನು ತುಂಬ ಕಾಣಬಹುದು. ಸ್ವಾನುಭವದ ನೆಲೆಯಲ್ಲಿ ಹುಟ್ಟಿದ ಕೃತಿಯನ್ನು ಒಮ್ಮೆ ವಿಚಾರ ಮಾಡುವಾಗ ನಿಷ್ಕಳಂಕ ನೈಜ ದೃಷ್ಟಿ ಎಷ್ಟು ಸಮರ್ಪಕ ವಾಸ್ತವ ಎನ್ನುವುದು ನಮಗೆ ಮನಗತವಾಗುತ್ತದೆ. ಕೃತಿ ರಚನೆ ಮಾಡಿರುವ ಗೊರೂರರವರ ಗ್ರಾಮೀಣ ಉತ್ಸಾಹವನ್ನೇ ಕೃತಿ ವಿಮರ್ಶಕರಾದ ಸುಧಾಕರ ಅವರಲ್ಲಿಯೂ ಮತ್ತಷ್ಟು ಕಾಣುವುದು ನಿಜವಾದ ಪ್ರಾಮಾಣಿಕ ವಿಮರ್ಶೆ ಎನ್ನಿಸುತ್ತದೆ.

ಹಿಂದೆ ಒಂದು ಕಾಲದಲ್ಲಿ ಗ್ರಾಮೀಣರ ಪಾಲಿಗೆ ಪಟೇಲ - ಶ್ಯಾನುಭೋಗರೇ ಸರ್ಕಾರದ ಪ್ರತಿರೂಪವಾಗಿದ್ದರು. ಗ್ರಾಮಗಳಲ್ಲಿ ಜಗಳಗಳು ಹುಟ್ಟಿಕೊಂಡಾಗ ವಿಷಯವನ್ನು ಚೆನ್ನಾಗಿ ತಿಳಿದ ಸ್ಥಳದವರಿಂದಲೇ ಚಾವಡಿಯಲ್ಲಿ ಕುಳಿತು, ಎರಡು ಪಕ್ಷದವರ ವಾದಗಳನ್ನು ಕೇಳಿ ತಿಳಿದ ಪಟೇಲ ತೀರ್ಮಾನವನ್ನು ಕೊಡುತ್ತಿದ್ದನು. ತಪ್ಪು ಮಾಡಿದವರಿಗೆ ದಂಡವನ್ನು ವಿಧಿಸಿ ಆ ಹಣವನ್ನು ಊರೊಟ್ಟಿನ

ಕೆಲಸಕ್ಕೆ ಸೇರಿಸುತ್ತಿದ್ದನು. ಕೆಲವು ಸ್ವಾರ್ಥ ಸಾಧಕರಾದ ಪಟೇಲರು ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಿದ್ದರು. ಅನಕ್ಷರಸ್ಥರಾದ ಹಳ್ಳಿಯ ಜನರಿಗೆ ಶ್ಯಾನುಭೋಗನ ಅವ್ಯವಹಾರಗಳು ಯಾವು ತಿಳಿಯುತ್ತಿರಲಿಲ್ಲ. 'ನಾಮ್‌ಕಾವಾಸ್ಥೆ ಪಟೇಲ' ಎನ್ನುವಂತೆ ಪಟೇಲನಿಗೆ ಹಳ್ಳಿಯ ಆಡಳಿತ ವ್ಯವಹಾರದಲ್ಲಿ ಹೆಚ್ಚಿನ ಪ್ರಧಾನತೆ ಇರಲಿಲ್ಲ. ಇದಕ್ಕೆ ನಿದರ್ಶನವಾಗಿ ಗೊರೂರವರ 'ಬೈಲಹಳ್ಳಿ ಸರ್ವೆ' ಪ್ರಬಂಧ ಸಂಕಲನದಲ್ಲಿ ಚಿತ್ರಿತವಾಗಿರುವ ಪಟೇಲನನ್ನು ನೋಡಬಹುದು. "ಬೈಲಹಳ್ಳಿಗೂ ಒಬ್ಬ ಪಟೇಲನಿದ್ದಾನೆ. ಅವನನ್ನು ಸರ್ಕಾರದವರು ಪಟೇಲಿಗೆ ನೇಮಿಸಿಲ್ಲ. ಸರ್ಕಾರದ ಪೋಟಿಗೆಯಾಗಲೀ, ಪಟೇಲಿಯ ಇನಾಂ ಜಮೀನಾಗಲೀ ಅವನಿಗೆ ಕೊಟ್ಟಿಲ್ಲ. ಅವನನ್ನು ಗ್ರಾಮಸ್ಥರು, ಜೋಡಿದಾರರು ಪಟೇಲನೆಂದು ನೇಮಿಸಿಕೊಂಡು ಗೌರವಿಸುತ್ತಾರೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೩) ಬಹುಮಟ್ಟಿಗೆ ಈ ರೀತಿಯ ಪಟೇಲರು ಹೆಚ್ಚಾಗಿ ಕಂಡುಬರುತ್ತಾರೆ.

ಹಳ್ಳಿಗಳಲ್ಲಿ ಕೆಲವು ಸಂದರ್ಭಗಳಲ್ಲಿ ಆಗಬೇಕಾದ ಕೆಲಸಗಳ ಮೇಲೆ ಪಟೇಲರು ತಮ್ಮ ಪ್ರಭಾವವನ್ನು ಬೀರುತ್ತಾರೆ. ಉದಾಹರಣೆಗೆ ಬೈಲಹಳ್ಳಿ ಸರ್ವೆ ಮಾಡಲು ಬಂದಿದ್ದ ಮೋಜಿಮದಾರರಿಗೆ ಅಗತ್ಯವಾದ ಎಲ್ಲ ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಜೋಡಿದಾರರು ಪಟೇಲ ಸುಬ್ಬೇಗೌಡನಿಗೆ ತಿಳಿಸುತ್ತಾರೆ. ಆಗ ಪಟೇಲ ಸುಬ್ಬೇಗೌಡನು ಸ್ವಲ್ಪ ಹೊತ್ತು ಯೋಚಿಸಿ "ಸ್ವಾಮಿ ಇದು ಬಿತ್ತನೆಯ ಕಾಲ ರೈತರಿಗೆ ಬಿಡುವಿಲ್ಲ. ದಣಿಗಳು ಪೈರು ಕಟುವಾದ ಮೇಲೆ ಬಂದರೆ ರೈತರಲ್ಲಿ ಸರ್ಕಾರದ ಹುಕುಂನಂತೆ ನಡೆಯಲು ಸಿದ್ಧರಾಗುತ್ತಾರೆ" ಎನ್ನುವನು. (ಅದೇ; ಪು.೨೩) ಆದರೆ ನಿಜವಾಗಿ ಸರ್ವೆ ಈಗ ಬೇಡ ಎಂದು ಹೇಳಲು ಪಟೇಲ ಸುಬ್ಬೇಗೌಡನ ಕಾರಣ ಬೇರೆ. ಅದನ್ನು ಪಟೇಲ ನಾಣಿಯೊಂದಿಗೆ ಗುಟ್ಟಾಗಿ ಹೀಗೆ ಹೇಳಿದ. "ಮೋಜಿಮದಾರ್ರು ಉಪಯೋಗಿಲ್ಲ. ಪುಳ್ಳಾರು, ಇಜಾರ, ಬೂಟೀಸು, ಕೆಂಪು ತಲೆಯೋನ ಟೋಪಿ ಇವುಗಳನ್ನೆಲ್ಲಾ ಹಾಕಿಕೊಂಡು ಜರ್‍ಬಾಗಿ ಬಂದಿದ್ರೆ ರೈತ್ರು ಹೆದರಿಕೊಳ್ಳೋರು. ಇವರು ನಮ್ಮೂರು ಪೂಜಾರಿ ಹಂಗೆ ದಟ್ಟಿ ಸುತ್ಕೊಂಡು ಮೆತ್ತಗವ್ರೆ. ಇವರನ್ನ ಕರ್‍ಕೊಂಡು ಹೋದ್ರೆ ನಮ್ಮ ರೈತರು ಸುತರಾಂ ಬಗ್ಗೋಕಿಲ್ಲ. ಇವರು ಆಫೀಶ್‌ನಲ್ಲಿ ಬಿಳಿ ಕಾಜಿಗದ ಮೇಲೆ ಕಪ್ಪು ಹಚ್ಚೋಕೆ ಲಾಯಕ್ಕು. ಮೋಜಿಮದಾರ್ರು ಮೀಸೆ ಕೂಡ ಬಿಟ್ಟಿಲ್ವಲ್ಲ. ಮುಂದಲ ಸಲ ಸ್ವಲ್ಪ ಜೋರಾದ ಆಫೀಸರ್ನ ಕರೆತನ್ನಿ ಸ್ವಾಮಿ" ಎಂದರು. (ಅದೇ.) ಹಳ್ಳಿಗೆ ಬರುವ ಅಧಿಕಾರಿ ಜಬರ್ದಸ್ತಿನಲ್ಲಿ ಬಟ್ಟೆ ಹಾಕಿಕೊಂಡು ಬಂದರೆ ಮಾತ್ರ ಹಳ್ಳಿಯ ಜನ ಅವನ ಮಾತಿಗೆ ಬೆಲೆ ಕೊಡುತ್ತಾರೆ ಎಂಬುದು ಪಟೇಲರ ಅಭಿಪ್ರಾಯವಾಗಿದೆ. ಗ್ರಾಮೀಣ ಜನರನ್ನು ಅಧಿಕಾರಿ ವರ್ಗ ಹೇಗೆ ಭಯದ ವಾತಾವರಣದಲ್ಲಿ ನಡೆಸಿಕೊಳ್ಳುತ್ತಿತ್ತು ಎಂಬುದಕ್ಕೆ ಇದು ಉತ್ತಮ ಸಾಕ್ಷಿಯಾಗಿದೆ.

ನಮ್ಮ ಹಳ್ಳಿಯ ಜನರಿಗೆ ಪಟೇಲ-ಶ್ಯಾನುಭೋಗರೆ ಒಂದು ಕಾಲದಲ್ಲಿ ಸರ್ಕಾರ. ಇವರಿಬ್ಬರು ಗ್ರಾಮೀಣ ಬದುಕಿನಲ್ಲಿ ಪ್ರಧಾನವಾದ ಸ್ಥಾನವನ್ನು ಹೊಂದಿದ್ದರು. "ಪಟೇಲ-ಶ್ಯಾನುಭೋಗರ ಜರ್ಬು

ಅಧಿಕಾರದ ಗತ್ತು ಹೇಗಿತ್ತು ಎಂಬುದನ್ನು ತಿಳಿಯಲು ಆ ಕಾಲದಲ್ಲಿ ಇದ್ದ ಜನರನ್ನು ಕೇಳಬೇಕು. ಅಥವಾ ಗೊರೂರವರಂಥಹವರ ಕೃತಿಗಳಿಂದ ತಿಳಿಯಬೇಕು. ಒಬ್ಬ ಪೊಲೀಸ್ ಪೇದೆ ಆಗಿನ ಜನರ ದೃಷ್ಟಿಯಲ್ಲಿ ಒಬ್ಬ ಮಹಾರಾಯ ಇದ್ದಹಾಗೆ. ಹೀಗಿರುವಾಗ ಊರಿನ ಒಳಿತು-ಕೆಡಕುಗಳನ್ನು, ಯೋಗಕ್ಷೇಮ ಗಳನ್ನು ನೋಡಿಕೊಳ್ಳುವ ಸರ್ಕಾರಿ ಯಂತ್ರಗಳಾದ ಪಟೇಲ-ಶ್ಯಾನುಭೋಗರು ಹೇಗಿರಬೇಡ". (ವೆಂಕಟಯ್ಯ ಸಿ.ಜಿ.; ೨೦೦೨; ಪು. ೩೨೩) ಸಿ.ಜಿ. ವೆಂಕಟಯ್ಯನವರು ಗೊರೂರವರು ಕೊಡುವ ಅಭಿಪ್ರಾಯಗಳನ್ನು ತಮ್ಮ ಸಮ್ಮತಿಯ ಮೂಲಕ ಪುಷ್ಟಿಕರಿಸಿರುವುದು ಅವರ ಸಾಹಿತ್ಯಿಕ ವಿಮರ್ಶೆಗೆ ಸ್ಪಷ್ಟ ನಿದರ್ಶನವಾಗಿದೆ.

ಊರಿಗೆ ಜೋಡಿದಾರರು ಎನಿಸಿಕೊಂಡವರು ಜನರ ಪಾಲಿಗೆ ದೇವರಾಗಿದ್ದರು. ಇಂಥ ಜೋಡಿದಾರ ರನ್ನು ಕುರಿತು ಶಿವರಾಮೇಗೌಡ ನಾಗವಾರ ಅವರು ಆಡುವ ಮಾತು "ಜೋಡಿದಾರರು ಈಗ ಇಲ್ಲವಾದರೂ ಹಿಂದೆ ಜೋಡಿದಾರರು ಅವರಿಗೆ ಸೇರಿದ ಗ್ರಾಮದ ಜನರಿಗೆ ಪ್ರತ್ಯಕ್ಷ ರಾಜರಾಗಿದ್ದರು". (ಶಿವರಾಮೇಗೌಡ ನಾಗವಾರ; ೧೯೭೮; ಪು.೨೪) ಶಿವರಾಮೇಗೌಡ ನಾಗವಾರರ ಅಭಿಪ್ರಾಯ ಗ್ರಾಮೀಣ ಪರಿಸರದಲ್ಲಿ ಜೋಡಿದಾರರ ಮಹತ್ವವನ್ನು ಸ್ಪಷ್ಟವಾಗಿ ತಿಳಿಸಿಕೊಡುತ್ತದೆ. ಜೋಡಿದಾರರು ಶ್ರೀಮಂತ ದಣಿಗಳಾಗಿದ್ದ ಕಾರಣ ಗ್ರಾಮೀಣರ ಪಾಲಿಗೆ ಸರ್ವಸ್ವವಾಗಿದ್ದರು. ಸರ್ಕಾರದ ಅಧಿಕಾರಿಗಳೊಂದಿಗೆ ಸಮೀಪ್ಯ ಬಾಂಧವ್ಯ ಪಟೇಲ - ಶ್ಯಾನುಭೋಗರೊಂದಿಗೆ ತೀವ್ರ ಸ್ನೇಹ ಬಾಂಧವ್ಯ ಜೋಡಿದಾರರಿಗೆ ಇತ್ತು. ಸರ್ಕಾರದ ಆಳ್ವಿಕೆ ಈ ರೀತಿಯಲ್ಲಿ ಜೋಡಿದಾರರ ಪ್ರತ್ಯಕ್ಷ ಮತ್ತು ಪರೋಕ್ಷ ನೆರವಿನಿಂದ ನಡೆಯುತ್ತಿತ್ತು ಎಂಬುದು ಗೊರೂರವರ ಕೃತಿಗಳ ಮೂಲಕವೂ ಸಾಬೀತವಾಗಿದೆ. ಜೋಡಿದಾರರು ಬಹುಮಟ್ಟಿಗೆ ಬ್ರಾಹ್ಮಣರೇ ಆಗಿರುತ್ತಿದ್ದರು. ಈ ಕಾರಣದಿಂದಲೂ ಜೋಡಿದಾರರ ಸ್ಥಾನ ಗಣ್ಯವಾಗಿತ್ತು ಎಂದು ನಿರ್ಧರಿಸಬಹುದು. ಸರ್ಕಾರದ ಅಧಿಕಾರಿಗಳ ಆಳ್ವಿಕೆಯ ಲೋಪದೋಷವನ್ನು ಬಹುಮಟ್ಟಿಗೆ ಸರಿಪಡಿಸಿದರೆ ಕೆಲವೊಮ್ಮೆ ಸರಿತೂಗಿಸಿಕೊಂಡು ಹೋಗಬೇಕಾದ ಪ್ರಸಂಗಗಳು ಇತ್ತು. ಕೃಷಿಕ ಸಮಾಜದಲ್ಲಿ ಹಳ್ಳಿಯ ಶ್ಯಾನುಭೋಗರು, ಪಟೇಲರು, ಜೋಡಿದಾರರು ಪೂರ್ಣ ಸಹಕಾರ ಕೊಡದಿದ್ದರೆ ಮತ್ತು ಅವರಲ್ಲಿ ಅವಶ್ಯಕತೆಗೆ ಅನುಗುಣವಾಗಿ ಜಬರ್ದಸ್ತು ಇಲ್ಲವಾದರೆ ಹೇಗೆ ಗ್ರಾಮೀಣ ಬದುಕು ಅಸ್ತವ್ಯಸ್ತ ಆಗುತ್ತಿತ್ತು ಎಂಬುದು ಗೊರೂರವರ ಕೃತಿಗಳ ಮೂಲಕ ನಮಗೆ ಮನವರಿಕೆಯಾಗುತ್ತದೆ. ಸರ್ಕಾರದ ಕಾನೂನನ್ನು ಕಾಯುವ ಪರಿಚಯಿಸುವ ಜೀವನಕ್ಕೆ ಅನ್ವಯಿಸಿ ಬದುಕನ್ನು ನಡೆಸಲು ತಿಳುವಳಿಕೆ ಕೊಡುವ ಜನರೇ ಈ ಮೂವರಾಗಿದ್ದರು ಎಂಬುದು ನಿರ್ವಿವಾದ ಸಂಗತಿ. ಕೃಷಿಕ ಸಮಾಜದಲ್ಲಿ ಸಹಕಾರದ ಕೈ ಪ್ರಭಾವಶಾಲಿಯೇ ಹೊರತು ಕಾನೂನಿನ ಕೈ ಅಲ್ಲ ಎಂಬುದು ಗೊರೂರವರ ಕೃತಿಗಳು ನಮಗೆ ಚೆನ್ನಾಗಿ ಪರಿಚಯಿಸುತ್ತವೆ. ಗ್ರಾಮೀಣ ಜನರು ತಮ್ಮ ಸಹಕಾರದ ದೃಷ್ಟಿಗೆ ಒಪ್ಪಿತವಲ್ಲದ ಕಾನೂನುಗಳನ್ನು ಗಾಳಿಗೆ ತೂರಿರುವುದು ಅನೇಕ ಸಂದರ್ಭಗಳಲ್ಲಿ ನಮಗೆ ಕಂಡುಬರುತ್ತದೆ.

"ಗೊರೂರವರಿಗೆ ಬೇಸಾಯದಲ್ಲಿ ವಿಶೇಷ ಆಸಕ್ತಿ. ಬೇಸಾಯಗಾರರ ನಡುವೆಯೇ ಬದುಕಿ ಬಾಳಿದ ಅವರು ರೈತನ ಬದುಕಿನ ಸೂಕ್ಷ್ಮಾತಿಸೂಕ್ಷ್ಮಗಳನ್ನು ಅರಿತಿದ್ದಾರೆ. ಹಳ್ಳಿಯವನ ಬಾಳು ಮುಖ್ಯವಾಗಿ

ಮೂರು ವಿಶಾಲ ತಳಹದಿಯ ಮೇಲೆ ನಡೆಯುತ್ತದೆ. ಅವು ಯಾವುವು? ಎಂದರೆ ಒಂದು - ರೈತನ ದೈವಭಕ್ತಿ, ಎರಡು - ಸಂಸಾರದಲ್ಲಿ ಆಸಕ್ತಿ, ಮೂರು - ದುಡಿಮೆಯೇ ದೇವರು ಎಂಬ ನಂಬಿಕೆ. ಮಾನವನು ಹೊಲದ ಮಡಿಲಿಗೆ ದುಡಿಯಲು ಇಳಿದುದೇ ಅವನ ಭೂಮಿತಾಯಿಯ ಮೊದಲ ಸಂಗ ಎಂಬಂತೆ ಕಾಣುತ್ತದೆ. ದುಡಿಮೆಯಲ್ಲಿ ಬೀಸುಕಲ್ಲಿನ ಗರತಿಯೂ ಗಂಡಿಗೆ ತನ್ನ ಕೈ ಕೂಡಿಸಿದಳು. ಜೀವನವನ್ನು ನಿಷ್ಠೆಯಿಂದ, ನೆಮ್ಮದಿಯಿಂದ ಬದುಕಲು ನಿಶ್ಚಯಿಸಿದ ಇವರು "ಕೈ ಕೆಸರಾದರೆ ಬಾಯಿ ಮೊಸರು" ಎಂಬ ಸಾರ್ವಕಾಲಿಕ ಸತ್ಯವನ್ನು ಅರಿತಿದ್ದರು. ದುಡಿತದ ಬಾಳು ಸುಖದ ಬೆನ್ನೆಲುಬು ಎಂಬುದನ್ನು ಅರಿತವರಾಗಿದ್ದರು. ಕಾಯಕವೇ ಕೈಲಾಸವೆಂಬುದು ಅವರ ಬಾಳ ಮಂತ್ರವಾಗಿತ್ತು. .... ಈ ಭಾವನೆ ರೈತನ ಜೀವನದಲ್ಲೆಲ್ಲಾ ಓತಪ್ರೋತವಾಗಿ ತುಂಬಿಕೊಳ್ಳುತ್ತದೆ. ಉದಾತ್ತ ಸಂಸ್ಕೃತಿಗೆ ಇಂಥ ದುಡಿಮೆ ರಾಜಮಾರ್ಗ ಹಾಕಿ ಕೊಡಬಲ್ಲದು. ಬೇಸಾಯ ಮಾಡಲು ಸರ್ವರಿಗೂ ಸಮಾನವಾದ ಹಕ್ಕಿದೆ". (ವೆಂಕಟಯ್ಯ ಸಿ.ಜಿ.; ೨೦೦೨; ಪು. ೩೩೮) ಸಿ.ಜಿ. ವೆಂಕಟಯ್ಯನವರು ಗೊರೂರವರ ಕೃತಿಗಳಲ್ಲಿ ಕಂಡ ಬೇಸಾಯಗಾರರ ದರ್ಶನವನ್ನು ಈ ಮಾತುಗಳಲ್ಲಿ ವಿಶ್ಲೇಷಿಸಿದ್ದಾರೆ. ಈ ಮಾತುಗಳು ಕೇವಲ ವಿಶ್ಲೇಷಣೆ ಆಗದೆ ಗೊರೂರವರ ಕೃತಿಗೆ ಅನುಕೂಲ ಮತ್ತು ಅರ್ಥಪೂರ್ಣ ವಿವರಣೆಯೂ ಆಗಿದೆ. ಗೊರೂರವರ ಕೃತಿಗಳನ್ನು ಕುರಿತು ಸಮರ್ಪಕ ವಿಶ್ಲೇಷಣೆ ಮತ್ತು ವಿಮರ್ಶೆ ಮೂಡಿಬಂದಿಲ್ಲ ಎಂಬ ಕೊರಗು ನಮ್ಮನ್ನು ಸಾಮಾನ್ಯವಾಗಿ ಕಾಡುತ್ತಿದ್ದಾಗ ಅಪರೂಪಕ್ಕೊಮ್ಮೆ ಸಿ.ಜಿ.ವೆಂಕಟಯ್ಯನವರ ಮಾತು ತುಂಬಾ ಸಮಾಧಾನವನ್ನು ತಂದುಕೊಡುತ್ತದೆ.

ಗೊರೂರವರು ಬೇಸಾಯಗಾರನ ದುಡಿಮೆಯ ಶ್ರಮವನ್ನು ಹಿರಿಮೆಯನ್ನು ಬಹಳಷ್ಟು ವರ್ಣಿಸಿದ್ದಾರೆ. "ನಮ್ಮ ಊರಿನಲ್ಲಿ ಬ್ರಾಹ್ಮಣರು, ಶೂದ್ರರು, ಸಾಬರು, ಎಲ್ಲರೂ ಆರಂಭಗಾರರು. ರಾತ್ರಿ ಮಿಕ್ಕಿದ್ದ ಹಿಟ್ಟು ಬೆಳಿಗ್ಗೆಯ ತಿಂಡಿ. ರಂಗೇಗೌಡನಂಥ ರೈತರಿಗೆ ಇದೇ ನಾಷ್ಟ. ಅವನ ಗುರಿ ಮಂಡಿ ಉದ್ದ ಕೆಸರಿನ ಗದ್ದೆ ಉಳುವುದು. ಅವನು ಎಂದೂ ಸೋಮಾರಿಯಲ್ಲ. ಹೊತ್ತಾರೆ ಎದ್ದು ತಂಗಳು ತಿಂದು ಹೊಲದಲ್ಲಿಯೋ ಗದ್ದೆಯಲ್ಲಿಯೋ ಉಳುತ್ತಿದ್ದರೆ ಅವನ ಹೆಂಡತಿ ಅಲ್ಲಿಗೆ ಹಿಟ್ಟು ಹೊತ್ತುಕೊಂಡು ಹೋಗುತ್ತಾಳೆ. ಅವನಿಗೆ ಖಾಯಿಲೆ ಬರದೆ ಇರುವುದು ಯಾಕಂದ್ರೆ ಅವನು ಹೊತ್ತು ಹೊತ್ತಿಗೆ ಸರಿಯಾಗಿ ಅಂಬ್ಲಿಯೋ ತುಂಬೆ ಸೊಪ್ಪೊ ತಿನ್ನುವುದರಿಂದ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೧೬) ಇದು ಗೊರೂರವರು ಕಂಡ ಗ್ರಾಮೀಣ ಬದುಕಾಗಿದೆ. ಉತ್ತಮ ವರ್ಗದ ನೆಮ್ಮದಿಯ ಬದುಕಿನ ಹಿಂದೆ ಕೆಳವರ್ಗದವರ ದುಡಿಮೆ, ಶ್ರಮ, ಬೆವರಿನ ಫಲ ಅಡಗಿದೆ ಎಂಬ ವಾಸ್ತವವನ್ನು ಗೊರೂರವರು ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿದ್ದಾರೆ.

"ರಾಮಣ್ಣ ಪೆರುಮಾಳರ ಊರಾದ ಅಗ್ರಹಾರ ಕಾವೇರಿ ನದಿ ತೀರದ ಫಲವತ್ತಾದ ಗ್ರಾಮ. ಅಲ್ಲಿ ಸುಮಾರು ಇನ್ನೂರು ಮನೆಗಳಿದ್ದವು. ನಲವತ್ತು ಬ್ರಾಹ್ಮಣರ ಮನೆಗಳೂ, ನೂರು ಒಕ್ಕಲಿಗರ

ಮನೆಗಳೂ ಇದ್ದವು. ಊರಿನ ಮಗ್ಗಲುಲ್ಲಿಯೇ ದೊಡ್ಡ ಹೊಲಗೇರಿ, ಚಿಕ್ಕ ಹೊಲಗೇರಿ ಎಂಬುದಾಗಿ ಎರಡು ಹೊಲಗೇರಿಗಳು. ಊರಿನವರೆಲ್ಲ ವ್ಯವಸಾಯದಿಂದಲೇ ಜೀವಿಸುತ್ತಿದ್ದರು. ಬ್ರಾಹ್ಮಣರು, ಒಕ್ಕಲಿಗರು, ತುರುಕರು, ಈ ಎಲ್ಲರ ವ್ಯವಸಾಯದ ಕಷ್ಟದ ಕೆಲಸಗಳನ್ನು ಹೊಲೆಯರೇ ಮಾಡುತ್ತಿದ್ದರು. ಹೊಲೆಯರಿಗೆ ಸ್ವತಃ ಜಮೀನಗಳೂ ಇರಲಿಲ್ಲ. ಕೆಲವರಿಗೆ ಅಲ್ಪಸ್ವಲ್ಪ ಜಮೀನು ಇದ್ದರೂ, ಅವು ಒಂಟಿಯ ಬೆನ್ನಿನಂತೆ ಅಂಗೈ ಅಗಲ, ಊರಿಂದ ದೂರವಾಗಿ ಬೋರೆಯ ಮೇಲೆ ಇದ್ದವು. ಹೊಲೆಯರೆಲ್ಲ ಉತ್ತಮ ವರ್ಗದವರ ಕೂಲಿಯಿಂದಲೂ, ಜೀತದಿಂದಲೂ ಜೀವಿಸುತ್ತಿದ್ದರು. ಹೇಗೆ ಗಣಿಗಳಿಂದ ತೆಗೆಯುವ ಚಿನ್ನ ಬೆಳ್ಳಿ ಅದರೊಂದಿಗೆ ಕೆಲಸ ಮಾಡುವ ಕೂಲಿಗಳ ಬೆವರಿನ ಫಲವೋ ಹಾಗೆಯೇ ಅಗ್ರಹಾರ ಕಣ್ಣಿಗೆ ಒತ್ತಿಕೊಳ್ಳುವ ಚಿನ್ನದ ಭತ್ತದ ಬೈಲು, ತೆಂಗು, ಮಾವು, ಕಿತ್ತಲೆ, ಅಡಕೆಗಳನ್ನು ಹೊತ್ತು ನಿಂತಿರುವ ತೋಟದ ಬಯಲು ಅಗ್ರಹಾರದ ಹೊಲೆಯರ ಸತತವಾದ ದುಡಿಮೆಯ ಫಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು.೧೫) ಗೊರೂರವರ ಈ ಮಾತುಗಳಲ್ಲಿ ಹೊಲೆಯರ ದುಡಿಮೆಯ ಪ್ರಾಮಾಣಿಕ ಉತ್ಸಾಹವನ್ನು ವ್ಯಕ್ತಪಡಿಸಿದ್ದಾರೆ. ಪರಂಪರಾಗತವಾಗಿ ಶೋಷಣೆಗೆ ಒಳಗಾದವರ ಬಗ್ಗೆ ನೋವು ಮತ್ತು ಸಂಕಟಗಳು ಕಂಡುಬರುತ್ತದೆ. ಅವರ ಬದುಕಿನ ಬಗ್ಗೆ ಅವರ ಸಾವು-ನೋವುಗಳ ಬಗ್ಗೆ ಗೊರೂರವರು ಸಹಾನುಭೂತಿಯನ್ನು ಪ್ರಕಟಿಸಿದ್ದಾರೆ.

ಬೇಸಾಯಗಾರ ತನ್ನ ಚಟುವಟಿಕೆಯನ್ನು ಕಲಾತ್ಮಕವಾಗಿ ಹೇಳಿದರು ಅಲ್ಲಿ ಸಹಜತೆ ಇರುತ್ತಿತ್ತು. ಈ ಕಲಾತ್ಮಕ ಮಾತುಗಳು ಬೇಸಾಯಗಾರ ಅನಕ್ಷರಸ್ಥರಾದರು ಅಪ್ರಯತ್ನ ಪೂರ್ವಕವಾಗಿ ಅವನ ಬಾಯಲ್ಲಿ ಬರುತ್ತಿದ್ದವು. 'ಶಿವರಾತ್ರಿ' ಕಥಾಸಂಕಲನದ 'ಇಬ್ಬರು ಹೆಂಡಿರು' ಕತೆಯಲ್ಲಿ ಇದಕ್ಕೆ ಉದಾಹರಣೆಯನ್ನು ನೋಡಬಹುದು. ಪಿಲ್ಲಯ್ಯ "ವಿಳ್ಯೆಯದೆಲೆ ಗಿಡವನ್ನು ಮಕ್ಕಳನ್ನು ಪೋಷಿಸುವಂತೆ ಕರುಣೆಯಿಂದ, ನಯದಿಂದ ಮೃದುವಾಗಿ ಸಲಹುತ್ತಿದ್ದ. ಗಿಡಗಳ ಸ್ವಭಾವ ಅವನಿಗೆ ಚೆನ್ನಾಗಿ ಗೊತ್ತು. ನೀರು ಬಿದ್ದಾಗ ಗಿಡ ಸಪ್ಪಗೆ ಬಿದ್ದುಕೊಂಡರೆ - ಮಗು ನಿದ್ರೆಯಲ್ಲಿ ಮಲಗಿದಂತೆ ಈಗ ಆಯಾಸದಿಂದ ಮಲಗಿದೆ ಎನ್ನುತ್ತಿದ್ದ. ಬೆಳಗಾಗುವ ವೇಳೆ ವಿಳ್ಯೆಯದೆಲೆ ಹೊರವಾಗಿ, ಚಿಗುರುಗಿ ಗೆಲುವಾಗಿ ಸೂರ್ಯನ ಕಡೆ ಮುಖಮಾಡಿ ವಿಕಸಿತವಾದಾಗ, ಗಿಡ ಈಗ ತಾನೆ ನಿದ್ರೆಯಿಂದ ಎದ್ದು ಮಗುವಿನಂತೆ ನಗುತ್ತಿದೆ ಎನ್ನುತ್ತಿದ್ದ. ಗಿಡಗಳಿಗೆ ನೀರನ್ನು ಸಂಧ್ಯಾಕಾಲ ಹಾಕಬೇಕು. ಆ ನೀರು ಅವುಗಳಿಗೆ ಪೂರ್ತಿ ಉಪಯೋಗವಾಗುತ್ತದೆ ಬೆಳಗಿನ ಹೊತ್ತು ಹಾಕಿದರೆ ಅರ್ಧ ನೀರು ಸೂರ್ಯ ಕದ್ದು ಬಿಡುತ್ತಾನೆ ಎನ್ನುತ್ತಿದ್ದರೂ ಕದ್ದವನು ಮತ್ತೆ ಕಕ್ಕಲೇಬೇಕು ಎಂದು ಸಮಾಧಾನ ಪಟ್ಟುಕೊಳ್ಳುತ್ತಿದ್ದನು. ಹೀಗೆ ಪಿಲ್ಲಯ್ಯ ಗಿಡದ ಜತೆಯಲ್ಲಿ ಗಿಡವಾಗಿ, ಪ್ರಕೃತಿಯ ಜತೆಯಲ್ಲಿ ಪ್ರಕೃತಿಯಾಗಿ ಪ್ರಕೃತಿಯಂತೆಯೇ ಬೆಳೆದನು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೯೯;ಪು.೦೫-೦೬) ಹೀಗೆ ಗೊರೂರವರು ಹೇಳಿ ಬೇಸಾಯಗಾರ ತನ್ನನ್ನು ಪೂರ್ಣ ಪ್ರಕೃತಿಗೆ ಅರ್ಪಿಸಿಕೊಂಡು ಬಿಡುತ್ತಾನೆ ಎಂಬ ವಿಷಯವನ್ನು ಹೇಳುವ ರೀತಿಯಲ್ಲಿ ಕಲಾವಂತಿಕೆಯನ್ನು ಗುರುತಿಸಬಹುದು.

ಗೊರೂರವರ ಕೃತಿಗಳನ್ನು ವಿಮರ್ಶೆ ಮಾಡಿ ಶಿವರಾಮೇಗೌಡ ನಾಗವಾರ ಅವರು ಹೇಳುವ ಮಾತು "ಗೊರೂರವರಿಗೆ ಅನುಭವ - ಅಭಿವ್ಯಕ್ತಿ ಎರಡೂ ಸಿದ್ಧಿಸಿವೆ. ಜಾನಪದ ಜೀವನವನ್ನು ತೆರೆದ ಕಣ್ಣಿನಿಂದ ನೋಡಿರುವುದರಿಂದ ಅವರ ಕಷ್ಟಸುಖಗಳಲ್ಲಿ ಭಾಗಿಯಾಗಿರುವುದರಿಂದ ಅದನ್ನು ಉತ್ತಮವಾಗಿ ಅಭಿವ್ಯಕ್ತಿಸಲು ಸಾಧ್ಯವಾಗಿದೆ. ಬಡತನದ ಭೀಕರತೆ, ಸಿರಿತನದ ಡೌಲು, ಕೃಪಣತೆಯ ಕೊಣವೇ ಗೌಡತ್ವ, ಧಾರಾಳತೆಯ ಪ್ರತಿರೂಪ, ಹಾಸ್ಯದ ಹೊನಲು, ವ್ಯಗ್ರತೆ, ನೆಮ್ಮದಿಯ ಜೀವನ, ಸಣ್ಣತನ, ಆಸೆ, ಕ್ರೌರ್ಯ, ಮನರಂಜನೆ, ಪರಕೀಯತನ, ಪಶುತನ ಯಾವುದನ್ನೂ ಬಿಡದೆ ಸಮಗ್ರವಾಗಿ ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿ ಕೊಟ್ಟಿದ್ದಾರೆ". (ಶಿವರಾಮೇಗೌಡ ನಾಗವಾರ; ೧೯೭೮; ಪು. ೯೧) ಈ ಮಾತುಗಳು ಗೊರೂರವರ ಕೃತಿಗಳ ಹಿರಿಮೆಯನ್ನು ಸತ್ತ್ವವನ್ನು ಅರ್ಥಮಾಡಿಕೊಳ್ಳಲು ಅತ್ಯಂತ ಸಹಾಯಕಾರಿ ನುಡಿಗಳಾಗಿವೆ ಎಂಬುದನ್ನು ಒಪ್ಪಬಹುದು.

'ಬೈಲಹಳ್ಳಿ ಸರ್ವೆ' ಕೃತಿಯಲ್ಲಿ ಕೃಷಿಕರಿಗೆ ಸರ್ಕಾರಿ ಕಂದಾಯವನ್ನು ಕೊಡುವಲ್ಲಿ ಎಷ್ಟು ಪ್ರಾಮಾಣಿಕತೆ ಇದೆ ಎಂಬುದನ್ನು ನೋಡಬಹುದು. ನಾನು "ಗಟ್ಟಕ್ಕೆ ಹೋಗುವಾಗ ಬಟ್ಟೆಯ ಕೋಟು ಹೊಲಿಸಿಕೊಂಡು ಬರಬಾರದೆ ಮಗನ ಅಂಗಿಯನ್ನು ಹಾಕಿಕೊಂಡು ಬಂದೆಯಲ್ಲಾ ಈಗ ಅವನಿಗೆ? ಎಂದು ಕೇಳಿದೆ. ಸಣ್ಣಪ್ಪನು 'ಸ್ವಾಮಿ ಒಬ್ಬೊಬ್ಬರಿಗೆ ಒಂದೊಂದು ಅಂಗಿ ಹೊಲಸೋಕೆ ಎಲ್ಲಾಯ್ತದೆ? ಮನೇಲಿರೋದು ಒಂದಂಗಿ, ಒಂದ್ ಕಂಬಳಿ, ಒಂದ್ ಹಚ್ಚಡ, ಬಾಕಿ ಎಲ್ಲಾ ಹರಕಲು, ಮನೆ ಬಿಟ್ಟು ಹೊರಡುವಾಗ ನಾನು ಆ ಅಂಗಿ ಹಾಕಿಕೊಳ್ಳುತ್ತೇನೆ. ನನ್ನ ಮಗ ಮನೆ ಬಿಟ್ಟು ಹೊರಟಾಗ ಅವ ಹಾಕ್ಕೊತಾನೆ'. ಮನೆಯೋರೆಲ್ಲ, ಅಂಗಿ ಹೊಲಿಸಿಕೊಂಡು ಮೋಜು ಮಾಡಿದರೆ ಕಂದಾಯ ಕೊಡೊರ್‍ಯಾರು ಬುದ್ಧಿ ಎಂದನು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೯೮) ಗೊರೂರವರು ಗಟ್ಟದ ರೊಟ್ಟಿಯನ್ನು ಹೇಳುವಾಗಲೂ ತಮ್ಮ ಪರಿಸರದ ಒಂದು ರುಚಿಯ ಸೊಗಸನ್ನು ತಿಳಿಸುತ್ತಾರೆ.

ರೈತನು ಒಕ್ಕಲು ಮಾಡುವುದು ಅವನ ಕಸುಬಿನ ಪ್ರಧಾನ ಚಟುವಟಿಕೆಯಾಗಿರುತ್ತದೆ. ಗೊರೂರವರು ಈ ಚಿತ್ರವನ್ನು ಕೊಡುವಾಗ ಕೃಷಿಯ ಬಗ್ಗೆ ರೈತನಿಗೆ ಇರುವ ಅಭಿಮಾನವನ್ನು ಪರೋಕ್ಷವಾಗಿ ಚಿತ್ರಿಸಿ ಹೆಮ್ಮೆಪಡುತ್ತಾರೆ. ರೈತನ ದುಡಿಮೆಗೆ ಭೂಮಿ ಎಷ್ಟು ಮುಖ್ಯವೋ ಆತನ ಪಾಲಿಗೆ ಮಳೆಯು ಅಷ್ಟೇ ಮುಖ್ಯ. ಮಳೆ ರೈತನ ಉಸಿರು ಎಂಬುದಾಗಿ ಹೇಳಿದರು ಅತಿಶಯೋಕ್ತಿಯಾಗಲಾರದು. ಆತ ಮಳೆಯನ್ನು ದೇವತೆಯೆಂದು ಪೂಜೆ ಮಾಡುವುದು ಒಂದು ಸಂಪ್ರದಾಯವಾಗಿದೆ. ಮಳೆಯ ನಕ್ಷತ್ರಗಳಿಗೆ ಹೆಸರನ್ನು ಇಡುವಾಗಲೂ ರೈತ ತನ್ನ ಭಕ್ತಿಭಾವನೆಯನ್ನು ವ್ಯಕ್ತಪಡಿಸಿದ್ದಾನೆ. ಪ್ರತಿ ಮಳೆಯ ಗುಣಲಕ್ಷಣ ಮಳೆಯ ನಾಮಕರಣದಲ್ಲಿಯೇ ಸೂಚಿತವಾಗುತ್ತದೆ. ಮಳೆಗಳಿಗೆ ಪಂಚಾಂಗದ ಪ್ರಕಾರ ಅನೇಕ ಹೆಸರುಗಳಿವೆ. ಆದರೆ ಅವೆಲ್ಲಾ ಬ್ರಾಹ್ಮಣರು ಮಾತ್ರ ಉಚ್ಚರಿಸಲು ಸಾಧ್ಯವಾಗುವ ಹೆಸರುಗಳು. ರೈತ ಆ ಹೆಸರುಗಳನ್ನು ಉಚ್ಚರಿಸಲು ಕಷ್ಟವಾಗುತ್ತದೆ. ಏಕೆಂದರೆ ಬಹುಪಾಲು ರೈತರು ಅವಿದ್ಯಾವಂತರು. ರೈತ ಪರಂಪರಾನುಗತ

ಅನುಭವದಿಂದ ಮಳೆಯ ಕಾಲಗಳನ್ನು ನಿರ್ಧರಿಸಿಕೊಂಡು ಯಾವ ಮಳೆ ಯಾವ ಪಾದದಲ್ಲಿ ಎಷ್ಟು ಹುಯ್ಯುತ್ತದೆ? ಹೇಗೆ ಹುಯ್ಯುತ್ತದೆ? ಯಾವ ಮಳೆ ಹುಯ್ಯುವುದಿಲ್ಲ? ಯಾವ ಮಳೆಯಲ್ಲಿ ಬಿತ್ತನೆ ಹಾಕಬೇಕು? ಯಾವಾಗ ಹಾಕಬಾರದು ಎಂಬ ಎಲ್ಲ ಸಂಗತಿಗಳನ್ನು ಸ್ಪಷ್ಟವಾಗಿ ತಿಳಿದಿರುತ್ತಾನೆ. ಇದೆಲ್ಲಾ ಅನುಭವ ಆತನಿಗೆ ತಲೆಯಿಂದ ತಲೆಗೆ ಬಂದುದಾಗಿರುತ್ತದೆ. "ರೈತರು ಮಳೆಗಳಿಗೆಲ್ಲಾ ಬೇರೆ ಬೇರೆ ಹೆಸರುಗಳನ್ನು ಇಟ್ಟಿದ್ದಾರೆ. ನಾವು ಹೇಳುವ ಹೆಸರುಗಳನ್ನು ಅವರು ಮಳೆಗಳಿಗೆ ಹೇಳವುದಿಲ್ಲ. ಹೇಳಿದರೂ ಅವರಿಗೆ ತಿಳಿಯುವುದಿಲ್ಲ. ಅಶ್ವಿನಿ ಮಳೆ ಎನ್ನುವುದರಲ್ಲಿ ವಕಾರವನ್ನು ಹೊಡೆದು ಅಶಿನಿ ಎಂದು ಹೇಳುತ್ತಾರೆ. ಕೃತ್ತಿಕೆ ಮಳೆಯು ಕೀರ್ತಿ ಮಳೆಯಾಗುತ್ತದೆ. ಮೃಗಶಿರೆಯು ಮಿಕ್ಕಶಾಲೆ ಎಂದಾಗುತ್ತದೆ. ಆರ್ದ್ರ ಮಳೆಯ ಆದ್ರಿ ಅಥವಾ ಆರಿದ್ರೆ ಎಂದು ರೂಪಾಂತರವನ್ನು ಹೊಂದುತ್ತದೆ. ಪುನರ್ವಸು ಪುಣರಾಶಿಯಾಗುತ್ತದೆ. ಪುಷ್ಯವು ಹುಸೇನ್ ಮಳೆಯಾಗುತ್ತದೆ. ಪುಷ್ಯ ಮಳೆಯು ಪ್ರತಿವರ್ಷವೂ ಸಾಧಾರಣವಾಗಿ ಬಂದೇ ಬರುತ್ತದೆ. ಒಕ್ಕಲಿಗನು ಇದಕ್ಕೆ ಭಾಷೆ ಕೊಟ್ಟ ಮಳೆಯನ್ನುತ್ತಾನೆ. ಆಶ್ಲೇಷಿಗೆ ಅಶಿಲೆ ಮಳೆಯೆಂದು ಹೆಸರು. ಕೆಲವರು ಇದನ್ನು ದೊಡ್ಡ ಹುಸೇನ್ ಮಳೆ ಎಂದು ಕರೆಯುತ್ತಾರೆ. "ಅಸ್ಲೆ ಮಳೆಗೆ ಸಸ್ಲೆ ಬೆಟ್ಟಕ್ಕೆ ನೆಗೀತು" ಎಂಬುದೊಂದು ಗಾದೆ. ಮಖೆ ಮಳೆಯು ಬಂದರೆ ಬಹಳ ಜೋರಾಗಿ ಬರುತ್ತದೆ. ಇಲ್ಲದಿದ್ದರೆ ಪೂರ್ಣವಾಗಿ ಬರದೆ ನಿಂತು ಹೋಗುತ್ತದೆ. ಆದುದರಿಂದ ಅದಕ್ಕೆ "ಬಂದರೆ ಮೊಗೆ ಹೋದರೆ ಹೊಗೆ" ಎಂಬುದಾಗಿ ಹೇಳುತ್ತಾರೆ. ಅಂದರೆ ಮಖೆ ಮಳೆಯು ಬಂದರೆ ಮೊಗೆಯಲ್ಲಿ ನೀರನ್ನು ಎತ್ತಿ ಸುರಿಯುವಷ್ಟು ಜೋರಾಗಿ ಬರುವುದೆಂದು ಅರ್ಥ. ಚಿತ್ತೆ ಮಳೆಯು, ಹುಯಿದ ಕಡೆಗೆ ಹುಯ್ಯುತ್ತದೆ. ಇಲ್ಲದ ಕಡೆಗೆ ಇಲ್ಲ. ಆದುದರಿಂದ ಅದಕ್ಕೆ ಕುರುಡು ಚಿತ್ತೆ ಎಂದು ಹೆಸರು. "ಕುರುಡು ಚಿತ್ತೆ ಎರಚಿದತ್ತ ಬೆಳೆ" ರೈತರೂ ಈ ಪದಗಳನ್ನೆಲ್ಲಾ ಸರಾಗವಾಗಿ ಹೇಳುತ್ತಿದ್ದರು". (ಅದೇ; ಪು.೮೩) ರೈತರಿಗೆ ಮಳೆಯೊಂದಿಗೆ ಇರುವ ಪರಿಚಿತ ಜ್ಞಾನ ಇಲ್ಲಿ ವ್ಯಕ್ತವಾಗಿದೆ.

ದುಡಿದ ರೈತ ತನ್ನ ದುಡಿಮೆಯ ಫಲವನ್ನು ತಾನೇ ಅನುಭವಿಸಬೇಕು ಎಂಬುದು ಒಂದು ಧರ್ಮದ ಮಾತು. ಬೇರೆ ಯಾರಿಂದಲಾದರೂ ಮೋಸಕ್ಕೆ ಒಳಗಾದರೆ ಆಗ ಯಾವುದಾದರೂ ಒಂದು ರೀತಿಯಲ್ಲಿ ತನ್ನನ್ನು ಕಾಪಾಡಿಕೊಳ್ಳುತ್ತಾನೆ ಎಂಬುದಕ್ಕೆ ಗೊರೂರರವರು ಒಂದು ಜಾಣ್ಮೆ ಪ್ರಸಂಗವನ್ನು 'ಮರೆಯಾದ ಮಾರಮ್ಮ' ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಮೋಸದ ಅಣ್ಣಂದಿರು ಮುಗ್ಧನಾದ ತಮ್ಮನಿಗೆ ಬೆಳೆಯಲ್ಲಿ ಮೋಸ ಮಾಡುತ್ತಾರೆ. ಇಂತಹ ಅಪರೂಪದ ಘಟನೆಯನ್ನು ಕೃಷಿ ಸಂಸ್ಕೃತಿಯಲ್ಲಿ ನೋಡಬಹುದು. ಒಮ್ಮೆ ಅಪಾಯಕ್ಕೆ ಒಳಗಾಗಿದ್ದ ಹುಲಿ ದಡ್ಡನ ಕರುಣೆಯಿಂದ ಪಾರಾಗುತ್ತದೆ. ಪ್ರತಿಉಪಕಾರ ಭಾವನೆ ಹೊಂದಿರುವ ಹುಲಿ ದಡ್ಡನಿಗೆ ಉಪಕಾರ ಮಾಡುವ ರೀತಿ ಅಷ್ಟೇ ಹೃದಯ ಸ್ಪರ್ಶಿಯಾಗಿದೆ. ಹುಲಿ ಹೇಳುವ ಮಾತು "ಆಗ್ಲಿ ನೀನು ದಡ್ಡನಾದ್ರೂ ಪ್ರಾಮಾಣಿಕ, ನೀನು ಹೋಗಿ ಆಜಳ್ಳನ್ನೇ ಮತ್ತೆ ತೂರು. "ಹೋಗ್ಲಿ ಸ್ವಾಮಿ ಓಲ್ಗ, ಹೋಗ್ಲಿ ಹುಲಿ ಹೆಬ್ಬೋಲ್ಗ" ಎಂದು ಹೇಳಿಕೊಂಡು ತೂರು. ನಿಮ್ಮಿಬ್ರು ಅಣ್ಣಂದಿರಿಗೆ ಎಷ್ಟು ಬಿದ್ದಿತ್ತೋ, ಅದ್ರ ಎರಡ್ರಷ್ಟು ಭತ್ತ ನಿನ್ಗೆ ಬೀಳ್ತದೆ" ಎಂದು ಹೇಳಿತು. (ಗೊರೂರು

ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೨೧೮) ಹುಲಿಯ ಮಾತಿಗೆ ಅನುಗುಣವಾಗಿ ದಡ್ಡ ನಡೆದುಕೊಂಡನು. ಹುಲಿ ಇದ್ದ ದಿಕ್ಕಿಗೆ ಕೈ ಮುಗಿದು "ಹೋಲಿ ಸ್ವಾಮಿ ಓಲ್ಗ ಹೋಲಿ ಹೆಬ್ಬುಲಿ ಯೋಲ್ಗ" ಎಂದು ಎರ್ಡು ಮೂರು ಸಲ ಕೂಗಿದ. ಮುಂದ್ಗಳಿಗೀಲೇ ಮೊರದಿಂದ ಸೊಗಸಾದ ಸುವರ್ಣವರ್ಣದ ಭತ್ತದ ಕಾಳು ಸುರಿಯತೊಡಗಿತು. ಕೂಲಿಗ್ಳು, ಜಳ್ಳನೆಲ್ಲ ತೂರಿದ್ರು. ಹಿರಿಯರಿಬ್ಬರಿಗೆ ಎಷ್ಟು ಭತ್ತ ಆಗಿತ್ತೋ ಅದರ ಎರಡರಷ್ಟು ಭತ್ತದ ರಾಶಿ ದಡ್ಡನ ಕಣದಲ್ಲಿ ಬಿದ್ದು ಹೋಯ್ತು. ವಿಷಯ ತಿಳಿದ ಊರಿನವರೆಲ್ಲ ಬಂದ್ರು. ಅಣ್ಣಂದ್ರೂ ಬಂದ್ರು. ಎಲ್ರೂ ಆಶ್ಚರ್ಯದಿಂದ ಮೂಕರಾದ್ರು - ಅಲ್ಲಿಂದೀಚೆಗೆ ಕಣದಲ್ಲಿ ತೂರುವಾಗ, "ಹೋಲಿ ಸಮ್ಮಲಗ, ಹೋಲಿ ಹೆಬ್ಬುಲಿಯೋಲ್ಗ" ಎಂಬ ಕೂಗು ಮಾಮೂಲು ಆಗಿದೆ. (ಅದೇ; ಪು. ೨೧೮) ಗ್ರಾಮೀಣ ಕೃಷಿಕ ಸಂಸ್ಕೃತಿಯಲ್ಲಿ ವಂಚನೆಗೆ ಪ್ರತಿಯಾದ ಜಾಣ್ಮೆಯ ವರ್ತನೆಯನ್ನು ನಾವು ಕಾಣಬಹುದು ಎಂಬುದನ್ನು ಗೊರೂರವರು ಇಲ್ಲಿ ಸ್ವಾರಸ್ಯವಾಗಿ ತಿಳಿಸಿದ್ದಾರೆ. ಹುಲಿಯ ಮಾತು ಆ ಹಳ್ಳಿಯಲ್ಲಿ ಮುಂದೆ ಎಲ್ಲಾ ಕಾಲಕ್ಕೂ ಸುಗ್ಗಿಯಲ್ಲಿ ಒಂದು ಶಾಸ್ತ್ರದ ಮಾತಾಯಿತು.

ಮುಗ್ಧ ಒಕ್ಕಲಿಗರನ್ನು ಸಮಾಜದ ಉತ್ತಮ ವರ್ಗದವರು ವಂಚಿಸುವ ರೀತಿಯನ್ನು ಕೃಷಿಕ ಸಮಾಜದಲ್ಲಿ ಗುರುತಿಸಬಹುದು. ಇದನ್ನು ಗೊರೂರವರು ಪ್ರಾಸಂಗಿಕವಾಗಿ 'ವೈಯಾರಿ' ಕೃತಿಯಲ್ಲಿ ಉಲ್ಲೇಖ ಮಾಡಿದ್ದಾರೆ. ನರಸಿಂಹ ಜೋಯಿಸರು "ಬಿಡೋ ಮಹಾ, ಒಕ್ಕಲಿಗನಿಗೆ ಮದುವೆ ಮಾಡಿಸೋಕೆ ಯಾವ ಮಂತ್ರ ಬರಬೇಕೋ? ಆ ಹಿಂದುಳಿದ ಅನಾಗರಿಕರಿಗೆ ವೇದದ ಮಂತ್ರ ಹೇಳಬೇಕೋ? ಸಾಕು ಸಾಕು. ಅಮರಕೋಶದ ಎರಡು ಶ್ಲೋಕ ಹೇಳಿದರೆ ತೀರಿತು" ಎಂದು ನಾಣಿಗೆ ಹೇಳುತ್ತಾರೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೨೪) "ರೈತರ ದುಡಿಮೆ ಮನೆ ಮಂದಿಯ ಎಲ್ಲರ ದುಡಿಮೆಯು ಆಗಿರುತ್ತದೆ. ಆದರೆ ಮುಂದುಳಿದ ಹಾರುವರ ಪೈಕಿ ಮನೆಗೆ ಒಬ್ಬ ದುಡಿಯುವುದು ಕಷ್ಟ. ಒಕ್ಕಲಿಗರಿಗೆ ಒಂದು ಎಕರೆ ಜಮೀನಿದ್ದರೆ ಅವನು ಅದರಿಂದಲೇ ಜೀವನವನ್ನು ಸಂಪಾದಿಸಿಕೊಂಡು ತಲೆ ಎತ್ತಿಕೊಂಡು ಬಾಳುತ್ತಾನೆ. ಆದರೆ ಹಾರವರಲ್ಲಿ ಸಂಪಾದನೆಗೆ ಮೀರಿದ ಹೆಚ್ಚು ಖರ್ಚನ್ನು ಕಾಣಬಹುದು". (ಅದೇ) ಇಲ್ಲಿ ರೈತರ ಪ್ರಾಮಾಣಿಕ ದುಡಿಮೆಯನ್ನು ಇದೇ ಕೃತಿಯಲ್ಲಿ ಗೊರೂರವರು ಮೆಚ್ಚಿಕೊಂಡಿರುವುದು ಗಮನಾರ್ಹ ಸಂಗತಿ.

ರೈತ ಸಮುದಾಯದಲ್ಲಿ ವಿವಾಹ ಮಂಗಳ ಕಾರ್ಯ ವಿಶೇಷವಾಗಿರುತ್ತದೆ. ರೈತ ವರ್ಗದಲ್ಲಿ ಇದ್ದ ಹಲವು ಹತ್ತು ಸಮಸ್ಯೆಗಳು ಮತ್ತು ವ್ಯಾಜ್ಯಗಳು ಮದುವೆಯ ಸಂದರ್ಭದಲ್ಲಿ ಪರಿಹಾರವಾಗುವ ವಿಶೇಷ ಸಂಗತಿಯನ್ನು ಕೃಷಿ ಸಂಸ್ಕೃತಿಯಲ್ಲಿ ಗುರುತಿಸಬಹುದು. ಈ ಅಂಶವನ್ನು ಗೊರೂರವರು ಅದೇ ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ. "ಒಂದು ಮದುವೆ ಆದ ಮೇಲೆ ಮತ್ತೊಂದು ಮದುವೆ ನಡೆಯುವರೆಗೆ ಊರಿನಲ್ಲಿ ಯಾರು ಯಾರಿಗೆ ಯಾವ ಯಾವ ಕಾರಣದಿಂದ ವ್ಯಾಜ್ಯ ಬಂದಿದ್ದರೂ ಆ ದಿವಸ ಅದು ತೀರ್ಮಾನವಾಗಿ ಬಿಡುತ್ತದೆ. ಹಾಗೆ ತೀರ್ಮಾನವಾಗದ ಹೊರತು ಯಾರೂ ತುತ್ತನ್ನು ಮೇಲಕ್ಕೆ

ಎತ್ತುವುದಿಲ್ಲ. ಸಾಧಾರಣವಾಗಿ ಇಂಥ ಪಂಚಾಯ್ತಿಗಳಿಗೆ ನ್ಯಾಯ ಎಂದು ಹೆಸರು. ಎಲೆಯ ಮುಂದೆ ಕುಳಿತ ನಂತರ ಊಟಕ್ಕೆ ಮುಂಚೆ ದೂರನ್ನು ಹೇಳಲು ಎಲ್ಲರಿಗೂ ಸಮವಾದ ಅಧಿಕಾರವುಂಟು. ಅಲ್ಲಿ ಯಾವ ಪಿಳ್ಳೆಯ ಮಾತನ್ನು ಎತ್ತಿಹಾಕುವಂತಿಲ್ಲ. ನ್ಯಾಯವು ಬಹಳ ದಕ್ಷತೆಯಿಂದ ಸ್ವಪಕ್ಷ ಪರಪಕ್ಷದ ಭೇದವಿಲ್ಲದೆ, ಹತ್ತು ಹಳ್ಳಿಯವರ ಎದುರಿನಲ್ಲಿ ತೀರ್ಮಾನಿಸಲ್ಪಡುತ್ತದೆ. ಈ ನ್ಯಾಯ ಯಾವ ಕೋರ್ಟು ನ್ಯಾಯಕ್ಕೂ ಕಡಿಮೆಯಾದುದಲ್ಲ. ಹಳ್ಳಿಯ ಕೊಳೆಯೆಲ್ಲಾ ಆ ನ್ಯಾಯದೊಂದಿಗೆ ನಿರ್ಮಲವಾಗುತ್ತದೆ". (ಅದೇ; ಪು. ೧೨೭) ಇಲ್ಲಿ ಗ್ರಾಮೀಣ ಜನರಲ್ಲಿ ನ್ಯಾಯ ನಿಷ್ಕರ್ಷೆಯ ಹೊಸ ರೀತಿಯನ್ನು ಗೊರೂರರವರು ಕೊಟ್ಟಿರುವುದು ವಿಶೇಷ ಅಂಶವಾಗಿದೆ.

ಕೃಷಿಕರಲ್ಲಿ ಆರ್ಥಿಕ ಅನಾನುಕೂಲತೆ ಸಾಮಾನ್ಯವಾದ ವಿಷಯ. ಆದರೆ ಯಾರ ಋಣವನ್ನು ಇಟ್ಟುಕೊಳ್ಳಬಾರದು ಎಂಬ ಪ್ರಾಮಾಣಿಕ ಭಾವನೆ ಅವರಲ್ಲಿ ಕಂಡುಬರುತ್ತದೆ. ಇಂತಹ ಪ್ರವೃತ್ತಿಗೆ ಉದಾಹರಣೆಯನ್ನು 'ಕಮ್ಮಾರ ವೀರಭದ್ರಾಚಾರಿ' ಕೃತಿಯ 'ಕಾಮಧೇನುವಿನ ಕೃಪೆ' ಕತೆಯಲ್ಲಿ ಜನ್ನಪ್ಪನ ಪಾತ್ರದ ಮೂಲಕ ಗುರುತಿಸಬಹುದು. ಜನ್ನಪ್ಪ ಸಾಹುಕಾರರಿಂದ ಸಾಲ ತೆಗೆದುಕೊಂಡು ತೀರಿಸಲಾಗದೆ ಆಸ್ತಿಯ ಹರಾಜಿಗೆ ಬಂದಾಗ ನ್ಯಾಯಾಲಯದಲ್ಲಿ ಆಡಿದ ಮಾತು. "ಕೊಡತಕ್ಕದ್ದುಂಟು. ನಾನು ವ್ಯವಸಾಯಗಾರ ವಾಯಿದೆ ಕೊಡಿ" ಎಂದು ಬೇಡಿದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೨೩೫) ಇಲ್ಲಿ ಗೊರೂರರವರು ಗ್ರಾಮೀಣ ಜನರ ತೀವ್ರ ಬಡತನವನ್ನು ಸೂಚಿಸಿದ್ದಾರೆ. ಅದರ ಜೊತೆಗೆ ಅವರ ಪ್ರಾಮಾಣಿಕತೆಯ ಭಾವಶ್ರೀಮಂತಿಕೆಯನ್ನು ನೆನಪು ಮಾಡಿಕೊಟ್ಟಿದ್ದಾರೆ. ಈ ಕಾರಣದಿಂದ ನಾವು ಹಳ್ಳಿಯವರನ್ನು ಗೌರವಿಸಲೇಬೇಕು ಎನಿಸುತ್ತದೆ. ಗೊರೂರರವರು ಹಳ್ಳಿಯವರ ಚಿತ್ರವನ್ನು ಕೊಡುವಾಗ ಅವರ ವಾಸ್ತವ ಉತ್ತಮ ಗುಣಮನೋಧರ್ಮಗಳನ್ನು ಯಾವ ಕಾಲಕ್ಕೂ ಮರೆಯದೆ ಮೊಟಕು ಮಾಡದೆ ಧಾರಾಳ ಮನಸ್ಸಿನಿಂದ ಕೊಡುತ್ತಾರೆ. ಈ ರೀತಿಯಲ್ಲಿ ಗ್ರಾಮೀಣ ಜನತೆಯ ಸಂಸ್ಕೃತಿಯ ಹಿರಿಮೆಯ ಬಗ್ಗೆ ಪಟ್ಟಣಿಗರ ಕಣ್ಣು ತೆರೆಸಿದ್ದಾರೆ. ತೋರಿಕೆಯ ಬದುಕಿನಲ್ಲಿ ಜೀವನದ ಸರ್ವಸ್ವವನ್ನು ಭಾವಿಸುವ ಪಟ್ಟಣದ ಜನ ಇಂತಹ ಸನ್ನಿವೇಶವನ್ನು ಕಂಡಾಗ ಅನಿವಾರ್ಯವಾಗಿ ತಲೆ ತಗ್ಗಿಸುತ್ತಾರೆ, ಮೈ ಮುದುಡುತ್ತಾರೆ ಮತ್ತು ಅವರ ಸೊಕ್ಕಿನ ಬೀಗುವಿಕೆ ಅಡಗಿ ಹೋಗುತ್ತದೆ. ಹೀಗಾದರೂ ಗ್ರಾಮೀಣ ಸಂಸ್ಕೃತಿಯಿಂದ ಪಟ್ಟಣಿಗರು ಉತ್ತಮ ಬದುಕಿನ ಪಾಠವನ್ನು ಕಲಿಯಲಿ ಎಂಬುದು ಲೇಖಕರ ಸದಾಶಯವಾಗಿದೆ. ನಗರ ಜೀವನದಲ್ಲಿ ಬಾಳುತ್ತಿರುವ ನಾವು ಸ್ವಲ್ಪ ಮಟ್ಟಿಗಾದರೂ ಗೊರೂರರವರ ಸಾಹಿತ್ಯದಿಂದ ಉತ್ತಮ ರೀತಿಯ ಪರಿವರ್ತನೆಯನ್ನು ಮಾಡಿಕೊಂಡಿದ್ದೇ ಆದರೆ ನಮ್ಮ ಬದುಕು ಸಾರ್ಥಕ ಹಾಗೂ ಗೊರೂರರವರ ಕೃತಿಗಳ ಸಂದೇಶವೂ ಸಾರ್ಥಕವಾಯಿತು ಎನಿಸುತ್ತದೆ. ಸಾಹಿತ್ಯದಲ್ಲಿ ಕಂಡುಬರುವ ಸಂದೇಶಗಳು ಮತ್ತು ಸಮಾಧಾನಗಳು ನಮ್ಮ ಬದುಕಿನಲ್ಲಿ ಜೀವಂತಿಕೆಯ ಗುಣಗಳಾಗಿ ಉಳಿಯಬೇಕು.

ಬೆಳೆದ ಬೆಳೆಯಲ್ಲಿ ಕಾಳಿನೊಂದಿಗೆ ಅಲ್ಲೊಂದು ಇಲ್ಲೊಂದು ಜಳ್ಳು ಕಂಡುಬರುವುದು ಸ್ವಾಭಾವಿಕ. ಇದು ಭೂಮಿಯ ಗುಣವೂ ಹೌದು. ಗ್ರಾಮೀಣ ಕೃಷಿಕ ಪರಿಸರದಲ್ಲಿ ಕಂಡುಬರುವ ಉತ್ತಮ ಸಂಸ್ಕೃತಿ ಹಾಗೂ ಉತ್ತಮ ಪಾತ್ರಗಳನ್ನು ಗೊರೂರವರ ಕೃತಿಗಳಲ್ಲಿ ಹೇರಳವಾಗಿ ಕಂಡಂತೆ ಮೋಸದ ವ್ಯಕ್ತಿಯ ಪಾತ್ರವನ್ನು ಅದೇ ಕೃತಿಯ 'ಅಮ್ಮನ ಬಸವ' ಕತೆಯಲ್ಲಿ ನೋಡುತ್ತೇವೆ. "ಎತ್ತು ಕದಿಯುತ್ತಿದ್ದ ಕಳ್ಳನೊಬ್ಬ ಊರಿಗೆ ಬಂದು ಆ ಊರಿನ ಎಲ್ಲರ ಗಮನ ಸೆಳೆದು ಅಮ್ಮನ ಬಸವನಾಗಿ ಕಲ್ಲು ಬಸವ ಎಡಕ್ಕೆ ತಿರುಗುತ್ತೆ ಎಂದಾಗ ಜನರೆಲ್ಲಾ ಹೌದು ಹೌದು ಎಂದರು. ಬಲಕ್ಕೆ ತಿರುಗುವಂತೆ ಮಾಡಲು ತಮ್ಮೆಲ್ಲ ಬೆಂಬಲಕೊಟ್ಟರು. ಬಲಕ್ಕೆ ತಿರುಗವಂತೆ ಮಾಡಿದಾಗ ಆಶ್ಚರ್ಯಪಟ್ಟರು". ಕೊನೆಗೊಮ್ಮೆ ಎತ್ತುಗಳನ್ನು ಹೊಡೆದುಕೊಂಡು ಹೋದಾಗ ದಿಗ್ಭ್ರಾಂತರಾದರು". (ಅದೇ; ಪು.೩೯) ಇಲ್ಲಿ ಗೊರೂರವರು ವಂಚನೆಯ ಮೂಲಕ ಸ್ವಾರ್ಥ ಸಾಧಿಸಿಕೊಳ್ಳುವ ತಗಲೂಪಿ ಜನರ ಚಿತ್ರವನ್ನು ನೀಡಿದ್ದಾರೆ. ಗ್ರಾಮೀಣ ಮುಗ್ಧ ಜನರು ದೇವರ ಬಗ್ಗೆ ಇಟ್ಟಿರುವ ನಂಬಿಕೆ ಹೇಗೆ ಸುಲಭವಾಗಿ ದುರುಪಯೋಗಗೊಳ್ಳುತ್ತಿದೆ ಎಂಬುದನ್ನು ಲೇಖಕರು ಸಮಂಜಸವಾಗಿ ತಿಳಿಯಪಡಿಸಿದ್ದಾರೆ.

ಒಂದು ಜನಾಂಗ - ಪರಿಸರದ ಸಂಸ್ಕೃತಿ ಕಾಲದಿಂದ ಕಾಲಕ್ಕೆ ಬದಲಾಗುವುದು ಜನಾಂಗದ ಬದುಕಿನ ಲಕ್ಷಣ ಎಂದು ಹೇಳಬಹುದು. ಜನರ ಬದುಕಿನ ರೀತಿ, ವೇಷ ಭೂಷಣ, ಆಚಾರ ವಿಚಾರ ಅವರ ಸಂಸ್ಕೃತಿಯ ಮೇಲೆ ನಿಚ್ಚಳವಾಗಿ ಪ್ರಭಾವವನ್ನು ಬೀರುತ್ತದೆ. ಸಾಹಿತ್ಯ ಒಂದು ಕಾಲದ ಸಂಸ್ಕೃತಿಯನ್ನು ದಾಖಲಿಸಿ ವಿಶ್ಲೇಷಿಸುವುದು ಸಾಹಿತ್ಯದ ಸ್ವರೂಪ ಎನ್ನುತ್ತಾರೆ. ಸಾಹಿತಿ ಜನಮನದ ಪ್ರತಿರೂಪ, ಪ್ರತಿಧ್ವನಿ ಎಂದು ಹೇಳುವುದಕ್ಕೆ ಆತನ ಸಾಂಸ್ಕೃತಿಕ ದೃಷ್ಟಿಯೇ ಮೂಲ ಕಾರಣ ಎನ್ನಬಹುದು. ಸಾಹಿತ್ಯದಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಶಗಳು ಕೃತಿಯ ಸಹಜ ಮೌಲ್ಯವನ್ನು ವರ್ಧಿಸುವುದರ ಜತೆಗೆ ಕೃತಿಗೆ ಸಹಜತೆಯ ಸಲ್ಲಕ್ಷಣವನ್ನು ತುಂಬಿಕೊಡುತ್ತದೆ. ಸಾಹಿತಿಯಲ್ಲಿ ಸಾಂಸ್ಕೃತಿಕ ದೃಷ್ಟಿ ಇಲ್ಲದೆ ಹೋದರೆ ಅವನ ಕೃತಿ ರಚನೆಯ ಕಾರ್ಯ ಅಷ್ಟರ ಮಟ್ಟಿಗೆ ಅಪೂರ್ಣ ಎನಿಸುತ್ತದೆ.

ಒಂದು ನಿರ್ದಿಷ್ಟ ಸಂಸ್ಕೃತಿಯನ್ನು ಪರಿಚಯಿಸುವಾಗ ಸಮಾಜವನ್ನು ಹಲವು ದೃಷ್ಟಿಕೋನಗಳಿಂದ ಅಧ್ಯಯನ ಮಾಡಬೇಕಾಗುತ್ತದೆ. ಒಂದೇ ಸಮಾಜದಲ್ಲಿ ವಾಸಮಾಡುವ ಬೇರೆ ಬೇರೆ ಜನಾಂಗದ ಜೀವವನ್ನು ಧಾರ್ಮಿಕ ನಂಬಿಕೆ ಶ್ರದ್ಧೆಗಳನ್ನು ಅಧ್ಯಯನ ಮಾಡುವಂತೆ ಜನಾಂಗದ ವೃತ್ತಿ ಕಸಬುಗಳನ್ನು ಸಹ ನಾವು ಅವಶ್ಯವಾಗಿ ಪರಿಭಾವಿಸಲೇಬೇಕಾಗುತ್ತದೆ. ಬದುಕಿನ - ಸಮಾಜದ ಎಲ್ಲ ಮುಖಗಳ ಅಧ್ಯಯನವನ್ನೇ ಸಾಂಸ್ಕೃತಿಕ ಅಧ್ಯಯನದ ಪರಿಪೂರ್ಣ ದೃಷ್ಟಿ ಎಂದು ವಿದ್ವಾಂಸರು ತಿಳಿಸಿದ್ದಾರೆ.

ಗೊರೂರವರು ತಮ್ಮ ಕೃತಿಗಳಲ್ಲಿ ಪ್ರತಿಬಿಂಬಿಸಿರುವ ಸಾಂಸ್ಕೃತಿಕ ದೃಷ್ಟಿ ಪರಿಪೂರ್ಣವಾದದ್ದು ಅಷ್ಟೇ ವಿಶಿಷ್ಟವಾದದ್ದು. ಗೊರೂರವರ ಕೃತಿಗಳಲ್ಲಿ ಗ್ರಾಮೀಣ ಜೀವನದ ವಿವಿಧ ನೆಲೆಗಳ ಅಧ್ಯಯನವನ್ನು ನಾವು ಕಾಣುವಂತೆ ವಿವಿಧ ವರ್ಗ, ವೃತ್ತಿಯ ವ್ಯಕ್ತಿಗಳ ಬದುಕಿನ ರೀತಿಯನ್ನು ವೈವಿಧ್ಯಪೂರ್ಣವಾಗಿ

ಗುರುತಿಸಬಹುದು. ಗೊರೂರರವರ ಕೃತಿಗಳಲ್ಲಿ ಕಂಡುಬರುವ ಈ ಸಾಂಸ್ಕೃತಿಕ ಅಧ್ಯಯನ ಕೃತಿಗೆ ಸೊಗಸನ್ನು ತಂದುಕೊಟ್ಟಿದೆ. ಇವರ ಕೃತಿಗಳಲ್ಲಿ ಕಾಣುವ ಕೃಷಿ ಸಂಸ್ಕೃತಿ ಕೃತಿಗಳಿಗೆ ಒಂದು ಸಾಂಸ್ಕೃತಿಕ ಹೊಸ ಒಂದು ಆಯಾಮವನ್ನು ತಂದುಕೊಟ್ಟಿರುವುದು ವಿಶೇಷ ಸಂಗತಿಯಾಗಿದೆ. ಸಾಮಾಜಿಕ ಜೀವನದಲ್ಲಿ ಕೃಷಿ ಸಂಸ್ಕೃತಿ ವೈಶಿಷ್ಟ್ಯಪೂರ್ಣವಾದದ್ದು. ಸಮಾಜದ ಒಂದೊಂದು ವರ್ಗದಲ್ಲಿ ತನ್ನದೇ ಆದ ಸಂಸ್ಕೃತಿ ಮೂಡಿ ಬಂದರೆ ಕೃಷಿಕರಲ್ಲಿ ನಿಸ್ವಾರ್ಥ ಪರೋಪಕಾರ ಪ್ರಜ್ಞೆಯ ಸಂಸ್ಕೃತಿಯನ್ನು ಕಾಣಬಹುದು. ಭೂಮಿಯೊಂದಿಗೆ ಕೃಷಿಕ ಹೊಂದಿರುವ ಅನಿವಾರ್ಯ ಅವಿನಾಭಾವ ಸಂಬಂಧ ಮಾನವೀಯ ಸಂಬಂಧ ಗಳಿಗಿಂತ ಮೇಲಾದದ್ದು ಹಾಗೂ ಮಿಗಿಲಾದದ್ದು ಎಂಬುದು ಕೃಷಿಕ ಸಂಸ್ಕೃತಿಯಲ್ಲಿ ನಮಗೆ ವೇದ್ಯವಾಗುತ್ತದೆ. ಸಮಾಜದ ಕ್ಷೇಮ ಕೃಷಿಕರ ನಿರಂತರ ತುಡಿತವಾಗಿರುತ್ತದೆ. ಇಂಥ ಕೃಷಿ ಸಂಸ್ಕೃತಿಯ ಮೇಲೆ ಹಿಂದೆ ವಸಾಹತುಶಾಹಿ ಪ್ರಭಾವ ಹಾಗೂ ಇಂದು ಜಾಗತಿಕರಣ ಪರಿಣಾಮ ಬಹುಮಟ್ಟಿಗೆ ಧನಾತ್ಮಕವಾಗಿದೆ ಎಂಬ ಭ್ರಮೆ ನಮಗೆ ಹೊರನೋಟಕ್ಕೆ ಕಂಡುಬಂದರೂ ವಾಸ್ತವ್ಯದಲ್ಲಿ ಅದು ಋಣಾತ್ಮಕವಾಗಿದೆ ಎಂಬ ಸತ್ಯಾಂಶವನ್ನು ಸ್ಪಷ್ಟವಾಗಿ ಗುರುತಿಸಬಹುದು. ಗ್ರಾಮೀಣ ಪರಿಸರದಲ್ಲಿ ಶಾಂತಿಯ ವಾತಾವರಣ ಭಗ್ನವಾಗಿ ಗೊಂದಲದ ವಾತಾವರಣ ಆಗಾಗ ಮೂಡಿಬರುವುದು ಇಂದಿಗೆ ನೈಜ ಸಂಗತಿಯಾಗಿದೆ. ಕೃಷಿಕ ದಿನ ನಿತ್ಯದ ಬದುಕಿನಲ್ಲಿ ಎದುರಿಸಬೇಕಾಗಿರುವ ಸಮಸ್ಯೆಗಳ ಸ್ವರೂಪ ವಿಪುಲವಾದಂತೆ ಇಂದು ವಿಚಿತ್ರವೂ ಆಗಿದೆ ಎಂಬ ಸಂಗತಿಯನ್ನು ಗೊರೂರರವರು ತಮ್ಮ ಕೃತಿಗಳಲ್ಲಿ ಬಹುಮಟ್ಟಿಗೆ ನಿರೂಪಿಸಿದ್ದಾರೆ. ಗೊರೂರರವರು ಕೃಷಿ ಸಂಸ್ಕೃತಿಯ ಮೂಲ ಮೇಲ್ಮೆಯನ್ನು ಮರೆಯದೆ ತಮ್ಮ ಕೃತಿಗಳಲ್ಲಿ ಜೀವನಾಡಿಯ ಅಂಶವಾಗಿ ಪ್ರತಿಬಿಂಬಿಸಿರುವುದು ಅತ್ಯಂತ ಗಮನಾರ್ಹವಾದ ಸಂಗತಿಯಾಗಿದೆ.

೫.೩. ಶಿಕ್ಷಣ-ಆಧುನಿಕತೆ ಮತ್ತು ಗ್ರಾಮಸಮಾಜದ ಪಲ್ಲಟಗಳು

ವ್ಯಕ್ತಿಗೆ ಹುಟ್ಟಿನಿಂದ ಸ್ವಲ್ಪಮಟ್ಟಿನ ಅರಿವು ಇರುತ್ತದೆ. ಈ ಅರಿವು ನಿಸರ್ಗದತ್ತ ಶಕ್ತಿ. ಈ ಅರಿವಿನಿಂದಲೆ ವ್ಯಕ್ತಿ ತನ್ನ ಬದುಕಿನ ಚಟುವಟಿಕೆಗಳನ್ನು ಪ್ರಾರಂಭಿಸುತ್ತಾನೆ. ನಿಸರ್ಗದತ್ತ ಅರಿವು ಪರಿಸರದ ಭಾವದಿಂದ ವೃದ್ಧಿಯಾಗಬಹುದು. ಪರಿಸರದ ವ್ಯಕ್ತಿಗಳ ಪ್ರಚೋದನೆಯಿಂದ ವ್ಯಕ್ತಿಯಲ್ಲಿ ರೂಢಮೂಲ ವಾಗಿರುವ ಅರಿವು ವಿಕಾಸವಾಗಬಹುದು. ಈ ಅರಿವು ತಾನಾಗಿ ಕಾಲಾನುಕ್ರಮದಲ್ಲಿ ಬೆಳೆಯಬಹುದು. ಅರಿವಿನ ಈ ನೈಜ ಲಕ್ಷಣವನ್ನು ಮಕ್ಕಳ ಬೆಳವಣಿಗೆಯಲ್ಲಿ ಗುರುತಿಸಬಹುದು. ಅರಿವಿನ ಬೆಳವಣಿಗೆಗೆ ಪರಿಸರ - ಜೀವನದ ಅನಿವಾರ್ಯತೆ ಒಂದು ನೈಜ ಕಾರಣವಾದರೆ ಶಿಕ್ಷಣ ಮತ್ತೊಂದು ರೀತಿಯಲ್ಲಿ ಸಾಧನ ಶಕ್ತಿಯಾಗುತ್ತದೆ.

ಶಿಕ್ಷಣ ಎಂದರೆ 'ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಜ್ಞಾನಶಕ್ತಿಯನ್ನು ಹೊರತೆಗೆಯುವುದು, ಅದರ ಜತೆಗೆ ವೃದ್ಧಿಪಡಿಸುವ ಸಮರ್ಥ ಕ್ರಿಯೆ' ಎನ್ನಬಹುದು. ಶಿಕ್ಷಣದ ಸ್ವರೂಪವನ್ನು ಹೇಳುವಾಗ ಈ ವಿಷಯವನ್ನು ತಿಳಿಸುತ್ತಾರೆ. ಶಿಕ್ಷಣವನ್ನು ಈ ಅರ್ಥದಲ್ಲಿಯೇ ಸಂಸ್ಕಾರ ಎನ್ನುವುದು. ಶಿಕ್ಷಣ

ಎಂದರೆ ಕೇವಲ ನಾಲ್ಕು ಗೋಡೆಯ ನಡುವೆ ಕಲಿಯುವ ಕ್ರಿಯೆ ಎಂದಷ್ಟೇ ಆಗುವುದಿಲ್ಲ. ಇದರ ಜೊತೆಗೆ ಪರಿಸರದ ಪ್ರಭಾವದಿಂದಲೂ ಸಹ ಈ ಕಲಿಕೆಯ ಕಾರ್ಯ ಮುಂದುವರೆಯುತ್ತದೆ. ಹೀಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ವ್ಯಕ್ತಿ ಜ್ಞಾನವನ್ನು ಶಿಕ್ಷಣದ ಮೂಲಕ ಸಂಪಾದಿಸಿಕೊಳ್ಳುತ್ತಾನೆ, ವೃದ್ಧಿಮಾಡಿಕೊಳ್ಳುತ್ತಾನೆ. ಶಿಕ್ಷಣದಿಂದ ನಾವು ಸಂಪಾದಿಸಿದ ಜ್ಞಾನವನ್ನು ವಿದ್ಯೆ ಎಂದು ಕರೆಯುವುದುಂಟು. ವಿದ್ಯೆಗೆ ಸಮಾಜದಲ್ಲಿ ಹೆಚ್ಚಿನ ಮಟ್ಟದ ಪ್ರಾಶಸ್ತ್ಯ ಇದೆ. ವಿದ್ಯಾವಿಹೀನ ಪಶುವಿಗೆ ಸಮಾನ ಎಂದು ಸುಭಾಷಿತಗಳು ಹೇಳುವುದನ್ನು ಇಲ್ಲಿ ಸ್ಮರಿಸಬಹುದು. ಶಿಕ್ಷಣದಿಂದ ನಾವು ಪಡೆದ ವಿದ್ಯೆ ನಮ್ಮ ಬುದ್ಧಿಯ ವಿಕಾಸಕ್ಕೂ, ಮಾನಸಿಕ ವಿಕಾಸಕ್ಕೂ, ಭಾವದ ಬೆಳವಣಿಗೆಗೂ ಕಾರಣವಾಗುತ್ತದೆ.

ಎಲ್ಲಾ ಸಮಾಜದಲ್ಲಿಯೂ ಶಿಕ್ಷಣ ಕ್ರಮದಲ್ಲಿ ಒಂದು ವಿಧಿವಿಧಾನವನ್ನು ಕಾಣುತ್ತೇವೆ. ಭಾರತೀಯ ಸಮಾಜದಲ್ಲಿ ಶಿಕ್ಷಣ ಪದ್ಧತಿ ಗುರುಕುಲ ಪದ್ಧತಿಯಲ್ಲಿ ಪ್ರಾರಂಭವಾಯಿತು. ಪ್ರಾಚೀನ ಭಾರತದಲ್ಲಿ ಮಹಾಜ್ಞಾನಿಗಳು ಗುರುಕುಲಗಳನ್ನು ಸ್ಥಾಪಿಸಿಕೊಂಡು ಶಿಕ್ಷಣ ಕೈಂಕರ್ಯವನ್ನು ತಮ್ಮ ಬದುಕಿನ ಪ್ರಧಾನ ಚಟುವಟಿಕೆಯಾಗಿ ನಡೆಸಿಕೊಂಡು ಬಂದರು. ಜ್ಞಾನ ಪಿಪಾಸಿಗಳಿಗೆ ಹಲವು ರೀತಿಯ ಜ್ಞಾನವನ್ನು ಕಲಿಸಿ ಕೊಡುವುದೇ ಈ ಗುರುಕುಲದ ಗುರುಗಳ ಜೀವನದ ಗುರಿಯಾಗಿತ್ತು. ಗುರುಕುಲಕ್ಕೆ ಮಕ್ಕಳನ್ನು ಕಳುಹಿಸುವುದು ಗೃಹಸ್ಥರ ಮುಖ್ಯ ಚಟುವಟಿಕೆಯಾಗಿತ್ತು. ಹಿಂದಿನ ಗುರುಕುಲಗಳಲ್ಲಿ ಹಲವು ರೀತಿಯ ಜ್ಞಾನವನ್ನು ಗುರುಗಳು ಬೋಧಿಸುತ್ತಿದ್ದರು. ಗುರುಕುಲದಲ್ಲಿಯೇ ಎಂಟು, ಹತ್ತು ವರುಷ ಕಾಲ ಉಳಿದು ವಿದ್ಯಾರ್ಥಿಗಳು ಹಲವು ರೀತಿಯ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಜ್ಞಾನಾರ್ಜನೆಯನ್ನು ಪಡೆಯುತ್ತಿದ್ದರು. ಕಲಿಸುವ ವ್ಯಕ್ತಿ ತೋರಿಸುವ ಶ್ರದ್ಧೆಗೆ ಸರಿಸಾಟಿಯಾದ ಶ್ರದ್ಧೆ ಅಂದಿನ ವಿದ್ಯಾರ್ಥಿಗಳಲ್ಲಿಯೂ ಇತ್ತು. ಹೀಗೆ ಗುರುಶಿಷ್ಯರಿಬ್ಬರ ಪರಸ್ಪರ ಆಸಕ್ತಿ ಶ್ರದ್ಧೆಯಿಂದ ನಡೆಯುವ ಕ್ರಿಯೆ ನಿಜವಾದ ಅರ್ಥದಲ್ಲಿ ಶಿಕ್ಷಣ ಎನಿಸಿಕೊಂಡಿತು. ಕಾಲ ಬದಲಾದಂತೆ ಜೀವನ ರೀತಿ ಬದಲಾಯಿತು. ಇದಕ್ಕೆ ಅನುಗುಣವಾಗಿ ಶಿಕ್ಷಣ ರೀತಿಯೂ ಸಹ ಬದಲಾಯಿತು. ಬೆಳವಣಿಗೆಯ ಸ್ವರೂಪವನ್ನು ಕಂಡಿತು.

ವೈಜ್ಞಾನಿಕ ಪ್ರಗತಿ ತಾಂತ್ರಿಕ ಜ್ಞಾನದ ಅವಶ್ಯಕತೆ ಹೆಚ್ಚಾದ ಇಂದಿನ ಯುಗದಲ್ಲಿ ಶಿಕ್ಷಣದ ಸ್ವರೂಪ ಹೊಸ ಸ್ವರೂಪವನ್ನು ಪಡೆಯಿತು. ಅಂದಿನ ಗುರುಕುಲಗಳ ಸ್ಥಾನದಲ್ಲಿ ಇಂದು ಶಾಲಾ-ಕಾಲೇಜುಗಳು ಜ್ಞಾನ ಪ್ರಸಾರದ ಕಾರ್ಯವನ್ನು ಮುಂದುವರೆಸುತ್ತಿದೆ. ವಿಜ್ಞಾನ ಪ್ರಪಂಚಕ್ಕೆ ಕಾಲಿಟ್ಟ ಮಾನವ, ಪಡೆಯಬೇಕಾದ ಜ್ಞಾನ ಬಹುಮುಖವಾಗಿದೆ. ಅಷ್ಟೇ ಅಲ್ಲದೆ ಅದು ಅತ್ಯಂತ ಗಾಢವೂ ಆಗಿದೆ. ವಿಜ್ಞಾನ ಪ್ರಯೋಗದ ಮೂಲಕ ಪಡೆಯಬಹುದಾದ ಜ್ಞಾನ ವಿಭಾಗವಾಯಿತು. ತಾಂತ್ರಿಕ ಯುಗದಲ್ಲಿ ಪ್ರಯೋಗದ ಸ್ಥಾನ ಶಿಕ್ಷಣ ಕ್ಷೇತ್ರಕ್ಕೆ ಅತ್ಯಂತ ಪ್ರಧಾನವಾಯಿತು. ಮೊದಲಿಗೆ ಆಧ್ಯಾತ್ಮಿಕ ಕ್ಷೇತ್ರಕ್ಕೆ ಮಾತ್ರ ಮೀಸಲಾಗಿದ್ದ ಶಿಕ್ಷಣ ಇಂದು ಬಾಹ್ಯಾಕಾಶದವರೆಗೆ ವ್ಯಾಪಕವಾಯಿತು. ಜೀವನ ನಿರ್ವಹಣೆಗೆ ಮಾತ್ರ ವಿದ್ಯೆಯಲ್ಲ ಜೀವನ ರಕ್ಷಣೆಗೆ ವಿದ್ಯೆ ಎಂಬ ಹೊಸ ಸಿದ್ಧಾಂತ ಇಂದು ನಮಗೆ ಗೋಚರವಾಗುತ್ತದೆ.

ಶಿಕ್ಷಣ ಪದ್ಧತಿಯಲ್ಲಿ ಇಂದು ಮುಖ್ಯವಾಗಿ ಕಾಣುವ ಅಂಶವೆಂದರೆ ವಿದ್ಯೆ ಸಮಾಜದ ಒಂದು ವರ್ಗಕ್ಕೆ ಮಾತ್ರ ಮೀಸಲಾದದ್ದು ಎಂಬ ಭಾವನೆ ಹೋಗಿ ಎಲ್ಲರಿಗೂ ವಿದ್ಯೆ ಅವಶ್ಯಕ ಎಂಬ ಪ್ರಧಾನ ಸತ್ಯ ಸ್ಪಷ್ಟವಾಗುತ್ತದೆ. ಈ ಮೂಲಕ ಶಿಕ್ಷಣಕ್ಕೆ ಒಂದು ವ್ಯಾಪಕ ಸ್ವರೂಪ ಇಂದು ಪ್ರಾಪ್ತವಾಗಿದೆ. ಜ್ಞಾನದ ದಿಗಂತ ವಿಸ್ತಾರವಾದಂತೆ ಅಲ್ಲಿ ವೈವಿಧ್ಯತೆಯ ಕವಲುಗಳು ಇವೆ ಎಂಬುದನ್ನು ಇಂದಿನ ಶಿಕ್ಷಣ ತಜ್ಞರು ಸ್ಪಷ್ಟಪಡಿಸಿದ್ದಾರೆ. ಇಂದಿನ ಶಿಕ್ಷಣ ಕ್ರಮದಲ್ಲಿ ಜ್ಞಾನದ ಆಳವಾದ ಅಧ್ಯಯನವನ್ನು ನಾವು ಮಾಡುವ ಸಾಹಸಕ್ಕೆ ಮುನ್ನಡೆಯುತ್ತಿದ್ದೇವೆ. ವಿಶ್ವದ ಪೈಪೋಟಿಯಲ್ಲಿ ಜ್ಞಾನಕ್ಕೆ ಇರುವ ಸ್ಥಾನಮಾನವನ್ನು ಇಂದು ನಾವು ಅರಿತುಕೊಂಡಾಗ ಶಿಕ್ಷಣದಲ್ಲಿರುವ ಪೈಪೋಟಿಯು ನಮಗೆ ಮನವರಿಕೆಯಾಗುತ್ತದೆ. ಶಿಕ್ಷಣದಲ್ಲಿ ಲಿಂಗ, ಜಾತಿ, ಮತ ಭೇದಗಳು ಕಣ್ಮರೆಯಾಗಿ ಆಸಕ್ತರೆಲ್ಲರಿಗೂ ಸದಾವಕಾಶವನ್ನು ನಾವು ಮನಗಾಣಬಹುದು. ವೈಜ್ಞಾನಿಕ ಮನೋಧರ್ಮ ನಮ್ಮಲ್ಲಿ ಬೆಳೆದಂತೆಲ್ಲಾ ಕ್ರಮಬದ್ಧವಾದ ಶಿಕ್ಷಣಕ್ಕೆ ಪ್ರಾಧಾನ್ಯತೆ ಹೆಚ್ಚಾಯಿತು. ತಾಂತ್ರಿಕ ಲೋಕದಲ್ಲಿಯೂ ಅದಕ್ಕನುಗುಣವಾಗಿ ತಾಂತ್ರಿಕ, ತಾರ್ಕಿಕ ಶಿಕ್ಷಣ ಕ್ರಮ ನಮ್ಮಲ್ಲಿ ಬೆಳೆಯತೊಡಗಿತು. ವೈಜ್ಞಾನಿಕ ಶಿಕ್ಷಣ, ತಾರ್ಕಿಕ ಶಿಕ್ಷಣ ಎರಡು ಸಹ ಇಂದಿನ ಶಿಕ್ಷಣ ಕ್ಷೇತ್ರದಲ್ಲಿ ಸಮಾನ ಸ್ಥಾನಮಾನ ಪಡೆದಿರುವುದನ್ನು ಕಾಣಬಹುದು.

ಇಂದಿನ ಶಿಕ್ಷಣ ಕ್ರಮದಲ್ಲಿ ವಿದ್ಯಾರ್ಥಿಗೆ ಕಲಿಯುವ ಕುತೂಹಲ ಹಾಗೂ ಉತ್ಸಾಹ ಬೆಳೆಯುವುದಕ್ಕೆ ಪೂರಕವಾದ ಕ್ರಮವನ್ನು ಕಾಣುತ್ತೇವೆ. ವಿಜ್ಞಾನ ಪ್ರಪಂಚದಲ್ಲಿ ಆಳವಾದ ಜ್ಞಾನವನ್ನು ಪಡೆದುಕೊಂಡಿರುವ ವಿಜ್ಞಾನಿಗಳು ಶಿಕ್ಷಣ ಕ್ರಮಕ್ಕೆ ಅಗತ್ಯವಾದ ಸಾಧನ ವಸ್ತುಗಳನ್ನು ದೊರಕಿಸಿ ಕೊಟ್ಟಿರುವುದು ಶಿಕ್ಷಣ ಕ್ಷೇತ್ರದಲ್ಲಿ ಒಂದು ಪ್ರಗತಿಯ ವಿಷಯವಾಗಿದೆ. ವಿಜ್ಞಾನದ ವಿಷಯವನ್ನು ತಿಳಿಯುವಾಗ ಪ್ರಯೋಗದ ಮೂಲಕ ಸಿದ್ಧಾಂತಗಳನ್ನು ಕಂಡುಕೊಳ್ಳುವುದು ಪ್ರಮುಖವಾದ ಮಾರ್ಗವಾಗಿದೆ. ಇದಕ್ಕೆ ಜತೆಯಾಗಿ ಒಂದು ಸಿದ್ಧಾಂತವನ್ನು ಪರಿಭಾವಿಸಿಕೊಂಡು ಅದಕ್ಕೆ ಸಂಬಂಧಿಸಿದಂತೆ ಪ್ರಯೋಗಗಳನ್ನು ನಡೆಸುವುದನ್ನು ಇಂದಿನ ಶಿಕ್ಷಣ ಕ್ರಮದಲ್ಲಿ ಗುರುತಿಸಬಹುದು. ಇದನ್ನೇ ಶಿಕ್ಷಣ ಕ್ಷೇತ್ರದಲ್ಲಿ 'ಸಂಶೋಧನ' ಕ್ರಮವೆಂದು ಕರೆಯುವುದು.

ಶಿಕ್ಷಣ ಪರಿಕಲ್ಪನೆಯಲ್ಲಿ ಹೊಸ ಹೊಸ ವಿಧಾನವನ್ನು ಕಲಿಯುವ ವಿಷಯಗಳಿಗೆ ಅನುಗುಣವಾಗಿ ಹೊಸ ಹೊಸ ಪ್ರಯೋಗಗಳನ್ನು ನಾವು ಇಂದು ಕಾಣುತ್ತೇವೆ. ಇದನ್ನೇ ಶೈಕ್ಷಣಿಕ ಪ್ರಗತಿ ಎಂದು ಕರೆಯುವುದು. ಈ ಶೈಕ್ಷಣಿಕ ಪ್ರಗತಿಯ ಮೂಲಕ ಸಮಾಜದ ಎಲ್ಲ ವಲಯದಲ್ಲಿಯೂ ಹೊಸತನದ ಫಲವನ್ನು ಗುರುತಿಸಬಹುದು. ಕೃಷಿ ಕ್ಷೇತ್ರದಲ್ಲಾಗಲಿ, ತಂತ್ರಜ್ಞಾನದಲ್ಲಾಗಲಿ, ವೈದ್ಯಕೀಯ ಕ್ಷೇತ್ರದಲ್ಲಾಗಲಿ ಇಂದು ಶಿಕ್ಷಣದ ಮೂಲಕ ನಡೆಸುತ್ತಿರುವ ಹೊಸ ಪ್ರಯೋಗಗಳು ಅತಿ ವಿಸ್ಮಯಕಾರಿಯಾಗಿವೆ. ಇಂತಹ ಪ್ರಯೋಗಗಳು ಇಂದಿನ ಜಾಗತೀಕರಣದಲ್ಲಿ ಇಡೀ ವಿಶ್ವವನ್ನು ಒಂದು ಮಾಡುತ್ತದೆ. ನಮ್ಮ ಪ್ರಯೋಗ ಗಳ ಫಲ ಇಡೀ ವಿಶ್ವಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಹೀಗೆ ಶಿಕ್ಷಣ ವ್ಯಾಪಕತೆಯ ಅನನ್ಯತೆಯನ್ನು

ಸಂಪಾದಿಸಿಕೊಂಡಿದೆ. ಇಂದಿನ ಅಣುವಿಜ್ಞಾನಿ, ಬಾಹ್ಯಾಕಾಶ ವಿಜ್ಞಾನಿ, ಭೂವಿಜ್ಞಾನಿ ಎಲ್ಲರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅದ್ಭುತವನ್ನು ಸಾಧಿಸಿ ಶಿಕ್ಷಣ ಕ್ಷೇತ್ರಕ್ಕೆ ಹೊಸದೊಂದು ಆಯಾಮವನ್ನು ತೆರೆದಿಟ್ಟಿದ್ದಾರೆ. ಇಂದಿನ ಶಿಕ್ಷಣ ಕೇವಲ ಬುದ್ಧಿ ವಿಕಾಸಕ್ಕೆ ಮಾತ್ರ ಸೀಮಿತವಾಗಿರದೆ ಭಾವನೆಗಳ ವಿಕಾಸಕ್ಕೂ ವ್ಯಕ್ತಿಪರ ವಿಕಾಸಕ್ಕೂ ತನ್ನದೇ ಆದ ಚೈತನ್ಯವನ್ನು ತುಂಬಿಕೊಟ್ಟಿದೆ. ವ್ಯಕ್ತಿಯ ಬುದ್ಧಿಭಾವನೆಗಳ ಪರಿಪೂರ್ಣ ವಿಕಾಸವನ್ನೇ ವ್ಯಕ್ತಿತ್ವ ವಿಕಾಸ ಎಂದು ಇಂದಿನ ಶಿಕ್ಷಣ ಸೂತ್ರ ಮಾಡಿ ತಿಳಿಸಿದೆ. ಸಮಾಜದ ಬದ್ಧತೆಗೆ, ಪ್ರಗತಿಗೆ ಇಂತಹ ವಿಶಿಷ್ಟ ಶಿಕ್ಷಣ ಪದ್ಧತಿ ನಮಗೆ ಅನಿವಾರ್ಯ ಎನಿಸಿದೆ.

ಭಾರತೀಯ ಸಮಾಜದಲ್ಲಿ ಶಿಕ್ಷಣದ ಪರಿಕಲ್ಪನೆ ನಗರ ಸಮಾಜಕ್ಕೂ ಗ್ರಾಮೀಣ ಸಮಾಜಕ್ಕೂ ಬೇರೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಗ್ರಾಮೀಣ ಸಮಾಜದಲ್ಲಿ ಶಿಕ್ಷಣದ ಕೊರತೆ ಇರುವುದರ ಜೊತೆಗೆ ಶಿಕ್ಷಣದ ಪರಿಕಲ್ಪನೆಯಲ್ಲಿಯೂ ಗುಣಮಟ್ಟದ ಅಭಾವವನ್ನು ಗುರುತಿಸಬಹುದು. ನಗರ ಸಮಾಜದಲ್ಲಿ ಇದಕ್ಕೆ ಭಿನ್ನವಾದ ಉತ್ತಮ ವಾತಾವರಣವನ್ನು, ಉತ್ತಮಮಟ್ಟವನ್ನು ಕಾಣುತ್ತೇವೆ. ಶಿಕ್ಷಣದ ಅವಕಾಶ ಎಲ್ಲರಿಗೂ ಸಮನಾಗಿ ತೆರೆದಿಟ್ಟಿದ್ದರು ಗ್ರಾಮೀಣ ಪರಿಸರದ ಜನ ಆ ಅವಕಾಶವನ್ನು ಪರಿಪೂರ್ಣವಾಗಿ ಬಳಸಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ ಎಂಬುದು ಕಹಿ ಸಂಗತಿಯಾದರೂ ಕಟು ಸತ್ಯವಾದ ಮಾತು. ಈ ದಿಶೆಯಲ್ಲಿ ಸರ್ಕಾರದ ಪಾತ್ರ ಕುಂಟಿತವಾಗಿದೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಶಿಕ್ಷಣದ ವಿಷಯದಲ್ಲಿ ಗ್ರಾಮೀಣ ಜನರಿಗೆ ಸರ್ಕಾರ ಕೊಡುತ್ತಿರುವ ಸವಲತ್ತು ಅತಿ ಕಡಿಮೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಇಂದಿನ ಶಿಕ್ಷಣದ ದುಃಸ್ಥಿತಿಯನ್ನು ಕುರಿತು ಚಿನ್ನಸ್ವಾಮಿ ಸೋಸಲೆಯವರ ಅಭಿಪ್ರಾಯ ಇಂತಿದೆ. "ಶಿಕ್ಷಣವೆಂದರೆ ಗಿಳಿಯಂತೆ ಕಂಠಪಾಠ ಮಾಡುವುದಲ್ಲ. ಅದರಲ್ಲಿ ನಾನಾ ವಿಧದ ಪಂಗಡಗಳಿವೆ. ಜ್ಞಾನಾರ್ಜನೆ, ವಿಷಯ ವಿಮರ್ಶೆ, ಮನೋರಂಜನೆ, ಕ್ರೀಡೆ, ಕಲೆ ಮುಂತಾದವುಗಳು ಮನುಷ್ಯರಲ್ಲಿ ಒಂದು ಬಗೆಯ ಸಂಸ್ಕಾರವನ್ನುಂಟು ಮಾಡುವ ಅನುಭವವು ಶಿಕ್ಷಣದಲ್ಲಿ ಇರಬೇಕು. ಆದರೆ ಇಂದಿನ ಗ್ರಾಮೀಣ ಮಕ್ಕಳು ಆಧುನಿಕತೆಯಡೆ ವಾಲಲೂ ಸಾಧ್ಯವಾಗದೇ ಇತ್ತ ಗ್ರಾಮೀಣ ಪ್ರದೇಶದ ಶಿಕ್ಷಣಕ್ಕೂ ಹೊಂದಿಕೊಳ್ಳಲಾಗದೇ ಸಂಕಷ್ಟ ಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ತನ್ನದೇಯಾದ ಹೊಸ ಹೊಸ ಅನುಭವಗಳಿಗಾಗಿ ಹಾತೊರೆಯುತ್ತಿರುವ ಇಂದಿನ ಮಕ್ಕಳಿಗೆ ಶಿಕ್ಷಣ ಕ್ರಮವು ಯಾವ ಬಗೆಯ ಸಹಾಯ ವನ್ನು ಮಾಡುತ್ತಿಲ್ಲವೆನ್ನಬಹುದು. ಏಕೆಂದರೆ ಇಂದು ಭಾರತವು ಒಂದು ರೀತಿಯಲ್ಲಿ ಸಂಧಿಕಾಲದಲ್ಲಿದೆ. ನಮ್ಮ ಸಾಮಾಜಿಕ ಸಂಪ್ರದಾಯಗಳು, ಈ ಪರಿವರ್ತನೆಯ ಹೊಡೆತಕ್ಕೆ ಸಿಲುಕಿ ತನ್ನ ಪ್ರಮುಖ ಉದ್ದೇಶವನ್ನೇ ಬದಲಾಯಿಸುತ್ತಿದೆ. ಗ್ರಾಮೀಣ ಪ್ರದೇಶದ ಸಾಮಾಜಿಕ ಸಂಘ ಸಂಸ್ಥೆಗಳು ಆರ್ಥಿಕ ತೊಂದರೆಯಿಂದ ಬೆಂದು ಬೂದಿಯಾಗುತ್ತಿವೆ. ಮತ, ಧರ್ಮ, ಆಚಾರ, ವಿಚಾರ, ನಡೆ, ನುಡಿ, ಉಡುಗೆ, ತೊಡುಗೆ, ಶ್ರದ್ಧಾಸಕ್ತಿಗಳೂ ಜಾಗತೀಕರಣ ಹಾಗೂ ವಿಜ್ಞಾನ ಯುಗದ ಭೀಕರ ಅಲೆಗೆ ಸಿಲುಕಿ ಕುಗ್ಗಿ

ಹೋಗುತ್ತಿವೆ. ಜನರ ಸಾಮಾಜಿಕ ಜೀವನದ ಮುಖ್ಯ ಅಡಿಗಲ್ಲೆಂದು ಕರೆಸಿಕೊಂಡಿರುವ ನೈತಿಕ ಬಲವು ಇಲ್ಲದಂತಾಗುತ್ತಿದೆ. ಇತಂಹ ತೊಂದರೆಯಲ್ಲಿ ದೇಶವಿರುವಾಗ ಮನುಷ್ಯನಿಗೆ ಬೇಕಾದದ್ದು ಶಾಂತಿ ಮತ್ತು ವಿಚಾರಪರತೆ. ಇವುಗಳನ್ನು ಪಡೆಯಲು ಬೇಕಾಗುವ ಸಾಧನವೇ ಉತ್ತಮ ಶಿಕ್ಷಣ". (ಚಿನ್ನಸ್ವಾಮಿ ಸೋಸಲೆ; ೨೦೦೪; ಪು.೮೦) ಇಲ್ಲಿ ಶಿಕ್ಷಣದ ಪ್ರಗತಿಪರ ಚಿಂತನೆ ಮತ್ತು ಅಗತ್ಯತೆ ಕುರಿತು ಚಿನ್ನಸ್ವಾಮಿ ಸೋಸಲೆಯವರ ನಿಲುವು ಮಾನ್ಯವಾದುದು.

ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಅವಕಾಶಗಳನ್ನು ಒದಗಿಸಿ ಕೊಡುವುದು ಶಿಕ್ಷಣ ಕ್ಷೇತ್ರದ ಒಂದು ದಿಟ್ಟ ಹೆಜ್ಜೆಯಾದಂತೆ ಮೂಲ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡುವುದು ಮತ್ತೊಂದು ಮುಖ್ಯವಾದ ವಿಚಾರವಾಗಿದೆ. ಇಂದು ಶಿಕ್ಷಣ ಕ್ಷೇತ್ರದಲ್ಲಿ ಕಾಣುವ ಅಕ್ಷರ ಕ್ರಾಂತಿ ಸಫಲವಾದಾಗ ಮಾತ್ರ ಮೂಲ ಶಿಕ್ಷಣ ಪ್ರವರ್ಧಮಾನ ಸ್ಥಿತಿಗೆ ಬರಬಹುದು. ಗ್ರಾಮೀಣ ಸಮಾಜದಲ್ಲಿ ಇರುವ ಬಡತನ, ಅಜ್ಞಾನ, ದೈಹಿಕವಾಗಿರುವ ಅನಾರೋಗ್ಯದ ವಾತಾವರಣ ಕೊನೆಯಾದಾಗ ಮಾತ್ರ ನಮಗೆ ಶಿಕ್ಷಣ ಕ್ರಾಂತಿಯ ಯಶಸ್ಸು ನಿಜವಾದ ಅರ್ಥದಲ್ಲಿ ಪ್ರಾಪ್ತವಾಗುತ್ತದೆ. ಬ್ರಿಟಿಷರು ಆಡಳಿತ ನಡೆಸುತ್ತಿದ್ದಾಗ ಅವರು ನಮಗೆ ಕೊಟ್ಟ ಶಿಕ್ಷಣ ಯಾವ ರೀತಿಯಲ್ಲಿಯೂ ಪ್ರಗತಿಗೆ ಪೂರಕವಾಗದೆ ಕೇವಲ ಕಛೇರಿಯ ಕಾರ್ಯ ನಿರ್ವಹಣೆಗೆ ಮಾತ್ರ ಸೀಮಿತವಾಗಿತ್ತು. ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ದೊರೆಯುವ ಶಿಕ್ಷಣ ಸಂಶೋಧನಾತ್ಮಕ ನೆಲೆಗಟ್ಟಿನ ಮೇಲೆ ನಿಂತಿದೆ. ಈ ಕಾರಣದಿಂದಲೇ ಇಂದು ವೈಜ್ಞಾನಿಕ ವಲಯದಲ್ಲಿ ಅಪೂರ್ವ ಶಕ್ತಿಗಳನ್ನು ಪಡೆಯಲು ಸಾಧ್ಯವಾಯಿತು. ಇಂದಿನ ಶಿಕ್ಷಣ ಪದ್ಧತಿ ಬುದ್ಧಿ ಬೆಳವಣಿಗೆಯ ಜೊತೆಗೆ ಮಾನವನ ಮನಸ್ಸಿನ ವಿಕಾಸಕ್ಕೂ ಕಾರಣವಾಗಿದೆ ಎಂಬ ಮಾತು ಆಲೋಚಿಸಿದಂತೆಲ್ಲಾ ನಿಜ ಎನಿಸುತ್ತದೆ. ಇಂದಿನ ಮಕ್ಕಳಲ್ಲಿ ಕಾಣುವ ಬುದ್ಧಿ ಸೂಕ್ಷ್ಮತೆಗೆ ಈಗಿನ ಶಿಕ್ಷಣ ಪದ್ಧತಿ ಪೂರಕವಾಗಿದೆ, ಫಲಕಾರಿಯಾಗಿದೆ. ಗಾಂಧಿ ಸಿದ್ಧಾಂತಕ್ಕೆ ಅನುಗುಣವಾಗಿ ನಿಜವಾದ ಅರ್ಥದಲ್ಲಿ ಇಂದು ಮೌಲಿಕ ಶಿಕ್ಷಣ ವನ್ನು ಕೊಡಲು ಸನ್ನದ್ಧರಾಗಿ ಸಾಕಷ್ಟು ಸಫಲತೆಯನ್ನು ಪಡೆದಿದ್ದೇವೆ. ವ್ಯಕ್ತಿ ಸ್ವಾವಲಂಬಿಯಾಗಿ ಉಳಿಯಲು ನಮ್ಮ ಇಂದಿನ ಶಿಕ್ಷಣ ಪದ್ಧತಿ ಸಹಕಾರಿಯಾಗಿದೆ ಎಂಬುದನ್ನು ಮರೆಯುವಂತಿಲ್ಲ. ನಮ್ಮ ಇಂದಿನ ಶಿಕ್ಷಣ ಪದ್ಧತಿ ಸುಖಜೀವನಕ್ಕೆ ಅಷ್ಟೇ ಸೀಮಿತವಾಗದೆ ಸಮರ್ಥ ಸಾತ್ವಿಕ ಜೀವನಕ್ಕೂ ಪ್ರೇರಕ ಪೂರಕ ಆಗಬೇಕು ಎಂಬ ತಜ್ಞರ ಅಭಿಪ್ರಾಯವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಕೈಲಾಸಂ ಹೇಳುವ ಅರ್ಥಪೂರ್ಣ ಶಿಕ್ಷಣ ನಮ್ಮದಾಗಬೇಕು ಎಂಬುದನ್ನು ಸಾಧಿಸುವ ಹಾದಿಯಲ್ಲಿ ಇಂದು ಮುನ್ನಡೆಯುತ್ತಿದ್ದೇವೆ.

ಗೊರೂರವರು ಸ್ವಾತಂತ್ರ್ಯ ಚಳುವಳಿಯನ್ನು ತಮ್ಮ ಕೃತಿಗಳಲ್ಲಿ ಪ್ರಧಾನ ವಿಷಯವಾಗಿ ಪ್ರತಿಬಿಂಬಿಸಿದಂತೆ ಶಿಕ್ಷಣದ ವಿಚಾರವನ್ನು ದೀರ್ಘವಾಗಿ ಚರ್ಚಿಸಿದ್ದಾರೆ. ಗ್ರಾಮೀಣ ಶಿಕ್ಷಣದ ಕುಂದು ಕೊರತೆಗಳನ್ನು ತಿಳಿಸುವುದರ ಜತೆಗೆ ಅವುಗಳಿಗೆ ಸುಧಾರಣೆಯನ್ನು ಸೂಚಿಸಿರುವುದು ಅವರಿಗೆ ಶಿಕ್ಷಣ

ಕ್ರಾಂತಿಯ ಬಗ್ಗೆ ಇರುವ ಕಾಳಜಿಗೆ ಸ್ಪಷ್ಟ ಸಾಕ್ಷಿಯಾಗಿದೆ. ಶಿಕ್ಷಣ ಒಂದರಿಂದಲೇ ಗ್ರಾಮೀಣ ಉದ್ಧಾರ ಸಾಧ್ಯ ಎಂಬುದು ಗೊರೂರರವರ ಸ್ಪಷ್ಟ ಅಭಿಮತವಾಗಿದೆ. ಹಳ್ಳಿಗಾಡಿನ ಶಾಲೆಗಳ ಸ್ಥಿತಿ, ಶಿಕ್ಷಕರ ಸ್ಥಿತಿ, ವಿದ್ಯಾರ್ಥಿಗಳ ಕಷ್ಟವನ್ನು ವಿವರಿಸುವಾಗ ಗೊರೂರರವರು ವ್ಯಂಗ್ಯದ ನುಡಿಗಳನ್ನು ಆಡಿರಬಹುದು, ಹಾಸ್ಯ ಮಾಡಿರಬಹುದು. ಆದರೆ ಆ ಮಾತುಗಳ ಹಿಂದಿನ ನೋವನ್ನು ಅರ್ಥ ಮಾಡಿಕೊಂಡು ಅದರ ಪರಿಹಾರಕ್ಕೆ ಪ್ರಯತ್ನಿಸಿದಾಗ ಮಾತ್ರ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸುಧಾರಣೆ ಆಗುತ್ತದೆ.

ಒಂದು ಸಮಾಜದ ಜನಜೀವನದಲ್ಲಿ ಸಂಪ್ರದಾಯಕತೆಯನ್ನು ಗುರುತಿಸುವಂತೆ ಕಾಲದಿಂದ ಕಾಲಕ್ಕೆ ಹೊಸತನವನ್ನು ಕಾಣುತ್ತೇವೆ. ಈ ಹೊಸತನ ವ್ಯಕ್ತಿಯ ಬುದ್ಧಿ ಭಾವನೆ ಮನೋವಿಕಾಸದಿಂದ ಉಂಟಾಗ ಬಹುದು. ಇಂತಹ ಹೊಸತನದಿಂದ ವ್ಯಕ್ತಿಯ ಜೀವನ ರೀತಿಯಲ್ಲಿ ಬದಲಾವಣೆಗಳು ಆಗುವುದು ಅತ್ಯಂತ ಸಹಜ. ವ್ಯಕ್ತಿಯ ವೇಷಭೂಷಣ, ಆಚಾರ ವ್ಯವಹಾರ, ನಡೆನುಡಿಗಳಲ್ಲಿ ಹೊಸತನ ಕಂಡುಬರುತ್ತದೆ. ಹೊಸತನ ಬಹುಮಟ್ಟಿಗೆ ಉತ್ತಮ ಅಂಶಗಳನ್ನು ಒಳಗೊಂಡಿದ್ದರು ಸಹ ಹಲ ಕೆಲವು ಲೋಪದೋಷಗಳು, ಅಸ್ತವ್ಯಸ್ತಗಳು ಕಂಡುಬಂದರೂ ಆಶ್ಚರ್ಯವಿಲ್ಲ. ಇಂತಹ ಬದಲಾವಣೆ ಅನಿವಾರ್ಯವೆಂದೇ ಹೇಳಬೇಕಾಗು ತ್ತದೆ. ಜೀವನ ಬದಲಾವಣೆಗಳಿಗೆ ಮತ್ತೊಂದು ಸಮಾಜದ ಪ್ರಭಾವವು ಕಾರಣವಾಗಬಹುದು. ನಗರ ಸಮಾಜದಲ್ಲಿ ಬದಲಾವಣೆಗಳು ತ್ವರಿತ ಗತಿಯಲ್ಲಿ ಕಂಡುಬರುತ್ತದೆ. ಆದರೆ ಗ್ರಾಮೀಣ ಸಮಾಜದಲ್ಲಿ ಸ್ಥಿತ್ಯಂತರಗಳು ಮಂದಗತಿಯಲ್ಲಿ ಉಂಟಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಸ್ಥಿತ್ಯಂತರಗಳ ಅಗತ್ಯ ಗ್ರಾಮೀಣ ಪರಿಸರದಲ್ಲಿ ಅತ್ಯಂತ ಪ್ರಮುಖವಾಗಿ ಇರುವುದಿಲ್ಲ. ಅಷ್ಟೇ ಅಲ್ಲದೆ ಗ್ರಾಮೀಣ ಜನ ಸಂಪ್ರದಾಯದಲ್ಲಿ ಬಹಳ ನಿಷ್ಠಾವಂತ ವ್ಯಕ್ತಿಗಳಾಗಿರುತ್ತಾರೆ. ಹೊಸತನವನ್ನು ಸ್ವಾಗತಿಸುವುದರಲ್ಲಿಯೂ ತಮ್ಮ ಜೀವನ ಶೈಲಿಯಲ್ಲಿ ಅವುಗಳನ್ನು ಅಳವಡಿಸಿಕೊಳ್ಳುವುದರಲ್ಲಿಯೂ ಅತಿ ನಿದಾನಿಗಳಾಗಿರುತ್ತಾರೆ. ಈ ಕಾರಣದಿಂದಲೇ ಗ್ರಾಮೀಣ ಪರಿಸರ ನಗರ ಸಮಾಜದಷ್ಟು ತ್ವರಿತ ಗತಿಯಲ್ಲಿ ಬದಲಾಗುವುದಿಲ್ಲ. ಇಂದು ಪ್ರಸಾರ ಮಾಧ್ಯಮಗಳು ಪ್ರವಾಸ ಸೌಕರ್ಯಗಳು ಹೆಚ್ಚಾಗಿರುವುದರಿಂದ ಗ್ರಾಮೀಣ ಜನಜೀವನ ದಲ್ಲಿಯೂ ಸ್ಥಿತ್ಯಂತರಗಳು ವೇಗವಾಗಿ ನಡೆಯುತ್ತಿದೆ ಎಂಬ ಮಾತು ಬಹುಮಟ್ಟಿಗೆ ನಿಜವಾಗಿದೆ.

ಕ್ರಮಬದ್ಧ ಜೀವನಕ್ಕೆ ಹೊಂದಿಕೊಂಡಿರುವ ಬದ್ಧರಾಗಿದ್ದ ಗ್ರಾಮೀಣ ಜನರು ಬದಲಾವಣೆಯ ಹೊಸ ಅಲೆ ಬಂದಾಗ ಅವರು ತಮ್ಮ ಜೀವನದಲ್ಲಿ ಅಸ್ತವ್ಯಸ್ತವನ್ನು ಕಾಣುವುದು ಸ್ವಾಭಾವಿಕ. ಊಟೋಪಚಾರ, ವೇಷಭೂಷಣ, ಜೀವನ ಶೈಲಿ ಎಲ್ಲದರಲ್ಲಿಯೂ ಹಳೆತು-ಹೊಸತರ ನಡುವೆ ತಾಕಲಾಟಕ್ಕೆ ಒಳಗಾಗುವುದನ್ನು ಗ್ರಾಮೀಣ ಜನರ ಬದುಕಿನಲ್ಲಿ ನೋಡುತ್ತೇವೆ. ಇಂಥ ತಾಕಲಾಟಿನ ಪರಿಣಾಮವೇ ಗ್ರಾಮೀಣ ಜನರ ಬದುಕಿನ ಸಂಕೀರ್ಣ ಸ್ಥಿತಿಗೆ ಮೂಲ ಕಾರಣವಾಗುತ್ತದೆ.

ಸಾಹಿತ್ಯ ಜನಜೀವನದ ಪ್ರತಿಬಿಂಬ ಎಂದಾಗ ಸಾಹಿತ್ಯದಲ್ಲಿ ಅಂದಿನ ಜನಜೀವನದ ಬದಲಾವಣೆ ಗಳನ್ನು ಜೀವನ ದೃಷ್ಟಿಕೋನವನ್ನು ಚೆನ್ನಾಗಿ ಗುರುತಿಸಬಹುದು. ಗೊರೂರರವರ ಕೃತಿಗಳಲ್ಲಿ ಗ್ರಾಮೀಣ

ಜೀವನದ ಉತ್ತಮ ಆದರ್ಶ ಅಂಶಗಳನ್ನು ಕಾಣುವಂತೆ ಆ ಸಮಾಜದ ಸಂಕೀರ್ಣ ಅಂಶಗಳನ್ನು ಗುರುತಿಸುತ್ತೇವೆ. ಸಮಾಜದ ಈ ಅಸ್ತವ್ಯಸ್ತ ಸ್ಥಿತಿ ವ್ಯಕ್ತಿ ಹಾಗೂ ಸಮಾಜದ ಸೌಖ್ಯಕ್ಕೆ ಭಂಗ ತಂದಿದೆ ಎಂಬುದು ಗಮನಿಸಬೇಕಾದ ವಿಚಾರ. ಇದನ್ನು ಕುರಿತು ಚರ್ಚಿಸುವಾಗ ಗೊರೂರರವರು ವ್ಯಕ್ತಿಗೆ ಜಾಗ್ರತ ಪ್ರಜ್ಞೆ, ವಿಚಾರವಂತಿಕೆ ಅತ್ಯವಶ್ಯ ಎಂಬುದನ್ನು ಸೂಚಿಸಿದ್ದಾರೆ. ಇಂತಹ ಗ್ರಾಮೀಣ ಜೀವನದ ಅಸ್ತವ್ಯಸ್ತ ವನ್ನು ಹೇಳುವಾಗಲು ಗೊರೂರರವರು ತಮ್ಮ ರಸಿಕ ಧಾಟಿಯನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ.

ಗಾಂಧಿಯವರು ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಸ್ವದೇಶಿ ಚಳುವಳಿಯನ್ನು ನಡೆಸಿದರು. ರಾಷ್ಟ್ರದ ಪ್ರಗತಿಗೆ ಸ್ವದೇಶಿ ಚಳುವಳಿ ಅತ್ಯಂತ ಅವಶ್ಯ ಎಂಬುದು ಗಾಂಧಿಯವರ ಅಭಿಮತ. ಆರ್ಥಿಕ ಸುಭದ್ರತೆ ಸ್ವದೇಶಿ ಚಳುವಳಿಯ ಮೂಲಕ ಸಾಧಿತವಾಗುತ್ತದೆ. ಗುಡಿ ಕೈಗಾರಿಕೆಯ ಉಳಿವು ಬೆಳವಣಿಗೆಗೆ ಸ್ವದೇಶಿ ಚಳುವಳಿ ಪೋಷಕವಾಗಿ ಉಳಿಯಿತು. ಸ್ವದೇಶಿ ಚಳುವಳಿಯಷ್ಟೇ ಮತ್ತೊಂದು ಪ್ರಧಾನವಾದ ಚಳುವಳಿಯನ್ನು ಶಿಕ್ಷಣ ಕ್ಷೇತ್ರದಲ್ಲಿ ಗಾಂಧಿಯವರು ಒತ್ತಿ ಹೇಳಿದ್ದಾರೆ. ಮಾತೃ ಭಾಷೆಯಲ್ಲಿ ಕೊಡುವ ಶಿಕ್ಷಣ ಹೆಚ್ಚು ಪರಿಣಾಮಕಾರಿ ಫಲಪ್ರದ ಎಂಬ ಶಿಕ್ಷಣ ತಜ್ಞರ ಅಭಿಪ್ರಾಯವನ್ನು ಗಾಂಧಿಯವರು ಸಮ್ಮತಿಸಿ ಈ ದಿಶೆಯಲ್ಲಿ ಕ್ರಾಂತಿಯನ್ನು ಮಾಡಿದರು. ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ವೈಜ್ಞಾನಿಕ ಹೊಸ ಸಂಶೋಧನೆ ಪ್ರಯೋಗಗಳಿಗೆ ಅಂತರರಾಷ್ಟ್ರೀಯ ಭಾಷೆಯ ಅಗತ್ಯವನ್ನು ಗಾಂಧಿಯವರು ಒಪ್ಪಿಕೊಂಡಿದ್ದಾರೆ. ಗೊರೂರರವರು ಗಾಂಧಿ ಸಿದ್ಧಾಂತದ ಅನುಯಾಯಿಗಳಾಗಿರುವ ಕಾರಣದಿಂದ ಶಿಕ್ಷಣ ಕ್ಷೇತ್ರದಲ್ಲಿ ಮಾತೃ ಭಾಷೆಯ ಮಾಧ್ಯಮವನ್ನು ತಮ್ಮ ಸಾಹಿತ್ಯದಲ್ಲಿ ಒತ್ತಿ ಹೇಳಿದ್ದಾರೆ.

'ಮೆರವಣಿಗೆ' ಕೃತಿಯಲ್ಲಿ ವಿದ್ಯೆಯ ಹಿರಿಮೆಯನ್ನು ಕುರಿತು ಅಮೂಲ್ಯ ಅಭಿಪ್ರಾಯಗಳನ್ನು ಗೊರೂರರವರು ನೀಡಿದ್ದಾರೆ. ಗ್ರಾಮೀಣ ಜನರು ಅಂದಿನ ಕಾಲಕ್ಕೆ ವಿದ್ಯೆಯನ್ನು ತುಂಬ ಗೌರವದಿಂದ ಕಾಣುತ್ತಿದ್ದರು ಎಂಬ ಸಂಗತಿ ಅಲ್ಲಿ ವ್ಯಕ್ತವಾಗಿದೆ. ಗ್ರಾಮೀಣ ಜನರು "ವಿದ್ಯೆಯನ್ನು ಸಂಪಾದನೆಗೆ ಗಂಟು ಹಾಕಲಿಲ್ಲ. ಸಂಪಾದನೆ ಮಾಡುವವನಿಗೂ ಮಾಡದವನಿಗೂ ವಿದ್ಯೆ ಬೇಕೇ ಬೇಕು. ಸಂಪಾದನೆ ಮಾಡದವನಿಗೆ ಹೆಚ್ಚಿಗೆ ವಿದ್ಯೆ ಬೇಕು. ವಿದ್ಯೆ ಎಂಬುದು ಜೀವಕ್ಕೆ ಉಸಿರಿನಂತೆ; ಅದು ಕತ್ತಲೆಯಲ್ಲಿ ಹೋಗುವವನಿಗೆ ಬೇಕಾದ ಬೆಳಕಿನಂತೆ. ಅದು ಪ್ರೇಯಸಿಯ ಪ್ರೇಮದಂತೆ. ಅದಕ್ಕೆ ಅಂಗಡಿ ಬೀದಿಯಲ್ಲಿ ಜನ ಸರಿಯಾಗಿ ಅಳತೆ ತೂಕ ಮಾಡಿ ಬೆಲೆ ಕೊಡಲಿಲ್ಲ ಅಂತ ಅದನ್ನು ನಾವು ಉದಾಸೀನ ಮಾಡುವುದಕ್ಕಾಗುವುದೇ?" ಎಂಬುದು ಅವರ ವಾದವಾಗಿದ್ದಿತು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು.೨೪೫)

ಹಿಂದಿನ ಕಾಲದಲ್ಲಿ "ಒಂದು ತಲೆಮಾರಿಗೆ ಹಿಂದೆ ಮಲ್ಲಿಗೆಹಳ್ಳಿಯ ಸಂಸ್ಕೃತ ವಿದ್ಯಾವಂತರು ವಿದ್ಯೆಗೂ ಬೆಲೆಗೂ ಗಂಟು ಹಾಕಲಿಲ್ಲ. ಮಲ್ಲಿಗೆಹಳ್ಳಿಯ ಯಜಮಾನರು, ಸಂಸ್ಕೃತ ವಿದ್ಯೆಯಿಂದ ತಮಗೆ ಏನೂ ಹಣದ ಲಾಭವಾಗುವುದಿಲ್ಲವೆಂದು ತಿಳಿದು ತಿಳಿದೂ, ಹಂಪಾಪುರಕ್ಕೆ ಹೋಗಿ ಅಲ್ಲಿಯ ಕುರುಡು

ಘನಪಾಠಿಗಳ ಹತ್ತಿರ ಹನ್ನೆರಡು ವರುಷ ತರ್ಕ ಸಾಹಿತ್ಯ ವೇದಾಂತಗಳನ್ನು ಕಲಿತರು. ಈ ಘನಪಾಠಿಗಳು ಹುಟ್ಟು ಕುರುಡರಾಗಿದ್ದರು. ಆದರೆ ಅವರ ವಿದ್ಯೆ ಅದ್ಭುತವಾಗಿದ್ದಿತು. ಅವರಿಗೆ ವೇದ ಘನಜಟೆ (ವೇದದ ಅನುಯಾಯಿಗಳಾದವರಿಗೆ ಸಹ ಈ ಮಾತು ಈಗ ಹೊಸದಾಗಿ ಅಪರೂಪವಾಗಿ ತೋರುತ್ತದೆ) ಪೂರ್ತಾ ಪಾಠ ಆಗಿತ್ತು. "ವೇದ ಪೂರ್ತಾ ಪಾಠವಾಗಿದ್ದಿತು" ಎಂದರೆ ಅದನ್ನು ಬಾಯಲ್ಲಿ ಹೇಳುವುದಕ್ಕೆ ಬರುತ್ತಿದ್ದಿತೆಂದು ಅರ್ಥ. ಆ ಕಾಲದಲ್ಲಿ ಪುಸ್ತಕಗಳೂ ಇರಲಿಲ್ಲ. ವೇದದ ಈ ಪಾಂಡಿತ್ಯದಿಂದಲೇ ಅವರಿಗೆ ಘನಪಾಠಿ ಎಂಬ ಈ ಹೆಸರು ಬಂದಿದ್ದಿತು. ಇದರ ಜೊತೆಗೆ ಅವರಿಗೆ ರಘುವಂಶ, ಮಾಘ, ನೈಷಧ ಈ ಕಾವ್ಯಗಳೂ ಚಂಪೂ ರಾಮಾಯಣ, ಭಾರತಗಳೂ ಅವುಗಳ ವ್ಯಾಖ್ಯಾನಗಳೊಂದಿಗೆ ಬಾಯಿಗೆ ಬರುತ್ತಿದ್ದವು. ತರ್ಕ ವೇದಾಂತದಲ್ಲಿಯೂ ಅವರು ನಿಸ್ಸೀಮರಾಗಿದ್ದರು. ಅವರಿಗೆ ಯಾವ ರಾಜರೂ ಈ ವಿದ್ಯೆಗಳಿಗಾಗಿ ಯಾವ ಅಧಿಕಾರವನ್ನು ಕೊಡುವ ಆಸೆ ಹುಚ್ಚು ಪ್ರಾರಂಭದಿಂದಲೂ ಇರಲಿಲ್ಲ. ಆದರೂ ಅವರು "ವಿದ್ಯೆ ಕಲಿಯುವುದು, ವಿದ್ಯೆ ಹರಡುವುದು, ಬ್ರಾಹ್ಮಣನಾದ ನನ್ನ ಧರ್ಮ. ಹೊಳೆದು ಉರಿಯುವುದು ದೀಪದ ಸ್ವಭಾವ. ಜನ ಅದಕ್ಕೆ ಬೆಲೆ ಕಟ್ಟಲಿಲ್ಲವೆಂದು ದೀಪ ಉರಿಯುವುದನ್ನು ಬಿಡುವುದಿಲ್ಲ. ಬ್ರಾಹ್ಮಣನಾದ ನಾನು ವಿದ್ಯೆಯ ಪ್ರಚಾರಕನಾಗದಿದ್ದರೆ ಮತ್ತಾರು ತಾನೆ ಆಗುತ್ತಾರೆ?" ಎಂದುಕೊಂಡು ತಾವು ಕುರುಡರಾದರೂ ಕಣ್ಣು ಕಾಣುವವರಿಗಿಂತ ಹೆಚ್ಚಾಗಿ ವಿದ್ಯಾವಂತರಾಗಿದ್ದರು''. (ಅದೇ) ಮೇಲಿನ ಮಾತುಗಳಲ್ಲಿ ಗೊರೂರರವರು ಸಂಸ್ಕೃತ ವಿದ್ಯೆಯ ಹಿರಿಮೆಯನ್ನು ತಿಳಿಸಿ ಬ್ರಾಹ್ಮಣರು ಗ್ರಾಮೀಣ ಪ್ರದೇಶದಲ್ಲಿ ವಿದ್ಯಾ ಪ್ರಚಾರಕರಾಗಿದ್ದರು ಎಂಬುದನ್ನು ಸ್ಪಷ್ಟ ಮಾತುಗಳಲ್ಲಿ ತಿಳಿಸಿದ್ದಾರೆ. ಬ್ರಾಹ್ಮಣರ ವಿದ್ಯಾ ಪ್ರಚಾರಕ ಕಾರ್ಯವನ್ನು ಗೊರೂರರವರು ಮುಗ್ಧ ಮನಸ್ಸಿನಿಂದ ತಿಳಿಸಿದ್ದಾರೆ. ವರ್ಣಾಶ್ರಮ ಧರ್ಮದ ಉದ್ದೇಶ ಹಿರಿಮೆಯನ್ನು ಹೇಳುವಾಗ ಬ್ರಾಹ್ಮಣರ ವಿದ್ಯಾ ಪ್ರಚಾರದ ಕಾಯಕವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಇಲ್ಲಿ ಗೊರೂರರವರು ನಿರ್ಭಯವಾಗಿ ಬ್ರಾಹ್ಮಣರ ಈ ಗುಣವನ್ನು ಮೆಚ್ಚಿ ತಿಳಿಸಿರುವುದು ಅವರು ವಿದ್ಯೆಗೆ ಕೊಟ್ಟ ಗೌರವ ಎಂಬುದು ಯಾರಿಗಾದರೂ ಮನವರಿಕೆಯಾಗುತ್ತದೆ. ಗ್ರಾಮೀಣ ಸಮಾಜದಲ್ಲಿ ಒಂದು ಕಾಲಕ್ಕೆ ಇದ್ದ ಇಂತಹ ಸಾಂಸ್ಕೃತಿಕ ವಿದ್ಯೆ ಈಗ ಕಣ್ಮರೆಯಾಗುತ್ತಿರುವುದು ವಿಷಾದನೀಯ ಸಂಗತಿ ಎಂಬುದನ್ನು ಮುಂದಿನ ಮಾತುಗಳಲ್ಲಿ ಗೊರೂರರವರು ವಿಚಾರ ಮಾಡಿರುವುದು ಒಪ್ಪುವ ಸಂಗತಿಯಾಗಿದೆ. ಗೊರೂರರವರ ದೃಷ್ಟಿಯಲ್ಲಿ ಆಧುನಿಕ ವಿದ್ಯೆಗೆ ಯಾವ ರೀತಿಯಲ್ಲಿಯೂ ಸಾಂಪ್ರದಾಯಿಕ ವಿದ್ಯೆ ಕಡಿಮೆಯಿಲ್ಲ ಎಂಬ ಸ್ಪಷ್ಟ ಅಭಿಮತವನ್ನು ಒಟ್ಟು 'ಮೆರವಣಿಗೆ' ಕಾದಂಬರಿಯಲ್ಲಿ ಕಾಣಬಹುದು. ಸಾಂಸ್ಕೃತಿಕ ವಿದ್ಯೆಯ ಒಂದು ಅಂಗವಾದ ಪುರೋಹಿತ ವಿದ್ಯೆ ಇಂದು ಗ್ರಾಮೀಣ ಪ್ರದೇಶದಲ್ಲಿ ಕಣ್ಮರೆಯಾಗುತ್ತಿರುವುದನ್ನು ಗಮನಿಸಿ ಇದು ನಾವು ಕಳೆದುಕೊಂಡ ಆಸ್ತಿ ಎಂದು ಸ್ಪಷ್ಟ ತಿಳುವಳಿಕೆಯನ್ನು ನೀಡಿದ್ದಾರೆ. ಗೊರೂರರವರಲ್ಲಿ ಪುರಾತನ ವಿದ್ಯೆಯನ್ನು ಮೆಚ್ಚುವ ಹಾಗೂ ಆಧುನಿಕ ವಿದ್ಯೆಯನ್ನು ಸ್ವಾಗತಿಸುವ ಪೂರ್ಣ ದೃಷ್ಟಿಯನ್ನು ಗುರುತಿಸಬಹುದು.

"ಘನಪಾಠಿಗಳು ತಮ್ಮ ವಿದ್ಯೆಕ್ಕಾಗಿ ಅವರು ಯಾರಿಂದಲೂ ಏನನ್ನು ಅಪೇಕ್ಷಿಸಲಿಲ್ಲ. ಯಾವ ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿ ಪ್ರಶಸ್ತಿ ಪತ್ರವನ್ನಾಗಲೀ ಇತರ ಸರ್ಟಿಫಿಕೇಟುಗಳನ್ನಾಗಲೀ ತೆಗೆದು ಇಟ್ಟುಕೊಳ್ಳಲಿಲ್ಲ. "ಇಂತಹ ವಿದ್ಯೆಯನ್ನು ಇಟ್ಟುಕೊಂಡು ಯಾವ ಅಲ್ಪನಿಗೂ - ಅವನು ಎಷ್ಟೇ ದೊಡ್ಡವನಾಗಿದ್ದರೂ ಸರಿಯೆ ಯಾವ ಸಹಾಯಕ್ಕಾಗಿಯೂ ದೈನ್ಯವನ್ನು ತೋರಿಸಲಾರೆ. ಸರಸ್ವತಿ ವಿದ್ಯಾಧೀ ದೇವತೆ. ಅಂಗಹೀನನಾದ ಯಾವುದಕ್ಕೂ ಬೆಲೆಯಿಲ್ಲದ ನನಗೆ ಒಲಿದು ನನಗೆ ಒಂದು ಬೆಲೆ ಕೊಟ್ಟಿದ್ದಾಳೆ. ಅವಳನ್ನು, ಹೊಟ್ಟೆ ಹೊರೆಯುವ ನಾಯಿ ನರಿಗಳಂತೆ ಬೊಗಳಿ, ಅನಾಮಧೇಯರಾದ ಅರಸಿರಕರ ಕಾಲಿನಲ್ಲಿ ಹಾಕಲಾರೆ. ಇಂತಹ ವಿದ್ಯೆ ನನಗೆ ಇರಬೇಕಾದರೆ ಮತ್ತೇನೂ ಇಲ್ಲವೆಂದು ಯಾಕೆ ಕೊರಗಲಿ? ರಾಜನಂತೆ, ಧನಿಕರಂತೆ, ಕೊಟ್ಟರೆ ಹೋಯಿತು ಅಂತ ನಾನ್ಯಾಕೆ ಕೊರಗಲಿ. ಕೊಟ್ಟಷ್ಟೂ ಇದು ಇನ್ನೂ ಬೆಳೆಯುತ್ತೆ. ಅಕ್ಷಯವಾಗಿತ್ತೆ" ಎಂದು ಘನಪಾಠಿಗಳು ಹೇಳುತ್ತಿದ್ದರು. (ಅದೇ;ಪು.೨೪೫-೨೪೬) ಘನ ಪಾಠಿಗಳ ವಿದ್ಯಾ ಪ್ರಸಾರದ ಹಿರಿಯ ಧ್ಯೇಯೋದ್ದೇಶವನ್ನು ಗೊರೂರವರು ಇಲ್ಲಿ ವಿವರಿಸಿದ್ದಾರೆ. ಅನೇಕ ಹಳ್ಳಿಗಳಲ್ಲಿ ಇಂತಹ ಹಿರಿಯ ವಿದ್ಯಾವಂತರು ಅಂದಿನ ಕಾಲಕ್ಕೆ ಇದ್ದರು ಎಂಬುದನ್ನು ಲೇಖಕರು ಈ ಮೂಲಕ ಸೂಚಿಸಿದ್ದಾರೆ. "ಘನಪಾಠಿಗಳಲ್ಲಿಗೆ ಮಲ್ಲಿಗೆಹಳ್ಳಿಯ ಯಜಮಾನರು ಬಾಲ್ಯದಲ್ಲಿ ಹೋಗಿ ಅವರ ಬಳಿ ಹನ್ನೆರಡು ಹದಿನಾಲ್ಕು ವರುಷ ಅಭ್ಯಾಸ ಮಾಡಿ ಸಾಹಿತ್ಯದಲ್ಲಿಯೂ ತರ್ಕ ವೇದಾಂತದಲ್ಲಿಯೂ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿದರು. ಆಗ ಅವರು ನೌಕರಿ ದೊರೆಯುತ್ತದೆ ಎಂಬ ಆಸೆಯಿಂದ ಈ ಸಂಸ್ಕೃತ ಕನ್ನಡ ವಿದ್ಯೆಯಲ್ಲಿ ಪಾರಂಗತರಾದವರಲ್ಲ. ಅವರು ಅಂತಹ ಧನಿಕರೂ ಅಲ್ಲ. ಆದರೂ "ಬ್ರಾಹ್ಮಣನಾದವನ ಕಸಬು ವಿದ್ಯೆ. ಅವನ ಸ್ವಭಾವ ವಿದ್ಯೆ. ಈ ಬೆಳಕು ನಂದದಂತೆ ಇಟ್ಟಿರಬೇಕು. ಈ ಸಂಸ್ಕೃತಿ ನಾಶವಾಗಲು ಅವಕಾಶ ಕೊಡಬಾರದು". ಈ ಭಾವದಿಂದ ಅವರು ವ್ಯಾಸಂಗ ಮಾಡಿ ಮಲ್ಲಿಗೆಹಳ್ಳಿಗೆ ಬಂದು ಕುಳಿತರು. ಆಗಿನ ಜನವೂ ಸಹ ಇವನು ಕಲಿತ ವಿದ್ಯೆಯನ್ನು ಮಾರಿದರೆ ಅದು ಪ್ರಯೋಜನಕ್ಕೆ ಬಂದಂತೆ, ಇಲ್ಲದಿದ್ದರೆ ಇಲ್ಲ ಎಂದು ನಿರೀಕ್ಷಿಸಲಿಲ್ಲ". (ಅದೇ; ಪು.೨೪೬) "ಆಗಿನ ಜನ ಓದಿ ಪಂಡಿತರಾದರು. ಕೇಳಿ ಕೇಳಿ ರಸಿಕರಾದರು. ಅವರ ಬುದ್ಧಿ ವಿಶಾಲವಾಯಿತು; ಜ್ಞಾನ ಕೂರಾಯಿತು, ದಕ್ಷತೆ ಚೆನ್ನಾಗಿ ಬೆಳೆಯಿತು, ಲೋಕ ವ್ಯವಹಾರ, ಸಮಾಯಾನುಸಾರವಾದ ಮಾತುಕತೆ, ಜೀವನವನ್ನು ಬಾಳುವ ರೀತಿ, ಕಷ್ಟಗಳನ್ನು ಸಹಿಸಿ ಎದುರಿಸುವ ಶಕ್ತಿ, ತ್ಯಾಗ, ತೃಪ್ತಿ, ಸ್ವಾತಂತ್ರ್ಯಭಾವ ಎಲ್ಲವೂ ಅವರಲ್ಲಿ ಬೆಳೆದವು" (ಅದೇ) ಎಂದು ಗೊರೂರವರು ಅಂದಿನ ವಿದ್ಯಾಭ್ಯಾಸದ ರೀತಿಯನ್ನು ಮೆಚ್ಚಿಕೊಂಡಿದ್ದಾರೆ. ಇಂಥ ವಿದ್ಯಾವಂತರನ್ನು ಸಂಸ್ಕೃತಿಯ ಪ್ರತೀಕಗಳೆಂದು ತೀರ್ಮಾನಿಸಿದ್ದಾರೆ.

"ವಿದ್ಯೆ ಎಂದೆಂದಿಗೂ ಮುಗಿಯದುದು; ಇದನ್ನು ಸಾಯುವವರೆಗೆ ಅಭ್ಯಾಸ ಮಾಡುತ್ತಲೇ ಹೋಗಬೇಕು. ಬರಬರುತ್ತಾ ಮನುಷ್ಯನನ್ನು ಪುಟಕ್ಕೆ ಹಾಕಿದಂತೆ ಆಗುತ್ತದೆ" (ಅದೇ; ಪು.೨೪೭) ಎಂಬ ಭಾವ ಈಗ ಹೋಗಿದೆ ಎಂಬುದು ಗೊರೂರವರ ಕಳಕಳಿಯಾಗಿದೆ. ನಿಜವಾದ ವಿದ್ಯೆಯಲ್ಲಿ ಮನಸ್ಸು ಹೆಚ್ಚು ಹೆಚ್ಚಾಗಿ ತೆರೆಯುತ್ತಿದ್ದುದರಿಂದ ಅದು ಮನುಷ್ಯನನ್ನು ವಿನಯವಂತನನ್ನಾಗಿ ಮಾಡುತ್ತಿದ್ದಿತು.

"ಹೊಸ ವಿದ್ಯೆ ಮನುಷ್ಯನನ್ನು ವಿನಯವಂತನನ್ನಾಗಿ ಮಾಡುವುದಂತೂ ಇರಲಿ. ಅವನ ಅಹಂಕಾರ ಮೇರೆ ಮೀರಿ ಹೆಚ್ಚುವಂತೆ ಮಾಡುತ್ತಿದ್ದಿತು. ಆ ವಿದ್ಯೆಯಲ್ಲಿ ಒಂದು ತೃಪ್ತಿ, ಒಂದು ಪರೋಪಕಾರ ಬುದ್ಧಿ, ನಿಜವಾದ ಕೆಚ್ಚುಗಾರಿಕೆ ಕಷ್ಟಸಹಿಷ್ಣುತೆ ಇತ್ತು. ಈ ವಿದ್ಯೆಯಲ್ಲಿ ಮಿತಿ ಮೀರಿದ ಸ್ವಾರ್ಥದ ದುರ್ಗಂಧ; ಎ.ಬಿ.ಸಿ.ಡಿ. ಕಲಿಯುವಾಗಲೇ ಗುಲಾಮಗಿರಿಯ ಮನೋವೃತ್ತಿ ಅತಿಯಾದ ಸುಖಾಭಿಲಾಷೆ, ಹೇಡಿತನ ತುಂಬಿತು. ಸಣ್ಣ ಮತ್ತು ದೊಡ್ಡ ಗುಮಾಸ್ತರನ್ನು ತಯಾರು ಮಾಡುವ ಈ ಕಾರ್ಖಾನೆ ಬೇರೆ. ಇದಕ್ಕೂ ನಿಜವಾದ ನಮ್ಮ ಸಂಸ್ಕೃತಿ ವಿದ್ಯೆಗೂ ಸಂಬಂಧವಿಲ್ಲ". (ಅದೇ) ಈ ಅಭಿಪ್ರಾಯದೊಂದಿಗೆ ಇಂದಿನ ವಿದ್ಯೆಯೊಂದಿಗೆ ನಮ್ಮ ಸಂಸ್ಕೃತಿ ಮರೆತು ಹೋಯಿತು ಎಂದು ಗೊರೂರರವರು ಕೊಟ್ಟಿರುವ ಅಭಿಪ್ರಾಯ ಆಲೋಚನೆಗೆ ಒಳಗಾದಾಗ ಅರ್ಥಪೂರ್ಣ ಎನಿಸುತ್ತದೆ. ಇಂದಿನ ವಿದ್ಯಾಭ್ಯಾಸ ನಮ್ಮನ್ನು ಸಂಸ್ಕೃತಿಯಿಂದ ವಿಮುಖಗೊಳಿಸಿ ನಮ್ಮನ್ನು ಸುಖದ ತುತ್ತತುದಿಗೆ ಏರಿಸಿದೆ ಎಂಬುದು ವಿಪರ್ಯಾಸದ ವಿಷಯವಾಗಿದೆ. "ಇಂದು ಇಂಗ್ಲೀಷ್ ವಿದ್ಯಾಭ್ಯಾಸ ಒಂದು ತರ ಸನ್ನಿಯಂತೆ ಪ್ರಾರಂಭವಾಯ್ತು. ವಿದ್ಯೆ ಕಲಿತಂತೆ ಹುದ್ದೆಗಳು ದೊರಕಿದ್ದರಿಂದ ನಿಜವಾದ ವಿದ್ಯೆ ಅದೇ ಆಯ್ತು". (ಅದೇ;ಪು.೨೪೭-೨೪೮) ಗೊರೂರರವರ ಈ ಮಾತುಗಳಲ್ಲಿ ಇಂಗ್ಲೀಷಿನ ಹುಚ್ಚು ಮೋಹವನ್ನು ನೆನಪು ಮಾಡಿಕೊಟ್ಟಿದ್ದಾರೆ.

ಹಳ್ಳಿಯ ಸಾಮಾನ್ಯ ಜನರಿಗೂ ಶಿಕ್ಷಣದ ಬಗ್ಗೆ ಅಪೂರ್ವ ಕಾಳಜಿ ಇರುತ್ತದೆ ಎಂಬುದಕ್ಕೆ ಲೇಖಕರು 'ಕತೆಗಳು ಮತ್ತು ವಿನೋದ ಚಿತ್ರಗಳು' ಕಥಾ ಸಂಕಲನದ 'ಜೋಡು ಬಂದೂಕದ ಗುರಿಕಾರರು' ಕತೆಯಲ್ಲಿ ಹನುಮನ ಪಾತ್ರದ ಮೂಲಕ ನಿದರ್ಶನವನ್ನು ಕೊಡುತ್ತಾರೆ. ಕುಡುಕ ಹನುಮ ಸಾಯುವ ಕಾಲಕ್ಕೆ ತನ್ನ ಅಳಿದುಳಿದ ಆಸ್ತಿಯನ್ನೆಲ್ಲಾ ಶಾಲೆಯ ಅಭಿವೃದ್ಧಿಗಾಗಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬರೆದು ಬಿಡುತ್ತಾನೆ. "ನನ್ನ ಮರಣಾನಂತರ ನನ್ನ ಮನೆಯ ಹೊಲಗಳನ್ನು ಮಾರಿ ನನ್ನ ದಫನ್‌ಗೆ ಖರ್ಚು ಮಾಡಿ ಈ ಊರಿನ ಬಡ ಶಾಲಾ ಬಾಲಕರ ಪುಸ್ತಕ ತಿಂಡಿಗೆ ವಿನಿಯೋಗಿಸಬೇಕು ಎಂದು ಪತ್ರ ಬರೆದಿದ್ದನು. ಇದಕ್ಕೆ ಶಾನುಭೋಗರ ಸಾಕ್ಷಿ ಹಾಕಿಸಿದ್ದನು". (ಗೊರೂರು ರಾಮಸ್ವಾಮಿ ಅಯ್ಯಂಗಾರ; ೧೯೭೨; ಪು. ೩೮೭) ಇಲ್ಲಿ ಹನುಮನಿಗೆ ವಿದ್ಯೆಯ ಮೇಲೆ ಇರುವ ಗೌರವ ವಿದ್ಯೆ ಕಲಿಯುವ ಮಕ್ಕಳ ಮೇಲೆ ಇರುವ ಪ್ರೀತಿ ನಮಗೆ ಸ್ಪಷ್ಟವಾಗುತ್ತದೆ. ಅನಕ್ಷರಸ್ಥರಾದರು ಅಕ್ಷರವನ್ನು ಗೌರವಿಸುವ ದೊಡ್ಡ ಗುಣವನ್ನು ಗೊರೂರರವರು ಇಲ್ಲಿ ನೆನಪು ಮಾಡಿಕೊಟ್ಟಿದ್ದಾರೆ.

'ಪುನರ್ಜನ್ಮ' ಕಾದಂಬರಿಯಲ್ಲಿಯು ಸಹ ವಿದ್ಯೆಗಾಗಿ ತಾಯಿ ಭಾಗ್ಯಲಕ್ಷ್ಮಮ್ಮ ತನ್ನ ಒಡವೆಗಳನ್ನು ಮಾರುವ ಘಟನೆಯನ್ನು ಕಾಣುತ್ತೇವೆ. ಇಲ್ಲಿ ಮಗ ಗೋಪಾಲ ದಾರಿ ತಪ್ಪಿದರು ತನ್ನ ಕರ್ತವ್ಯದ ಮೂಲಕ ಮಗನ ವಿದ್ಯಾಭ್ಯಾಸಕ್ಕೆ ಗುರಿ ಮುಟ್ಟಿಸಿದ್ದು ಗಣನೀಯವಾದ ಸಂಗತಿ. ಇಂಥ ರೀತಿಯ ತ್ಯಾಗ ಮನೋಭಾವನೆಯನ್ನು ಗ್ರಾಮೀಣ ಪರಿಸರದಲ್ಲಿ ಹೆಚ್ಚಾಗಿ ಕಾಣುತ್ತೇವೆ ಎಂಬುದನ್ನು ಲೇಖಕರು ಅನೇಕ ಘಟನೆಗಳಲ್ಲಿ ನೆನಪು ಮಾಡಿಕೊಟ್ಟಿದ್ದಾರೆ. ವಿದ್ಯೆಯಿಂದ ವ್ಯಕ್ತಿ ಪರಿವರ್ತನೆ ಆಗಬಹುದು ಎಂಬ ಸೂಕ್ಷ್ಮ

ಅಂಶವು ಇಲ್ಲಿ ಧ್ವನಿತವಾಗಿದೆ. ಇದರ ಜೊತೆಗೆ ವಿದ್ಯೆಯ ಮಹತ್ವವನ್ನು ಅರಿಯದ ಮಕ್ಕಳ ಕೆಟ್ಟ ವರ್ತನೆಯು ಇಲ್ಲಿ ಗಮನಕ್ಕೆ ಬರುತ್ತದೆ.

ಗೊರೂರವರು ತಮ್ಮ ಕೃತಿಗಳಲ್ಲಿ ವಿಧವಾ ವಿವಾಹದ ಕ್ರಾಂತಿಯನ್ನು ಜತೆಗೆ ವಿಧವಾ ಶಿಕ್ಷಣದ ಮಹತ್ವವನ್ನು ಸಮರ್ಥ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ. 'ಶಿವರಾತ್ರಿ' ಕಥಾಸಂಕಲನದ 'ಬಿಸಿಲುಗುದುರೆ' ಕಥೆಯಲ್ಲಿ ವಿಧವೆಯಾದ ಕರುಣಾಗೆ ವಿದ್ಯಾಭ್ಯಾಸವನ್ನು ಕೊಡಿಸುವ ಪ್ರಯತ್ನ ಕ್ರಾಂತಿಯ ಮತ್ತೊಂದು ದಿಟ್ಟ ಹೆಜ್ಜೆ. ತಂದೆ ಶ್ರೀನಿವಾಸ ಕರುಣಾ ಬಾಲ ವಿಧವೆಯಾದಾಗ ಆಕೆಗೆ ಅಂದಿಗೆ ಇದ್ದ ವಿಧವಾ ಶಾಸ್ತ್ರ ಯಾವುದನ್ನು ಮಾಡಿಸಲು ಒಪ್ಪುವುದಿಲ್ಲ. ಅದಕ್ಕೆ ಜತೆಯಾಗಿ ತನ್ನ ಮಗಳಿಗೆ ವಿದ್ಯೆಯನ್ನು ಕೊಡಿಸಲು ಮದರಾಸಿಗೆ (ಚೆನ್ನೈ) ನೆಂಟರ ಮನೆಗೆ ಕಳುಹಿಸುತ್ತಾರೆ. ಇಲ್ಲಿ ಸ್ತ್ರೀಗೆ ವಿದ್ಯಾಭ್ಯಾಸದ ಅವಶ್ಯಕತೆ ಇದೆ ಎಂಬ ಅಂಶ ಸ್ಪಷ್ಟವಾಗಿದೆ. ಗ್ರಾಮೀಣ ಪರಿಸರದಲ್ಲಿ ಅಂದಿನ ಕಾಲಕ್ಕೆ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರಾಶಸ್ತ್ಯ ಪ್ರಾರಂಭವಾಗಿತ್ತು ಎಂಬುದು ಇಲ್ಲಿ ಸ್ಫುಟವಾಗಿದೆ. ಶಿಕ್ಷಣದ ಮಹತ್ವ ಅದರಲ್ಲೂ ವಿಧವಾ ಶಿಕ್ಷಣದ ಮಹತ್ವ ಇಲ್ಲಿ ನಮಗೆ ಪ್ರಮುಖವಾಗಿ ಕಾಣುತ್ತದೆ. "ಏನೂ ಅರಿಯದ ಹುಡುಗಿ ಕರುಣಾ ಏನೂ ಅರಿಯದ ಹುಡುಗಿಯಾಗಿಯೇ ಉಳಿದಳು. ಗಂಡನು ಬಂದದ್ದು ಹೋದದ್ದು ಎರಡೂ ಅವಳಿಗೆ ಒಂದು ಕನಸೇ ಆಯಿತು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೯೯; ಪು.೫೨) ಈ ಮಾತುಗಳಲ್ಲಿ ಬಾಲ್ಯ ವಿವಾಹದ ದುರಂತದ ಪರಿಣಾಮ ಬಾಲ ವಿಧವೆ ಸಂಕಟ ನಮಗೆ ಕರಳು ಕಿವುಚಿದಂತೆ ಆಗುತ್ತದೆ. ಇಂಥ ಸ್ಥಿತಿಯಲ್ಲಿರುವ ಕರುಣಾ ಬದುಕಿಗೆ ನೆಮ್ಮದಿ ತಂದ ವಿಷಯ ಅಷ್ಟೇ ಅಲ್ಲದೆ ನಮಗೂ ಸಹ ನೆಮ್ಮದಿಯ ಭಾವನೆಯನ್ನು ತರುತ್ತದೆ. ಗೊರೂರವರು ಗ್ರಾಮೀಣ ಜನರಲ್ಲಿ ಕಂಡ ಇಂತಹ ಕ್ರಾಂತಿ ದೃಷ್ಟಿಗಳನ್ನು ಮುಕ್ತ ಮನಸ್ಸಿನಿಂದ ಒಪ್ಪಿ ಸ್ತುತಿ ಮಾಡಿದ್ದಾರೆ. ಶ್ರೀನಿವಾಸನು - ದಯಾನಂದ ಸರಸ್ವತಿ, ಈಶ್ವರ ಚಂದ್ರ ವಿದ್ಯಾಸಾಗರ, ವಿವೇಕಾನಂದ, ಗಾಂಧಿ ಇವರ ಸುಧಾರಣೆಗಳನ್ನು ಮೆಚ್ಚಿಕೊಂಡಿದ್ದು ಅಷ್ಟೇ ಅಲ್ಲದೆ ಅದನ್ನು ತನ್ನ ಮನೆಯ ಪರಿಸರದಲ್ಲಿ ನಡೆಸಿ ತೋರಿಸಿರುವುದು ಇಲ್ಲಿ ಗಮನಾರ್ಹ ಸಂಗತಿ. ಸುಧಾರಣೆಯ ಮಾತುಗಳು ಪಾಲನೆಗೆ ಒಳಗಾಗಬೇಕೇ ಹೊರತು ಕೇಳಿ ಬಿಡುವುದಕ್ಕಲ್ಲ ಎಂಬ ಸಂಗತಿ ಯನ್ನು ಲೇಖಕರು ಇಲ್ಲಿ ಧ್ವನಿಪೂರ್ಣವಾಗಿ ಎಚ್ಚರಿಸಿದ್ದಾರೆ.

ಗಾಂಧಿ ಅವರ ವಯಸ್ಕರ ಶಿಕ್ಷಣ ಕ್ರಾಂತಿ ಗ್ರಾಮೀಣ ಪ್ರದೇಶದಲ್ಲಿ ಪ್ರಬಲವಾಗತೊಡಗಿತು. ಮೊದಮೊದಲಿಗೆ ಗಂಡಸರು ವಯಸ್ಕರ ಶಿಕ್ಷಣ ತರಗತಿಗೆ ಬರುತ್ತಿದ್ದರೆ ಅನಂತರದಲ್ಲಿ ಸ್ತ್ರೀಯರು ಸಹ ವಯಸ್ಕರ ಶಿಕ್ಷಣ ಶಾಲೆಗೆ ಕಲಿಯಲು ಹೋಗುವುದನ್ನು ಪ್ರಾರಂಭಿಸಿದರು. ಇದು ನಿಜಕ್ಕೂ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಒಂದು ಕ್ರಾಂತಿ. ಇದೇ ಕೃತಿಯ 'ಬಿಸಿಲುಗುದುರೆ' ಕತೆಯಲ್ಲಿ ಇದಕ್ಕೆ ನಿದರ್ಶನವನ್ನು ಕಾಣುತ್ತೇವೆ. ವೆಂಕಟರಾಮುವಿನ ಹೆಂಡತಿ ಸೀತೆ ಓರೆಗೆಯವರ ಜೊತೆಯಲ್ಲಿ ವಯಸ್ಕರ ಶಿಕ್ಷಣ ಶಾಲೆಗೆ ಹೋಗುತ್ತಾಳೆ. ಮಣೆಗಾರರ ಹೆಂಡತಿ ಅವರಿಗೆಲ್ಲಾ ಪಾಠ ಹೇಳಲು ಪ್ರಾರಂಭಿಸಿದಳು. ವೆಂಕಟರಾಮು

ಒಳಕ್ಕೆ ಹೋದವನೆ "ಏನು ಸೀತಾ, ಈಗ ಹೊಸದಾಗಿ ವಿದ್ಯೆ ಪ್ರಾರಂಭಿಸಿ ಬಿಟ್ಟಿರಿ" ಎಂದನು. ಸೀತೆಯು "ಅದೇನು ನಾವು ವಿದ್ಯೆ ಕಲಿಯಬಾರದೋ? ಯಾವಾಗಲೂ ಒಲೆಯ ಮಗ್ಗುಲ ಇದ್ದಿಲಾಗಿಯೇ ಇರಬೇಕೋ? ಈ ಕಾಲದಲ್ಲಿ ವಿದ್ಯೆಯಿಲ್ಲದವರು ಪಶುಗಳು" ಎಂದಳು. (ಅದೇ; ಪು.೬೦) ಇಲ್ಲಿ ಸೀತೆಯ ಮಾತಲ್ಲಿ ಹೆಣ್ಣು ಕೇವಲ ಅಡಿಗೆ ಮನೆಯಲ್ಲಿ ಬೇಯಿಸುವ ವ್ಯಕ್ತಿ ಆಗಬಾರದು ಎಂಬ ದಿಟ್ಟ ನಿಲುವು ಗೋಚರವಾಗುತ್ತದೆ. ಇಷ್ಟೇ ಅಲ್ಲದೆ ವಿದ್ಯೆ ಇಲ್ಲದವರು ಪಶುಗಳಿಗೆ ಸಮಾನರಾಗುತ್ತಾರೆ ಎಂಬ ವಾಸ್ತವಾಂಶವೂ ಕೇಳಿ ಬರುತ್ತದೆ. ಕರುಣಾ ತನ್ನ ದಿಟ್ಟತನದ ವರ್ತನೆಯಿಂದ ಹಳ್ಳಿಯ ವಾತಾವರಣದಲ್ಲಿ ಶಿಸ್ತನ್ನು, ಹೊಸ ಹುರುಪನ್ನು ಮೂಡಿಸಿದಳು ಎಂಬ ಲೇಖಕರ ಮಾತು ಇಲ್ಲಿ ಶ್ಲಾಘನೀಯವಾದದ್ದು. ಸೀತೆಯಂತಹ ಹೆಣ್ಣು ಮಕ್ಕಳು ಕರುಣಾಳನ್ನು ಅನುಸರಿಸಿ ತಮ್ಮ ದಿಟ್ಟತನವನ್ನು ಬೆಳೆಸಿಕೊಂಡರು. ಇಂತಹ ದಿಟ್ಟತನ ಅತಿಅಗತ್ಯ ಎಂಬುದನ್ನು ಮತ್ತೆ ಬೇರೆ ಹೇಳಬೇಕಾಗಿಲ್ಲ. ಗಾಂಧಿವಾದಿಯಾದ ಗೊರೂರರವರು ಈ ಅಂಶಗಳನ್ನು ತಮ್ಮ ಕೃತಿಗಳಲ್ಲಿ ಉದ್ದೇಶಪೂರ್ವಕವಾಗಿ ಉಲ್ಲೇಖಿಸಿದ್ದಾರೆ.

'ಮರೆಯಾದ ಮಾರಮ್ಮ' ಕಥಾಸಂಕಲನದ 'ಜಯಮ್ಮನಿಗೆ ಬಂದ ಭಾಗ್ಯ' ಕತೆಯಲ್ಲಿ ಸೋಮನಹಳ್ಳಿಯ ರೈತ ನರಸಪ್ಪ ತನ್ನ ಮಗ ಗುಜ್ಜನಿಗೆ ವಿದ್ಯೆ ಕಲಿಸಬೇಕೆಂದು ನಿರ್ಣಯಿಸಿ ಕಲಿಸಿದ ರೀತಿ ಮೆಚ್ಚುವಂತಹದು. "ಐದು ಮೈಲಿ ದೂರದ ಹಳ್ಳಿಯ ಪ್ರಾಥಮಿಕ ಶಾಲೆಗೆ ಅವನನ್ನು ಸೇರಿಸಿ ಅಲ್ಲಿಯೇ ಒಂದು ಮನೆ ಮಾಡಿ ತನ್ನ ತಂಗಿಯನ್ನೇ ಅಡಿಗೆಗೆ ನಿಯಮಿಸಿದ. ಅಂದಿನ ಕಷ್ಟ ಕಾಲದಲ್ಲಿ ನರಸಪ್ಪನಂತಹ ಬಡ ರೈತ ಇಷ್ಟನ್ನು ಮಾಡಿದುದು ತುಂಬ ದುಬಾರಿಯ ಏರ್ಪಾಟು ಆಯಿತೆಂದೂ, ಇದು ಅವನ ಇದ್ದ ಒಂದೆರೆಡು ಚೂರು ಹೊಲವನ್ನು ಕಳೆದುಕೊಳ್ಳಲು ದಾರಿ ಆಯಿತೆಂದೂ ಊರವರೆಲ್ಲ ಅವನಿಗೆ ಹೇಳಿದರು. ನರಸಪ್ಪ ಮುಂದೆ ಎಸ್.ಎಸ್.ಎಲ್.ಸಿ.ಗೆ ಗುಜ್ಜನನ್ನು ಹಾಸನದಲ್ಲಿ ಹೈಸ್ಕೂಲಿಗೆ ಸೇರಿಸಿದ. ಅಲ್ಲಿ ಒಂದು ಸಂಸಾರವನ್ನೇ ಇಟ್ಟ. ಗುಜ್ಜನ ವಿದ್ಯಾಭ್ಯಾಸಕ್ಕಾಗಿ ಎರಡು ಹೊಲಗಳನ್ನು ಮಾರಿದ. ಆದರೆ ಕೊನೆಯಲ್ಲಿ ಗುಜ್ಜಯ್ಯನಿಗೆ ಸರ್ಕಾರಿ ಶಾಲಾ ಮಾಸ್ತರ ಉದ್ಯೋಗ ದೊರೆಯಿತು. ಹೀಗೆ ಗುಜ್ಜ ಸೋಮನಹಳ್ಳಿಯಲ್ಲಿ ಮೊದಲ ವಿದ್ಯಾವಂತನಾದ, ಸರ್ಕಾರಿ ಶಾಲಾ ಮಾಸ್ತರ ಉದ್ಯೋಗವನ್ನು ಪಡೆದ ಮೊದಲ ವ್ಯಕ್ತಿಯಾದ. ಪಟೇಲರ ಮಗಳು ಜಯಮ್ಮ ಈ ಕಾರಣಕ್ಕಾಗಿಯೇ ಗುಜ್ಜನನ್ನು ಮದುವೆಯಾದಳು". (ಗೊರೂರು ರಾಮಸ್ವಾಮಿ ಅಯ್ಯಂಗಾರ;೨೦೦೪; ಪು.೧೮೩) ಇಲ್ಲಿ ನರಸಪ್ಪ ಮಗನ ವಿದ್ಯಾಭ್ಯಾಸಕ್ಕಾಗಿ ತೋರಿಸಿದ ಉತ್ಸಾಹ ಅಂದಿನ ಕಾಲಕ್ಕೆ ಗ್ರಾಮೀಣ ಪ್ರದೇಶದಲ್ಲಿ ವಿಶೇಷ ಸಂಗತಿ ಯಾಗಿತ್ತು. ಗ್ರಾಮೀಣ ಪ್ರದೇಶದವರು ವಿದ್ಯಾಭ್ಯಾಸದಲ್ಲಿ ಆಸಕ್ತರಾದರು ಎಂಬುದಕ್ಕೆ ನಿದರ್ಶನವಾಗಿ ಗೊರೂರರವರು ಈ ಕತೆಯನ್ನು ಹೇಳಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ವಿದ್ಯೆಯ ಪ್ರಚಾರ ಆದ ಮೇಲೆ ಓದದವರನ್ನು ಕಂಡಾಗ ಸ್ವಲ್ಪ ಹಂಗಿಸಿ ಮಾತಾಡುವ ಪರಿಪಾಠವಿತ್ತು. ಇಂಥ ಹಾಸ್ಯದ ಸ್ಥಿತಿ ಬರಬಾರದೆಂದು ವಿದ್ಯೆ ಕಲಿತ್ತಿದ್ದುಂಟು. 'ನಮ್ಮೂರಿನ

ರಸಿಕರು' ಪ್ರಬಂಧ ಸಂಕಲನದಲ್ಲಿ ಬೋರೇಗೌಡ ಜೈಮಿನಿ ಭಾರತ ಓದಿದ ಪ್ರಸಂಗವನ್ನು ಲೇಖಕರು ಸ್ವಾರಸ್ಯವಾಗಿ ಹೇಳಿದ್ದಾರೆ. ಕೂಲಿ ಮಠದಲ್ಲಿ ಐದು ವರ್ಷ ಓದಿದ ಬೋರೇಗೌಡನಿಗೆ ಅವನು ಅವರಪ್ಪನ ಸಂಗಡ ಮಾವನ ಮನೆಗೆ ಹೋದಾಗ ಅವರ ಅತ್ತೆ ಮಾವ "ಅಳೇ ಮೈದೀರಾಗೋರ್ನೈಲಿ ಜೈಮಿನಿ ಓದ್ಸಿ. ಕೂಲಿ ಮಠದಲ್ಲಿ ಐದು ವರ್ಸ ಓದವರಲ್ಲಾ ಅಂದರು. ನನ್ನ ಭಾವಮೈದ ರಟ್ಟೆಲ್ಲಾ ಹರಿದು ಹೋಗಿ ನಾಯಿಯ ಕಿವಿಗಳಂತೆ ಹಾಳೆಗಳು ಮುಡಿದುಕೊಡಿದ್ದ ಒಂದು ಹಳೆಯ ಜೈಮಿನಿ ಭಾರತವನ್ನು ನನ್ನ ಮುಂದೆ ಇಟ್ಟ. ನಮ್ಮಪ್ಪ 'ಓದ್ಲಾ' ಅಂದ್ರು. ನನ್ಗೊ ಪುಸ್ಕಾ ತಕೊಂಡ ಕೂಡಲೆ ಕೈಯೆಲ್ಲಾ ನಡ್ಕಾ ಹತ್ಕೊಂಡ್ತು. ಮೈಯೆಲ್ಲಾ ಬೆವತ್ಕೊಂಡ್ತು. ಎದುರಿಗೆ ನಮ್ಮತ್ತೆ ಮಾವ ಭಾಮೈದು ಎಲ್ಲಾ ನನ್ನಡೇ ನೋಡ್ತಾ ಕೂಚ್ಚಿಟ್ಟಿದ್ರು. ನನ್ನ ನಾಲ್ಗೆ ಅಂಟ್ಕೊಂಬಿಡ್ತು. ಬಾಯಿಂದ ಮಾತೇ ಹೊರಡ್ಲಿಲ್ಲ. ನಾನೇನೋ ಬಾರಿ ಮಾತುಗಾರನೆಂದು ಕೇಳಿದ್ದ ನಮ್ಮತ್ತೆ ಮಾವಂದಿರು 'ಅಷ್ಟೆಯೇ' ಎಂದರು. ಮದ್ವೆ ಆದ್ಮೇಲೆ ಎರಡು ಮೂರು ವರ್ಷ ಕಷ್ಟಪಟ್ಟು ಓದಿ ಏನೋ ನಾಲ್ಕಕ್ಸರ ಕಲಿತೆ. ಜೈಮಿನಿ ಭಾರತ ಬಿಟ್ಟರೆ ಇನ್ಯಾವ ಪುಸ್ತಕ ಓದೋಕೂ ನನ್ಗೆ ಈಗ್ಲೂ ಬರೋದಿಲ್ಲ. ಈಗ್ಲೂ ನನ್ನ ಮನೆ ಹೆಂಗಸು 'ನನ್ನಿಂದ ನೀವು ಭಾರತ ಕಲಿತ್ರಿ' ಅಂತ ಗೇಲಿ ಮಾಡ್ತಾಳೆ" ಎಂದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೧೦೫) ಈ ಪ್ರಸಂಗದಲ್ಲಿ ಗೊರೂರವರು ವಿದ್ಯೆ ಇಲ್ಲದವನ ಸ್ಥಿತಿಯನ್ನು ಮಾರ್ಮಿಕನಾಗಿ ತಿಳಿಸಿರುವುದು ಗಮನಾರ್ಹವಾದ ಸಂಗತಿ. ವಿದ್ಯೆಗೆ ಪುರಸ್ಕಾರ ಗ್ರಾಮೀಣ ಪ್ರದೇಶದಲ್ಲಿ ಕಾಲ ಕ್ರಮೇಣ ಕಂಡುಬಂದಿದೆ.

ಶಿಕ್ಷಣ ಕ್ಷೇತ್ರದಲ್ಲಿ ಒಂದು ಪ್ರಗತಿಯನ್ನು ಕಾಣಬೇಕಾದರೆ ಶಿಕ್ಷಕನು ತನ್ನ ಕರ್ತವ್ಯದಲ್ಲಿ ಪ್ರಾಮಾಣಿಕನಾಗಿ ಇರಬೇಕು. ಶಿಕ್ಷಕನ ಬೇಜಾವಾಬ್ದಾರಿತನ ಅವನ ವೃತ್ತಿಗೆ ಅಗೌರವವನ್ನು ತರುತ್ತದೆ. ಅಷ್ಟೇ ಅಲ್ಲದೆ ಆತನಿಂದ ಉದ್ಧಾರವಾಗಬೇಕಾಗಿದ್ದ ಪ್ರಗತಿಯನ್ನು ಪಡೆಯಲು ಆಗುವುದಿಲ್ಲ. ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಶಿಕ್ಷಕನು ತನ್ನ ವೃತ್ತಿ ಗೌರವವನ್ನು ಮರೆತು ಬೇಜಾವಾಬ್ದಾರಿಯನ್ನು ತೋರಿಸುವುದು ಬಹಳ ಮಟ್ಟಿನ ಹಳ್ಳಿಯ ಶಾಲೆಗಳ ದುಃಸ್ಥಿತಿಯಾಗಿರುತ್ತದೆ. ಗೊರೂರವರ ಕೃತಿಗಳಲ್ಲಿ ಶಿಕ್ಷಕನ ಬೇಜಾವಾಬ್ದಾರಿತನಕ್ಕೆ ಅನೇಕ ಉದಾಹರಣೆಗಳನ್ನು ದಾಖಲಿಸಬಹುದು. 'ಗೋಪುರದ ಬಾಗಿಲು' ಕಥಾ ಸಂಕಲನದ 'ಕತ್ತರಿ ಪ್ರಯೋಗ' ಕತೆಯಲ್ಲಿ ಕೆಟ್ಟ ಉಪಾಧ್ಯಾಯ ದೇವಯ್ಯನ ವಿಚಾರ ಬರುತ್ತದೆ. ದೇವಯ್ಯನ ದುಷ್ಟತನದ ಪರಿಣಾಮವನ್ನು ಶಾಲೆಯ ಏನೂ ಅರಿಯದ ಮಕ್ಕಳೂ, ಹಿರಿಯರು ಸಮಾನ ವಾಗಿ ಅನುಭವಿಸುತ್ತಿದ್ದರು. ದೇವಯ್ಯ ಶಾಲೆಯಲ್ಲಿ ಪಾಠಗಳನ್ನು ಮಾಡುತ್ತಿರಲಿಲ್ಲ. ಪಾಠಕ್ಕೆ, ಮನೆಯಲ್ಲಿ ಸಿದ್ಧತೆಯನ್ನು ಮಾಡಿಕೊಂಡು ಬರುತ್ತಿರಲಿಲ್ಲ. ಅವನು ಇದ್ದುದು ಒಬ್ಬನೇ ಉಪಾಧ್ಯಾಯರಿದ್ದ ಶಾಲೆ. ಆ ಶಾಲೆಯಲ್ಲಿ ಅವನು ಮೂರು ತರಗತಿಗಳನ್ನು ನಡೆಸಬೇಕಾಗಿದ್ದಿತು. ದೇವಯ್ಯ ಯಾವ ತರಗತಿಯನ್ನು ನಡೆಸುತ್ತಿರಲಿಲ್ಲ. ಅವನು ಯಾವಾಗಲೂ ಕಾದಂಬರಿಯನ್ನು ಓದುತ್ತಾ, ತರಗತಿಯಲ್ಲಿ ಕುಳಿತಿರುತ್ತಿದ್ದನು. ದೇವಯ್ಯನಿಗೆ ಅಂತಹ ವಾಚನ ಶ್ರದ್ಧೆಯಾಗಲಿ, ಜ್ಞಾನ ಪಿಪಾಸೆಯಾಗಲೀ ಅಥವಾ ಸಾಹಿತ್ಯಾಭಿರುಚಿಯಾಗಲೀ

ಇರಲಿಲ್ಲ. ಹುಡುಗರಿಗೆ ಪಾಠಗಳನ್ನು ಹೇಳಲು ಅವನಿಗೆ ಮೈ ಬಗ್ಗುತ್ತಿರಲಿಲ್ಲ. ಆದುದರಿಂದ ಅವನು ಪಾಠಶಾಲೆಯಲ್ಲಿ ಕಾಲವನ್ನು ಕಳೆಯುವುದಕ್ಕಾಗಿ ಮಾತ್ರವೇ ಯಾವುದಾದರೂ ಕಾದಂಬರಿಯನ್ನು ಕೈಯಲ್ಲಿ ಹಿಡಿದುಕೊಳ್ಳುತ್ತಿದ್ದನು. ಹುಡುಗರಿಗೆ "ಇಂತಹ ಪಾಠವನ್ನು ನೀವು ಓದಿಕೊಳ್ಳಿ" ಎಂದು ಹೇಳಿಬಿಟ್ಟು, ಉಪಾಧ್ಯಾಯರು ಕಾದಂಬರಿಯ ಹಾಳೆಯ ಮೇಲೆ ಕಣ್ಣಿಟ್ಟು ಕೈಯಲ್ಲಿ ಉಂಗುರದ ಸರಪಣಿಯನ್ನು ತಿರುಗಿಸುತ್ತಾ ಏನನ್ನೋ ಯೋಚಿಸುತ್ತಾ ಕುಳಿತಿರುತ್ತಿದ್ದರು. ಹಾಗೆಯೇ ಇದ್ದಕ್ಕಿದ್ದಂತೆ ಅವರಿಗೆ ತೂಕಡಿಕೆಯೂ ಬರುತ್ತಿದ್ದಿತು. ಅವರಿಗೆ ತೂಕಡಿಕೆ ಬರುತ್ತಿದ್ದಂತೆ, ವಿದ್ಯಾರ್ಥಿಗಳಿಗೂ ಬರುತ್ತಿದ್ದಿತು. ಉಪಾಧ್ಯಾಯರು ಕಣ್ಣು ಬಿಟ್ಟಾಗ ಯಾವನಾದರೂ ವಿದ್ಯಾರ್ಥಿ ತೂಕಡಿಸುತ್ತಿರುವುದು ಅವರ ಕಣ್ಣಿಗೆ ಕಂಡರೆ, ಅವರು ತಮ್ಮ ಕೈಯಲ್ಲಿದ್ದ ಬೀಗದ ಕೈ ಸರಪಳಿಯ ಸರವನ್ನು ತಮ್ಮ ಶಕ್ತಿಯನ್ನೆಲ್ಲ ಬಿಟ್ಟು ಹುಡುಗನ ಮೇಲೆ ಎಸೆಯುತ್ತಿದ್ದರು. ಅವರು ಬಿಟ್ಟ ಏಟು ವಿದ್ಯಾರ್ಥಿಗೆ ಹೆಚ್ಚಾಗಿಯೇ ಪೆಟ್ಟು ಆಗುತ್ತಿದ್ದಿತ್ತು. ಉಪಾಧ್ಯಾಯರ ಬೀಗದ ಕೈ ಸರವನ್ನು ಕದ್ದು ಅದನ್ನು ಬಾವಿಗೆ ಹಾಕಿ ಬಿಡಬೇಕೆಂದು ವಿದ್ಯಾರ್ಥಿಗಳು ಬಹಳ ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೪; ಪು.೧೮೭-೧೮೮) ಇಲ್ಲಿ ಉಪಾಧ್ಯಾಯನು ತನ್ನ ಕರ್ತವ್ಯದಲ್ಲಿ ಎಂತಹ ನಿರುತ್ಸಾಹಿ ಮೈಗಳ್ಳ ಎಂಬುದು ಗೊತ್ತಾಗುತ್ತದೆ. ಶಿಕ್ಷಕರಿಗೆ ಯೋಗ್ಯತೆ ಇಲ್ಲದಿದ್ದರೂ ಮಕ್ಕಳಿಗೆ ಶಿಕ್ಷೆ ಕೊಡುವ ಧೂರ್ತತನ ಇತ್ತು ಎಂಬುದು ಮುಖ್ಯವಾದ ಸಂಗತಿಯಾಗಿದೆ. ಕಳ್ಳ ಮೇಷ್ಟ್ರು ದೇವಯ್ಯನನ್ನು ಯಾವ ಊರಿಗೆ ವರ್ಗ ಮಾಡಿದರೂ ಆ ಊರಿನ ಜನ ದೇವಯ್ಯ ನಮಗೆ ಬೇಡ ಎಂದು ಮೊದಲೇ ತಿಳಿಸಿಬಿಡುತ್ತಿದ್ದರು. ಶಿಕ್ಷಕ ಇಂತಹ ಅವಮಾನಕ್ಕೂ ಗಮನ ಕೊಡದ ದಪ್ಪ ಚರ್ಮದವರು ಆಗಿದ್ದರು.

'ಹಳೆಯಪಳೆಯ ಮುಖಗಳು' ಪ್ರಬಂಧ ಸಂಕಲನ 'ಬಾಬ ಪ್ರಭಾವ' ಎಂಬ ಪ್ರಬಂಧದಲ್ಲಿ ಕಂಡು ಬರುವ ಅಧ್ಯಾಪಕ ನರಸಿಂಹನ ಚಿತ್ರವೂ ಸಹ ಶಿಕ್ಷಕ ವೃತ್ತಿಗೆ ಅವನು ತೋರಿಸಿದ ಬೇಜಾವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ. "ನರಸಿಂಹ ಮೊದಲು ಕೆಲವು ದಿನ ಹಳ್ಳಿಯ ಪ್ರಾಥಮಿಕ ಶಾಲೆಯ ಉಪಾಧ್ಯಾಯನಾಗಿದ್ದನು. ಆಗ ಉಪಾಧ್ಯಾಯ ಕೆಲಸ ಸುಲಭವಾಗಿ ಸಿಕ್ಕುತ್ತಿತ್ತು. ಪಾಠ ಶಾಲೆಯ ಬಾಗಿಲನ್ನೇ ತೆರೆಯದೆ, ಎರಡು ಮೂರು ವರುಷ ಸಂಬಳ ತೆಗೆದುಕೊಂಡ. ಊರಿನವರು ಸರ್ಕಾರಕ್ಕೆ ದೂರು ಕೊಟ್ಟರೂ ಏನೂ ಪ್ರಯೋಜನವಾಗಲಿಲ್ಲ. ಆಗ ಊರಿನವರೆಲ್ಲ ಅವನನ್ನು ಓಡಿಸಿಕೊಂಡು ಹೋಗಿ, ಊರಿಂದ ಒಂದು ಮೈಲಿ ಆಚೆಗೆ ಕಳುಹಿಸಿ, ಮತ್ತೆ ಬಂದರೆ ಸೊಂಟ ಮುರಿಯುವುದಾಗಿ ಹೆದರಿಸಿದರು. ನರಸಿಂಹನಿಗೆ ಸೊಂಟ ಮುರಿಸಿಕೊಳ್ಳುವ ಧೈರ್ಯ ಇರಲಿಲ್ಲ. ಅವನದು ಯಾವಾಗಲೂ ಸಣ್ಣ ಉಪಾಯ, ತಂತ್ರ, ಕೀಟಲೆ, ಆಷಾಢಭೂತಿತನ. ನಂತರ ಅವನು ಶಿಕ್ಷಣಾ ಕಾರ್ಯವನ್ನು ಬಿಟ್ಟ". (ಗೊರೂರು ರಾಮಸ್ವಾಮಿ ಅಯ್ಯಂಗಾರ; ೨೦೦೪; ಪು.೫೯) ಇಲ್ಲಿ ಶಿಕ್ಷಕನ ಕರ್ತವ್ಯ ಲೋಪ ಎದ್ದು ಕಾಣುತ್ತದೆ. ಇಂತಹ ಶಿಕ್ಷಕನ ವಿರುದ್ಧ ಸರ್ಕಾರಕ್ಕೆ ಊರಿನವರು ದೂರು ಕೊಟ್ಟರೂ ಸರ್ಕಾರ ಮೌನವಾಗಿದ್ದುದು ಅವರ ನಿಷ್ಕ್ರಿಯತೆಗೆ ಸಾಕ್ಷಿಯಾಗಿರುತ್ತದೆ. ಹಳ್ಳಿಯ ಶಾಲೆಯ ದುಃಸ್ಥಿತಿಗೆ ಸರ್ಕಾರದ

ಈ ರೀತಿಯ ನಿಷ್ಕ್ರಿಯತೆಯು ಒಂದು ಕಾರಣ ಎಂಬುದನ್ನು ಲೇಖಕರು ಸೂಚಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಬೇಜಾವಾಬ್ದಾರಿ ಶಿಕ್ಷಕರ ವಿರುದ್ಧ ಗ್ರಾಮಸ್ಥರೇ ಶಿಕ್ಷೆಯ ಕ್ರಮವನ್ನು ಅನಿವಾರ್ಯವಾಗಿ ಕೈಗೊಳ್ಳುತ್ತಿದ್ದರು ಎಂಬುದಕ್ಕೆ ಈ ಮೇಲಿನ ಘಟನೆ ಉತ್ತಮ ಉದಾಹರಣೆ ಆಗಿದೆ.

ಬೇಜಾಬ್ದಾರಿ ಶಿಕ್ಷಕರು ತಮ್ಮ ಹಿರಿಯ ಅಧಿಕಾರಿಗಳ ಕೈಯಿಂದ ಜಾರಿಕೊಳ್ಳಲು ತೋರಿಸುವ ಜಾಣ್ಮೆ ಅಷ್ಟೇ ಕುತೂಹಲಕಾರಿಯಾಗಿದೆ. ಗ್ರಾಮೀಣ ಪರಿಸರದಲ್ಲಿ ಖದೀಮ ಶಿಕ್ಷಕರಿಗೆ ಕೊರತೆ ಏನೂ ಇಲ್ಲ ಎಂಬುದನ್ನು ಗೊರೂರರವರು ಖಚಿತಪಡಿಸಲು ಒಂದು ಉದಾಹರಣೆ ಹೀಗಿದೆ. “ಒಂದು ಸಲ ತಿಪ್ಪಯ್ಯ ಉಪಾದ್ರು ಚೆನ್ನಾಚಾರಿಯ ಕುದುರೆ ಏರಿಕೊಂಡು ಸ್ವಂತ ಕೆಲಸಕ್ಕೆ ಹೋಗಿದ್ದರು. ಪದ್ಧತಿಯಂತೆ ಶಾಲೆಯ ರಿಜಿಸ್ಟರಿನಲ್ಲಿ ರಜಾ ರಿಪೋರ್ಟನ್ನು ಇಟ್ಟಿದ್ದರು. ಹಾಸನ ಪೇಟೆಯ ಬಾಗಿಲಿಗೆ ಬರುವ ವೇಳೆಗೆ ಎದುರಿಗೆ ಇನಿಸ್ಪೆಕ್ಟರ್ ಸಾಹೇಬರು ಬರುತ್ತಿರುವುದು ಉಪಾದ್ರ ಕಣ್ಣಿಗೆ ಬಿದ್ದಿತು. ತಿಪ್ಪಯ್ಯ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟರು ಆಗಲಿಲ್ಲ. ಇನಿಸ್ಪೆಕ್ಟರ್ “ಏನು ತಿಪ್ಪಯ್ಯ ಉಪಾದ್ರೆ ಮಲ್ಲಿಗೆಹಳ್ಳಿಯಿಂದ ಯಾವಾಗ ಬಂದಿರಿ?” ಎಂದು ಕೇಳಿದರು. ಆಗ ತಕ್ಷಣ ತಿಪ್ಪಯ್ಯ “ಸ್ವಾಮಿ ನನ್ನ ಹೆಸರು ತಿಪ್ಪಯ್ಯನಲ್ಲ. ನಾನು ಮಲ್ಲಿಗೆಹಳ್ಳಿಯಿಂದ ಬರಲಿಲ್ಲ. ತಾವು ಯಾರೋ ನನಗೆ ತಿಳಿಯದು” ಎಂದು ಕುದುರೆಯನ್ನು ಮುಂದುವರಿಸಿದನು. ಇಷ್ಟಾದರೂ ಇನಿಸ್ಪೆಕ್ಟರಿಗೆ ಹೆದರದೆ ತಿಪ್ಪಯ್ಯ ಮಲ್ಲಿಗೆಹಳ್ಳಿಗೆ ಹೋಗಿ ಶಾಲೆಯಲ್ಲಿ ಕುಳಿತರು. ಇನಿಸ್ಪೆಕ್ಟರ್ ತಿಪ್ಪಯ್ಯನ ಮೋಸವನ್ನು ಎಷ್ಟು ರೀತಿಯಲ್ಲಿ ಚಾಣಾಕ್ಷತನದಿಂದ ಕಂಡುಕೊಳ್ಳಲು ಪ್ರಯತ್ನಪಟ್ಟರು, ಅದಕ್ಕೂ ಮೀರಿದ ಚಾಣಾಕ್ಷತನದಲ್ಲಿ ತಿಪ್ಪಯ್ಯ ಜಾರಿಕೊಳ್ಳುತ್ತಾನೆ”. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು.೭೩-೭೪) ಈ ನಿದರ್ಶನದಲ್ಲಿ ಹಿರಿಯ ಅಧಿಕಾರಿ ಕಿರಿಯ ಅಧಿಕಾರಿಯ ತಪ್ಪನ್ನು ಕಂಡುಹಿಡಿಯಲು ಎಷ್ಟು ಜಾಣ್ಮೆಯಿಂದ ಪ್ರಯತ್ನಿಸುತ್ತಾರೆ ಎಂಬುದು ಇಲ್ಲಿ ವ್ಯಕ್ತವಾಗಿದೆ. ಪಾಠ ಮಾಡಲು ಬೇಜಾಬ್ದಾರರಾದ ಅಧ್ಯಾಪಕರು ತಮ್ಮ ತಪ್ಪಿನಿಂದ ನುಣಿಚಿಕೊಳ್ಳಲು ಎಂಥ ಪ್ರಚಂಡ ಜಾಣ್ಮೆಯನ್ನು ತೋರಿಸುತ್ತಾರೆ ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿ ‘ಮೆರವಣಿಗೆ’ ಕಾದಂಬರಿಯಲ್ಲಿ ಮೂಡಿ ಬಂದಿದೆ.

ಗ್ರಾಮೀಣ ಶಾಲೆಗಳಲ್ಲಿ ಶಿಕ್ಷಕರು ಪರಸ್ಪರ ಜಗಳ ಆಡುವ ಘಟನೆಗಳು ಸಾಕಷ್ಟು ಕಂಡುಬರುತ್ತದೆ. “ಮಲ್ಲಿಗೆಹಳ್ಳಿಯಲ್ಲಿ ಒಮ್ಮೆ ಇಂಗ್ಲೀಷ್ ಶಿಕ್ಷಕರಿಗೂ ಹೆಡ್ಮಾಸ್ಟರಿಗೂ ಶಾಲೆಯಲ್ಲಿ ಹುಡುಗರ ಎದುರಿಗೇ ವ್ಯಾಜ್ಯಹತ್ತಿ ಒಬ್ಬರು ಕುರ್ಚಿಯನ್ನು ಒಬ್ಬರು ಬೋರ್ಡನ್ನು ಹಿಡಿದುಕೊಂಡು ಹೊಡೆದಾಡಲು ಪ್ರಾರಂಭಿಸಿದ್ದುದರಿಂದ, ಲೋವರ್ ಸೆಕೆಂಡರಿ ಪರೀಕ್ಷೆಗೆ ನಿಯಮಿತವಾಗಿದ್ದ ಪಾಠ ಭಾಗ ಪೂರ್ತಿ ಮುಗಿಯಲಿಲ್ಲ. ಉಪಾಧ್ಯಾಯರು ಹೀಗೆ ಶಾಲೆಯಲ್ಲಿ ಒಬ್ಬರ ಮೇಲೆ ಒಬ್ಬರು ಕುಸ್ತಿ ಮಾಡಿದುದಲ್ಲದೆ, ಪಾಠ ಹೇಳುವ ಕಾಲದಲ್ಲಿಯೂ ಪಾಠವನ್ನು ಮರೆತು ಹುಡುಗರೊಂದಿಗೆ ತಮ್ಮ ತಮ್ಮ ವ್ಯಾಜ್ಯದ ವಿಷಯವನ್ನೇ ಕುರಿತು ಮಾತನಾಡುತ್ತಿದ್ದರು. ಸಹಾಯೋಪಾಧ್ಯಯರು ಯಾವಾಗಲೂ ಹುಡುಗರನ್ನು ಎಲೆ,

ಅಡಿಕೆ, ಸುಣ್ಣ ಇವುಗಳನ್ನು ತೆಗೆದುಕೊಂಡು ಬರಲು ಮನೆಗೆಅಟ್ಟುತ್ತಿದ್ದರು. ಮೇಷ್ಟ್ರು ಎಲೆ ಅಡಿಕೆ ಅಗಿಯುತ್ತಾ ಕೈಯಲ್ಲಿ ಒಂದು ಕತೆ ಪುಸ್ತಕ ಹಿಡಿದುಕೊಂಡು ಹೊಗೆ ಸೊಪ್ಪಿನ ರಸವನ್ನು ಉಗುಳಲು ಪದೇ ಪದೇ ಹೊರಕ್ಕೆ ಹೋಗುತ್ತಿದ್ದರು. ಅನೇಕ ವೇಳೆ ಎದ್ದು ಹೋಗಲು ಇಷ್ಟವಿಲ್ಲದೆ ಒಂದು ಕಾಗದದ ಒಂದು ಚೂರನ್ನು ಹರಿದು ಅದನ್ನು ದುಂಡಗೆ ಪೊಟ್ಟಣದಂತೆ ಮಾಡಿ ಅದಕ್ಕೆ ಎಲೆ ಅಡಿಕೆ ಉಗಿದು ಹೊರಗೆ ಹಾಕುವಂತೆ ಹುಡುಗರ ಕೈಯಲ್ಲಿ ಕೊಡುತ್ತಿದ್ದರು. ಸಹಾಯೋಪಾಧ್ಯಯರು ಹುಡುಗರಲ್ಲಿ ಕೆಲವರನ್ನು ತಮ್ಮ ಕಡೆಗೆ ಮಾಡಿಕೊಂಡು ತಿಪ್ಪಯ್ಯ ಹೆಡ್ಮಾಸ್ಟರ ಮೇಲೆಯೇ ಕೈ ಬಲ ಮಾಡಿದರು". (ಅದೇ; ಪು. ೧೨೬-೧೨೭) ಈ ಘಟನೆಯ ಮೂಲಕ ಗೊರೂರರವರು ಹಳ್ಳಿ ಶಾಲೆಯ ಶಿಕ್ಷಕರ ದುಷ್ಟತನವನ್ನು ಚಿತ್ರಿಸಿದ್ದಾರೆ. ಇದೇ ಘಟನೆಯಲ್ಲಿ ಪ್ರಶ್ನೆಪತ್ರಿಕೆ ಬರೆಯಲು ಬಾರದ ಅನೇಕ ಶಿಕ್ಷಕರನ್ನು ಗೊರೂರರವರು ಉದಾಹರಣೆಯಾಗಿ ಕೊಡುತ್ತಾರೆ. ಭೀಮಯ್ಯನಂತಹ ಉಪಾಧ್ಯಾಯರು ತಮ್ಮ ಶುದ್ಧ ಶುಂಠಕಾಯಿ ಮಗ, ಹನುಮಯ್ಯನ ಮೂಲಕ ವಿದ್ಯಾರ್ಥಿಗಳ ಉತ್ತರಗಳನ್ನು ಪರೀಕ್ಷಿಸಿ ನಂಬರುಗಳನ್ನು ಹಾಕುತ್ತಿದ್ದುದು. ಇಂಥ ಕೆಟ್ಟ ವರ್ತನೆಗೆ ಬೇಸರಗೊಂಡ ಸುದರ್ಶನ ಭೀಮಯ್ಯನಿಗೆ ಪಾಠ ಕಲಿಸಿದ ರೀತಿಯೂ ಸೊಗಸಾಗಿದೆ. ಶಿಕ್ಷಕನ ಕರ್ತವ್ಯ ಲೋಪಕ್ಕೆ ಭೀಮಯ್ಯನ ಮೌಲ್ಯಮಾಪನ ಕಾರ್ಯವೂ ಒಂದು ಉತ್ತಮ ಉದಾಹರಣೆಯಾಗಿದೆ. ಇಲ್ಲಿಯು ಶಿಕ್ಷಕನ ಬೇಜಾಬ್ದಾರಿತನ ನಮಗೆ ಮನವರಿಕೆಯಾಗುತ್ತದೆ.

ಅನೇಕ ಶಾಲೆಗಳಲ್ಲಿ ಶಿಕ್ಷಕರಲ್ಲಿ ಒಳ ಪಂಗಡಗಳು ಇರುವುದನ್ನು ವಿದ್ಯಾರ್ಥಿಗಳಿಗೆ ಅದರಿಂದ ಆಗುವ ದುಷ್ಪರಿಣಾಮಗಳನ್ನು ಕುರಿತು ಲೇಖಕರು ಮಲ್ಲಿಗೆಹಳ್ಳಿ ಶಾಲೆಯ ಒಂದು ಪ್ರಸಂಗವನ್ನು ಉದಾಹರಣೆಯಾಗಿ ಕೊಡುತ್ತಾರೆ. ಅದು ಶಾಲೆಯ ಗಣಪತಿ ವಿಸರ್ಜನಾ ಸಮಾರಂಭ. ಹೆಡ್ಮಾಸ್ಟರಿಂದ ಕಿರುಕುಳಕ್ಕೆ ಒಳಗಾಗಿದ್ದ ಕೆಲವು ಶಿಕ್ಷಕರು ಸಮಯ ಕಾಯುತ್ತಿದ್ದು ಅಂದು ಗಣಪತಿ ವಿಸರ್ಜನಾ ಉತ್ಸವವನ್ನು ಮುಖ್ಯೋಪಾಧ್ಯಾಯರು ಇಲ್ಲದೆ ಕೆಲವು ಶಿಕ್ಷಕರು ವಿದ್ಯಾರ್ಥಿಗಳಿಗೆ ತಾಕೀತು ಮಾಡಿ ನಡೆಸಿ ಮುಖ್ಯೋಪಾಧ್ಯಾಯರ ಮೇಲಿನ ಸೇಡನ್ನು ತೀರಿಸಿಕೊಂಡರು. ಇಂತಹ ಘಟನೆಗಳು ಗ್ರಾಮೀಣ ಶಾಲೆಗಳಲ್ಲಿ ಕಂಡುಬರುವುದು ಸರ್ವೇ ಸಾಮಾನ್ಯ ಎಂಬುದನ್ನು ಗೊರೂರರವರು ತಿಳಿಸಿದ್ದಾರೆ. ಶಾಲೆಯ ಚಟುವಟಿಕೆಗಳಲ್ಲಿ ಕಂಡುಬರುವ ಆಭಾಸಕ್ಕೆ ಶಾಲೆಯ ಶಿಕ್ಷಕರಲ್ಲಿ ಪರಸ್ಪರ ಇರುವ ಅಸಮಾಧಾನವೇ ಮೂಲ ಕಾರಣ ಎಂಬುದನ್ನು ಇಲ್ಲಿ ಗುರುತಿಸಬಹುದು. ಗ್ರಾಮೀಣ ಶಾಲೆಗಳು ಸ್ಥಳಾವಕಾಶವಿಲ್ಲದೆ ಒಂದು ಕುರಿ ರೊಪ್ಪದಂತೆ ಇರುವುದು ವಿಷಾದನೀಯ ಸಂಗತಿ. ಹೊಸೂರು ಶಾಲೆ ಇದಕ್ಕೊಂದು ಉತ್ತಮ ನಿದರ್ಶನ. ಇಲ್ಲಿಯ ಶಾಲಾ ಅಧ್ಯಾಪಕರು ಪಾಠ ಮಾಡುವುದಕ್ಕಿಂತ ಕೇರ್ ಉಪಾಹಾರವನ್ನು ತಯಾರಿಸು ವುದರಲ್ಲಿಯೇ ಹೆಚ್ಚು ಆಸಕ್ತರು. ಒಬ್ಬ ಉಪಾಧ್ಯಾಯರು ಭಟ್ಟರು ಮತ್ತೊಬ್ಬ ಉಪಾಧ್ಯಾಯಿನಿ ಕೊತ್ತಂಬರಿ ಸೊಪ್ಪು ಮೆಣಸಿನಕಾಯನ್ನು ಈರುಳ್ಳಿಯನ್ನು ಹಚ್ಚುತ್ತಿದ್ದರು. ಎಲ್ಲಾ ವಿದ್ಯಾರ್ಥಿಗಳು ಲೋಟ ತಟ್ಟೆಯನ್ನು ಇಟ್ಟುಕೊಂಡು ತಿಂಡಿಗಾಗಿ ತಟ್ಟೆ ಬಡೆಯುತ್ತಿದ್ದರು. ಹೀಗೆ ಪಾಠ ಶಾಲೆ ಅಡುಗೆ ಮನೆಯಾಗಿ ಶಿಸ್ತು ಕಳೆದುಕೊಂಡಿರುವುದನ್ನು ಇನಿಸ್ಪೆಕ್ಟರ್‌ರವರು ಕೂಡ ನೋಡಿ ಅಸಹಾಯಕತೆಯಿಂದ

ಸುಮ್ಮನಾಗುತ್ತಾರೆ. ಇದು ಸಹ ಹಳ್ಳಿಯ ಶಾಲೆಯ ದುಃಸ್ಥಿತಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಇದೇ ಘಟನೆಯಲ್ಲಿ ಶಾಲೆಗೆ ಪುಸ್ತಕ ಸ್ಲೇಟು ತರದ ವಿದ್ಯಾರ್ಥಿಗಳು ತರಕಾರಿ ತಟ್ಟೆಯನ್ನು ಹಿಡಿದುಕೊಂಡು ಬಂದಿರುವುದನ್ನು ಗಮನಿಸಿದ ಇನಿಸ್ಪೆಕ್ಟರ್‌ರವರು ಪಾಠ ಶಾಲೆ ಅಡುಗೆಮನೆ ಆಯ್ತು ಎಂದು ತಮ್ಮ ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಾರೆ.

ಶಿಕ್ಷಣದಲ್ಲಿ ಶಿಸ್ತು ಎಷ್ಟು ಮುಖ್ಯವೋ ಶಿಕ್ಷೆಯೂ ಅಷ್ಟೇ ಮುಖ್ಯವಾದದ್ದು ಎಂಬ ಅಭಿಪ್ರಾಯ ವಿದೆ. ಬಾಲ್ಯದಲ್ಲಿ ಮಕ್ಕಳಿಗೆ ಶಿಕ್ಷೆ ಇಲ್ಲದಿದ್ದರೆ ಸರಿಯಾದ ಶಿಕ್ಷಣವನ್ನು ಪಡೆಯಲಾಗುವುದಿಲ್ಲ ಎಂಬುದು ಬಹುಮಟ್ಟಿನ ಶಿಕ್ಷಕರ ಅಭಿಪ್ರಾಯವಾಗಿದೆ. ಅದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕರು ವಿದ್ಯಾಭ್ಯಾಸದಲ್ಲಿ ಹಿಂದಿರುವ ವಿದ್ಯಾರ್ಥಿಗಳಿಗೆ ತೀವ್ರವಾದ ಶಿಕ್ಷೆಯನ್ನು ಕೊಟ್ಟು ತಮ್ಮ ಶಿಕ್ಷೆಯನ್ನು ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಸಮರ್ಥಿಸಿಕೊಳ್ಳುತ್ತಿದ್ದರು. ಜೋಡಿದಾರರು ತಮ್ಮ ಮಗನಿಗೆ ಶಿಕ್ಷೆ ಕೊಟ್ಟ ಪ್ರಸಂಗದ ಒಂದು ಹಿನ್ನೆಲೆ ಹೀಗಿದೆ. "ಜೋಡಿದಾರರಿಗೆ ಸಿಟ್ಟು ಬಂದರೆ ತಮ್ಮನ್ನು ತಾವು ಶಿಕ್ಷಿಸಿಕೊಳ್ಳುತ್ತಿದ್ದರೇ ಹೊರತು ಇತರರನ್ನು ಶಿಕ್ಷಿಸುತ್ತಿರಲಿಲ್ಲ. ನಮ್ಮ ಸ್ಕೂಲಿನಲ್ಲಿ ಈಗ ಕೆಲವು ವರ್ಷಗಳ ಹಿಂದೆ ಒಬ್ಬ ಮುಖ್ಯೋಪಾಧ್ಯಾಯರಿದ್ದರು. ಅವರು ಹುಡುಗರನ್ನು ಬಹಳವಾಗಿ ಹೊಡೆಯುತ್ತಿದ್ದರು. ಅವರು ಹುಡುಗರಾಗಿದ್ದಾಗ ಅವರಿಗೆ ಛಡಿ ಏಟು, ಕೋದಂಡ, ಕುರ್ಚಿ ಕೂರುವುದು ಮುಂತಾದ ಶಿಕ್ಷೆಗಳೆಲ್ಲಾ ಆಗಿದ್ದವಂತೆ. ಅದರಿಂದಲೇಯಂತೆ ಅವರು ವಿದ್ಯೆಯನ್ನು ಕಲಿತದ್ದು. ಈ ಅಭಿಪ್ರಾಯದಿಂದಲೇ ಅವರು ಛಡಿ ಏಟಿಲ್ಲದೆ ವಿದ್ಯೆ ಬರುವುದಿಲ್ಲವೆಂದು ಹೇಳುತ್ತಾ, ಹುಡುಗರಿಗೆಲ್ಲಾ ಚೆನ್ನಾಗಿ ಏಟುಗಳನ್ನು ಕೊಡುತ್ತಿದ್ದರು. ಒಂದು ದಿವಸ ಜೋಡಿದಾರ ಮಗನಿಗೆ, ಪಾಠ ಒಪ್ಪಿಸಲಿಲ್ಲವೆಂದು ಚೆನ್ನಾಗಿ ಏಟು ಬಿತ್ತು. ಅವನು ಅಳುತ್ತಾ ಮನೆಗೆ ಹೋಗಿ ತಂದೆಯೊಂದಿಗೆ ಹೇಳಿದನು. ಜೋಡಿದಾರರು ಕೈಯಲ್ಲಿ ಒಂದು ಬೆತ್ತವನ್ನು ಹಿಡಿದುಕೊಂಡು ಮಗನನ್ನು ಕರೆದುಕೊಂಡು ಸ್ಕೂಲಿಗೆ ಬಂದರು. ಅವರನ್ನು ಕಂಡು ಮುಖ್ಯೋಪಾಧ್ಯಾಯರು "ಇವರು ನನ್ನನ್ನು ಏನು ಮಾಡುತ್ತಾರೊ" ಎಂದು ಬೆದರಿದರು. ಜೋಡಿದಾರರು ಬಂದು "ಹೆಡ್‌ಮಾಸ್ಟರನ್ನು" ಬಯ್ಯಲಿಲ್ಲ. ಸ್ಕೂಲಿನಲ್ಲಿ ಗಟ್ಟಿಯಾಗಿ ಮಾತನಾಡಲಿಲ್ಲ. ಮೊದಲೇ ಏಟು ತಿಂದು ಅಳುತ್ತಿದ್ದ ಮಗನನ್ನು ಕಂಬದ ಹತ್ತಿರ ನಿಲ್ಲಿಸಿ ಬಲವಾಗಿ ಹೊಡೆದರು. ಅನಂತರ ಮುಖ್ಯೋಪಾಧ್ಯಾಯರನ್ನು ಕುರಿತು, "ಸ್ವಾಮಿ, ತೃಪ್ತಿಯಾಯಿತೆ? ನಿಮ್ಮ ಕೆಲಸವನ್ನು ನಾನೆ ಮಾಡಿದ್ದೇನೆ" ಎಂದು ಹೇಳಿ ಮನೆಗೆ ಹೊರಟು ಹೋದರು. ಮುಖ್ಯೋಪಾಧ್ಯಾಯರ ಮುಖವು ನಾಚಿಕೆಯಿಂದ ಪೆಚ್ಚಾಯಿತು. ಅಲ್ಲಿಂದ ಮುಂದೆ ಅವರು ಒಬ್ಬ ಹುಡುಗನನ್ನು ಹೊಡೆಯುವ ತಂಟೆಗೆ ಹೋಗಲಿಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪;ಪು.೫೯) ಈ ಪ್ರಸಂಗದಲ್ಲಿ ಗೊರೂರವರು ಶಿಕ್ಷೆ ಇಲ್ಲದೆ ಶಿಕ್ಷಣ ಸಾಧ್ಯವಿಲ್ಲ ಎಂಬ ಮಾತನ್ನು ನವಿರಾದ ರೀತಿಯಲ್ಲಿ ತಿದ್ದಿ ಹೇಳಿರುವುದನ್ನು ಕಾಣುತ್ತೇವೆ. ಆಧುನಿಕ ಶಿಕ್ಷಣ ವಿಚಕ್ಷಣರ ಅಭಿಮತದಂತೆ ಶಿಕ್ಷಕರು ಸಾಮಾನ್ಯ ವಿಷಯಗಳಿಗೂ ಕಲಿಕೆಯ ವಿಷಯ ದಲ್ಲಿಯೂ ಮಕ್ಕಳನ್ನು ಶಿಕ್ಷಿಸಬಾರದೆಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ಅಭಿಪ್ರಾಯವನ್ನು

ಶಿಕ್ಷಕರು ಪಾಲಿಸಬೇಕು ಎಂಬ ಸೂಚನೆಯನ್ನು ಲೇಖಕರು ಇಲ್ಲಿ ನೀಡಿದ್ದಾರೆ. ಶಿಕ್ಷೆ ಎಂದಿಗೂ ಶಿಸ್ತು ಆಗಲಾರದು ಎಂಬ ಸತ್ಯಾಂಶವನ್ನು ಮರೆಯಬಾರದು. ಪ್ರೀತಿಯಿಂದ ಶಿಕ್ಷಣ ನೀಡಿದರೆ ಅದೇ ಪರಿಣಾಮಕಾರಿ ಶಿಕ್ಷಣ ಎಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಗ್ರಾಮೀಣ ಶಾಲೆಗಳಿಗೆ ಸಾದಿಲ್ವಾರುವಿನ ಖರ್ಚಿನ ವೆಚ್ಚವನ್ನು ಸರ್ಕಾರ ಕೊಡುವುದು ಅತಿ ಕಡಿಮೆ ಮೊತ್ತವಾಗಿತ್ತು. ಇಂತಹ ಸಂದರ್ಭಗಳಲ್ಲಿ ಶಿಕ್ಷಕರು ತಮ್ಮದೇ ಆದ ತಂತ್ರಗಳನ್ನು ಜಾಣ್ಮೆಯನ್ನು ಅಳವಡಿಸಿಕೊಳ್ಳುತ್ತಿದ್ದರು. ಗೊರೂರರವರು ಇಂತಹ ಒಂದು ಘಟನೆಯ ಉದಾಹರಣೆಯನ್ನು 'ಮೆರವಣಿಗೆ' ಕಾದಂಬರಿಯಲ್ಲಿ ಕೊಟ್ಟಿದ್ದಾರೆ. "ಉಪಾಧ್ಯರು ಒಂದು ವರುಷದ ಸಾದಿಲ್ವಾರನ್ನು ಗೋಡೆಯ ಮೇಲೆ ಬರೆದಿದ್ದರು. ಇನಿಸ್ಪೆಕ್ಟರು ಬಂದಾಗ "ಸ್ವಾಮಿ ನನಗೆ ತಿಂಗಳಿಗೆ ಕೊಡುವ ಸಾದಿಲ್ವಾರು ಗ್ರಾಂಟು ಸಾಲದು. ಶಾಯಿಕಡ್ಡಿ ಕಾಗದಗಳಿಗೆ ದುಡ್ಡಿಲ್ಲ. ಆದುದರಿಂದ ಲೆಕ್ಕವನ್ನೆಲ್ಲಾ ಗೋಡೆಯ ಮೇಲೆ ಮಸಿಯಲ್ಲಿ ಬರೆದಿದ್ದೇನೆ. ಖಾವಂದರು ಪರಾಂಬರಿಸಬೇಕು. ಈಗ ಬರುವ ಸಾದಿಲ್ವಾರು ಎಂಟಾಣೆಯನ್ನು ಒಂದು ರೂಪಾಯಿಗೆ ಏರಿಸಿದ ಹೊರತು ನನ್ನ ಕಾಗದ ಲೇಖನಿಯ ಖರ್ಚು ಹುಟ್ಟುವುದಿಲ್ಲ" ಎಂದು ಹೇಳಿದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ; ೨೦೦೫; ಪು.೯೧) ಇದೇ ಸಂದರ್ಭದಲ್ಲಿ ಶಾಲೆಗೆ ಒಂದು ಗಂಟೆಯೂ ಇಲ್ಲವೆಂದು ಶಿಕ್ಷಕರು ತಿಳಿಸುತ್ತಾರೆ. ಇಲ್ಲಿಯೂ ಗ್ರಾಮೀಣ ಶಾಲೆಗಳ ಸಂಕಟದ ಸ್ಥಿತಿಯನ್ನು ಕಾಣುತ್ತೇವೆ. ಸರ್ಕಾರ ಈ ದಿಶೆಯಲ್ಲಿ ಸುಧಾರಣೆ ಮಾಡಬೇಕೆಂಬುದನ್ನು ಲೇಖಕರು ತಿಳಿಸಿದ್ದಾರೆ. ಗ್ರಾಮೀಣ ಶಾಲೆಗಳ ದುಃಸ್ಥಿತಿಯ ಸುಧಾರಣೆ ಆಗುತ್ತದೆ ಎಂಬುವುದು ಗೊರೂರರವರ ಒಂದು ಚಿಂತನೆ. ಶಾಲಾ ಶಿಕ್ಷಕರಿಗೆ ಅವರ ಉಡುಗೆಯ ಬಗ್ಗೆ ಅನೇಕ ಕಟ್ಟುನಿಟ್ಟುಗಳನ್ನು ಶಿಸ್ತಿನ ಸಲುವಾಗಿ ಸರ್ಕಾರ ಶಿಕ್ಷಕರಿಗೆ ವಿದಿಸಿತ್ತು. ಕೆಲವು ಶಿಕ್ಷಕರು ತನ್ನ ಬಡತನ ಕಾರಣದಿಂದ ಉಡುಪಿನ ಈ ಶಿಸ್ತನ್ನು ಪರಿಪಾಲಿಸಲು ಆಗುತ್ತಿರಲಿಲ್ಲ ಎಂಬ ಸಂಗತಿಯನ್ನು ಗೊರೂರರವರು ನಿದರ್ಶನ ಸಹಿತ ಇದೇ ಕೃತಿಯಲ್ಲಿ ನೀಡಿದ್ದಾರೆ. ಶಾಲೆಯ ಶಿಕ್ಷಕರು ರುಮಾಲನ್ನು ಹಾಕಿಕೊಳ್ಳಬೇಕಾದದ್ದು ಅಂದಿನ ಶಿಸ್ತು ಆಗಿತ್ತು. ಇದಕ್ಕನುಗುಣವಾಗಿ ನಡೆದುಕೊಳ್ಳದಿದ್ದ ಶಿಕ್ಷಕರನ್ನು ಹಿರಿಯ ಅಧಿಕಾರಿಗಳು ಆಕ್ಷೇಪಣೆ ಮಾಡುತ್ತಿದ್ದರು. ಒಂದು ಶಾಲೆಯ ಶಿಕ್ಷಕರು ರುಮಾಲು ಧರಿಸದೆ ಇನಿಸ್ಪೆಕ್ಟರ್ ಎದುರಿಗೆ ಬಂದಾಗ "ಏನ್ರಿ ಎಲ್ಲಿ ನಿಮ್ಮ ರುಮಾಲು - ರುಮಾಲು ಹಾಕಿಕೊಳ್ಳದೆ ಶಾಲೆಗೆ ಹೋಗಕೂಡದೆಂದು ನಿಮಗೆ ತಿಳಿಯದೊ? ನಿಮ್ಮ ಹತ್ತಿರ ರುಮಾಲು ಇಲ್ಲವೊ? ಎಂಬುದಾಗಿ ಸ್ವಲ್ಪ ಕೋಪದಿಂದಲೇ ಕೇಳಿದರು. ಉಪಾಧ್ಯರು "ಮಹಾಸ್ವಾಮಿಯವರು ಕೋಪ ಮಾಡಬಾರದು. ರುಮಾಲು ಶಾಲೆಯಲ್ಲಿಯೇ ಇದೆ. ಮನೆಯಲ್ಲಿಟ್ಟಿದ್ದರೆ ಕೊಳೆಯಾಗುವುದೆಂದು ಶಾಲೆಯಲ್ಲಿಯೇ ಇಟ್ಟಿದ್ದೇನೆ" ಎಂದರು. ಇನಿಸ್ಪೆಕ್ಟರು "ನೀವು ಹೀಗೆಲ್ಲಾ ಮಾಡಬಾರದು. ನೀವು ರುಮಾಲಿಲ್ಲದೆ ಶಾಲೆಗೆ ಹೊರಟರೆ ಜನರಿಗೆ ನಿಮ್ಮಲ್ಲಿ ಗೌರವ ತಪ್ಪುತ್ತದೆ. ಸರ್ಕಾರಿ ಅಧಿಕಾರಿಗಳು ತಮ್ಮ ವೇಷವನ್ನು ಸರಿಯಾಗಿ ಇಟ್ಟುಕೊಳ್ಳಬೇಕು" ಎಂದರು. ಉಪಾಧ್ಯರು ಉಟ್ಟಿದ್ದ ಪಂಚೆ ಬಹಳ ಕೊಳಕಾಗಿತ್ತು. ಜೊತೆಗೆ ಅವರ ಮುಖದಲ್ಲಿ ಗಡ್ಡ ಕಾಣುತ್ತಾ ಇದ್ದುದರಿಂದಲೂ ಇನಿಸ್ಪೆಕ್ಟರ್

ಚಡಪಡಿಸಿದರು. ಮೇಷ್ಟ್ರು ವಾರಕ್ಕೆ ಒಂದು ಸಲ ಪಂಚೆ ಒಗೆಯುತ್ತಿದ್ದರು. ಆ ಒಗೆದ ಪಂಚೆಯನ್ನು ಎಂಟು ಮಡಿಕೆ ಮಡಿಸಿ ಚೆನ್ನಾಗಿ ತಟ್ಟಿ ಹಾಗೆಯೇ ಎಂಟು ಮಡಿಕೆಯಲ್ಲಿಯೇ ಒಂದು ಮೊಳ ಅಗಲವಾಗಿ ಒಣಗಿ ಹಾಕುತ್ತಿದ್ದರು. ಆ ಎಂಟು ಮಡಿಕೆ ಒಣಗಲು ಸರಿಯಾಗಿ ಎಂಟು ದಿನಗಳೇ ಬೇಕಾಗುತ್ತಿದ್ದವು. ಮೇಷ್ಟ್ರು ತಮ್ಮ ಹತ್ತಿರ ಇದ್ದ ಉಳಿದ ಎರಡನೆಯದಾದ ಒಂದು ಪಂಚೆಯನ್ನು ಆ ಎಂಟು ದಿನಗಳೂ ಉಡುತ್ತಿದ್ದರು. ಇನಿಸ್ಪೆಕ್ಟರು ಬಂದ ದಿವಸವೂ ಮೇಷ್ಟ್ರು, ನಾಲ್ಕು ದಿನಗಳಿಂದಲೂ ಉಟ್ಟಿದ್ದ ಪಂಚೆಯನ್ನೇ ಉಟ್ಟಿದ್ದರು. ಮೇಷ್ಟ್ರು ಪಂಚೆ ಕಡೆ ನೋಡುತ್ತಾ ಇನಿಸ್ಪೆಕ್ಟರ್ "ನೀವು ಉಟ್ಟಿರುವ ಪಂಚೆ ಇಷ್ಟು ಕೊಳಕಾಗಿದೆ. ಈ ಊರಲ್ಲೇನು ನೀರಿಲ್ವೇನ್ರಿ. ನದಿ ಗಂಗೆ ಹರಿದ ಹಾಗೆ ಹರಿತಾ ಇದೆಯಲ್ರಿ. ಬಟ್ಟೆ ಒಗೆದು ಯಾಕೆ ಬೆಳ್ಳಗೆ ಹಾಕಿಕೊಳ್ಳಬಾರದು" ಎಂದರು. ಮೇಷ್ಟ್ರು ಮುಖ ನೋಡಿ ಈ ಊರಿನಲ್ಲಿ ಹಜಾಮನಿಗೆ ಗತಿ ಇಲ್ಲವೆ? ನಿಮ್ಮ ಗಡ್ಡ ಯಾಕೆ ಬದುವಿನ ಹುಲ್ಲು ಬೆಳೆದ ಹಾಗೆ ಬೆಳೆದಿದೆ ಎಂದು ಮುಖ ಗಂಟು ಹಾಕಿಕೊಂಡರು. ವಾಸ್ತವವಾಗಿ ಮೇಷ್ಟ್ರು ಕ್ಷೌರ ಮಾಡಿಸಿಕೊಳ್ಳಲು ಒಂದು ವಾರದಿಂದ ಸವರಿಸುತ್ತಿದ್ದರು. ಆದರೆ ಹಿಂದಲ ತಿಂಗಳು ಮಾಡಿದ ದುಡ್ಡನ್ನು ಹಜಾಮನಿಗೆ ಕೊಟ್ಟಿರಲಿಲ್ಲವಾಗಿ, ಅವನು ಇವರಿಗೆ ಕ್ಷೌರ ಮಾಡಲು ಹಿಂದೆಗೆದಿದ್ದನು. ಆಗ ಇನಿಸ್ಪೆಕ್ಟರ್ ಕೇಳಿದಾಗ ಉಪಾದ್ರು "ಸ್ವಲ್ಪ ಪಕೃತಿ ಸರಿಯಾಗಿರಲಿಲ್ಲ. ಉಷ್ಣವಾಯು ಕೆರಳಿತ್ತು. ಅದರಿಂದ ಆಯುಷ್ಕರ್ಮ ಮಾಡಿಸಲಿಲ್ಲ" ಎಂದರು. ಇನಿಸ್ಪೆಕ್ಟರು "ಉಷ್ಣವಾಯುವೋ ಶೀತವಾಯುವೋ? ಅಂತೂ ನಿಮಗೆ ಬುದ್ಧಿ ಕೆರಳಿರುವುದು ನಿಶ್ಚಯ. ಪಿತ್ಥ ಕೆರಳಿದೆ. ನಡೀರಿ ಶಾಲೆಗೆ ಹೋಗೋಣ" ಎಂಬುದಾಗಿ ಅವರ ಜತೆಯಲ್ಲಿ ಹೊರಟರು. (ಅದೇ; ಪು. ೧೦೫-೧೦೬) ಗೊರೂರವರು ಇಲ್ಲಿ ಶಿಕ್ಷಕರ ಬಡತನವೇ ಅವರ ಎಲ್ಲಾ ಅಸ್ತವ್ಯಸ್ತ ಸ್ಥಿತಿಗೆ ಕಾರಣ ಎಂಬುದನ್ನು ವಿವರಿಸಿದ್ದಾರೆ.

ಉಪಾದ್ರ ರುಮಾಲು ಶಾಲೆಯಲ್ಲಿ ಇದ್ದರು ಸಹ ಪೆಟ್ಲು ಕರೆಯಿಂದ ಪೂರ್ಣವಾಗಿ ಕಪ್ಪಾಗಿತ್ತು. "ಇನಿಸ್ಪೆಕ್ಟರ್ ಆ ಕಪ್ಪಾದ ರುಮಾಲನ್ನು ಕಂಡು "ಅದೇನ್ರಿ ಗೋಡೆ ಮೇಲೆ ನೇತು ಬಿದ್ದಿರುವುದು" ಎಂದು ಕೇಳಿದರು. ಉಪಾದ್ರು ಯಾವ ಉತ್ತರವನ್ನು ಕೊಡದೆ ಕೈಕೈ ಹಿಸಿಕಿಕೊಳ್ಳುತ್ತಾ ಸುಮ್ಮನೆ ನಿಂತರು. ಇನಿಸ್ಪೆಕ್ಟರು ಗೂಟದ ಹತ್ತಿರಕ್ಕೆ ಬಂದು ತಮ್ಮ ಕೈಯಲ್ಲಿದ್ದ ಛತ್ರಿಯ ತುದಿಯಿಂದ ರುಮಾಲನ್ನು ಉಪಾದ್ರ ಮುಖಕ್ಕೆ ಹಿಡಿದು "ಬಹಳ ಚೆನ್ನಾಗಿದೆ, ನಿಮ್ಮ ರುಮಾಲು. ಶುಭ್ರವಾದ ಬಟ್ಟೆಗಳನ್ನು ಹಾಕಿಕೊಳ್ಳುವುದರಲ್ಲಿ ಹುಡುಗರಿಗೆ ಒಳ್ಳೆಯ ಮೇಲು ಪಂಕ್ತಿಯಾಗಿದ್ದೀರಿ. ಶಾಲೆಯನ್ನು ಗುಡಿಸಿ ಎಷ್ಟು ವರುಷವಾಯಿತು. ಈ ಗೋಡೆಗಳಿಗೆ ಸುಣ್ಣ ನೀವು ಈ ಊರಿಗೆ ಮೊದಲು ಬಂದಾಗ ಹಾಕಿಸಿದ್ದೊ. ಈಗ ಊರಲ್ಲಿ ಸುಣ್ಣ ಸಿಕ್ಕೊದಿಲ್ವೊ" ಎಂದು ಒಂದೇ ಉಸಿರಿಗೆ ರೇಗಾಡಿದರು. ಆದರೆ ತಪ್ಪು ನಿಜವಾಗಿ ಉಪಾಧ್ಯಾಯರದಾಗಿರಲಿಲ್ಲ. ಅವರು ಪ್ರತ್ಯುತ್ತರ ಕೊಡದೆ "ಇದು ನನಗೆ ಸ್ವಲ್ಪ ಗ್ರಹಚಾರದ ಕಾಲ" ಎಂದುಕೊಂಡು ಸುಮ್ಮನಾದರು. ಉಪಾದ್ರು ಸಾದಿಲ್ವಾರು ಲೆಕ್ಕವನ್ನು ಗೋಡೆ ಮೇಲೆ ಬರೆದಿದ್ದನ್ನು ಇನಿಸ್ಪೆಕ್ಟರು ನೋಡಿ ಅವರಿಗೆ ಆಶ್ಚರ್ಯ ವಾಯಿತು. "ಸಾದಿಲ್ವಾರು ಗೋಡೆ ಮೇಲೆ ಯಾಕ್ರಿ ಬರೆದಿರಿ?" ಎಂದು ಕೇಳಿದಾಗ ವಿದಿ ಇಲ್ಲದೆ ಉಪಾದ್ರು

"ಕಾಗದ ಇರಲಿಲ್ಲ ಮಹಾಸ್ವಾಮಿ" ಎಂದರು. ಸಾಹೇಬರಿಗೆ ಬಹಳ ನಗು ಬಂದಿತು. ಅವರ ಸರ್ವಿಸಿನಲ್ಲಿ ಅವರು ಇಂತಹ ಉಪಾದ್ರನ್ನು ಸಾದಿಲ್ವಾರು ಲೆಕ್ಕವನ್ನು ಎಲ್ಲೂ ಕಂಡಿರಲಿಲ್ಲ". (ಅದೇ; ಪು.೧೧೭-೧೧೮)

ಈ ಪೂರ್ಣ ಪ್ರಸಂಗದಲ್ಲಿ ಶಿಕ್ಷಕನ ಬಡತನ ಗ್ರಾಮಾಂತರ ಶಾಲೆಗಳ ಬಗ್ಗೆ ಸರ್ಕಾರ ತೋರಿಸುವ ಅವಜ್ಞೆ ಎರಡೂ ಸ್ಪಷ್ಟವಾಗಿವೆ. ನಮ್ಮಲ್ಲಿ ಸುಧಾರಣೆಯ ಮಾತುಗಳು ಹಿರಿಯ ಅಧಿಕಾರಿಗಳಿಂದ, ರಾಜಕೀಯ ವ್ಯಕ್ತಿಗಳಿಂದ ಯಥೇಚ್ಛವಾಗಿ ಕೇಳುತ್ತೇವೆ. ವಾಸ್ತವವಾಗಿ ಇದು ಯಾವುದೂ ಕ್ರಿಯಾ ರೂಪಕ್ಕೆ ಬಂದಿಲ್ಲ ಎಂಬ ನಿಜಾಂಶವನ್ನು ಲೇಖಕರು ಅನೇಕ ಪ್ರಸಂಗಗಳಲ್ಲಿ ಸ್ಪಷ್ಟವಾಗಿ ಮರು ನುಡಿದಿರುವುದನ್ನು ಅವರ ಕೃತಿಗಳಲ್ಲಿ ನೋಡಬಹುದು.

ಗ್ರಾಮೀಣ ಶಾಲೆಗಳಲ್ಲಿ ಸಾರ್ವಜನಿಕರಿಂದ ಶಿಸ್ತನ್ನು ನಿರೀಕ್ಷಿಸುವುದು ಬಹಳ ಕಷ್ಟದ ಕಾರ್ಯ ವಾಗುತ್ತದೆ. ಒಂದು ರೀತಿಯಲ್ಲಿ ಹಾಸ್ಯಾಸ್ಪದ ಎನಿಸಿದರೂ ಆಶ್ಚರ್ಯವಿಲ್ಲ. ಮಲ್ಲಿಗೆಹಳ್ಳಿಗೆ ಹೊಸ ಇಂಗ್ಲೀಷ್ ಉಪಾಧ್ಯಾಯ ಬಂದಾಗ ಇಂತಹ ಶಿಸ್ತಿನ ಪ್ರಯೋಗ ಒಮ್ಮೆ ನಡೆಯುತ್ತದೆ. "ಹೊಸದಾಗಿ ಮಲ್ಲಿಗೆಹಳ್ಳಿಗೆ ಬಂದ ಇಂಗ್ಲೀಷ್ ಉಪಾಧ್ಯಾಯರಲ್ಲಿ ಗ್ರಾಮಸ್ಥರಿಗೆ ಗೌರವವಿರಲಿಲ್ಲ. ಅವರ ಕರಿಕ್ಯುಲಂ ರಿಜಿಸ್ಟರ್ ರೂಲ್ಸು ಸ್ಟ್ರಿಕ್ಟ್ ಕಂಡು ಅವರಿಗೆ ಬೇಜಾರಾಗಿತ್ತು. ಹೆಡ್ಮಾಸ್ಟರಾದ ತಿಪ್ಪಯ್ಯ ಉಪಾದ್ರು, "ಹೊಸದಾಗಿ ಬಂದ ಉಪಾಧ್ಯಾಯರ ಮೇಲೆ ಯಾಕೆ ಜೋರು ಮಾಡಲಿ, ನಾನು ಹಳೆಕಾಲದವನು" ಎಂದುಕೊಂಡು ಸುಮ್ಮನಾದರು. ಆದರೆ ಪಾಠ ಹೇಳುವುದರಲ್ಲಿ ಅದರಲ್ಲಿಯೂ, ಭಾಷೆ (ಇದು ಆಗಿನ ಕನ್ನಡ ಟೆಕ್ಸ್ಟ) ಗಣಿತ ಇವುಗಳನ್ನು ಹೇಳುವುದರಲ್ಲಿ ತಿಪ್ಪಯ್ಯ ಉಪಾದ್ರಿಗೆ ಸಮಾನರಾದ ಮೇಷ್ಟರು ಅಪರೂಪವಾಗಿದ್ದರು. ಅಂತಹ ಗಟ್ಟಿಗನಾದ ಮೇಷ್ಟರೇ ಹೀಗೆ ಸಾಮಾನ್ಯವಾಗಿ ಇರಬೇಕಾದರೆ ಈ ತಲೆಗೆ ಅರಿವೆ ಇಲ್ಲದ ವಾರದ ಊಟದ ಹೊಸ ಮೇಷ್ಟರು ಮಾಡುತ್ತಿದ್ದ ಜೋರು ನೋಡಿ ಗ್ರಾಮಸ್ಥರಿಗೆ ಹೊಸ ಉಪಾಧ್ಯಾಯರಲ್ಲಿ ತಿರಸ್ಕಾರವುಂಟಾಗಿತ್ತು. ತಿಪ್ಪಯ್ಯ ಉಪಾದ್ರಿ ಶಾಲೆಯಲ್ಲಿರುವಾಗ ಗ್ರಾಮಸ್ಥರು ಯಾರು ಬೇಕಾದರೂ ಶಾಲೆಗೆ ಸುಲಭವಾಗಿ ಬಂದು ಒಂದೆರಡು ಮಾತನಾಡಿಕೊಂಡು ಹೋಗಲು ಅವಕಾಶವಿದ್ದಿತು. ಆದರೆ ಈಚೆಗೆ ಹೊಸ ಉಪಾಧ್ಯಾಯ ಬಂದ ಮೇಲೆ, ಒಂದು ದಿನ ಚಂದ್ರವಳ್ಳಿಯ ಚಾಮೇಗೌಡ ಮಲ್ಲಿಗೆಹಳ್ಳಿಗೆ ಅಂಗಡಿ ವ್ಯಾಪಾರಕ್ಕೆ ಬಂದಿದ್ದವನು ತನ್ನ ಮಗನನ್ನು ನೋಡಿಕೊಂಡು ಹೋಗೋಣ ಎಂದು ಶಾಲೆಗೆ ಬಂದನು. ಹೆಡ್ಮಾಸ್ಟರಾದ ತಿಪ್ಪಯ್ಯ ಉಪಾದ್ರಿ ಒಳಗೆ ೪-೫ ತರಗತಿಗಳನ್ನು ನಡೆಸುತ್ತಿದ್ದರು. ತೊಟ್ಟಿಯಲ್ಲಿ ಹೊಸ ಉಪಾಧ್ಯಾಯರು ಕುಳಿತಿದ್ದರು. ....

ಚಾಮೇಗೌಡ ನೆಟ್ಟಗೆ ಒಳಗೆ ಬಂದುದನ್ನು ನೋಡಿ, ಹೊಸ ಉಪಾಧ್ಯಾಯರು "ಅಲ್ಲೇ ನಿಲ್ಲಿ" ಎಂದರು. ಚಾಮೇಗೌಡ ಬೆಚ್ಚಿ ಬಾಗಿಲಲ್ಲಿ ನಿಂತನು. ಹೊಸ ಉಪಾಧ್ಯಾಯರು ಅವನ ಹತ್ತಿರಕ್ಕೆ ಹೋಗಿ ಅಲ್ಲಯ್ಯ ಇದು ಏನು ಸಂತೆ ಅಂತ ತಿಳ್ಕೊಂಡು ಬಿಟ್ಟೆಯೋ? ಶಾಲೆಯೊಳಕ್ಕೆ ಬರಬೇಕಾದರೆ ಕೋಟು

ರುಮಾಲು ಹಾಕಿಕೊಂಡು ಬರಬೇಕು" ಎಂದು ಗದರಿಸಿದನು. ಚಾಮೇಗೌಡ ಯಾವಾಗಲೂ ಹಾಗೆ ಶಾಲೆಗೆ ಬರುತ್ತಿದ್ದವನಿಗೆ ಉದಾಧ್ಯಾಯರ ಮಾತನ್ನು ಕೇಳಿ ಸಿಟ್ಟು ಬಂದಿತು. ಅವನು "ಹೋಗಯ್ಯ ನಿನ್ನ ಚಂಚ್ಕೃತ ಊದಬೇಡ ಕಂಡಿವ್ನಿ" ಎಂದುಕೊಂಡು ತನ್ನ ಹುಡುಗನೊಂದಿಗೆ ಮಾತನಾಡಿಕೊಂಡು ಹೊರಟು ಹೋದನು. ಹೊಸ ಉಪಾಧ್ಯಾಯರ ಈ ಸ್ಟ್ರಿಕ್ಟ್ ನೋಡಿ, ಹೆಡ್ಮಾಸ್ಟರಾದ ತಿಪ್ಪಯ್ಯನವರಿಗೂ ಬೇಜಾರಾಯಿತು. ಅವರು "ಸ್ಟ್ರಿಕ್ಟ್ ಅಂತೆ ಸ್ಟ್ರಿಕ್ಟ್ ನಿನ್ನ ತಲೆ. ಕೋಟು ರುಮಾಲು ಗೌಡಗಳು ಎಲ್ಲಿಂದ ತರ್ತಾರೆ. ನೀನೇ ಮೂರು ವರುಷಕ್ಕೆ ಒಂದು ಕೋಟು ಹೊಲಿಸುತ್ತೀಯ. ನಾನು ಹನ್ನೊಂದು ವರುಷದಿಂದ ಈ ಕೋಟಿನಲ್ಲಿ ಕಾಲ ಹಾಕತೇನೆ" ಎಂದು ಗದರಿಸಿದರು. ಹೊಸ ಮೇಷ್ಟರ ತರಗತಿಯಲ್ಲಿ ಹುಡುಗರಿಗೆ ಪಾಠವಿಲ್ಲ. ಆದರೆ ಪುಸ್ತಕ, ನೋಟು ಬುಕ್ಕು, ಪೆನ್ಸಿಲ್ ಹೊರೆ ಹೊರೆ; ಐದು ನಿಮಿಷ ಶಾಲೆಗೆ ಬರುವುದು ಸಾವಕಾಶವಾದರೂ ಗೈರುಹಾಜರಿ; ತರಗತಿಯಲ್ಲಿ ಒಬ್ಬ ವಿದ್ಯಾರ್ಥಿಯೂ ಮುಂದಲ ತರಗತಿಗೆ ತೇರ್ಗಡೆಯಾಗುವಂತಿಲ್ಲ. ಬಡಪಾಯಿಗಳಾದ ಹುಡುಗರು ಪುಸ್ತಕಗಳನ್ನು ಹೊರುವುದನ್ನು ನೋಡಿ ಯಾರಿಗಾದರೂ ಕನಿಕರವಾಗುತ್ತಿದ್ದಿತ್ತು. ಪ್ರೈಮರಿ ಶಾಲೆಯ ಹುಡುಗನಿಗೆ ಕೆನಡ, ಅಮೇರಿಕದ ರೈಲ್ವೆ ಮಾರ್ಗ ಯಾಕೆ? ಪೋಷಕರು ಮನೆಯಲ್ಲಿ "ನಾವೆಲ್ಲ ಓದಿ ಮರೆತದ್ದಾಯಿತು. ಇನ್ನು ನೀವು ಓದಿ ಮರೆಯಬೇಕು" ಎನ್ನುತ್ತಿದ್ದರು. (ಅದೇ;ಪು.೧೧೪-೧೧೫)

ಆಗಿನ ಕಾಲದ ಪ್ರೈಮರಿ ಶಾಲೆಯ ಮಕ್ಕಳಿಗಿದ್ದ ಪಾಠಗಳ ರೀತಿಯ ಬಗ್ಗೆ ಇಲ್ಲಿ ವ್ಯಂಗ್ಯವನ್ನು ನೋಡುತ್ತೇವೆ. ಕಲಿಯುವ ಪಾಠ ಯಾವ ರೀತಿಯಲ್ಲಿಯೂ ಹುಡುಗರಿಗೆ ಆಸಕ್ತಿ ತರವಂತಹುದು ಆಗಿರಲಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಶಿಕ್ಷಣ ಕ್ರಮದಲ್ಲಿ ಇಂಥ ವಿಷಯಗಳ ಬಗ್ಗೆ ಸ್ವಲ್ಪ ಸುಧಾರಣೆ ಆಗಿರುವುದನ್ನು ಗಮನಿಸಬಹುದು. ಗ್ರಾಮೀಣ ಶಾಲೆಗಳಲ್ಲಿ ಶಿಸ್ತುಗಿಂತ ಮೊದಲು ಸ್ನೇಹದ ವರ್ತನೆ ಶಿಕ್ಷಕರಲ್ಲಿ ಇರಬೇಕು ಎಂಬುದನ್ನು ಗೊರೂರರವರು ಈ ಪ್ರಕರಣದಲ್ಲಿ ಸೂಚಿಸಿದ್ದಾರೆ.

ಹಳ್ಳಿಯ ಶಾಲೆಯಲ್ಲಿ ಸ್ಟ್ರಿಕ್ಟ್ ಮಾಡಿದ ಇಂಗ್ಲೀಷ್ ಉಪಾಧ್ಯಾಯನಿಗೆ ಒದಗಿ ಬಂದ ನಗೆ ಪಾಟಲಿನ ಘಟನೆ ವಿಶೇಷವಾದದ್ದು. "ಊರಿನ ಹಿರಿಯರಾದ ಚಂದ್ರವಳ್ಳಿ ಶ್ಯಾನುಭೋಗರು, ಗುಂಡಯ್ಯ, ಸಂಪತ್ತು, ರೈತರು, ಪೋಷಕರು. ಊರಿನ ಬಸವ ಮನೆಯ ಎದುರಿಗೆ ಬಂದಾಗ ಹೊಸ ಉಪಾಧ್ಯಾಯರು "ಭೇಷ್ ಒಳ್ಳೆ ಭರ್ಜರಿ ಹಸು ಯಾರದೋ ಕಾಣೆ" ಎಂದರು. ಚಂದ್ರವಳ್ಳಿ ಶ್ಯಾನಭೋಗರು ಈ ಹಸು ಸಾಹುಕಾರ್‍ರದು. ಭರ್ಜರಿಯಲ್ಲವೆ?" ಬೆಟ್ಟದಪುರದಿಂದ ೧೫೦ ರೂಪಾಯಿ ಕೊಟ್ಟು ತರಿಸಿದರು. ಹೊತ್ತಿಗೆ ಎರಡುವರೆ ಸೇರು ಹಾಲು ಕೊಡುತ್ತೆ" ಎಂದರು. ಗುಂಡಯ್ಯ "ಯಾರೂ ಕರೆದರೂ ಕೊಡುತ್ತೆ ಬಹು ಸಾಧು ಪ್ರಾಣಿ" ಎಂದ. ಸಂಪತ್ತುವು "ಮೇಷ್ಟ್ರೆ ಎಲ್ಲಿ ಒಂದು ಪಾತ್ರೆ ತಂದು ಹಾಲು ಕರ್‍ಕೊಳ್ರಿ. ರಾತ್ರೆಗೆ ಹಾಲು, ಬೆಳಿಗ್ಗೆ ಮೊಸರು, ಬೆಳಿಗ್ಗೆ ಕಾಫಿಗೆ ಸುಖವಾಗಿ ಆಗುತ್ತೆ. ತನ್ರಿ ಪಾತ್ರೆ" ಎಂದರು. ಚಂದ್ರವಳ್ಳಿ ಶ್ಯಾನುಭೋಗ "ಪಾಪ ಪಾಪ ಸಾಧು ಪ್ರಾಣಿ. ಬಾಲಕ್ಕೆ ನೇತು ಬಿದ್ದರೂ ಮಾತನಾಡುವುದಿಲ್ಲ" ಎಂದರು.

ಹೊಸ ಉಪಾಧ್ಯಾಯರಿಗೆ ಆಸೆಯಾಯಿತು. ಉಪಾಧ್ಯಾಯರು ಒಳಗೆ ಹೋಗಿ ಒಂದು ಪಾತ್ರೆ ತಂದು ಪೋಸ್ಟಾಫೀಸಿನ ಮನೆಯಿಂದ, ಹಸುವಿನ ಮೊಲೆ ತೊಳೆಯುವುದಕ್ಕೆ ನೀರು ತರಿಸಿದರು. ಉಪಾಧ್ಯಾಯರು ಹಸುವಿನ ಹತ್ತಿರಕ್ಕೆ ಬಂದರು. ಬಿಸಿ ನೀರನ್ನು ಅದರ ಮೊಲೆಗೆ ಎರಚಿದರು. ಮೇಷ್ಟ್ರು ಬಸವನ ಮೊಲೆಗೆ ನೀರು ಎರಚಿ ಕೈ ಹಾಕುವ ವೇಳೆಗೆ, ಸಂಪತ್ತು, ಚಂದ್ರವಳ್ಳಿಯ ಶ್ಯಾನುಭೋಗ ಸುಬ್ಬು ಪೋಸ್ಟು ಮೇಷ್ಟರು ಹುಚ್ಚರಂತೆ ನಗುವುದಕ್ಕೆ ಪ್ರಾರಂಭಿಸಿದರು. ಅಂದಿನಿಂದ ಮೇಷ್ಟರಿಗೆ ಬಸವನ ಹಾಲು ಕರೆದ ಮೇಷ್ಟ್ರು ಎಂದೇ ಹೆಸರಾಯ್ತು. ಈ ಅಪಹಾಸ್ಯದಿಂದ ತಪ್ಪಿಸಿಕೊಳ್ಳಲು ಮೇಷ್ಟ್ರು ದೇವಸ್ಥಾನಕ್ಕೆ ೨ ರೂಪಾಯಿ ಕಾಣಿಕೆ ಕೊಡಬೇಕಾಯಿತು". (ಅದೇ;ಪು.೧೧೬-೧೧೭) ಈ ಘಟನೆಯಲ್ಲಿ ಕೇವಲ ವಿದ್ಯಾವಂತರಾದ ಶಿಕ್ಷಕರು ಸಾಮಾನ್ಯ ಜ್ಞಾನದಿಂದ ಎಷ್ಟು ವಂಚಿತರಾಗಿದ್ದಾರೆ ಹಾಗೂ ಹಳ್ಳಿಯ ವಾತಾವರಣದಲ್ಲಿ ಎಷ್ಟು ಅಪಹಾಸ್ಯಕ್ಕೆ ಒಳಗಾಗುತ್ತಿದ್ದಾರೆ ಎಂಬುದನ್ನು ಲೇಖಕರು ಇಲ್ಲಿ ತಮ್ಮ ರಸಿಕ ಶೈಲಿಯಲ್ಲಿ ವಿವರಿಸಿದ್ದಾರೆ.

ಗ್ರಾಮೀಣ ಪರಿಸರದಲ್ಲಿ ಕೆಲವು ಉಪಾಧ್ಯಾಯರು ವಿಶೇಷವಾಗಿ ಮಕ್ಕಳ ಪ್ರಗತಿಗಾಗಿ ಮಾಡುವ ಚಟುವಟಿಕೆ ಅತ್ಯಂತ ಗಮನಾರ್ಹವಾದದ್ದು. ಇದಕ್ಕೆ ಉದಾಹರಣೆಯಾಗಿ ಮಲ್ಲಿಗೆಹಳ್ಳಿ ಶಿಕ್ಷಕ ತಿಪ್ಪಯ್ಯ ಉಪಾದ್ರು ಶಾಲೆಯಲ್ಲಿ ಪ್ರಾರಂಭಿಸಿದ ಚರ್ಯಪತ್ರಿಕೆ ವಿಶೇಷವಾಗಿದೆ. ಇದರ ವಿಶೇಷ ಎಂದರೆ "ಈ ಚರ್ಯಪತ್ರಿಕೆ ಎಂಬ ಪುಸ್ತಕದಲ್ಲಿ ತಿಂಗಳಿನ ಎಲ್ಲಾ ದಿನಗಳಿಗೂ ತಾರೀಖನ್ನು ಹಾಕಿ ರಾತ್ರಿ ಓದುವುದಕ್ಕೆ ಪೋಷಕರಿಂದ ಮನೆಯಲ್ಲಿ ರುಜು ಹಾಕಿಸಿಕೊಂಡು ಶಾಲೆಗೆ ಹೋಗಿ ತೋರಿಸಬೇಕಾಗಿದ್ದಿತು. ಪಾಠ ಶಾಲೆಯಲ್ಲಿ ಪಾಠವನ್ನು ಸರಿಯಾಗಿ ಒಪ್ಪಿಸಿದುದಕ್ಕೆ ಸಂಜೆ ಉಪಾಧ್ಯಾಯರಿಂದ ರುಜು ಹಾಕಿಸಿಕೊಂಡು ಹೋಗಿ ಮನೆಯಲ್ಲಿ ತೋರಿಸಬೇಕಾಗಿದ್ದಿತು. ಹೀಗೆ ಪೋಷಕರೂ, ಉಪಾಧ್ಯಾಯರೂ ಬಾಲಕರ ಮೇಲ್ವಿಚಾರಣೆ ಇಟ್ಟುಕೊಳ್ಳಲು ಇದರಿಂದ ಅನುಕೂಲವಾಗುವುದೆಂದು, ಉಪಾಧ್ಯಾಯರು ಈ ಉಪಾಯವನ್ನು ಅನುಸರಿಸುತ್ತಿದ್ದರು". (ಅದೇ; ಪು. ೧೧೮) ಸರ್ಕಾರ ಶಿಕ್ಷಕರಿಗೆ ಕೆಲವು ತರಬೇತಿಗಳನ್ನು ಕೊಡುತ್ತದೆ. ಆದರೆ ಆ ತರಬೇತಿಗಳನ್ನು ಸೂಕ್ತ ರೀತಿಯಲ್ಲಿ ಅಳವಡಿಸಿಕೊಂಡು ಶಾಲೆಯ ಕರ್ತವ್ಯವನ್ನು ನಿರ್ವಹಿಸುವ ಶಿಕ್ಷಕರು ಕೆಲವೇ ಮಂದಿ ಆಗಿರುತ್ತಾರೆ. ಗೊರೂರವರ ಅಭಿಪ್ರಾಯದಂತೆ ತಿಪ್ಪಯ್ಯ ಉಪಾದ್ರು ಅನುಕರಣೆಯ ಉಪಾಧ್ಯಾಯರು ಇವರ ರೀತಿಯನ್ನು ಅನುಸರಿಸಿದರೆ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಕೊಟ್ಟಂತೆ ಆಗುತ್ತದೆ. ಇದಕ್ಕಿಂತ ಹೆಚ್ಚಾಗಿ ಸರ್ಕಾರ ಕೊಟ್ಟ ತರಬೇತಿ ಸಾರ್ಥಕವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಗ್ರಾಮೀಣ ಶಾಲೆ ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು ಎಂಬುದು ಲೇಖಕರ ಅಭಿಪ್ರಾಯ ಇಲ್ಲಿ ಸ್ಪಷ್ಟವಾಗಿದೆ. ಶಿಕ್ಷಣದ ಪ್ರಗತಿ ಕಾನೂನಿನಿಂದ ಆಗುವುದಿಲ್ಲ. ಶಿಕ್ಷಕರ ವೈಯಕ್ತಿಕ ಆಸಕ್ತಿಯಿಂದ ಮಾತ್ರ ಸಾಧ್ಯ ಎಂಬ ಸತ್ಯಾಂಶ ಇಲ್ಲಿ ಸ್ಪಷ್ಟವಾಗಿದೆ.

ನಕಲಿ ಶಿಕ್ಷಕರ ಹಾವಳಿ ಇಂದು ಮಾತ್ರ ನಾವು ಕಾಣುವ ಘಟನೆಯಲ್ಲ. ಹಿಂದೆಯೂ ಗ್ರಾಮೀಣ ಶಾಲೆಗಳಲ್ಲಿ ಇಂಥ ಮೋಸ ನಡೆಯುತ್ತಿತ್ತು. ಇದಕ್ಕೆ ಸಂಬಂಧಿಸಿದ ಒಂದು ಉದಾಹರಣೆಯನ್ನು

ಗೊರೂರವರು ನೀಡುತ್ತಾರೆ. ಶ್ರೀನಿವಾಸಯ್ಯ ಮೇಷ್ಟ್ರು ಆದ ಘಟನೆ ಅತಿ ಸ್ವಾರಸ್ಯಕರವಾಗಿದೆ. "ಅವನ ಅಣ್ಣ ಸಿಂಗ್ರಯ್ಯನಿಗೆ ಮೇಷ್ಟ್ರು ಕೆಲಸಕ್ಕೆ ಹುಕುಮೂ ಬಂದಿತ್ತು. ಆದರೆ ಅಳಸಿಂಗ್ರಯ್ಯ ಮೇಷ್ಟ್ರು ಕೆಲಸಕ್ಕೆ ಹೋಗಲಿಲ್ಲ. ಅವನ ತಮ್ಮ ಶ್ರೀನಿವಾಸನೇ ಹಳ್ಳಿಗೆ ಹೋಗಿ ಮೇಷ್ಟ್ರಾದನು. ಅಲ್ಲಿಂದ ಮುಂದೆ ಶ್ರೀನಿವಾಸನು, ತಾನೇ ಅಳಸಿಂಗ್ರಯ್ಯ ಎಂದುಕೊಂಡು, ಅಳಸಿಂಗ್ರಯ್ಯ ಎಂದೇ ಹೆಸರನ್ನು ಬದಲಾಯಿಸಿ ಕೊಂಡನು. ಯಾರಾದರೂ ಗುರುತಿದ್ದವರು ನಿನ್ನ ಹೆಸರು ಶ್ರೀನಿವಾಸಯ್ಯನಲ್ಲವೇನಯ್ಯ ಎಂದು ಕೇಳಿದರೆ "ಅದು ಉರುಫು" ಎನ್ನುತ್ತಿದ್ದನು. ಇನಿಸ್ಪೆಕ್ಟರು ವರುಷಕ್ಕೆ ಒಂದು ಸಲವೂ ಹಳ್ಳಿಗೆ ಬರುತ್ತಿರಲಿಲ್ಲ. ಶ್ರೀನಿವಾಸನು ಅಳಸಿಂಗ್ರಯ್ಯನಾಗಿಯೇ ನಿವೃತ್ತಿ ವೇತನವನ್ನು ಸಹ ತೆಗೆದು ಕೊಂಡನು". (ಅದೇ; ಪು. ೧೨೫) ಈ ಘಟನೆಯ ಮೋಸ ಎಷ್ಟು ವ್ಯವಸ್ಥಿತವಾಗಿದೆ ಎಂಬುದನ್ನು ಗೊರೂರವರು ವಿವರಿಸಿದ್ದಾರೆ. ಗೊರೂರವರ 'ಮೆರವಣಿಗೆ' ಕಾದಂಬರಿ ಗ್ರಾಮೀಣ ಜೀವನದ ವ್ಯಕ್ತಿಯ ವಿವಿಧ ಅನುಭವಗಳ ಪರಿಚಯ ಕೃತಿ ಎಂದು ಹೇಳಬಹುದು. ಇಂಥ ಮೆರವಣಿಗೆಯಲ್ಲಿ ಸಾಧು, ಅಸಾಧು ಘಟನೆಗಳನ್ನು ಕಾಣುವುದರ ಮೂಲಕ ಆ ಕೃತಿ ಗ್ರಾಮೀಣ ಜೀವನಕ್ಕೆ ಹಿಡಿದ ಕನ್ನಡಿ ಎನ್ನಬಹುದು. ಗ್ರಾಮೀಣ ಜೀವನದ ವೈಶಿಷ್ಟ್ಯತೆಯನ್ನು ವಕ್ರತೆಯನ್ನು ಇಲ್ಲಿ ಚೆನ್ನಾಗಿ ಗುರುತಿಸಬಹುದು.

ಇಂಗ್ಲೀಷ್ ವಿದ್ಯಾಭ್ಯಾಸದ ಮೋಹ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಪ್ರಾರಂಭವಾದಾಗ ನಮ್ಮ ಶಿಕ್ಷಣ ನೀತಿ ಉದ್ದೇಶಗಳೇ ಬಹುಮಟ್ಟಿಗೆ ವಿಪರ್ಯಾಸಕ್ಕೆ ಒಳಗಾಯಿತು ಎಂಬುದನ್ನು ಗೊರೂರವರು ತಿಳಿಸಿದ್ದಾರೆ. ಹರಕು ಮುರುಕು ಇಂಗ್ಲೀಷ್ ಕಲಿಯುವುದರಲ್ಲಿ ಆಸಕ್ತಿ ಹೆಚ್ಚಾಗಿ ನಮ್ಮ ಸಂಸ್ಕೃತಿಗೆ ಪೂರಕ ವಾದ ದೇಶಿ ವಿದ್ಯಾಭ್ಯಾಸವನ್ನು ಕಲಿಯುವುದರಲ್ಲಿ ಆಸಕ್ತಿ ನಮ್ಮಲ್ಲಿ ಕುಂದಿರುವುದನ್ನು ಗೊರೂರವರು ಸ್ಪಷ್ಟವಾಗಿ ವಿಚಾರ ಮಾಡಿದ್ದಾರೆ. ಲೇಖಕರ ವಿಚಾರಧಾರೆ ಎಷ್ಟು ಸಮಂಜಸ ಎನ್ನುವುದನ್ನು ಇಂಥ ಅನೇಕ ಪ್ರಸಂಗಗಳಲ್ಲಿ ಗುರುತಿಸಿಬಹುದು. "ಈಚೆಗೆ ಇಂಗ್ಲೀಷ್ ವಿದ್ಯಾಭ್ಯಾಸ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಕಲಿತವರಿಗೆಲ್ಲಾ ಹುದ್ದೆಗಳು ದೊರೆತವು. ವಿದ್ಯೆಯ ಸ್ವರೂಪವೇ ಬದಲಾಯಿತು. ಹೂವಿನ ಪರಿಮಳ ಹೇಗೆ ಸ್ವಾಭಾವಿಕವೋ ಹಾಗೆ ವಿದ್ಯೆ ಮನುಷ್ಯನಿಗೆ ಹುಟ್ಟುಗುಣ ಎಂಬ ಭಾವವೇ ಹೋಯಿತು. ಇಷ್ಟು ವರುಷ ಇಷ್ಟು ಪುಸ್ತಕಗಳನ್ನು ಓದಿದರೆ ಒಬ್ಬ ವಿದ್ಯಾವಂತನಾದರೆ ಎಂಬ ತತ್ವ ಅಂಗೀಕಾರವಾಯಿತು. ವಿದ್ಯೆ, ಮನುಷ್ಯನನ್ನು ಸ್ವಾಭಾವಿಕವಾಗಿ ಹೊಂದುವುದಾಗಲಿಲ್ಲ. ಹೂವು, ಹೀಚು ಕಾಯಾಗಿ ಹಣ್ಣಾಗಿ ಕೆಳಕ್ಕೆ ಉದುರಲು ಕೆಲವು ಕಾಲ ನಿಷ್ಪೃಷ್ಟವಾಗಿ ಬೇಕು. ಇಷ್ಟು ಕಾಲದೊಳಗೆ ಈ ಹೂವು ಹಣ್ಣಾಗಬೇಕು ಎಂದು ನಾವೇ ಅದರ ಸ್ವಭಾವದ ಕಡೆ ಲಕ್ಷ್ಯ ಕೊಡದೆ ತೀರ್ಮಾನಿಸುವಂತೆ, "ಇಷ್ಟು ವರ್ಷ ಇಷ್ಟು ತರಗತಿಗಳಲ್ಲಿ ಇಷ್ಟು ರೂಪಾಯಿ ಶುಲ್ಕ ಕೊಟ್ಟರೆ ವಿದ್ಯಾವಂತ" ಎಂದು ಹೊಸ ವಿದ್ಯೆ ತೀರ್ಮಾನಿಸಿತು. ಮಲ್ಲಿಗೆಹಳ್ಳಿಯಲ್ಲಿಯೂ ಅನೇಕರು ಒಬ್ಬೊಬ್ಬರಾಗಿ ಓದಿ ಓದಿ ಸರ್ಕಾರಿ ಹುದ್ದೆಗಳಲ್ಲಿ ಮೈಸೂರು ಬೆಂಗಳೂರುಗಳಲ್ಲಿ ಸೇರಿಕೊಂಡರು. ಈ ಅಧಿಕಾರ ದೊರೆತಂತೆ, ಹುದ್ದೆಯ ದರ್ಜೆ ಮೇಲ ಮೇಲಕ್ಕೆ ಹೋದಂತೆ, ಅವರು ಅದೇ ವಿದ್ಯದಲ್ಲಿ ನುರಿತವರಲ್ಲದ ತಮ್ಮ, ಅಣ್ಣ ತಮ್ಮಂದಿರನ್ನೂ ಸಹ

ಮಾತನಾಡಿಸಲು ಹಿಂಜರಿಯುತ್ತಿದ್ದರು. ಅವರ ಅಹಂಕಾರ ಅಸಾಧ್ಯವಾಗಿತ್ತು. ಅವರ ಅತ್ಯಂತ ರಕ್ತ ಸಂಬಂಧಿಗಳಾದವರು ಸಹ "ಈ ಹುದ್ದೆ ಇವನನ್ನು ಈ ಸ್ಥಿತಿಗೆ ತಂದಿತೆ?" ಎಂದು ಕನಿಕರ ಪಡುವಂತೆ ಆಗುತ್ತಿತ್ತು. ಈ ವಿಕಟ ನರ್ತನ ಒಂದು ತಲೆಮಾರು ನಡೆದುಹೋಯಿತು". (ಅದೇ; ಪು. ೨೪೭-೨೪೮) "ನಮ್ಮ ದೇಶದ ವಿದ್ಯೆ ಕಲಿಯಬೇಕು; ರಾಮಾಯಣ, ಭಾರತ ಓದಬೇಕು. ಸಂಸ್ಕೃತ ಸಂಸ್ಕೃತಿ ನಮ್ಮ ಮೈಗೂಡಬೇಕು. ಇಂಗ್ಲೀಷ್‌ಗೆ ಹೋಗುವವರು ಹೋಗಲಿ, ಆದರೆ ಉಳಿದರು ಸುಮ್ಮನೆ ಕೂತರೆ ಆಗುತ್ತದೆಯೇ? ವಿದ್ಯೆ ನಮ್ಮ ಹಕ್ಕು. ಇದೇ ನಮ್ಮ ಆಯುಧ. ಇದೇ ನಮ್ಮ ಬೆಳಕು. ಈ ಬೆಳಕನ್ನು ನಾವು ಬೆಳಗಬೇಕು. ಇಂದು ಸಮಾಜಕ್ಕೆ ವಿದ್ಯಾಬುದ್ಧಿಯನ್ನು ನಿತ್ಯಜೀವನಕ್ಕೆ ಸಂಸಾರ ಜೀವನಕ್ಕೆ ಅವಶ್ಯಕವಾದ ವಿದ್ಯೆಯನ್ನು ಯಾರು ಕಲಿಸುವವನಾಗಿದ್ದನೋ, ಅವನು ತಾನು ಕರ್ತವ್ಯ ಪರಾಂಗ್ಮುಖನಾದನು. ಇದರಿಂದ ಸಮಾಜದ ಕೀಲು ಸಡಿಲವಾಯಿತು. ಸಮಾಜದ ಸಂಸ್ಕೃತಿಯೇ ಶಿಥಿಲವಾಯಿತು". (ಅದೇ; ಪು.೨೫೦-೨೫೧) ಶಿಕ್ಷಣದ ಬಗ್ಗೆ ಇಲ್ಲಿ ನಡೆದಿರುವ ಚಿಂತನೆ ಸಾರ್ವಕಾಲಿಕ ಯೋಗ್ಯ ಚಿಂತನೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಂಗ್ಲೀಷ್ ವಿದ್ಯಾಭ್ಯಾಸ ಇಂದಿನ ಸ್ಥಿತಿಯಲ್ಲಿ ಎಷ್ಟು ಅತ್ಯಾವಶ್ಯಕ ಎನಿಸುತ್ತದೋ ಸಂಸ್ಕೃತಿಯ ಸಂರಕ್ಷಣೆಯಲ್ಲಿ ನಮ್ಮ ವಿದ್ಯಾಭ್ಯಾಸಕ್ಕೂ ಸ್ಥಾನಮಾನ ಇತ್ತು ಎಂಬುದನ್ನು ಮರೆಯುವಂತಿಲ್ಲ.

ಗ್ರಾಮೀಣ ಪರಿಸರದಲ್ಲಿ ವಿದ್ಯಾವಂತ ಯುವಕರು ರೈತರ ನೆರವಿಗೆ ಸದಾ ಸಿದ್ಧರಾಗಿರಬೇಕು. ಅನಕ್ಷರಸ್ಥ ರೈತರಿಗೆ ಒಂದು ಅರ್ಜಿಯನ್ನು ಬರೆಯಲು ಸಾಧ್ಯವಾಗದಿದ್ದಾಗ ವಿದ್ಯಾವಂತರು ಅವರ ಸಹಾಯಕ್ಕೆ ಬರಬೇಕು. ಇಂತ ಸಂದರ್ಭಗಳಲ್ಲಿ ವಿದ್ಯಾವಂತ ಯುವಕರು ಎದುರಿಸುವ ಸಮಸ್ಯೆಗಳನ್ನು ಗೊರೂರವರು 'ಮೆರವಣಿಗೆ' ಕೃತಿಯಲ್ಲಿ ಚರ್ಚಿಸಿದ್ದಾರೆ. ಸುದರ್ಶನ ವಿದ್ಯಾವಂತ ಯುವಕ. ಅವನು ಹಳ್ಳಿಯವರಿಗೆ ಅರ್ಜಿಯನ್ನು ಬರೆದು ಕೊಡುತ್ತಿದ್ದನು. ಸರ್ಕಾರಿ ಅಧಿಕಾರಿಗಳಿಗೆ ಇದು ಹಿಡಿಸದ ವಿಷಯವಾಗಿತ್ತು. ತಮ್ಮ ಅಸಮಾಧಾನವನ್ನು ಪ್ರತಿಕೂಲದ ಮಾತುಗಳಿಂದ ಹಳ್ಳಿಯವರ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದರು. ಸುದರ್ಶನ ಜನರ ದೃಷ್ಟಿಯಿಂದ ಯಾವ ಒಂದು ಸಂಪಾದನೆ ಕೆಲಸದಲ್ಲಿಯೂ ತೊಡಗದೆ ಯಾವ ಆಸ್ತಿಯನ್ನು ಮಾಡದೆ "ಭಾರತದ ರೈತರು ನನಗಿಂತಲೂ ತೀರ ಬಡವರು, ಈ ಬಡವನ ದೇಶದಲ್ಲಿ ಬಡವರಾಗಿರುವುದು ಅವಮಾನವಲ್ಲ" (ಅದೇ; ಪು.೩೬೦) ಎಂದುಕೊಂಡು ಜನಸೇವೆಗೆ ತನ್ನನ್ನು ಸುದರ್ಶನ ತೊಡಗಿಸಿಕೊಳ್ಳುತ್ತಾನೆ. ಸರ್ಕಾರಿ ಅಧಿಕಾರಿಗಳ ಒಂದು ರೀತಿಯ ದೌರ್ಜನ್ಯವನ್ನು ಗೊರೂರವರು ಇಲ್ಲಿ ಸೂಚಿಸಿದ್ದಾರೆ. ಸುದರ್ಶನನ ಸೇವಾ ಕಾರ್ಯವನ್ನು ಮೆಚ್ಚಿಕೊಂಡು ಪುರಸ್ಕರಿಸುವ ಬದಲು ಅವನ ಮೇಲೆ ಕಿಡಿಕಾರುವುದು ಎಷ್ಟು ಹೇಯಕರ ಎಂಬುದನ್ನು ಲೇಖಕರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ತರುಣರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕುವುದು ಒಂದು ರೀತಿಯ ಸಾಹಸವಾದರೆ ಅಕ್ಷರ ಜ್ಞಾನವಿಲ್ಲದ ರೈತರಿಗೆ ಸುದರ್ಶನರಂತಹ ತರುಣರು ಮಾಡುವ ಸೇವೆ ಮತ್ತೊಂದು ರೀತಿಯಲ್ಲಿ ಅತ್ಯಂತ ಮಾನ್ಯವಾದದ್ದು ಎಂಬುದನ್ನು ಗೊರೂರವರು ಇಲ್ಲಿ

ತಿಳಿಸಿದ್ದಾರೆ. ವಿದ್ಯಾವಂತ ಯುವಕರು ಗ್ರಾಮಗಳಿಗೆ ತೆರಳಿ ಗ್ರಾಮೀಣ ಜನರಿಗೆ ಸಾರ್ಥಕ ರೀತಿಯಲ್ಲಿ ಉಪಕಾರಿಗಳಾಗಿ ಬದುಕಬೇಕೆಂಬ ಗಾಂಧಿ ತತ್ತ್ವ ಎಲ್ಲಾ ಕಾಲಕ್ಕೂ ಸ್ವೀಕೃತವಾದದ್ದು ಎಂಬುದನ್ನು ಇಲ್ಲಿ ಪರಿಭಾವಿಸಬಹುದು.

ರೈತರ ಅನಕ್ಷರತೆಯನ್ನು ಕುರಿತು ಹೇಳುವಾಗ ಗೊರೂರರವರು ಅತ್ಯಂತ ರಸಿಕ ರೀತಿಯನ್ನು ತೋರಿಸಿರುವುದು ಗಮನಾರ್ಹ. ರೈತರಿಗೆ ಅವರಿಗೆ ರುಜು ಹಾಕುವಷ್ಟರ ಮಟ್ಟಿಗಾದರೂ ಅಕ್ಷರ ಜ್ಞಾನ ಇದ್ದರೆ ಒಳಿತು ಎಂಬುದು ಗೊರೂರರವರ ಅಭಿಪ್ರಾಯ. ಅಕ್ಷರ ಜ್ಞಾನವಿಲ್ಲದ ವ್ಯಕ್ತಿಗಳಿಂದ ಆಗುವ ಆಭಾಸಗಳನ್ನು ಲೇಖಕರು ಉದಾಹರಣೆಯ ಸಹಿತ ವಿವರಿಸಿದ್ದಾರೆ. ಮನರಂಜನೆಗಾಗಿ ಬಯಲಾಟ ಆಡುವ ಹಳ್ಳಿಗರ ಬಾಯಲ್ಲಿ ಮಹಾಪ್ರಾಣವೇ ಬರದಿದ್ದಾಗ ರಂಗೇಗೌಡ ಅಂತವರ ಮಾತಿನ ಬಗ್ಗೆ ಜಿಗುಪ್ಸೆಗೊಳ್ಳುತ್ತಾನೆ. ಗೊರೂರರವರು ಕೊಡುವ ಅನಕ್ಷರಸ್ಥರ ಮಾದರಿ ಸಹಿಗಳು 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಹೀಗಿದೆ. "ನಮ್ಮ ಊರ ಅಪ್ಪಣ್ಣೈಯಂಗಾರ್ರು ಒಂದು ಜಮೀನನ್ನು ಮಾರಿದರು. ಮಾರಿದ ಕ್ರಯ ಪತ್ರಕ್ಕೆ ಅವರ ದೊಡ್ಡಪ್ಪನ ಸಮ್ಮತಿಯ ಸಾಕ್ಷಿಯನ್ನು ಹಾಕಿಸಬೇಕಾಗಿತ್ತು. ದೊಡ್ಡಪ್ಪನ ಹೆಸರು 'ಶಿಂಗ್ಲಾಚಾರಿ'. ಪತ್ರದಲ್ಲಿ ಈ ರೀತಿ ಬರೆಯಬೇಕಾಗಿದ್ದಿತು.

'ಈತನ ದೊಡ್ಡಪ್ಪ ಶಿಂಗ್ಲಾಚಾರಿಯ ಸಮ್ಮತಿ ಸಾಕ್ಷಿ'.

ಶಿಂಗ್ಲಾಚಾರ್ರನ್ನು ಕರೆಸಿ ಅವರ ಕೈಯಲ್ಲಿ ಪತ್ರವನ್ನು ಬರೆಯುವ ಕಡ್ಡಿಯನ್ನೂ ಕೊಟ್ಟರು. ಅವರಿಗೆ ಹುಟ್ಟಿದಂದಿನಿಂದ ಇಷ್ಟು ದೊಡ್ಡ ವಾಕ್ಯವನ್ನು ಬರೆದು ಅಭ್ಯಾಸವಿರಲಿಲ್ಲ. ಕೈಯಿಗೆ ಕಡ್ಡಿಯನ್ನು ಕೊಟ್ಟ ಕೂಡಲೇ ಅವರ ಮೈ ನಡುಗಿತು. ಆದರೂ ದೇವರ ಮೇಲೆ ಭಾರ ಹಾಕಿ ಪ್ರಾರಂಭಿಸಿದರು. ಮೊದಲು - 'ಈತನ' ಎಂಬುದಕ್ಕೆ ಬದಲಾಗಿ 'ಜೂತನ' ಎಂದು ಬರೆದರು. ಮುಂದೆ - 'ದೊಡ್ಡಕ್ಷ ಭೂ' - ಎಂದು ಬರೆದು ಬಿಟ್ಟು 'ಇನ್ನೂ ಏನಾದರೂ ಸರಿಯೆ, ನನಗೆ ಬರೆಯುವುದಕ್ಕೆ ಆಗುವುದಿಲ್ಲ. ದಮ್ಮಯ್ಯ ಬಿಟ್ಟುಬಿಡಿ, ನಮಸ್ಕಾರ ತೆಗೆದುಕೊಳ್ಳಿ' ಎಂದು ಬಿಟ್ಟನು. ಅವರಿಗೆ ಈಚೆಗೆ - 'ಜೂತನ ದೊಡ್ಡಕ್ಷ ಭೂ' ಎಂಬುದೇ ಅಡ್ಡ ಹೆಸರಾಯಿತು.

ಶಂಖಪುರದಲ್ಲಿ ನರಸಿಂಹ ಜೋಯಿಸರು ಇದ್ದಾರಲ್ಲ ಸ್ವಾಮಿ, ಅವರ ನಯ ಹೇಳತೀರದು. ಯಾವುದೋ ಒಂದು ಕಾಗದಕ್ಕೆ ರುಜು ಮಾಡಬೇಕೆಂದು ಕೇಳಿದುದಕ್ಕೆ -

'ಶಂಖಪುರದ ನರಸಿಂಹ ಜೋಯಿಸರ ರುಜು'

ಎನ್ನುವುದಕ್ಕೆ ಬದಲಾಗಿ -

'ಪಂಕಚ ಶರೋಜನಿ ಸಖಿ' ಎಂದು ಬಿಟ್ಟರು. 'ಶಂಖಪುರದ ನರಸಿಂಹ ಜೋಯಿಸ'ರೆಂಬುವುದು ಅದು ಹೇಗೆ 'ಪಂಕಜ ಶರೋಜನೀ ಸಖಿ' ಆಯಿತೊ ದೇವರೆ ಬಲ್ಲ!

"ಇನ್ನು ಕೆಲವರು ಸೊನ್ನೆಯನ್ನು ಮನಸ್ಸಿಗೆ ಬಂದ ಕಡೆ ಹಾಕಿ ಬಿಡುತ್ತಾರೆ. ಬೇಕಾದ ಕಡೆ ಇಲ್ಲ. ಬೇಡದ ಕಡೆ ಸೊನ್ನೆ - 'ಶಾಮಯ್ಯಂಗಾರ್‍ರ ಮಗ ಗುಂಡಪ್ಪನ ರುಜು' ಎಂದು ಬರೆಯುವುದಕ್ಕೆ ಬದಲಾಗಿ ಆ ದಿಗ್ಪಂತಿಯು - 'ಶವಣನಮಂಗ ಗುಡಪನ ಹುಂಜ! ಎಂದು ಬರೆದುಬಿಟ್ಟನು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು. ೭೫-೭೬) ಇಂಥ ಆಭಾಸಗಳು ಆಗದಿರುವುದಕ್ಕೆ ವಯಸ್ಕರ ಶಿಕ್ಷಣ ಗ್ರಾಮೀಣ ಪ್ರದೇಶದಲ್ಲಿ ಅತ್ಯವಶ್ಯ ಎಂಬುದು ಗೊರೂರರವರ ಸೂಚ್ಯಾಂಶ ಇಲ್ಲಿದೆ. ಇಂದಿನ ಪ್ರಗತಿಯ ಕಾಲದಲ್ಲಿ ಗ್ರಾಮೀಣ ಜನರು ವಿದ್ಯಾವಂತರಾಗಲು ಆಸಕ್ತರಾಗಬೇಕು. ಈ ಆಸಕ್ತಿಗೆ ಬೇಕಾದ ವೇಳೆ ಅವರಿಗಿಲ್ಲ ಎಂಬುದು ಕೇವಲ ನೆಪವಷ್ಟೇ.

ಇದೇ ಪ್ರಬಂಧ ಸಂಕಲನದಲ್ಲಿ ಗೊರೂರರವರು ಹಿಂದಿನ ಶಿಕ್ಷಣಕ್ಕೂ ಇಂದಿನ ಶಿಕ್ಷಣಕ್ಕೂ ಇರುವ ವ್ಯತ್ಯಾಸವನ್ನು ಸುದೀರ್ಘವಾಗಿ ತಿಳಿಸಿದ್ದಾರೆ. ರಂಗೇಗೌಡ ಮರಳಿಯತ್ನವ ಮಾಡು ಪದ್ಯವನ್ನು ಹೇಳಿ ತಾವು ಎಷ್ಟು ಸಲ ಕಷ್ಟಪಟ್ಟು ವಿದ್ಯೆ ಪಡೆದೆ ಎಂಬುದನ್ನು ಹೇಳುತ್ತಾನೆ. ಆಗ ಬೋರನು "ನಮ್ಮ ಕಾಲದಲ್ಲಿ ಇದ್ನೆಲ್ಲಾ ಹೇಳಿಕೊಡೋರೇ ಇರ್‍ಲಿಲ್ಲ. ಆಗಿನ ಓದ್ಗಾರಿಕೆಯೇ ಬೇರೆ. ಮಾನ್ಯ ಸೊನ್ನೆ ಇವುಗಳ ಹೊಡೆದಾಟ ಆಗಿನಂತೆ ಈಗ ಎಲ್ಲಯ್ತೆ?" ಎಂದನು. ಗುಂಡನು "ಮಾನ್ಯ ಸೊನ್ನೆಗಳ ಹೊಡಾದಾಟ ಅದೇನು? ಬೋರೆಗೌಡ" ಎಂದನು. ಬೋರನಿಗೆ, ತನ್ನ ಮಾತಿನಲ್ಲಿ ಇಂಗ್ಲೀಷ್ ವಿದ್ವಾಂಸನಾದ ಗುಂಡನಿಗೂ ಉತ್ಸಾಹವಿರುವುದಲ್ಲಾ ಎಂದು ಬಹಳ ಸಂತೋಷವಾಯಿತು. ....

ಅವನು "ಹಿಂದಲ್ಕಾಲ್ಕು ಈ ಕಾಲ್ಕು ಬಾರಿ 'ಯತ್ವಾಸ' ಬುದ್ಧಿ, ಆಗಿದಾಂವ್ಪೂ ಈಗ ಇಲ್ವೇ ಇಲ್ಲ. ಮಠದಲ್ಲಿ ಉಪಾದ್ರು ಬಂದು ಕುಂತ್ಕೊಳ್ಳೋಕೆ ಮುಂಚೆ ಬಂದು ಕೂತ್ಕೊಳ್ಳೋರ್‍ಗೆಲ್ಲಾ ಭಡೀ ಏಟು ಮಾನ್ಯವಾಗಿತ್ತು. ಅಂದ್ರೆ ಹೊತ್ತಾಗಿ ಬಂದ ತಪ್ಗೆ ಅವರ ಶಿಕ್ಷೆ ಭಾರಿ ಇರ್‍ತಿರ್‍ಲಿಲ್ಲ. ಉಪಾದ್ರು ಅವರ್‍ಗೆ ಬೋಮಾನ ಕೊಡ್ತಿದ್ರು ಅನ್ನಿ. ಉಪಾದ್ರು ಬರೋಕೆ ಮೊದ್ಲು ಬರೋರೆಲ್ಲ ಈ ಮಾನ್ಯದ ಸಾಲ್ಗೆ ಸೇರ್‍ತಿದ್ರು. ಉಪಾದ್ರು ಜೊತೇಲಿ ಬಂದೋರು ಸೊನ್ನೆ ಸಾಲ್ಗೆ ಸೇರ್‍ತಿದ್ರು. ಅವರ್‍ಗೆ ಏಟೂ ಇಲ್ಲ ಬೋಮಾನನೂ ಇಲ್ಲ. 'ಐವಾರ್‍ಕಿ ಗೈರವಮೂ ಲೇದು-ವಿದ್ಯೆಮೂ ಲೇದು' ಅನ್ನೊ ಹಂಗೆ 'ಆ ಮೇಲ್ಬಂದೋರ್‍ಗೆಲ್ಲ ಏಟು ಬೀಳ್ತಿತ್ತು'. ಮೊದಲು ಬಂದೋನ್ಗೆ ಒಂದೇಟು, ಅಮೇಲೆ ಬಂದೋನ್ಗೆ ಎರಡೇಟು, ಮೂರನೆಯವನಾಗಿ ಬಂದೋನ್ಗೆ ಮೂರೇಟು. ಈಗಿನ ಉಪಾದ್ರು ಏಟು ಹೊಡಿಯೋಕಿಲ್ಲ. ಆಗ ಏಟಿಲ್ದೆ ಪಾಟಾನೇ ಇಲ್ಲ. ಅದ್ಕೆ ಆಗಿನ ಗುಡ್ಲಿಗೆ 'ಇದ್ಯ' ಅಷ್ಟು ಬೇಗ ಹತ್ತಿತ್ತು. ಹುಡ್ಗೆಲ್ಲಾ ಮಾನ್ಯಕ್ಕಾಗಿ ಮುಂಚ್ಮುಂಚೆ ಬಂದು ಕೂತ್ಕೊತಿದ್ರು. ಈಗ ಇದ್ಯಾದಲ್ಲಿ ಏನಾಯ್ತೆ ಬಿಡಿ?" ಎಂದನು. (ಅದೇ; ಪು.೧೦೬)

ಈ ಪ್ರಸಂಗದಲ್ಲಿ ಗೊರೂರರವರು ವಿದ್ಯಾಭ್ಯಾಸದಲ್ಲಿ ಶಿಕ್ಷೆಯ ಮಹತ್ವವನ್ನು ನೆನಪು ಮಾಡಿ ಕೊಡುತ್ತಾರೆ. ಶಿಕ್ಷೆಯಿಂದ ಶಿಸ್ತು ಅಂದಿನ ಕಾಲಕ್ಕೆ ಸಾಧಿತವಾಗಿತ್ತು. ಇದು ಶಿಕ್ಷಣದ ಒರಟು ಪದ್ಧತಿ

ಎಂದು ಹೇಳಿದರು ಅದು ಶಿಕ್ಷಣಕ್ಕೆ ಅನಿವಾರ್ಯವಾಗಿತ್ತು ಎಂಬ ವಿಷಯವನ್ನು ಗೊರೂರರವರು ಮತ್ತೆ ಮತ್ತೆ ತಿಳಿಸಿ ಕೊಡುತ್ತಾರೆ. ಯುಗಯುಗ ಕಳೆದಂತೆ ಶಿಕ್ಷಣದಲ್ಲಿ ಗುರು-ಶಿಷ್ಯರ ಬಾಂಧವ್ಯದಲ್ಲಿ ಬಹುಮಟ್ಟಿನ ವ್ಯತ್ಯಾಸವನ್ನು ಕಾಣುತ್ತೇವೆಂದು ಅಲ್ಲಮ ಪ್ರಭು ತನ್ನ ವಚನಗಳಲ್ಲಿ ತಿಳಿಸಿಕೊಟ್ಟಿದ್ದಾನೆ.

"ಕೃತ ಯುಗದಲ್ಲಿ
ಶ್ರೀ ಗುರು ಶಿಷ್ಯಂಗೆ ಬಡಿದು
ಬುದ್ಧಿಯ ಕಲಿಸಿದರೆ - ಆಗಲಿ ಮಹಾಪ್ರಸಾದವೆಂದನಯ್ಯ.
ತ್ರೇತಾಯುಗದಲ್ಲಿ
ಶ್ರೀ ಗುರು ಶಿಷ್ಯಂಗೆ ಬೈದು
ಬುದ್ಧಿಯ ಕಲಿಸಿದರೆ - ಆಗಲಿ ಮಹಾಪ್ರಸಾದವೆಂದನಯ್ಯ.
ದ್ವಾಪರ ಯುಗದಲ್ಲಿ
ಶ್ರೀ ಗುರು ಶಿಷ್ಯಂಗೆ ಝುಂಕಿಸಿ
ಬುದ್ಧಿಯ ಕಲಿಸಿದರೆ - ಆಗಲಿ ಮಹಾಪ್ರಸಾದವೆಂದನಯ್ಯ.
ಕಲಿಯುಗದಲ್ಲಿ
ಶ್ರೀ ಗುರು ಶಿಷ್ಯಂಗೆ ವಂದಿಸಿ
ಬುದ್ಧಿಯ ಕಲಿಸಿದರೆ - ಆಗಲಿ ಮಹಾಪ್ರಸಾದವೆಂದನಯ್ಯ.
ಗುಹೇಶ್ವರ,
ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು".

(ಬಸವರಾಜ ಎಲ್. (ಸಂ); ೧೯೯೭; ಪು.೫೫-೫೬)

ಈ ರೀತಿಯ ವಿದ್ಯಾಭ್ಯಾಸ ಇಂದು ಪಡೆದಿರುವ ಹೊಸ ರೂಪ ಅತ್ಯಂತ ಆಶ್ಚರ್ಯಕರವಾಗಿದೆ. ಇಂದಿನ ವಿದ್ಯಾಭ್ಯಾಸದಲ್ಲಿ ನಾವು ಹೊಸ ಹೊಸ ವಿಷಯಗಳನ್ನು ಕಲಿಯುವುದಕ್ಕೆ ಅವಕಾಶವಿದೆ. ವಿದ್ಯೆ ವಿಸ್ತಾರವಾಗುತ್ತಿದೆ. ಆದರೆ ಕಲಿಯುವ ವಿದ್ಯೆಯಲ್ಲಿ ಆಳವನ್ನು ಕಾಣುವುದಕ್ಕೆ ಸಾಧ್ಯವಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಇದು ವಿದ್ಯಾಭ್ಯಾಸದಲ್ಲಿ ಕಾಲದಿಂದ ಕಾಲಕ್ಕೆ ಕಾಣುವ ಪರಿವರ್ತನ ಗುಣ ಎಂಬುದನ್ನು ಇಲ್ಲಿ ತಿಳಿಯಬಹುದು.

ಗೊರೂರರ ಭಾವನವರು ಇಂದಿನ ವಿದ್ಯಾಭ್ಯಾಸವನ್ನು ಕುರಿತು ಶೀನಪ್ಪನೊಂದಿಗೆ ವಿಚಾರ ಮಾಡುವಾಗ ಶೀನಪ್ಪ ಹೀಗೆ ಹೇಳುತ್ತಾನೆ. "ಸ್ವಾಮಿ, ತಮ್ಮ ಕಾಲದ ವಿದ್ಯಾಭ್ಯಾಸವು ಈಗ ಇಲ್ಲ. ಈಗೆಲ್ಲಾ ಪುಸ್ತಕದ ಬದನೇಕಾಯಿ. ಇವತ್ತು ಓದುವುದು ನಾಳೆ ಪರೀಕ್ಷೆಯಲ್ಲಿ ವಾಂತಿ ಮಾಡುವುದು. ನೀವು ಐವತ್ತು ವರ್ಷಗಳ ಹಿಂದೆ ಕಲಿತ ಶ್ಲೋಕ ಇವತ್ತು ಹೇಳ್ತಿರಲ್ಲ. ನಮ್ಮ ಹಣೇಲಿ ಅದೆಲ್ಲಿ ಬರೆದಿದೆ?" ಎಂದನು. ಭಾವನವರು ಸಮಾಧಾನದಿಂದ "ಏನ್ಮಾಡೋದು, ಹಾಳಾದ ಇಂಗ್ಲೀಷ್ ವಿದ್ಯೆ. ಹೀಗೆ ಎಷ್ಟು ದಿವಸ ತಳ್ಳುತ್ತೊ, ನೋಡೋಣ" ಎಂದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್;

೨೦೦೧; ಪು.೧೦೮) ಹಿಂದಿನ ವಿದ್ಯಾಭ್ಯಾಸದಲ್ಲಿ ನೆನಪಿನ ಶಕ್ತಿಗೆ ಆದ್ಯತೆ ಇತ್ತು ಎಂಬುದು ನಮಗೆ ಇವತ್ತಿಗೆ ಜ್ಞಾಪಕಕ್ಕೆ ಬರುತ್ತದೆ. ವಿದ್ಯಾಭ್ಯಾಸ ಕ್ರಮದಲ್ಲಿ ಕಂಡುಬರುವ ವ್ಯತ್ಯಾಸವನ್ನು ಕಂಡು ಮಾನ್ಯ ಮಾಡಿ ತಿಳಿಯಬೇಕು ಎಂಬುದು ಗೊರೂರರ ಅಭಿಮತವಾಗಿದೆ.

ಗೊರೂರವರು ತಮ್ಮ ಊರಿನ ಶಾಲೆಯಲ್ಲಿದ್ದ ಕಾಯಿ ಏಟಿನ ವಿಷಯವನ್ನು ಸ್ವಾರಸ್ಯವಾಗಿ 'ಉಸುಬು' ಕಥಾ ಸಂಕಲನದ 'ಅದೃಷ್ಟದ ಕೈ' ಕತೆಯಲ್ಲಿ ತಿಳಿಸಿದ್ದಾರೆ. ಹಳ್ಳಿಯಲ್ಲಿ ಉಪಾಧ್ಯಾಯರು ಹಬ್ಬಕ್ಕೆ ವಿದ್ಯಾರ್ಥಿಗಳಿಂದ ತೆಂಗಿನಕಾಯಿಯನ್ನು ತರಿಸಿಕೊಳ್ಳುವುದು ಒಂದು ಸಾಮಾನ್ಯ ಪರಿಪಾಠವಾಗಿತ್ತು. ಅನೇಕ ಹಳ್ಳಿಗಳಲ್ಲಿ ಶಿಕ್ಷಕರಿಗೆ ಹಬ್ಬಕ್ಕೆ ತೆಂಗಿನಕಾಯಿಯನ್ನು ಕೊಡುವುದು ಒಂದು ಗೌರವದ ವಿಷಯವಾಗಿತ್ತು. ಆದರೆ ಒಮ್ಮೆ ಗೊರೂರಿನ ಒಬ್ಬರು ಉಪಾಧ್ಯಾಯರು ವಿದ್ಯಾರ್ಥಿ ರಾಮಚಂದ್ರನಿಗೆ ಗೌರಿಹಬ್ಬಕ್ಕೆ ಕಾಯಿಯನ್ನು ತಂದುಕೊಡಲು ಹೇಳುತ್ತಾರೆ. ಆಗ ವಿದ್ಯಾರ್ಥಿಯು ಅವನ ಅನಾನುಕೂಲದಿಂದ ಗುರುಗಳಿಗೆ ಕಾಯಿಯನ್ನು ತಂದುಕೊಡಲಿಲ್ಲ. ಆಗ ಗುರುಗಳು ಇದನ್ನೇ ಶಿಷ್ಯನ ದೊಡ್ಡ ಅಪರಾಧವೆಂದು ಭಾವಿಸಿ ನಾಲ್ಕು ಛಡಿ ಏಟನ್ನು ಕೊಡುತ್ತಾರೆ. ರಾಮಚಂದ್ರನಿಗೆ ಗುರುಗಳ ಮೇಲೆ ಅತಿಯಾದ ಕೋಪ ಉಂಟಾಯಿತು. ಗುರುಗಳು ಪಾಠ ಮಾಡುತ್ತಿದ್ದಾಗ ರಾಮಚಂದ್ರ ಗುರು ಉಪಯೋಗಿಸಿದ ಛಡಿಯನ್ನು ತೆಗೆದುಕೊಂಡು ಗುರುವಿಗೆ ಬಲವಾಗಿ ನಾಲ್ಕು ಬಾರಿಸುತ್ತಾನೆ. ಹುಡುಗರಲ್ಲಿ ಎಂತಹ ಪ್ರತೀಕಾರ ಬುದ್ಧಿ ಇರುತ್ತದೆ ಎಂಬುದನ್ನು ಗೊರೂರವರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಇಂದು ಯಾವ ಹಳ್ಳಿಯಲ್ಲಿಯೂ ಕಾಯಿಗಾಗಿ ಛಡಿ ಏಟು ಇರುವುದಿಲ್ಲ ಎಂಬುದು ಇಲ್ಲಿ ನಾವು ತಿಳಿಯುವ ಸಂಗತಿಯಾಗಿದೆ. ಗ್ರಾಮೀಣ ಶಾಲೆಗಳಲ್ಲಿ ಕಾಣಬಹುದಾದ ಇಂತಹ ಹಾಸ್ಯ ಪ್ರಸಂಗವನ್ನು ಗೊರೂರವರು ಅಷ್ಟೇ ಸ್ವಾರಸ್ಯವಾಗಿ ತಮ್ಮ ಕೃತಿಯಲ್ಲಿ ತಿಳಿಸಿರುವುದು ಗಮನಿಸಬೇಕಾದ ಅಂಶ.

ಗೊರೂರವರು ಗಾಂಧಿ ತತ್ವದ ನೆಲೆಗಟ್ಟಿನಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡ ಸಾಹಿತಿಗಳು. ಇವರು ಸಾಹಿತಿಯಾಗಿ ಹಂಚಿಕೊಳ್ಳುವ ಆಲೋಚನೆಗಳು ಗಾಂಧೀಜಿಯವರ ಸರ್ವೋದಯ ಚಿಂತನೆಗೆ ಬದ್ಧವಾಗಿರುತ್ತವೆ. ಇದಕ್ಕೆ ಕಾರಣ ಸರ್ವೋದಯ ಚಿಂತನೆಯ ನೆಲೆಗಟ್ಟಿನಲ್ಲಿ ಗೊರೂರವರ ಕೃತಿಗಳು ರೂಪಿತವಾಗಿವೆ. ಗಾಂಧೀಜಿಯವರು ಗ್ರಾಮಸಮಾಜವನ್ನು ರಾಷ್ಟ್ರ ಜೀವನಕ್ಕೆ ಬದ್ಧ ಹಿನ್ನೆಲೆಯಲ್ಲಿ ವಿಚಾರ ಮಾಡಿ ರಾಷ್ಟ್ರದ ಉಳಿವು, ಪ್ರಗತಿ, ಹಳ್ಳಿಯ ಅಭಿವೃದ್ಧಿಯಿಂದ ಮಾತ್ರ ಸಾಧ್ಯ ಎಂದು ಸಿದ್ಧಾಂತ ಮಾಡಿದ್ದಾರೆ. ಹಳ್ಳಿಯ ಪ್ರಗತಿ ಸಾಂಸ್ಕೃತಿಕವಾಗಿ ಆಗಬೇಕಾಗಿದೆ. ಇಂತಹ ಸಾಂಸ್ಕೃತಿಕ ಪ್ರಗತಿಗೆ ಮೂಲ ಚೈತನ್ಯ ಶಿಕ್ಷಣ ಎಂದು ಗಾಂಧೀಜಿಯವರ ಅಭಿಪ್ರಾಯವನ್ನು ಗೊರೂರವರು ತಮ್ಮ ವಿಚಾರಧಾರೆಯಲ್ಲಿ ಪುಷ್ಟೀಕರಿಸಿದ್ದಾರೆ. ಹೀಗೆ ಗೊರೂರವರ ಆಲೋಚನೆ ಬಹುಮಟ್ಟಿಗೆ ಗ್ರಾಮೀಣ ಪರಿಸರದ ಶಿಕ್ಷಣ, ಶಿಕ್ಷಕ, ಶಿಕ್ಷಣದ ರೀತಿಗೆ ಅನುಗುಣವಾಗಿ ವಿಚಾರದ ಚಿಂತನೆ ಚರ್ಚೆ ನಡೆದಿದೆ.

ಇಂದಿನ ಶಿಕ್ಷಣ ಪರಿಕಲ್ಪನೆಯಲ್ಲಿ ವೈಜ್ಞಾನಿಕ, ವೈಚಾರಿಕ ಸಂಗತಿಗಳು ಬಹುಮಟ್ಟಿಗೆ ಪ್ರಬಲ ವಿಚಾರಗಳಾಗಿ ಕಂಡುಬರುತ್ತವೆ. ಈ ವಿಷಯಗಳನ್ನು ಗ್ರಾಮೀಣ ಪರಿಸರಗಳಲ್ಲಿ ಸ್ಪಷ್ಟಪಡಿಸುವುದು ಸ್ವಲ್ಪ ಕಷ್ಟಕರವಾಗಿದೆ ಎಂಬುದನ್ನು ಗೊರೂರರವರು ಅಲ್ಲಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಗ್ರಾಮೀಣ ಪರಿಸರದ ಜನ ಇಂದಿನ ಜಾಗತೀಕರಣ ಕಾಲದಲ್ಲಿಯೂ ಸಂಪ್ರದಾಯ ಶಿಕ್ಷಣಕ್ಕೆ ಬಹುಮಟ್ಟಿಗೆ ಮನಸೋಗಿರುವುದನ್ನು ನೋಡುತ್ತೇವೆ. ಅವರು ಪ್ರಗತಿಪರ ಶಿಕ್ಷಣಕ್ಕಿಂತ ಸಾಂಸ್ಕೃತಿಕ ಶಿಕ್ಷಣವನ್ನು ಹೆಚ್ಚಾಗಿ ಸ್ವಾಗತಿಸುವುದು ನಮ್ಮ ಗಮನಕ್ಕೆ ಬರುತ್ತದೆ. ಶಿಕ್ಷಣ ವಿಷಯ ಮಾಹಿತಿಯನ್ನು ಕೊಡುವುದಕ್ಕಿಂತ ಹೆಚ್ಚಾಗಿ ನಮ್ಮಲ್ಲಿ ರಕ್ತಗತವಾಗಿ ಬಂದಿರುವ ಸಂಸ್ಕೃತಿಯನ್ನು ಸಂರಕ್ಷಿಸುವುದರಲ್ಲಿ ಹೆಚ್ಚು ಪ್ರಭಾವಶಾಲಿ ಆಗಬೇಕು, ಪರಿಣಾಮಕಾರಿ ಆಗಬೇಕು ಎಂಬುದು ಶಿಕ್ಷಣ ತಜ್ಞರ ಒಂದು ವರ್ಗದವರ ಅಭಿಪ್ರಾಯವಾಗಿದೆ. ಶಿಕ್ಷಣದಲ್ಲಿ ಖಾಸಗೀಕರಣ ಕ್ರಾಂತಿ ಉತ್ತಮ ಶಿಕ್ಷಣದ ಕ್ರಮವನ್ನು ಪರಿಪುಷ್ಟಗೊಳಿಸುವುದರ ಬದಲು ನಮ್ಮ ಮೆಚ್ಚುಗೆಯ ಸಾಂಸ್ಕೃತಿಕ ಶಿಕ್ಷಣದ ಭದ್ರತೆಯನ್ನು ಸಡಿಲಗೊಳಿಸುತ್ತಿದೆ. ಇದಕ್ಕಾಗಿಯೇ ಶಿಕ್ಷಣದ ಆಧುನಿಕ ಕ್ರಾಂತಿ ಭಾವನೆಗಳಿಗೆ ಗ್ರಾಮೀಣ ಸಮಾಜ ಒಗ್ಗಿಕೊಳ್ಳುತ್ತಿಲ್ಲ, ಒಲವು ತೋರಿಸುತ್ತಿಲ್ಲ ಎಂಬುದು ಸತ್ಯದ ಸಂಗತಿಯಾಗಿದೆ. ವರ್ತಮಾನ ಸಾಹಿತ್ಯದಲ್ಲೆಲ್ಲಾ ಈ ರೀತಿಯ ಚಿಂತನೆ ಚರ್ಚೆಯನ್ನು ಗುರುತಿಸಬಹುದು. ಗ್ರಾಮೀಣ ಪರಿಸರ ಉತ್ತಮ ಶಿಕ್ಷಣಕ್ಕೆ ಎಷ್ಟರಮಟ್ಟಿಗೆ ಪೂರಕವಾಗಿದೆ ಎಂಬುದನ್ನು ಪರಿಶೀಲಿಸಿದಾಗ ಗ್ರಾಮಸಮಾಜದ ಓರೆಕೋರೆಗಳು, ಲೋಪದೋಷಗಳು ನಮ್ಮನ್ನು ದಿಗ್ಭ್ರಮೆಗೊಳಿಸುತ್ತವೆ. ಮೊದಲನೆಯದಾಗಿ ಕ್ರಮಬದ್ಧವಾದ ಶಿಸ್ತು ಗ್ರಾಮಸಮಾಜದಲ್ಲಿ ಕಾಣುವುದು ಕಷ್ಟ. ಗ್ರಾಮೀಣ ಜನ ಶಿಸ್ತಿನ ಮಾತಿಗೆ ಒಪ್ಪಿಕೊಂಡರು ಶಿಸ್ತಿನ ಬದುಕನ್ನು ನಡೆಸುವಲ್ಲಿ ಅವರು ತಮ್ಮ ಅಜ್ಞಾನ ಆಲಸ್ಯಗಳಿಂದ ವಿಫಲರಾಗಿದ್ದಾರೆ. ಪರಿಸರ ನೈರ್ಮಲ್ಯ ಗ್ರಾಮಸಮಾಜದಲ್ಲಿ ಕಾಣುವುದು ಅತಿ ಅಪರೂಪವಾಗಿದೆ. ಈ ಕಾರಣದಿಂದ ಶಿಕ್ಷಣದ ಪರಿಸರ ಶಿಕ್ಷಣಕ್ಕೆ ಹಿತಕಾರಿಯಾಗಿಲ್ಲ. ಗೊರೂರರವರು 'ಮೆರವಣಿಗೆ' ಕಾದಂಬರಿಯಲ್ಲಿ ಕೊಟ್ಟಿರುವ ಹಳ್ಳಿಯ ಶಾಲೆಯ ಚಿತ್ರಣ ಇದಕ್ಕೆ ಉತ್ತಮ ಉದಾಹರಣೆ. ಹಳ್ಳಿಯ ಮಧ್ಯೆ ಶಾಲೆಯಿದ್ದು ಹಳ್ಳಿಯ ಎಲ್ಲಾ ಸದ್ದು ಗದ್ದಲಗಳನ್ನು ಸಹಿಸಿಕೊಳ್ಳಬೇಕಾದ್ದು ಅನಿವಾರ್ಯ ಅಂಶ. ಮನೆ ಮನೆಯ ಜಗಳ, ಬೇರೆ ಬೇರೆ ವ್ಯಕ್ತಿಗಳನ್ನು ಅವಲಂಬಿಸಿರುವ ವ್ಯಕ್ತಿಗಳ ವೃತ್ತಿ ಗದ್ದಲ ಶಾಲೆಯ ಮಕ್ಕಳನ್ನು ಶಿಕ್ಷಕರನ್ನು ಸದಾ ಕಾಲ ಮನಸ್ಸಿನ ಶಾಂತಿಯನ್ನು ಕದಡುತ್ತಿತ್ತು. ಈ ದೃಷ್ಟಿಯಿಂದಲೇ ಇತ್ತೀಚೆಗಷ್ಟೆ ಶಾಲೆಯನ್ನು ಊರ ಹೊರಗೆ ಕಟ್ಟುವ ಕಾರ್ಯ ಪ್ರಾರಂಭವಾಯಿತು. ಗ್ರಾಮೀಣ ಮಕ್ಕಳು ಅವಿದ್ಯಾವಂತ ವಾತಾವರಣದಿಂದ ಬಂದ ಮಕ್ಕಳಾಗಿರುತ್ತಾರೆ. ಹೀಗಾಗಿ ಅವರಿಗೆ ವಿದ್ಯೆಯನ್ನು ಕಲಿಸಿ ಕೊಡುವುದು ಕಷ್ಟದ ಕೆಲಸ. ಮನೆಯ ಪರಿಸರದಲ್ಲಿ ವಿದ್ಯೆಯ ಬಗ್ಗೆ ಆಸಕ್ತಿ ಇಲ್ಲದಿದ್ದಾಗ ಮಕ್ಕಳು ವಿದ್ಯಾವಂತರಾಗುವುದು ಕಷ್ಟ. ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳು ಕಲಿಕೆಯಲ್ಲಿ ಸ್ಪರ್ಧಾ ಮನೋಭಾವನೆಯನ್ನು ತೋರಿಸುವುದು ಕಷ್ಟ ಎಂಬ ಅಂಶವನ್ನು ಗೊರೂರರವರು ಅನೇಕ ಸಂದರ್ಭದಲ್ಲಿ ತಿಳಿಯಪಡಿಸಿದ್ದಾರೆ. ಮನೆಯ ಬಡತನವೂ ಸಹ ಕಲಿಯುವ ಮಕ್ಕಳ ಉತ್ಸಾಹಕ್ಕೆ ಸಹಜವಾಗಿಯೇ ತೊಡಕನ್ನುಂಟು ಮಾಡಿದೆ. ಈ ಕಾರಣದಿಂದಲೇ

ಶಿಕ್ಷಣವನ್ನು ಕಡ್ಡಾಯವನ್ನಾಗಿ ಮಾಡಿ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟದ ಅನುಕೂಲದ ಅವಕಾಶವನ್ನು ಮಾಡಿ ಇಂದು ಗ್ರಾಮೀಣ ಪ್ರದೇಶದಲ್ಲಿ ಪರಿಣಾಮಕಾರಿಯಾಗಿ ಸರ್ಕಾರ ನಡೆಸುತ್ತಿದೆ. ಗ್ರಾಮಗಳಲ್ಲಿ ನೈರ್ಮಲ್ಯ ಕಡಿಮೆ ಇರುವ ಕಾರಣದಿಂದ ಅನಾರೋಗ್ಯದ ವಾತಾವರಣ ಸಹಜವಾಗಿ ಇರುತ್ತದೆ. ಗ್ರಾಮೀಣ ಪ್ರದೇಶದ ಮಕ್ಕಳ ಆರೋಗ್ಯಕ್ಕೂ ಈಗ ಹೆಚ್ಚಿನ ಪ್ರಾಶಸ್ತ್ಯವನ್ನು ಸರ್ಕಾರ ಕೊಟ್ಟಿರುವುದನ್ನು ಗ್ರಾಮೀಣ ಪ್ರದೇಶಗಳಲ್ಲಿ ಗುರುತಿಸಬಹುದು. ಶಾರೀರಿಕವಾಗಿ ದೃಢಕಾಯರಾಗಿರುವ ಮಕ್ಕಳು ವ್ಯಾಸಂಗದಲ್ಲಿ ಹೆಚ್ಚು ಆಸಕ್ತಿಯನ್ನು ತೋರುತ್ತಾರೆ ಎಂಬ ವೈಜ್ಞಾನಿಕ ಚಿಂತನೆ ಇದಕ್ಕೆ ಮೂಲ ಕಾರಣ.

ಶಿಕ್ಷಕರ ಮಾನಸಿಕ ಸ್ಥಿತಿ ಶಿಕ್ಷಣದ ಮೇಲೆ ಹೆಚ್ಚಿನ ಪರಿಣಾಮವನ್ನು ಉಂಟು ಮಾಡುತ್ತದೆ. ಶಿಕ್ಷಕರು ಕಲಿಸುವುದರಲ್ಲಿ ಆಸಕ್ತರಾಗಿರಬೇಕು, ಕ್ರಿಯಾಶೀಲರಾಗಿರಬೇಕು. ಇದಕ್ಕೆ ಬೇಕಾದ ಉತ್ತಮ ತರಬೇತಿಯನ್ನು ಶಿಕ್ಷಕರಿಗೆ ನೀಡಬೇಕು. ಆಗ ಮಾತ್ರ ಶಿಕ್ಷಕರಿಂದ ಉತ್ತಮ ಗುಣಮಟ್ಟದ ಕಲಿಸುವಿಕೆಯನ್ನು ಕಾಣುತ್ತೇವೆ. ಶಿಕ್ಷಣ ಖಾಸಗೀಕರಣವಾದಾಗ ಅಲ್ಲಿ ಒಂದು ರೀತಿಯ ಶೋಷಣೆ ಶಿಕ್ಷಕರ ಬಗ್ಗೆ ಕಂಡು ಬರುತ್ತದೆ. ಇದರಿಂದ ಅಶಾಂತಿಗೆ ಒಳಗಾದ ಶಿಕ್ಷಕರು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಪರಿಣಾಮ ಕಾರಿಯಾಗಿ ನಿರ್ವಹಿಸುವುದಿಲ್ಲ. ಸರ್ಕಾರವು ಸಹ ಕೇವಲ ಉಸಿರು ಕಟ್ಟುವ ಕಾನೂನಿನ ಕಟ್ಟಳೆಯಲ್ಲಿ ಅವರಿಗೆ ಅನುಕೂಲದ ವಾತಾವರಣವನ್ನು ಕಲ್ಪಿಸಿ ಕೊಡದಿದ್ದಾಗ ಶಿಕ್ಷಕರು ತಮ್ಮ ವೃತ್ತಿಯಲ್ಲಿ ಯಾವುದೇ ರೀತಿಯ ಪ್ರಾಮಾಣಿಕತೆಯನ್ನು ತೋರಿಸಲಾಗುವುದಿಲ್ಲ. ಈ ಸತ್ಯಾಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಶಿಕ್ಷಣ ತಜ್ಞರು ಶಿಕ್ಷಕರ ಹಿತರಕ್ಷಣೆಗೆ ಅನೇಕ ರೀತಿಯ ಅನುಕೂಲಗಳನ್ನು ಮಾಡಿರುವುದು ಸ್ವಾಗತಾರ್ಹವಾಗಿದೆ. ಜಾಗತೀಕರಣದಿಂದ ಆಂಗ್ಲ ವಿದ್ಯಾಭ್ಯಾಸ ಇಂದಿಗೆ ಅನಿವಾರ್ಯವಾಗಿದೆ. ಅದನ್ನು ಪರಿಣಾಮಕಾರಿಯಾಗಿ ಕಲಿಸಲು ಶಿಕ್ಷಕರು ಗ್ರಾಮೀಣ ಪರಿಸರದ ಮಕ್ಕಳ ಮನಸ್ಸನ್ನು ಒಲಿಸಿಕೊಳ್ಳಬೇಕು ಹಾಗೂ ಅವರನ್ನು ಸಶಕ್ತರನ್ನಾಗಿಸಬೇಕು. ಶಾಲೆಯ ವಾತಾವರಣದಲ್ಲಿ ಜ್ಞಾನಾರ್ಜನೆ ಎಷ್ಟು ಮುಖ್ಯವೋ ಮಕ್ಕಳಿಗೆ ಆಟೋಟಗಳ ಅವಕಾಶವೂ ಅಷ್ಟೇ ಮುಖ್ಯವಾದದ್ದು. ಕ್ರೀಡೆಯಲ್ಲಿ ಉತ್ಸಾಹ ಕಲಿಕೆಯಲ್ಲಿಯೂ ಪರಿಣಾಮಕಾರಿಯಾಗುತ್ತದೆ ಎಂಬ ವೈಜ್ಞಾನಿಕ ಸತ್ಯವನ್ನು ಅರಿತ ಶಿಕ್ಷಣ ಇಲಾಖೆ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳಿಗೆ ಉತ್ತಮ ಕ್ರೀಡಾ ಸೌಲಭ್ಯವನ್ನು ಇಂದು ಒದಗಿಸಿಕೊಟ್ಟಿದೆ.

ದೇಶಿಯ ಶಿಕ್ಷಣ ಹೇಗೆ ಮುಖ್ಯವಾಗಿದೆಯೋ ಆಂಗ್ಲ ಮಾಧ್ಯಮ ಶಿಕ್ಷಣವೂ ಅಷ್ಟೇ ಪ್ರಧಾನ ವಾಗಿದೆ. ಮಾತೃ ಭಾಷೆಯಲ್ಲಿ ಕಲಿಸಿದ ಶಿಕ್ಷಣ ಹೆಚ್ಚು ಫಲಪ್ರದವಾಗುತ್ತದೆ ಎಂಬುದು ಶಿಕ್ಷಣ ವಿಚಕ್ಷಣರ ಅಭಿಪ್ರಾಯ. ಈ ಕಾರಣದಿಂದಲೇ ಗಾಂಧೀಜಿಯವರು ಮಾತೃ ಭಾಷಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದರು. ಆದರೆ ಜಾಗತೀಕರಣ ಸಂದರ್ಭದಲ್ಲಿ ಇಂದು ನಾವು ಇರುವಾಗ ವೈಜ್ಞಾನಿಕ ಪ್ರಗತಿ ವಿಸ್ಮಯಕಾರಿಯಾಗಿ ಕಂಡುಬರುತ್ತಿರುವಾಗ ಆಂಗ್ಲ ಭಾಷಾ ಶಿಕ್ಷಣ ಇಂದು ಅತ್ಯವಶ್ಯಕ ಎನಿಸುತ್ತದೆ.

ಆಂಗ್ಲ ಭಾಷೆಯನ್ನು ಸಮರ್ಥ ರೀತಿಯಲ್ಲಿ ಕಲಿಯದಿದ್ದರೆ ಈಗಿನ ಸ್ಪರ್ಧಾ ಪ್ರಪಂಚದಲ್ಲಿ ವಿದ್ಯಾವಂತ ಸಾಮಾಜಿಕ ಕ್ಷೇತ್ರದಲ್ಲಿ, ಔದ್ಯೋಗಿಕ ಕ್ಷೇತ್ರದಲ್ಲಿ ಪೈಪೋಟಿಯನ್ನು ಎದುರಿಸಲಾರ ಎಂಬುದು ನಿಜ ಸಂಗತಿಯಾಗಿದೆ. ಇದಕ್ಕಾಗಿ ಇಂದಿನ ಗ್ರಾಮೀಣ ಪ್ರದೇಶದಲ್ಲಿಯೂ ಆಂಗ್ಲ ಭಾಷಾ ಪ್ರಭಾವ ಶಿಕ್ಷಣದಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಕಾರಣವಾದ ದೇಶೀಯ ಚಿಂತನೆ ಯನ್ನು ನಮ್ಮ ಶಿಕ್ಷಣ ಕ್ರಮದಲ್ಲಿ ಎಂದಿಗೂ ನಾವು ಕೈಬಿಡಬಾರದು. ಹೀಗೆ ವರ್ತಮಾನ ಕಾಲದ ಪ್ರಗತಿಯ ಜತೆಗೆ ದೇಶೀಯ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಂಡು ಬಾಳುವ ಉತ್ತಮ ಶಿಕ್ಷಣ ನಮಗೆ ಬೇಕಾಗಿದೆ ಎಂಬ ಅಂಶವನ್ನು ಗೊರೂರರವರು ಶಿಕ್ಷಣದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಕೃತಿಗಳಲ್ಲಿ ವಿಷಯವನ್ನು ಮಂಡಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸುಧಾರಣೆಗೆ ಸಂಬಂಧಪಟ್ಟಂತೆ ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಇನ್ನಷ್ಟು ವೈವಿಧ್ಯತೆಯನ್ನು ಹೊಂದಬೇಕು ಮತ್ತು ಹೆಚ್ಚು ಫಲಕಾರಿಯಾಗಬೇಕು. ಗ್ರಾಮೀಣ ಜನರಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಜಾಗೃತಿ ಮೂಡಿದಾಗಲೆ ಶಿಕ್ಷಣ ಸುಧಾರಣೆಗಳು ಯಶಸ್ವಿಯಾಗಬಲ್ಲವು ಎಂಬುದು ಗೊರೂರರವರ ಅಭಿಮತವಾಗಿದೆ.

೫.೪. ಜಾತಿ-ವರ್ಗ-ಲಿಂಗ : ಸ್ವರೂಪ ಮತ್ತು ಸಮಸ್ಯೆಗಳು

ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆ ಮನು ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಮೂಡಿ ಬಂದಿರುವುದನ್ನು ಗುರುತಿಸಬಹುದು. ಈ ಜಾತಿ ವ್ಯವಸ್ಥೆ ವೃತ್ತಿಯ ಆಧಾರದ ಮೇಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಎಂದು ವಿವೇಚಿಸಲಾಗಿದೆ. ಈ ರೀತಿಯ ಜಾತಿಯ ವ್ಯವಸ್ಥೆಯನ್ನು ಪರಮಾತ್ಮನ ದೇಹ ಭಾಗಗಳಿಗೆ ಸಮನ್ವಯ ಮಾಡಿ ಹೇಳಿರುವುದು ನಮಗೆ ಉಪನಿಷತ್ತಿನಲ್ಲಿ ಕಂಡು ಬರುತ್ತದೆ. ಕಾಲಾನಂತರದಲ್ಲಿ ಈ ಜಾತಿಯ ವ್ಯವಸ್ಥೆ ಬದಲಾಗಿರುವುದು ಗಮನಾರ್ಹ ಅಂಶ. ಪುರಾಣ ಕಾಲದ ಈ ಜಾತಿ ವ್ಯವಸ್ಥೆಯಲ್ಲಿಯೂ ಸಾಮರಸ್ಯವನ್ನು ಕಾಣಬಹುದು. ಅಂದಿನ ಕಾಲಕ್ಕೆ ಈ ಜಾತಿ ವ್ಯವಸ್ಥೆಯಲ್ಲಿ ಯಾವುದೇ ಘರ್ಷಣೆಗಳು ಇರಲಿಲ್ಲ ಎಂಬುದು ಸುವಿದಿತ.

ಬ್ರಾಹ್ಮಣ ಅನೇಕ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಜ್ಞಾನವನ್ನು ಸಂಪಾದಿಸಿ ಸಮಾಜದ ಎಲ್ಲ ವರ್ಗದವರ ಶ್ರೇಯಸ್ಸು ಅನುಕೂಲಕ್ಕಾಗಿ ವಿನಿಯೋಗಿಸುತ್ತಿದ್ದನು. ವಿದ್ಯೆಯನ್ನು ಸಂಪಾದಿಸಿಕೊಂಡು ವಿದ್ಯೆ ಯನ್ನು ಪ್ರಚಾರ ಮಾಡುವುದು ಬ್ರಾಹ್ಮಣರ ಕರ್ತವ್ಯವಾಗಿತ್ತು. ಇದರ ಜತೆಗೆ ಜ್ಯೋತಿಷ್ಯ, ಆಯುರ್ವೇದ ಶಾಸ್ತ್ರವನ್ನು ಕಲಿತು ಆ ಮೂಲಕ ಸಮಾಜದ ಮಿಕ್ಕ ಜನಕ್ಕೆ ಸಹಾಯ ಮಾಡುತ್ತಿದ್ದನು. ವೇದ ಅಧ್ಯಯನ ಮಾಡಿದ ಬ್ರಾಹ್ಮಣರಿಂದ ಎಲ್ಲ ಧಾರ್ಮಿಕ ಕಾರ್ಯಗಳು ನಡೆಯುತ್ತಿತು. ಈ ಧಾರ್ಮಿಕ ಕ್ರಿಯೆಗಳು ಸಮಾಜದ ಇತರೆ ಜಾತಿಯವರಿಗೆ ಅನಿವಾರ್ಯವಾಗಿತ್ತು. ಲಲಿತ ಕಲೆಗಳ ಪ್ರಚಾರವೂ ಸಹ ಬ್ರಾಹ್ಮಣ ವರ್ಗದಿಂದ ನಡೆಯುತ್ತಿತ್ತು. ಜ್ಞಾನವನ್ನು ಗಳಿಸಿಕೊಂಡ ಬ್ರಾಹ್ಮಣನಿಗೆ ಸಮಾಜದಲ್ಲಿ ಮಿಕ್ಕ ಜಾತಿಯವರಿಂದ ಸಹಜವಾಗಿಯೇ ಮಾನ್ಯತೆಯು ದೊರೆಯುತ್ತಿತ್ತು. ಇದೆಲ್ಲಕ್ಕೂ ಮುಖ್ಯವಾಗಿ ಬ್ರಾಹ್ಮಣ ಮಿಕ್ಕ ಜಾತಿಯ

ವರಿಗೆ ಆದರ್ಶಪ್ರಾಯವಾಗಿ ಮೇಲ್ಪಂಕ್ತಿಯ ಸಾತ್ವಿಕ ಬದುಕನ್ನು ನಡೆಸುತ್ತಿದ್ದನು. ಬಹುಜನ ಹಿತ ಬ್ರಾಹ್ಮಣನ ಜೀವನದ ಗುರಿಯಾಗಿತ್ತು ಎಂಬ ಅಭಿಪ್ರಾಯ ಒಂದು ಕಾಲದಲ್ಲಿ ಇತ್ತು.

ಕ್ಷತ್ರಿಯರು ಸ್ವಾಭಾವಿಕವಾಗಿ ವೀರರಾಗಿದ್ದರು. ಧರ್ಮ ರಕ್ಷಣೆಗಾಗಿ, ಲೋಕ ನೀತಿಯ ರಕ್ಷಣೆಗಾಗಿ, ರಾಜನ ರಕ್ಷಣೆಗಾಗಿ, ಸಮಾಜದ ಸಾಮಾನ್ಯ ವರ್ಗದವರ ರಕ್ಷಣೆಗಾಗಿ ತಾನು ಕಲಿತನವನ್ನು ಸಂಪಾದಿಸಿಕೊಂಡು ಸಮಯೋಚಿತವಾಗಿ ಬಳಸುತ್ತಿದ್ದರು. ಕ್ಷತ್ರಿಯನ ಜೀವನ ಮೌಲ್ಯ ಸತ್ಕಾರ್ಯಕ್ಕಾಗಿ ಪ್ರಾಣಾರ್ಪಣೆ ಮಾಡುವುದು ಆಗಿತ್ತು. ಕ್ಷತ್ರಿಯರಲ್ಲಿ ಪುರುಷನಿಗೆ ಸಾಟಿಯಾಗಿ ಸ್ತ್ರೀಯರು ಸಹ ದಿಟ್ಟ ವ್ಯಕ್ತಿಗಳಾಗಿ ಇರುತ್ತಿದ್ದರು. ಸಮಾಜ ಸಂರಕ್ಷಣೆ, ಧರ್ಮ ಸಂರಕ್ಷಣೆಯೇ ಕ್ಷತ್ರಿಯರ ಜೀವನಾದರ್ಶವಾಗಿತ್ತು ಎಂಬುದು ಸಾರಾಂಶದ ಮಾತು.

ವೈಶ್ಯರು ವೃತ್ತಿಯಲ್ಲಿ ವ್ಯಾಪಾರಿಗಳು. ಸಮಾಜದ ಆರ್ಥಿಕ ಸಂರಕ್ಷಣೆ ವಿನಿಮಯ ಕಾರ್ಯ ವೈಶ್ಯರಿಗೆ ಮೀಸಲಿಟ್ಟ ಕರ್ತವ್ಯವಾಗಿತ್ತು. ಸಮಾಜದ ಬೇರೆಯ ವರ್ಗದ ವ್ಯಕ್ತಿಗಳಿಗೆ ಅಗತ್ಯ ವಸ್ತುಗಳನ್ನು ವಿತರಣೆ ಮಾಡುವುದು, ಪೂರೈಸುವುದು ವೈಶ್ಯನ ವ್ಯಾಪಾರ ಚಟುವಟಿಕೆಯ ಗುರಿಯಾಗಿತ್ತು. ವೈಶ್ಯರು ತಮ್ಮ ವಿತರಣೆಯ ಕಾರ್ಯಕ್ಕಾಗಿ - ವ್ಯಾಪಾರಕ್ಕಾಗಿ ದೇಶದೆಲ್ಲೆಡೆ ಸಂಚಾರ ಮಾಡುತ್ತಿದ್ದರು ಮತ್ತು ಅಗತ್ಯವೆನಿಸಿದಾಗ ಬೇರೆಯ ಕಡೆಗೆ ವಲಸೆ ಹೋಗುತ್ತಿದ್ದರು.

ಶೂದ್ರರು ಜಾತಿಯ ವಿಭಜನೆಯಲ್ಲಿ ಕೊನೆಯವರಾದರು ಅವರ ವೃತ್ತಿ ಧರ್ಮವನ್ನು ಪರಿಭಾವಿಸಿದಾಗ ಸಮಾಜದಲ್ಲಿ ಅವರು ಪ್ರಧಾನ ವ್ಯಕ್ತಿಗಳಾಗಿದ್ದರು. ಪರಮಾತ್ಮನ ಪವಿತ್ರ ಪಾದಗಳಿಗೆ ಸಮನಾದ ವ್ಯಕ್ತಿ ಶೂದ್ರರು ಎಂದು ಕೊಂಡಾಡಿದ್ದಾರೆ. ಭೂಮಿ ತಾಯಿಯ ಸೇವೆ ಶೂದ್ರನ ಕರ್ತವ್ಯ. ಈತ ಶ್ರಮಜೀವಿಯಾಗಿ ಭೂಮಿ ತಾಯಿಯ ಸೇವೆಯನ್ನು ಮಾಡಿ ಸಮಾಜದ ಎಲ್ಲ ಜನರಿಗೆ ಅನ್ನವನ್ನು ಒದಗಿಸುತ್ತಿದ್ದನು. ಈ ದೃಷ್ಟಿಯಲ್ಲಿಯೇ ಶೂದ್ರನನ್ನು ಸಮಾಜದ ಪ್ರಾಣಜೀವಿ ಎಂದು ಕರೆದಿರುವುದು. ಈತ ತನ್ನ ದುಡಿಮೆಯಲ್ಲಿ ಬಹುಮಟ್ಟಿನ ಸ್ವಾರ್ಥವನ್ನು ತ್ಯಾಗಮಾಡಿ ಕಷ್ಟಸಹಿಷ್ಣುತೆಯ ವ್ಯಕ್ತಿಯಾಗಿ ತನ್ನ ಕೃಷಿಕ ಜೀವನವನ್ನು ನಡೆಸುತ್ತಾನೆ. ರೈತ-ಶೂದ್ರ ನಿರಾಶೆಯ ನೆರಳಿನಲ್ಲಿ ಬದುಕಿದ್ದರು ಸಹ ತನ್ನ ದುಡಿಮೆಯಲ್ಲಿ ಜೀವನೋತ್ಸಾಹವನ್ನು ಕಳೆದುಕೊಳ್ಳುವುದಿಲ್ಲ. ಸಮಾಜದ ಎಲ್ಲ ವ್ಯಕ್ತಿಗಳ ಜೀವನಕ್ಕೆ ಅನುಕೂಲವಾದ ಆಹಾರ ವಸ್ತುಗಳನ್ನು ಇನ್ನಿತರ ಸೌಲಭ್ಯ ವಸ್ತುಗಳನ್ನು ಸಿದ್ಧಪಡಿಸಿಕೊಡುವುದು ಶೂದ್ರನ ಕೆಲಸವಾಗಿರುತ್ತದೆ. ಸಮಾಜದ ಇನ್ನಿತರ ಜಾತಿಯ ಜನರ ಚಟುವಟಿಕೆಗಳಲ್ಲಿ ಶೂದ್ರನ ಕಾರ್ಯ ಸೇವಾ ಮನೋಧರ್ಮದಿಂದ ಶ್ಲಾಘನೀಯವಾದುದು. ಈ ರೀತಿಯ ಜಾತಿಯ ವ್ಯವಸ್ಥೆಯಲ್ಲಿ ಪರಸ್ಪರ ಮೈತ್ರಿ ಬಹಳ ಕಾಲದವರೆಗೆ ನಮ್ಮ ಸಮಾಜದಲ್ಲಿತ್ತು. ಈ ಕಾರಣದಿಂದ ಸಮಾಜದಲ್ಲಿ ಎಲ್ಲರ ಪ್ರಗತಿಯೂ ಪರೋಕ್ಷವಾಗಿ ಸಾಧಿತವಾಗಿತ್ತು ಎಂಬುದು ಸತ್ಯದ ಸಂಗತಿ. ಈ ರೀತಿಯ ಜಾತಿ ವ್ಯವಸ್ಥೆಯಲ್ಲಿ ಪರಸ್ಪರ ನಂಬಿಕೆಯಿತ್ತು. ಬಹುಮಟ್ಟಿನ ಮೈತ್ರಿಯಿಂದ ಕೂಡಿದ ಮುಗ್ಧತೆಯಿತ್ತು.

ಸಮಾಜದಲ್ಲಿ ಕಾಲ ಕಳೆದಂತೆ ಮಾನವನ ಬುದ್ಧಿ, ಆಲೋಚನೆ ಮನೋಧರ್ಮಗಳಲ್ಲಿ ವ್ಯತ್ಯಯ ಆಗಿರುವುದನ್ನು ನೋಡಬಹುದು. ಈ ವ್ಯತ್ಯಯದಿಂದ ಸಮಾಜದಲ್ಲಿ ಸೌಹಾರ್ದ ವಾತಾವರಣ ಕಣ್ಮರೆಯಾಗಿ ವ್ಯಕ್ತಿ ವ್ಯಕ್ತಿಗಳಲ್ಲಿ ಬಿರುಕಿನ ಭಾವನೆಗಳು ಮೂಡಿ ಬಂದಿತು. ಈ ಕಾರಣದಿಂದಲೇ ಸಮಾಜದಲ್ಲಿ ಜಾತಿ ವ್ಯವಸ್ಥೆಗೆ ಪರ್ಯಾಯವಾಗಿ ವರ್ಗ ವ್ಯವಸ್ಥೆ ಮೂಡಿ ಬಂದಿತು. ಬ್ರಾಹ್ಮಣರನ್ನು ಉತ್ತಮ ಜಾತಿಯವರು ಎಂದು ಕರೆದು ಅವರನ್ನು ಮೇಲ್ವರ್ಗದವರು ಎಂದು ಘೋಷಿಸಲಾಯಿತು. ಇದು ಬ್ರಾಹ್ಮಣರು ತಾವೇ ಮಾಡಿಕೊಂಡ ಸ್ವಯಂ ಪ್ರತಿಷ್ಠೆಯ ಘೋಷಣೆಯಾಯಿತು. ಆ ಕಾಲದಿಂದ ಜಾತಿ ಪದ್ಧತಿಯಲ್ಲಿ ವರ್ಗ ವ್ಯವಸ್ಥೆ ಆರಂಭವಾಯಿತು. ಉತ್ತಮ ವರ್ಗ, ಮಧ್ಯಮ ವರ್ಗ, ಕೀಳು ವರ್ಗ, ಶೋಷಿತ ವರ್ಗ ಎಂಬುದು ನಂತರದಲ್ಲಿ ಮೂಡಿ ಬಂದ ಜಾತಿ ವ್ಯವಸ್ಥೆ ಆಯಿತು. ಬ್ರಾಹ್ಮಣರು ಉತ್ತಮ ವರ್ಗದ ಪ್ರತಿನಿಧಿಗಳಾದರು. ಅವರ ಜತೆಗೆ ವ್ಯಾಪಾರ ಮಾಡುವ ಚಾಣಾಕ್ಯ ವರ್ಗದವರು ಕೂಡಿಕೊಂಡರು. ಕ್ಷತ್ರಿಯ ವರ್ಗದವರು ತಮ್ಮನ್ನು ತಾವು ಸಮಾಜವನ್ನು ನಿಯಂತ್ರಿಸುವ ಆಳುವ ವರ್ಗದವರೆಂದು ಘೋಷಿಸಿಕೊಂಡರು. ತಮ್ಮ ಪ್ರತಿಷ್ಠೆಯನ್ನು ಸ್ಥಾಪಿಸುವ ಸಲುವಾಗಿ ಸಮಾಜದ ಮಿಕ್ಕ ಮೂರು ವರ್ಗದ ಜನರನ್ನು ಮೆಟ್ಟಿ ಆಳಲು ಉಪಕ್ರಮಿಸಿದರು.

ಸಮಾಜದ ಮಧ್ಯಮ ವರ್ಗದವರು ವ್ಯಾಪಾರ ಮಾಡುವ ವ್ಯಕ್ತಿಗಳಾಗಿದ್ದರು. ಅವಶ್ಯ ವಸ್ತುಗಳ ಉತ್ಪಾದಕರು ಆಗಿದ್ದರು. ಮಧ್ಯಮ ವರ್ಗದವರು ತಮ್ಮದೇ ಆದ ಸ್ಥಾನಮಾನವನ್ನು ಗುರುತಿಸಿಕೊಂಡು ಅದರ ಹಿನ್ನಲೆಯಲ್ಲಿ ಬದುಕಿರುತ್ತಿದ್ದರು. ಇವರು ದುಡಿದು ಗಳಿಸುವುದಕ್ಕಿಂತ ಸಮಾಜಕ್ಕೆ ಅವಶ್ಯ ವಸ್ತುಗಳನ್ನು ವಿತರಣೆ ಮಾಡಿ ತಮ್ಮ ಬದುಕನ್ನು ಸಾರ್ಥಕ ಮಾಡಿಕೊಳ್ಳುತ್ತಿದ್ದರು.

ಸಮಾಜದ ಕೆಳವರ್ಗದ ಜನ ಬಹುಮಟ್ಟಿಗೆ ಬೇಸಾಯವನ್ನು ಅವಲಂಬಿಸಿದ ಜನರಾಗಿದ್ದರು. ಇವರ ದುಡಿಮೆ ಶ್ರಮ ಜೀವನವಾಗಿತ್ತು. ಸಮಾಜಕ್ಕೆ ಇವರ ದುಡಿಮೆ ಅನಿವಾರ್ಯವಾಗಿತ್ತು. ಸ್ವಾರ್ಥಕ್ಕಿಂತ ಔದಾರ್ಯದ ಮನಸ್ಸು ಕೆಳವರ್ಗದವರಲ್ಲಿ ಇದ್ದರು ಇದನ್ನು ಅರ್ಥಮಾಡಿಕೊಳ್ಳದ ಸಮಾಜದ ಮಿಕ್ಕ ವರ್ಗದ ಜನ ಕೆಳವರ್ಗದ ಜನರನ್ನು ಹೀನಾಯ ಭಾವನೆಯಲ್ಲಿ ಕಾಣುವುದು ಅಲ್ಲಲ್ಲಿ ಸ್ವಭಾವವಾಗಿತ್ತು. ಬೇಂದ್ರೆಯವರ ಮಾತಿನಲ್ಲಿ ಹೇಳುವುದಾದರೆ 'ಅನ್ನದಾತ ರೈತ ಕಣ್ಣಲ್ಲಿ ಜೀವ ಬಿಡುವ ದುಸ್ಥಿತಿಯನ್ನು ಅನುಭವಿಸಬೇಕಾಯಿತು'.

ಶೋಷಣೆಗೆ ಒಳಗಾದ ಜನ ಸಮಾಜದಲ್ಲಿ ಸಂಖ್ಯೆಯಲ್ಲಿ ಕಡಿಮೆಯಾದರು ಅವರನ್ನು ದುಡಿಸಿಕೊಂಡು ಅವರ ದುಡಿಮೆಯಲ್ಲಿ ತಮ್ಮ ಸುಖವನ್ನು ಕಂಡುಕೊಂಡ ಮಿಕ್ಕ ವರ್ಗದ ಜನ ಗಮನಾರ್ಹ ಪ್ರಮಾಣದಲ್ಲಿ ಇದ್ದಾರೆ. ಶೋಷಣೆಗೆ ಒಳಗಾದ ವರ್ಗದವರಿಂದ ಸಮಾಜದ ಮಿಕ್ಕ ವರ್ಗದವರು ಮಾಡಿಸಿಕೊಂಡ ಸೇವೆ ಎಷ್ಟು ಕಷ್ಟಕರವಾಗಿತ್ತೋ ಎಷ್ಟೋ ಸಂದರ್ಭದಲ್ಲಿ ಅಷ್ಟೇ ಹೇಯಕರವಾಗಿತ್ತು. ಶೋಷಣೆಯ ವರ್ಗದ ಜನರ ರಕ್ತಮಾಂಸ ಮಿಕ್ಕ ವರ್ಗದವರ ಸುಖಕ್ಕೆ ಮೀಸಲು ಎಂಬ ನಿಯಮವೇ

ಸಮಾಜದಲ್ಲಿ ತಾಂಡವಾಡುತ್ತಿತ್ತು. ಇಂತಹ ಜಾತಿಯ ವ್ಯವಸ್ಥೆ - ವರ್ಗವ್ಯವಸ್ಥೆ ಬಹುಮಟ್ಟಿಗೆ ನಮ್ಮ ಸಾಮಾಜಿಕ ಶಾಂತಿಯನ್ನು ಬುಡಮೇಲು ಮಾಡಿತು ಎಂಬ ಮಾತು ನೋವಿನಿಂದ ಕೂಡಿದ ಮಹಾ ದುರಂತ ಸತ್ಯವಾಗಿದೆ.

ಸಮಾಜದ ಮೈತ್ರಿಗೆ ಸುಖಕ್ಕೆ ಸರ್ವತೋಮುಖ ಪ್ರಗತಿಗೆ ಕಾರಣವಾಗಿದ್ದ ನಮ್ಮ ಪ್ರಾಚೀನ ಜಾತಿ ಪದ್ಧತಿ ಕಾಲಾಂತರದಲ್ಲಿ ವರ್ಗ ಪದ್ಧತಿಯಾಗಿ ಅನೇಕ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟು ವರ್ತಮಾನಕ್ಕೆ ಶೋಷಣೆಗೆ ಕಾರಣವಾಯಿತು. ಇಂದು ವಿಚಾರವಾದಿಗಳು ನಮ್ಮ ಪೂರ್ವಜಾತಿ ಪದ್ಧತಿಯನ್ನು ಸಂಪೂರ್ಣ ವಾಗಿ ತ್ಯಜಿಸಿ ಮಾನವತಾವಾದ ಹಿನ್ನಲೆಯಲ್ಲಿ ಕಟ್ಟಿ ಬೆಳೆಸುವುದಕ್ಕೆ ಪ್ರಯತ್ನ ಮಾಡಿ ಈ ದಿಶೆಯಲ್ಲಿ ಕ್ರಾಂತಿಕಾರಕ ಸಂದೇಶಗಳನ್ನು ನೀಡಿ ಚಟುವಟಿಕೆಗಳನ್ನು ಮಾಡಿರುವುದನ್ನು ನಾವೆಲ್ಲಾ ಶ್ಲಾಘಿಸಲೇಬೇಕು. ಕರ್ನಾಟಕವನ್ನೇ ಪ್ರಧಾನವಾಗಿ ಪರಿಗಣಿಸಿದರೆ ಜಾತಿ, ಮತ, ಕುಲದ ಬಗ್ಗೆ ಶಿವಶರಣರು, ಹರಿದಾಸರು ಹಾಡಿರುವ ಕ್ರಾಂತಿ ನುಡಿಗಳು ಗಮನಾರ್ಹವಾದುದು. ಈ ಕ್ರಾಂತಿ ದೃಷ್ಟಿಯ ಪರಿಪೂರ್ಣ ದೃಷ್ಟಿಯೇ ರಾಷ್ಟ್ರಕವಿ ಕುವೆಂಪು ಅವರು ನೀಡಿರುವ ವಿಶ್ವಮಾನವ ದೃಷ್ಟಿಯಾಗಿದೆ - ಇದಕ್ಕೆ ಸಂಬಂಧಿಸಿದ ವಿಶ್ವ ಮಾನವ ಸಂದೇಶ ಅತ್ಯಂತ ಪ್ರಮುಖ ಸಂದೇಶವಾಗಿದೆ. ಈ ಸಂದೇಶದ ಪಾಲನೆಯನ್ನು ಇಂದು ಗ್ರಾಮೀಣ ಸಮಾಜ, ನಗರ ಸಮಾಜಗಳಲ್ಲಿ ಪರಿಭಾವಿಸಬೇಕಾಗಿದೆ. ವಿಶ್ವಮಾನವ ದೃಷ್ಟಿಯಲ್ಲಿ ಜಾತಿ ಹುಟ್ಟಿನಿಂದ ಬಂದದ್ದು ಅಲ್ಲ. ವ್ಯಕ್ತಿಯ ಹಿರಿತನ ಜೀವನ ರೀತಿಯಿಂದ ಲಭ್ಯವಾಗುತ್ತದೆ ಎಂಬ ಸಾರ್ವಕಾಲಿಕ ಸತ್ಯದ ಮಾತನ್ನು ಎಲ್ಲರೂ ನೆನಪಿಡಬೇಕು.

ಮಾನವ ಸಮಾಜದಲ್ಲಿ ಗಂಡು - ಹೆಣ್ಣು ಎಂಬ ಎರಡು ಲಿಂಗ ಪ್ರಭೇದಗಳನ್ನು ನೈಸರ್ಗಿಕವಾಗಿ ಕಾಣಬಹುದು. ಮಾನವ ವಿಕಾಸ ತತ್ವವನ್ನು ಅವಲೋಕಿಸಿದಾಗ ಈ ಗಂಡು - ಹೆಣ್ಣು ವರ್ಗಗಳ ಮೇಲೆ ಬಹುಮಟ್ಟಿನ ಚಿಂತನೆ ನಡೆದಿರುವುದು ನಮಗೆ ಗೋಚರವಾಗುತ್ತದೆ. ಗಂಡು - ಹೆಣ್ಣನ್ನು ಪರಸ್ಪರ ಸಮಭಾವನೆಯಲ್ಲಿ ಕಾಣುವುದಕ್ಕಿಂತ ಮೇಲುಕೀಳು ಎಂಬ ಭಾವನೆಯಲ್ಲಿ ಕಂಡಿರುವುದು ಅನಾದಿ ಕಾಲದಿಂದ ನಮಗೆ ತಿಳಿದು ಬರುತ್ತದೆ. ಬುದ್ಧಿಶಕ್ತಿಯಲ್ಲಿ ಇವರಿಬ್ಬರು ಪರಸ್ಪರ ಸ್ಪರ್ಧಾ ವ್ಯಕ್ತಿಗಳಾಗಿದ್ದರು ದೈಹಿಕ ಬಲ ದೃಷ್ಟಿಯಿಂದ ಹೆಣ್ಣು ಗಂಡಿಗಿಂತ ಕಡಿಮೆ ಎಂಬುದು ಎಲ್ಲ ಕಾಲಕ್ಕೂ ಸಾಧಿತವಾಗಿದೆ-ಸಾಬೀತಾಗಿದೆ. ಈ ಕಾರಣದಿಂದಲೇ ಸಮಾಜದಲ್ಲಿ ಗಂಡಿಗೆ ಮೊದಲ ಮರ್ಯಾದೆ, ಮೇಲಾದ ಸ್ಥಾನ ಪ್ರಾಪ್ತವಾಗಿದೆ. ಕೆಲವು ಸಂದರ್ಭದಲ್ಲಿ ಗಂಡು ಈ ಮೊದಲ ಸ್ಥಾನವನ್ನು ಬಲತ್ಕಾರದಿಂದ ಪಡೆದಿರುವುದುಂಟು. ಪುರಾಣ ಕಾವ್ಯಗಳಲ್ಲಿ ಸ್ತ್ರೀ ಶಕ್ತಿಯ ಬಗ್ಗೆ ಮೇಲ್ಮೆಯ ಮಾತು ಕಂಡುಬಂದರೂ ಒಂದು ಹಂತದಲ್ಲಿ ಸ್ತ್ರೀ ಶಕ್ತಿ ಪುರುಷ ಶಕ್ತಿಗೆ ಸಹಜವಾಗಿಯೆ ತಲೆಬಾಗಿರುವುದು ನಮಗೆ ಗೋಚರವಾಗುತ್ತದೆ. ಪುರುಷಪ್ರಧಾನ ಸಮಾಜವನ್ನು ಬಹುಮಟ್ಟಿಗೆ ಭಾರತೀಯ ಇತಿಹಾಸದಲ್ಲಿ ಎಲ್ಲ ಕಾಲಕ್ಕೂ ಕಾಣಬಹುದು. ಹೀಗೆ ಪುರುಷ ಪ್ರಧಾನವಾದ ಸಮಾಜ ಸ್ತ್ರೀಯರನ್ನು ಕೆಲಮಟ್ಟಿಗೆ ಶೋಷಣೆ ಮಾಡಿರುವುದು ಸತ್ಯದ ಸಂಗತಿಯಾಗಿದೆ.

ಬುದ್ಧಿ ಭಾವನೆಗಳ ಬೆಳವಣಿಗೆಯಿಂದ ಸಮಾಜದ ಸ್ತ್ರೀ ಪುರುಷರಲ್ಲಿ ಅಂತರ ಕಡಿಮೆಯಾಗಿರುವುದು ನಮಗೆ ಸ್ಪಷ್ಟವಾಗುತ್ತದೆ. ಸ್ತ್ರೀಯರು ಸಹ ವಿದ್ಯಾಭ್ಯಾಸದಲ್ಲಿ ಸಮರ್ಥರಾಗಿ ಪುರುಷರೊಂದಿಗೆ ಪೈಪೋಟಿ ಮಾಡಲು ಪ್ರಾರಂಭಿಸಿದರು. ಸಮಾಜದ ಎಲ್ಲಾ ವಲಯಗಳಲ್ಲಿಯೂ ಪುರುಷರೊಂದಿಗೆ ಸ್ತ್ರೀಯರು ತಮ್ಮ ಅಧಿಕಾರವನ್ನು ಹಂಚಿಕೊಳ್ಳಲು ಪ್ರಾರಂಭ ಮಾಡಿದರು. ಬುದ್ಧಿ ಬಲ ಸ್ತ್ರೀಯರಲ್ಲಿ ಹೆಚ್ಚಾದಾಗ ಅವರ ಬಾಹುಬಲ ಗೌಣವಾಗಿ ಹೆಣ್ಣು ಸಮಾಜದಲ್ಲಿ ಸ್ಪರ್ಧಾವ್ಯಕ್ತಿಯಾಗಿ, ಪ್ರತಿಷ್ಠಿತ ವ್ಯಕ್ತಿಯಾಗಿ, ಹೋರಾಟದ ವ್ಯಕ್ತಿಯಾಗಿ ಬದುಕಿ ಬಾಳುತ್ತಿರುವುದನ್ನು ಇಂದಿನ ಸಮಾಜದಲ್ಲಿ ನಿಚ್ಚಳವಾಗಿ ಕಾಣುತ್ತೇವೆ. ಹೆಣ್ಣು ಶೋಷಿತ ವ್ಯಕ್ತಿ ಎಂಬ ಮಾತು ಇಂದು ಕ್ರಮೇಣ ಕಡಿಮೆಯಾಗುತ್ತಿದೆ. ಇಂದು ಮಹಿಳೆಯರು ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ತನ್ನ ಸ್ವಸಾಮರ್ಥ್ಯದಿಂದ ಹಿರಿಯ ಸ್ಥಾನಮಾನಗಳನ್ನು ಅಲಂಕರಿಸುತ್ತಿದ್ದಾರೆ. ಈ ಕಾರಣದಿಂದಲೇ ಇಂದು ಹೆಣ್ಣು ಪುರುಷರೊಂದಿಗೆ ಸಮಪಾಲನ್ನು ಪಡೆಯಲು ಹೋರಾಟಕ್ಕೆ ಸಿದ್ಧಳಾಗಿದ್ದಾಳೆ.

ಹೆಣ್ಣಿನ ಸ್ಥಾನ ಸಾಮಾಜಿಕ ವಲಯದಲ್ಲಿ ಹೇಗೆ ಉತ್ತಮಗೊಂಡಿದೆಯೋ - ಪ್ರತಿಷ್ಠಿತವಾಗಿದೆಯೋ ಅದೇ ರೀತಿಯಲ್ಲಿ ಕೌಟುಂಬಿಕ ವಲಯದಲ್ಲಿಯೂ ಇಂದು ಸುಧಾರಿತವಾಗಿದೆ ಎಂಬುದು ಸುವಿದಿತ ವಿಷಯ. ಈ ಮಹಿಳಾ ಕ್ರಾಂತಿ ಸಮಾಜದ ಪ್ರಗತಿಗೆ, ರಾಷ್ಟ್ರದ ಪ್ರಗತಿಗೆ ಮೂಲ ಕಾರಣವಾದಂತೆ ಒಂದು ಕುಟುಂಬದ ಸುವ್ಯವಸ್ಥೆಗೂ ಮೂಲ ಶಕ್ತಿ ಆಯಿತು. 'ತೊಟ್ಟಿಲು ತೂಗುವ ಕೈ ರಾಷ್ಟ್ರವನ್ನು ತೂಗ ಬಲ್ಲದು' ಎಂಬುದನ್ನು ಇಂದಿನ ಮಹಿಳೆ ಸಾಧಿಸಿ ತೋರಿಸಿದ್ದಾಳೆ. ಕುಟುಂಬದಲ್ಲಿ ಆಡಳಿತ ಹೊಣೆಗಾರಿಕೆಯನ್ನು ಇಂದಿನ ಹೆಣ್ಣು ಸಂತೋಷದಿಂದ ವಹಿಸಿಕೊಂಡಿದ್ದಾಳೆ, ಅಷ್ಟೇ ಯಶಸ್ವಿಯಾಗಿ ನಿರ್ವಹಿಸಿಯೂ ಇದ್ದಾಳೆ. ನಗರ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನದ ಬಗ್ಗೆ ಸುಧಾರಣೆಯನ್ನು ಕಂಡಂತೆ ಗ್ರಾಮೀಣ ಪರಿಸರದಲ್ಲಿಯೂ ನಮಗೆ ಇದೇ ರೀತಿಯ ಸುಧಾರಣೆ ಗೋಚರವಾಗುತ್ತದೆ. ಸಮಾಜದ ಅನಿಷ್ಟ ಪದ್ಧತಿಗಳು, ಮೂಢನಂಬಿಕೆಗಳು, ಅರ್ಥಹೀನ ಸಂಪ್ರದಾಯಗಳು ಇಂದು ಗಮನಾರ್ಹ ಪ್ರಮಾಣದಲ್ಲಿ ಗ್ರಾಮೀಣ ಪರಿಸರದಲ್ಲಿ ಕಡಿಮೆಯಾಗಿದೆ ಎಂದರೆ ಇದಕ್ಕೆ ಮೂಲ ಕಾರಣ ಹೆಣ್ಣು ಗ್ರಾಮೀಣ ಪರಿಸರದಲ್ಲಿ ಇಟ್ಟ ದಿಟ್ಟ ಹೆಜ್ಜೆ ಎಂಬುದು ಸತ್ಯದ ಮಾತು. ಗಾಂಧಿಯಂತಹ ರಾಷ್ಟ್ರ ನಾಯಕರು ಭವ್ಯ ಭಾರತದ ಕಲ್ಪನೆಯ ಬಗ್ಗೆ ಆಡುತ್ತಿದ್ದ ಕನಸಿನ ಮಾತು ಇಂದು ಮಹಿಳಾ ಕ್ರಾಂತಿಯಿಂದ ನನಸಾಗುತ್ತಿದೆ ಎಂಬುದು ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ.

ಸಾಹಿತಿಗಳು ಸಮಾಜದ ಸರ್ವೋತೋಮುಖ ಪ್ರಗತಿಗೆ ಕಾರಣವಾಗುವಂತೆ ಸಮಾಜದ ಸುವ್ಯವಸ್ಥೆಗೂ ಕಾರಣರಾಗುತ್ತಾರೆ. ಈ ದಿಶೆಯಲ್ಲಿ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಹೆಣ್ಣಿನ ಸ್ಥಾನಮಾನದ ಬಗ್ಗೆ ಕುರಿತು ಅಭಿಪ್ರಾಯವನ್ನು ಕೊಡುವಾಗ ತೋರಿಸಿರುವ ದಿಟ್ಟತನ ನಿಷ್ಪಕ್ಷಪಾತ ದೃಷ್ಟಿ ಶ್ಲಾಘನೀಯವಾದದ್ದು. ಸಾಹಿತ್ಯ ಕ್ಷೇತ್ರದಲ್ಲಿ ಇಂದು ಮಹಿಳಾ ಲೇಖಕಿಯರು ತಮ್ಮ ವ್ಯಕ್ತಿತ್ವದ ಸಂರಕ್ಷಣೆಗೆ ಕೈಗೊಂಡಿರುವ

ಕ್ರಾಂತಿ ದೃಷ್ಟಿ ಅತಿ ಮುಖ್ಯವಾಗಿದೆ. ದಲಿತ ಪರವಾದ ಸಾಹಿತ್ಯ ಇಂದು ಸಾಕಷ್ಟು ಪ್ರಾಣದಲ್ಲಿ ಮೂಡಿ ಬಂದು ದಲಿತರನ್ನು ಸಂರಕ್ಷಿಸಿರುವಂತೆ ಮಹಿಳಾ ಪರ ಸ್ತ್ರೀವಾದಿ ಸಾಹಿತ್ಯ ಇಂದಿನ ಸಮಾಜದ ಮಹಿಳೆಯನ್ನು ಸಂಪೂರ್ಣವಾಗಿ ಸಂರಕ್ಷಿಸಿದೆ.

ಗ್ರಾಮಸಮಾಜದಲ್ಲಿ ಜಾತಿ-ಜೀತ-ಭೂಮಿ ಒಂದಕ್ಕೊಂದು ಪರಸ್ಪರ ನಿಕಟವಾದ ಸಂಬಂಧಗಳನ್ನು ಹೊಂದಿವೆ. ದುರಾದೃಷ್ಟ ಎನ್ನುವಂತೆ ಕೆಳಜಾತಿ-ಕೆಳವರ್ಗಗಳ ಬದುಕನ್ನು ಈ ಸಂಬಂಧಗಳು ನಿರ್ಧರಿಸುತ್ತವೆ. ಗ್ರಾಮ ಸಮಾಜದಲ್ಲಿ ಮೇಲ್ಜಾತಿ-ಮೇಲ್ವರ್ಗಗಳ ಒಡೆತನದಲ್ಲಿ ಭೂಮಿ ಕೇಂದ್ರೀಕೃತವಾಗಿರುವಂತೆಯೇ ಅಧಿಕಾರವು ಗ್ರಹಣವಾಗಿರುತ್ತದೆ. ಭಾರತೀಯ ಅಂತಯೇ ಕರ್ನಾಟಕದ ಸಮಾಜದಲ್ಲಿ ಸಾಮಾಜಿಕ ಏಣಿ-ಶ್ರೇಣಿ ವ್ಯವಸ್ಥೆ ವಿಶಿಷ್ಟ ರೀತಿಯಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜಾತಿ ಭೇದ, ಅಸಮಾನತೆ ದಬ್ಬಾಳಿಕೆ ನಿರಂತರವಾಗಿ ನಡೆದುಕೊಂಡು ಬರಲು ಜಾತಿ-ಜೀತ-ಭೂಮಿ ಸಂಬಂಧಗಳು ಪ್ರಮುಖ ಕಾರಣಗಳು. ಸ್ಪೃಶ್ಯ-ಅಸ್ಪೃಶ್ಯವಾದ ತಾರತಮ್ಯವನ್ನು ಸೃಷ್ಟಿಸಿದ ವ್ಯವಸ್ಥೆ ಸಾಮಾಜಿಕ ವಿಷಯದಲ್ಲಿ ಮಾತ್ರ ಭಾಗವಹಿಸದೆ ಆರ್ಥಿಕ ಕ್ಷೇತ್ರಕ್ಕೆ ವಿಸ್ತರಿಸಿ ಭೂರಹಿತ ಸಮಾಜಗಳನ್ನು ಸೃಷ್ಟಿಸಿತು.

ಊಳಿಗಮಾನ್ಯ ವ್ಯವಸ್ಥೆ, ಪುರೋಹಿತಶಾಹಿ ವ್ಯವಸ್ಥೆ, ಪಟ್ಟಭದ್ರ ಹಿತಾಸಕ್ತಿಗಳು ಜಾತಿಯನ್ನು ನಿರಂತರವಾಗಿ ಕಾಪಾಡಿಕೊಂಡೇ ಬಂದಿವೆ. ಜಮೀನ್ದಾರರ ಕಪಿಮುಷ್ಟಿಯಲ್ಲಿ ಬದುಕುತ್ತಿದ್ದ ಅಸಂಖ್ಯ ಭೂರಹಿತ ಸಮುದಾಯಗಳು ಹಲವಾರು ಸಂಕಷ್ಟಗಳಲ್ಲಿ, ಬಡತನದ ಬೇಗೆಯಲ್ಲಿ ಬದುಕುತ್ತಿದ್ದರೂ ಒಡೆಯ-ಆಳು ಬದುಕಿನ ಸಂಬಂಧ ಒಂದು ಕಾಲಕ್ಕೆ ಗಟ್ಟಿಯಾಗಿತ್ತು. ಒಡೆಯರ ಜೊತೆಗೆ ಕೆಳವರ್ಗದವರ ಬದುಕಿನಲ್ಲಿ ಸಂಘರ್ಷ-ಸಾಮರಸ್ಯವನ್ನು ಗುರುತಿಸಬಹುದು. ಜಾತಿ ಭಾರತದಲ್ಲಿ ಇಂದಿಗೂ ಜೀವಂತವಾದ ಗತಶೀಲ ಸಂಸ್ಥೆ. ಜಾತಿ ಸಾಮಾಜಿಕತೆಗೆ ಸಂಬಂಧಿಸಿದರೆ, ಜೀತ-ಭೂಮಿ ಇವೆರಡು ಆರ್ಥಿಕತೆಗೆ ಸಂಬಂಧಿಸಿರುತ್ತವೆ. ಆದರೆ ಜಾತಿ ಅದರ ವ್ಯಾಪ್ತಿ ಕೇವಲ ಸಾಮಾಜಿಕತೆಗಷ್ಟೇ ಸೀಮಿತವಾಗಿಲ್ಲ. ಗ್ರಾಮಗಳಲ್ಲಿ ಜಾತಿಯ ಮೂಲಕವೇ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಸಂಬಂಧಗಳು, ಬದಲಾವಣೆಗಳು ಜಾತಿಯ ಸುತ್ತ ಹೆಣೆದುಕೊಂಡಿರುತ್ತವೆ. ಬೇಸಾಯ ಗ್ರಾಮ ಭಾರತದ ಬಹುಮುಖ್ಯ ಕಸುಬು. ಗ್ರಾಮ ಸಮಾಜದಲ್ಲಿ ಭೂಮಿ ಒಂದು ಸಂಪತ್ತು ಹಾಗೂ ಪ್ರತಿಷ್ಠೆಯ ಸಂಕೇತವೂ ಆಗುತ್ತದೆ. ಭೂಮಿ ಉತ್ಪಾದನಾ ಕ್ಷೇತ್ರವಾಗುತ್ತಾ ನಡೆದಂತೆಲ್ಲಾ ಒಡೆತನ ಮತ್ತು ಆಳು ಸಂಬಂಧಗಳು ಘಟಿಸುತ್ತಾ ಹೋದವು. ದುಡಿಮೆಯ ಉತ್ಪಾದನಾ ಕ್ಷೇತ್ರವು ಸಮಾಜವನ್ನು ವಿವಿಧ ವರ್ಗಗಳಾಗಿ ವಿಭಜಿಸಿತು. ಬುದ್ಧಿವಂತ ವರ್ಗ ಕೂತಲ್ಲಿಯೇ ದುಡಿಯುವ ವರ್ಗವನ್ನು ದುಡಿಮೆಗೆ ಹಚ್ಚಿತು. ಈ ವರ್ಗ ತಮ್ಮ ಮಕ್ಕಳ ಕಾಲಕ್ಕೆ ಇನ್ನೂ ಮುಂದಿನ ಕಾಲಕ್ಕೆ ಆಸ್ತಿ, ಸಂಪತ್ತು ಬೇಕಾಗುತ್ತದೆಂದು ದುಡಿಯುವವರನ್ನು ಮತ್ತಷ್ಟು ದುಡಿಮೆಗೆ ಹಚ್ಚಿದರು. ವೃತ್ತಿಗಳಿಂದಲೇ ಇಂತಹ ವಿಭಾಗವೂ ಆ ಕಾಲಕ್ಕೆ ನಡೆಯಿತು. ಮನುಷ್ಯ ಸಮೂಹವೇ ಒಟ್ಟಾಗಿ ದುಡಿದು ಸಾಮೂಹಿಕವಾಗಿ ಬದುಕುತ್ತಿದ್ದ ಸಮುದಾಯವು ಒಡೆದು ವ್ಯಕ್ತಿಗಳಾಗಿ, ವರ್ಗಗಳಾಗಿ ಮಾರ್ಪಟ್ಟದ್ದು ಶ್ರಮ ವಿಭಜನೆಯ ಫಲವಾಗಿಯೇ ಎನ್ನಬಹುದು.

ಗೊರೂರವರ ಸಾಹಿತ್ಯದಲ್ಲಿ ಜಾತಿ-ವರ್ಗ ಮತ್ತು ಸಮಾಜದ ಲಿಂಗ ವ್ಯವಸ್ಥೆ ಇವುಗಳ ಪರಿಕಲ್ಪನೆ ಕುರಿತಂತೆ ವೈಚಾರಿಕ ದೃಷ್ಟಿಯನ್ನು, ಕ್ರಾಂತಿ ದೃಷ್ಟಿಯನ್ನು ಹಾಗೂ ಪ್ರಗತಿಪರ ದೃಷ್ಟಿಯನ್ನು ಚೆನ್ನಾಗಿ ಕಾಣಬಹುದಾಗಿದೆ. ಗೊರೂರವರ ಕೃತಿಗಳಲ್ಲಿ ಎಲ್ಲಾ ವರ್ಗದ, ಎಲ್ಲಾ ಮನೋಧರ್ಮದ ಮಹಿಳಾ ಪ್ರತಿನಿಧಿಗಳನ್ನು ಪಾತ್ರಗಳ ರೂಪದಲ್ಲಿ ಕಾಣಬಹುದು. ಮುಖ್ಯವಾಗಿ ಗ್ರಾಮೀಣ ಪರಿಸರದಲ್ಲಿದ್ದ ಜಾತಿ-ವರ್ಗ-ಲಿಂಗ ವ್ಯವಸ್ಥೆಗಳನ್ನು ಗೊರೂರವರು ಪರಿಭಾವಿಸಿದ ಬಗೆಯನ್ನು ಅವರ ಕೃತಿಗಳ ಹಿನ್ನೆಲೆಯಲ್ಲಿ ನಾವು ವಿಶ್ಲೇಷಿಸಬಹುದಾಗಿದೆ. ಲೇಖಕರು ಜಾತಿ ವ್ಯವಸ್ಥೆಯ ಬಗ್ಗೆಯೂ ವೈಚಾರಿಕ ಮನೋಭಾವವನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ವ್ಯಕ್ತಿಯ ನಿಜವಾದ ಜಾತಿ ಹುಟ್ಟಿನಿಂದ ಬಂದದ್ದು ಅಲ್ಲ, ಜೀವನದ ರೀತಿಯಿಂದ ಮೂಡಿ ಬಂದ ಮೌಲಿಕಗುಣ ಎಂದು ಮುಕ್ತ ಮನಸ್ಸಿನಿಂದ ತಿಳಿಸಿದ್ದಾರೆ. ಇಂಥ ಸಂದರ್ಭಗಳಲ್ಲಿ ಬ್ರಾಹ್ಮಣರಲ್ಲಿ ಕಾಣುವಂತಹ ದೋಷಗಳನ್ನು ನಿರ್ಭಯವಾಗಿ ಗೊರೂರವರು ಲೇವ್ಡಿ ಮಾಡಿದ್ದಾರೆ. ಅದೇ ಸಂದರ್ಭದಲ್ಲಿ ಕೀಳು ಜಾತಿಯಲ್ಲಿ ಕಾಣುವ ಮೇಲ್ಮೆಯ ಗುಣ ವರ್ತನೆಗಳನ್ನು ಅವರು ಮುಕ್ತ ಮನಸ್ಸಿನಿಂದ ಶ್ಲಾಘಿಸಿದ್ದಾರೆ. ಈ ಕಾರಣದಿಂದಲೇ ಗೊರೂರವರನ್ನು ನಿಜವಾದ ಅರ್ಥದಲ್ಲಿ ಸಾಮಾಜಿಕ ಪ್ರಜ್ಞೆಯ ನಿಷ್ಪಕ್ಷಪಾತ ದೃಷ್ಟಿಯ ಉತ್ತಮ ಸಾಹಿತಿಯೆಂದು ಕರೆಯುವುದು. ಇಂತಹ ಸಾಹಿತ್ಯಕ ಮೌಲ್ಯ ಕೃತಿಗೆ ಸಾರ್ವಕಾಲಿಕ ಮೌಲ್ಯವನ್ನು ತಂದುಕೊಡುತ್ತದೆ. ಗೊರೂರವರು ಗ್ರಾಮ ಸಮಾಜದ ಪ್ರಾತಿನಿಧಿಕ ಸಾಹಿತಿ ಎನಿಸಿಕೊಳ್ಳುವಲ್ಲಿ ತಮ್ಮ ವಿಶಿಷ್ಟ ಕೃತಿಗಳ ಮೂಲಕ ಸಮರ್ಥ ವ್ಯಕ್ತಿಗಳಾಗಿದ್ದಾರೆ.

ಬಹುಮಟ್ಟಿಗೆ ವ್ಯಕ್ತಿಗೆ ಶ್ರೀಮಂತಿಕೆ ಹೇಳಲಾಗದ ಗರ್ವ ತಂದುಕೊಡುತ್ತದೆ. ಇಂತಹ ಸೊಕ್ಕಿನ ಶ್ರೀಮಂತರು ಬಡವರಿಗಾಗಲಿ ಮತ್ತೆ ಯಾರ ಕಷ್ಟಕ್ಕೆ ಆಗಲಿ ಸ್ಪಂದಿಸುವುದಿಲ್ಲ. ಇಂತಹ ಶ್ರೀಮಂತರ ದುಷ್ಟ ವರ್ತನೆಯನ್ನು ಗೊರೂರವರು 'ಮರೆಯಾದ ಮಾರಮ್ಮ' ಕೃತಿಯಲ್ಲಿ 'ದೇವರು ಎಚ್ಚರಿಸುತ್ತಾನೆ' ಎಂಬ ಕತೆಯಲ್ಲಿ ಪ್ರಾಸಂಗಿಕವಾಗಿ ಉದಾಹರಿಸುವುದುಂಟು. ಒಮ್ಮೆ ಗೊರೂರವರ ಮನೆಗೆ ಅವರ ಬಂಧುಗಳು ಬಂದಿದ್ದಾಗ ಅವರ ಮಗುವಿಗೆ ಡಿಫ್ತೀರಿಯಾ ಉಂಟಾಗುತ್ತದೆ. ವಿಧಿ ಇಲ್ಲದೆ ಚಿಕಿತ್ಸೆಗಾಗಿ ಮಗುವನ್ನು ಹಾಸನಕ್ಕೆ ಕರೆದುಕೊಂಡು ಹೋಗಬೇಕಾದ ಪರಿಸ್ಥಿತಿ ಬರುತ್ತದೆ. ಅದರ ದುರಾದೃಷ್ಟಕ್ಕೆ ಅಂದು ಹಾಸನಕ್ಕೆ ಸಮಯಕ್ಕೆ ಸರಿಯಾಗಿ ಬಸ್ಸು ಸಿಗುವುದಿಲ್ಲ. ಆಗ ಗೊರೂರವರ ಬಂಧುಗಳು ಆ ಮಾರ್ಗದಲ್ಲಿ ಹಾಸನಕ್ಕೆ ಹೋಗುವ ಒಂದು ಕಾರನ್ನು ಅಡ್ಡಗಟ್ಟಿ ಕಾರಿನ ಮಾಲಿಕರನ್ನು ಅತಿ ದೈನ್ಯದಿಂದ "ಮಗು ಸಾಯುತ್ತಿದೆ. ಬಸ್ಸು ಬರಲಿಲ್ಲ. ತತ್‌ಕ್ಷಣ ಔಷಧಿ ತರಬೇಕು. ಹಾಸನದವರೆಗೆ ಕರೆದುಕೊಂಡು ಹೋಗಿ, ನಿಮಗೆ ಎಷ್ಟು ಹಣ ಬೇಕೋ ಕೊಡುತ್ತೇನೆ. ದಯವಿಟ್ಟು ಮಗುವನ್ನು ಬದುಕಿಸಿ, ನಿಮಗೆ ಪುಣ್ಯ ಬರುತ್ತೆ" ಎಂದು ಅತ್ತೇ ಬಿಟ್ಟರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪;ಪು. ೧೦೩) ನಿರ್ದಯಿಗಳಾದ ಕಾರಿನ ಯಜಮಾನರು ಗೊರೂರರ ಬಂಧುಗಳ ಮಾತಿಗೆ ಸ್ಪಂದಿಸುವುದಿಲ್ಲ. "ಇವರೆಲ್ಲ ನಮ್ಮನ್ನು ಕೂರಿಸುವುದಿಲ್ಲ. ನೀವು ಸುಮ್ಮನೆ ಕಂಠಶೋಷಣೆ ಮಾಡಿಕೊಂಡು ಆಯಾಸಪಟ್ಟಿರಿ" (ಅದೇ) ಎಂದು ಗೊರೂರವರು ಬಂಧುಗಳಿಗೆ ಹೇಳುತ್ತಾರೆ. ಗೊರೂರವರ ನೆಂಟರು ಆನಂತರ ಬಸ್ಸಿನಲ್ಲಿ ಹೋಗಿ

ಔಷಧಿ ತರುವ ವೇಳೆಗೆ ಮಗು ಉಳಿದಿರಲಿಲ್ಲ. ಸಕಾಲದಲ್ಲಿ ಔಷಧಿಯನ್ನು ಕೊಟ್ಟಿದ್ದರೆ ಮಗು ಉಳಿಯುತ್ತಿತ್ತು ಎಂದು ಗೊರೂರರವರ ಬಂಧುಗಳು ಕೊರಗುತ್ತಾರೆ. ಲೇಖಕರು ಈ ಸಂದರ್ಭದಲ್ಲಿ ಶ್ರೀಮಂತರಲ್ಲಿ ಕಾಣುವ ಮಾನವೀಯತೆಯ ಕೊರತೆಯನ್ನು ನೆನಪಿಸಿಕೊಟ್ಟಿದ್ದಾರೆ. ಶ್ರೀಮಂತಿಕೆಯ ಜತೆಗೆ ಹೃದಯವಂತಿಕೆಯೂ ವ್ಯಕ್ತಿಗೆ ಅನಿವಾರ್ಯ ಎಂಬ ವಿಷಯವನ್ನು ಇಲ್ಲಿ ತಿಳಿಸಿರುವುದು ಗಮನಿಸಬೇಕಾದ ಅಂಶವಾಗಿದೆ. ಶ್ರೀಮಂತಿಕೆ ವ್ಯಕ್ತಿಯಲ್ಲಿ ಮಾನವೀಯತೆಯನ್ನು ಮುಚ್ಚಿಹಾಕುವ ಪ್ರಾಸಂಗಿಕ ಸತ್ಯಾಂಶವನ್ನು ಈ ಸಂದರ್ಭದಲ್ಲಿ ಲೇಖಕರು ವ್ಯಕ್ತಪಡಿಸಿದ್ದಾರೆ.

ಶ್ರೀಮಂತರಿಗೆ ಬಡವರ ಸೊತ್ತಿನ ಮೇಲೆ ಸದಾ ಹದ್ದಿನ ಕಣ್ಣು ಇರುತ್ತದೆ. ಬಡವರು ಸಾಲ ಕೇಳಲು ಬಂದಾಗಲೇ ಶ್ರೀಮಂತರು ಬಡವನ ಆಸ್ತಿಯ ಮೇಲೆ ಕಣ್ಣಿಟ್ಟು ಅದನ್ನು ದಕ್ಕಿಸಿಕೊಳ್ಳುವುದಕ್ಕೆ ಸದಾ ಚಿಂತಿಸುತ್ತಿರುತ್ತಾರೆ. ಆದರೆ ಬಡವರು ತಮ್ಮ ಗೋ ಸಂಪತ್ತಿನ ಮೂಲಕ ಶ್ರೀಮಂತರ ಸಾಲ ತೀರಿಸಿ ತಮ್ಮ ಆಸ್ತಿಯನ್ನು ಉಳಿಸಿಕೊಳ್ಳುವುದು ಅನೇಕ ಘಟನೆಗಳಲ್ಲಿ ಕಂಡು ಬರುತ್ತದೆ. ಇದಕ್ಕೆ ಉದಾಹರಣೆಯನ್ನು 'ಕಮ್ಮಾರ ವೀರಭದ್ರಾಚಾರಿ' ಕೃತಿಯಲ್ಲಿ 'ಕಾಮಧೇನುವಿನ ಕೃಪೆ' ಕತೆಯಲ್ಲಿ ಕಾಣಬಹುದು. ಜನ್ನಪ್ಪ ನಿಷ್ಠಾವಂತ ಬಡ ಬ್ರಾಹ್ಮಣ. ತನ್ನ ಸಂಸಾರದ ಕಷ್ಟಕ್ಕಾಗಿ ಸಾಹುಕಾರರ ಬಳಿ ಸಾಲ ಪಡೆಯುತ್ತಾನೆ. ಸಾಲ ಕೊಡುವ ಶ್ರೀಮಂತನಿಗೆ ಜನ್ನಪ್ಪನ ತೋಟದ ಮೇಲೆ ಕಣ್ಣಿರುತ್ತದೆ. ಜನ್ನಪ್ಪ ಸಾಲ ತೀರಿಸಲು ಅಶಕ್ತನಾಗುತ್ತಾನೆ. ಆದಕಾರಣ ಕೊಡಬೇಕಾದ ಸಾಲಕ್ಕಾಗಿ ಅವನ ತೋಟವನ್ನು ದಕ್ಕಿಸಿಕೊಳ್ಳಬಹುದೆಂದು ಯೋಚಿಸುತ್ತಾನೆ. ಆದರೆ ಅದಕ್ಕೆ ವಿರುದ್ಧವಾಗಿ ಜನ್ನಪ್ಪ ತನ್ನ ಧೇನುವಿನ ಸಹಾಯದಿಂದ ಸಾಹುಕಾರನ ಸಾಲವನ್ನು ತೀರಿಸಿ ಋಣಮುಕ್ತನಾಗುತ್ತಾನೆ. ಸಾಹುಕಾರನಿಗೆ ಈ ಘಟನೆ ನಿರಾಶೆಯನ್ನು ನೋವನ್ನು ತರುತ್ತದೆ. ಜನ್ನಪ್ಪನು "ಕಾಮಧೇನುವಿನ ಕೃಪೆಯಾದರೆ ತೀರುವುದು ಎಷ್ಟು ಹೊತ್ತು" ಎಂದುಕೊಂಡು ತಮ್ಮ ಹಸುಗಳನ್ನೇ ಚೆನ್ನಾಗಿ ಮೇಯಿಸುತ್ತಿದ್ದಾರೆ. ಜನ್ನಪ್ಪನಂತೂ ಹಸುವನ್ನು "ನನ್ನ ಮನೆ ದೇವರು" ಎನ್ನುತ್ತಾನೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪;ಪು.೨೩೭) ಈ ಘಟನೆಯಲ್ಲಿ ಗೊರೂರರವರು ಗೋ ಸಂಪತ್ತು ಹಳ್ಳಿಯವರ ಸಾಲದ ಆಪತ್ತನ್ನು ಕಳೆದುಕೊಳ್ಳುವುದಕ್ಕೆ ಒಂದು ಉತ್ತಮ ಸಾಧನ ಎಂದು ತಿಳಿಸಿದ್ದಾರೆ. ಈ ಘಟನೆಯ ಮೂಲಕ ಶ್ರೀಮಂತರಿಗೆ ಬಡವರ ಮೇಲೆ ಎಷ್ಟು ಕ್ರೂರ ಭಾವನೆಗಳು ಇದೆ ಎಂಬುದು ಸಹ ನಮಗೆ ವೇದ್ಯವಾಗುತ್ತದೆ. ಇಂದಿಗೂ ಸಹ ಹಳ್ಳಿಯ ವಾತಾವರಣದಲ್ಲಿ ಇಂತಹದೇ ಸ್ಥಿತಿಯನ್ನು ಕಂಡರೆ ಆಶ್ಚರ್ಯವಿಲ್ಲವೆಂದು ಲೇಖಕರು ತಿಳಿಸುತ್ತಾರೆ. ಬದುಕಿ ಬದುಕಿಸುವ ಸೌಹಾರ್ದ ಗುಣ ಶ್ರೀಮಂತರಲ್ಲಿ ಇಲ್ಲವಾಗುತ್ತಿದೆ ಎಂಬುದೇ ಗೊರೂರವರ ಮನೋವೇದನೆಯಾಗಿದೆ.

ಶ್ರೀಮಂತಿಕೆಯ ಅಹಂ ಸಂಸಾರದಲ್ಲಿ ಬಾಂಧವ್ಯದಲ್ಲಿ ತನ್ನದೇ ಆದ ಗರ್ವವನ್ನು ತನ್ನ ನಡತೆಯಲ್ಲಿ ತೋರಿಸುತ್ತದೆ. ಶ್ರೀಮಂತರ ಮಗಳನ್ನು ಗೋಪಾಲ ಮದುವೆಯಾಗಿ ಪಡುವ ನೋವು

ಅವನಿಗಷ್ಟೇ ಅಲ್ಲದೆ ಅವನ ಬಳಗದವರಿಗೂ ಅಸಹನೀಯವಾದದ್ದು-ಅಸಹ್ಯವಾದದ್ದು. ಗೋಪಾಲನ ಮಾವ ಜಿಲ್ಲಾಧಿಕಾರಿ. ಅಂತಸ್ತಿನ ಸೊಕ್ಕು ಅವನಲ್ಲಿ ಮಿತಿಮೀರಿ ಇರುತ್ತದೆ. ಗೋಪಾಲನ ಮದುವೆಯಾದ ನಂತರ ಅವನು ಆಡುವ ಮಾತು "ಪ್ರಾಣಿಯನ್ನು ದೇವತೆಗೆ ಬಲಿಕೊಟ್ಟದಾಯಿತು. ಇನ್ನು ನಿಮ್ಮ ಅಪ್ಪನಿಗೂ ಹೆದರುವುದಿಲ್ಲ" ಎಂಬ ಮುಖಭಾವವನ್ನು ಮಾಡಿಕೊಂಡು ರಂಗಪ್ಪನವರನ್ನು ನೋಡುತ್ತಾ ಸುಂದರರಾಜನ್ ಒಳಗೆ ಹೋಗಿ ವಿಶ್ರಾಂತಿಗಾಗಿ ಮಂಚದ ಮೇಲೆ ಬಿದ್ದುಕೊಂಡರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೩೭) ಇಲ್ಲಿ ರಂಗಪ್ಪನವರು ಸುಂದರರಾಜನ್‌ರವರ ಸಂಬಂಧದಿಂದ ಮಾನಸಿಕ ವೇದನೆಯನ್ನು ಅನುಭವಿಸುತ್ತಾರೆ. ರಂಗಪ್ಪನ ಬಳಗದವರೆಲ್ಲರಿಗೂ ಇದೇ ನೋವು ಕಾಡುತ್ತದೆ. ಗೊರೂರರವರು ಈ ಘಟನೆಯಲ್ಲಿ ಸಾಮಾನ್ಯ ಕುಟುಂಬದ ಸ್ಥಿರ ಚಿತ್ರವನ್ನು ನೀಡಿದ್ದಾರೆ. ಸಂಬಂಧ ಮಾಡುವಾಗ ಸೌಹಾರ್ದತೆಗೆ ಯಾವ ರೀತಿಯಿಂದಲೂ ದಕ್ಕೆ ಬರದ ರೀತಿಯಲ್ಲಿ ಬಾಂಧವ್ಯ ಇರಬೇಕೆಂದು ಗೊರೂರರವರ ಎಚ್ಚರಿಕೆಯ ಮಾತು ಔಚಿತ್ಯಪೂರ್ಣವಾಗಿದೆ. ಶ್ರೀಮಂತಿಕೆಯ ಸೊಕ್ಕು ಸಾಮಾಜಿಕ ಪರಿಸರದಲ್ಲಿ ಅಷ್ಟೇ ಅಲ್ಲ ಸಾಂಸಾರಿಕ ವಲಯದಲ್ಲಿಯೂ ಹೇಗೆ ಘಾಸಿ ತರುತ್ತದೆ ಎಂಬುದನ್ನು ಇಲ್ಲಿ ಮನಗಾಣಬಹುದು. ಹೆಣ್ಣಿನ ಮನೋಧರ್ಮಕ್ಕೆ ಗಂಡು ಹೊಂದಿಕೊಳ್ಳಬೇಕು ಎಂಬುದು ಒಪ್ಪುವ ಮಾತಾದರು ಹೆಣ್ಣಿನ ಶ್ರೀಮಂತಿಕೆಯ ತಾಳಕ್ಕೆ ಗಂಡು ಕುಣಿಯಬೇಕು ಎಂಬುದು ಅಷ್ಟೇ ಖಂಡನೀಯವಾದ ಸಂಗತಿಯಾಗಿದೆ. ಹೀಗೆ ಶ್ರೀಮಂತಿಕೆಯ ಸೊಕ್ಕಿನ ರೀತಿಯನ್ನು ಲೇಖಕರು ತಮ್ಮ ಕೃತಿಗಳಲ್ಲಿ ವಿವಿಧ ಆಯಾಮಗಳಲ್ಲಿ ಬಿಡಿಸಿ ತೋರಿಸಿದ್ದಾರೆ. ಇಂತಹ ಸಂದರ್ಭಗಳಲ್ಲಿ ವ್ಯಕ್ತಿಯ ಮನಸ್ಥಿತಿಯನ್ನು ಗೊರೂರರವರು ಬಿಡಿಸುವ ರೀತಿ ಅತ್ಯಂತ ಸಹಜವೂ ಅಷ್ಟೇ ಕಲಾತ್ಮಕವೂ ಆಗಿದೆ.

ಶ್ರೀಮಂತ ವರ್ಗದ ಶೋಷಣೆ ಒಂದು ರೀತಿಯಾದರೆ ಉತ್ತಮ ಜಾತಿಯವರ ಶೋಷಣೆ ಅಷ್ಟೇ ತೀವ್ರವಾದದ್ದು. ಕೀಳುಜಾತಿಯವರು ಉತ್ತಮ ಜಾತಿಯವರಿಂದ ಪಡುವ ಪಾಡುಗಳೆಲ್ಲ ಶೋಷಣೆಯ ಹಲವು ರೀತಿಯವು ಆಗಿರುತ್ತವೆ. ಇದಕ್ಕೆ ಉದಾಹರಣೆಯನ್ನು 'ಗರುಡಗಂಬದದಾಸಯ್ಯ' ಕೃತಿಯ 'ಹಾರುವಯ್ಯ ಕ್ಷೌರಿಕನಾದುದು' ಎಂಬ ಪ್ರಬಂಧದಲ್ಲಿ ಕ್ಷೌರಿಕನಿಗೆ ಉತ್ತಮ ಜಾತಿಯವರಿಂದ ಒದಗಿ ಬಂದ ಶೋಷಣೆಯ ಪರಿಸ್ಥಿತಿಯನ್ನು ಗುರುತಿಸಬಹುದು. ಕ್ಷೌರಿಕ ನಂಜ ಮಲ್ಲಿಗೆಹಳ್ಳಿಯಲ್ಲಿ ತನ್ನ ವೃತ್ತಿಯನ್ನು ಬ್ರಾಹ್ಮಣರ ಕೃಪೆಯಿಂದ ನಡೆಸಿಕೊಂಡು ಹೋಗುತ್ತಿದ್ದನು. ಬ್ರಾಹ್ಮಣರು ನಂಜನಿಗೆ ಭೂಮಿಯನ್ನು ಕ್ಷೌರದ ಸಲುವಾಗಿ ದತ್ತಿ ಬಿಟ್ಟುಕೊಟ್ಟಿದ್ದರು. ಆದರೆ ಒಮ್ಮೆ ಸಿದ್ಧನ ಮಗನ ಮದುವೆ ವೈಭವದಿಂದ ನಡೆಯಿತು. ಅಂದು ನಂಜ ಸಿದ್ಧನ ಮಗನಿಗೆ ಕ್ಷೌರ ಮಾಡುತ್ತಾನೆ. ಸಂಪ್ರದಾಯದಂತೆ ಸಿದ್ಧನ ಮಗ ಕೂದಲನ್ನು ತೆಗೆದು ಹಾಕುವುದಿಲ್ಲ. ಆ ಸಿದ್ಧ ಕೂದಲನ್ನು ತೆಗೆದು ಹಾಕಲು ನಂಜನಿಗೆ ಒತ್ತಾಯ ಮಾಡುತ್ತಾನೆ. ನಂಜ ಜೋಡಿದಾರರ ಭಯದಿಂದ ಮೊದಲು ಎತ್ತಿ ಹಾಕಲು ಹಿಂತೆಗೆಯುತ್ತಾನೆ. ಆನಂತರ ಸಿದ್ಧನ ಒತ್ತಾಯದಿಂದ ನಂಜ ಕೂದಲನ್ನು ಎತ್ತಿ ಹಾಕುತ್ತಾನೆ. ಜೋಡಿದಾರರು ನಂಜನ ಜಮೀನನ್ನು ಕಿತ್ತುಕೊಳ್ಳುತ್ತಾರೆ. ತತ್ಪರಿಣಾಮವಾಗಿ ನಂಜ ಹಳ್ಳಿಯಲ್ಲಿ ಕ್ಷೌರ ಮಾಡದೆ ಉಳಿಯುತ್ತಾನೆ.

ಆಗ ಹಳ್ಳಿಯಲ್ಲಿ ಎಲ್ಲಾ ಬ್ರಾಹ್ಮಣರು ವಿಧಿ ಇಲ್ಲದೆ ಗಡ್ಡದ ಜೋಗಿಗಳಾಗಿ ಅಧಿಕಾರಿಗಳ ಅಪಹಾಸ್ಯಕ್ಕೆ ಗುರಿಯಾಗುತ್ತಾರೆ. ಈ ಘಟನೆಯಲ್ಲಿ ಕೀಳುಜಾತಿಯವನಾದ ನಂಜನಿಗೆ ಉತ್ತಮ ಜಾತಿಯವರು ಮಾಡಿದ ಶೋಷಣೆ ಗಮನಾರ್ಹವಾದದ್ದು. ಇಂತಹ ಘಟನೆಗಳು ಉತ್ತಮ ಜಾತಿಯವರಿಂದ ಸಾಕಷ್ಟು ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಡೆದಿದೆ ಎಂದು ಗೊರೂರರವರು ನೆನಪು ಮಾಡಿಕೊಟ್ಟಿದ್ದಾರೆ.

ಉತ್ತಮ ಜಾತಿಯವರ ಶೋಷಣೆಯ ಕರಾಳ ಸ್ವರೂಪವನ್ನು 'ಹೇಮಾವತಿ' ಕಾದಂಬರಿಯ ಮತ್ತೊಂದು ಘಟನೆಯಲ್ಲಿ ಕಾಣಬಹುದು. ಆನಂದ ಮತ್ತು ಚೆನ್ನಿಯ ಘಟನೆಯಲ್ಲಿ ಆನಂದ ಬ್ರಾಹ್ಮಣ, ಚೆನ್ನಿ ಹೊಲೆಯರ ಜಾತಿಗೆ ಸೇರಿದವಳು. ಚೆನ್ನಿಗೆ ಸಂಗೀತದ ಮೇಲೆ ಆಸಕ್ತಿ ಇದೆ. ಕಲೆಯುವ ಸಾಮರ್ಥ್ಯವೂ ಪೂರ್ಣ ಇದೆ. ಇದನ್ನು ಅರಿತ ಆನಂದ ಚೆನ್ನಿಗೆ ಸಂಗೀತ ಪಾಠವನ್ನು ಹೇಳಿಕೊಡುತ್ತಾನೆ. ಆಗ ಚೆನ್ನಿಯ ತಂದೆ ಕಾಳ ತಮ್ಮ ಜಾತಿಯವರ ಮೇಲೆ ಉತ್ತಮ ಜಾತಿಯವರು ನಡೆಸಬಹುದಾದ ಕ್ರೂರ ಕಿರುಕುಳವನ್ನು ಆನಂದನಿಗೆ ತಿಳಿಸುತ್ತಾನೆ. ಕಾಳನ ಎಚ್ಚರವನ್ನು ಆನಂದನು ಗಮನಿಸದೇ ಇದ್ದಾಗ ಉತ್ತಮ ಜಾತಿಯವರೆಲ್ಲ ಹೊಲೆಯರ ಮನೆಗಳನ್ನು ಧ್ವಂಸ ಮಾಡಲು ಪ್ರವರ್ತಿಸುತ್ತಾರೆ. ಆಗ ಕಾಳ ಆನಂದನನ್ನು "ಒಡೆಯಾ, ನೀವು ಇನ್ನು ಚೆನ್ನಿಗೆ ಪಾಠ ಹೇಳಬೇಡಿ. ನಮ್ಮ ಹತ್ತಿರಕ್ಕೆ ಬರಬೇಡಿ. ನೀವು ನಾಲ್ಕು ವರುಷ ಊರು ಬಿಟ್ಟರೂ ಚಿಂತೆಯಿಲ್ಲ. ನೀವು ಹೀಗೆ ಮಾಡದಿದ್ದರೆ ಈ ಊರ ಹೊಲೆಯರು ನಿರ್ನಾಮವಾಗುತ್ತಾರೆ" ಎಂದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೫೭) ಈ ಮಾತಿಗೆ ಅನುಗುಣವಾಗಿ ಉತ್ತಮ ಜಾತಿಯವರು ನಡೆದುಕೊಂಡ ಕರಾಳ ವರ್ತನೆಯನ್ನು ಗೊರೂರರವರು ಚಿತ್ರಿಸುವುದರ ಮೂಲಕ ಕೀಳುಜಾತಿಯವರ ಶೋಷಣೆಯ ದುಸ್ಥಿತಿಯನ್ನು ಕಟುವಾಗಿ ಚಿತ್ರಿಸಿದರೂ ಲೇಖಕರ ಚಿತ್ರಣದಲ್ಲಿ ಸತ್ಯಾಂಶತೆ ಇದೆ ಎಂಬುದನ್ನು ಮರೆಯುವಂತಿಲ್ಲ. ಈ ಘಟನೆಯಲ್ಲಿ ಕಾಳ ಅಂತ್ಯದಲ್ಲಿ ದಿಟ್ಟ ಮನಸ್ಸನ್ನು ತೋರಿಸುವುದು ವಿಶೇಷವಾಗಿದೆ. ಕಾಳನಿಗೆ ಚೆನ್ನಿ ಆನಂದನ ಜತೆ ಓಡಿ ಹೋದದ್ದು ಒಂದು ರೀತಿಯಲ್ಲಿ ಸಮಾಧಾನವನ್ನು ತಂದುಕೊಡುತ್ತದೆ. ಆನಂದ ಮತ್ತು ಚೆನ್ನಿ ಕಲೆಗಾಗಿ ತೋರಿಸಿದ ದಿಟ್ಟತನ ಇಲ್ಲಿ ಪ್ರಶಂಸನೀಯವಾದದ್ದು. ಕಲೆಯು ಸಪ ಜಾತೀಯತಾ ಭಾವನೆಯಿಂದ ಸೊರಗಬಹುದಾದ ಸಂಗತಿಯನ್ನು ಲೇಖಕರು ಇಲ್ಲಿ ಸೂಚಿಸಿರುವುದು ಮುಖ್ಯವಾದ ವಿಚಾರವಾಗಿದೆ.

ಮಡಿಯ ಭಾವನೆ ಬ್ರಾಹ್ಮಣರಲ್ಲಿ ತೀವ್ರವಾಗಿತ್ತು. ತಮ್ಮ ತಮ್ಮ ಮನೆಯಲ್ಲಿಯೇ ತಮ್ಮ ಬಂಧುಗಳ ಜೊತೆಯಲ್ಲಿಯೇ ಮಡಿ ಪ್ರಜ್ಞೆಯನ್ನು ಬ್ರಾಹ್ಮಣರು ತೋರಿಸುತ್ತಿದ್ದರು. ಇನ್ನು ಬೇರೆ ಜಾತಿಯವರ ಸಂಪರ್ಕದಲ್ಲಿ ಈ ಮಡಿಯ ಭಾವನೆ ಇನ್ನೂ ತೀವ್ರವಾಗಿತ್ತು. ಬ್ರಾಹ್ಮಣರ ಈ ವರ್ತನೆಯೂ ಸಹ ಒಂದು ರೀತಿಯ ಮಾನಸಿಕ ಶೋಷಣೆಯಾಗಿತ್ತು. 'ಹಳ್ಳಿಯ ಚಿತ್ರಗಳು' ಕೃತಿಯಲ್ಲಿ ಇದಕ್ಕೆ ಸಂಬಂಧಿಸಿದಂತೆ ಒಂದು ನಿದರ್ಶನವನ್ನು ಗುರುತಿಸಬಹುದು. ಗೊರೂರರವರ ಭಾವ ಕೃಷ್ಣ ಜಯಂತಿ ಹಬ್ಬ ಮುಗಿಸಿಕೊಂಡು ಮಕ್ಕಳಿಗೆ ಯಥೇಚ್ಛವಾಗಿ ತಿಂಡಿಯನ್ನು ಕಟ್ಟಿಸಿಕೊಂಡು ಮಡಿಯ ಗಂಟನ್ನು ಮಾಡಿಕೊಂಡು ಗೊರೂರರವರ

ಊರಿಗೆ ಬರುತ್ತಾರೆ. ಆಗ ಗೊರೂರರವರ ಆಳು ಭಾವನವರು ಗಾಡಿಯಲ್ಲಿ ಇಟ್ಟಿದ್ದ ತಿಂಡಿಯನ್ನು ತಲೆಯ ಮೇಲೆ ಹೊತ್ತುಕೊಂಡು ಬರುತ್ತಾನೆ. ಬಹಳ ಮಡಿವಂತರಾದ ಸಂಸ್ಕೃತ ವಿದ್ವಾಂಸರಾದ ಗೊರೂರರವರ ಭಾವನವರಿಗೆ ಆಳು ಮಾಡಿದ ಕೆಲಸ ತುಂಬಾ ಕೋಪ ತರುತ್ತದೆ. ತಿಂಡಿಯ ಗಂಟಿನ ಮಡಿ ಆಳು ಮುಟ್ಟಿದ್ದರಿಂದ ಹಾಳಾಯ್ತು ಎಂದು ಗುಡುಗುತ್ತಾರೆ. "ಮುಠ್ಠಾಳ, ಅನ್ಯಾಯ ಮಾಡಿ ಬಿಟ್ಟೆಯಲ್ಲಾ!" ಎಂದು ಆಳನ್ನು ಶಪಿಸುತ್ತಾರೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೭೬) ಆಳು ಮುಟ್ಟಿದ್ದರಿಂದ ಮಡಿಗಂಟು ಹಾಳಾಯ್ತು ಎಂದು ಭಾವನವರು ಹೇಳುತ್ತ ಮಕ್ಕಳಿಗೆ ಆ ತಿಂಡಿಯನ್ನು ತಿನ್ನಬೇಡಿ ಎಂದು ಎಚ್ಚರಿಸುತ್ತಾರೆ. ಮಕ್ಕಳು ಮಾತ್ರ ಮಡಿ ಭಾವನೆಯನ್ನು ಬಿಟ್ಟು ತಿಂಡಿಯನ್ನು ತಿಂದೇ ತಿನ್ನುತ್ತಾರೆ. ಈ ನಿದರ್ಶನದಲ್ಲಿ ಮಡಿಯ ಹುಚ್ಚುತನವನ್ನು ಕಾಣಬಹುದು. ಕೀಳು ಜಾತಿಯವರು ಬ್ರಾಹ್ಮಣರ ಮಡಿ ವಸ್ತುಗಳನ್ನು ಮುಟ್ಟಬಾರದು ಎಂಬ ಕಟ್ಟಾಜ್ಞೆ ಕೀಳು ಜಾತಿಯವರಿಗೆ ಮನಸ್ಸಿಗೆ ಒಂದು ರೀತಿಯಲ್ಲಿ ನೋವನ್ನು ಉಂಟುಮಾಡುವ ಶೋಷಣೆ ಎಂದು ಲೇಖಕರು ಸೂಚಿಸುತ್ತಾರೆ. ಇದು ಸೂಕ್ಷ್ಮ ಸಂಗತಿಯಾದರೂ ಇಂಥ ವರ್ತನೆಗಳಿಂದ ಕೀಳು ಜಾತಿಯವರಿಗೆ ಉಂಟಾಗುವ ನೋವು ತೀವ್ರ ಎಂಬುದನ್ನು ಗೊರೂರರವರು ನೆನಪಿಸಿದ್ದಾರೆ.

'ಹೇಮಾವತಿ' ಕಾದಂಬರಿಯಲ್ಲಿ ಸುಬ್ಬಾಭಟ್ಟರಿಗೆ ಗಾನ ಶಾರದೆ ಚೆನ್ನಿಯ ಜಾತಿ ಪ್ರಧಾನವಾಯಿತೆ ಹೊರತು ಅವಳ ಕಲೆಗಾರಿಕೆ ಬಗ್ಗೆ ಅವರ ಮನಸ್ಸಿಗೆ ಮನವರಿಕೆಯಾಗಲಿಲ್ಲ. ಗಾನ ಶಾರದೆ ಚೆನ್ನಿ ಹೊಲತಿ ಅಲ್ಲದೆ ಹೋಗಿದ್ದರೆ ಅವಳ ಕೈಯ ನೀರು ಪಾವನ ಅಮೃತಕ್ಕೆ ಸಮಾನವಾಗಿ ಇರುತ್ತಿತ್ತು ಎಂದು ಸುಬ್ಬಾಭಟ್ಟರು ಭಾವಿಸುವುದು ಸಹ ಒಂದು ರೀತಿಯಲ್ಲಿ ಜಾತಿಯತೆಯ ವಿಕೃತಭಾವ ಎನಿಸುತ್ತದೆ.

ಜೀತದ ಆಳುಗಳನ್ನು ಶೋಷಿಸುವ ಸಂದರ್ಭವನ್ನು ಲೇಖಕರು ಅದೇ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಈ ಶತಮಾನದ ಸಾಹಿತ್ಯದಲ್ಲಿ ದಲಿತರ ಶೋಷಣೆ ಸಾಹಿತ್ಯ ಕೃತಿಗೆ ಒಂದು ವಸ್ತುವಾದಂತೆ ಜೀತ ಪದ್ಧತಿಯ ಶೋಷಣೆಯೂ ಮತ್ತೊಂದು ರೀತಿಯಲ್ಲಿ ಪ್ರಮುಖ ವಸ್ತುವಾಗಿತ್ತು. ರಾಮಣ್ಣ ಪೆರುಮಾಳರು ರಂಗನಾಯಕಿಯನ್ನು ಎರಡನೆ ಹೆಂಡತಿಯಾಗಿ ಕೈ ಹಿಡಿದ ಮೇಲೆ ಆ ಮನೆಯ ಜೀತದಾಳುಗಳ ಮೇಲೆ ಒದಗಿ ಬಂದ ಕಾಟ ಅಸಹನೀಯವಾಗಿತ್ತು. ಮೊದಲಿಗೆ ರಾಮಣ್ಣ ಪೆರುಮಾಳರ ಮನೆಯಲ್ಲಿ ಒಡತಿ ಲಕ್ಷ್ಮಮ್ಮ ಜೀತದಾಳುಗಳನ್ನು ಸುಖವಾಗಿ ನೋಡಿಕೊಳ್ಳುತ್ತಿದ್ದರು. ಆದರೆ ರಂಗ ನಾಯಕಿ ಎರಡನೆಯ ಹೆಂಡತಿಯಾಗಿ ರಾಮಣ್ಣ ಪೆರುಮಾಳರ ಮನೆಗೆ ಕಾಲಿಡುತ್ತಲೇ ಅದುವರೆಗೆ ಆ ಮನೆಯಲ್ಲಿದ್ದ ದೊಡ್ಡ ಪಾತ್ರೆಗಳನ್ನು "ಎತ್ತುವುದಕ್ಕೇ ಆಗುವುದಿಲ್ಲ; ಮಹರಾಯ್ತಿ ಇಂತಹ ಪಾತ್ರೆಗಳಲ್ಲಿ ಹೇಗೆ ಅಡಿಗೆ ಮಾಡುತ್ತಿದ್ದಳೋ" ಎಂದು ಅಟ್ಟಕ್ಕೆ ಹಾಕಿಸುತ್ತಾಳೆ. (ಗೊರೂರುರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೪೯) ರಂಗನಾಯಕಿ ಮತ್ತು ಇವಳ ಅಕ್ಕ ಈಳಿಗೆಮಣಿ "ಈ ಜೀತಕ್ಕೆ ನಾವು ಬಂದಿರುವುದು" ಎಂದು ಗುಡುಗುತ್ತಾರೆ. ಮನೆಯ ಆಳಾದ ಕಾಳನಿಗೆ ಸಹ ಅನ್ನ ಸೊನ್ನೆಯಾಯಿತು. "ಏನಿದ್ದರೂ

ಯಜಮಾನರಿಂದ ರಾಗಿಯೋ ಭತ್ತವೋ ತೆಗೆದುಕೋ. ನಾನು ನಿಮಗೆಲ್ಲಾ ಬೇಸಿ ಹಾಕಲಾರೆ" ಎಂದಳು ರಂಗನಾಯಕಿ. ಕಾಳನು ಲಕ್ಷ್ಮವ್ವ ಇದ್ದಾಗ .... ಎಂದು ಪ್ರಾರಂಭಿಸಿದನು. ರಂಗನಾಯಕಿಯ ಅಕ್ಕ ಕೋರೆದಾಡೆಗಳನ್ನು ಮುಂದಕ್ಕೆ ನೀಡಿಕೊಂಡು "ನೀನೂ ಅವಳು ಹೋಗಿರುವಲ್ಲಿಗೇ ಹೋಗು" ಎಂದು ಹುಚ್ಚು ನಾಯಿಯಂತೆ ಗರ್ಜಿಸಿದಳು. ಕಾಳನು ಹೊಲೆಯನಾದರೂ "ಎಲಾ ಪಿಶಾಚಿ, ಹಸೀನ್ಸೆಂಗೆ ಬಂದು ಹುಲಿ ಹಂಗೆ ಆಡ್ತೀಯ" ಎಂದು ಗೊಣಗುಟ್ಟಿದನು. (ಅದೇ) ಇಲ್ಲಿ ಆಳುಗಳಿಗೆಲ್ಲಾ ರಾಮಣ್ಣ ಪೆರುಮಾಳರ ಮನೆ ತಮ್ಮ ಮನೆ ಎಂಬ ಭಾವನೆ ಹೋಯಿತು. ಈ ಘಟನೆಯಲ್ಲಿ ಜೀತದಾಳುಗಳ ಶೋಷಣೆಯನ್ನು ಚೆನ್ನಾಗಿ ಮನಗಾಣಬಹುದು.

ಜಾತಿ ದ್ವೇಷ ಸಾಮೂಹಿಕವಾಗಿ ಒಂದು ವರ್ಗದವರನ್ನು ಘೋರವಾಗಿ ಹಿಂಸಿಸುವಷ್ಟರ ಮಟ್ಟಿಗೆ ಬೆಳೆದಿರುವುದನ್ನು ಅದೇ ಕಾದಂಬರಿಯಲ್ಲಿ ಗುರುತಿಸಬಹುದು. "ಆನಂದನು ಚೆನ್ನಿಗೆ ಪಾಠ ಹೇಳಿಕೊಂಡಿರಲು ಅಗ್ರಹಾರದ ಉತ್ತಮರು ಬಿಡಲಿಲ್ಲ. ಅವರ ಅಸಮಾಧಾನ ಹೊಲೆಯರ ದ್ವೇಷವಾಗಿ ಪರಿಣಮಿಸಿತು. ಮೊದಲು ಸಾಹುಕಾರರು ಹೊಲೆಯರೆಲ್ಲಾ ತಮ್ಮಿಂದ ತೆಗೆದುಕೊಂಡಿದ್ದ ಹಣವನ್ನು ಕೂಡಲೇ ಹಿಂದಕ್ಕೆ ಕೊಟ್ಟು ಬಿಡಬೇಕೆಂದರು. ಹೊಲೆಯರಿಗೆ ಸಾಗುವಳಿಗೆ ಜಮೀನುಗಳನ್ನು ಕೊಟ್ಟಿದ್ದವರೆಲ್ಲಾ "ಹಿಂದಕ್ಕೆ ತೆಗೆದುಕೊಳ್ಳುತ್ತೇವೆ" ಎಂದರು. ಹೊಲೆಯರನ್ನು ಕಂಡ ಕಂಡೆಡೆಯಲ್ಲಿ ಉತ್ತಮರು ಗದರಿಸುವುದು ಹೊಡೆಯುವುದು ಬಡಿಯುವುದು ಪ್ರಾರಂಭವಾಯಿತು. ಒಂದು ರಾತ್ರಿ ಇದ್ದಕ್ಕಿದ್ದಂತೆ ಯಾರೋ ದುಷ್ಟರು ಕಾಳನ ಹುಲ್ಲು ಗುಡಿಸಲಿಗೆ ಬೆಂಕಿ ಹಾಕಿದರು. ಯಾರ ಪ್ರಾಣವೂ ಹೋಗದೆ ಈಚೆಗೆ ಬರುವ ವೇಳೆಗೆ ಕಾಳನಿಗೂ ಚೆನ್ನಿಗೂ ಸಾಕಾಯಿತು. ಅದರ ಮರುದಿವಸ ರಾಮಣ್ಣ ಪೆರುಮಾಳರ ಹುಲ್ಲು ಗುಡ್ಡೆಗೂ ಬೆಂಕಿ ಬಿದ್ದಿತು. ಅದೇ ರಾತ್ರಿ ಯಾರೋ ದುಷ್ಟರು ಪೆರುಮಾಳರ ತೋಟದಲ್ಲಿಯೂ ಬಾಳೆಯ ಮರಗಳನ್ನೆಲ್ಲಾ ಕತ್ತರಿಸಿ ಹಾಕಿದ್ದರು. ಅಗ್ರಹಾರದ ಬ್ರಾಹ್ಮಣರೂ ವೀರಶೈವರೂ ಒಕ್ಕಲಿಗರೂ ತುರುಕರೂ ಎಲ್ಲರೂ "ಹೊಲೆಯರನ್ನು ಕಂಡ ಕಂಡೆಗೆ ಮಟ್ಟ ಹಾಕುತ್ತೇವೆ" ಎಂದು ತಿರುಗುತ್ತಿದ್ದರು. (ಅದೇ ಪು.೩೪) ಇಲ್ಲಿ ಜಾತಿ ದ್ವೇಷದ ಸಾಮೂಹಿಕ ದುಷ್ಕೃತನ ಗಮನಾರ್ಹವಾದದ್ದು. ಆನಂದ ಮತ್ತು ಚೆನ್ನಿ ಕಾಳನ ಮಾತಿಗೆ ಒಪ್ಪಿ ಊರು ಬಿಟ್ಟು ದೂರ ಹೊರಟು ಹೋಗುತ್ತಾರೆ. ಜಾತಿ ದ್ವೇಷದ ಪರಿಣಾಮ ಎಷ್ಟು ಭೀಕರ ಎಂಬುದನ್ನು ಗೊರೂರರವರು ಅಷ್ಟೇ ಪರಿಣಾಮಕಾರಿಯಾಗಿ ಇಲ್ಲಿ ಚಿತ್ರಿಸಿದ್ದಾರೆ. ಜಾತಿ ದ್ವೇಷದ ದಳ್ಳುರಿ ಪಟ್ಟಣದ ಪರಿಸರದಲ್ಲಿ ಕಾಣುವುದಕ್ಕಿಂತ ಗ್ರಾಮೀಣ ಪರಿಸರದಲ್ಲಿ ತೀವ್ರವಾಗಿ ಕಾಣಬಹುದು ಎಂಬ ವಿಷಯವನ್ನು ಇಲ್ಲಿ ಗಮನಿಸಬಹುದು. ಸಾಮರಸ್ಯದ ಬದುಕಿಗೆ ಒಂದುಗೂಡಬೇಕಾಗಿದ್ದ ಜನ ಇಲ್ಲಿ ದುಷ್ಕೃತ್ಯಕ್ಕೆ ಒಂದಾಗಿರುವುದು ವಿಷಾದದ ಸಂಗತಿಯಾಗಿದೆ. ಜಾತಿ ದ್ವೇಷಕ್ಕೆ ಮೌಢ್ಯವೇ ಮೂಲ ಕಾರಣ ಎಂಬುದು ಇಲ್ಲಿ ಮನವರಿಕೆಯಾಗುತ್ತದೆ. ತಿಳಿದವರು ಮಾಡುವ ಘೋರ ಕೃತ್ಯಗಳು ಸಮಾಜದಲ್ಲಿ ಅನಿಷ್ಟ ಚಟುವಟಿಕೆ ಎಂದು ಗೊರೂರರವರು ತೀರ್ಮಾನಿಸಿದಂತೆ ಕಾಣುತ್ತದೆ.

ದೇವನೊಬ್ಬ ನಾಮ ಹಲವು ಎಂಬ ತತ್ವ ನಮ್ಮ ಸಂಸ್ಕೃತಿಯಲ್ಲಿ ರೂಢಮೂಲವಾಗಿ ಇದ್ದರು ಶಿವ ವಿಷ್ಣು ಆರಾಧಕರು ತಮ್ಮ ತಮ್ಮ ದೇವರನ್ನು ಮೇಲು ಎಂದು ಕೊಂಡಾಡುವ ಉತ್ಸಾಹದಲ್ಲಿ ಇನ್ನೊಬ್ಬರ ದೇವರನ್ನು ಖಂಡಿಸುವ ಸಣ್ಣತನ ಮೂರ್ಖತನ ನಮ್ಮ ಗ್ರಾಮೀಣ ಸಮಾಜದಲ್ಲಿ ಆಗಾಗ ಕಂಡುಬರುತ್ತದೆ. ಇಲ್ಲಿಯ ಘರ್ಷಣೆಯ ಅಪಾಯ ತೀವ್ರವಲ್ಲದಿದ್ದರು ಮಾನಸಿಕ ಗೊಂದಲ ಮಾತ್ರ ಇದ್ದದ್ದೆ. ಗೊರೂರಿನಲ್ಲಿ ಶಿವರಾತ್ರಿ ಹಬ್ಬದ ಆಚರಣೆ ವಿಷಯದಲ್ಲಿ ಮೂಡಿ ಬಂದ ಭಿನ್ನಭಾವಗಳನ್ನು 'ಶಿವರಾತ್ರಿ' ಕಥಾ ಸಂಕಲನದಲ್ಲಿ ಕಾಣಬಹುದು. ಶಿವರಾತ್ರಿಯ ದಿನ ಜೋಯಿಸರು, ಮುತ್ತಣ್ಣ ವಾಧ್ಯಾರರು ಬೀದಿಗಳಲ್ಲಿ ಶಿವಾಧಿಕ್ಯ ವಿಷ್ಣು ಆಧಿಕ್ಯಗಳನ್ನು ಕುರಿತು ತೀವ್ರವಾಗಿ ಚರ್ಚಿಸುತ್ತ ನಿಂತಿರುತ್ತಿದ್ದರು. ಇಷ್ಟಾದರೂ ಶಿವರಾತ್ರಿಯ ದಿನ ಅವರಿಬ್ಬರು ಒಟ್ಟಿಗೆ ರಾತ್ರಿ ದೇವಾಲಯದಲ್ಲಿ ಇರುತ್ತಿದ್ದರು. 'ಸಾಯುವುದಕ್ಕಿಂತ ಜಗಳವಾಡಿಕೊಂಡಾದರೂ ಇರುವುದು ಮೇಲು' ಎಂಬ ನಾಣ್ನುಡಿಗೆ ಅನುಗುಣವಾಗಿ ಇದ್ದರು ಎಂಬುದು ಇಲ್ಲಿ ಸ್ಫುಟವಾಗಿದೆ. ಇಂತಹ ಮೌಢ್ಯದ ಜಗಳ ಎಳೆಯ ವಯಸ್ಸಿನ ಮೇಲೆ ಹಾಸ್ಯವನ್ನು ತಂದಿತು. ಹಿರಿಯರ ವರ್ತನೆ ಕಿರಿಯರಿಗೆ ಮಾರ್ಗದರ್ಶನವಾಗಬೇಕೆ ಹೊರತು ಇಂತಹ ಸಣ್ಣ ಪುಟ್ಟ ವಾದಗಳಿಂದ ಹಿರಿಯರು ಕಿರಿಯರ ಎದುರಿಗೆ ಹಾಸ್ಯಕ್ಕೆ ಗುರಿಯಾಗಬಾರದು ಎಂಬ ಅಂಶವನ್ನು ಲೇಖಕರು ಇಲ್ಲಿ ಎಚ್ಚರಿಸಿದ್ದಾರೆ. ಇಲ್ಲಿ ಕಾಣುವುದು ಒಂದು ಸಣ್ಣ ಸಂಗತಿಯಾದರು ಅದು ಅರಿತು ನಡೆಯಬೇಕಾದ ಮುಖ್ಯ ವಿಷಯ ಎಂಬುದನ್ನು ಮರೆಯಬಾರದು.

ಕಲೆಯ ಮೂಲಕ ವ್ಯಕ್ತಿಯ ಮನಸ್ಸಿನ ಪರಿವರ್ತನೆ ಆಗುತ್ತದೆ. ವ್ಯಕ್ತಿಯಲ್ಲಿ ಅಲ್ಪತನ ಅಳಿದು ಸಮಭಾವ ಮೂಡಿ ಬರುತ್ತದೆ. ಇದಕ್ಕೆ ನಿದರ್ಶನವನ್ನು ಅದೇ ಕಥಾ ಸಂಕಲನದಲ್ಲಿ ನೋಡಬಹುದು. ಶಿವರಾತ್ರಿಯ ದಿನ ಮಲ್ಲಮ್ಮ ಸೊಗಸಾಗಿ ಹಾಡುತ್ತಾಳೆ. ಅದನ್ನು ಕೇಳಿದ ಗುಂಡನಿಗೆ ಶಿವರಾತ್ರಿಯ ಮೇಲೆ ಅಲ್ಪಭಾವ ಕಣ್ಮರೆಯಾಗಿ ಮತ್ತೆ ಮತ್ತೆ ಶಿವರಾತ್ರಿಯ ಜಾಗರಣೆಗೆ ತಾನೂ ಬರಬೇಕು ಎಂಬ ಆಸೆ ಮೂಡಿ ಬರುತ್ತದೆ. ಇದಕ್ಕೆ ಮುಖ್ಯ ಕಾರಣ ಮಲ್ಲಮ್ಮ ತನ್ನ ಮಧುರ ಕಂಠದಿಂದ ಹಾಡಿದ ಭಾವಪೂರ್ಣ ಶಿವಶರಣರ ವಚನಗಳು. ಗೊರೂರವರು "ನಾಮದ ಅಯ್ಯಂಗಾರಿ ಇದ್ದಕ್ಕಿದ್ದಂತೆ ಶಿವಭಕ್ತನಾಗಿಬಿಟ್ಟೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೯೯; ಪು.೧೪೭) ಎಂದು ಗುಂಡನನ್ನು ಛೇಡಿಸುತ್ತಾರೆ. ಮಲ್ಲಮ್ಮನ ಹಾಡು ಇಲ್ಲಿ ಗುಂಡನ ಮನಸ್ಸಿನ ಪರಿವರ್ತನೆಗೆ ಕಾರಣವಾಯಿತು. ಕಲೆಯ ಪರಿಣಾಮ ಮನಸ್ಸಿನ ಪಕ್ವತೆಗೆ ಕಾರಣವಾಗುತ್ತದೆ ಎಂಬ ಸತ್ಯಾಂಶವನ್ನು ಇಲ್ಲಿ ಗಮನಿಸಬಹುದು.

ಗ್ರಾಮೀಣ ಪರಿಸರದಲ್ಲಿ ಮೂರ್ಖತನದಿಂದ ಕೂಡಿದ ಹಠಮಾರಿತನ ಎರಡು ಜಾತಿಯವರ ವೈಮನಸ್ಸಿಗೆ ಕಾರಣವಾಗುತ್ತದೆ. ಈ ಕಾರಣದಿಂದ ಹಳ್ಳಿಯ ಶಾಂತಿ ಭಗ್ನವಾಗುವುದು ಸಹಜ ಸಂಗತಿಯಾಗಿದೆ. 'ವೈಯಾರಿ' ಕೃತಿಯಲ್ಲಿ ಇದಕ್ಕೆ ಸಂಬಂಧಿಸಿದ ಘಟನೆಯನ್ನು ಕಾಣಬಹುದು. ಮಾರಿ ಹಬ್ಬದ ಪ್ರಯುಕ್ತ ಕೋಣನನ್ನು ಬಲಿಕೊಡಲೇಬೇಕು ಎಂಬ ತೀರ್ಮಾನವನ್ನು ಒಕ್ಕಲಿಗರು ಮಾಡಿಕೊಳ್ಳುತ್ತಾರೆ.

ಈ ಕೋಣದ ಬಲಿ ಎಲ್ಲಾ ಜಾತಿಯವರ ನೆಮ್ಮದಿಯ ಸಲುವಾಗಿ ಎಂಬುದು ಒಕ್ಕಲಿಗರ ಅಭಿಪ್ರಾಯವಾಗಿದೆ. ಇಲ್ಲಿಯೂ ಗೊರೂರರವರು ಬಲಿಯ ಬಗ್ಗೆ ಇರುವ ಮೌಢ್ಯವನ್ನು ಸೂಚಿಸಿದ್ದಾರೆ. ಮಾರಮ್ಮನಿಗೆ ಬಲಿ ಕೊಡಲು ಬಲಿ ಕಂಬವನ್ನು ಹನುಮಂತರಾಯನ ಗುಡಿ ಮುಂದೆ ನಿಲ್ಲಿಸಲು ಒಕ್ಕಲಿಗರು ನಿಶ್ಚಯಿಸುತ್ತಾರೆ. ಇದಕ್ಕೆ ಬ್ರಾಹ್ಮಣರು ಪ್ರತಿಭಟಿಸುತ್ತಾರೆ. ಆದರೆ ಒಕ್ಕಲಿಗರ ಹಠವೇ ಗೆಲುವನ್ನು ಪಡೆಯುತ್ತದೆ. ಮೌಢ್ಯತನದಿಂದ ವಾತಾವರಣದಲ್ಲಿ ಉಂಟಾದ ಅಶಾಂತಿ ಇಲ್ಲಿ ನಮಗೆ ಮನೋವೇದ್ಯವಾಗುತ್ತದೆ. 'ಬೂತಯ್ಯನ ಮಗ ಅಯ್ಯು' ಕತೆಯಲ್ಲಿ ಬೂತಯ್ಯ ತನ್ನದೇ ಆದ ವಿಚಿತ್ರ ಬುದ್ಧಿಯಿಂದ ಜನರಲ್ಲಿ ಅಪನಂಬಿಕೆಯ ಭಾವನೆಯನ್ನು ಕಟ್ಟಿಕೊಂಡಿದ್ದನು. ಜನರನ್ನು ವಿಶ್ವಾಸ ಸ್ನೇಹಭಾವದಲ್ಲಿ ಕಾಣುವ ಬದಲು ಸಂಶಯ ಭಾವನೆಯಲ್ಲಿಯೇ ಕಾಣುತ್ತಿದ್ದನು. ಯಾರು ತನ್ನ ಮನೆಗೆ ಬಂದರೂ ಅವರು ತನ್ನಿಂದ ಲಾಭ ಪಡೆದುಕೊಳ್ಳುವ ಸಲುವಾಗಿ ಬರುತ್ತಾರೆ ಎಂಬುದು ಬೂತಯ್ಯನ ಭಾವನೆಯಾಗಿತ್ತು. ಅದಕ್ಕೆ ಯಾರೊಬ್ಬರನ್ನು ಮನೆಯ ಬಾಗಿಲಿಗೆ ಸೇರಿಸುತ್ತಿರಲಿಲ್ಲ. ತಾನು ಸಾಯುವ ಸಮಯದಲ್ಲಿ ಮನಸ್ಸಿನ ಹುಚ್ಚುತನದಿಂದ ಬೂತಯ್ಯ ಊರಿನವರ ಬಗ್ಗೆ ಅಲ್ಲದ ಸಲ್ಲದ ಆಕ್ಷೇಪಣೆಯ ಮಾತುಗಳನ್ನು ಆಡುತ್ತಾನೆ. ಆ ಮಾತುಗಳು ಎಷ್ಟು ಹಗುರವಾಗಿತ್ತು ಎಂದರೆ "ನೋಡು, ಆಚೆಬೀದಿ ಕೆಂಗನಿಗೆ ಅವತ್ತು ಒಂದು ಪಾವು ಉಪ್ಪು ಸಾಲ ಕೊಟ್ಟೆ. ಸಂತೇಲಿ ತಂದು ಕೊಡುತ್ತೇನೆಂದು ಹೇಳಿದ ಕಳ್ಳ ಕೊರಮ ನುಂಗಿಯೇ ಬಿಟ್ಟ. 'ಇನ್ನೇನು ಈ ಮುದಿಗೂಬೆ ಸಾಯುತ್ತೆ ತನಗೇ ದಕ್ಕಿತು' ಎಂದು ಕೊಂಡಿರಬಹುದು; ಒಂದು ಹರಳನ್ನು ಬಿಡದೆ ವಸೂಲ್ಮಾಡು" ಎಂದು ಬೂತಯ್ಯ ಮಗನಿಗೆ ಹೇಳುತ್ತಾನೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೮) ಇಲ್ಲಿ ಅಪನಂಬಿಕೆಯ ಸಣ್ಣತನದ ಭಾವ ಹೇಗೆ ವ್ಯಕ್ತಿಗಳಲ್ಲಿ ಮನೆ ಮಾಡಿರುತ್ತದೆ ಎಂಬುದನ್ನು ಗಮನಿಸಬಹುದು. ಶೂದ್ರರ ಜತೆ ಸಂಪರ್ಕ ಮಾಡುವುದೆ ಅಪಾಯಕಾರಿ ಎಂಬ ಭಾವನೆಯನ್ನು "ಒಕ್ಕಲಿಗನ ನೆಂಟು ಒಡವೆ ಗೇಡು; 'ಶೂದ್ರಸ್ಯ ಶುಭಂನಾಸ್ತಿ" (ಅದೇ; ಪು. ೭) ಎಂಬ ಮಾತುಗಳ ಮೂಲಕ ಬೂತಯ್ಯ ತನ್ನ ಸಂಶಯ ಪ್ರವೃತ್ತಿಯನ್ನು ವ್ಯಕ್ತಪಡಿಸುತ್ತಾನೆ. ಜಾತಿಯ ದ್ವೇಷ ಭಾವನೆ ಎಷ್ಟು ಅಪಾಯಕಾರಿಯೋ ಈ ಸಂಶಯ ಪ್ರವೃತ್ತಿಯೂ ಅಷ್ಟೇ ಅಶಾಂತಿಗೆ ಕಾರಣವಾಗುತ್ತದೆ ಎಂಬ ವಿಷಯವನ್ನು ಲೇಖಕರು ಅಭಿವ್ಯಕ್ತಪಡಿಸಿದ್ದಾರೆ.

ಮನುಷ್ಯ ಹುಟ್ಟಿನಿಂದ ಸ್ವತಂತ್ರ. ಆತ ಸ್ವತಂತ್ರವಾಗಿ ಬದುಕುವುದಕ್ಕೆ ಬಯಸುವುದು ಅಷ್ಟೇ ಸಹಜವಾಗಿದೆ. ಪ್ರಾಮಾಣಿಕವಾಗಿ ಬದುಕುತ್ತಿರುವ ವ್ಯಕ್ತಿಯ ಮೇಲೆ ಸ್ವಾತಂತ್ರ್ಯಕ್ಕೆ ದಕ್ಕೆ ತಂದರೆ ಅದು ಸಾಮಾಜಿಕ ದ್ರೋಹವಾಗುತ್ತದೆ. ಯಾರೇ ಆಗಲಿ ಇಂತಹ ಸಂದರ್ಭಗಳಲ್ಲಿ ವ್ಯಗ್ರರಾಗುವುದು ಸಹಜ. ಹುಟ್ಟಿನಿಂದ ಎಲ್ಲರೂ ಸಮಾನರು. ಸಮಾನ ಅವಕಾಶ ಅವರಿಗೆ ದೊರೆಯಬೇಕಾದದ್ದು ಅಷ್ಟೇ ಅನಿವಾರ್ಯ. ಇಂತಹ ಪರಿಸ್ಥಿತಿಯಲ್ಲಿ ಜಾತಿಯ ಗೋಡೆ ಕಟ್ಟಿ ಒಬ್ಬರು ಮತ್ತೊಬ್ಬರನ್ನು ಮೆಟ್ಟಿ ಹಾಕುವುದಕ್ಕೆ ಪ್ರಯತ್ನ ಮಾಡಿದರೆ ತುಳಿತಕ್ಕೆ ಒಳಗಾದ ಜನರಿಂದ ಪ್ರತಿಭಟನೆ ನಡೆದೇ ನಡೆಯುತ್ತದೆ. ಆದರೆ ಗ್ರಾಮೀಣ ಪರಿಸರದಲ್ಲಿ ಅಜ್ಞಾನದಿಂದ, ಸನ್ಮಾರ್ಗ ದರ್ಶನದ ಅಭಾವದಿಂದ ಇಂತಹ ಘರ್ಷಣೆ

ಗಳು ನಡೆದೇ ನಡೆಯುತ್ತವೆ. ಈ ಘರ್ಷಣೆಗಳನ್ನು ಪರಿಹರಿಸುವ ತಡೆಯುವ ನಿಟ್ಟಿನಲ್ಲಿ ಪ್ರಜ್ಞಾವಂತ ಉತ್ತಮ ಜನರು ಮುಂದಾಗಬೇಕು. ಇದಕ್ಕೆ ಬದಲಾಗಿ ಉತ್ತಮ ಜನರೇ ದುರಂತಗಳಿಗೆ ಕಾರಣವಾಗುವುದು ಸಮಾಜದ ದೌರ್ಭಾಗ್ಯ. 'ಹೇಮಾವತಿ' ಕೃತಿಯಲ್ಲಿ ಗೊರೂರವರು ಇಂತಹ ಸನ್ನಿವೇಶಗಳನ್ನು ಉದಾಹರಿಸಿ ಸಮಾಜಕ್ಕೆ ಕಣ್ಣು ತೆರೆಸಲು ಪ್ರಯತ್ನಿಸಿದ್ದಾರೆ. ರಾಮಣ್ಣ ಪೆರುಮಾಳರು ಉತ್ತಮ ಜಾತಿಗೆ ಸೇರಿದ ವ್ಯಕ್ತಿ ಅಷ್ಟೇ ಆಗದೆ ಉತ್ತಮ ಮಾನವೀಯ ಗುಣಗಳನ್ನು ಹೊಂದಿದ್ದ ವ್ಯಕ್ತಿಯೂ ಆಗಿದ್ದರು. ಅವರ ದೃಷ್ಟಿಯಲ್ಲಿ ಮಾನವೀಯತೆ, ಸಮಾನತೆ ಉತ್ತಮ ಜೀವನ ಮೌಲ್ಯಗಳಾಗಿದ್ದವು. ಈ ಮೌಲ್ಯಗಳ ಸಂರಕ್ಷಣೆಯ ಸಲುವಾಗಿ ರಾಮಣ್ಣ ಪೆರುಮಾಳರು ಮೇಲು ಜಾತಿಯವರೆಲ್ಲರ ವಿರೋಧಕ್ಕೆ ಒಳಗಾಗುತ್ತಾರೆ. ಕೊನೆಗೆ ಊರು ಬಿಟ್ಟು ಹೊರಡಬೇಕಾದ ಪರಿಸ್ಥಿತಿಯೂ ಒದಗಿ ಬರುತ್ತದೆ.

ಒಮ್ಮೆ ಬ್ರಾಹ್ಮಣರ ಕಡುವಿನ ಮೇಲೆ ಹೊಲೆಯ ಜವರನ ಎತ್ತುಗಳು ಬರುತ್ತವೆ. ಅವು ಬಾಲ ಅಲ್ಲಾಡಿಸಿದಾಗ ದಡದಲ್ಲಿ ಕೂತಿದ್ದ ರಾಮಕೃಷ್ಣ, ದೇವಕಿಪ್ರಿಯ, ರಾಮಣ್ಣ ಪೆರುಮಾಳರ ಮೇಲೆ ಎತ್ತಿನ ಬಾಲದ ನೀರು ಸಿಂಚನವಾಯಿತು. ಆಗ ರಾಮಕೃಷ್ಣನಿಗೆ ಜವರನ ಮೇಲೆ ಕೋಪ ಹೆಚ್ಚಾಗಿ "ಈ ಹೊಲೆಯ ಸೂಳೆಮಕ್ಕಳು ಈ ಕಡುವಿಗೆ ಬರಬೇಡ ಎಂದರೂ ಕೇಳುವುದಿಲ್ಲ. ಈಚೆಗೆ ಇವರು ಬಹಳ ಕೊಬ್ಬಿದ್ದಾರೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೬೯) ಎಂದು ಹೇಳಿಕೊಂಡು ಒಂದು ಕಲ್ಲನ್ನು ಎತ್ತಿ ಜವರನ ಕಡೆಗೆ ಬೀಸುತ್ತಾನೆ. ಜವರನ ಹಣೆಗೆ ಬಡಿದ ಕಲ್ಲು ಗಾಯವನ್ನು ಉಂಟುಮಾಡುತ್ತದೆ ರಕ್ತ ಚಿಮ್ಮುತ್ತದೆ. ಜವರ ಅಯ್ಯೋ ಎಂದು ಕೂಗುತ್ತಾ ನೆಲದ ಮೇಲೆ ಬೀಳುತ್ತಾನೆ. ಅಲ್ಲಿಯೇ ಕುಳಿತಿದ್ದ ರಾಮಣ್ಣ ಪೆರುಮಾಳರು ಜಪ ಮಾಡುತ್ತಿದ್ದರು. ತಲೆಯ ಮೇಲೆ ಗುರುಗಳ ಪಾದವಿದ್ದ "ಕಿತ್ತಾನಾರು" ಅರಿವೆಯನ್ನು ತಲೆಯ ಮೇಲೆ ಹೊದ್ದುಕೊಂಡಿದ್ದರು. ರಾಮಣ್ಣ ಪೆರುಮಾಳರ ಮೈ ಮೇಲೆಯೂ ಜವರನ ಎತ್ತು ಬೀಸಿದ ಬಾಲದ ನೀರು ಬಿದ್ದರು ಆತ ಕೋಪಗೊಳ್ಳಲಿಲ್ಲ. ರಾಮಕೃಷ್ಣನಿಂದ ಪೆಟ್ಟಿಗೆ ಒಳಗಾಗಿದ್ದ ಜವರನ ಕಡೆಗೆ ಓಡಿ ಬಂದು ಧಾರೆಯಾಗಿ ಸುರಿಯುತ್ತಿದ್ದ ಜವರನ ತಲೆಯ ರಕ್ತವನ್ನು ಗುರುಗಳ ಪಾದದ ಬಟ್ಟೆ ಎಂಬುದನ್ನೆ ಮರೆತು ಗುರುಗಳ ಪಾದದ ಬಟ್ಟೆಯಲ್ಲಿಯೇ ನೀರನ್ನು ಅದ್ದಿ ಹಿಂಡಿ ಜವರನ ಗಾಯವನ್ನು ಸವರಿ ತೊಳೆಯುತ್ತಾರೆ. ಜ್ಞಾನ ತಪ್ಪಿದ ಜವರನಿಗೆ ಜ್ಞಾನ ಬಂದ ಮೇಲೆ ರಾಮಣ್ಣನವರ ಉಪಚಾರವನ್ನು ಕಂಡು ಬೆಚ್ಚಿ ಬೀಳುತ್ತಾನೆ. ಸುಧಾರಿಸಿಕೋ ಸುಧಾರಿಸಿಕೋ ಎಂದು ರಾಮಣ್ಣ ಸಮಾಧಾನ ಮಾಡುತ್ತಾನೆ. ಆಗ ದೇವಕಿಪ್ರಿಯ "ಸುಧಾರಿಸಿಕೊಳ್ಳುವುದಕ್ಕೆ ಅವನಿಗೆ ಆಗಿರುವ ರೋಗವೇನು? ನಿಮ್ಮ ಗತಿ ನೋಡಿಕೊಳ್ಳಿ. ಗುರುಗಳ ಪಾದುಕೆ ಹೊಲೆಯನ ಉಪಚಾರಕ್ಕೆ ಆಯಿತು. ಸ್ವರ್ಗದಲ್ಲಿರುವ ಹಿರಿಯರು ನೋಡಿದರೆ ಸಂತೋಷಪಡುತ್ತಾರೆ" ಎಂದು ವ್ಯಂಗ್ಯವಾಗಿ ನುಡಿಯುತ್ತಾನೆ. (ಅದೇ; ಪು. ೧೭೦-೧೭೧) ರಾಮಣ್ಣ ಪೆರುಮಾಳರು ದೇವರ ಕೃಪೆಯಿಂದ ಜವರನಿಗೆ ಪ್ರಾಣ ಉಳಿಯಿತು ಎಂದಾಗ ರಾಮಕೃಷ್ಣನು ದೇವರ ವಿಷಯ ನಿಮಗೆ ಬಹಳ ಗೊತ್ತು ಎಂದು ರಾಮಣ್ಣನನ್ನು ಛೇಡಿಸುತ್ತಾನೆ. ಆಗ ರಾಮಣ್ಣ ಪೆರುಮಾಳರು "ದೇವರ ವಿಷಯ ತಿಳಿದವರು ಯಾರೂ

ಇಲ್ಲ. ಅವರವರ ಬುದ್ಧಿಗೆ ಅನುಸಾರವಾಗಿ ನಡಯಬೇಕು, ಅಷ್ಟೇ" ಎಂದರು. (ಅದೇ; ಪು. ೧೭೧) ಇಲ್ಲಿ ಗೊರೂರರವರು ವ್ಯಕ್ತಿ ಧರ್ಮದ ಮಾರ್ಗದಲ್ಲಿ ನಡೆಯಬೇಕು ಎಂದು ಹೇಳುವ ಸಂದರ್ಭದಲ್ಲಿ ಧರ್ಮ ಯಾವುದು ಎಂಬುದನ್ನು ಲೇಖಕರು ವಿಶ್ಲೇಷಿಸಿದ್ದಾರೆ. ನಮ್ಮ ಎದೆಯ ದನಿ ನಿಜವಾದ ಧರ್ಮ. ಶುದ್ಧ ಮನಸ್ಸು ಧರ್ಮಕ್ಕೆ ಸಾಕ್ಷಿ ಎಂಬ ವಿಷಯವನ್ನು ಹೇಳಿ ಶುದ್ಧ ಮನಸ್ಸು ತೋರಿದ ರೀತಿಯಲ್ಲಿ ಬದುಕುವುದೇ ನಿಜವಾದ ಧರ್ಮದ ಬದುಕು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ರಾಮಣ್ಣನ ಶುದ್ಧ ಮನಸ್ಸಿಗೆ ಮಾನವೀಯ ಭಾವನೆಯಿಂದ ಜವರನಿಗೆ ಉಪಚರಿಸುವುದು ಧರ್ಮ ಎನಿಸಿತು. ದೇವರ ಪಾದುಕೆಯ ಬಟ್ಟೆ ಆದರೂ ಅದನ್ನೇ ಗಾಯಕ್ಕೆ ಉಪಚರಿಸುವುದಕ್ಕೆ ರಾಮಣ್ಣ ನಿರ್ಭೀತಿಯಿಂದ ಬಳಸುತ್ತಾನೆ. ಇಂಥ ಶುದ್ಧ ಮನಸ್ಸು ಇಲ್ಲದವರ ಕಣ್ಣಿಗೆ - ದೇವಕಿ ಪ್ರಿಯ, ರಾಮಕೃಷ್ಣ ಇವರುಗಳಿಗೆ ರಾಮಣ್ಣ ಪೆರುಮಾಳ ಮಾಡಿದ ಕಾರ್ಯ ಅಪಚಾರವೆನಿಸುವುದು ಅವರ ಬುದ್ಧಿಗೆ ಮಾತ್ರ ಅದು ಸರಿ. ಧರ್ಮ ಹಾಗೂ ತತ್ವಗಳನ್ನು ಅರ್ಥೈಸುವಾಗ ಅನುಸರಿಸುವಾಗ ನಮಗೆ ಶುದ್ಧ ಮನಸ್ಸು ಇರಬೇಕು. ಅದೊಂದೆ ಪ್ರಮಾಣ ಎಂಬ ವೇದ ಸಂಸ್ಕೃತಿಯ ಭಾವನೆಯನ್ನು ಗೊರೂರರವರು ಪ್ರತಿಪಾದಿಸಿರುವುದು ಅರ್ಥಪೂರ್ಣ ಎನಿಸುತ್ತದೆ.

ಮೇಲಿನ ಈ ಘಟನೆ ಇನ್ನೂ ಮುಂದುವರೆಯುತ್ತದೆ. ರಾಮಕೃಷ್ಣ ಮತ್ತು ದೇವಕಿ ಪ್ರಿಯ ದೇವಸ್ಥಾನಕ್ಕೆ ಹೋಗಿ ರಾಮಣ್ಣ ಪೆರುಮಾಳರು ಹೊಲೆಯ ಜವರನನ್ನು ಮುಟ್ಟಿದ್ದು, ಅವರು ದೇವರ ಬಟ್ಟೆಯಲ್ಲಿ ಜವರನನ್ನು ಉಪಚರಿಸಿದ ವಿಷಯಗಳನ್ನೆಲ್ಲಾ ಪಟ್ಟೆ ನಾಮ ಹಾಕಿದ್ದ ವೈದಿಕರಲ್ಲಿ ಪ್ರಸ್ತಾಪಿಸುತ್ತಾರೆ. ಈ ವೈದಿಕರು ನಾಮ ಧರಿಸುವುದರಲ್ಲಿ ಅಷ್ಟೇ ವೈದಿಕರು, ಹೃದಯ ಸಂಸ್ಕಾರದಲ್ಲಿ ಕಿಂಚಿತ್ತೂ ವೈದಿಕರಲ್ಲ. ಅವರೆಲ್ಲರು ದೇವಸ್ಥಾನಕ್ಕೆ ಬರಲಿರುವ ರಾಮಣ್ಣ ಪೆರುಮಾಳರ ವಿರುದ್ಧ ಹರಿಹಾಯಲು ಸಜ್ಜಾಗುತ್ತಾರೆ. ರಾಮಣ್ಣ ಪೆರುಮಾಳರು ದೇವಸ್ಥಾನದ ಬಾಗಿಲಿಗೆ ಬಂದ ಕೂಡಲೇ ರಾಮಕೃಷ್ಣ "ಸ್ವಲ್ಪ ನಿಲ್ಲಿ. ನಿಮಗೆ ಪ್ರಾಯಶ್ಚಿತ್ತವಾಗಬೇಕು" ಎಂದು ಗರ್ಜಿಸಿದನು. (ಅದೇ; ಪು. ೧೭೨) ರಾಮಕೃಷ್ಣ ರಾಮಣ್ಣ ಪೆರುಮಾಳರ ಮೇಲಿನ ಆಪಾದನೆಯನ್ನು ಪಟ್ಟಿ ಮಾಡಿ ಹೇಳುತ್ತಾನೆ. "ನೀವು ಹೊಲೆಯರನ್ನು ಮುಟ್ಟಿದಿರಿ. ಮುಟ್ಟಿದರೆ ಮುಟ್ಟಿಕೊಳ್ಳಿ. ಆ ಪಾಪ ನಿಮ್ಮ ತಲೆಯ ಮೇಲೆ. ಆದರೆ ಗುರುದ್ರೋಹವನ್ನು ನಾವು ಸಹಿಸುವುದಿಲ್ಲ. ಗುರುವಿನ ಪಾದುಕೆಯನ್ನು ಇವತ್ತು ನೀವು ಹೊಲೆಯನ ತಲೆಯ ಮೇಲೆ ಇಟ್ಟಿರಿ. ನೀವು ಮಹಾತ್ಮಗಾಂಧಿಯವರಿಗಿಂತ ಮುಂದೆ ಹೋಗಿಬಿಟ್ಟಿರಿ! ಇದನ್ನು ಸಹಿಸುವುದು ನಮ್ಮಿಂದ ಸಾಧ್ಯವಿಲ್ಲ. ಗಾಂಧಿಯವರು ಸಹ 'ಹೊಲೆಯರನ್ನು ದೇವಸ್ಥಾನಕ್ಕೆ ಬಿಡಿ' ಎಂದು ಹೇಳಿದರೆ ಹೊರತು 'ಹೊಲೆಯರನ್ನು ಮುಟ್ಟಿಕೊಳ್ಳಿ' ಎಂದು ಹೇಳಲಿಲ್ಲ; ಹೊಲೆಯನ ತಲೆಯ ಮೇಲೆ ಗುರುವಿನ ಪಾದುಕೆ ಇಡಿ ಎಂದೂ ಹೇಳಲಿಲ್ಲ. ನಿನ್ನ ವ್ಯವಹಾರದಿಂದ ನಮ್ಮ ಸಮಾಜಕ್ಕೆ ಅವಮಾನವಾಗಿದೆ". (ಅದೇ) ಶುದ್ಧ ಮನಸ್ಸಿನ ರಾಮಣ್ಣ ಪೆರುಮಾಳರು "ಸ್ವಾಮಿ ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳುವ ತಪ್ಪು ಯಾವುದನ್ನೂ ಮಾಡಿಲ್ಲ. ಪ್ರಾಣಿ ಮಾತ್ರದವನ ತಲೆಯಿಂದ ರಕ್ತ ಸೋರುತ್ತಿರುವಾಗ ಕೈಯಲ್ಲಿದ್ದ

ಬಟ್ಟೆಯಿಂದ ಅದನ್ನು ತಡೆದೆ. ಆಗ ಕೈಯಲ್ಲಿದ್ದ ಬಟ್ಟೆ ದೇವರ ಪಾದುಕೆಯಾಗಿದ್ದಿತು. ಕರುಣಾಮಯನಾದ ಗುರುವಿನ ಪಾದುಕೆಯನ್ನು ಧರಿಸಲು, ಯೋಗ್ಯ ಅಯೋಗ್ಯ ಎಂಬ ತಾರತ್ಮ್ಯವೇಕೆ? ಹಾಗೆ ಯೋಗ್ಯತೆಯನ್ನು ಅಳೆಯುತ್ತಾ ಹೊರಟರೆ ಈ ಜಗತ್ತಿನಲ್ಲಿಯೇ ಪಾಪಿಯಲ್ಲದವನು ಸಿಕ್ಕುವುದು ಕಷ್ಟ. ಭಗವಂತನೇ ಪಾಪಿಗಳನ್ನೆಲ್ಲಾ ಸಹಿಸುವಾಗ ಇನ್ನು ನಮ್ಮ ಕೊಟ್ಟೇನು? ನಾವೆಲ್ಲ ಶುದ್ಧರು ಎಂದು ಎದೆಯ ಮೇಲೆ ಕೈಯಿಟ್ಟು ಹೇಳುವ ಧೈರ್ಯ ಯಾರಿಗಿದೆ?" (ಅದೇ; ಪು. ೧೭೨-೧೭೩) ಎಂದು ರಾಮಣ್ಣ ಪೆರುಮಾಳರು ಸಮಂಜಸವಾದ ವಿಚಾರವನ್ನು ರಾಮಕೃಷ್ಣ ಮತ್ತಿತರರಿಗೆ ತಿಳಿಸುತ್ತಾರೆ. ಇದೇ ಸಂದರ್ಭದಲ್ಲಿ ರಾಮಣ್ಣ ಪೆರುಮಾಳರು ಪಾಪಕ್ಕೆ ಪರಿಹಾರ ದಂಡದಿಂದ ಅಲ್ಲ ಎಂಬ ಸತ್ಯಾಂಶವನ್ನು ಹೇಳುತ್ತಾರೆ. ಹಣದ ದಂಡದಿಂದ ಪಾಪ ಪರಿಹಾರವಾಗುವುದಿದ್ದರೆ ಹಣವಂತರು ಪುಣ್ಯವಂತರು ಎಂಬ ಮಾತು ನಿಜವೇ ಆಗುತ್ತದೆ. ನಾವು ಹಿಂದಿನಿಂದ ಹೊಲೆಯರಿಗೆ ಮಾಡಿದ್ದ ಅನ್ಯಾಯಗಳಿಗೆ ಪ್ರಾಯಶ್ಚಿತ್ತ ತಮ್ಮ ತಪ್ಪನ್ನು ತಿದ್ದಿಕೊಳ್ಳಲು ಸದ್ಯ ಅವಕಾಶ ಸಿಕ್ಕಿತಲ್ಲ ಎಂದು ನಾವು ಸಂತೋಷ ಪಡಬೇಕು ಎಂದು ರಾಮಣ್ಣ ಪೆರಿಮಾಳರು ತಾನು ಜವರನಿಗೆ ಮಾಡಿದ ಉಪಕಾರವನ್ನು ಸಮರ್ಥಿಸಿಕೊಳ್ಳುತ್ತಾರೆ. ನಾನು ಹತ್ತು ಜನರ ಮಾತನ್ನು ಮೀರುವುದಿಲ್ಲ. ಆದರೆ ಯಾವುದನ್ನು ಸರಿ ಎಂದು ಮಾಡಿದ್ದೇನೆಯೋ ಅದನ್ನು ತಪ್ಪು ಎಂದು ಒಪ್ಪಿಕೊಳ್ಳುವುದು ಆತ್ಮದ್ರೋಹವಾಗುತ್ತದೆ ಎಂದು ರಾಮಣ್ಣ ಪೆರುಮಾಳರು ತನ್ನ ಶುದ್ಧ ಮನಸ್ಸಿನ ಆತ್ಮ ಸಾಕ್ಷಿಯನ್ನು ಮತ್ತೆ ಒತ್ತಿ ಎಚ್ಚರಿಸುತ್ತಾರೆ. ಇಷ್ಟಾದರೂ ವೈದಿಕರೆನಿಸಿಕೊಂಡ ಆ ರಾಕ್ಷಸರು ರಾಮಣ್ಣ ಪೆರುಮಾಳರನ್ನು ದೇವಾಲಯದಿಂದ ದೂರಕ್ಕೆ ಅಟ್ಟುತ್ತಾರೆ.

ಊರ ದೇವಾಲಯದಲ್ಲಿ ರಾಮಣ್ಣ ಪೆರುಮಾಳರಿಂದ ಪಾರಾಯಣ ತಪ್ಪಿದ ಮೇಲೆ ಕಾಳ ರಾಮ ಭಜನೆಗೆ ಹೊಲೆಯರನ್ನೆಲ್ಲಾ ಊರ ಹೊರಗಡೆ ಒಟ್ಟುಗೂಡಿಸುತ್ತಾನೆ. ರಾಮಣ್ಣ ಪೆರುಮಾಳರು ಭಾವ ಪೂರ್ಣವಾಗಿ ರಾಮಾಯಣದ ಶ್ಲೋಕಗಳನ್ನು ಹೇಳಿದಾಗ ಹೊಲೆಯರ ಮನಸ್ಸು ಪಾವನವಾಯಿತು. ರಾಮನ ಗುಣಗಳನ್ನು ಹಾಡುತ್ತಾ ರಾಮಣ್ಣ ಪೆರುಮಾಳರು ಪರವಶನಾದಂತೆ ಹೊಲೆಯರು ಕೇಳಿ ಪರವಶ ರಾದರು. ಇದನ್ನು ಕಂಡ ವೈದಿಕರಿಗೆ ರಾಮಣ್ಣ ಪೆರುಮಾಳರ ಬಗ್ಗೆ ರೋಷ ಅಸೂಯೆಗಳು ಮೂಡುವುದು ಸಹಜ. ಈ ಸಂದರ್ಭದಲ್ಲಿಯೂ ವೈದಿಕರು ಹೊಲೆಯರು ನಿರ್ಮಿಸಿದ ಚಪ್ಪರದ ಕಡೆಗೆ ಕಲ್ಲು ತೂರುತ್ತಾರೆ. ರಾಮಣ್ಣ ಪೆರುಮಾಳರು ಮನೆಯನ್ನು ಬಿಟ್ಟು ಯಾರಿಗೂ ಹೇಳದೆ ಎಲ್ಲಿಗೋ ಹೊರಟು ಹೋದರು. ರಾಮಣ್ಣ ಪೆರುಮಾಳರ ವರ್ತನೆ ಈ ಎಲ್ಲಾ ಘಟ್ಟಗಳಲ್ಲಿಯೂ ಶಾಂತ ಸ್ಥಿರ ವೈಚಾರಿಕ ವರ್ತನೆಯಾಗಿದೆ. ಆತ್ಮಸಾಕ್ಷಿ ಅಲ್ಲದೆ ಅವರ ಮನಸ್ಸಿಗೆ ಬೇರಾವ ಭಾವನೆಗಳು ಬರದೆ ಇರುವುದನ್ನು ಲೇಖಕರು ಮೆಚ್ಚಿಕೊಂಡು ಜಾತಿಯತೆಯ ಬಗ್ಗೆ ರಾಮಣ್ಣ ಪೆರುಮಾಳರ ನಿಲುವೇ ಶುದ್ಧ ನಿಲುವು ಎಂದು ಸಮಾಜಕ್ಕೆ ತಿಳಿಸಿಕೊಡುತ್ತಾರೆ. ಗಾಂಧೀಜಿಯವರು ಹರಿಜನೋದ್ಧಾರದ ಬಗ್ಗೆ ಮಾಡಿದ ಕ್ರಾಂತಿಯನ್ನೇ ಗೊರೂರವರು ತಮ್ಮ ಕತೆಯಲ್ಲಿ ಅಳವಡಿಸಿ ಹೇಳಿರುವುದು ಹೆಚ್ಚು ಸಮಂಜಸವೂ ಪರಿಣಾಮಕಾರಿಯೂ ಆಗಿದೆ. ಈ ದೃಷ್ಟಿಯಿಂದಲೇ 'ಹೇಮಾವತಿ' ಕಾದಂಬರಿಗೆ ವಿಶೇಷ ಮಾನ್ಯತೆ ದೊರೆತಿದೆ.

ಹಿಂದೂ ಧರ್ಮದ ಮೂಲ ಮಂತ್ರವಾದ ಶಾಂತಿ ಮಂತ್ರದಲ್ಲಿ ಸಹಬಾಳ್ವೆಯ ಸಂದೇಶವನ್ನು ಗುರುತಿಸಬಹುದು. ಹರಿಜನರ ಬಗ್ಗೆ ಅವರ ಕ್ಷೇಮ ಬದುಕಿನ ಬದ್ಧತೆಗೆ ಸರ್ಕಾರ ಅನೇಕ ಕಾನೂನುಗಳನ್ನು ಮಾಡಿದೆ. ಆದರೆ ಸಮಾಜ ಮಾತ್ರ ಆ ಕಾನೂನುಗಳನ್ನು ಆಚರಣೆಗೆ ತಂದಿಲ್ಲ ಎಂಬುದು ಗೊರೂರರವರ ವಿಷಾದವಾಗಿದೆ. "ಹರಿಜನರು ಮನುಷ್ಯರಲ್ಲವೆ? ಇವರಿಗೆ ಆಗಿರುವ ಅನ್ಯಾಯವನ್ನು ಕಾನೂನಿನಿಂದ ತಪ್ಪಿಸಿದರೂ ಸಮಾಜ ಅದನ್ನು ಆಚರಣೆಗೆ ತರಬೇಕಲ್ಲ! .... ಮನುಷ್ಯನನ್ನು ಮನುಷ್ಯನನ್ನಾಗಿ ಕಾಣುವುದು ಹಿಂದೂ ಧರ್ಮಕ್ಕೆ ಮರೆತು ಹೋಯಿತೆ? ಎಲ್ಲಾ ಮನುಷ್ಯರಂತೆ ತಲೆ ಎತ್ತಿಕೊಂಡು ಸ್ವತಂತ್ರವಾಗಿ ನಮ್ಮಲ್ಲಿ ಬೆರೆಯಲು ನಾವು ಹರಿಜನರಿಗೆ ಅವಕಾಶ ಕೊಡುವುದಿಲ್ಲವೆ? ಎಲ್ಲಾ ಮನುಷ್ಯರೂ ಸ್ವತಂತ್ರವಾಗಿ ಹುಟ್ಟಿದ್ದಾರೆ; ಬಾಳಬೇಕಾದುದು ಸ್ವತಂತ್ರವಾಗಿ ಎಂಬ ಪಾಠವನ್ನು ಕಲಿಯಲು ಹಿಂದೂ ಸಮಾಜಕ್ಕೆ ಇನ್ನೂ ಎಷ್ಟು ಶತಮಾನಗಳು ಬೇಕು? ಅಲ್ಲಿಯವರೆಗೆ ಈ ಸಮಾಜ ಉಳಿದಿರುವುದೇ?" (ಅದೇ; ಪು. ೧೮೫) ಎಂಬ ಮೂಲಭೂತ ಪ್ರಶ್ನೆಯನ್ನು ರಾಮಣ್ಣ ಪೆರುಮಾಳರ ಪಾತ್ರದ ಮೂಲಕ ಗೊರೂರರವರು ಸಮಾಜದ ಮುಂದೆ ಇಟ್ಟಿದ್ದಾರೆ. ಸಾಹಿತಿ ಸಮಾಜದ ದೋಷವನ್ನು ಕುರಿತು ಸದಾ ಚಿಂತಿಸುತ್ತಾನೆ. ಆ ದೋಷದ ಬಗ್ಗೆ ಸರಿಯಾದ ಉತ್ತರವನ್ನು ಸಾಹಿತಿಯೇ ಸೂಚಿಸುತ್ತಾನೆ ಎಂಬುದಕ್ಕೆ ಸಾಕ್ಷಿಯಾಗಿ ರಾಮಣ್ಣ ಪೆರುಮಾಳರ ಮಾತುಗಳು ಗೊರೂರರವರ ಮುಖವಾಣಿಯಾಗಿದೆ. ಇಂತಹ ಚಿರಂತನ ಪ್ರಶ್ನೆಗಳಿಗೆ ಸಹೃದಯರು ತಮ್ಮ ಪರಿಶುದ್ಧ ಮನಸ್ಸಿನಿಂದ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ. ಕಾದಂಬರಿಯ ಈ ವಿಷಯಗಳೆಲ್ಲವು ಗೊರೂರರವರ ವಾಸ್ತವಿಕತೆಗೂ ವೈಚಾರಿಕತೆಗೂ ಸ್ಪಷ್ಟ ನಿದರ್ಶನವಾಗಿದೆ.

ಜಾತಿ ಪದ್ಧತಿ ಅನೇಕ ಸಂದರ್ಭಗಳಲ್ಲಿ ವ್ಯಕ್ತಿಯ ಆಸೆ ಆಕಾಂಕ್ಷೆಗಳ ಪೂರೈಕೆಗೆ ತೊಡಕನ್ನು ಉಂಟು ಮಾಡುತ್ತದೆ. ಇದೇ ಕಾದಂಬರಿಯಲ್ಲಿ ಇದಕ್ಕೆ ಸಂಬಂಧಿಸಿದ ಪ್ರಸಂಗ ಇದೆ. ವಾಸು ಹೇಮಾವತಿಯನ್ನು ಮದುವೆಯಾಗಲು ಬಯಸುವುದು. ವಾಸು ಮತ್ತು ಹೇಮಾವತಿ ಪರಸ್ಪರ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು, ಒಪ್ಪಿಕೊಂಡಿದ್ದರು. ಮದುವೆ ಆಗಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದರು. ಆದರೆ ಅವರಿಬ್ಬರ ನಡುವೆ ಜಾತಿಯ ವ್ಯತ್ಯಾಸ ಅಡಚಣೆಯಾಗಿ ಬಂದಿತು. ಬ್ರಾಹ್ಮಣ ಜಾತಿಯಲ್ಲಿಯೇ ಅವರಿಬ್ಬರು ಬೇರೆ ಬೇರೆ ಒಳ ಪಂಗಡಗಳಿಗೆ ಸೇರಿದವರಾಗಿದ್ದರು. ಜಾತಿ ಜಾತಿಗೆ ಒಂದು ರೀತಿಯ ದ್ವೇಷ ಭೇದ ಭಾವನೆ ಉಂಟಾದರೆ ಒಂದೇ ಜಾತಿಯ ಒಳ ಪಂಗಡದಲ್ಲಿಯೂ ಇಂತಹ ತಾರತಮ್ಯ ಉಂಟಾಗುವುದು ಅತಿ ಶೋಚನೀಯ ಎನಿಸುತ್ತದೆ. ವಾಸು ಮತ್ತು ಹೇಮಾವತಿ ಇಂತಹ ಭೇದ ಭಾವನೆಗಳಿಗೆ ಬಲಿಯಾಗಿ ಅವರ ವಿವಾಹ ತಪ್ಪಿ ಹೋಗುತ್ತದೆ. ಆಗ ವಾಸು ಹೇಳುವ ಮಾತು "ಭಾರತೀಯರೆಲ್ಲ ಒಂದೇ ಸಂಸಾರ ಎಂಬ ಗುರಿಗಾಗಿ ಸಾಧ್ಯವಾದಷ್ಟು ಕೆಲಸ ಮಾಡಬೇಕು" ಎಂಬುದು ವಾಸುವಿನ ನಿಶ್ಚಯವಾಗಿತ್ತು. (ಅದೇ; ಪು. ೨೫೮) ವಾಸುವಿಗೆ ಗಾಂಧಿಯವರು ಹೇಳಿದಂತೆ ಅಸ್ಪೃಶ್ಯತೆಯ ನಿರ್ಮೂಲನೆಯಿಂದ ಮಾತ್ರ ಭಾರತೀಯರೆಲ್ಲರೂ ಒಂದಾಗಬಹುದು ಎಂಬ ನೆನಪು ಬರುತ್ತದೆ. ಜಾತಿಯ

ಸಲುವಾಗಿ ಕಟ್ಟಿಕೊಂಡ ಒಲ್ಲದ ಗಂಡ ಹೆಂಡಿರ ವಿವಾಹ ಎಷ್ಟು ದುರಂತ ಎಂಬುದು ಈ ಸಂದರ್ಭದಲ್ಲಿ ವಾಸು ಸಹೃದಯರ ಮುಂದೆ ಚರ್ಚೆಗೆ ವಿಷಯವಾಗಿ ಇಡುತ್ತಾನೆ. ಹೀಗೆ ಜಾತಿಯ ಘರ್ಷಣೆ ಬೃಹತ್ತಾಗಿ ಕಂಡುಬರುವಂತೆ ಅಣು ರೂಪದಲ್ಲಿಯೂ ಮನಸ್ಸಿಗೆ ಅಶಾಂತಿಯನ್ನು ತರಬಲ್ಲದು ಎಂದು ಲೇಖಕರು ಉಲ್ಲೇಖ ಮಾಡಿರುವುದು ಚಿಕಿತ್ಸಕ ದೃಷ್ಟಿಯಾಗಿದೆ.

ಶ್ರೀಧರನು ಕಲ್ಯಾಣಿಯನ್ನು ಮೋಹಿಸಿ ಮದುವೆಯಾಗಲು ಪ್ರಯತ್ನಿಸಿದಾಗ ಕಲ್ಯಾಣಿಯ ಮಾವ ಕಲ್ಯಾಣಿಯನ್ನು ಮದುವೆ ಮಾಡಿ ಕೊಡಲು ನಿರಾಕರಿಸುವ ಪ್ರಸಂಗವನ್ನು 'ಶಿವರಾತ್ರಿ' ಕಥಾ ಸಂಕಲನದಲ್ಲಿ ಗುರುತಿಸಬಹುದು. ಈ ಪ್ರಸಂಗದಲ್ಲಿ ನರಹರಿ ಕೊಡುವ ಕಾರಣ ಜಾತಿ ಭೇದದ ಅಡಚಣೆ. ಆಗ ಶ್ರೀಧರ "ಆಳು ಜಾತಿಯೇ ಜಾತಿಗಳನ್ನು ಮಾಡಿದ ರಾಕ್ಷಸರು ಸಾವಿರಾರು ವರ್ಷಗಳ ಕೆಳಗೆ ಸತ್ತರು. ಅವರ ಭೂತಗಳು ನಮ್ಮನ್ನು ಇನ್ನು ಕಾಡುತ್ತಿವೆಯಲ್ಲ ಎಂದು ತನ್ನಲ್ಲಿ ತಾನು ಗರ್ಜಿಸಿಕೊಂಡನು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೫೯; ಪು.೧೦೩) ಈ ಪ್ರಸಂಗದಲ್ಲಿ ಹತಾಶನಾದ ಶ್ರೀಧರ ಮದುವೆಯಾಗದೇ ಉಳಿಯಬೇಕಾಗುತ್ತದೆ. ಶ್ರೀಧರ ಬೆಂಗಳೂರಿಗೆ ಹೋದ ಒಂದು ತಿಂಗಳ ಒಳಗೆ ಕಲ್ಯಾಣಿಗೆ ಮದುವೆಯಾದ ಸಂಗತಿಯನ್ನು ಕೇಳಿ ಸನ್ಯಾಸಿಯಾಗಿ ಬಿಡುತ್ತಾನೆ. ಈ ಪ್ರಸಂಗದಲ್ಲಿ ಶ್ರೀಧರನು ಜಾತಿಯ ಬಗ್ಗೆ ಆಡುವ ಮಾತು ಇಡೀ ಜಾತಿ ವರ್ಗದ ವಿಪರ್ಯಾಸವನ್ನು ತೊಡುಕುಗಳನ್ನು ಕುರಿತು ಲೇಖಕರ ಅಭಿಪ್ರಾಯದ ಮಾತೇ ಆಗಿದೆ. ಎಂದೋ ಯಾರಿಂದಲೋ ಸೃಷ್ಟಿಯಾದ ಜಾತಿ ಸಮಸ್ಯೆ ತಲೆ ತಲಾಂತರದಿಂದ ಸಮಾಜವನ್ನು ಕಾಡುತ್ತಿದೆ ಎಂಬ ಮಾತು ಪೂರ್ಣ ಸತ್ಯದ ನುಡಿಯಾಗಿದೆ. ವಿಷ ಬೀಜ ಬಿತ್ತುವುದು ಒಂದು ಕ್ಷಣದ ಕೆಲಸವಾದರೂ ಅದರ ಪರಿಣಾಮದ ನೋವು ಅನಂತ ಕಾಲದವರೆಗೆ ಸಮಾಜದ ಜನಾಂಗ ಅನಿವಾರ್ಯವಾಗಿ ಅನುಭವಿಸಬೇಕಾಗುತ್ತದೆ. ಇದಕ್ಕೆ ಶ್ರೀಧರರಂತವರೇ ಸಾಕ್ಷಿ ಎಂಬುದನ್ನು ಇಲ್ಲಿ ತಿಳಿಯಬಹುದು. ಜಾತಿ ಪದ್ಧತಿಯ ವಿರುದ್ಧ ಕಾಲದಿಂದ ಕಾಲಕ್ಕೆ ತೀವ್ರವಾಗಿ ಪ್ರತಿಭಟನೆ ನಡೆಯುತ್ತಿದ್ದರು ಜಾತಿ ಪದ್ಧತಿಯ ನೋವು ಮಾತ್ರ ಮುಂದುವರೆಯುತ್ತಲೇ ಇದೆ. ಗೊರೂರವರು ಮಾತ್ರ ಒಳ್ಳೆಯ ಕ್ರಾಂತಿ ದೃಷ್ಟಿಯನ್ನು ಚಳುವಳಿಯನ್ನು ಎಂದಿಗೂ ನಾವು ಕೈ ಬಿಡಬಾರದು ಎಂಬ ಅಂಶವನ್ನು ತಮ್ಮ ಕೃತಿಗಳಲ್ಲಿ ಎಚ್ಚರಿಸಿದ್ದಾರೆ.

'ಹೇಮಾವತಿ' ಕಾದಂಬರಿಯಲ್ಲಿ ಬ್ರಾಹ್ಮಣ ಜಾತಿಗೂ ಹೊಲೆಯರ ಜಾತಿಗೂ ನಡುವೆ ನಡೆಯುವ ಘರ್ಷಣೆಯನ್ನು ಕಾಣುವಂತೆ ತುರುಕರು ಮತ್ತು ಒಕ್ಕಲಿಗರು ಹರಿಜನರನ್ನು ಶೋಷಿಸುವುದನ್ನು ಕಾಣಬಹುದು. ಈ ಸಂದರ್ಭಗಳಲ್ಲಿ ಕೆಲವೊಮ್ಮೆ ತುರುಕರು ಹೊಲೆಯರೊಂದಿಗೆ ಮೋಸದ ಆಟವನ್ನು ಆಡುವುದುಂಟು. ನಮ್ಮ ಧರ್ಮದಲ್ಲಿ ಎಲ್ಲರನ್ನು ಸಮಾನವಾಗಿ ಕಾಣುವ ಸಂದೇಶ ಇದೆ. ಆದ್ದರಿಂದ ನಾವು ನಿಮ್ಮನ್ನು ದ್ವೇಷಿಸುವುದಿಲ್ಲ ಎಂದು ತುರುಕರು ಹೊಲೆಯರಿಗೆ ನಂಬಿಕೆಯ ಮಾತನ್ನು ಹೇಳುತ್ತಾರೆ. ಆದರೆ ಅದೇ ಮುಸಲ್ಮಾನರು ಒಕ್ಕಲಿಗರು ಮತ್ತು ಬ್ರಾಹ್ಮಣರ ನಡುವೆ ಬಂದು ಹೊಲೆಯರನ್ನು ದೂರ

ಇಡುವುದೇ ಒಳ್ಳೆಯದು ಎಂದು ಅವರ ಭಾವನೆಗಳಿಗೆ ಪ್ರೇರಕ ಮಾತುಗಳನ್ನು ಆಡುತ್ತಾರೆ. ಇದು ಒಂದು ರೀತಿಯಲ್ಲಿ ಜಾತಿ ವಿಷಯದಲ್ಲಿ ತುರುಕರು ನಡೆದುಕೊಳ್ಳುತ್ತಿರುವ ಮೋಸದ ರೀತಿ ಎಂಬುದು ನಮಗೆ ಮನವರಿಕೆಯಾಗುತ್ತದೆ. ಇಂತಹ ವಂಚಕರಿಂದ ಉತ್ತಮ ಜಾತಿಯವರಿಗೂ ಹಾಗೂ ಕೀಳು ಜಾತಿಯವರಿಗೂ ಮೋಸ ನೋವು ತಪ್ಪಿದ್ದಲ್ಲ ಎಂದು ಗೊರೂರವರು ಸ್ಫುಟಪಡಿಸಿದ್ದಾರೆ. ಮಲ್ಲಯ್ಯನಂತವರು ಹಿಂದಿನವರ ಜಾತಿಯ ಅನಿಷ್ಟ ಪದ್ಧತಿಯನ್ನು ಕೊಂಡಾಡುವುದರ ಮೂಲಕ ಜಾತಿ ವಾದವನ್ನು ಮುಂದುವರೆಸಲು ಪ್ರಯತ್ನಿಸಿರುವುದು ಇಲ್ಲಿ ಇನ್ನೊಂದು ಮುಖ್ಯವಾದ ವಿಷಯ. "ನಮ್ಮ ಹಿಂದಲವರು ಹೆಡ್ಡರಲ್ಲ. ಹೊಲೆಯರನ್ನು ಎಲ್ಲಿ ಇಟ್ಟಿರಬೇಕೋ ಅಲ್ಲಿ ಇಟ್ಟಿರಬೇಕು" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೨೮) ಎಂಬ ಮಾತನ್ನು ಮಲ್ಲಯ್ಯ ಹೇಳಿ ಪರಂಪರೆಯಿಂದ ಬಂದಿರುವ ಜಾತಿ ಪದ್ಧತಿಗೆ ಪುಟ ಹಾಕುತ್ತಾನೆ. ಇಂತಹ ವ್ಯಕ್ತಿಗಳ ಕುಕೃತ್ಯವೂ ಸಮಾಜಕ್ಕೆ ಒಂದು ದೌರ್ಭಾಗ್ಯವಾಗಿದೆ ಎಂಬುದನ್ನು ಲೇಖಕರು ಒಪ್ಪಿ ನುಡಿದಿದ್ದಾರೆ.

ಗೊರೂರವರು ಶ್ರೀವೈಷ್ಣವ ಧರ್ಮಕ್ಕೆ ಸೇರಿದವರು. ಶ್ರೀ ರಾಮಾನುಜಾಚಾರ್ಯರ ಅನುಯಾಯಿಗಳು. ರಾಮಾನುಜರ ತತ್ವ ದರ್ಶನವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಅವರು ಜೀವನದಲ್ಲಿ ಅನುಷ್ಠಾನಕ್ಕೆ ತಂದಿದ್ದರು. ಶ್ರೀ ವೈಷ್ಣವ ಧರ್ಮದ ತತ್ವದ ಹಿರಿಮೆಯನ್ನು ಪ್ರಭಾವವನ್ನು ಗೊರೂರವರು ಹೇಳುವಾಗ ಕೇವಲ ಅಭಿಮಾನಕ್ಕಾಗಿ ಹೇಳುವುದಿಲ್ಲ. ಸಮಾಜದ ಜಾಗೃತಿಗಾಗಿ, ಸಮಾಜದ ಕ್ಷೇಮಕ್ಕಾಗಿ ತಿಳಿಸುತ್ತಾರೆ. ಶ್ರೇಷ್ಠ ಗುರುಗಳ ಧರ್ಮ ಸಂದೇಶದ ಮೂಲ ಉದ್ದೇಶ ಇದೇ ಆಗಿರುತ್ತದೆ. 'ಹೇಮಾವತಿ' ಕಾದಂಬರಿಯ ಆನಂದ ಪೆರುಮಾಳರು ಶ್ರೀ ವೈಷ್ಣವನಾಗಿ ರಾಮಾನುಜರ ತತ್ವ ಸಂದೇಶಗಳನ್ನು ಓದಿ ತಿಳಿದುಕೊಂಡಿದಷ್ಟೆ ಅಲ್ಲದೆ ಅದನ್ನು ತನ್ನ ಜೀವನದಲ್ಲಿ ಅನುಷ್ಠಾನಕ್ಕೆ ತರುವುದರ ಮೂಲಕ ಸಾಮಾಜಿಕವಾಗಿಯು ಒಂದು ಕ್ರಾಂತಿಯನ್ನು ಉಂಟು ಮಾಡಲು ಪ್ರಯತ್ನಿಸುತ್ತಾನೆ. ತನ್ನ ಶ್ರೀವೈಷ್ಣವ ಬಂಧುಗಳೆಲ್ಲಾ ನಾಮ ಹಾಕಿಕೊಳ್ಳುವುದರ ಮೂಲಕ ಶುದ್ಧ ವೈಷ್ಣವರಾಗಿದ್ದರೆಯೇ ಹೊರತು ಧರ್ಮ ತತ್ವಪರಿಪಾಲನೆಯಲ್ಲಿ ವೈಷ್ಣವರಾಗದೆ ಇರುವುದನ್ನು ಕಂಡು ಶೋಕಿಸುತ್ತಾನೆ. ಅಣ್ಣ ರಾಮಣ್ಣ ಪೆರುಮಾಳರಂತವರಿಗೆ ಊರ ವೈಷ್ಣವರು ಮಾಡಿದ ಅನ್ಯಾಯ, ತೋರಿಸಿದ ಅಸಹನೆ, ಕೊಟ್ಟ ಅಸಹಕಾರ ತಮ್ಮ ಆನಂದ ಪೆರುಮಾಳರಿಗೆ ಆಕ್ರೋಶ ತರುತ್ತದೆ ಅಸಹ್ಯ ಉಂಟು ಮಾಡುತ್ತದೆ. ಅಂತಹ ಸಂದರ್ಭದಲ್ಲಿ ಆನಂದ ಧರ್ಮ ಜಾಗೃತಿಯ ಮಾತುಗಳನ್ನು ಅನಿವಾರ್ಯವಾಗಿ ಆಡುತ್ತಾನೆ. "ರಾಮಾನುಜಾಚಾರ್ಯರು ಎಲ್ಲಾ ಪ್ರಾಣಿಗಳಲ್ಲಿಯೂ ಭಗವಂತನ ಅಂಶವಿರುವುದನ್ನು ಅರಿತ ಆ ಮಹರ್ಷಿ, ಯೋಗಿ; ಅಂತಹ ಗುರು ಮತ್ತೊಬ್ಬರನ್ನು ದ್ವೇಷಿಸುವುದನ್ನು ಎಂದಿಗಾದರೂ ಬೋಧಿಸುತ್ತಾನೆಯೇ? ಸರ್ವರೂ ಸಮಾನರಾದ ಮನುಷ್ಯರಲ್ಲಿ ಮೇಲು ಕೀಳುಗಳನ್ನು ಸ್ಥಾಪಿಸುವ ಜನ, ಆ ಗುರುವಿನ ನಿಜವಾದ ಅನುಯಾಯಿಗಳೇ? .... ರಾಮಾನುಜಾಚಾರ್ಯರು ಹೇಳಿರುವುದು ನೀವು ನಿಮ್ಮ ಪ್ರೇಮಾಲಿಂಗನದಲ್ಲಿ ಎಲ್ಲರನ್ನು ಒಳಗೊಳ್ಳ ಬೇಕೆಂಬುದು. ಆ ಒರೆಗಲ್ಲಿನಿಂದ ನೋಡಿದರೆ, ರಾಮಾನುಜರ ಶಿಷ್ಯರಾಗಲು ನಿಮ್ಮಲ್ಲಿ ಒಬ್ಬರೂ

ಅರ್ಹರಲ್ಲ. ನೀವು ಇನ್ನು ಮೇಲೆ ರಾಮಾನುಜರ ಹೆಸರನ್ನು ಎತ್ತಿಕೊಂಡು ನಿಮ್ಮ ಕ್ರೌರ್ಯವನ್ನು ಪ್ರಕಾಶ ಪಡಿಸದಿರಿ" (ಅದೇ; ಪು.೩೧) ಎಂದು ಆನಂದ ಸುಬ್ಬಾಭಟ್ಟರನ್ನು ನರಸಿಂಹಾಚಾರ್ಯರನ್ನು ಅವರಂತಹ ಕೇವಲ ಆಡಂಬರದ ವೈಷ್ಣವರನ್ನು ಖಂಡಿಸುತ್ತಾನೆ. ಆನಂದ ಪೆರುಮಾಳರ ಈ ಸತ್ಯಾಂಶ ಊರಿನಲ್ಲಿ ನಾಲ್ಕಾರು ದಿನ ಕೇವಲ ಚರ್ಚೆಗೆ ವಿಷಯವಾಯಿತು. ಅಗ್ರಹಾರದ ಶ್ರೀ ವೈಷ್ಣವರು ರಾಮಾನುಜಾಚಾರ್ಯರಿಗೆ ಏನು ಗೊತ್ತು ಎಂದು ಹೇಳುವಷ್ಟು ವಿತಂಡವಾದಿಗಳಾಗಿದ್ದರು. ಈ ಸಂದರ್ಭದಲ್ಲಿ ಗೊರೂರವರ ವಿಚಾರ ಸರಣಿ ವ್ಯಕ್ತಿನಿಷ್ಠವಾಗಿ ಉಳಿಯದೆ ತತ್ವನಿಷ್ಠವಾಗಿ ಉಳಿದಿರುವುದನ್ನು ಗಮನಿಸಬಹುದು. ಸಾಹಿತ್ಯ ತತ್ವ ನಿಷ್ಠವಾಗಿದ್ದರೆ ಹೆಚ್ಚು ಉತ್ತಮ ಎಂಬ ಭಾವನೆಯನ್ನು ಇಂತಹ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬಹುದು. ಈ ದೃಷ್ಟಿಯಿಂದಲೂ ಗೊರೂರವರ ಸಾಹಿತ್ಯ ಆದರಣೀಯ, ಅನುಕರಣೀಯ ಎಂಬುದನ್ನು ಒಪ್ಪಬೇಕು.

ವಾಸು ಊರಿನ ಹಿರಿಯರು ಜಾತಿ ವಿಷಯವನ್ನು ಚರ್ಚಿಸುತ್ತಿದ್ದಾಗ ವರ್ಣ ಸಂಕರದ ವಿಷಯವನ್ನು ಹೇಳುತ್ತಿದ್ದಾಗ ಭಾರತೀಯತೆ ಹಿಂದುತ್ವದ ನಾಶ ಇದರ ಬಗ್ಗೆ ಕಟುವಾದ ಎಚ್ಚರಿಕೆಯ ಮಾತನ್ನು ಆಡಿ "ಸಾಹೇಬರೇ ಹೋಗುವಾಗ ಗಡ್ಡಕ್ಕೆ ಅತ್ತರು ಎಂಬಂತೆ" (ಅದೇ; ಪು. ೧೦೬) ಎಂಬ ಮೂರ್ಖತನಕ್ಕೆ ನಾವು ಒಳಗಾಗಬಾರದು ಎಂದು ವಾಸು ಎಚ್ಚರಿಸಿ ಹಿಂದೂ ಧರ್ಮದ ಜಾಗೃತಿಯ ಬಗ್ಗೆ ನಮ್ಮ ಎಚ್ಚರದ ಕಣ್ಣನ್ನು ತೆರೆಸುತ್ತಾನೆ. ಪ್ರತಿಯೊಬ್ಬ ಭಾರತೀಯನಲ್ಲೂ ಭಾರತೀಯತೆ ಹಿಂದುತ್ವ ಶಾಶ್ವತವಾಗಿ ಉಳಿದಿರಬೇಕು. ಅದಕ್ಕಾಗಿ ಬದುಕುವ ಛಲ ಉತ್ಸಾಹ ನಮ್ಮಲ್ಲಿ ಇರಬೇಕು ಎಂಬ ಸದ್ಭಾವನೆಯನ್ನು ಗೊರೂರವರು 'ಹೇಮಾವತಿ' ಕೃತಿಯ ಮೂಲಕ ಕನ್ನಡಿಗರಲ್ಲಿ ಸ್ಥಾಯಿಗೊಳಿಸಿದ್ದಾರೆ. ವಾಸುವಿನ ದೃಷ್ಟಿಯಲ್ಲಿ ಜಾತಿಯತೆ ಸತ್ತಿದೆ. ಭಾರತೀಯತೆ ಮಾತ್ರ ಉಳಿದಿದೆ. ಹೀಗಿರುವಾಗ ಜಾತಿ ಘರ್ಷಣೆಗೆ ಇನ್ನು ಅವಕಾಶ ಇಲ್ಲ ಎಂದು ಹೇಳುವುದು ಸಮಂಜಸ ಎನಿಸುತ್ತದೆ. ಇದುವರೆವಿಗೆ ಜಾತಿಯ ಹೆಸರಿನಲ್ಲಿ ಭಾರತದಲ್ಲಿ ಆಗಿರುವ ಕೊಲೆಗೆ ಮುಕ್ತಾಯ ಮಾಡಬೇಕು ಎಂಬುದು ವಾಸುವಿನ ನಿಶ್ಚಲ ನಿಲುವಾಗಿದೆ.

ಜಾತಿ ಪದ್ಧತಿಯ ನಿರ್ಮೂಲನೆ ಕೇವಲ ಸಂದೇಶದ ಮಾತಾಗಿ ಉಳಿಯಬಾರದು ಎಂಬುದು ವಾಸುವಿನ ಅಭಿಮತ. ಜಾತಿಯ ಸೌಹಾರ್ದತೆ ಬೇರೆ ಜಾತಿಯವರಲ್ಲಿ ತಾತ್ವಿಕವಾಗಿ ಆಚರಣೆಯ ಮೂಲಕ ಒಂದಾಗುವುದು ಎಂದು ವಾಸು ಅಭಿಪ್ರಾಯಪಡುತ್ತಾನೆ. ಅಂತರ್ಜಾತಿಯವರೊಂದಿಗೆ ಸಹಭೋಜನ ಆಗಬೇಕು, ವಿವಾಹವಾಗಬೇಕು ಆಗ ಮಾತ್ರ ಜಾತಿಯತೆ ನಿರ್ಮೂಲನೆ ಆಗುತ್ತದೆ ಎಂದು ವಾಸು ಹೇಳಿ ರಾಷ್ಟ್ರ ನಾಯಕರ ಉದಾಹರಣೆಗಳನ್ನು ಕೊಡುತ್ತಾನೆ. ಈ ವಿಷಯದಲ್ಲಿ ವಾಸು ನೆನಪಿಸುವ ಉದಾಹರಣೆಗಳು - ಪರಾಶರ ಋಷಿ ಬೆಸ್ತರ ಹೆಣ್ಣನ್ನು ಮದುವೆ ಆದನು. ಭೀಮ ದೇವಾಂಶ ಸಂಭೂತನಾದರೂ ಹಿಡಿಂಬೆಯಂತ ರಾಕ್ಷಸಿಯನ್ನು ಮದುವೆ ಆಗಲಿಲ್ಲವೆ? ರಾಜಗೋಪಾಲಾಚಾರ್ಯರ ಮಗಳನ್ನು ಗಾಂಧಿಯ ಮಗನಿಗೆ ಕೊಟ್ಟಿಲ್ಲವೆ? ಬ್ರಾಹ್ಮಣನಾದ ನೆಹರುವಿನ ಮಗಳು ಇಂದಿರಾಳನ್ನು ಪಾರಸಿ ಪಿರೋಜನಿಗೆ ಕೊಟ್ಟಿಲ್ಲವೆ? ಹಾಗಾದರೆ ಅವರ ವಂಶಕ್ಕೆ ಸದ್ಗತಿ ಇಲ್ಲವೆ? ಎಂದು ವಾಸು ಪ್ರಶ್ನಿಸುತ್ತಾನೆ. ಈ

ಹಿನ್ನೆಲೆಯಲ್ಲಿ ವಾಸು "ಮದುವೆಯಾದರೆ ಗಾನ ಶಾರದೆಯನ್ನು ಆಗುತ್ತೇನೆ, ಇಲ್ಲದಿದ್ದರೆ ಇಲ್ಲ" ಎಂದು ತನ್ನ ದೃಢ ನಿಶ್ಚಯವನ್ನು ಪ್ರಕಟಪಡಿಸುತ್ತಾನೆ. (ಅದೇ; ಪು. ೨೮೦) ತನ್ನ ಜೀವನ ತನ್ನ ತತ್ವ ಆದರ್ಶ ಎಂದೆಂದಿಗೂ ಎರಡು ಅಲ್ಲ ಅಖಂಡವಾಗಿ ಒಂದೇ ಆಗಿದೆ ಎಂಬುದನ್ನು ನೆನಪಿಸುತ್ತಾನೆ.

ಜಾತಿಯತೆಯ ಭಾವನೆ ಅನೇಕ ಸಂದರ್ಭಗಳಲ್ಲಿ ಸಣ್ಣತನವಾಗಿ ಕಾಣಿಸಿಕೊಳ್ಳುವುದುಂಟು. ಇಂತಹ ವರ್ತನೆಯಿಂದ ಮಾನಸಿಕ ಶಾಂತಿ ಹಾಳಾಗುತ್ತದೆ ಎಂಬುದು ಗೊರೂರರವರ ಅಭಿಪ್ರಾಯವಾಗಿದೆ. ಸಂಪ್ರದಾಯಸ್ಥರು ಹೇಗೆ ಜಾತಿ ದೃಷ್ಟಿಯಲ್ಲಿ ಸಂಕುಚಿತ ಭಾವನೆಯಲ್ಲಿ ನಡೆದುಕೊಳ್ಳುವ ರೀತಿಯನ್ನು ಕಂಡಾಗ ಹಾಸ್ಯಾಸ್ಪದ ಎನಿಸುತ್ತದೆ. ಇದಕ್ಕೆ ಉದಾಹರಣೆಯಾಗಿ 'ಹಳ್ಳಿಯ ಚಿತ್ರಗಳು' ಕೃತಿಯಲ್ಲಿ ಕಿಟ್ಟುವಿನ ತಂದೆ ಹಾಸನಕ್ಕೆ ತಮ್ಮ ಮಕ್ಕಳ ಕೊಠಡಿಗೆ ಬರುವ ಘಟನೆಯನ್ನು ಕಾಣಬಹುದು. ಕಿಟ್ಟು ಮತ್ತು ನರಹರಿ ಹಾಸನದಲ್ಲಿ ಒಟ್ಟಿಗೆ ವ್ಯಾಸಾಂಗ ಮಾಡುತ್ತಿದ್ದರು. ಒಮ್ಮೆ ಊಟಕ್ಕಾಗಿ ಕಿಟ್ಟು ಹೋಟೆಲ್‌ಗೆ ಹೋದಾಗ "ಏನು ಹಾಳು ಹೋಟೆಲೋ, ಜಾತಿ ಕುಲ ಏನೂ ಇಲ್ಲ. ಇಂಗ್ಲೀಷ್ ವಿದ್ಯೆ ಬಂದು ನಮ್ಮ ಧರ್ಮ ಹಾಳಾಯ್ತು" ಎಂದು ಕಿಟ್ಟುವಿನ ತಂದೆ ಗುಡುಗುತ್ತಾರೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೮೭) ಕಿಟ್ಟುವಿನ ತಂದೆ ಹೋಟೆಲ್‌ನ ಊಟದ ಬಗ್ಗೆ ನರಹರಿಯನ್ನು ಕೇಳುವ ಪ್ರಶ್ನೆಗಳು "ಹೋಟೆಲಿನಲ್ಲಿ ಪಾತ್ರೆ ಬೆಳಗುವರಾರು?" "ಎಲೆ ಎತ್ತುವರಾರು? ಅಡಿಗೆ ಮಾಡೋನು ನಿತ್ಯ ಸ್ನಾನ ಸಂಧ್ಯಾವಂದನೆ ಮಾಡ್ತಾನ್ಯೆ?" ಎಂದೂ ಮುಂತಾಗಿ ಕೇಳಿದರು. (ಅದೇ; ಪು. ೮೮) ಈ ಪ್ರಶ್ನೆಗಳೆಲ್ಲವು ಸಂಪ್ರದಾಯಸ್ಥರ ಸಂಕುಚಿತ ಮನಸ್ಸಿನ ಪ್ರಶ್ನೆಗಳು ಎಂಬುದನ್ನು ಗಮನಿಸಬಹುದು. ಕಿಟ್ಟುವಿನ ತಂದೆಗೆ ಹೋಟೆಲ್‌ನಲ್ಲಿ ಕೂತವರ ರೀತಿಯು ಮನಸ್ಸಿಗೆ ಮುಜುಗರ ತರುತ್ತದೆ. ಕೆಲವರು ಅಂಗಿಯನ್ನು, ಕೆಲವರು ಕೋಟನ್ನು ಹಾಕಿಕೊಂಡು ಊಟ ಮಾಡುತ್ತಿದ್ದರು. ಎಲೆಗಳನ್ನೆಲ್ಲಾ ಒಂದಕ್ಕೆ ಒಂದು ತಗಲುವಷ್ಟು ಹತ್ತಿರಕ್ಕೆ ಹಾಕಿದ್ದರು. ಬೇಕಾದವರು ಬೇಕಾದಾಗ ಏಳುತ್ತಿದ್ದರು. ಬೇಕಾದವರು ಬೇಕಾದಾಗ ಊಟಕ್ಕೆ ಕುಳಿತುಕೊಳ್ಳುತ್ತಿದ್ದರು. ಕೆಲವರು ಪರಿಷೇಚನವನ್ನು ಮಾಡುತ್ತಿರಲಿಲ್ಲ. ಕೆಲವರು ಆಪೋಶನವನ್ನೇ ತೆಗೆದುಕೊಳ್ಳುತ್ತಿರಲಿಲ್ಲ. ಕಿಟ್ಟು ಅವರ ಮಧ್ಯದಲ್ಲಿ ಅಂಗಿ ಹಾಕಿಕೊಂಡೇ ಊಟಕ್ಕೆ ಕುಳಿತ್ತಿದ್ದ ಅವರ ತಂದೆಯವರು ನೋಡಿ ಸಾರ್ಥಕವಾಯಿತು, ಉದ್ಧಾರವಾಯಿತು ಎಂದು ಗೊಣಗುತ್ತಾರೆ. ಕೋಪದಿಂದ ಕಿಟ್ಟುವಿಗೆ "ನಡೆ ಊರಿಗೆ - ಮಗನೆ. ನಿನ್ನ ವಿದ್ಯೆ ಹಾಳಾಯ್ತು. ಓದಿದ್ದು ಸಾಕು" ಎಂದು ಗದರಿಸಿದರು. .... "ಈ ಜಾತಿ ಕೆಟ್ಟ ವಿದ್ಯೆದಿಂದ ನಮಗೆ ಆಗಬೇಕಾದುದೇನು?" (ಅದೇ; ಪು.೮೯) ಎಂದು ಸಿಡುಕುತ್ತಾರೆ. ಈ ಮಾತುಗಳಲ್ಲೆಲ್ಲಾ ಸಂಪ್ರದಾಯದ ಮೌಢ್ಯವನ್ನು ಗುರುತಿಸಬಹುದು. ಜಾತಿಯತೆಗೆ ಇಂಥ ಮೌಢ್ಯತನವೂ ಹೇಗೆ ಕಾರಣವಾಗಬಹುದು ಎಂಬುದನ್ನು ಗೊರೂರರವರು ತಿಳಿಸಿದ್ದಾರೆ. ಲೇಖಕರು ಒಂದು ಸಣ್ಣ ಸಂಗತಿಯ ಜೊತೆಗೆ ಒಂದು ದೊಡ್ಡ ಘರ್ಷಣೆಯನ್ನು ತಮ್ಮ ವೈಚಾರಿಕತೆಯಲ್ಲಿ ಸೇರಿಸಿ ಹೇಳಿರುವುದನ್ನು ಅವರ ವಿಚಾರಧಾರೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ನಮ್ಮ ಸಮಾಜದಲ್ಲಿ ಕಾಲ ಬದಲಾದಂತೆ ನಾವು ನಮ್ಮ ಸಂಪ್ರದಾಯದ ಕೆಲವು ಸಣ್ಣ ಭಾವನೆಗಳನ್ನು ಅನಿವಾರ್ಯವಾಗಿ ಕೈ ಬಿಡುವುದು ಸೂಕ್ತ ಎಂಬುದು ಗೊರೂರರವರ ಧೋರಣೆಯಾಗಿದೆ.

ಗಾನ ಶಾರದೆಗೂ ವಾಸುವಿಗೂ ಗಾಂಧಿಯವರ ಸಮ್ಮುಖದಲ್ಲಿ ಮದುವೆಯಾದ ಘಟನೆಯನ್ನು ಗೊರೂರರವರು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. 'ಹಳ್ಳಿಗೆ ಹೋಗಿ' ಎಂಬ ಸಂದೇಶ ಎಷ್ಟು ಮುಖ್ಯವಾದದ್ದೋ ಜಾತಿಯತೆಯ ಭಾವನೆಯನ್ನು ಬಿಟ್ಟು ಸೌಹಾರ್ದ ಭಾವನೆಯನ್ನು ಬೆಳಸಿಕೊಳ್ಳಬೇಕು ಎಂಬುದು ಗಾಂಧಿಯವರ ಆಶಯವಾಗಿದೆ. ಚೆನ್ನಿ ಕಲಿತ ವಿದ್ಯೆಯಿಂದ ಸಮಾಜ ಸೇವೆಯನ್ನು ಮಾಡಬೇಕು ಎಂಬುದು ಮೂಲ ಉದ್ದೇಶವಾಗಿದೆ. ಚೆನ್ನಿ ತನ್ನ ಗಾನ ಕಲೆಯ ಮೂಲಕ ಹಣ ಸಂಪಾದಿಸಿ ಗ್ರಾಮೀಣ ಉದ್ಧಾರಕ್ಕಾಗಿ ವಿನಿಯೋಗಿಸುತ್ತಿದ್ದಳು. ಮದುವೆಯ ಸಂದರ್ಭದಲ್ಲಿ ಗಾಂಧಿಯವರು ಮಂತ್ರ ಸಹಿತ ಮಂಗಳ ಸೂತ್ರ ಕಟ್ಟಿಸಿದ್ದು ಚೆನ್ನಿ ಹಾಗೂ ವಾಸುವಿಗೆ ಪೂರ್ಣ ಆನಂದವನ್ನು ತಂದಿತು. ಗಾಂಧಿಯವರು ಚೆನ್ನಿಯನ್ನು ನೀನು ಕಸ್ತೂರಿ ಬಾ ಗ್ರಾಮಕೇಂದ್ರ ಶಿಕ್ಷಣಕ್ಕಾಗಿ ಬೆಳೆದ ಮಗು ಎಂದು ಹೇಳುತ್ತಾ "ಈ ಕನ್ಯೆಯನ್ನು ನಾನು ನಿನಗೆ ಕೊಡುವುದು ಧರ್ಮ ರಕ್ಷಣೆಗಾಗಿ ಮತ್ತು ನೀನು ಆಕೆಯ ರಕ್ಷಣೆ ಮಾಡುವುದಕ್ಕಾಗಿ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೨೯) ಎಂದು ಗಾಂಧಿ ವಾಸುವಿಗೆ ಹಿತ ವಚನ ಹೇಳುತ್ತಾರೆ. ಆಕೆಗೆ ನಿಜವಾದ ಮಿತ್ರನಾಗಿರು ಯಜಮಾನ ಆಗಬೇಡ. ಆಕೆಯ ದೇಹವನ್ನು ಆತ್ಮವನ್ನು ಪವಿತ್ರವಾದುದಾಗಿ ಭಾವಿಸು. ಆಕೆ ನಿನ್ನ ದೇಹ ಆತ್ಮಗಳನ್ನು ಪವಿತ್ರವಾದುದಾಗಿ ಭಾವಿಸಲಿ ಎಂದು ಗಾಂಧಿಯವರು ವೇದೋಕ್ತ ಸಂದೇಶವನ್ನೇ ವಾಸು ಹಾಗೂ ಚೆನ್ನಿಗೆ ನೀಡಿದ್ದಾರೆ. ಗಾಂಧಿಯವರ ದೃಷ್ಟಿಯಲ್ಲಿ ಸಂಸಾರದ ಸೌಖ್ಯ ಅತ್ಯಂತ ಪ್ರಮುಖವಾದದ್ದು. ಇದರಿಂದಲೇ ಸಮಾಜದ ಸೌಖ್ಯ ಸಾಧಿತವಾಗುತ್ತದೆ ಎಂಬುದು ಗಾಂಧಿಯವರ ದೃಢ ನಂಬಿಕೆ. ಗೊರೂರರವರು ಗಾಂಧಿಯವರ ಈ ಆಲೋಚನೆಗಳನ್ನು 'ಹೇಮಾವತಿ' ಕಾದಂಬರಿಯಲ್ಲಿ ಬಳಸಿಕೊಂಡಿರುವುದು ಕಾದಂಬರಿಗೆ ಹಿರಿಮೆಯನ್ನು ತಂದಿದೆ. ವಾಸು ಹಾಗೂ ಚೆನ್ನಿ ಜಾತಿ ಭಾವನೆಯನ್ನು ಮೆಟ್ಟಿ ಮೇಲೇರಿರುವುದುರ ಮೂಲಕ ಕಲಾ ಸೇವೆಯನ್ನು, ಗ್ರಾಮೀಣ ಸೇವೆಯನ್ನು ಮುಂದುವರೆಸಿ ಗಾಂಧಿ ತತ್ವಗಳಿಗೆ, ಆದರ್ಶಗಳಿಗೆ ಜೀವಂತ ಉದಾಹರಣೆಗಳಾಗಿ ಉಳಿದು ಕಂಗೊಳಿಸಿರುವುದು ಈ ಕಾದಂಬರಿಯ ಮೇಲ್ಮೆಯಾಗಿದೆ. ವಿವಾಹ ಸಂಸ್ಕಾರ ಸಂಪ್ರದಾಯದ ಕರುಡುತನದಲ್ಲಿ ನಡೆಯುವುದಕ್ಕಿಂತ ಅರಿವಿನ ಹಿನ್ನೆಲೆಯಲ್ಲಿ ನಡೆದರೆ ಹೆಚ್ಚು ಪರಿಣಾಮಕಾರಿ ಎಂಬುದನ್ನು ಇಲ್ಲಿ ಚೆನ್ನಾಗಿ ಮನಗಾಣಬಹುದು.

ಗೊರೂರರವರು ತಮ್ಮ ಕೃತಿಗಳಲ್ಲಿ ಜಾತಿಯ ಸಂಘರ್ಷಗಳನ್ನು ತಿಳಿಸುವುದರ ಜೊತೆಗೆ ಜಾತಿ ಸೌಹಾರ್ದತಾ ಭಾವನೆಯನ್ನು ಅತ್ಯಂತ ಮನೋಜ್ಞವಾಗಿ ತಿಳಿಸಿದ್ದಾರೆ. ಜಾತಿಯ ಸಂಘರ್ಷಕ್ಕೆ ಅಜ್ಞಾನ ಅವಿವೇಕ ಒಂದು ರೀತಿಯಲ್ಲಿ ಕಾರಣವಾದರೆ ಪುರಾತನ ಕಾಲದಿದಂಲೂ ಬೆಳಸಿಕೊಂಡು ಬಂದಿದ್ದ ವೈಮನಸ್ಸು ಕಾರಣವಾಗಿರುತ್ತದೆ. ಆದರೆ ಸಮಾಜದ ಸುಧಾರಕರ ಸಂದೇಶ ವಿಚಾರವಂತರ ವೈಚಾರಿಕ

ಕ್ರಾಂತಿ ಇಂತಹ ದುಷ್ಟ ಆಲೋಚನೆಗಳನ್ನು ಹೋಗಲಾಡಿಸುತ್ತವೆ. ಗ್ರಾಮೀಣ ಪರಿಸರದಲ್ಲಿ ಆಚರಿಸುವ ಅನೇಕ ಹಬ್ಬ ಹರಿದಿನಗಳು ಜಾತ್ರೆಗಳು ರಥೋತ್ಸವ ಜಾತಿಯ ಸೌಹಾರ್ದತೆಗೆ ಮೂಲ ಪ್ರೇರಣೆಯಾಗುತ್ತದೆ. ವ್ಯಕ್ತಿಗೆ ಧರ್ಮದ ಒಂದು ಸ್ಪಷ್ಟ ಪರಿಕಲ್ಪನೆ ಉಂಟಾದಾಗ ಆತ ತನ್ನ ಆಚರಣೆಗಳ ಬಗ್ಗೆಯು ವಿಚಾರ ಮಾಡುತ್ತಾನೆ. ಆಗ ಸಹಜವಾಗಿ ಅವನಲ್ಲಿ ಮೌಢ್ಯತೆ ದೂರವಾಗಿ ಜಾತಿಯತೆಯ ಬಗ್ಗೆ ಇರುವ ಸಂಕುಚಿತ ತನ ತಾನಾಗಿ ಜಾರಿ ಹೋಗುತ್ತದೆ. ಈ ರೀತಿಯಲ್ಲಿ ಆದ ಮನಪರಿವರ್ತನೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಗೊರೂರರವರು ಅಪ್ಪಟ ಗಾಂಧಿವಾದಿ. ಅವರ ಜೀವನದಲ್ಲಿಯೂ ಸಾಹಿತ್ಯದಲ್ಲಿಯೂ ಗಾಂಧಿ ಪ್ರಭಾವ ಬಹಳಷ್ಟಿದೆ. ಅವರ ಪ್ರಬಂಧಗಳಲ್ಲಿ ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ಗುರುತಿಸಬಹುದು. 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯ 'ದೇವರೂ ಡೆಮಾಕ್ರಸಿಯೂ' ಎಂಬ ಪ್ರಬಂಧದಲ್ಲಿ ಬ್ರಾಹ್ಮಣರ ಗುಂಡ ಶುದ್ಧ ವೈದಿಕರಾದ ಮಡಿವಂತರ ಕೆಂಗಣ್ಣುಗಳಿಗೆ ಅಂಜದೆ ಹೊಲೆಯರ ವಾದ್ಯಗಳನ್ನು ತಂದು ದೇವರ ಉತ್ಸವ ನಡೆಸಿದಂತಹ ಹಲವಾರು ಘಟನೆಗಳ ಸಮರ್ಥ ಪ್ರತಿಪಾದನೆಯಲ್ಲಿ ನಾವು ಇದನ್ನು ನೋಡುತ್ತೇವೆ. ಅಸ್ಪೃಶ್ಯತಾ ನಿವಾರಣೆ ಮತ್ತು ಭಾವೈಕ್ಯವನ್ನು ಮೂಡಿಸುವಲ್ಲಿ ಗೊರೂರರವರ ಪ್ರಬಂಧಗಳು ವಹಿಸಿದ ಪಾತ್ರವನ್ನು ಕುರಿತು ಮಳಲಿ ವಸಂತಕುಮಾರ್ ಅವರ ಅಭಿಪ್ರಾಯ ಹೀಗಿದೆ. "'ಜಾತ್ರೆ', 'ಬಿಂದಿಗಮ್ಮನ ಜಾತ್ರೆ', 'ಹೇಮಾವತಿ ತೀರದಲ್ಲಿ' ಮೊದಲಾದ ಪ್ರಬಂಧಗಳಲ್ಲಿ ನಾವಿದನ್ನು ನೋಡಬಹುದು. ಇಲ್ಲಿ ಬ್ರಾಹ್ಮಣ, ಹೊಲೆಯ, ಒಕ್ಕಲಿಗ, ಹಜಾಮ, ಅಗಸ, ದಾಸಯ್ಯ, ತುರುಕ ಎಲ್ಲರೂ ಒಟ್ಟಾಗಿ ಒಂದಾಗಿ ಕಲೆತು ಉತ್ಸಾಹದಿಂದ ಬದುಕುವುದನ್ನು ನೋಡುತ್ತೇವೆ. ಒಂದು ದೇವರ ಉತ್ಸವ ನಡೆಸುವಾಗ, ಒಂದು ಸ್ಪರ್ಧೆ ಏರ್ಪಟ್ಟಾಗ ತಮ್ಮ ಮಧ್ಯೆ ಇರುವ ಭೇದಭಾವಗಳ ಮೇಲು ಕೀಳುಗಳ ಅಸಮಾನತೆಯ ಗೋಡೆಗಳನ್ನು ಕೆಡವಿ, ಬಿರುಕುಗಳನ್ನು ಮುಚ್ಚಿ ಒಂದಾಗುತ್ತಾರೆ. ಅವರಿಗೆ ಒಳಗೊಂದು ಹೊರಗೊಂದು ಇಲ್ಲ. ಅವರ ಬದುಕು ಶುದ್ಧ ಅಪರಂಜಿ. ಗ್ರಾಮೀಣ ಜನ ಯಾವತ್ತೂ ಜಾತಿಗೆ ಅಂಟಿಕೊಂಡವರಲ್ಲ. ಅವರಿಗೆ ಜಾತಿ ಸುಲಭವಾಗಿ ಒಡೆದು ಎಲ್ಲರೊಡನೆ ಬೆರೆತು ಒಂದಾಗಬಲ್ಲ ಮಣ್ಣ ಹೆಂಟೆ ಇದ್ದಂತೆ. ವಿದ್ಯಾವಂತರಲ್ಲಾದರೆ ಅದು ಅಂತರಂಗದಲ್ಲಿ ಅಡಗಿರುವ ಕಾರ್ಕೋಟಕ ವಿಷದ ಹಾಗೆ. ಆದ್ದರಿಂದ ಗ್ರಾಮಜೀವನದ ಭಾವೈಕ್ಯ ತುಂಬ ಪ್ರಾಮಾಣಿಕವಾದುದು. ಏಕೆಂದರೆ ಅದು ಅಂತಃಕರಣದಿಂದ ಬಂದುದು" (ಮಳಲಿ ವಸಂತಕುಮಾರ್; ೧೯೭೮; ಪು. ೬೯) ಎಂಬ ಮಾತುಗಳು ಸೂಕ್ತವಾದವುಗಳು. ಗೊರೂರರವರ ಪ್ರಬಂಧಗಳಲ್ಲಿ ನಾವು ವಿಶೇಷವಾಗಿ ಗಮನಿಸಬೇಕಾದುದು ಅವರ ನಿರ್ದಾಕ್ಷಿಣ್ಯವಾದ ಪ್ರವೃತ್ತಿ ಮತ್ತು ನಿರ್ಮಲವಾದ ಮನಸ್ಸು. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು ಗ್ರಾಮೀಣ ಜನರಲ್ಲಿ ಕಂಡುಬರುವ ಸೌಹಾರ್ದಯುತ ಜೀವನ.

'ಹೇಮಾವತಿ' ಕಾದಂಬರಿಯಲ್ಲಿ ಕಂಡುಬರುವ ವಾಲ್ಮೀಕಿ ಕುಟೀರ ಜಾತಿ ಸೌಹಾರ್ದತೆಗೆ ಪ್ರೇರಕವಾಗಿದೆ. ವಾಸು ಪರಿಜನ ಕೇರಿಯ ಮುಂದೆ ಸಣ್ಣ ಗುಡ್ಡದ ತಳದಲ್ಲಿ ಒಂದು ತರಗಿನ ಮನೆಯನ್ನು

ಕಟ್ಟಿಸಿದನು. ಆನಂದ ಪೆರುಮಾಳರು ಅದನ್ನು ವಾಲ್ಮೀಕಿ ಕುಟೀರ ಎಂದು ಕರೆದನು. ಅಗ್ರಹಾರದ ಹರಿಜನರು ಹದಿನೈದು ದಿನಗಳಲ್ಲಿ ವಾಲ್ಮೀಕಿ ಕುಟೀರವನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಿದರು. ಅದು ಹರಿಜನ ಮಕ್ಕಳ ವಿದ್ಯಾರ್ಥಿ ನಿಲಯವೇ ಆಯಿತು. ಊರಿನಲ್ಲಿ ಹರಿಜನರಿಗೆ ಪ್ರತ್ಯೇಕವಾದ ಶಾಲೆ ಇದ್ದರು ಅಗ್ರಹಾರದ ಹರಿಜನ ಮಕ್ಕಳು ಈ ವಾಲ್ಮೀಕಿ ಕುಟೀರಕ್ಕೆ ಬರುತ್ತಿದ್ದರು. "ವಾಲ್ಮೀಕಿ ಕುಟೀರ ಹರಿಜನರ ಎಲ್ಲಾ ಕಾರ್ಯಕ್ರಮಗಳಿಗೂ ಕ್ಷೇತ್ರವಾಯಿತು. ಹದಿನೈದು ದಿನಗಳೊಳಗೆ ಹರಿಜನ ಕೇರಿ ಹರಿಜನರ ಕೇರಿಯಾಗಿ ಕಾಣಲಿಲ್ಲ. ಹರಿಜನರು ಮನುಷ್ಯರಾಗಿ ಕಂಡರು. ಹರಿಜನರಿಗೆ ಜೀವನದಲ್ಲಿ ಹೊಸ ಆಸೆಗಳು ಹೊಸ ಗುರಿಗಳೂ ಹೊಸ ಅರ್ಥಗಳೂ ತೋರತೊಡಗಿದವು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೨೮೨) ಗೊರೂರವರ ಈ ಮಾತುಗಳಲ್ಲಿ ನಮಗೆ ಕಾಣಿಸುವ ಅಂತರಾರ್ಥ ವ್ಯಕ್ತಿ ಸೌಹಾರ್ದ ಭಾವನೆಯಿಂದ ಹೊಸ ಬದುಕನ್ನು ಕಾಣಬಹುದು. ಹೊಸ ಉತ್ಸಾಹವನ್ನು ಕಾಣಬಹುದು ಎಂಬ ಅಂಶ ಮನವರಿಕೆಯಾಗುತ್ತದೆ. ಇಂತಹ ಸೌಹಾರ್ದ ಬದುಕಿನಿಂದ ಯಾರೊಬ್ಬರೂ ನಾವು ಬೇರೆ ಎಂಬ ಭಾವನೆ ಮನಸ್ಸಿನಲ್ಲಿ ಮೂಡುವುದಿಲ್ಲ. ಇದಕ್ಕೆ ಬದಲಾಗಿ ನಾವೆಲ್ಲಾ ಒಂದು ಎಂಬ ಮೈತ್ರಿ ಭಾವನೆ ಮೂಡಿ ಸಮಾಜದಲ್ಲಿ ಸಂಘಟಿತ ಶಕ್ತಿ ತನ್ಮೂಲಕ ಸಂತೋಷ ಕಾಣಿಸಿಕೊಳ್ಳುತ್ತದೆ. ಆನಂದ ಪೆರುಮಾಳರು ವಾಲ್ಮೀಕಿ ಕುಟೀರದಲ್ಲಿ ಒಂದು ಸಣ್ಣ ವೈದ್ಯ ಶಾಲೆಯನ್ನೆ ಇಟ್ಟನು. ಹೇಮಾವತಿಯೂ ವಾಸುವೂ ಅದರ ಕೆಲಸಗಾರರಾಗಿದ್ದರು. "ಅನೇಕ ತಲೆಗಳಿಂದ ಔಷಧದ ಹೆಸರನ್ನೇ ಕೇಳದಿದ್ದ ಹರಿಜನ ಸ್ತ್ರೀಯರು ಸಹ ಔಷಧಿಗಾಗಿ ಆನಂದನ ವೈದ್ಯ ಶಾಲೆಗೆ ಬರುತ್ತಿದ್ದರು". (ಅದೇ; ಪು. ೨೮೩) ಔಷಧಿ ಉಪಚಾರದಿಂದಲೂ ಜಾತಿ ಸೌಹಾರ್ದ ಭಾವನೆಯನ್ನು ಮೂಡಿಸಬಹುದು ಎಂಬುದಕ್ಕೆ ಆನಂದರ ಈ ಸೇವೆಯೇ ಸಾಕ್ಷಿಯಾಗಿದೆ. ಹೀಗೆ ಆನಂದ ಹರಿಜನರಿಗೆ ಏಕಕಾಲದಲ್ಲಿ ತಂದೆ, ಸರ್ಕಾರ, ಮಿತ್ರ, ವೈದ್ಯ ಎಲ್ಲಾ ಆದನು. ಸೇವಾ ಮನೋಧರ್ಮ ಇರುವ ಯುವಕ ಪ್ರತಿಭಾವಂತನು ಆಗಿದ್ದರೆ ಹೇಗೆ ಸಮಾಜಕ್ಕೆ ಉಪಕಾರಿಯಾಗಬಹುದು ಎಂಬುದಕ್ಕೆ ಗೊರೂರವರು ಆನಂದನ ಪಾತ್ರದ ಮೂಲಕ ಉದಾಹರಣೆಯಾಗಿ ಕೊಟ್ಟಿದ್ದಾರೆ. ವಾಲ್ಮೀಕಿ ಕುಟೀರ ಸಾಂಸ್ಕೃತಿಕ ಕೇಂದ್ರವಾಯಿತು. ಗಾನ ಶಾರದೆ ಹೇಮಾವತಿಯರ ಗಾನ ವೈಭವವನ್ನು ಕೇಳಲು ಊರಿನವರೆಲ್ಲರು ವಾಲ್ಮೀಕಿ ಕುಟೀರಕ್ಕೆ ಬರುತ್ತಿದ್ದರು. ಭಜನೆಗೆ ಬಂದ ಹರಿಜನರೊಂದಿಗೆ ಉತ್ತಮ ಜಾತಿಯವರು ಸೇರಿ ಸ್ನೇಹಪರರಾದರು. ಕೃಷ್ಣನ ಕೊಳಲನ್ನು ಕೇಳಿ ಗೋಪಿಕೆಯರು ಓಡಿ ಬಂದಂತೆ ಅಗ್ರಹಾರದವರೆಲ್ಲ ಭಜನೆ ಮಂದಿರಕ್ಕೆ ಬರುತ್ತಿದ್ದರು. ವಾಲ್ಮೀಕಿ ಕುಟೀರದಲ್ಲಿ ಪಂಚಮರ ಮಕ್ಕಳು ವಿದ್ಯೆಯನ್ನು ಕಲಿತರು-ಪಂಚಮರು ಸಾಂಸ್ಕೃತಿಕ ಬದುಕನ್ನು ಕಲಿತರು. ಗಾಂಧೀಜಿಯವರು ಹರಿಜನೋದ್ಧಾರದ ಬಗ್ಗೆ, ಗ್ರಾಮೋದ್ಧಾರದ ಬಗ್ಗೆ ಆಡಿದ ಎಲ್ಲ ಆದರ್ಶದ ಮಾತುಗಳನ್ನು ವಾಸು, ಆನಂದ, ಹೇಮಾವತಿ ಮತ್ತು ಚೆನ್ನಿ ಅನುಷ್ಠಾನಕ್ಕೆ ತಂದಿರುವುದು ನಿಜಕ್ಕೂ ಸ್ತುತ್ಯರ್ಹ ಅರ್ಥಪೂರ್ಣ ಕ್ರಾಂತಿಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ವಾಲ್ಮೀಕಿ ಕುಟೀರದಲ್ಲಿ ಸರ್ವರಿಗೂ ಸುಲಭ ದೃಶ್ಯವಾದ ದೇವರನ್ನು ಸ್ಥಾಪಿಸೋಣ ಯಾರು ಬೇಕಾದರೂ ಪೂಜೆ ಮಾಡಿಕೊಳ್ಳಲಿ ಎಂದು ಆನಂದ ಸದಾಶಯ ವ್ಯಕ್ತಪಡಿಸುತ್ತಾನೆ.

ಗಾನ ಕಲೆಯಲ್ಲಿ ಮನಸ್ಸು ಮನಸ್ಸುಗಳು ಒಂದಾದಂತೆ ಪೂಜೆಯ ಕಾರಣದಿಂದಲೂ ಒಂದಾಗಬಹುದು ಎಂಬ ಆಲೋಚನೆಯನ್ನು ಲೇಖಕರು ಇಲ್ಲಿ ವ್ಯಕ್ತಪಡಿಸಿದ್ದಾರೆ.

ದೇವರ ಬಗ್ಗೆ ವಿಶಾಲ ಮನೋಭಾವನೆ ದಾರ್ಶನಿಕರಿಗೆ ಅಷ್ಟೇ ಅಲ್ಲದೆ ಸಾಮಾನ್ಯ ವ್ಯಕ್ತಿಗಳಲ್ಲಿಯೂ ಗುರುತಿಸಬಹುದು ಎಂಬುದಕ್ಕೆ ಉದಾಹರಣೆಯಾಗಿ 'ಕತೆಗಳು ಮತ್ತು ವಿನೋದ ಚಿತ್ರಗಳು' ಕೃತಿಯಲ್ಲಿ ಸಣ್ಣಮ್ಮನ ಪಾತ್ರದಲ್ಲಿ ಕಾಣಬಹುದು. ಆಕೆ ಎಲ್ಲಾ ದೇವಾಲಯಗಳ ಮುಂದೆಯು ಬೆಳಗ್ಗೆ ಎದ್ದು ರಂಗವಲ್ಲಿಯನ್ನು ಹಾಕುವುದು ಅವಳ ರೂಢಿಯಾಗಿತ್ತು. ಇದನ್ನು ಕಂಡ ಉತ್ತಮ ಜಾತಿಯವರು ಸಣ್ಣಮ್ಮನಿಗೆ ಪೇತ್ಯ ಎಂದು ಹೇಳಿದರು. ಬುದ್ಧಿವಂತರೆನಿಸಿಕೊಂಡ ಬ್ರಾಹ್ಮಣ ಹೆಂಗಸರು "ಹೀಗೂವುಂಟೆ ನಮಗೆ ನರಸಿಂಹಸ್ವಾಮಿ ದೇವಾಲಯ ಸಾಲದೆ? .... ಕೋಳಿ ಕುರಿ ತಿಂಬ ಮಾರಿಯಮ್ಮ ವಿಗ್ರಹ ಭೇದಕ ತುರುಕರ ದೇವರು ಎಲ್ಲಾ ಬೇಕೆ? ನಿಮಗೆ ಹುಚ್ಚು ಹತ್ತಿದೆ ಎಂದು ಹೇಳಿದರೆ ಸಣ್ಣಮ್ಮ ನನಗೆ ಎಲ್ಲ ದೇವರು ಬೇಕು. ದೇವರಲ್ಲಿ ಯಾರು ದೊಡ್ಡವರೂ ಚಿಕ್ಕವರೂ ಇಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು. ೨೬೭-೨೬೮) ಸಣ್ಣಮ್ಮನ ಮುಗ್ಧ ಭಕ್ತಿ ಎಷ್ಟು ಶುದ್ಧ ಭಕ್ತಿ ಎಂಬುದನ್ನು ಲೇಖಕರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ವಿಶಾಲ ಮನಸ್ಸಿಗೆ ವಿವೇಕ ಕಾರಣವಾದರೆ ಮುಗ್ಧತೆಯು ಕಾರಣವಾಗಬಲ್ಲದು ಎಂಬ ಸತ್ಯಾಂಶವನ್ನು ಈ ಪ್ರಸಂಗದ ಮೂಲಕ ಒಪ್ಪಿಕೊಳ್ಳಬಹುದು.

ಮಲ್ಲಿಗೆಹಳ್ಳಿಯಲ್ಲಿ ಗೋಸಾಮಿಯ ಪ್ರೇರಣೆಯಿಂದ ಶೇಟ್ ಒಂದು ಆಶ್ರಮವನ್ನು ನಿರ್ಮಿಸುತ್ತಾನೆ. ಸೀತಾಲಕ್ಷ್ಮಿ ಮತ್ತು ಗಂಡ ಸುಂದರರಾಜ ಸೇವಾ ಮನೋಧರ್ಮದಿಂದ ಗೋಸಾಮಿ ನಿರ್ಮಿಸಿದ ಆಶ್ರಮದಲ್ಲಿ ಎಲ್ಲಾ ಜಾತಿಯವರಿಗೂ ಸೇವೆಯನ್ನು ಮಾಡಲು ಮುಂದಾಗುತ್ತಾರೆ. ಆ ಆಶ್ರಮದಲ್ಲಿ ಎಲ್ಲಾ ಜಾತಿಯ ಅಬಲರು, ಅಸಹಾಯಕರು ಇದ್ದರು. ಸೇವಾಮನೋಧರ್ಮದ ವ್ಯಕ್ತಿಗಳ ಕೈಂಕರ್ಯವನ್ನು ಇಲ್ಲಿಯೂ ಕಾಣಬಹುದು. ಸುಂದರರಾಜ ಸೀತಾಲಕ್ಷ್ಮಿ ತಮ್ಮ ಆಯುಷ್ಯ ಉಳಿದಿದ್ದಕ್ಕೆ ಸಂತೋಷದಿಂದ ಕೊಡುವ ಕಾರಣ "ನಮ್ಮ ಉಳಿದ ಕಾಲವನ್ನು ದೀನರು, ದಲಿತರು, ಗೋವುಗಳು, ಅಂಗವಿಕಲರು, ಕುರುಡರು ಇವರ ಸೇವೆಗೆ ವಿನಿಯೋಗಿಸಬೇಕೆಂದು ಮಾಡಿದ್ದೇವೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೨೮೯) ಎನ್ನುತ್ತಾರೆ. ಜೊತೆಗೆ ಕಮಲಮ್ಮನು ಸೇವಾಶ್ರಮಕ್ಕೆ ತನ್ನ ಮಾವನಿಂದ ಬಂದಿದ್ದ ಆಸ್ತಿಯನ್ನು ಬಳುವಳಿಯಾಗಿ ಕೊಡುವುದರ ಮೂಲಕ ತನ್ನ ಸೇವಾ ಔದಾರ್ಯವನ್ನು ವ್ಯಕ್ತಪಡಿಸಿದ್ದಾಳೆ. ಇಂತಹ ಸೇವಾ ನಿಲುವಿನ ಸಂಘ ಸಂಸ್ಥೆಗಳು ಸಮಾಜದ ಒಳತಿಗೆ ನಿಯಮ ಬದ್ಧವಾಗಿರಬೇಕು ಎಂದು ಗಾಂಧೀಜಿ ಹೇಳಿದ ಮಾತು ಗೊರೂರವರಿಗೆ ಪ್ರೇರಣೆಯನ್ನು ತಂದುಕೊಟ್ಟಿದೆ.

ಗೊರೂರವರ ಬರವಣಿಗೆಯಲ್ಲಿ ಮೊಹರಂ ಹಬ್ಬದ ಉಲ್ಲೇಖ ಅನೇಕ ಕಡೆ ಕಂಡುಬರುತ್ತದೆ. 'ಮೆರವಣಿಗೆ' ಕೃತಿಯಲ್ಲಿ ಮೊಹರಂ ಹಬ್ಬದ ಆಚರಣೆ ಅರ್ಥಪೂರ್ಣವಾಗಿ ಬಂದಿದೆ. ಇಲ್ಲಿ ಮುಸಲ್ಮಾನರು ಬ್ರಾಹ್ಮಣರ ಬೀದಿಗೆ ಮೊಹರಂ ಮೆರವಣಿಗೆಯಲ್ಲಿ ಬರುತ್ತಾರೆ. ಆ ಊರಿನಲ್ಲಿ ಮೊಹರಂ

ಮೆರವಣಿಗೆ ಊರಿನ ನಾಲ್ಕು ಬೀದಿಗಳಲ್ಲಿ ಬರುತ್ತದೆ. ಎಲ್ಲ ಹಿಂದೂಗಳಿಂದ ಮೊಹರಂ ಚಂದಾ ವಸೂಲ್ಮಾಡುವುದು ಒಂದು ಸಾಮಾನ್ಯ ಚಟುವಟಿಕೆಯಾಗಿತ್ತು. ಮೊಹರಂ ಹಬ್ಬಕ್ಕೆ ಅಡಚಣೆಯಾಗಿದ್ದ ಬೀದಿಯನ್ನು ಬ್ರಾಹ್ಮಣರೇ ರಿಪೇರಿ ಮಾಡುವ ಘಟನೆಯನ್ನು ಇಲ್ಲಿ ಗುರುತಿಸಬಹುದು. ಬ್ರಾಹ್ಮಣರ ಉತ್ಸವವೂ ಸಹ ಮುಸಲ್ಮಾನರ ಬೀದಿಯಲ್ಲಿ ಹೋಗುವ ಸಂಪ್ರದಾಯ ಆ ಊರಿನಲ್ಲಿ ಇತ್ತು. ಮಲ್ಲಿಗೆಹಳ್ಳಿಯಲ್ಲಿ ಮೊಹರಂ ಹಬ್ಬ ಹಿಂದೂ ಮುಸ್ಲಿಂ ಸೌಹಾರ್ದಕ್ಕೆ ಕಾರಣವಾಗಿದೆ. ಮುಸಲ್ಮಾನರ ದೇವರಿಗೆ ಹಿಂದೂಗಳು ಮೊಹರಂ ಹಬ್ಬದ ಸಮಯದಲ್ಲಿ ಹರಕೆ ಮಾಡಿಕೊಳ್ಳುವುದನ್ನು ಗೊರೂರರವರು ಜ್ಞಾಪಿಸಿಕೊಟ್ಟಿರುವುದು ವಿಶೇಷವಾಗಿದೆ. ಇಲ್ಲಿಯೂ ಸಹ ಹಬ್ಬದ ಮೈತ್ರಿ ಹೃದಯ ವೈಶಾಲ್ಯಕ್ಕೆ ಹೇಗೆ ಕಾರಣವಾಗಿದೆ ಎಂಬುದನ್ನು ಮನಗಾಣಬಹುದು. ಒಂದು ಕಾಲಕ್ಕೆ ಹಿಂದೂ ದೇವರ ಉತ್ಸವವನ್ನು ಮುಸಲ್ಮಾನರು ಉದ್ಧಟತನದಿಂದ ಕಂಡಿದ್ದರೂ ಅವರ ಮನ ಪರಿವರ್ತನೆಯಾಗಿರುವುದನ್ನು ಲೇಖಕರು ಮೊಹರಂ ಹಬ್ಬದ ಘಟನೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಪ್ರಕೃತಿಯ ಪರಿಸರದಲ್ಲಿ ಎಲ್ಲರು ಒಂದೇ ಎಂಬ ಭಾವನೆ ವಿದಿತ ವಿಷಯ. ಇದನ್ನು ಒಪ್ಪಿಕೊಂಡು ಲೇಖಕರು ಹೇಮಾವತಿ ನದಿಯಲ್ಲಿ ಎಲ್ಲ ಜಾತಿಯವರು ಸಾಹಸ ಸ್ಪರ್ಧಾಮನೋಭಾವದಲ್ಲಿ ಈಜುವುದನ್ನು 'ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯಲ್ಲಿ ಅತ್ಯಂತ ರಸಾತ್ಮಕವಾಗಿ ವಿವರಿಸಿದ್ದಾರೆ. ಮಟ್ಟೆ ಕಲ್ಲನ್ನು ಮುಟ್ಟುವ ಸ್ಪರ್ಧೆಯಲ್ಲಿ ಬ್ರಾಹ್ಮಣರು ಮತ್ತು ಮಿಕ್ಕ ಜಾತಿಯವರು ತೋರಿಸುವ ಪೈಪೋಟಿ ನಿಜಕ್ಕೂ ಉತ್ಸಾಹದಾಯಕವಾಗಿರುತ್ತದೆ. ಈ ಪೈಪೋಟಿಯಲ್ಲಿ ಬ್ರಾಹ್ಮಣರು ತೋರಿಸುವ ಮೇಲುಗೈ ಮೆಚ್ಚುವಂತಹುದು. ಆರೋಗ್ಯಕರ ಸ್ಪರ್ಧೆ ಜಾತಿ ಸೌಹಾರ್ದತೆಗೆ ಭಾವ ವೈಶಾಲ್ಯಕ್ಕೆ ಕಾರಣ ವಾಗಬಲ್ಲದು ಎಂಬ ವಿಷಯ ಇಲ್ಲಿ ಸೂಚ್ಯವಾಗಿದೆ.

ದೇವಾಲಯಗಳು ಧರ್ಮ ಜಾಗೃತಿಗೆ ಕೇಂದ್ರ ಬಿಂದುಗಳಾದಂತೆ ಧರ್ಮ ಸಾಮರಸ್ಯಕ್ಕೆ ಕೇಂದ್ರ ಬಿಂದುಗಳಾಗಬೇಕು. ಈ ಆಲೋಚನೆಗೆ ಅನುಗುಣವಾಗಿ ಕನ್ಯಾಕುಮಾರಿ ದೇವಾಲಯದ ಪೂಜೆಯನ್ನು ಗೊರೂರರವರು 'ಶಿವರಾತ್ರಿ' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಕನ್ಯಾಕುಮಾರಿ ಧಾರ್ಮಿಕ ಕೇಂದ್ರ ಅಂತೆಯೇ ಪ್ರೇಕ್ಷಣೀಯ ಸ್ಥಳ. ಅಲ್ಲಿ ಎಲ್ಲಾ ಜಾತಿಯವರು ಧರ್ಮದವರು ಒಂದಾಗಿ ಕನ್ಯಾಕುಮಾರಿಯನ್ನು ಪೂಜಿಸುವುದು ವಿಶೇಷವಾಗಿದೆ.

ಯುಗಾದಿ ಹಬ್ಬ ಹಿಂದುಗಳಿಗೆಲ್ಲ ಅತ್ಯಂತ ಹೆಮ್ಮೆಯ ಉತ್ಸಾಹದ ಹಬ್ಬ. ಬೇವು ಬೆಲ್ಲ ತಿಂದು ಬದುಕನ್ನು ಸಹ್ಯ ಮಾಡಿಕೊಳ್ಳಬೇಕೆಂಬ ಸಂದೇಶವನ್ನು ಸಾರುವ ಹಬ್ಬ ಇದಾಗಿದೆ. ಈ ಹಬ್ಬದಲ್ಲಿ ಜಾತಿ ವೈಷಮ್ಯವನ್ನು ಮರೆತು ಜನ ಹಬ್ಬವನ್ನು ಆಚರಿಸುತ್ತಾರೆ. ಇಂತಹ ಒಂದು ಆದರ್ಶದ ಚಿತ್ರವನ್ನು ಲೇಖಕರು 'ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯಲ್ಲಿ ಕೊಟ್ಟಿದ್ದಾರೆ. ಪಟೇಲರು ಇವತ್ತಿನ ಉತ್ಸವಕ್ಕೆ ಹೊಲೆಯರ ಓಲಗ ತರಬೇಕೆಂದು ಸೂಚನೆ ಕೊಡುತ್ತಾರೆ. ರಾತ್ರಿ ಸಿಶ್ಯಬ್ದದ

ವಾತಾವರಣದಲ್ಲಿ ಹೊಲೆಯರ ಓಲಗದ ಧ್ವನಿಯನ್ನು ಕೇಳಿ ಊರಿನ ಜನ ಸಂಭ್ರಮದಿಂದ ಎಚ್ಚೆತ್ತು ಕೊಳ್ಳುತ್ತಾರೆ. ಉತ್ಸವದಲ್ಲಿ ಹುಡುಗರೆಲ್ಲಾ ತಾಳ ಲಯಬದ್ಧವಾಗಿ ಹೊಡೆಯುತ್ತಿದ್ದ ತಮಟೆಗೆ ಸರಿಯಾಗಿ ಸರಾಗವಾಗಿ ಕುಣಿಯುವುದಕ್ಕೆ ಪ್ರಾರಂಭಿಸಿದರು. ಒಳ್ಳೆ ವಿಜೃಂಭಣೆಯಿಂದ ಯುಗಾದಿ ಹಬ್ಬ ನಡೆಯಿತು. ದೇಹ ಬಲವು ಕಲೆಯೂ ಒಟ್ಟಾಗಿ ಸೇರುವುದು ಅಪರೂಪವೆಂದು ಹೇಳಿದರೂ ಹೊಲೆಯರು ಅಂದು ಊದಿದ ಓಲಗ ಎಲ್ಲರನ್ನು ಬೆರಗುಗೊಳಿಸುತ್ತದೆ. ಅವನು ಮೋರಿ ಊದುವುದಕ್ಕೆ ಹುಟ್ಟಿದ್ದಾನೆಯೋ ಎಂದು ತೋರುವುದು ಎಂದು ಊರಿನ ಜನರೆಲ್ಲಾ ಆಶ್ಚರ್ಯಪಡುತ್ತಾರೆ. ಅವನು ತಮಟೆ ಹೊಡೆಯುವ ಉತ್ಸಾಹ ಸಾಂಕ್ರಾಮಿಕವಾದದ್ದು ಎಂದು ಲೇಖಕರು ಹೇಳುವಲ್ಲಿ ಆಶ್ಚರ್ಯವೇನಿಲ್ಲ. ಉತ್ತಮ ಜಾತಿಯವರು ತೋರಿಸಿದ ಸೌಹಾರ್ದದ ಫಲವಾಗಿ ಹೊಲೆಯರಲ್ಲಿ ಈ ಉತ್ಸಾಹ ಮೈ ತುಂಬಿ ಬಂದಿದೆ ಎಂಬ ಸತ್ಯಾಂಶ ನಮಗೆ ಮನವರಿಕೆಯಾಗದಿರದು. ಪರಸ್ಪರ ಸ್ನೇಹ ಸೌಹಾರ್ದತೆ ವ್ಯಕ್ತಿಯಲ್ಲಿ ಶಕ್ತಿಯ ಚಿಲುಮೆಯನ್ನು ಹೆಚ್ಚು ಮಾಡಬಲ್ಲದು ಎಂಬುದಕ್ಕೆ ಯುಗಾದಿ ಹಬ್ಬದ ದಿನ ಹೊಲೆಯರು ಊದಿದ ಓಲಗ ಸ್ಪಷ್ಟ ಸಾಕ್ಷಿಯಾಗಿದೆ. ಪ್ರತ್ಯೇಕ ಪಂಗಡಗಳಲ್ಲಿ ಮಾಡಿಕೊಂಡ ಹಬ್ಬದ ಉತ್ಸಾಹಕ್ಕೂ ಸೌಹಾರ್ದ ಭಾವನೆಯ ಮೂಲಕ ಸಾಮೂಹಿಕವಾಗಿ ಮಾಡಿಕೊಂಡ ಉತ್ಸವದ ಸಂಭ್ರಮಕ್ಕೂ, ಸಂತೋಷಕ್ಕೂ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ಗೊರೂರರವರು ಇಲ್ಲಿ ಚೆನ್ನಾಗಿ ಮನಗಾಣಿಸಿದ್ದಾರೆ.

ಒಮ್ಮೆ ಗೊರೂರರವರು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಬ್ಬ ಸಾಹೇಬರು ಭಾರತವನ್ನು ಓದುತ್ತಿರುವುದನ್ನು ಕಾಣುತ್ತಾರೆ. ಆಗ ಕುತೂಹಲದಿಂದ ಅವರು ಭಾರತದ ಕತೆ ನಿಮಗೆ ಪೂರ್ತಿ ಒಪ್ಪಿತ ವಾಗಿದೆಯಾ ಎಂದು ಪ್ರಶ್ನಿಸುತ್ತಾರೆ. ನಿಮ್ಮ ಧರ್ಮ ನಂಬಿಕೆಗೆ ವಿರುದ್ಧವಾದದ್ದು ಅದರಲ್ಲಿ ಏನು ಇಲ್ಲವೆ ಎಂದಾಗ ಸಾಹೇಬರು "ಇದು ಧರ್ಮದ ಕತೆ. ಎಲ್ಲ ಧರ್ಮಗಳನ್ನು ವ್ಯಾಸಂಗ ಮಾಡಬೇಕು, ಎಲ್ಲ ಮತಗಳು ಇರಬೇಕು. ಇಲ್ಲದಿದ್ದರೆ ಜಗತ್ತು ರಸಹೀನವಾಗುತ್ತದೆ. ಉದ್ಯಾನವನದಲ್ಲಿ ನಾನಾ ಬಗೆಯ ಹೂಗಳಿರಬೇಕು. ಒಂದೇ ಬಗೆಯ ಹೂ ಎಲ್ಲೆಲ್ಲಿಯೂ ಇದ್ದರೆ ಸ್ವಾರಸ್ಯವಿಲ್ಲ. ಎಲ್ಲ ಮತಗಳಲ್ಲಿಯೂ ಉದಾತ್ತ ತತ್ವಗಳಿವೆ. ನಾನು ರಾಮಾಯಣ, ಭಾರತ, ಭಾಗವತ, ಭಗವದ್ಗೀತೆ, ಕುರಾನ್ ಎಲ್ಲವನ್ನು ಓದಿದ್ದೇನೆ. ಎಲ್ಲ ಹೇಳುವುದು ಒಂದೇ ಮಾತು. ಮನುಷ್ಯ ಒಳ್ಳೆಯವನಾಗಿರಬೇಕು ಎಂದು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು. ೪೦೭) ಗೊರೂರರವರು ಸಾಹೇಬನ ಈ ಪಾತ್ರದ ಮೂಲಕ ಆಡಿಸಿರುವ ಮಾತುಗಳು ಧರ್ಮ ಸಾಮರಸ್ಯಕ್ಕೆ ಜಾತಿ ಸೌಹಾರ್ದತೆಗೆ ಮೂಲ ಶಕ್ತಿಯಾಗಿದೆ. ಹೀಗೆ ಅರಿವಿನ ಮೂಲಕ ಮೂಡಿಬಂದ ಸಂದೇಶ ಗಟ್ಟಿ ಮಾತು ಎಂಬುದು ಸುವಿದಿತ. ಸಾಮಾನ್ಯ ವ್ಯಕ್ತಿಯ ಮನಸ್ಸಿನಲ್ಲಿಯೂ ವೈಚಾರಿಕತೆ, ವಿಕಾಸತತ್ವ ಹೇಗೆ ಗೋಚರವಾಗಬಲ್ಲದು ಎಂಬುದಕ್ಕೆ ಗೊರೂರರವರು ಕೊಡುವ ಈ ಘಟನೆ ಉತ್ತಮ ಉದಾಹರಣೆಯಾಗಿದೆ. ಲೇಖಕರಲ್ಲಿ ಕುತೂಹಲ ಮನಸ್ಸು ಇದ್ದ ಕಾರಣ ದಿಂದ ಸಾಹೇಬರನ್ನು ಮಾತಾಡಿಸಿ ಸುಂದರ ಮಾತುಗಳನ್ನು ತಿಳಿದುಕೊಳ್ಳಲು ಕಾರಣವಾಯಿತು. ಹೀಗೆ ಲೇಖಕರ ಸಾಹಿತ್ಯ ಲೋಕಾನುಭವದಿಂದ ರೂಪಗೊಂಡ, ಸ್ವಾನುಭವದಿಂದ ಗಟ್ಟಿಯಾದ ಉತ್ತಮ ಸಾಹಿತ್ಯ.

ಸದ್ಗುಣ, ಸದ್ಭಾವನೆ, ಸದ್ವರ್ತನೆಗಳಿಗೆ ಎಂದಿಗೂ ಜಾತಿ ಕಾರಣ ಆಗುವುದಿಲ್ಲ. ಹುಟ್ಟಿನಿಂದ ಉತ್ತಮ ಜಾತಿಯವರು, ಕೀಳು ಜಾತಿಯವರು ಎಂದು ನಾವು ಭೇದಭಾವ ಮಾಡಿಕೊಂಡಿದ್ದೇವೆ. ಆದರೆ ಸಮಾಜದೊಂದಿಗೆ ವ್ಯವಹಾರ ಮಾಡಿದಾಗ ಉತ್ತಮ ಜಾತಿಯವರಲ್ಲಿ ಹೀನತನವನ್ನು ಕೀಳು ಜಾತಿಯವರಲ್ಲಿ ಉತ್ತಮ ಅಂಶವನ್ನು ಗುರುತಿಸಬಹುದು. ಇದಕ್ಕೆ ಸಂಬಂಧಿಸಿದ ಹಾಗೆ 'ಹೇಮಾವತಿ' ಕಾದಂಬರಿಯಲ್ಲಿ ಒಂದು ಘಟನೆ ಬರುತ್ತದೆ. ಆನಂದ ಚೆನ್ನಿ ಇಬ್ಬರೂ ಊರಿಂದ ಮರೆಯಾದಾಗ "ಹೊಲೆಯರ ಹುಡುಗಿಯನ್ನು ಕೂಡಿಕೊಂಡು ಬ್ರಾಹ್ಮಣ ಓಡಿಬಿಟ್ಟ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೭೫) ಎಂದು ರಾಮಣ್ಣ ಪೆರುಮಾಳರಿಗೆ ವಿರೋಧವಾಗಿ ಚಳುವಳಿ ಮಾಡಿದವರಲ್ಲಿ ಸಾಹುಕಾರ ಶಠಾರಿ ಮೊದಲನೆಯವನು. ಆದರೆ ರಾಮಣ್ಣ ಪೆರುಮಾಳರು ಮಾತ್ರ ಹೊಲೆಯರ ವಿಷಯದಲ್ಲಿ ಔದಾರ್ಯವನ್ನು ತೋರಿಸಿದಾಗ, ಸಾಹುಕಾರರು ಅವರ ಮನೆಯ ಹೆಂಗಸರು - ಪೆರುಮಾಳರ ಮನೆಯಲ್ಲಿ ಕಟ್ಟೆ ಇಲ್ಲ. ಹೊಲೆಯರು ಸ್ನಾನದ ಮನೆಗೂ ಹೋಗುತ್ತಾರೆ, ಅಡುಗೆ ಮನೆಗೂ ಹೋಗುತ್ತಾರೆ ಎಂದು ಹಾಸ್ಯ ಮಾಡುತ್ತಾರೆ. ಇದನ್ನು ಕೇಳಿದ ರಾಮಣ್ಣ ಪೆರುಮಾಳರು ನಮ್ಮ ಅಡಿಗೆ ಮನೆಗೇನು ಹೊಲೆಯರು ಬರುತ್ತಿಲ್ಲ ಆದರೆ ಅವರು ಇವರಷ್ಟು ನೀಚರಲ್ಲ ಎಂದು ಪ್ರತಿ ನುಡಿಯುತ್ತಾರೆ. ಅತಿ ವ್ಯಂಗ್ಯವಾಗಿ ಹೀನವಾಗಿ ಮಾತನಾಡುವುದಕ್ಕಿಂತ ನೀಚತನ ಬೇರೆಯಿಲ್ಲ ಎಂಬುದನ್ನು ಲೇಖಕರು ಗಮನಿಸಿ ಇಂತಹ ನೀಚಗುಣ ಶಠಾರಿಯಂತವರಲ್ಲಿಯೇ ಕಂಡುಬರುತ್ತದೆಯೇ ಹೊರತು ಕೀಳುಜಾತಿಯವರಲ್ಲಿ ಅಲ್ಲ ಎಂಬುದನ್ನು ಅವರು ಕೀಳು ಜಾತಿಯವರ ಪರವಾಗಿ ಅಭಿಮಾನದಿಂದ ನುಡಿಯುತ್ತಾರೆ.

ಗೊರೂರವರು ನಿಶ್ಚಲ ಮನಸ್ಸಿನ ನಿಷ್ಪಕ್ಷಪಾತ ದೃಷ್ಟಿಯ ಪ್ರಾಮಾಣಿಕ ಸಾಹಿತಿ. ಅವರ ಕೃತಿಗಳಲ್ಲಿ ಕಂಡು ಬರುವ ವ್ಯಕ್ತಿ ಚಿತ್ರವಾಗಲಿ, ಘಟನೆಗಳ ನಿರೂಪಣೆಯಾಗಲಿ, ವೈಚಾರಿಕ ವಿಷಯಗಳಾಗಲಿ ನಿರ್ಮಲ ಮನಸ್ಸಿನ ತಾತ್ವಿಕತೆಯ ಪ್ರತೀಕಗಳಾಗಿವೆ. ಕವಿ ಕಂಡದ್ದನ್ನು ಕಂಡಂತೆ ನಿರೂಪಿಸುವಾಗ ಇದು ಯಥಾವತ್ತಾದ ಚಿತ್ರ ಎಂದು ಹೇಳುವುದು ವಾಡಿಕೆಯ ಮಾತಾಗಿದೆ. ನೈಜ ಚಿತ್ರಕ್ಕೆ ಕಲ್ಪನೆಯ ಬೆರಗನ್ನು ತೊಡಗಿಸುವುದು ಕಾಲ್ಪನಿಕ ಕಲೆಯಾದರೂ ಗೊರೂರರವರು ಮಾತ್ರ ತಮ್ಮ ಕೃತಿಗಳಲ್ಲಿ ಇಂತಹ ಬೆಡಗಿಗೆ ಮಾರು ಹೋಗರುವುದನ್ನು ಗುರುತಿಸಬಹುದು. ಗೊರೂರವರ ಬದುಕಿನ ನಿಷ್ಠಾವಂತ ಗುಣ ಅವರ ಸಾಹಿತ್ಯ ಕೃತಿಗಳಲ್ಲಿಯೂ ಸತ್ವಗುಣವಾಗಿ ವಿಶೇಷಗುಣವಾಗಿ ಮೂಡಿ ಬಂದಿದೆ. ಆದರೆ ಅನೇಕ ವಿಮರ್ಶಕರ ದೃಷ್ಟಿ ಗೊರೂರವರ ಸಾಹಿತ್ಯದ ಪ್ರಾಮಾಣಿಕತೆಯ ಮೌಲ್ಯದ ಕಡೆಗೆ ಗಮನ ಕೊಡದೆ ಇರುವುದು ಆಶ್ಚರ್ಯದ ಸಂಗತಿಯಾಗಿದೆ. ಈ ಅಭಿಪ್ರಾಯಕ್ಕೆ ಸಮರ್ಥನೆಯಾಗಿ ಪುಷ್ಟಿಯ ಮಾತಾಗಿ 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯನ್ನು ಪರಿಶೀಲಿಸಬಹುದು. ಈ ಪ್ರಬಂಧ ಸಂಕಲನದಲ್ಲಿ 'ಬೆಸ್ತರ ಕರಿಯ' ಪ್ರಬಂಧ ಮೇಲೆ ಹೇಳಿದ ಗೊರೂರವರ ಸಾಹಿತ್ಯ ಮೌಲ್ಯಗಳಿಗೆ ಹಿಡಿದ ಕನ್ನಡಿಯಾಗಿದೆ. ಸಾಹಿತ್ಯ ಕೃತಿ ಕಲ್ಪನೆಯ ಗಂಟಾಗದೆ ಕವಿಯ ಪ್ರಾಮಾಣಿಕತೆಯ ಭಾವನೆಗಳ ಕೋಶವಾದರೆ ಹೆಚ್ಚು ಸಮಂಜಸ ಎನಿಸುತ್ತದೆ.

ಬೆಸ್ತರ ಕರಿಯನ ಪಾತ್ರ ಗೊರೂರರವರು ಚಿತ್ರಿಸಿರುವ ಅಪೂರ್ವ ಪಾತ್ರಗಳಲ್ಲಿ ಒಂದಾಗಿದೆ. ರಾಷ್ಟ್ರಕವಿ ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕೃತಿಯಲ್ಲಿ ಕಂಡುಬರುವ ಹೂವಯ್ಯನ ಪಾತ್ರ, ಕಾರಂತರ 'ಚೋಮನ ದುಡಿ'ಯಲ್ಲಿ ಕಂಡುಬರುವ ಚೋಮನ ಪಾತ್ರ, ಎಸ್.ಎಲ್. ಭೈರಪ್ಪವನರ 'ವಂಶವೃಕ್ಷ' ಕಾದಂಬರಿಯಲ್ಲಿ ಕಂಡುಬರುವ ಶ್ರೀನಿವಾಸ ಶ್ರೋತ್ರಿ ಅವರ ಪಾತ್ರ ಹೇಗೆ ಅವಿಸ್ಮರಣೀಯ ಪಾತ್ರಗಳಾಗಿಯೋ ಈ ಸಾಲುಗಳಿಗೆ ಸಲ್ಲುವ ಬೆಸ್ತರ ಕರಿಯನ ಪಾತ್ರವು ಒಂದೆನ್ನಬಹುದು. ಸಾಹಿತಿಯ ಕೃತಿಗೆ ನೈಜತೆಯ ಮೌಲ್ಯ, ಹಿರಿಮೆಯ ಮೌಲ್ಯ ಇಂತಹ ಪಾತ್ರ ಚಿತ್ರಣಗಳ ಮೂಲಕ ಮಾತ್ರ ಪ್ರಾಪ್ತವಾಗುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಗೊರೂರರವರು ಕರಿಯನ ವ್ಯಕ್ತಿತ್ವದಲ್ಲಿ ಕಂಡ ಗುಣವನ್ನು ಕಂಡಂತೆ ಕಂಡಷ್ಟೆ ಚಿತ್ರಿಸಿದ್ದಾರೆಯೇ ಹೊರತು ಕಲ್ಪನೆಯನ್ನು ಕಣ ಮಾತ್ರವು ಆ ಪಾತ್ರಕ್ಕೆ ಸೇರಿಸಿಲ್ಲ. ವೃತ್ತಿ ದೃಷ್ಟಿಯಿಂದ, ಜಾತಿ ದೃಷ್ಟಿಯಿಂದ ಕರಿಯ ಗೊರೂರರವರಿಗೆ ಪ್ರಧಾನವಾಗಿ ಕಂಡುಬಂದಿಲ್ಲ. ವ್ಯಕ್ತಿತ್ವದ ದೃಷ್ಟಿಯಿಂದ ಕರಿಯ ಲೇಖಕರ ಪಾಲಿಗೆ ಆತ್ಮೀಯನಾಗಿದ್ದಾನೆ, ಮಾನ್ಯನಾಗಿದ್ದಾನೆ.

ಬೆಸ್ತರ ಕರಿಯನ ವ್ಯಕ್ತಿತ್ವವನ್ನು ಕಂಡಾಗ ಲೇಖಕರು ಈತ ನಿಜವಾಗಿಯೂ ಯೋಗಿಯೇ ಎಂದು ತಮ್ಮನ್ನು ತಾವೇ ಪ್ರಶ್ನೆ ಹಾಕಿಕೊಳ್ಳುತ್ತಾರೆ. ಈ ಪ್ರಶ್ನೆಯನ್ನು ಗೊರೂರರವರು ಪುನಃ ಪುನಃ ಪರಾಮರ್ಶನ ಮಾಡಿ ಅಂತ್ಯದಲ್ಲಿ ಅವನು ಯೋಗಿಯೇ ಎಂಬ ಸಿದ್ಧಾಂತಕ್ಕೆ ಬರುತ್ತಾರೆ. ಕರಿಯ ಎಂಬ ಹೆಸರು ಅವನಿಗೆ ಅನ್ವರ್ಥ ನಾಮ ಆಗಿದ್ದರು ಅವನ ಬದುಕಿನ ರೀತಿ ಶುಭ್ರ ಸ್ವಚ್ಛ ಬಿಳುಪಿನ ರೀತಿಯಾಗಿತ್ತು. ಕರಿಯನ ಕಪ್ಪನ್ನು ಮೇಲ್ಮೆಯ ಭಾವದಲ್ಲಿ ಗೊರೂರರವರು ಸಮರ್ಥಿಸಿ ನುಡಿಯುತ್ತಾರೆ. ಕಪ್ಪಿಗೆ ದೈವೀಗುಣದ ಹೊಂದಾಣಿಕೆಯನ್ನು ಕೊಟ್ಟು ಲೇಖಕರು ಬೆಸ್ತರ ಕರಿಯನನ್ನು ವಿಚಾರ ಮಾಡಿ ಅವನಲ್ಲಿರುವ ದೈವೀ ಗುಣದ ಕಡೆಗೆ ಗೊರೂರರವರು ನಮ್ಮ ಕಣ್ಣನ್ನು ತೆರೆಸುತ್ತಾರೆ. ಈ ಎಲ್ಲ ವೈಚಾರಿಕತೆಯ ಹಿನ್ನೆಲೆಯಲ್ಲಿ ಗೊರೂರರವರು ಕರಿಯನಲ್ಲಿ ದೈವೀಗುಣಗಳನ್ನು ದರ್ಶಿಸಿದ್ದಾರೆ. ವ್ಯಕ್ತಿಯಲ್ಲಿ ಹೊರಗಣ್ಣಿಗೆ ಕಾಣುವ ಬಣ್ಣಕ್ಕಿಂತ ಹೆಚ್ಚಾಗಿ ವ್ಯಕ್ತಿಯ ಆಂತರಿಕ ಗುಣವನ್ನು ಪರಾಮರ್ಶನ ಮಾಡಬೇಕು ಎಂಬ ಸೂಚನೆಯನ್ನು ಅವರು 'ಬೆಸ್ತರ ಕರಿಯ' ಪ್ರಬಂಧದಲ್ಲಿ ಸೂಚಿಸಿದ್ದಾರೆ. 'ಹೇಮಾವತಿ' ಕಾದಂಬರಿಯಲ್ಲಿ ಕಂಡುಬರುವ ರಾಮಣ್ಣ ಪೆರುಮಾಳರ ಹಿರಿತನ ಕರಿಯನ ಪಾತ್ರದಲ್ಲಿಯೂ ನಮಗೆ ಕಂಡುಬರುತ್ತದೆ. "ಕರಿಯ ಸಮಸ್ತ ರೋಗಗಳನ್ನು ಜೀರ್ಣಿಸಿಕೊಂಡು ಬಿಡುತ್ತಾನೆ. ಪ್ಲೇಗು, ಕಾಲರ, ಇನ್‌ಫ್ಲ್ಯೂಯೆಂಜ, ಪಕ್ಕೆ ರೋಗ, ಕಜ್ಜಿ, ತುರಿ ಯಾವ ಯಾವುದು ನಮ್ಮ ಊರಿನಲ್ಲಿ ತಾಂಡವವಾಡುತ್ತಿವೆಯೋ ಅವೊಂದೂ ಕರಿಯನ ಹತ್ತಿರ ಸುಳಿಯುವುದಿಲ್ಲ. ಬ್ರಾಹ್ಮಣರು ಕಾಲರ ಪ್ಲೇಗಿನ ಭಯದಿಂದ ಸಹಸ್ರ ನಾಮಾರ್ಚನೆ ಪೊಂಗಲು ಕೈಂಕರ್ಯಾದಿ ಭಗವತ್ ಸೇವೆಯಲ್ಲಿ ತೊಡಗಿರುವಾಗ ಒಕ್ಕಲಿಗರು ಕನ್ನಂಬಾಡಿ ಅಮ್ಮ, ಕತ್ತರಿ ಗಟ್ಟದ ಅಮ್ಮಗಳಿಗೆ ತಳಿಗೆ ಪನಿವಾರಗಳನ್ನು ಹೊರುತ್ತಿರುವಾಗ ಕರಿಯ ತನ್ನ ಪಾಡಿಗೆ ತಾನು ಮೀನು ಹಿಡಿಯುವುದರಲ್ಲಿಯೇ ನಿರತನಾಗಿರುತ್ತಾನೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೮;ಪು.೭೭) ಗೊರೂರರವರ ಈ ಮಾತುಗಳಲ್ಲಿ ಕರಿಯನ ಸಾತ್ವಿಕ ದಿಟ್ಟತನ ಅನಾವರಣಗೊಂಡಿದೆ. ಕರಿಯನ

ಅಭಿಪ್ರಾಯದಲ್ಲಿ ಮೀನು ಮಾಂಸಕ್ಕೆ ಸೇರಿದುದೇ ಅಲ್ಲ. ಅದು ಯಾರು ಬೇಕಾದರು ಉಪಯೋಗಿಸಬಹುದಾದ ನೀರ್ತರಕಾರಿ. ಕರಿಯನ ಈ ಅಭಿಪ್ರಾಯವೇ ಸಮಾಜದ ಬಹು ಜನರ ಅಭಿಪ್ರಾಯವಾಗಿತ್ತು ಎಂಬುದನ್ನು ಗೊರೂರವರು ನೆನಪು ಮಾಡಿಕೊಡುತ್ತಾರೆ.

ಬೆಸ್ತರ ಕರಿಯ ಕರ್ಮ ಕುಶಲಿ. ಬಲೆ ಮಾಡುವುದರಲ್ಲಿ ಅವನ ಕೆಲಸ ಯೋಗಿ ತನ್ನ ತಪಸ್ಸಿನಲ್ಲಿ ನಿರತವಾಗಿರುವಂತೆ ನಡೆಯುತ್ತಿತ್ತು. "ಕರಿಯನ ಮೈಯಂತೆ, ಅವನ ಸ್ವಭಾವದಂತೆ ಅವನ ಪದಾರ್ಥವೂ ಕಸಬೂ ಶುದ್ಧ. ಅವನು ವಾರ ವಾರವೂ ಸಂತೆಯಲ್ಲಿ ಸಿದ್ಧಮಾಡಿಟ್ಟ ಮೀನನ್ನು ನೋಡಿದವರಿಗೆ, ತಾವು 'ಮೀನಾಹಾರಿ'ಗಳಲ್ಲದಿದ್ದರೂ ಕರಿಯನ ಮೇಲೆ ಕೋಪವುಂಟಾಗುತ್ತಿರಲಿಲ್ಲ. ಅವನ ಕಸಬಿನ ಮೇಲೆಯೂ ತಿರಸ್ಕಾರವುಂಟಾಗುತ್ತಿರಲ್ಲಿಲ್ಲ". (ಅದೇ; ಪು.೮೨) ಈ ಮಾತುಗಳಲ್ಲಿ ಗೊರೂರವರು ಕರಿಯನ ಗುಣವನ್ನು ವರ್ತನೆಯನ್ನು ಮೆಚ್ಚಿಕೊಂಡಿದ್ದಾರೆ. ಇಲ್ಲಿಯು ಸಹ ಗೊರೂರವರು ವ್ಯಕ್ತಿಯಲ್ಲಿ ಕೇವಲ ಗುಣಗ್ರಾಹಿ ಎಂಬ ಅಂಶ ಸ್ಫುಟವಾಗುತ್ತದೆ. ಕರಿಯನ ಬಾಳು ತಾವರೆಯ ಎಲೆಯ ಮೇಲಿನ ನೀರು ಎನ್ನುತ್ತಾರಲ್ಲ ಹಾಗೆ. ಅವನು ಜಗತ್ತಿನಲ್ಲಿದ್ದರು ಜಗತ್ತಿಗೆ ಸೇರದವನಂತೆ ಇರುತ್ತಾನೆ. ಅವನ ಅನಾಸಕ್ತಿ ಅದ್ಭುತ. ಅವನ ಮದುವೆಗಳ ಸಂಬಂಧದಲ್ಲಿ ಅವನು ವ್ಯಕ್ತಪಡಿಸಿದ ಅನಾಸಕ್ತಿ ಎಂತಹ ಯೋಗಿಗಳಲ್ಲಿಯೂ ಕಾಣದ ಶಕ್ತಿ. ವ್ಯಕ್ತಿಯ ಜೀವನದ ಬಗ್ಗೆ ಗೊರೂರವರಿಗೆ ಇಂತ ಅಂತರ್‌ದೃಷ್ಟಿ ಇಲ್ಲಿ ಸ್ಪುಟವಾಗಿದೆ. "ಕರಿಯನ ಪಾಲಿಗೆ ಅವನ ಕಸುಬೇ ಅವನ ದೇವರು. ದೊರೆಯಲಾರದ ಸುಖವನ್ನು ಅವನು ಹುಡುಕಿಕೊಂಡು ಹೋಗುವವನೂ ಅಲ್ಲ. ತನ್ನನ್ನು ಹುಡುಕಿ ಕೊಂಡು ಬಂದ ದುಃಖದಿಂದ ತಪ್ಪಿಸಿಕೊಂಡು ಓಡಿ ಹೋಗುವವನು ಅಲ್ಲ. ಕರಿಯ ಲೋಕದ ಒಡೆತ ಒದೆತಗಳನ್ನು ಸಹಿಸಿಕೊಂಡು ಅದಕ್ಕಾಗಿ ಯಾರ ಮೇಲೆಯೂ ಅಸಮಾಧಾನ ಅಸೂಯೆಪಡದೆ ಶಾಂತವಾಗಿ ಇರುತ್ತಾನೆ". (ಅದೇ; ಪು. ೮೪) ಲೇಖಕರ ಈ ಮಾತುಗಳು ಕರಿಯನ ಪಾತ್ರವನ್ನು ಸ್ಥಿತಪ್ರಜ್ಞತೆಯ ಮಟ್ಟಕ್ಕೆ ಏರಿಸಿದೆ. ಉತ್ಸಾಹದಲ್ಲಿ ಉತ್ತಮ ಸ್ಥಿತಿಯಲ್ಲಿ ಉತ್ತಮ ಜಾತಿಯಲ್ಲಿ ಬದುಕುವ ವ್ಯಕ್ತಿಯ ಬದುಕಿನ ರೀತಿ ಮೇಲಾಗಿ ಇರುವುದು ವಿಶೇಷವೆನಿಸುವುದಿಲ್ಲ. ಆದರೆ ಕರಿಯನಂತವನ ಬದುಕು ವಿಶೇಷ ಅಷ್ಟೇ ಅಲ್ಲ, ಅವಿಸ್ಮರಣೀಯ, ಅನುಸರಣೀಯ ಎಂಬ ಭಾವನೆ ಸಹೃದಯರಿಗೆ ಬರುವಂತೆ ಗೊರೂರವರು ಚಿತ್ರಿಸಿರುವುದು ಸಾಹಿತಿಯಾಗಿ ಗೊರೂರವರ ಮೇಲ್ಮೆಗೆ ಉತ್ತಮ ಸಾಕ್ಷಿಯಾಗಿದೆ. ಜಾತಿ ಮತ ವೃತ್ತಿ ಯಾವುದೇ ಆಗಿದ್ದರು ಸಾಧಾರಣ ವ್ಯಕ್ತಿಯಲ್ಲಿ ಕೂಡ ಹಿರಿತನವನ್ನು ಕಾಣಬಹುದು ಎಂಬುದನ್ನು ಲೇಖಕರು ಕರಿಯನ ಪಾತ್ರ ಚಿತ್ರಣದ ಮೂಲಕ ಖಚಿತಪಡಿಸಿದ್ದಾರೆ. ಇದೇ ರೀತಿಯ ಗುಣಗ್ರಹಣ ಕೌಶಲ್ಯವನ್ನು ಅವರ ಮಿಕ್ಕ ಕೃತಿಗಳಲ್ಲಿಯೂ ಪಾತ್ರಗಳಲ್ಲಿ ಗುರುತಿಸಬಹುದು.

ಬೆಸ್ತರ ಕರಿಯ ಪಾತ್ರಕ್ಕೆ ಸರಿಸಾಟಿಯಾಗಿ ಗೊರೂರವರು ಚಿತ್ರಿಸಿರುವ ಶಾಲುಸಾಬಿಯ ಪಾತ್ರವು ಆದರಣೀಯವಾಗಿದೆ. ಶಾಲುಸಾಬಿ ಗೊರೂರಿನ ಜನತೆಗೆ ಆತ್ಮೀಯ ವ್ಯಕ್ತಿ. ಆತನಿಗೆ ಮುಸಲ್ಮಾನ

ಜಾತಿಯವನು ಎಂಬ ಕೇವಲ ಅಭಿಮಾನವು ಇಲ್ಲ. ಊರಿನ ಎಲ್ಲರೊಂದಿಗೆ ಹೊಂದಿಕೊಂಡು ಬಾಳುವ ಸಾಮರಸ್ಯ ಗುಣ ಅವನ ಜೀವನದಲ್ಲಿ ಕಂಡುಬರುತ್ತದೆ. ಗೊರೂರಿನಲ್ಲಿ ಯಕ್ಷಗಾನ ಸಭೆಯವರು ಹರಿಶ್ಚಂದ್ರನ ಕತೆಯನ್ನು ಆಡಿಸುವುದಕ್ಕೆ ಮುಂದಾಗುತ್ತಾರೆ. ಆಗ ಶಾಲುಸಾಬಿಯೇ ಕತೆ ಆಡಿಸುವುದಕ್ಕೆ ಮುಖಂಡನಾಗುತ್ತಾರೆ. ಸಾಬನಿಗೂ ಭಾಗವತರ ಆಟಕ್ಕೂ ಏನು ಸಂಬಂಧ ಎಂದು ಪ್ರಶ್ನೆ ಮಾಡಬೇಡಿರೆಂದು ಗೊರೂರವರು ಎಚ್ಚರಿಸುತ್ತಾರೆ. ಅದಕ್ಕೆ ಲೇಖಕರು ಕೊಡುವ ಉತ್ತರ ನಮ್ಮ ಊರಿನ ಸಾಬಿಯು ಊರಿನ ಎಲ್ಲಾ ಕೆಲಸಗಳಿಗೂ ಮುಖಂಡ ಎನ್ನುತ್ತಾರೆ. ರಥೋತ್ಸವದ ಕಾಲದಲ್ಲಿಯೂ ಇತರ ಉತ್ಸವದ ಕಾಲದಲ್ಲಿಯೂ ಶಾಲುಸಾಬಿಯು ಬೆಳಗಿನಿಂದ ಸಾಯಂಕಾಲದವರೆವಿಗೂ ದೇವಸ್ಥಾನದ ಬಳಿಯೇ ಓಡಾಡುತ್ತಾ ಇರುತ್ತಾನೆ. ದೇವರ ಉತ್ಸವಕ್ಕೆ ಬೇಕಾದ ವಾಹನ ಮುಂತಾದವುಗಳನ್ನು ಕಟ್ಟಿಸುವುದರಲ್ಲಿಯೂ ಹಾಗೂ ರಥವನ್ನು ಕಟ್ಟಿ ವಿಧವಿಧವಾದ ರೀತಿಯಿಂದ ಅಲಂಕರಿಸುವುದರಲ್ಲಿ ಶಾಲುಸಾಬಿ ಮುಖ್ಯ ಪಾತ್ರ ವನ್ನು ವಹಿಸುತ್ತಾನೆ. "ಇದು ವಿಗ್ರಹಾರಾಧನೆ, ತಾನು ಮುಸಲ್ಮಾನ, ವಿಗ್ರಹಗಳನ್ನು ಕಂಡರೆ ಆಗದು" ಎಂಬ ಭಾವನೆ ಅವನಿಗೆ ಹೊಳೆದಿಲ್ಲ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೩೭) ಪ್ರತಿ ಉತ್ಸವದ ಮುಂದೆಯೂ ಕೆಂಪು ಶಾಲನ್ನು ಹೊದೆದುಕೊಂಡು ಕೈಯಲ್ಲಿ ಬೆತ್ತವನ್ನು ಹಿಡಿದುಕೊಂಡು, ಸಾಬಿಯು ತಿರುಗುತ್ತಿರುತ್ತಾನೆ. ಅವನ ಮಾತನ್ನು ಮೀರಲು ಯಾರಿಗೂ ಧೈರ್ಯವಿಲ್ಲ. ಗೊರೂರಿನ ಪಟೇಲರು ಎಷ್ಟು ಸಲ ಹೋಗಿ ಕರೆದರೂ ಬಾರದ ಅಡ್ಡೇಕಾರ ಗೌಡಗಳು ದೂರದಲ್ಲಿ ಸಾಬಿಯ ಶಾಲನ್ನು ಕಂಡ ಕೂಡಲೇ ಹೊರಟು ಬರುತ್ತಾರೆ. ಈ ಮಾತುಗಳಲ್ಲಿ ಲೇಖಕರು ಶಾಲುಸಾಬಿಯ ಅದ್ಭುತ ಸೌಜನ್ಯ ಸ್ವಭಾವವನ್ನು ಅನಾವರಣಗೊಳಿಸಿದ್ದಾರೆ.

ಗೊರೂರಿನ 'ಮೇಷ್ಟ್ರಿ ಕುಬ್ಜನ' ನಿಜವಾದ ಹೆಸರು ಕಾಸೆಗಿಡ್ಡ. ಬೈಲಹಳ್ಳಿಯಲ್ಲಿ ಎಲ್ಲರೂ ದಟ್ಟಿ ಉಡುವುದು ಪದ್ಧತಿ. ಆದರೆ ಗಿಡ್ಡನು ಕಾಸೆಹಾಕಿ ಪಂಚೆ ಉಡಲು ಪ್ರಾರಂಭಿಸಿದನು. ರೈತ ಹಳ್ಳಿಯಲ್ಲಿ ಕಾಸೆ ಹಾಕಿ ಪಂಚೆ ಉಡುವುದು ಬಹಳ ಅಪರೂಪದ ವಿಚಾರವಾದ್ದರಿಂದ ಜನರು ಗಿಡ್ಡನನ್ನು ಕಾಸೆಗಿಡ್ಡ ನೆಂದು ಕರೆಯಲು ಪ್ರಾರಂಭಿಸಿದರು. ಆದರೆ ಗಿಡ್ಡನಿಗೆ 'ಕಾಸೆಗಿಡ್ಡ' ಎಂದು ಕರೆದರೆ ಕೋಪ ಬರುತ್ತಿತ್ತು. ಆಗ ಅವನು "ಅಯ್ನೋಳು ಮಾತ್ರ ಕಾಸೆ ಹಾಕ್ಬಯ್ದು ನಾ ಹಾಕೋ ಕಾಗ್ದೊ" ಎಂದು ಪ್ರಶ್ನೆ ಮಾಡುತ್ತಿದ್ದ. (ಗೊರೂರು ರಾಮಸ್ವಾಮಿ ಅಯ್ಯಂಗರ್; ೨೦೦೪; ಪು.೩೮) ಇದು ಯಜಮಾನ ಸಂಸ್ಕೃತಿಯ ವಿರುದ್ಧ ಕಾಸೆಗಿಡ್ಡನ ವಿರೋಧವಾಗಿದೆ.

ಸಮಾಜದಲ್ಲಿ ಸ್ಥಿತಿವಂತರನ್ನು ಮಧ್ಯಮ ವರ್ಗದವರು ಕೆಳಗಿನ ವರ್ಗದವರು ಭಾವಿಸುವುದು ಒಂದು ರೀತಿಯದಾಗಿರುತ್ತದೆ. ಅನೇಕ ವೇಳೆ ಸ್ಥಿತಿವಂತರನ್ನು ಉಪಯೋಗದ ಹಿನ್ನೆಲೆಯಲ್ಲಿ ಪರಿಭಾವಿಸು ವುದಷ್ಟೆ ಇಂತಹ ವ್ಯಕ್ತಿಗಳ ರೀತಿಯಾಗಿರುತ್ತದೆ. ಸಾಲ ಕೊಡುವ ಶ್ರೀಮಂತ ವರ್ಗದವರು ಸಾಲಕ್ಕಾಗಿ ಮಾನ್ಯರಾಗಿರುತ್ತಾರೆ. 'ಹೇಮಾವತಿ' ಕಾದಂಬರಿಯಲ್ಲಿ ಕಾಳ ಹಾಗೂ ರಾಮಣ್ಣ ಪೆರುಮಾಳರಿಗೂ ಇದ್ದ

ಸಂಬಂಧವನ್ನು ಕೇವಲ ಸಾಲದ ದೃಷ್ಟಿಯಲ್ಲಿ ಮಾತ್ರ ನೋಡುವುದಿಲ್ಲ. ಮನುಷ್ಯ ಬೇರೆ ಸಾಲ ಬೇರೆ ಎಂಬ ಅರಿವು ಕಾಳನಿಗೆ ಇತ್ತು. ರಾಮಣ್ಣ ಪೆರುಮಾಳರು ಸಾಲಗಾರರಾಗಿ ಬೇರೆಯವರ ಕಣ್ಣಿನಲ್ಲಿ ಕೀಳಾದ ಮನುಷ್ಯರಾಗುತ್ತಾರೆ. ರಾಮಣ್ಣ ಪೆರುಮಾಳರಿಗೆ ವ್ಯಕ್ತಿತ್ವವೇ ಇನ್ನು ಇಲ್ಲ ಎಂದು ಮಿಕ್ಕವರೆಲ್ಲರು ನಿರ್ಧರಿಸಿರುವಾಗ ಕಾಳ ರಾಮಣ್ಣ ಪೆರುಮಾಳರೊಂದಿಗೆ ವರ್ತಿಸುವ ರೀತಿ ಭಾವಿಸುವ ಪರಿ ವಿಶೇಷವಾಗಿದೆ. ರಾಮಣ್ಣ ಪೆರುಮಾಳರ ಮನೆಯ ಆಳಾದ ಕಾಳನಿಗೆ ರಾಮಣ್ಣ ಪೆರುಮಾಳರ ಸಾಲವೇ ಬೇರೆ ಅವರ ವ್ಯಕ್ತಿತ್ವವೇ ಬೇರೆ ಎಂಬ ನಿಶ್ಚಲ ನಿಲುವು ಇದ್ದುದ್ದರಿಂದ ಆತ ರಾಮಣ್ಣ ಪೆರುಮಾಳರನ್ನು ಸಮಾನ ಗೌರವದಲ್ಲಿ ಕಾಣುವುದನ್ನು ಭಾವಿಸುವುದನ್ನು ಮರೆಯುವಂತಿಲ್ಲ. ಕೀಳು ಜಾತಿಯವರಲ್ಲಿಯು ಸಹ ಇಂತಹ ಅನನ್ಯ ಗುಣವನ್ನು ಗೊರೂರರವರು ಗುರುತಿಸಿ ಶ್ಲಾಘಿಸಿ ಕಾಳನ ಪಾತ್ರವನ್ನು ಚಿತ್ರಿಸಿದ್ದಾರೆ. ಲೇಖಕರು ವ್ಯಕ್ತಿಯನ್ನು ಅನನ್ಯ ದೃಷ್ಟಿಯಲ್ಲಿ ಕಾಣಬಲ್ಲರು ಎಂಬುದಕ್ಕೆ ಕಾಳನ ಪಾತ್ರ ಒಂದು ಉತ್ತಮ ಉದಾಹರಣೆಯಾಗಿದೆ.

ಕಾಳ ರಾಮಣ್ಣ ಪೆರುಮಾಳರ ಮನೆಯಲ್ಲಿ ತಲೆಮಾರಿನಿಂದ ಜೀತದಾಳಾಗಿದ್ದ. ಇಷ್ಟಾದರು ತನ್ನ ಒಡೆಯನಿಗೆ ಯಾವ ಸ್ಥಿತಿ ಒದಗಿ ಬಂದರು ಅವನು ತನ್ನ ಸೇವಾ ಮನೋವೃತ್ತಿಯನ್ನು ಬದಲಿಸುವುದಿಲ್ಲ. ರಾಮಣ್ಣ ಪೆರುಮಾಳರು "ನೀನು ಬಿಟ್ಟು ಹೋಗು, ನೀನು ಸ್ವತಂತ್ರ, ನೀನು ಇನ್ನು ಜೀತದ ಆಳಲ್ಲ, ನಾನು ಒಡೆಯನಲ್ಲ" ಎಂದು ರಾಮಣ್ಣ ಪೆರುಮಾಳರು ಹೇಳಿದರೂ ಕಾಳ ಬಿಟ್ಟು ಹೋಗಲಿಲ್ಲ. "ಉಂಟೆ ಬುದ್ಧಿ, ನೀವು ಯಾವತ್ತೂ ಒಡೆಯರೇ, ನಾನು ಯಾವತ್ತೂ ಜೀತಗಾರನೇ" ಎಂದು ಹೇಳಿ ಮೊದಲಿನಂತೆಯೇ ಮನೆಯಲ್ಲಿಯೋ ತೋಟದಲ್ಲಿಯೋ ಜೀತ ಮಾಡುತ್ತಲೇ ಇದ್ದನು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೬೨) ಕಾಳನ ಈ ಭಾವನೆಗೆ ಮುಖ್ಯ ಕಾರಣ ಒಡೆಯರ ಹಾಗೂ ಅವನ ಸಂಬಂಧ ಬರಿಯ ಹಣಕಾಸಿನ ವ್ಯವಹಾರವಾಗಿಲ್ಲ. ರಾಮಣ್ಣ ಪೆರುಮಾಳರು ಬದುಕಿರುವ ವರೆಗೆ ಅವರು ಸಂಬಳ ಕೊಡಲಿ ಬಿಡಲಿ ಕಾಳ ಅವರ ಮನೆಯ ಜೀತ ಆಳಾಗಿಯೇ ಇದ್ದನು. ರಾಮಣ್ಣ ಪೆರುಮಾಳರು ದೇಶಾಂತರ ಹೋದಾಗ ಕಾಳ ಅವರ ಮನೆಯ ಜಗಲಿಯ ಮೇಲೆ ಕುಳಿತು ಗೋಳೋ ಎಂದು ಅಳುತ್ತಾನೆ. ಮನಸ್ಸು ತೃಪ್ತಿಯಾಗುವವರೆಗೆ ಅತ್ತು ಹಳೆಯ ಋಣ ಇಂದು ತೀರಿತು ಎಂದು ನೆಟ್ಟಗೆ ಹೊಲಗೇರಿಗೆ ಹೋಗುತ್ತಾನೆ. ಈ ಭಾಗದಲ್ಲಿ ಗೊರೂರರವರು ರಾಮಣ್ಣ ಪೆರುಮಾಳರಿಗೂ ಕಾಳನಿಗೂ ಇದ್ದ ಮಾನವೀಯ ಸಂಬಂಧದ ಗಾಢ ಸೆಳೆತವನ್ನು ಸ್ಪಷ್ಟಪಡಿಸಿ ಇಂತ ಸಂಬಂಧಕ್ಕೆ ಮೆಚ್ಚುಗೆ ಯನ್ನು ವ್ಯಕ್ತಪಡಿಸಿದ್ದಾರೆ. ಗ್ರಾಮೀಣ ಪರಿಸರದಲ್ಲಿ ವ್ಯಕ್ತಿಗಳ ಹೃದಯಾಂತರಾಳದಲ್ಲಿರುವ ಸೂಕ್ಷ್ಮ ಭಾವಗಳ ಸಂವೇದನೆಯನ್ನು ಗ್ರಹಿಸುವುದರಲ್ಲಿ ಲೇಖಕರು ನಿಷ್ಣಾತರು ಎಂಬುದು ನಮಗೆ ಚೆನ್ನಾಗಿ ಮನವರಿಕೆಯಾಗುತ್ತದೆ. ಸಾಹಿತಿಯಲ್ಲಿ ಇರಲೇಬೇಕಾದ ಸ್ವೋಪಜ್ಞತೆ ಸೂಕ್ಷ್ಮಗ್ರಹಣ ಶಕ್ತಿ, ಸ್ಪಂದನ ಶಕ್ತಿ ಗೊರೂರರವರಲ್ಲಿ ನಿಚ್ಚಳವಾಗಿದೆ ಎಂಬುದನ್ನು ಇಂತಹ ಪ್ರಕರಣಗಳ ನಿದರ್ಶನಗಳ ಮೂಲಕ ಖಚಿತ ಮಾಡಿಕೊಳ್ಳಬಹುದು. ವಿಷಮ ಶೀತಜ್ವರದಿಂದ ಕಾಳ ಸತ್ತಾಗ ರಾಮಣ್ಣ ಪೆರುಮಾಳರ ಸಂಸಾರಕ್ಕೆ

ಸಂಭವಿಸಿದ ಕಷ್ಟದಲ್ಲಿ ಕಾಳನ ಸಾವನ್ನು ಯಾರು ಗುರುತಿಸದಿದ್ದರು ಲೇಖಕರು ಗುರುತಿಸಿರುವುದು ವಿಶೇಷ ಸಂಗತಿಯಾಗಿದೆ. ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು ಹಾಕುವ ಕಾಲದಲ್ಲಿಯೂ ರಾಮಣ್ಣ ಪೆರುಮಾಳರಂತವರು ಹಳ್ಳಕ್ಕೆ ಬಿದ್ದಾಗ ಅದಕ್ಕಾಗಿ ಪರಿತಪಿಸುವ ಕಾಳನಂತವರು ಇದ್ದಾರೆ ಎಂಬುದು ನಮಗೆ ಗೋಚರವಾದಾಗ ಆಶ್ಚರ್ಯವಾಗುವುದು ಅಷ್ಟೇ ಸ್ವಾಭಾವಿಕ. ಗುಣ ಎಲ್ಲಿದ್ದರು ಅದನ್ನು ಕಾಣುವ ಕಣ್ಣು ಮೆಚ್ಚಿಕೊಳ್ಳುವ ಸುಸಂಸ್ಕೃತ ಮನಸ್ಸು ನಮ್ಮದಾಗಿರಬೇಕು ಎಂಬುದನ್ನು ಕಾಳನ ಪಾತ್ರದ ಮೂಲಕ ಗೊರೂರವರು ನಮಗೆ ನೆನಪು ಮಾಡಿಕೊಡುತ್ತಾರೆ. ಇಂತಹ ಗುಣಕ್ಕೆ ಜಾತಿಯ ವರ್ಗದ ಕಟ್ಟಿಲ್ಲ ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾದ ವಿಚಾರವಾಗುತ್ತದೆ.

ರಾಮಣ್ಣ ಪೆರುಮಾಳರು ಹೊಲೆಯರನ್ನು ಕಾಣುತ್ತಿದ್ದ ದೃಷ್ಟಿ ವಿಶೇಷವಾಗಿತ್ತು. ಅವರ ಪಾಲಿಗೆ ಹೊಲೆಯರು ಎಂದೂ ಮೋಸಗಾರರು ಅಲ್ಲ. ನಿಯತ್ತಿನ ಗುಣ ಉತ್ತಮ ಜಾತಿಯಲ್ಲಿ ಇರುವುದಕ್ಕಿಂತ ಹೊಲೆಯರಲ್ಲಿ ಹೆಚ್ಚು ಇದೆ ಎಂಬುದು ರಾಮಣ್ಣ ಪೆರುಮಾಳರಿಗೆ ಕಾಳನ ಮೂಲಕ ಅನುಭವಕ್ಕೆ ಬಂದ ಸತ್ಯ ಸಂಗತಿಯಾಗಿತ್ತು. “ಹಣ ಸಾಲ ತಂದಿದ್ದೆ; ಹಣ ಹಿಂದಕ್ಕೆ ಕೊಡಬೇಕು” ಇದಿಷ್ಟೇ ಹೊಲೆಯರ ನೀತಿಯಾಗಿದ್ದಿತು. .... ಸುಬ್ಬಾಭಟ್ಟರಿಗೆ ಸಾಲದ ಬಗ್ಗೆ ಇದ್ದಂತಹ ‘ಲಿಮಿಟೇಷನ್’ ಸಬೂಬು ಹೊಲೆಯರಿಗೆ ಇರಲಿಲ್ಲ”. (ಅದೇ; ಪು. ೪೮) ಈ ಕಾರಣದಿಂದಲೇ ರಾಮಣ್ಣ ಪೆರುಮಾಳರು ಗಾಂಧಿ ಗುಂಪಿಗೆ ಸೇರಿದವರಲ್ಲದಿದ್ದರು, ಅಸ್ಪೃಶ್ಯತಾ ನಿವಾರಣೆಯ ಪ್ರಚಾರಕರು ಅಲ್ಲದಿದ್ದರೂ ಹೊಲೆಯರ ದುಡಿಮೆಯಿಂದ ಅವರ ಸಂಸಾರ ಸುಖವಾಗಿ ಸಾಗುತ್ತಿದ್ದರಿಂದ ಅವರು ಹೊಲೆಯರನ್ನು ಪ್ರೀತಿಸುತ್ತಿದ್ದರು, ಹೊಲೆಯರನ್ನು ಸಾಕುತ್ತಿದ್ದರು ಮತ್ತು ಹೊಲೆಯರಿಗೆ ಅನ್ನ ಹಾಕುತ್ತಿದ್ದರು. ಒಳ್ಳೆಯ ಎತ್ತನ್ನು ಮೇವಿನಿಂದ ಪೋಷಿಸುವಂತೆ ಹೊಲೆಯರಿಗೆ ಅನ್ನ ಬಟ್ಟೆ ಕೊಡುತ್ತಿದ್ದರು. ಮತ್ತೊಬ್ಬ ನಮ್ಮಲ್ಲಿ ಬಂದು ನಮ್ಮ ಕೆಲಸವನ್ನು ತನ್ನ ಕೆಲಸದಂತೆ ಮಾಡಬೇಕಾದರೆ ಅವನನ್ನು ನಾವು ಆತ್ಮೀಯರಾಗಿ ತಿಳಿದಿದ್ದೇವೆ ಎಂಬುದು ಅವನಿಗೆ ನಂಬಿಕೆ ಆಗಬೇಕು. ರಾಮಣ್ಣ ಪೆರುಮಾಳರು ತಮ್ಮ ಸಹವಾಸದ ಸಮೀಪಕ್ಕೆ ಬಂದವರಲ್ಲಿ ಈ ನಂಬಿಕೆಯನ್ನುಂಟು ಮಾಡುತ್ತಿದ್ದರು. ಜೀತ ಪದ್ಧತಿ ಇದ್ದಾಗಲೂ ಹೃದಯವಂತ ಜನ ಇದ್ದರು ಎಂಬುದನ್ನು ಲೇಖಕರು ರಾಮಣ್ಣ ಪೆರುಮಾಳರ ಪಾತ್ರದ ಮೂಲಕ ಅನಾವರಣಗೊಳಿಸಿದ್ದಾರೆ. ಸಮಾಜದಲ್ಲಿ ಅನಿಷ್ಟ ಸಂಪ್ರದಾಯಗಳು ಹೇಗೋ ತೂರಿ ಬಂದು ಅನರ್ಥಗಳಿಗೆ ಕಾರಣವಾದರೂ ಹೃದಯವಂತ ಕೆಲವೇ ಜನರಿಂದ ಸಮಾಜದ ಅಸ್ಪೃಶ್ಯ ಜನಾಂಗದ ನೋವನ್ನು ನಾವು ಮರೆಸಬಹುದು ಎಂಬ ಸತ್ಯಾಂಶವನ್ನು ರಾಮಣ್ಣ ಪೆರುಮಾಳರು ಸ್ಪಷ್ಟಪಡಿಸಿದ್ದಾರೆ.

ಅದೇ ಕೃತಿಯಲ್ಲಿ ಕಂಡು ಬರುವ ಹರಿಜನೋದ್ಧಾರದ ಪರಿಕಲ್ಪನೆಯ ಬಗ್ಗೆ ಎಸ್. ಚಂದ್ರಶೇಖರ ಅವರ ವಿಮರ್ಶೆಯ ಮಾತುಗಳು ಹೀಗಿವೆ, “ಹೇಮಾವತಿ’ ಕೃತಿಯಲ್ಲಿ ದುರಾಸೆಯ ಬ್ರಾಹ್ಮಣ ಜಮೀನ್ದಾರರೂ, ಅವರಲ್ಲಿ ದುಡಿಯುವ ಕಾಳನಂಥ ದಲಿತ ಜೀತದಾಳುಗಳೂ ಕಾಣುತ್ತಾರೆ. ಈ

ಜೀತದಾಳುಗಳು ಶ್ರದ್ಧೆ ವಿನಯಗಳಿಂದ ನೀತಿ ನಿಯತ್ತುಗಳಿಗೆ ಜೋತು ಬಿದ್ದು ಬಾಳುವವರು. ಒಡೆಯ ಜೀತವನ್ನು ಕೊಡದಿದ್ದರೂ ಪರವಾಗಿಲ್ಲ ಜೀತಗೆಯುತ್ತೇವೆ ಎನ್ನುತ್ತಾನೆ ಕಾಳ. ಇಂಥ ದಲಿತರ ಬದುಕನ್ನೇ ಕೃತಿ ವೈಭವೀಕರಿಸುವಂತೆ ಕಾಣುತ್ತದೆ". (ವಿವಿಧ ಲೇಖಕರು; ೧೯೯೨; ಪು.೮) ಇವರ ಈ ಮಾತುಗಳಲ್ಲಿ ಸ್ವಲ್ಪಮಟ್ಟಿಗೆ ವಾಸ್ತವತೆಯನ್ನು ಗುರುತಿಸಬಹುದು.

ಸಮಾಜದಲ್ಲಿ ವರ್ಗದ ವೃತ್ತಿಯ ಪ್ರತಿಷ್ಠೆ ಇದ್ದಂತೆ ಹಳ್ಳಿಯವರು ಪಟ್ಟಣದವರು ಎಂಬ ಭೇದ ಭಾವವು ಪ್ರತಿಷ್ಠೆಯ ಧೋರಣೆಯು ಅನೇಕ ಸಂದರ್ಭಗಳಲ್ಲಿ ಕಂಡುಬರುತ್ತದೆ. ಸಮಾಜದಲ್ಲಿ ಯಾವ ರೀತಿಯ ಪ್ರತಿಷ್ಠೆಯಿಂದಲಾದರೂ ಕಂದಕಗಳು ಮೂಡಿ ಬಂದರೆ ಆಗುವ ಅಪಾಯ ಅಪಮಾನ ಒಂದೇ ರೀತಿಯದಾಗಿರುತ್ತದೆ. ಸಮಾಜದಲ್ಲಿ ಸೌಹಾರ್ದ ವಾತಾವರಣ ಕಂಡುಬರಬೇಕಾದರೆ ಇಂತಹ ಒಣ ಪ್ರತಿಷ್ಠೆಗಳ ಸೊಕ್ಕು ಇಲ್ಲದಂತೆ ಆಗಬೇಕು. ಗೊರೂರವರ 'ಪುನರ್ಜನ್ಮ' ಕಾದಂಬರಿಯಲ್ಲಿ ಪಟ್ಟಣದ ವಾಸಿ ಜಿಲ್ಲಾಧಿಕಾರಿ ಸುಂದರರಾಜನು ಗ್ರಾಮೀಣ ಜನರನ್ನು ತಾತ್ಸಾರವಾಗಿ ಕಾಣುವ ಘಟನೆಯನ್ನು ಕಾಣಬಹುದು. ಸುಂದರರಾಜನಿಗೆ ಅಧಿಕಾರದ ಹಮ್ಮು ಸಹ ಇತ್ತು. ಈ ಕಾರಣದಿಂದಲೇ ಆತನು ಗ್ರಾಮೀಣ ಜನರನ್ನು ತನ್ನ ಹತ್ತಿರದ ಬಂಧು ಬಳಗವನ್ನು ಅಲಕ್ಷ್ಯ ಭಾವದಲ್ಲಿ ಕಾಣುತ್ತಾನೆ. ತನ್ನ ಅಳಿಯನನ್ನು ಸಹ ಕೀಳಾಗಿ ಕಾಣುವಷ್ಟರ ಮಟ್ಟಿಗೆ ಅಂತಸ್ತಿಕೆಯ ಸೊಕ್ಕು ಸುಂದರರಾಜನಿಗೆ ಬರುತ್ತದೆ. ಗ್ರಾಮೀಣ ಜನರನ್ನು ಅವಿದ್ಯಾವಂತರು ಸೋಮಾರಿಗಳು ಎಂಬ ತಾತ್ಸಾರ ಭಾವನೆ ಸುಂದರರಾಜನ ಅಂತರಂಗದಲ್ಲಿ ಭದ್ರವಾಗಿ ಬೇರು ಬಿಟ್ಟಿದೆ. ಇಂಥ ರೀತಿಯ ಒಡಕು ಆಲೋಚನೆಗಳು ಅಳಿಯುವ ತನಕ ಸಮಾಜದಲ್ಲಿ ನಿಜವಾದ ಮೈತ್ರಿ ಭಾವನೆ ಮೂಡಲಾರದು ಎಂಬ ಸಂಗತಿಯನ್ನು ಲೇಖಕರು ತಮ್ಮ ಕೃತಿಯ ಮೂಲಕ ಮನವರಿಕೆ ಮಾಡಿಕೊಟ್ಟಿದ್ದಾರೆ.

ಗೊರೂರವರು ಸಮಾಜದ ವಿವಿಧ ವರ್ಗದವರೊಂದಿಗೆ ಜಾತಿಯವರೊಂದಿಗೆ ಕೂಡಿ ಬಾಳಿದ ಸಂಘಜೀವಿ. ಎಲ್ಲ ವ್ಯಕ್ತಿಗಳನ್ನು ಮಾನವೀಯ ಭಾವನೆಯಲ್ಲಿ ಅರ್ಥಮಾಡಿಕೊಂಡು ಅವರೊಂದಿಗೆ ಮಾನವೀಯ ಸಂಬಂಧವನ್ನು ಉಳಿಸಿಕೊಂಡು ಸಮಾಜದ ಬೇರೆ ಬೇರೆ ವ್ಯಕ್ತಿಗಳಲ್ಲಿ ವಿಶೇಷತೆಯನ್ನು ಗುರುತಿಸಲು ಉತ್ಸಾಹ ತೋರಿದ ಸಂಯಮಶೀಲ ಚಿಂತನ ಪರವ್ಯಕ್ತಿ. ಸಮಾಜದ ಯಾವ ವರ್ಗದಲ್ಲೇ ಆಗಲಿ ಒಳಿತು ಕೆಡಕುಗಳೆರಡು ಮಿಶ್ರವಾಗಿ ಇರುತ್ತದೆ ಎಂಬ ಮೂಲ ಪ್ರಜ್ಞೆ ಗೊರೂರವರಿಗೆ ಇತ್ತು. ಇಂಥ ಸಮಾಜದೊಂದಿಗೆ ಬದುಕುವ ವ್ಯಕ್ತಿಗೆ ಎಚ್ಚರ, ಸಂಯಮ, ವಿವೇಕ ಇರಬೇಕು ಎಂಬುದನ್ನು ಲೇಖಕರು ಸ್ವಾನುಭವದಿಂದ ಅನುಭವದ ಮಾತಾಗಿ ವ್ಯಕ್ತಿಗಳೊಂದಿಗೆ ಹಂಚಿಕೊಂಡಿದ್ದಾರೆ. ಇವರ ಈ ಸಂಯಮಶೀಲ ಸ್ವಚ್ಛ ಜಾಗೃತ ದೃಷ್ಟಿ ಗೊರೂರವರ ಕೃತಿಗಳ ಚಿಂತನ ಮೌಲ್ಯವನ್ನು ಹೆಚ್ಚಿಸಿದೆ.

ಗೊರೂರವರಿಗೆ ವ್ಯಕ್ತಿ ಜಾತಿಗಿಂತ ಜೀವನ ರೀತಿ ಅವನ ಜೀವನ ಮೌಲ್ಯ ಹೆಚ್ಚು ಮುಖ್ಯವಾಗಿರುತ್ತದೆ. ಮೌಲ್ಯಿಕ ಬದುಕಿಗೆ ಪ್ರಾಶಸ್ತ್ಯ ಕೊಡಬೇಕೆ ಹೊರತು ಸಂಪ್ರದಾಯ ಬದ್ಧವಾಗಿ ಬಂದಿರುವ ಜಾತಿಯ

ಬದುಕಿಗೆ ಅಲ್ಲ ಎಂಬುದು ಗೊರೂರರವರ ದಿಟ್ಟ ಧೋರಣೆಯಾಗಿದೆ. ಜಾತಿ-ವರ್ಗದಲ್ಲಿ ಮೌಢ್ಯ ಸಂಪ್ರದಾಯಗಳು ಎಲ್ಲಿ ಮೂಡಿ ಬಂದರೂ ಅದು ಖಂಡನೀಯ ಎಂಬ ಅಂಶವನ್ನು ಗೊರೂರರವರ ಕೃತಿಗಳು ಸಾರಿ ಹೇಳುತ್ತವೆ. ಬ್ರಾಹ್ಮಣ ವರ್ಗದವರು ಕ್ಷೌರಿಕ ತಮ್ಮ ಜಾತಿಯವರಿಗೆ ಮಾತ್ರ ಮೀಸಲಾಗಿ ಇರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದಾಗ ಗೊರೂರರವರು ಬ್ರಾಹ್ಮಣರನ್ನು ಗೇಲಿ ಮಾಡುವ ರೀತಿ ಕಟು ಟೀಕೆಗಿಂತ ಮೊನಚಾಗಿದೆ. ಶೀನಪ್ಪ ತನ್ನ ಎಮ್ಮೆ ಸತ್ತಾಗ ಅದರ ಮೇಲಿನ ಪ್ರೀತಿಯ ಸಲುವಾಗಿ ತಾನೇ ಅದಕ್ಕೆ ಸಂಸ್ಕಾರ ಮಾಡುತ್ತಾನೆ. ಹೊಲೆಯರ ಕೈಗೆ ಕೊಟ್ಟರೆ ಅವರು ಸಂಸ್ಕಾರಕ್ಕೆ ಬದಲಾಗಿ ಅದನ್ನು ವ್ಯಾಪಾರಕ್ಕೆ ಬಳಸಿಕೊಳ್ಳುವುದು ಶೀನಪ್ಪನವರಿಗೆ ಒಪ್ಪದ ವಿಷಯವಾಗುತ್ತದೆ. ಈ ಸಂದರ್ಭದಲ್ಲಿ ಬ್ರಾಹ್ಮಣರೆಲ್ಲರು ಶೀನಪ್ಪನನ್ನು ಬಹಳ ಅಗುರವಾಗಿ ಭಾವಿಸಿ ಅವನ ಬಗ್ಗೆ ಅತಿ ಲಘುವಾಗಿ ವರ್ತಿಸು ತ್ತಾರೆ. "ಅವನಿಗೇನೂ ಜಾತಿಯಿಲ್ಲ, ಕುಲಯಿಲ್ಲ, ಅವನೊಬ್ಬ ಆದಿ ಕರ್ನಾಟಕ. ನಿನ್ನೆ ಬೀದಿ ಗುಡಿಸಿದ. ಇವತ್ತು ದನ ಹೊರುತ್ತಾನೆ. ನಾಳೆ ಇನ್ನೇನು ಮಾಡುತ್ತಾನೋ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು. ೯೪) ಎಂದು ತಮ್ಮ ಕೋಪವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಶೀನಪ್ಪನಿಗೆ ತನ್ನ ಎಮ್ಮೆ ಮೇಲೆ ಇರುವ ಪ್ರೀತಿಯ ಭಾವನೆ ಮಿಕ್ಕವರಿಗೆ ಅರ್ಥವಾಗಲಿಲ್ಲ ಎಂಬುದು ಗೊರೂರರವರ ವಿಷಾದವಾಗಿದೆ. ಅಂತಃಕರಣದ ಭಾವದೊಂದಿಗೆ ನಮ್ಮ ಬದುಕಿನ ಚಟುವಟಿಕೆಗಳು ನಡೆಯಬೇಕೆ ಹೊರತು ಯಾವುದೇ ರೀತಿಯ ಮೌಢ್ಯತನಕ್ಕೆ ನಾವು ಬಲಿ ಆಗಬಾರದು ಎಂಬುದನ್ನು ಲೇಖಕರು ಸೂಚ್ಯವಾಗಿ ಇಲ್ಲಿ ತಿಳಿಸಿ ದ್ದಾರೆ. ಎಲ್ಲಾ ಜಾತಿ ಧರ್ಮದವರು ವ್ಯಕ್ತಿಯ ಮನಸ್ಸಿನಲ್ಲಿ ಮೂಡುವಂತಹ ಮೂಲಭೂತವಾದ ಸದ್ಭಾವನೆಗಳನ್ನು ಉಳಿದವರು ಗೌರವಿಸಬೇಕೆ ಹೊರತು ಗೇಲಿ ಮಾಡಬಾರದು ಎಂಬ ನಿಜಾಂಶ ಇಲ್ಲಿ ಸೂಚ್ಯವಾಗಿದೆ.

ಗೊರೂರರವರು ವೃತ್ತಿಯನ್ನು ಅನುಸರಿಸುವಾಗ ವೃತ್ತಿಗೆ ಸಂಬಂಧಪಟ್ಟ ಕುಶಲತೆಯ ನೈಪುಣ್ಯತೆ ವ್ಯಕ್ತಿಯಲ್ಲಿ ಇರಬೇಕು ಎಂಬುದನ್ನು 'ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯಲ್ಲಿ ಅನಾವರಣಗೊಳಿಸಿದ್ದಾರೆ. ಓಲಗ ಊದುವುದು ಒಂದು ವರ್ಗದವರ ವೃತ್ತಿಯಾಗಿದೆ. ಆದರೆ ಅನೇಕ ಸಂದರ್ಭಗಳಲ್ಲಿ ಆ ವೃತ್ತಿಯಲ್ಲಿ ಇರುವವರಿಗೆ ಓಲಗ ಊದುವ ಕೌಶಲ್ಯ ಇರುವುದಿಲ್ಲ. ಕೀಳು ಜಾತಿಯವರಲ್ಲಿ ಆ ಕೌಶಲ್ಯವನ್ನು ಕಂಡಾಗ ಮೆಚ್ಚಿಕೊಳ್ಳುವ ಔದಾರ್ಯವನ್ನು ತೋರಿಸದ ಉತ್ತಮ ಜಾತಿಯವರ ವರ್ತನೆಯನ್ನು ಗೊರೂರರವರು ಗೇಲಿ ಮಾಡುತ್ತಾರೆ. ಗೊರೂರಿನ ಬ್ರಾಹ್ಮಣರಿಗೆ ಅವರ ದೇವಾಲಯದಲ್ಲಿ ಊದುವ "ಪೀ" ವಾದ್ಯವೇ (ಧ್ವನಿ) ಬಹಳ ಪ್ರಿಯ. ತಾಳ ಲಯ ಸಮನ್ವಯವಾಗಿ ಹೊಲೆಯರು ಬಡಿಯುವ ತಮಟೆಯ ಧ್ವನಿ ಅಪ್ರಿಯ. ಇಷ್ಟಾದರೂ ಹೊಲೆಯರ ತಮಟೆಯ ಧ್ವನಿ ಕೇಳಿದಾಗ ಬ್ರಾಹ್ಮಣರು ನಿಂತಲ್ಲೆ ತಲೆಹಾಕುವ ಮೈ ಕುಣಿಸುವ ಇವರ ವರ್ತನೆಯನ್ನು ಗೊರೂರರವರು ಗಮನಿಸಿ ನೆನಪು ಮಾಡಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿಯು ಸಹ ಲೇಖಕರು ಜಾತಿಯ ಬಗ್ಗೆ ತೋರಿಸುವ ಔದಾರ್ಯ ಭಾವನೆ, ವಿವೇಕ ಪ್ರಜ್ಞೆ ಮರೆಯುವಂತಿಲ್ಲ.

ಗೊರೂರವರು ಯಾವ ಜಾತಿಯವರನ್ನು ಖಂಡಿಸಿದರು ಈ ಖಂಡನೆ ದ್ವೇಷದಿಂದ ಮೂಡಿ ಬಂದದ್ದು ಅಲ್ಲ. ನಿರ್ದಿಷ್ಟ ಜಾತಿಯಲ್ಲಿ ಕಂಡ ಮೂಢನಂಬಿಕೆಯ ವರ್ತನೆ ಮಾತ್ರ ಖಂಡನೆಗೆ ಕಾರಣ ಎಂಬುದನ್ನು ಮರೆಯಬಾರದು. ಎಲ್ಲಾ ಜಾತಿಯ ಹುಳುಕನ್ನು ಎತ್ತಿ ತೋರಿಸಿರುವ ಗೊರೂರವರು ತಮ್ಮ ಜಾತಿಯ ಮೂಢ ಸಂಪ್ರದಾಯಗಳನ್ನು ಅಷ್ಟೇ ನಿರ್ಭಯವಾಗಿ ನಿಸ್ಸಂಕೋಚವಾಗಿ ಖಂಡಿಸಿದ್ದಾರೆ, ಗೇಲಿ ಮಾಡಿದ್ದಾರೆ. ಇಂತಹ ಸಂದರ್ಭಗಳಲ್ಲಿ ಗೊರೂರವರ ನಿಷ್ಪಕ್ಷಪಾತ ದೃಷ್ಟಿ ಮೆಚ್ಚಬೇಕಾಗುತ್ತದೆ. ಅವರೇ ಹೇಳಿಕೊಳ್ಳುವಂತೆ ಮನುಷ್ಯನ ಮನಸ್ಸು ತನ್ನ ಚಿಂತನೆಯ ಕೇಂದ್ರಬಿಂದುವಷ್ಟೆ ಹೊರತು ಅವನ ಹುಟ್ಟಿನ ಜಾತಿ ಅಲ್ಲ ಎಂಬುದು ಅನುಸರಿಸಿ ಹೇಳಿದ ಮಾತಾಗಿದೆ. ಗೊರೂರವರ ಕೃತಿಗಳನ್ನು ಈ ದೃಷ್ಟಿಯ ಹಿನ್ನೆಲೆಯಲ್ಲಿಯೇ ಪರಿಭಾವಿಸಿದಾಗ ಅವರಲ್ಲಿಯು ಸಹ ವೈಚಾರಿಕ ದೃಷ್ಟಿ ಇದೆ ಎಂಬ ನಿಜಾಂಶ ಎಲ್ಲರಿಗೂ ಚೆನ್ನಾಗಿ ಮನವರಿಕೆಯಾಗುತ್ತದೆ.

ಗೊರೂರವರು ಜಾತಿ ಮೈತ್ರಿಯನ್ನು ವಿವಿಧ ಹಂತಗಳಲ್ಲಿ ಗುರುತಿಸಿ ತಮ್ಮ ಕೃತಿಗಳಲ್ಲಿ ಅದನ್ನು ಪ್ರತಿಬಿಂಬಿಸಿದ್ದಾರೆ. 'ಹೇಮಾವತಿ' ಕಾದಂಬರಿಯಲ್ಲಿ ರಾಮಣ್ಣ ಪೆರುಮಾಳರು ತನ್ನ ತೋಟದ ಬಗ್ಗೆ ಮಾತಾಡುವಾಗ ತನ್ನ ವಂಶಸ್ಥರ ದುಡಿಮೆಯ ಅಭಿಮಾನದಿಂದ ಹೇಗೆ ತೋಟ ಮುಂದುವರೆದಿದೆ ಎಂಬುದನ್ನು ಹೇಳುತ್ತಾರೆ. ತೋಟದ ಮರಗಳಿಗೆಲ್ಲಾ ತಲೆ ತಲಾಂತರದ ಇತಿಹಾಸವಿದೆ ಎಂಬುದು ರಾಮಣ್ಣ ಪೆರುಮಾಳರಿಗೆ ಅಭಿಮಾನದ ಸಂಗತಿ. ಕಾಳನು ಸಹ ಜೀತದ ಆಳಾದರೂ ಅವನ ಮನಸ್ಸಿಗೆ ಯಾವುದೇ ರೀತಿಯ ಕಿನ್ನತೆಯ ಭಾವ ಬಂದಿಲ್ಲ. ಇದಕ್ಕೆ ಬದಲಾಗಿ ತನ್ನ ವಂಶದವರೆಲ್ಲಾ ರಾಮಣ್ಣ ಪೆರುಮಾಳರ ಮನೆಯಲ್ಲಿ ಜೀತದ ಆಳಾಗಿ ದುಡಿದಿರುವುದು ಕಾಳನಿಗೆ ಅಭಿಮಾನದ ವಿಷಯವಾಗಿದೆ. ರಾಮಣ್ಣ ಪೆರುಮಾಳರ ತೋಟ ಫಲವತ್ತಾಗಿರುವುದಕ್ಕೆ ಕಾರಣ ತನ್ನ ವಂಶದವರೆಲ್ಲರ ಜೀತದ ಕಾರ್ಯ ಎಂದು ಕಾಳನು ಸಹ ಸಂತೋಷದಿಂದ ಹೇಳಿಕೊಳ್ಳುತ್ತಾನೆ. ಈ ರೀತಿಯಲ್ಲಿ ರಾಮಣ್ಣ ಪೆರುಮಾಳರು ಮತ್ತು ಹೊಲೆಯ ಕಾಳನಲ್ಲಿ ಭೇದಭಾವಕ್ಕೆ ಬದಲಾಗಿ ವಿಶ್ವಾಸದ ಬಾಂಧವ್ಯ ಬೆರೆತಿರುವುದು ವಿಶೇಷ ಸಂಗತಿಯೆಂದು ಲೇಖಕರು ಸೂಚಿಸಿದ್ದಾರೆ. ನಮ್ಮ ಹಿಂದಿನ ಸಂಸ್ಕೃತಿಯಲ್ಲಿ ಜಾತಿ ವೈಷಮ್ಯಕ್ಕೆ ಬದಲಾಗಿ ಜಾತಿ ಮೈತ್ರಿ ಹೆಚ್ಚಾಗಿ ಇತ್ತು ಎಂಬುದನ್ನು ನಮ್ಮ ಹಿಂದಿನ ಗ್ರಾಮೀಣ ಸಾಂಸ್ಕೃತಿಕ ಬದುಕು ನಮಗೆ ಸ್ಪಷ್ಟಪಡಿಸುತ್ತದೆ. ಪಟ್ಟಣದ ಸೊಗಡಿನ ಪ್ರಭಾವ ಹಳ್ಳಿಯಲ್ಲಿ ಹೆಚ್ಚಿದಂತೆ ಜಾತಿ ವೈಷಮ್ಯಗಳ ಆಲೋಚನೆ ಸಮಾಜದಲ್ಲಿ ತಲೆ ಎತ್ತಿತು ಎಂಬುದು ನಿರ್ವಿವಾದ ಸಂಗತಿಯಾಗಿದೆ. ಇದನ್ನು ಒಂದು ರೀತಿಯಲ್ಲಿ ಪಟ್ಟಣದ ಬದುಕಿನ ಮೈತ್ರಿಯ ದುರಂತ ಎಂಬುದಾಗಿ ನಿರ್ದಾಕ್ಷಿಣ್ಯವಾಗಿ ಹೇಳಬಹುದು. ಪಟ್ಟಣದ ಸೊಗಡು ಅಲ್ಲಿಯ ಸಾಂಸ್ಕೃತಿಕ ಬದುಕಿಗೆ ತಾಗಿ ಹಳ್ಳಿ ಹಾಳಾಯ್ತು ಎಂಬ ಪ್ರಜ್ಞಾವಂತರ ಮಾತು ಇಲ್ಲಿ ಅನಿವಾರ್ಯವಾಗಿ ನೆನಪಿಗೆ ಬರುತ್ತದೆ.

ಅನೇಕ ಸಂಪ್ರದಾಯಗಳ ಕಟ್ಟುಪಾಡುಗಳು ಜಾತಿಯ ಕಂದಕವನ್ನು ತಾತ್ಕಾಲಿಕವಾಗಿಯಾದರೂ ಕಳೆಯುವುದುಂಟು. ಸಮಾಜದಲ್ಲಿ ಬೇರೆ ಬೇರೆ ಜಾತಿಯವರನ್ನು ಹಬ್ಬ-ಹರಿದಿನಗಳಲ್ಲಿ ಒಂದುಗೂಡಿಸಿ ಕೊಂಡರೆ ಕೆಳಜಾತಿಯವರಿಗೆ ಒಂದು ರೀತಿಯಲ್ಲಿ ಸಮಾಧಾನ ಉಂಟಾಗುತ್ತದೆ. ಯಾವುದೇ ಬೇರೆ ಸಂದರ್ಭಗಳಲ್ಲಿ ಅದು ಮರೆತು ಹೋಗಬಹುದು. ಇದಕ್ಕೆ ಬದಲಾಗಿ ಮೈತ್ರಿಭಾವ ಸಮಾಜದ ಎಲ್ಲಾ ವರ್ಗದಲ್ಲೂ ಕೂಡಿರಬಹುದು. ಇದನ್ನು ಗಮನಿಸಿರುವ ಗೊರೂರರವರು ನಮ್ಮ ಅನೇಕ ಸಂಪ್ರದಾಯಗಳಲ್ಲಿ ಕೆಲವು ಅನಿಷ್ಟ ಇದ್ದರು ಹಲವು ಸಂಪ್ರದಾಯಗಳು ಉತ್ತಮವಾಗಿರುತ್ತವೆ ಎಂದು ಹೇಳಿರುವುದುಂಟು. ಅವುಗಳಲ್ಲಿ ಒಂದು ರಥೋತ್ಸವದ ಸಮಯದಲ್ಲಿ ಗರುಡಪಟ ಕಟ್ಟುವ ಒಂದು ಸಂಪ್ರದಾಯ. ರಥೋತ್ಸವದ ಮೊದಲಿಗೆ ದೇವಸ್ಥಾನದಲ್ಲಿ ಪಾಡ್ಯದಿನ ಗರುಡ ಪಟವನ್ನು ಕಟ್ಟುತ್ತಾರೆ. ಗರುಡಪಟ ಕಟ್ಟಿದ ಮೇಲೆ ದೇವಾಲಯದ ಒಳಗೆ ಯಾವುದೇ ರೀತಿಯ ಮೈಲಿಗೆ ಇಲ್ಲ ಎಂಬ ಭಾವನೆ ಈ ಸಂಪ್ರದಾಯದ ಮೂಲಕ ರೂಢಿಯಲ್ಲಿ ಬಂದಿದೆ. ಬೇರೆ ಬೇರೆ ಸಂದರ್ಭಗಳಲ್ಲಿ ಊರಿನ ಹಲವು ಜಾತಿಯವರು ದೂರ ದೂರ ಇದ್ದರು ರಥೋತ್ಸವದ ಸಂದರ್ಭದಲ್ಲಿ ದೇವಾಲಯದಲ್ಲಿ ಉತ್ಸವಾದಿ ದೇವತಾದಿ ಕಾರ್ಯಗಳನ್ನು ಮಾಡುವಾಗ ಊರಿನ ಎಲ್ಲಾ ಜಾತಿಯವರು ಜಾತಿಯ ಭಿನ್ನ ಬೇಧಭಾವನೆಯನ್ನು ಮರೆತು ಒಟ್ಟಿಗೆ ಮೈಗೆ ಮೈ ಜೋಡಿಸಿ ದೇವತಾ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾರೆ. ಒಬ್ಬರ ಮುಖವನ್ನು ಒಬ್ಬರು ನೋಡುವುದು ಬೇರೆ ಸಂದರ್ಭಗಳಲ್ಲಿ ಮೈಲಿಗೆ ಎಂಬ ಭಾವನೆ ಇದ್ದರು ರಥೋತ್ಸವ ಸಂದರ್ಭದಲ್ಲಿ ಗರುಡಪಟ ಕಟ್ಟಿದ ಮೇಲೆ ಈ ಭಾವನೆ ದೂರವಾಗುತ್ತದೆ. ಗರುಡಪಟ ಕಟ್ಟಿದ ಮೇಲೆ "ದೇವರ ಅಡ್ಡೆಯನ್ನು ಬ್ರಾಹ್ಮಣರು ಒಂದು ಕಡೆ ಹೊತ್ತಿರುವಾಗ ಅವರು ಸೋತರೆ ಅವರ ಸಹಾಯಕ್ಕೆ ಬೆಸ್ತರೋ ಕೊರಚನೋ ಬಂದು ಹೆಗಲು ಕೊಡಬಹುದು. ಅಥವಾ ದೇವರ ಹಿಂದೆ ಅಧ್ಯಾಪಕರು ವೇದವನ್ನು ಜಪಿಸುತ್ತಾ ಬರುತ್ತಿರುವಾಗ ಪಂಚಮನೊಬ್ಬ ಅವರ ಮಧ್ಯೆ ನುಗ್ಗಿ ಹೋಗಬಹುದು. ಎಲ್ಲದಕ್ಕೂ ಗರುಡಪಟ ಕಟ್ಟಿದೆ ಎಂಬುದೇ ಉತ್ತರ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೫೪) ಜಾತಿ ಪದ್ಧತಿಯಲ್ಲಿಯು ಸಹ ಗೊರೂರರವರು ಈ ಮೂಲಕ ಸಾಮರಸ್ಯವನ್ನು ತರುವುದಕ್ಕೆ ಪ್ರಯತ್ನಿಸಿರುವುದು ಶ್ಲಾಘನೀಯವಾದದ್ದು. ಸಂಪ್ರದಾಯಗಳ ಹಿನ್ನೆಲೆಯಲ್ಲಿ ಇರುವ ಉತ್ತಮ ಅಂಶವನ್ನು ಲೇಖಕರು ಜ್ಞಾಪಿಸಿಕೊಡುವುದು ಔಚಿತ್ಯಪೂರ್ಣವಾಗಿದೆ.

ಗೊರೂರರವರು ಜಾತ್ರೆಗಳ ವೈಭವ ಹೇಳುವಾಗ ಎಲ್ಲ ವರ್ಗದವರ ಮೈತ್ರಿಯನ್ನು ಸೂಚಿಸುವ ಸಂದರ್ಭಗಳನ್ನು ತಿಳಿಸುವುದರ ಜೊತೆಗೆ ಜಾತ್ರೆಯ ಸಮಯದಲ್ಲಿ ಉತ್ಸವಗಳಲ್ಲಿ ಕೆಲವು ವರ್ಗದವರ ಪೂರ್ಣ ಪ್ರಾಧಾನ್ಯತೆಯನ್ನು ಸೂಚಿಸಿ ಹೇಳುವುದರ ಮೂಲಕ ಆ ವರ್ಗದವರಿಗೆ ಕೊಟ್ಟಿರುವ ಪ್ರಾಶಸ್ತ್ಯವನ್ನು ನೆನಪು ಮಾಡಿಕೊಡುತ್ತಾರೆ. ಇಂತಹ ಪ್ರಾಶಸ್ತ್ಯಗಳು ಸಮಾಜದ ಸಾಮೂಹಿಕ ಮೈತ್ರಿಗೆ ಪ್ರೇರಕವಾಗಬಲ್ಲದು. ನರಸಿಂಹಸ್ವಾಮಿ ರಥೋತ್ಸವದಲ್ಲಿ ದೊಡ್ಡ ಪಲ್ಲಕ್ಕಿ ಉತ್ಸವವನ್ನು ಒಕ್ಕಲಿಗರ ಉತ್ಸವವೆಂದೇ ಕರೆಯುತ್ತಾರೆ. ಅಡ್ಡಪಲ್ಲಕ್ಕಿ ಉತ್ಸವ - ದೊಡ್ಡ ಪಲ್ಲಕ್ಕಿ ಉತ್ಸವ ಹೆಸರಿಗೆ ಅನುಗುಣವಾಗಿಯೇ ದೊಡ್ಡ

ಉತ್ಸವ ಆಗಿರುತ್ತದೆ. ದೊಡ್ಡಪಲ್ಲಕ್ಕಿಗೆ ಹದಿನಾರು ಜನ ಹೊರುವುದಕ್ಕೆ ಅನುಕೂಲವಾಗುವಂತೆ ದೊಡ್ಡ ಅಡ್ಡೆಯನ್ನು ಕಟ್ಟಿರುತ್ತಾರೆ. ಆ ಪಲ್ಲಕ್ಕಿಗೆ ನಾಲ್ಕು ಕಡೆ ದೊಡ್ಡ ಬೊಂಬೆಗಳನ್ನು ಕಟ್ಟಿ ಆ ಗೊಂಬೆ ಕರವಸ್ತ್ರವನ್ನು ಆಡಿಸುವಂತೆ ದಾರದ ತಂತ್ರವನ್ನು ಮಾಡಿರುತ್ತಾರೆ. ಪಲ್ಲಕ್ಕಿಗೆ ಮಾಡುವ ಅಲಂಕಾರವೂ ಭವ್ಯವಾಗಿ ಇರುತ್ತದೆ. ಸಾಮಾನ್ಯವಾಗಿ ರಥೋತ್ಸವಗಳಲ್ಲಿ ನಡೆಯುವ ಉತ್ಸವಗಳೆಲ್ಲವೂ ಸ್ಪರ್ಧಾತ್ಮಕವೂ ಪೈಪೋಟಿಯಿಂದ ಕೂಡಿದ್ದು ಆಗಿರುತ್ತದೆ. ದೊಡ್ಡ ಪಲ್ಲಕ್ಕಿ ಉತ್ಸವ ಮಾಡುವ ಒಕ್ಕಲಿಗರು ಬೇರೆ ಜಾತಿಯವರ ಉತ್ಸವಗಳಿಗಿಂತ ವೈಭವ ಪೂರ್ಣವಾಗಿರಬೇಕೆಂದು ಅಲಂಕಾರ ಇತ್ಯಾದಿಗಳನ್ನು ವಿಶೇಷವಾಗಿ ಹಣ ಚೆಲ್ಲಿ ವೈಭವವಾಗಿ ಮಾಡಿರುತ್ತಾರೆ. ಆ ದಿನದ ಒಕ್ಕಲಿಗರ ಸಂಭ್ರಮ ಮಾತಿಗೆ ಮೀರಿದ್ದು. ಒಕ್ಕಲಿಗರ ಉತ್ಸಾಹದ ಈ ಭವ್ಯ ಉತ್ಸವವನ್ನು ಮಿಕ್ಕ ಜಾತಿಯವರು ಮೆಚ್ಚಿಕೊಂಡಾಗ ಅದರಲ್ಲೂ ಬ್ರಾಹ್ಮಣರು ಮೆಚ್ಚಿಕೊಂಡಾಗ ಒಕ್ಕಲಿಗರಿಗೆ ಆಗುವ ಸಂತೋಷ ಸಮಾಧಾನ ಮೇರೆ ಮೀರಿದ್ದು. ಪ್ರತಿ ವರ್ಷವೂ ಕಳೆದ ವರ್ಷಕ್ಕಿಂತ ಈ ವರ್ಷದ ಪಲ್ಲಕ್ಕಿ ಉತ್ಸವ ಚೆನ್ನಾಗಿತ್ತು ಎಂಬಂತೆ ವೈಭವ ಬೆಳೆಸಿಕೊಂಡು ಹೋಗಿರುವುದನ್ನು ಗುರುತಿಸಬಹುದು.

ಗೊರೂರವರ ಮನೆತನದಲ್ಲಿ ಅಸ್ಪೃಶ್ಯರ ಬಗ್ಗೆ ಉದಾರವಾದ ಭಾವನೆ ಇತ್ತು. ರಾಮಾನುಜರ ತತ್ವವನ್ನು ಅಕ್ಷರ ಸಹ ಪ್ರತಿಪಾದನೆ ಮಾಡುತ್ತಿದ್ದ ಗೊರೂರವರ ಮನೆತನದವರು ಅಸ್ಪೃಶ್ಯರನ್ನು ವಿಶಾಲ ಭಾವನೆಯಿಂದ ತಮ್ಮೊಂದಿಗೆ ಸೇರಿಸಿಕೊಂಡು ಸ್ನೇಹಪರರಾಗಿ ಇದ್ದರು. ಗೊರೂರವರು ಸಹ ತಮ್ಮ ಕೃತಿಗಳಲ್ಲಿ ಅಸ್ಪೃಶ್ಯರ ಬಗ್ಗೆ ಉದಾರ ಭಾವನೆಯನ್ನು ತೋರಿಸಿದ್ದಾರೆ. ವೇದಶಾಸ್ತ್ರಗಳಲ್ಲಿ ಭಗವದ್ಗೀತೆಯಲ್ಲಿ ಚಾತುರ್ವರ್ಣ ಉಲ್ಲೇಖವಿದೆಯೇ ಹೊರತು ಪಂಚಮ ವರ್ಣದ ಉಲ್ಲೇಖ ಎಲ್ಲೂ ಕಂಡುಬರುವುದಿಲ್ಲ ಎಂಬುದು ಗೊರೂರರ ಸಿದ್ಧಾಂತ. ಲೇಖಕರು ಅಸ್ಪೃಶ್ಯರ ಬಗ್ಗೆ ತೋರಿಸುವ ನಿರ್ವ್ಯಾಜ ಪ್ರೀತಿ ಗಮನಾರ್ಹವಾದದ್ದು. ಸಮಾಜದಲ್ಲಿ ಬ್ರಾಹ್ಮಣರು ಹರಿಜನರನ್ನು ಅಸ್ಪೃಶ್ಯರೆಂದು ಕರೆದರೆ ಹರಿಜನರ ದೃಷ್ಟಿಯಲ್ಲಿ ಬ್ರಾಹ್ಮಣರು ಅಸ್ಪೃಶ್ಯರೇ. ಇದಕ್ಕೆ ನಿದರ್ಶನವನ್ನು 'ಬೈಲಹಳ್ಳಿ ಸರ್ವೆ' ಕೃತಿಯಲ್ಲಿ ಮೋಜಿಮದಾರನು ದಾರಿ ತಪ್ಪಿದ ಪ್ರಸಂಗ ಉತ್ತಮ ಉದಾಹರಣೆಯಾಗಿದೆ. ಇಂತಹದೇ ಉದಾಹರಣೆಗಳು ಭೈರಪ್ಪನವರ 'ದಾಟು' ಕಾದಂಬರಿಯಲ್ಲಿ ಸಹ ನಮಗೆ ಕಂಡುಬರುತ್ತದೆ. ಇಂದು ಅಸ್ಪೃಶ್ಯತಾ ಭಾವನೆ ಸಮಾಜದಲ್ಲಿ ಕಣ್ಮರೆಯಾಗಿ ಸಮಾನತ್ವ ಭಾವನೆ, ಗುಣಗ್ರಹಣ ಭಾವನೆ ಮೂಡಿ ಬರುತ್ತಿರುವುದು ವಿಶೇಷವಾದ ಸಂಗತಿಯಾಗಿದೆ. ಲೇಖಕರು ಅಸ್ಪೃಶ್ಯರ ಬಗ್ಗೆ ಪ್ರತ್ಯೇಕವಾಗಿ ಕೃತಿ ರಚಿಸಲಿಲ್ಲ ಎಂಬ ಒಂದು ಆಪಾದನೆಯನ್ನು ಹಲವರು ಮಾಡಿದಾಗ ಅದಕ್ಕೆ ಅವರು ಕೊಟ್ಟ ಉತ್ತರ "ದಲಿತರ ಬಗ್ಗೆ ನಾನು ಪ್ರತ್ಯೇಕವಾಗಿ ಬರೆಯದೇ ಇದ್ದುದಕ್ಕೆ ಕಾರಣ, ನಾನು ಅವರನ್ನು ಬೇರೆ ಎಂದು ಎಂದೂ ಭಾವಿಸಿಲ್ಲ. ಅವರೂ ಕೂಡ ನಮ್ಮ ನಿಮ್ಮಂತಹ ಮನುಷ್ಯರೇ ತಾನೇ. ಹೀಗೆ ಮೂಲ ಸಮಾನತೆಯ ಕಾರಣಕ್ಕಾಗಿ ಅವರ ಬದುಕಿನ ಬಗ್ಗೆ ವಿಶೇಷ ಒತ್ತು ಬೀಳಲಿಲ್ಲ" ಎಂದಿದ್ದಾರೆ. (ನಾಗರಾಜ ಡಿ.ಆರ್; ೧೯೮೮; ಪು. ೩೭) ಗೊರೂರವರ ಮಾನವ ಪ್ರೇಮಕ್ಕೆ ಈ ಮಾತುಗಳು ಉತ್ತಮ ಸಾಕ್ಷಿಗಳಾಗಿವೆ. ಮಾನವತೆಯ ಬಗ್ಗೆ ಲೇಖಕರಿಗೆ ಪೂರ್ಣ ದೃಷ್ಟಿ ಇದೆ ಎಂಬುದನ್ನು ಎಂದೂ ಮರೆಯುವಂತಿಲ್ಲ.

ಮತ ಧರ್ಮಗಳನ್ನು ಪರಿಶೀಲಿಸುವಾಗ ಗೊರೂರರವರ ಚಿಂತನೆ ಹೊರ ನೋಟಕ್ಕೆ ಭಾವನಾತ್ಮಕವಾಗಿ ಕಂಡರೂ ಅದು ಆಂತರ್ಯದಲ್ಲಿ ತಾರ್ಕಿಕವಾಗಿ ಇರುತ್ತದೆ. ಜಾತಿ ಮತಗಳ ಬಗ್ಗೆ ಗೊರೂರರವರ ದೃಷ್ಟಿ ವೈಶಾಲ್ಯಕ್ಕೆ ಇಂತಹ ಚಿಂತನೆಯೇ ಮೂಲ ಕಾರಣವಾಗಿರುತ್ತದೆ. ಮಾನವನ ವೈಯಕ್ತಿಕ ಬದುಕಿಗೆ ಸಾಮಾಜಿಕ ಬದುಕಿಗೆ ತೊಡಕಾಗದೆ ಸುಖಶಾಂತಿಗೆ ಪೂರಕವಾದ ಎಲ್ಲಾ ಧರ್ಮಗಳು ಸಾಧು, ಸ್ವಾಗತಾರ್ಹ ಎಂಬುದು ಗೊರೂರರವರ ನಿಶ್ಚಲ ನಿಲುವಾಗಿದೆ. 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯಲ್ಲಿ ಗೊರೂರರವರು ಹೇಳುವ ಮಾತು "ಎಲ್ಲ ಮತಗಳಲ್ಲಿಯೂ ವ್ಯಾಸಂಗ ಮಾಡಬೇಕು. ಎಲ್ಲ ಮತಗಳೂ ಇರಬೇಕು. ಇಲ್ಲದಿದ್ದರೆ ಜಗತ್ತು ರಸಹೀನವಾಗುತ್ತದೆ. ಉದ್ಯಾನದಲ್ಲಿ ನಾನಾ ಬಗೆಯ ಹೂಗಳಿರಬೇಕು. ಒಂದೇ ಬಗೆಯ ಹೂ ಎಲ್ಲೆಲ್ಲಿಯೂ ಇದ್ದರೆ ಸ್ವಾರಸ್ಯವಿಲ್ಲ. ಎಲ್ಲ ಮತಗಳಲ್ಲಿಯೂ ಉದಾತ್ತ ತತ್ವಗಳಿವೆ. ನಾನು ಭಾರತ, ರಾಮಯಾಣ, ಭಗವದ್ಗೀತೆ, ಕುರಾನ್ ಎಲ್ಲವನ್ನು ಓದಿದ್ದೇನೆ. ಎಲ್ಲ ಹೇಳುವುದು ಒಂದೆ. ಮನುಷ್ಯ ಒಳ್ಳೆಯವನಾಗಿರಬೇಕು ಎಂದು" ಎಂದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು. ೧೦೭) ಗೊರೂರರವರು ಮತಧರ್ಮಗಳ ಬಗ್ಗೆ ವೈಯಕ್ತಿಕ ನಿರ್ಧಾರವನ್ನು ತೆಗೆದುಕೊಳ್ಳಬೇಕಾದಾಗ ಆ ಧರ್ಮ ಗ್ರಂಥಗಳನ್ನು ಆಮೂಲಾಗ್ರಾವಾಗಿ ಓದಿ ತಿಳಿಯಬೇಕು ಎನ್ನುತ್ತಾರೆ. ಧರ್ಮ ಪ್ರವರ್ತಕರ ವಿಚಾರವನ್ನು ತಿಳಿಯದೆ ಧರ್ಮದ ಬಗ್ಗೆ ಮಾತನಾಡುವುದಾಗಲಿ, ಧರ್ಮವನ್ನು ಸ್ವೀಕರಿಸುವುದಾಗಲಿ, ಧರ್ಮವನ್ನು ತ್ಯಾಜ್ಯ ಮಾಡುವುದಾಗಲಿ ತಪ್ಪು ಎಂಬುದು ಅವರ ನಿಶ್ಚಲ ನಿಲುವಾಗಿದೆ. ಮಾನವೀಯತೆಯ ನೆಲೆಗಟ್ಟಿನ ಮೇಲೆ ಹುಟ್ಟಿದ ಎಲ್ಲಾ ಧರ್ಮಗಳು ಉತ್ತಮವೇ ಆಗಿರುತ್ತವೆ. ಬದುಕಿಗೆ ಬೇಕಾದ ಸತ್ತ್ವ ಸಮರ್ಥ ಸಂಗತಿಗಳನ್ನು ಒಂದೊಂದು ಧರ್ಮದಲ್ಲಿ ಆಯಾ ಗುರುಗಳು ತಿಳಿಯಪಡಿಸುವ ರೀತಿ ಬೇರೆ ಆಗಿದ್ದರು ಆ ವಿಷಯಗಳ ಹಿನ್ನೆಲೆಯಲ್ಲಿರುವ ಸತ್ಯ ಎಂದಿಗೂ ಒಂದೇ ಆಗಿರುತ್ತದೆ. ಹೀಗೆ ಧರ್ಮದ ಮೂಲ ಸತ್ತ್ವದ ಅರಿವು ನಮಗೆ ಉಂಟಾದಾಗ ಸಮಾಜದಲ್ಲಿರುವ ಬೇರೆ ಬೇರೆ ಧರ್ಮಗಳನ್ನು ದ್ವೇಷಿಸುವುದಿಲ್ಲ, ಖಂಡಿಸುವುದಿಲ್ಲ. ಆಹಾರದಲ್ಲಿ ಸವಿಸತ್ತ್ವ ಬರಬೇಕಾದರೆ ವೈವಿಧ್ಯತೆ ಕಾಣಬೇಕಾದರೆ ಬೇರೆ ಬೇರೆ ಆಹಾರ ಪದಾರ್ಥಗಳ ರುಚಿ ಸವಿಯಲೇಬೇಕು. ಅದೇ ರೀತಿಯಲ್ಲಿ ಬದುಕಿಗೆ ಪುಷ್ಟಿ ಹಲವು ಧರ್ಮಗಳ ಮೂಲಕ ನಮಗೆ ಪ್ರಾಪ್ತವಾಗುತ್ತದೆ. ಬೇರೆ ಬೇರೆ ಧರ್ಮಗಳ ಬಗ್ಗೆ ಲೇಖಕರು ಕೊಡುವ ಉದ್ಯಾನವನದ ಉದಾಹರಣೆ ಅತ್ಯಂತ ಸಮಂಜಸವಾಗಿದೆ. ಉದ್ಯಾನವನಕ್ಕೆ ಶೋಭೆ ಒಂದು ಜಾತಿಯ ಹೂವಿನಿಂದ ಅಲ್ಲ. ಹಲವು ಜಾತಿಯ ಹೂವು ಹಣ್ಣುಗಳಿಂದ ಪ್ರಾಪ್ತವಾಗುತ್ತದೆ. ಅದೇ ರೀತಿಯಲ್ಲಿ ಉತ್ತಮ ಆದರ್ಶಗಳ ಹಿನ್ನೆಲೆಯಲ್ಲಿ ರೂಪಿತವಾಗಿರುವ ಧರ್ಮಗಳು ಸಮಾಜಕ್ಕೆ ಕ್ಷೇಮಕಾರಿ ಅಷ್ಟೇ ಅಲ್ಲ ಶೋಭಾಯಮಾನ ಎಂಬುದಾಗಿ ತಿಳಿಸಿ ಈ ಭಾವನೆಗೆ ಅನುಗುಣವಾಗಿ ಗೊರೂರರವರು ಬದುಕಿದ್ದಾರೆ, ಬರೆದಿದ್ದಾರೆ. ಧರ್ಮಗಳ ಬಗ್ಗೆ ಗೊರೂರರವರು ಹೊಂದಿರುವ ಈ ಉದಾತ್ತ ಭಾವನೆ ಎಂದಿಗೂ ಸಂಚಾರಿಭಾವವಲ್ಲ ಸ್ಥಾಯಿಭಾವ ಎಂದು ನಿರ್ವಿವಾದವಾಗಿ ಹೇಳಬಹುದು. ಗೊರೂರರವರ ಕೃತಿಗಳಲ್ಲಿ ಮತಧರ್ಮಗಳ ಸಾಮರಸ್ಯ ಭಾವನೆ ಕಂಡುಬರುವುದಕ್ಕೆ ಗೊರೂರರವರ ಈ

ಮೂಲ ದೃಷ್ಟಿಯೇ ಕಾರಣವಾಗುತ್ತದೆ. ನಿರ್ದಿಷ್ಟ ವಿಷಯದ ಬಗ್ಗೆ ಲೇಖಕರಿಗೆ ಚಿಂತನೆಯ ಪ್ರಜ್ಞೆಯು ಇದೆ, ಸಮರ್ಪಕ ಚಿಕಿತ್ಸಕ ಬುದ್ಧಿಯೂ ಇದೆ ಎಂಬುದು ಸ್ಪಷ್ಟವಾಗಿ ಅರಿವಾಗುತ್ತದೆ.

ಗೊರೂರವರ ಕೃತಿಗಳಲ್ಲಿ ಮೌಲ್ಯಗಳ ಪ್ರತಿಪಾದನೆ ಕುರಿತು ವಿವೇಚಿಸುತ್ತಾ ಸಿ.ಜಿ. ವೆಂಕಟಯ್ಯನವರು ಈ ರೀತಿ ವಿಚಾರವನ್ನು ವ್ಯಕ್ತಪಡಿಸುತ್ತಾರೆ. "ಗೊರೂರವರು ಪಾರಂಪರಿಕವಾಗಿ ಬಂದ ಕೆಲ ಭಾರತೀಯ ಮೌಲ್ಯಗಳನ್ನೂ, ಮಾನವ ನಂಬಿಕೆಗಳನ್ನೂ ಯಥಾವತ್ತಾಗಿ ಒಪ್ಪಿಕೊಳ್ಳುತ್ತಾರೆ. ಧರ್ಮ ಮತ್ತು ದೇವರಂಥ ಪರಿಕಲ್ಪನೆಗಳು ಎಂದೂ ಬದಲಾಗದವು, ನಿರ್ದಿಷ್ಟವಾದವು ಮತ್ತು ಸ್ಪಷ್ಟವಾದವು ಎಂಬ ದೃಢವಾದ ನಂಬಿಕೆ ಅವರಲ್ಲಿದೆ. ಇದೇ ರೀತಿ ಅವರು ಮತ ನಂಬಿಕೆಗಳನ್ನು ಒಪ್ಪಿಕೊಳ್ಳುತ್ತಾರೆ. ಮತ ಅಥವಾ ಜಾತಿಯ ಆಚೆಗೆ ಬದುಕಬಹುದೇ ಎಂದು ಆಲೋಚಿಸುವ ಮಟ್ಟಕ್ಕೆ ಅವರು ಹೋಗುವುದಿಲ್ಲ. ಒಟ್ಟು ಸಮಾಜದ ಹಾಗೂ ಭಾರತೀಯ ಸಮಾಜದ ಈ ಬಗೆಯ ಸ್ಥಿರ ನಂಬಿಕೆ ಅಥವಾ ಮೌಲ್ಯಗಳ ಜೊತೆಗೆ ಅವರು ಘರ್ಷಿಸುವುದಿಲ್ಲ. ಈ ಬಗೆಯ ಮೌಲ್ಯಗಳನ್ನು ಇರುವ ಹಾಗೆ ಇಟ್ಟುಕೊಂಡು ಮುಂದಿನ ಬದಲಾವಣೆ ಮತ್ತು ಮಾನವ ಸೌಹಾರ್ದತೆಯ ಕಡೆಗೆ ಅವರು ಚಿಂತಿಸುತ್ತಾರೆ". (ವೆಂಕಟಯ್ಯ ಸಿ.ಜಿ; ೧೯೯೪;ಪು.೫೦) ಇವರ ಈ ಅಭಿಪ್ರಾಯ ಅತ್ಯಂತ ಸಾಧುವಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ ಪೂಜನೀಯ ವ್ಯಕ್ತಿಯಾಗಿದ್ದಾಳೆ. ಸ್ತ್ರೀಗೆ ತೋರಿಸುವ ಗೌರವ ಸಮಾಜದ ಒಂದು ಸಲಕ್ಷಣವಾಗಿದೆ. ಮನೆಯಲ್ಲಾಗಲಿ ಸಾಮಾಜಿಕ ವಲಯದಲ್ಲಾಗಲಿ ಹೆಣ್ಣು ಶಾಂತವಾಗಿ ಸಂತೋಷವಾಗಿ ಇದ್ದರೆ ಅಂತಹ ಹೆಣ್ಣು ಇರುವ ವಾತಾವರಣ ಶಾಂತ ವಾತಾವರಣವಾಗಿರುತ್ತದೆ, ಸೌಭಾಗ್ಯ ವಾತಾವರಣವಾಗಿರುತ್ತದೆ ಎಂಬುದು ಭಾರತೀಯ ಪುರಾಣ ಕತೆಗಳ ಮೂಲಕ ಖಚಿತವಾಗುತ್ತದೆ. ಇಂತಹ ಭಾವನೆ ಇದ್ದರೂ ಇಲ್ಲಿ ಹೆಣ್ಣಿನ ಬದುಕು ಸಮಸ್ಯೆ ಸಂಕಟಗಳಿಂದ ನಲುಗಿದೆ ಎಂಬುದು ಸಹ ಅಷ್ಟೇ ಸತ್ಯವಾದ ಮಾತು. ಹೆಣ್ಣು ಅನೇಕ ಪುರುಷರ ಪಾಲಿಗೆ ಒಂದು ಸಮಸ್ಯೆಯ ವ್ಯಕ್ತಿಯಾಗಿಯೇ ಉಳಿದಿದ್ದಾರೆ ಎಂಬ ಭಾವನೆ ಬರುವಂತಹ ಪ್ರಸಂಗಗಳು ನಮ್ಮ ಸಮಾಜದಲ್ಲಿ ನಡೆದು ಹೋಗಿವೆ. ಹೆಣ್ಣಿನ ಸಮಸ್ಯೆಯ ಸುಳಿಗೆ ಆಕೆ ಸ್ವತಃ ಕೆಲಮಟ್ಟಿಗೆ ಕಾರಣ ಆದರೆ ಸಮಾಜದ ಪುರುಷ ವರ್ಗ ಬಹುಮಟ್ಟಿಗೆ ಕಾರಣ ಎಂಬ ಮಾತು ಸಹ ಅಷ್ಟೇ ನಿಜಾಂಶವಾಗಿದೆ. ಈ ಹಿನ್ನೆಲೆಯಲ್ಲಿ ಹೆಣ್ಣಿನ ಶೋಷಣೆಯನ್ನು, ಪ್ರತಿಭಟನೆಯನ್ನು, ಶಕ್ತಿಯನ್ನು ಸಾಮಾಜಿಕ ಚಿಂತಕರು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಈ ದೀರ್ಘ ಅಭ್ಯಾಸದಲ್ಲಿ ವಸ್ತು ಸ್ಥಿತಿ ವಿಷದವಾಗಿದೆಯೇ ಹೊರತು ಇದಕ್ಕೆ ಸಂಬಂಧಿಸಿದ ಪರಿಹಾರ ಸೂಚನೆಗಳು ಕಂಡುಬಂದರೂ ಅವುಗಳು ಕಾರ್ಯ ರೂಪಕ್ಕೆ ಬಾರದಿರುವುದು ಒಂದು ದುರಾದೃಷ್ಟದ ಸಂಗತಿಯಾಗಿದೆ. ಸಾಹಿತಿಗಳು ಹೆಣ್ಣಿನ ಈ ವಿವಿಧ ಸ್ಥಿತಿಯ ಬಗ್ಗೆ ಸ್ಪಂದಿಸಿರುವ ಸನ್ನಿವೇಶ ಗಳನ್ನು ಅವರ ಕೃತಿಗಳಲ್ಲಿ ನೈಜವಾಗಿ ಮನೋಜ್ಞವಾಗಿ ಕಾಣಬಹುದು. ಗೊರೂರವರು ತಮ್ಮ ಕೃತಿಗಳಲ್ಲಿ ಈ ಅಂಶಗಳನ್ನು ಸಮರ್ಥ ರೀತಿಯಲ್ಲಿ ಪ್ರತಿಬಿಂಬಿಸಿದ್ದಾರೆ.

ಸ್ತ್ರೀಯನ್ನು ಅಬಲೆ ಎಂದು ಪಟ್ಟಕಟ್ಟಿ ಆಕೆಯನ್ನು ಕತ್ತಲಲ್ಲಿ ಉಳಿಸಿ ಆಕೆಗೆ ದೌರ್ಜನ್ಯ ಮಾಡಿರುವ ಪುರುಷ ವರ್ಗ ನಿಜಕ್ಕೂ ಖಂಡನೀಯ. ಹೆಣ್ಣಿಗೆ ದೊರೆಯಬೇಕಾದ ಸ್ಥಾನಮಾನಗಳನ್ನು ಅವಕಾಶಗಳನ್ನು ವಂಚಿಸಿ ಪುರುಷರು ತಮ್ಮ ಪ್ರತಿಷ್ಠೆಯನ್ನು ತೋರಿಸಿಕೊಳ್ಳುವುದರ ಜೊತೆಗೆ ತಮ್ಮ ಸ್ವಾರ್ಥ ಲಾಭಗಳನ್ನು ಪೂರೈಸಿಕೊಂಡಿದ್ದಾರೆ. ಹೆಣ್ಣನ್ನು ದೈಹಿಕವಾಗಿ ಮಾನಸಿಕವಾಗಿ ದೌರ್ಜನ್ಯಕ್ಕೆ ಒಳಗು ಮಾಡಿದ್ದಾರೆ. ಹೆಣ್ಣಿನ ದೌರ್ಜನ್ಯಕ್ಕೆ ಪುರುಷನ ಪ್ರತಿಷ್ಠೆಯೇ ಮೂಲ ಕಾರಣವಾಗಿರುತ್ತದೆ. ಹುಟ್ಟಿನಿಂದಲೇ ತಾನು ಮೇಲು ಎಂಬ ಕುರುಡು ಪ್ರತಿಷ್ಠೆಗೆ ಬಲಿಯಾದ ಪುರುಷ ವರ್ಗ ಹೆಣ್ಣನ್ನು ಮೆಟ್ಟಿ ಆಳಬೇಕು ಎಂಬ ಕೊಬ್ಬಿನಲ್ಲಿ ಹೆಣ್ಣಿನ ಮೇಲೆ ಮಾಡಿರುವ ದೌರ್ಜನ್ಯ ಅಸಂಖ್ಯಾತವಾಗಿದೆ. ಇದಕ್ಕೆ ನಿದರ್ಶನವನ್ನು ಗೊರೂರವರ ಕೃತಿಗಳಲ್ಲಿ ಕಂಡುಕೊಳ್ಳಬಹುದು. 'ವೈಯಾರಿ' ಕೃತಿಯಲ್ಲಿ 'ದೃಷ್ಟಿಲಾಭ' ಒಂದು ಅತ್ಯುತ್ತಮ ಕತೆ. ಈ ಕತೆಯಲ್ಲಿ ಶೇಷುವಿನ ಪಾತ್ರ ಹಾಗೂ ಜಾನಕಿಯ ಪಾತ್ರ ಎರಡೂ ಚಿತ್ತಾಕರ್ಷಕ ವಾಗಿವೆ. ಇಲ್ಲಿ ಶೇಷು ಜಾನಕಿಯ ಸಹಾಯದಿಂದ ಓದಿ ವಿದ್ಯಾವಂತನಾಗುತ್ತಾನೆ. ಸರ್ಕಾರಿ ನೌಕರಿಯು ದೊರಕುತ್ತದೆ. ಜಾನಕಿಯೊಂದಿಗೆ ಶೇಷು ಕೆಲ ಕಾಲ ಸಂಸಾರ ನಡೆಸುತ್ತಾನೆ. ಆನಂದಳ ಪರಿಚಯವಾದ ಮೇಲೆ ಶೇಷು ಜಾನಕಿಯನ್ನು ತಾತ್ಸಾರ ಭಾವನೆಯಲ್ಲಿ ಕಾಣುತ್ತಾನೆ. ನೊಂದ ಜಾನಕಿ ತನ್ನ ಸಂಕಟವನ್ನು ಆತ್ಮೀಯರೊಂದಿಗೆ ಹೇಳಿಕೊಂಡಾಗ ಶೇಷು ಕೊಡುವ ಉತ್ತರ ನಾನು ಜಾನಕಿಯನ್ನು ಮದುವೆಯಾಗುವಾಗ ನನಗೆ ಕಣ್ಣು ಕುರುಡಾಗಿತ್ತು, ನನಗೆ ಈಗ ಅವಳು ಬೇಡ ಎಂದು ಬೇಜಾಬ್ದಾರಿ ಉತ್ತರವನ್ನು ಕೊಡುತ್ತಾನೆ. ಆದರೆ ಶೇಷು ಆನಂದಳ ಜೊತೆಯಲ್ಲಿ ಸಂಸಾರ ನಡೆಸುತ್ತಿರುವಾಗ ಇವನಿಗೆ ಸಿಡುಬು ರೋಗ ತಗಲುತ್ತದೆ. ಅವನ ಕಣ್ಣು ದೃಷ್ಟಿ ಹೋಗುತ್ತದೆ. ಶೇಷುವಿನ ಎರಡನೇ ಹೆಂಡತಿ ಆನಂದಳು ಶೇಷುವನ್ನು ಬಿಟ್ಟು ಹೊರಟು ಹೋಗುತ್ತಾಳೆ. ಕೊನೆಗೆ ಗಂಡನ ಈ ಸ್ಥಿತಿಯನ್ನು ಕುರಿತು ಜಾನಕಿಗೆ ಪತ್ರ ಬರೆದಾಗ ಜಾನಕಿ ಕಳೆದು ಹೋದ ನನ್ನ ವಸ್ತು ಮತ್ತೆ ಕೈ ಸೇರಿತು ಎಂದು ಆನಂದದಿಂದ ಶೇಷುವಿನೊಂದಿಗೆ ಸಂಸಾರ ಮಾಡಲು ಬರುತ್ತಾಳೆ. ಅನಾರೋಗ್ಯದಲ್ಲಿದ್ದ ಶೇಷುವನ್ನು ಜಾನಕಿ ಉಪಚರಿಸಿ ಆತನ ಮನಸ್ಸಿಗೆ ಸಮಾಧಾನವನ್ನು ತರುತ್ತಾಳೆ. ಆಗ ಶೇಷು "ಹೋದ ಕಣ್ಣು ನನಗೆ ಬಂದಿತು, ದೃಷ್ಟಿ ಲಾಭವಾಯಿತು" ಎಂದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೩೮) ಈ ಮಾತು ಅತ್ಯಂತ ಧ್ವನಿಪೂರ್ಣವಾಗಿದೆ. ಜಾನಕಿ ಒಂದು ಮಗುವಿಗೆ ತಾಯಿಯಾಗಿ ತನ್ನ ಬದುಕಿನ ಸಾರ್ಥಕತೆಯಿಂದ ಸಂತೃಪ್ತಳಾಗುತ್ತಾಳೆ. ಈ ಕತೆಯಲ್ಲಿ ಶೇಷು ಕೇವಲ ಕಾಮುಕನಾಗಿ ಮೊದಲನೆ ಹೆಂಡತಿಯನ್ನು ತಿರಸ್ಕೃತ ಮನೋಭಾವದಿಂದ ನೋಡಿ ಬಿಟ್ಟು ಹೋದದ್ದು ಜಾನಕಿಗೆ ಆದ ಶೋಷಣೆ ಆಯಿತು. ಇಂಥ ಶೋಷಣೆಗೆ ಜಾನಕಿ ಒಳಗಾದರೂ ಮತ್ತೆ ಶೇಷು ಆಕೆಯನ್ನು ತನ್ನ ಕಷ್ಟ ಕಾಲದಲ್ಲಿ ಆಹ್ವಾನಿಸಿದಾಗ ಅವಳು ತೋರಿಸುವ ಔದಾರ್ಯ ಮೆಚ್ಚುವಂತಹುದು. ಶೇಷುವಿನ ಎರಡನೆ ಹೆಂಡತಿ ಆನಂದಳ ಕ್ರೂರ ಸ್ವಾರ್ಥ ವರ್ತನೆಯು ಇಲ್ಲಿ ಖಂಡನೀಯ. ವಿವೇಕ ರಹಿತನಾಗಿ ಪುರುಷ ಮಾಡುವ ಸ್ತ್ರೀ ಶೋಷಣೆ ಇಲ್ಲಿ ಓದುಗರನ್ನು ಎಚ್ಚರಿಸುತ್ತದೆ.

ಹೆಣ್ಣಿನ ತಂದೆ ತಾಯಿಗೆ ತಮ್ಮ ಕನ್ಯೆಯನ್ನು ಮದುವೆ ಮಾಡಿಕೊಡದ ಹೊರತು ಮಗಳಿಗೆ ಮದುವೆ ಮಾಡಲಿಲ್ಲ - ಕನ್ಯಾ ಸೆರೆ ಬಿಡಿಸಲಿಲ್ಲ ಎಂಬ ಆಕ್ಷೇಪಣೆ ತಪ್ಪಿದ್ದಲ್ಲ. ಆದರೆ ಈ ಅಪವಾದ ತಪ್ಪಿಸಿಕೊಳ್ಳಲು ಅನೇಕ ತಂದೆ ತಾಯಿಗಳು ಮದುವೆಯನ್ನು ಮಾಡುತ್ತಾರೆ. ಆದರೆ ಮಾಡಿದ ಮದುವೆ ವಿಫಲವಾದಾಗ ಹೆಣ್ಣು ಪಡುವ ಸಂಕಟ ತೀವ್ರವಾದದ್ದು. 'ಹೇಮಾವತಿ' ಕಾದಂಬರಿಯಲ್ಲಿ ಹೇಮಾವತಿ ಇಂತಹ ವಿವಾಹದ ಬಗ್ಗೆ ಆಡಿಕೊಳ್ಳುವ ನೋವಿನ ಮಾತು "ಗಂಡನಿರುವುದರಿಂದ ಸನಾಥೆಯಾದೆ. ಆ ಗಂಡನಿಗೆ ನಾನು ಬೇಡವಾದುದರಿಂದ ಅನಾಥೆಯು ಆದೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್ ;೨೦೦೪; ಪು. ೧೯೮) ಎಂದು ಕೊರಗುತ್ತಾಳೆ. ಹಿತವಿಲ್ಲದ ವಿವಾಹ ಹೇಮಾವತಿಗೆ ನೋವನ್ನು ತಂದು ಕೊಟ್ಟಿತು. ಇಂತಹ ವಿವಾಹವನ್ನು ಮಾಡಿ ತನ್ನ ತಂದೆ ನೆಮ್ಮದಿಯನ್ನು ಕಳೆದುಕೊಂಡನು, ಆಸ್ತಿಯನ್ನು ಕಳೆದುಕೊಂಡನು ಎಂದು ಪರಿತಪಿಸುತ್ತಾಳೆ. ಇಂಥ ಸ್ಥಿತಿಯಲ್ಲಿ ಹೆಣ್ಣು ಮದುವೆಯಾಗದೆ ತಂದೆಯ ಮನೆಯಲ್ಲಿಯೇ ಇರಕೂಡದೆ? ಎಂದು ಪ್ರಶ್ನೆ ಹಾಕಿಕೊಳ್ಳುತ್ತಾಳೆ. ವಿಷಮ ಸಂಸಾರಕ್ಕೆ ಒಳಗಾದ ಅನೇಕ ಹೆಣ್ಣು ಮಕ್ಕಳ ಈ ಪ್ರಶ್ನೆಗೆ ಉತ್ತರ ಸಿಗದೆ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿರುವುದನ್ನು ಗೊರೂರವರು ಮರು ಪ್ರಶ್ನೆಯ ಮೂಲಕ ಸಮಾಜವನ್ನು ಎಚ್ಚರಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಹೆಣ್ಣನ್ನು ಒಂದು ಸೆರೆಯಿಂದ ಬಿಡಿಸಿ ಇನ್ನೊಂದು ಸೆರೆಗೆ ತಳ್ಳುವುದೇ ವಿವಾಹವೆ? ಎಂದು ಹೇಮಾವತಿ ಯಥಾವತ್ತಾಗಿ ಪ್ರಶ್ನಿಸಿರುವುದು ಸೋಜಿಗವಾದರೂ ಸತ್ಯದ ಸಂಗತಿ. ಕೂಲಿ ಮಾಡಿ ಬದುಕುವ ಹೇಮಾವತಿಗೆ ಶತ್ರು ಮಿತ್ರರ್‍ಯಾರು ಎಂಬ ವ್ಯತ್ಯಾಸ ಕಾಣದಿರುವುದು ಅವಳ ಬದುಕಿನ ದುರಂತಕ್ಕೆ ಮತ್ತೊಂದು ಸಾಕ್ಷಿಯಾಗಿದೆ. ಹೆಣ್ಣನ್ನು ದುಡುಮೆಯ ಕೂಪಕ್ಕೆ ತಳ್ಳಿ ನಿರ್ದಯ ಸ್ಥಿತಿಯಲ್ಲಿ ಸಮಾಜ ಉಳಿದಾಗ ಹೆಣ್ಣಿಗೆ ರಕ್ಷಕರು ಅಪರೂಪ ಎಂಬ ಸಂಗತಿ ಇಲ್ಲಿ ಧ್ವನಿತವಾಗಿದೆ.

ಅನೇಕ ಸಂದರ್ಭಗಳಲ್ಲಿ ಗಂಡಸರು ಹೆಣ್ಣಿಗೆ ಕೊಡಬೇಕಾದ ಸ್ವಾತಂತ್ರ್ಯವನ್ನು ಕೊಡದೆ ಅವರಿಗೆ ಅನ್ಯಾಯ ಮಾಡಿರುವುದುಂಟು. ಇದಕ್ಕೆ ಗಂಡಸರು ಕೊಡುವ ಸಮರ್ಥನೆಯ ಮಾತನ್ನು ಗೊರೂರವರ 'ಉಸುಬು' ಕೃತಿಯಲ್ಲಿ ನರಸಿಂಹನ ಮಾತುಗಳಲ್ಲಿ ಗುರುತಿಸಬಹುದು. "ಇಲ್ಲಿ ಇಷ್ಟು ನೋಡು ಹೆಂಗಸರ ಗುಲಾಮನಾಗಬಾರದು. ಅನಂತರ ನಿನ್ನನ್ನು ತುಳಿದು ಹಾಕಿ ಬಿಡುತ್ತಾರೆ. ಗಂಡ ಯಾವಾಗಲೂ ಶೌರ್ಯ ಪರಾಕ್ರಮದ ಸಂಕೇತ. "Women is the Very devil" ಎನ್ನುತ್ತಿದ್ದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೫೪; ಪು. ೬೨-೬೩) ಈ ಮಾತುಗಳಲ್ಲಿ ಪುರುಷನ ಸ್ವಾರ್ಥ ಹಾಗೂ ದಬ್ಬಾಳಿಕೆಯ ವರ್ತನೆಗೆ ಕಾಣುವ ಹೊಸ ಅರ್ಥ ಇದು ಕೇವಲ ಗಂಡಸಿನ ಕುಂಟು ನೆಪ ಎನಿಸುತ್ತದೆ. ಇಂತಹ ಅಸಾಧು ಭಾವನೆಗಳಿಂದ ಹೆಂಗಸರು ಪುರುಷನಿಂದ ಸಮಾಜದಲ್ಲಿ ನೋವಿಗೀಡಾಗಿದ್ದಾರೆ. ಹೆಣ್ಣನ್ನು ಭರವಸೆಯ ಭಾವನೆಯಲ್ಲಿ ಗಂಡು ಕಾಣಬೇಕೆ ಹೊರತು ಅಪನಂಬಿಕೆಯ ಭಾವನೆಯಲ್ಲಿ ಅಲ್ಲ ಎಂಬದನ್ನು ಲೇಖಕರು ಇಲ್ಲಿ ವಿಚಾರ ಮಾಡಿದ್ದಾರೆ.

ಹೆಣ್ಣು ಅತ್ಯಾಚಾರಕ್ಕೆ ಒಳಗಾದ ಸಂದರ್ಭದಲ್ಲಿ ಆಕೆಯನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ನೋಡುವುದು ಸಮಾಜದ ರೀತಿಯಾಗಿರುತ್ತದೆ. ಆಕೆಗೆ ತಾನೇ ಅಪರಾಧಿ ಎಂಬ ಆಲೋಚನೆ ಬರುವಷ್ಟರ ಮಟ್ಟಿಗೆ ಅವಳ ಬುದ್ಧಿ ವಿಕಲಿತವಾಗುವುದನ್ನು ಅನೇಕ ಸಂದರ್ಭಗಳಲ್ಲಿ ಗುರುತಿಸಬಹುದು. 'ಊರ್ವಶಿ' ಕಾದಂಬರಿಯಲ್ಲಿ ಭಾವನಿಂದ ಅತ್ಯಾಚಾರಕ್ಕೆ ಒಳಗಾದ ಸೀತಾಲಕ್ಷ್ಮಿ ಈ ಆಲೋಚನೆಯಲ್ಲಿಯೇ ತನ್ನ ಬದುಕು "ದೇವರಿಗೆ ಮಾಡಿದ್ದ ನೈವೇದ್ಯ ನಾಯಿಯ ಪಾಲಿಗಾಯಿತು ಅಯ್ಯೋ! ಅಯ್ಯೋ! ಇದರಲ್ಲಿ ತಪ್ಪು ನನ್ನದ್ದಲ್ಲ. ಸೀತಾದೇವಿಯನ್ನು ಪರೀಕ್ಷಿಸಿದಂತೆ ಪರೀಕ್ಷಿಸಿ .... ಅಗೋ ರಾವಣ .... ಇವನು ಕಿರಾತ ದುಶ್ಯಾಸನ .... ಎಚ್ಚರಿಕೆಯ ಭಾಗ್ಯ ಯಾರಿಗೂ ಸ್ಥಿರವಲ್ಲ. ಇದು ಅಜ್ಞಾನ, ಕೊಲ್ಲಬೇಡಿ, ಅಗ್ನಿಪರೀಕ್ಷೆ ...." ಎಂದು ಸೀತಾಲಕ್ಷ್ಮಿ ಆಕ್ರಂದನ ಮಾಡುತ್ತಾಳೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪ ; ಪು. ೩೬) "ಗಂಡನಿಂದ ಪ್ರಥಮ ಆಲಿಂಗನ ಚುಂಬನವನ್ನು ಸಹ ಅನುಭವಿಸದಿದ್ದ ಆಕೆ ಗರ್ಭವತಿಯಾಗಿದ್ದಳು" (ಅದೇ; ಪು.೩೭) ಎಂದು ಸೀತಾಲಕ್ಷ್ಮಿಯ ದುರಂತವನ್ನು ಗೊರೂರವರು ಮಾರ್ಮಿಕವಾಗಿ ತಿಳಿಸಿದ್ದಾರೆ. ಈ ಮಾತಿನಲ್ಲಿ ನೋವಿನ ತೀವ್ರತೆಯನ್ನು ಕಾಣಬಹುದು. ನರಸಿಂಹನಂತಹ ಪಿಶಾಚಿಗಳು ಜಗತ್ತಿನಲ್ಲಿದ್ದರು ಜಗತ್ತು ಮರಣಕ್ಕಿಂತ ಹೆಚ್ಚು ಆಕರ್ಷಣೀಯವಾಗಿ ತೋರಿತು ಎಂಬ ಮಾತಿನಲ್ಲಿ ಸೀತಾಲಕ್ಷ್ಮಿ ನೋವಿನ ಮಧ್ಯೆಯು ಬದುಕಿನ ಧೈರ್ಯವನ್ನು ವ್ಯಕ್ತಪಡಿಸಿದ್ದಾಳೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಹೆಣ್ಣಿನ ಬದುಕಿನಲ್ಲಿ ಆಕಸ್ಮಿಕವಾಗಿ ಒಂದು ಅಚಾತುರ್ಯ ನಡೆದು ಹೋದಾಗ ಅದನ್ನು ಸುತ್ತಲ ಸ್ತ್ರೀ ಸಮೂಹ ವಿಚಾರ ಮಾಡುವ ರೀತಿ, ಚರ್ಚಿಸುವ ಪರಿ ಎಷ್ಟು ವಿಚಿತ್ರವಾಗಿರುತ್ತದೆ ಎಂಬುದನ್ನು ಗೊರೂರವರು ಚಿತ್ರಿಸಿದ ಕಾವೇರಮ್ಮ, ರುಕ್ಕಮ್ಮ, ಪದ್ಮಾವತಿ, ಶಾರದ ಇವರ ಸಂಭಾಷಣೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಕಾವೇರಮ್ಮ ಇಂಥ ರಂಡೇನ ಹಿಡ್ಕೊಂಡು ಬಂದು ಸೀಳಿ ಚೂರು ಚೂರು ಮಾಡಿ ಸಿಗಿದು ತೋರಣ ಕಟ್ಟುತಿದ್ರು. ಈ ಕಲಿಕಾಲದಲ್ಲಿ ದೇವರೂ ಇಲ್ಲ, ಧರ್ಮವೂ ಇಲ್ಲ ಎಂದು ವ್ಯಂಗ್ಯವಾಗಿ ನುಡಿಯುತ್ತಾಳೆ. ಅದಕ್ಕೆ ರುಕ್ಕಮ್ಮ ಅವಳನ್ನೇನೋ ಸಿಗಿದು ತೋರಣ ಕಟ್ತಾ ಇದ್ರಿ. ಅವನಿಗೊ? ಅವನಿಗೇನೂ ಶಿಕ್ಷೆ ಇಲ್ವೋ? ಎಂದು ಸಹಜವಾಗಿ ಪ್ರಶ್ನಿಸುತ್ತಾಳೆ. ಈ ಸಹಜವಾದ ಪ್ರಶ್ನೆಗೆ ಪದ್ಮಾವತಿ ಕೊಡುವ ಉತ್ತರ ಹಾಸ್ಯವಾಗಿ ಇದ್ದರು ಅದು ಬೇಜವಾಬ್ದಾರಿಯುತವಾಗಿದೆ. "ಗಂಡಸರನ್ನು ಕೇಳೋರು ಯಾರು? ಅವರು ಹೇಗೆ ಕುಣಿದರೂ ನಡೆದು ಹೋಗುತ್ತೆ. ಕಡೇಲಿ ಕಷ್ಟ ಅನುಭವಿಸೋರು ಹೆಂಗಸರು. ಗಂಡಸರು ಎಚ್ಚರ ತಪ್ಪಿ ನಡೆದರೂ "ಏನೋ ಆಗಿ ಹೋಯ್ತು" ಎನ್ನುತ್ತಾರೆ. ಹೆಂಗಸರು ಎಚ್ಚರ ತಪ್ಪಿ ನಡೆದರೆ "ಬೀದಿಯ ನಾಯಿಯಾದರೂ ಅವಳಿಗಿಂತ ವಾಸಿ" ಎಂಬಂತೆ ಆಗುತ್ತದೆ ಎನ್ನುತ್ತಾಳೆ. (ಅದೇ; ಪು. ೪೨) ಇದಕ್ಕೆ ಶಾರದಮ್ಮ ಕೊಡುವ ಉತ್ತರ ಇದು ಬಹಳ ಅನ್ಯಾಯಮ್ಮ. ನ್ಯಾಯ ಧರ್ಮ ಹೆಣ್ಣು ಗಂಡು ಇಬ್ಬರಿಗೂ ಒಂದೇ ಸಮನಾಗಿ ಇರಬೇಕು. ಗಂಡ ತಪ್ಪು ಮಾಡಿದರು ಅವನಿಗೆ ಮರ್ಯಾದೆ, ಹೆಣ್ಣು ಮಾಡಿದರೆ ಮಾತ್ರ ಅವಳಿಗೆ ನರಕ. ಹೀಗೆ ಆಗುವ ಹೊತ್ತಿಗೆ ನಾವು

ಹಾಳಾಗಿರುವುದು ಎಂದು ಶಾರದಮ್ಮ ಸಮಂಜಸವಾಗಿ ನುಡಿಯುತ್ತಾಳೆ. ಸ್ತ್ರೀಯ ಸ್ಥಿತಿಯ ಬಗ್ಗೆ ಸಂಭಾಷಣೆ ಮುಂದುವರೆದಾಗ ಚಿಕ್ಕ ವಯಸ್ಸಿನವರೆಲ್ಲಾ ಪುರುಷರು ರಾಕ್ಷಸರಾದ್ದರಿಂದ ಅವನನ್ನು ಧ್ವಂಸ ಮಾಡಿ ಕಾಲ ಕೆಳಗೆ ಹಾಕಿ ತುಳಿಯಬೇಕು ಎಂದರು. ವನಿತಾ ಸಮಾಜದ ಕಾರ್ಯದರ್ಶಿ ಲೀಲಾವತಿಯವರು ಎರಡು ಸಾವಿರದ ವರ್ಷಗಳಿಂದ ಗಂಡಸರು ಹೆಂಗಸರನ್ನು ಗುಲಾಮಗಿರಿಯಲ್ಲಿ ಇಟ್ಟಿದ್ದಾರೆ. ನ್ಯಾಯವನ್ನು ತಿಳಿದ ಭಗವಂತನೆಂಬುವನು ಒಬ್ಬನಿದ್ದರೆ ಪುರುಷರನ್ನೆಲ್ಲಾ ನಾಲ್ಕು ಸಾವಿರ ವರುಷ ಸ್ತ್ರೀಯರ ಗುಲಾಮರನ್ನಾಗಿ ಮಾಡಬೇಕು ಎಂದು ಅಭಿಪ್ರಾಯ ಕೊಡುತ್ತಾಳೆ. ವನಮಾಲೆಯು ಇದಕ್ಕೆಲ್ಲಾ ಮೂಲ ಪುರುಷ ನಿರ್ಮಿತವಾದ ಹಿಂದೂ ಧರ್ಮಶಾಸ್ತ್ರ ಆದುದರಿಂದ ನಾವು ಆ ಶಾಸ್ತ್ರವನ್ನೆಲ್ಲಾ ಬೆಂಕಿಗೆ ಹಾಕಿ ಅದನ್ನು ಪ್ರತಿಭಟಿಸುವ ಪುರುಷರನ್ನು ಅದರ ಜತೆಯಲ್ಲೆ ಹಾಕಿ ಸ್ತ್ರೀಯರ ಸರ್ವಾಧಿಕಾರವನ್ನು ಸ್ಥಾಪಿಸುವ ಹೊಸ ಧರ್ಮಶಾಸ್ತ್ರವನ್ನು ಬರೆಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾಳೆ. ಈ ವಾದದಲ್ಲಿ ಪುರುಷರ ಅನ್ಯಾಯವು ಸ್ಪಷ್ಟವಾಗಿ ಉಲ್ಲೇಖಿತ ವಾಗಿದೆ. ಇದರ ಜತೆಗೆ ವಾದದ ಕೊನೆಯಲ್ಲಿ ಸ್ತ್ರೀಯರ ಸರ್ವಾಧಿಕಾರತ್ವವನ್ನು ಸ್ಥಾಪಿಸುವ ಹೊಸ ಧರ್ಮಶಾಸ್ತ್ರ ಹುಟ್ಟಿರಬೇಕೆಂಬ ಮತ್ತೊಂದು ಅತಿರೇಕದ ಅನರ್ಥದ ಆಲೋಚನೆಯು ಇಲ್ಲಿ ಕೇಳಿ ಬರುತ್ತದೆ. ಗೊರೂರವರು ಪುರುಷ ಹಾಗೂ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಮಾಡುವ ಈ ಚರ್ಚೆಯಲ್ಲಿ ಪರ - ವಿರೋಧವನ್ನು ವ್ಯಕ್ತಪಡಿಸುವುದರ ಜತೆಗೆ ಕೊಡುವ ತಿರ್ಮಾನದ ಮಾತು ಅಷ್ಟೇ ಗಮನಾರ್ಹವಾಗಿದೆ. ಒಂದು ತಪ್ಪನ್ನು ಖಂಡಿಸುವ ಸಲುವಾಗಿ ಮತ್ತೊಂದು ತಪ್ಪನ್ನು ಮಾಡಬಾರದು. ಒಂದು ಗಾಯ ಮಾಗುವುದಕ್ಕೆ ಹಚ್ಚುವ ಮದ್ದು ಮತ್ತೊಂದು ಹೊಸ ಗಾಯಕ್ಕೆ ಕಾರಣವಾಗಬಾರದು ಎಂಬ ಸೂಕ್ಷ್ಮ ನೀತಿ ಇಲ್ಲಿ ಸ್ಪಷ್ಟವಾಗಿರುವುದು ಅತ್ಯಂತ ಮಾನವೀಯವಾದ ಸಂಗತಿಯಾಗಿದೆ. ಯಾವುದೇ ವಿಷಯದ ಬಗ್ಗೆ ನಡೆದ ವಾದ ವಿವಾದದಲ್ಲಿ ಆರೋಗ್ಯಕರವಾದ ತೀರ್ಮಾನ ಫಲ ಶೃತಿಯಾಗಿ ಮೂಡಿ ಬರಬೇಕೆ ಹೊರತು ಅಪಾಯಕಾರಿ, ಆತಂಕಕಾರಿ ಅಭಿಪ್ರಾಯಗಳು ಎಂದಿಗೂ ಮೂಡಿ ಬರಬಾರದು ಎಂಬುದು ಲೇಖಕರ ಸ್ಪಷ್ಟ ಧೋರಣೆಯಾಗಿದೆ. ಈ ವಿಷಯಗಳಲ್ಲಿ ಗೊರೂರವರು ತೋರಿಸುವ ಚಿಕಿತ್ಸಕ ದೃಷ್ಟಿ ಅತ್ಯಂತ ಶ್ಲಾಘನೀಯವಾದದ್ದು.

ನಿಂದೆಗೆ ಒಳಗಾಗಿದ್ದ ಸೀತಾಲಕ್ಷ್ಮಿ ನಿಂದನೆಯ ಭಾರವನ್ನು ತಾಳಲಾರದೆ ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಒಮ್ಮೆ ನಿಶ್ಚಯಿಸುತ್ತಾಳೆ. ಆದರೆ ಅದೇ ಗಳಿಗೆಯಲ್ಲಿ ಅವಳ ಮನಸ್ಸಿನಲ್ಲಿ ಮೂಡಿದ ವಿಚಾರ "ನನ್ನದು ತಪ್ಪಿಲ್ಲ, ನನ್ನದೆಷ್ಟು ತಪ್ಪೋ ನರಸಿಂಹನದೂ ಅಷ್ಟೇ ತಪ್ಪು. ನರಸಿಂಹ ಏನೂ ನಡೆಯದವನಂತೆ ಸುಖವಾಗಿ ಇರಬಹುದಾದರೆ, ನರಸಿಂಹನನ್ನು ಸಭ್ಯ ಗೃಹಸ್ಥನೆಂದು ಎಲ್ಲರೂ ಗೌರವಿಸುತ್ತಿರಬೇಕಾದರೆ ನಾನ್ಯಾಕೆ ಸಾಯಬೇಕು" (ಅದೇ; ಪು. ೮೨-೮೩) ಎಂದು ಆಕೆ ಸಾವಿನೆಡೆಯಿಂದ ಓಡಿ ಬಂದಿದ್ದಳು. ಅತ್ಯಾಚಾರಕ್ಕೆ ಒಳಗಾದ ಎಲ್ಲ ಹೆಣ್ಣಿನಲ್ಲಿಯೂ ಆತ್ಮಹತ್ಯೆಯ ದುಡುಕು ನಿರ್ಧಾರ ಕಣ್ಮರೆಯಾಗಿ ಅದಕ್ಕೆ ಪ್ರತಿಯಾಗಿ ಬದುಕುವ ದಿಟ್ಟ ನಿಲುವು ಉಳಿಯಬೇಕು ಎಂಬುದು ಗೊರೂರವರ ಅಭಿಪ್ರಾಯವಾಗಿದೆ. ಇದೇ ಸಂದರ್ಭದಲ್ಲಿ ಧೈರ್ಯ ಕಳೆದುಕೊಂಡು ಹೇಗೋ ಧೈರ್ಯ ಉಳಿಸಿಕೊಂಡ

ಹೆಣ್ಣಿಗೆ ಅನೇಕ ಸಂದರ್ಭಗಳಲ್ಲಿ ಮನೆಯಲ್ಲಿ ಅಂಥ ಹೆಣ್ಣಿನ ಹತ್ತಿರದ ಬಂಧುಗಳೆ ಕೊಂಕು ನುಡಿಯನ್ನು ನುಡಿದು ಅವಳನ್ನು ಮತ್ತೆ ಮಾನಸಿಕವಾಗಿ ನೋವಿಗೆ ಒಳಗು ಮಾಡುವುದುಂಟು. ಈ ನೋವನ್ನು ಸೀತಾಲಕ್ಷ್ಮಿ ಅನುಭವಿಸಿದ್ದಾಳೆ. ಸಮಾಜದಲ್ಲಾಗಲಿ ಸಂಸಾರದಲ್ಲಾಗಲಿ ಇಂತಹ ವಿಷ ವರ್ತುಲ ಇಲ್ಲದಿಲ್ಲ ಎಂಬುದನ್ನು ಇದೇ ಕಾದಂಬರಿಯಲ್ಲಿ ಸೀತಾಲಕ್ಷ್ಮಿ ಪಾತ್ರದ ಮೂಲಕ ಚೆನ್ನಾಗಿ ಮನನ ಮಾಡಿಕೊಳ್ಳಬಹುದು.

ಇದೇ ಕೃತಿಯಲ್ಲಿ ರಾಮನಾಥನು ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಮಂಡಿಸುವ ವಿಚಾರಧಾರೆ ಅತ್ಯಂತ ಗಮನಾರ್ಹವಾದದ್ದಾಗಿದೆ. ಇಲ್ಲಿಯ ವಿಚಾರ ಲಹರಿ ಸಕಾರಣವಾಗಿದೆ. ಹೆಣ್ಣಿಗೆ "ರಾಜಕೀಯವಾಗಿ ಮಾತ್ರ ಸ್ತ್ರೀಯರಿಗೆ ಸ್ವಾತಂತ್ರ್ಯ ಬಂದರೆ ಸಾಲದು. ಅಥವಾ ಕಾನೂನು ಅವರಿಗೆ ಕೊಡುವ ಸ್ವಾತಂತ್ರ್ಯದಿಂದಲೂ ಅವರಿಗೆ ಹೆಚ್ಚು ಸುಖವಾಗುವುದಿಲ್ಲ. ಸಂಸಾರದಲ್ಲಿಯೂ ಸಮಾಜದಲ್ಲಿಯೂ ಅವರಿಗೆ ಹೆಚ್ಚು ಸ್ವಾತಂತ್ರ್ಯ ದೊರೆಯಬೇಕು. ಸಮಾಜದಲ್ಲಿ ಅವರ ಸ್ವಾತಂತ್ರ್ಯವನ್ನು ಪುನರುಜ್ಜೀವಿಸುವುದಕ್ಕಾಗಿ ಪುರುಷರಾದ ನಾವೇ ಸಮಾಜಕ್ಕೆ ಎದುರಾಗಿ ಸತ್ಯಾಗ್ರಹ ಹೂಡಬೇಕು. ಪುರುಷರು ಸ್ತ್ರೀಯರ ವಿಷಯದಲ್ಲಿ ಮಾಡಿದ ಪಾಪಕ್ಕೆ ಇದೇ ತಕ್ಕ ಪ್ರಾಯಶ್ಚಿತ್ತ" ಎನ್ನುತ್ತಾನೆ. (ಅದೇ; ಪು.೯೧) ಈ ಮಾತುಗಳಲ್ಲಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಸ್ಪಷ್ಟ ಅಭಿಪ್ರಾಯಗಳು ದಟ್ಟವಾಗಿವೆ. ಕಾನೂನು ಕಟ್ಟಳೆಗಿಂತ ಸ್ತ್ರೀಯನ್ನು ನಡೆಸಿಕೊಳ್ಳುವ ರೀತಿಯಲ್ಲಿ ನಾವು ವಿವೇಕವನ್ನು ತೋರಿಸಿದರೆ ಅದು ನಾವು ಹೆಣ್ಣಿಗೆ ಕೊಡುವ ನಿಜವಾದ ಸ್ವಾತಂತ್ರ್ಯ, ಅರ್ಥಪೂರ್ಣ ಸ್ವಾತಂತ್ರ್ಯ ಆಗುತ್ತದೆ ಎಂಬ ಸತ್ಯಾಂಶ ಇಲ್ಲಿ ಮೆಚ್ಚುವಂತಹದು. ವಿಚಾರವಾದಿಗಳು ಎಲ್ಲರೂ ಈ ಸ್ಪಷ್ಟ ವಿವೇಕವನ್ನು ಮೆಚ್ಚಿಕೊಳ್ಳುತ್ತಾರೆಂದು ನಾವು ಭಾವಿಸಿ ಆಶಿಸಬಹುದು. ಹೆಣ್ಣಿಗೆ ಸ್ವಾತಂತ್ರ್ಯದ ಮಾತು ಕನ್ನಡಿಯೊಳಗಿನ ಗಂಟಾಗಿ ಅಷ್ಟೇ ಉಳಿಯಬಾರದು. ಪುರಾಣಗಳಲ್ಲಿ, ಧರ್ಮ ಶಾಸ್ತ್ರಗಳಲ್ಲಿ ನಾವು ಹೆಣ್ಣಿನ ಪತಿ ಸೇವೆಯನ್ನು ತ್ಯಾಗವನ್ನು ಯಥೇಚ್ಛವಾಗಿ ಕಾಣಬಹುದು. ಆದರೆ ಇದೇ ರೀತಿಯಲ್ಲಿ ಹೆಣ್ಣಿಗೆ ಸೇವೆ ಮಾಡಿದ, ಹೆಣ್ಣಿಗಾಗಿ ತ್ಯಾಗ ಮಾಡಿದ ಗಂಡಸಿನ ಕತೆ ಯಾವುದು ಇಲ್ಲವೆಂದು ರಾಮನಾಥ ವಿಷಾದಿಸು ವುದು ಸಮಂಜಸವಾಗಿದೆ. "ಹೆಣ್ಣಿನ ಬಾಳನ್ನು ಹಾಳಾಗಿಸಿ ಗಂಡು ಸುಖವಾಗಿ ತಿರುಗುವುದನ್ನು ಸಹಿಸುವ ನಾವು ಹೇಡಿಗಳು" (ಅದೇ; ಪು. ೯೨) ಎಂದು ರಾಮನಾಥನು ಕೊಡುವ ತೀರ್ಪು ಸೀತಾಲಕ್ಷ್ಮಿ ಬದುಕಿಗೆ ಕೊಟ್ಟ ತೀರ್ಪಾಗಿದೆ. ಲೇಖಕರು ಕಥೆಯ ಹಿನ್ನೆಲೆಯಲ್ಲಿ ಹೀಗೆ ಸಮಂಜಸವಾದ ಚರ್ಚೆಯನ್ನು ತಂದು ಸಹೃದಯರನ್ನು ವಿಚಾರಪರರನ್ನಾಗಿ ಪರಿವರ್ತಿಸಿ ಸಾಹಿತ್ಯದ ಉದ್ದೇಶವನ್ನು ಸಾರ್ಥಕಗೊಳಿಸಿದ್ದಾರೆ.

ವೇದಿಕೆಯ ಮೇಲೆ ಯೌವ್ವನದ ಉತ್ಸಾಹದಲ್ಲಿ ವಿದ್ಯಾವಂತರೆಂಬ ಅಭಿಮಾನದಿಂದ ಅನೇಕ ವೇಳೆ ಸುಧಾರಣೆಗಳ ಬಗ್ಗೆ ಚರ್ಚೆ ಮಾಡುವ, ಉಪನ್ಯಾಸ ಮಾಡುವ ವಿಚಾರವಾದಿಗಳನ್ನು ಕಂಡಿದ್ದೇವೆ. ನಿಜವಾದ ಸುಧಾರಣೆ ಉಪನ್ಯಾಸದ ಮಾತಿನ ಆರ್ಭಟದಿಂದ ಸಾಧಿತವಾಗುವುದಿಲ್ಲ. ಅಷ್ಟೇ ಅಲ್ಲದೆ ಮಾತಿನಲ್ಲಿ ಸುಧಾರಣೆಗಳ ಭಾವನೆಗಳನ್ನು ಹೇಳಿ ನಿಜ ಜೀವನದ ವರ್ತನೆಯಲ್ಲಿ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ವ್ಯಕ್ತಿಗಳನ್ನು ಕಂಡಿದ್ದೇವೆ. ಲೇಖಕರು ಈ ವೈಚಿತ್ರ್ಯವನ್ನು ತಮ್ಮ ಕೃತಿಗಳಲ್ಲಿ ಕೆಲವು

ಕಡೆ ತೋರಿಸಿಕೊಟ್ಟಿದ್ದಾರೆ. 'ಶಿವರಾತ್ರಿ' ಕೃತಿಯಲ್ಲಿ ಗೊರೂರರವರು ರಂಗಸ್ವಾಮಿಯ ಪಾತ್ರದಲ್ಲಿ ಇಂತಹ ವರ್ತನೆಯನ್ನು ಗುರುತಿಸುತ್ತಾರೆ. ರಂಗಸ್ವಾಮಿ ಗೊರೂರರವರ ಗೆಳೆಯ. ರಂಗಸ್ವಾಮಿ ವಿದ್ಯಾರ್ಥಿ ಜೀವನ ದಲ್ಲಿ ಕ್ರಾಂತಿಕಾರಿ ಆಲೋಚನೆಗಳನ್ನು ಅನೇಕ ಸಂದರ್ಭಗಳಲ್ಲಿ ಪ್ರಕಟಿಸಿದ್ದನು. ಸ್ತ್ರೀ ಸ್ವಾತಂತ್ರ್ಯವನ್ನು ಕುರಿತು ಆತ ಮಾಡಿದ್ದ ಅಮೋಘ ಚರ್ಚೆಯನ್ನು ಗೊರೂರರವರು ಕೇಳಿ ತಿಳಿದು ಮೆಚ್ಚಿಕೊಂಡಿದ್ದರು. ಒಮ್ಮೆ ರಂಗಸ್ವಾಮಿ ತನ್ನ ಹೆಂಡತಿಯ ಜತೆಯಲ್ಲಿ ಊರಿಗೆ ಬಂದಾಗ ಕಣ್ಣೆದುರಿಗೆ ನಡೆದ ಘಟನೆ ಗೊರೂರರವರಿಗೆ ಅಚ್ಚರಿಯನ್ನು ತರುತ್ತದೆ. ಬಸ್ಸಿನಲ್ಲಿ ರಂಗಸ್ವಾಮಿಯ ಹೆಂಡತಿಯೊಬ್ಬಳೇ ಪ್ರಯಾಣ ಮಾಡಿ ಬಂದಿದ್ದಾಳೆ. ಬಸ್ಸು ಚಾಲಕನ ತಪ್ಪಿನಿಂದ ಆಕೆ ತನ್ನ ಹಳ್ಳಿಯ ಬಳಿ ಇಳಿಯಲಾಗಲಿಲ್ಲ. ಸ್ವಲ್ಪ ದೂರದಿಂದ ಆಕೆ ಲಗ್ಗೇಜನ್ನು ಹೊತ್ತುಕೊಂಡು ನಡೆದು ಬರುತ್ತಾಳೆ. ರಂಗಸ್ವಾಮಿ ಅವಳ ಕಷ್ಟದ ಸ್ಥಿತಿಯನ್ನು ಕಂಡು ಅನುಕಂಪ ತೋರಿಸುವ ಬದಲು ಆಕೆಯನ್ನು ಅತ್ಯಂತ ಒರಟಾಗಿ ನಿಂದಿಸುತ್ತಾನೆ ಮತ್ತು ಖಂಡಿಸುತ್ತಾನೆ. ಇದನ್ನು ಕಂಡ ಗೊರೂರರವರಿಗೆ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಭಾಷಣ ಮಾಡಿದ ವ್ಯಕ್ತಿ ನಡೆದುಕೊಳ್ಳುವ ರೀತಿ ಹೀಗಾ ಎಂದು ಪ್ರಶ್ನಿಸಿಕೊಳ್ಳುತ್ತಾರೆ. ಮಾತು ನಡವಳಿಕೆಯಲ್ಲಿ ಅನೇಕ ವೇಳೆ ಇಂಥ ವ್ಯತ್ಯಾಸವನ್ನು ಗೊರೂರರವರು ಗುರುತಿಸಿದಾಗ ಇಂತಹ ವಿಚಿತ್ರ ವ್ಯಕ್ತಿಗಳನ್ನು ತಪ್ಪದೆ ಸಮಾಜಕ್ಕೆ ಪರಿಚಯ ಮಾಡಿಕೊಟ್ಟು ಸಮಾಜವನ್ನು ಎಚ್ಚರಿಸಿದ್ದಾರೆ. ಇಂದು ನಾವು ಕ್ರಾಂತಿಕಾರಿ ಘೋಷಣೆಗಳ ಜತೆಗೆ ವಾಸ್ತವ ವರ್ತನೆಯನ್ನು ಅಪೇಕ್ಷಿಸುತ್ತೇವೆ ಎಂಬುದು ಕಟು ಸತ್ಯ.

ವರದಕ್ಷಿಣೆಯ ಪಿಡಿಗಿನಿಂದ ಹೆಣ್ಣು ಪಟ್ಟಿರುವ ನೋವು ತೀವ್ರವಾಗಿರುತ್ತದೆ. ಗ್ರಾಮೀಣ ಪ್ರದೇಶ ದಲ್ಲಿ ಇಂಥ ರೀತಿಯ ಘಟನೆಗಳನ್ನು ಸಾಕಷ್ಟು ಕಾಣಬಹುದು. ವರದಕ್ಷಿಣೆ ಹೆಣ್ಣಿನ ತಂದೆಗೂ ಸಹ ಹೇಳಲಾಗದ ಸಂಕಟವನ್ನು ಉಂಟು ಮಾಡುತ್ತದೆ. 'ಹೇಮಾವತಿ' ಕಾದಂಬರಿಯಲ್ಲಿ ಹೇಮಾವತಿಯ ತಂದೆ ರಾಮಣ್ಣ ಪೆರುಮಾಳರು ಹಾಗೂ ಹೇಮಾವತಿ ವರದಕ್ಷಿಣೆಯ ಪಿಡಿಗಿನಿಂದ ಅನುಭವಿಸಿದ ನೋವನ್ನು ಗೊರೂರರವರು ಯಥಾವತ್ತಾಗಿ ಚಿತ್ರಿಸಿದ್ದಾರೆ. ಹೇಮಾವತಿಯ ಮದುವೆಯ ಸಂದರ್ಭದಲ್ಲಿ ಸೀತಮ್ಮ ವರದಕ್ಷಿಣೆಯ ಬಗ್ಗೆ ಕೊಡುವ ಪಟ್ಟು ಅತಿ ಗಂಭೀರವಾಗಿರುತ್ತದೆ. ಹಣ ಹಾಗೂ ಬೆಳ್ಳಿಯ ವಸ್ತುಗಳ ಮೂಲಕ ಸೀತಮ್ಮ ಬೀಗರನ್ನು ದೋಚಲು ಪಟ್ಟು ಹಿಡಿದಿದ್ದಾಳೆ. ಇವರ ಬೇಡಿಕೆಯ ಪಟ್ಟಿಯನ್ನು ಕಂಡ ಹೇಮಾವತಿ ತನ್ನ ತಂದೆಯ ನೋವನ್ನು ಅರ್ಥ ಮಾಡಿಕೊಳ್ಳುತ್ತಾಳೆ. ಆಕೆ ಮನಸ್ಸಿನ ಸಂಕಟವನ್ನು ಆಕ್ರೋಶವನ್ನು ಹೇಳುವಾಗ "ಅಪ್ಪ ನನ್ನ ಮಾತನ್ನು ಕೇಳಿ. ನನಗೆ ಯಾಕೋ ಏನೋ ಒಂದು ವಿಧವಾದ ಭಯವಾಗುತ್ತಿದೆ. ಮದುವೆಯ ಸಂಭ್ರಮವೇ ನನಗೆ ತೋರುವುದಿಲ್ಲ. ಅವರಲ್ಲಿ ನನಗೆ ಅಂತಹ ಪ್ರೇಮ ಇಲ್ಲ. ನಿಮ್ಮ ಹತ್ತಿರ ಈಗ ಮತ್ತೆ ಎರಡು ಸಾವಿರ ರೂಪಾಯಿ ಎಲ್ಲಿದೆ? ಈ ಮದುವೆ ಬೇಡವೇ ಬೇಡ ಏರ್ಪಾಡುಗಳನ್ನು ನಿಲ್ಲಿಸಿಬಿಡಿ" ಎನ್ನುತ್ತಾಳೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೧೫) ಇದಕ್ಕೆ ತಂದೆ ಬಂದ ವರಗಳನ್ನೆಲ್ಲಾ ಬಿಟ್ಟುಕೊಂಡು ಹೋದರೆ ಆಗುತ್ತದೆಯೇ? ಆಮೇಲೆ ವರಗಳೇ ಬರುವುದಿಲ್ಲ ಎಂದಾಗ ಹೇಮಾವತಿ "ಅಪ್ಪಾ ಬರದಿದ್ದರೆ ಬೇಡ ನನಗೆ ಮದುವೆಯೇ ಬೇಡ.

ಮನೆಯಲ್ಲಿಯೇ ಇದ್ದು ಬಿಡುತ್ತೇನೆ" ಎಂದಳು. (ಅದೇ; ಪು. ೧೧೬) ಈ ಮಾತುಗಳಲ್ಲಿ ವರದಕ್ಷಿಣೆಯ ಬಾಧೆಗೆ ಬಲಿಯಾದ ಹೇಮಾವತಿಯ ನೋವು ಮಡುಗಟ್ಟಿ ನಿಂತಿದೆ. ಗಂಡಿನ ಕಡೆಯವರ ವರ್ತನೆ ಹೆಣ್ಣಿನ ಮನಸ್ಸಿನ ಮೇಲೆ ಉಂಟು ಮಾಡುವ ಆಘಾತದ ಪರಿಣಾಮವನ್ನು ಇಲ್ಲಿ ಚೆನ್ನಾಗಿ ಮನಗಾಣಬಹುದು. ಇಂತಹ ಸ್ಥಿತಿಯಲ್ಲಿ ಹೆಣ್ಣಿನ ತಂದೆ ರಾಮಣ್ಣ ಪೆರುಮಾಳರು ಆಡುವ ಮಾತು "ಅದು ನನಗೂ ಇಷ್ಟ. ಆದರೆ ನನ್ನ ಸುಖಕ್ಕಾಗಿ ನಿನ್ನನ್ನು ಬಲಿ ಕೊಡಲೆ, ನೋಡಿದವರು ಏನಂದಾರು. ನಿನ್ನ ಜೀವನವನ್ನು ನಿನ್ನ ಗಂಡನ ಮನೆಯಲ್ಲಿ ಬಾಳಬೇಕಮ್ಮ. ನನ್ನ ಪಾಡು" (ಅದೇ) ಎಂದಾಗ ಹೇಮಾವತಿಯ ತಂದೆಯ ನೋವು ನಮಗೆ ಮನವರಿಕೆಯಾಗುತ್ತದೆ. ಹೆಣ್ಣಿನ ತಂದೆ ವರದಕ್ಷಿಣೆಯ ಒತ್ತಡ ಎಷ್ಟೇ ತೀವ್ರವಾಗಿದ್ದರು ಅದನ್ನು ಅನಿವಾರ್ಯವಾಗಿ ಸಹಿಸಿಕೊಳ್ಳಲೇಬೇಕಾದ ಪರಿಸ್ಥಿತಿ ಸಮಾಜದಲ್ಲಿ ಉಂಟಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಮನವರಿಕೆ ಮಾಡಿಕೊಳ್ಳಬಹುದು. ವರದಕ್ಷಿಣೆಯ ಬಾಧೆ ತಾಳಲಾರದ, ತಪ್ಪಿಸಿಕೊಳ್ಳಲಾರದ ಬಾಧೆ ಎಂಬುದನ್ನು ಹೇಮಾವತಿ ಹಾಗೂ ಅವಳ ತಂದೆಯ ಮಾತುಗಳಲ್ಲಿ ಲೇಖಕರು ಸ್ಪಷ್ಟಪಡಿಸಿದ್ದಾರೆ.

ಅನೇಕ ವೇಳೆ ವರನಿಗೆ ವರದಕ್ಷಿಣೆಯ ಅಪೇಕ್ಷಣೆ ಇಲ್ಲದಿರುವುದುಂಟು. ಆದರೆ ವರನ ತಂದೆ ಬಳಗದವರಿಗೆ ಮಾತ್ರ ತೀವ್ರವಾಗಿ ಇರುತ್ತದೆ. ಇದಕ್ಕೆ ಉದಾಹರಣೆಯನ್ನು ಗೊರೂರರವರ 'ಉಸುಬು' ಕೃತಿಯಲ್ಲಿ ಕಾಣಬಹುದು. ವರನಿಗೆ ಅಪೇಕ್ಷೆ ಇಲ್ಲದಿದ್ದಾಗ ವರದಕ್ಷಿಣೆ ಇಲ್ಲದೆ ಮದುವೆ ಆದ ಘಟನೆಯನ್ನು ಇದೇಕೃತಿಯಲ್ಲಿ ಗುರುತಿಸಬಹುದು. ವರದಕ್ಷಿಣೆಯ ಸ್ವರೂಪವು ಸಹ ಅನೇಕ ರೀತಿಯಲ್ಲಿ ಇರುತ್ತದೆ. ಹಣ, ಇದರ ಜತೆಗೆ ಬೇರೆ ಬೇರೆ ಅಮೂಲ್ಯ ವಸ್ತುಗಳು ವರದಕ್ಷಿಣೆ ಪಟ್ಟಿಯಲ್ಲಿ ಸೇರುತ್ತವೆ. ವರನಿಗೆ ಅಗತ್ಯವಿಲ್ಲದಿದ್ದರೂ ವರನ ತಂದೆ, ವರನ ಬಳಗದವರು ದೇವರ ಪಾತ್ರೆಗಳನ್ನು, ಅಳತೆ ಮೀರಿದ ಬಂಗಾರದ ಒಡವೆಗಳನ್ನು, ಬೆಳ್ಳಿಯ ಪಾತ್ರೆಗಳನ್ನು, ವಾಹನ ಮುಂತಾದವುಗಳನ್ನು ಕೇಳುತ್ತಾರೆ. ಕೃಷ್ಣ ಈ ಎಲ್ಲ ವಸ್ತುಗಳನ್ನು ನಿರಾಕರಿಸುವ ಅಂತದಲ್ಲಿರುವುದು ಗಮನಾರ್ಹ. ಇಷ್ಟದರೂ ವರನ ತಂದೆ ಶ್ರೀನಿವಾಸಯ್ಯನಂತೆ ವರದಕ್ಷಿಣೆಗೆ ಹಿಡಿದ ಪಟ್ಟನ್ನು ಬಿಡದೆ ಇರುವುದುಂಟು. ಹುಡುಗಿಯನ್ನು ಮೆಚ್ಚಿಕೊಂಡು ಹುಡುಗ ವರದಕ್ಷಿಣೆಯನ್ನು ಉಪೇಕ್ಷಿಸಿದರೆ ಶ್ರೀನಿವಾಸಯ್ಯ "ಆ ರಂಭೆಯ ಹುಚ್ಚು ಹತ್ತಿದೆಯಲ್ಲ ಇಲ್ಲದಿದ್ದರೆ ಯಾವುದಾದರೂ ಕಾರಣದಿಂದ ರಾಮಯ್ಯನನ್ನು ಹಿಡಿದು ಅಮುಕಿ ಎರಡು ಸಾವಿರ ಕಕ್ಕಿಸ್ತಿದ್ದೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೫೪; ಪು. ೭೭) ಎಂದು ಗರ್ಜಿಸುವ ತಂದೆಯು ಇದ್ದಾರೆ. ವರದಕ್ಷಿಣೆ ಕೇಳುವ ಸಮಯದಲ್ಲಿ ವರ, ಅವನ ತಂದೆ ತಾಯಿ ಕೇಳುವುದಕ್ಕೆ ಜೊತೆಯಾಗಿ ವರನ ಬಳಗದವರು ವರೋಪಚಾರ ಪಟ್ಟಿಯನ್ನು ಬೆಳೆಸುವುದು ಹಾಸ್ಯಾಸ್ಪದವಾದರೂ ಸತ್ಯದ ಸಂಪ್ರದಾಯವಾಗಿ ಉಳಿದು ಬಂದಿರುವುದು ಗಮನಾರ್ಹ ಸಂಗತಿಯಾಗಿದೆ. ನ್ಯಾಯಕ್ಕೆ ಬಳಗದವರ ಸಹಕಾರ ಕಡಿಮೆ ಇದ್ದರೂ ಅನ್ಯಾಯಕ್ಕೆ ಹೆಚ್ಚಿರುತ್ತದೆ ಎಂಬ ಮಾತನ್ನು ಇಲ್ಲಿ ಮನನ ಮಾಡಿಕೊಳ್ಳಬಹುದು.

ವರದಕ್ಷಿಣೆಯ ಪಿಡುಗು ಸಮಾಜದ ಎಲ್ಲಾ ಜಾತಿ ವರ್ಗಗಳಲ್ಲಿಯೂ ಇಂದು ಕಂಡುಬರುವ ಸಾಮಾನ್ಯ ಸಂಗತಿಯಾಗಿದೆ. ಗ್ರಾಮೀಣ ಪರಿಸರದಲ್ಲಿ ವರದಕ್ಷಿಣೆ ಸ್ವರೂಪ ಮುಖ್ಯವಾಗಿ ಹಣವಾಗಿದ್ದರೆ ನಗರ ಪ್ರದೇಶದಲ್ಲಿ ಚಿನ್ನ, ವಾಹನಗಳು, ನಿವೇಶನಗಳದ್ದಾಗಿರುತ್ತದೆ. ವರದಕ್ಷಿಣೆ ನಿಷೇಧಿಸಿ ಕಾನೂನಿನ ಕಟ್ಟಳೆ ಇದ್ದರು ಅದರ ಅಲಕ್ಷ್ಯ ಅಷ್ಟೇ ದುರಂತವಾಗಿದೆ. ಒಂದು ಕಾಲಕ್ಕೆ ವರೋಪಚಾರ ಬಡತವದ ವಲಯದಲ್ಲಿ ಅನಿವಾರ್ಯ ಅಂಶವಾಗಿತ್ತು. ಇಂದು ಶ್ರೀಮಂತ ವರ್ಗದಲ್ಲಿ ವರದಕ್ಷಿಣೆ ಪಡೆಯುವುದು ಪ್ರತಿಷ್ಠೆಯ ಸಂಗತಿಯಾಗಿದೆ. ವರದಕ್ಷಿಣೆಯ ಸ್ವರೂಪ ವರದಕ್ಷಿಣೆಗೆ ಕಾರಣ ಬೇರೆ ಏನೇ ಆಗಿದ್ದರು ವರದಕ್ಷಿಣೆಯ ಉಪಟಳ ಸಮಾಜದಲ್ಲಿ ಜೀವಂತವಾಗಿರುವುದು ದುರಂತದ ವಿಚಾರವಾಗಿದೆ. ವರದಕ್ಷಿಣೆ ನಿರ್ಮೂಲನೆ ವ್ಯಕ್ತಿಯ ಜಾಗೃತಿಯ ಮೂಲಕ ಮಾತ್ರ ಸಾಧ್ಯವಾದೀತು. ಹೆಣ್ಣು ವರದಕ್ಷಿಣೆಯನ್ನು ಪ್ರತಿಭಟಿಸುವ ಮೂಲ ಶಕ್ತಿಯಾಗಿ ಉಳಿಯಬೇಕು. ಇಂತಹ ಪ್ರತಿಭಟನಾ ಶಕ್ತಿ ಹೆಣ್ಣಲ್ಲಿ ಕಂಡು ಬರಬೇಕಾದರೆ ಹೆಣ್ಣು ವಿದ್ಯಾವಂತಳಾಗಿ ಇರಬೇಕು, ಸ್ವಾವಲಂಬಿಯಾಗಿರಬೇಕು. ಆಗ ಸಮಾಜದಲ್ಲಿ ಪುರುಷ ವರ್ಗ ವರದಕ್ಷಿಣೆಯನ್ನು ಕೇಳಲು ಬಾಯಿ ಕಟ್ಟಿದಂತೆ ಆಗುತ್ತದೆ. ಹೇಮಾವತಿಯಂತೆ ದಿಟ್ಟ ಪ್ರವೃತ್ತಿ ಸಮಾಜದ ಸ್ತ್ರೀ ವರ್ಗದಲ್ಲಿ ಹೆಚ್ಚಾಗಿ ಕಂಡುಬರಬೇಕು. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ದೊರೆತಾಗ ವರದಕ್ಷಿಣೆಯ ಪಿಡುಗು ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ವರದಕ್ಷಿಣೆಯನ್ನು ಕೇಳುವುದು, ಕೊಡುವುದು ಸಂಸ್ಕೃತಿಯ ದೃಷ್ಟಿಯಿಂದ ಅಪಮಾನಕರ ಸಂಗತಿ ಎಂಬುದು ನಮ್ಮ ಸಮಾಜದಲ್ಲಿ ಮೂಡಿ ಬಂದರೆ ಹೆಣ್ಣು ವರದಕ್ಷಿಣೆಯ ಕಾಟದಿಂದ ಮುಕ್ತಳಾಗಬಹುದು. ಗಾಂಧೀಜಿಯವರ ಚಳುವಳಿಯಲ್ಲಿಯೂ ಸಹ ವರದಕ್ಷಿಣೆಯ ವಿರೋಧವನ್ನು ಪ್ರಧಾನವಾಗಿ ಗುರುತಿಸಬಹುದು. ಗೊರೂರವರು ಈ ವೈಚಾರಿಕ ಕ್ರಾಂತಿಯನ್ನು ತಮ್ಮ ಕೃತಿಗಳಲ್ಲಿ ಅರ್ಥಪೂರ್ಣವಾಗಿ, ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಮದುವೆ ಮಾರಾಟದ ಚಟುವಟಿಕೆಯಾಗಬಾರದು ಎಂಬ ಜಾಗೃತ ಪ್ರಜ್ಞೆ ಸಮಾಜದ ಪುರುಷ ವರ್ಗದಲ್ಲಿ ಪ್ರಮುಖ ವಾಗಿ ಮೂಡಿ ಬರಬೇಕು. ಮದುವೆ ಪರಿಶುದ್ಧ ಪ್ರೇಮದ ಹೃದಯ ಸಂಬಂಧವಾಗಬೇಕೆ ಹೊರತು ಹಣದ ಬಾಂಧವ್ಯದ ಕೂಟ ಎಂದಿಗೂ ಆಗಲೇಬಾರದು.

ವ್ಯಕ್ತಿಯಲ್ಲಿ ಲೈಂಗಿಕ ಪ್ರವೃತ್ತಿ ವಿಕೃತವಾಗುವುದನ್ನು ಮನೋವಿಜ್ಞಾನಿಗಳು ಅನೇಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ ವಿಚಾರ ಮಾಡಿರುವುದುಂಟು. ಉತ್ತಮ ಜಾತಿಯವರಲ್ಲಿ ಲೈಂಗಿಕ ಮನೋವಿಕಾರಗಳು ಗಂಡಸಿನ ಮನಸ್ಸಿನಲ್ಲಿ ಉಂಟಾದಾಗ ಅವನ ಮನೋವಿಕಾರಕ್ಕೆ ಬಲಿ ಆಗುವುದು ಬಹುಮಟ್ಟಿಗೆ ಅನ್ಯ ಜಾತಿಯರು, ಅದರಲ್ಲಿಯೂ ಕೆಳಜಾತಿಯರು. ಗ್ರಾಮೀಣ ಪ್ರದೇಶದಲ್ಲಿ ಇಂತಹ ಪ್ರಸಂಗಗಳು ಕಂಡು ಬರುವುದು ಹೊಸದೇನು ಅಲ್ಲ. ಗೊರೂರವರು ಉತ್ತಮ ಜಾತಿಯವರ ಈ ಮನೋವಿಕಾರವನ್ನು ಲೈಂಗಿಕ ಶೋಷಣೆ ಎಂದು ಪರಿಭಾವಿಸಿರುವುದು ಸಮಂಜಸ ಎನಿಸುತ್ತದೆ. ಕೀಳುಜಾತಿಯ ಹೆಣ್ಣು ಮಕ್ಕಳು ಉತ್ತಮ ಜಾತಿಯವರ ಈ ಶೋಷಣೆಗೆ ಬಲಿಯಾಗಿ ಪಡುವ ಸಂಕಟವನ್ನು 'ಹೇಮಾವತಿ' ಕಾದಂಬರಿಯಲ್ಲಿ ಗೊರೂರವರು ಉಲ್ಲೇಖಿಸಿದ್ದಾರೆ. ಕಾವೇರಿ ಅಗ್ರಹಾರದ ಠಕ್ಕ ವೈದಿಕ ಶ್ಯಾನುಭೋಗ ಕೃಷ್ಣಸ್ವಾಮಿ ಮತ್ತು

ರಾಮಕೃಷ್ಣನ ಪ್ರಸಂಗ ಗೊರೂರರವರು ಕೊಡುವ ಉದಾಹರಣೆಗಳಾಗಿವೆ. ಕಿಲಾಡಿ ಕಿಟ್ಟು (ಕೃಷ್ಣಸ್ವಾಮಿ) ಅಗಸಗಿತ್ತಿಯ ಸಂಪರ್ಕ ಮಾಡುವುದು ಒಂದು ರೀತಿಯ ಲೈಂಗಿಕ ಶೋಷಣೆ. ದೇವಕಿ ಪ್ರಿಯನಾದ ಕಿಟ್ಟು ವಸೂಲಿ ಮಾಡಿದ ಕಂದಾಯವನ್ನೆಲ್ಲಾ ದೇವಕಿಯ ಸಂಸಾರಕ್ಕೆ ವಿನಿಯೋಗಿಸುವಷ್ಟು ಕಾಮವಿಕಾರಿಯಾಗಿದ್ದ. ಕಿಟ್ಟುವಿನ ಮೊದಲ ಸಂಸಾರ ನಿರ್ಗತಿಕ ಸ್ಥಿತಿಗೆ ಬಂದದ್ದು ಮತ್ತೊಂದು ದುರಂತ. ಈ ಪ್ರಸಂಗದಲ್ಲಿ ಶೋಷಣೆ ಒಂದು ಅಂಶವಾದರೆ ಗಂಡಸರ ಕೌಟುಂಬಿಕ ಬೇಜಾವ್ದಾರಿತನ ಮತ್ತೊಂದು ಅಂಶವಾಗಿದೆ. ರಾಮಕೃಷ್ಣನ ಪ್ರಸಂಗದಲ್ಲಿ ಹೊಲತಿ ಲಕ್ಕಿಯನ್ನು ರಾಮಕೃಷ್ಣ ಸಾಕುತ್ತೇನೆ ಎಂದರೂ ಲಕ್ಕಿಗೆ ಆತನ ಮೇಲೆ ವಿಶ್ವಾಸ ಇರುವುದಿಲ್ಲ. ಆಕೆ ತನ್ನ ಬಳಗದವರಿಂದಲೇ ಶಿಕ್ಷೆ ಅನುಭವಿಸುವುದಕ್ಕೆ ಸಿದ್ಧಳಾಗಿ ರಾಮಕೃಷ್ಣನನ್ನು ತೊರೆಯುತ್ತಾಳೆ. ಈ ದುರಂತದಲ್ಲಿಯೂ ಲೈಂಗಿಕ ಶೋಷಣೆಯೇ ಪ್ರಧಾನ ವಿಷಯವಾಗಿದೆ. ಈ ಎರಡೂ ಪ್ರಸಂಗಗಳಲ್ಲಿ ಶೋಷಣೆ ಮಾಡಿದ ವೈದಿಕ ಬ್ರಾಹ್ಮಣರು ಸ್ವಲ್ಪವೂ ನಾಚಿಕೆ ಇಲ್ಲದೆ ಡಾಂಭಿಕ ವೇಷವನ್ನು ಧರಿಸಿ ಶುದ್ಧ ವೈದಿಕರಾಗಿ ಮೆರೆಯುವ ಪ್ರಸಂಗ ಅತಿ ಹಾಸ್ಯಾಸ್ಪದವಾಗಿದೆ. ಉತ್ತಮ ಜಾತಿಯವರಲ್ಲಿ ಕಾಣಿಸಿಕೊಳ್ಳುವ ಇಂತಹ ಸೋಗಲಾಡಿತವನ್ನು ಗೊರೂರರವರು ಲೈಂಗಿಕ ಶೋಷಣೆಯ ಜೊತೆಗೆ ಪ್ರಾಸಂಗಿಕವಾಗಿ ತಿಳಿಸಿದ್ದಾರೆ. ಹಳ್ಳಿಯ ಚಿತ್ರಗಳನ್ನು ಯಥಾವತ್ತಾಗಿ ನಿರೂಪಿಸುವ ಗೊರೂರರವರ ಬರವಣಿಗೆಯಲ್ಲಿ ಎಲ್ಲಾ ರೀತಿಯ ಹಳ್ಳಿಯ ಸಂಗತಿಗಳನ್ನು ಚಾಚೂ ತಪ್ಪದಂತೆ ಗುರುತಿಸಬಹುದು.

ಹಳ್ಳಿಗಳಲ್ಲಿ ಹೆಣ್ಣು-ಗಂಡಿನ ಸಂಬಂಧ ಆತ್ಮೀಯವಾಗಿ ಇರುವುದರ ಜೊತೆಗೆ ಆತ್ಮಗೌರವದಿಂದ ಕೂಡಿರುತ್ತದೆ ಎಂಬ ಮಾತು ಅಷ್ಟೇ ಮುಖ್ಯವಾಗಿರುತ್ತದೆ. ದುಡಿಮೆಯ ದೃಷ್ಟಿಯಿಂದ ನೋಡಿದರೆ ಹೆಣ್ಣು ಗಂಡು ಇಬ್ಬರು ಗ್ರಾಮಸಮಾಜದಲ್ಲಿ ಸರಿಸಾಟಿಯಾಗಿ ದುಡಿಯುತ್ತಾರೆ. ಬೇಸಾಯದ ಬದುಕಿನಲ್ಲಿ ಅವರಿಬ್ಬರ ದುಡಿಮೆಯ ಅನ್ಯೋನ್ಯತೆ ಎದ್ದು ಕಾಣುತ್ತದೆ. ಈ ಅನ್ಯೋನ್ಯತೆ ಇದ್ದಾಗಲೇ ಬೇಸಾಯದ ಬದುಕು ಫಲಿತವಾಗುತ್ತದೆ, ಸಾರ್ಥಕವಾಗುತ್ತದೆ, ಸಂತೋಷಕರವಾಗಿ ಇರುತ್ತದೆ. ಬ್ರಾಹ್ಮಣ ವರ್ಗದಲ್ಲಿ ಹೆಣ್ಣು-ಗಂಡಿನ ಪಾತ್ರ ಸಮಪಾಲಿನ ಜವಾಬ್ದಾರಿಯ ಪಾತ್ರವಾಗಿ ಅಷ್ಟು ಪರಿಪೂರ್ಣವಾಗಿ ಕಂಡುಬರುವುದಿಲ್ಲ. ಇದಕ್ಕೆ ಮುಖ್ಯವಾದ ಕಾರಣ ವೈದಿಕರಲ್ಲಿ ಕಾಣುವ ಧರ್ಮಾಚರಣೆ. ಈ ಧರ್ಮಾಚರಣೆಯ ಹಂತದಲ್ಲಿ ಹೆಣ್ಣು ಎಂದಿಗೂ ಗಂಡಿಗೆ ಸರಿಸಾಟಿ ಆಗಲಾರಳು. ಇದಕ್ಕೆ ಮುಖ್ಯ ಕಾರಣ ವೈದಿಕ ಆಚರಣೆಯಲ್ಲಿರುವ ಕೆಲವು ನಿಷೇಧದ ಕಟ್ಟುಪಾಡುಗಳು ಹೆಣ್ಣನ್ನು ಎರಡನೆಯ ಸ್ಥಾನದಲ್ಲಿ ಉಳಿಸಿದೆ. ಸಂಸಾರದ ಆರ್ಥಿಕ ಜವಾಬ್ದಾರಿಯಲ್ಲಿ ಹೆಣ್ಣು-ಗಂಡು ಇಬ್ಬರು ಸರಿಸಾಟಿಯಾಗಿ ಸರಿಸಮವಾಗಿ ದುಡಿಯುವುದನ್ನು ಗ್ರಾಮೀಣ ಬದುಕಿನಲ್ಲಿ ಗುರುತಿಸಬಹುದು. ಈ ಸಂಗತಿಗಳನ್ನು ಕಂಡಾಗ ಗ್ರಾಮೀಣ ಸಮಾಜದಲ್ಲಿ ಗಂಡು ಹೆಣ್ಣಿಗೆ ಕೊಟ್ಟಿರುವ ಸಮಾನ ಗೌರವ ಭಾವನೆ ನಮಗೆ ತೃಪ್ತ ಭಾವನೆಯನ್ನು ತಂದುಕೊಡುತ್ತದೆ. ಸ್ತ್ರೀ ಶೋಷಣೆಯನ್ನು ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿರುವ ಗೊರೂರರವರು ಸ್ತ್ರೀ ಪುರುಷರಲ್ಲಿ ಕಂಡುಬರುವ ಸೌಹಾರ್ದ ಭಾವನೆಯನ್ನು ಹೇಳುವಾಗಲೂ ಅಷ್ಟೇ ಮುಕ್ತ ಮನಸ್ಸಿನಿಂದ ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ನಿದರ್ಶನವನ್ನು ಬೈಲಹಳ್ಳಿಯ ಹೆಂಗಸರ ಶ್ರಮ ಜೀವನದಲ್ಲಿ ಚೆನ್ನಾಗಿ ಮನಗಾಣಬಹುದು. "ಬೈಲಹಳ್ಳಿಯ

ಹೆಂಗಸರು ಕಷ್ಟ ಜೀವಿಗಳು. ಅವರಿಲ್ಲದಿದ್ದರೆ ಗಂಡಸರ ಬಾಳು ನಾಯಿ ಬಾಳು. ರೈತರು "ಮೇಣಿಯ ಮೇಲೆ ಕೈಯಿಟ್ಟು" ಉಳುವ ಕೆಲಸವನ್ನು ಮಾತ್ರ ಮಾಡುತ್ತಾರೆ. ಉಳಿದ ಎಲ್ಲಾ ಕೆಲಸವನ್ನು ಅವನ ಮನೆಯ ಹೆಂಗಸೇ ಮಾಡುತ್ತಾಳೆ. ಕೆರೆಯಿಂದ ನೀರು ಹೊರುವುದು, ಬೆಳಗಿನ ಜಾವ ಎದ್ದು ರಾಗಿ ಬೀಸುವುದು, ಸಗಣಿಯನ್ನು, ಕಸವನ್ನು ಎತ್ತಿಕೊಂಡು ಹೋಗಿ ಮನೆಯಿಂದ ದೂರವಾಗಿರುವ ಹೊಲದ ಬದುವಿಗೆ ತಿಪ್ಪೆಗೆ ಸುರಿಯುವುದು, ಗಿಡದಿಂದ (ಕಾಡು) ಅಡಿಗೆಗೆ ಬೇಕಾದ ಸೌದೆಯನ್ನೂ, ಪುರಲೆಯನ್ನೂ ಆಯ್ದುಕೊಂಡು ಬರುವುದು, ಹೊಲಕ್ಕೆ ಹಿಟ್ಟನ್ನು ತೆಗೆದುಕೊಂಡು ಹೋಗಿ ಗಂಡನಿಗೆ ಬಡಿಸುವುದು, ಹೊಲದಲ್ಲಿ ಕಳೆ ಕಿತ್ತು ಹುಲ್ಲನ್ನು ಮನೆಗೆ ಹೊತ್ತುಕೊಂಡು ಬರುವುದು, ವಾರಕ್ಕೊಮ್ಮೆ ನಾಲ್ಕು ಐದು ಮೈಲಿ ದೂರವಿರುವ ಸಂತೆಗೆ ನಡೆದುಕೊಂಡು ಹೋಗಿ ಮನೆಗೆ ಬೇಕಾದ ಉಪ್ಪು, ಮೆಣಸಿನಕಾಯಿ, ಎಲೆ, ಅಡಿಕೆ, ಹೊಗೆಸೊಪ್ಪು, ಸೀಮೆಎಣ್ಣೆ ಮುಂತಾದ ಸಾಮಾನುಗಳನ್ನು ತರುವುದು - ಇವೇ ಮೊದಲಾದ ಎಷ್ಟೋ ಕೆಲಸಗಳನ್ನು ರೈತರ ಹೆಂಗಸರು ಮಾಡುತ್ತಾರೆ". (ಗೊರೂರು ರಾಮಸ್ವಾಮಿ ಅಯ್ಯಂಗರ್; ೨೦೦೪; ಪು. ೧೪-೧೫) ಒಟ್ಟನಲ್ಲಿ ಗ್ರಾಮೀಣ ಮಹಿಳೆಯರ ಬದುಕು ದುಡಿಮೆ, ಪುರುಷರ ದುಡಿಮೆಗೆ ಸರಿಸಾಟಿಯಾಗಿ ಇರುವುದಷ್ಟೇ ಅಲ್ಲದೆ ಸ್ಫೂರ್ತಿದಾಯಕವೂ ಆಗಿತ್ತು ಎಂಬುದನ್ನು ಗೊರೂರವರು ತಮ್ಮ ಕೃತಿಗಳಲ್ಲಿ ಸಾಬೀತುಪಡಿಸಿದ್ದಾರೆ. ಸ್ತ್ರೀ ಶೋಷಣೆಯ ಸ್ಥಿತಿ ಚಿತ್ರವನ್ನು ಕಂಡ ಸಹೃದಯರು ಇಂತಹ ಸ್ತ್ರೀ ಪುರುಷರ ಸೌಹಾರ್ದ ಬದುಕನ್ನು ಕಂಡಾಗ ಖಂಡಿತವಾಗಿಯು ನೆಮ್ಮದಿ ಸಂತಸದ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಪಟ್ಟಣದ ಸೊಗಡು ಗ್ರಾಮೀಣ ಪರಿಸರಕ್ಕೆ ತಾಗಿದ ಮೇಲೆ ಗ್ರಾಮೀಣ ಮಹಿಳೆಯರ ವರ್ತನೆ ವಿರುದ್ಧವಾಗಿರುವುದನ್ನು ಗಮನಿಸಬಹುದು. ಗ್ರಾಮೀಣ ಮಹಿಳೆಯರಲ್ಲಿಯೂ ಸುಸಂಸ್ಕೃತಿಯ ಸಭ್ಯತೆಯ ವರ್ತನೆಯನ್ನು ಕಾಣಬಹುದು. ಅವರು ಪುರುಷರಿಗೆ ಕೊಡುವ ಆಯಾಚಿತ ಗೌರವ ಸ್ತುತ್ಯರ್ಹವಾದದ್ದು. ನಗರ ಜೀವನದಲ್ಲಿ ಸಮಾನತೆಯ ಅಮಲಿನಲ್ಲಿ ಇಂತಹ ಅಮೂಲ್ಯ ವರ್ತನೆಗಳು ಮಹಿಳೆಯರಲ್ಲಿ ಕಂಡುಬರುವುದಿಲ್ಲ.

ಹೆಣ್ಣು-ಗಂಡಿನ ಸಂಬಂಧದ ಬಗ್ಗೆ ಲೇಖಕರು ಜೀವನ ಬದ್ಧತೆಯನ್ನು ಪ್ರಧಾನವಾಗಿ ಉಳಿಸಿ ಕೊಂಡಿದ್ದಾರೆ. ಹೆಣ್ಣು-ಗಂಡಿನ ಬಾಂಧವ್ಯದಲ್ಲಿ ನಾವು ಪ್ರೇಮವನ್ನು ಪ್ರಮುಖವಾಗಿ ಕಾಣುತ್ತೇವೆ. "ಆದರೆ ಪ್ರೇಮವೇ ಪೂರ್ಣ ಜೀವನವಲ್ಲ. ಸ್ತ್ರೀ ಪುರುಷರ ಸಂಬಂಧದಲ್ಲಿ ಜೀವನ ನಿಷ್ಠೆ, ಧರ್ಮ ಪ್ರವೃತ್ತಿ ಇರಬೇಕು". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪; ಪು. ೫೭) ಹೆಣ್ಣಿನಲ್ಲಿ ಗುಣಗ್ರಹಣ ಮಾಡುವ ಶಾಂತ ಮನಸ್ಸಿನ ವ್ಯಕ್ತಿ ಗೊರೂರವರು. ಅದೇ ಹೆಣ್ಣಿನಲ್ಲಿ ಕೆಟ್ಟ ಗುಣಗಳು ಕಂಡುಬಂದಾಗ ಗೊರೂರವರು ವಿಡಂಬಿಸಿಯು ಇದ್ದಾರೆ. 'ಕತೆಗಳು ಮತ್ತು ವಿನೋದ ಚಿತ್ರಗಳು' ಕೃತಿಯ 'ಗೃಹಣೀ ಗೃಹ ಮುಚ್ಯತೇ' ಕತೆಯಲ್ಲಿ ಕಾಣುವ ಆಶಾ ಪಾತ್ರ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಗೊರೂರವರು ಚಿತ್ರಿಸಿರುವ ದಲಿತರ ಚೆನ್ನಿ, ವೈಯಾರಿಯ ಲಲಿತ, ಹೊಸಬಿ, ಸೀತಮ್ಮ, ಕಮಲಮ್ಮ ಮುಂತಾದ ಈ ಸ್ತ್ರೀ ಪಾತ್ರಗಳು ಬಂಡವಾಳಶಾಹಿ ವಿರುದ್ಧ, ಆಳುವ ವರ್ಗದ ವಿರುದ್ಧ, ಅನಿಷ್ಟ

ಸಂಪ್ರದಾಯಗಳ ವಿರುದ್ಧ ಹಾಗೂ ಪುರುಷ ಪ್ರಧಾನ ಸಮಾಜದ ವಿರುದ್ಧ ಚಿತ್ರಿತವಾಗಿರುವ ದಿಟ್ಟ ಹೆಣ್ಣಿನ ಪಾತ್ರಗಳಾಗಿವೆ. ಇಂತಹ ಪಾತ್ರಗಳ ಮೂಲಕ ಲೇಖಕರು ಸಮಾಜದ ಸ್ತ್ರೀ ವರ್ಗಕ್ಕೆ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ, ಗೆಲವು ತಂದುಕೊಟ್ಟಿದ್ದಾರೆ. ನಿಜವಾದ ಅರ್ಥದಲ್ಲಿ ಸ್ಫೂರ್ತಿಯನ್ನು ತುಂಬಿಕೊಟ್ಟಿದ್ದಾರೆ. ಗೊರೂರರವರು ಸಂಪೂರ್ಣವಾಗಿ ಹೆಣ್ಣನ್ನು ದೇವತೆಯಾಗಿಯೂ ಕಂಡಿಲ್ಲ, ರಾಕ್ಷಸಿಯಾಗಿಯೂ ಚಿತ್ರಿಸಿಲ್ಲ, ಬದುಕಿನ ದ್ವಂದ್ವಕ್ಕೆ ಅನುಗುಣವಾಗಿ ವ್ಯಕ್ತಿಯಲ್ಲಿ ಕಾಣಬಹುದಾದ ಗುಣ ದ್ವಂದ್ವಗಳ ಭಾವಕ್ಕೆ ಅನುಗುಣವಾಗಿ ಲೇಖಕರು ಹೆಣ್ಣು-ಗಂಡಿನ ಪಾತ್ರವನ್ನು ಚಿತ್ರಿಸಿ ಅವರಿಬ್ಬರ ಸಂಬಂಧಕ್ಕೆ ಸ್ಪಷ್ಟವಾದ ಅರ್ಥವನ್ನು ತುಂಬಿಕೊಟ್ಟಿದ್ದಾರೆ.

ಸುಸಂಸ್ಕೃತ ಬದುಕನ್ನು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಕಾಣಬಹುದು. ಅದರಲ್ಲಿಯೂ ಗ್ರಾಮೀಣ ಮಹಿಳೆಯ ಬದುಕನ್ನು ಕಂಡಾಗ ಸಂಸ್ಕೃತಿಯ ಸೊಗಸು ಎದ್ದು ಕಾಣುತ್ತದೆ. "ಓದಿದ ಸುಸಂಸ್ಕೃತ ಹೆಣ್ಣು ಲಲಿತ. ಅವಳ ಗಂಡ ಅಪ್ಪನ ದುಡ್ಡಿನ ಬಲದಿಂದ ಓದಿ ಕೆಲಸ ತೆಗೆದು ಕೊಂಡವನಾದ್ದ ರಿಂದ ಆತನ ಮೇಲೆ ಅವಳ ಅಧಿಕಾರ, ಒಣ ಪ್ರತಿಷ್ಠೆಗಳು. ಆದರೆ ತಿರುಮಲಮ್ಮ ಓದಿದವಳಲ್ಲ. ಮನೆಯ ಎಲ್ಲ ವ್ಯವಸ್ಥೆಗಳನ್ನು ಬರುವ ಮೂವತ್ತು ರೂಪಾಯಿ ಸಂಬಳದಿಂದ ಅಚ್ಚುಕಟ್ಟಾಗಿ ನಡೆಸಿ ಕೊಂಡು ಹೋಗುತ್ತಾಳೆ. ತಾನೇ ರಾಗಿ ಬೀಸುತ್ತಾಳೆ, ಎಂದೂ ಗಂಡನಿಗೆ ವಿರುದ್ಧವಾಗಿ ನಡೆದುದಿಲ್ಲ. ಹಳ್ಳಿಯ ಹೆಣ್ಣಾಗಿ ಓದದೇ ಇದ್ದರೂ ಓದಿದ ಲಲಿತಳಿಗಿಂತ ನಡೆನುಡಿಯಲ್ಲಿ ಸಾವಿರ ಪಾಲು ಮೇಲು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೫೦) ಹಳ್ಳಿಯಲ್ಲಿ ಮದುವೆಯಾಗದ ಹೆಣ್ಣು ಮದುವೆಯಾಗದ ಗಂಡನ್ನು ಮಾತನಾಡಿಸುವಾಗ ಯಾವುದೇ ರೀತಿಯ ಕೃತಕ ನಾಚಿಕೆಯು ಸುಳಿಯದು. ಹಳ್ಳಿಯ ಹೆಣ್ಣಿಗೆ ಬಹು ಮಟ್ಟಿಗೆ ಗೃಹ ಬಂಧನ ಇರುವುದಿಲ್ಲ. ಬಯಲು, ಮನೆ ಎರಡೂ ಕಡೆ ಆಕೆ ತನ್ನ ಚಟುವಟಿಕೆಯಲ್ಲಿ ಭಾಗವಹಿಸಲು ಸ್ವಾತಂತ್ರ್ಯ ಇರುತ್ತದೆ. ಅದು ಗ್ರಾಮೀಣ ಬದುಕಿನಲ್ಲಿ ಅನಿವಾರ್ಯವಾಗಿರುತ್ತದೆ. ಹೆಣ್ಣಿನ ಸ್ವಾತಂತ್ರ್ಯ ಹರಣವಾಗುವುದು ವೈದಿಕ ಆಚರಣೆಗಳಲ್ಲಿ ಮಾತ್ರವೇ ಹೊರತು ದುಡಿಯುವ ರೈತ ಸಮುದಾಯದಲ್ಲಿ ಅಲ್ಲ. ಗ್ರಾಮೀಣ ವಾತಾವರಣದಲ್ಲಿ ಹೆಣ್ಣು-ಗಂಡುಗಳು ಪರಸ್ಪರ ಸ್ಪಂದಿಸಿ ಅವರ ಮುಂದಿನ ಬದುಕನ್ನು ನಿರ್ಧರಿಸಿಕೊಳ್ಳುವುದಕ್ಕೆ ಅವಕಾಶವಿದ್ದರು ತಾವು ತಾವೇ ತೀರ್ಮಾನ ತೆಗೆದುಕೊಳ್ಳದೆ ಅಪ್ಪ ಅವ್ವ ಬಂಧು ಬಳಗದ ಮುಖಾಂತರವೇ ಸಂಬಂಧಕ್ಕೆ ಮುದ್ರೆ ಒತ್ತಿಸುತ್ತಾರೆ. ಇದಕ್ಕೆ ಉದಾಹರಣೆ - ಹೊಸಬಿ ಮತ್ತು ಮಾದರ ಸಂಬಂಧ. ಒಟ್ಟಿನಲ್ಲಿ ಗ್ರಾಮೀಣ ಸಮಾಜದಲ್ಲಿ ಹೆಣ್ಣು ಗಂಡುಗಳ ಬಗ್ಗೆ ಸರಸ ಸಾಮರಸ್ಯ ಭಾವ ಇದ್ದು ತೃಪ್ತ ಬದುಕಿನ ರೀತಿ ಅವರದ್ದಾಗಿರುತ್ತದೆ. ಸಂಪ್ರದಾಯದ ಪರಿಸರದಲ್ಲಿ ಹುಟ್ಟಿದ ಗೊರೂರರವರು ಇಂತಹ ರೀತಿಯ ಗ್ರಾಮೀಣ ಬದುಕನ್ನು ಸಹಜವಾಗಿ ವರ್ಣಿಸಿರುವುದು ಅವರ ಸ್ವಚ್ಛ ದೃಷ್ಟಿಗೆ, ಪೂರ್ಣ ದೃಷ್ಟಿಗೆ ಸಾಕ್ಷಿಯಾಗಿದೆ. ಗ್ರಾಮೀಣ ವಾತಾವರಣದಲ್ಲಿ ಯಾವುದೇ ರೀತಿಯ ಒಡಕು ಕಂಡುಬಂದರೂ ಹಬ್ಬ-ಹರಿದಿನ ಜಾತ್ರೆ ಆಚರಣೆಗಳಲ್ಲಿ ಈ ಒಡಕುಗಳು ಕಣ್ಮರೆಯಾಗುತ್ತವೆ. ನಗರ ಬದುಕಿನಲ್ಲಿ ಕಾಣುವ ಹುಂಬು ಪ್ರತಿಷ್ಠೆ

ಗ್ರಾಮೀಣ ಪರಿಸರದಲ್ಲಿ ಕಂಡುಬರದೆ ಇರುವುದೇ ಇಂತಹ ಸೌಹಾರ್ದ ಜೀವನಕ್ಕೆ ಕಾರಣವಾಗುತ್ತದೆ. ಗ್ರಾಮೀಣ ಬದುಕಿನಲ್ಲಿ ಬಡತನ ಇದ್ದರು ಹೃದಯವಂತಿಕೆ ಇರುತ್ತದೆ. ಉದಾರ ಮನೋಭಾವನೆಯನ್ನು ಅವರ ಬದುಕಿನ ವರ್ತನೆಯಲ್ಲಿ ಕಾಣಬಹುದು. ಭಾವನಾತ್ಮಕ ಸಂಬಂಧಗಳಿಗೂ ಗ್ರಾಮೀಣ ಜನಜೀವನ ಮೌಲ್ಯವನ್ನು ಸಂಯೋಜಿಸಿರುವುದು ಗಮನಾರ್ಹ ಅಂಶ. ಈ ಕಾರಣದಿಂದಲೇ 'ಯುವಕರನ್ನು ಹಳ್ಳಿಗಳಿಗೆ ಹೋಗಿ' ಎಂದು ಗಾಂಧಿ ಆತ್ಮೀಯಾ ಒತ್ತಾಯದ ಕರೆಯನ್ನು ತರುಣರಿಗೆ ನೀಡಿದ್ದು. ಯುವಕರಲ್ಲಿ ನಮ್ಮತನದ ಸಾಂಸ್ಕೃತಿಕ ಶಕ್ತಿ ಮೂಡಿ ಬರಬೇಕಾದರೆ ಗ್ರಾಮೀಣ ಬದುಕಿನ ಪ್ರಭಾವ ಯುವಕರ ಮೇಲೆ ಅನಿವಾರ್ಯವಾಗಿ ಆಗಲೇಬೇಕು. ಈ ರೀತಿಯಲ್ಲಿ ಗ್ರಾಮೀಣ ಬದುಕು ಶುದ್ಧ ಭಾವನಾತ್ಮಕ ಜೀವನಕ್ಕೆ ಒಂದು ಸ್ಫೂರ್ತಿಯ ನೆಲೆ ಎಂಬುದನ್ನು ಗೊರೂರರವರು ತಮ್ಮ ಕೃತಿಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ಗ್ರಾಮೀಣ ಜನರ ಬದುಕಿನ ಚಟುವಟಿಕೆಗಳಲ್ಲಿ ಕೆಲವೊಮ್ಮೆ ಒರಟುತನವನ್ನು ಕಂಡರೂ ಅವರ ಭಾವನಾತ್ಮಕ ಜೀವನದಲ್ಲಿ ನಿಜವಾದ ಸಾಂಸ್ಕೃತಿಕ ಸೊಬಗನ್ನು ಗುರುತಿಸಬಹುದು. ಇಂತಹ ಸಾಂಸ್ಕೃತಿಕ ಬದುಕಿನ ಅಭಾವ ಇಂದಿನ ಸಮಾಜದಲ್ಲಿ ಯುವಕರಲ್ಲಿ ಹೆಚ್ಚು ಕಂಡುಬರುವುದರಿಂದ ತರುಣರು ಗ್ರಾಮೀಣ ಪ್ರದೇಶದಲ್ಲಿ ಬದುಕಿದಷ್ಟು ನೆಮ್ಮದಿಯಲ್ಲಿ ಉಳಿಯಬಹುದು. ಸ್ವಾತಂತ್ರ್ಯ ಹೋರಾಟದಲ್ಲಿ ಹೀಗೆ ಗ್ರಾಮೀಣ ಸಂಸ್ಕೃತಿಯ ಪ್ರಭಾವ ಹೆಚ್ಚು ತೀವ್ರವಾಗಿತ್ತು, ಫಲಕಾರಿಯಾಗಿತ್ತು ಎಂಬುದನ್ನು ಎಲ್ಲರು ಒಪ್ಪಿಕೊಳ್ಳುತ್ತಾರೆ. ಹೋರಾಟದ ನಿಷ್ಠೆ, ಪ್ರಾಮಾಣಿಕತೆ, ತ್ಯಾಗಮನೋಭಾವ ಇದು ಸ್ವಾತಂತ್ರ್ಯ ಚಳುವಳಿಗೆ ಗ್ರಾಮೀಣ ಸಮಾಜ ಕೊಟ್ಟ ಅಪೂರ್ವ ಕೊಡುಗೆಯಾಗಿದೆ. ಗೊರೂರರವರು ಯಾವ ಒಂದು ವಿಷಯವನ್ನು ಕುರಿತು ವಿಚಾರ ಮಾಡಿದಾಗಲೂ ಪರ-ವಿರೋಧ ಚರ್ಚೆ ಕಾಣುವಂತೆ ಸ್ಪಷ್ಟವಾಗಿ ತಿಳಿಸುವ ಅವರ ನಿಲುವನ್ನು ಗುರುತಿಸಬಹುದು. ಗೊರೂರರವರ ಬರವಣಿಗೆಯಲ್ಲಿ ವಸ್ತುನಿಷ್ಠೆಯ ಪ್ರಾಮಾಣಿಕತೆ ಹೀಗೆ ಮೇಲೆದ್ದು ಕಾಣುವ ಅಂಶವಾಗಿದೆ. ಜಾತಿ ವರ್ಗ-ಲಿಂಗದ ಬಗ್ಗೆ ಗೊರೂರರವರು ನಡೆಸಿರುವ ಸಂವಾದ ಚರ್ಚೆಗಳಿಗೆ ಮೇಲಿನ ಮಾತುಗಳು ಪರಿಸಮಾಪ್ತಿಯ ನುಡಿಗಳಾಗಿವೆ.

೫.೫. ಧರ್ಮ-ಆಚರಣೆ-ನಂಬಿಕೆಗಳು

ಧರ್ಮದ ಪರಿಕಲ್ಪನೆ ವಿಶಾಲವಾದ ಅರ್ಥದಲ್ಲಿ ಮಾನವನ ಬದುಕಿನ ಕಲೆ ಎನ್ನಬಹುದು. ಈ ವಿಶಾಲ ಅರ್ಥ ಕೆಲವು ಪಂಗಡಗಳಿಗೆ ಸೀಮಿತವಾಗಿ ಬೇರೆ ಬೇರೆ ಧರ್ಮ ಪಂಥಗಳು ಮೂಡಿ ಬಂದವು. ಧರ್ಮದ ಮೂಲಾರ್ಥದಲ್ಲಿ ವ್ಯಕ್ತಿ ತಾನು ಸಾರ್ಥಕ ಬದುಕನ್ನು ಸಾಧಿಸುವ ರೀತಿಯನ್ನು ಗುರುತಿಸಬಹುದು. ಅದೇ ರೀತಿಯಲ್ಲಿ ಸಮಷ್ಠಿಯ ಕಡೆಗೆ ವ್ಯಕ್ತಿಯ ಮನೋಧರ್ಮ ಬೆಳೆಯುವುದನ್ನು ಕಾಣಬಹುದು. ಬದುಕಿ ಬಾಳಿಸುವ ಮನಸ್ಸಿನ ಔದಾರ್ಯವನ್ನು ನಮಗೆ ಧರ್ಮ ಕಲಿಸಿ ಕೊಡುತ್ತದೆ. ನಮ್ಮ ಎಲ್ಲಾ ಧರ್ಮ ಗ್ರಂಥಗಳು ಈ ವಿಶಾಲ ನೆಲೆಗಟ್ಟಿನಲ್ಲಿ ರೂಪಿತವಾಗಿವೆ. ಗ್ರಾಮೀಣ ಸಮಾಜದಲ್ಲಿ ಬಹುಮಟ್ಟಿಗೆ ನಾವು ಧರ್ಮದ ಈ ಔದಾರ್ಯ ಗುಣವನ್ನು ನೋಡುತ್ತೇವೆ. ಗ್ರಾಮೀಣ ಸಮಾಜದ ಮೇಲ್ವರ್ಗದ

ಜನ ಧರ್ಮದ ಆಚರಣೆಯಲ್ಲಿ ಕೆಲವು ವಿಶಿಷ್ಟ ಕಟ್ಟುಪಾಡುಗಳನ್ನು ಇಟ್ಟುಕೊಂಡು ಬಾಳುವುದನ್ನು ಕಂಡರೆ, ಮಧ್ಯಮ ವರ್ಗದ ಜನ ಕಟ್ಟು ಕಟ್ಟಲೆಗಳನ್ನು ಸ್ವಲ್ಪಮಟ್ಟಿಗೆ ಉಳಿಸಿಕೊಂಡು ಬಾಳುವುದನ್ನು, ಕೆಳವರ್ಗದ ಜನ ಕಟ್ಟುಕಟ್ಟಲೆಗೆ ಗಮನ ಕೊಡದೆ ಧರ್ಮದ ಬಗ್ಗೆ ಒಂದು ಶುದ್ಧ ನಂಬಿಕೆಯನ್ನು ಇಟ್ಟುಕೊಂಡು ಬಾಳುವುದನ್ನು ಗಮನಿಸಬಹುದು. ಇದೇ ರೀತಿಯಲ್ಲಿ ಧರ್ಮಾಚರಣೆಗೆ ಸಂಬಂಧಿಸಿದ ಶಿಷ್ಟಾಚಾರ ಸಂಪ್ರದಾಯಗಳು ಕೆಲವು ಪ್ರಮಾಣದಲ್ಲಿ ಕಡಿಮೆಯಾಗಿ ಬದಲಾವಣೆಯಾಗಿ ಸರಳೀಕರಣ ಗೊಂಡಿರುವುದನ್ನು ಗ್ರಾಮೀಣ ಜನರ ಬದುಕಿನಲ್ಲಿ ನೋಡುತ್ತೇವೆ. ಮುಗ್ಧ ಗ್ರಾಮೀಣ ಜನರಲ್ಲಿ ಧರ್ಮ ಒಂದು ಆಸ್ತಿಕ ನಂಬಿಕೆಯಾಗಿ ಉಳಿದಿರುವುದನ್ನು ಗಮನಿಸಬಹುದು. ಧರ್ಮದ ಆಚರಣೆಯಲ್ಲಿ ಇಂತಹ ಬದಲಾವಣೆ ನಮಗೆ ಆಶ್ಚರ್ಯವನ್ನು ತಂದುಕೊಟ್ಟರೂ ಸಹ ಅದು ಅನಿವಾರ್ಯ ಬದಲಾವಣೆ ಎಂಬುದು ನಮಗೆ ಆಲೋಚನೆ ಮಾಡಿದಾಗ ಮನವರಿಕೆಯಾಗುತ್ತದೆ.

ಮೊದಲಿಗೆ ಧರ್ಮದ ಆಚರಣೆಯಲ್ಲಿ ಆಡಂಬರ ಕಂಡು ಬಂದಿರುವುದು ನಮಗೆ ಗೋಚರವಾಗುತ್ತದೆ. ಸಂಪ್ರದಾಯಗಳ ಆಚರಣೆಯಲ್ಲಿ ಕಾಣುವ ಕಟ್ಟುನಿಟ್ಟುಗಳು ಇದಕ್ಕೆ ಸಾಕ್ಷಿಯಾಗಿದೆ. 'ಮಂತ್ರಕ್ಕಿಂತ ಉಗುಳೆ ಜಾಸ್ತಿ' ಎನ್ನುವಂತೆ ಸಂಪ್ರದಾಯಗಳ ತಾತ್ವಿಕ ಹಿನ್ನೆಲೆ ಕಣ್ಮರೆಯಾಗಿ ಆಡಂಬರಗಳು ಮಾತ್ರ ಉಳಿದು ವಿಜೃಂಭಿಸಿರುವುದು ಧರ್ಮಾಚರಣೆಗಳಲ್ಲಿ ನಮಗೆ ಮನವರಿಕೆಯಾಗುತ್ತದೆ. ಧರ್ಮ ಸಾಮಾಜಿಕ ಸಂಘಟನೆಗೆ ಕಾರಣವಾಗಬೇಕೆ ಹೊರತು ವಿಘಟನೆಗಳಿಗೆ ಕಾರಣವಾಗಬಾರದು ಎಂಬ ಎಚ್ಚರಿಕೆಯು ಅನೇಕ ಸಂದರ್ಭಗಳಲ್ಲಿ ನಾವು ಕಲಿತ ಪಾಠವೂ ಆಗಿದೆ.

ನಾವು ಆಚರಿಸುವ ಹಬ್ಬ-ಹರಿದಿನಗಳು ಒಂದರ್ಥದಲ್ಲಿ ನಮ್ಮ ಧಾರ್ಮಿಕ ಆಚರಣೆಗಳೂ ಹೌದು. ಒಂದೊಂದು ಹಬ್ಬಕ್ಕೂ ಗ್ರಾಮೀಣ ಸಮಾಜದಲ್ಲಿ ಪುರಾಣದ ಐತಿಹ್ಯಗಳು ನಮಗೆ ಗೋಚರವಾಗುತ್ತದೆ. ಈ ಐತಿಹ್ಯಗಳು ನಮ್ಮ ಧಾರ್ಮಿಕ ಭಾವನೆಯನ್ನು ಗಾಢಗೊಳಿಸಿ ನಮ್ಮ ಆಸ್ತಿಕ ಮನೋಧರ್ಮವನ್ನು ಬದ್ಧಗೊಳಿಸುತ್ತವೆ ಮತ್ತು ಉಜ್ವಲಗೊಳಿಸುತ್ತವೆ ಎಂಬ ಮಾತು ಸಂಪೂರ್ಣ ಸತ್ಯ. ಈ ಹಬ್ಬಗಳು ಮಾನಸಿಕ ಔದಾರ್ಯಕ್ಕೂ ಪ್ರೇರಕ ಆಗಬಲ್ಲದು. ಸಮಾಜದ ವಿವಿಧ ಜನಾಂಗದ ವರ್ಗದ ವ್ಯಕ್ತಿಗಳು ಹಬ್ಬದ ಹೆಸರಿನಲ್ಲಿ ಮನಸ್ಸಿನ ಕ್ಲೇಷಗಳನ್ನು ಮರೆತು, ಜೀವನದ ನಷ್ಟ ನೋವನ್ನು ಮರೆತು ಒಂದಾಗುವುದನ್ನು ಗ್ರಾಮೀಣ ಸಮಾಜದಲ್ಲಿ ಗುರುತಿಸಬಹುದು. ಇದನ್ನೇ ಸಮಾಜಶಾಸ್ತ್ರದಲ್ಲಿ ಸಾಮೂಹಿಕ ಸಂಘಟನೆ ಎಂದು ಕರೆಯುವುದು.

ಗ್ರಾಮೀಣ ಸಮಾಜದಲ್ಲಿ ಹಬ್ಬಗಳಷ್ಟೆ ನಮಗೆ ಜಾತ್ರೆಗಳು ಸಹ ಮುಖ್ಯವಾದ ಅರ್ಥಪೂರ್ಣ ಚಟುವಟಿಕೆಯಾಗಿದೆ. ಊರಿನ ಜಾತ್ರೆ ಊರಿನ ಪ್ರಧಾನ ದೇವರಿಗೆ ಸಂಬಂಧಪಟ್ಟ ಒಂದು ಸಾಂಸ್ಕೃತಿಕ ದಿವ್ಯ ಚಟುವಟಿಕೆಯಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಊರಿನ ಎಲ್ಲ ವರ್ಗದ ಜನ ಒಂದಾಗಿ ಜಾತ್ರೆಯ ವೈಭವದ ಯಶಸ್ಸಿಗೆ ದುಡಿಯುತ್ತಾರೆ. ಒಂದು ಹಳ್ಳಿಯ ಜಾತ್ರೆ ಯಶಸ್ವಿಯಾಗುವುದು ಆ

ಊರಿನ ಗ್ರಾಮಸಮಾಜಕ್ಕೆ ಪ್ರತಿಷ್ಠೆಯ ಸಂಕೇತವಾಗಿರುತ್ತದೆ. ಈ ಜಾತ್ರೆಗಳಲ್ಲಿಯೂ ಸಹ ಗ್ರಾಮೀಣ ಜನರ ಸೌಹಾರ್ದ ಭಾವನೆಯನ್ನು ಗುರುತಿಸಬಹುದು. ಸಮಾಜದ ಕೆಳವರ್ಗದ ಜನರಿಂದ ಮಾನ್ಯತೆಯ ಗೌರವವನ್ನು ಸಂಪಾದಿಸಿಕೊಂಡಿರುವ ಊರಿನ ಮೇಲ್ಜಾತಿಯವರು ಇದಕ್ಕೆ ಪ್ರತಿಯಾಗಿ ಸಮಾಜದ ಕೆಳ ವರ್ಗದವರಿಗೆ ಜಾತ್ರೆಯ ಸಂದರ್ಭದಲ್ಲಿ ಹಲವು ವಿಶಿಷ್ಟ ಮರ್ಯಾದೆ ಕೊಡುವುದನ್ನು ಗ್ರಾಮೀಣ ಸಮಾಜದಲ್ಲಿ ಗುರುತಿಸಬಹುದು. ಇಂತಹ ಪ್ರವೃತ್ತಿ ಗ್ರಾಮೀಣ ಸಮಾಜದ ಸೌಹಾರ್ದತೆಗೆ ಪರೋಕ್ಷವಾಗಿ ಕಾರಣವಾಗುತ್ತದೆ. ಗೊರೂರರವರು ತಮ್ಮ ಕೃತಿಗಳಲ್ಲಿ ಜಾತ್ರೆ, ರಥೋತ್ಸವ ಮತ್ತು ಗ್ರಾಮೀಣ ಪ್ರದೇಶದ ಹಬ್ಬ-ಹರಿದಿನಗಳ ವಿಷಯವನ್ನು ಹೇಳುವಾಗ ಈ ಮೊದಲಿನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಿದ್ದಾರೆ. ಈ ಕಾರಣದಿಂದಲೇ ಗೊರೂರಿನ ಜಾತ್ರೆ ಹಬ್ಬ-ಹರಿದಿನಗಳು ವೈಶಿಷ್ಟ್ಯಪೂರ್ಣವಾಗಿವೆ. ಹಬ್ಬ-ಹರಿದಿನಗಳ ಆಚರಣೆಯಲ್ಲಿ ಮನೋಲ್ಲಾಸ ಪ್ರಧಾನವಾದ ಅಂಶವಾದರೂ ಕ್ರಿಯಾಶೀಲ ಚಟುವಟಿಕೆ ಮತ್ತೊಂದು ರೀತಿಯಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಗ್ರಾಮೀಣ ಪರಿಸರದಲ್ಲಿ ಗಣನೀಯವಾದ ಹಬ್ಬ-ಹರಿದಿನಗಳ ಜಾತ್ರೆಗಳ ಆಚರಣೆಯ ವೈಶಿಷ್ಟ್ಯವೇ ನಮ್ಮ ನಾಡಿನ ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಸೆಲೆಯಾಗಿದೆ ಎಂಬುದು ನಿರ್ವಿವಾದ ಸಂಗತಿ. ಜಾನಪದ ಅಧ್ಯಯನದಲ್ಲಿ ಜನಪದ ಕಲೆ ಸಾಹಿತ್ಯದಂತೆ ಹಬ್ಬ-ಹರಿದಿನಗಳಿಗೂ ವಿಶಿಷ್ಟ ಸ್ಥಾನವಿದೆ. ಗ್ರಾಮೀಣ ಜನತೆ ಆಚರಿಸುವ ಹಬ್ಬ-ಹರಿದಿನಗಳು, ಜಾತ್ರೆಯ ಸಂಭ್ರಮಗಳು ಅವರ ಜೀವನೋತ್ಸಾಹದ ನವೀಕರಣಕ್ಕೆ ಮೂಲ ಕಾರಣ ಎಂಬುದನ್ನು ಗೊರೂರರವರು ಸ್ಪಷ್ಟವಾದ ಮಾತುಗಳಲ್ಲಿ ತಿಳಿಸಿದ್ದಾರೆ.

ಧಾರ್ಮಿಕ ಆಚರಣೆಯಲ್ಲಿ ಗ್ರಾಮೀಣ ಜನರ ಮುಗ್ಧತೆಯ ಜತೆಗೆ ಕೆಲವು ಮೂಢನಂಬಿಕೆಗಳು ಮೂಡಿ ಬಂದಿರುವುದನ್ನು ನೋಡಬಹುದು. ಈ ಮೂಢನಂಬಿಕೆಗಳು ಹೊರನೋಟಕ್ಕೆ ಸಾಧಾರಣವಾಗಿ ಕಂಡು ಬಂದರು ಅವುಗಳಲ್ಲಿ ಕೆಲವುಗಳಿಗೆ ಅರ್ಥಪೂರ್ಣವಾದ ಹಿನ್ನೆಲೆ ಇದೆ ಎಂಬುದು ಅಧ್ಯಯನ ಮಾಡಿದಾಗ ನಮಗೆ ಮನವರಿಕೆಯಾಗುತ್ತದೆ. ವಿಶಿಷ್ಟವಾದ ಧರ್ಮಾಚರಣೆ ಗ್ರಾಮೀಣ ಸಮಾಜದ ಬಡಜನಕ್ಕೆ ಕಷ್ಟವಾಗಬಹುದು. ಆರ್ಥಿಕವಾಗಿ ಒಂದು ಹೊರೆಯು ಆಗಬಹುದು. ಮನಸ್ಸಿನ ಈ ಭಾರವನ್ನು ಕಳೆದುಕೊಳ್ಳುವ ಸಲುವಾಗಿ ಗ್ರಾಮೀಣ ಸಮಾಜದಲ್ಲಿ ಮೂಢನಂಬಿಕೆಗಳು, ಆಚರಣೆಗಳು ರೂಢಿಯಲ್ಲಿ ಉಳಿದು ಬಂದಿವೆ. ಮಾಯ, ಮಂತ್ರ, ಮಾಟ ಇವುಗಳಲ್ಲಿ ನಂಬಿಕೆಯೇ ಪ್ರಧಾನ ಅಂಶ. ಇವುಗಳ ಆಚರಣೆಗಳಲ್ಲಿ ಕೆಲವು ಸಂದರ್ಭಗಳಲ್ಲಿ ದೈಹಿಕ, ಮಾನಸಿಕ ನೋವನ್ನು ಗುರುತಿಸಬಹುದು. ಇಷ್ಟಾದರೂ ಗ್ರಾಮೀಣ ಜನರ ಮನಸ್ಸಿನಿಂದ ಈ ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂಬ ಮಾತು ಅಷ್ಟೇ ಸತ್ಯಾಂಶವಾಗಿದೆ. ಧಾರ್ಮಿಕ ಹಬ್ಬಗಳ ಆಚರಣೆ ಜನಪದ ಕಲೆಗಳ ಪರಸ್ಪರ ವಿನಿಮಯಕ್ಕೆ ಕಾರಣವಾಗುತ್ತದೆ. ಜನಪದ ಕಲೆಗಳ ನಿರಂತರ ಆಸಕ್ತಿಯನ್ನು ಹೊಂದಿರುವ ಗ್ರಾಮೀಣ ಜನರು ಇಂತಹ ಕಲೆಗಳ ವಿನಿಮಯವನ್ನು ಸ್ವಾಗತಿಸುತ್ತಾರೆ. ಇಷ್ಟೇ ಅಲ್ಲದೆ ಹೊಸ ಜನಪದ ಕಲೆಗಳು ಹುಟ್ಟಿಕೊಳ್ಳುವುದಕ್ಕೆ ಕಾರಣವಾಗುತ್ತದೆ. ಗ್ರಾಮೀಣ ಸಮಾಜದ ಹಬ್ಬ-ಹರಿದಿನಗಳು, ಜಾತ್ರೆಗಳು

ಸಾಮಾಜಿಕ ಸಂಘಟನೆಯ ಕಾರ್ಯವಾದಂತೆ ಜನಪದ ಕಲೆ ಹಾಗೂ ಕ್ರೀಡೆಯ ಉದ್ಧಾರಕ್ಕೂ ಸೂಕ್ತ ಸಂದರ್ಭಗಳಾಗಿವೆ ಎಂಬುದು ಜಾನಪದ ವಿದ್ವಾಂಸರ ಅಭಿಪ್ರಾಯವಾಗಿದೆ. ಧರ್ಮ-ಆಚರಣೆ-ನಂಬಿಕೆಗಳಲ್ಲಿ ಪ್ರಾಂತ್ಯೀಯ ವ್ಯತ್ಯಾಸಗಳನ್ನು ಗುರುತಿಸುವಂತೆ ಸಮಾಜದ ಬೇರೆ ಬೇರೆ ವರ್ಗದಲ್ಲಿಯೂ ವ್ಯತ್ಯಾಸವನ್ನು ನೋಡಬಹುದು. ಉತ್ತಮ ಜಾತಿ ಮೇಲ್ವರ್ಗದವರ ಆಚರಣೆಗಳೆಲ್ಲವನ್ನು ಶಿಷ್ಟ ಸಂಪ್ರದಾಯಗಳು, ನಂಬಿಕೆಗಳು ಎನಿಸಿಕೊಳ್ಳುತ್ತವೆ. ಕೆಳವರ್ಗದವರ ಕೆಲವು ರೂಕ್ಷ ಸಂಪ್ರದಾಯಗಳು ಮೇಲ್ವರ್ಗದವರಲ್ಲಿ ನಾಗರಿಕವಾಗಿ ಪರಿವರ್ತಿತವಾಗಿರುವುದನ್ನು ಗಮನಿಸಬಹುದು. ಮೂಢನಂಬಿಕೆಗಳು ವೈಜ್ಞಾನಿಕ ಹಿನ್ನೆಲೆಯ ದೃಷ್ಟಿಯಲ್ಲಿ ತಪ್ಪು ಎನಿಸಿದರೂ ಆಸ್ತಿಕ ಮನೋಧರ್ಮದ ಹಿನ್ನೆಲೆಯಲ್ಲಿ ಕೆಲಮಟ್ಟಿಗೆ ಅವಶ್ಯಕ ಎಂಬುದು ನಮಗೆ ಮನವರಿಕೆಯಾಗುತ್ತದೆ. ಒಟ್ಟಿನಲ್ಲಿ ಗೊರೂರವರ ಸಾಹಿತ್ಯ ಗ್ರಾಮಸಮಾಜದ ಧರ್ಮದ ವಿರಾಟ ಸ್ವರೂಪವನ್ನು ವೈವಿಧ್ಯತೆಯನ್ನು ಹಾಗೂ ಆಚರಣೆ, ನಂಬಿಕೆಗಳನ್ನು ಪರಿಚಯ ಮಾಡಿಕೊಡುವುದರಲ್ಲಿ ಯಶಸ್ವಿಯಾಗಿದೆ.

ಗೊರೂರವರು ಸಂಪ್ರದಾಯದ ಮೂಲ ರೂಪಗಳ ಬಗ್ಗೆ, ಫ್ಯೂಡಲಿಸಂ ಬಗ್ಗೆ ಗಾಢ ವ್ಯಾಮೋಹಿಗಳಾಗಿ ಕಟುಕರಾಗುವುದಿಲ್ಲ. ಸಂಪ್ರದಾಯಕ್ಕೆ ಅಂಟಿಕೊಂಡೇ ಇದ್ದರೂ ವಾಸ್ತವವನ್ನು ಮರೆಯದೆ ಇರುವುದೇ ಇವರ ದೊಡ್ಡ ಗುಣ. ಸಂಪ್ರದಾಯದ ಅತಿಗೆ ಹೋಗಿ ಮಾನವತ್ವವನ್ನು ಮರೆಯುವ ಸನ್ನಿವೇಶಗಳನ್ನು ನವಿರಾಗಿ ವಿಡಂಬಿಸುವ ಗೊರೂರರ ಈ ಶಕ್ತಿ ಈ ಮೂಲದ್ದೇ. ಗೊರೂರರ ಅನೇಕ ಕಥೆಗಳಲ್ಲಿ, ಪ್ರಬಂಧಗಳಲ್ಲಿ, ಈ ಮಾತಿಗೆ ನಿದರ್ಶನ ದೊರೆಯುತ್ತದೆ. ಸಂಪ್ರದಾಯವನ್ನು ನೆಪ ಮಾತ್ರಕ್ಕೆ ಅಂಟಿಕೊಂಡು ಒಳಗಿನ ಬೊಳ್ಳನ್ನು ತೋರಿಸುವ ಚಿಕಿತ್ಸಕ ಸಾಹಿತ್ಯ ಗೊರೂರವರದು. ಈ ಬಗ್ಗೆ ಗೊರೂರವರೇ ಹೇಳಿರುವ ಮಾತುಗಳು ಹೀಗಿವೆ. "ಸಂಪ್ರದಾಯ ಸರ್ವಸ್ವ ಅಂತ ನಾನು ನಂಬಲಿಲ್ಲ. ಕೆಲವು ಆಚಾರ ವಿಚಾರಗಳು ನಮಗೆ ಶಕ್ತಿ ಕೊಡುತ್ತವೆ. ನನ್ನ ಮೆಂಟಲ್ ಮೇಕಪ್ ಹೇಗಿದೆ ಎಂದರೆ, ಸಂಪ್ರದಾಯವನ್ನು ಅನುಸರಿಸಿಕೊಂಡು ಹೋದರೂ ಅದಕ್ಕೆ ಬೆಲೆ ಕೊಟ್ಟವನೇ ಅಲ್ಲ. ನನ್ನ ಒಳಮನಸ್ಸಿನ ವಿರೋಧಾನ ಸಾಹಿತ್ಯ ಕೃತಿಗಳಲ್ಲಿ ತರಲಿಲ್ಲ. ಪಾತ್ರಗಳಲ್ಲಿ ತರಲಿಲ್ಲ. ಮಾಡಬಹುದಾಗತ್ತು ಮಾಡಲಿಲ್ಲ. ವಾಸ್ತವಾಂಶದ ಮೇಲೆಯೇ ನನಗೆ ಗಮನ ಹೆಚ್ಚು. ಯಾವಾಗಲೂ ವಾಸ್ತವತೆಗೆ ಹೆಚ್ಚು ಬೆಲೆ ಕೊಡ್ತಿದ್ದೆ. ಸಂಪ್ರದಾಯ ನೆಪ ಅಷ್ಟೇ" ಎಂದಿದ್ದಾರೆ. (ನಾಗರಾಜ ಡಿ.ಆರ್.; ೧೯೮೪; ಪು.೩೪)

ಗ್ರಾಮೀಣ ಸಮಾಜದಲ್ಲಿ ಸಂಪ್ರದಾಯಗಳ ಆಚರಣೆ ಪ್ರಧಾನ ಅಂಶವಾಗಿದೆ. ಸಂಪ್ರದಾಯದ ಆಚರಣೆಗಳಿಗೆ ಧರ್ಮದ ಹಿನ್ನೆಲೆಯೂ ಇರಬಹುದು, ಶಾಸ್ತ್ರಗಳ ಹಿನ್ನೆಲೆಯೂ ಇರಬಹುದು. ಕೇವಲ ಸಂಪ್ರದಾಯಕ್ಕಾಗಿ ಸಂಪ್ರದಾಯ ರೂಢಿಯಲ್ಲಿ ಬಂದಿರಬಹುದು. ಕಾರಣ ಏನೇ ಇದ್ದರೂ ಸಂಪ್ರದಾಯದ ಆಚರಣೆ ಕೆಲವು ಬಾರಿ ಅರ್ಥಪೂರ್ಣ ಎನ್ನಬಹುದು. ಆದರೆ ಬಹುಮಟ್ಟಿನ ಸಂಪ್ರದಾಯಗಳಿಗೆ ಆಧುನಿಕ ದೃಷ್ಟಿಯಲ್ಲಿ ಅರ್ಥ ಹುಡುಕುವುದು ಕಷ್ಟವಾಗಬಹುದು. ಕೆಲವು ಸಂದರ್ಭದಲ್ಲಿ ವ್ಯರ್ಥ ಎನಿಸಿದರೂ

ಆಶ್ಚರ್ಯವಿಲ್ಲ. ಗೊರೂರರವರು ತಮ್ಮ ಕೃತಿಗಳಲ್ಲಿ ಇಂತಹ ಸಂಪ್ರದಾಯಗಳ ಆಚರಣೆಗಳ ಬಗ್ಗೆ ಸ್ಪಷ್ಟ ಚಿತ್ರವನ್ನು ಕೊಟ್ಟಿದ್ದಾರೆ. ಶ್ರಾದ್ಧ ಬ್ರಾಹ್ಮಣ ಸಮಾಜದಲ್ಲಿ ಅನೂಚಾನವಾಗಿ ಬಂದ ಒಂದು ಸಂಪ್ರದಾಯ. ಸತ್ತವನ ಆತ್ಮಕ್ಕೆ ಶಾಂತಿಯನ್ನು ಕೋರುವುದು ಶ್ರಾದ್ಧ ಸಂಪ್ರದಾಯದ ಮುಖ್ಯ ಉದ್ದೇಶ. ಮೃತಪಟ್ಟ ವ್ಯಕ್ತಿಗೆ ವರ್ಷಕ್ಕೆ ಒಂದು ಬಾರಿ ಪಿಂಡದ ಮೂಲಕ ಆಹಾರ ನೀಡುವ ಭಾವದ ಹಿನ್ನೆಲೆಯೂ ಈ ಶ್ರಾದ್ಧಕ್ಕೆ ಇದೆ. ಬಡವ ಶ್ರೀಮಂತ ಎಂಬ ಭೇದಭಾವ ಇಲ್ಲದೆ ಎಲ್ಲಾ ಬ್ರಾಹ್ಮಣರು ಶ್ರಾದ್ಧವನ್ನು ಆಚರಿಸುತ್ತಾರೆ. ಶ್ರಾದ್ಧ ಮಾಡದಿದ್ದರೆ ಗತಿಸಿದ ವ್ಯಕ್ತಿಯ ಆತ್ಮಕ್ಕೆ ಶಾಂತಿ ಸಿಕ್ಕಲಾರದು ಎಂಬುದು ಬಲವಾದ ನಂಬಿಕೆಯಾಗಿದೆ. ಶ್ರಾದ್ಧ ಮಾಡಬೇಕಾದ ವ್ಯಕ್ತಿ-ಗಂಡು ಮಕ್ಕಳು ಕರ್ಮ ಭ್ರಷ್ಟರಾಗಿ ಅನೇಕ ಕಷ್ಟಕೋಟಲೆಗಳನ್ನು ಈ ಜೀವಮಾನದಲ್ಲಿಯೇ ಅನುಭವಿಸಬೇಕಾದ ದುರಾದೃಷ್ಟಕ್ಕೆ ಒಳಗಾಗುತ್ತಾರೆ. ಇಷ್ಟೇ ಅಲ್ಲದೆ ಕರ್ಮ ಭ್ರಷ್ಟಾರಾದ ಮಕ್ಕಳು ಮಹಾ ಪಾಪಕ್ಕೆ ಒಳಗಾಗಿ ನರಕದಲ್ಲಿ ಯಾತನೆಯನ್ನು ಪಡಬೇಕಾಗುತ್ತದೆ ಎಂಬ ಭಾವನೆ ನಮ್ಮಲ್ಲಿ ಇದೆ. ಪುರಾಣಗಳಲ್ಲಿಯೂ ಸಹ ಶ್ರಾದ್ಧದ ಆಚರಣೆಯ ಬಗ್ಗೆ ಅನೇಕ ಉಲ್ಲೇಖಗಳು ಇವೆ. ಶ್ರಾದ್ಧವನ್ನು ಗಂಡುಮಕ್ಕಳು ಎಲ್ಲರೂ ಸೇರಿ ಒಟ್ಟಿಗೆ ಮಾಡಬಹುದು ಅಥವಾ ಬೇರೆ ಬೇರೆಯಾಗಿ ಮಾಡುವ ಪರಿಪಾಠವೂ ಇದೆ. ಶ್ರಾದ್ಧದ ಆಚರಣೆಗೆ ಒಂದು ಕ್ರಮ ಇದೆ. ಆ ಕ್ರಮ ವ್ಯತ್ಯಾಸವಾದರೂ ಸಹ ಶ್ರಾದ್ಧ ಮಾಡಿ ಪ್ರಯೋಜನವಿಲ್ಲ. ನಗರ ಪರಿಸರದಲ್ಲಿ ಶ್ರಾದ್ಧಾಚರಣೆಯಲ್ಲಿ ಅಷ್ಟು ತೀವ್ರವಾದ ಕಟ್ಟುಕಟ್ಟಳೆಗಳು ಇರುವುದಿಲ್ಲ. ಆದರೆ ಗ್ರಾಮೀಣ ಪರಿಸರದಲ್ಲಿ ಕಟ್ಟುಕಟ್ಟಳೆಗಳು ತೀವ್ರವಾಗಿ ಇರುತ್ತದೆ. ಶ್ರಾದ್ಧದ ಆಚರಣೆ ಅನೇಕ ಸಂದರ್ಭಗಳಲ್ಲಿ ಬ್ರಾಹ್ಮಣರ ಪಾಲಿಗೆ ಆರ್ಥಿಕವಾಗಿ ಬಹಳ ಹೊರೆಯು ಆಗುತ್ತದೆ. ಬ್ರಾಹ್ಮಣ ಶ್ರಾದ್ಧ ಮಾಡಿ ಸೊರಗಿದ ಎಂಬುದಕ್ಕೆ ಒಂದು ಗಾದೆಯ ಮಾತೆ ಇದೆ. - 'ಬ್ರಾಹ್ಮಣ ದುಡಿದಿದ್ದೆಲ್ಲಾ ಪಿಂಡಕ್ಕೆ ಆಯ್ತು' ಎಂಬ ಮಾತು ಇಲ್ಲಿ ನೆನಪಿಗೆ ಬರುತ್ತದೆ.

ಗೊರೂರರವರು ಗ್ರಾಮೀಣ ಸಮಾಜದಲ್ಲಿ ಬ್ರಾಹ್ಮಣರು ಆಚರಿಸುವ ಶ್ರಾದ್ಧದ ಬಗ್ಗೆ ತಮ್ಮ ಕಥೆ, ಕಾದಂಬರಿ, ಪ್ರಬಂಧಗಳಲ್ಲಿ ಸಾಕಷ್ಟು ಸಂದರ್ಭಗಳಲ್ಲಿ ವಿವರಿಸಿದ್ದಾರೆ. 'ಬೈಲಹಳ್ಳಿ ಸರ್ವೆ' ಪ್ರಬಂಧ ಸಂಕಲನದಲ್ಲಿ ಶಿಂಗ್ಲಾಚಾರಿ ತಿಥಿ ಮಾಡುವ ರೀತಿಯನ್ನು ಕುರಿತು ಹೀಗೆ ಹೇಳುತ್ತಾರೆ. ಶಿಂಗ್ಲಾಚಾರಿ ಮಧ್ಯಮ ವ್ಯಧ ಮಟ್ಟಕ್ಕೂ ಆರ್ಥಿಕವಾಗಿ ಕೆಳಮಟ್ಟದ ವ್ಯಕ್ತಿ. ಆತ ಬಡವನಾದ ಕಾರಣ ಸಂಪ್ರದಾಯದ ರೀತಿಯಲ್ಲಿ ಹೆಚ್ಚು ಉತ್ತಮ ರೀತಿಯಲ್ಲಿ ಶ್ರಾದ್ಧ ಮಾಡಲಾರ. ಸಂಪ್ರದಾಯಕ್ಕೆ ಕಟ್ಟು ಬಿದ್ದಿರುವ ಕಾರಣದಿಂದ ಶಿಂಗ್ಲಾಚಾರಿ ಶ್ರಾದ್ಧವನ್ನು ಕೈಬಿಡಲು ಒಪ್ಪಲಾರ. ಈ ಕಾರಣದಿಂದಲೇ ಶಿಂಗ್ಲಾಚಾರಿ ತಾನು ಶ್ರಾದ್ಧ ಮಾಡುವ ರೀತಿಯನ್ನು ಅವನ ಜಾತಿಯ ಕೆಲವರು ಛೇಡಿಸಿದಾಗ "ಅರ್ಧ ಸೇರು ಉದ್ದು ಒಂದಾಣೆ ಬೆಲ್ಲದಲ್ಲಿ ನೀನು ಶ್ರಾದ್ಧ ಮಾಡಿದರೆ ನಮಗೆ ಚೆನ್ನಾಗಿಯೇ ಹೊಟ್ಟೆ ತುಂಬುತ್ತೆ" ಎಂದಾಗ ಶಿಂಗ್ಲಾಚಾರಿಯು "ಎಲ್ಲಾ ಕಂಡಿದೀನಿ ಬಾರೊ, ತಿಂಗಳಿಗೆ ಮೂರು ಶ್ರಾದ್ಧ ಬರ್ತಿದ್ರೆ, ನಾನು

ಎಲ್ಲಿಂದಲೋ ಮಾಡೋದು" ಎಂದು (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪುಟ-೪) ಶಿಂಗ್ಣಾಚಾರಿ ತನ್ನ ಅಸಹಾಯಕತೆಯನ್ನು ಈ ಮೂಲಕ ತೋಡಿಕೊಳ್ಳುತ್ತಾನೆ.

'ಮೆರವಣಿಗೆ' ಕಾದಂಬರಿಯಲ್ಲಿ ಶ್ರಾದ್ಧದ ಆಚರಣೆ ಬಗ್ಗೆ ಇರುವ ಮೂಢನಂಬಿಕೆಯನ್ನು ಗೊರೂರರವರು ಪ್ರಸ್ತಾಪಿಸಿದ್ದಾರೆ. ಯಯಾತಿಗೆ (ಯಯಾತಿ ಎಂಬುದು ಅವನ ನಿಜವಾದ ಹೆಸರಲ್ಲ. ಆದರೆ ಊರಿನವರು ಆ ಹೆಸರನ್ನು ಇಟ್ಟಿದ್ದರು) ಅನಂತುವಿನ ತಂಗಿಯನ್ನು ಕೊಡಲು ವಿವಾದ ಎದ್ದಾಗ ಆತ ತನ್ನ ತಂದೆಯ ಶ್ರಾದ್ಧವನ್ನು ಕೈಬಿಟ್ಟ ವ್ಯಕ್ತಿ ಎಂಬುದು ಒಂದೇ ಕಾರಣವಾಗಿರುತ್ತದೆ. "ಈ ಶ್ರಾದ್ಧ, ತಂದೆ ತಾಯಿಗಳಿಗೆ ತಲುಪುತ್ತದೆಯೋ ಎಂಬ ಪ್ರಶ್ನೆ ಯಾವಾಗಲೂ ಇದ್ದೇ ಇತ್ತು. ಈ ಪ್ರಸಾದವನ್ನು ತಂದೆ ತಾಯಿಗಳಿಗೂ ಪಿತೃಗಳಿಗೂ ಸಾಗಿಸುವ ವಾಹಕವೋ ಕಾಗೆ. ಲೋಕದಲ್ಲಿ ಪಿತೃಗಳಿಗೆ ಆಹಾರ ಕಾಗೆಗಳ ಮೂಲಕವೇ ಹೋಗಬೇಕೆ? ವೇದಗಳ ವಿಚಾರವನ್ನೇ ತಿಳಿಯದ, ಶ್ರಾದ್ಧ ಕಾಲದಲ್ಲಿ ಮಂತ್ರ ಗಳನ್ನು ಉಚ್ಚರಿಸುವುದಕ್ಕೆ ಬರದ, ಕೇಳಿದ ಪ್ರಶ್ನೆಗೆ ಜವಾಬ್ ಕೊಡುವುದೂ ತಿಳಿಯದ ಬ್ರಾಹ್ಮಣ, ಮಿತಿ ಮೀರಿ ತಿಂದು ತೇಗು ಬಿಟ್ಟು ಬಿಟ್ಟರೆ, ಒಬ್ಬ ಪಿತೃವಿಗೆ ಸದ್ಗತಿಯುಂಟಾಗಿ ಹೋಯಿತೆ?". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು-೨೪೧) ವಾಯಸಕ್ಕೆ ಪಿಂಡ ಹಿಡುವ ಸಂಪ್ರದಾಯದ ಬಗ್ಗೆ ಗೊರೂರರವರು ಚಿಂತನೆಗೆ ಪ್ರೇರಣೆ ಕೊಟ್ಟಿರುವುದು ಇಲ್ಲಿ ಮುಖ್ಯವಾದ ವಿಷಯವಾಗಿದೆ. ಸಂಪ್ರದಾಯಗಳ ಕುರುಡು ಆಚರಣೆಗಿಂತ ಸಂಪ್ರದಾಯಗಳನ್ನು ಕುರಿತು ವೈಚಾರಿಕವಾಗಿ ಆಲೋಚಿಸುವುದು ಹೆಚ್ಚು ಸಮಂಜಸ ಎಂಬ ಲೇಖಕರ ನಿಲುವು ಇಲ್ಲಿ ಮೆಚ್ಚುವಂತಹದು.

'ನಮ್ಮೂರಿನ ರಸಿಕರು' ಕೃತಿಯಲ್ಲಿ ಗೊರೂರರವರು ಸತ್ತವನಿಗೆ ಮಾಡುವ ಕರ್ಮಾಚರಣೆಯ ಬಗ್ಗೆ ಆಡುವ ಮಾತುಗಳು ಇಲ್ಲಿ ಗಮನಾರ್ಹ. ಸತ್ತವನಿಗೆ ಮಾಡುವ ಕರ್ಮಗಳು ಸಂಪ್ರದಾಯಿಕವಾಗಿ ಅತಿ ತೊಡಕಾಗಿರುತ್ತದೆ. ಆರ್ಥಿಕವಾಗಿ ಅಷ್ಟೇ ದುಬಾರಿಯಾಗಿರುತ್ತದೆ. ಸತ್ತ ದಿನದಿಂದ ಹಿಡಿದು ಹದಿಮೂರು ದಿನದವರೆಗೆ ಬ್ರಾಹ್ಮಣರು ಒಂದಲ್ಲ ಒಂದು ಸಂಸ್ಕಾರಗಳನ್ನು ಮಾಡಲೇಬೇಕು. ಈ ಸಂಸ್ಕಾರಗಳು ಆಗುವ ತನಕ ವ್ಯಕ್ತಿ ಪ್ರೇತಾವಸ್ಥೆಯಲ್ಲೇ ಇರುತ್ತಾನೆ ಎಂಬುದು ಬ್ರಾಹ್ಮಣರ ನಂಬಿಕೆ. ಹದಿಮೂರು ದಿನಗಳು ಈ ಸಂಸ್ಕಾರದ ನಂತರ ವ್ಯಕ್ತಿಯ ಆತ್ಮ ಪ್ರೇತಾವಸ್ಥೆಯಿಂದ ಮುಕ್ತವಾಗಿ ಸ್ವರ್ಗ ಸೇರಿಕೊಳ್ಳುತ್ತದೆ ಎಂಬುದು ಅವರ ನಂಬಿಕೆ. "ಸತ್ತವನೇನೋ ಸತ್ತ, ಎಂದರೆ ಅವನ ಕರ್ಮಾಂತರಗಳನ್ನು ಮಾಡಿ ವೈದಿಕರ ಕೈಯಲ್ಲಿ ಸರಿ ಎನಿಸಿಕೊಳ್ಳಬೇಕಾದರೆ ಅವನ ವಾರಸುದಾರರೂ ಸಾಯಲೇಬೇಕು. ಆಗ ಸತ್ತ ಬಡ ಪ್ರಾಣಿಯನ್ನು ದಾರಿಯಲ್ಲಿ ಸಾವಿರಾರು ಪಿಶಾಚಿಗಳು ಅಡ್ಡಗಟ್ಟುತ್ತವೆ. ಅವುಗಳಿಗೆಲ್ಲಾ ಪ್ರಾಯಶ್ಚಿತ್ತ ಶಾಂತಿ ಆಗಬೇಕು. ಪ್ರತಿ ಪ್ರಾಯಶ್ಚಿತ್ತಕ್ಕೂ ಪುರೋಹಿತರಿಗೆ ಎರಡಾಣೆ ನಾಲ್ಕಾಣೆ ಕೃಚ್ಛ್ರ ಕೊಟ್ಟು, ಅಲ್ಲಿ ನೆರೆದ ಉಳಿದ ವೈದಿಕರಿಗೆಲ್ಲಾ ದಕ್ಷಿಣೆ ಸಮರ್ಪಿಸಿ, ಆ ಪಿಶಾಚಿಗಳನ್ನು ಓಡಿಸಬೇಕು. ಸತ್ತವನ ಆತ್ಮಕ್ಕೆ ದಾರಿಯಲ್ಲಿ ಬಿಸಿಲಾಗದಂತೆ ಇಲ್ಲಿ ವೈದಿಕರಿಗೂ ಪುರೋಹಿತರಿಗೂ ಛತ್ರಿ ದಾನ

ಮಾಡಬೇಕು. ಕಾಲು ಸುಡದಂತೆ ಜೋಡಿನ ದಾನ ಕೊಡಬೇಕು. ಸತ್ತವನು ಮೇಲಿನ ಲೋಕದಲ್ಲಿ ಪೈರುಪಚ್ಚೆ ಬೆಳೆದುಕೊಳ್ಳಲು ಇಲ್ಲಿ ಭೂದಾನ, ವಸ್ತ್ರದಾನ, ಸುವರ್ಣ ದಾನ, ಎಳ್ಳು ದಾನ, ಹಾಸಿಗೆ ದಾನ, ಇನ್ನು ಪುರೋಹಿತರಿಗೆ ಏನೇನು ತೋರುತ್ತದೋ ಆ ದಾನಗಳನ್ನೆಲ್ಲಾ ಕೊಟ್ಟು "ಪರವಾಯಿಲ್ಲ, ಸತ್ತವನು ಕೈಲಾಸಕ್ಕೋ ವೈಕುಂಠಕ್ಕೋ ಹೋಗಲಿ" ಎನ್ನಿಸಬೇಕಾದರೆ ಕರ್ಮಾಂತರ ಮಾಡುವವನಿಗೇ ಕರ್ಮಾಂತರವಾಗಿ ಹೋಗುತ್ತದೆ. ಬೇಕಾದ್ದಾಗಲಿ, ಶಾಸ್ತ್ರದಂತೆ ನಡೆಯಲೇಬೇಕು. ಇಲ್ಲದಿದ್ದರೆ ಆರ್ಯ ಮಹರ್ಷಿಗಳ ಸನಾತನ ಧರ್ಮವೆಲ್ಲಾ ಹಾಳಾಗಿ ಬಿಡುವುದಲ್ಲ! ಸರಿಯಾಗಿ ಶಾಸ್ತ್ರದಲ್ಲಿ ಹೇಳಿರುವಂತೆ ಕೃಚ್ಛ್ರಗಳೊಂದಿಗೆ ಕರ್ಮಾಂತರ ಮಾಡದಿದ್ದರೆ, ಸತ್ತವನು ಅಂತರಪಿಶಾಚಿಯಾಗಿ ವಾತಾವರಣದಲ್ಲಿಯೂ ನರಕದಲ್ಲಿಯೂ ಅಲೆಯುತ್ತಿರುತ್ತಾನೆ, ಬದುಕಿರುವವನು ಬಹಿಷ್ಕೃತನಾಗಿ ಸಮಾಜದ ಹೊರಗೆ ಇರುತ್ತಾನೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೨೧-೨೨) ಎನ್ನುತ್ತಾರೆ ಗೊರೂರರವರು.

ಗೊರೂರಿಗೆ ಪ್ಲೇಗು ಬಂದ ಸಂದರ್ಭದಲ್ಲಿ ಶವಸಂಸ್ಕಾರ ಆದ ರೀತಿಯ ಬಗ್ಗೆ ಗೊರೂರರವರು ಆಡುವ ಮಾತು ಮನನೀಯವಾದದ್ದು. "ಒಂದು ಕಾಲಕ್ಕೆ ಊರಿನಲ್ಲಿ ಹೆಣ ಬಿತ್ತು ಎಂದರೆ ಊರಿನವರು ಹೇಳದೆ ಕೇಳದೆ ಎಲ್ಲಿಯೋ ಓಡಿ ಹೋಗುತ್ತಿದ್ದರು. ಆದರೆ ಆನಂತರದಲ್ಲಿ ಯಾರಾದರೂ ಸತ್ತರೆ ಊರಿನವರೆಲ್ಲಾ ಅವನ ಮನೆಯ ಬಾಗಿಲಿಗೆ ಹೋಗಿ ಕುಳಿತುಕೊಂಡು, ಸತ್ತವರ ಕಡೆಯವರಿಗೆ ಸಮಾಧಾನ ಮಾಡಿ, ಬೇಕಾದ ಸೌದೆ ಮುಂತಾದ ಸಾಮಾನುಗಳನ್ನೆಲ್ಲಾ ಸ್ಮಶಾನಕ್ಕೆ ಸಾಗಿಸಿ, ಎಲ್ಲಾ ಕೆಲಸವನ್ನು ಮುಗಿಸಿ ಮನೆಗೆ ಬರುತ್ತಾರೆ. ಅದರಲ್ಲೂ ಮೂರು ನಾಲ್ಕು ಜನರಂತೂ ಅವರಿಗೆ ತಿಳಿಯದೆ, ಸತ್ತವರು ಸ್ಮಶಾನಕ್ಕೆ ಹೋದುದೇ ಇಲ್ಲ. ನಮ್ಮ ಊರಿನವರು ಅವರನ್ನು ಹೆಣ ಹೊತ್ತು ನಿಮ್ಮ ಹೆಗಲು ಮುರಿದು ಹೋಗಿದೆ ಎಂದು ಹಾಸ್ಯ ಮಾಡುತ್ತಾರೆ. ಈಗ ಹನ್ನೆರಡು ವರ್ಷಗಳ ಹಿಂದೆ ನಮ್ಮೂರಿಗೆ ಬಂದ ಆ ಭಾರಿ ಪ್ಲೇಗಿನಲ್ಲಿ ದಿವಸಕ್ಕೆ ಒಬ್ಬೊಬ್ಬರಂತೆ ಅನೇಕರು ಯಮನ ಪ್ರಜೆಗಳಾದರು. ಆ ಹದಿನೈದು ದಿವಸ ಇವರಿಗೆ ಮತ್ತೇನು ಕೆಲಸವಿಲ್ಲ. ಪ್ಲೇಗು ತಮಗೆ ಅಂಟುವುದೆಂಬ ಭಯವಿಲ್ಲ. ದುಡ್ಡಿನ ಲಾಭದ ಆಸೆಯಿಲ್ಲ. ಆದರೆ ಪ್ರತಿನಿತ್ಯ ಶವಗಳನ್ನು ಸ್ಮಶಾನಕ್ಕೆ ಸಾಗಿಸುವುದೇ ಇವರ ಕೆಲಸವಾಗಿ ಹೋಯಿತು. ಶವಸಂಸ್ಕಾರದ ಈ ಚುರುಕನ್ನು ನೋಡಿ ನಮ್ಮೂರಿನಲ್ಲೇ ಅನೇಕರು ಸಾಯಲು ಬಯಸಿದರೂ ಬಯಸಿರಬಹುದು. ನಮ್ಮ ಊರು ಕಾಶಿ, ಗಯೆಗಳಿರುವಂತಹ ಮಹಿಮೆ ಇಲ್ಲದಿದ್ದರೂ ಪ್ರಕೃತಿಯ ಕೊನೆಯ ಸಾಲವನ್ನು ತೀರಿಸಿದವರ ದೇಹವು ಬೇಗ ಪಂಚಭೂತಗಳಲ್ಲಿ ಸೇರಿಸಿಕೊಳ್ಳುವುದೆಂದು ನಾನು ನಿರ್ಭಯವಾಗಿ ಹೇಳಬಲ್ಲೆ" (ಅದೇ; ಪು.೨೦) ಎಂದು ಲೇಖಕರು ನುಡಿಯುತ್ತಾರೆ. ಅಂತ್ಯಸಂಸ್ಕಾರದ ಬಗ್ಗೆ ಗೊರೂರರವರು ಕೊಡುವ ಈ ಅಭಿಪ್ರಾಯಗಳು ಎಷ್ಟು ಕುತೂಹಲಕಾರಿಯಾಗಿದೆಯೋ ಅಷ್ಟೇ ಸತ್ಯವಾದದ್ದು. ಒಂದು ಕಾಲಕ್ಕೆ ಅಂತ್ಯ ಸಂಸ್ಕಾರ ಅತಿ ದೊಡ್ಡ ಸಮಸ್ಯೆಯಾಗಿದ್ದರೆ ಮತ್ತೊಂದು ಕಾಲಕ್ಕೆ ಶೀನಪ್ಪನ ತಂದೆಯವರಂತಹ ಹಿರಿಯರ ಹೊಸ ಆಲೋಚನೆಯಿಂದ ಯುವಕರ ಸಹಾಯದಿಂದ ಸಂಸ್ಕಾರ ಕಾರ್ಯ ಸರಳವಾಯಿತು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಬ್ರಾಹ್ಮಣರಲ್ಲಿ ಶವಸಂಸ್ಕಾರ ಅಪರಕ್ರಿಯೆ ಎಷ್ಟು ತೊಡಕಾಗಿತ್ತು ಎಂಬುದನ್ನು

ಗೊರೂರವರು 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಸಾಂದರ್ಭಿಕವಾಗಿ ತಿಳಿಸಿರುವುದು ಅತ್ಯಂತ ವಿಚಾರಪೂರ್ಣ ವಿಷಯವಾಗಿದೆ. ಈ ಭಾಗದಲ್ಲಿ ಕೆಲವು ಸಂಪ್ರದಾಯಸ್ಥರ ಗೊಡ್ಡು ಕಟ್ಟುಕಟ್ಟಳೆಗಳನ್ನು ಗುರುತಿಸಬಹುದು. ಅದರೊಂದಿಗೆ ವಿಚಾರಪೂರ್ಣವಾದ ಮನಸ್ಸಿನ ಔದಾರ್ಯಪೂರ್ಣ ಭಾವನೆಗಳನ್ನು ಕೆಲವರಲ್ಲಿ ಗಮನಿಸಬಹುದು.

ಬ್ರಾಹ್ಮಣ ವರ್ಗದಲ್ಲಿ ಇದ್ದ ಶವಸಂಸ್ಕಾರದ ರೀತಿಯನ್ನು ಗೊರೂರವರು ಕೊಟ್ಟಿರುವುದು ಒಂದು ಸಂಪ್ರದಾಯದವರ ವಿಶಿಷ್ಟ ಆಚರಣೆಯ ಚಿತ್ರವಾಗಿ ಉಳಿದಿದೆ. 'ಗೋಪುರದ ಬಾಗಿಲು' ಕೃತಿಯಲ್ಲಿ ಈ ಕ್ರಿಯೆಯ ಸಂಪೂರ್ಣ ವಿವರಣೆ ಕಂಡುಬರುತ್ತದೆ. "ಶವದ ಕಾಲುಗಳನ್ನು ಮಡಿಸುವುದು ತೋಟದಿಂದ ಹಸಿಯ ಬಾಳೆಯ ನಾರನ್ನು ತರಸಿ ಅದರಿಂದ ಹಗ್ಗವನ್ನು ಮಾಡಿ ಅಡಿಕೆ ದಬ್ಬೆಗೆ ಬಿಗಿಯುವುದು, ಶವಕ್ಕೆ ಅಡಿಕೆಯ ದಬ್ಬೆಯಿಂದಲೇ ಒಂದು ತಲೆದಿಂಬನ್ನೂ ಸಹ ಮಾಡುವುದು, ಮನೆಯಿಂದ ಮಡಕೆಯಲ್ಲಿ ಬೆಂಕಿಯನ್ನು ತೆಗೆದುಕೊಂಡು ಹೋಗಲು ಮಡಕೆಗೆ ದಬ್ಬೆಯ ಮೂರು ತಿಕಡಿಗಳನ್ನು ಮಾಡಿ ಕೈಗೆ ಶಾಖ ತಗಲದಂತೆ ಸ್ವಲ್ಪ ಉದ್ದವಾದ ಬಾಳೆಯ ನಾರಿನ ಹಿಡಿಯನ್ನು ಮಾಡುವುದು, ಬೆರಣಿ ಸೌದೆಗಳನ್ನೆಲ್ಲ ಶ್ಮಶಾನಕ್ಕೆ ಕಳುಹಿಸುವುದು, ಅಲ್ಲಿ, ಸತ್ತವನ ಅಥವಾ ಸತ್ತವಳ ಉದ್ದ ಅಗಲವನ್ನು ನೋಡಿಕೊಂಡು ಸರಿಯಾದ ಅಳತೆಯ ಸೌದೆ ಬೆರಣಿಯ ಹಾಸಿಗೆಯನ್ನು ಅವನಿಗಾಗಿ ನಿರ್ಮಿಸುವುದು, ಇವೆಲ್ಲಾ ಮಲ್ಲಿಗೆ ಹಳ್ಳಿಯವರು ಹೇಳುತ್ತಿದ್ದಂತೆ ಒಂದು ವಿದ್ಯವೇ ಆಗಿದ್ದಿತು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೪; ಪು.೧೮೦) ಒಂದು ನಿರ್ದಿಷ್ಟ ಹಳ್ಳಿಯ ಒಂದು ಸಂಸ್ಕಾರದ ಶಾಸ್ತ್ರೀಯ ರೀತಿಯ ಚಿತ್ರ ಇಲ್ಲಿ ವ್ಯಕ್ತವಾಗಿದೆ. ಇಂತಹ ಚಿತ್ರಗಳು ಕೃತಿಯ ಪ್ರಾದೇಶಿಕ ಮೌಲ್ಯಕ್ಕೆ ಕಾರಣವಾಗಬಹುದು.

'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಲಕ್ಷ್ಮೀಪತಿಭಟ್ಟರ ಸಾವಿನ ಸಂಗತಿ ಗಮನಾರ್ಹವಾದದ್ದು, ಬಡವನಾದ ಲಕ್ಷ್ಮೀಪತಿ ಸತ್ತಾಗ ಕೆಲವರು ಅವನ ಶವವನ್ನು ಸ್ಮಶಾನಕ್ಕೆ ಕೊಂಡೊಯ್ದು ಶವ ಸಂಸ್ಕಾರವನ್ನು ಪುರೋಹಿತರಿಲ್ಲದೆ ನಡೆಸಿಬಿಟ್ಟರು. ದುಡ್ಡಿಗಾಗಿ ಪೌರೋಹಿತ್ಯವನ್ನು ಮಾಡುವ ಪುರೋಹಿತರು ಲಕ್ಷ್ಮೀಪತಿ ಬಡವ ಆದಕಾರಣ ಅವನ ಶವಸಂಸ್ಕಾರಕ್ಕೆ ಸಹಕರಿಸಲಿಲ್ಲ. ಪುರೋಹಿತರನ್ನು ಬಿಟ್ಟು ಶವಸಂಸ್ಕಾರವನ್ನು ಮಾಡಿಸಿದ್ದಕ್ಕೆ ಲಕ್ಷ್ಮೀಪತಿಭಟ್ಟರ ಹೆಂಡತಿಗೂ ಅವರ ಮಗಳಿಗೂ ಊರಿನ ಪಂಡಿತರು ಬಹಿಷ್ಕಾರ ಹಾಕುತ್ತಾರೆ. ಬಹಿಷ್ಕೃತವಾಗಿ ಬದುಕುವುದಕ್ಕಿಂತ ಸಾವೇ ಸೂಕ್ತವೆಂದು ಲಕ್ಷ್ಮೀಪತಿಭಟ್ಟನ ಹೆಂಡತಿಯು ಮಗಳು ಊರ ಮುಂದಲ ಪಾಚಿ ಕೊಳದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡರು. ತಮ್ಮಿಂದಲೇ ಆದ ಈ ಘೋರ ದುರಂತಕ್ಕೆ ಪಂಡಿತರು ಪ್ರತಿಕ್ರಿಯಿಸಿದ ರೀತಿ "ಹೋದರೆ ಹೋಗಲಿ ಬ್ರಾಹ್ಮಣ ಧರ್ಮಕ್ಕೆ ನಮ್ಮ ಊರಿನಲ್ಲಿ ಬಂದಿದ್ದ ಕಳಂಕ ನಾಶವಾಯಿತು" ಎನ್ನುತ್ತಾರೆ. (ಗೊರೂರುಸ್ವಾಮಿ ಅಯ್ಯಂಗಾರ್; ೨೦೦೧; ಪು.೨೩) ಪ್ರಜ್ಞಾವಂತ ರಾಮಣ್ಣನವರಿಗೆ ಹಣದ ಆಸೆಗೆ ಬಲಿಯಾಗಿದ್ದ ಪಂಡಿತರ ಈ ವರ್ತನೆ ತೀವ್ರ ಸಂಕಟವನ್ನು ತಂದಿತು. ಅನ್ಯಾಯವಾಗಿ ಭಟ್ಟನ ಹೆಂಡತಿ ಮಕ್ಕಳನ್ನು ನಾವೇ ಕೈಯಿಂದ

ಕೊಂದೆವು ಎಂದು ಊರ ಯುವಕರಿಗೆ ಹೇಳಿ "ನೀವೆಲ್ಲಾ ಅಪರಕರ್ಮವನ್ನು ಮಾಡಿಸುವುದನ್ನು ಕಲಿತು ಬಿಡಿ ನಾನು ಹೇಳಿ ಕೊಡುತ್ತೇನೆ. ಎಲ್ಲಿ ಹೆಣ ದಿಕ್ಕಿಲ್ಲದೆ ಬಿದ್ದರು ಅದಕ್ಕೆ ನೀವೇ ಮುಂದಾಗಿ, ಕರೆಸಿ ಕೊಳ್ಳದೆ ದಕ್ಷಿಣೆ ತೆಗೆದುಕೊಳ್ಳದೆ ಶಾಸ್ತ್ರೋಕ್ತವಾಗಿ ಕರ್ಮ ಮಾಡಿಸಿ" (ಅದೇ) ಎಂದು ಕರೆಕೊಟ್ಟು ಯುವಕರ ಬಳಗವನ್ನು ರಾಮಣ್ಣನವರು ಕಟ್ಟುತ್ತಾರೆ. ಗೊರೂರರವರು ಈ ಪ್ರಸಂಗದ ಉಲ್ಲೇಖದ ಮೂಲಕ ಪಂಡಿತ ಬ್ರಾಹ್ಮಣರು ನಡೆದುಕೊಂಡ ಹೀನ ವರ್ತನೆಯ ರೀತಿಯನ್ನು ಕಟುವಾಗಿ ಟೀಕಿಸುತ್ತಾರೆ. ಬ್ರಾಹ್ಮಣರೇ ಬ್ರಾಹ್ಮಣ ಜಾತಿಯವರಿಗೆ ಮಾಡಿದ ಅನ್ಯಾಯವನ್ನು, ಕೊಟ್ಟ ನೋವನ್ನು ಸ್ವಜಾತಿಯವರಾದ ಗೊರೂರರವರು ಖಂಡಿಸಿರುವುದು ಇಲ್ಲಿ ಶ್ಲಾಘನೀಯವಾದ ಅಂಶವಾಗಿದೆ. ಇದರ ಜೊತೆಗೆ ಪ್ರಜ್ಞಾವಂತ ಯುವಕರನ್ನು ಹೇಗೆ ಕ್ರಿಯಾತ್ಮಕವಾಗಿ ಸನ್ಮಾರ್ಗಕ್ಕೆ ತರಬಹುದು ಎಂಬುದನ್ನು ಲೇಖಕರು ಸೂಕ್ಷ್ಮವಾಗಿ ತಿಳಿಸಿರುವುದು ಮೆಚ್ಚುವ ಅಂಶವಾಗಿದೆ. ಹೀಗೆ ಅನೇಕ ಸಂದರ್ಭಗಳಲ್ಲಿ ಗೊರೂರರವರು ಸತ್ಯಾಂಶವನ್ನು ನಿಷ್ಪಕ್ಷಪಾತವಾಗಿ ವಿಚಾರ ಮಾಡಿರುವುದನ್ನು ನಾವು ಅವರ ಕೃತಿಗಳಲ್ಲಿ ಗಮನಿಸಬಹುದು. ತಮ್ಮದೇ ಜಾತಿಯವರು ಮಾಡಿದ ತಪ್ಪನ್ನು ಪಕ್ಷಭೇದ ಇಲ್ಲದೆ ಖಂಡಿಸುವ ಗೊರೂರರವರ ಈ ಪ್ರವೃತ್ತಿಯನ್ನು ಪ್ರಜ್ಞಾವಂತರೆಲ್ಲರು ಮೆಚ್ಚಿಕೊಳ್ಳುತ್ತಾರೆ. ಈ ಭಾಗದಲ್ಲಿ ಸಂಪ್ರದಾಯದ ಚಿತ್ರಣ ಸಂಪ್ರದಾಯದಲ್ಲಿ ಆಗುವ ಅನ್ಯಾಯಗಳ ಚಿತ್ರಣ ಎರಡನ್ನು ಗುರುತಿಸಬಹುದು. ಸಂಪ್ರದಾಯದಲ್ಲಿ ಕಂಡು ಬರುವ ಮೂಢನಂಬಿಕೆಗಳ ಅಂಶವನ್ನು ಇಲ್ಲಿ ನೋಡಬಹುದು.

ಶಕುನಗಳು ಗ್ರಾಮೀಣ ಜನರ ಬದುಕಿನಲ್ಲಿ ಅತ್ಯಂತ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಗ್ರಾಮೀಣ ಜನರ ಅಜ್ಞಾನ ಈ ಮೂಢನಂಬಿಕೆಗಳಿಗೆ ಮುಖ್ಯ ಕಾರಣವಾಗಿರುತ್ತದೆ. ದೇವರು ಧರ್ಮದ ಬಗ್ಗೆ ಭಯದ ಮನೋಭಾವನೆ ಇರುವುದರಿಂದ ಗ್ರಾಮೀಣ ಜನರು ಶಕುನಗಳಿಗೆ ಸುಲಭವಾಗಿ ಮಾರು ಹೋಗುತ್ತಾರೆ. ಇಷ್ಟೇ ಅಲ್ಲದೆ ಶಕುನಗಳನ್ನು ಅನುಸರಿಸುವುದರ ಮೂಲಕ ಜೀವನದಲ್ಲಿ ಬರುವ ತೊಡಕುಗಳನ್ನು ನಿವಾರಿಸಿಕೊಳ್ಳಬಹುದು ಎಂಬ ಭಾವನೆ ಮತ್ತು ತೊಡಕುಗಳ ಬಗ್ಗೆ ಮುಂಜಾಗ್ರತೆ ವಹಿಸಬಹುದು ಎಂಬ ಆಲೋಚನೆಯು ಸಹ ಗ್ರಾಮೀಣ ಜನರಲ್ಲಿ ಇರುತ್ತದೆ. ಶಕುನಗಳಿಂದ ಮಾನಸಿಕ ಸ್ಥೈರ್ಯವನ್ನು ಗ್ರಾಮೀಣ ಜನ ಪಡೆಯುತ್ತಾರೆ. ಹೀಗೆ ಶಕುನಗಳು ಆರೋಗ್ಯ ವಿಷಯದಲ್ಲಿ ಮಂಗಳ ಕಾರ್ಯದ ವಿಷಯದಲ್ಲಿ ಮಹತ್ವ ಪಾತ್ರವಹಿಸುತ್ತದೆ ಎಂಬುದನ್ನು ತಿಳಿದವರು ಅಭಿಪ್ರಾಯಪಡುತ್ತಾರೆ. ಜೀವನದ ಅನೇಕ ಮೂಲಭೂತ ನಂಬಿಕೆಗಳಿಗೆ ಶಕುನಗಳ ಮೇಲಿನ ನಂಬಿಕೆಯೇ ಮೂಲಕಾರಣ ಎಂಬುದನ್ನು ಲೇಖಕರು ತಮ್ಮ ಕೃತಿಗಳಲ್ಲಿ ಪರಿಚಯಿಸಿದ್ದಾರೆ. ವೈಯಕ್ತಿಕವಾಗಿ ಗೊರೂರರವರಿಗೆ ಇಂಥ ನಂಬಿಕೆಗಳ ಬಗ್ಗೆ ವಿಶ್ವಾಸವಿಲ್ಲದಿದ್ದರು ಗ್ರಾಮೀಣ ಜೀವನವನ್ನು ಚಿತ್ರಿಸುವಾಗ ಗ್ರಾಮೀಣ ಜನರ ನಂಬಿಕೆ-ಶಕುನಗಳಲ್ಲಿನ ನಂಬಿಕೆ ಇದನ್ನು ಮರೆಯದೆ ಚಿತ್ರಿಸಿದ್ದಾರೆ. ಕತೆಯ ಚೌಕಟ್ಟಿಗೆ ಈ ಶಕುನಗಳ ಉಲ್ಲೇಖ ಹೆಚ್ಚು ಸಮಂಜಸ ಎಂಬುವಂತೆ ಲೇಖಕರು ಪರಿಭಾವಿಸಿದ್ದಾರೆ.

ದೇವರ ಮೇಲೆ ಆಣೆ ಇಟ್ಟು ಮಾತನಾಡುವುದು ಗ್ರಾಮೀಣ ಜನರಲ್ಲಿ ಸಾಮಾನ್ಯ ಸಂಗತಿ. ದೇವರು ಸರ್ವಶಕ್ತ ಆತನಿಗೆ ಅಪಚಾರ ಮಾಡುವುದು ಅತ್ಯಂತ ಪಾಪದ ಕೆಲಸ ಎಂಬ ಪಾಪ ಪ್ರಜ್ಞೆ ಗ್ರಾಮೀಣ ಜನರ ಮನಸ್ಸಿನಲ್ಲಿ ತಳವೂರಿರುತ್ತದೆ. ಯಾರಿಗೆ ಹೆದರದಿದ್ದರೂ ಕೊನೆಗೆ ದಂಡ ಶಿಕ್ಷೆಗೆ ಹೆದರದಿರುವ ಗ್ರಾಮೀಣ ಜನರು ದೇವರಿಗೆ ಖಂಡಿತವಾಗಿಯೂ ಹೆದರುತ್ತಿದ್ದರು. ಹೆತ್ತವರ ಮೇಲೆ ಆಣೆ ಇಡುವುದಕ್ಕೆ ಹೆದರದ ಗ್ರಾಮೀಣ ಜನ ದೇವರ ಮೇಲೆ ಆಣೆ ಇಡುವುದಕ್ಕೆ ಸಹಜವಾಗಿಯೇ ಭಯಪಟ್ಟಿರುವುದನ್ನು ಗೊರೂರರವರು 'ವೈಯಾರಿ' ಕಥಾ ಸಂಕಲನದಲ್ಲಿ ಪ್ರಸ್ತಾಪಿಸಿದ್ದಾರೆ. 'ಗಂಡು ಬೀರಿ ಹೊಸಬಿ' ಕತೆಯಲ್ಲಿ ಶರೀರದ ರಕ್ತ ಸುರಿಸಿ ಹೊಸಬಿ ಹಣ ಸಂಪಾದಿಸಿ ಸಂಸಾರ ಸಾಗಿಸುತ್ತಿರುವಾಗ ತನ್ನ ಕುಡಿತ ಕೆಟ್ಟ ಚಟದ ಬಗ್ಗೆ, ಅದರ ಪರಿಣಾಮದ ಬಗ್ಗೆ ಬೋರ ಆಡುವ ಮಾತು ಗಮನಾರ್ಹವಾದುದು. "[illegible] ನಾನು ಹೆಂಡ ಕುಡಿಯೋಕೆ ಹಾಳ್ಮಾಡಿದ್ದು ಅಯಿಯೇಕ. ಇನ್ಮೇಲೆ ಬೆಟ್ಟದ ಹನುಮಂತ್ರಾಯ್ನ ಆಣೆಗೂ ಹೆಂಡ ಕುಡ್ಯೋಕಿಲ್ಲ. ಕುಡಿದ್ರಿ ನನ್ಮಕ್ಳನ್ನನಾ ಕೊಂದ ಹಾಗೆ" ಎಂಬುದಾಗಿ ಪ್ರತಿಜ್ಞೆ ಮಾಡಿಕೊಂಡನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೭೬) ಇಲ್ಲಿ ಬೋರನು ತನ್ನ ತಪ್ಪನ್ನು ಅವಿವೇಕವನ್ನು ಮನಗಂಡು ಮಗಳಿಗೆ ಮರುಗುವುದು ಹೃದಯ ಮಿಡಿಯುವಂತಹ ಸನ್ನಿವೇಶವಾಗಿದೆ. ತನ್ನ ತಪ್ಪಿನಿಂದ ಹೊರಬರಲು ಅಸಹಾಯಕನಾಗಿದ್ದ ಬೋರ ದೇವರ ಮೇಲೆ ಆಣೆ ಇಡುವುದೊಂದನ್ನೆ ನಂಬಿ ಅನುಸರಿಸುತ್ತಾನೆ. ಇಲ್ಲಿ ಮುಗ್ಧ ಜನರಿಗೆ ಆಣೆ ಮೇಲೆ ಇರುವ ನಂಬಿಕೆ ಎಷ್ಟು ಪ್ರಬಲವಾದದ್ದು ಎಂಬುದನ್ನು ಲೇಖಕರು ಸ್ಪಷ್ಟವಾಗಿ ಸೂಚಿಸಿದ್ದಾರೆ. ಬೋರನ ಮಗಳು ತನ್ನ ತಂದೆಗೆ ಹಾಲನ್ನು ಕೊಟ್ಟು ಅವನ ಆಯಾಸವನ್ನು ಕುಡಿತದ ಹವ್ಯಾಸವನ್ನು ಪರಿಹರಿಸಬೇಕೆಂದು ಪ್ರಯತ್ನಿಸಿದಾಗ ಬೋರ ಹಾಲಿಗೆ ಬದಲಾಗಿ ಹುಳಿ ಮಜ್ಜಿಗೆಯನ್ನು ಕೇಳುತ್ತಾನೆ.

ಹರಕೆ ಮಾಡಿಕೊಳ್ಳುವುದು ಗ್ರಾಮೀಣ ಜನರ ಬದುಕಿನಲ್ಲಿ ಒಂದು ಪ್ರಧಾನ ಸಂಗತಿ. ವ್ಯಕ್ತಿಯ ಶಕ್ತಿಯ ಇತಿಮಿತಿಗಳನ್ನು ಅರಿತುಕೊಂಡ ಗ್ರಾಮೀಣ ಜನ ವಿಶೇಷ ಘಟನೆಗಳು ಸಂಭವಿಸಿದಾಗ ಅನಿವಾರ್ಯವಾಗಿ ದೇವರಲ್ಲಿ ಹರಕೆ ಮಾಡಿಕೊಳ್ಳುತ್ತಾರೆ. "ಬ್ರಾಹ್ಮಣರಿಗಿಂತ ಒಕ್ಕಲಿಗರೇ ದೇವರಿಗೆ ಹರಕೆ ಹೊರುವುದು ಹೆಚ್ಚು. ಈ ದಿನ ದನ ಉಚ್ಚಿಕೊಂಡಿತು, ಇವತ್ತು ಕರು ಹಸುವಿನ ಮೊಲೆ ಉಣ್ಣಲಿಲ್ಲ, ಇವತ್ತು ಮನೆಯ ನಿಲು ಬದಲಾಯಿಸಿ ಬೇರೆ ಕಡೆ ಇಡಬೇಕು, ಹೊಸದಾಗಿ ಕೊಂಡ ಎತ್ತನ್ನು ಇವತ್ತು ಮೊದಲು ಆರಿಗೆ ಹೂಡಬೇಕು ಮುಂತಾದ ಅನೇಕ ಕಾರಣಗಳಿಗಾಗಿ ನಿತ್ಯ ಒಬ್ಬಿಬ್ಬರು ಒಕ್ಕಲಿಗರು ದೇವಸ್ಥಾನಕ್ಕೆ ಬಂದೇ ಬರುತ್ತಾರೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೩೪) ದೇವರಿಗೆ ಹರಕೆ ಹೊರುತ್ತಾರೆ. ದೇವರಿಗೆ ಪೂಜೆ ಮಾಡಿಸುತ್ತಾರೆ. ಈ ಕಾರಣದಿಂದಲೇ ಗೊರೂರಿನ ಜನ "ಎಲ್ಲ ದೇವರಿಗಿಂತಲೂ ನಮ್ಮೂರ ದೇವರ ಸತ್ಯ ಹೆಚ್ಚಾದದ್ದು. ಇನ್ನೂರ ಹಳ್ಳಿಗಳಿಗೂ ನಮ್ಮೂರ ನರಸಿಂಹಸ್ವಾಮಿ ಕುಲದೇವರಾಗಿದೆ. ನಮ್ಮ ಪ್ರಾಂತ್ಯಕ್ಕೆಲ್ಲಾ ಕಣ್ಣೆಂದು ಕೊಂಡಾಡುವುದು ಗೊರೂರಿನ ಸುತ್ತಲ ಗ್ರಾಮದ ನಂಬಿಕೆಯಾಗಿದೆ". (ಅದೇ) ಈ ಸಂದರ್ಭದಲ್ಲಿ ಗೊರೂರರವರು ಹಳ್ಳಿಯ ಜನರ

ಹರಕೆಯ ಮೇಲಿನ ನಂಬಿಕೆಯ ಜೊತೆಗೆ ತಮ್ಮ ಗ್ರಾಮದ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಗ್ರಾಮೀಣ ಜನರು ದೇವತಾ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ಮಾಡಿಸಲು ಆರ್ಥಿಕವಾಗಿ ಬಲಹೀನರಾದಾಗ ಹರಕೆಗಳ ಆಚರಣೆ ಅನಿವಾರ್ಯವಾಯಿತು ಎಂಬುದನ್ನು ಒಪ್ಪಿ ಗೊರೂರರವರು ತಮ್ಮ ಕೃತಿ 'ಗರುಡ ಗಂಬದದಾಸಯ್ಯ'ದಲ್ಲಿ ಈ ಅಭಿಮತವನ್ನು ಪರೋಕ್ಷವಾಗಿ ಸ್ಪಷ್ಟಪಡಿಸಿದ್ದಾರೆ. ಹಳ್ಳಿಯಲ್ಲಿ ಕಂಡುಬರುವ ಮೂಢನಂಬಿಕೆಗಳು ಕೆಲವು ಬಾರಿ ಅರ್ಥಹೀನ ಎಂದು ಭಾವಿಸಿ ಅದನ್ನು ಖಂಡಿಸಿರುವುದನ್ನು ಗೊರೂರರವರ ಬರವಣಿಗೆಯಲ್ಲಿ ಗುರುತಿಸಬಹುದು. ಆದರೆ ಅಂತಹ ಆಚರಣೆಗಳ ಅನಿವಾರ್ಯತೆಯ ಬಗೆ ಲೇಖಕರು ವಿಚಾರ ಮಾಡುವುದು ಅಷ್ಟೇ ಸುಸಂಬದ್ಧವಾಗಿದೆ ಎಂಬುದನ್ನು ಮರೆಯಲು ಸಾಧ್ಯವಿಲ್ಲ. ಗೊರೂರರವರು ವೈಜ್ಞಾನಿಕ ಚಿಂತನೆ ಅದಕ್ಕೆ ಅನುಗುಣವಾದ ಜೀವನ ನಡವಳಿಕೆಯನ್ನು ಎಂದಿಗೂ ಕೈ ಬಿಟ್ಟಿಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಅವರು ಹಲವು ಬಾರಿ ಮೂಢನಂಬಿಕೆಗಳನ್ನು ಖಂಡಿಸಿದ್ದಾರೆ. ಹರಕೆ ಕಟ್ಟುವುದರ ಮೂಲಕ ಗ್ರಾಮೀಣ ಜನರಲ್ಲಿ ನಾವು ಧರ್ಮದ ಶ್ರದ್ಧೆಯನ್ನು ದೈವದ ನಂಬಿಕೆಯನ್ನು ಚೆನ್ನಾಗಿ ಮನಗಾಣಬಹುದು. ಧರ್ಮ ದೇವರು ಎಂದಿಗೂ ನಮ್ಮ ಬದುಕಿಗೆ ಬೆನ್ನೆಲಬು ಎಂಬುದು ತಾತ್ವಿಕ ಚಿಂತಕರ ಅಭಿಮತ ಎಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಹಳ್ಳಿಗಳಲ್ಲಿ ಇರುವ ಕೆಲವು ಮಡುವುಗಳಿಗೆ ಐತಿಹ್ಯದ ಕತೆಗಳು ಇರುವುದರ ಜತೆಗೆ ಕೆಲವು ನಂಬಿಕೆಗಳು ರೂಢ ಮೂಲವಾಗಿ ಇರುತ್ತದೆ. ಗೊರೂರರವರ 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯಲ್ಲಿ ಇದಕ್ಕೆ ಉದಾಹರಣೆಗಳನ್ನು ಕಾಣಬಹುದು. ಪೂತನಿಕಡು, ಪೂವಮ್ಮನ ಮಡು ಇದಕ್ಕೆ ಉದಾಹರಣೆಗಳಾಗಿವೆ. ಪೂತನೀಕಡು ಬೆಟ್ಟದ ಮೇಲೆ ಇರುವ ಕಡು. "ಇದರ ನೀರನ್ನು ಯಾವ ಹೆಂಗಸು ಕುಡಿಯುತ್ತಾಳೆಯೋ, ಅವಳ ಬಾಯಲ್ಲಿ ನೀರು ಸುರೆಯಾಗುವುದಂತೆ. ಅದು ಹೇಗಾದರೂ ಆಗಲಿ, ಯಾವ ಹೆಂಗಸೂ ಇದನ್ನು ಪರೀಕ್ಷಿಸುವಷ್ಟು ಧೈರ್ಯಶಾಲಿಯಾಗಿಲ್ಲ. ಆದರೆ ಈ ಕಡುವಿನ ಸುತ್ತ ಇರುವ ಮರಳಿಗೆ ಬಹಳ ಮಹಿಮೆ ಇದೆ. ಅದರ ಮರಳನ್ನು ತೆಗೆದುಕೊಂಡು ಹೋಗಿ ಮನೆಯಲ್ಲಿ ಚೆಲ್ಲಿ ಬಿಟ್ಟರೆ ಇಲಿಗಳು ಆ ಮನೆಯಿಂದ ಮಾಯವಾಗುವುದು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು.೨೬) ಐತಿಹ್ಯವಾಗಿ ಕೃಷ್ಣ ಪೂತನಿಯ ಮೊಲೆಯಿಂದ ಅವಳ ಜೀವವನ್ನು ಹೀರಿದ ಸ್ಥಳ ಇದು ಎಂಬ ನಂಬಿಕೆಯೂ ಇದೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಇಂತಹ ಪುರಾಣ ಐತಿಹ್ಯಗಳ ನಂಬಿಕೆ ಸಾಮಾನ್ಯ ಸಂಗತಿ ಎಂಬುದನ್ನು ಲೇಖಕರು ನಂಬಿ ಗ್ರಾಮೀಣ ಕತೆಗಳನ್ನು, ಪ್ರಬಂಧಗಳನ್ನು ಬರೆಯುವಾಗ ಇಂತಹ ನಂಬಿಕೆಗಳನ್ನು ಕತೆಯಲ್ಲಿ ಬಳಸಿಕೊಂಡಿರುವುದರಿಂದ ಕತೆಯ ನೈಜತೆಗೆ ಸಹಜತೆ ಬಂದಿದೆ ಎಂಬುದು ಸ್ಪಷ್ಟ ಸಂಗತಿ. ಜೊತೆಗೆ ಪುರಾಣದ ಐತಿಹ್ಯಗಳ ನಂಬಿಕೆಗೆ ಲೇಖಕರು ಇಂಬು ಕೊಟ್ಟಿರುವುದು ಕಥಾತಂತ್ರದ ದೃಷ್ಟಿಯಿಂದ ಮೆಚ್ಚುವ ಅಂಶವಾಗಿದೆ.

'ಕಮ್ಮಾರ ವೀರಭದ್ರಾಚಾರಿ' ಕಥಾಸಂಕಲನದ 'ಅಮ್ಮನ ಬಸವ' ಕತೆಯಲ್ಲಿ ಕಂಡುಬರುವ ಪೂಜಾರಿಯ ವಂಚನೆ ಸ್ವಾರಸ್ಯಕರವಾಗಿದೆ. ಈ ಕತೆಯಲ್ಲಿ ಹಳ್ಳಿಯ ಜನರು ಪೂಜಾರಿಯ ಮೇಲೆ

ಇಟ್ಟಿರುವ ನಂಬಿಕೆ ಸ್ಪಷ್ಟವಾಗಿದೆ. ನಂಜನಗೂಡಿನಲ್ಲಿ ಹಸುಗಳನ್ನು ಕಳವು ಮಾಡಿ ಜೈಲುವಾಸ ಅನುಭವಿಸಿ ಹಿಂತಿರುಗಿದ ತಮ್ಮಡಿ ಮರಿಬಸವ ಚೆನ್ನಪಟ್ಟಣದ ಬಳಿ ಹಳ್ಳಿಯೊಂದರಲ್ಲಿ ಪೂಜಾರಿಯಾಗಿ ಹೊಸ ಜೀವನ ಪ್ರಾರಂಭಿಸುತ್ತಾನೆ. ಊರಿನ ಜನರಿಗೆ ವೈದ್ಯನಾಗಿ ಔಷಧಿ ಕೊಡುವುದರ ಮೂಲಕ ಜನಮನ್ನಣೆ ಗಳಿಸಿಕೊಳ್ಳುತ್ತಾನೆ. ಹಳ್ಳಿಯಲ್ಲಿ ಈಶ್ವರ ಗುಡಿಯ ಪೂಜಾರಿಯಾಗಿ ಇದ್ದಕ್ಕಿದಂತೆ ಒಮ್ಮೆ ಈಶ್ವರ ಗುಡಿಯ ಬಸವನ ಮುಖ ತಿರುಗಿದೆ ಎಂದು ವದಂತಿಯನ್ನು ಹುಟ್ಟಿಸುತ್ತಾನೆ. ಇದು ಊರಿಗೆ ಅನಿಷ್ಟದ ಸೂಚನೆ ಎಂದು ಜನರಿಗೆ ಬೆದರಿಕೆ ಹಾಕುತ್ತಾನೆ. ಈ ಅನಿಷ್ಟ ನಿವಾರಣೆಗಾಗಿ ಜಾತ್ರೆ ಮಾಡಿಸುತ್ತಾನೆ. ಸುತ್ತಲ ಹಳ್ಳಿಯ ಉತ್ತಮ ಎತ್ತುಗಳು ಜಾತ್ರೆಗೆ ಬರುತ್ತವೆ. ಆಗ ತಮ್ಮಡಿ ಮರಿಬಸವ ನಡುರಾತ್ರಿಯಲ್ಲಿ ಕೆಲವು ಉತ್ತಮ ಎತ್ತುಗಳನ್ನು ಕದ್ದುಕೊಂಡು ಹೋಗಿ ಮಾರಾಟ ಮಾಡುವಾಗ ಪುನಃ ಸಿಕ್ಕಿಬಿದ್ದು ಬೆಂಗಳೂರಿನ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಗಾಗುತ್ತಾನೆ. ಅದೇ ಕಾಲಕ್ಕೆ ತಮ್ಮಡಿ ಮರಿಬಸವನ ಯಜಮಾನನಾದ ಶಿವಪ್ಪನಿಗೆ ಆಕಸ್ಮಿಕವಾಗಿ ತಮ್ಮಡಿ ಮರಿಬಸವನ ನ್ಯಾಯಾಲಯದ ಶಿಕ್ಷೆ ತಿಳಿಯುತ್ತದೆ. ಇಲ್ಲಿ ಪೂಜಾರಿಯ ವೇಷದಲ್ಲಿ ವಂಚಕರು ಗ್ರಾಮೀಣ ಜನರನ್ನು ವಂಚಿಸುವ ವಿಷಯ ಪ್ರಸ್ತಾಪಿತವಾಗಿದೆ. ಮುಗ್ಧ ಗ್ರಾಮೀಣ ಜನರಿಗೆ ಪೂಜಾರಿಗಳ ಮೋಸ ಹೇಗೆ ಅವ್ಯಾಹತವಾಗಿ ನಡೆದು ಬಂದಿದೆ ಎಂಬುದನ್ನು ಗೊರೂರವರು ಇಲ್ಲಿ ಚಿತ್ರಿಸಿದ್ದಾರೆ. ಗ್ರಾಮೀಣ ಜನರ ಮುಗ್ಧ ನಂಬಿಕೆ ಅವರಿಗೆ ಎಷ್ಟು ಅಪಾಯಕಾರಿ ಎಂಬುದನ್ನು ಈ ಕತೆಯ ಮೂಲಕ ಮನಗಾಣಬಹುದು.

ಅದೃಷ್ಟದ ಮೇಲೆ ನಂಬಿಕೆ ಇಟ್ಟುಕೊಂಡು ಬದುಕುವ ಗ್ರಾಮೀಣ ಜನರಿಗೆ ಎಂಥ ಬೈರಾಗಿ ಆದರು ಗೌರವದ ವ್ಯಕ್ತಿ. ತಮ್ಮ ಸಮಸ್ಯೆಗಳನ್ನೆಲ್ಲಾ ಬೈರಾಗಿಯಲ್ಲಿ ಹೇಳಿಕೊಂಡು ಅವನಲ್ಲಿ ಪರಿಹಾರವನ್ನು ಕಂಡುಕೊಳ್ಳುವುದೊಂದೇ ಅವರ ಗುರಿಯಾಗಿತ್ತು. ಈ ಸಾಮಾನ್ಯ ಸಂಗತಿಯನ್ನು ಗೊರೂರವರು 'ಮರೆಯಾದ ಮಾರಮ್ಮ' ಕಥಾ ಸಂಕಲನದ ಅದೇ ಕತೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಿರ್ವಾಣಯ್ಯ ಬೈರಾಗಿ ಆದ ಪ್ರಸಂಗ. ಆತ ಊರಿನ ಜನಕ್ಕೆ ಆಡುತ್ತಿದ್ದ ಮಾತು, ಕೊಡುತ್ತಿದ್ದ ಉತ್ತರದ ರೀತಿ ಅತ್ಯಂತ ಸ್ವಾರಸ್ಯವಾಗಿದೆ. ಊರಿನವರು ಬಂದು "ಎಮ್ಮೆ ಉಚ್ಚಿಕೊಂಡಿತು ಏನು ಮಾಡಬೇಕು? ಹಸು, ಮನೆಗೆ ಬರದೆ ತಪ್ಪಿಸಿಕೊಂಡಿದೆ, ಹೊಸ ಮನೆಗೆ ಬಂದ ಮೇಲೆ ಏಳಿಗೆ ಆಗುತ್ತಿಲ್ಲ. ಕುರಿ ಕೋಳಿಗಳೆಲ್ಲ ಸಾಯುತ್ತಿವೆ, ಜ್ವರ ಬರುತ್ತಿದೆ, ಅದಕ್ಕೆ ಯಂತ್ರ ಕಟ್ಟಿ; ಇಂತಹ ಜಮೀನನ್ನು ಕೊಂಡುಕೊಂಡರೆ ನಮಗೆ ಏಳಿಗೆಯೇ?" ಎಂದೆಲ್ಲ ನಿರ್ವಾಣಯ್ಯನಿಗೆ ನಿತ್ಯ ಗಿರಾಕಿಗಳು ಬರತೊಡಗಿದವು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೭) ಇಂತಹ ಸಂದರ್ಭಗಳಲ್ಲಿ ನಿರ್ವಾಣಯ್ಯ ಮಾಡಿದ ಬುದ್ಧಿವಂತಿಕೆಯ ತಂತ್ರವನ್ನು ಗೊರೂರವರು ತಿಳಿಸಿದ್ದಾರೆ.

ನಿರ್ವಾಣಯ್ಯ ಮಾರಿ ದೇವತೆಯನ್ನು ಸೃಷ್ಟಿಮಾಡಿ ಮಾಡಿದ ತಂತ್ರವು ಸ್ವಾರಸ್ಯಕರವಾಗಿದೆ. ಇವನ ವಂಚನೆಗೆ ಮರುಳಾದ ಜನ ಮಹಾತ್ಮರಿಗೆ ಏನು ತಾನೆ ಅಸಾಧ್ಯ?ವೆಂದು ಗೌರವದ ಮಾತನ್ನು

ನಿರ್ವಾಣಯ್ಯನ ಬಗ್ಗೆ ಊರಿನವರು ಆಡುತ್ತಾರೆ. ವಿದ್ಯಾವಂತರು ಸಹ ನಿರ್ವಾಣಯ್ಯನಿಗೆ ಮರುಳಾಗುತ್ತಾರೆ. ನಿರ್ವಾಣಯ್ಯ ತನ್ನ ಕಪಟತನ ಬಯಲಾಗದಿರಲು ಮತ್ತೊಂದು ತಂತ್ರವೆಂದರೆ ತನ್ನ ಬಳಿಗೆ ಔಷಧಿಗೆ ಬಂದ ಜನರನ್ನು ಡಾಕ್ಟರ ಬಳಿ ಹೋಗಬೇಡಿ ಎಂದು ಹೇಳುವ ಮಾತು ವಿಶೇಷವಾಗಿದೆ. ತಿಮ್ಮಯ್ಯನ ಮನೆಯಲ್ಲಿ ಮೂರು ವರ್ಷದ ಮಗುವಿಗೆ ಜ್ವರ ಬಂದಾಗ ನಿರ್ವಾಣಯ್ಯ "ಇದೆಲ್ಲ ಅಮ್ಮನ ಕಾಟ. ಅದ್ಕೆ ತಕ್ಕ ಪ್ರತೀಕಾರ ಮಾಡ್ಬೇಕು. ಪೂಜೆ ಕಟ್ಟಿಸ್ಬೇಕು. ಇದು ಡಾಕ್ಟ್ರ ಬಣ್ಣದ ನೀ[illegible] ಬಗ್ಗೋ ಕಾಯಿಲೆ ಅಲ್ಲ" ಎಂದನು. (ಅದೇ; ಪು.೩೦) ಈ ಮಾತು ಅವನ ಬುದ್ಧಿವಂತಿಕೆಯ ತಂತ್ರಕ್ಕೆ ಸಾಕ್ಷಿಯಾಗಿದೆ. ನಿರ್ವಾಣಿ ದೆವ್ವಗಳನ್ನು ಬಿಡಿಸುವುದರಲ್ಲಿಯೂ ಅತ್ಯಂತ ನಿಪುಣನಾಗಿದ್ದನು. ದೆವ್ವಗಳ ಬಗ್ಗೆ ಗ್ರಾಮೀಣ ಸಮಾಜದಲ್ಲಿ ಇಂತಹ ಚಟುವಟಿಕೆಗಳು ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತದೆ. ದೆವ್ವಗಳನ್ನು ದೇವತೆಗಳ ಭಾವನೆಯಲ್ಲಿ ಕಾಣುವ ಅತಿರೇಕತನ ಗ್ರಾಮೀಣ ಸಮಾಜದಲ್ಲಿ ಸಾಮಾನ್ಯ ಸಂಗತಿಯಾಗಿದೆ.

ವೈದ್ಯಕ್ಕೆ ಸಂಬಂಧಪಟ್ಟ ಹಾಗೆ ಜನಪದ ಕೆಲವು ನಂಬಿಕೆಗಳು ಕುತೂಹಲಕಾರಿಯಾಗಿದೆ. ಹಾವಿನ ಕಡಿತಕ್ಕೆ ಸಂಬಂಧಪಟ್ಟ ಹಾಗೆ ಗೊರೂರವರು ಕೊಡುವ ಉಲ್ಲೇಖ ಗಮನಾರ್ಹವಾದುದು. ಗೋವಿಂದಯ್ಯನ ಮೊದಲನೆ ಮಗನನ್ನು ಹಾವು ಕಡಿದಾಗ "ಅಂದಿನ ನಂಬಿಕೆಯಂತೆ, ಅವನ ದೇಹವನ್ನು ಸಗಣಿ ನೀರು ಕದಡಿದ ತೊಟ್ಟಿಯಲ್ಲಿ, ಎರಡು ದಿನ ಮುಳುಗಿಸಿದ್ದು, ಬೇರೆ ಬೇರೆ ಊರಿನ ಮಂತ್ರವಾದಿಗಳಿಂದೆಲ್ಲ ಮಂತ್ರಗಳನ್ನು ಹಾಕಿಸಿದರು". (ಅದೇ; ಪು.೧೧೨) ಹಾವಿನ ಅಯ್ಯ ಚಟ್ಟದ ಮೇಲೆ ಹೊತ್ತುಕೊಂಡು ಹೋಗುತ್ತಿದ್ದ ವ್ಯಕ್ತಿಯನ್ನು ಹಾವಿನಮಂತ್ರ ಹಾಕಿ ಬದುಕಿಸಿ "ನಾಲ್ಕು ಮಂದಿಯ ಜೊತೆಗೆ ಐದನೆಯವನಾಗಿ ನಡೆದುಕೊಂಡು ಹೋದ". (ಅದೇ; ಪು.೧೧೩) 'ಸರ್ಪ ಮೈತ್ರಿ' ಕತೆಯಲ್ಲಿ ಹಾವಿನ ಮಂತ್ರದ ವಿಷಯವನ್ನು ಸಾಕಷ್ಟು ಘಟನೆಗಳ ಮೂಲಕ ಗೊರೂರವರು ವಿಷದಪಡಿಸಿದ್ದಾರೆ.

ಮಾರಮ್ಮನನ್ನು ಪ್ರಶ್ನೆ ಕೇಳುವ ಪರಿಪಾಠ ಗ್ರಾಮೀಣ ಸಮಾಜದಲ್ಲಿ ಸಾಮಾನ್ಯ ಸಂಗತಿ. ಅದೇ ಕೃತಿಯ 'ಜಯಮ್ಮನಿಗೆ ಬಂದ ಭಾಗ್ಯ' ಕತೆಯಲ್ಲಿ ಬಾಡಿಗೆದಾರರ ಕಿರುಕುಳವನ್ನು ಕಳೆದುಕೊಳ್ಳಲು ಜಯಮ್ಮ ಮಾರಮ್ಮನನ್ನು ಪ್ರಶ್ನೆ ಕೇಳುತ್ತಾಳೆ. ಆ ಪೂಜಾರಿ "ಏಹಿಂಗ್ಸೆ, ನಿನ್ನ ವಿಚಾರ ನಂಗೆ ಗೊತ್ತು. ಈ ತಿಂಗಳು ನಿನಗೆ ಭಾರಿ ಭಾರಿ ಸಂಗ್ತಿ ನಡೆದು ಹೋಯ್ತದೆ. ಹೋದದ್ದೆಲ್ಲ ಬರ್ತದೆ. ಬಂದದ್ದೆಲ್ಲ ಹೋಯ್ತದೆ. ಒಂದ್ಸಲ ಮಾಡ್ದ ತಪ್ಪ ಮಾಡ್ಬೇಡ. ಸತ್ತೋರ್ನ ಹಿಡ್ಕೊಳೋ ಕಾಕ್ಕಿಲ್ಲ. ಬದ್ಕಿರೋರ್ನ ಬಿಡೋ ಕಾಕ್ಕಿಲ್ಲ. ನಿನ್ನ ಬುದ್ಧಿ ನಿನ್ನ ಕೈಲಿ. ಹುಂಜ ಮಾತ್ರ ತಪ್ದೆ ಒಪ್ಸು ಎಂದು ಘರ್ಜಿಸಿತು. (ಅದೇ; ಪು. ೧೯೫) ಇಲ್ಲಿ ದೇವರು ಹೇಳಿದ ಮಾತೆಲ್ಲ ಜಯಮ್ಮನಿಗೆ ಅರ್ಥವಾಗಲಿಲ್ಲ. ಬಾಡಿಗೆದಾರರನ್ನು ಸರ್ಕಾರದವರು ಬಿಡಿಸಬಹುದು ಎಂದಷ್ಟು ಮಾತ್ರ ಅರ್ಥ ಮಾಡಿಕೊಳ್ಳುತ್ತಾಳೆ. ಈ ಸಂದರ್ಭದಲ್ಲಿ ಬಲಿಯ ಉಲ್ಲೇಖ ಮುಖ್ಯವಾಗುತ್ತದೆ.

ಹಾವಿಗೆ ಮಂತ್ರ ಹಾಕಿದರೆ ಹಾವು ಮಂತ್ರಕ್ಕೆ ಅಧೀನವಾಗುತ್ತದೆ ಎಂಬ ನಂಬಿಕೆಯನ್ನು 'ಬೈಲ ಹಳ್ಳಿ ಸರ್ವೆ' ಪ್ರಬಂಧ ಸಂಕಲನದಲ್ಲಿ ಕಾಣಬಹುದು. ಮಂತ್ರವಾದಿ ಸುಬ್ಬಯ್ಯ ಹಾವಿನ ಮುಂದೆ ಒಂದು ಚೌಕ ಹಾಕಿ "ಯಾಕೆ ಬಂದ್ಯೊ ಇಲ್ಲಿ. ಯಾರೋ ನಿನ್ನ ಬರಹೇಳಿದವರು. ಇಲ್ಲಿ ಬಾ!" ಎಂದು ಗರ್ಜಿಸಿದಾಗ ಹಾವು ಕುರಿಮರಿಯಂತೆ ತೆಪ್ಪನೆ ಚೌಕದ ಮೇಲೆ ಮಲಗಿಗೊಂಡಿತು. ಸುಬ್ಬಯ್ಯ ಆ ಚೌಕದ ನಾಲ್ಕು ಮೂಲೆಗಳಿಗೂ ಸೇರಿಸಿ ಗಂಟು ಹಾಕಿ ಹಾವನ್ನು ಒಂದು ಗೂಟಕ್ಕೆ ನೇತು ಹಾಕಿ ಬಿಟ್ಟ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೭೯) ಕಾಯಿಲೆಗೆ ಮಂತ್ರ ಇದ್ದಂತೆ ಕಷ್ಟನಷ್ಟಗಳಿಗೆ ಮಂತ್ರ ಇದ್ದಂತೆ ದುಷ್ಟಜಂತುಗಳ ಕಾಟಕ್ಕೂ ಗ್ರಾಮೀಣ ಜನತೆಯಲ್ಲಿ ಮಂತ್ರಗಳ ತಂತ್ರ ಇತ್ತು ಎಂಬುದನ್ನು ಇಲ್ಲಿ ನಾವು ಮನಗಾಣಬಹುದು. ಈ ಪ್ರಸಂಗದಲ್ಲಿ ಮಂತ್ರವಾದಿಗಳ ಕಲೆಯ ಕೌಶಲ್ಯವನ್ನು ಗೊರೂರವರು ಸೂಚಿಸುವುದರ ಜೊತೆಗೆ ಗ್ರಾಮೀಣ ಜನರ ಮುಗ್ಧ ನಂಬಿಕೆಯನ್ನು ವಿವರಿಸಿದ್ದಾರೆ.

ಭೂಮಿಯನ್ನು ಅಳೆಯಬಾರದು ಎಂಬ ಮೂಢನಂಬಿಕೆಯ ಬಗ್ಗೆ 'ಬೈಲಹಳ್ಳಿ ಸರ್ವೆ' ಪ್ರಬಂಧ ಸಂಕಲನದಲ್ಲಿ ಹೇಳುವ ಘಟನೆ ಕುತೂಹಲಕಾರಿಯಾಗಿದೆ. ಬೈಲಹಳ್ಳಿಯಲ್ಲಿ ಮೋಜಿಮದಾರರು ಭೂಮಿ ಅಳತೆ ಮಾಡುವಾಗ ಕುರಿತಿಮ್ಮ "ಜಮೀನು ಯಾಕ್ಸಾಮಿ ಅಳೆಯೋದು. ಭೂಮಿ ತಾಯಿ ಅಳೆಯೊದು ಪಾಪ ಸಾಮಿ. ಆಯ್ಸು ಕ್ಷೀಣಸ್ತದೆ. ಮಾಡಬಾರ್ದ ಕೆಲ್ಸ ಮಾಡಿದ್ರೆ ಆಗ್ಬಾರ್ದ್ದು ಆಯ್ತದೆ" ಎಂದನು. (ಅದೇ; ಪು.೪೦-೪೧) ಮೂಢನಂಬಿಕೆಯ ಈ ಮಾತನ್ನು ಕೇಳಿ ಮೋಜಿಮದಾರ ಗರ್ಜಿಸುತ್ತಾನೆ. ಇಂದಿನ ವೈಜ್ಞಾನಿಕ ಕ್ರಮಕ್ಕೆ ಹಳ್ಳಿಯವರ ಮೂಢನಂಬಿಕೆ ಎಷ್ಟು ವಿರುದ್ಧವಾಗಿದೆ ಎಂಬುದನ್ನು ಗೊರೂರವರು ಇಲ್ಲಿ ಸೂಚಿಸಿದ್ದಾರೆ.

ಬಾಬಾ ವಿಭೂತಿಯ ಪ್ರಭಾವದಿಂದ ಅನಾರೋಗ್ಯ ಪರಿಹಾರವಾಗುತ್ತದೆ ಎಂದು ಹಳ್ಳಿಯವರಲ್ಲಿದ್ದ ನಂಬಿಕೆಯ ಮೌಢ್ಯತನವನ್ನು 'ಹಳೆಯಪಳೆಯ ಮುಖಗಳು' ಎಂಬ ಕೃತಿಯಲ್ಲಿ ಗೊರೂರವರು ತಿಳಿಸಿದ್ದಾರೆ. ಬಾಬಾನ ಪರಮಭಕ್ತನಾದ ನರಸಿಂಹ ಒಂದು ಭಕ್ತರ ತಂಡವನ್ನೇ ಕಟ್ಟಿಕೊಳ್ಳುತ್ತಾನೆ. ಅವರಲ್ಲಿ ರಾಮಶೆಟ್ಟರು ಪ್ರಮುಖರು. ರಾಮಶೆಟ್ಟರ ಮಗನಿಗೆ ಒಮ್ಮೆ ಟೈಫಾಯಿಡ್ ಜ್ವರ ಬಂದಾಗ ನರಸಿಂಹ ಬಾಬಾ ವಿಭೂತಿಯನ್ನು ಔಷಧಿಯಾಗಿ ಕೊಟ್ಟನು. ಮಗುವಿಗೆ ರೋಗ ವಾಸಿಯಾಗಲಿಲ್ಲ. ಆಗ ಶೆಟ್ಟರ ಹೆಂಡತಿ ವೈದ್ಯರ ಅಪ್ಪಣೆಯಂತೆ ಔಷಧಿ ಕೊಟ್ಟಾಗ ನರಸಿಂಹನ ಪರಮ ಶಿಷ್ಯರಾದ ರಾಮಶೆಟ್ಟರು "ಬಾಬಾಧ್ಯಾನ, ವಿಭೂತಿ ವೈದ್ಯ ಎರಡೇ ಸಾಕು. ಭಕ್ತಿಯಲ್ಲಿ ವ್ಯಭಿಚಾರ (ಎರಡು ದೇವರು) ಕೂಡದು ಎಂದು ಹಟಹಿಡಿದರು. ಕೊನೆಯಲ್ಲಿ ರಾಮಶೆಟ್ಟರ ಹೆಂಡತಿ ಗಂಡನಿಗೂ ನರಸಿಂಹನಿಗೂ ತಿಳಿಯದಂತೆ ಡಾಕ್ಟರರನ್ನು ಕರೆಸಿ ಅವರಿಂದ ಸರಿಯಾದ ಚಿಕಿತ್ಸೆ ಮಾಡಿಸಿದಳು. ಬೂದಿಯನ್ನು ಕದಡಿ ಕುಡಿಸುವವಳೂ ಅವಳೇ. ಆದುದರಿಂದ ಒಲೆಯ ಬೂದಿಯನ್ನು ಒಲೆಗೇ ಹಾಕಿ ಬಿಟ್ಟಳು. ಮಗುವಿಗೆ ಗುಣವಾಯಿತು. ಆದರೂ ಯಾವಾಗಲೂ ರಾಮಶೆಟ್ಟರೂ ನರಸಿಂಹನೂ ಬಾಬಾರ ಬೂದಿಯಿಂದಲೇ ಟೈಫಾಯಿಡ್

ಗುಣವಾಯಿತೆಂದು ಎಲ್ಲರೊಂದಿಗೂ ಹೇಳುತ್ತಿರುತ್ತಾರೆ. ಅದನ್ನು ಕೇಳಿದಾಗಲೆಲ್ಲ ರಾಮಶೆಟ್ಟರ ಹೆಂಡತಿ ಮನಸ್ಸಿನೊಳಗೇ ನಗುತ್ತಿರುತ್ತಾಳೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೬೯-೭೦)

ಮಂತ್ರಗಳು ಹೆಂಗಸರ ಕಿವಿಗೆ ಬೀಳಬಾರದು ಬಿದ್ದರೆ ಅದು ಸಿದ್ಧಿಸುವುದಿಲ್ಲ ಎಂಬ ಒಂದು ಮೂಢನಂಬಿಕೆ ಹಳ್ಳಿಯ ಜನರಲ್ಲಿ ಇದೆ. 'ಮೆರವಣಿಗೆ' ಕಾದಂಬರಿಯಲ್ಲಿ ಇದನ್ನು ಗುರುತಿಸಬಹುದು. ಹಾವಾಡಿಗರ ಸುಬ್ಬು ಸುದರ್ಶನನಿಗೆ "ನಾನು ಹೇಳಿದ ಮಾತು ಒಂದನ್ನೂ ಅವಳಿಗೆ ಹೇಳಬೇಡಿ. ಹೆಂಗಸರ ಕಿವಿಗೆ ಬಿದ್ದರೆ ಮಂತ್ರಗಳು ನಿಮಗೆ ಸಿದ್ಧಿಸುವುದಿಲ್ಲ" ಎಂದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು.೧೪೯) ಇದೇ 'ಮೆರವಣಿಗೆ' ಕೃತಿಯಲ್ಲಿ ಇಂಥ ಮೂಢನಂಬಿಕೆಯ ಬಗ್ಗೆ ಹಾವಾಡಿಗನ ಹೆಂಡತಿ ಸುಸಂಸ್ಕೃತ ಹೆಂಗಸು ಖಂಡಿಸಿ ಸುದರ್ಶನನಿಗೆ ಹೇಳುವ ಮಾತು "ಅಪ್ಪಾ ಈ ಮಂತ್ರ ತಂತ್ರವೆಲ್ಲ ನಂಬಬೇಡ. ಅದೆಲ್ಲಾ ಬರಿಯ ಸುಳ್ಳು; ಹೊಟ್ಟೆ ಹೊರೆಯುವುದಕ್ಕೆ ಮಾತ್ರ ಮಾಡುತ್ತಿರುವ ಉಪಾಯ. ಮಂತ್ರ ತಂತ್ರಗಳಿವೆ ಎಂದು ನಿನಗೆ ಯಾರು ಹೇಳಿದರು ಯಾರಲ್ಲಿಯೂ ಮಂತ್ರಗಳಿಲ್ಲ. ನಮ್ಮಲ್ಲಿಯಂತೂ ಖಂಡಿತಾ ಇಲ್ಲ" ಎಂದಳು. (ಅದೇ; ಪು.೧೯೪) ಈ ಸಂದರ್ಭದಲ್ಲಿ ಮೌಢ್ಯತೆಗೆ ವಿರುದ್ಧವಾಗಿ ವೈಜ್ಞಾನಿಕ ಚಿಂತನೆ ಹಳ್ಳಿಯ ಜನರಲ್ಲಿ ಇದೆ ಎನ್ನುವುದಕ್ಕಿಂತ ಹೆಚ್ಚಾಗಿ ಒಂದೇ ಮನೆಯಲ್ಲಿರುವ ವಿರುದ್ಧ ದೃಷ್ಟಿ ಕೋನವನ್ನು ಗೊರೂರವರು ಶ್ಲಾಘಿಸಿ ಇಲ್ಲಿ ತಿಳಿಸಿದ್ದಾರೆ.

ವಿಧವೆಗೆ ನಡೆಸುವ ಸಂಸ್ಕಾರಗಳು ಹಾಗೂ ಅವರನ್ನು ಕಾಣುವ ದೃಷ್ಟಿಯಲ್ಲಿ ಇರುವ ಮೂಢ ನಂಬಿಕೆಗಳನ್ನು ಗೊರೂರವರು ತಮ್ಮ ಕೃತಿಗಳಲ್ಲಿ ಪ್ರಬಲವಾಗಿ ಖಂಡಿಸಿದ್ದಾರೆ. ಇಂತಹ ಕ್ರೂರ ವರ್ತನೆಗೆ ಜನರಲ್ಲಿರುವ ಅಜ್ಞಾನ ಒಂದು ಕಾರಣವಾದರೆ ಜನರ ಮೂಢನಂಬಿಕೆ ಮತ್ತೊಂದು ಪ್ರಬಲ ಕಾರಣ ವಾಗುತ್ತದೆ. 'ಹಳ್ಳಿಯ ಚಿತ್ರಗಳು' ಪ್ರಬಂಧ ಸಂಕಲನದಲ್ಲಿ ಕಮಲೆಯ ಪಾತ್ರದೊಂದಿಗೆ ಗೊರೂರವರು ವಿಧವೆಯ ಸ್ಥಿತಿಯನ್ನು ಚಿತ್ರಿಸಿದ್ದಾರೆ. ಬಾಲ್ಯದಲ್ಲಿ ಗೊರೂರವರು ಕಮಲೆಯ ಜೊತೆ ಆಟ ವಿನೋದಗಳನ್ನು ಆಡಿ ಆನಂದವನ್ನು ಹಂಚಿಕೊಂಡಿದ್ದರು. ಗೊರೂರವರು ಶಿಕ್ಷಣ ಮುಗಿಸಿ ಹಳ್ಳಿಗೆ ಬಂದಾಗ ಕಮಲೆ ವಿಧವೆಯಾಗಿದ್ದಳು. ಈ ಸಂಗತಿಯನ್ನು ಗೊರೂರವರರು ತಿಳಿದಾಗ ಅವರ ಹೃದಯ ದುಃಖದಿಂದ ವಿವರ್ಣವಾಯಿತು. ಹುಚ್ಚನಂತೆ ಧೂಳಿನಲ್ಲಿ ಬಿದ್ದು ಹೊರಳಿ ಸಂಕಟ ಪಡುತ್ತಾರೆ. ಶಾಲೆಯ ಆಟಗಳೆಲ್ಲಾ ಕನಸು ಎಂಬ ಭಾವನೆ ಲೇಖಕರಿಗೆ ಬಂತು. ಅವಳಿಗೆ ವೈಧವ್ಯವನ್ನು ತಂದ ವಿಧಿಯನ್ನು ಗೊರೂರವರು "ವಿಧಿಯು ಶುದ್ಧ ಕುರುಡ, ರಸಿಕನಲ್ಲ; ಕಲೆಯನ್ನು ತಿಳಿಯನು; ಸೌಂದರ್ಯ ಆಕಾರವನ್ನೇ ಹಾಳು ಮಾಡಿದ; ಬೆಳೆಯುವ ಮುನ್ನ ಗಿಡವನ್ನು ಕುಯ್ದ; ಹೂವು ಕಾಯಿ ಫಲ ಬಿಡುವ ಮುನ್ನ ಲತೆಯನ್ನು ಒಣಗಿಸಿದ. ಅಯ್ಯೋ, ಕಮಲೆಯಂತಹ ಹುಡುಗಿಗೆ ಇಂತಹ ಗತಿಯೇ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೨೦) ಎಂದು ಲೇಖಕರು ಶಪಿಸುತ್ತಾರೆ. "ವರ್ಷದ ಅವಳ ಹೆಣ್ಣು ಗೂಸನ್ನು ಎತ್ತಿ ಮುತ್ತಿಟ್ಟು ಕಮಲೆಯ ಕಣ್ಣೀರನ್ನು ನೋಡಲಾರದೆ ಹೊರಕ್ಕೆ ಬಂದು ಬಿಟ್ಟೆ. ....

ನನ್ನ ಜೀವನವು ಈಗ ತಾನೆ ಪ್ರಾರಂಭವಾಗುತ್ತಿದೆ. ಆದರೆ ಕಮಲೆಯದೊ?" (ಅದೇ) ಎಂದು ಗೊರೂರವರು ಹೇಳಿದಾಗ ಅವರ ಅಂತಃಕರಣದ ಕರುಣೆ ನಮಗೆ ವ್ಯಕ್ತವಾಗುವುದರ ಜತೆಗೆ ವಿಧವೆಗೆ ಉಂಟಾಗಿರುವ ಸ್ಥಿತಿಯ ಬಗ್ಗೆ ನಮ್ಮಲ್ಲಿ ಶೋಕ ಆಕ್ರೋಶ ಎರಡೂ ಉಂಟಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಾಮಾಜಿಕ ಚಿಂತನೆ ಗೊರೂರವರಲ್ಲಿ ಎಷ್ಟು ತೀವ್ರವಾಗಿದೆ ಎಂಬುದನ್ನು ಗುರುತಿಸಬಹುದು.

ವಿಧವೆಗೆ ತಲೆ ಬೋಳಿಸುವ ಸಂಸ್ಕಾರವನ್ನು ಮಾಡದಿದ್ದಾಗ ಆದ ಘಟನೆಯ ಚರ್ಚೆ 'ವೈಯಾರಿ' ಕಾದಂಬರಿಯಲ್ಲಿ ನಿರೂಪಿತವಾಗಿದೆ. ರಂಗಾಚಾರಿ ತನ್ನ ಮಗಳು ಲಲಿತೆಗೆ ಬಾಲ್ಯ ವಿವಾಹ ಮಾಡುತ್ತಾನೆ. ಆಕೆ ಬಾಲ್ಯ ವಿಧವೆಯೂ ಆಗುತ್ತಾಳೆ. ಲಲಿತೆಯ ಸೌಂದರ್ಯವನ್ನು ಕಂಡು ಅವಳಿಗೆ ಕೇಶ ಮುಂಡನ ಮಾಡಲು ತಂದೆಗೆ ಮನಸ್ಸು ಬರುವುದಿಲ್ಲ. ಅವಳ ನಡೆದ ಭೂಮಿಯನ್ನು ಯುವಕರು ಮುತ್ತಿಡುತ್ತಿದ್ದರು ಎಂದು ಲೇಖಕರು ಲಲಿತೆಯ ಅಪೂರ್ವ ಸೌಂದರ್ಯವನ್ನು ಆ ಮಾತುಗಳಲ್ಲಿ ಸೆರೆ ಹಿಡಿದಿದ್ದಾರೆ. ವಿವಾಹದ ನೆನಪೇ ಇಲ್ಲದ ಲಲಿತೆ ಯೌವನಕ್ಕೆ ಕಾಲಿಟ್ಟಾಗ ತನ್ನ ಸ್ಥಿತಿಯ ಬಗ್ಗೆ ಮಾನಸಿಕ ತೊಳಲಾಟಕ್ಕೆ ಒಳಗಾಗುತ್ತಾಳೆ. ಲಲಿತೆಯ ತಂಗಿ ರುಕ್ಮಿಣಿಯನ್ನು ನೋಡಲು ಬಂದ ರಾಮಸ್ವಾಮಿ ಲಲಿತೆಯ ಸೌಂದರ್ಯಕ್ಕೆ ಮಾರು ಹೋಗಿ ವಿಧವೆಯಾದರೂ ಅವಳನ್ನೇ ಮದುವೆಯಾಗಲು ನಿಶ್ಚಯಿಸುತ್ತಾರೆ. ರಾಮಸ್ವಾಮಿಯ ತಂದೆಗಾಗಲಿ, ಹೆಣ್ಣಿನ ತಂದೆಯವರಿಗಾಗಲಿ ಈ ಮದುವೆ ಒಪ್ಪಿತವಾಗಿರಲಿಲ್ಲ. ಲಲಿತೆ ರಾಮಸ್ವಾಮಿ ಅವರ ಪರಸ್ಪರ ಒಪ್ಪಿಗೆಯಿಂದ ಸಂಪ್ರದಾಯಕ್ಕೆ ವಿರುದ್ಧವಾಗಿ ಅವರಿಬ್ಬರಿಗೂ ಮದುವೆ ಆಗುತ್ತದೆ. ರಾಮಸ್ವಾಮಿಗೆ ಲಲಿತೆಗೆ ಬದುಕು ಕೊಟ್ಟೆ ಎಂಬ ಅಭಿಮಾನ ಇದೆ. ಆದರೆ ಊರಿನವರೆಲ್ಲಾ ಲಲಿತೆಗೆ ತಲೆ ಬೋಳಿಸಲಿಲ್ಲ ಎಂದು ಹೆಂಗಸರು ಮೊದಲುಗೊಂಡು ರಂಗಾಚಾರಿಯನ್ನು ನಿಂದಿಸುತ್ತಾರೆ. ಊರಿನವರೆಲ್ಲಾ ರಂಗಾಚಾರಿಯನ್ನು "ಆ ಅಪ್ಪ ರಂಗಾಚಾರಿಗೆ ಏನು ಕೇಡು, ತಕ್ಕೊಂಡು ಹೋಗಿ ಮೂಳೇನ ಬಾವಿಗೋ ಹೊಳೆಗೋ ತಳ್ಳಿ ಬರೋಕಾಗದೆ? ಆಗಲೇ ತಳ್ಳಿದ್ರೆ, ರುಕ್ಮಿಣಿ ಇಷ್ಟು ಹೊತ್ತಿಗೆ ಪುಟ್ಟುದಾಗಿ ಗಂಡನ್ಮನೇಲಿ ಇರೋಳು-ಆಗ್ಲೆ ತಲೆ ಬೋಳ್ಸು ಅಂತ ಬಡಕೊಂಡ್ರೂ ರಂಗಾಚಾರಿ ಕೇಳ್ಳಿಲ್ಲ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೨೫೬) ಎಂದು ಕಟುವಾಗಿ ಟೀಕಿಸುತ್ತಾರೆ. ಸಂಪ್ರದಾಯಕ್ಕೆ ವಿರುದ್ಧವಾದ ವರ್ತನೆ ಕಂಡು ಬಂದಾಗ ಜನರಿಂದ ಟೀಕೆ ಹೇಗೆ ತೀವ್ರವಾಗಿರುತ್ತದೆ ಎಂಬುದನ್ನು ಲೇಖಕರು ಇಲ್ಲಿ ಚಿತ್ರಿಸಿರುವುದರ ಜೊತೆಗೆ ರಾಮಸ್ವಾಮಿ ಹಾಗೂ ಲಲಿತೆಯರ ವಿಧವಾ ವಿವಾಹದ ಮೂಲಕ ಕ್ರಾಂತಿ ದೃಷ್ಟಿಯನ್ನು ಪ್ರತಿಪಾದಿಸಿರುವುದು ಗಮನಾರ್ಹ ಸಂಗತಿ. ಗೊರೂರವರು ಇಂಥ ಅರ್ಥಪೂರ್ಣ ಕ್ರಾಂತಿಯನ್ನು ಸ್ವಾಗತಿಸುವುದು ಬ್ರಾಹ್ಮಣರಾಗಿ ವಿಶೇಷ ಸಂಗತಿ ಎಂದು ಪರಿಭಾವಿಸಬಹುದು. ಗೊರೂರವರ ಈ ಕ್ರಾಂತಿ ದೃಷ್ಟಿಗೆ ಅವರ ವೈಚಾರಿಕತೆ ಒಂದು ಕಾರಣವಾದರೆ ಅಂದು ಗಾಂಧೀಜಿಯವರು ವಿಧವಾ ವಿವಾಹಕ್ಕೆ ಕೊಟ್ಟ ಪ್ರೋತ್ಸಾಹದ ಭಾವನೆ ಮತ್ತೊಂದು ಪ್ರಬಲ ಕಾರಣವಾಗುತ್ತದೆ. ಗಾಂಧೀಜಿಯವರ ಕಟ್ಟುನಿಟ್ಟ ಅನುಯಾಯಿಯಾದ ಗೊರೂರವರ ಈ ವರ್ತನೆ ಮೆಚ್ಚುವಂತಹದ್ದಾಗಿದೆ.

'ನಮ್ಮೂರಿನ ರಸಿಕರು' ಕೃತಿಯಲ್ಲಿ ಗೊರೂರವರು ಕೊಡುವ ನಿರ್ಗತಿಕ ಎಂಭತ್ನಾಲ್ಕು ವರ್ಷದ ವಿಧವೆ ಮುದುಕಿ ಪಟ್ಟುಪಾಡು ಗಮನಾರ್ಹವಾದದ್ದು. ಆ ಮುದುಕಿ ಹನ್ನೊಂದು ವರ್ಷಕ್ಕೆ ವಿಧವೆಯಾದಳು. ಸಂಪ್ರದಾಯಸ್ಥರು ಸಂಪ್ರದಾಯವನ್ನೇ ಮುಂದಾಗಿಟ್ಟುಕೊಂಡು ಅಲ್ಲಿಂದ ಮುಂದಕ್ಕೆ "ವೈದಿಕ ಶಿಖಾಮಣಿಯಾದ ಹುಡುಗಿಯ ತಂದೆಯು ಬಲತ್ಕಾರದಿಂದ ಅವಳಿಗೆ ಕ್ಷೌರ ಮಾಡಿಸಿ ಆ ಹಸುಗೂಸಿನ ಅಂದವನ್ನು ಕೆಡಿಸಿ ತನ್ನ ಧರ್ಮವನ್ನು ಉಳಿಸಿಕೊಂಡುದು; ತನ್ನ ಅಣ್ಣ ತಮ್ಮಂದಿರ ಮನೆಯಲ್ಲಿ ಆ ಎಳೆಯ ಮಗುವು ಹತ್ತು ಜನರ ಕೆಲಸ ಮಾಡುತ್ತಾ, ಹಿಡಿ ಕೂಳಿಗಾಗಿ ಉಳಿದವರೆಲ್ಲರ ಗುಲಾಮಗಿರಿಯನ್ನು ಮಾಡಿದುದು; ತನ್ನ ಜತೆಗಾತಿಯರು ಗಂಡಂದಿರೊಂದಿಗೂ ಮಕ್ಕಳೊಂದಿಗೂ ಸುಖವಾಗಿದ್ದಾಗ ತಾನು ಮೂಲೆಯಲ್ಲಿ ತಲೆಗೆ ಮುಸುಕನ್ನು ಹಾಕಿಕೊಂಡು ಸಮಾಜವನ್ನು ವಿಧಿಯನ್ನು ಬೈಯುತ್ತಾ, ಕಣ್ಣೀರು ಸುರಿಸಿದುದು; ತನ್ನ ಪ್ರಯತ್ನವನ್ನು ಮೀರಿ ತಾನು ಸುಂದರಿಯಾದಾಗ ಜನರು ತನ್ನನ್ನು 'ಬಿನ್ನಾಣಗಿತ್ತಿ, ಮಾಯಗಾತಿ' ಎಂದು ಬೈದುದು; ತಾನು ಅಪಶಕುನದ ದೇವತೆಯೆಂದು ತಂದೆ ತಾಯಿಗಳೇ ತನ್ನನ್ನು ದೂರಿದುದು; ಗಂಡನಿಲ್ಲದ ಯೌವ್ವನದ ಆ ಯಮಯಾತನೆಯನ್ನು ಬಹಳ ಸಂಕಟದಿಂದ ನೂಕಿದುದು; ಹೃದಯವು ಎಲ್ಲರ ವಿಷಯದಲ್ಲಿಯೂ ಕ್ರೂರವಾದುದು; ಪ್ರಪಂಚವು ಸ್ವಾರ್ಥತೆಯಿಂದ ತುಂಬಿದೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೨೫-೨೬) ಎಂದು ಬಾಲ ವಿಧವೆ ಸಂಕಟ ಪಡುವ ಚಿತ್ರ ಇಲ್ಲಿ ಸಹಜವಾಗಿ ನಿರೂಪಿತವಾಗಿದೆ.

ಗೊರೂರವರ ಸಾಹಿತ್ಯಕ್ಕೆ ಗಂಭೀರವಾದ ಮುಖ ಇದೆ ಎಂಬುದನ್ನು ಮರೆಯಬಾರದು. ಅವರು ನಗಿಸಬಲ್ಲರಷ್ಟೇ ಅಲ್ಲ, ಚಿಂತನ ಮಂಥನಗಳಲ್ಲೂ ಮಗ್ನರಾಗಬಲ್ಲರು. ಕೀರ್ತಿನಾಥ ಕುರ್ತಕೋಟಿಯವರು ತಮ್ಮ ಕೃತಿ 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ'ದಲ್ಲಿ ಗೊರೂರವರ ಕತೆಗಳನ್ನು ವಿಮರ್ಶಿಸುತ್ತಾ ಅವರ ಕತೆಗಳಲ್ಲಿ "ವೈಚಾರಿಕತೆಯನ್ನಾಗಲಿ ಕಲ್ಪನ ಶಕ್ತಿಯನ್ನಾಗಲಿ ಅವರಿಂದ ಅಪೇಕ್ಷಿಸಲಾಗದು" ಎಂಬ ಹೇಳಿಕೆಯನ್ನು ನೀಡಿರುತ್ತಾರೆ. (ಕೀರ್ತಿನಾಥ ಕುರ್ತಕೋಟಿ; ೨೦೦೨; ಪು.೧೫೦) ಇದು ಸತ್ಯಕ್ಕೆ ದೂರವಾದ ಮಾತಾಗಿದೆ. ಗೊರೂರರ ಪ್ರಬಂಧ, ಕತೆ, ಕಾದಂಬರಿಗಳಲ್ಲೂ ವೈಚಾರಿಕತೆಯ ಸುಳುಹುಗಳು ಇವೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಗೊರೂರವರ 'ನಮ್ಮೂರಿನ ರಸಿಕರು' ಕೃತಿಯಲ್ಲಿ ಒಂದೆಡೆ ವೈದಿಕ ಬಾಲ ವಿಧವೆಯೊಬ್ಬಳ ವಿಷಯ ಬರುತ್ತದೆ. ಅವಳಿಗೆ ಮನೆಯವರು ತಲೆ ಬೋಳಿಸಿ, ಕೆಂಪು ಸೀರೆ ಉಡುಸಿ, ಮೂಲೆ ಗುಂಪು ಮಾಡಿದ ಹೀನ ಪ್ರಕ್ರಿಯೆಗೆ ಸೌದೆ ಒಡೆಯುತ್ತಿದ್ದ ಬೋರನು ಪ್ರತಿಕ್ರಿಯಿಸಿದ ರೀತಿ "ಅದ್ಯಾಕ ಬುದ್ಧಿ, ಹನ್ನೊಂದು ವರ್ಷದ ಹಸುಗೂಸ್ಗೆ ಇನ್ನೊಂದು ಮದ್ವೆ ಮಾಡೋಕಾಗ್ದಿತ್ರ?" ಎಂದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೨೬) ಇದಕ್ಕೆ ಪುರೋಹಿತರು ಕೊಡುವ ಉತ್ತರ ಬೋರನಿಗೆ ಏನು ಗೊತ್ತು "ವಿಧವೆಗೆ ಮರುಮದುವೆಯೆ? ಸತ್ತ ಗಂಡ ಇವಳಿಗಾಗಿ ಸ್ವರ್ಗದಲ್ಲಿ ಅರ್ಧ ಆಸನ ಇಟ್ಟುಕೊಂಡು ಕಾಯುತ್ತಿಲ್ಲವೆ?". (ಅದೇ) ಇಲ್ಲಿ ಗೊರೂರವರ ದೃಷ್ಟಿ ನವೀನ ಮಾತ್ರವಲ್ಲದೆ, ಮೇಲುವರ್ಗದವರ ಸಂಪ್ರದಾಯ ಶಠತೆಗೂ ಕೆಳವರ್ಗದವರ ಮಾನವೀಯ

ಧೋರಣೆಗೂ ಇರುವ ವೈಷಮ್ಯ ಕೂಡ ಧ್ವನಿತವಾಗುತ್ತದೆ. ಜೊತೆಗೆ ಪಂಡಿತರಲ್ಲಿ ಕಾಣುವ ಮೂಢ ನಂಬಿಕೆಯ ಪರಾಕಾಷ್ಠತೆಯನ್ನು ಗೊರೂರವರು ಚಿತ್ರಿಸಿದ್ದಾರೆ. ಸಾಮಾನ್ಯ ಮನುಷ್ಯನಾದ ಬೋರನಿಗೆ ಇರುವ ವಿವೇಕ ವೈಚಾರಿಕತೆಯಿಂದ ಕೂಡಿದ ಅಂತಃಕರಣ ಪಂಡಿತರಿಗೆ ಇರಲಿಲ್ಲ ಎಂಬ ಸಂಗತಿಯನ್ನು ಲೇಖಕರು ಇಲ್ಲಿ ಒತ್ತಿ ಹೇಳಿದ್ದಾರೆ. ವಿಧವೆಯ ಬಾಳಿನ ಗೋಳಿಗೆ ಪರಾಕಾಷ್ಠತೆಯನ್ನು ಇದಕ್ಕಿಂತ ನಾವು ಬೇರೆ ಕಾಣಬೇಕಾಗಿಲ್ಲ.

'ಕಮ್ಮಾರ ವೀರಭದ್ರಾಚಾರಿ' ಕೃತಿಯಲ್ಲಿ 'ಆಶೀರ್ವಚನ' ಕತೆಯಲ್ಲಿ ಗೊರೂರವರು ವಿಧವೆಯರ ಕೈಯಲ್ಲಿ ಆರತಿ ಎತ್ತಿಸಿದ ಪ್ರಸಂಗ ಅನನ್ಯವಾಗಿದೆ. "ನಮ್ಮ ಊರು ಸುಧಾರಕ ಊರು. ಪ್ರೌಢ ವಿವಾಹ, ವಿಧವಾ ವಿವಾಹ, ಅಂತರಜಾತಿ ವಿವಾಹ ಇವುಗಳಿಗಾಗಿ ಪ್ರಚಾರ ಬೇಕಾದಂತೆ ನಡೆದಿದೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೯೦) ಎಂಬ ಅಭಿಮಾನವನ್ನು ಹೊಂದಿರುವ ಗೊರೂರು ವಿಧವೆಯರ ಕೈಯಲ್ಲಿ ಆರತಿ ಎತ್ತಿಸಿ ಸಂಪ್ರದಾಯಕ್ಕೆ ವಿರುದ್ಧವಾದ ದೊಡ್ಡ ಕ್ರಾಂತಿ ನಡೆಸಿರುವುದು ವಿಶೇಷ ಸಂಗತಿ. "ಸಾಮೂಹಿಕವಾಗಿ ವಿಧವೆಯರ ಕೈಯ್ಯಲ್ಲಿ ಮೊದಲು ಆರತಿ ಎತ್ತಿಸಿಕೊಂಡವರು ಆ ಜಿಲ್ಲಾಧಿಕಾರಿಗಳೇ. ಆರತಿ ಎತ್ತಿದವರ ಪೈಕಿ ಕೆಲವು ವಿಧವೆಯರು ಇದ್ದುದನ್ನು ಅನಂತರ ತಿಳಿದ ನಮ್ಮ ಪುರೋಹಿತರು "ಶಾಂತಂ ಪಾಪಂ" ಎಂದು ನಿಟ್ಟುಸಿರು ಬಿಟ್ಟರು. (ಅದೇ) ಗೊರೂರವರ ಈ ಕ್ರಾಂತಿ ಕಾರ್ಯ ಅನಿಷ್ಟ ಸಂಪ್ರದಾಯಗಳ ಮಧ್ಯೆ ನಡೆದಿರುವುದು ಪುರೋಹಿತರಿಗೆ ಅಸಮಾಧಾನ ತಂದರು ಗೊರೂರವರ ಸುಧಾರಣಾ ದೃಷ್ಟಿ ವಿಚಾರವಂತರಿಗೆಲ್ಲಾ ಮೆಚ್ಚುಗೆಯಾಯಿತು. ಅನಿಷ್ಟ ಸಂಪ್ರದಾಯದ ಸುಳಿಯಲ್ಲಿ ಸಿಕ್ಕಿ ಮೂಕವೇದನೆ ಅನುಭವಿಸುತ್ತಿದ್ದ ವಿಧವೆಯರಿಗೆಲ್ಲಾ ಲೇಖಕರ ದಿಟ್ಟ ನಿಲುವು ನೆಮ್ಮದಿಯನ್ನು ತಂದುಕೊಟ್ಟಿದೆ.

'ಕತೆಗಳು ಮತ್ತು ವಿನೋದ ಚಿತ್ರಗಳು' ಕೃತಿಯಲ್ಲಿ ಕಂಡುಬರುವ ವಿಧವೆ ಸೀತಮ್ಮನ ವರ್ತನೆ ದಿಟ್ಟ ನಿಲುವಾಗಿದೆ. ಸಂಪ್ರದಾಯದ ರೀತಿ ಗಂಡ ಸತ್ತ ವರ್ಷದಲ್ಲಿ ಆ ಮನೆಯಲ್ಲಿ ಯಾವ ಹಬ್ಬವನ್ನು ಆಚರಿಸಬಾರದು. ಆದರೆ ಸೀತಮ್ಮನ ಮಕ್ಕಳು ಗೋಕುಲಾಷ್ಟಮಿ ಹಬ್ಬವನ್ನು ಆಚರಿಸಲು ತಾಯಿ ಸೀತಮ್ಮನನ್ನು ಒತ್ತಾಯಿಸುತ್ತಾರೆ. ಸೀತಮ್ಮನಿಗೆ ಪತಿಯ ಸಾವಿನ ಸಂಕಟ ಸಂಪ್ರದಾಯದ ಒತ್ತಡ ಎರಡೂ ತೀವ್ರವಾಗಿದ್ದಾಗ ಮಕ್ಕಳ ಒತ್ತಾಸೆಯ ಮೊರೆ ಅವಳ ಹೃದಯವನ್ನು ಕಲಕುತ್ತದೆ. "ಇದ್ದಕ್ಕಿದ್ದಂತೆ ಸೀತಮ್ಮನ ದೇಹದಲ್ಲಿ ಒಂದು ಆನಂದದ ಚೈತನ್ಯ ಪ್ರವಹಿಸಿದಂತೆ ರೋಮಾಂಚವಾಯಿತು. "ಇಂದು ಕೃಷ್ಣ ಪೂಜೆಗೊಳ್ಳಬೇಕು. ಮಕ್ಕಳು ನಲಿದಾಡಬೇಕು" ಎಂಬುದಷ್ಟೇ ಅವಳಿಗೆ ತೋರಿದ ಅಂಶ . (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು.೧೯) ಆ ಸಂದರ್ಭದಲ್ಲಿ ಮಕ್ಕಳ ಅಪೇಕ್ಷೆಯಂತೆ ಸೀತಮ್ಮ ಹಬ್ಬವನ್ನು ಆಚರಿಸಲು ನಿಶ್ಚಯಿಸಿ ಮಕ್ಕಳಿಗೆ ತಿಳಿಸುತ್ತಾಳೆ. ಆಗ ಮಕ್ಕಳಿಗೆ ಅಪಾರ ಆನಂದ ವಾಗುತ್ತದೆ. ಸೀತಮ್ಮ ಈ ಮಕ್ಕಳ ಆನಂದವನ್ನು ನೋಡಿ ತನ್ನ ಪತಿಯ ಸಾವಿನ ಸಂಕಟವನ್ನು ಮರೆಯಲು

ಸಾಧ್ಯವಾಗುತ್ತದೆ. ವಿಧಿಯ ಅನ್ಯಾಯದ ಜೊತೆಗೆ ಸಂಪ್ರದಾಯದ ಕ್ರೂರ ಆಚರಣೆಯ ನೋವು ಸೇರುವುದು ಬೇಡ ಎಂಬುದು ಇಲ್ಲಿ ಸೀತಮ್ಮನ ನಿಲುವು ಆಗಿದೆ. ಸಂಪ್ರದಾಯದ ಕಟ್ಟಿಗೆ ತಲೆ ಕೊಡದೆ ಮಕ್ಕಳ ಅಂತಃಕರಣದ ಮೊರೆಗೆ ಹೃದಯ ಕೊಟ್ಟು ಸೀತಮ್ಮ ಹಬ್ಬ ಆಚರಿಸುವ ಧೋರಣೆಯನ್ನು ತಾನು ಹೊಂದಿ ಸಂಪ್ರದಾಯದ ಹೆಸರಿನಲ್ಲಿ ದಿಟ್ಟ ಹೆಜ್ಜೆ ಹಾಕಿರುವುದನ್ನು ಲೇಖಕರು ಮೆಚ್ಚಿ ಇಂತಹ ವಿಶೇಷ ಘಟನೆಯನ್ನು ಕೃತಿಯಲ್ಲಿ ಅಳವಡಿಸುವುದರ ಮೂಲಕ ವಿಧವಾ ವರ್ಗಕ್ಕೆ ಒಂದು ನೈತಿಕ ಬಲವನ್ನು ತಂದುಕೊಟ್ಟಿದ್ದಾರೆ.

ವಿಧವೆಯನ್ನು ಬಹುಪಾಲು ಜನ ಕೀಳಾಗಿ ಭಾವಿಸಿದರು ಅಪರೂಪಕ್ಕಾದರೂ ಮಾನವೀಯತೆಯ ಕರುಣೆಯ ಭಾವದಲ್ಲಿ ಕಾಣುತ್ತಿದ್ದ ಜನರು ಇದ್ದರು ಎಂಬುದನ್ನು ಗೊರೂರವರು 'ಮರೆಯಾದ ಮಾರಮ್ಮ' ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ. "ವೆಂಕಟಾದ್ರಿಯ ಅತ್ತೆಯ ಮನೆಯ ದೂರದ ಬಂಧು ವಿಧವೆಯೊಬ್ಬಳು ದಿಕ್ಕಿಲ್ಲದವಳಾಗಿ ವೆಂಕಟಾದ್ರಿಯ ಮನೆಗೆ ಬಂದು ಸೇರಿದಳು. ಅನಾಥರಾದ ಬಂಧುಗಳಿಗೆ ಮನೆಯಲ್ಲಿ ರಕ್ಷಣೆ ಕೊಡುವುದು ಧರ್ಮವೆಂದು ಅಂದಿನವರು ನಂಬಿದ್ದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೩೪)

ಗ್ರಾಮೀಣ ಪ್ರದೇಶದಲ್ಲಿ ದೆವ್ವಗಳ ಕಾಟ, ದೆವ್ವಗಳ ಭೀತಿ ಇಂದಿಗೂ ಇದೆ. ಗ್ರಾಮೀಣ ಜೀವನದಲ್ಲಿ ಈ ದೆವ್ವಗಳ ನಂಬಿಕೆ ಅವರ ಬದುಕಿನ ಮೇಲೆ ನಿಗೂಢ ಪ್ರಭಾವ ಆಗಿದೆ ಎಂಬುದುಂಟು. ಲೇಖಕರು ತಮ್ಮ ಕೃತಿಗಳಲ್ಲಿ ಈ ದೆವ್ವಗಳ ಪ್ರಸಂಗವನ್ನು ಕುರಿತು ಜನಮನದ ನಂಬಿಕೆಯನ್ನು ಪ್ರತಿಬಿಂಬಿಸಿದ್ದಾರೆ. 'ನಮ್ಮೂರಿನ ರಸಿಕರು' ಕೃತಿಯಲ್ಲಿ ಕಂಡುಬರುವ ದೆವ್ವಗಳ ವಿಚಾರ ಹೀಗಿದೆ. "ನಮ್ಮೂರಿನಲ್ಲಿ ಬಗೆ ಬಗೆಯ ಸ್ವಭಾವದ ಜನರಿರುವಂತೆ ಬಗೆ ಬಗೆಯ ದೆವ್ವಗಳಿವೆ. ಕೆಲ ಕೆಲವು ದೆವ್ವಗಳು ಕೆಲ ಕೆಲವರಿಗೆ ಮಾತ್ರ ಕಾಣುತ್ತವೆ. ಕೆಲವು ದೆವ್ವಗಳು ತಮಗೆ ಪರಿಚಿತವಾದ ಸ್ಥಳಗಳಲ್ಲಿ ಮಾತ್ರ ತಿರುಗಾಡುತ್ತವೆ. ಕೆಲವಕ್ಕೆ ಮಾತ್ರ ಎಲ್ಲಿ ಬೇಕಾದರೆ ಅಲ್ಲಿಗೆ ಹೋಗುವ ಶಕ್ತಿಯೂ ಸಾಹಸವೂ ಇದೆ. ನಮ್ಮ ಊರ ದೆವ್ವಗಳಲ್ಲಿ ಮುಖ್ಯವಾದುವು ಜಡೆಮುನಿ, ಬೇತಾಳ, ಉರಿಸಿಂಗ, ಆಗಸರನರಸಿ, ಮುನ್ನಗ್ಗ ಇವು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೧೧೦) ಇಂತ ದೆವ್ವಗಳ ಕಾಟಗಳನ್ನು ಗೊರೂರವರು ಇದೇ ಕೃತಿಯಲ್ಲಿ ಇನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಅದು ಹೇಗೆಂದರೆ "ಮಂಚನಹಳ್ಳಿ ಕೆರೆಯ ದೆವ್ವಕ್ಕೆ ಭರ್ತಿ ಗಾಡಿಗಳನ್ನು ಉರುಳಿಸುವುದಕ್ಕೆ ಬಹಳ ಪ್ರೀತಿ. ಮಂಚನಹಳ್ಳಿ ಕೆಂಗ, ಮಲ್ಲೇನಹಳ್ಳಿ ನಿಂಗ ಇವರೆಲ್ಲಾ ಅದರ ಕೈಗೆ ಸಿಕ್ಕಿ ಗಾಡಿ ಕೆಡವಿಕೊಂಡು ಕಷ್ಟಪಟ್ಟಿದ್ದಾರೆ. ಬೋರನು ಒಂದು ಸಲ ಮಂಚನಹಳ್ಳಿಗೆ ಹೋಗಿ ಅಲ್ಲಿಂದ ನಮ್ಮ ಊರಿಗೆ ಗಾಡಿಯಲ್ಲಿ ರಾಗಿ ಹೇರಿಕೊಂಡು ಬರಬೇಕಾಯಿತು. ಹೋಗುವಾಗ ಅವನನ್ನು ಬೇತಾಳವು ದಾರಿಯಲ್ಲಿ ತಡೆಯಲಿಲ್ಲ. ಅವನು ರಾಗಿಯನ್ನು ಗಾಡಿಯಲ್ಲಿ ತುಂಬಿಕೊಂಡು ನಮ್ಮೂರ ಕಡೆಗೆ ಹಿಂದಿರುಗಿ ಹೊರಟಾಗ ಸಾಯಂಕಾಲವಾಗುತ್ತಿತ್ತು.

ಮಂಚನಹಳ್ಳಿಯ ಕೆರೆಗೆ ಬರುವ ವೇಳೆಗೆ ಚೆನ್ನಾಗಿ ಕತ್ತಲೆಯಾಯಿತು. ಬೋರನು ಸ್ವಭಾವತಃ ಧೈರ್ಯಶಾಲಿಯಾದರೂ ಆ ಕೆರೆಯಲ್ಲಿ ಬೇತಾಳವು ತಿರುಗುತ್ತಿರುವುದು ಅವನಿಗೆ ಗೊತ್ತಿದ್ದುದರಿಂದ ಹೆದರಿದನು. "ಹೇಗಾದರೂ ಮಾಡಿ ಈ ಕೆರೆಯನ್ನು ದಾಟಿ ಬಿಟ್ಟರೆ ಸಾಕು. ಆಮೇಲೆ ನೋಡಿಕೊಳ್ಳೋಣ" ಎಂದು ಅವನು ದಾರಿ ಚೆನ್ನಾಗಿಲ್ಲದಿದ್ದರೂ, ಗಾಡಿಯಲ್ಲಿ ರಾಗಿ ತುಂಬಿದ್ದರೂ ಎತ್ತುಗಳನ್ನು ಓಡಿಸಿದನು. ಸ್ವಲ್ಪ ದೂರ ಓಡಿಸಿ ಬೋರನು ಗಾಡಿಯಲ್ಲಿ ಕುಳಿತುಕೊಂಡೇ ಹಿಂದಕ್ಕೆ ನೋಡಿದನು. ಬೇತಾಳವು ಅವನ ಗಾಡಿಯ ಹಿಂದೆ ಬರುತ್ತಿದ್ದಿತು. ಬೋರನಿಗೆ ಜಂಘಾಬಲವೇ ತಪ್ಪಿ ಹೋಯಿತು. ಮೈ ಬೆವತಿತು. ಅವನು ವೇಗವಾಗಿ ಎತ್ತುಗಳನ್ನು ಓಡಿಸಿದಷ್ಟು ಬೇತಾಳವು ಅವನನ್ನು ಅಟ್ಟಿಕೊಂಡು ಹಿಂದೆ ಹಿಂದೆಯೇ ಬರುತ್ತಿದ್ದಿತು. ಕೊನೆಗೆ ಬೇತಾಳವು ಗಾಡಿಯನ್ನು ಕೆಡವಿ ಬೋರನ ಮೇಲೆ ಅಗತುಕೊಂಡಿತು. ಬೋರನಿಗೆ ಉಸಿರು ಕಟ್ಟಿ ಸಾಯುವ ಹಾಗಾಗಿ ಅವನು ಕೂಗಿ ಕೊಂಡ ಮೇಲೆ ಬೇತಾಳವು ಕೃಪೆಯಿಟ್ಟು ಅವನ ಗೋಜನ್ನು ಬಿಟ್ಟು ಹೊರಟು ಹೋಯಿತು. ಆಮೇಲೆ ಬೋರನು ಎದ್ದು ತನ್ನ ಮೇಲೆ ಬಿದ್ದಿದ್ದ ರಾಗಿಯ ಮೂಟೆಗಳನ್ನೆಲ್ಲಾ ಕೆಳಕ್ಕೆ ತಳ್ಳಿ ಒಂದೇ ಸಮನಾಗಿ ಓಡುತ್ತಾ ನಮ್ಮ ಊರಿಗೆ ಬಂದು ಸೇರಿದನು". (ಅದೇ; ಪು.೧೧೪) ದೆವ್ವಗಳ ಜತೆಯಲ್ಲಿ ಊರಿನವರು ಕಾದಾಡಿದ್ದುಂಟು ಎಂದು ಹೇಳಿ ಕರಿಯನ ಪ್ರಸಂಗವನ್ನು ಹೇಳುತ್ತಾರೆ. "ಒಂದು ದಿವಸ ರಾತ್ರಿ, ಅಗಸರ ನರಸಿಯು (ದೆವ್ವ) ಕುದುರೆಯೇರಿ ಓಡಿಸಿಕೊಂಡು ಬಂದಿತಂತೆ. ನದಿಯ ಸೇತುವೆ ಮೇಲಕ್ಕೆ ಬರುವ ವೇಳೆಗೆ ಕರಿಯನಿಗೆ ಸಾಕಾಗಿ ಹೋಯಿತು. ಅವನು ಮುಂದಕ್ಕೆ ಓಡದೆ ದೆವ್ವದ ಮೇಲೆ ಕುಸ್ತಿಗೆ ನಿಂತನು. ಇಬ್ಬರೂ ಬಹಳ ಹೊತ್ತು ಕಾದಿದ ತರುವಾಯ ದೆವ್ವವು ಕರಿಯನನ್ನು ಬಿಟ್ಟು ಓಡಿ ಹೋಯಿತು". (ಅದೇ; ಪು.೧೧೫) ಹಳ್ಳಿಯ ಜನರ ಸಾಹಸ ಕತೆಗಳಿಗೆ ಇಂತಹ ದೆವ್ವಗಳ ಜೊತೆಯಲ್ಲಿ ಹೋರಾಟ ಮಾಡಿದ ವ್ಯಕ್ತಿಗಳ ಸಾಹಸವು ಸೇರಿಕೊಂಡಿದೆ ಎಂದು ಗೊರೂರರವರು ತಿಳಿಸಿದ್ದಾರೆ. ಒಟ್ಟಿನಲ್ಲಿ ದೆವ್ವಗಳ ಅಸ್ತಿತ್ವದ ಬಗ್ಗೆ ಜನರಿಗೆ ಇರುವ ನಂಬಿಕೆಗೆ ಇದಕ್ಕಿಂತ ಪ್ರಬಲವಾದ ಬೇರೊಂದು ಸಾಕ್ಷಿ ಬೇಡ. ಗ್ರಾಮಜೀವನದ ಸೂಕ್ಷ್ಮ ಚಿತ್ರಕ್ಕೆ ಇಂಥ ಪ್ರಸಂಗಗಳು ಒಳ್ಳೆಯ ಉದಾಹರಣೆಗಳು ಆಗುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಬ್ರಾಹ್ಮಣ ಜಾತಿಯಲ್ಲಿ ಮಡಿಯ ಪರಿಕಲ್ಪನೆ ವಿಚಿತ್ರವಾಗಿ ಕಂಡು ಬಂದಿರುವುದನ್ನು ಗೊರೂರರವರು ತಮ್ಮ ಕೃತಿಗಳಲ್ಲಿ ಉಲ್ಲೇಖ ಮಾಡಿ ಹುಚ್ಚು ಮಡಿಯ ಬಗ್ಗೆ ಅನೇಕ ಬಾರಿ ವ್ಯಂಗ್ಯ ನುಡಿದಿದ್ದಾರೆ. ಈ ಮಡಿಯ ಆಚರಣೆ ಸಾಮಾಜಿಕ ಜೀವನಕ್ಕೆ ಅನೇಕ ರೀತಿಯಲ್ಲಿ ಮುಜಗರವನ್ನು ತಂದಿದೆ ಎಂಬುದು ಲೇಖಕರ ಚಿಂತನೆಯ ಸಾರಾಂಶದ ಮಾತು. 'ಹಳ್ಳಿಯ ಚಿತ್ರಗಳು' ಕೃತಿಯಲ್ಲಿ ಲೇಖಕರು ಅವರ ಗೆಳೆಯನ ಅತ್ತೆಯವರ ಮಡಿಯ ಬಗ್ಗೆ ಹೇಳುವ ಮಾತು ಹೀಗಿದೆ. "ನಮ್ಮ ಗೆಳೆಯನ ಅತ್ತೆಯವರು ಬಹಳ ಮಡಿ. ಮೈಲಿಗೆ ವಸ್ತುಗಳ ಮೇಲೆ ಬೀಸಿದ ಗಾಳಿ ಅವರಿಗೆ ಬೀಸಿದರೂ ಸಾಕು; ಕೂಡಲೇ ಸ್ನಾನ ಮಾಡಬೇಕು. ಮಾತನಾಡಿದುದ್ದಕ್ಕೆಲ್ಲಾ ಸ್ನಾನ. ಮುದುಕರಾದರೂ ದಿವಸಕ್ಕೆ ೮-೧೦ ಸಲ ತಣ್ಣೀರಿನಲ್ಲಿ ಮುಳುಗುತ್ತಾರೆ. ನನ್ನನ್ನು ಕಂಡ ಕೂಡಲೆ ಅವರು ನಡುಗಿದರು. ನಾನು

ಇಂಗ್ಲೀಷ್ ಕಲಿತು, ಬೆಂಗಳೂರಿನಲ್ಲಿ ಜೀವಿಸುತ್ತಾ, ನಲ್ಲಿಯ ನೀರನ್ನು ಕುಡಿಯುತ್ತಿರುವೆನಾದುದರಿಂದ ನಮಗೆ ನರಕದಲ್ಲಿ ಶಾಶ್ವತವಾದ ಸ್ಥಳವಿರುವುದೆಂದು ಅವರು ತೀರ್ಮಾನಿಸಿದ್ದರು. ನಾನು ಹೋದ ಕೂಡಲೆ, ಎಲ್ಲಿ ಸ್ನಾನ ಮಾಡುವ ಪಾತ್ರೆಗಳನ್ನು ಮುಟ್ಟಿ ಬಿಡುತ್ತಾನೋ ಎಂಬ ಗಾಬರಿಯಿಂದ ನಾನು ಕೇಳುವುದಕ್ಕೆ ಮುಂಚೆಯೇ ಬೆಳ್ಳಿ ಚೆಂಬುವಿನಲ್ಲಿ ಕಾಲು ತೊಳೆಯಲು ನೀರನ್ನು ತಂದಿಟ್ಟರು. ಬೆಳ್ಳಿಗೆ ಮೈಲಿಗೆ ಇಲ್ಲ. ಮನೆ ಒಳಕ್ಕೆ ಹೋದಾಗ ಸ್ನಾನದ ಮನೆಗೆ ಹೋದಾನೆಂದು ನನ್ನ ಮೇಲೆಯೇ ಕಣ್ಣಿಟ್ಟರು. ಇದನ್ನೆಲ್ಲಾ ನೋಡಿ ನನಗೆ ಬಹಳ ನಗು ಬಂದಿತು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪;ಪು.೬)

ಗೊರೂರವರ ಭಾವ ಆಚರಿಸುವ ಮಡಿಯೂ ಸಹ ಅಷ್ಟೇ ಹಾಸ್ಯಾಸ್ಪದ ಹೇಗೆಂದರೆ ಭಾವನವರಿಗೆ "ಸೌಟಿನಲ್ಲಿ ಬಡಿಸಬೇಕು; ಚಮಚದಲ್ಲಿ ಬಡಿಸಕೂಡದು; ಬಾಯಿ ನೀರನ್ನು ಎಡಗಡೆಗೆ ಮುಕ್ಕಳಿಸಿ ಉಗಿಯಬೇಕು; ಬಲಗಡೆ ಉಗಿಯ ಕೂಡದು; ಈಚಲ ಮರದ ಮೇಲೆ ಬಟ್ಟೆಯನ್ನಿಟ್ಟರೆ ಅದು ಮಡಿಯೋ? ಅಲ್ಲವೋ? ಈ ವಿಷಯಗಳಿಗೆಲ್ಲಾ ಅವರು ಐದು ಆರು ವರ್ಷಗಳವರೆಗೆ ಸಂಪ್ರದಾಯ ಗ್ರಂಥಗಳನ್ನೆಲ್ಲಾ ವ್ಯಾಸಂಗ ಮಾಡಿ ತೀರ್ಮಾನ ಮಾಡಿದ್ದಾರೆ". (ಅದೇ; ಪು.೭೪-೭೫) ಸಂಪ್ರದಾಯ ಗ್ರಂಥಗಳ ವಿಷಯದ ಬಳಕೆಯಲ್ಲಿ ನಾವು ಕುರುಡಾಗಬಾರದು ಎಂಬುದನ್ನು ಲೇಖಕರು ಎಚ್ಚರಿಸಿದ್ದಾರೆ. ಮತ್ತೊಂದು ಘಟನೆಯಲ್ಲಿ ಅವರ ಭಾವನವರು ಎತ್ತಿನಗಾಡಿಯಲ್ಲಿ ತಂದಿದ್ದ ತಿಂಡಿಯನ್ನು ಮುಟ್ಟದೆ ಇದ್ದದ್ದು ಉಂಟು. ಇದು ಸಹ ಮಡಿಯ ಅತಿರೇಕವೆಂದು ಗೊರೂರವರು ಲೇವಡಿ ಮಾಡಿದ್ದಾರೆ. ಶ್ರಾದ್ಧದ ದಿನ ಶೂದ್ರನ ಧ್ವನಿಯನ್ನು ಕೇಳಬಾರದು ಎಂದು ಲೇಖಕರ ಭಾವನವರು ಒಂದು ಮಡಿಯ ಕಟ್ಟನ್ನು ಇಟ್ಟುಕೊಂಡಿದ್ದರು. "ಶೂದ್ರರ ಧ್ವನಿ ಕೇಳಬಾರದೆಂದು, ಬೀದಿಯ ಬಾಗಿಲಿಗೆ ಅಗಣಿ ಹಾಕಿದ್ದೆವು. ನಮ್ಮ ರೈತ ಬೀದಿಯ ಬಾಗಿಲಿಗೆ ಬಂದು ಎರಡು ಮೂರು ಸಲ ಕೂಗಿದ ಎಂದು ಕಾಣುತ್ತದೆ. ಅದು ನಮಗೆ ಯಾರಿಗೂ ಕೇಳಿಸಲಿಲ್ಲ. ಅನಂತರ ಅವನು ಬೀದಿಯ ಕಡೆಯಿಂದ ನಡುಮನೆ ಕಿಟಕಿಯಲ್ಲಿ ತಲೆಯಿಟ್ಟು ಇಣಕಿ ನೋಡಿದ. ನೋಡಿದ ಕೂಡಲೇ ನಮ್ಮ ಭಾವನವರ ಮುಖವು ಅವನ ಕಣ್ಣಿಗೆ ಬಿದ್ದಿತು. ಭಾವನವರೂ ಅವನನ್ನು ನೋಡಿದರು. ಆಗ ಅವರ ಮುಖದಲ್ಲಿ ತೋರಿದ ಗಾಬರಿಯನ್ನು ಹೇಳಬೇಕಾದುದೇ ಇಲ್ಲ. ಅವರು ವಿಧವಾ ಪತಿ, ಪಿಶಾಚಿ ಎಂದು ಅಬ್ಬರಿಸಿದರು. ತಾನು ನೋಡಿದುದರಿಂದ ಅವರಿಗೆ ಅಸಮಾಧಾನವಾಯಿತೆಂದು ತಿಳಿದು ರೈತನು - "ಉಣ್ತೀರಾ ಬುದ್ಧಿ, ಉಣ್ಣಿ ಉಣ್ಣಿ" ಎಂದು ಹೇಳಿ ಹೊರಟು ಹೋದನು. ಹತ್ತು ನಿಮಿಷ ನಮ್ಮ ಭಾವನವರು ಹುಚ್ಚನಂತೆ ಮಂಕಾಗಿ ಕುಳಿತು ಬಿಟ್ಟರು. ಶ್ರಾದ್ಧದ ದಿವಸ ಶೂದ್ರನು "ಬ್ರಾಹ್ಮಣರ" ಎಲೆಯನ್ನು ನೋಡಿ ಬಿಟ್ಟ; ಶ್ರಾದ್ಧವೆಲ್ಲ ಕೆಟ್ಟು ಹೋಯಿತು; ಪಿತೃಗಳೆಲ್ಲ ನಿರಾಶರಾಗಿ ಹೊರಟು ಹೋಗುತ್ತಾರೆ; ಅಯ್ಯೋ ಎಂದು ಅವರು ದುಃಖಿಸಿದರು". (ಅದೇ; ಪು.೭೭) ಜಾತಿಯ ಬಗ್ಗೆ ಬ್ರಾಹ್ಮಣರಿಗೆ ಇರುವ ಅಹಂಭಾವಿಕೆಯನ್ನು ಇಲ್ಲಿ ಗೊರೂರವರು ಕಟುವಾಗಿ ಲೇವಡಿ ಮಾಡಿದ್ದಾರೆ. ಶಾಸ್ತ್ರ ಓದಿದವರು ಹೀಗೆ ಮಾನವೀಯತೆಯನ್ನು ಮರೆತಿರುವುದು ವಿಷಾದಕರ ಸಂಗತಿಯಾಗಿದೆ. ಶಾಸ್ತ್ರಜ್ಞಾನ ಪಡೆದವರು ಸಾಮಾಜಿಕ ಸಾಮರಸ್ಯಕ್ಕೆ ಪೂರಕವಾಗಿ ಬದುಕಬೇಕು ಎಂಬ

ಅಂಶವನ್ನು ಲೇಖಕರು ಈ ಸಂದರ್ಭದಲ್ಲಿ ಎಚ್ಚರಿಸಿದ್ದಾರೆ. ಸಹಬಾಳ್ವೆಗೆ ಸಹಕಾರಿಯಾಗದ ಜ್ಞಾನ ನಿಷ್ಪ್ರಯೋಜಕ. ಅಂತೆಯೇ ಸಹ ಜೀವಿಗಳಿಗೆ ನೋವನ್ನುಂಟು ಮಾಡುವ ಬ್ರಾಹ್ಮಣರ ಬದುಕು ಖಂಡನೀಯ ಎಂದು ಲೇಖಕರು ಇಲ್ಲಿ ತಿಳಿಸಿದ್ದಾರೆ.

'ಮಡಿ ಮಡಿ ಎಂದು ಅಡಿಗಡಿಗ್ಹಾರುವೆ ಮಡಿ ಎಲ್ಲಿ ಬಂತೇ ಬಿಕನಾಸಿ / ಹುಟ್ಟುತ ಸೂತಕ, ಸಾಯುತ ಸೂತಕ, ನಟ್ಟ-ನಡುವಿನ ಲಿಂತೆ ಬಿಕನಾಸಿ' - ಎಂದು ದಾಸರು ಹೇಳಿ ಅನೇಕ ಶತಮಾನಗಳೇ ಕಳೆದವು. ಆದರೂ ಈ ಅತಿ ಮಡಿ ಎಂಬುದು ನಮ್ಮನ್ನು ಬಿಟ್ಟಿಲ್ಲ. ಮನುಷ್ಯನಿಗೆ ಶಾಸ್ತ್ರಜ್ಞಾನ ಹೆಚ್ಚಿದಷ್ಟು ಮಡಿ ಹೆಚ್ಚೆಂಬುದು ನಿಜವಲ್ಲವಾದರೂ ಅತಿ ಮಡಿಯವರು ಮಾತ್ರ ತಾವು ಅತಿಶಾಸ್ತ್ರಜ್ಞರೆಂದು ತಿಳಿದು ಕೊಂಡಿದ್ದಾರೆ - ಶಾಸ್ತ್ರವನ್ನು ಅರಿಯದವರಿಗೆ "ಮಡಿ" ಬರಿ ವೇಷ ಮಾತ್ರ. ಕೆಲವರ ಶಾಸ್ತ್ರವೆಲ್ಲವೂ ಬರಿಯ ಮಡಿಯಲ್ಲಿಯೇ ಅಡಕವಾಗಿದೆ. ಅವರು ತಾವು ಇತರರನ್ನು ಅಸ್ಪೃಶ್ಯರನ್ನಾಗಿ ತಿಳಿಯುವುದಂತೂ ಸರಿಯೆ; ತಾವೂ ಅಸ್ಪೃಶ್ಯರಾಗಿ ಇತರರಿಂದ ದೂರವಾಗಿ ಕುಳಿತುಕೊಳ್ಳುತ್ತಾರೆ. "ನಿಜವಾದ" ಅಸ್ಪೃಶ್ಯರಿಗೂ ಅವರಿಗೂ ಏನೂ ವ್ಯತ್ಯಾಸವಿಲ್ಲ. ಅಸ್ಪೃಶ್ಯರನ್ನು ಯಾರು ಹತ್ತಿರಕ್ಕೆ ಸೇರಿಸುವುದಿಲ್ಲ. ಇಬ್ಬರೂ ಅಸ್ಪೃಶ್ಯರೇ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೨೭೯) ಎಂದು ಗೊರೂರರವರು 'ಕಮ್ಮಾರ ವೀರಭದ್ರಾಚಾರಿ' ಕೃತಿಯ 'ಮಡಿ' ಕತೆಯಲ್ಲಿ ಟೀಕಿಸಿದ್ದಾರೆ. ಇದೇ ಕತೆಯಲ್ಲಿ ಮಡಿಯ ಬಗ್ಗೆ ಹೇಳುವಾಗ ಲೇಖಕರು ಆಡುವ ಮಾತು "ನಮ್ಮಲ್ಲಿ ಒಬ್ಬೊಬ್ಬರು ಒಂದೊಂದು ಕಸಬನ್ನು ಆರಿಸಿಕೊಳ್ಳುವಂತೆ ಕೆಲವರು ಮಡಿಯನ್ನೇ ಕಸಬಾಗಿ ಆರಿಸಿಕೊಂಡಿದ್ದಾರೆ" (ಅದೇ) ಎಂದು ಹೇಳಿ ಅತಿರೇಕದ ಮಡಿಯನ್ನು ಖಂಡಿಸಿದ್ದಾರೆ. ಇದೇ ಕೃತಿಯಲ್ಲಿ ಗೊರೂರರವರು ಗಾಂಧಿಯವರ ಪರಿಕಲ್ಪನೆಯಲ್ಲಿ ಮಡಿ ಎಂದರೇನು? ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಶಾಸ್ತ್ರದ ಮಡಿಗಿಂತ ಈ ವೈಚಾರಿಕ ಮಡಿ ಅರ್ಥಪೂರ್ಣ ಸಮಂಜಸ ಎನಿಸುತ್ತದೆ. ಇದರ ಪ್ರಕಾರ ಮಡಿ ಎಂದರೆ "ಪರಿಶುದ್ಧತೆ ಎಂಬ ಅರ್ಥದಲ್ಲಿ ಮಡಿ ಒಳ್ಳೆಯ ಸಾತ್ವಿಕ ಗುಣ.

ಮಹಾಭಾರತದಲ್ಲಿ ಸ್ಥಿತಪ್ರಜ್ಞನ ಲಕ್ಷಣಗಳನ್ನು ಹೇಳುವಾಗ, ಶೌಚ ಎಂದರೆ ಪಾರಿಶುದ್ಧತೆಯು ಅಹಿಂಸಾ ಸತ್ಯ ಆಸ್ತೇಯ ಇಂದ್ರಿಯ ನಿಗ್ರಹಗಳ ಸಮಾನವಾದ ಧರ್ಮವೆಂದು ಹೇಳಿದೆ. ಮಹಾತ್ಮ ಗಾಂಧಿಯವರು ಪಾರಿಶುದ್ಧತೆಗೆ ಬಹಳ ಪ್ರಮುಖ ಸ್ಥಾನವನ್ನು ಕೊಟ್ಟಿದ್ದರು. ಅದರ ಬಟ್ಟೆಗಳು ವಾಸಸ್ಥಳವೂ ವಾತಾವರಣವೂ ಯಾವಾಗಲೂ ಶುದ್ಧವಾಗಿರುತ್ತಿದ್ದವು. "ನಾನು ಒಳಗೂ ಹೊರಗೂ ಶುದ್ಧ ಮಾಡುವ ಭಂಗಿ" ಎಂದು ಅವರು ಪದೇ ಪದೇ ಹೇಳುತ್ತಿದ್ದರು. "ಒಂದು ಚೂರು ಕೊಳಕು ಇದ್ದರೂ ನಾನು ಸಹಿಸುವುದಿಲ್ಲ. ನಿಮ್ಮ ಪಾಯಿಖಾನೆ ಮನೆಗಳು ನಿಮ್ಮ ಅಡಿಗೆ ಮನೆಗಳಷ್ಟೇ ಸ್ವಚ್ಛವಾಗಿರಬೇಕು" ಎಂದು ಅವರು ಒತ್ತಿ ಒತ್ತಿ ಹೇಳುತ್ತಿದ್ದರು. ಈ ಸ್ವಚ್ಛತೆ, ಶೌಚ ನಮ್ಮಲ್ಲಿ ಸಾತ್ವಿಕರಾದವರಿಗೆ ಆರ್ಷೇಯ ವಾಗಿ ಬಂದದ್ದು" (ಅದೇ; ಪು.೨೮೨-೨೮೩) ಎಂದು ಗಾಂಧಿ ನುಡಿದ ಇಂತಹ ಶುದ್ಧ ಮಡಿಯ

ಅನುಕರಣೆಯಿಂದ ನಮ್ಮಲ್ಲಿ ಯಾವುದೇ ರೀತಿಯ ಮಾನಸಿಕ ವೇದನೆಯು ಉಂಟಾಗುವುದಿಲ್ಲ. ಇಷ್ಟೇ ಅಲ್ಲದೆ ನಮ್ಮಲ್ಲಿ ಸ್ವಾತ್ಥ್ಯ ಜೀವನ ತಾನಾಗಿ ಮೂಡುತ್ತದೆ ಎಂದು ಗೊರೂರವರು ಗಾಂಧಿಯವರ ಅಭಿಪ್ರಾಯವನ್ನು ಎತ್ತಿ ಹಿಡಿದಿದ್ದಾರೆ. ಅಂತಃಕರಣ ಶುದ್ಧಿಯೇ ನಿಜವಾದ ಮಡಿಎಂಬುದನ್ನು ನಮ್ಮ ಶರಣರು, ಹರಿದಾಸರು ಕರೆ ಕೊಟ್ಟಿರುವುದನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಗಾಂಧೀಜಿಯವರು ಸಮಾನತೆಯ ದೃಷ್ಟಿಯಲ್ಲಿ ಮೇಲ್ವರ್ಗದವರ ಪ್ರತಿಷ್ಠೆಯ ಸಂಕೇತವಾಗಿದ್ದ ಜನಿವಾರವನ್ನು ತೆಗೆದು ಹಾಕಿದ್ದು ಸಹ ಸಾಮಾಜಿಕ ಸಾಮರಸ್ಯಕ್ಕೆ ಮೂಲ ಕಾರಣವಾಯಿತು.

'ಗರುಡಗಂಬದದಾಸಯ್ಯ' ಕೃತಿಯಲ್ಲಿ ಉತ್ತಮ ಜಾತಿಯವರು ಮಡಿಯ ಕಟ್ಟನ್ನು ಹಾಕಿರುವುದು ಮತ್ತೊಂದು ಕಡೆ ಹಾಸ್ಯಾಸ್ಪದವಾಗಿದೆ. ಜಮೀನ್ದಾರರಿಗೆ ಕ್ಷೌರ ಮಾಡುವವನು ಪ್ರತ್ಯೇಕವಾಗಿ ಒಬ್ಬನಿರಬೇಕು ಹಾಗೂ ಮಿಕ್ಕಾ ಬ್ರಾಹ್ಮಣರಿಗೆ ಮತ್ತೊಬ್ಬನಿರಬೇಕು. ಅಂತೆಯೇ ಶೂದ್ರರಿಗೆ ಕ್ಷೌರ ಮಾಡಿ ಅವರ ಕೂದಲನ್ನು ಎತ್ತಿ ಹಾಕಿದ ನಂಜನನ್ನು ಬ್ರಾಹ್ಮಣರು ಚಂಡಾಲ ಎಂದು ಕರೆದರು. ಈ ಕಾರಣದಿಂದ ಅವನಿಗೆ ಇನಾಮಾಗಿ ಕೊಟ್ಟಿದ್ದ ಜಮೀನನ್ನು ಜೋಡಿದಾರರು ಕಿತ್ತುಕೊಳ್ಳುತ್ತಾರೆ. ಆಗ ಲೇಖಕರು ಬ್ರಾಹ್ಮಣರ ಈ ಹೀನ ವರ್ತನೆಯನ್ನು ಕಂಡು ಕ್ಷೌರಿಕ ನಂಜನ ಬಗ್ಗೆ ಅನುಕಂಪೆಯನ್ನು ವ್ಯಕ್ತಪಡಿಸುತ್ತಾರೆ. ಇದು ಒಂದು ರೀತಿಯಲ್ಲಿ ಮಡಿಯ ಕಾರಣದಿಂದ ಉತ್ತಮ ಜಾತಿಯವರು ಕೆಳಜಾತಿಯವರಿಗೆ ಕೊಡುವ ಶಿಕ್ಷೆಗೆ ಒಂದು ನಿದರ್ಶನವಾಗಿದೆ. ಉತ್ತಮ ಜಾತಿಯವರ ಶೋಷಣೆಗೆ ಇದು ಮತ್ತೊಂದು ರೀತಿಯ ಉದಾಹರಣೆ ಎನ್ನುತ್ತಾರೆ ಗೊರೂರವರು. ಮಡಿಯ ಕ್ರೂರ ಕಲ್ಪನೆಯ ಒಂದು ಪರಿಣಾಮವನ್ನು ಇದೇ ಕೃತಿಯಲ್ಲಿ ನೋಡಬಹುದು. ರುಕ್ಮಿಣಿ ವಿಧವೆಯಾಗಿದ್ದಾಳೆ. ಅವಳು ತನ್ನ ತಲೆಯನ್ನು ಸಂಪ್ರದಾಯದ ದೃಷ್ಟಿಯಲ್ಲಿ ಕ್ಷೌರಿಕನಿಗೆ ಕೊಡಲೇಬೇಕಾಗಿದೆ. ಆದರೆ ರುಕ್ಮಿಣಿಯ ವಾದ ತಾನು ಪತಿವ್ರತೆ ಆದಕಾರಣ ತನ್ನ ತಲೆಯನ್ನು ಮುಟ್ಟುವ ಅಧಿಕಾರ ಗಂಡನ ಹೊರತು ಮತ್ಯಾರಿಗೂ ಇಲ್ಲ ಎಂದು ವಾದ ಮಾಡಿ ಕ್ಷೌರಿಕನ ಕೈಯಲ್ಲಿ ತಲೆಮಾಡಿಸಿಕೊಳ್ಳಲು ಒಪ್ಪದೆ ತಾನು ಆತ್ಮಹತ್ಯೆನ್ನು ಮಾಡಿಕೊಳ್ಳುತ್ತಾಳೆ. ಸಂಪ್ರದಾಯ, ಮಡಿ, ಮೂಢನಂಬಿಕೆಗಳ - ಈ ಮೂರರ ದುಷ್ಪರಿಣಾಮವನ್ನು ಗೊರೂರವರು ಈ ಘಟನೆಯ ಮೂಲಕ ನಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಧರ್ಮಾಧಿಕಾರಿಗಳು ವಿಧವೆಯ ಕೇಶ ಮುಂಡನದ ಬಗ್ಗೆ ಹೇಳುವ ಮಾತು "ಪತಿವ್ರತೆಯಾದ ಸ್ತ್ರೀಯನ್ನು ಮುಟ್ಟುವ ಮೊದಲ ಅಧಿಕಾರ ಗಂಡನಿಗೆ - ಎರಡನೆಯ ಅಧಿಕಾರ ಕ್ಷೌರಿಕನಿಗೆ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೩೩) ಎಂದು ಕುರುಡು ಶಾಸ್ತ್ರ ಮಾಡಿದ್ದರು. ಇದನ್ನು ಪ್ರತಿಭಟಿಸಿ ರುಕ್ಮಿಣಿ ಸಾವಿಗೆ ಶರಣಾಗಿರುವುದು ಒಂದು ದುರಂತ ವಿಪರ್ಯಾಸ ಎಂದು ಲೇಖಕರು ಸೂಚಿಸಿದ್ದಾರೆ. ಇಂತಹ ವಿಪರ್ಯಾಸಗಳು ಗ್ರಾಮೀಣ ಬದುಕಿನಲ್ಲಿ ಹಲವು ವರ್ಗದಲ್ಲಿ, ಹಲವು ಹಂತಗಳಲ್ಲಿ ಕಂಡು ಬರುವುದು ಸ್ವಾಭಾವಿಕ ಎನಿಸುತ್ತದೆ.

ಬಳಕೆಯ ವಸ್ತುಗಳಿಗೂ ಜಾತಿಯ ಪಟ್ಟಿಯನ್ನು ಕಟ್ಟುವ ಮೂಢನಂಬಿಕೆ ಗ್ರಾಮೀಣ ಜನರಲ್ಲಿ ಇತ್ತು. ಇದಕ್ಕೆ ನಿದರ್ಶನ 'ಹಳ್ಳಿಯ ಚಿತ್ರಗಳು' ಕೃತಿಯಲ್ಲಿ ಕಂಡುಬರುತ್ತದೆ. ಕಿಟ್ಟು ಹಾಸನದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ರೂಮ್ ಮಾಡಿಕೊಂಡಿದ್ದನು. ಬೇಸಿಗೆಯ ದಿನಗಳಲ್ಲಿ ನೀರನ್ನು ಇಟ್ಟುಕೊಳ್ಳಲು ಆತ ಮಣ್ಣಿನ ಹೂಜಿಯನ್ನು ತಂದು ಇಟ್ಟುಕೊಂಡಿದ್ದನು. ಒಮ್ಮೆ ಅವನ ತಂದೆ ಹಾಸನಕ್ಕೆ ಬಂದು ಮಗನ ಕೋಣೆಯಲ್ಲಿ ಹೂಜಿಯನ್ನು ಗಮನಿಸಿದಾಗ ಆಡುವ ಮಾತು "ಇದೇನು ಸಾಬರಂತೆ ನೀವೂ ಹೂಜಿಯಿಂದ ನೀರು ಕುಡಿತೀರಾ? ವೈದಿಕನ ಹೊಟ್ಟೇಲಿ ಹುಟ್ಟಿದ್ದಕ್ಕೆ ಸಾರ್ಥಕವಾಯಿತು. ಈ ಹೂಜಿಯನ್ನು ಬಿಸಾಡು. ಊರಿಂದ ಇನ್ನೊಂದು ಸಾರಿ ಬರುವಾಗ ಒಂದು ತಾಮ್ರದ ತಂಬಿಗೆ ತಂದ್ಕೊಡ್ತೀನಿ. ಹೂಜೀನ ಈಗಲೇ ಬೀದಿಗೆ ಎಸೆ" ಎಂದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೮೬-೮೭) ಎಲ್ಲರ ಬಳಕೆಗೆ ಇರುವ ಹೂಜಿಗೆ ಮುಸ್ಲಿಂ ಧರ್ಮ ಪಟ್ಟಿ ಕಟ್ಟಿರುವುದು ಇಲ್ಲಿ ಹಾಸ್ಯಾಸ್ಪದ ಸಂಗತಿ. ಜನರ ಮೌಢ್ಯಕ್ಕೆ ಗೊರೂರರವರು ಅನುಕಂಪಿಸುವುದರ ಬದಲು ಗೇಲಿ ಮಾಡುವ ಮನೋಧರ್ಮವನ್ನು ಇಲ್ಲಿ ಗುರುತಿಸಬಹುದು.

ಮಾನವ ಸಮಾಜದಲ್ಲಿ ಹಬ್ಬಗಳ ಆಚರಣೆಗೆ ವಿಶೇಷ ಹಿನ್ನೆಲೆಯನ್ನು ಅರ್ಥ ಗೌರವಗಳನ್ನು ಕಾರಣಗಳನ್ನು ಕಾಣಬಹುದು. ಹಬ್ಬಗಳಿಗೆ ಧಾರ್ಮಿಕ ಹಿನ್ನೆಲೆ, ಸಾಂಸ್ಕೃತಿಕ ಹಿನ್ನೆಲೆ, ಪ್ರಾಂತೀಯ ಹಿನ್ನೆಲೆ ಇರುವುದುಂಟು. ಕೆಲವು ಹಬ್ಬಗಳಿಗೆ ಪುರಾಣದ ಐತಿಹ್ಯಗಳು ಕಾರಣವಾಗಿರುವುದುಂಟು. ರಾಷ್ಟ್ರೀಯ ಹಬ್ಬಗಳ ಆಚರಣೆ ವಿಶಿಷ್ಟವಾದದ್ದು. ಇದಕ್ಕೆ ಹೊರತಾಗಿ ಗ್ರಾಮೀಣ ಸಮಾಜದಲ್ಲಿ ಆಚರಿಸುವ ಹಬ್ಬಗಳನ್ನು, ಜಾತ್ರೆಗಳನ್ನು ಗೊರೂರರವರು ಸವಿಸ್ತಾರವಾಗಿ ತಮ್ಮ ಕೃತಿಗಳಲ್ಲಿ ವಿಚಾರ ಮಾಡಿದ್ದಾರೆ. ಹಬ್ಬ-ಹರಿದಿನಗಳು ಬಹುಮಟ್ಟಿಗೆ ಜನರ ಧಾರ್ಮಿಕ ಶ್ರದ್ಧೆಗೆ ಸಾಕ್ಷಿಯಾಗಿರುತ್ತದೆ. ಜಾತಿ ವರ್ಗಗಳ ಆಚರಣೆಗೆ ಅನುಗುಣವಾಗಿ ಹಬ್ಬಗಳಲ್ಲಿಯೂ ಬೇರೆ ಬೇರೆ ರೀತಿಯ ಹಬ್ಬಗಳನ್ನು ಗ್ರಾಮೀಣ ಸಮಾಜ ದಲ್ಲಿ ಗುರುತಿಸಬಹುದು. ಹಬ್ಬಗಳ ಆಚರಣೆಗಳು ಒಂದು ಜನಾಂಗದ ಸಂಸ್ಕೃತಿಯ ಲಕ್ಷಣ ಎಂದು ವಿದ್ವಾಂಸರು ಹೇಳಿರುವುದುಂಟು. ಬಂಧುಬಳಗದವರ ಸಾಮೂಹಿಕ ಚಟುವಟಿಕೆಗೆ ಈ ಹಬ್ಬಗಳು ಕಾರಣವಾಗುತ್ತವೆ. ಮನೆ ಮನಗಳನ್ನು ಅರಳಿಸುವ ದುಃಖ ನಿವಾರಿಸುವ ಶಕ್ತಿ ಹಬ್ಬಗಳಿಗೆ ಇದೆ. ನೈತಿಕ ಮೌಲ್ಯ ಧರ್ಮ ಶ್ರದ್ಧೆ ಕುಸಿದು ಹೋಗುತ್ತಿರುವಾಗ ಹಬ್ಬಗಳ ಆಚರಣೆಗೆ ವಿಶೇಷವಾದ ಮೌಲ್ಯ ಅರ್ಥ ಇರುತ್ತದೆ. ಇದಕ್ಕೆ ಅನುಗುಣವಾಗಿ ಜನರಲ್ಲಿ ಶ್ರದ್ಧೋತ್ಸಾಹವನ್ನು ಕಾಣಬಹುದು. ಗ್ರಾಮೀಣ ಜನರಲ್ಲಿ ನಾವು ಹಬ್ಬಗಳ ಆಚರಣೆಯಲ್ಲಿ ಶ್ರದ್ಧೆ ಉತ್ಸಾಹವನ್ನು ನೈಜ ರೀತಿಯಲ್ಲಿ ಹೆಚ್ಚಾಗಿ ಕಾಣಬಹುದು ಎಂಬುದು ಗೊರೂರರವರ ಅಭಿಪ್ರಾಯವಾಗಿದೆ. ಅನೇಕ ಹಬ್ಬಗಳು ಜನರ ಸಾಮರಸ್ಯದ ಭಾವನೆಗೆ ಇಂಬಾಗಿರುತ್ತದೆ ಮತ್ತು ಧಾರ್ಮಿಕ ಶ್ರದ್ಧೆಗೆ ಪೂರಕವಾಗಿ ಇರುತ್ತದೆ. ಜೀವನದ ಜಂಜಾಟವನ್ನು ಸಾಂಸಾರಿಕ ಸಮಸ್ಯೆಗಳನ್ನು ಗೆಲ್ಲಲು ಹಬ್ಬಗಳು ಒಂದೇ ಮಾಧ್ಯಮ ಎಂಬುದು ಗ್ರಾಮೀಣ ಜನರ ಅಭಿಪ್ರಾಯ. ಈ ಅಭಿಪ್ರಾಯವನ್ನು ಗೊರೂರರವರು ತಮ್ಮ ಕೃತಿಗಳಲ್ಲಿ ಪುಷ್ಟೀಕರಿಸಿದ್ದಾರೆ. ಹಬ್ಬಗಳ

ಆಚರಣೆ ಸಾಂಸ್ಕೃತಿಕ ಜೀವನಕ್ಕೆ ಒಂದು ರೀತಿಯಲ್ಲಿ ಕಾರಣವಾದಂತೆ ಕಲಾರಸಿಕರಿಗೂ ಕಾರಣವಾಗಬಲ್ಲದು ಎಂಬುದನ್ನು ಲೇಖಕರು ಖಚಿತಪಡಿಸಿದ್ದಾರೆ.

ವೃತ್ತಿ ಜೀವನಕ್ಕೆ ಸಂಬಂಧಪಟ್ಟಂತೆ ಕೃಷಿಕರು ಆಚರಿಸುವ ಅನೇಕ ಹಬ್ಬಗಳು ಅರ್ಥಪೂರ್ಣವಾಗಿವೆ. ಹಬ್ಬಗಳ ಆಚರಣೆಯಲ್ಲಿಯೂ ಒಂದು ರೀತಿಯ ಸಾಂಪ್ರದಾಯಿಕ ಅನುಸರಣೆಯನ್ನು ಊಟ, ಉಡುಗೆ, ತೊಡುಗೆ, ಉಪಚಾರಗಳಲ್ಲಿ ಗ್ರಾಮೀಣ ಪರಿಸರದಲ್ಲಿ ನೋಡಬಹುದು. ಪಟ್ಟಣದ ನಾಗರಿಕತೆಯ ಗಾಳಿ ಬೀಸಿದಂತೆಲ್ಲಾ ಗ್ರಾಮೀಣ ಜನರ ಹಬ್ಬಗಳ ಸವಿ ನೈಜ ಸೊಗಡಿನ ಸಂಭ್ರಮ ಕೆಲವೊಮ್ಮೆ ಬದಲಾಗಿರುವುದನ್ನು, ಕೆಲವೊಮ್ಮೆ ಕ್ಷೀಣಿಸುತ್ತಿರುವುದನ್ನು ಅಪರೂಪಕ್ಕೆ ಕಣ್ಮರೆ ಯಾಗಿರುವುದನ್ನು ಗುರುತಿಸಬಹುದು. ನಗರ ಜೀವಿಗಳಿಗೆ ಯಾಂತ್ರಿಕ ಬದುಕಿನಲ್ಲಿ ಹಬ್ಬಗಳನ್ನು ಆಚರಿಸಲು ಸಮಯವೂ ಇಲ್ಲ, ಉತ್ಸಾಹವೂ ಇಲ್ಲ ಹಾಗೂ ನೈತಿಕ ನಂಬಿಕೆಯೂ ಇಲ್ಲ. ಇದು ವಿಷಾದದ ಸಂಗತಿಯಾದರೂ ವಿಶೇಷ ಸತ್ಯ ಸಂಗತಿಯೂ ಆಗಿದೆ. ನಗರಕ್ಕೆ ವಲಸೆ ಬಂದ ಗ್ರಾಮೀಣ ಜನ ನಗರ ಜೀವನಕ್ಕೆ ಮಾರುಹೋಗಿ ಅಲ್ಲಿಯ ಬದುಕಿನ ಅನುಸರಣೆಯಲ್ಲಿ ಮಗ್ನರಾದರೆ ಹೊರತು ತಮ್ಮ ಗ್ರಾಮೀಣ ಸೊಗಡಿನಿಂದ ತಾವು ದೂರವಾಗುತ್ತಿದ್ದೇವೆ ಎಂಬ ಸಂಕಟ ಚಿಂತೆ ಇಂಥ ವಲಸೆಗಾರರಲ್ಲಿ ಕಣ ಮಾತ್ರವೂ ಇಲ್ಲದಿರುವುದು ಸಖೇದ ಆಶ್ಚರ್ಯ. ಇದು ಒಂದು ರೀತಿಯಲ್ಲಿ ದೇಶಿ ಸಂಸ್ಕೃತಿಯ ಅವನತಿಗೆ ಕಾರಣವಾಗಿದೆ. ಜಾಗತೀಕರಣ ಯುಗದಲ್ಲಿ ಇಂತಹ ಸ್ಥಿತ್ಯಂತರ ಅನಿವಾರ್ಯ ಎಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಹಬ್ಬಗಳ ಬಗ್ಗೆ ಗೊರೂರರವರು 'ಹಳೆಯಪಳೆಯ ಮುಖಗಳು' ಕೃತಿಯಲ್ಲಿ ಆಡಿರುವ ಮಾತುಗಳು ಗಮನಾರ್ಹವಾದುದು. ಅದೇನೆಂದರೆ "ಹಬ್ಬಗಳನ್ನು ಆಚರಿಸುವುದರಿಂದ ನಮ್ಮ ಮನಸ್ಸಿನ ಮಾಲಿನ್ಯಗಳು ತೊಳೆದು ಹೋಗಿ, ವಸಂತದಲ್ಲಿ ಗಿಡಕ್ಕೆ ಹೊಸ ಚಿಗುರು ಒಡೆಯುವಂತೆ ನಮ್ಮಲ್ಲಿಯೂ ಉತ್ಸಾಹದ ಚಿಗುರು ಒಡೆಯುತ್ತದೆ. ಹಬ್ಬವನ್ನು ನಾವು ಒಂದು ದೇವ ಕರ್ಮದಂತೆ ಭಾವಿಸಬೇಕು. ಇದರಿಂದ ದೇವತೆಗಳು ತೃಪ್ತರಾಗುತ್ತಾನೆ. ಇಹ ಜೀವನದಲ್ಲಿ ನಮಗೆ ಹೊಸ ಮೌಲ್ಯಗಳು ಕಂಡು ನಮಗೆ ಬಾಳಿನಲ್ಲಿ ಹೊಸ ಅರ್ಥವೂ ಹೊಸ ಸಂದೇಶವೂ ಹೊಳೆದು ಪರದ ಗತಿಯೂ ನಮಗೆ ದೊರೆಯುವುದೆಂಬ ತೃಪ್ತಿ ನಮ್ಮಲ್ಲಿ ಉಂಟಾಗುವುದು. ಹಬ್ಬಗಳು ಭಾರತ ಸಂಸ್ಕೃತಿಯ ಮುಖ್ಯ ಭಾಗ. ಇವುಗಳ ಆಚರಣೆಯಿಂದ ನಮ್ಮ ಬಾಳು ತೇಜಃಪೂರ್ಣವೂ ಸಚೇತಕವೂ ಅಧ್ಯಾತ್ಮ ಮೌಲ್ಯವುಳ್ಳದ್ದೂ ಆಗುತ್ತದೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೪೫-೧೪೬) ಈ ಅಭಿಪ್ರಾಯಕ್ಕೆ ಅನುಗುಣವಾಗಿ ಗೊರೂರರವರು ಅನೇಕ ಹಬ್ಬಗಳನ್ನು ತಮ್ಮ ಕೃತಿಗಳಲ್ಲಿ ವಿವೇಚಿಸಿದ್ದಾರೆ-ವಿಶ್ಲೇಷಿಸಿದ್ದಾರೆ.

ಹಬ್ಬಗಳನ್ನು ಕುರಿತು ಇದೇ ಕೃತಿಯಲ್ಲಿ ಗುರು-ಶಿಷ್ಯರ ಸಂಭಾಷಣೆ ಮುಂದುವರೆಸಿದಾಗ ಶಿಷ್ಯ ಕೇಳುವ ಪ್ರಶ್ನೆ "ನೋಡಿ ಮೇಷ್ಟರೆ, ಇಷ್ಟೆಲ್ಲಾ ಆದರೂ ನಾವು ಈ ಹಬ್ಬಗಳನ್ನು ಹಿಂದಲ ಕಾಲದಂತೆ

ಹೆಚ್ಚು ಉತ್ಸಾಹದಿಂದ ಆಚರಿಸುತ್ತಿರುವಂತೆ ತೋರುತ್ತಿಲ್ಲ". (ಅದೇ; ಪು.೧೫೧) ಈ ಪ್ರಶ್ನೆಗೆ ಗೊರೂರರವರು ಉಪಾಧ್ಯಾಯರ ಮೂಲಕ ಕೊಡುವ ಉತ್ತರ "ನಮ್ಮ ಆಧುನಿಕ ನಾಗರಿಕತೆಯಿಂದ ನಮಗೆ ಭಾರತೀಯವಾದ ಹಬ್ಬ ಹರಿದಿನಗಳಲ್ಲಿ ನಂಬಿಕೆಯೂ ಶ್ರದ್ಧೆಯೂ ಕಡಿಮೆಯಾಗುತ್ತಿದೆ. ಹಿಂದಲ ಕಾಲದಲ್ಲಿ ಹಳ್ಳಿಗಳಲ್ಲಿ ಯುಗಾದಿ ಹಬ್ಬ ಎಂದರೆ ಏನು ಸಂಭ್ರಮ. ಆಟಪಾಟ, ವಿಲಾಸ ವಿನೋದ. ಊರವರೆಲ್ಲ ಒಟ್ಟಾಗಿ ಎಲ್ಲ ವಿನೋದಗಳಲ್ಲಿ ಭಾಗವಹಿಸುತ್ತಿದ್ದರು. ಯುಗಾದಿಯಲ್ಲಿ ಹಳ್ಳಿಯ ವಯಸ್ಸಾದವರೂ ಸಹ ಯುವಕರೊಂದಿಗೆ ಚೆಂಡಾಟ ಆಡುತ್ತಿದ್ದರು. ಯಾವನ ಹೆಸರ ಬಲಕ್ಕೆ ಸಂವತ್ಸರ ಹೊಂದುವುದೋ ಅಂಥವನ ಹೊಲದಲ್ಲಿ ಊರಿನ ರೈತರೆಲ್ಲಾ ಹೋಗಿ ಆರು ಕಟ್ಟಿ ಪರಿಸ್ಪರ ಸೌಹಾರ್ದ ಮನೋಭಾವವನ್ನು ತೋರಿಸುತ್ತಿದ್ದರು. ನಮ್ಮ ಹಬ್ಬ-ಹರಿದಿನಗಳು ಆತ್ಮೋನ್ನತಿಯ ಮತ್ತು ದೇಶದ ಐಕ್ಯತೆಯ ಸಾಧನವಾದುದರಿಂದ ಇವುಗಳ ಆಚರಣೆಗಾಗಿ ಸರ್ಕಾರದವರೂ ನಾಯಕರೂ ಪ್ರೋತ್ಸಾಹ ಕೊಡಬೇಕು" (ಅದೇ; ಪು.೧೫೧-೧೫೨) ಎಂದು ಗೊರೂರರವರು ಇಲ್ಲಿ ಕೊಡುವ ಉತ್ತರ ಇಂದಿಗೆ ಯಥಾರ್ಥವಾಗಿದೆ.

ಮಾರಿಹಬ್ಬ ಗ್ರಾಮಗಳಲ್ಲಿ ಗ್ರಾಮದೇವತೆಯ ಹಬ್ಬ. 'ವೈಯಾರಿ' ಕೃತಿಯ 'ಬೂತಯ್ಯನ ಮಗ ಅಯ್ಯು' ಕತೆಯಲ್ಲಿ ಮಾರಿಹಬ್ಬದ ವಿವರಣೆ ಇದೆ. ಗ್ರಾಮದೇವತೆಗೆ ಈ ಹಬ್ಬ ಮಾಡದಿದ್ದರೆ ಊರಿಗೆ ಕ್ಷೇಮವಿಲ್ಲ ಎಂಬ ನಂಬಿಕೆ ಜನರಲ್ಲಿ ಇದೆ. ಈ ಹಬ್ಬದ ಮುಖ್ಯವಾದ ಆಚರಣೆ ಎಂದರೆ ಮಾರಿಗೆ ಕೋಣನನ್ನು ಬಲಿ ಕೊಡುವುದು. ಈ ಬಲಿ ಪದ್ಧತಿ ನಮ್ಮಲ್ಲಿ ಪ್ರಾಚೀನ ಕಾಲದಿಂದ ರೂಢಿಯಲ್ಲಿದೆ. ಇಂದು ಕೋಣ ಕಡಿಯುವುದು ತಪ್ಪಿದ್ದರು ಕುರಿ ಕೋಳಿಯನ್ನು ಬಲಿಕೊಡುವುದು ಸಾಂಕೇತಿಕವಾಗಿ ಉಳಿದುಕೊಂಡು ಬಂದಿದೆ. ಅಯ್ಯುವಿನ ಗ್ರಾಮದಲ್ಲಿ ಮಾರಿಹಬ್ಬದ ಆಚರಣೆ ಸಾಂಪ್ರದಾಯಿಕವಾದುದ್ದು. ಯಾವ ಕಾರಣಕ್ಕೂ ಈ ಹಬ್ಬವನ್ನು ಬಿಡುವಂತಿಲ್ಲ. ಅಯ್ಯುವಿನ ಮನೆಯ ಆಳು ಗುಳ್ಳ ಈ ಹಬ್ಬದ ಬಗ್ಗೆ ಆಡುವ ಮಾತು "ಜಾತ್ರೆ ಬಿಟ್ರೆ ಊರು ಪ್ರಬಲ ಆಗೋಲ್ಲ. ಅಯ್ಯನ ಮಾಟವೂ ಅದೇಯ. ನಮ್ಮ ಅಪ್ಪ ಅಜ್ಜನ ಕಾಲದಿಂದ ನಡಕೊಂಡು ಬಂದಿರೋ ದೇವರು ದಿಂಡರು ಇವತ್ತು ನಮಗೆ ಆಗ ದೋರಾದ್ರ? 'ಜಾತ್ರೆ ಬಿಡಲಿ. ಒಕ್ಕಡಿಂದ ಪ್ಲೇಗೋ ಕಾಲರಾನೋ ದೊಡ್ಡ ರೋಗಾನೋ ಹೊಡೆದು ಈ ಮುಂಡೆ ಮಕ್ಳನ್ನೆಲ್ಲಾ ಸವರಿಕೊಂಡು ಹೋಗ್ಲಿ - ಆಮೇಲೆ ರಾಜ್ಯ ಎಲ್ಲಾ ನಂದೇ' ಅಂತ ಆಯ್ಯ ಹೇಳ್ತಾನೆ. ನೀವು ಮೂಢ ಮುಂಡೇವು - ತಲೆ ಕಡೀತಿನಿ ಅಂದ್ರೆ ಹಂಗಿ ಮಾಡು ನಮ್ಮಪ್ಪ ಅಂತೀರಿ" ಎಂದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೩೧) ಗುಳ್ಳನ ಮಾತು ಜನಕ್ಕೆ ಚೆನ್ನಾಗಿ ಹಿಡಿಯಿತು. ಮಾರಿ ಜಾತ್ರೆ ಮಾಡದಿದ್ದರೆ ಊರು ಸರ್ವನಾಶವಾಗುತ್ತದೆ ಎಂಬುದು ಇಲ್ಲಿ ಸ್ಪಷ್ಟವಾಗಿದೆ.

ಇದಕ್ಕಾಗಿಯೇ ಮಾರಿಯ ಜಾತ್ರೆಯ ಆಚರಣೆಯ ಬಗ್ಗೆ ಗ್ರಾಮೀಣ ಜನ ಹೆಚ್ಚು ಕಾಳಜಿಯನ್ನು ವಹಿಸುತ್ತಿದ್ದರು. "ಅಯ್ಯುವಿಗೆ ಮೊದಲಿನಿಂದಲೂ ಮಾರಿ ಜಾತ್ರೆ ಎಂದರೆ ಮೈಜುಂ ಎನ್ನುತ್ತಿದ್ದಿತು.

ಅವನ ಬಾಲ್ಯದಲ್ಲಿ ಒಂದು ಸಲ ಕೋಣನನ್ನು ಜಾತ್ರೆಯಲ್ಲಿ ಕಡಿಯುತ್ತಿದ್ದಾಗ ಅವನು ನೋಡುವುದಕ್ಕೆ ಹೋಗಿದ್ದನು. ಸ್ವಲ್ಪ ಮುಂಚೆ ಕೋಣನನ್ನು ಕಡಿಯುವವನು ಬೂತಯ್ಯನ ಹತ್ತಿರ "ಎಂಥಾ ಕೋಣಾನೂ ಒಂದು ಏಟಿಗೆ ಕಡಿಯುವುದಕ್ಕೆ ಆಗುವುದಿಲ್ಲ. ಕತ್ತಿನ ಮೂಳೆ ಮೇಲೆ ಏಟು ಕೊಟ್ಟರೆ ಕತ್ತಿಯೇ ಮೇಲಕ್ಕೆ ಹಾರುತ್ತೆ. ಸರಿಯಾದ ಜಾಗ ನೋಡಿ ಗರಗಸದಲ್ಲಿ ಕುಯ್ಯೋ ಹಾಗೆ ಕತ್ತೀನ ಜಾರಿಸಬೇಕು. ನಾನು ಆಗಲೇ ನೂರು ಕೋಣ ಕಡಿದಿದ್ದೇನೆ. ಇನ್ನೂ ಪಟ್ಟು ಸಿಕ್ಕಿಲ್ಲ" ಎಂದಿದ್ದನು. ಅಯ್ಯುವು ಕೋಣನನ್ನು ಕಡಿಯುವ ಕಂಬದಿಂದ ತುಂಬ ದೂರ ನಿಂತಿದ್ದರೂ ಮೊದಲನೆಯ ಕತ್ತಿಯ ಏಟು ಕೋಣನ ಕತ್ತಿನ ಮೇಲೆ ಬಿದ್ದ ಕೂಡಲೇ ಅದರಿಂದ ರಕ್ತವು ಚಿಲ್ಲೆಂದು ಚಿಲುಮೆಯಂತೆ ಹಾರಿ ಅಯ್ಯುವಿನ ಮೈಮೇಲೆ ಚೆಲ್ಲಿತು. ಜಾತ್ರೆಯಾಗಲಿ ಆಗದಿರಲಿ, ಅಯ್ಯುವಿಗೆ ಆ ಜ್ಞಾನಪಕ ಪದೇ ಪದೇ ಬರುತ್ತಿತ್ತು. ಕೋಣನ ತಲೆಯ ಮೇಲೆ ಹರಳೆಣ್ಣೆ ದೀಪವನ್ನಿಟ್ಟು ಮನೆ ಮನೆಯಲ್ಲಿ ಕೊಟ್ಟ ಎಣ್ಣೆಯನ್ನು ಅದಕ್ಕೆ ಸುರಿಯುತ್ತಾ ಭಯಂಕರವಾದ ಕೊಂಬು, ತಮಟೆಗಳೊಂದಿಗೆ ಅದರ ಮೆರವಣಿಗೆ ಮಾಡುವುದು; ಇಪ್ಪತ್ತು-ಮೂವತ್ತು ಗಡಿಗೆಗಳಲ್ಲಿ ಹೆಂಡವನ್ನು ತಂದು ಅವುಗಳನ್ನು ಮಾರಿಯಮ್ಮನ ಮುಂದೆ ಇಟ್ಟು ಸುತ್ತ ಕುಣಿಯುವುದು; ಮಾರಿಯಮ್ಮನಿಗೆ ಮೊದಲನೆಯ ಆಹುತಿಗೆ ಒಂದು ಕುರಿಯನ್ನು ಸೀ ಕೊಡುವುದು; ಅದರ ರಕ್ತದಲ್ಲಿ ಅನ್ನವನ್ನು ಕಲಿಸಿ ರುಚಿ ನೋಡಿ ಊರಿನ ನಾಲ್ಕು ದಿಕ್ಕುಗಳಲ್ಲೂ ಅದನ್ನು ಬಲಿ ಹಾಕುವುದು; ಆ ಭಯಂಕರ ತಮಟೆ; ಕುಡಿದವರ ಅಮಲಿನ ಕಿರಿಚಾಟ: - "ಈ ಮತ್ತು ಏರಿದವರು ಕೋಣಗಳನ್ನು ಕಡಿಯುವುದಿರಲಿ, ಮನುಷ್ಯರನ್ನು ಕಡಿಯುವುದೂ ಆಶ್ಚರ್ಯವಲ್ಲ" ಎಂದು ಅಯ್ಯುವಿಗೆ ತೋರಿತು. ಆ ವರ್ಷ ಅವನು ಬಹಳ ಉಪಾಯದಿಂದ "ಕೋಣಗಳನ್ನು ಕಡಿಯುವುದನ್ನು ಈ ವರ್ಷ ನಿಲ್ಲಿಸಿ" ಎಂದು ರೈತರನ್ನು ಕೇಳಿಕೊಂಡಿದ್ದನು. (ಅದೇ; ಪು.೩೦-೩೧.) ಗೊರೂರರವರು ಮಾರಿಹಬ್ಬದ ಭೀಕರತೆಯನ್ನು ಯಥಾವತ್ತಾಗಿ ವರ್ಣಿಸಿದ್ದಾರೆ. ಅಯ್ಯು ಕೋಣನ ಬಲಿಯನ್ನು ನಿಲ್ಲಿಸಿ ಎಂದು ಊರಿನ ಜನಕ್ಕೆ ಸೂಚಿಸುವುದು ಇಲ್ಲಿ ಗಮನಾರ್ಹ. ಇಂತಹ ಬದಲಾವಣೆ ಗ್ರಾಮೀಣ ಜನರಲ್ಲಿ ತಾನೇ ತಾನಾಗಿ ಸಹಜವಾಗಿ ಆಗುತ್ತಿರುವುದನ್ನು ಲೇಖಕರು ಗುರುತಿಸಿದ್ದಾರೆ. ಮಾರಿಹಬ್ಬ ಸುತ್ತಲ ಹಳ್ಳಿಯವರಿಗೆಲ್ಲಾ ದೊಡ್ಡ ಹಬ್ಬ. ಒಂದು ಹಳ್ಳಿಯವರು ಮತ್ತೊಂದು ಹಳ್ಳಿಯವರನ್ನು ಹಬ್ಬಕ್ಕೆ ಆಹ್ವಾನಿಸುವುದು ಒಂದು ವಾಡಿಕೆ.

ಮಲ್ಲಿಗೆಹಳ್ಳಿಯಲ್ಲಿ ಮಾರಮ್ಮನಿಗೆ ಮಾಡುವ ಬಂಡಿಹಬ್ಬ ವಿಶೇಷವಾದದ್ದು. 'ಮರೆಯಾದ ಮಾರಮ್ಮ' ಕಥಾಸಂಕಲನದಲ್ಲಿ ಅದೇ ಕತೆಯಲ್ಲಿ ಇದರ ವಿವರಣೆಯನ್ನು ಲೇಖಕರು ಕೊಟ್ಟಿದ್ದಾರೆ. "ನಾಲ್ಕು ಗಾಲಿಗಳ ಬಂಡೀ (ಇದು ಸಣ್ಣತೇರಿನಂತಾಗುತ್ತದೆ) ಹೂಡಿ ಅಲಂಕರಿಸಿ ಅದರ ಮೇಲೆ, ಉತ್ಸವಕ್ಕಾಗಿಯೇ ಮಾಡಿದ ಅಮ್ಮನ ವಿಗ್ರಹವನ್ನು ಕೂರಿಸಿ ಊರಿನ ಬೀದಿನಗಳಲ್ಲಿ ಪಂಟು ವಾದ್ಯ, ಸೋಮನ ಕುಣಿತ ಇವುಗಳೊಡನೆ ಮೆರವಣಿಗೆ ಮಾಡುತ್ತಾರೆ. ಉತ್ಸವವಾದ ಮೇಲೆ ಗಾಡಿಯನ್ನು ಬಿಚ್ಚಿಟ್ಟು ಮತ್ತೆ ಮುಂದಲ ವರುಷ ಉತ್ಸವದ ದಿನ ಗಾಡಿ ಹೂಡುತ್ತಾರೆ. ದೇವರನ್ನು ಬಂಡಿಯ ಮೇಲೆ ಕೂರಿಸುವುದರಿಂದ

ಇದಕ್ಕೆ ಬಂಡಿಹಬ್ಬವೆಂದು ಹೆಸರು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೩೬) ಬಂಡಿ ಇಲ್ಲದಿದ್ದಾಗ ಹೆಗಲಡ್ಡೆಯ ಮೇಲೆ ಉತ್ಸವವನ್ನು ಮಾಡುತ್ತಿದ್ದರು. ಬಂಡಿಹಬ್ಬವನ್ನು ಆ ವರ್ಷದ ನವರಾತ್ರಿಯ ದುರ್ಗಾಷ್ಟಮಿಯ ದಿನ ಮಾಡುವುದು ವಾಡಿಕೆಯಾಗಿತ್ತು. ಹಳ್ಳಿಯವರು ಬಂಡಿಹಬ್ಬಕ್ಕೆ ತಮ್ಮ ಸುತ್ತಲ ಹಳ್ಳಿಯ ಬಂಧುಗಳಿಗೆ ಆಹ್ವಾನ ಕೊಡುತ್ತಿದ್ದರು. ಹಳ್ಳಿಯವರೆಲ್ಲಾ ಮಾರಮ್ಮನನ್ನು ಸತ್ಯದೇವರು ಎಂದು ಭಾವಿಸಿದ್ದರು. ತಮ್ಮಯ್ಯ ಆ ತಾಯಿ ಸತ್ಯವನ್ನು ಕುರಿತು ಹೇಳುವ ಮಾತು "ಇಷ್ಟು ಸತ್ಯದ ದೇವ್ರು ಬೇರೆಲ್ಲೂ ಇಲ್ಲವಂದೇ ನನ್ನ ನಂಬ್ಕೆ. ಈ ಮಹಾತಾಯಿ, ನನ್ನ ಕಾಪಾಡಿದ್ಲು. ನನಗೆ ಎರಡು ತಿಂಗಳ ಕೆಳ್ಗೆ ದೊಡ್ಡಮ್ಮ (ಕಲ್ಲು ಸಿಡುಬು) ಕಾಣ್ಸಕೊಂಡಿದ್ದು ನಿಮ್ಗೂ ಗೊತ್ತಿರ್ಬೇಕು. ಮೈಯೆಲ್ಲ ಹರಳ್ಕಾಯಿ ಗಾತ್ರದ ಬೊಕ್ಕೆ ಗುಳಿ. ಕಣ್ಣುಗುಡ್ಡೆ ನಾಲ್ಗೆ ಮೊದಲ್ಗೊಂಡು, ಸೂಜಿಯಷ್ಟು ಜಾಗ ಬಿಡ್ದೆ ಕವಿದುಕೊಂಡವು. ಕೈಕಾಲುಗ್ಳೆಲ್ಲ ಪೂರ್ತ ಕಟ್ಟಿ ಹೋದ್ವು. ಒಂದ್ವಾರ ಕಣ್ಣೇ ಬಿಡ್ಲಿಲ್ಲ. ಗಂಜಿ ಕೂಡ ಹೊಟ್ಗೆ ಹೋಗ್ಲಿಲ್ಲ. ಡಾಕ್ಟ್ರಗೂ ನನ್ನ ಪ್ರಾಣದ ವಿಷಯದಲ್ಲಿ ಅನುಮಾನ ಬಂತು. ಅವರು "ನಿನ್ಗೆ ದೇವ್ರಲ್ಲಿ ನಂಬ್ಕೆ ಇದ್ಯೆ?" ಎಂದು ಕೇಳಿದ್ರು. ನಾನು ಇದೆ ಎಂದು ಸನ್ನೆ ಮಾಡಿದೆ. ಅವರು "ನಿನ್ನ ದೇವರ್ಗೆ ಏನಾದ್ರೂ ಹರಕೆ ಮಾಡ್ಕೊ" ಎಂದರು. ನನಗೆ ಕೂಡಲೇ ನಿಮ್ಮ ಮಠದ ಮಾರಮ್ಮನ ನೆನಪು ಬಂತು. ದೇಶದೋರೆಲ್ಲ ಕೊಂಡಾಡೊ ದೇವತೆ. ತಳದಲ್ಲಿ ಹುಟ್ಟಿದ್ದು, ಒಡೆದು ಮೂಡಿದ್ದು ಕಡದು ಮಾಡಿದ್ದಲ್ಲ. ನಾನು ಕೊಡ್ಲೆ ಈ ದೇವತೆಗೆ ಹರಕೆ ಮಾಡ್ಕೊಂಡೆ. 'ಶಿಡಬು ಗುಣವಾಗಿ ಕಣ್ಣು ಕೈಗಳೆಲ್ಲ ಸರಿಯಾದ್ರೆ ನಾನು ಬಂಡಿಹಬ್ಬದಲ್ಲಿ ಎರಡು ಸುತ್ತ ನಿನ್ನ ಉತ್ಸವದ ಮುಂದೆ ಚಾಮನ ಕುಣಿತ ಕುಣೀತಿನಿ, ತಪ್ಪೋಲ್ಲ. ನನ್ನ ಪ್ರಾಣದ ಮೇಲೆ ಆಣೆ ಇಟ್ಟು ಹೇಳ್ತೀನಿ" ಎಂದು ಪ್ರತಿಜ್ಞೆ ಮಾಡಿದೆ. ಮಹಾತಾಯಿ ನನ್ನ ಪ್ರಾರ್ಥನೆ ಲಾಲಿಸಿ ನನ್ನ ಜೀವ ಉಳಿಸಿದಳು. ಕಣ್ಣು ಉಳಿಸಿದಳು. (ಅದೇ; ಪು.೩೭-೩೮) ಇಲ್ಲಿ ಮಾರಮ್ಮನಿಗೆ ಊರಿನವರು ತಮ್ಮ ಕಷ್ಟ ನಿವಾರಣೆಗಾಗಿ ಹರಕೆ ಮಾಡಿಕೊಳ್ಳುವ ರೀತಿಯನ್ನು ಗೊರೂರವರು ತಿಳಿಸಿದ್ದಾರೆ. ಹರಕೆ ಬಹಳ ಕಟ್ಟುನಿಟ್ಟಿನ ಪದ್ಧತಿ ಎಂಬುದನ್ನು ಲೇಖಕರು ಸೂಚಿಸಿದ್ದಾರೆ. ಹರಕೆ ತಪ್ಪಿದರೆ ದೇವಿಯ ಕೋಪಕ್ಕೆ ಒಳಗಾಗಬೇಕಾಗುತ್ತದೆ ಎಂಬ ಹಳ್ಳಿಯವರ ನಂಬಿಕೆಯನ್ನು ಲೇಖಕರು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

"ಮಾರಮ್ಮನ ಉತ್ಸವ ಮೂರ್ತಿಯನ್ನು ಕೈ ಅಡ್ಡೆಯಲ್ಲಿ ಹೊರಲು, ಅಡ್ಡೆ ಮಣೆಯನ್ನು ಬಡಗಿ ಮಾಡಿಟ್ಟನು. ಉತ್ಸವದ ಮೂರ್ತಿಯ ಮೆರವಣಿಗೆ ಪ್ರಾರಂಭವಾಗುವುದಕ್ಕೆ ಮುಂಚೆ, ಅದಕ್ಕೆ ಪೂಜೆ ಪುನಸ್ಕಾರಗಳನ್ನು ನಡೆಸಲು ಊರೊಳಗೆ ಒಂದು ಚಪ್ಪರವೂ ಮಧ್ಯೆ ವೇದಿಕೆಯೂ ಸಿದ್ಧವಾಯಿತು. ಪದ್ಧತಿಯಂತೆ ಒಬ್ಬ ಲಿಂಗಾಯತ ಕಲೆಗಾರ, ಉಪವಾಸ ಮಾಡಿ ಮಾರಮ್ಮನ ಉತ್ಸವದ ಮೂರ್ತಿಯನ್ನು ಕೈ ಅಡ್ಡಮಣೆಯ ಮೇಲೆಯೇ ಮಾಡಿದುದನ್ನು ನಾಲ್ಕು ಜನ ಅಡ್ಡೆಕಾರರು ಹೊತ್ತು ತಂದು, "ಪ್ರಾಣ ಪ್ರತಿಷ್ಠೆ"ಗಾಗಿ ಕಲ್ಲು ಮಂಟಪದ ಮೂಲ ಮಾರಮ್ಮನ ದೇವರ ಎದುರಿಗೆ ಕೂರಿಸಿದರು. ನಿರ್ವಾಣಯ್ಯ ಉಪವಾಸವಿದ್ದು ಮಧ್ಯಾಹ್ನ ಒಂದು ಗಂಟೆಗೆ ಕೆರೆಯಲ್ಲಿ ಮಿಂದು ಪ್ರಾಣ ಪ್ರತಿಷ್ಠೆ ಪೂಜಾ ಕಾರ್ಯಗಳನ್ನು

ಪ್ರಾರಂಭಿಸಿದನು. ಹರಕೆ ಮಾಡಿಕೊಂಡಿದ್ದವರು ಮೊದಲನೆಯ ಕುರಿಮರಿಯನ್ನು ಅಲ್ಲಿ ಸೀ ಕೊಟ್ಟರು. (ಸಿಹಿ ಕೊಡುವುದು; ಬಲಿ ಕೊಡುವುದು) ನಿರ್ವಾಣಯ್ಯ ಮೂಲ ದೇವರನ್ನು ಭಯಂಕರವಾದ ರೀತಿಯಲ್ಲಿ ಅಲಂಕರಿಸಿದ್ದನು. ಉತ್ಸವಮೂರ್ತಿಯ ಒಂದು ಕೈನಲ್ಲಿ ಕೆಂಪು ಹಳದಿ ಹೂವುಗಳ ಮಾಲೆಗಳಿಂದ ನಿಂಬೆಹಣ್ಣು ಸಿಕ್ಕಿಸಿದ ಬಾಕು, ಮತ್ತೊಂದು ಕೈನಲ್ಲಿ ರಕ್ತ ಸಿಕ್ತ ಖಡ್ಗ ಇದ್ದವು. ಮರುದಿನದ ಊರೊಳಗಿನ ಮೆರವಣಿಗೆಗೆ ಸಿದ್ಧ ಮಾಡುತ್ತಿದ್ದವರನ್ನು ಬಿಟ್ಟು, ಉಳಿದ ಗಂಡಸರೆಲ್ಲ ಕಲ್ಲು ಮಠದಲ್ಲಿ ಸೇರಿದ್ದರು". (ಅದೇ; ಪು.೩೮-೩೯) ಉತ್ಸವ ಮೂರ್ತಿಗೆ ಪ್ರಾಣ ಪ್ರತಿಷ್ಠೆಯ ನಂತರ ಊರಿನವರಿಗೆ ತಣಿಗೆಗಳನ್ನು ತಂದು ನಿವೇದನೆ ಮಾಡಿಸಿಕೊಂಡು ಹೋಗುವಂತೆ ಅದಕ್ಕನುಗುಣವಾಗಿ "ಮೈ ತೊಳೆದುಕೊಂಡು ಒಳ್ಳೆ ಉಡುಪು, ಹೂವು, ಮರುಗಳಿಂದ ಅಲಂಕರಿಸಿಕೊಂಡಿದ್ದ ಮನೆಯ ಒಡತಿಯರು, ಕತ್ತಲೆಯಾಗಿದ್ದುದರಿಂದ ಉರಿಯುತ್ತಿರುವ ಪಂಜುಗಳನ್ನು ಹಿಡಿಸಿಕೊಂಡು, ಸಾಲಾಗಿ ಕುಕ್ಕೆಗಳಲ್ಲಿ ದೇವರಿಗೆ ನಿವೇದಿಸುವ ಪದಾರ್ಥಗಳನ್ನು ತೆಗೆದುಕೊಂಡು ಬಂದರು. ಕುಕ್ಕೆಯಲ್ಲಿ ಹಣತೆಯನ್ನು ಹಚ್ಚಿಸಿಕೊಂಡು, ಬಂದು, ನಿವೇದನೆಯಾದ ನಂತರವೂ ದೀಪವು ಆರದಂತೆ ಉಳಿಸಿಕೊಂಡು ಹೋಗಲು ಅವರು ಪ್ರಯತ್ನಿಸುತ್ತಿದ್ದರು". (ಅದೇ; ಪು.೩೯)

ದುರ್ಗಾಷ್ಟಮಿಯ ದಿನ ಹನ್ನೊಂದು ಗಂಟೆಗೆ ಉತ್ಸವ ಮೂರ್ತಿಯನ್ನು ಊರಿನ ಒಳಗಿನ ಚಪ್ಪರಕ್ಕೆ ಬಿಜಯ ಮಾಡಿಸಿಕೊಂಡು "ಕೊಂಬು, ಕಹಳೆ, ಡೋಲು, ತಮಟೆ, ಹೆರೆತಾಳ, ಕುಣಿಮಿಣಿ ದಾಸಯ್ಯಗಳ ತತ್ತೂರಿ, ಭಾಂಕಿ, ಛತ್ರಿ, ಚಾಮರ, ರೆಕ್ಕೆ ಹೂವು, ಹಗಲು ದೇವಟಿಗೆ ಇವುಗಳ ಭೋರ್ಗರೆವ ಶಬ್ದದೊಂದಿಗೆ - ಉತ್ಸವಮೂರ್ತಿ ಊರೊಳಗಿನ ಚಪ್ಪರದಲ್ಲಿ ಸ್ಥಾಪಿತವಾಯಿತು. ಗೊತ್ತಾಗಿದ್ದವರು ಅಲ್ಲಿ ಮತ್ತೊಂದು ಕುರಿಮರಿಯನ್ನು ಹುಯ್ದರು. ಚಾಮನ ಮುಖವಾಡವನ್ನು ಧರಿಸಿದ ಬೆಂಗಳೂರನಿಂದ ಬಂದಿದ್ದ ತಮ್ಮಯ್ಯನೂ ಸ್ಥಳದ ಮತ್ತೊಬ್ಬನೂ ತಮ್ಮ ಸೇವೆಗೆ ಸಿದ್ಧರಾಗಿ ನಿಂತಿದ್ದರು. ಹಳ್ಳಿ ಜಾತ್ರೆಗಳಲ್ಲಿ ಚಾಮರಗಳದೇ ಮುಖ್ಯ ಆಕರ್ಷಣೆ. ಬಿಳಿಯ ಸೀರೆ, ಸೊಂಟದಲ್ಲಿ ಬೆಳ್ಳಿಯ ಪಟ್ಟಿ, ಕಾಲಿಗೆ ಗೆಜ್ಜೆ, ಅದರ ಮೇಲೆ ಭಾರವಾದ ಕಾಲ್ಕಡಗ, ತೋಳಿಗೆ ಸುತ್ತಿದ ಕೆಂಪು ಬಟ್ಟೆ, ಉದ್ದವಾದ ಕೆದರಿದ ಕೂದಲು, ಕೊರಳಲ್ಲಿ ತೂಗಾಡುವ ಚಾಮನ ಪದಕ, ಕೆಂಪು ಬಟ್ಟೆಯ ಪೇಟ, ಅದರ ಮೇಲೆ ಅದೇ ಬಣ್ಣ ಸವರಿದ ನಿಂಬೆಹಣ್ಣು, ತಲೆಯ ಮೇಲೆ ಚಾಮನ ಮುಖವಾಡ, ಮೆರವಣಿಗೆಯ ಮುಂದೆ ಇತರ ಹರಕೆಗಳನ್ನು ಹೊತ್ತವರು-ಬಾಯಿ ಬೀಗದವರು, ಉರುಳು ಸೇವೆಯವರು, ಕಲ್ಲು ಹೊತ್ತವರು ಎಲ್ಲರೂ ಹೊರಟಿದ್ದರು. ಮಂಗಳಾರತಿಯಾದ ನಂತರ ಎಲ್ಲ ವಾದ್ಯಗಳ ಏಕಕಾಲದ ಘೋಷಣೆ. ಎತ್ತಿನ ಮೇಲೆ ಕುಳಿತಿದ್ದ ದಾಸಯ್ಯಗಳ ನಗಾರಿ ಸದ್ದು, ಜನರ ಹೋ ಹೋ ಎಂಬ ದಪ್ಪ ಧ್ವನಿಯ ಹುಯಿಲು ಇವುಗಳ ಜೊತೆ ಉತ್ಸವ ಹೊರಟಿತು. ಉತ್ಸವವು ಮಾಮೂಲಿನಂತೆ ಊರಿನ ಸುತ್ತುಮುತ್ತು ತಮ್ಮಯ್ಯನ ಹರಕೆ (ಚಾಮನ ಕುಣಿತಕ್ಕಾಗಿ) ಮತ್ತೊಂದು ಸುತ್ತು ಬರಬೇಕೆಂದು ನಿರ್ಣಯವಾಗಿತ್ತು. ಒಂದು ಸುತ್ತಿನ ವಾದ್ಯಗಾರರ, ಓಲಗದವರ ಕೂಲಿ, ಪಂಜಿನ ಎಣ್ಣೆ, ಚಾಮನನ್ನು ಕುಣಿಸುವ ಗೊರವಯ್ಯಗಳ ಮಿರಾಸೆ ಊರೊಟ್ಟಿನ

ಹಣದಿಂದಲೂ, ಎರಡನೆಯ ಸುತ್ತಿನ ಆ ಖರ್ಚುಗಳನ್ನೆಲ್ಲ ತಮ್ಮಯ್ಯನೂ ಕೊಡಬೇಕೆಂದೂ ನಿರ್ಣಯವಾಗಿತ್ತು. ....

ಪ್ರಾರಂಭದಿಂದಲೇ, ಮೆರವಣಿಗೆಯ ಮುಖ್ಯ ಆಕರ್ಷಣೆ ಚಾಮನ ಕುಣಿತವೇ ಆಯಿತು. ಉತ್ಸವ, ಚಪ್ಪರದಿಂದ ಹೊರಡುವುದಕ್ಕೆ ಮುಂಚೆ, ಎಲ್ಲರೂ ತಮ್ಮ ತಮ್ಮ ವಿದ್ಯೆಗಳನ್ನು ಒಂದು ಸ್ವಲ್ಪ ಹೊತ್ತು ತೋರಿಸಿದಂತೆ ಚಾಮನ ಕುಣಿತದವರೂ ತೋರಿಸಿದರು. ಪ್ರಾರಂಭದಿಂದಲೇ ತಮ್ಮಯ್ಯನ ಕುಣಿತಕ್ಕೆ ಒಳ್ಳೆ ಕಳೆ ಕಟ್ಟಿತ್ತು. ಅವನ ಆಳ್ತನ, ಆಡಿಸುವವನ ಚಾತುರ್ಯ, ಇದು ತನ್ನ ಹರಕೆ, ಸೇವೆ ಎಂಬ ಅವನ ಅಂತರಂಗದ ವಿಶ್ವಾಸ, ಇವೆಲ್ಲ ಅವನಿಗೆ ಒಂದು ಹೊಸ ಹುರುಪನ್ನು ಕೊಟ್ಟಿತು. ಚಾಮನ (ತಮ್ಮಯ್ಯನ) ಕುಣಿತ, ಉತ್ಸವ ಹೊರಡುವ ಸ್ಥಳದಲ್ಲಿಯೇ ಒಂದು ಗಂಟೆಗಿಂತ ಹೆಚ್ಚು ಕಾಲ ನಡೆಯಿತು. ಊರಿನ ನಾಲ್ಕು ಚೌಕಗಳಲ್ಲಿ ಹಾಕಿದ್ದ ನಾಲ್ಕು ಮಂಟಪಗಳಲ್ಲಿ, ಪಟೇಲರ ಮನೆ ಮುಂದಲ ಚಪ್ಪರದಲ್ಲಿ, ನಡು ಬೀದಿಯಲ್ಲಿದ್ದ ಆಂಜನೇಯ ದೇವಾಯದ ಮುಂದೆ, ಎಲ್ಲೆಡೆಯೂ ಚಾಮನ ಕುಣಿತ ನಡೆಯಬೇಕಾಗಿದ್ದಿತು". (ಅದೇ; ಪು.೩೯-೪೦) ಅಂದು ಹರಕೆ ಉತ್ಸವದಲ್ಲಿ ತಮ್ಮಯ್ಯನಿಗೆ ಆಯಾಸವಾಯಿತು. ನಿರ್ವಾಣಯ್ಯ ಮಾರನೆ ದಿನವೂ ಚಾಮನ ಹರಕೆ ಆಗಬೇಕೆಂದು ಆಗ್ರಹ ಪಡಿಸಿದಾಗ ಪಟೇಲರು ನಿರ್ವಾಣಯ್ಯನನ್ನು ಗದರಿಸಿ ದೇವರನ್ನು ಕದಲಿಸು ಎಂದರು. ಆಗ ನಿರ್ವಾಣಿ "ಚಾಮನ್ನ ಕುಣಿಯೋಕಾದಿದ್ರೆ ಬೇಡ. ಮುಖವಾಡ ಹಾಕ್ಕೊಂಡು ಉತ್ಸವದ ಜೊತೆ, ಒಂದು ಸುತ್ತು ಬರ್ಲಿ. ಹರಕೆ ಪೂರ್ತಿಯಾಗುತ್ತೆ" ಎಂದನು. (ಅದೇ; ಪು.೪೨) ದೇವಿಯ ಜಾತ್ರೆ ಹರಕೆಯ ನೆಪದಲ್ಲಿ ನಿರ್ವಾಣಯ್ಯ ತಮ್ಮಯ್ಯ ಸಲುವಾಗಿ ಪಟೇಲರ ಹತ್ತಿರ ಹಣ ದಂಡ ಕೇಳಲು ಪ್ರಯತ್ನಿಸುತ್ತಾನೆ. ಪೂಜಾರಿಗಳ ಕಪಟ ಸ್ವಾಮಿಗಳ ಈ ತಂತ್ರವನ್ನು ಇಂತ ಪ್ರಸಂಗಗಳಲ್ಲಿಯೇ ಗೊರೂರವರು ಖಂಡಿಸಿರುವುದುಂಟು. ಮಾರಿ ಉತ್ಸವ ಒಂದು ರೀತಿಯ ಸಂಪ್ರದಾಯದ ಉತ್ಸವ ಎಂದು ಹೇಳಿ ಅದರ ವೈಭವವನ್ನು ವರ್ಣಿಸಿ ಆ ಉತ್ಸವದ ಕಾಲದಲ್ಲಿ ಆಗುವ ಮೋಸವನ್ನು ಲೇಖಕರು ಹೇಳಿರುವುದು ಗ್ರಾಮೀಣ ಜೀವನ, ಜನರ ಸ್ಥಿತಿ ನಂಬಿಕೆಗಳನ್ನು ಪೂರ್ಣವಾಗಿ ಹೇಳಿದಂತೆ ಆಗಿದೆ.

ಮಲ್ಲಿಗೆಹಳ್ಳಿಯಲ್ಲಿ ಆಂಜನೇಯ ಸಮಾಜದ ಮೂಲಕ ಹಬ್ಬದ ಆಚರಣೆ ವಿಶೇಷವಾಗಿದೆ. ಆಂಜನೇಯ ಗುಡಿಯ ಭಕ್ತರು ಒಂದು ಸಂಘ ಮಾಡಿಕೊಂಡಿದ್ದಾರೆ. ಈ ಸಂಘದಲ್ಲಿ ಬಹುಮಟ್ಟಿಗೆ ಯುವಕರೆ ಸದಸ್ಯರಾಗಿರುತ್ತಾರೆ. ಇವರೆಲ್ಲರೂ ಸೇರಿ ವರ್ಷಕ್ಕೆ ಒಮ್ಮೆ ತಮ್ಮ ಸಂಘದ ವಾರ್ಷಿಕ ಸಭೆಯ ದಿನ ಆಂಜನೇಯ ಸ್ವಾಮಿ ಹಬ್ಬವನ್ನು ಆಚರಿಸುತ್ತಾರೆ. ಈ ಸದಸ್ಯರ ಬಳಗದಲ್ಲಿ ಗ್ರಾಮದ ಎಲ್ಲಾ ಜಾತಿಯ (ಧರ್ಮದ) ಜನರ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. "ಆಂಜನೇಯ ಉತ್ಸವ ಊರೊಟ್ಟಿನ ಹಬ್ಬ. ಇದರಲ್ಲಿ ಹಿಂದೂ, ಮುಸಲ್ಮಾನ್, ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ವ್ಯತ್ಯಾಸಗಳು ಇರಲಿಲ್ಲ. ಎಲ್ಲರೂ ಇದರಲ್ಲಿ ಭಾಗವಹಿಸುತ್ತಿದ್ದರು". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೫; ಪು.೩೦೦)

ಮಲ್ಲಿಗೆಹಳ್ಳಿಯಲ್ಲಿ ಪೋಸ್ಟ್ ಮಾಸ್ಟರು ಆಂಜನೇಯ ಸಮಾಜದ ಅಧ್ಯಕ್ಷರಾಗಿದ್ದಾಗ ಅವರು ತಮ್ಮ ನಿಜವಾದ ವಿದ್ವತ್ತು, ಔದಾರ್ಯ, ವಿವೇಕ ಗುಣಗಳಿಂದ ಊರಿನವರಿಗೆಲ್ಲಾ ಆತ್ಮೀಯರಾಗಿದ್ದಾರೆ. ಪೋಸ್ಟು ಮಾಸ್ಟರು ಬರಿಯ ಪೋಸ್ಟ್ ಮಾಸ್ಟರು ಮಾತ್ರವೇ ಆಗಿರಲಿಲ್ಲ. ಅವರು ಸ್ಕೂಲು ಮಾಸ್ಟರೂ ಆಗಿದ್ದರು. ಅವರ ವಿದ್ಯಾರ್ಥಿಗಳು ಅನೇಕ ಕ್ಷೇತ್ರದಲ್ಲಿ ಸ್ಥಾನ ಮರ್ಯಾದೆಯನ್ನು ಗಳಿಸಿಕೊಂಡಿದ್ದರು. ಆಂಜನೇಯ ಸಂಘದ ವಾರ್ಷಿಕ ಸಭೆಯಲ್ಲಿ "ವೈದಿಕ ಜಾಡ್ಯದ ಊರಾಗಿದ್ದ ಮಲ್ಲಿಗೆಹಳ್ಳಿಯ ಸ್ತ್ರೀಯರು ಪುರುಷರೊಂದಿಗೆ ಬಂದು ಕೂರಲು ಪ್ರಾರಂಭಿಸಿದರು. ಬ್ರಾಹ್ಮಣರು, ಬ್ರಾಹ್ಮಣೇತರರು, ಹರಿಜನರು, ತುರುಕರು ಒಂದೇ ಬಯಲಿನಲ್ಲಿ ಸಭೆ ಸೇರತೊಡಗಿದರು". (ಅದೇ; ಪು.೩೦೨) ಊರಿನ ಹಬ್ಬ ನಿಜವಾದ ಅರ್ಥದಲ್ಲಿ ಊರಿನವರೆಲ್ಲರ ಹಬ್ಬವಾಗಿ ಆಂಜನೇಯನ ಹಬ್ಬ ನಡೆಯುವ ರೀತಿಯನ್ನು ಗೊರೂರರವರು ಇಲ್ಲಿ ಶ್ಲಾಘಿಸಿದ್ದಾರೆ. ಸಮಾಜದ ಐಕ್ಯತೆಗೆ ಊರಿನಲ್ಲಿ ನಡೆಯುವ ಉತ್ಸವಗಳು, ಜಾತ್ರೆಗಳು ಹೇಗೆ ಕಾರಣವಾಗುತ್ತವೆ ಎಂಬುದನ್ನು ಇಲ್ಲಿ ಚೆನ್ನಾಗಿ ಮನಗಾಣಬಹುದು. ಇಂಥ ರೀತಿಯ ವಿಶೇಷ ಸಂಗತಿ ಗಳನ್ನು ಗೊರೂರರವರು ತಮ್ಮ ಕೃತಿಗಳಲ್ಲಿ ಅನೇಕ ಸಂದರ್ಭಗಳಲ್ಲಿ ಸೂಚಿಸಿದ್ದಾರೆ. ಹಬ್ಬಗಳ ಆಚರಣೆಯ ಅನಿವಾರ್ಯತೆ ಹಳ್ಳಿಯ ಐಕ್ಯತೆಯ ದೃಷ್ಟಿಯಿಂದ ಅತಿ ಮುಖ್ಯವಾದದ್ದು ಎಂಬುದು ಗೊರೂರರವರ ನಿಶ್ಚಲ ಅಭಿಮತವಾಗಿದೆ. ಸಮಾಜದ ಐಕ್ಯತೆಯ ಜೊತೆಗೆ ಸ್ತ್ರೀಪುರುಷರ ಸಮಾನತೆಯನ್ನು ಇಂತಹ ಸಂದರ್ಭಗಳಲ್ಲಿ ಕಾಣಬಹುದೆಂದು ಈ ಸನ್ನಿವೇಶದಲ್ಲಿ ಲೇಖಕರು ಸೂಚಿಸಿದ್ದಾರೆ.

ಮಲ್ಲಿಗೆಹಳ್ಳಿಯಲ್ಲಿ ಆಂಜನೇಯ ಸಂಘದ ಉತ್ಸವ ಸಂದರ್ಭದಲ್ಲಿ ಸನಾತನರಿಗೂ, ಹರಿಜನರಿಗೂ ಬಾಂಧವ್ಯವನ್ನು ಉಂಟು ಮಾಡಿದ್ದು ಅತಿ ಅನನ್ಯವಾದ ವಿಷಯವಾಗಿದೆ. ಪೆರುಮಾಳರು ವೈದಿಕ ಬ್ರಾಹ್ಮಣ. "ಈತ ಆಂಜನೇಯ ಉತ್ಸವಕ್ಕೆ ಹರಿಜನರ ಓಲಗ ತಮಟೆ ತರಿಸುತ್ತಿದ್ದ. ಅವರು ದೇವರ ಮುಂದೆ ನಡುಬೀದಿಯಲ್ಲಿ ಹೋಗುತ್ತಿರುವಾಗ, ಜನರು ಜೊತೆಯಲ್ಲಿ ನುಗ್ಗಿ ಮುಂದೆ ತಳ್ಳುತ್ತಿರುವಾಗ, ಹಿಂದೆ ವೈದಿಕರು ವೇದಗಳನ್ನು ಹೇಳುತ್ತಿರುವಾಗ, ಬಾಗಿಲು ಬಾಗಿಲುಗಳಲ್ಲಿಯೂ ಸ್ತ್ರೀಯರು ನಿಂತು ಭಗವಂತನ ದರ್ಶನ ಮಾಡುತ್ತಿರುವಾಗ, ಹರಿಜನ ಯಾರು? ಅರಿಜನ ಯಾರು? ಆ ನೂಕು ನುಗ್ಗಾಟದಲ್ಲಿ ಸ್ಪೃಶ್ಯರು ಯಾರು? ಅಸ್ಪೃಶ್ಯರು ಯಾರು? ಪೆಮ್ಮಾಳು ಸಮಾಜದ ಉತ್ಸವಕ್ಕೆ ಹರಿಜನರನ್ನು ಓಲಗಕ್ಕೆ ಕರೆಯುವವರೆಗೆ, ಹರಿಜನರು ಓಲಗಕ್ಕೆ ಊರೊಳಕ್ಕೆ ಬಂದಿರಲಿಲ್ಲ. ಹಾಗೆಯೇ ಅವರು ದೇವರನ್ನು ನೋಡಲೂ ಬಂದಿರಲಿಲ್ಲ. ಈಗ ತಮಟೆ ಓಲಗದ ಜೊತೆಯಲ್ಲಿ ಹರಿಜನ ಸ್ತ್ರೀ ಪುರುಷರೂ ಉತ್ಸವಾದಿ ಗಳಿಗೆ ಬರಲು ಪ್ರಾರಂಭಿಸಿದರು. ಆ ವೇಳೆಯವರೆಗೆ ಎಷ್ಟು ಉತ್ಸವ ಎಲ್ಲಿ ಆದರೂ, ಹರಿಜನರು ತಮಗೆ ಅದು ಸಂಬಂಧವೇ ಇಲ್ಲದಂತೆ ಕ್ರಿಸ್ತರಂತೆ, ಇರುತ್ತಿದ್ದರು". (ಅದೇ; ಪು.೩೦೭-೩೦೮) ಸಮಾಜದ ಯುವಕರಲ್ಲಿ ಕಂಡುಬಂದ ಈ ಪರಿವರ್ತನಾ ಭಾವನೆ ಮುಂದೆ ಅವರ ಜೀವನದಲ್ಲಿ ಸ್ಥಿರವಾಗಿ ಉಳಿಯಿತು ಎಂದು ಗೊರೂರರವರು ಅಭಿಮಾನದಿಂದ ಹೇಳುತ್ತಾರೆ. ಗೊರೂರರವರ ಕಾಲಕ್ಕೆ ಗ್ರಾಮೀಣ ಸಮಾಜದಲ್ಲಿದ್ದ ಉತ್ತಮ ಸಾಂಸ್ಕೃತಿಕ ಅನನ್ಯತೆಗೆ ಆಂಜನೇಯ ಸಮಾಜದ ಹಬ್ಬ ಉತ್ತಮ ಸಾಕ್ಷಿಯಾಗಿದೆ.

ಮಲ್ಲಿಗೆಹಳ್ಳಿಯಲ್ಲಿ ಆಯುಧ ಪೂಜೆ ವೈಶಿಷ್ಟ್ಯ ಪೂರ್ಣವಾದದ್ದು. ಇದು ವಿಜಯದಶಮಿ ದಿನವೇ ನಡೆಯುತ್ತಿತ್ತು. ಅಂದಿನ ದಿನ "ಭೆರ್ಮನ್ನರ ಕುಂಟ ಕುದುರೆ ಬೈಸಿಕಲ್ಲು, ಟಪಾಲು ಚೀಲ ವಿಶಿಷ್ಟಾದ್ವೈತ ಧ್ವಜನ ತಿರುಪೆ ಕೂಡೆ (ಮಡಿಕುಕ್ಕೆ) ನಾಮದ ಪೆಟ್ಟಿಗೆ ಘಂಟಾವತಾರದ ಮಡಿದೊಣ್ಣೆ, ಪೌರೋಹಿತ್ಯದ ಸ್ಟ್ಯಾಂಡು ಮತ್ತು ಪುಸ್ತಕಗಳು ಎಲ್ಲಾ ಮೆರವಣಿಗೆ ಹೊರಟವು. ಆ ದಿನ ಬನ್ನಿಮಂಟಪದ ಬಯಲಿನಲ್ಲಿ ಆದಿ ಕರ್ನಾಟಕರು ಅದ್ಭುತವಾದ ನರ್ತನನ್ನು ಮಾಡಿದರು. ನಿಜವಾಗಿಯೂ ಭಗವಂತನೇ ಅಧ್ಯಕ್ಷತೆ ವಹಿಸಿದಂತೆ ತೋರುತ್ತಿದ್ದಿತು. ಅದಾದನಂತರ ಅಳ್ಳಿಕಟ್ಟೆ ಸಮೆರಾಯ, ಒಳ್ಳೆಯ ನಾಗರ ಹಾವಿನಂತೆ ಕುಣಿದ". (ಅದೇ; ಪು.೩೧೬) ಈ ಉತ್ಸವದ ಸಂದರ್ಭದಲ್ಲಿ ಆದಿ ಕರ್ನಾಟಕದವನೊಬ್ಬನ ಕುಣಿತದ ವೈಖರಿಯನ್ನು ಹೇಳುವುದರ ಜತೆಗೆ ಅವನ ಭಕ್ತಿಭಾವದ ವೈಭವದ ತನ್ಮಯತೆಯನ್ನು ಗೊರೂರರವರು ಗುರುತಿಸಿ ಹೇಳುವುದು ಸಾಹಿತಿಯಾಗಿ ಸುಸಂಸ್ಕೃತ ವ್ಯಕ್ತಿಯಾಗಿ ಅವರ ವಿಶಾಲ ಹೃದಯಕ್ಕೆ ಉತ್ತಮ ನಿದರ್ಶನವಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಯುಗಾದಿ ಹಬ್ಬ ವಿಶೇಷವಾದದ್ದು ಹಾಗೂ ವೈಶಿಷ್ಟ್ಯಪೂರ್ಣವಾದದ್ದು. ಹಿಂದುಗಳೆಲ್ಲರು ಬಹುಮಟ್ಟಿಗೆ ಈ ಹಬ್ಬವನ್ನು ಪ್ರಾಂತೀಯ ಆಚರಣೆಗೆ ಅನುಗುಣವಾಗಿ ಆಚರಿಸುತ್ತಾರೆ. ಗೊರೂರರವರ 'ನಮ್ಮೂರಿನ ರಸಿಕರು' ಕೃತಿಯಲ್ಲಿ ಯುಗಾದಿ ಹಬ್ಬದ ಆಚರಣೆ ಚೆನ್ನಾಗಿ ಮೂಡಿ ಬಂದಿದೆ. ಯುಗಾದಿ ಹಬ್ಬ ಮನೆಯವರಿಗೆಲ್ಲಾ ಸಂಭ್ರಮದ ಹಬ್ಬ. ಎಲ್ಲರೂ ಹಬ್ಬದ ಸಡಗರದಲ್ಲಿ ಸಂತೋಷದಲ್ಲಿ ಒಂದಾಗಿ ಹಬ್ಬವನ್ನು ವೈಭವವಾಗಿ ಆಚರಿಸುತ್ತಾರೆ. ಯುಗಾದಿ ಹಬ್ಬದಲ್ಲಿ ಚೆಂಡಾಟ ಆಡುವುದು ಒಂದು ಉತ್ಸಾಹದ ಕಾರ್ಯಕ್ರಮ. ಈ ಚೆಂಡಾಟದ ಸೊಗಸನ್ನು ಲೇಖಕರು ವರ್ಣಿಸುವ ರೀತಿ ಕಣ್ಣಿಗೆ ಕಟ್ಟುವಂತೆ ಇದೆ. "ನಮ್ಮ ಊರಿನ ಚೆಂಡಿನ ಆಟ ಬಲು ಜೋರು, ಮೊಹರಂ ಹಬ್ಬದ ದಿವಸ ಜನರು ಸೌದೆಯನ್ನು ಜೋಪಾನ ಮಾಡುವಂತೆ, ಯುಗಾದಿ ಹಬ್ಬದ ದಿವಸ ನಮ್ಮೂರ ಹೆಂಗಸರು ಬಟ್ಟೆಯ ತುಂಡುಗಳನ್ನೆಲ್ಲಾ ಜೋಪಾನ ಮಾಡುತ್ತಾರೆ. ಶೀನಪ್ಪ, ನಾಣಿ ಎಲ್ಲಾ ಕಡೆಯೂ ತಿರುಗಿ ಐದು ಆರು ಚೆಂಡಿಗೆ ಬೇಕಾಗುವಷ್ಟು ತಂದೇ ತರುತ್ತಾರೆ. .... ಶಾಸ್ತ್ರಿಗಳ ಹಿತ್ತಲ ಬೇಲಿಯ ಮೇಲೆ ಒಂದು ಸೀರೆಯ ತುಂಡನ್ನು ಒಣಗಿ ಹಾಕಿದ್ದರು. ಅಲ್ಲೇ ಶಾಸ್ತ್ರಿಗಳ ಸೊಸೆಯೂ ನಿಂತಿದ್ದಳಂತೆ. ಅವಳು "ತೆಗೆದುಕೊಂಡು ಹೋಗ ಬೇಡಿ" ಎಂದಳಂತೆ. ಶೀನಪ್ಪನು "ಈ ದಿವಸ ಅದೆಲ್ಲಾ ಹೇಳ್ಬೇಡಿ. ನನ್ನ ಕಣ್ಣಿಗೆ ಬೀಳುವಂತೆ ಇಟ್ಟದ್ದು ನಿಮ್ಮ ತಪ್ಪು" ಎಂದು ಹೇಳಿ ಅವಳಿಗೆ ಒಂದು ಸಲ ಕೈ ಮುಗಿದು ಬಿಟ್ಟನಂತೆ. ಅವಳು ನಾಚಿಕೆಯಿಂದ ಒಳಕ್ಕೆ ಹೊರಟು ಹೋದ ಮೇಲೆ ಆ ಬಟ್ಟೆಯನ್ನು ತಂದನಂತೆ! ಚೆಂಡಿನ ಮೇಲಕ್ಕೆ ಹೊಲೆಯಲು ಬಿಳಿಯ ಬಟ್ಟೆಬೇಕು. ಅದು ಸೀರೆಯ ಚೆಂಡೆಂದು ಕಾಣಕೂಡದು. ಒಳಗಡೆ ಸೀರೆಯ ಚೂರನ್ನು ಸುತ್ತಿರುವುದು ತಿಳಿದರೂ ಸ್ವಲ್ಪ ಹಾಗೆಯೆ. ಶೀನಪ್ಪ ಉಪಾಯ ಮಾಡಿ ನಮ್ಮ ಭಾವನವರಿಂದಲೂ ಒಂದು ಹಳೆಯ ಚೌಕವನ್ನು ಕಿತ್ತು ತಂದಿದ್ದನು. ಗುಂಡನು ಇದನ್ನು ನೋಡಿ" ಇಷ್ಟು ತಾಪತ್ರಯ ಯಾತಕ್ಕೆ? ನನ್ನ ಹಳೆಯ ಪಂಚೆ ಒಂದಿದೆ ತೆಗೆದುಕೋ ಎಂದನು. ಶೀನಪ್ಪನು "ನೀನು

ಮಹಾಕರ್ಣ. ಎಲ್ಲರಿಂದಲೂ ಒಂದೊಂದು ಚೂರು ಬಟ್ಟೆ ವಸೂಲ್ಮಾಡೋದೆ ನಮ್ಮೂರ ಮಾಮೂಲು" ಎಂದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು.೧೧೭-೧೧೮) ಇಲ್ಲಿಯೂ ಸಹ ಹಬ್ಬದ ಒಂದು ಸಣ್ಣ ಚಟುವಟಿಕೆಯಲ್ಲಿ ಊರಿನವರೆನ್ನೆಲ್ಲಾ ಒಂದು ಗೂಡಿಸುವ ಮನೋಧರ್ಮವನ್ನು ಗುರುತಿಸಬಹುದು. "ಸಾಯಂಕಾಲ ನಮ್ಮ ಊರಿನ ದೇವಸ್ಥಾನದ ಪ್ರಾಕಾರದಲ್ಲಿ ಎಲ್ಲರೂ ಆಟಕ್ಕೆ ಸೇರಿದರು. ಶೀನಪ್ಪ ಎರಡು ಗಟ್ಟಿಯಾದ ದಪ್ಪ ಚೆಂಡುಗಳನ್ನು ಹೊಲೆದು ತಂದನು. ಅಲ್ಲದೆ ಮೂರು ನಾಲ್ಕು ಚಿಕ್ಕ ಚೆಂಡುಗಳನ್ನು ಬೇರೆ ಹೊಲೆದು ಹುಡುಗರಿಗೆಲ್ಲಾ ಕೊಟ್ಟಿದ್ದನು. ಒಬ್ಬರನ್ನು ಬಿಡದೆ ಶೀನಪ್ಪನು ದೊಡ್ಡದವರನ್ನೆಲ್ಲಾ ಚೆಂಡಾಟಕ್ಕೆ ಹೊರಡಿಸಿದನು. ೫೦-೬೦ ವಯಸ್ಸಿನ ಮುದುಕರನ್ನು ಹೊರಡಿಸಿ ಬಿಟ್ಟನು. ಜೋಡಿದಾರರು ಹೊರಟರು. ನಮ್ಮ ಭಾವನವರೂ ಹೊರಟರು. ಶಾಸ್ತ್ರಿಗಳು ಮಾತ್ರ "ಹುಡುಗರು ಹೋಗಿ ಆಡಿರಯ್ಯ, ನಮ್ಮಂತಹ ಮುದಕರನ್ನು ಯಾಕೆ ಗೋಳು ಹುಯ್ಕೋತೀರಿ" ಎಂದರು. ಆದರೆ ಜನರು ಬಿಡಲಿಲ್ಲ. ಕೊನೆಗೆ ಶಾಸ್ತ್ರಿಗಳೂ ಹೊರಟರು. ೫೦-೬೦ ವಯಸ್ಸಿನ ಹೆಣ್ಣು ಮುದುಕರು ಚೆಂಡಾಡುವುದನ್ನು ನೋಡಲು ಸ್ತ್ರೀಯರೆಲ್ಲರೂ ದೇವಸ್ಥಾನದ ಬಾಗಿಲಿನಲ್ಲಿ ನೆರೆದರು. ....

ಆಟವು ಬಹಳ ಉತ್ಸಾಹದಿಂದ ನಡೆಯಿತು. ಜೋಡಿದಾರರಿಗೆ, ಶಾಸ್ತ್ರಿಗಳಿಗೆ, ನಮ್ಮ ಭಾವನವರಿಗೆ, ಶೀನಪ್ಪ ಮತ್ತು ಗುಂಡನಿಗೆ ಲಗ್ಗೆಯ ಚೆಂಡಿನಲ್ಲಿ ಬೇಕಾದಂತೆ ಏಟುಗಳು ಬಿದ್ದವು. ಒಬ್ಬೊಬ್ಬರಿಗೆ ಏಟು ಬಿದ್ದಾಗಲೂ ಬಾಗಿಲಿನಲ್ಲಿ ಕುಳಿತಿದ್ದ ಸ್ತ್ರೀಯರು 'ಹೊ' ಎಂದು ನಗುತ್ತಿದ್ದರು. ಬರ ಬರುತ್ತಾ ಆಟಗಾರರು ತಮಗೆ ವಯಸ್ಸಾಗಿದೆ ಎಂಬುದನ್ನು ಮರೆತುಬಿಟ್ಟರು. ಹುಡುಗರಂತೆ ನೆಗೆದು, ಕೂಗಿ ಕುಣಿದಾಡುವುದಕ್ಕೆ ಪ್ರಾರಂಭಿಸಿದರು. ಕೊನೆಗೆ ಆಟವು ಉತ್ಸಾಹದಿಂದಲೂ ವಿನೋದದಿಂದಲೂ ಕೊನಗೊಂಡಿತು". (ಅದೇ; ಪು. ೧೧೮-೧೧೯) ಹಳ್ಳಿಯ ಈ ಚೆಂಡಾಟದ ವೈಭವವನ್ನು ಗೊರೂರವರು ವರ್ಣಿಸುತ್ತಾ 'ಹಳ್ಳಿಯ ವಾತಾವರಣದಲ್ಲಿ ಕಾಣುವ' ಹಬ್ಬದ ಸಂಭ್ರಮ ಪೇಟೆಯಲ್ಲಿ ಇಲ್ಲ ಎಂದು ಹೇಳುವ ಮಾತು ಪೂರ್ಣ ಸತ್ಯ.

ಯುಗಾದಿ ಹಬ್ಬ ದಿನ ಪಂಚಾಂಗ ಶ್ರವಣ ಊರಿನ ದೇವಸ್ಥಾನದಲ್ಲಿ ನಡೆಯುವುದು ವಾಡಿಕೆ. ಊರ ಜೋಯಿಸರು ಯುಗಾದಿ ದಿನದ ರಾತ್ರಿ ಪಂಚಾಂಗ ಶ್ರವಣ ಮಾಡುತ್ತಾರೆ. "ಜೋಡಿದಾರರ ಮನೆಯಿಂದ ಹರಳೆಣ್ಣೆಯ ದೀಪವು ಬಂದಿತು. ಜೋಯಿಸರು ಅದರ ಬೆಳಕಿನಲ್ಲಿಯೇ ಪಂಚಾಂಗವನ್ನು ಓದಬೇಕಾಗಿದ್ದಿತು. ದೀಪದ ಪ್ರಕಾಶವು ಅಷ್ಟೇನೂ ಹೊಳಪಾಗಿರಲಿಲ್ಲ. ನರಹರಿಯು "ಬೇರೆ ಒಂದು ಲ್ಯಾಂಪು ತರಬಾರದೆ? ಇದರಲ್ಲಿ ಓದೋದಕ್ಕೆ ಕಾಣೋದೇ ಇಲ್ಲವಲ್ಲ?" ಎಂದನು. ಜೋಡಿದಾರರು ಕೂಡಲೇ "ಬೇಡ, ಬೇಡ, ಪೂರ್ವಿಕರ ಪದ್ಧತಿಗೆ ವಿರೋಧವಾಗಿ ಅದರಲ್ಲೂ ಈ ದಿವಸ ನಡೆಯುವುದು ಶ್ರೇಯಸ್ಕರವಲ್ಲ" ಎಂದು ಬಿಟ್ಟರು. ಜೋಹಿಸರು ಪಂಚಾಂಗವನ್ನು ಓದಲು ಪ್ರಾರಂಭಿಸಿದರು. ಶಾಸ್ತ್ರಿಗಳು ಅರ್ಥವನ್ನು ಹೇಳಿದರು. ಆ ವರುಷದ ಅಧಿಪತಿ, ಅಧಿಕಾರಿಗಳು, ಮಳೆ ಬೆಳೆ ಎಲ್ಲಾ ಹೇಳಿ ಆಯಿತು".

(ಅದೇ; ಪು.೧೨೦) ಬೇಸಾಯನ್ನೇ ಜೀವನದ ಉಸಿರನ್ನಾಗಿ ಇಟ್ಟುಕೊಂಡಿರುವ ಗ್ರಾಮೀಣ ಜನರಿಗೆ ಬೇಸಾಯದ ಭವಿಷ್ಯದ ಬಗ್ಗೆ ಚಿಂತೆ, ಕುತೂಹಲ ಸಹಜವಾಗಿ ತುಂಬಾ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ವರ್ಷದಲ್ಲಿ ಮಳೆಯ ಗ್ರಹಗತಿಯನ್ನು ತಿಳಿಯುವ ಕುತೂಹಲ ರೈತರಿಗೆ ತೀವ್ರವಾಗಿ ಇರುತ್ತದೆ. ಪಂಚಾಂಗದಲ್ಲಿ ಬರೆದಿರುವ ಈ ಮಳೆ, ಬೆಳೆ ವಿಚಾರವನ್ನು ಜೋಯಿಸರು ಪಂಚಾಂಗ ಶ್ರವಣ ಮಾಡಿದಾಗ ಹೇಳುತ್ತಾರೆ. ಮಳೆ ಬೆಳೆ ಅನುಕೂಲಕರವಾಗಿರುತ್ತದೆ ಎಂದಾಗ ರೈತರಿಗೆ ಸಮಾಧಾನ. ಬೆಳೆಯಲ್ಲಿ ಸಮಸ್ಯೆ ಉಂಟು ಎಂದಾಗ ರೈತರ ಮನಸ್ಸಿನಲ್ಲಿ ತವಕ ಉಂಟಾಗುತ್ತದೆ. ಆದರೆ ಮಾನಸಿಕವಾಗಿ ಆತ ತೊಂದರೆಗೆ ಸಿದ್ಧನಾಗುವುದು ಇದೆ. ಹೀಗೆ ಪಂಚಾಂಗ ಶ್ರವಣದಲ್ಲಿ ರೈತ ಪ್ರಯೋಜನ ಪಡೆಯುತ್ತಾನೆ. "ಯುಗಾದಿಯ ಹಬ್ಬದ ದಿನ ರೈತ ಪಂಚಾಂಗ ಶ್ರವಣ ಕೇಳಿ ಒಳ್ಳೆಯದು ಕೆಟ್ಟದ್ದು ಎರಡಕ್ಕೂ ಸೇರಿಸಿ ಜೋಹಿಸರಿಗೆ ಸಮಸ್ಕಾರ ಮಾಡುತ್ತಾನೆ; ದೇವರನ್ನು ಬೇಡಿಕೊಳ್ಳುತ್ತಾನೆ. ಪಂಚಾಂಗ ಶ್ರವಣದಲ್ಲಿ ಕಂದಾಯ ಫಲವನ್ನು ಹೇಳುವುದು ಸಂಪ್ರದಾಯ. ಪ್ರತಿಯೊಂದು ನಕ್ಷತ್ರಕ್ಕೂ ಒಂದು, ಎರಡು, ಮೂರನೆಯ ಕಂದಾಯವೆಂದು ಪಂಚಾಂಗ ಕರ್ತರೂ ಜೋಹಿಸರೂ ಗುಣಿಸಿ ಹಾಕಿದ್ದಾರೆ. ಮೂರರಲ್ಲೂ ಅಂಕಿ ಇದ್ದರೆ ಒಳ್ಳೆಯದೆಂದೂ, ಮೊದಲಲ್ಲಿ ಸೊನ್ನೆ ಇದ್ದರೆ ರೋಗವುಂಟಾಗುವುದೆಂದೂ, ಎರಡನೆಯದರಲ್ಲಿ ಸೊನ್ನೆ ಇದ್ದರೆ ಭಯ ಸಂಭವಿಸುವುದೆಂದೂ, ಕೊನೆಯಲ್ಲಿ ಸೊನ್ನೆ ಇದ್ದರೆ ದ್ರವ್ಯ ನಾಶವಾಗುವುದೆಂದೂ, ಎಲ್ಲಾ ಸೊನ್ನೆಗಳೇ ಆದರೆ ಪ್ರಾಣಕ್ಕೆ ಅಪಾಯವೆಂದೂ ಜೋಯಿಸರು ಹೇಳಿದರು". (ಅದೇ) ಇಲ್ಲಿ ರೈತರು ತಮ್ಮ ತಮ್ಮ ನಕ್ಷತ್ರಕ್ಕೆ ಎಲ್ಲಿ ಸೊನ್ನೆ ಬಿದ್ದಿದೆ ಎಂದು ಕುತೂಹಲದಿಂದ ತಿಳಿಯುತ್ತಾರೆ. ಈ ಕಂದಾಯದ ಫಲ ಜೀವನದ ಕಷ್ಟಸುಖಗಳ ವಿವರಣೆಯಾಗಿದೆ. ಕೆಲವೊಮ್ಮೆ ಇದು ಸುಳ್ಳು ಆಗುತ್ತದೆ ಎಂದು ನಾಣಿ ಹೇಳುವ ಮಾತು "ನನಗೆ ಹೋದ ಸಲ ಮೂರು ಸೊನ್ನೆ ಬಿದ್ದಿತ್ತು. ಸತ್ತು ಹೋಗುತ್ತೇನೆಂದು ತಿಳಿದಿದ್ದೆ. ಆದರೆ ಇನ್ನೂ ಕಲ್ಲುಗುಂಡಾಗಿಯೇ ಇದ್ದೇನೆ" ಎಂದನು. (ಅದೇ; ಪು.೧೨೧) ಬದುಕಿಗೆ ಶಾಸ್ತ್ರವು ಒಂದು ಊರುಗೋಲು. ಕಷ್ಟ ಕಾಲದಲ್ಲಿ ಶಾಸ್ತ್ರದ ನಂಬಿಕೆ ಅನಿವಾರ್ಯ ಎಂಬುದನ್ನು ಗ್ರಾಮೀಣ ಜನ ಭಾವಿಸಿರುವುದನ್ನು ಲೇಖಕರು ಇಲ್ಲಿ ತಿಳಿಯಪಡಿಸಿದ್ದಾರೆ.

ಕೃಷಿಕರು ವರ್ಷದ ಮೊದಲಲ್ಲಿ ತಮ್ಮ ಕೃಷಿ ಕೆಲಸವನ್ನು ಒಂದು ಒಳ್ಳೆಯ ವ್ಯವಸ್ಥೆಯಲ್ಲಿ ಇಟ್ಟುಕೊಂಡಿರುವುದು ಗಮನಾರ್ಹವಾದ ಸಂಗತಿ. ಇದು ಹೊನ್ನಾರು ಕಟ್ಟುವ ಪದ್ಧತಿ. ಈ ಪದ್ಧತಿಯು ಸಹ ಯುಗಾದಿ ಹಬ್ಬದ ನಂತರವೇ ನಡೆಯುತ್ತದೆ. ಹೊನ್ನಾರು ಎಂದರೆ "ಯಾವ ಹೆಸರಿನವನು ಯಾವ ಬಣ್ಣದ ಎತ್ತುಗಳೊಂದಿಗೆ ಮೊದಲು ಜಮೀನನ್ನು ಉಳಬೇಕೆಂಬುದು. ಯುಗಾದಿ ಹಬ್ಬವಾದ ಮೇಲೆ ಈ ಹೊನ್ನಾರು ಕಟ್ಟುವವರೆಗೆ ಯಾರೂ ಸ್ವತಂತ್ರವಾಗಿ ಉಳಕೂಡದು. ಯುಗಾದಿಯ ಹೊತ್ತಿಗೆ ಪೈರೆಲ್ಲಾ ಕಟಾವಾಗಿರುವುದರಿಂದ ಹೊಸ ಪೈರಿಗೆ ಹೊಸ ವರ್ಷದ ನಂತರವೇ ಉಳಬೇಕಾಗುತ್ತದೆ. ಯಾರ ಹೆಸರಿಗೆ ಈ ಹೊನ್ನಾರು ಕಟ್ಟುವ ಗೌರವ ಬರುತ್ತದೋ ಅವನಿಗೆ ಆ ದಿವ ಸ್ವಲ್ಪ ದೊಡ್ಡಸ್ತಿಕೆ ಹೆಚ್ಚು. ಜೋಹಿಸರು ಇನ್ನೂ ಕೂಡ ಪ್ರತಿ ವರ್ಷವೂ ಒಬ್ಬೊಬ್ಬರಿಗೆ ಬರುವಂತೆ ಹೇಳುತ್ತಾರೆ. ನಾವು ಹೇಳುವ ವರ್ಷ ಈ

ಗೌರವವು ರಂಗೇಗೌಡನಿಗೆ ಬಂದಿತು. ಹೊನ್ನಾರು ಕಟ್ಟುವುದಕ್ಕೆ ಯುಗಾದಿಯಾದ ನಾಲ್ಕನೆಯ ದಿವಸವು ಗೊತ್ತು ಮಾಡಲ್ಪಟ್ಟಿತ್ತು. ಆ ದಿನ ಬೆಳಿಗ್ಗೆ ನಮ್ಮ ಊರ ಬ್ರಾಹ್ಮಣರು ಪೇಟೆಯ ರೈತರೂ ನದಿಯಲ್ಲಿ ಸ್ನಾನ ಮಾಡಿ ಹಣೆಗೆ ನಾಮ ಅಕ್ಷತೆ ಮುಂತಾದುವನ್ನು ಇಟ್ಟುಕೊಂಡು, ದೇವಸ್ಥಾನದಲ್ಲಿ ಸೇರಿದರು. ದೇವರಿಗೆ ಮಂಗಳಾರತಿ ಆದನಂತರ ರಂಗನ ಎತ್ತಿಗೆ ಸುಮಂಗಲೆಯರು ಅರಿಸಿನ ಕುಂಕುಮ ಹಚ್ಚಿದರು. ಅರ್ಚಕರು, ಎಲ್ಲರಿಗೂ ತೀರ್ಥಪ್ರಸಾದಗಳಾದ ನಂತರ ರಂಗನ ಕೊರಳಿಗೆ ಒಂದು ಮಾಲೆಯನ್ನು ಹಾಕಿ "ಬರುವ ವರ್ಷ ಲೋಕದಲ್ಲೆಲ್ಲಾ ಹದಿನಾರು ಆಣೆ ಪೈರು ಬೆಳೆಯಲಿ" ಎಂದರು. ಎತ್ತುಗಳ ಕೋಡುಗಳಿಗೆ ಹೂಗಳನ್ನು ಕಟ್ಟಿದ ನಂತರ ದೇವಸ್ಥಾನದಿಂದ ಎಲ್ಲರೂ ಹೊರಟರು. ....

ಹೊನ್ನಾರಿನ ಎತ್ತಿಗೆ ಮೆರವಣಿಗೆಯಲ್ಲಿ ಮೊದಲ ಸ್ಥಾನ. ಅದಕ್ಕೆ ಸುಮಂಗಲಿಯರೆಲ್ಲ ಹಣೆಗೆ ಹರಿಸಿನ ಕುಂಕುಮ ಹಚ್ಚಿ ಅವುಗಳಿಗೆ ತಿನ್ನಲು ಬಾಳೆಯ ಹಣ್ಣುಗಳನ್ನು ಅಕ್ಕಿಯನ್ನು ಕೊಟ್ಟು ಪೂಜೆ ಮಾಡುತ್ತಾರೆ. ಹೊನ್ನಾರಿನ ಯಜಮಾನ ರಂಗನಿಗೆ ಪೂಜೆ ಮಾಡಿ ಹೂವಿನಹಾರ ಹಾಕಿ ನಂತರ ಎತ್ತಿಗೆ ಪೂಜೆ ಮಾಡುತ್ತಾರೆ. ಹೊನ್ನಾರಿನ ಯಜಮಾನನಾದ ರಂಗನ ಹೊಲವನ್ನು ಸುಮಾರು ಐವತ್ತು ಜತೆ ಎತ್ತುಗಳು ಒಂದು ಗಳಿಗೆಗೆ ಉತ್ತು ಅನಂತರ ಆ ಎತ್ತುಗಳು ತಮ್ಮ ತಮ್ಮ ಹೊಲಗಳಿಗೆ ಹೋಗಿ ಒಂದೊಂದು ಸಾಲನ್ನು ಉತ್ತು ಮನೆಗೆ ಹೊರಡುತ್ತವೆ. ಹೊನ್ನಾರಿನ ಯಜಮಾನ ರಂಗ ಮನೆಗೆ ಹಿಂತಿರುಗಿದಾಗ ಮನೆಯ ಒಡತಿ ಅವನಿಗೆ ಆರತಿ ಎತ್ತಿ ದೃಷ್ಟಿ ತೆಗೆಯುತ್ತಾಳೆ". (ಅದೇ; ಪು.೧೨೧-೧೨೨) ಹೀಗೆ ಗೊರೂರಿನಲ್ಲಿ ಯುಗಾದಿ ಹಬ್ಬದ ಆಚರಣೆ ಅತಿ ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಿಸುವುದನ್ನು ಗೊರೂರವರು 'ನಮ್ಮೂರಿನ ರಸಿಕರು' ಕೃತಿಯಲ್ಲಿ ಮನೋಜ್ಞವಾಗಿ ತಿಳಿಸಿದ್ದಾರೆ. ಈ ಕಾರಣದಿಂದಲೇ ಹಳ್ಳಿಯ ಹಬ್ಬಗಳ ಆಚರಣೆಯನ್ನು ವಿಶೇಷ ವೈಶಿಷ್ಟ್ಯಪೂರ್ಣ ಎಂದು ಕರೆಯುವುದು. ಗ್ರಾಮೀಣ ಜೀವನದ ಇಂತ ಅಂಶಗಳು ಲೇಖಕರ ಕೃತಿಗಳಲ್ಲಿ ಅನಾವರಣಗೊಂಡಿರುವುದರಿಂದ ಗ್ರಾಮೀಣ ಸೊಗಡು ಇವರ ಕೃತಿಗಳ ವಿಶೇಷತೆ ಎಂದು ನಾವು ಕರೆದಿರುವುದು.

'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯ 'ಜಾನಪದ ಜೀವನಕ್ಕೆ ದೀಪಾವಳಿಯ ಸ್ಫೂರ್ತಿ' ಎಂಬ ಪ್ರಬಂಧದಲ್ಲಿ ನಾವು ಆಚರಿಸುವ ದೀಪಾವಳಿ ಹಬ್ಬದ ಬಗ್ಗೆ ಗೊರೂರವರು ಕೊಡುವ ವಿವರಣೆ ಸವಿಸ್ತಾರವಾಗಿದೆ; ಅಷ್ಟೇ ಸಮ್ಮತವಾಗಿದೆ. ಹಬ್ಬಗಳನ್ನು ಆಚರಿಸುವಾಗ ಇಂತಹ ವಿವರಣೆಗಳನ್ನು ತಿಳಿದು ಆಚರಿಸಿದಾಗ ಅದು ಅರ್ಥಪೂರ್ಣ ಆಚರಣೆಯಾಗುತ್ತದೆ. ಪ್ರತಿಹಬ್ಬಗಳು ನಮ್ಮ ಜೀವನವನ್ನು ತಿದ್ದಬೇಕು, ಜೀವನಕ್ಕೆ ಸ್ಫೂರ್ತಿ ತುಂಬಿ ಕೊಡಬೇಕು ಎಂಬುದು ನಮ್ಮ ಹಿರಿಯರ ಉದ್ದೇಶವಾಗಿದೆ. ಇಂತಹ ಮೂಲಭೂತವಾದ ಘನೋದ್ದೇಶವನ್ನು ಮರೆತು ಹಬ್ಬಗಳನ್ನು ಬರಿ ವೈಭವ ಆಡಂಬರಕ್ಕೆ ಆಚರಿಸುವ ಮನೋಧರ್ಮವನ್ನು ಇಂದು ನಗರ ಜೀವನದಲ್ಲಿ ಯಥೇಚ್ಛವಾಗಿ ನೋಡುತ್ತಿದ್ದೇವೆ. ಈ ಪ್ರಬಂಧದಲ್ಲಿ ಗೊರೂರವರ ಐತಿಹ್ಯ ಜ್ಞಾನ ಪುರಾಣ ಪರಿಚಯ ನಮಗೆ ಚೆನ್ನಾಗಿ ಮನವರಿಕೆಯಾಗುತ್ತದೆ.

"ದೀಪಾವಳಿ ಹಬ್ಬ ನಮ್ಮ ಮನೆಗಳಲ್ಲಿ ಆನಂದದ ಸೊಡರನ್ನು ಹತ್ತಿಸುವ ಹಬ್ಬ. ಯುವಕ ಯುವತಿಯರ ದುಮ್ಮಾನುಗಳನ್ನು ಬಿರುಗಾಳಿಗೆ ತೂರಿ ಸುಮ್ಮಾನಗಳ ಮಿಂಚಿನ ಕುಡಿಯನ್ನು ಹೊಳೆಸಿ ಬೀಗ ಬೀಗತಿಯರ ಆಕ್ರೋಶಗಳನ್ನು ಶಾಂತಿ ಮಾಡಿ ಆನಂದದ ಬೆಳಕನ್ನು ಅವರಲ್ಲಿ ಮಿಂಚಿಸುವ ದೀಪಗಳ ಸಾಲಿನ ಹಬ್ಬ ಇದು. ಈ ಹಬ್ಬ ನಮ್ಮಲ್ಲಿ ವಿವಾಹಕ್ಕಿಂತ ಹೆಚ್ಚು ಸಂಭ್ರಮದ ಹಬ್ಬ. ವಿವಾಹದ ಹೊಸ ಪರಿಚಯ ಸಂಕೋಚದಲ್ಲಿ ಹೊಸ ಹೆಂಡತಿಯನ್ನು ಕದ್ದು ನೋಡುತ್ತಿದ್ದ ಗಂಡ ಇಂದು ಅವಳೊಡನೆ ಸ್ವಲ್ಪ ಸಲಿಗೆಯಿಂದ ಪ್ರೇಮದ ಸಂಭಾಷಣೆಯನ್ನು ಮಾಡಬಹುದು. ಧರ್ಮದ ಹಿನ್ನೆಲೆಯಲ್ಲಿ ನಾವು ಆಚರಿಸುವ ಹಬ್ಬಗಳೆಲ್ಲವು ಧರ್ಮಕ್ಕೆ ವಿರುದ್ಧವಲ್ಲದ ಲೌಕಿಕ ಆನಂದವನ್ನು ಕೊಟ್ಟು ನಮಗೆ ಅಧ್ಯಾತ್ಮಿಕ ಆನಂದ ವನ್ನು ಕೊಡುತ್ತವೆ. ನಮ್ಮ ಬಾಳಪಥಕ್ಕೆ ಬೆಳಕು ಕಾಣಲಿ ಎಂಬುದು ದೀಪಾವಳಿ ಆಶಯ. ನಮ್ಮ ಅಧ್ಯಾತ್ಮದ ಬಾಳು ಬೆಳಗಬೇಕು ಎಂಬ ಕಾರಣಕ್ಕಾಗಿ ದೀಪಾವಳಿಯಲ್ಲಿ ಆತ್ಮದ ಜ್ಯೋತಿಯನ್ನು ಬೆಳಗಿಸಿಕೊಳ್ಳುತ್ತೇವೆ. ವಾಮನ ಅವತಾರದಲ್ಲಿ ಪರಮಾತ್ಮನಿಂದ ನಾಶ ಹೊಂದಿದ ಬಲಿಯನ್ನು ನರಕಾಸುರನನ್ನು ದೀಪಾವಳಿಯ ಸಂದರ್ಭದಲ್ಲಿ ನಾವು ಸ್ತುತಿಸುತ್ತೇವೆ. ಜನ ಕಂಟಕನಾದ ನರಕಾಸುರ ಪರಮಾತ್ಮನ ಕೈಯಲ್ಲಿ ಮರಣ ಹೊಂದಿಗಾಗ ಅವನ ತಾಯಿ ದುಃಖಪಡುವ ಬದಲು ಜಗತ್ತಿಗೆಲ್ಲಾ ಸುಖವಾಗಲಿ ಎಂದು ಆಶಿಸುತ್ತಾಳೆ. ಬಲಿ ವಾಮನನ ಕೃಪೆಯಿಂದ ತನ್ನ ಅಹಂಕಾರವನ್ನು, ದುರಾಸೆಯನ್ನು ಕಳೆದುಕೊಳ್ಳಲು ಸಾಧ್ಯವಾಯಿತು. ವಾಮನನ ಒಟ್ಟು ಮೂರು ಹೆಜ್ಜೆ ಭೂಮಿಯನ್ನು ಬಲಿಯಲ್ಲಿ ಬೇಡಿದಾಗ ಬಲಿಗೆ ಆಶ್ಚರ್ಯವಾಗುತ್ತದೆ. ಅದಕ್ಕೆ ಉತ್ತರವಾಗಿ ವಾಮನ ಹೇಳುವ ಮಾತು ನನಗೆ ಎಷ್ಟು ಅವಶ್ಯಕವೋ ಅಷ್ಟನ್ನು ಮಾತ್ರ ಬೇಡುತ್ತೇನೆ ಎಂದು ಹೇಳಿ ಅವಶ್ಯಕ ಇದ್ದಷ್ಟು ಮಾತ್ರ ಪಡೆಯುವುದೇ ನಿಜವಾದ ಐಶ್ಚರ್ಯ" ಎಂಬ ಸೂತ್ರವನ್ನು ಹೇಳುತ್ತಾನೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್;೧೯೬೨; ಪು.೩೦-೩೧) ಬಲಿಯು ವಿಷ್ಣುವಿನ ಪದತಲಕ್ಕೆ ತನ್ನ ಶಿರವನ್ನು ಕೊಟ್ಟಾಗ ಇನ್ನು "ನನಗೆ ಅನವರತ ನರಕದ ಭಯವಿಲ್ಲ. ಯೋಗ್ಯರ ಕೈಯಿಂದ ದಂಡಿತನಾಗುವುದು ಜೀವಿಗೆ ಶ್ಲಾಘ್ಯವೇ ಸರಿ" (ಅದೇ; ಪು.೩೯) ಎಂದು ಅಭಿಮಾನಪಡುತ್ತಾನೆ.

ಹೀಗೆ ವಾಮನ ಬಲಿಯನ್ನು ದೇವತೆಗಳಿಗೂ ಪ್ರವೇಶ ಮಾಡಲು ಅಸಾಧ್ಯವಾದ ಸುತಲಕ್ಕೆ ಅವನ ಬಂಧು ಮಿತ್ರರರ ಒಡಗೂಡಿ ಕಳುಹಿಸುತ್ತಾನೆ. ಮುನಿಗಳಿಗೂ ಸಹ ದರ್ಶನಕ್ಕೆ ಸುಲಭವಲ್ಲದ ಪರಮಾತ್ಮನು ಬಲಿಯ ಅರಮನೆಯ ಮುಂದೆ ಗದಾಪಾಣಿಯಾಗಿ ನಿಲ್ಲುತ್ತಾನೆ. ಹೀಗೆ ಬಲಿಯ ಮೋಹವನ್ನು ಕಳೆದು ವಿಷ್ಣು ಅವನ ಕಣ್ಣನ್ನು ತೆರೆಸುತ್ತಾನೆ. ಬಲಿಯ ಅಪಜಯವನ್ನು ಮಹಾತ್ಮರ ವಿಜಯಕ್ಕೆ ಸರಿಸಾಟಿ ಎಂದು ಗೊರೂರರವರು ಹೇಳಿ ಸತ್ಯದರ್ಶಿಗಳಿಗೆ ಎಂದೆಂದಿಗೂ ಅಪಜಯವಿಲ್ಲ ಎಂದು ತೀರ್ಮಾನದ ಮಾತನ್ನು ತಿಳಿಸಿ ಗಾಂಧೀಜಿಯು ಸಹ ಬಲಿಯ ಮಾರ್ಗವನ್ನು ಅನುಸರಿಸಿ ದೇಶದ ಜನತೆಗೆ ಆದರ್ಶದ ಹಾದಿಯನ್ನು ತೋರಿಸಿಕೊಟ್ಟರು ಎಂದು ಗೊರೂರರವರು ತಿಳಿಸುತ್ತಾರೆ. ಹೀಗೆ

ದೀಪಾವಳಿಯ ಕತೆಯನ್ನು ಸ್ವಾರಸ್ಯವಾಗಿ ಹೇಳುವುದರ ಜತೆಗೆ ಆಚರಣೆಯ ಔಚಿತ್ಯವನ್ನು ಲೇಖಕರು ತಮ್ಮ ಪ್ರಬಂಧದಲ್ಲಿ ತಿಳಿಸಿರುವುದು ವಿಶಿಷ್ಟ ಸಂಗತಿ ಆಗಿದೆ.

'ಗೋಪುರದ ಬಾಗಿಲು' ಕೃತಿಯ 'ಮಾವನಿಗೆ ಮೊದಲ ದೀಪಾವಳಿ' ಎಂಬ ಕತೆಯಲ್ಲಿ ಗೊರೂರವರು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಬೀಗರು ಕೊಡುವ ತೊಂದರೆಯ ಬಗ್ಗೆ ವ್ಯಾವಹಾರಿಕವಾಗಿ ಆಡಿರು ಮಾತು ಅವರ ಹಾಸ್ಯ ಪ್ರವೃತ್ತಿಗೆ ನಿದರ್ಶನವಾಗಿದೆ. ಮೊದಲ ದೀಪಾವಳಿಗೆ ಅಳಿಯನ್ನು ಕರೆಸುವುದು ನಮ್ಮಲ್ಲಿ ಸಂಪ್ರದಾಯ. ಆದರೆ ಈ ಕತೆಯಲ್ಲಿ ಅಳಿಯ ಶ್ರೀನಿವಾಸ ಮಾವನ ಮನೆಗೆ ಬರಲಾಗುವುದಿಲ್ಲ. ಆದರೂ ಶ್ರೀನಿವಾಸನ ತಂದೆ ರಂಗಣ್ಣ ತಾಯಿ ಗಜಲಕ್ಷ್ಮಿ ಹಬ್ಬಕ್ಕೆ ಬೀಗರ ಮನೆಗೆ ಹೋಗುವುದಕ್ಕೆ ನಿಶ್ಚಯಿಸುತ್ತಾರೆ. ಅವರ ಮಾತು ತಾವು ಹಬ್ಬಕ್ಕೆ ಹೋಗದಿದ್ದರೆ "ಬೀಗರು ಕೊಡಬೇಕಾದ ಉಡುಗೊರೆ ಸನ್ಮಾನಗಳೆಲ್ಲ ಅವರಿಗೆ ಉಳಿದು ಹೋಯಿತಲ್ಲ? ಈಗಿಲ್ಲದಿದ್ದರೆ ನಾಳೆ ಕೊಡುತ್ತಾರೆಯೇ?" ಎಂದು ಆಲೋಚಿಸುತ್ತಾರೆ. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೪; ಪು.೧೫೧) ರಂಗಣ್ಣನವರು ದೀಪಾವಳಿಯ ಆಚರಣೆ ಬಗ್ಗೆ ಆಡುವ ಮತ್ತೊಂದು ಮಾತು "ದೀಪಾವಳಿ ಬರುವುದು, ಬೀಗರು ಬೀಗರು ಸೇರಿ ಸಂತೋಷವಾಗಿ, ಮದುವೆಯ ಕಾಲದಲ್ಲಿ ಸಂಭವಿಸಿದ ಅಚಾತುರ್ಯಗಳನ್ನು ಮರೆತು ಸ್ನೇಹ ಬಾಂಧವ್ಯಗಳನ್ನು ಮುಂದುವರಿಸಲು ದೀಪಾವಳಿ ಕಾರಣವಾಗಬೇಕು" (ಅದೇ) ಎಂದು ಹೇಳುತ್ತಾರೆ. ನಾರಣಪ್ಪನವರು ಹಬ್ಬಕ್ಕೆ ಬೀಗರು ಬಂದು ಕೊಟ್ಟು ತೊಂದರೆಯನ್ನು ಅತಿ ಕಷ್ಟಪಟ್ಟು ತಡೆದುಕೊಳ್ಳುತ್ತಾರೆ. ರಂಗಣ್ಣ ಉಂಗುರವನ್ನು ಗಿಟ್ಟಿಸಿ "ಇದು ಅಳಿಯನಿಗೆ ದೀಪಾವಳಿಯೂ ಅಲ್ಲ. ಮಗನಿಗೆ ದೀಪಾವಳಿಯೂ ಅಲ್ಲ. ನನಗೇ ದೀಪಾವಳಿ - ಮಾವನಿಗೆ ದೀಪಾವಳಿ" (ಅದೇ; ಪು.೧೬೪) ಎಂದು ಗೇಲಿ ಮಾತನ್ನು ಆಡುವುದರ ಮೂಲಕ ತಮ್ಮ ದುರಾಸೆಯನ್ನು ಪೂರೈಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಲೋಭಿ ಜನರು ಇಂತಹ ಹಬ್ಬಗಳಲ್ಲಿ ವರ್ತಿಸುವ ಸಣ್ಣ ರೀತಿಯನ್ನು ಗೊರೂರವರು ಅತ್ಯಂತ ರಸಿಕತೆಯಿಂದ ಈ ಭಾಗದಲ್ಲಿ ಚಿತ್ರಿಸಿದ್ದಾರೆ. ಹಬ್ಬಗಳ ಆಚರಣೆಯಲ್ಲಿ ವ್ಯಕ್ತಿಗಳ ವ್ಯಕ್ತಿತ್ವ ಗುಣವೂ ಬಯಲಾಗುತ್ತದೆ ಎಂಬುದಕ್ಕೆ ಈ ಕಥಾ ಪ್ರಸಂಗ ಸಾಕ್ಷಿಯಾಗಿದೆ.

'ಮೆರವಣಿಗೆ' ಕಾದಂಬರಿಯಲ್ಲಿ ಗೌರಿಹಬ್ಬದ ಆಚರಣೆಯನ್ನು ಗೊರೂರವರು ವಿವರಿಸಿದ್ದಾರೆ. ಗ್ರಾಮೀಣ ಪರಿಸರದಲ್ಲಿ ಗೌರಿ ಹಾಗೂ ಗಣೇಶನ ಹಬ್ಬ ದೊಡ್ಡ ಹಬ್ಬ. ಗೌರಿ ಹಬ್ಬದಲ್ಲಿ ಹೆಣ್ಣು ಮಕ್ಕಳ ಸಡಗರ ಅಪಾರವಾದದ್ದು. "ಗೌರಿಹಬ್ಬದ ದಿನ ಬೆಳಗ್ಗೆ ಜೋಯಿಸರು ಪಲ್ಲಕ್ಕಿಯನ್ನು ತೆಗೆಸಿ ಕೊಂಡು ಗೌರಿಯನ್ನು ಆಹ್ವಾನಿಸಿಕೊಂಡು ಬರಲು ನದಿಗೆ ಹೋಗುತ್ತಾರೆ. ಅದೇ ಸಮಯದಲ್ಲಿ ನದಿಯಲ್ಲಿ ಸ್ತ್ರೀಯರೆಲ್ಲಾ ಸ್ನಾನಕ್ಕೆ ನೆರೆಯುತ್ತಾರೆ. ಅವರ ಅರಸಿನ ಕುಂಕುಮಗಳಿಂದ ಅರ್ಚನೆಗೊಂಡ ನದಿನೀರು ಬಣ್ಣ ಬಣ್ಣಗಳುಳ್ಳವಾಗುತ್ತದೆ. ಅವರು ನದಿಯನ್ನು ಪೂಜಿಸುವ ಹೂಗಳು ದೋಣಿಗಳಂತೆ ಕಣ್ಣಿಗೆ ಕಾಣುವಷ್ಟು ದೂರವೂ ತೇಲಿಕೊಂಡು ಹೋಗುತ್ತದೆ. ಅರಸಿನ ಕುಂಕುಮಗಳ ಕಾಂತಿಯಿಂದ ನದಿ

ನೀರು ಕಾಮನಬಿಲ್ಲಿನಂತೆ ತೋರುತ್ತದೆ. ನದಿಯ ತೀರದಲ್ಲಿರುವ ಹೆಣ್ಣುಮಕ್ಕಳು ಭಕ್ತಿಯೇ ಮೂರ್ತಿವೆತ್ತಂತೆ ದೇವತೆಗಳಂತೆ ಆ ಜನ ಆವೇಶಪರರಾಗಿರುತ್ತಾರೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು.೯೫) ಜೋಪಿಸರು ಗೌರಿಯನ್ನು ಪಲ್ಲಕ್ಕಿಯಲ್ಲಿ ತರುವಾಗ ಊರ ಬಾಗಿಲಲ್ಲಿರುವ ಮೂರು ಮುಸಲ್ಮಾನರ ಮನೆಗಳು ಗೌರಿಯನ್ನು ಪೂಜಿಸುತ್ತವೆ. "ಮುಸಲ್ಮಾನರಿಗೆ ಗೌರಿಯಲ್ಲಿ ನಂಬಿಕೆಯಿದೆಯೋ ಇಲ್ಲವೋ ಹೇಳಲಾರೆ. ಆದರೆ ಅವರೂ ಎರಡೆರಡು ತೆಂಗಿನ ಕಾಯಿಗಳನ್ನು ತರಿಸಿ ಗೌರಿಗೆ ಇಡಗಾಯಿ ಹಾಕಿಸುತ್ತಾರೆ. ಮುಂದೆ ಪ್ರತಿ ಮನೆಯಲ್ಲಿಯೂ ಸ್ತ್ರೀಯರು ಬಂದು ಪಲ್ಲಕ್ಕಿಯಲ್ಲಿರುವ ಗೌರಿಯನ್ನು ಪೂಜಿಸುತ್ತಾರೆ". (ಅದೇ; ಪು.೯೭) ಇಲ್ಲಿ ಮುಸಲ್ಮಾನರು ಗೌರಿಯನ್ನು ಪೂಜಿಸುವ ರೀತಿ ವಿಶೇಷವಾದ ಸಂಗತಿ. ಗ್ರಾಮೀಣ ಪರಿಸರದಲ್ಲಿ ಇರುವ ಭಾವೈಕ್ಯತೆಗೆ ಮುಸಲ್ಮಾನರ ಈ ಗೌರಿಪೂಜೆ ಸಾಂಕೇತಿಕವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಬೇರೆ ಬೇರೆ ಧರ್ಮಿಯರು ಹೀಗೆ ಎಲ್ಲಾ ಧರ್ಮಗಳ ಉತ್ಸವಗಳಲ್ಲಿ ಒಂದಾಗಿ ಸೇರಿ ಉತ್ಸವಗಳನ್ನು ಆಚರಿಸುವುದು ವಿಶೇಷ ಸಂಗತಿ ಎಂಬಂತೆ ಲೇಖಕರು ಇದನ್ನು ಅಭಿಮಾನದಿಂದ ಉಲ್ಲೇಖಿಸಿದ್ದಾರೆ.

ಬ್ರಾಹ್ಮಣದಲ್ಲಿ ಅಯ್ಯಂಗಾರ್ ಪಂಗಡದವರು ಆಚರಿಸುವ ಭಾಷ್ಯಕಾರರ ತಿರುನಕ್ಷತ್ರವನ್ನು ಗೊರೂರವರು 'ಹಳ್ಳಿಯ ಚಿತ್ರಗಳು' ಕೃತಿಯಲ್ಲಿ ನೈಜವಾಗಿ ಚಿತ್ರಿಸಿದ್ದಾರೆ. "ನಾಮದ ಅಯ್ಯಂಗಾರಿಗಳಿಗೆ ಭಾಷ್ಯಕಾರರ ತಿರುನಕ್ಷತ್ರವೆಂದರೆ ಹತ್ತು ಉಂಡೆ ನಾಮ, ಒಂದು ಸೇರು ಕುಂಕುಮ ವೆಚ್ಚ. ಇದು ಅಯ್ಯಂಗಾರಿಗಳಿಗೆ ಒಂದು ವಿಧವಾದ ಮೊಹರಂ. ಮೈಗೆ ಕೆಂಪು, ಬಿಳಪು ನಾಮ ಬಳಿದಿದ್ದು ಬಳಿದಿದ್ದೆ. ನೋಡಿದವರಿಗಂತೂ ಗಾಬರಿಯಾಗುತ್ತದೆ. ಹೀಗೆ ನಾಮ ಹಾಕಿದ ಅಣ್ಣ ತಮ್ಮಂದಿರನ್ನು ಕಂಡು ಎಷ್ಟೋ ಮಕ್ಕಳು ಚಿಟ್ಟನೆ ಚೀರಿದುದುಂಟು. ಆದರೆ ನಮಗೆಲ್ಲಾ ಆ ದಿವಸ ಆನಂದ. ....ನಾಮವಿಡುವುದರಲ್ಲಿ ಪ್ರಸಿದ್ಧರಾದ ೨-೩ ಕಲಾಕೋವಿದರು ಈ ಕೆಲಸವನ್ನು ಪ್ರಾರಂಭಿಸಿ, ಬಂದವರಿಗೆಲ್ಲಾ ನಾಮ ಹಾಕಲು ಮೊದಲು ಮಾಡುತ್ತಾರೆ. ನಾಮವನ್ನು ಒಂದು ಕ್ರಮದಲ್ಲಿಯೇ ಹಾಕಬೇಕೆಂದು ನಮ್ಮ ಶಾಸ್ತ್ರದಲ್ಲಿ ಹೇಳಿದೆ. ಆದರೆ ಈ ಹಬ್ಬದ ದಿವಸ ಅದನ್ನು ಅನುಸರಿಸಬೇಕಾದುದಿಲ್ಲ. ಊರಿನ ಹುಡುಗರು ಆ ದಿವಸ ೧೨-೧೪-೧೮ ನಾಮಗಳನ್ನು ಹಾಕಿಕೊಳ್ಳುತ್ತಿದ್ದರು. ಅನಂತರ ಹುಡುಗರು ಊರಿನ ಸುತ್ತ ಅವ್ಯವಸ್ಥೆ ಯಿಂದ ರಾಮಾನುಜ ಎಂದು ಕಿರುಚುತ್ತಿದ್ದರು. ಈಚೆಗೆ ನಮ್ಮ ಮಣೇಗಾರರು ಆ ದೆವ್ವದ ಕೂಟಕ್ಕೆ ಒಂದು ವ್ಯವಸ್ಥೆಯನ್ನು ಕೊಟ್ಟರು. ಈ ರೀತಿಯಾಗಿ ನಾಮಧಾರಿಗಳಾದ ಈ ಪಟಾಲಂ ಪೈಕಿ ಒಬ್ಬರಿಗೆ ಭಾಷ್ಯಾಕಾರರೆಂದು ಹೆಸರಿಟ್ಟು ಅವರಿಗೆ ಜಡೆ ಹೆಣೆದು, ಕೈಯಲ್ಲಿ ಮಣಿಯ ಸರವೊಂದನ್ನು ಕೊಟ್ಟರು. ಮತ್ತೊಬ್ಬರು ಅವನ ಶಿಷ್ಯ. ಅವನ ಕೈಯಲ್ಲಿ ಒಂದು ಹುಲ್ಲೆಯ ಚರ್ಮ ಕೊಟ್ಟರು. ಅವರ ಪರಿವಾರಕ್ಕೆ ಸೇರಿದ ಮತ್ತೊಬ್ಬನ ಕೈಯಲ್ಲಿ ಒಂದು ತಿರುಪೆ ಕೊಡೆ; ಅದರೊಳಗೆ ನಾಮ ಮುಂತಾದ ಅಯ್ಯಂಗಾರರ ಅವಶ್ಯಕ ವಸ್ತುಗಳು. ಒಂದು ರಾಮಾನುಜಾಚಾರ್ಯರ ಚಿತ್ರಪಟ. ಇಷ್ಟನ್ನು ತೆಗೆದುಕೊಂಡು ಈ ಅವ್ಯವಸ್ಥಿತ ವಾಗಿ ಕೆಲವು ವೇಳೆ ಭಯಂಕರವಾಗಿ ಕೂಗುತ್ತಿದ್ದ ಬಾಲಕರ ತಂಡವು ಪ್ರತಿ ಮನೆಗೂ ಹೋಗುತ್ತಿದ್ದಿತು.

ಮೊದಲು ಹೋಗಬೇಕಾದವನು ಕೃಷ್ಣಾಜಿನದ ಶಿಷ್ಯ. ಅವನು ಹೋಗಿ ಮನೆಯಲ್ಲಿ ಪ್ರಶಸ್ತವಾದ ಸ್ಥಳದಲ್ಲಿ ಕಷ್ಣಾಜಿನವನ್ನು ಹಾಸುವುದು; ಆಮೇಲೆ ಪಟದ ಶಿಷ್ಯನು ಪಟವನ್ನು ಅದರ ಒಂದು ತುದಿಯಲ್ಲಿ ಗೋಡೆಗೆ ಒದಗಿಸಿಡುವುದು. ಭಾಷ್ಯಕಾರರು ಕೈಯಲ್ಲಿ ಮಣಿಯ ಸರವನ್ನು ಹಿಡಿದುಕೊಂಡು ಗಂಭೀರ ಭಾವದಿಂದ ಪಟದ ಮುಂದೆ ಕೃಷ್ಣಾಜಿನದ ಮೇಲೆ ಕುಳಿತು, ಕೈಯನ್ನು ಮುಗಿದುಕೊಂಡು ಕಣ್ಣುಮುಚ್ಚಿ ಮಣಿಯನ್ನು ಒಂದೊಂದಾಗಿ ಎಣಿಸುತ್ತಾ ಪಿಟಿಪಿಟಿ ಗುಟ್ಟುವುದು. ಶಿಷ್ಯರೆಲ್ಲಾ ರಾಮಾನುಜ ಎಂದು ಕೂಗಿ ನಮಸ್ಕಾರ ಮಾಡುವುದು. ಪ್ರತಿಯೊಂದು ಮನೆಯಲ್ಲಿಯೂ ಭಾಷ್ಯಕಾರರಿಗೆ ಒಂದು ಸೇರು ಅಕ್ಕಿ, ಒಂದಾಣೆ ಕಾಣಿಕೆ ವಸೂಲಿ ಆಗುತ್ತಿತ್ತು. ಆಭಾಷ್ಯಕಾರರ ಶಿಷ್ಯರು ಮಾರನೆ ದಿವಸ ಆ ಹಣ ಮತ್ತು ಅಕ್ಕಿಯನ್ನು ಉಪಯೋಗಿಸಿ ಹುಳಿ ಅನ್ನವನ್ನು ಮಾಡಿಸಿ ಹೊಡೆದು ಬಿಡುತ್ತಾರೆ. ಅಥವಾ ಅವನ್ನು ಬಡ ಬಗ್ಗರಿಗೆ ಕೊಡುವುದೂ ಉಂಟು. ಅಂದಿನ ರಾತ್ರಿ ಉತ್ಸವ ನಡೆಯುವುದಕ್ಕೆ ಮುಂಚೆ ನಾಮ ಹಾಕಿದ ಎಲ್ಲಾ ಹುಡುಗರು ಸಂಜೆ ಹೊಳೆಯಲ್ಲಿ ಸ್ನಾನ ಮಾಡುವುದುಂಟು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೩೭-೩೯) ಈ ಪ್ರಸಂಗದಲ್ಲಿ ಸ್ನಾನಕ್ಕೆ ಹೋಗುತ್ತಿದ್ದ ಹುಡುಗರ ಬಟ್ಟೆಗಳು ನಾಪತ್ತೆ ಆಗಿದ್ದಾಗ ಅವರು ಪಟ್ಟ ಪಾಡನ್ನು ಗೊರೂರವರು ಹಾಸ್ಯವಾಗಿ ನಿರೂಪಿದ್ದಾರೆ. ಸಮಾಜದ ಒಂದು ವರ್ಗದ ಸಂಪ್ರದಾಯದ ಹಬ್ಬವನ್ನು ಅದೇ ವರ್ಗಕ್ಕೆ ಸೇರಿದ ಗೊರೂರವರು ದಾಖಲಿಸಿರುವುದು ಇಲ್ಲಿ ಮುಖ್ಯವಾದ ಸಂಗತಿ. ಈಗ ಗ್ರಾಮೀಣ ಪ್ರದೇಶದಲ್ಲಿಯೂ ಐಯ್ಯಂಗಾರರು ಆಚರಿಸುವ ಭಾಷ್ಯಕಾರರ ಈ ರೀತಿಯ ಉತ್ಸವ ಕಾಣಸಿಗುವುದಿಲ್ಲ. ಆದರೆ ಲೇಖಕರ ಕೃತಿಯಲ್ಲಿ ಕಂಡು ಬರುವ ದಾಖಲೆ ಅತ್ಯಂತ ಸಹಜವೂ ಸ್ವಾರಸ್ಯಕರವೂ ಆಗಿದೆ. ಸಮಾಜದಲ್ಲಿ ಇಂತಹ ಹಬ್ಬಗಳ ವೈಶಿಷ್ಟ್ಯತೆ ಜಾರಿ ಕಣ್ಮರೆಯಾಗುತ್ತಿರುವುದು ಸಹಜ ಸಂಗತಿಯಾದರೂ ಸ್ವಲ್ಪಮಟ್ಟಿಗೆ ವಿಷಾದಕರ ಸಂಗತಿ. ನಾಗರಿಕ ಜನಕ್ಕೆ ಇಂತಹ ವಿಚಾರಗಳು ಮನಸ್ಸಿಗೆ ಸುಳಿಯುವುದೂ ಇಲ್ಲ.

'ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಕೃತಿಯಲ್ಲಿ ದೊಡ್ಡಕಲ್ಲಿನಲ್ಲಿ ಈಜುವ ಪ್ರಸಂಗ ಬರುತ್ತದೆ. ಈ ಪ್ರಸಂಗ ಹುಡುಗರ ಈಜುವ ನೈಪುಣ್ಯತೆಗೆ ನಿದರ್ಶನವಾಗಿದೆ. ಜೊತೆಗೆ ಜಾತಿ ಸಾಮರಸ್ಯ ಭಾವನೆಗೂ ಉತ್ತಮ ಸಾಕ್ಷಿಯಾಗಿದೆ. ಗೊರೂರವರು ಸಾಹಸ ಪ್ರವೃತ್ತಿಯನ್ನು ಮೆಚ್ಚಿ ಮುಕ್ತ ಮನಸ್ಸಿನಲ್ಲಿ ತಿಳಿಸುವ ವ್ಯಕ್ತಿ. ಹಾಗೆಯೇ ಸಮಾಜದಲ್ಲಿ ಸಾಮರಸ್ಯ ವರ್ತನೆಯನ್ನು ಕಂಡಾಗ ಅವರಿಗೆ ಆಗುವ ಸಂತೋಷ ಮಾತಿಗೆ ಮೀರಿದ್ದು. ಹಿರಿಯರಿಗೆ ಮಕ್ಕಳ ಈಜುವ ಶಕ್ತಿಯ ನೈಪುಣ್ಯತೆ ಬಹುಮಟ್ಟಿಗೆ ಗೊತ್ತಿರುವುದಿಲ್ಲ. ನೀರು ಎಂದರೆ ಹುಡುಗರಿಗೆ ಉತ್ಸಾಹ. ಊರಿನಲ್ಲಿ ಚಿಕ್ಕ ಪಿಳ್ಳೆಗಳು ಕೂಡ ಈಜಿನಲ್ಲಿ ನಿಪುಣರು. "ದೊಡ್ಡಕಲ್ಲಿನಲ್ಲಿ ಈಜುವಾಗ ಬ್ರಾಹ್ಮಣ ಒಕ್ಕಲಿಗ ಬೆಸ್ತ ಬೇಡ ತುರಕ ಒಡ್ಡ ಇವೇ ಮುಂತಾದ ವ್ಯತ್ಯಾಸಗಳು ಮರೆಯಾಗುತ್ತದೆ. ಅಲ್ಲಿ ಮುಖ್ಯವಾದುದು ಸಾಹಸ, ಧೈರ್ಯ, ಶಕ್ತಿ ಪ್ರದರ್ಶನ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೪; ಪು.೭) ಎಲ್ಲ ಜಾತಿಯವರು ಇಲ್ಲಿ ಕೂಡಿ ಈಜು ಸ್ಪರ್ಧೆಯಲ್ಲಿ ಭಾಗವಹಿಸುವುದು ಜಾತಿ ಸಾಮರಸ್ಯಕ್ಕೆ ಸಾಕ್ಷಿಯಾಗಿದೆ. ಅಂತರ ಈಜು,

ಮರದ ಈಜು, ಮೊಸಳೆ ಈಜು, ಆನೆ ಈಜು, ನಾಯಿ ಈಜು, ಮೀನು ಈಜು ಈ ರೀತಿಯ ಹಲವು ಈಜುಗಳನ್ನು ನಮ್ಮೂರಿನ ಯುವಕರಲ್ಲಿ ಕಾಣಬಹುದು ಎಂದು ಗೊರೂರರು ಅಭಿಮಾನದಿಂದ ಹೇಳುತ್ತಾರೆ. "ಜಗದ ಸ್ಪರ್ಧೆ ಒದಗಿದರೆ, ಒಲಿಂಪಿಯಾಡಿಗೂ ಈ ಯುವಕರ ಈಜು, ಉತ್ಸಾಹ ಪ್ರೇಕ್ಷಣೀಯ ನೋಟ". (ಅದೇ: ಪು.೮) ನಮ್ಮೂರಿನ ಯುವಕರು ದೊಡ್ಡವರಾದ ಮೇಲೆ ಅವರು ತಮ್ಮ ಬಾಲ್ಯದ ಈಜಿನ ಆಟವನ್ನು ಜ್ಞಾಪಿಸಿಕೊಂಡು ಸುಖಿಸುತ್ತಾರೆ, ನಿಜವಾದ ಸುಖ ಎಂದು ಗೊರೂರರು ಹೇಳುವುದರಲ್ಲಿ ಪೂರ್ಣ ಸತ್ಯವಿದೆ. ಗೊರೂರಿನಲ್ಲಿ ಮಟ್ಟೆಕಲ್ಲು ಮಡುವಿನ ಸಾಹಸವು ದೊಡ್ಡಕಲ್ಲಿನ ಸಾಹಸದಷ್ಟು ಸಾಮಾನ್ಯವಾಗಿಲ್ಲ. ಕಾರ್ತೀಕಮಾಸದ ಹುಣ್ಣಿಮೆಯ ರಾತ್ರಿ ಈಜಿಕೊಂಡು ಮಟ್ಟೆಕಲ್ಲಿಗೆ ಹೋಗಿ ಅಲ್ಲಿ ದೀಪವನ್ನು ಹತ್ತಿಸಿ ಬರುವವನಿಗೆ ಆ ದಿವಸ ದೇವರ ಸನ್ನಿಧಿಯಲ್ಲಿ ಹೂವಿನ ಮಾಲೆಯನ್ನು ಹಾಕಿ ಗೌರವಿಸುತ್ತಾರೆ. ಈ ಒಂದು ಸಾಹಸವನ್ನು ನೋಡಲು ಜನರೆಲ್ಲಾ ಸೇರುತ್ತಾರೆ. ಗ್ರಾಮೀಣ ಪ್ರದೇಶದ ಯುವಕರಲ್ಲಿ ಸಾಹಸ ಪ್ರವೃತ್ತಿ ವಿಷ್ಟು ಸಹಜವಾಗಿ ಕಂಡ ಬರುತ್ತದೆಯೋ ಅದಕ್ಕೆ ಊರಿನವರ ಪ್ರೋತ್ಸಾಹ ಪುರಸ್ಕಾರ ಇದೆ ಎಂಬುದನ್ನು ಗೊರೂರರು ಈ ಸಂದರ್ಭದಲ್ಲಿ ತಿಳಿಸುತ್ತಾರೆ.

ಒಂದು ಕಾಲಕ್ಕೆ ಅಲೆಮಾರಿಯಾಗಿದ್ದ ಮಾನವ ಒಂದು ನಿಶ್ಚಿತ ನೆಲೆಯಲ್ಲಿ ಜೀವಿಸುವುದಕ್ಕೆ ಪ್ರಾರಂಭ ಮಾಡಿದ್ದುದು ಮಾನವನ ನಾಗರಿಕತೆಯ ಇತಿಹಾಸದಲ್ಲಿ ಒಂದು ದೊಡ್ಡ ಮೈಲಿಗಲ್ಲು. ಈ ವೇಳೆಗೆ ಮಾನವನ ಬದುಕಿನಲ್ಲಿ ನಾಗರಿಕತೆಯ ಬೆಳವಣಿಗೆಯ ಅಂಶವನ್ನು ಸಾಕಷ್ಟು ಗುರುತಿಸಬಹುದು. ಮಾನವನ ಸಂಘ ಜೀವನ ಈ ಹಂತದಿಂದ ಪ್ರಾರಂಭವಾಗುತ್ತದೆ. ಸಂಘ ಜೀವನ ಮಾನವನಿಗೆ ಜೀವನ ಸೌಕರ್ಯಕ್ಕೆ ಅನುಕೂಲವಾದಂತೆ ಜೀವನದ ಸಂತೋಷಕ್ಕೂ ಕಾರಣವಾಗುತ್ತದೆ. ಸಂಘ ಜೀವನದಲ್ಲಿ ವ್ಯಕ್ತಿಗಳು ಪರಸ್ಪರ ಅರಿತು ಬಾಳುವುದರಿಂದ ಅವರಿಗೆ ಜೀವನದಲ್ಲಿ ಆನಂದ ಸಹಜವಾಗಿ ಮೂಡಿ ಬರುತ್ತದೆ. ಒಂಟಿ ಬಾಳುವುದಕ್ಕಿಂತ ಇಡಿಯಾಗಿ ಬಾಳುವುದರ ಮೂಲಕ ವ್ಯಕ್ತಿ ಜೀವನದಲ್ಲಿ ಸಂತೋಷವನ್ನು ಕಂಡುಕೊಳ್ಳುವುದರ ಜತೆಗೆ ಅದ್ಭುತ ಸಾಧನೆಗಳನ್ನು ಮಾಡಬಹುದು. ಸಾಮಾಜಿಕ ಬದುಕು ವ್ಯಕ್ತಿಯ ಬದುಕಿನ ಸುಭದ್ರತೆಗೆ ಕಾರಣವಾಗುತ್ತದೆ. ಸಾಮಾಜಿಕ ಜೀವನದಲ್ಲಿ ಸಾಮಾಜಿಕ ಚಟುವಟಿಕೆಗಳ ಮೂಲಕ ವ್ಯಕ್ತಿ ಜೀವನದಲ್ಲಿ ಅಮಿತ ಉತ್ಸಾಹವನ್ನು ಕಂಡುಕೊಳ್ಳುತ್ತಾನೆ. ವ್ಯಕ್ತಿಯ ಏಕಾಂತದ ನೋವು ಮರೆಯಾಗಬೇಕಾದರೆ ಸಾಮಾಜಿಕ ಬದುಕು ಮೂಲ ಕಾರಣವಾಗುತ್ತದೆ ಎಂಬ ತತ್ವವನ್ನು ಸಮಾಜ ವಿಜ್ಞಾನಿಗಳೆಲ್ಲರೂ ಒಪ್ಪಿ ಒಪ್ಪಿತ ಭಾವನೆಯನ್ನು ನುಡಿದಿದ್ದಾರೆ.

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳ ಆಚರಣೆ ಒಂದು ರೀತಿಯಲ್ಲಿ ಸಾಂಘಿಕ ಬದುಕಿಗೆ ಪ್ರೋತ್ಸಾಹಕಾರಿ ಅಂಶವಾದರೆ ಜಾತ್ರೆಗಳು ಮತ್ತೊಂದು ರೀತಿಯಲ್ಲಿ ಪ್ರೋತ್ಸಾಹಕ ಚಟುವಟಿಕೆಯಾಗಿದೆ. ಗ್ರಾಮೀಣ ಸಮಾಜದಲ್ಲಿ ನಾವು ಬಹುಮಟ್ಟಿಗೆ ಕಾಣುವ ಜಾತ್ರೆಗಳು ನಮ್ಮ ದೈವೀ ಶ್ರದ್ಧೆ ಹಾಗೂ ಅದಕ್ಕೆ ಪೂರಕವಾಗಿ ಆಚರಿಸುವ ಚಟುವಟಿಕೆಗಳಿಗೆ ಮೂಲಕಾರಣವಾಗಿದೆ. ಹಬ್ಬಗಳು ಒಂದು ಕುಟುಂಬದ

- ಒಂದು ವರ್ಗದ ಆಚರಣೆಯ ಅಂಶವಾದರೆ ಜಾತ್ರೆಗಳು ಒಂದು ಗ್ರಾಮದ ಸಾಂಗಿಕ ಬದುಕಿಗೆ ಸಾಕ್ಷಿಯಾಗಿರುತ್ತದೆ. ಜಾತ್ರೆಗಳ ಆಚರಣೆಯಲ್ಲಿ ಒಂದು ನಿರ್ದಿಷ್ಟ ಸಂಪ್ರದಾಯಗಳ ಪ್ರಭಾವ ನಮಗೆ ಕಂಡುಬರುವುದಿಲ್ಲ. ಒಂದು ಪರಿಸರದ ಜನ ಸಾಮೂಹಿಕ ಜನ ಆಚರಿಸುವ ಚಟುವಟಿಕೆಯಾಗಿದೆ. ಹಲವು ಬುಡಕಟ್ಟಿನ ಜನ ವೈಯಕ್ತಿಕವಾಗಿ ತಮ್ಮ ಬುಡಕಟ್ಟಿನ ಸಂಪ್ರದಾಯಗಳನ್ನು ಮೀರಿ ಜಾತ್ರೆಗಳ ಆಚರಣೆಯ ಮೂಲಕ ಸಮಾಜದ ಸಾಂಗಿಕ ಭಾವನೆಯನ್ನು ಸೌಹಾರ್ದಯುತ ಬಾಳ್ವೆಯನ್ನು ಪ್ರತ್ಯಕ್ಷವಾಗಿ ಅನಾವರಣ ಗೊಳಿಸುತ್ತದೆ. ಗ್ರಾಮೀಣ ಸಮಾಜದಲ್ಲಿ ಜಾತ್ರೆಗಳು ಬಿಡಿಯಾದ ಗ್ರಾಮೀಣ ಪಂಗಡಗಳನ್ನು ಒಂದು ಗೂಡಿಸುವುದರಲ್ಲಿ ಅತಿ ಪ್ರಧಾನವಾದ ಕಾರ್ಯವನ್ನು ಮಾಡುತ್ತದೆ. ನಮ್ಮ ಹಳ್ಳಿಗಳ ಜಾತ್ರೆಗಳು ಕುಟುಂಬಕ್ಕೆ ಸಂಬಂಧಿಸಿದಂತೆ ಹಲವು ಸಂಪ್ರದಾಯಗಳನ್ನು ಬಿಟ್ಟು ಹೊಸ ರೀತಿಯ ಹುರುಪಿನ ಬದುಕಿಗೆ ನಾಂದಿ ಆಡುವುದನ್ನು ನೋಡುತ್ತೇವೆ. ಈ ದೃಷ್ಟಿಯಿಂದ ಗ್ರಾಮೀಣ ಸಮಾಜದಲ್ಲಿ ಆಚರಿಸುವ ಜಾತ್ರೆ ಗಳಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವುದರ ಜತೆಗೆ ಸಮಾನ ಲಕ್ಷಣಗಳನ್ನು ಕಂಡುಕೊಳ್ಳಬಹುದು.

ಗ್ರಾಮೀಣ ಸಮಾಜದಲ್ಲಿ ಜಾತ್ರೆಗಳ ಆಚರಣೆ ಪುರಾತನ ಸಂಸ್ಕೃತಿಯ ಒಂದು ಲಕ್ಷಣವಾಗಿದೆ. ಜಾತ್ರೆಗಳಲ್ಲಿ ಧಾರ್ಮಿಕ ಶ್ರದ್ಧೆ ಒಂದು ಪ್ರಧಾನ ವಿಷಯವಾಗಿ ಕಂಡುಬಂದರೂ ಅದಕ್ಕೆ ಮೀರಿದ ಸಾಂಗಿಕ ಬದುಕಿನ ಉತ್ಸಾಹ ಮೂಲ ಪ್ರೇರಣೆಯಾಗಿರುತ್ತದೆ. ಈ ಕಾರಣದಿಂದಲೇ ಹಳ್ಳಿಯ ಜಾತ್ರೆಗಳನ್ನು ಊರಿನ ಸಂಭ್ರಮದ ಒಟ್ಟು ಚಟುವಟಿಕೆಯ ಅಂಶವೆಂದು ಸಮಾಜವಿಜ್ಞಾನಿಗಳು ಕರೆದಿದ್ದಾರೆ. ಈ ಜಾತ್ರೆಗಳ ಆಚರಣೆಯಲ್ಲಿ ನಾವು ಉಳಿದ ವಿಷಯಗಳಲ್ಲಿ ಕಾಣುವಂತೆ ಸಾಮಾಜಿಕ ಪಂಗಡಗಳನ್ನು ವರ್ಗಗಳ ರಚನೆಯನ್ನು ಕಾಣಲಾಗುವುದಿಲ್ಲ. ಹಲವು ಕಾರಣಗಳಿಂದ ಬೇರೆಯಾಗಿದ್ದ ಗ್ರಾಮೀಣ ಜನ ಜಾತ್ರೆಗಳ ಆಚರಣೆಯ ಸಂದರ್ಭದಲ್ಲಿ ಒಂದಾಗುವ ಸಂಭ್ರಮದ ಪ್ರವೃತ್ತಿಯನ್ನು ಗುರುತಿಸಬಹುದು. ಹೀಗೆ ಜಾತ್ರೆಗಳನ್ನು ಸಮಾಜದ ಐಕ್ಯತೆಗೆ ಪ್ರೇರಕ ಚಟುವಟಿಕೆ ಎಂದು ಹೇಳುವುದರಲ್ಲಿ ಪೂರ್ಣ ಸತ್ಯಾಂಶವಿದೆ. ಜಾತ್ರೆಗಳು ಜನರ ಸಾಂಸ್ಕೃತಿಕ ಬದುಕಿನಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ವಿವಿಧ ಗ್ರಾಮೀಣ ಕಲೆಗಳು ಆಟಗಳು ಜಾತ್ರೆಯ ಸಂದರ್ಭದಲ್ಲಿ ಗೋಚರವಾಗುವುದಷ್ಟೆ ಅಲ್ಲದೆ ಇವುಗಳ ಬೆಳವಣಿಗೆಗೆ ಜಾತ್ರೆಗಳು ಪ್ರೇರಕ ಎಂಬುದರಲ್ಲಿ ಎರಡು ಮಾತಿಲ್ಲ. ಜಾತ್ರೆಗಳು ಜನರ ಅಧ್ಯಾತ್ಮಿಕ ಭಾವನೆಯನ್ನು ಭದ್ರಗೊಳಿಸುವುದರಲ್ಲಿಯೂ ಮುಖ್ಯ ಪಾತ್ರವಹಿಸುತ್ತದೆ. ಜಾತ್ರೆಗಳ ಅನುಕರಣೆ, ಯಶಸ್ಸಿಗೆ, ವೈಭವಕ್ಕೆ ಆ ಪರಿಸರದ ಜನ ಸಮುದಾಯದ ಸಹಕಾರವೆ ಮೂಲ ಕಾರಣ ಎಂಬುದು ನಮಗೆ ಮನವರಿಕೆಯಾಗುತ್ತದೆ. ಪ್ರತಿ ಹಳ್ಳಿಯ ಜಾತ್ರೆಯೂ ಆಯಾ ಗ್ರಾಮದ ಪ್ರತಿಷ್ಠೆಯ ಸಂಕೇತವಾಗಿರುತ್ತದೆ ಎಂಬ ಒಂದು ಮಾತನ್ನು ಮೆಚ್ಚಿಕೊಳ್ಳಬಹುದು. ಹೀಗೆ ಜಾತ್ರೆಗಳ ಆಚರಣೆಯಲ್ಲಿ ಪೈಪೋಟಿಯ ಸ್ಪರ್ಧಾತ್ಮಕ ಮನೋಧರ್ಮವನ್ನು ಗುರುತಿಸಬಹುದು.

ನಗರ ಜೀವನದಲ್ಲಿ ಜನರ ಬದುಕು ವಿಸ್ತಾರವಾಗಿದೆಯೇ ಹೊರತು ಅವರ ಬಾಂಧವ್ಯದಲ್ಲಿ ಐಕ್ಯತೆಯ ಅಂಶವನ್ನು ಕಾಣುವುದು ಕಷ್ಟವಾಗಿದೆ. ನಗರ ಜೀವನದ ಅಧ್ಯಾತ್ಮಿಕ ಚಟುವಟಿಕೆ ಗ್ರಾಮೀಣ ಪರಿಸರದಲ್ಲಿ ಕಾಣುವಂತೆ ರೂಢ ಮೂಲವಾಗಿ ಕಂಡುಬರುವುದಿಲ್ಲ. ಗ್ರಾಮೀಣ ಜನತೆಗೆ ಜೀವನದಲ್ಲಿ ಐಕ್ಯತೆಗಿಂತ ತಮ್ಮ ವರ್ಗದ ಪ್ರತಿಷ್ಠೆಯ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಕಂಡುಬರುತ್ತದೆ. ಸಾಮೂಹಿಕವಾಗಿ ಸಂತೋಷ ಚಟುವಟಿಕೆಗಳಲ್ಲಿ ಆಸಕ್ತಿ ನಗರವಾಸಿಗಳಲ್ಲಿ ಕಾಣಲು ಸಾಧ್ಯವಿಲ್ಲ. ಈ ಕಾರಣಗಳಿಂದ ನಗರಗಳಲ್ಲಿ ಜಾತ್ರೆಗಳು ಕಂಡುಬರುವುದು ಅತಿ ವಿರಳ. ಗ್ರಾಮೀಣ ಜನರ ಜಾತ್ರೆಗಳ ಸೊಗಡು ಎಲ್ಲ ಕಾರಣದಿಂದಲೂ ವಿಶಿಷ್ಟವಾದದ್ದು, ಅಪೇಕ್ಷಣೀಯವಾದದ್ದು ಎಂಬ ಮಾತನ್ನು ಮರೆಯುವಂತಿಲ್ಲ.

ಗೊರೂರವರು ಗ್ರಾಮೀಣ ಸಂಸ್ಕೃತಿಯ ವಿಶಿಷ್ಟ ಪ್ರತಿನಿಧಿಗಳಾಗಿರುವುದರಿಂದ ಅವರ ಸಾಹಿತ್ಯದಲ್ಲಿ ಗ್ರಾಮೀಣ ಸಂಸ್ಕೃತಿಯ ಒಂದು ಪ್ರಧಾನ ಚಟುವಟಿಕೆಯಾದ ಜಾತ್ರೆಗಳ ಆಚರಣೆಯ ವಿಷಯದಲ್ಲಿ ಅವರು ತೋರಿಸುವ ಆಸಕ್ತಿ ಅದರ ಚಿತ್ರಣದಲ್ಲಿ ತೋರಿಸಿರುವ ನೈಜತೆ ಹಾಗೂ ಕಲಾತ್ಮಕತೆಯನ್ನು ಮರೆಯುವಂತಿಲ್ಲ. ಗೊರೂರಿನ ಪರಿಸರದಲ್ಲಿ ಕಾಣುವ ಜಾತ್ರೆಗಳು ಹಲವು ದೃಷ್ಟಿಯಲ್ಲಿ ಒಂದೇ ರೀತಿಯಲ್ಲಿ ಕಂಡುಬಂದರೂ ಕೆಲವು ದೃಷ್ಟಿಯಲ್ಲಿ ಭಿನ್ನವಾಗಿ ವಿಶೇಷವಾಗಿ ನಮಗೆ ಕಾಣುತ್ತದೆ. ಈ ಕಾರಣದಿಂದೇ ಗೊರೂರವರ ಕೃತಿಗಳಲ್ಲಿ ಕಂಡು ಬರುವ ಜಾತ್ರೆಯನ್ನು ವಿಶೇಷವಾಗಿ ಗಮನಿಸುತ್ತೇವೆ ಹಾಗೂ ನಾವು ಆನಂದಿಸುತ್ತೇವೆ. ಜಾತ್ರೆಗಳ ಆಚರಣೆಯಲ್ಲಿ ಗೊರೂರವರು ಸೂಕ್ಷ್ಮಾತಿ ಸೂಕ್ಷ್ಮ ವಿಷಯಗಳನ್ನು ವಿಚಾರ ಮಾಡಿದ್ದಾರೆ. ಗ್ರಾಮೀಣ ಪರಿಸರದ ವ್ಯಕ್ತಿಯೇ ಆದಕಾರಣದಿಂದ ಗ್ರಾಮೀಣ ಪರಿಸರದಲ್ಲಿ ಆಸಕ್ತಿಯನ್ನು ಹೊಂದಿರುವ ಕಾರಣದಿಂದ ಲೇಖಕರಿಗೆ ಜಾತ್ರೆಗಳ ವೈಭವವನ್ನು ಚಿತ್ರಿಸುವಲ್ಲಿ ಸಹಜವಾಗಿ ಸಂಭ್ರಮ ಮೂಡಿರುವುದು ನಮಗೆ ಗೋಚರವಾಗುತ್ತದೆ. ಗ್ರಾಮೀಣ ಸಂಸ್ಕೃತಿಯ ಅಧ್ಯಯನದ ವ್ಯಕ್ತಿಗಳೆಲ್ಲರೂ ಗೊರೂರವರು ಚಿತ್ರಿಸಿರುವ ಜಾತ್ರೆಗಳ ವೈಭವವನ್ನು ಒಂದು ಪ್ರಧಾನ ವಿಷಯವಾಗಿ ಪರಿಭಾವಿಸುತ್ತಾರೆ. ಗ್ರಾಮೀಣ ಪರಿಸರದ ಜಾತ್ರೆಯ ಆಟಕೂಟಗಳಲ್ಲಿ ನೋಟಗಳಲ್ಲಿ ಗೊರೂರವರು ಒಂದಾಗಿ ಗ್ರಾಮೀಣ ಸೊಗಡಿನಿಂದ ದೂರವಾಗಿ ಉಳಿದಿರುವ ಪಟ್ಟಣದ ವ್ಯಕ್ತಿಗಳ ಮನಸ್ಸನ್ನು ಗ್ರಾಮೀಣ ಸಮಾಜದ ಕಡೆಗೆ, ಸಂಸ್ಕೃತಿಯ ಕಡೆಗೆ ಸೂಜಿಗಲ್ಲಿನಂತೆ ಆಕರ್ಷಿಸುತ್ತಾರೆ.

'ಗರುಡಗಂಬದ ದಾಸಯ್ಯ' ಕೃತಿಯಲ್ಲಿ ಗೊರೂರವರು ತಮ್ಮ ಊರಿನ ಜಾತ್ರೆಯ ಸಂಭ್ರಮವನ್ನು ಚಿತ್ರಿಸುವಾಗ ಅದರ ಹಿನ್ನೆಲೆಯಲ್ಲಿರುವ ಉತ್ಸಾಹವನ್ನು ಕಲಾರಸಿಕತೆಯನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಇಲ್ಲಿಯ ವಿವರಣೆಯನ್ನು ಕಂಡಾಗ ಗ್ರಾಮೀಣ ಜನ ತಮ್ಮ ಬದುಕಿನ ನೋವು-ನಲಿವುಗಳನ್ನು ಮರೆಯಲು ಜಾತ್ರೆಗಳು ಹೇಗೆ ಕಾರಣವಾಗುತ್ತದೆ ಎಂಬುದನ್ನು ತಮ್ಮ ಕಲಾವಂತಿಕೆಯನ್ನು ಪ್ರದರ್ಶಿಸಲು ಜಾತ್ರೆಗಳು ಹೇಗೆ ಸೂಕ್ತ ಸಮಯವಾಗುತ್ತದೆ ಎಂಬುದನ್ನು ಚೆನ್ನಾಗಿ ಮನಗಾಣಬಹುದು. ಪುರುಷರ ಉತ್ಸಾಹ ಜಾತ್ರೆಯ ಕಾಲದಲ್ಲಿ ಒಂದು ರೀತಿಯಾಗಿದ್ದರೆ ಹೆಣ್ಣು ಮಕ್ಕಳ ಸಂಭ್ರಮ ಮತ್ತೊಂದು ರೀತಿಯಲ್ಲಿ

ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತದೆ. ಊರನ್ನು ಶೃಂಗಾರ ಮಾಡಬೇಕು ಎಂಬ ಉತ್ಸಾಹ ಊರಿನವರಿಗೆಲ್ಲಾ ಇರುತ್ತದೆ. ಇದರ ಜೊತೆಗೆ ಸೊಗಸಿನ ರೀತಿಯು ವಿಭಿನ್ನವಾಗಿರುತ್ತದೆ. ಮನೆಯ ಶೃಂಗಾರ, ಮನಸ್ಸಿನ ಶೃಂಗಾರ, ಮೈಯ ಶೃಂಗಾರ ಇವು ಮೂರು ಗೊರೂರಿನ ಜಾತ್ರೆಯ ಸಂದರ್ಭದಲ್ಲಿ ಅಲ್ಲಿಯ ಜನರಲ್ಲಿ ಮುಪ್ಪುರಿಗೊಂಡಿರುತ್ತದೆ. ಸಂಚೆಯ ದೇವರ ಉತ್ಸವದ ಸಂಭ್ರಮ ಹಳ್ಳಿಯ ಹೆಣ್ಣು ಮಕ್ಕಳ ಪಾಲಿಗೆ ರಂಗವಲ್ಲಿಯ ಸೌಂದರ್ಯದ ಸಂಭ್ರಮವಾಗಿರುತ್ತದೆ. "ಅವರು ರಂಗವಲ್ಲಿಗಳನ್ನು ಎಷ್ಟು ಚುರುಕಾಗಿ ಎಷ್ಟು ಶ್ರದ್ಧೆಯಿಂದ ಬೇಜಾರಿಲ್ಲದೆ ಇಡುತ್ತಾರೆ! ಅದರಲ್ಲಿ ಒಬ್ಬೊಬ್ಬರಿಗೂ ಹುರುಡು. ಒಬ್ಬಳು ನಮ್ಮೂರ ತೇರಿನಂತೆ ರಂಗವಲ್ಲಿ ಇಡುತ್ತಾಳೆ. ಮತ್ತೊಬ್ಬಳು ನರಸಿಂಹಸ್ವಾಮಿಯ ದೇವಸ್ಥಾನದಂತೆ; ಇನ್ನೊಬ್ಬಳು ಪ್ರಭಾವಳಿ ಗುರುಡನಂತೆ; ಒಬ್ಬಳು ಸಾವಿರ ದಳದ ಪದ್ಮದಂತೆ; ಮತ್ತೊಬ್ಬಳು ಕಲ್ಕಿಯಂತೆ; ಚಿಗುರಿನೋಪಾದಿಯಲ್ಲಿರುವ ಅವರ ಬೆರಳುಗಳು ಪಾದರಸದಂತೆ ಚಲಿಸುತ್ತವೆ. ....

ಈ ಚಟುವಟಿಕೆಯಲ್ಲಿ ಅವರಿಗೆ ಅವರ ಕೆಲಸದ ಬಗ್ಗೆ ಇರುವ ನಂಬಿಕೆ, ಶ್ರದ್ಧೆ, ಉತ್ಸಾಹ ನಮಗೆ ಗೋಚರವಾಗುತ್ತದೆ. ಇದಕ್ಕೆಲ್ಲಾ ನಮ್ಮ ದೇವರೇ ಕಾರಣ" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೪೪) ಎಂದು ಗೊರೂರವರು ನುಡಿಯುತ್ತಾರೆ. ಸಾಮಾನ್ಯ ಕೇರಿಯಲ್ಲಿ ಅಧ್ಯಾತ್ಮಿಕ ಹಿನ್ನೆಲೆ ಯಲ್ಲಿ ಗೊರೂರವರು ನೀಡಿರುವ ವಿಚಾರ ಇಲ್ಲಿ ಗಮನಾರ್ಹ. ಪು.ತಿ.ನ.ರವರ 'ರಂಗವಲ್ಲಿ' ಕವನದ ಭಾವನೆಗಳು ಈ ಸಂದರ್ಭದಲ್ಲಿ ಓದುಗರಿಗೆ ನೆನಪು ಬಂದರೆ ಆಶ್ಚರ್ಯವಿಲ್ಲ. ನರಸಿಂಹ ದೇವರ ಜಾತ್ರೆಯಲ್ಲಿ ಉತ್ಸವದ ವೈಭವ ಅವರ್ಣನೀಯ. ಇಷ್ಟಾದರೂ ಗೊರೂರವರು ಆ ವೈಭವದ ಉತ್ಸವ ಗಳನ್ನು ತಮ್ಮದೇ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ. ಈ ಉತ್ಸವಗಳು ಜನರ ಆಸ್ತಿಕತೆಗೆ ಒಂದು ರೀತಿಯಲ್ಲಿ ನಿದರ್ಶನವಾದರೆ ಪುರುಷರ ಸಾಹಸಕ್ಕೆ ಪ್ರತಿ ಸಾಕ್ಷಿಯಾಗಿದೆ. ಬಹುಭಾರದ ವಾಹನಗಳ ಉತ್ಸವವನ್ನು ಹಲವು ಅಡ್ಡೆಗಳಲ್ಲಿ ಬಿಜಯ ಮಾಡಿಸುವಾಗ ಜನರು ತೋರಿಸುವ ಉತ್ಸಾಹ ಚೋತೋಹಾರಿ ಯಾಗಿರುತ್ತದೆ. ಮನೆಯ ಬಾಗಿಲಿಗೆ ಉತ್ಸವ ಬಂದಾಗ ಮನೆಯ ಯಜಮಾನ ಭಕ್ತಿಪೂರ್ವಕವಾಗಿ ಸ್ವಾಗತ ಮಾಡುತ್ತಾನೆ. ಊರಿನ ವಾತಾವರಣದಲ್ಲಿಯೇ ಭಕ್ತಿಭಾವದ ಸ್ಥಿತಿ ಉತ್ಸವದ ಜತೆಗೂ ವಿಜೃಂಭಿಸಿರುತ್ತದೆ. ಲೇಖಕರ ಮಾತಿನಲ್ಲಿ ಈ ಉತ್ಸವದ ವಿವರಣೆಯನ್ನು ಕೇಳುವುದು ಅತ್ಯಂತ ಮುದದ ವಿಷಯವಾಗಿರುತ್ತದೆ. "ಆ ದೇವರನ್ನು ಊರ ಸುತ್ತ ಸುತ್ತಿಸುವುದೆಂದರೆ ಭಾರಿ ಸಾಹಸದ ಮಾತು. ಒಂದು ಮಹತ್ಕಾರ್ಯವನ್ನು ಸಾಧಿಸಿದಂತೆ. ಅದರಲ್ಲಿರುವ ಕಷ್ಟವೇ, ಅಪಾಯವೇ ಅದರ ರುಚಿ, ಅದರ ಸಂಭ್ರಮ. ಹೂವಿನ ತೇರು ನಲವತ್ತೆಂಟು ಜನಗಳ ಹೆಗಲ ಮೇಲೆ ಹೋಗುತ್ತಿರುವಾಗ, ಹಿಂದುಗಡೆ ವೈದೀಕರು ವೇದ ಪಾರಾಯಣ ಮಾಡುತ್ತಿರುವಾಗ, ಅವರ ಹಿಂದೆ ಗುಂಪುಗುಂಪಾಗಿ ಹೆಂಗಸರು ಉತ್ಸವದ ಹಿಂದೆ ಹೋಗುವುದು; ಮುಂದುಗಡೆ ಎತ್ತರದಲ್ಲಿ ಕಕ್ಕಡದಂತೆ ಉರಿಯುತ್ತಿರುವ ಪಂಜುಗಳು. ಆಗ ಊರಿಗೇ ಊರೇ ಅಲಂಕೃತ ವಾದ ಹಡಗಿನಂತೆ ತೋರುತ್ತಿರುವುದು. .... ಬೀದಿಯ ಉದ್ದಕ್ಕೂ ದೀಪದ ತೋರಣ. ಆ ದೀಪಗಳ ಹಿಂದೆ ನಿನಗಿಂತ ನಾನೇ ಹೆಚ್ಚು ಕಾಂತಿ ಎನ್ನುವ ಪ್ರಮದೆಯರ ಮುಖಜ್ಯೋತಿ. ಕಿವುಡರಿಗೂ ಗದ್ದಲ

ಕೇಳುವುದು. ಹೆಳವರು, ಕುಂಟರು ನಿಂತು ಉತ್ಸವವನ್ನು ನೋಡುವರು! ಮೂಕರು ನಾರಾಯಣ, ನಾರಾಯಣ ಎನ್ನುವರು! ಕುರುಡರು ದೇವರ ಅಂಲಕಾರಗಳನ್ನು ವರ್ಣಿಸುವರು". (ಅದೇ;ಪು.೪೫-೪೬) ಈ ಮಾತಿನಲ್ಲಿ ಉತ್ಪ್ರೇಕ್ಷೆ ಇದ್ದರು ಸತ್ಯಾಂಶ ಬಹುಪಾಲು ಇರುತ್ತದೆ. "ಉತ್ಸವಳಿಗೆ ಹೆಚ್ಚು ರಂಗನ್ನು ಕೊಡಲು ಕೆಲವು ವಿನೋದಗಳು ನಡೆಯುತ್ತವೆ. ಪ್ರಹ್ಲಾದ ಪರಿಪಾಲನೆಯ ಉತ್ಸವದ ದಿನ ಸಂಧ್ಯಾಕಾಲ ದೇವಸ್ಥಾನದಲ್ಲಿ ನರಸಿಂಹಾವತಾರದ ಕಥೆಯನ್ನು ಪುರಾಣಿಕರು ಹೇಳುತ್ತಾರೆ. ದೇವರನ್ನು ನಾಗಲೋಟದ ಮೂಲಕ ಉತ್ಸವ ಮಾಡಿದ ಮೇಲೆ ಶಾಂತ್ಯುತ್ಸವವಾಗುತ್ತದೆ. ಹೆಜ್ಜೆ ಹೆಜ್ಜೆಗೂ ಕರ್ಪೂರಾರತಿ, ಹೂವಿನ ಮಾಲೆ, ದೇವರಿಗೆ ಆ ಓಟವನ್ನು ಜನರಿಗೆ ಆ ನೋಟವನ್ನು ಒದಗಿಸಿದ ಆ ವೀರರಿಗೆ ಎಳನೀರಿನ ಶಾಂತಿಯಾಗುತ್ತದೆ". (ಅದೇ; ಪು.೪೬-೪೮)

"ಗೊರೂರಿನ ಜಾತ್ರೆಯಲ್ಲಿ ಮುಖ್ಯವಾದ ವಿಷಯವೆಂದರೆ ತೇರು. ಈ ತೇರು ಬಹಳ ದೊಡ್ಡದಾಗಿ ಭೂತಾಕಾರವಾಗಿದೆ. ಹಿಂದೆ ಇದರಲ್ಲಿ ಆರು ಚಕ್ರಗಳಿದ್ದವು. ಈಚೆಗೆ ಎರಡು ಚಕ್ರಗಳನ್ನು ತೆಗೆದು ನಾಲ್ಕು ಚಕ್ರವನ್ನು ಮಾಡಿದ್ದಾರೆ. ಎರಡೂ ಕಡೆ ಹೂರ್ಜಿಗಳಿಗೂ ಪೂರ್ತಾ ಜನ ನಿಂತು, ಹಿಂದೆ ತ್ರಾಣವುಳ್ಳ ಇಪ್ಪತ್ತು ನಾಲ್ಕು ಜನರು ಒಂದೊಂದು ಕಡೆಗೂ ಹೆದ್ನ ಕೊಡದೆ ಹೋದರೆ ಈ ತೇರು ಮುಲುಕುವುದಿಲ್ಲ. ಕೆಲವು ಕಡೆ ಇರುವಂತೆ, ಹುಡುಗರ ಕೈಗಾಡಿಯಂತೆ ಒಬ್ಬಿಬ್ಬರು ಇದನ್ನು ನಿಧಾನವಾಗಿ ಊರಸುತ್ತ, ಮೂಗುದಾರದಿಂದ ಸಾಧವಾದ ಹಸುವನ್ನು ಎಳೆದುಕೊಂಡು ಹೋಗುವಂತೆ ಎಳೆದುಕೊಂಡು ಹೋಗಲು ಸಾಧ್ಯವಿಲ್ಲ. ಅದರ ಆಕಾರವು ಅಷ್ಟು ಜನರ ಉತ್ಸಾಹಕ್ಕೂ ವರ್ಷಕ್ಕೆ ಒಂದು ಹಬ್ಬವೆಂಬ ದೊಡ್ಡಸ್ತಿಕೆಗೂ ಸಾರ್ಥಕವನ್ನು ಉಂಟುಮಾಡತಕ್ಕುದಾಗಿದೆ". (ಅದೇ; ಪು.೪೮-೪೯) ಇಲ್ಲಿ ತೇರು ಸಂಪ್ರದಾಯವಾಗಿರುವಂತೆ ವಿಶೇಷವಾದದ್ದು ಎಂಬುದಕ್ಕೆ ಧ್ವನಿಯು ಕಂಡುಬರುತ್ತದೆ. ಗೊರೂರಿನ ತೇರಿನಲ್ಲಿ ಪಂಚಮರಿಗೆ ವಿಶೇಷ ಸ್ಥಾನ ಮರ್ಯಾದೆ ಉಂಟು. ಇದು ಜಾತಿ ಸಾಮರಸ್ಯಕ್ಕೆ ಸ್ವಾರಸ್ಯ ಸಂಗತಿಯಾಗಿದೆ. "ನಮ್ಮೂರು ತೇರು ಪಂಚಮರು ಬಂದಲ್ಲದೆ ಚಲಿಸುವಂತೆ ಇಲ್ಲ. ಓಹೊಹೊ, ಆ ದಿನ ಏನು ಅದರ ದೊಡ್ಡಸ್ತಿಕೆ. ಅವರ ಉತ್ಸಾಹ! ಅವರಿಗೆ ನಿಜವಾಗಿಯೂ ದೇವರು ಅಂದು ಪ್ರತ್ಯಕ್ಷನಾದಂತೆಯೇ ಅವರೆಲ್ಲ ಅವತ್ತು ಹೊಸ ಬಟ್ಟೆ ಹೊಲಿಸುತ್ತಾರೆ. ಅವರ ಹೆಂಸರಿಗೆಲ್ಲಾ ಹೊಸ ಸೀರೆಗಳು. ಪ್ರತಿಯೊಬ್ಬ ಮದುವೆ ಗಂಡಿನಂತೆ ಕಾಣುತ್ತಾನೆ. ಆಗ ಅವನು ಪಂಚಮನಂತೆ ತೋರುವುದೇ ಇಲ್ಲ. ಅವನಿಗೆ .... ಮಂಡಿಯ ಮೇಲೆ ಉಟ್ಟಿರುವ ಕರೆಯ ಕೂರೆಯದಟ್ಟಿಯನ್ನು ಬದಲಾಯಿಸಿ ಬೆಳ್ಳಗಿರುವ, ಕಾಲಿನವರೆಗೆ ಬರುವ ಹೊಸ ಪಂಚೆ; ಹರಿದ ಅಂಗಿಗೆ ಬದಲಾಗಿ ಹೊಸ ಅಂಗಿ; ತಲೆಗೆ ಒಂದು ಅಗ್ಗವಾದ ರೇಸಿಮೆಯ ಚೌಕ, ಜುಟ್ಟಿಗೆ ಒಂದು ಚೂರು ಹೂವು, ಹಣೆಗೆ ನಾಮ, ಅವನ ಹೆಂಡತಿಗೆ - ಮಾಸಿದ ಶಾಲೆಯ ಬದಲು ಹೊಸ ಶಾಲೆ, ಸಗಣಿ ತುಂಬಿರುವ ತಲೆಯನ್ನು ತೊಳೆದು ಅದಕ್ಕೆ ಒಂದು ಚೂರು ಹೂವು, ಹೊಸದಾಗಿ ಹೊಳೆಯುವ ಬಣ್ಣದ ರವಿಕೆ, ಕಾಚಿನಿಂದ ಕಪ್ಪಾಗಿರುವ ತುಟಿಗೂ ಹಲ್ಲಿಗೂ ಒಂದು ತೊಳೆತ, ಕೂಡಲೇ ಅವಳು ಉತ್ತಮ ಹೆಣ್ಣಾಗುತ್ತಾಳೆ. ತೇರಿನ ದಿನ ಪಂಚಮರ ಕೇರಿಯಲ್ಲಿ ಸಂಭ್ರಮವೋ ಸಂಭ್ರಮ.

ಮೊದಲ ದಿನ ತಮಟೆಗಳನ್ನು ಕಾಯಿಸಿ ಕಾಯಿಸಿ ಗಾಳಿಗೇ ಅವು ಸದ್ದಾಗುವಂತೆ ಅವರು ಮಾಡಿತ್ತಾರೆ. ತೇರಿನ ದಿನ ರಥದಲ್ಲಿ ದೇವರನ್ನು ನೋಡಿದ ಹೊರತು ಬಾಯಿಗೆ ನೀರು ಹಾಕುವುದಿಲ್ಲ". (ಅದೇ; ಪು.೪೯) ಇಲ್ಲಿ ಪಂಚಮರ ದೈವಿಕ ಶ್ರದ್ಧೆಯನ್ನು ಲೇಖಕರು ಮುಕ್ತ ಭಾವದಲ್ಲಿ ತಿಳಿಸಿದ್ದಾರೆ.

ತೇರಿನ ದಿನ ಮಧ್ಯಾಹ್ನ ಒಂದು ಗಂಟೆಗೆ ರಥಾರೋಹಣವಾಗುತ್ತದೆ. ತೇರಿನ ಪ್ರಭಾವಕ್ಕೆ ಒಳಗಾದ ಜನರು 'ಹೊಲೆಯರು ಬಂದರು, ಹೊಲೆಯರು ಬಂದರು' ಎಂದು ಸಂಭ್ರಮದಿಂದ ಗೊರೂರಿನ ಜನ ದನಿಯೆತ್ತಿ ಕರೆಯುತ್ತಾರೆ. 'ತೇರಿಗ್ಹೋಗೋಣ ಬನ್ನಿರೆ ಸ್ವಾಮಿ ರತಾಕ್ಹೋಗೋಣ ಬನ್ನೀರೆ|' ಎಂದು ಗೊರೂರಿನ ಜನ ಹಾಡನ್ನು ಹೇಳುತ್ತಾ ತೇರಿನ ಮುಂದೆ ಕುಣಿಯುವುದು ದಿವ್ಯದೃಶ್ಯವೆಂದು ಗೊರೂರವರು ಹೇಳುತ್ತಾರೆ. ಈ ಮಾತುಗಳಲ್ಲಿ ಗೊರೂರವರಿಗೆ ಹರಿಜನ ಬಗ್ಗೆ ಇರುವ ಮನಃಪೂರ್ವಕ ಗೌರವದ ಭಾವನೆಗೆ ಸ್ಪಷ್ಟ ಸಾಕ್ಷಿಯಾಗಿದೆ. ಮುಗ್ಧ ಭಕ್ತಿಯ ಸಹಜ ಉತ್ಸಾಹವನ್ನು ಇಲ್ಲಿ ಕಾಣಬಹುದು. ಉತ್ತಮ ಜಾತಿಯವರು ತಮ್ಮ ಬೀಗುತನವನ್ನು ಮರೆತು ಹರಿಜನರೊಂದಿಗೆ ಸೌಜನ್ಯ ಭಾವದಲ್ಲಿ ವರ್ತಿಸುವುದನ್ನು ಗೊರೂರವರು ಇಲ್ಲಿ ಸ್ಪಷ್ಟ ಮಾತುಗಳಲ್ಲಿ ನೆನಪು ಮಾಡಿಕೊಟ್ಟಿದ್ದಾರೆ.

"ಪಂಚಮರು ಅಮೃತವನ್ನು ಕುಡಿದು ಸೊಕ್ಕಿದವರಂತೆ ಪರವಶರಾಗಿ ಕೈಯಲ್ಲಿ ಚೌಕವನ್ನು ಹಿಡಿದುಕೊಂಡು ವಿಧವಿಧವಾದ ಬಂಧದಿಂದ ಎಷ್ಟೋ ಹೊತ್ತು ಕುಣಿಯುವರು. ಎಷ್ಟು ಕುಣಿದರೂ ಅವರಿಗೆ ಶ್ರಮವಾಗುವಂತೆಯೇ ತೋರುವುದಿಲ್ಲ. ಬಂದ ಜನವೆಲ್ಲಾ ಆ ಕುಣಿತವನ್ನು ನೋಡುತ್ತಾ ಸ್ವಲ್ಪ ಹೊತ್ತು ನಿಂತ ಮೇಲೆ ಅರ್ಚಕ, ರಥದ ಮೇಲಿಂದ ದೇವರ ತೀರ್ಥ, ಹೂವಿನ ಹಾರ ಕೈಯಲ್ಲಿ ತೆಗೆದುಕೊಂಡು ಬರುವನು. ಪಂಚಮರಿಗೆಲ್ಲಾ ಕತ್ತಿನಲ್ಲಿ ಹಾರಗಳ ಹೂರ್ಜಿಗಳು ಬೀಳುವುವು. ಉತ್ಸಾಹಿಗಳಾದ ತರುಣರು ಅವರ ನೆತ್ತಿಗೆ ಕುಂಕುಮವನ್ನು ಬಳಿಯುವರು. ಒಕ್ಕಲಿಗರು ದವನವನ್ನು ಸಿಕ್ಕಿಸಿದ ಬಾಳೆಹಣ್ಣನ್ನು ಅವರಿಗೆ ಜಪ್ಪುವರು". (ಅದೇ; ಪು. ೫೦-೫೧) ಇಲ್ಲಿಯು ಸಹ ಸಮಾಜದ ಮಿಕ್ಕ ಬಾಂಧವರು ಪಂಚರಿಗೆ ತೋರಿಸುವ ಗೌರವ ಅನನ್ಯವಾಗಿದೆ. ಗ್ರಾಮೀಣ ಸಂಸ್ಕೃತಿಯ ಉತ್ತಮ ಅಂಶ ಇಲ್ಲಿ ಸೂಚ್ಯವಾಗಿರುವುದು ನಾವು ಮೆಚ್ಚುವಂತಹುದು ಆಗಿದೆ. ಸಮಾಜದ ಎಲ್ಲ ವರ್ಗದವರಿಗೂ ಒಂದಲ್ಲ ಒಂದು ಕಾಲಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಮಾನ್ಯತೆಯನ್ನು ತೋರಿಸಿ ಆ ಮೂಲಕ ಸೌಹಾರ್ದ ಬಾಳನ್ನು ಬಾಳಬೇಕು ಎಂಬ ಅರಿವಿನ ವಿಷಯ ಗೊರೂರವರ ಈ ವರ್ಣನೆಯ ಹಿನ್ನೆಲೆಯಲ್ಲಿ ಸ್ಪಷ್ಟವಾಗಿದೆ. ಹಿಂದುಗಳಲ್ಲಿ ಹಲವು ವಿಶಿಷ್ಟ ಹಬ್ಬಗಳ ಮೂಲಕ ಕುಟುಂಬದ ಎಲ್ಲ ಸದಸ್ಯರಿಗೂ ಗೌರವ ತೋರಿಸುವ ಸತ್‌ಸಂಪ್ರದಾಯವನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬಹುದು.

ತೇರಿಗೆ ಹಿಂದುಗಡೆ 'ಹೆದ್ನ' ಕೊಡುವುದನ್ನು ಮುಂದುಗಡೆ 'ಗೊದಮ' ಕೊಡುವುದನ್ನು ಗೊರೂರವರು ಸುಂದರವಾಗಿ ವರ್ಣಿಸಿದ್ದಾರೆ. ಈ ಕೆಲಸಗಳನ್ನು ಮಾಡುವವರು ಎಷ್ಟು ಸಮಾಧಾನದ ಮನಸ್ಸನ್ನು ಹೊಂದಿರಬೇಕು, ಧೈರ್ಯಶಾಲಿಗಳಾಗಿರಬೇಕು ಎಂಬ ಅಂಶ ಮನನೀಯವಾಗಿದೆ. ಸಾಯಂಕಾಲ

ತೇರು ನೆಲೆ ನಿಂತಾಗ ಭಕ್ತರು ಅನೇಕ ಹರಕೆಗಳನ್ನು ಮಾಡಿಕೊಳ್ಳುತ್ತಾರೆ. ರಥೋತ್ಸವದ ಮರುದಿನ ಆಳು ಪಲ್ಲಕ್ಕಿ ಉತ್ಸವ, ದವನೋತ್ಸವ, ಆನೆ ಉತ್ಸವ ಅತ್ಯಂತ ಪ್ರಮುಖವಾದುವು. ಪಲ್ಲಕ್ಕಿಗೆ ಆಳೆತ್ತರದ ಗೊಂಬೆಗಳನ್ನು ಜೋಡಿಸುವುದು ಅವುಗಳನ್ನು ಅಲಂಕರಿಸುವುದು ವಿಶಿಷ್ಟವಾದ ಸಂಭ್ರಮದ ಚಟುವಟಿಕೆ. ಬೊಂಬೆಗಳಿಗೆ ಕೀಲುಕೊಟ್ಟು ಕುಣಿಸುವುದು ವಿಶೇಷ ಸಂಗತಿಯಾಗಿದೆ. ಗೊರೂರಿನಲ್ಲಿ ನಡೆಯುವ ಶಯನೋತ್ಸವ, ಅವಭೃತ ಸ್ನಾನ ಅಷ್ಟೇ ಸುಂದರವಾದವು. ಅವಭೃತ ಸ್ನಾನ ನಡೆಯುವ ದಿನ ಬೆಳಿಗ್ಗೆ ದೇವಸ್ಥಾನದ ಮುಂದೆ ಲಕ್ಷ್ಮಿಗೂ ವಿಷ್ಣುವಿಗೂ ನಡೆಯುವ ವಾದವಿವಾದಗಳು ಅತ್ಯಂತ ಹಾಸ್ಯಪೂರ್ಣ ಶೃಂಗಾರಪೂರ್ಣ ನಾಟಕವಾಗಿರುತ್ತದೆ. ಇದು ಮುಖ್ಯವಾಗಿ ಸ್ತ್ರೀಯರ ಉತ್ಸವ. ಸ್ತ್ರೀಯರಲ್ಲಿ ಕೆಲವರು ವಿಷ್ಣುವಿನ ಕಡೆಯು ಕೆಲವರು ಲಕ್ಷ್ಮಿಯ ಕಡೆಗೂ ವಹಿಸಿಕೊಂಡು ವಾದವಿವಾದ ಮಾಡುತ್ತಾರೆ. ಅಂದು ನಡೆಯುವ ಓಕುಳಿ ಅತ್ಯಂತ ಸಂಭ್ರಮ. "ಅವಭೃತ ಸ್ನಾನಕ್ಕೆ ಪವಿತ್ರತೆ, ಗಾಂಭೀರ್ಯ ಇದೆ. ಅರ್ಚಕ ನೀರಿನಲ್ಲಿ ಇರುವವರೆಗೆ ಯಾರು ನೀರಿನೊಳಕ್ಕೆ ಇಳಿಯುವುದಿಲ್ಲ. ಅರ್ಚಕ ಸ್ನಾನ ಮಾಡುವುದೇ ಪುಣ್ಯಕಾಲ. ಆತ ಗ್ರಾಮಕ್ಕೆ ಶಾಂತಿ ಉಂಟಾಗಲಿ, ಶಕ್ತಿಯೂ ತ್ರಾಣವೂ ಬರಲಿ, ಇಲ್ಲಿನ ಮಕ್ಕಳು ತೊಟ್ಟಿಲುಗಳಲ್ಲಿ ಸುಖವಾಗಿ ನಿದ್ರಿಸಲಿ, ಗ್ರಾಮಗಳಿಗೂ ದೇಶ ವಿದೇಶಗಳಿಗೂ ಮಂಗಳವುಂಟಾಗಲಿ, ಇಲ್ಲಿನ ಬ್ರಾಹ್ಮಣರು ಸಂಧ್ಯಾವಂದನೆ ಸರಿಯಾಗಿ ಮಾಡಲಿ, ಬ್ರಹ್ಮಚಾರಿಗಳು ಸದಾಚಾರ ಸಂಪನ್ನರಾಗಲಿ ಎಂದು ಹೇಳಿ ಸ್ನಾನ ಮಾಡುವನು. ನಿಶ್ಯಬ್ದವಾದ ನದಿ ಜಲಕ್ರೀಡೆಯ ಕ್ಷೇತ್ರವಾಗುವುದು. ಸ್ತ್ರೀ ಪುರುಷರು ಮೀನುಗಳಂತೆ ನದಿಯಲ್ಲಿ ಆಡುವರು". (ಅದೇ; ಪು. ೫೫-೫೬) ಗೊರೂರಿನಲ್ಲಿ ತೇರು "ಏನೋ ಆಗುತ್ತೆ" ಎಂಬ ಸಾಂಪ್ರದಾಯಿಕ ಚಟುವಟಿಕೆ ಅಲ್ಲ. "ಅದು ಜನರ ರಕ್ತದ ರಕ್ತ, ಜೀವದ ಜೀವ, ಎಲ್ಲರನ್ನೂ ಒಟ್ಟು ಗೂಡಿಸುವ ಸಣ್ಣಪುಟ್ಟ ವ್ಯಾಜ್ಯಗಳನ್ನೆಲ್ಲಾ ಪರಿಹರಿಸುವ ರಾಷ್ಟ್ರೀಯ ಹಬ್ಬ". (ಅದೇ; ಪು. ೫೬) ತೇರಿನ ದಿನ ಯಾವುದಾದರೂ ಒಳ್ಳೆಯ ಕೆಲಸವನ್ನು ಮಾಡಿಯೇ ತೀರಬೇಕೆಂದು ಗೊರೂರಿನ ಜನ ನಿಶ್ಚಿಯಿಸುತ್ತಾರೆ. "ನಮ್ಮೂರ ಜೋಡಿದಾರರು ತೇರಿನ ದಿನ ದೇವರು ರಥವೇರಿದ ಕಾಲದಿಂದ ಮರುದಿನ ಆ ಕಾಲದವರೆಗೆ ತಮಗೆ ಬರುವ ಒಂದು ದಿನದ ಉತ್ಪತ್ತಿಯನ್ನು ಯಾರಾದರೂ ಬಡ ಸಂಸಾರಿಗಳಿಗೆ ದಾನವಾಗಿ ಕೊಡುತ್ತಾರೆ". (ಅದೇ; ಪು.೫೮) ತೇರು ಸಾಮಾಜಿಕ ಕ್ಷೇಮಕ್ಕೆ ಕಾರಣವಾಗುತ್ತದೆ ಎಂಬುದನ್ನು ಲೇಖಕರು ಇಲ್ಲಿ ಸೂಚಿಸಿದ್ದಾರೆ. ಒಟ್ಟಿನಲ್ಲಿ ತೇರು ಉತ್ಸಾಹದ ಬದುಕಿಗೆ ಕಾರಣ ಎಂಬುದನ್ನು ಗೊರೂರವರು ಸ್ಪಷ್ಟವಾಗಿ ತಿಳಿಸಿದ್ದಾರೆ.

ಗೊರೂರವರು ಭರತೂರಿನಲ್ಲಿ ನಡೆಯುವ ಬಿಂದಿಗಮ್ಮನ ಜಾತ್ರೆಯನ್ನು ಗೊರೂರಿನ ಜಾತ್ರೆಯಷ್ಟೆ ಸವಿಸ್ತಾರವಾಗಿ ವರ್ಣಿಸಿದ್ದಾರೆ. ರಂಗನ ಬೆಟ್ಟದ ಜಾತ್ರೆಯನ್ನೆ ಬಿಂದಿಗಮ್ಮನ ಜಾತ್ರೆಯೆಂದು ಕರೆಯುತ್ತಾರೆ. ರಂಗನ ಬೆಟ್ಟದಿಂದ ಸುಮಾರು ನಾಲ್ಕು ಮೈಲಿ ದೂರವಿರುವ ತೋಪಿನಲ್ಲಿ ಬಿಂದಿಗಮ್ಮನ ಜಾತ್ರೆ ನಡೆಯುತ್ತದೆ. "ಬಿಂದಿಗೆಮ್ಮ ಎಂದರೆ ರಂಗನಾಥ ದೇವರ ಹೆಂಡತಿ. ರಂಗದೇವರು ಒಂದೂವರೆ ಮಾರು ದೂರದಲ್ಲಿ ಬಿಂದಿಗಮ್ಮನಿಗೆ ಎದುರಾಗಿ ಕುಳಿತಿರುತ್ತಾರೆ. ರಂಗದೇವರ ಜಾತ್ರೆ ಆದರೂ ಜನ ಬಿಂಬಿಗಮ್ಮ

ನಿಗೆ ಪೂಜೆ ಮಾಡಿಸುವುದರಲ್ಲಿ ಆಸಕ್ತರಾಗಿರುತ್ತಾರೆ. ಬಿಂದಿಗಮ್ಮ ಬೆಟ್ಟದ ಮೇಲಿರುವ ರಂಗನ ಬೆಟ್ಟದ ದೇವಸ್ಥಾನವನ್ನು ಬಿಟ್ಟು ಹೊರಗೆ ಬರುವುದು ವರ್ಷಕ್ಕೆ ಒಂದೇ ದಿನ. ಆಕೆಗೆ ಪೂಜೆಯು ಜಾತ್ರೆಯ ಒಂದು ದಿನ ಮಾತ್ರ". (ಗೊರೂರು ರಾಮಸ್ವಾಮಿ ಅಯ್ಯಂಗಾರ; ೨೦೦೪;ಪು.೧೩೧-೧೩೨) ಬಿಂದಿಗಮ್ಮನ ಜಾತ್ರೆಯಲ್ಲಿ ಪೂಜಾರಿ ಆಚರಿಸುವ ವ್ರತ ಅತಿ ಕಟ್ಟುನಿಟ್ಟಾದುದು. ಧ್ಯಾನದಲ್ಲಿ ಕೊಡುತ್ತಿರುವ ಪೂಜಾರಿಯ ಕೈಯಿಂದ ಭಕ್ತರೆಲ್ಲರೂ ನಾಮ ಹಾಕಿಸಿಕೊಂಡು ಬಿಂದಿಗಮ್ಮನ ಸೇವೆಗೆ ಹೋಗುತ್ತಾರೆ. ಪೂಜಾರಿ ತಟ್ಟೆಯನ್ನು ಎರಡೂ ಕೈಗಳಿಂದಲೂ ಹಿಡಿದು ತನ್ನ ಬೋಳು ತಲೆಯ ಮೇಲೆ ಸಮತೂಕದಲ್ಲಿ ಇಟ್ಟುಕೊಳ್ಳುತ್ತಾನೆ. ಈ ಕ್ಷಣದ ದೃಶ್ಯ ನಮ್ಮನ್ನೆಲ್ಲಾ ದೇವಲೋಕಕ್ಕೆ ಕೊಂಡೊಯ್ಯುತ್ತದೆ ಎಂದು ಗೊರೂರರವರು ಹೇಳುವ ಮಾತು ಭಾವಕತೆಯಷ್ಟೇ ಸತ್ಯದ ಮಾತಾಗಿದೆ. ಬಿಂದಿಗಮ್ಮನ ಪೂಜಾರಿ ತಲೆಯ ಮೇಲೆ ಬಿಂದಿಗಮ್ಮನನ್ನು ಇಟ್ಟುಕೊಂಡು ಜಿಂಕೆ ಮರಿಯಂತೆ ಓಡುವ ದೃಶ್ಯ ಅಭೂತಪೂರ್ವವಾದದ್ದು. ಭರತೂರು ತೋಪಿನಿಂದ ಬಿಂದಿಗಮ್ಮ ರಂಗನ ಬೆಟ್ಟದ ದೇವಾಲಯವನ್ನು ಸೇರುವುದೇ ಬಿಂದಿಗಮ್ಮನ ಜಾತ್ರೆ. ಸುತ್ತಲ ಹನ್ನೆರಡು ಹಳ್ಳಿಯ ಜನ ಬಿಂದಿಗಮ್ಮನ ಜಾತ್ರೆಯಲ್ಲಿ ಪಾಲ್ಗೊಂಡಿರುತ್ತಾರೆ. ಬೆಟ್ಟದ ಹಾದಿಯಲ್ಲಿ ಕಲ್ಲು ತೋರಣದ ಮೂಲಕ ಬಿಂದಿಗಮ್ಮ ಸಾಗಿ ಹೋಗುವುದು ಭಕ್ತರಿಗೆ ಭಕ್ತಿಭಾವದ ಅಪೂರ್ವ ಅನುಭವವಾಗಿದೆ. ರಂಗನಾಥನಿಗೆ ಬಿಂದಿಗಮ್ಮನನ್ನು ಹೊತ್ತಿರುವ ಪೂಜಾರಿ ದೀರ್ಘದಂಡ ನಮಸ್ಕಾರ ಮಾಡಿದಾಗ ತಟ್ಟೆಯು ಅಲಗುವುದಿಲ್ಲ ತಟ್ಟೆಯಲ್ಲಿರುವ ಬಿಂದಿಗಮ್ಮನ ಮೂರ್ತಿಯೂ ಅಲುಗುವುದಿಲ್ಲ. ಬಿಂದಿಗಮ್ಮನ ಜಾತ್ರೆಯನ್ನು ಗೊರೂರರವರು ಪವಾಡ ಸದೃಶವಾಗಿ ವರ್ಣಿಸಿದ್ದಾರೆ.

ಬಿಂದಿಗಮ್ಮನ ಜಾತ್ರೆ ವಿಶೇಷವಾದ ಅಧ್ಯಾತ್ಮಿಕ ಅನುಭವ ತಂದು ಕೊಡುತ್ತದೆ "ಬೋಳು ತಲೆಯ ಮೇಲೆ ತಟ್ಟೆಯನ್ನು ನೀರು ತುಂಬಿದ ಕಲಶವನ್ನು ಹೊತ್ತುಕೊಂಡು, ಕತ್ತಲೆಯಲ್ಲಿ ಕಾಡುದಾರಿಯಲ್ಲಿ ಬೆಟ್ಟದ ಮೇಲೆ ಕೈ ಬಿಟ್ಟು ನಮಸ್ಕರಿಸುತ್ತಾ ಆವೇಶದಿಂದ ಓಡುವ ಪೂಜಾರಿಯ ಭಕ್ತಿಯಂತೂ ನಿಜವಾಗಿ ಇದ್ದೇ ಇದೆ. ಒಂದು ಸಲ ಬಿಂದಿಗಮ್ಮನ ಜಾತ್ರೆಯನ್ನು ನೋಡಿದ ಮೇಲೆ ಇದನ್ನು ಪದೇ ಪದೇ ನೋಡುವುದಕ್ಕಾಗಿ ಬದುಕಿರಬೇಕು ಎಂಬ ಆಸೆ ಯಾರಿಗಾದರೂ ಉಂಟಾಗದೇ ಇರದು" (ಅದೇ; ಪು. ೧೪೪) ಎಂದು ಗೊರೂರರವರು ಹೇಳುವುದರಲ್ಲಿ ಬಿಂದಿಗಮ್ಮನ ಜಾತ್ರೆಯ ವೈಭವ ಸ್ಪಷ್ಟವಾಗುತ್ತದೆ. ಹೀಗೆ ಬಿಂದಿಗಮ್ಮನ ಜಾತ್ರೆ ನಮ್ಮ ಬಾಳಿನಲ್ಲಿ ನಿಜವಾದ ಅಧ್ಯಾತ್ಮಿಕ ಅನುಭವ ಆಗಿದೆ ಎಂದು ಲೇಖಕರು ತಿಳಿಸುತ್ತಾರೆ. ಜಾತ್ರೆಯಿಂದ ಲೌಕಿಕ ಸಂತೋಷ ಇಮ್ಮಡಿಯಾಗುವುದರ ಜತೆಗೆ ವಿಶಿಷ್ಟವಾದ ಅಧ್ಯಾತ್ಮಿಕ ಅನುಭವವು ನಮಗೆ ಆಗುತ್ತದೆ ಎಂದು ಗೊರೂರರವರು ಹೇಳುವುದರಲ್ಲಿ ಸ್ವಾನುಭವದ ಸತ್ಯ ಅಡಗಿದೆ ಎಂಬುದನ್ನು ಒಪ್ಪಬೇಕು.

ಬದುಕಿನ ಸಾಹಸಕ್ಕೆ ಶ್ರದ್ಧೆ, ದುಡಿಮೆ, ಕೆಲಸಕ್ಕೆ ಅನುಗುಣವಾದ ಅರಿವಿನ ಅಂಶ ಮೂರು ಮುಖ್ಯವಾದುವು. ಇವುಗಳಲ್ಲಿ ಯಾವುದು ಕಡಿಮೆಯಾದರೂ, ಇಲ್ಲವಾದರೂ ಬದುಕಿನ ಸಾಹಸ

ಅರ್ಥಪೂರ್ಣವಾಗುವುದಿಲ್ಲ - ಫಲಕಾರಿಯು ಆಗುವುದಿಲ್ಲ. ಮನುಷ್ಯ ಪ್ರಯತ್ನ ಅತ್ಯಂತ ಅಮೂಲ್ಯವಾದದ್ದು ಎಂಬುದನ್ನು ಗೊರೂರರವರು ಮರೆತಿಲ್ಲ. ಆದರೆ ಮಾನುಷ ಪ್ರಯತ್ನಕ್ಕೆ ಬೆನ್ನೆಲಬಾಗಿ ದೈವೀ ಶ್ರದ್ಧೆ ಆಸ್ತಿಕ ಮನೋಧರ್ಮ ವ್ಯಕ್ತಿಯಲ್ಲಿ ಇದ್ದೇ ಇರಬೇಕು. ಮನುಷ್ಯನ ಶ್ರೇಯಸ್ಸಿಗೆ ಪುರುಷ ಪ್ರಯತ್ನದಷ್ಟೆ ದೈವ ಕೃಪೆಯ ಒಂದು ಅಂಶವೂ ಅಷ್ಟೇ ಪ್ರಧಾನವಾದದ್ದು ಎಂಬುದನ್ನು ಅನೇಕ ಸಂದರ್ಭಗಳಲ್ಲಿ ದೃಷ್ಟಾಂತಗಳ ಮೂಲಕ ಗೊರೂರರವರು ಖಚಿತಪಡಿಸಿದ್ದಾರೆ. ಮಾನವ ಪುರುಷ ಪ್ರಯತ್ನದಲ್ಲಿ ಅತಿ ಉತ್ಸಾಹಿಯಾಗಿ ದೈವದ ಕೃಪೆಯ ಕಡೆಗೆ ಕುರುಡನು ಆಗಬಾರದು. ಇದಕ್ಕೆ ವಿರುದ್ಧವಾಗಿ ದೈವದ ಕೃಪೆಯಿಂದಲೇ ಸರ್ವಸ್ವ ಎಂದು ಭಾವಿಸಿ ಮನುಷ್ಯ ಪ್ರಯತ್ನವನ್ನು ಮರೆಯುವ ಮೂರ್ಖನೂ ಆಗಬಾರದು. ಜೀವನದಲ್ಲಿ ಸಾಧನೆ ಆರು ಪಾಲಾದರೆ ಏಳನೆಯ ಪಾಲು ದೈವ ಕೃಪೆ ಆಗಿರಲೇಬೇಕೆಂದು 'ಸಪ್ತಂ ದೈವ ಚಿಂತನಂ' ಎಂಬ ಪುರಾತನ ನುಡಿಗಟ್ಟು ನಮ್ಮನ್ನು ಕಣ್ಣು ತೆರೆಸುತ್ತದೆ-ಎಚ್ಚರಿಸುತ್ತದೆ. ಈ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಗೊರೂರರವರು ತಮ್ಮ ಅಧ್ಯಾತ್ಮಿಕ ನಿಲುವನ್ನು ವೈಚಾರಿಕತೆಯ ಧೋರಣೆಯನ್ನು ಸಮತೋಲನ ದೃಷ್ಟಿಯಲ್ಲಿ ತಾವು ಹೊಂದಿರುವುದನ್ನು ಸ್ಪಷ್ಟವಾಗಿ ಪ್ರಕಟಪಡಿಸಿದ್ದಾರೆ. ಇಂತಹ ಪೂರ್ಣ ದೃಷ್ಟಿಯ ಬದುಕು ನಮ್ಮದಾದಾಗ ಬದುಕಿನಲ್ಲಿ ನಾವು ಸಾಫಲ್ಯತೆಯನ್ನು ಕಾಣಬಹುದು. ಸಮಾಜದಲ್ಲಿ ನಮ್ಮ ಅಸ್ತಿತ್ವಕ್ಕೂ ಒಂದು ಬೆಲೆ ಸಿಗುತ್ತದೆ ಎಂಬುದು ಗೊರೂರರವರ ಅಭಿಪ್ರಾಯವಾಗಿದೆ. ಬಹುಮಟ್ಟಿಗೆ ನವೋದಯ ಸಾಹಿತ್ಯದ ಎಲ್ಲ ಹಿರಿಯ ಲೇಖಕರ ನಿಲವು - ಅಭಿಪ್ರಾಯ ಇದೇ ಆಗಿದೆ. ಈ ಸಮತೋಲನ ಅಭಿಪ್ರಾಯದಿಂದಲೇ ನವೋದಯ ಸಾಹಿತ್ಯ ನಮಗೆ ಪ್ರಿಯವಾಗುತ್ತದೆ. ಗೊರೂರರವರ ಕೃತಿಗಳು ಹೆಚ್ಚು ಮೆಚ್ಚಿಗೆಯಾಗುತ್ತವೆ. ಸಾಹಿತಿಯಾಗಿ ಗೊರೂರರವರಲ್ಲಿ ಸಾರ್ಥಕತೆಗೆ ಸಂಬಂಧಿಸಿದಂತೆ ಪೂರ್ವದೃಷ್ಟಿ ಇದೆ ಎಂಬ ಅಂಶವನ್ನು ಈ ವಿಚಾರದ ಹಿನ್ನೆಲೆಯಲ್ಲಿ ಸಾಬೀತುಪಡಿಸಬಹುದು. ಸಾಹಿತಿಯಾಗಿ ಗೊರೂರರವರು ಪರಿಪೂರ್ಣ ಚಿಂತಕರು ಎಂಬುದು ನಿರ್ವಿವಾದ ಸತ್ಯ.

ಆಸ್ತಿಕ ಭಾವನೆಗೆ ಅನುಗುಣವಾಗಿ ದೈವಶ್ರದ್ಧೆ ಗ್ರಾಮೀಣ ಜನರಲ್ಲಿ ನಿಚ್ಚಳವಾಗಿ ಇರುತ್ತದೆ. ಸಮಗ್ರ ಊರಿನ ಕ್ಷೇಮ ನಮ್ಮ ನಂಬಿಕೆಯ ದೇವರಿಂದ ಸಫಲವಾಗುತ್ತದೆ ಎಂಬುದು ಊರಿನವರ ಭಾವನೆ. ಇಂತಹ ನಂಬಿಕೆಯನ್ನು ಕುರಿತು ಲೇಖಕರು 'ಗೋಪುರದ ಬಾಗಿಲು' ಕೃತಿಯಲ್ಲಿ ಕುಮಾರಿ ದೇವಾಲಯದ ಅರ್ಚಕನ ಘಟನೆಯಲ್ಲಿ ವಿಶೇಷವಾಗಿ ಚಿತ್ರಿಸಿದ್ದಾರೆ. "ದೇವಾಲಯದಲ್ಲಿ ಪೂಜೆ ನಿಂತರೆ ಈ ಹಳ್ಳಿಯೂ ಇದರ ಸುತ್ತಮುತ್ತಲಿನ ಹಳ್ಳಿಗಳೂ ನಾಶವಾಗುವುದೆಂದು ನಮ್ಮ ಹಿರಿಯರು ಹೇಳುತ್ತಿದ್ದರು. ಆದುದರಿಂದ ನೀವು ಇಲ್ಲಿಯೇ ಪೂಜೆ ಮಾಡುತ್ತ ನಿಲ್ಲಬೇಕು" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೪; ಪು.೩೦) ಎಂದು ಪೂಜಾರಿಯನ್ನು ಊರಿನ ಜನ ವಿನಂತಿಸಿಕೊಳ್ಳುತ್ತಾರೆ. ದೇವಾಲಯದ ಪೂಜಾರಿ ತಾನು ಊರು ಬಿಟ್ಟು ಹೋಗುವ ಬಗ್ಗೆ "ಕಲಿತ ತರ್ಕದ ವಿತಂಡವಾದವನ್ನು ಊರಿನವರಿಗೆ ಹೇಳುತ್ತಾನೆ. ಆದರೆ ದೇವಿಯ ವಿಗ್ರಹವನ್ನು ಕಂಡ ಪೂಜಾರಿ ಅಮರ ಸೌಂದರ್ಯಕ್ಕೆ ಆಕರ್ಷಿತನಾಗಿ ತನ್ನ ನಿಶ್ಚಯವನ್ನು ಬದಲಿಸಿ ದೇವತೆಯ ಪೂಜೆಯನ್ನು ಮುಂದುವರೆಸುತ್ತಾನೆ". (ಅದೇ; ಪು.೩೧)

ಗ್ರಾಮೀಣ ಜನರಲ್ಲಿ ಭಕ್ತಿ ಪವಾಡ ಸದೃಶ್ಯವಾಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಶಿಡ್ಲುಮರಿ ಹನುಮಂತರಾಯನ ಮುಂದೆ ಮಾಂಸದ ಕುಕ್ಕೆಯನ್ನು ಇಟ್ಟರು. "ಗೋವಿಂದ ಜಯಕಾರದ ಪ್ರಭಾವದಿಂದ ಮಾಂಸವೆಲ್ಲ ಫಲವಾಗಿತ್ತು". (ಅದೇ; ಪು.೭೪) ಆಂಜನೇಯನ ಪವಾಡ ಶಕ್ತಿ ಭಕ್ತರನ್ನು ಮೂಕ ವಿಸ್ಮಿತಗೊಳಿಸುತ್ತದೆ. "ಕ್ಷಯ ರೋಗದಿಂದ ಮುಕ್ತನಾದ ಚೆನ್ನಪ್ಪನನ್ನು ಕಂಡ ಪ್ರಾಣಾಚಾರ್ಯರಿಗೆ ಆಶ್ಚರ್ಯವಾಗುತ್ತದೆ. ಆಗ ಚೆನ್ನಪ್ಪ ಪ್ರಾಣಾಚಾರ್ಯರಿಗೆ ಕೈಮುಗಿದು "ಎಲ್ಲ ಡಾಕ್ಟರೂ ಇವರೇ. ಇವರೇ ನನಗೆ ದೇವರೂ ಸಹ" ಎಂದು ಸತ್ಯನ್ ಡಾಕ್ಟರ್‌ಗೆ ಚೆನ್ನಪ್ಪ ತಿಳಿಸುತ್ತಾನೆ". (ಅದೇ; ಪು.೮೦) ಇಲ್ಲಿ ದೇವರಿಗಿಂತ ಬೇರೆ ಡಾಕ್ಟರ್ ಇಲ್ಲ ಎಂಬ ಗ್ರಾಮೀಣರ ನಂಬಿಕೆ ಒಂದು ಅಂಶದಲ್ಲಿ ಮೆಚ್ಚಬಹುದು. ಪ್ರಾಣೇಚಾರ್ಯರು ಸಹ ತಮಗೆ ಚೆನ್ನಪ್ಪನಿಂದ ಬಂದ ಅಭಿನಂದನೆಯನ್ನು ವಿನಯದಿಂದ ಮಾನ್ಯ ಮಾಡುತ್ತಾರೆ. ಹಿರಿಯರ ಕೃಪೆ, ದೇವರ ಆಶೀರ್ವಾದ ಎಲ್ಲಕ್ಕಿಂತ ದೊಡ್ಡದು ಎಂಬ ಅಭಿಪ್ರಾಯವನ್ನು ಗೊರೂರವರು ಈ ಘಟನೆಯಲ್ಲಿ ಸೂಚಿಸಿದ್ದಾರೆ.

ನಂಬಿಕೆ ಹಾಗೂ ವಿಚಾರವಂತಿಕೆ ನಡುವೆ ಅನೇಕ ವೇಳೆ ಗ್ರಾಮೀಣರ ಬದುಕಿನಲ್ಲಿ ಸಂಘರ್ಷ ಆಗಿರುವುದನ್ನು ಗೊರೂರವರು ಉಲ್ಲೇಖ ಮಾಡಿದ್ದಾರೆ. ಅಪರೂಪಕ್ಕೆ ಕೆಲವು ಪ್ರಸಂಗಗಳಲ್ಲಿ ನಂಬಿಕೆಗೆ ಪುಷ್ಟಿ ಬಂದಿರುವುದನ್ನು ಗ್ರಾಮೀಣರ ಜೀವನ ಘಟನೆಗಳಲ್ಲಿ ನಾವು ಕಾಣಬಹುದು. ಕ್ಷೇತ್ರದಲ್ಲಿ ರಾತ್ರಿಯನ್ನು ಕಳೆಯಬೇಕು ಎಂದು ಒಂದು ನಂಬಿಕೆ ಇದೆ. ನಂಜುಂಡ ಈ ನಂಬಿಕೆಗೆ ವಿರುದ್ಧವಾಗಿ ತಾಯಿ ಮಾತನ್ನು ಮೀರಿ ಪ್ರಯಾಣ ಮುಂದುವರೆಸಲು ಪ್ರಯತ್ನಿಸಿ ವಿಫಲನಾಗುತ್ತಾನೆ. "ಆ ಕ್ಷೇತ್ರದಲ್ಲಿ ಒಂದು ರಾತ್ರಿ ತಂಗಬೇಕೆಂಬುದು ಪದ್ಧತಿ. ನಾನು ಪದ್ಧತಿಯನ್ನೇನೋ ಕಿತ್ತು ಹಾಕಿದೆ. ಅದರ ಫಲ ಈ ವನವಾಸ" (ಅದೇ; ಪು.೯೩) ಎಂದು ನಂಜುಂಡ ಪದ್ಧತಿಯನ್ನು ಮಾನ್ಯಮಾಡಿ ಹೇಳುತ್ತಾನೆ.

ದೇವರಲ್ಲಿ ಹೂವಿನ ಪ್ರಸಾದವನ್ನು ಕೇಳುವ ನಂಬಿಕೆ ಗ್ರಾಮೀಣ ಪರಿಸರದಲ್ಲಿ ಕಾಣುವ ಒಂದು ನಂಬಿಕೆಯ ಸಂಪ್ರದಾಯವಾಗಿದೆ. ಬದುಕಿನ ಇಕ್ಕಟ್ಟಿನ ಪರಿಸ್ಥಿತಿಯನ್ನು ನಿವಾರಿಸಿಕೊಳ್ಳಲು ಗ್ರಾಮೀಣ ಜನ ಸುಲಭವಾಗಿ ಅನುಸರಿಸುವ ಒಂದು ಪದ್ಧತಿ ಇದಾಗಿತ್ತು. 'ಬೈಲಹಳ್ಳಿ ಸರ್ವೆ' ಕೃತಿಯಲ್ಲಿ ಸರ್ಕಾರಿ ಕೆಲಸಕ್ಕೆ ಆಳನ್ನು ಕಳುಹಿಸುವ ಬಗ್ಗೆ ಗ್ರಾಮಸ್ಥರಲ್ಲಿ ಚರ್ಚೆ ಉಂಟಾಯಿತು. ಆಗ ರಿಯಾಯ್ತಿ ಕೊಡೋಕೆ ನಮಗೆ ಅಧಿಕಾರ ಇಲ್ಲ ದೇವರನ್ನು ಕೇಳೋಣ ಎಂದು ರೈತರು ಐನೋರಿಗೆ ಹೇಳುತ್ತಾರೆ. ಐನೋರು ತನ್ನ ಅಹವಾಲನ್ನು ದೇವರ ಮುಂದೆ ಇಟ್ಟು "ನಾನು ಅಳಿಯೋಕೆ ಹೋಗಬೇಕಾದ್ರೆ ಬಲಗಡೆ ಕೊಡು, ಇಲ್ಲದಿದ್ದರೆ ಎಡಗಡೆ ಕೊಡು ಎಂಬುದಾಗಿ ಪ್ರಾರ್ಥಿಸಿದನು. ನೆರೆದಿದ್ದವರೆಲ್ಲಾ ಗಟ್ಟಿಯಾಗಿ ಉಸಿರು ಸಹ ಬಿಡದೆ ದೇವರ ಕಡೆಯೇ ನೋಡುತ್ತಿದ್ದರು. ಸ್ವಲ್ಪ ಹೊತ್ತಿನೊಳಗಾಗಿ ದೇವರ ನೆತ್ತಿಯ ಮೇಲಿಂದ ಹೂವು ಕೆಳಕ್ಕೆ ಬಿದ್ದಿತು" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೪೨) ಎಂಬುದಾಗಿ ಹೇಳಿ ಪ್ರಸಾದದ ಸಂಗತಿಯನ್ನು ಗೊರೂರವರು ಮುಗಿಸುತ್ತಾರೆ.

'ಸೀತೆ ದಂಡು' ನಂಬಿಕೆ ಬೈಲಹಳ್ಳಿ ಪ್ರಾಂತ್ಯದಲ್ಲಿ ಕಾಣುವ ವಿಶಿಷ್ಟ ನಂಬಿಕೆಯಾಗಿದೆ. "ಶ್ರೀಮುಖ ಸಂವತ್ಸರದ ಆರು ತಿಂಗಳಿನಲ್ಲಿ ಪ್ರತಿ ಒಂದು ಗ್ರಾಮವಾದರೂ ಸ್ತ್ರೀ ವೇಷ ಧರಿಸಿ ಕಡೆ ಪಕ್ಷ ಇಪ್ಪತ್ತು ಗ್ರಾಮಗಳನ್ನಾದರೂ ಸುತ್ತಿ ಆ ರೈತರಿಗೆ ಅವರು ಮುಂದಲ ತಮ್ಮ ಕರ್ತವ್ಯಕ್ಕೆ ಸೇರಿದ ಇಪ್ಪತ್ತು ಗ್ರಾಮಗಳನ್ನು ಸುತ್ತಲು ಹೇಳಬೇಕು. ಪ್ರತಿಯೊಂದು ಗ್ರಾಮಕ್ಕೂ ಪ್ರವೇಶ ಮಾಡಿದ ಇಂಥ ಹೆಂಗಸರ ಗುಂಪು ಆ ಊರಿನ ಮುಂದುಗಡೆ ಒಂದು ತೋರಣ ಕಟ್ಟಬೇಕು. ಯಾವ ಊರಿನಲ್ಲಿ ತೋರಣ ಇದೆ ಆ ಊರಿಗೆ ಬೇರೆ ಸೀತೆ ದಂಡುಗಳು ಹೋಗ ಕೂಡದು. ಇದು ಸುಳ್ಳೆಂದು ಯಾರಾದರೂ ಉದಾಸೀನ ಮಾಡುವುದಾದರೆ ಅವರು ಗೋಮಾಂಸ ತಿಂದ ಹಾಗೆ; ನಿದ್ದೆಯಲ್ಲಿದ್ದವರನ್ನು ಕೊಂದ ಹಾಗೆ. ..... ಊರು ಬಿಡುವಾಗ ಪ್ರತಿಯೊಬ್ಬರೂ ಮಡಿಯಾಗಿ ಸ್ನಾನ ಮಾಡಿ ದೇವರಿಗೆ ಕೈಮುಗಿದು ತಾವು ಎರವಾಗಿ ತಂದಿರುವ ಸೀರೇನ ಉಟ್ಟುಕೊಂಡು ಮನೆ ಬಿಡತಾರೆ. ಸಾಯಂಕಾಲ ನಾವು ಗ್ರಾಮಗಳನ್ನು ಪ್ರದಕ್ಷಿಣ ಮಾಡಿಕೊಂಡು ಊರಿಗೆ ಹೋಗುವ ವೇಳೆಗೆ ನಮ್ಮ ಮನೆಗಳಲ್ಲಿ ಸಾರಿಸಿ ರಂಗವಲ್ಲಿ ಇಟ್ಟು ಪಾಯಸ ತಂಬಿಟ್ಟು ಮಾಡಿ ನಮಗಾಗಿ ಕಾಯುತ್ತಿರುತ್ತಾರೆ". (ಅದೇ; ಪು.೯೧) ಇಲ್ಲಿ ಜನಪದ ನಂಬಿಕೆಯ ಕತೆ ಎಲ್ಲ ಜನಪದ ನಂಬಿಕೆಯ ಕತೆಯಂತೆ ಸ್ವಾರಸ್ಯಕರವಾಗಿದೆ.

ಗ್ರಾಮೀಣ ಜನರ ಜನಪದ ಜೀವನಾಡಿಯನ್ನು ಮಿಡಿಯುವಲ್ಲಿ ಲೇಖಕರು ಸಿದ್ಧಹಸ್ತರು. ಅವರು ಜನಪದ ಜೀವನದಲ್ಲಿ ತೋರಿಸುವ ಆಸಕ್ತಿ ಅದರಲ್ಲಿ ಒಂದಾಗಿ ವಿಷಯಗಳನ್ನು ವ್ಯಕ್ತಪಡಿಸುವ ರೀತಿ ಅತ್ಯಂತ ಸಹಜವಾಗಿದೆ. ಈ ಜನಪದ ನಂಬಿಕೆಗಳು ಗ್ರಾಮೀಣ ಜನಕ್ಕೆ ಜೀವನದ ನಂಬಿಕೆ ಎನ್ನುವಷ್ಟರ ಮಟ್ಟಿಗೆ ಅನಿವಾರ್ಯವಾಗಿ ಉಳಿದು ಬಂದಿದೆ. ಕೆಲವು ನಂಬಿಕೆಗಳು ಅರ್ಥ ಶೂನ್ಯ ಎನಿಸಿದರು ಆಚರಣೆಯಲ್ಲಿ ಉಳಿದು ಬಂದಿರುವುದು ಅಷ್ಟೇ ಮುಖ್ಯ ಎನಿಸುತ್ತದೆ.

ಮಾನವನ ಬದುಕಿನಲ್ಲಿ ಸಾಫಲ್ಯತೆಯನ್ನು ಕಾಣಬೇಕಾದರೆ ಆತ ಬದುಕಬೇಕಾದ ರೀತಿ ಹೇಗಿರಬೇಕೆಂಬುದನ್ನು ಗೊರೂರರವರು ತಮ್ಮ ಕೃತಿಗಳಲ್ಲಿ ಬಹುಮುಖ ಭಾವನೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಮಾನವ ಧರ್ಮದ ನೆಲೆಗಟ್ಟಿನ ಮೇಲೆ ತಾನು ಬದುಕಬೇಕು. 'ಇಲ್ಲಿ ಧರ್ಮ ಎಂದರೆ ಅರ್ಥಪೂರ್ಣವಾದ ಆಸ್ತಿಕ ಮನೋಧರ್ಮಕ್ಕೆ ಸಮ್ಮತವಾದ ಕಾಯಕ ಮಾನ್ಯವಾದ ಬದುಕಿನ ರೀತಿ'. ಇಂತಹ ನಿಜವಾದ ಧರ್ಮ ಸಮ್ಮತವಾದ ಬದುಕು ವ್ಯಕ್ತಿಗೂ ಶ್ರೇಯಸ್ಕರ ಸಮಾಜಕ್ಕೂ ಕ್ಷೇಮಕರ. ನಿಜವಾದ ದಾರ್ಶನಿಕರೆಲ್ಲರು ಅಪೇಕ್ಷೆ ಪಡುವುದು ಇಂತಹ ಪರಿಪೂರ್ಣ ಪ್ರಜ್ಞಾವಂತ ಧಾರ್ಮಿಕ ಬದುಕನ್ನೇ ಎಂಬುದನ್ನು ಗೊರೂರರವರ ಸಾಹಿತ್ಯವನ್ನು ಓದಿದಾಗಲೆಲ್ಲ ಮತ್ತೆ ಮತ್ತೆ ನೆನಪು ಮಾಡಿಕೊಳ್ಳುತ್ತೇವೆ.

ಬದುಕಿನಲ್ಲಿ ನಮ್ಮ ಆಚರಣೆಗಳು ಹಲವು ರೀತಿಯಲ್ಲಿ ಅರ್ಥಪೂರ್ಣ ಉಪಯುಕ್ತ ಆಚರಣೆಗಳಾಗಿದ್ದರೆ ಮತ್ತೆ ಕೆಲವು ಆಚರಣೆಗಳು ಸಾಂಪ್ರದಾಯಿಕವಾಗಿ ಉಳಿದು ಬಂದ, ಹರಿದು ಬಂದ, ಅರ್ಥಶೂನ್ಯ ಆಚರಣೆಗಳಾಗಿರುತ್ತವೆ. ನಮ್ಮ ಎಲ್ಲ ಆಚರಣೆಗಳನ್ನು ವಿವೇಕದ ಒರೆಗಲ್ಲಿಗೆ ವರ್ತಮಾನದ ಸ್ಥಿತಿಗತಿಗೆ

ಒರೆಹಚ್ಚಿ ನೋಡಿ ಯೋಗ್ಯವಾದುವುಗಳನ್ನು ಮಾತ್ರ ಉಳಿಸಿಕೊಳ್ಳಬೇಕು. ಅನಪೇಕ್ಷಿತ ಆಚರಣೆಗಳು ನಮ್ಮ ಬದುಕಿನಿಂದ ದೂರವಾಗಬೇಕು. ಹಾಗೆ ಆದಾಗ ನಮ್ಮ ಬದುಕು ಜಟಿಲವಾಗುವುದಿಲ್ಲ ಸರಳ ಸುಗಮ ಆಗುತ್ತದೆ. ನಾವು ಸಮಾಜಕ್ಕೆ ಉಪಯುಕ್ತ ಜೀವಿಗಳಾಗುತ್ತೇವೆ. ಗೊರೂರವರು ತಮ್ಮ ಕೃತಿಗಳಲ್ಲಿ ಗ್ರಾಮೀಣ ಜನರ ಜೀವನದಲ್ಲಿ ಕಾಣುವ ಅನೇಕ ಆಚರಣೆಗಳ ಬಗ್ಗೆ ವಿವೇಚಿಸುವಾಗ ನಿದರ್ಶನಗಳ ಮೂಲಕ ನಮ್ಮ ಆಚರಣೆಗಳನ್ನು ಸೂಕ್ತವಾದ ರೀತಿಯಲ್ಲಿ ವಿವೇಚಿಸಿದ್ದಾರೆ. ಈ ಸಂದರ್ಭ ದಲ್ಲಿಯೂ ಲೇಖಕರ ನಿಶ್ಚಲ ನಿರ್ಮಲ ಮನಸ್ಸು ವೈಚಾರಿಕ ಪ್ರಜ್ಞೆ ನಮಗೆ ಮನವರಿಕೆಯಾಗುತ್ತದೆ. ನಮ್ಮ ಬದುಕಿನ ಆಚರಣೆಗಳು ನಮ್ಮ ಬದುಕಿಗೆ ಭೂಷಣವಾದ ತೊಡವು ಆಗಬೇಕೆ ಹೊರತು ನಮಗೆ ಉರುಳಾಗಬಾರದು ಎಂಬುದು ಗೊರೂರವರ ಅಭಿಪ್ರಾಯವಾಗಿದೆ. ಅವಶ್ಯವಾಗಿ ಅನುಸರಿಸಲೇಬೇಕಾದ ಆಚರಣೆಗಳನ್ನು ನಮ್ಮ ಬದುಕಿನಲ್ಲಿ ಕೈಬಿಡಬಾರದು ಇದಕ್ಕೆ ಬದಲಾಗಿ ಅವಶ್ಯಕವಾಗಿ ಅನುಸರಿಸಲೇ ಬೇಕು ಎಂಬ ಪುರಾತನ ಸೂಕ್ತಿಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಒಳ್ಳೆಯ ಆಚರಣೆಗಳನ್ನು ಬಿಡುವುದು ಎಷ್ಟು ಅಪಾಯಕಾರಿಯೋ ಅರ್ಥಶೂನ್ಯವಾದ ಕೆಟ್ಟ ಆಚರಣೆಗಳನ್ನು ಕಟ್ಟಿಕೊಂಡು ಬಾಳುವುದು ಅದಕ್ಕಿಂತ ಅಪಾಯಕಾರಿ. ಹೃದಯ ಸಮ್ಮತವಾದ ಆಚರಣೆಗಳು ನಮ್ಮಲ್ಲಿ ಉಳಿದು ಬೆಳೆದು ಮುಂದು ವರೆಯಬೇಕು ಎಂಬುದು ಎಲ್ಲ ದಾರ್ಶನಿಕರ ನಿಲುವು.

ಬದುಕಿನಲ್ಲಿ ಅರ್ಥಪೂರ್ಣವಾದ ಆಚರಣೆ ಬದುಕಿನ ಒಂದು ಕಣ್ಣಾದರೆ ವಿಚಾರಪೂರ್ಣವಾದ ನಂಬಿಕೆಗಳು ಮತ್ತೊಂದು ಕಣ್ಣಾಗುತ್ತದೆ. ನಮ್ಮ ಅನೇಕ ನಂಬಿಕೆಗಳಲ್ಲಿ ಅಜ್ಞಾನದ ಕುರುಡುತನವನ್ನು ಕಾಣುತ್ತೇವೆ. ಇಂಥಹ ಕುರುಡು ನಂಬಿಕೆಗಳು ನಮ್ಮ ಬದುಕಿಗಷ್ಟೇ ಮಾರಕವಾಗದೆ ನಮ್ಮ ಪರಿಸರದವರ ಬದುಕಿಗೂ ಅತ್ಯಂತ ಮಾರಕವಾಗುತ್ತವೆ. ಅರ್ಥಶೂನ್ಯವಾದ ನಂಬಿಕೆಗಳು ಅವೈಜ್ಞಾನಿಕ ನಂಬಿಕೆಗಳು ನಮ್ಮ ಸಮಾಜದಲ್ಲಿ ಬಿತ್ತುವ ವಿಷದ ಬೆಳೆಗಳಾಗುತ್ತವೆ. ಇಂತಹ ನೀಚ ನಂಬಿಕೆಗಳ ವಲಯದಿಂದ ಸಮಾಜ ಮುಕ್ತವಾಗಬೇಕಾದರೆ ಅನೇಕ ಶತಮಾನಗಳೇ ಬೇಕಾಗುತ್ತವೆ. ಭಯದ ಬದುಕಿನಲ್ಲಿ ಬಾಳುವ ನಮಗೆ ಅರ್ಥಪೂರ್ಣ ನಂಬಿಕೆಗಳು ಬದುಕಿಗೆ ಭದ್ರ ಊರುಗೋಲಾಗುತ್ತದೆ - ಭದ್ರ ನೆಲೆಗಟ್ಟು ಆಗುತ್ತದೆ - ಮಂಗಳ ಭೂಷಣವೂ ಆಗುತ್ತದೆ. ಚಿಕಿತ್ಸಕ ದೃಷ್ಟಿಯ ವೈಜ್ಞಾನಿಕ ಸತ್ಯದ ಒನ್ನೆಲೆಯಲ್ಲಿ ಗಟ್ಟಿಯಾದ ನಂಬಿಕೆಗಳನ್ನು ಗೊರೂರವರು ಪುರಸ್ಕರಿಸುತ್ತಾರೆ. ಆದರೆ ವ್ಯಕ್ತಿ ಜೀವನಕ್ಕೆ ಸಾಮಾಜಿಕ ಜೀವನಕ್ಕೆ ಮಾರಕವಾದ ಹಾಸ್ಯಾಸ್ಪದವಾದ ನಂಬಿಕೆಗಳನ್ನು ಸಾಕಷ್ಟು ಉದಾಹರಣೆಗಳ ಮೂಲಕ ಲೇಖಕರು ತಮ್ಮ ಕೃತಿಗಳಲ್ಲಿ ಖಂಡಿಸಿ ಲೇವಡಿ ಮಾಡಿದ್ದಾರೆ. ವಿರುದ್ಧವಾದ ಧರ್ಮ - ಆಚರಣೆ - ನಂಬಿಕೆಗಳ ಲೇವಡಿಯಲ್ಲಿ ಗೊರೂರವರು ತೋರಿಸುವ ಚಿಕಿತ್ಸಕ ದೃಷ್ಟಿ ಎಷ್ಟು ಮಾನ್ಯವಾಗಿದೆಯೋ ಅಂತಹ ಸಂದರ್ಭದಲ್ಲಿ ಲೇವಡಿ ಮಾಡುವಾಗ ಅವರಲ್ಲಿ ಸಹಜವಾಗಿ ಕಂಡುಬರುವ ಹಾಸ್ಯಪ್ರಜ್ಞೆ ನಮಗೆ ಚೇತೋಹಾರಿಯಾಗಿದೆ. ಈ ಕಾರಣದಿಂದಲೇ ಗೊರೂರವರ ಕೃತಿಗಳು ನಮ್ಮ ಬುದ್ಧಿಗೆ ಬೆಳಕನ್ನು ನಮ್ಮ ಮನಸ್ಸಿಗೆ ಉಲ್ಲಾಸವನ್ನು ತಂದುಕೊಡುತ್ತದೆ. ಹೀಗೆ ಒಂದು ಉದಾತ್ತವಾದ ಮಾನವ ಧರ್ಮದ ನೆಲೆಗಟ್ಟಿನಲ್ಲಿ ರೂಪುಗೊಳ್ಳಬೇಕಾದ ಗ್ರಾಮಸಮಾಜದ ಪರಿಕಲ್ಪನೆಯನ್ನು ಗೊರೂರವರು ತಮ್ಮ ಕೃತಿಗಳ ಮೂಲಕ ಕಟ್ಟಿ ಕೊಡುತ್ತಾರೆ.

೫.೬. ಗ್ರಾಮೀಣ ಕಲೆ-ಸಂಸ್ಕೃತಿ

ಕಲೆ ಪಕ್ವ ಮನಸ್ಸಿನ ಕ್ಷೇಮ ಮನಸ್ಸಿನ ವಿಶಿಷ್ಟ ಕಲ್ಪನೆಯ ಮೂರ್ತಿ ರೂಪ. ಕಲೆಯ ಉಗಮಕ್ಕೆ ವ್ಯಕ್ತಿಯ ಮನಸ್ಸಿನ ಈ ಸ್ಥಿತಿ ಒಂದು ಕಾರಣವಾದರೆ ಅವನಲ್ಲಿ ಅಂತರ್ಗತವಾಗಿರುವ ಪ್ರತಿಭಾಶಕ್ತಿ ಮತ್ತೊಂದು ರೀತಿಯಲ್ಲಿ ಕಾರಣವಾಗುತ್ತದೆ. ಸುಂದರವಾದ ಪರಿಣಾಮಕಾರಿಯಾದ ಕಲೆ ಕಲಾವಿದನ ಮನಸ್ಸಿನಲ್ಲಿ ಮೂಡಿ ಕಲಾಸಕ್ತನ ಅಂತರಂಗಕ್ಕೆ ಪುಟಿದು ಸಾರ್ಥಕತೆಯನ್ನು ಪಡೆಯುತ್ತದೆ. ಇಂತಹ ಕಲೆಗೆ ಆಕರ್ಷಿತರಾಗದ ವ್ಯಕ್ತಿಗಳು ಇರುವುದಿಲ್ಲ, ಇದ್ದರೂ ಸಹ ಅವರು ಪಶು ಸಮಾನರೆಂದು ಸುಭಾಷಿತಗಳು ಸಾರಿ ಹೇಳುತ್ತವೆ. ವಿದ್ಯೆ ಇಲ್ಲದಿದ್ದರೂ ಕಲೆಯ ಆಸಕ್ತಿ ಇದ್ದರೆ ಅದು ಮನುಷ್ಯತನಕ್ಕೆ ಭೂಷಣವೆಂದು ಪ್ರಾಜ್ಞರು ತಿಳಿಸುತ್ತಾರೆ. ಕಲೆಯನ್ನು ಸೃಷ್ಟಿಸಿದ ವ್ಯಕ್ತಿ - ಕಲೆಗಾರ ಎಷ್ಟು ಮಾನ್ಯನೋ ಕಲಾ ಆಸ್ವಾದಕ - ಆರಾಧಕ ಅಷ್ಟೇ ಮಾನ್ಯ ಎಂಬುದು ಶತಸತ್ಯ ನುಡಿ. ಕಲೆ ಕಲೆಗಾರನ ಮನಸ್ಸಿಗೆ ತೃಪ್ತಿ ಆನಂದವನ್ನು ತಂದಂತೆ ಕಲಾವಿದನ ಮನಸ್ಸಿಗೂ ಇಂತಹದೇ ಅನುಭವವನ್ನು ತಂದು ಕೊಡುತ್ತದೆ. ಹೀಗೆ ಕಲೆಯಿಂದ ಕಲೆಗಾರ ಕಲಾ ಆಸ್ವಾದಕ ಇಬ್ಬರೂ ಸಾಂಸ್ಕೃತಿಕ ಅನನ್ಯತೆಯ ಸಂಸ್ಕಾರವನ್ನು ಪಡೆಯುತ್ತಾರೆ. ಕಲೆಗಳಲ್ಲಿ ಸಂಗೀತ, ಸಾಹಿತ್ಯ, ನೃತ್ಯ, ಶಿಲ್ಪ ಹಾಗೂ ಚಿತ್ರ ಎಲ್ಲವೂ ಒಳಗೊಳ್ಳುತ್ತದೆ. ಇವುಗಳನ್ನು ಲಲಿತ ಕಲೆಗಳೆಂದು ವಿಶಿಷ್ಟ ಪಾರಿಭಾಷಿಕ ಶಬ್ದದಲ್ಲಿ ಗುರುತಿಸುವುದು ವಾಡಿಕೆಯಾಗಿದೆ. ಕಲೆಯ ಪ್ರಭಾವ ಪರಿಸರದಲ್ಲಿ ಅತ್ಯಂತ ರಂಜನೀಯವಾಗಿರುತ್ತದೆ, ಅಷ್ಟೇ ಸದ್ಬೋಧಕವೂ ಆಗಿರುತ್ತದೆ. ಈ ದೃಷ್ಟಿಯಿಂದಲೇ ಕಲೆಯನ್ನು ವ್ಯಕ್ತಿಯ ವ್ಯಕ್ತಿತ್ವದ ಉತ್ಕರ್ಷಶಾಲಿ ಶಕ್ತಿಯೆಂದು ಕರೆದಿರುವುದು. ಒಟ್ಟು ಸಮಾಜವನ್ನು ಪರಿಣಾಮಕಾರಿಯಾಗಿ ಪರಿವರ್ತಿಸುವ ಅದ್ಭುತ ಶಕ್ತಿಯನ್ನು ಕಲೆ ಪಡೆದಿದೆ ಎಂಬುದನ್ನು ಪ್ರಾಜ್ಞರು ಒಪ್ಪಿಕೊಂಡಿದ್ದಾರೆ. ಮಾನವನ ನಾಗರಿಕತೆ ಸಂಸ್ಕೃತಿಯ ವಿಕಾಸವನ್ನು ಗಮನಿಸಿದಾಗ ಕಲೆಯ ಮಹತ್ವ ನಮಗೆ ಚೆನ್ನಾಗಿ ಮನದಟ್ಟಾಗುತ್ತದೆ.

ಸಂಸ್ಕೃತಿ ಮಾನವನ ಒಂದು ಅದ್ಭುತ ಸಾಧನೆಯ ಕ್ರಿಯಾಶಕ್ತಿಯ ಫಲವೆಂದು ಮಾನವಿಕ ಶಾಸ್ತ್ರ ಸ್ಪಷ್ಟಪಡಿಸಿದೆ. ಈ ಸಂಸ್ಕೃತಿಯಲ್ಲಿ ಬಹುಮಟ್ಟಿನ ಅಂಶದಲ್ಲಿ ಏಕತೆಯನ್ನು ಗುರುತಿಸುವಂತೆ ಕೆಲವು ವಿಶಿಷ್ಟ ಅಂಶಗಳಲ್ಲಿ ಅನನ್ಯತೆಯನ್ನು ನೋಡಬಹುದು. ಸಂಸ್ಕೃತಿಯ ಬೆಳವಣಿಗೆಗೆ - ನಾಗರಿಕತೆಯ ಬೆಳವಣಿಗೆ ಪುಟ ಕೊಡುತ್ತದೆ ಎಂಬ ಅಭಿಪ್ರಾಯ ಸರ್ವಶ್ರೇಷ್ಠ ಸತ್ಯ. ಈ ದೃಷ್ಟಿಯಿಂದಲೇ ಸಂಸ್ಕೃತಿ ಇಲ್ಲದ ನಾಗರಿಕತೆ ನಾಗರಿಕತೆಯೇ ಅಲ್ಲವೆಂದು ಒಪ್ಪುವಂತಹ ಸಿದ್ಧಾಂತ ಮಾಡಿದ್ದಾರೆ. ವ್ಯಕ್ತಿ ಜೀವನದಲ್ಲಿ ಸಾಮಾಜಿಕ ಜೀವನದಲ್ಲಿ ಹೀಗೆ ಸಂಸ್ಕೃತಿ ನಾಗರಿಕತೆಗಳ ಸಹಕಾರ ಮೇಳವನ್ನು ನಾವು ಹಿಂದಿನಿಂದಲೂ ನೋಡುತ್ತೇವೆ. ಇದೇ ರೀತಿಯಲ್ಲಿ ಮಾನವಿಕ ವಿಕಾಸದಲ್ಲಿ ಸಂಸ್ಕೃತಿ ಮತ್ತು ನಾಗರಿಕತೆಗಳ ಅವಿನಾಭಾವ ಅನಿವಾರ್ಯ ಸಹಕಾರ ಮೇಳ ಮುಂದುವರೆಯುತ್ತದೆ. ವ್ಯಕ್ತಿಯ ಅಜ್ಞಾನ ಮೌಢ್ಯತೆಗಳು ಸಂಸ್ಕೃತಿಯ ಹಾಗೂ ನಾಗರಿಕತೆಯ ವಿಕಾಸಕ್ಕೆ ತೊಡಕು ಆಗುತ್ತದೆ, ಮುಂದುವರೆದರೆ ಮಾರಕವೂ ಆಗುತ್ತದೆ.

ನಾಗರಿಕತೆಯ ಸಂಸ್ಕೃತಿಯ ಇತಿಹಾಸವನ್ನು ಕುರಿತು ಹೇಳುವಾಗ ಪ್ರಸಿದ್ಧ ಇತಿಹಾಸ ಸಂಶೋಧಕ ವಿಲ್‌ಡುರೆಂಟ್ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ವಿಲ್‌ಡುರೆಂಟ್‌ರ ವಿಚಾರಧಾರೆಯ ಈ ಸೂತ್ರವನ್ನು ಮುಂದಿನ ವಿದ್ವಾಂಸರೆಲ್ಲರು ಒಪ್ಪಿಕೊಂಡು ಅನುಮೋದಿಸಿರುವುದು ವಿಶೇಷ ಸಂಗತಿ.

ಸಂಸ್ಕೃತಿ ಮತ್ತು ನಾಗರಿಕತೆಯ ವಿಕಾಸ ಕುತೂಹಲಕಾರಿಯಾಗಿದೆ. ಈ ನಿರ್ದಿಷ್ಟ ವಿಕಾಸಕ್ಕೆ ಹಲವು ಸಂಸ್ಕೃತಿಗಳ ನಾಗರಿಕತೆಗಳ ಕೊಳ್ಕೊಡೆಯು ಸಹಕಾರಿಯಾಗಿರುತ್ತದೆ. ಸಂಸ್ಕೃತಿ ಹಾಗೂ ನಾಗರಿಕತೆಯ ಸ್ವೀಕಾರಕ್ಕೆ ಶುದ್ಧ ಮನಸ್ಸು ಹಾಗೂ ಕುತೂಹಲದಿಂದ ಕೂಡಿದ ಆಸಕ್ತಿ ವ್ಯಕ್ತಿಯಲ್ಲಿ ಇರಬೇಕು. ಇಲ್ಲಿ ವಿದ್ಯೆ ಪ್ರಧಾನವಾಗಿ ಉಳಿಯುವುದಿಲ್ಲ. ಅವಿದ್ಯಾವಂತರಲ್ಲಿಯೂ ಸುಸಂಸ್ಕೃತಿಯ ಉತ್ತಮ ನಾಗರಿಕತೆಯನ್ನು ಕಾಣಬಹುದು. ಈ ದೃಷ್ಟಿಯಿಂದಲೇ ಗ್ರಾಮೀಣ ಜನರ ಬದುಕನ್ನು ಕುರಿತ ಸಾಹಿತ್ಯವನ್ನು ನಾವು ಗಂಭೀರ ವಾಗಿ ಅಧ್ಯಯನ ಮಾಡುತ್ತೇವೆ.

ಗೊರೂರವರ ಸಾಹಿತ್ಯ-ಸಂಸ್ಕೃತಿ ನಾಗರಿಕತೆಯ ಅಧ್ಯಯನದ ದೃಷ್ಟಿಯಿಂದಲೂ ಅತ್ಯುತ್ತಮವಾದದ್ದು. ಅವರ ಕೃತಿಗಳಿಗೆ ವಿಶೇಷವಾದ ಸಾಹಿತ್ಯಿಕ ಮೌಲ್ಯ ಬಂದಿರುವುದು ಅಲ್ಲಿ ಕಾಣುವ ಸಾಂಸ್ಕೃತಿಕ ಅನನ್ಯತೆ ಹಾಗೂ ನಾಗರಿಕತೆಯ ಮೌಲ್ಯಗಳ ಸಂಗತಿಗಳಿಂದಲೆ ಎಂಬುದು ನಮಗೆ ಮನವರಿಕೆಯಾಗುತ್ತದೆ. ಗ್ರಾಮೀಣ ಜನರಲ್ಲಿ ಸಂಸ್ಕೃತಿಯ - ನಾಗರಿಕತೆಯ ಶುದ್ಧ ಮೂಲ ಸೆಲೆಯನ್ನು ಗುರುತಿಸಬಹುದು.

ಪ್ರಜ್ಞಾವಂತ ವಿಚಾರವಂತ ಸಾಹಿತಿ ತನ್ನ ಕೃತಿ ಚಿಂತನೆಯಲ್ಲಿ ಸಂಸ್ಕೃತಿ ಮತ್ತು ನಾಗರಿಕತೆಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಸಂಯೋಜಿಸಿರುತ್ತಾನೆ. ಸಾಹಿತ್ಯ ಕೃತಿಯಲ್ಲಿ ವ್ಯಕ್ತಿ ಹಾಗೂ ಸಮಾಜದ ಸ್ಥಿತಿ ಚಿತ್ರ ರೂಢ ಮೂಲವಾಗಿ ಇರುತ್ತದೆ. ವ್ಯಕ್ತಿ ಜೀವನದ ಎಲ್ಲ ಆಗುಹೋಗುಗಳಿಗೆ ಅವನ ಪರಿಸರದಲ್ಲಿರುವ ಸಂಸ್ಕೃತಿ ಹಾಗೂ ನಾಗರಿಕತೆ ಮೂಲ ಕಾರಣವಾಗಿರುತ್ತದೆ. ಈ ಕಾರಣದಿಂದಲೇ ಸಂಸ್ಕೃತಿ ಮತ್ತು ನಾಗರಿಕತೆಗಳ ಮುಖರೂಪ ವ್ಯಕ್ತಿ ಜೀವನ ಎಂದು ವಿದ್ವಾಂಸರು ಕರೆದಿದ್ದಾರೆ. ಮಾನವನ ಬುದ್ಧಿ ಭಾವನೆಗಳು ಪ್ರಬುದ್ಧವಾದಂತೆ ಪ್ರವರ್ಧಮಾನಕ್ಕೆ ಬಂದಂತೆ ಅವನ ಸಂಸ್ಕೃತಿಯಲ್ಲಿ ನಾಗರಿಕತೆಯಲ್ಲಿ ಅನೇಕ ಸ್ಥಿತ್ಯಂತರಗಳನ್ನು ಬೆಳವಣಿಗೆಯನ್ನು ಗುರುತಿಸಬಹುದು. ಸಾಹಿತ್ಯ ಚರಿತ್ರೆಯನ್ನು ಅಭ್ಯಾಸ ಮಾಡುವಾಗ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯ ಹಿನ್ನೆಲೆಯಲ್ಲಿ ಬೆಳೆದು ಬಂದ ಸಾಹಿತ್ಯವನ್ನು ಹಲವು ಹಂತಗಳಲ್ಲಿ ವಿಂಗಡಿಸುವುದುಂಟು. ಈ ಸಂದರ್ಭದ ಶಿಷ್ಟ ಸಾಹಿತ್ಯದ ಪಾತ್ರ ಎಷ್ಟು ಪ್ರಧಾನ ಎನಿಸುತ್ತದೋ ಜಾನಪದ ಸಾಹಿತ್ಯವೂ ಅಷ್ಟೇ ಮುಖ್ಯ ಎನಿಸುತ್ತದೆ. ಏಕೆಂದರೆ ಗ್ರಾಮೀಣ ಜನ ಹಾಗೂ ಶಿಷ್ಟ ಜನರ ಬದುಕಿನ ರೀತಿಯಲ್ಲಿ ವೈಶಿಷ್ಟ್ಯ ಪೂರ್ಣವಾದ ಬದುಕಿನ ಕಲೆಯನ್ನು ನಾವು ಗುರುತಿಸುತ್ತೇವೆ.

ಕನ್ನಡ ಸಾಹಿತ್ಯವನ್ನು ನಾಡಿನ ಸಾಂಸ್ಕೃತಿಕ ಅಧ್ಯಯನದ ಹಿನ್ನೆಲೆಯಲ್ಲಿ ಬಹಳಷ್ಟು ಜನ ವಿದ್ವಾಂಸರು ಅಭ್ಯಾಸ ಮಾಡಿದ್ದಾರೆ ಹಾಗೂ ಅಧ್ಯಯನ ಮಾಡಿದ್ದಾರೆ. ನಿಡಿದಾದ ಕನ್ನಡ ಸಾಹಿತ್ಯವನ್ನು ಕಾಲ ದೃಷ್ಟಿಯಲ್ಲಿ ಹಲವು ವಿಭಾಗ ಮಾಡಿದ್ದಾರೆ. ಈ ಪ್ರತಿಯೊಂದು ವಿಭಾಗದಲ್ಲಿಯೂ ಸಾಹಿತ್ಯ ಕೃತಿಗಳು

ಸಾಂಸ್ಕೃತಿಕವಾಗಿ ಅನನ್ಯ ಮೇಲ್ಮೆಯನ್ನು ವ್ಯಕ್ತಪಡಿಸಿವೆ. ಇದಕ್ಕೆ ಉದಾಹರಣೆಯಾಗಿ ಕನ್ನಡದಲ್ಲಿ ಕ್ರಿ.ಶ. ಹತ್ತನೇ ಶತಮಾನದ ಸಾಹಿತ್ಯವನ್ನು ವ್ಯಕ್ತಿಯ ಕಲಿತನಕ್ಕೆ, ತ್ಯಾಗ ಗುಣಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟ ಸಾಹಿತ್ಯವೆಂದು ಕರೆಯುತ್ತಾರೆ. ಶರಣ ಸಾಹಿತ್ಯವನ್ನು ಹರಿದಾಸ ಸಾಹಿತ್ಯವನ್ನು ಭಕ್ತಿ ಪಂತದ ಸಾಹಿತ್ಯ ಕೃತಿಗಳೆಂದು ನಿರ್ದೇಶಿಸಿದ್ದಾರೆ. ಇಪ್ಪತ್ತನೆ ಶತಮಾನದ ಕನ್ನಡ ಸಾಹಿತ್ಯವನ್ನು ಪ್ರಧಾನವಾಗಿ ವೈಚಾರಿಕ ಸಾಹಿತ್ಯವೆಂದು ಕರೆದಿರುವುದರ ಜೊತೆಗೆ ಪ್ರತಿಭಟನೆಯ ಸಾಹಿತ್ಯವೆಂದು ವಿಮರ್ಶಕರು ವಿಶ್ಲೇಷಿಸಿದ್ದಾರೆ. ಈ ರೀತಿಯ ಧೋರಣೆಗೆ ಜನ ಸಮುದಾಯದಲ್ಲಿದ್ದ ಜೀವನ ದೃಷ್ಟಿಯೇ ಮೂಲ ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಒಂದೊಂದು ಯುಗದ - ಕಾಲದ ಸಾಹಿತ್ಯವು ಆ ಕಾಲದ ಜನಾಂಗದ ಜೀವನಮೌಲ್ಯಕ್ಕೆ ಸಾಕ್ಷಿಯಾಗಿದೆ. ಉದಾಹರಣೆಗೆ ಅನ್ಯಾಯ ಅನೀತಿಯೊಂದಿಗೆ ಪ್ರತಿಭಟನೆ ಎಲ್ಲ ಕಾಲದಲ್ಲಿಯೂ ಇದ್ದರು ಸಹ ಇಪ್ಪತ್ತನೆಯ ಶತಮಾನದಲ್ಲಿ ಪ್ರತಿಭಟನೆಯ ಗುಣ ತೀವ್ರತೆಯನ್ನು ಗಳಿಸಿಕೊಂಡಿದೆ. ಇಂದು ಕನ್ನಡಿಗರು ಹೊಂದಾಣಿಕೆಯ ಬದುಕಿಗಿಂತ ತಮ್ಮ ಹಕ್ಕು ಮೀಸಲಿನ ಬದುಕಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವುದು ನಮಗೆ ಗೋಚರವಾಗುತ್ತದೆ. ಕುಮಾರವ್ಯಾಸ, ರಾಘವಾಂಕ ಜನರ ಬದುಕಿಗೆ ಪೂರಕವಾದ ಸಾಹಿತ್ಯವನ್ನು ರಚಿಸಿದರೂ ಅಲ್ಲಿಯೂ ಸಹ ಅನ್ಯಾಯದ ವಿರುದ್ಧ, ಜಾತಿಯ ವಿರುದ್ಧ ಪ್ರತಿಭಟನೆಯನ್ನು ಘರ್ಷಣೆಯನ್ನು ಸ್ಪಷ್ಟವಾಗಿ ನೋಡುತ್ತೇವೆ. ರಾಘವಾಂಕ ಜನ ಬದುಕಬೇಕೆಂದು ಕೃತಿ ರಚಿಸಿದರೂ, ಕುಮಾರವ್ಯಾಸ ಇಳೆಯ ಜನ ಮೆಚ್ಚುವ ರೀತಿಯಲ್ಲಿ ಕೃಷ್ಣ ಕತೆಯನ್ನು ಹೇಳಿದ್ದರು ಸುಸಂಸ್ಕೃತ ಬದುಕಿಗೆ ಸೂಕ್ತ ಮಾರ್ಗವನ್ನು ಅವರ ಕಾವ್ಯಗಳಲ್ಲಿ ನಾವು ಕಂಡುಕೊಳ್ಳಬಹುದು. ರಾಷ್ಟ್ರಕವಿ ಕುವೆಂಪು, ಜನಮನದ ಕವಿ ಬೇಂದ್ರೆ ಮಾನವತೆಯನ್ನು ಸಾರಿ ಹೇಳುವ ಕೃತಿಗಳನ್ನು ಈ ಶತಮಾನದಲ್ಲಿ ರಚಿಸಿರುವುದು ವಿಶೇಷ ಸಂಗತಿ. ದಲಿತ ಬಂಡಾಯದ ದನಿಗಳಲ್ಲಿ ಶೋಷಣೆಯ ವಿರುದ್ಧ ಕೆಚ್ಚಿನ ಆಕ್ರೋಶದ ಕಿಡಿಗಳು ನವ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಇಂದು ಗುರುತಿಸಬಹುದು.

ಇಂದಿನ ಕನ್ನಡ ಸಾಹಿತ್ಯದಲ್ಲಿ ವ್ಯಕ್ತಿ ಪ್ರತಿಷ್ಠೆ ಮುಖ್ಯವಾಗಿ ಕಂಡುಬರುವುದಿಲ್ಲ. ಸಾಮಾಜಿಕ ಪ್ರಗತಿ ನ್ಯಾಯ ನಮ್ಮ ಸಾಹಿತ್ಯದ ಮೂಲ ಮಂತ್ರವಾಗಿದೆ. ಇದಕ್ಕೆ ನಿದರ್ಶನವಾಗಿ ಕಾರಂತರ, ಭೈರಪ್ಪನವರ, ಅಡಿಗರ ಕೃತಿಗಳನ್ನು ಗಮನಿಸಬಹುದು. ನಗರ ಜೀವನ ಇಂದು ಎಷ್ಟೇ ಆಕರ್ಷಕವಾಗಿದ್ದರು ಗ್ರಾಮೀಣ ಬದುಕನ್ನು - ಬದುಕಿನ ಬನಿಯನ್ನು ತಿಳಿಸಿರುವ ಸಾಹಿತಿಗಳು ನಮ್ಮಲ್ಲಿ ಇದ್ದಾರೆ. ಅವರಲ್ಲಿ ಅಗ್ರಮಾನ್ಯರು ಗೊರೂರರವರು ಎಂಬುದನ್ನು ಗುರುತಿಸಬಹುದು. ರಾವ್‌ಬಹದ್ದೂರ್‌ರವರ 'ಗ್ರಾಮಾಯಣ' ಗ್ರಾಮೀಣ ಬದುಕಿಗೆ ಒಂದು ಕೈಗನ್ನಡಿ - ಕೈಪಿಡಿ ಆಗಿರುವಂತೆ ಗೊರೂರರವರ ಸಮಸ್ತ ಕೃತಿಗಳು ಈ ಲಕ್ಷಣಗಳನ್ನು ಗಳಿಸಿಕೊಂಡು ವಿಶಿಷ್ಟ ಕೃತಿಗಳಾಗಿವೆ. ಗೊರೂರರವರ ಕೃತಿಗಳು ಗ್ರಾಮೀಣ ಜನರ ಬದುಕಿನ ವೈವಿಧ್ಯತೆಯನ್ನು ನಿರೂಪಿಸುವ ವರ್ತುಲದಲ್ಲಿ ಸಾಫಲ್ಯತೆಯನ್ನು ಗಳಿಸಿಕೊಂಡಿದೆ. ಈ ಕಾರಣದಿಂದಲೇ ಗೊರೂರರವರ ಸಾಹಿತ್ಯವನ್ನು ಜನಪದ ಸಾಹಿತ್ಯದಲ್ಲಿ ಬೇರು ಬಿಟ್ಟು ಬೆಳೆದಿರುವ ಜನಪದ ದನಿಯ ಸಂಸ್ಕೃತಿಯ ಪ್ರಾತಿನಿಧಿಕ ಕೃತಿಗಳೆಂದು ವಿಮರ್ಶಕರು ಹೇಳಿರುವುದು ಅರ್ಥಪೂರ್ಣವೆನಿಸುತ್ತದೆ. ಜನಪದ

ದನಿಯನ್ನು ಶಿಷ್ಟ ಸಾಹಿತ್ಯ ರೂಪದಲ್ಲಿ ಅಭಿವ್ಯಕ್ತಪಡಿಸಿರುವ ಕೀರ್ತಿಗೆ ಗೊರೂರರವರು ಪಾತ್ರರಾಗಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

ಗೊರೂರರವರ ಸಾಹಿತ್ಯ ಗ್ರಾಮೀಣ ಸಂಸ್ಕೃತಿಯ ಮುಖವಾಣಿ ಎಂಬ ಮೆಚ್ಚುಗೆಗೆ ಪಾತ್ರವಾಗಿರುವುದರಲ್ಲಿ ಅನನ್ಯತೆ ಇದೆ. ಗೊರೂರರವರು ಗ್ರಾಮೀಣ ಬದುಕಿನಲ್ಲಿ ಒಂದಾಗಿ ಬಾಳಿ ತಮ್ಮ ಬದುಕಿನಲ್ಲಿ ಬನಿಯನ್ನು ಕಂಡುಕೊಂಡ ವಿಶಿಷ್ಟ ವ್ಯಕ್ತಿ. ಗ್ರಾಮೀಣ ಪರಿಸರದ ಒಡನಾಡಿಗಳಲ್ಲಿ ಬದುಕಿನ ನೋವು ನಲಿವುಗಳನ್ನು ಲೇಖಕರು ಪರಸ್ಪರ ಹಂಚಿಕೊಂಡಿದ್ದಾರೆ. ಇದಕ್ಕೆ ಸಂಬಂಧಿಸಿದ ಸಂವೇದನೆಯನ್ನು ಅವರ ಎಲ್ಲ ಕೃತಿಗಳಲ್ಲಿಯೂ ಕಾಣಬಹುದು. ಗ್ರಾಮೀಣ ಬದುಕಿನಲ್ಲಿಯೂ ನಾಗರಿಕತೆ ವೈಶಿಷ್ಟ್ಯಪೂರ್ಣವಾಗಿ ಮೂಡಿ ಬಂದಿದೆ ಎಂಬುದು ಗೊರೂರರವರ ಸಿದ್ಧಾಂತ. ಅವರೇ ಹೇಳುವಂತೆ ಪಟ್ಟಣದ ನಾಗರಿಕತೆಗಿಂತ ಗ್ರಾಮೀಣ ನಾಗರಿಕತೆ ವಿಭಿನ್ನವಾಗಿದೆ ಎಂಬುದು ಸಿದ್ಧಾಂತದ ಮಾತಾಗಿದೆ. ಗೊರೂರರವರು ಸಂಗ್ರಹಿಸಿರುವ ಜಾನಪದ ಕೃತಿಗಳಾದ 'ಹಳ್ಳಿಯ ಹಾಡುಗಳು' ಹಾಗೂ 'ಹಳ್ಳಿಯ ಬಾಳು' ಕೃತಿಗಳನ್ನು ಪರಾಮರ್ಶನ ಮಾಡಿದಾಗ ಜನಪದ ಸಂಸ್ಕೃತಿ ಅವರ ವ್ಯಕ್ತಿತ್ವದಲ್ಲಿ ಜೀವನದಲ್ಲಿ ಎಷ್ಟರ ಮಟ್ಟಿಗೆ ಜೀವಂತಿಕೆಯನ್ನು ಕಂಡುಕೊಂಡಿದೆ ಎಂಬುದು ನಮಗೆ ಚೆನ್ನಾಗಿ ಮನವರಿಕೆಯಾಗುತ್ತದೆ. ಜನಪದ ಸಾಹಿತ್ಯ ಲೇಖಕರ ಪಾಲಿಗೆ ಕೇವಲ ಓದಿ ಆನಂದ ಪಡುವುದಕ್ಕೆ ಮಾತ್ರ ಸಾಹಿತ್ಯವಾಗಿ ಉಳಿಯದೆ ಅವರ ಜೀವನಕ್ಕೆ ಮಾರ್ಗದರ್ಶಿಯಾಗಿದೆ ಎಂಬುದು ಗೊರೂರರವರ ಬದುಕು-ಬರಹ ನಮಗೆ ಸ್ಪಷ್ಟಪಡಿಸುತ್ತದೆ. ಈ ಕಾರಣದಿಂದಲೇ ಗೊರೂರರವರು ಹಳ್ಳಿಯ ಮುಗ್ಧ ಜನರನ್ನು ದೇವರಂತೆ ಪೂಜಿಸಿದ್ದಾರೆ ಅವರೊಡನೆ ಮಕ್ಕಳಂತೆ ಆಡಿ ನಲಿದಿದ್ದಾರೆ. ಗೊರೂರರವರ ವ್ಯಕ್ತಿತ್ವದಲ್ಲಿ ಸರಳತೆ ಮೇಲಾದ ಗುಣವಾಗಿ ಪ್ರತಿಷ್ಠೆ ಕೇವಲ ಪ್ರಭಾವಳಿಯಾಗಿ ಉಳಿದಿದೆ.

ಗ್ರಾಮೀಣ ಜನರ ಬದುಕಿನಲ್ಲಿ ಶ್ರಮದ ದುಡಿಮೆ ಒಂದು 'ಗುಣಲಕ್ಷಣ' ಆದರೆ ಮನರಂಜನೆ ಅಷ್ಟೇ ಪ್ರಮುಖವಾದ ಸಂಗತಿಯಾಗಿರುತ್ತದೆ. ವ್ಯಕ್ತಿ ತನ್ನ ವೃತ್ತಿಯನ್ನು ಗೌರವ ಭಾವನೆಯಲ್ಲಿ ಕಾಣುವುದನ್ನು ಗ್ರಾಮೀಣ ಜನರಲ್ಲಿ ನೋಡುತ್ತೇವೆ. ಯಾವುದೇ ವೃತ್ತಿಯನ್ನು ಮೇಲು ಕೀಳು ಎಂದು ತಾರತಮ್ಯ ಭಾವನೆಯಲ್ಲಿ ಪ್ರತ್ಯೇಕಿಸುವ ಗುಣ ಗ್ರಾಮೀಣ ಜನರಲ್ಲಿ ಬಹುಮಟ್ಟಿಗೆ ಇರುವುದಿಲ್ಲ. 'ಕಾಯಕವೇ ಕೈಲಾಸ-ಕಾಯಕವೆಲ್ಲವೂ ಪೂಜ್ಯ' ಎಂಬ ಸಿದ್ಧಾಂತಗಳಿಗೆ ಗ್ರಾಮೀಣ ಜನರು ಹೊಂದಿಕೊಂಡು ಬಾಳುತ್ತಾರೆ. ದುಡಿಮೆಯಲ್ಲಿ ಶ್ರದ್ಧೆ, ಪ್ರಾಮಾಣಿಕತೆ, ಉತ್ಸಾಹ ಗ್ರಾಮೀಣ ಜನರ ಬದುಕಿನಲ್ಲಿ ಮುಖ್ಯ ಲಕ್ಷಣಗಳಾಗಿವೆ. ದುಡಿದು ಬದುಕಬೇಕು, ತಾವು ಬದುಕಿ ತಮ್ಮ ಇತರ ಸಹ ಜೀವಿಗಳಿಗೆ ಕೈಲಾದ ನೆರವನ್ನು ಮಾಡಬೇಕು ಎಂಬುದು ಹಳ್ಳಿ ಜನರ ಜೀವನದ ಗುರಿಯಾಗಿರುತ್ತದೆ. ಶ್ರಮದ ಬದುಕಿನಲ್ಲಿ ಆಯಾಸಗೊಂಡ ಹಳ್ಳಿಯ ಜನ ತಮ್ಮ ಶ್ರಮದ ಪರಿಹಾರಕ್ಕಾಗಿ, ಜೀವನದ ಹತ್ತು ಹಲವು ಬೇಸರಗಳನ್ನು ಮರೆಯುವುದಕ್ಕಾಗಿ ಮನರಂಜನೆಗಾಗಿ ಅನೇಕ ಜನಪದ ಕಲೆಗಳನ್ನು ತಮ್ಮ ಪರಿಸರದಲ್ಲಿ ರೂಢಿಸಿಕೊಂಡು ಇರುವುದು ಸ್ವಾಭಾವಿಕ ವಿಷಯವಾಗಿದೆ. ಜನಪದ ಕುಣಿತಗಳು, ಆಟಗಳು ವಿಶಿಷ್ಟ ಅರ್ಥದಲ್ಲಿ ಜನಪದ

ಕಲೆಗಳಾಗಿವೆ. ಈ ಜನಪದ ಕಲೆಗಳು ಕೆಲವು ವಿಷಯಗಳಲ್ಲಿ ಪರಿಸರದಿಂದ ಪರಿಸರಕ್ಕೆ ಬೇರೆಯಾಗಿ ಅನನ್ಯತೆಯನ್ನು ಸಾಧಿಸಿರುವುದುಂಟು. ಜನಪದ ಸಂಸ್ಕೃತಿಯ ಸಂಶೋಧಕರು ಈ ಕಲೆಗಳ ವಿಶೇಷತೆಯನ್ನು ವೈಶಿಷ್ಟ್ಯವನ್ನು ವಿಷದಪಡಿಸಿದ್ದಾರೆ. ಜನಪದ ಸಂಸ್ಕೃತಿಯ ದರ್ಶನಕ್ಕೆ ಜನಪದ ಕಲೆಗಳು ಒಂದು ಮುಖ ಎಂದು ಹೇಳುವುದರಲ್ಲಿ ಪೂರ್ಣ ಸತ್ಯಾಂಶವಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬಗಳ ಆಚರಣೆ ಜಾತ್ರೆಗಳ ಸಂಭ್ರಮ ವೈಶಿಷ್ಟ್ಯ ಪೂರ್ಣವಾಗಿರುತ್ತದೆ. ಒಂದೊಂದು ಜನಾಂಗದವರ ಹಬ್ಬ ಹರಿದಿನಗಳು ಸಂಪ್ರದಾಯಗಳು ಬಹುಮಟ್ಟಿಗೆ ವಿಭಿನ್ನವಾಗಿರುತ್ತವೆ. ಹಬ್ಬಗಳ ಆಚರಣೆಯಲ್ಲಿ ಆಸ್ತಿಕ ಮನೋಧರ್ಮ ದೈವಭಕ್ತಿ-ಶ್ರದ್ಧೆ ಮೂಲ ಗುಣವಾಗಿದ್ದರೆ ಸಾಮಾಜಿಕವಾಗಿ ಬಂಧು ಬಳಗದವರೆಲ್ಲರು ಕೂಡಿ ಆನಂದಪಡುವುದು ಮತ್ತೊಂದು ಮುಖ್ಯ ಅಂಶವಾಗಿರುತ್ತದೆ. ಈ ಕಾರಣದಿಂದಲೇ ಹಬ್ಬಗಳನ್ನು ಬಾಂಧವ್ಯದ ಬೆಸುಗೆಗೆ ಪ್ರೇರಕ ಎಂದು ಹೇಳುವುದು. ಎಲ್ಲಾ ಹಬ್ಬಗಳಿಗೂ ಬಹುಮಟ್ಟಿಗೆ ಪೌರಾಣಿಕ ಹಿನ್ನೆಲೆ ಇರುತ್ತದೆ. ಜಾತ್ರೆಗಳು ಹಳ್ಳಿ ಜನತೆಯ ಸಾಮೂಹಿಕ ಉತ್ಸವದ-ಉತ್ಸಾಹದ ಸಂಕೇತಗಳಾಗಿವೆ. ಈ ಜಾತ್ರೆಗಳಲ್ಲಿಯೂ ಧಾರ್ಮಿಕ ಶ್ರದ್ಧೆ ಪ್ರಧಾನವಾಗಿರುತ್ತದೆ. ಜಾತ್ರೆಗಳಲ್ಲಿ ಎತ್ತು ದನಗಳ ಮಾರಾಟ ಸಾಮಾನ್ಯವಾಗಿ ಕಂಡುಬರುತ್ತದೆ. ಅನೇಕ ವ್ಯಾಪಾರಿ ಚಟುವಟಿಕೆಗಳು ನಡೆಯುತ್ತದೆ. ಜಾತ್ರೆಗಳಲ್ಲಿ ಗ್ರಾಮೀಣ ಆಟಗಳ ಪ್ರದರ್ಶನ - ಸ್ಪರ್ಧೆಗಳು ಕಂಡುಬರುವುದುಂಟು. ಕುಸ್ತಿ ಪಂದ್ಯಾವಳಿ ಆಕರ್ಷಕವಾದ ಜನಪದ ಚಟುವಟಿಕೆಯಾಗಿರುತ್ತದೆ. ಬಯಲಾಟಗಳು ಜಾತ್ರೆಗಳಲ್ಲಿ ಕಂಡು ಬರುವ ಮನೋರಂಜನೀಯ ಚಟುವಟಿಕೆಯಾಗಿರುತ್ತದೆ. ಹಳ್ಳಿಯ ಜನರಲ್ಲಿ ಯಕ್ಷಗಾನ, ಬಯಲಾಟ ಮುಖ್ಯ ಮನರಂಜನೆಯಾದರೆ ಚೋಮನ ಕುಣಿತ, ಕರಡಿ ಕುಣಿತ, ಕರಗ ಮುಂತಾದ ಜನಪದ ಕಲೆಗಳನ್ನು ಗುರುತಿಸಬಹುದು. ನಂದಿ ಕುಣಿತ, ವೀರಗಾಸೆ ಕುಣಿತ, ಹಂಟಿಕೆ ಪಂಟಿಕೆ ಹಾಡು ಜನಪದ ಜನರಲ್ಲಿ ನಾವು ವಿಶೇಷವಾಗಿ ಗುರುತಿಸುವ ಹಬ್ಬದ ಜಾತ್ರೆಯ ವೈಶಿಷ್ಟ್ಯಪೂರ್ಣ ಚಟುವಟಿಕೆಗಳಾಗಿರುತ್ತವೆ. ಈ ಎಲ್ಲ ಕಲೆಗಳು ಕೆಲಮಟ್ಟಿಗೆ ಪುರಾಣದ ಹಿನ್ನೆಲೆಯಲ್ಲಿ ಇರುವುದರಿಂದ ಬುದ್ಧಿ ಪ್ರಚೋದಕವಾಗಿರುವುದರ ಜತೆಗೆ ಬಹುಮಟ್ಟಿಗೆ ಮನರಂಜನಾ ಪ್ರಧಾನವಾಗಿರುತ್ತದೆ. ಈ ಆಟೋಟಗಳೆಲ್ಲವು ಹಳ್ಳಿಯ ಜನತೆಗೆ ತರುವ ಸಂತೋಷ ಅಪಾರವಾದದ್ದು.

ಗ್ರಾಮೀಣ ಕಲೆ-ಸಂಸ್ಕೃತಿಗೆ ಸಂಬಂಧಪಟ್ಟ ಗೊರೂರರವರ ಆಸಕ್ತಿಯನ್ನು ನಾವು ಎರಡು ನೆಲೆಗಳಲ್ಲಿ ಗುರುತಿಸಬಹುದಾಗಿದೆ. ಮೊದಲನೆಯದು ಅವರ ಸೃಜನಶೀಲ ಕೃತಿಗಳಲ್ಲಿ ಹಾಸುಹೊಕ್ಕಾಗಿರುವ ಗ್ರಾಮೀಣ ಕಲೆ-ಸಂಸ್ಕೃತಿ ವಿವರಗಳು. ಎರಡನೆಯದು ಗ್ರಾಮೀಣ ಕಲೆಗೆ ಸಂಬಂಧಪಟ್ಟಂತೆ ಅವರು ಸಂಗ್ರಹಿಸಿರುವ 'ಹಳ್ಳಿಯ ಹಾಡುಗಳು' ಮತ್ತು 'ಹಳ್ಳಿಯ ಬಾಳು' ಕೃತಿಗಳು. ಗೊರೂರರವರ ಕೃತಿಗಳಲ್ಲಿ ಗ್ರಾಮೀಣ ಕಲೆಗಳ ವಿವರಗಳು ಕಾಣುವುದರ ಜತೆಗೆ ಕೆಲವು ಶಿಷ್ಟ ಕಲೆಗಳ ಪ್ರಭಾವವನ್ನು ನೋಡುತ್ತೇವೆ. ಗೊರೂರರವರ ಸಾಹಿತ್ಯದಲ್ಲಿ ಈ ಜನಪದ ಕಲೆಗಳ ವೈಭವವನ್ನು ಹಬ್ಬ, ಜಾತ್ರೆಗಳ ಸಂಭ್ರಮವನ್ನು

ನಾವು ವಿಧಿವತ್ತಾಗಿ ವಿದ್ಯುಕ್ತವಾಗಿ ಗುರುತಿಸಬಹುದು. ಅವರ ಸಾಹಿತ್ಯದಲ್ಲಿ ಜನಪದ ಕಲೆಯ ಸಂಭ್ರಮ ಕಥಾ ವಸ್ತುವಿಗೆ ರಸದ ತಿರುಳಾಗಿರುತ್ತದೆ. ಕೆಲವು ವೇಳೆ ಜನಪದ ಸಂಸ್ಕೃತಿಯ ದರ್ಶನಕ್ಕೆ ಇವು ಸೂಚ್ಯವಾಗಿರುತ್ತವೆ ಎಂಬ ಮಾತು ಅಷ್ಟೇ ಸಮರ್ಪಕವಾದದ್ದು. ಸಾಹಿತ್ಯ-ಕಲೆ-ಸಂಸ್ಕೃತಿ ಪರಸ್ಪರ ಅವಿನಾಭಾವ ಸಂಬಂಧದೊಂದಿಗೆ ಕೂಡಿರುತ್ತವೆ.

ಹಳ್ಳಿಯ ಜನರ ಬದುಕಿನಲ್ಲಿ ಜನಪದ ಗೀತೆಗಳ ಗಾಯನ ಅತ್ಯಂತ ಸಹಜ ಚಟುವಟಿಕೆಯಾಗಿರುತ್ತದೆ. ತಮ್ಮ ಬದುಕಿನೊಂದಿಗೆ ಉಳಿದು ಬೆಳೆದು ಬಂದಿರುವ ಜನಪದ ಗೀತೆಗಳ ಮಹಿಮೆ ಮಾಧುರ್ಯವನ್ನು ಗ್ರಾಮೀಣ ಜನ ಉಳಿಸಿಕೊಂಡು ಬಂದಿರುವುದು ವಿಶೇಷ ಸಂಗತಿಯಾಗಿದೆ. ಬೀಸುವ ಪದ, ಕುಟ್ಟುವ ಪದ ಆಯಾ ಕಾಯಕದಲ್ಲಿ ಮಾಯವಾಗಿದ್ದರು ಹಾಡಾಗಿ ಉಳಿದು ಬಂದಿರುವುದು ಹಳ್ಳಿಯ ಬದುಕಿನ ಜನತೆಯ ಪ್ರಮುಖ ಗುಣವಾಗಿದೆ. ಮದುವೆ ಸಂದರ್ಭದಲ್ಲಿ ಸಾಂಪ್ರದಾಯಿಕವಾಗಿ ಹಾಡುವ ಅನೇಕ ಶಾಸ್ತ್ರದ ಹಾಡುಗಳು ಇಂದಿಗೂ ಹಳ್ಳಿಯ ಜನರ ಆಚರಣೆಯಲ್ಲಿ ಉಳಿದುಬಂದಿದೆ. ಜನಪದ ಹಾಡುಗಳೆಲ್ಲವೂ ಜನಪದ ಜನರ ಬದುಕಿನ ಹಾಡುಗಳಾಗಿರುವಂತೆಯೇ ನಮ್ಮ ಪುರಾಣ ಕತೆಗಳ ಪ್ರತಿ ನುಡಿಗಳಾಗಿವೆ ಎಂಬುದು ನಿರ್ವಿವಾದ ಸಂಗತಿಯಾಗಿದೆ. ಜನಪದ ಜನ ದೇವರನ್ನು ಪೂಜಿಸುವಾಗ ಮಕ್ಕಳನ್ನು ಲಾಲಿಸುವಾಗ ಹೇಳುವ ಹಾಡುಗಳೆಲ್ಲವೂ ಹೃದಯದ ತನ್ಮಯ ಭಾವಕ್ಕೆ ದ್ಯೂತಕವಾಗಿದೆ.

ಹೀಗೆ ಗ್ರಾಮೀಣ ಕಲೆ ಮತ್ತು ಸಂಸ್ಕೃತಿ ತನ್ನದೇ ಆದ ಅನನ್ಯ ಗುಣ ಲಕ್ಷಣಗಳಿಂದ ವೈಶಿಷ್ಟ್ಯವನ್ನು ಸಾಧಿಸಿಕೊಂಡಿದೆ. ಇದು ಎಂದಿಗೂ ಬತ್ತದ ಅಂತರ್ಗಂಗೆಯಂತೆ ಸಮಾಜದಲ್ಲಿ ಮುಖ್ಯ ಚೈತನ್ಯದಾಯಿ ಸ್ಫೂರ್ತಿದಾಯಿಯಾಗಿ ಉಳಿದು ಬೆಳೆದು ಬಂದಿರುವುದು ಜನತೆಯ ಪುಣ್ಯ ಎನಿಸುತ್ತದೆ. ಇಂತಹ ಪವಿತ್ರ ಪರಮೋತ್ಕೃಷ್ಟ ಜನಪದ ಕಲೆ ಮತ್ತು ಸಂಸ್ಕೃತಿಯೊಂದಿಗೆ ಜನ ಜೀವನ ಸುಧಾರಿತವಾಗಬೇಕು. ಜನಪದ ಸಂಸ್ಕೃತಿ ವಿಶ್ವ ಸಂಸ್ಕೃತಿಗೆ ಒಂದು ಕವಲುದಾರಿ ಎಂದು ಹೇಳಿದಾಗ ಪ್ರತಿಯೊಂದು ಜನಪದ ಸಂಸ್ಕೃತಿಯೂ ವಿಶ್ವಸಂಸ್ಕೃತಿಗೆ ತನ್ನದೇ ಆದ ಕಾಣಿಕೆಯನ್ನು ನೀಡಿದೆ ಎಂಬುದು ಸ್ತುತ್ಯರ್ಹ ಸಂಗತಿಯಾಗಿದೆ. ಮಾನವತೆಯ ಹೊಂಬೆಳಕನ್ನು ಇಂತಹ ಜನಪದ ಸಂಸ್ಕೃತಿ ಮೂಡಿಸುತ್ತದೆ ಎಂಬುದು ಅತ್ಯಂತ ಸಂತಸದ ನಿತ್ಯ ಸಂಗತಿಯಾಗಿದೆ. ಇಂಥ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಮೂಡಿ ಬಂದ ಸಾಹಿತ್ಯ ಸತ್ತ್ವಪೂರ್ಣ ಸಾಹಿತ್ಯ, ಸ್ಫೂರ್ತಿದಾಯಕ ಸಾಹಿತ್ಯ. ಗೊರೂರರವರ ಸಾಹಿತ್ಯ ಇದಕ್ಕೆ ಹೊರತಾಗಿಲ್ಲ.

ಗೊರೂರರವರ ಸಾಹಿತ್ಯದಲ್ಲಿ ಗ್ರಾಮೀಣ ಕಲೆ ಹಾಗೂ ಸಂಸ್ಕೃತಿ ನಿಚ್ಚಳವಾಗಿ ಮೂಡಿ ಬಂದಿದೆ. ಬಯಲಾಟ ಗ್ರಾಮೀಣ ಕಲೆಯ ಒಂದು ವಿಧಾನ. ಹಬ್ಬ ಜಾತ್ರೆ ಹಾಗೂ ಸುಗ್ಗಿಯ ವಿರಾಮ ದಿನಗಳಲ್ಲಿ ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲಿಯೂ ಬಯಲಾಟ ನಡೆಯುತ್ತದೆ. ಪುರಾಣ ಕಾವ್ಯಗಳ ಕಥೆ ಬಯಲಾಟದ ವಸ್ತುವಾಗಿರುತ್ತದೆ. ಗ್ರಾಮೀಣ ಜನ ಈ ಕತೆಗಳನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಸ್ವಾದಿಸುತ್ತಾರೆ. ಬಯಲಾಟಗಳಿಗೆ ಸುತ್ತಲ ಹಳ್ಳಿಯ ಜನ ಸೇರುವುದು ವಾಡಿಕೆಯಾಗಿದೆ. ಬಯಲಾಟದಲ್ಲಿ

ಅಭಿನಯಿಸುವುದು ಹಳ್ಳಿಯ ಜನರಿಗೆ ಒಂದು ಪ್ರತಿಷ್ಠೆಯ ವಿಷಯ. ನಾಟಕವನ್ನು ಕಲಿಸಿಕೊಡುವ ವ್ಯಕ್ತಿಯನ್ನು 'ನಾಟಕದ ಮೇಷ್ಟು' ಎಂದು ಹಳ್ಳಿಯ ಜನ ಗೌರವದ ಭಾವನೆಯಲ್ಲಿ ಕಾಣುತ್ತಾರೆ. ಬಯಲಾಟಕ್ಕಾಗಿ ತಯಾರಿ ತಿಂಗಳು ಗಟ್ಟಲೆ ನಡೆಯುತ್ತದೆ. ಈ ಆಟ ಇಡೀ ರಾತ್ರಿ ನಡೆಯುವ ಒಂದು ಚಟುವಟಿಕೆ. ಬಯಲಾಟದ ಉತ್ಸಾಹ ಗ್ರಾಮೀಣ ಜನರಲ್ಲಿ ಆಬಾಲವೃದ್ಧರಾದಿಯಾಗಿ ಎಲ್ಲರಲ್ಲಿಯೂ ಕಂಡುಬರುತ್ತದೆ. ಬಯಲಾಟದಲ್ಲಿ ಅಭಿನಯ ಒಂದು ಕಲೆಯಾದರೆ ಅದಕ್ಕೆ ಪೋಷಕವಾಗಿ ವಾದ್ಯದ ಮೇಳವೂ ಇರುತ್ತದೆ. ಕಥಾ ಪ್ರಸಂಗಕ್ಕೆ ಅನುಗುಣವಾಗಿ ಸೀನರಿಗಳನ್ನು ಜೋಡಿಸುವುದು ಬಯಲಾಟದ ಒಂದು ವೈಶಿಷ್ಟ್ಯ. ಬಯಲಾಟದಲ್ಲಿ ಗದ್ಯದ ಸಂಭಾಷಣೆಯ ಜೊತೆಗೆ ಮಧ್ಯ ಅನೇಕ ಹಾಡುಗಳನ್ನು ಕಾಣುತ್ತೇವೆ. ಈ ಹಾಡುಗಳನ್ನು ಹಾಡುವುದರಲ್ಲೂ ನಟರ ಉತ್ಸಾಹ ಹೇಳತೀರದು. ವಿವಿಧ ಮಟ್ಟುಗಳಲ್ಲಿ ಹಾಡಿ ಜನಮನವನ್ನು ನಟರು ತಣಿಸುತ್ತಾರೆ. ನಾಟಕ ಕಲಿಯುವಾಗ ನಾಟಕದ ಮನೆಯ ಸುತ್ತ ಇರುವ ಮಕ್ಕಳಿಗೆ ನಾಟಕದ ಹಾಡುಗಳು ಕಂಠಸ್ಥವಾಗಿರುತ್ತದೆ. ಹೀಗೆ ಊರಿನ ಮಕ್ಕಳು ಈ ಹಾಡುಗಳನ್ನು ಉತ್ಸಾಹದಿಂದ ಹಳ್ಳಿಗಳಲ್ಲಿ ಹಾಡುತ್ತಾ ಸಂತೋಷವಾಗಿ ಕಾಲ ಕಳೆಯುತ್ತಾರೆ. ದನ ಕಾಯುವಾಗಲೂ ಸಹ ಹುಡುಗರು ನಾಟಕದ ಮಟ್ಟುಗಳನ್ನು ಹಾಡಿ ನಲಿಯುವ ದೃಶ್ಯ ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯ ದೃಶ್ಯವಾಗಿರುತ್ತದೆ. ಪಾತ್ರಧಾರಿಗಳ ಬಂಧು ಬಳಗದವರಿಗಂತೂ ನಾಟಕದ ಸಂಭ್ರಮ ಹೇಳತೀರದು. ಅನೇಕ ವೇಳೆ ಬಯಲು ನಾಟಕಗಳಲ್ಲಿ ಪಾತ್ರಧಾರಿಗಳಾದ ನಟರಿಗೆ ಅವರು ಅಭಿನಯಿಸಿದ ಅತ್ಯುತ್ತಮ ಪಾತ್ರದ ಹೆಸರೇ ಅಡ್ಡ ಹೆಸರಾಗಿ ಹಳ್ಳಿಗಳಲ್ಲಿ ಉಳಿದು ಬಂದಿರುವುದು ಗಮನಾರ್ಹ ಸಂಗತಿ. ಹೀಗೆ ಬಯಲಾಟ ಗ್ರಾಮೀಣ ಕಲೆಯ ಒಂದು ವಿಶಿಷ್ಟ ಕಲೆಯಾಗಿದೆ.

ಯಕ್ಷಗಾನದ ಪ್ರಸಂಗವನ್ನೇ ಬಯಲು ನಾಟಕಗಳಲ್ಲಿಯೂ ಅಭಿನಯಿಸಿ ತೋರಿಸುವ ಕಲೆಗಾರಿಕೆಯನ್ನು ಗ್ರಾಮೀಣ ಪರಿಸರದಲ್ಲಿ ಗುರುತಿಸಬಹುದು. ಯಕ್ಷಗಾನ ಬಯಲಾಟಗಳಲ್ಲಿ ಆರೋಗ್ಯಕರವಾದ ಪೈಪೋಟಿ ಗ್ರಾಮೀಣ ಪ್ರದೇಶದ ಕಲೆಗಾರರಲ್ಲಿ ಸ್ವಾಭಾವಿಕವಾಗಿತ್ತು. ಈ ಅಂಶವನ್ನು ಗೊರೂರವರ 'ಗೋಪುರದ ಬಾಗಿಲು' ಕಥಾಸಂಕಲನದ 'ಮಲ್ಲಿಗೆಹಳ್ಳಿಯಲ್ಲಿ ಕುಂಭಕರ್ಣ' ಎಂಬ ಕತೆಯಲ್ಲಿ ನಾವು ಚೆನ್ನಾಗಿ ಮನಗಾಣಬಹುದು. "ಮಲ್ಲಿಗೆಹಳ್ಳಿಯವರಿಗೂ, ಹೊಸಹಳ್ಳಿಯವರಿಗೂ ಬಯಲಾಟದಲ್ಲಿ ನಾನು ಮುಂದು ತಾನು ಮುಂದು ಎಂಬ ಸ್ಪರ್ಧೆ ಎಂದಿನಿಂದಲೂ ಇದ್ದೇ ಇದ್ದಿತು. ಆದರೆ ಕಳೆದ ತಿಂಗಳವರೆಗೆ, ಮಲ್ಲಿಗೆಹಳ್ಳಿಯವರು ಸ್ಥಾಪಿಸಿದ ಜಯ ಧ್ವಜ ಪತಾಕೆಯನ್ನು ಕದಿಲಿಸಲು ಹೊಸಹಳ್ಳಿಯವರಿಗೆ ಸಾಧ್ಯವಾಗಿರಲಿಲ್ಲ. ಆದರೆ ಸುಮಾರು ಆರು ತಿಂಗಳಿನಿಂದಲೇ ಮಲ್ಲಿಗೆಹಳ್ಳಿಯವರಿಗೆ ಸ್ವಲ್ಪ ಕಾತರ ಆರಂಭವಾಗಿತ್ತು. ಹೊಸಹಳ್ಳಿಯವರು ಕುಂಭಕರ್ಣನ ಕಾಳಗ ಬಯಲಾಟಕ್ಕೆ ಬಹಳ ಆಟಾಟೋಪದಿಂದ ಸಿದ್ಧತೆಯನ್ನು ನಡೆಸಿದ್ದರು. ಹೊಸ ರಂಗಮಂಟಪ ಸಜ್ಜಿಕೆ, ಹಾರ್ಮೋನಿಯಂ ತಬಲ ವಾದ್ಯಗಾರರಿಗೆ ಹೊಸ ನಿಪುಣರ ಸಹಾಯ, ಪಾತ್ರಗಳಿಗೆಲ್ಲ ಕಣ್ಣು ಕೋರೈಸುವ ನೂತನ ದಮಾಸ್ ಬಟ್ಟೆಯ ಉಡುಪುಗಳು, ಕಿರೀಟ ಭುಜಕೀರ್ತಿ ಛತ್ರ ಚಾಮರಗಳಿಗೆಲ್ಲಾ ಹೊಸ ಡೌಲು, ಹಳೆಯ ಭಾಗವತರ ಸಹಾಯಕ್ಕೆ

ಮತ್ತೊಬ್ಬ ಯುವಕ ಹೊಸ ಭಾಗವತರು, ರಾವಣ ಕುಂಭ ಕರ್ಣರ ದರ್ಬಾರಿಗೆ ಹೊಸ ಕಳಾರಟ್ (ಕ್ಲಾರಿಯೋನೆಟ್) ವಾದ್ಯಗಾರರು ಇವರೆಲ್ಲರ ಅಟ್ಟಹಾಸದೊಂದಿಗೆ ಸಿದ್ಧಗೊಳಿಸಿದ ಕುಂಭಕರ್ಣ ಕಾಳಗ ಬಯಲಾಟವನ್ನು ಈಗ ಒಂದು ತಿಂಗಳ ಕೆಳಗೆ ಹೊಸಹಳ್ಳಿಯವರು ಆಡಿ ತೋರಿಸಿದರು. ಆ ಆಟ ಮಲ್ಲಿಗೆಹಳ್ಳಿಯವರ ಮೂಗಿಗೆ ಸುಣ್ಣ ಬಳಿದು, ಯಕ್ಷಗಾನದಲ್ಲಿ ಅವರು ಸ್ಥಾಪಿಸಿದ ವಿಕ್ರಮವನ್ನು ಮುರಿದು, ಅವರ ಜಯ ಪತಾಕೆಯನ್ನು ದೂಳಿನಲ್ಲಿ ಹೊರಳಿಸುವುದೆಂದು ಹೊಸಹಳ್ಳಿಯವರು ಸುತ್ತಲ ನೂರಾರು ಹಳ್ಳಿಗಳಲ್ಲಿ ಪ್ರಕಟಿಸಿದ್ದರು. ಆಟವನ್ನು ನೋಡಲು ಸುಮಾರು ಹನ್ನೆರಡು ಸಾವಿರ ಜನ ಸೇರಿದ್ದರು. ಕುಂಭಕರ್ಣನ ಕಾಳಗ, ಆಟಗಾರರ ಮತ್ತು ಪ್ರೇಕ್ಷಕರ ನಿರೀಕ್ಷೆಯನ್ನು ಮೀರಿ ಅತ್ಯಂತ ಯಶಸ್ವಿಯಾಯಿತು. ಯಕ್ಷಗಾನ, ಸರ್ವ ಸಲಕರಣೆಗಳೊಂದಿಗೆ ಅಷ್ಟು ತೃಪ್ತಿಕರವಾಗಿ ನಡೆದುದನ್ನು ನಮ್ಮ ಪ್ರಾಂತದ ಜನ ನೋಡಿಯೇ ಇರಲಿಲ್ಲ. ಆಟ, ಹೂವಿನ ಸರ ಎತ್ತಿದಂತೆ, ಸುಲಭವಾಗಿ ಗೆಲವು ನಡೆದು ಜನತೆಯ ಆನಂದದ ಕರಘೋಷದಲ್ಲಿ ಕೊನೆಗೊಂಡಿತು. "ಪಾಪ, ಪಾಪ, ಮಲ್ಲಿಗೆಹಳ್ಳಿಯವರು ಇವರ ಮುಂದೆ ಇನ್ನು ಹಾಯಲಾರರು. ರಂಗನ ಮುಂದೆ ಸಿಂಗನೇ" ಎಂದುಕೊಂಡು ಪ್ರೇಕ್ಷಕರು ತಮ್ಮ ತಮ್ಮ ಹಳ್ಳಿಗಳಿಗೆ ಹೊರಟು ಹೋದರು. ಹೊಸಹಳ್ಳಿಯ ಆಟಗಾರರು "ಈ ಪ್ರಾಂತಕ್ಕೆ ನಾವೇ ಯಕ್ಷಗಾನ ಸಾರ್ವಭೌಮರು. ಮಲ್ಲಿಗೆಹಳ್ಳಿಯವರಿಗೆ ಇನ್ನು ರಂಗಸ್ಥಳದ ಮೇಲೆ ಒಂದು ಶಿಂಗಳಿಕವನ್ನು ತಂದು ನಿಲ್ಲಿಸುವ ಧೈರ್ಯವುಂಟಾಗಬೇಕಾದರೆ ಹತ್ತು ವರುಷ ಬೇಕು" ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಹೊರಟು ಹೋದರು. ....

ಹೊಸಹಳ್ಳಿಯವರಿತ್ತ ಸವಾಲನ್ನು ಮಲ್ಲಿಗೆಹಳ್ಳಿಯವರು ಎತ್ತಿಕೊಂಡರು. ಹೊಸಹಳ್ಳಿಯವರು ೬ ತಿಂಗಳು ತೆಗೆದುಕೊಂಡಿದ್ದಾರೆ, ನಾವು ಒಂದೇ ತಿಂಗಳ ಸಿದ್ಧತೆಯಿಂದ "ನಭೋತೋನಭವಿಷ್ಯತಿ" ಎಂಬಂತೆ ಕುಂಭಕರ್ಣ ವಧೆ ಎಂಬ ಯಕ್ಷಗಾನವನ್ನು ಪ್ರದರ್ಶಿಸಬೇಕೆಂದು ನಿಶ್ಚಯಿಸಿಕೊಂಡರು. ಸಿದ್ಧತೆಗಳು ಹೊಸಹಳ್ಳಿಯವರು ಮಾಡಿದುದರ ನಾಲ್ಕು ಪಟ್ಟು ಭರದಿಂದ ಸಾಗಿದವು. ಪದ್ಧತಿಯಂತೆ ಕುಂಭಕರ್ಣನ ಪಾತ್ರಕ್ಕೆ ಕರಡಿ ಭದ್ರನನ್ನು ನಿಯೋಜಿಸಿದರು. ಕರಡಿ ಭದ್ರನ ಕುಂಭಕರ್ಣನ ಪಾತ್ರದ ಅಭಿನಯ, ನಮ್ಮ ಸುತ್ತಲ ನೂರಾರು ಹಳ್ಳಿಗಳಿಗೆ ಪ್ರಸಿದ್ಧವಾದುದು. ....
ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸುವುದು ರಂಗದ ಮೇಲೆಯೇ ನಡೆಯಬೇಕಾಗಿದ್ದಿತು. ರಾಮಾಯಣದಲ್ಲಿ ಹೇಳುವಂತೆ ರಾಕ್ಷಸರು ಅವನ ಹೊಟ್ಟೆಯ ಮೇಲೆ ಏರಿಕೊಂಡು ಕತ್ತಿ, ಈಟಿ, ಭರ್ಜಿ, ಗದೆಗಳಿಂದ ಅವನನ್ನು ಪ್ರಹರಿಸಬೇಕಾಗಿದ್ದಿತು. ತನ್ನ ಎದೆಯನ್ನು ಕತ್ತಿಯಿಂದ ಹೊಡೆದರು. ತನಗೆ ಏನೂ ತೊಂದರೆ ಆಗದಂತೆ ಕರಡಿ ಭದ್ರ ಎದೆಗೆ ವಿಶಾಲವಾದ ಕಬ್ಬಿಣದ ಹಲಗೆಯನ್ನು ಬಿಗಿದುಕೊಂಡಿದ್ದನು. ಹತ್ತಾರು ಕೊಡ ನೀರು ಆಹಾರ ಇವುಗಳನ್ನೆಲ್ಲಾ ತನ್ನ ಬಾಯಿಗೆ ಸುರಿದರೂ ಅವು ಕೆಳಕ್ಕೆ ಬೀಳದಂತೆ, ತನ್ನ ಹೊಟ್ಟೆಗೂ ಹೋಗದಂತೆ, ಟಾರಿನ ಒಂದು "ಡ್ರಮ್"ನ್ನು ದೋಣಿಯಂತೆ ಕುಯಿಸಿ ಅದನ್ನು ತನ್ನ ಹೊಟ್ಟೆಯ ಕೆಳಕ್ಕೆ ಕಟ್ಟಿಸಿದ್ದನು. .... ಗುಡುಗಿನ ಗರ್ಜನೆಯ ಹಿನ್ನೆಲೆಯಲ್ಲಿ ಕುಂಭಕರ್ಣ

ರಂಗವನ್ನು ಪ್ರವೇಶಿಸಿದಾಗ ಜನರೆಲ್ಲಾ ಕುಂಭಕರ್ಣ ಬಂದ, ಕರಡಿ ಭದ್ರ ಬಂದ ಎಂದು ಉತ್ಸಾಹದಿಂದ ಏಕಕಾಲದಲ್ಲಿ ಸಹಸ್ರಾರು ಕಂಠದಲ್ಲಿ ಕೂಗಿದರು. ಅವನ ಅಭಿನಯವನ್ನು ನೋಡಲು ಜನರೆಲ್ಲರೂ ಉತ್ಸಾಹಿಗಳಾಗಿದ್ದರು. ಅಂದು ಕುಂಭಕರ್ಣ ಸರ್ವ ವಿಧದಲ್ಲಿಯೂ ಅದ್ವಿತೀಯನಾಗಿದ್ದನು. ಕುಂಭಕರ್ಣನ ವೇಷ ಮಾತು ಠೀವಿ ಎಲ್ಲವೂ ಅದ್ಭುತವೂ ನಂಬುವುದಕ್ಕೆ ಕಷ್ಟವೂ ಆಗಿದ್ದಿತು. ಅಂದು ಮಲ್ಲಿಗೆಹಳ್ಳಿಯಲ್ಲಿ ರಾಮನಿಗಿಂತ ಕುಂಭಕರ್ಣನೇ ಜನರಿಗೆ ಪ್ರಿಯವಾದನು. ಆತ ಯಕ್ಷಗಾನ ಪ್ರಪಂಚದಲ್ಲಿ ಸಾರ್ವಭೌಮತ್ವ ಸ್ಥಾನವನ್ನು ಸಂಪಾದಿಸಿಕೊಂಡನು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೬೪;ಪು.೧೧೯-೧೩೩) ಗೊರೂರವರು ಈ ಭಾಗದಲ್ಲಿ ಯಕ್ಷಗಾನದ ವೈಭವವನ್ನು ಹೇಳುವುದರ ಜತೆಗೆ ಕರಡಿ ಭದ್ರನ ಅಭಿನಯ ಆಸಕ್ತಿ ಕೌಶಲವನ್ನು ಮನೋಜ್ಞವಾಗಿ ಪಡಿಮೂಡಿಸಿದ್ದಾರೆ.

ಮತ್ತೊಮ್ಮೆ ಮಲ್ಲಿಗೆಹಳ್ಳಿಯಲ್ಲಿ ರಾಮಾಯಣದ ಬಯಲಾಟ ಏರ್ಪಡಾಗಿತ್ತು. ಆ ಸಂದರ್ಭದಲ್ಲಿ ಶ್ರೀಕಂಠಾಚಾರ್ಯರು ತಮ್ಮ ಆಂಜನೇಯನ ವೇಷವನ್ನು ಕುರಿತು ಹೇಳುತ್ತಾ "ಪೂರ್ವದಿಂದಲೂ ಈ ಚೇತನಕ್ಕೆ ಆಂಜನೇಯ ವೇಷವನ್ನು ಕುಣಿಯುವ ಅಭ್ಯಾಸ ಬಂದಿದೆ. ಆಂಜನೇಯನ ಅನುಗ್ರಹದಿಂದಲೇ ಅದು ನಡೆಯುತ್ತಾ ಬಂದಿದೆ. ಪೂರ್ವದಲ್ಲಿ ಮಾಡುತ್ತಿದ್ದಂತೆ ನನಗೆ ಈ ಪಾರ್ಟು ಮಾಡುವ ಶಕ್ತಿ ಈಗ ಇಲ್ಲ. ಹಾಸನದಲ್ಲಿ ಒಬ್ಬ ಸಾಬಿ ಇದ್ದಾನೆ. ಮುಸಲ್ಮಾನರವನು, ಅವನು ಸ್ಕೂಲಿನಲ್ಲಿ ವ್ಯಾಸಂಗ ಮಾಡಿದವನಲ್ಲ. ಆದರೆ ಕರ್ನಾಟಕ ಭಾಷೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾನೆ. ಅವನಿಗೆ ಹನುಮದ್ವಿಲಾಸ ಈಗಲೂ ಬಾಯಿಗೆ ಬರುತ್ತೆ. ಈ ಪ್ರಾಂತ್ಯದಲ್ಲೆಲ್ಲಾ ಅವನು ಆಂಜನೇಯನ ಪಾರ್ಟಿನಲ್ಲಿ ಬಹಳ ಪ್ರಸಿದ್ಧನಾಗಿದ್ದಾನೆ. ಪಂಚೆ ಉಟ್ಟುಕೊಂಡು ರುಮಾಲು ಸುತ್ತಿಕೊಂಡು ನಾಮ ಹಾಕಿಕೊಂಡು ಅವನು ಬೀದಿಯಲ್ಲಿ ಹೊರಟರೆ ಸಾಬಿ ಎಂದೇ ಗೊತ್ತಾಗುವುದಿಲ್ಲ. ಭಕ್ತರೆಲ್ಲಾ ಅವನಿಗೆ ನಮಸ್ಕಾರ ಮಾಡುತ್ತಾರೆ ಎಂದು ಶ್ರೀಕಂಠಾಚಾರ್ಯರು ಸಾಬಿಯ ಕೌಶಲ್ಯವನ್ನು ಕೊಂಡಾಡುತ್ತಾರೆ." (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೬) ಇಲ್ಲಿ ಗೊರೂರವರು ಬಯಲಾಟದ ಸಂದರ್ಭದಲ್ಲಿ ಹಳ್ಳಿಯ ಜನರಲ್ಲಿ ಕಂಡುಬರುವ ಜಾತಿ ಸಾಮರಸ್ಯವನ್ನು ನೆನಪು ಮಾಡಿಕೊಡುತ್ತಾರೆ. ಕಲೆಗೆ ಎಲ್ಲಾ ವರ್ಗ ಜಾತಿಯವರನ್ನು ಒಂದು ಮಾಡಬಲ್ಲ ಶಕ್ತಿ ಇದೆ ಎಂಬುದನ್ನು ಗೊರೂರವರು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಅಭಿನಯ ಕೌಶಲ್ಯ ಯಾವ ಜಾತಿಯವರಿಗಾದರೂ ಬರಬಹುದು ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

ಗೊರೂರವರು ಚಿತ್ರಿಸಿರುವ ಗ್ರಾಮೀಣ ಕಲೆ ವಿಶಿಷ್ಟವಾದುದು. ಅವರು ಸೂಕ್ಷ್ಮವಾಗಿ ಗ್ರಾಮೀಣ ಬದುಕನ್ನು ನೋಡುವುದರಿಂದ ಬಯಲಾಟದ ಎಲ್ಲ ಕ್ರಿಯೆ, ವೇಷಭೂಷಣಗಳನ್ನು, ಅಲ್ಲಿ ನಡೆಯುವ ಮನರಂಜನೆಯನ್ನು ಅವರಿಗೆ ಅರಿವಿಲ್ಲದೇ ಪ್ರಜ್ಞೆ ಇರುವವರಿಗೆ ಒದಗಿಸುವ ಮನರಂಜನೆಯನ್ನು, ಕೋಲಾಟದ ಬಾಗು ಬಳಕು, ವೈವಿಧ್ಯಗಳನ್ನು ಚಿತ್ರಿಸಿದ್ದಾರೆ. ಗೊರೂರವರು ಹಳ್ಳಿಯ ಸಾಮಾನ್ಯರಿಗೆ

ಮನರಂಜನೆಯಾಗಷ್ಟೇ ಉಳಿಯದೆ ಅವರ ಬಾಳನ್ನು ಹಸನುಗೊಳಿಸುವ ಮಾಧ್ಯಮವಾಗಿಯೂ ಕೆಲಸ ಮಾಡುವುದನ್ನು ಸೂಕ್ಷ್ಮವಾಗಿ ಅವರ ಕೃತಿಗಳಲ್ಲಿ ನೋಡುತ್ತೇವೆ.

ಕಲಾವಿದರಲ್ಲಿ ಸ್ಪರ್ಧಾ ಮನೋಭಾವದ ಜತೆಗೆ ಕೆಲವೊಮ್ಮೆ ಅಸೂಯೆಯ ಭಾವನೆಗಳು ಇಣುಕಿದರು ಆಶ್ಚರ್ಯವಿಲ್ಲ ಎಂಬುದನ್ನು ಲೇಖಕರು ತಿಳಿಸಿದ್ದಾರೆ. "ಒಮ್ಮೆ ದೇವನಹಳ್ಳಿಯಲ್ಲಿ ಬಯಲಾಟ ಏರ್ಪಾಡಾಗಿದ್ದಾಗ ರಾಮಾಯಣದ ಕತೆ ಆಡಬೇಕಾಗಿತ್ತು. ಆ ಸಂದರ್ಭದಲ್ಲಿ ದೇವನಹಳ್ಳಿಯ ಶೆಟ್ಟರು ಆಂಜನೇಯನ ಪಾತ್ರಕ್ಕೆ ಶ್ರೀಕಂಠಾಚಾರ್ಯರೇ ಬರಬೇಕೆಂದು ಪಟ್ಟುಹಿಡಿದು ಅವರನ್ನೇ ಕರೆಸಿದರು. ದೇನವಹಳ್ಳಿಯ ಕಲಾವಿದ ಕೆಂಚನಿಗೆ ಇದು ಅಸಮಾಧಾನದ ಸಂಗತಿ ಆಯಿತು. ತತ್ಪರಿಣಾಮವಾಗಿ ಅವನು ಅಂದಿನ ನಾಟಕದಲ್ಲಿ ಶ್ರೀಕಂಠಾಚಾರ್ಯರ ಪಾತ್ರವನ್ನು ಕೆಡಿಸುವುದಕ್ಕೆ ಸಂಚು ಮಾಡಿ ರಾಮ ರಸದಲ್ಲಿ ಅಫೀಮನ್ನು ಬೆರಸುತ್ತಾನೆ. ಇಷ್ಟಾದರೂ ಶ್ರೀಕಂಠಾಚಾರ್ಯರು ರಾಮನ ಮೇಲೆ ಭಾರ ಹಾಕಿ ನಾಟಕ ಆಡುತ್ತಾನೆ. .... ಕೆಂಚ ಶ್ರೀಕಂಠಾಚಾರ್ಯರ ಅಭಿನಯವನ್ನು ಕಂಡು ಕ್ಷಮೆ ಯಾಚಿಸುತ್ತಾನೆ". (ಅದೇ; ಪು.೨೭-೩೦)

ಗೊರೂರವರು ತಮ್ಮ ಹಳ್ಳಿಯ ಪರಿಸರದಲ್ಲಿ ಕಂಡ ನಾಟಕಗಳನ್ನು ಕೃತಿಯಲ್ಲಿ ವಿವರಿಸುವುದರ ಜೊತೆಗೆ ತಮ್ಮ ಜಿಲ್ಲಾ ಕೇಂದ್ರವಾದ ಹಾಸನದ ದನಗಳ ಜಾತ್ರೆಯಲ್ಲಿ ನಡೆಯುವ ನಾಟಕಗಳ ವೈಭವವನ್ನು ವರ್ಣಿಸಿದ್ದಾರೆ. 'ಹಳೆಯಪಳೆಯಮುಖಗಳು' ಕೃತಿಯಲ್ಲಿ 'ಐವತ್ತು ವರ್ಷಗಳಿಗೆ ಹಿಂದೆ ನೋಡಿದ ನಾಟಕಗಳು' ಎಂಬ ಪ್ರಬಂಧದಲ್ಲಿ ಈ ವಿಷಯವನ್ನು ವಿಸ್ತಾರವಾಗಿ ನೋಡುತ್ತೇವೆ. ಹಾಸನದ ದನಗಳ ಜಾತ್ರೆ ಬಹಳ ಹಿಂದಿನಿಂದಲೂ ಪ್ರಸಿದ್ಧವಾದ ದೊಡ್ಡ ದನಗಳ ಜಾತ್ರೆ. ಆ ಜಾತ್ರೆ ಸಮಯದಲ್ಲಿ ಕುಸ್ತಿ, ನಾಟಕ, ಸರ್ಕಸ್, ಯಕ್ಷಿಣಿ ಪ್ರದರ್ಶನ, ಗೊಂಬೆಯಾಟ, ಸೂತ್ರದ ಬೊಂಬೆ, ಯಕ್ಷಗಾನ ಬಯಲಾಟ ವಿಶೇಷವಾಗಿ ನಡೆಯುತ್ತಿದ್ದವು. ಭವ್ಯವಾಗಿ ನಡೆಯುವ ಈ ಜಾತ್ರೆ ಸುತ್ತಲ ಪ್ರದೇಶಕ್ಕೆಲ್ಲಾ ಅತ್ಯಾಕರ್ಷಕವಾಗಿತ್ತು. ಗೊರೂರವರು ಆಗ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ದನಗಳ ಜಾತ್ರೆಯ ಸಂದರ್ಭದಲ್ಲಿ ಅವರು ತಪ್ಪದೆ ನಾಟಕವನ್ನು ನೋಡುವುದಕ್ಕೆ ಹೋಗುತ್ತಿದ್ದರು. "ಟಿಕೆಟ್‌ಗಾಗಿ ಸಾಲಿನಲ್ಲಿ ನಿಂತು, ದೊಂಬಿಯಲ್ಲಿ ನೂಕಾಡಿಸಿಕೊಂಡು, ಹೇಗೋ ಒಳಕ್ಕೆ ನುಗ್ಗಿ ನಾಲ್ಕಾಣೆಯ ನೆಲದ ಜಾಗದಲ್ಲಿ, ಅತಿ ಕಿಷ್ಕಿಂಧದಲ್ಲಿ ಕುಳಿತರೂ ನಾಟಕ ಪ್ರಾರಂಭವಾದ ಕೂಡಲೇ ಆ ಎಲ್ಲಾ ಶ್ರಮಗಳು ಸಾರ್ಥಕವೇ; ಕಿರುಕುಳವೆಲ್ಲ ಮರೆತು ಆನಂದವೇ ಶಾಶ್ವತವಾಗುತ್ತಿತ್ತು. ಆ ಆನಂದವನ್ನು ನಾನು ಇಂದಿಗೂ ಮರೆತಿಲ್ಲ. ಎ.ವಿ. ವರದಾಚಾರ್ಯರು ಅಭಿನಯಿಸಿದ ಗುಲೇಬಕಾವಳಿ ನಾನು ಎಂದಿಗೂ ಮರೆಯಲಾರದ ನಾಟಕ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೧೮೮-೧೮೯) "ನಾಟಕದ ಮೊದಲಿಗೆ ಸೂತ್ರಧಾರ ಪ್ರವೇಶಿಸಿ ನಾಂದಿ ವೃತ್ತವನ್ನು ಗಂಭೀರ ಧ್ವನಿಯಲ್ಲಿ ಹಾಡುತ್ತಾನೆ. ಅವನು ಆಕರ್ಷಣೀಯವಾಗಿ ವಸ್ತ್ರವುಟ್ಟು, ಉತ್ತಮವಾದ ಕೋಟು, ತಲೆಗೆ ಜರಿ ರುಮಾಲು, ಕತ್ತಿಗೊಂದು

ಗರಿಗರಿಯಾದ ಜರಿವಸ್ತ್ರ ಸುತ್ತಿ ರಾಜ ದರ್ಬಾರಿಗೆ ಹೊರಟ ಪುರುಷನಂತಿರುತ್ತಾನೆ. ಸೂತ್ರಧಾರ ಪ್ರಾರ್ಥನಾ ಶ್ಲೋಕದ ಮೊದಲ ಸಾಲನ್ನು ಹಾಡುತ್ತಿದ್ದಂತೆಯೇ ಜನತೆ ನಿಶ್ಶಬ್ದವಾಗುತ್ತಿತ್ತು. ಅವನ ಜತೆ ಇರುವ ನಟಿ ವಸಂತ ಋತುವನ್ನು ಕುರಿತು ಹಾಡಿ ಪ್ರೇಕ್ಷಕರನ್ನು ರಂಜಿಸುತ್ತಾಳೆ. ಸೂತ್ರಧಾರ ಮತ್ತು ನಟಿ ಇವರ ನಡುವೆ ನಡೆಯುವ ಸಂಭಾಷಣೆ ನಾಟಕಕ್ಕೆ ಪೀಠಿಕೆಯು ಅವರ ವ್ಯಕ್ತಿತ್ವಕ್ಕೆ ಸಾಕ್ಷಿ ಆಗಿರುತ್ತದೆ". (ಅದೇ; ಪು. ೧೮೯-೧೯೦) ಅಂದಿನ ಕಾಲಕ್ಕೆ ಗುಲೇಬಕಾವಳಿ ಜನಪ್ರಿಯ ನಾಟಕವಾಗಿತ್ತು. ಇದಕ್ಕೆ ಕಾರಣ "ರಂಗದ ಮೇಲೆ ಏಕಕಾಲದಲ್ಲಿ ಬರುವ ಐದು ಆರು ಏಳು ಹತ್ತು ಸುಂದರ ರಾಜಕುಮಾರಿಯರು, ಅಷ್ಟೇ ಸಂಖ್ಯೆಯ ರಾಜಕುಮಾರರು, ರಾಣಿಯರು, ಮಂತ್ರಿಗಳು, ಋಷಿಗಳು, ಸಾಧುಗಳು, ರಾಕ್ಷಸರಾಕ್ಷಸಿಯರು, ಯಕ್ಷ ಗಂಧರ್ವರು, ಪುರುಷ ವೇಷಧಾರಿಯಾದ ಮಂದಾರೋಜ್ವಲೆ, ಕಾಕಿಭಟ್ಟ, ರಾಮಾಚಾರಿ, ಪಿತ್ತ ಪಾಂಡವಯ್ಯಗಾರು, ಇಂದ್ರಸಭೆ, ಅದರಲ್ಲಿ ಮಂದಾರೋಜ್ವಲೆಯ ನರ್ತನ, ರಾಜ ತಿಲಕನಿಂದ ಮೃದಂಗ ಬಾಜನ; ರಂಗಸ್ಥಳ ಒಂದು ಗಳಿಗೆಯೂ ಖಾಲಿ ಇರುವುದಿಲ್ಲ. ಸೊಗಸಾದ ಉಡುಪನ್ನು ಧರಿಸಿದ ಸುಂದರ ನಟ ನಟಿಯರನ್ನು ಪುಷ್ಪೋದ್ಯಾನದಲ್ಲಿಯ ಪುಷ್ಪಗಳನ್ನು ನೋಡುವಂತೆ ಜನ ನೋಡುವುದರಲ್ಲಿಯೇ ಆನಂದಗೊಳ್ಳುತ್ತಿದ್ದರು. ಮಂದಾರವಲ್ಲಿ ಪರಿಣಯದಲ್ಲಿ ಶೃಂಗಾರ ರಸವೇ ಪ್ರಧಾನವಾದರೂ ನವರಸಗಳೂ ಆಕರ್ಷಣೀಯ ರೀತಿಯಲ್ಲಿ ಸಮ್ಮಿಳಿತವಾಗಿವೆ". (ಅದೇ; ಪುಟ. ೨೦೯-೨೧೦) ನಾಟಕದ ಕಲೆಗೆ ಕಂಪನಿಯವರು ಕೊಟ್ಟ ಹೊಸ ಕಳೆಯನ್ನು ಗೊರೂರರವರು ಇಲ್ಲಿ ನೆನಪಿಸಿ ಕೊಡುತ್ತಿದ್ದಾರೆ. ಇದರ ಜತೆಗೆ ನಾಟಕ ನೋಡುವಾಗ ಪ್ರೇಕ್ಷಕರಿಗೆ ಪ್ರಿಯವಾದ ಅಂಶಗಳು ಯಾವುವು ಎಂಬುದನ್ನು ಲೇಖಕರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ನಾಟಕ ಕಲೆಯ ಪ್ರಚಾರ ಜಾತ್ರೆಗಳ ಮೂಲಕ ವಿಶೇಷವಾಗಿ ನಡೆಯಿತು ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ.

ಹಳ್ಳಿಯ ನಾಟಕಗಳಲ್ಲಿ ಪಾತ್ರಧಾರಿಗಳು ಬಹುಮಟ್ಟಿಗೆ ಕೃಷಿಕರೇ ಆಗಿರುತ್ತಿದ್ದರು. ಅವರಿಗೆ ಅಭಿನಯಿಸುವುದು ಒಂದು ಮಹದಾಸೆಯಾಗಿತ್ತು. ಆದರೆ ಕೆಲವು ವೇಳೆ ಹಲವು ಸಮಸ್ಯೆಗಳಿಗೂ ಅದು ಕಾರಣವಾಗುತ್ತಿತ್ತು. ಇದಕ್ಕೆ ನಿದರ್ಶನವನ್ನು ಗೊರೂರರವರು 'ಮೆರವಣಿಗೆ' ಕೃತಿಯಲ್ಲಿ ರಾಮಾಯಣ ನಾಟಕ ಪ್ರದರ್ಶನದ ಸಮಯದಲ್ಲಿ ಹನುಮಂತನ ಪಾತ್ರ ಧರಿಸಿದ್ದ ಒಬ್ಬ ಕೃಷಿಕನ ವಿಷಯವನ್ನು ಪ್ರಸ್ತಾಪಿಸುತ್ತಾರೆ. "ಸಂಪೂರ್ಣ ರಾಮಾಯಣ ಹಾಕಿದ್ದಾಗ, ಆಂಜನೇಯ ಪಾತ್ರವನ್ನು ಹಾಕಿದ್ದ ಕೃಷಿಕ ಬೆಳಗಿನಿಂದ ಕಣದಲ್ಲಿ ರಾಗಿ ಬಡಿದು ಸುಸ್ತಾಗಿ ಅವನು ತೂಕಡಿಸುತ್ತಿದ್ದ. ಅವನು ಅರ್ಧ ಅಭಿನಯ ನಿದ್ರೆಯಲ್ಲಿಯೇ ಮಾಡಿದನು. ಇದನ್ನು ತಡೆಯಲಾರದ ಆಂಜನೇಯ ಪಾತ್ರಧಾರಿ ಒಂದು ಉಪಾಯವನ್ನು ಮಾಡುತ್ತಾನೆ. ರಾಮನು ಮತ್ತೂ ಸೀತೆ ಏನು ಹೇಳಿದಳು ಎಂದಾಗ ಆಂಜನೇಯ ತನ್ನ ಉದ್ದೇಶಕ್ಕೆ ಅನುಗುಣವಾಗಿ ಅರ್ಧ ರಾಮಾಯಣಕ್ಕೆ ಇವತ್ತು ಮಂಗಳವಾಡಬೇಕೆಂದು ಹೇಳಿದಳು ಎನ್ನುತ್ತಾನೆ. ಅಷ್ಟೇ ಅಲ್ಲದೆ ಆಂಜನೇಯ ಪ್ರೇಕ್ಷಕರ ಕಡೆಗೆ ಕೈ ಮುಗಿದು ಮಂಗಳವನ್ನು ಹಾಡಿಬಿಟ್ಟನು. ಪ್ರೇಕ್ಷಕರು ಮನೆಗಳಿಗೆ ಹೊರಡುತ್ತಿದ್ದಂತೆಯೇ ರಾಮ ಪರದೆ ಹಿಂದೆ ಆಂಜನೇಯನಿಗೆ ಧಬ ಧಬ ಬಡಿಯುತ್ತಾನೆ".

(ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು. ೨೬೩-೨೬೪) ಈ ಸಂದರ್ಭದಲ್ಲಿ ಕೃಷಿಕನ ಅಭಿನಯದ ಕಷ್ಟ ನಮಗೆ ಮನವರಿಕೆಯಾಗುತ್ತದೆ. ಇಂತಹ ಸಂದರ್ಭೋಚಿತ ತಂತ್ರ ಪ್ರಸಂಗಗಳು ಹಳ್ಳಿಯ ನಾಟಕಗಳಲ್ಲಿ ಸಾಮಾನ್ಯ ಸಂಗತಿಯಾಗಿದೆ. ಗೊರೂರವರು ಈ ಪ್ರಸಂಗದ ಮೂಲಕ ಹಾಸ್ಯ ತುಂಬಿ ಕೊಟ್ಟರು ನಾಟಕ ಅಭಿನಯದಲ್ಲಿ ಕಂಡುಬಂದ ವಿಚಿತ್ರ ಸತ್ಯ ಸಂಗತಿಗಳನ್ನು ಪರೋಕ್ಷವಾಗಿ ಇಲ್ಲಿ ವಿಚಾರ ಮಾಡಿದ್ದಾರೆ.

ಗ್ರಾಮೀಣ ಸಮಾಜದ ಮನರಂಜನೆಯನ್ನು ಕುರಿತು ಶಿವರಾಮೇಗೌಡ ನಾಗವಾರರು "ವಸ್ತುನಿಷ್ಠ ವಿಮರ್ಶಕರಂತೆ ಕರಾರುವಕ್ಕಾದ ಮನರಂಜನೆ ಗ್ರಾಮೀಣರಿಗೆ ಬೇಕಾಗಿಲ್ಲ. ಅವರಿಗೆ ಪ್ರಿಯವಾದ ಕಂದ, ಹಾಡು, ಕುಣಿತ, ನೀತಿ, ದೈವೀಪ್ರಜ್ಞೆ ಇದ್ದರೆ ಸಾಕು. ಮನರಂಜನೆ ತಾನೇ ತಾನಾಗಿ ಬರುತ್ತವೆ. ಹಲವು ಅಸಂಗತಗಳು ಅವರಿಗೆ ಅಸಂಗತ ಅನ್ನಿಸುವುದೇ ಇಲ್ಲ. ಆ ರಾತ್ರಿ ಖುಷಿಯಾಗಿ ಕಾಲ ಕಳೆಯುತ್ತಾರೆ. ಕಲಾವಿದರೂ ಆಯಾಸ ಮರೆತು ತೆವಲು ತೀರಿಸಿಕೊಳ್ಳುತ್ತಾರೆ". (ಶಿವರಾಮೇಗೌಡ ನಾಗವಾರ; ೧೯೭೪; ಪು. ೫೧) ಎಂದು ತಮ್ಮ ಸ್ಪಷ್ಟವಾದ ಮಾತುಗಳಲ್ಲಿ ಹೇಳಿದ್ದಾರೆ.

ಮಲ್ಲಿಗೆಹಳ್ಳಿಯಲ್ಲಿ 'ನಾಟ್ಯ ವಿಲಾಸಿಗಳ ಸಂಘ' ಅಭಿನಯಕಾರರಿಗೆ ಕೊಡುತ್ತಿದ್ದ ಬಿರುದುಗಳು ವಿಶೇಷವಾಗಿದ್ದವು ಎಂದು ಗೊರೂರವರು ಸೂಚಿಸಿದ್ದಾರೆ. ಆ ಬಿರುದುಗಳು ಯಾವುವು? ಎಂದರೆ "ಆಂಜನೇಯನ ಪಾತ್ರವನ್ನು ವಹಿಸುವವನಿಗೆ ನಾಟ್ಯಬಿಂಗಿ ಎಂದೇ ಹೆಸರು. ರಾಮನ ಪಾತ್ರಧಾರಿಗೆ ನಾಟ್ಯ ವಿಕಾರಿ ಎಂದೇ ಹೆಸರು. ತಾರೆಗೆ ನಾಟ್ಯ ಕುರೂಪಿ ಎಂದು ಹೆಸರು. ಅವರನ್ನು ಜನ ಉಳಿದ ಕಾಲ ಗಳಲ್ಲಿಯೂ ಈ ಹೆಸರಿನಿಂದಲೇ ಕರೆಯುತ್ತಾರೆ. ಈ ಪಾತ್ರಧಾರರು ನಿತ್ಯ ಜೀವನದಲ್ಲಿ ಯಾವುದಾದರೂ ಕಾರಣದಿಂದ ಸಿಟ್ಟು ಮಾಡಿಕೊಂಡಿರುವಾಗ ಒಬ್ಬರೊಂದಿಗೆ ಒಬ್ಬರು ಜಗಳವಾಡುತ್ತಿರುವಾಗ ಮೂರನೆ ಮನುಷ್ಯರು "ಏ ನಾಟ್ಯ ಬಿಂಗಿ ಸಾಕು ನಡ" ಎಂದರೆ ವಾತಾವರಣ ಶುದ್ಧಿಯಾಗುತ್ತದೆ. ಒಬ್ಬರಿಗೊಬ್ಬರು ಕೈಕೈ ಮಿಲಾಯಿಸುವ ಪರಿಸ್ಥಿತಿ ಬಂದಾಗ, ಸುತ್ತಾ ಇರುವವರು ಬಿಡಿಸುವುಕ್ಕೆ ಇನ್ನಾವ ಮಾರ್ಗವೂ ತೋರದಿದ್ದರೆ ನಾಟ್ಯಬಿಂಗಿ, ನಾಟ್ಯ ವಿಕಾರಿ, ನಾಟ್ಯ ಕಪೋರಿ ಎಂದು ಕರೆದು ಎಂಥಾ ಕೋಪದಲ್ಲಿರುವವರಿಗೂ ನಗು ಉಂಟು ಮಾಡುತ್ತಾರೆ. ಅಂತಹ ನಗು ಬಂದ ಮೇಲೆ ಇನ್ನು ವ್ಯಾಜ್ಯವೆಲ್ಲಿ ಬಂತು!". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು. ೨೬೬) ಲೇಖಕರು ಈ ಘಟನೆಯಲ್ಲಿ ಕಲಾ ಜೀವನ ಹೇಗೆ ವಾಸ್ತವ ಜೀವನದ ವಿಚಿತ್ರ ಘಟನೆಗಳನ್ನು ಸರಳಗೊಳಿಸಬಲ್ಲದು ಎಂಬುದನ್ನು ಮಾರ್ಮಿಕವಾಗಿ ತಿಳಿಸಿಕೊಟ್ಟಿದ್ದಾರೆ. ಅಭಿನಯಕ್ಕೆ ಕೊಡುವ ಬಿರುದುಗಳಲ್ಲಿಯೂ ಗೊರೂರವರ ಹಾಸ್ಯದ ನವಿರನ್ನು ಗುರುತಿಸಬಹುದು.

ಗೊರೂರಿನಲ್ಲಿ ನಡೆಯುವ ಅನೇಕ ನಾಟಕಗಳ ಉಸ್ತುವಾರಿಯನ್ನು ಶಾಲುಸಾಬಿ ವಹಿಸಿಕೊಳ್ಳುತ್ತಿದ್ದನು. ಊರಿನವರಿಗೆಲ್ಲಾ ಶಾಲುಸಾಬಿ ಗಣ್ಯವ್ಯಕ್ತಿಯಾಗಿದ್ದನು. ಈ ಕಾರಣದಿಂದಲೇ ಊರಿನವರ ಅನೇಕ ವ್ಯಾಜ್ಯ

ಗಳನ್ನು ತೀರ್ಮಾನ ಮಾಡುವುದರಲ್ಲಿ ಪ್ರಮುಖನಾಗಿರುತ್ತಿದ್ದನು. ಗೊರೂರಿನ ಜನಕ್ಕೆ ನಾಟಕದಲ್ಲಿ ಪಾತ್ರ ವಹಿಸುವುದು ಅವನು ಅವಿದ್ಯಾವಂತನಾಗಿದ್ದರು ಪ್ರತಿಷ್ಠೆಯ ವಿಷಯವಾಗಿತ್ತು. ಗೊರೂರವರೇ ಹೇಳುವಂತೆ "ನಮ್ಮೂರ ಆಟದಲ್ಲಿ ಪಾತ್ರವನ್ನು ಕುಣಿಯುವುದೆಂದರೆ ವಿಶ್ವವಿದ್ಯಾಲಯದಲ್ಲಿ ಪದವಿಯನ್ನು ಪಡೆದಂತೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು. ೩೯-೪೦) ಈ ಮಾತುಗಳಲ್ಲಿ ಗೊರೂರವರು ಅಭಿನಯಕಾರರಿಗೆ ಅಭಿನಯದ ಬಗ್ಗೆ ಇರುವ ಸಹಜ ಅಭಿಮಾನವನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಶಾಲುಸಾಬಿ ಜಾತಿಯಲ್ಲಿ ಮುಸಲ್ಮಾನನಾಗಿದ್ದರು ಅವನಿಗೆ ಹಿಂದು ಸಂಸ್ಕೃತಿಯ ಧರ್ಮ ಗ್ರಂಥಗಳ ಪರಿಚಯ ಪೂರ್ಣವಾಗಿ ಇತ್ತು ಎಂಬುದನ್ನು ಗೊರೂರವರು ಮನತುಂಬಿ ತಿಳಿಸಿದ್ದಾರೆ. ಇಲ್ಲಿಯೂ ಸಹ ಜಾತಿ ಸೌಹಾರ್ದದ ಹಿರಿಮೆಯನ್ನು ಮನಗಾಣಬಹುದು.

ಗ್ರಾಮೀಣ ಪರಿಸರದಲ್ಲಿ ನಾಟಕ ಆದ ನಂತರ ಜನರು ತೋರಿಸುವ ಪ್ರತಿಕ್ರಿಯೆ ಮೆಚ್ಚುವಂತಹುದು. 'ನಮ್ಮೂರಿನ ರಸಿಕರು' ಕೃತಿಯಲ್ಲಿ ಗೊರೂರವರು ಈ ವಿಷಯದ ಬಗ್ಗೆ ಕೊಡುವ ಅಭಿಪ್ರಾಯ ಎಷ್ಟು ವಿವರಣಾತ್ಮಕವಾಗಿದೆಯೋ ಅಷ್ಟೇ ಸ್ವಾರಸ್ಯಪೂರ್ಣವಾಗಿದೆ. ಹರಿಶ್ಚಂದ್ರ ನಾಟಕದ ಬಗ್ಗೆ ಒಕ್ಕಲಿಗರ ಕೇರಿಯ ಹೆಂಗಸರು ನದಿಯ ದಂಡೆಯಲ್ಲಿ ಆಡಿಕೊಳ್ಳುತ್ತಿದ್ದ ಮಾತು "ಮಾದನ ಹೆಂಡತಿಯು - 'ಹರಿಶ್ಚಂದ್ರ ಭಾರಿ ವೈನಾಗಿ ಕುಣಿದ. ದರ್ಭಾರು ಕಣ್ಣು ಕುಕ್ಕೊ ಹಂಗಿತ್ತು. ಬ್ಯಾಂಡು ಬಲು ಚೆಂದಾಗಿತ್ತು' ಎಂದಳು. ವಿಷ್ಣುವಿನ ಪಾತ್ರವನ್ನು ವಹಿಸಿದ್ದ ನಿಂಗನ ಹೆಂಡತಿಯು - 'ವಿಷ್ಣು ಭಾರಿ ವೈನಾಗಿ ಹಾಡಿದ. ಹೊರ್ಡೋಕೆ ಎದ್ದು ನಿಂತಿದ್ದ ಜನಾ ಎಲ್ಲಾ ಅವನ ಕುಣಿತ ನೋಡಿ ಬೆಪ್ಪಾಗಿ ಒಂದು ಗಳಿಗೆ ಮತ್ತೆ ಕೂತೇ ಬಿಟ್ರು' ಎಂದಳು. ಚಂದ್ರಮತಿಯ ಪಾತ್ರವನ್ನು ವಹಿಸಿದ್ದ ಚೆನ್ನನ ತಾಯಿಯು - "ನಮ್ಮ ಚೆನ್ನ ದರ್ಮಾವರ ಸೀರೆಲಿ ರಾಣಿ ಹಂಗೆ ಕಂಡ. ಕಣ್ಣೇಟು ಹೊಳಪು. ಕೆನ್ನೆ ಎಂತಾ ಬಣ್ಣ, ತುಟಿ ಎಷ್ಟು ಕೆಂಪು. ಹೊಸೂರು ಮೇಳದ ಹುಡುಗಿ ಹಂಗೆ ನಾಜೂಕಾಗಿ ಕುಣಿದ. ನೆನ್ನೆ ರಾತ್ರಿ ಕರೆದ ಹಸೀನ್ಹಾಲು ಮೂರು ಪಾಪು ಅವನ್ಗೇ ಹಾಕಿದೆ. ಮನೇಲಿ ಇನ್ನಾರು ಹಾಲು ಕುಡೀನಿಲ್ಲ. ಎಂಟು ವರ್ಸದ ಬೋರಾ ಕೂಡ 'ಈವತ್ತು ಚೆನ್ನನ್ಗೆ ಹಾಲು ಹಾಕ್ಬಿಡು, ರಾತ್ರಿಯೆಲ್ಲಾ ಆಟ ಕುಣೇತಾನೆ' ಎಂದ". (ಅದೇ; ಪು. ೪೫-೪೬) ಅಭಿನಯಕಾರರ ರೂಪದ ಬಗ್ಗೆ ಅವರ ಅಭಿನಯ ಕೌಶಲ್ಯದ ಬಗ್ಗೆ ಸಾಮಾನ್ಯ ಜನರು ಆಡುವ ಈ ವಿಮರ್ಶೆಯ ಮಾತುಗಳು ಸಲಿಗೆಯ ಮಾತುಗಳಾಗಿದ್ದರು ಸತ್ವಪೂರ್ಣವಾಗಿವೆ. ಗೊರೂರವರು ಹಳ್ಳಿಯವರ ವಿಮರ್ಶೆಯ ಜೊತೆಗೆ ತಾವು ತಮ್ಮ ವಿಮರ್ಶೆಯನ್ನು ಸೇರಿಸಿದೆವು ಎಂಬ ಮಾತು ವಿಶೇಷ ವಾಗಿದೆ. ಗ್ರಾಮೀಣ ಜನರಲ್ಲಿ ಕಲಾ ಆಸ್ವಾದನೆಯ ಜತೆಗೆ ಕಲಾ ವಿಮರ್ಶೆಯ ಗುಣವು ಸಮ್ಮಿಳಿತವಾಗಿದೆ ಎಂಬುದನ್ನು ಈ ಮಾತುಗಳ ಮೂಲಕ ಲೇಖಕರು ತಿಳಿಸಿಕೊಟ್ಟಿದ್ದಾರೆ. ಹಳ್ಳಿಯ ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ಸ್ತ್ರೀಯರೇ ಬಹುಮಟ್ಟಿಗೆ ನಿರ್ವಹಿಸುತ್ತಿದ್ದರು ಎಂಬ ವಿಷಯವನ್ನು ಈ ಪ್ರಸಂಗದಲ್ಲಿ ಸೂಚಿಸಿರುವುದು ಗಮನಾರ್ಹ. ಸಾಮಾಜಿಕ ಚಟುವಟಿಕೆಗಳಲ್ಲಿ ಸ್ತ್ರೀಯರ ಪ್ರಗತಿ ಇಲ್ಲಿ ಮೆಚ್ಚುವಂತಹುದು.

ಗ್ರಾಮೀಣ ಜನ ತಮ್ಮ ಹಳ್ಳಿಗೆ ಬಂದ ಅಧಿಕಾರಿಯ ವಿಶ್ವಾಸವನ್ನು ಸಂಪಾದಿಸಿಕೊಳ್ಳುವುದರಲ್ಲಿ ನಿಪುಣರು. ಬೈಲಹಳ್ಳಿಗೆ ಬಂದ ಸರ್ವೇಯರನ್ನು ಬೈಲಹಳ್ಳಿಯ ಜನ ತಮ್ಮವರನ್ನಾಗಿ ಮಾಡಿಕೊಂಡಿದ್ದರು. ಹಳ್ಳಿಯವರ ಪ್ರೀತಿ ವಿಶ್ವಾಸಕ್ಕೆ ಮನಸೋತ ಅಧಿಕಾರಿ ಮೋಜಿಮದಾರ ಹಳ್ಳಿಯವರೊಂದಿಗೆ ಒಂದಾದರು. ಬೈಲಹಳ್ಳಿಯಲ್ಲಿ ಸರ್ವೆ ಕೆಲಸವನ್ನು ಮುಗಿಸಿಕೊಂಡು ಹಿಂತಿರುಗಬೇಕಾದ ಕಾಲ ಅಧಿಕಾರಿಗೆ ಸಮೀಪವಾಯಿತು. ಅಧಿಕಾರಿಯನ್ನು ಹಳ್ಳಿಯ ಜನ ಕಳುಹಿಸಿಕೊಡುವ ರೀತಿ ಅಷ್ಟೇ ಮನೋಜ್ಞವಾಗಿದೆ. ಹಿಂದಿನ ದಿನ ಹಳ್ಳಿಯವರು ಸರ್ವೆ ಅಧಿಕಾರಿಗಳ ಸಲುವಾಗಿ 'ಕೃಷ್ಣ ಚರಿತ್ರೆ' ಎಂಬ ಬಯಲಾಟವನ್ನು ಆಡುತ್ತಾರೆ. ಮೋಜಿಮದಾರರಿಗೂ ಸಹ ಆ ಆಟ ಹಳ್ಳಿಯ ವಾತಾವರಣದಲ್ಲಿ ಚಿರಪರಿಚಿತವಾಗಿದ್ದಂತೆ ಅವರಿಗೂ ಪರಿಚಯವಾಗಿತ್ತು. ಆ ಆಟವನ್ನು ನೋಡುವ ಉತ್ಸಾಹವೂ ಅವರಿಗಿತ್ತು. ಅಂದು ಬಯಲಾಟ ನಡೆದಾಗ ಗರುಡ ವೇಷಧಾರಿ ತೋರಿಸಿದ ಅಭಿನಯ ಎಷ್ಟು ಕಲಾ ಪೂರ್ಣವಾಗಿತ್ತೋ ಕೊನೆಯಲ್ಲಿ ಆತ ಮೇಲಿನಿಂದ ಜಾರಿ ವಿಷ್ಣುವಿನ ತಲೆಯ ಮೇಲೆ ಬಿದ್ದದ್ದು ಅಷ್ಟೇ ಆಘಾತಕಾರಿಯಾಗಿತ್ತು. ಗರುಡನ ಪಾತ್ರವನ್ನು ಸಿದ್ಧ ಪಡಿಸಿದ ಸೊಗಸಿನ ರೀತಿಯನ್ನು ಗೊರೂರವರ ಮಾತಿನಲ್ಲಿಯೇ ಕೇಳಬೇಕು. "ಬೈಲಹಳ್ಳಿಯ ರೈತರು ಆಡಿದ ಕೃಷ್ಣ ಚರಿತ್ರೆಯಲ್ಲಿ ಒಂದು ಕಡೆ ಗರುಡನು ಭೂಮಿಯ ಮೇಲೆ ನಿಂತುಕೊಂಡು ವಿಷ್ಣುವನ್ನು ಪ್ರಾರ್ಥನೆ ಮಾಡಬೇಕಾಗಿದ್ದಿತು. ರಾಮಾಯಣದ ಆಟದಲ್ಲಿ ಹನುಮಂತನಿಗೆ ಹೇಗೋ ಹಾಗೆಯೇ ಕೃಷ್ಣ ಚರಿತ್ರೆಯಲ್ಲಿ ಗರುಡನಿಗೆ "ಆಟಾಟೋಪ" ಹೆಚ್ಚು. ಬಯಲಾಟವನ್ನು ಆಡುವುದು, ಬಯಲಿನಲ್ಲಿ ಒಂದು ಚಪ್ಪರದಲ್ಲಿ ರಾಮಾಯಣದ ಆಟದಲ್ಲಿ ಚಪ್ಪರದ ಮೇಲೆ ನಾಲ್ಕು ಆಳುದ್ದ ಏಣಿಯನ್ನು ಕಟ್ಟಿರುತ್ತಾರೆ. ಹನುಮಂತನು ಅದರ ಮೇಲೆ ಹಾಡಿಗೆ ಸರಿಯಾಗಿ ಹೆಜ್ಜೆ ಹಾಕಿಕೊಂಡು ಕುಣಿಯುತ್ತಾ ಕೆಳಕ್ಕೆ ಬರುತ್ತಾನೆ. ಕೃಷ್ಣನ ಕತೆಯಲ್ಲಿ ಗರುಡನು ಬರುವಾಗ ಇದೇ ರೀತಿಯಾದ ಗದ್ದಲ. ಚಪ್ಪರದ ತುದಿಗೆ ಒಂದು ರಾಟೆಯನ್ನು ಕಟ್ಟಿ ಅದರ ಮೇಲೆ ಮೂರು ನಾಲ್ಕು ಹಗ್ಗಗಳನ್ನು ಇಳೆ ಬಿಟ್ಟು ಆ ಹಗ್ಗದ ತುದಿಯನ್ನು ಗರುಡನ ಸೊಂಟದಲ್ಲಿರುವ ಮತ್ತೊಂದು ಹಗ್ಗಕ್ಕೆ ಕಟ್ಟುತ್ತಾರೆ. ಅನಂತರ ಆ ಹಗ್ಗವನ್ನು ಮೇಲಕ್ಕೂ ಕೆಳಕ್ಕೂ ಬಿಡುತ್ತಾರೆ. ಗರುಡನಿಗೆ ರೆಕ್ಕೆ ಮುಂತಾದುವನ್ನು ಕಟ್ಟಿ ನೋಡುವುದಕ್ಕೆ ಹಕ್ಕಿಯಂತೆಯೇ ಕಾಣುವಂತೆ ಮಾಡಿರುತ್ತಾರೆ. ಬೈಲಹಳ್ಳಿಯ ಆಟದಲ್ಲಿಯೂ ಗರುಡನಿಗೆ ವೇಷ ಚೆನ್ನಾಗಿ ಹಾಕಿದ್ದರು. ಮುಖಕ್ಕೆ ಭಯಂಕರವಾಗಿ ಕೆಂಪನ್ನು ಬಳಿದಿದ್ದರು. ಮೂಗಿಗೆ ಏನನ್ನೋ ಸಿಕ್ಕಿಸಿ ಗಿಣಿಮೂಗನ್ನು ಮಾಡಿದ್ದರು. ಸಕಾಲದಲ್ಲಿ "ಧೀಂತಕ ಥಾ"ದೊಂದಿಗೆ ಗರುಡನು ಮೇಲಿನಿಂದ ಇಳಿಯಲು ಪ್ರಾರಂಭಿಸಿದನು. ಅವನು ಮೇಲಿನಿಂದ ಹಗ್ಗದಿಂದ ಬಿಡಲ್ಪಟ್ಟು ಕೆಳಕ್ಕೆ ಬರುತ್ತಿದ್ದಾಗ ಕೈ ಕಾಲುಗಳನ್ನು ಎಲ್ಲಾ ಕಡೆಗೂ ಆಡಿಸಿಕೊಂಡು ಹಕ್ಕಿಯಂತೆಯೇ ಬರುತ್ತಿದ್ದನು. ಅವನ ಮುಂದೆ ಆಟಗಾರರು ಪಂಜನ್ನು ಹಿಡಿದು ಅದಕ್ಕೆ ರಾಳನ್ನು ಹಾಕಿ ಅವನ ಜರ್ಬು ಇನ್ನೂ ಹೆಚ್ಚಾಗಿ ತೋರುವಂತೆ ಮಾಡುತ್ತಿದ್ದರು. ಬರ ಬರುತ್ತಾ ಹಗ್ಗವನ್ನು ಹಿಡಿದಿದ್ದವನು ಹಗ್ಗವನ್ನು ಮೇಲಕ್ಕೂ ಕೆಳಕ್ಕೂ ಬೇಗ ಬೇಗ ಎಳೆದು ಬಿಡಲು ಪ್ರಾರಂಭಿಸಿ ದನು. ಗರುಡನು ಕೈ ಕಾಲುಗಳನ್ನು ಜೋರಾಗಿ ಬಡಿದು ವೇಗವನ್ನು ತೋರಿಸುತ್ತಿದ್ದನು. ಒಂದು ಸಲ

ಗರುಡನು ಮೇಲಕ್ಕೆ ಹೋಗಿದ್ದಾಗ ಇದ್ದಕ್ಕಿದ್ದಂತೆ ಅವನ ಸೊಂಟದ ಹಗ್ಗವು ಕಿತ್ತು ಹೋಯಿತು. ಗರುಡನು ಒಂದೇ ಏಟಿಗೆ ನೆಲಕ್ಕೆ ಝುಣ್ ಎಂದು ಶಬ್ದ ಮಾಡುತ್ತಾ ಬಿದ್ದನು. ಬಿದ್ದವನೇ ಭೂಮಿಯಲ್ಲಿ ಹೂಳಿಕೊಂಡು ಮಾಯವಾದನು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೯೩-೯೪) ಅಂದು ಅಚಾತುರ್ಯದಿಂದ ಗರುಡ ಕೆಳಕ್ಕೆ ಬಿದ್ದಿದ್ದರಿಂದ ವಿಷ್ಣುವಿಗೆ ಘಾಸಿ ಆಯಿತು. ಗರುಡ ವಿಷ್ಣುವನ್ನು ಹೊರುವ ಬದಲು ವಿಷ್ಣುವೇ ಗರುಡನನ್ನು ಹೊರುವಂತೆ ಆಯ್ತು. ಸಾಹೇಬರು ಇದನ್ನು ನೋಡಿ ಇದೇನಯ್ಯಾ ಗರುಡ ವಾಹನ ಎಂದು ಹಾಸ್ಯ ಮಾಡುತ್ತಾರೆ. ಆಟದಿಂದ ಆನಂದಪಟ್ಟ ಮೋಜಿಮ ದಾರರು ಹಳ್ಳಿಯವರು ತಮ್ಮ ಬಗ್ಗೆ ತೋರಿಸಿದ ಪ್ರೀತಿ ಗೌರವಗಳಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಹಳ್ಳಿಯವರು ಸಾಹೇಬರನ್ನು ಕಳುಹಿಸಿಕೊಡುವಾಗ ತಮ್ಮ ಬಂಧು ಬಳಗವನ್ನು ಕಳುಹಿಸಿ ಕೊಡುವಾಗ ತೋರಿಸುವಷ್ಟೇ ಆತ್ಮೀಯ ಭಾವನೆಯನ್ನು ತೋರಿಸಿದಾಗ ಸಾಹೇಬರು ಆನಂದದಿಂದ ತಲೆ ಬಾಗುತ್ತಾರೆ. ಈ ಸಂದರ್ಭದಲ್ಲಿ ಗ್ರಾಮೀಣ ಜನರ ಸೌಜನ್ಯ ಆತ್ಮೀಯತೆ ಮೆಚ್ಚುವಂತಹುದು ಎಂಬುದನ್ನು ಮನಗಾಣಬೇಕು. ಗ್ರಾಮೀಣ ಕಲೆ ಸೌಹಾರ್ದ ವಾತಾರವಣಕ್ಕೆ ಹೇಗೆ ಸಹಕಾರಿಯಾಗಬಲ್ಲದು ಎಂಬುದಕ್ಕೆ ಇಲ್ಲಿ ನಾವು ನಿದರ್ಶನವನ್ನು ಗುರುತಿಸಬಹುದು.

'ಕತೆಗಳು ಮತ್ತು ವಿನೋದ ಚಿತ್ರಗಳು' ಕೃತಿಯ 'ಕನ್ನಡ ಮೌಲ್ವಿ' ಕತೆಯಲ್ಲಿ ಗೊರೂರವರು ಹುಸೇನ್ ಕೃಷ್ಣನ ವಿಷಯವನ್ನು ಹೇಳಿದ್ದಾರೆ. ಮುಸಲ್ಮಾನ ಹುಸೇನ ಯಕ್ಷಗಾನದಲ್ಲಿ ಕೃಷ್ಣನ ಪಾತ್ರವನ್ನು ಅದ್ಭುತವಾಗಿ ಮಾಡಿದ್ದು ಇಲ್ಲಿಯ ವಿಷಯ. ಹಿಂದೆ ಮುಸಲ್ಮಾನರು ಕನ್ನಡ ಗ್ರಂಥಗಳನ್ನು ಜೊತೆಗೆ ಧಾರ್ಮಿಕ ಗ್ರಂಥಗಳನ್ನು ಓದುತ್ತಿದ್ದರು. ಇದು ಆಶ್ಚರ್ಯದ ಸಂಗತಿಯಾದರೂ ಗೊರೂರವರಿಗೆ ಇದಕ್ಕಿಂತ ಸೋಜಿಗದ ಸಂಗತಿ ಎಂದರೆ ಹುಸೇನ್ ಯಕ್ಷಗಾನದಲ್ಲಿ ಕೃಷ್ಣನ ಪಾತ್ರವನ್ನು ಮಾಡಿದ ವೈಖರಿ. "ರಂಗ ಸ್ಥಳದಲ್ಲಿ ಬಂದು ನಿಂತ ಹುಸೇನ್ ಸಾಹೇಬನ ವೇಷವನ್ನು ವಾಕ್‌ಶುದ್ಧಿಯನ್ನು ನೋಡಿ ವೈದಿಕ ಮನೆತನದ ವೃದ್ಧ ಸ್ತ್ರೀಯರೂ ಸಹ ಮೈಮರೆತು "ಕೃಷ್ಣ ಪರಮಾತ್ಮ ಕಾಪಾಡಪ್ಪ" ಎಂದು ಕೈ ಮುಗಿದು ಬಿಡುತ್ತಿದ್ದರು. ಅನಂತರ ನಾವು ಕೃಷ್ಣ ಪರಮಾತ್ಮನೆಲ್ಲಿ ಇವ ಹೊಸಕೇರಿಯ ಹುಸೇನ್‌ಸಾಬಿ ಎಂದರೂ ಸಹ ಆ ವೃದ್ಧೆಯರು "ಹುಸೇನ್‌ಸಾಬಿಯಂತೆ ಹುಸೇನ್‌ಸಾಬಿ. ನಾವು ಕೈ ಮುಗಿಯುವುದು ತಲುಪುವುದು ಶ್ರೀಕೃಷ್ಣನಿಗೆ. ಇವನು ಯಾರಾದರೇನು?" ಎನ್ನುತ್ತಿದ್ದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು. ೪೦೨) ಹುಸೇನ್‌ಸಾಬಿಗೆ ಕೃಷ್ಣನ ವೇಷ ಒಪ್ಪಿತವಾಗಿತ್ತು ಅಷ್ಟೇ ಅಲ್ಲದೆ ಅವನ ಮಾತಿನ ಶುದ್ಧ ರೀತಿ ಎಲ್ಲರನ್ನು ಬೆರಗುಗೊಳಿಸಿತು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಸಾಹೇಬನಿಗೆ 'ಹುಸೇನ್ ಕೃಷ್ಣ' ಎಂದೇ ಹೆಸರಾಯಿತು ಎಂಬ ಮಾತು ವಿಶೇಷವಾಗಿದೆ. ಗ್ರಾಮೀಣ ಜನತೆಯಲ್ಲಿ

ಕಲೆಯ ತನ್ಮಯತೆ ಇಷ್ಟು ಅಗಾಧವಾಗಿತ್ತು. ಇಲ್ಲಿಯೂ ಸಹ ಧರ್ಮದ ಸಾಮರಸ್ಯವನ್ನು ಚೆನ್ನಾಗಿ ಗುರುತಿಸಬಹುದು.[೧]

ಕೋಲಾಟ ಜನಪದ ಕಲೆಗಳಲ್ಲಿ ಎಷ್ಟು ಪ್ರಧಾನವಾಗಿದೆಯೋ ಅಷ್ಟೇ ವೈಶಿಷ್ಟ್ಯಪೂರ್ಣವಾಗಿದೆ. ಹಬ್ಬ ಜಾತ್ರೆಗಳಿಗೆ ಕೋಲಾಟ ಒಂದು ವಿಶೇಷ ಮೆರಗನ್ನು ತಂದು ಕೊಡುತ್ತದೆ. ಕೋಲಾಟದ ಅನನ್ಯತೆ ಗ್ರಾಮೀಣ ಜನರಲ್ಲಿ ಆಬಾಲವೃದ್ಧರಾದಿಯಾಗಿ ಎಲ್ಲರಲ್ಲೂ ಇರುತ್ತದೆ. ಬೈಲಹಳ್ಳಿ ಜನರ ಕೋಲಾಟದ ವೈಭವ ಇದಕ್ಕೆ ಸಾಕ್ಷಿ. ಮೋಜಿಮದಾರನು ಬೈಲಹಳ್ಳಿ ಕೋಲಾಟವನ್ನು ಮೆಚ್ಚಿಕೊಳ್ಳುವುದರ ಜೊತೆಗೆ ಆ ಕೋಲಾಟಕ್ಕೆ ಮೇಟಿಯಾದ ನಾಣಿಯ ಸಂದರ್ಭೋಚಿತ ಸ್ಫೂರ್ತಿ ಸಾಹಿತ್ಯವನ್ನು ಮೆಚ್ಚಿಕೊಳ್ಳುತ್ತಾರೆ. ಕೋಲಾಟ ಕಾಲಿಗೆ ತ್ರಾಣ ಕೊಡುವುದರ ಜತೆಗೆ ಮೈಮನಗಳಿಗೆ ಉಲ್ಲಾಸವನ್ನು ತಂದು ಕೊಡುವ, ತುಂಬಿ ಕೊಡುವ ವಿಶಿಷ್ಟ ಕಲೆ ಎನ್ನಬಹುದು. 'ಬೈಲಹಳ್ಳಿ ಸರ್ವೆ' ಕೃತಿಯಲ್ಲಿ ಕೋಲಾಟದ ಬಗ್ಗೆ ಗೊರೂರರವರು ಕೊಡುವ ಮಾಹಿತಿ ಎಷ್ಟು ಆಕರ್ಷಕವಾಗಿದೆಯೋ ಅಷ್ಟೇ ಉಪಯುಕ್ತವಾಗಿದೆ. "ಮೋಜಿಮದಾರನಿಗೆ ಹಳ್ಳಿಯ ಕೋಲಾಟವನ್ನು ನೋಡಲು ಬಹಳ ಉತ್ಸಾಹವಿತ್ತು. ಅವರು ಇವತ್ತು ನಾಣಿಯೊಂದಿಗೆ 'ಕೋಲಾಟವಾಡಿಸಯ್ಯ ನೋಡೋಣ' ಎಂದರು. .... ನಾಣಿಗೆ ಕೋಲಾಟವೂ ಆ ಆಟಕ್ಕೆ ಬೇಕಾದ ಹಾಡುಗಳೂ ಚೆನ್ನಾಗಿ ಬರುತ್ತಿದ್ದವು. ಕೋಲಾಟದ ಪದಗಳು, ಬೀಸುವ ಕಲ್ಲಿನ ಹಾಡುಗಳು, ಗಾಡಿಯ ಪದಗಳೂ ಇವುಗಳನ್ನೆಲ್ಲಾ ನಾಣಿಯು ರೈತರಿಂದ ಹೇಳಿಸುತ್ತಿದ್ದುದಲ್ಲದೆ ತಾನೂ ಹೇಳುತ್ತಿದ್ದನು. ನಾಣಿಯು ಮಾಡತಕ್ಕ ಯಾವ ಕೆಲಸವನ್ನೂ ಅರ್ಧಮರ್ಧ ಮಾಡುವವನಲ್ಲ. ಅವನ ಕೆಲಸವೆಲ್ಲಾ ಶಿಸ್ತು. ಅವನು ಕೋಲಾಟಗಾರರಿಗೆ ಕಟ್ಟುವುದಕ್ಕೆ ಗೆಜ್ಜೆಗಳನ್ನು ಎಲ್ಲಿಯೋ ಸಂಪಾದಿಸಿದನು. ಅವನ ಪ್ರೋತ್ಸಾಹದಲ್ಲಿ ರೈತರು ಕೋಲಾಟವನ್ನು ಹಿಂದೆಂದೂ ಆಡದಷ್ಟು ಚೆನ್ನಾಗಿ ಆಡಿದರು. ಆ ಹಾಡು, ಹಾಡಿಗೆ ಅನುಸರಿಸಿ ಹೋಗುತ್ತಿದ್ದ ಅವನ ಕಾಲಿನ ಗೆಜ್ಜೆಯ ಸದ್ದು ಆ ಸದ್ದನ್ನು ಅನುಸರಿಸಿ ನಡೆಯುತ್ತಿದ್ದ ಕೋಲುಗಳ ಸದ್ದು, ಮೊದ ಮೊದಲು ಸಾಮಾನ್ಯವಾಗಿ ಕೋಲಿಗೆ ಕೋಲು ತಾಕುತ್ತಿದ್ದುದು, ಬರಬರುತ್ತಾ ಚಮತ್ಕಾರಕ್ಕೆ

---

೧. ಧರ್ಮ ಸಾಮರಸ್ಯದ ಬಗೆಗೆ ಗೊರೂರರವರ ಸಾಹಿತ್ಯದಲ್ಲಿ ಸಾಕಷ್ಟು ವಿವರಗಳು ಲಭ್ಯವಾಗುತ್ತದೆ. ಒಮ್ಮೆ ಗೊರೂರರವರು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಬ್ಬರು ಸಾಹೇಬರು (ಮುಸ್ಲಿಂ) ಕುಮಾರವ್ಯಾಸ ಭಾರತವನ್ನು ಓದುತ್ತಿರುವುದನ್ನು ಗಮನಿಸಿದಾಗ ಇವರಿಗೆ ತುಂಬಾ ಸಂತೋಷವಾಗುತ್ತದೆ. ಸಾಹೇಬರು ಗೊರೂರರವರ ಬಗ್ಗೆ ತಿಳಿಯದೆ ಗೊರೂರು ಸಾಹಿತ್ಯದ ಬಗ್ಗೆ ಅಭಿಮಾನದ ಮಾತುಗಳನ್ನು ಆಡಿ ಆ ವ್ಯಕ್ತಿಯನ್ನು ಕಾಣಬೇಕೆಂದು ಆಸೆ, ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಆಗ ಗೊರೂರರವರು "ನೀವು ನೋಡಬೇಕೆಂದಿರುವ ಪ್ರಾಣಿ ನಾನೇ ಎಂದಾಗ ಸಾಹೇಬರಿಗೆ ಹೇಳಲಾರದಷ್ಟು ಆನಂದವಾಗಿ ಅವರಿಬ್ಬರು ಪರಸ್ಪರ ಆಲಿಂಗನ ಮಾಡಿಕೊಳ್ಳುತ್ತಾರೆ". (ಅದೇ; ಪು. ೪೦೩) ಗೊರೂರರವರಿಗೆ ಸರಳತೆ ಅತಿ ಪ್ರಿಯವಾಗಿತ್ತು. ಮತ್ತೊಬ್ಬರಲ್ಲಿರುವ ಅದೇ ಸರಳತೆಯನ್ನು ಪ್ರಾಮಾಣಿಕತೆಯನ್ನು ಕಂಡಾಗ ಅವರ ಮನ ಇಮ್ಮಡಿ ಆನಂದವನ್ನು ಪಡೆಯುತ್ತಿತ್ತು ಎಂಬುದಕ್ಕೆ ಸಾಹೇಬರ ಉದಾಹರಣೆ ಉತ್ತಮ ಸಾಕ್ಷಿಯಾಗಿದೆ. ಗುಣ ನೈಪುಣ್ಯವನ್ನು ಯಾರಲ್ಲಿ ಕಂಡರೂ ಮೆಚ್ಚಿಕೊಳ್ಳುವ ಉದಾರ ಮನಸ್ಸಿನ ವ್ಯಕ್ತಿಗಳು ಗೊರೂರರವರು.

ಪ್ರಾರಂಭವಾದುದು, ಒಬ್ಬೊಬ್ಬನೂ ಒಂದೇ ಕಾಲದಲ್ಲಿ ಎಡಗಡೆಗೂ ಬಲಗಡೆಗೂ ಕೋಲನ್ನು ಆಡುತ್ತಿದ್ದುದು, ಬೆನ್ನಿನ ಹಿಂದುಗಡೆ ಕೋಲನ್ನು ಆಡುತ್ತಿದ್ದುದು, ಒಬ್ಬನ ಸಂದಿಯಲ್ಲಿ ಒಬ್ಬನು ತೂರುತ್ತಿದ್ದುದು, ಹತ್ತು ಜನರ ಕೋಲಿನ ಏಟುಗಳನ್ನು ಒಬ್ಬನೇ ಸ್ವೀಕರಿಸಿ, ಅವುಗಳಿಗೆ ಜವಾಬ್ ಕೊಡುತ್ತಿದ್ದುದು, ಇವುಗಳನ್ನೆಲ್ಲಾ ನೋಡಿ ಮೋಜಿಮದಾರರಿಗೆ ಆಶ್ಚರ್ಯವಾಯಿತು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೫೩-೫೪)

"ಕೋಲಾಟ ಜಲ ತರಂಗದ (ವಾದ್ಯದ) ಹಾಗೆ; ಅದರಲ್ಲಿ ಅನೇಕ ರಸಗಳನ್ನು ತೋರಿಸಬಹುದು. ವೀರರಸ, ಸೈನಿಕರು ಯುದ್ಧಕ್ಕೆ ಹೋಗುವುದನ್ನು ಜ್ಞಾಪಕಕ್ಕೆ ತರುವಂತೆ ಕೋಲುಗಳನ್ನು ಹೊಡೆಯುವ ಕ್ರಮ, ಶೃಂಗಾರವನ್ನು ತೋರಿಸುವ ರೀತಿಯಲ್ಲಿ ಹೊಡೆಯುವ ಕ್ರಮ, ದುಃಖವನ್ನು ತೋರಿಸುವಂತೆ ನಿಧಾನವಾಗಿ ಹೊಡೆಯುವ ಕ್ರಮ, ವೇಗ, ಗಾಬರಿ, ಆರ್ಭಟ ಇವುಗಳನ್ನೆಲ್ಲಾ ಕೋಲನ್ನು ಹೊಡೆಯುವುದರಲ್ಲಿ ತೋರಿಸಬಹುದು. ಕೋಲಾಟ ಒಂದು ಗಂಟೆ ಎರಡು ಗಂಟೆ ನೋಡಿದರೆ ಬಗೆಬಗೆಯ ರಾಗಗಳ ಆಲಾಪನೆಯೊಂದಿಗೆ ಸಂಗೀತವನ್ನು ಕೇಳಿದಂತೆ ಆಗುತ್ತದೆ. ಆ ಹಾಡು, ತಾಳ ಒಂದೊಂದು ಸಲ ಒಂದೊಂದು ಬಗೆಯಾಗಿದ್ದು, ಕೋಲಾಟವೆಂಬುದು ಬರಿಯ ಕೋಲನ್ನು ಕಟ್ಟುವುದೆಂದು ತಿಳಿದಿರುವವರಿಗೆ ಆಶ್ಚರ್ಯವನ್ನೂ ವಿಶ್ವಾಸವನ್ನೂ ಉಂಟುಮಾಡುತ್ತದೆ. ಕೋಲಾಟವನ್ನು ಎಷ್ಟು ಬಾರಿ ಎಷ್ಟು ಗಂಟೆಗಳ ಕಾಲ ನೋಡಿದರು ಬೇಸರವಾಗುವುದಿಲ್ಲ. ....

ಆ ರೈತರ ಚಟುವಟಿಕೆ ಏನು! ಅವರ ಉತ್ಸಾಹವೇನು! ಚುರುಕೇನು! ಕೋಲಾಟದಲ್ಲಿ ಅವರು ತೋರಿಸುತ್ತಿದ್ದ ಚುರುಕು ಆಶ್ಚರ್ಯಕರವಾಗಿತ್ತು. ಅರವತ್ತೈದು ವಯಸ್ಸಿನ ಇಂಜನ್‌ಯಾಲಕ್ಕಿ ಯಾವತ್ತೂ ಜನರೊಂದಿಗೆ ಹೆಚ್ಚಾಗಿ ಸೇರದವನು. ಕೋಲಾಟವನ್ನು ಆಡುವುದನ್ನು ಬಿಟ್ಟೇ ನಲವತ್ತು ವರ್ಷವಾಗಿದ್ದಿತು. ಅವನಿಗೂ ಉತ್ಸಾಹ ಉಂಟಾಗಿ ಅವನೂ ಆಟಕ್ಕೆ ಸೇರಿದನು. ಕೋಲಾಟದಲ್ಲಿ ಒಂದೊಂದು ತರಹದ ಹಾಡಿಗೂ ಒಂದೊಂದು ತರಹವಾಗಿ ಆಟವನ್ನು ಪ್ರಾರಂಭಿಸಿ ಒಂದೊಂದು ರೀತಿಯಿಂದ ಕೊನೆ ಮಾಡಬೇಕು. ಇದು ಹಳ್ಳಿಯವರಿಗೆಲ್ಲಾ ಗೊತ್ತು. ....

ಕೋಲಾಟವನ್ನು ಆಡುವಾಗ ಎರಡು ತಂಡವನ್ನು ಕಾಣಬಹುದು. ಹಾಡನ್ನು ಎರಡು ತಂಡದವರು ಉತ್ತರಕ್ಕೆ ಪ್ರತಿ ಉತ್ತರವಾಗಿ ಹಾಡುತ್ತಾರೆ.

ಉದಾಹರಣೆಗೆ -

"ಶರಣು ಶರಣುವಯ್ಯ ಗಣನಾಯ್ಕ .....
ನಮ್ಮ ಕರುಣದಿಂದಲಿ ಕಾಯೊ ಗಣನಾಯ್ಕ
ಎಳ್ಳುಂಡೆ ಜೇನುತುಪ್ಪ ಗಣನಾಯ್ಕ
ನಮ್ಗೆ ವಿದ್ಯೇವ ಕಲಿಸಯ್ಯ ಗಣನಾಯ್ಕ

ನಿಮಗೆ ಗೊನೆಮೇಗ್ಲ ಬಾಳೆಹಣ್ಣು ಗಣನಾಯ್ಕ
ನಿಮಗೆ ಕಳಿ ಅಡ್ಕೆ ಚಿರಗೆಲೆ ಗಣನಾಯ್ಕ
ನಿಮಗೆ ವಡ್ಡ ತೆಂಗಿನಕಾಯಿ ಗಣನಾಯ್ಕ
ನಿಮಗೆ ಕರ್ಪೂರ ಸಾಂಬ್ರಾಣಿ ಗಣನಾಯ್ಕ
ನಿಮ್ಗೆ ಮರ್‍ಗಾಮಲ್ಲಿಗೆ ಜಾಜಿ ಗಣನಾಯ್ಕ
ನಿಮ್ಗೆ ಕೊಂಬೆ ಮೇಗ್ಲ ನಿಂಬೆಹಣ್ಣು ಗಣನಾಯ್ಕ
ಶರಣು ಶರಣುವಯ್ಯ ಗಣನಾಯ್ಕ
ನಮ್ಮ ಕರುಣದಿಂದಲಿ ಕಾಯೊ ಗಣನಾಯ್ಕ
ಹಾ! ಗಣನಾಯ್ಕ". (ಅದೇ; ಪು. ೫೫-೫೫)

ಇಲ್ಲಿ ಗಣನಾಯ್ಕ ಎಂದು ಮೊದಲ ಎರಡು ಸಾಲನ್ನು ಹೇಳಿ ಒಂದು ತಂಡ ಹಾಡನ್ನು ನಿಲ್ಲಿಸಿದರೆ ಇನ್ನೊಂದು ತಂಡ ಮಿಕ್ಕ ಎರಡು ಸಾಲನ್ನು ಹಾಡಿ ಮತ್ತೆ ಗಣನಾಯ್ಕ ಎಂದು ಹಾಡನ್ನು ನಿಲ್ಲಿಸುತ್ತದೆ. ಕೋಲಾಟದಲ್ಲಿ 'ತಂದಾನೋ ತಾನಾನಿ ತಾನು ತಾನಿ ತಂದನೋ ತಂದನೋ' ಎಂಬ ಒಂದು ಪಲ್ಲವಿಯನ್ನು ಹಾಡುತ್ತ ಕೋಲಾಟದವರು ಹಾಡನ್ನು ಎಷ್ಟಾದರೂ ಮುಂದುವರೆಸುತ್ತಾರೆ. ಕೋಲಾಟದವರಲ್ಲಿ ಪ್ರತಿಭಾವಂತರು ತಾವೇ ಭಾವಪೂರ್ಣವಾದ ಸಾಲುಗಳನ್ನು ಕಟ್ಟಿ ಈ ಪಲ್ಲವಿಯೊಂದಿಗೆ ಹಾಡುವುದುಂಟು. ನಾಣಿ ಕೋಲಾಟದಲ್ಲಿ ಇಂತಹ ಅನೇಕ ಸಾಲುಗಳನ್ನು ಕಟ್ಟಿ ಹಾಡಿರುವುದು ಇದೆ. ಕೋಲನ್ನು ಪ್ರಾರಂಭಿಸುವುದರಲ್ಲಿ ನಿಧಾನವಾಗಿ ಹಾಕಿ ಅನಂತರ ಜೋರು ಜೋರಾಗಿ ಹೊಡೆಯುವುದಕ್ಕಾಗಿ ಕೆಲವು ವಿಶೇಷ ಪದಗಳನ್ನು ಹಾಡುವುದುಂಟು. ಉದಾಹರಣೆಗೆ "ಎಲ್ಲವನೊ ಶಿವನೆಲ್ಲವನೊ ಸ್ವಾಮೊಲ್ಲವನೋ ಗುರುವೆಲ್ಲವನೊ" (ಅದೇ; ಪು. ೫೬) ಈ ಹಾಡು ಮತ್ತೆ ಮತ್ತೆ ಪುನರಾವರ್ತನೆಯಾಗಿ ಕೋಲಿನ ವೇಗ ಕ್ರಮೇಣ ಜೋರಾಗುತ್ತದೆ. ಕೋಲಿನ ದನಿಗೆ ಜೊತೆಯಾಗಿ ಗೆಜ್ಜೆಯ ಕಾಲುಗಳು ವೇಗವಾಗಿ ಕುಣಿಯುತ್ತವೆ. ಈ ಗೆಜ್ಜೆಯ ಕುಣಿತದಲ್ಲಿಯೂ ಬೇರೆ ಬೇರೆ ಲಯವನ್ನು ಗುರುತಿಸಬಹುದು.

ಬೈಲಹಳ್ಳಿ ರಥೋತ್ಸವದಲ್ಲಿ ಹಾಡುವ ಕೋಲಾಟದ ಪದ -

"ತೇರಿಗ್ಹೋಗೋಣ ಬನ್ನಿರೋ
ಸ್ವಾಮಿ ರಥಾಕ್ಹೋಗೋಣ ಬನ್ನಿರೊ" (ಅದೇ; ಪು.೫೭)

ಎಂಬ ಪದ ಪ್ರಸಿದ್ಧವಾದದ್ದು. ಗೊರೂರಿನ ರಥೋತ್ಸವದಲ್ಲಿಯು ಕೋಲಾಟದವರು ಈ ಹಾಡನ್ನು ಹಾಡಿ ಕೋಲಿನೊಂದಿಗೆ ನಲಿಯುತ್ತಾರೆ, ಎಲ್ಲರನ್ನೂ ನಲಿಸುತ್ತಾರೆ. ಮೋಜಿಮದಾರ ಸಾಹೇಬರಿಗೆ ಬೈಲಹಳ್ಳಿಯ ಜನ ಹಾಡುವ ಕೋಲಾಟದ ಪದಗಳು ಎಲ್ಲವು ಅತ್ಯಂತ ಆಕರ್ಷಣೀಯವಾಗಿತ್ತು. ಮೋಜಿಮದಾರನು ಈ ಸಂತೋಷವನ್ನು ನಾಣಿ ಎದುರಿಗೆ ವ್ಯಕ್ತಪಡಿಸಿದಾಗ ಕೋಲಾಟದ ಆನಂದದ ಬಗ್ಗೆ ನಾಣಿ ಆಡುವ ಮಾತು ಕೋಲಾಟದ ವೈಭವಕ್ಕೆ ತಿಲಕ ಇಟ್ಟಂತೆ ಇದೆ.

"ಆಡ್ಬೇಕು ಕೋಲಾಟ

ಮರಿಬೇಕು ಎಲ್ಲಾ ಕಾಟ

ಒಕ್ಕಲಿಗನ್ಗದೇ ಪಾಟ

ನಮ್ಗೆ ಹಾಲ್ಸಕ್ರೇ ಊಟ" (ಅದೇ; ಪು. ೫೫)

ಕೋಲಾಟದ ಖುಷಿ ನಾಣಿಯ ಈ ಮಾತುಗಳಲ್ಲಿ ಕೆನೆಗಟ್ಟಿದೆ. ಹೀಗೆ ಗೊರೂರವರು ಗ್ರಾಮೀಣ ಕಲೆಯಾದ ಕೋಲಾಟವನ್ನು ಮನದಣಿಯೆ ಅನುಭವಿಸಿ ತಮ್ಮ ಕೃತಿಗಳಲ್ಲಿ ಪ್ರಾಸಂಗಿಕವಾಗಿ ವಿಸ್ತರಿಸಿದ್ದಾರೆ ಹಾಗೂ ವೈಭವೀಕರಿಸಿದ್ದಾರೆ. ಇಂದಿನ ಗ್ರಾಮಗಳಲ್ಲಿ ಇಂತಹ ಅಪೂರ್ವವಾದ ಗ್ರಾಮೀಣ ಕಲೆಯ ಸೊಬಗು, ಸವಿ, ಸೊಗಡು ಕಣ್ಮರೆಯಾಗುತ್ತಿರುವುದು ಹೇಳಲಾಗದಂತಹ ದುರಂತ ನಷ್ಟ ಎನಿಸುತ್ತದೆ. ವಿದ್ಯಾವಂತರು ಸಹ ದೇಶಿ ಸಂಸ್ಕೃತಿಯಾದ ಗ್ರಾಮೀಣ ಕಲೆಯ ಸೊಬಗಿನ ಬಗ್ಗೆ ಕಣ್ಣುಮುಚ್ಚಿ ಕೊಂಡಿರುವುದು ಮತ್ತೊಂದು ದುರಂತವಾಗಿದೆ. ಜನಪದ ಕತೆಗಳು ಜನಪದ ಕಲೆಯ ಸೊಬಗಿನ ಒಂದು ಸಿರಿ-ಗರಿ. ಬೈಲಹಳ್ಳಿ ಸುಬ್ಬೇಗೌಡರು ಮೋಜಿಮದಾರರ ಎದುರಿನಲ್ಲಿ ಅನೇಕ ಜನಪದ ಕತೆಗಳನ್ನು ಹೇಳಿಸಿದಾಗ ಮೋಜಿಮದಾರರು ಆ ಕತೆಗಳನ್ನು ಕೇಳಿ ಆನಂದದ ಜತೆಗೆ ಅಚ್ಚರಿ ಚಕಿತರಾಗುತ್ತಾರೆ. ಆ ಸಂದರ್ಭದಲ್ಲಿ ಮೋಜಿಮದಾರರು ಸಹಜವಾಗಿಯೇ ನಮಗೆ ಯಾರಿಗೂ ತಿಳಿಯದೆ ಇರೋ ಸೊಗಸಾದ ಕತೆಗಳನ್ನು ಸುಬ್ಬೇಗೌಡರು ಎಲ್ಲಿ ಕಲಿತರು ಎಂದು ನಾಣಿಯನ್ನು ಪ್ರಶ್ನಿಸುತ್ತಾರೆ. ಆಗ ನಾಣಿ ಕೊಡುವ ಉತ್ತರ ಜನಪದ ಕತೆಯ ಮರ್ಮಕ್ಕೆ ಕೀಲುಗೈಯಾಗಿದೆ. ನಾಣಿ ಹೇಳುತ್ತಾನೆ -

"ಕತೆ ಎಲ್ಲಿ ಕಲ್ಯೋದು

ಬೇಕಾದ್ರೆಲ್ಲಾ ಬುಕ್ಕ್ಯೋದು

ಬರ್ತದೆ ನಿಂಗೆ ಬರಿ ಏದು

ಸುಬ್ಬನ್ಕತೆಗೆ ಇಲ್ಲಾ ಓದು" (ಅದೇ; ಪು. ೬೨)

ಎಂದು ಸುಬ್ಬನ ಕತೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಜನಪದ 'ಕಲೆ ಸಾಹಿತ್ಯಕ್ಕೆ', ಆಸಕ್ತಿ ಅನುಭವ ಮೂಲ ಕಾರಣವೆ ಹೊರತು ಪುಸ್ತಕದ ಓದು ಅಲ್ಲ ಎಂಬುದನ್ನು ನಾಣಿಯ ಮಾತುಗಳ ಮೂಲಕ ಗೊರೂರವರು ಸ್ಪಷ್ಟಪಡಿಸಿದ್ದಾರೆ. ಸುಬ್ಬನು ನಾಣಿ ಮಾತಿಗೆ ಜೊತೆಯಾಗಿ ಹೇಳಿದ ಮಾತು ಗಮನಾರ್ಹ. "ಹೌದು ಬುದ್ಧಿ ಒಪ್ಪೆ. ನಮ್ಮ್ಕತೆಗೆ ಯಾವ ಬುಕ್ಕೂ ಓದೋ ಹಂಗಿಲ್ಲ. ನಮ್ಮಪ್ಪ ಹೇಳ್ತಿದ್ದ ಕತೇನೆಲ್ಲಾ ಬರ್ಕೊಂಡಿದ್ರೆ ಹತ್ತು ಮಹಾಭಾರ್ತ ಆಗ್ತಿತ್ತು" ಎಂದನು. (ಅದೇ) ಸುಬ್ಬನ ಈ ಮಾತಿನಲ್ಲಿ ಗ್ರಾಮೀಣ ಜನ ಜನಪದ ಸಾಹಿತ್ಯದ ಗಣಿ ಎಂಬುದು ಸ್ಪಷ್ಟವಾಗುತ್ತದೆ. ಮೋಜಿಮದಾರರು ಸುಬ್ಬನ ಮಾತಿನ ವೈಖರಿಯನ್ನು ಕೇಳುತ್ತಾ ವಿದ್ಯೆಯೇ ಇಲ್ಲದ ಇವನು ಇಷ್ಟೊಂದು ಮಾತನಾಡುತ್ತಾನಲ್ಲ ಎಂದು ನುಡಿದಾಗ ನಾಣಿ ಹೇಳುವ ಮಾತು ಗಮನಾರ್ಹವಾದುದು.

"ಅವನ್ಗೆ ಯಾಕೆ ವಿದ್ದೆ
ನುಂಗೋದು ರಾಗಿಮುದ್ದೆ
ಹುದ್ದೆಗ್ಬೇಕು ವಿದ್ದೆ
ಕೊಡೋರ್‍ಯಾರು ಹುದ್ದೆ"

ಎಂದನು. (ಅದೇ) ಜನಪದ ಜ್ಞಾನಕ್ಕೆ ವಿದ್ಯೆ ಬೇಡ ಅದನ್ನು ತಿಳಿಯುವ ಆಸಕ್ತಿ ಇದ್ದರೆ ಸಾಕು ಎಂಬ ನಿಜಾಂಶ ಇಲ್ಲಿ ಸ್ಪಷ್ಟವಾಗಿದೆ. ಪೇಟೆ ಜನ ಬೇಕಾದಷ್ಟು ವಿದ್ಯೆ ಕಲಿತರು ಹುದ್ದೆ ಇಲ್ಲದೆ ಅತಂತ್ರದ ವ್ಯಕ್ತಿಗಳಾಗಿದ್ದಾರೆ ಎಂಬ ಇಲ್ಲಿಯ ಮಾತು ಕಟುಸತ್ಯವಾಗಿದೆ. ಗೊರೂರರವರು ಜನಪದ ಸಾಹಿತ್ಯದ ಬಗ್ಗೆ ಆಡಿರುವ ಎಲ್ಲಾ ಮಾತುಗಳು ಸ್ವಾನುಭವದ ಅಮೃತಸೂಕ್ತಿ ಸಂದೇಶಗಳಾಗಿವೆ.

ಹರಿಕತೆ ಮೂಲತಃ ಗ್ರಾಮೀಣ ಜನತೆಗೆ ಅತಿ ಪ್ರಿಯವಾದ ಕಲೆ. ವಿದ್ವಾಂಸರು ಇದನ್ನು ಜನಪದ ಕಲೆಯಲ್ಲಿ ಸೇರಿಸಿರುವುದು ಈ ಅರ್ಥದಲ್ಲಿ ಒಪ್ಪುವಂತಹದಾಗಿದೆ. ಹಬ್ಬ ಹರಿದಿನಗಳಲ್ಲಿ ಸುಗ್ಗಿಯ ವಿರಾಮದ ಕಾಲದಲ್ಲಿ ಗ್ರಾಮೀಣ ಜನರು ಹಳ್ಳಿಗಳಲ್ಲಿ ಹರಿಕತೆಗಳನ್ನು ಮಾಡಿಸುತ್ತಿದ್ದರು. ಇದು ಬಹುಪಾಲು ಒಂದು ಊರೊಟ್ಟಿನ ಕಾರ್ಯಕ್ರಮ ಆಗಿದ್ದರು ಕೆಲವು ಜನ ಶ್ರೀಮಂತರು ಊರಿನವರೆಲ್ಲರ ಸಲುವಾಗಿ ಹರಿಕತೆಯನ್ನು ದೇವಾಲಯದ ಒಳಗೆ ಏರ್ಪಾಡು ಮಾಡುತ್ತಿದ್ದರು. ವಿಶಿಷ್ಟ ಹಬ್ಬಗಳಿಗೆ ಸಂಬಂಧಿಸಿದಂತಹ ಹರಿಕತೆಗಳು ಉಂಟು. ಹಬ್ಬದ ಆಚರಣೆಯಲ್ಲಿ ಹಬ್ಬಕ್ಕೆ ಸಂಬಂಧಿಸಿದ ಕತೆಯನ್ನು ಹರಿಕತೆ ಮೂಲಕ ಕೇಳಿದಾಗ ಗ್ರಾಮೀಣ ಜನತೆಗೆ ಮತ್ತಷ್ಟು ಆನಂದವಾಗುತ್ತಿತ್ತು. ಪುರಾಣ ಕಾವ್ಯಗಳ ಕತೆನ್ನು ಓದಿ ತಿಳಿಯಲಾರದ ಜನಕ್ಕೆ ಹರಿಕತೆಯ ಮೂಲಕ ತಿಳಿಸಿ ಹೇಳುವುದು ಸುಲಭ. ಬಹುಮಟ್ಟಿಗೆ ಆಸ್ತಿಕ ಮನೋಭಾವಕ್ಕೆ ಒಗ್ಗಿರುವ ಗ್ರಾಮೀಣ ಜನರಿಗೆ ಈ ದೃಷ್ಟಿಯಲ್ಲಿ ಹರಿಕತೆಗಳು ಪೂಜನೀಯವಾದದ್ದು. ಹರಿಕತೆಯನ್ನು ಏರ್ಪಡಿಸುವುದು ಎಷ್ಟು ಪುಣ್ಯದ ಕೆಲಸವೋ ಹರಿಕತೆಗಳನ್ನು ಕೇಳಿ ಆನಂದಪಡುವುದು ಅದಕ್ಕಿಂತ ಹೆಚ್ಚಿನ ಪುಣ್ಯದ ಕೆಲಸ ಎಂಬ ಭಾವನೆ ಗ್ರಾಮೀಣ ಜನರಲ್ಲಿ ರೂಢ ಮೂಲವಾಗಿತ್ತು. ಯಕ್ಷಗಾನ ನಾಟಕಗಳಲ್ಲಿ ಕೇಳಿ ಆನಂದಪಟ್ಟ ಪುರಾಣ ಕತೆಗಳಿಗೆ ಹರಿಕತೆಗಳು ಮತ್ತೊಂದು ಸುಲಭ ವ್ಯಾಖ್ಯಾನದಂತೆ ಇತ್ತು. ಹರಿಕತೆಯಲ್ಲಿ ಸೊಗಸಾದ ಕತೆಯನ್ನು ಕತೆ ಕುಣಿತದ ಮೂಲಕ ಹಾಡಿ ರಂಜನೆಯಗೊಳಿಸುವ ಕಲಾ ಕೌಶಲ್ಯ ಹರಿಕತೆ ದಾಸರಿಗೆ ಇರುತ್ತಿತ್ತು. ಹೀಗಾಗಿ ಗ್ರಾಮೀಣ ಜನತೆಗೆ ಹರಿಕತೆ ಬುದ್ಧಿ ಪ್ರಚೋದಕವು ಆಗಿರುವುದರ ಜತೆಗೆ ಮನರಂಜನೀಯವೂ ಆಗಿತ್ತು.

ಗೊರೂರರವರು 'ಕತೆಗಳು ಮತ್ತು ವಿನೋದ ಚಿತ್ರಗಳು' ಕೃತಿಯಲ್ಲಿ ಸಾಹೇಬರೊಬ್ಬರು ಮಾಡಿದ ಹರಿಕತೆಯ ವಿಶೇಷತೆಯನ್ನು ವರ್ಣಿಸುತ್ತ ಮೆಚ್ಚುಗೆಯ ಮಾತುಗಳನ್ನು ಆಡುತ್ತಾರೆ. "ಕೈಲಾಸಂ ಅವರು ಉಪನ್ಯಾಸವನ್ನು ನಾಟಕದ ಮೂಲಕ ಬೋಧಿಸಿದಂತೆ, ನಮ್ಮ ಜನರಿಗೆ ಯಾವುದನ್ನು ಹರಿಕತೆ ಮೂಲಕ ಹೃದಯಂಗಮವಾಗಿ ನಿವೇದಿಸಬಹುದು. ಸಾಧಾರಣವಾಗಿ ನಮ್ಮೂರಿನಲ್ಲಿ ಹರಿಕತೆಯನ್ನು ರಾತ್ರಿ ಊಟ

ವಾದ ಮೇಲೆ ಏರ್ಪಡಿಸುವುದು ಪದ್ಧತಿಯಾದರೂ, ಇದೇನೋ ಸಾಹೇಬರ ಹರಿಕತೆ. ಊಟದ ಹೊತ್ತಿಗೇ ಮುಗಿಸಿಬಿಡೋಣ ಎಂದು ಸಂಜೆ ಆರು ಗಂಟೆಗೆ ಸಭೆ ಕೂಡಿಸಿದರು. ಶ್ರುತಿಗಾಗಿ ಹರಿಜನರ ಯಕ್ಷಗಾನ ಆಟದ ಒಂದು ಹಳೆಯ ಹಾರ್ಮೋನಿಯಂ, ವೀರಭದ್ರಾಚಾರಿಯ ಮೃದಂಗ ಇವಿಷ್ಟೇ ವಾದ್ಯಗಳು ದೊರಕಿದವು. ಸಾಹೇಬರು ಹಿಂದು ಹರಿಕತೆ ದಾಸರಂತೆ ಜರಿಯ ವಲ್ಲಿಯನ್ನು ಸೊಂಟಕ್ಕೆ ಬಿಗಿದು ಕೈಯ್ಯಲ್ಲಿ ತಾಳವನ್ನು ಹಿಡಿದು ನಿಂತರು. ವೃದ್ಧರಾದವರು, ಥೇಟ್ ವೈದಿಕರಾದವರು, ಘಂಟಾ ಕರ್ಣರು, ಅತಿಯಾದ ಮಡಿ ಭಾವನೆಯುಳ್ಳ ಕೆಲವು ವೃದ್ಧ ಸುಮಂಗಲಿಯರು, ವೃದ್ಧ ವಿಧವೆಯರ ಹೊರತು ಉಳಿದವರು ಮಿತ ಸಂಖ್ಯೆಯಲ್ಲಿಯೇ ಬಂದು ಸೇರಿದ್ದರು. ದೇವಸ್ಥಾನದ ಹೆಬ್ಬಾಗಿಲಿನ ಆಚೆ ಈಚೆ ಮನೆಗಳ ಜಗಲಿಗಳ ಮೇಲೆ ಕೆಲವರು ಕುಳಿತುಕೊಂಡು ಹರಟೆ ಹೊಡೆಯುತ್ತಾ ಔದಾಸೀನ್ಯದಿಂದ ಕಥೆ ಹೇಗೆ ಪ್ರಾರಂಭವಾಗುತ್ತದೆ ನೋಡೋಣವೆಂದು ನಿರೀಕ್ಷಿಸುತ್ತಿದ್ದರು. ಇದ್ದಕ್ಕಿಂದ್ದಂತೆ ಮೇಘದಿಂದ ಮಿಂಚು ಪಳಾರನೆ ಹೊರಟಂತೆ, ಅಂಬಿನಿಂದ ಬಾಣ ಹೊರಟಂತೆ

ಅಗಜಾನನ ....

....

ಎಂದು ಶ್ಲೋಕದಿಂದ ಹರಿಕಥೆ ಪ್ರಾರಂಭವಾಯಿತು. ಹರಿಕಥಾ ಸಾಬರ ಧ್ವನಿ ಕಂಚಿನಂತೆ ಕಣಿ ಕಣಿ ಗುಟ್ಟುತ್ತಿತ್ತು. ಉಚ್ಚಾರ ಸ್ಪಷ್ಟವಾಗಿತ್ತು. ಪ್ರಾರ್ಥನೆ ಭಾವಪೂರಿತ ಭಕ್ತಿ ನಮ್ರವಾಗಿತ್ತು. ಸಾಹೇಬರ ಪುಷ್ಟವಾದ ದೇಹಕ್ಕೆ ತಕ್ಕಂತೆ ಸ್ಪಷ್ಟವಾದ ತುಂಬಿದ ಕಂಠದ ಗಂಭೀರ ಧ್ವನಿ. ಧ್ವನಿವರ್ಧಕ ಯಂತ್ರ ಇಲ್ಲದ್ದಿದ್ದರೂ ಬೀದಿಯಲ್ಲಿ ಉದ್ದಕ್ಕೂ ಜಗಲಿಗಳ ಮೇಲೆ ಕುಳಿತವರಿಗೆಲ್ಲಾ ಸ್ಪಷ್ಟವಾಗಿ ಕೇಳುತ್ತಿತ್ತು. ಮೊದಲನೆಯ ಶ್ಲೋಕವನ್ನು ಉಚ್ಚಾರಣೆಯನ್ನು ಕೇಳಿಯೇ ಜಗಲಿಗಳ ಮೇಲೆ ಕುಳಿತ್ತಿದ್ದವರು ದೂರದಲ್ಲಿದ್ದವರೂ ಎಲ್ಲರೂ ಬಂದು ದೇವಸ್ಥಾನದಲ್ಲಿ ಕುಳಿತರು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೭೨; ಪು. ೨೬೨-೨೬೩) ಇಲ್ಲಿ ಹರಿಕತೆಯ ಸೊಗಸಿನ ಜೊತೆಗೆ ಗೊರೂರವರು ಸಾಹೇಬರ ಕೌಶಲ್ಯವನ್ನು ಸ್ಪಷ್ಟಪಡಿಸಿದ್ದಾರೆ. ಇಲ್ಲಿಯೂ ಸಹ ಕಲೆ ಯಾರೊಬ್ಬರ ಸೊತ್ತು ಅಲ್ಲ ಎಂಬುದನ್ನು ಗೊರೂರವರು ವಿಚಾರ ಮಾಡಿದ್ದಾರೆ. ಹರಿಕತೆಯಂತ ಕಲೆಯನ್ನು ಆಸ್ವಾದಿಸಬೇಕಾದರೆ ಕಾಲದ ವಿರಾಮವು ಇರಬೇಕು, ಆಸಕ್ತಿಯೂ ಇರಬೇಕು ಎಂಬ ಸಂಗತಿಯನ್ನು ಲೇಖಕರು ಇಲ್ಲಿ ಸೂಚ್ಯ ಮಾಡಿದ್ದಾರೆ.

ಗೊರೂರವರು ತಮ್ಮ ಊರಿನ ಜೋಡಿದಾರರ ಮನೆಯ ಲಗ್ನದ ವೈಭವವನ್ನು ವರ್ಣಿಸುವ ರೀತಿ ವಿಶಿಷ್ಟವಾದದ್ದು. ಸಾಮಾನ್ಯವಾಗಿ ಎಲ್ಲ ಹಳ್ಳಿಯಲ್ಲಿಯೂ ಹಳ್ಳಿಯವರ ಮನೆಯಲ್ಲಿ ನಡೆಯುವ ಮಂಗಳ ಕಾರ್ಯಗಳ ವೈಭವ ಒಂದೇ ರೀತಿ ಆಗಿರುತ್ತದೆ. ಜೋಡಿದಾರರ ಮಗನ ಲಗ್ನಕ್ಕೆ ಅವರ ರೈತರೆಲ್ಲಾ ಸುತ್ತಮುತ್ತಲ ನಾಲ್ಕಾರು ಹಳ್ಳಿಗಳಿಂದ ಬಂದಿದ್ದರು. ಬಂದವರೆಲ್ಲರು ಜೋಡಿದಾರರ ಎದುರು

ಮನೆಯ ಬಾಗಿಲಲ್ಲಿ ಕುಳಿತ್ತಿದ್ದರು. ಮದುವೆ ನಂತರ ಎದುರು ಮನೆಯ ಬಾಗಿಲಲ್ಲಿ ನಿಂತಿದ್ದ ತಮ್ಮ ರೈತರನ್ನೆಲ್ಲಾ ಕರೆದು ಪ್ರತಿಯೊಬ್ಬರಿಗೂ ಎಲೆ ಅಡಿಕೆಯನ್ನು ಜೋಡಿದಾರರೇ ಕೊಟ್ಟರು. ಎಲ್ಲರೂ ಊಟ ಮಾಡಿಕೊಂಡೇ ಹೋಗಬೇಕು ಎಂದು ಜೋಡಿದಾರರು ಕಟ್ಟಪ್ಪಣೆ ಮಾಡಿದರು. ಈ ಪದ್ಧತಿ ಎಲ್ಲ ಹಳ್ಳಿಯ ಮುಖ್ಯಸ್ಥರ ಮನೆಯ ಪದ್ಧತಿಯೂ ಆಗಿತ್ತು. ಊಟ ಮಾಡುವಾಗ ಬಹಳ ವಿನೋದ ನಡೆಯುತ್ತಿತ್ತು. ಶೀನಪ್ಪನು ಎಲ್ಲರ ಕೈಯಲ್ಲೂ ಒಂದೊಂದು ಶ್ಲೋಕವನ್ನು ಬಲತ್ಕಾರವಾಗಿ ಹಾಡಿಸುತ್ತಾನೆ. ಜೋಡಿದಾರರ ಮನೆಯ ಮದುವೆಯ ಸಂದರ್ಭದಲ್ಲಿ ಸ್ತ್ರೀ ಪುರಷರು ಸೌಹಾರ್ದವುಳ್ಳವರಾಗಿ ಅಣ್ಣ-ತಂಗಿಯರಂತೆ ಮದುವೆಯ ಚಟುವಟಿಕೆಯಲ್ಲಿ ಭಾಗಿಗಳಾಗಿ ಇರುತ್ತಿದ್ದರು. ಪಟ್ಟಣದ ಜನರಿಗೆ ಈ ದೃಶ್ಯ ಆಶ್ಚರ್ಯವನ್ನುಂಟು ಮಾಡುತ್ತಿತು. ಜೋಡಿದಾರರ ಮನೆಯ ಹಿಂದಲ ಮನೆಯಲ್ಲಿ ರೈತರೆಲ್ಲಾ ಆನಂದದಲ್ಲಿ ಮುಳುಗಿದ್ದರು. ನಾಣಿ ಅನೇಕ ಲಾವಣಿಗಳನ್ನು ಹೇಳಿ ಎಲ್ಲರಿಗೂ ಆನಂದ ತರುತ್ತಿದ್ದನು. ಜೋಡಿದಾರರು ಮರೆಯಲ್ಲಿ ಕುಳಿತು ಈ ಎಲ್ಲ ಆನಂದವನ್ನು ಕಂಡು ಅನುಭವಿಸಿ ತಾವು ಆನಂದಪಡುತ್ತಿದ್ದರು. ಲಾವಣಿ ಹೇಳುವವರಿಗೆ ಜೋಡಿದಾರರು ಬಹುಮಾನಗಳನ್ನು ಕೊಡುತ್ತಿದ್ದರು. ನಾಣಿ ರೈತರನ್ನು ಪ್ರೋತ್ಸಾಹಿಸಿ ಅವರಿಂದ ಪದಗಳನ್ನು ಹಾಡಿಸುತ್ತಿದ್ದನು. ಈ ಪದಗಳು ಗ್ರಾಮೀಣ ಬದುಕಿಗೆ ಕಣ್ಣಾಗಿದ್ದವು. ಬದುಕಿನ ಸೊಗಸಿಗೆ ಕಿರೀಟಪ್ರಾಯವಾಗಿ ಇದ್ದವು. ಅಂತಹದರಲ್ಲಿ ಒಂದು ಬಳೆಗಾರನ ಹಾಡು -

"ಬೆಂಕಿ ಪಟ್ಟಣದಿಂದ ವಂಕಿ ಬಳಿ ಬಂದೊ
ನಮ್ಮ ನಾಡಲಿ ಬಳೆಯಿಲ್ಲಾ
ನಮ್ಮ ನಾಡಲಿ ಬಳಿಯಿಲ್ಲಾ ಬಳೆಗಾರ
ಸಾರಿ ಕೊಂಡ್ಹೋಗೊ ತವರೀಲಿ"
"ಹಂಚಿನ ಮನೆ ಕಾಣೊ ಕಂಚಿನ ಕದ ಕಾಣೊ
ಇಂತಾಡು ರೆರಡೆ ಗಿಣಿ ಕಾಣೊ
ಇಂತಾಡು ರೆರಡೆ ಗಿಣಿ ಕಾಣೊ ಬಳೆಗಾರ
ಅದೆ ಕಾಣೊ ಅಣ್ಣ ತವರೂರು"
"ಅಲ್ಯಾಡುತಾವೆ ಕಾಣವೆ ತಿರುಗಾವೆ
ಪಾರ‍್ವಾದ ಪಕ್ಷಿ ಪಗಡೆಯ
ಪರ‍್ವಾದ ಪಕ್ಷಿ ಪಗಡೆಯನಾಡುತಾವೆ
ಅದೆ ಕಾಣೊ ಅಣ್ಣ ತವರೂರು."
"ಬಾಣಂತಿ ಹಟ್ಟೇಲಿ ಬಾಳೆಯ ಚಪ್ಪರ
ಬಾಗಿ ಬಾರಯ್ಯ ಬಳೆಗಾರ
ಬಾಗಿ ಬಾರಯ್ಯ ಬಳೆಗಾರ ನಣ್ಣಯ್ಯ
ಬಾಣತಿಗೆ ಬಳೆಯ ತೊಡಬಾರೊ."

"ಮುತ್ತೈದೆ ಹಟ್ಟೀಲಿ ಮುತ್ತಿನ ಚಪ್ಪರ
ಸುತ್ತಿ ಬಾರಯ್ಯ ಬಳೆಗಾರ
ಸುತ್ತಿ ಬಾರಯ್ಯ ಬಳೆಗಾರ ನಣ್ಣಯ್ಯ
ಮುತ್ತೈದೆ ಬಳೆಯ ತೊಡಬಾರೊ". (ಗೊರೂರುರಾಮಸ್ವಾಮಿಅಯ್ಯಂಗಾರ್;೨೦೦೧; ಪು.೯೬)

ಈ ಹಾಡಿನಲ್ಲಿ ಪಟ್ಟಣದ ನಾಗರಿಕತೆ ಹಳ್ಳಿಗೆ ಇಣಕಿ ಹಾಕಿ ಗ್ರಾಮೀಣ ಪ್ರದೇಶದಲ್ಲಿ ಅದುವರೆಗೆ ಇದ್ದ ಹಳೆಯ ಬೆಳೆಯಲ್ಲ ಕಣ್ಮರೆಯಾಗಿತ್ತು ಎಂದು ನುಡಿಯುತ್ತಾರೆ. ಹೆಣ್ಣು ಬಳೆಗಾರನಿಗೆ ತನ್ನ ತವರೂರಿನಲ್ಲಿ ತನ್ನ ಮನೆಯನ್ನು ಪರಿಚಯಿಸಿ ಕೊಡುವ ರೀತಿ ಅತ್ಯಂತ ಆನಂದದಾಯಿಯಾಗಿದೆ. ಮಾತು ಮಾತಿಗೆ ತವರೂರಿನ ಸೊಬಗು ಶ್ರೀಮಂತಿಕೆಯನ್ನು ವರ್ಣಿಸುತ್ತ ಆ ಹೆಣ್ಣು ಉತ್ಸಾಹದಿಂದ 'ಅದೆ ಕಾಣೊ ಅಣ್ಣ ತವರೂರು' ಎಂದು ಉದ್ಗಾರ ಎಳೆಯುವುದು ಹಾಡಿನಲ್ಲಿ ಹೃದಯಸ್ಪರ್ಶಿ ನುಡಿಯಾಗಿದೆ. ಇಂತಹ ತವರಿನ ವೈಭವದ ಹಾಡನ್ನು ಹಾಡಿದಾಗ ಹಾಡಿದ ವ್ಯಕ್ತಿಗೆ ಇದ್ದಷ್ಟೇ ಉಮೇದು ಇಡೀ ವಾತಾರವಣದಲ್ಲಿ ಎಲ್ಲರ ಹೃದಯದಲ್ಲಿಯು ಪುಟಿಯುತ್ತಿತ್ತು. ಮತ್ತೊಬ್ಬ ವ್ಯಕ್ತಿ ಅಣ್ಣನ ಮನೆಗೆ ಹೆಣ್ಣಿಗೆ ಹೋದ ಒಂದು ಹೆಣ್ಣಿನ ಅನುಭವವನ್ನು ಕುರಿತು ಹಾಡುತ್ತಾರೆ-

"ನಮ್ಮಣ್ಣನ ಮನೆಗೆ ಹೆಣ್ಣಿಗ್ಹೋದೆ ಅತ್ತಿಗಮ್ಮ
ಸುಣ್ಣದ ಗೋಡೆ ಒರಗಿದೆ
ಸುಣ್ಣದ ಗೋಡೆ ಒರಗಿದೆ ಅತ್ತಿಗಮ್ಮ
'ಹೆಣ್ಣನ್ನು ಕೊಡೆ ಮಗನೀಗ'.
"ಹೆಣ್ಣೀಗೆ ಬರುವವಳು ನೆನ್ನೆನ ಮಾಡುತ್ತಿದ್ದೆ
ನಿನ್ನೊಬ್ಬ ಸೀಮೆ ದೊರೆಮಗ
ನಿನ್ನೊಬ್ಬ ಸೀಮೆ ದೊರೆಮಗ ಬಂದಿದ್ದ
ಬಣ್ಣುಡಿಸಿ ಬಳಿಯ ತೊಡಿಸ್ಹೋದ". (ಅದೇ)

ಈ ಹಾಡಿನಲ್ಲಿ ಹೆಣ್ಣಿಗೆ ತವರುಮನೆಯ ಸಂಬಂಧದ ಬಗ್ಗೆ ಇರುವ ಪ್ರೀತಿಯನ್ನು ಗುರುತಿಸಬಹುದು. ಇಲ್ಲಿ ಅತ್ತಿಗೆ ತನ್ನ ನಾದಿನಿ ಮನೆಗೆ ಹೆಣ್ಣು ಕೊಡಲು ಆಗದಿದ್ದಕ್ಕೆ ಪರಿತಪಿಸುವ ರೀತಿ ಆ ಎರಡು ಕುಟುಂಬಗಳ ಮಧುರ ಬಾಂಧವ್ಯಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಹಾಡಿನ ಪೈಪೋಟಿಗೆ ಅನುಗುಣವಾಗಿ ಮತ್ತೊಬ್ಬ ವ್ಯಕ್ತಿ ತವರಿನ ಸೊಬಗನ್ನು ಹಾಡುತ್ತ ಮಧ್ಯೆ ಹೆಣ್ಣಿಗೆ ತವರಿನ ಹಂಬಲದ ಜತೆಗೆ ಸ್ವಲ್ಪ ಮಟ್ಟಿಗೆ ವಿರುಕ್ತಿಯ ಭಾವನೆಯು ಇರಬೇಕು ಎಂಬ ಅಂಶವನ್ನು ಸೂಚಿಸುವ ಹಾಡನ್ನು ಹಾಡುತ್ತಾರೆ-

"ನೀರ ಮೇಲೆ ನೀರು ನೀರಿಂದಾಚೆ ತಾವರೆ
ತಾವರಿಂದಾಚೆ ತವರೂರು

ತಾವರಿಂದಾಚೆ ತವರೂರು ಹೋದರೆ
ತಿರುಗಿ ಬರುವುದಕೆ ಮನಸ್ಸಿಲ್ಲ."
"ಅಕ್ಕ ತಂಗಿಯರು ಕಟ್ಟೆ ನೀರಿಗೆ ಹೋಗಿ
ಅಲ್ಲಿ ನೋಡೆ ಅಕ್ಕ ತವರೂರು
ಅಲ್ಲಿ ನೋಡೆ ಅಕ್ಕ ತವರೂರು ಬೀದಿಯ
ಹೂವಿನ ತೇರು ಹರಿದಾವೆ."
"ಹರಿದರೆ ಹರಿಯಲೆ ಮುರಿದರೆ ಮುರಿಯಲೆ
ನಾವೊಬ್ಬರಾ ಮನೆಯ ಸೊಸೆಯಾದೊ
ನಾವೊಬ್ಬರಾ ಮನೆಯ ಸೊಸೆಯಾದೊ ತಂಗ್ಯಮ್ಮ
ತವರೂರು ಸುದ್ದಿ ನಮಗೇನೆ". (ಅದೇ; ಪು.೯೬-೯೭)

ನಾಣಿ ಇಂತಹ ಹಾಡಿನ ಸಂಭ್ರಮದಲ್ಲಿ ರೈತರ ಕೈಲಿ "ಸೀತೇ ಕಲ್ಯಾಣವೆ, ಶಿವನ ಮದುವೆ ಕಲ್ಯಾಣವೇ" (ಅದೇ; ಪು. ೯೭) ಎಂಬ ದೊಡ್ಡ ಹಾಡನ್ನು ಹಾಡಿಸಿ ಎಲ್ಲರಿಗೂ ಆನಂದವನ್ನು ತರುತ್ತಾನೆ. ಇಂತಹ ಹಾಡಿನ ಭಂಡಾರ ಜನಪದರ ಅಂತರಂಗದಲ್ಲಿ ತುಂಬಿರುತ್ತದೆ. ಒಂದು ಸಣ್ಣ ಪ್ರಮಾಣದ ಪ್ರೋತ್ಸಾಹ ಸಿಕ್ಕಿದರೆ ಸಾಕು ಜನಪದ ಜನ ಹಾಡ ಹೊಳೆಯನ್ನು ಹರಿಸಿ ವಾತಾರವಣಕ್ಕೆ ರಸಗಂಪನ್ನು ತಂದು ಕೊಡುತ್ತಾರೆ. ಇದು ಗ್ರಾಮೀಣ ಸಂಸ್ಕೃತಿಯ ಅನನ್ಯ ವೈಭವದ ತುಣಕಷ್ಟೆ.

ಅಂದಿನ ಕಾಲಕ್ಕೆ ದಾನ ಮಾಡುವ ಬುದ್ಧಿ ಗ್ರಾಮೀಣ ಜನರಲ್ಲಿ ತುಂಬಿದ್ದಿತು. ಈ ದಾನ ಬಹುಮಟ್ಟಿಗೆ ಸ್ವಸಂತೋಷಕ್ಕಾಗಿಯೇ ಹೊರತು ಪ್ರತಿಷ್ಟೆಯ ಪ್ರದರ್ಶನಕ್ಕೆ ಅಲ್ಲ. ಈಗ ಪಟ್ಟಣದ ಜನ ಹಳ್ಳಿಯವರೊಂದಿಗೆ ಮನಪೂರ್ತಿ ಒಂದಾಗಿ ಬೆರೆಯುವುದು ಅಷ್ಟೇ ಅಪರೂಪವಾಗಿದೆ. ಇದಕ್ಕೆ ಮುಖ್ಯ ಕಾರಣ ಪಟ್ಟಣದವರಲ್ಲಿ ಕಾಣುವ ಹಮ್ಮಿನ ಸ್ವಭಾವ. 'ನಮ್ಮೂರಿನ ರಸಿಕರು' ಪ್ರಬಂಧ ಸಂಕಲನದಲ್ಲಿ ಗೊರೂರವರು ತಮ್ಮ ಊರಿನ ಆಲೆಮನೆಯ ಆತಿಥ್ಯವನ್ನು ಪ್ರಾಸಂಗಿಕವಾಗಿ ವರ್ಣಿಸುತ್ತಾರೆ. ಇಲ್ಲಿಯೂ ಗ್ರಾಮೀಣ ಸಂಸ್ಕೃತಿಯ ಅನನ್ಯತೆಯನ್ನು ನಾವು ಚೆನ್ನಾಗಿ ಗುರುತಿಸಬಹುದು. ರಂಗೇಗೌಡನ ಆಲೆಮನೆಗೆ ಲೇಖಕರು ಸೀನಪ್ಪ, ಗುಂಡನೊಂದಿಗೆ ಹೋಗುತ್ತಾರೆ. ಪಟ್ಟಣದ ಗುಂಡ ಆಲೆಮನೆಗೆ ಹೋಗುವುದಕ್ಕೆ ಸ್ವಲ್ಪ ಇರಿಸು ಮುರಿಸು ಮಾಡುತ್ತಾನೆ. ನಾವು ಮೂರು ಜನ ಆಲೆಮನೆಗೆ ಹೋದರೆ ರಂಗೇಗೌಡರಿಗೆ ಮುಜುಗರ ಆಗಬಹುದು ಎಂಬುದು ಗುಂಡನ ನಾಗರಿಕ ಅಭಿಪ್ರಾಯ. ಇದಕ್ಕೆ ಗೊರೂರವರು ಹಾಗೂ ಶೀನಪ್ಪ ಗುಂಡನಿಗೆ ಬಿಂಕ ಬಿಟ್ಟು ನಡಿ ಎಂದು ಛೇಡಿಸುತ್ತಾರೆ. ಆಲೆಮನೆಯಲ್ಲಿ ರಂಗೇಗೌಡರು ಮಾಡಿದ ಕಬ್ಬಿನ ಆತಿಥ್ಯ ಗ್ರಾಮೀಣ ಸಂಸ್ಕೃತಿಗೆ ಸಹಜವಾಗಿ ಇತ್ತು. ಶೀನಪ್ಪ ಕಬ್ಬನ್ನು ಜಗಿದ ಘಟನೆಯನ್ನು ಗೊರೂರವರು ತಮ್ಮ ಸಹಜ ರಸಿಕತೆಯ ಮೆರಗಿನಲ್ಲಿ ಹೇಳುತ್ತಾ "ಶೀನಪ್ಪ ಕಬ್ಬು ಜಗಿದು ಉಗಿದ

ಕಬ್ಬಿಗೆ ಇರುವೆ ಕೂಡ ಮುತ್ತುವುದಿಲ್ಲ" ಎಂದು ಗೇಲಿ ಮಾಡುತ್ತಾರೆ. (ಅದೇ; ಪು. ೧೧೩) ಅದೇ ಸಂದರ್ಭದಲ್ಲಿ ಶೀನಪ್ಪನು ಚಾಪೆ ಬೇಡ ಮರದ ನೆರಳಿನಲ್ಲಿ ಕುಳಿತುಕೊಳ್ಳುತ್ತೇವೆ ಎಂದಾಗ ಬೋರ ತಟ್ಟನೆ ಹಾಡುವ ಹಾಡು -

"ಬೇಸಿಗೆಯ ಬಿಸಿಲಿಗೆ ಬೇವಿನ ಮರ ತಂಪು
ಹೇಮಾವತಿ ಎಂಬ ನದಿ ತಂಪು
ಹೇಮಾನತಿ ಎಂಬ ನದಿ ತಂಪು ಶೀನಪ್ಪ
ನೀನಿರಲು ತಂಪು ನಮೂರ್ಗೆ". (ಅದೇ; ಪು. ೧೧೪)

ಎಂಬುದು ಸುಂದರ ಹಾಡಾಗಿದೆ. ಜನಪದ ಜನಕ್ಕೆ ಹಾಡಿಗೊಂದು ನೆಪ ಸಿಕ್ಕರೆ ಸಾಕು ಹಾಡಿ ಎಲ್ಲರನ್ನೂ ನಲಿಸುತ್ತಾರೆ. ಈ ಹಾಡಿನಲ್ಲಿ ಪ್ರಕೃತಿಯ ಸೊಬಗು ಇದೆ, ಹೇಮಾವತಿ ನದಿಯ ಹಿರಿಮೆಯು ಇದೆ.

ಗ್ರಾಮೀಣ ಬದುಕಿನಲ್ಲಿ ಕಂಡುಬರುವ ಕೆಲವು ದುಶ್ಚಟದ ಕಲೆಗಳನ್ನು ಆಟಗಳನ್ನು ಕುರಿತಂತೆಯು ಗೊರೂರರವರು ತಮ್ಮ ಕೃತಿಗಳಲ್ಲಿ ಅಪರೂಪಕ್ಕೆ ಪ್ರತಿಪಾದಿಸಿದ್ದಾರೆ. ಇದಕ್ಕೆ ಒಳ್ಳೆಯ ಉದಾಹರಣೆ ಗ್ರಾಮೀಣ ಜನರಲ್ಲಿ ಕಂಡುಬರುವ ಇಸ್ಪೀಟಿನ ಚಟದ ಚಿತ್ರಣ. ಗೊರೂರು, ಬೈಲಹಳ್ಳಿ ಊರ ದೇವರ ರಥೋತ್ಸವಕ್ಕೆ ಎಷ್ಟು ಪ್ರಸಿದ್ಧವಾಗಿತ್ತೋ ಇಸ್ಪೀಟಿನ ಆಟಕ್ಕೂ ಅಷ್ಟೇ ಖ್ಯಾತಿಯನ್ನು ಪಡೆದಿತ್ತು. ಅಲ್ಲಿಗೆ ಬರುವ ಭಕ್ತರೆಲ್ಲರು ಬಹುಮಟ್ಟಿಗೆ ಪೇಟೆಯ ಕಡೆಯವರು. ಅವರಿಗೆ ಇಸ್ಪೀಟಿನ ಚಟ ಅಧಿಕವಾಗಿತ್ತು. ರಥೋತ್ಸವದ ಸಂದರ್ಭದಲ್ಲಿ ಎಲ್ಲರ ಮನೆಯ ಜಗಲಿಯ ಮೇಲೂ ಇಸ್ಪೀಟು ಆಡುವವರ ತಂಡ ಆಟದಲ್ಲಿ ಮೈಮರೆತು ಕುಳಿತಿರುತ್ತಿತ್ತು. ದೇವರ ಉತ್ಸವ ಬಂದಾಗ ಆಟದ ಮಧ್ಯಯೇ ಭಕ್ತಿ ಭಾವದಿಂದ ದೇವರಿಗೆ ಕೈ ಮುಗಿದು ಆಟದಲ್ಲಿ ಮಗ್ನತೆಯನ್ನು ಮುಂದುವರೆಸುತ್ತಿದ್ದರು. ಇವರ ಈ ಆಟದ ಹುಚ್ಚನ್ನು ಕಂಡಾಗ ಮನಸ್ಸಿಗೆ ಸ್ವಲ್ಪ ಮುಜುಗರ ಆದರೂ ಅದು ಹಳ್ಳಿಯವರ ಒಂದು ಸಹಜ ವರ್ತನೆ ಎನಿಸಿದಾಗ ಮಾತು ಮೌನವಾಗುತ್ತಿತ್ತು. ಗೊರೂರರವರು 'ಹಳೆಯಪಳೆಯ ಮುಖಗಳು' ಪ್ರಬಂಧ ಸಂಕಲನದ 'ದ್ಯೂತ ಪ್ರಸಂಗ' ಪ್ರಬಂಧದಲ್ಲಿ ಇಸ್ಪೀಟ್ ಆಟದ ಬಗ್ಗೆ ಆಡುವ ಮಾತುಗಳು ಹೀಗಿವೆ. "ಕೆಲವರಿಗೆ ಇಸ್ಪೀಟಿನ ಜೂಜು ಅಡಗಿಸಲಾಗದ ವ್ಯಸನವಾಗಿ ಅವರ ಸರ್ವಶಕ್ತಿಯನ್ನು ನುಂಗಿಬಿಡುತ್ತದೆ. ಅವರು ಎಲ್ಲಿ ಹೋಗಲಿ-ಮದುವೆಗಳಿಗೆ, ರಥೋತ್ಸವಕ್ಕೆ, ನೆಂಟರಮನೆಗೆ-ಅಲ್ಲಿಗೆ ಹೋಗುವುದು ಈ ಇಸ್ಪೀಟಿನ ಜೂಜಿಗಾಗಿಯೇ, ಮದುವೆಯಲ್ಲಾಗಲಿ ಅದರ ವೈಭವ ಸಂಭ್ರಮಗಳಲ್ಲಾಗಲಿ ಅವರು ಭಾಗಿಗಳಾಗುವುದೇ ಇಲ್ಲ. ಧಾರೆ, ಮಾಂಗಲ್ಯಧಾರಣೆ ಯಾವುದನ್ನು ನೋಡುವುದೇ ಇಲ್ಲ. ಊಟಕ್ಕೂ ಹೋಗುವುದಿಲ್ಲ. ನಿದ್ರೆ ಮಾಡುವುದೂ ಇಲ್ಲ. ರಥೋತ್ಸವಕ್ಕೆಂದು ಹೋದರೂ ಅವರು ದೇವರನ್ನು ನೋಡುವುದಿಲ್ಲ; ರಥವನ್ನು ನೋಡುವುದಿಲ್ಲ. ರಥವೇರಿದ ದೇವರು ಭಜನೆ ಮನೆ ಮುಂದೆ ಬಂದಾಗ (ಸುರಪುರದಲ್ಲಿ ಭಜನೆ ಮನೆ ಇರುವುದು ಇಸ್ಪೀಟು ಆಟಕ್ಕಾಗಿಯೇ) ದೇವರ ಕಡೆ ಒಂದು ನೋಟ ಬೀರಿದರೆ ಬೀರಿದರು;

ಇಲ್ಲದಿದ್ದರೆ ಅದೂ ಇಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೨೫-೨೬) ಸುರಪುರದ ನರಸಿಂಹ ಇಸ್ಪೀಟಿನ ಚಟದಲ್ಲಿ ಜಮೀನುಗಳೆನೆಲ್ಲಾ ಕಳೆದುಕೊಂಡರು ಇಸ್ಪೀಟಿನ ಚಟ ಅವನನ್ನು ಬಿಡಲಿಲ್ಲ. ಸುರಪುರದ ಭಜನ ಮಂದಿರದಲ್ಲಿ ನರಸಿಂಹ ಇಸ್ಪೀಟು ಭಕ್ತರಿಗೆ ಮಾಡುತ್ತಿದ್ದ ಉಪಚಾರ ವಿಶೇಷವಾಗಿತ್ತು. ಇಂತಹ ಹುಚ್ಚನ ವರ್ತನೆಯನ್ನು ಗ್ರಾಮೀಣ ಪ್ರದೇಶದಲ್ಲಿ ಹಿಂದೆ ನಾವು ಯಥೇಚ್ಛವಾಗಿ ಕಾಣಬಹುದಾಗಿತ್ತು ಎಂಬುದನ್ನು ಲೇಖಕರು ತಿಳಿಸಿದ್ದಾರೆ. ಗ್ರಾಮೀಣ ಸಂಸ್ಕೃತಿಯ ಉತ್ತಮ ಅಂಶಗಳನ್ನು ನಾವು ಕಂಡಂತೆ ಅವರ ಸಹಜ ದೌರ್ಬಲ್ಯವನ್ನು ಇಂತಹ ಪ್ರಸಂಗಗಳ ಮೂಲಕ ತಿಳಿಯಬಹುದು.

ಗ್ರಾಮೀಣ ಪ್ರದೇಶದಲ್ಲಿ ಹಬ್ಬ-ಹರಿದಿನಗಳಲ್ಲಿ ಸಾಹಸ ಹಾಗೂ ಜಾಣ್ಮೆಗೆ ಪೂರಕವಾದ ಕೆಲವು ಜೂಜುಗಳನ್ನು ಗುರುತಿಸಬಹುದು. ಈ ಜೂಜು ಹೆಣ್ಣು ಗಂಡು ಆದಿಯಾಗಿ ಎಲ್ಲರ ಗಮನವನ್ನು ಸೆಳೆಯುವ ಎಲ್ಲರ ಮನಸ್ಸನ್ನು ತಣಿಸುವ ಜೂಜಾಗಿರುತ್ತದೆ. 'ಮೆರವಣಿಗೆ' ಕಾದಂಬರಿಯಲ್ಲಿ ಗೊರೂರವರು ಚಿತ್ರಿಸಿರುವ ತೆಂಗಿನಕಾಯಿ ಜೂಜು ವಿಶೇಷವಾದದ್ದು. ಗೌರಿಹಬ್ಬದ ಸಮಯದಲ್ಲಿ ಈ ಜೂಜು ನಡೆಯುತ್ತದೆ. ಇದರ ಜತೆಗೆ ಪೆಟ್ಲಿನ ಸಂಭ್ರಮವೂ ಇರುತ್ತದೆ. ಪೆಟ್ಲು ಬಿದುರಿನಲ್ಲಿ ಮಾಡಿದ ಒಂದು ಸಾಧನ. ಆ ಕೊಳವೆಯೊಳಕ್ಕೆ ತೆಂಗಿನ ಕಾಯಿಯನ್ನು ಇಟ್ಟು ಮತ್ತೊಂದು ಕೊಳವೆಯ ಮೂಲಕ ತೆಂಗಿನ ಕಾಯಿಯನ್ನು ಮೀಟುವುದು ಪೆಟ್ಲು ಆಟ. "ಆ ಸಾಯಂಕಾಲ ಗೌರಿಹಬ್ಬದ ತೆಂಗಿನಕಾಯಿ ಜೂಜನ್ನು ನೋಡಲು ಊರಿಗೆ ಊರೇ ಸೇರುತ್ತದೆ. ಮಲ್ಲಿಗೆಹಳ್ಳಿ ಪೇಟೆಯಲ್ಲಿ ಊರ ಮಧ್ಯೆ ಶಾಲೆ ಇದೆ. ಶಾಲೆಯ ಮುಂದೆ ನಾಲೆ ಹೋಗುತ್ತದೆ. ನಾಲೆಯ ಎಡಬಲದಲ್ಲಿ ಗದ್ದೆ ಹೊಲಗಳಿವೆ. ತೆಂಗಿನಕಾಯಿ ಜೂಜು ಪ್ರಾರಂಭವಾಗುವುದು ಶಾಲೆಯ ಬಾಗಿಲಿನಿಂದ. ಜೂಜನ್ನು ನೋಡಲು ಕಾಲುವೆಯ ಏರಿಯ ಮೇಲೆ ಸ್ತ್ರೀಯರೂ, ಮೇಲೆ ಹೊಲಗಳಲ್ಲಿ ಉದ್ದಕ್ಕೂ ಪುರುಷರೂ, ನೆರೆಯುತ್ತಾರೆ. .... ಹತ್ತು ಹಳ್ಳಿಯ ಜನರು ತೆಂಗಿನಕಾಯಿ ಜೂಜಿನಲ್ಲಿ ಭಾಗವಹಿಸಲು ಪಂದ್ಯವನ್ನು ಕಟ್ಟುತ್ತಾರೆ. ಒಂದೊಂದು ಜೂಜಿನಲ್ಲಿ ೨೫-೩೦ ರೂಪಾಯಿಗಳ ಲಾಭ ನಷ್ಟಗಳಿವೆ. ಮಲ್ಲಿಗೆಹಳ್ಳಿ ಶಾಲೆಯಿಂದ, ತೆಂಗಿನಕಾಯಿಯನ್ನು ೩ ಸಲ ಎಸೆಯುವುದರಲ್ಲಿ ಅಥವಾ ನಾಲ್ಕು ಸಲ ಎಸೆಯುವುದರಲ್ಲಿ ರಸ್ತೆಯನ್ನು ಮುಟ್ಟಬೇಕು. ಇದೇ ಜೂಜು. ಒಂದೊಂದು ಗುಂಪಿನಲ್ಲಿ ೪-೫-೬ ಜನ ಗುಂಪು ಕೂಡಿಕೊಂಡು ತಮ್ಮ ವಸ್ತಾದಿಗಳನ್ನು ಗೊತ್ತುಮಾಡಿ "ಇವ ರಸ್ತೆಗೆ ೩ ಸಲ ಎಸೆಯುವುದರಲ್ಲಿ ಕಾಯಿ ತಲುಪಿಸುತ್ತಾನೆ. ಎಸೆದ್ರೆ ನಮಗೆ ಏನು ಕೊಡ್ತೀರಿ. ಎಸೆಯದೆ ಇದ್ರೆ ನಿಮಗೆ ೩೦ ರೂಪಾಯಿ" ಎನ್ನುತ್ತಾರೆ. ಎದುರಾಳಿಯ ಗುಂಪಿನವರು "ಪಂದ್ಯಕ್ಕೆ ಒಪ್ಪಿದೆ" ಎನ್ನುತ್ತಾರೆ. ಇಂತಹ ಗುಂಪುಗಳು ಪ್ರತಿ ವರುಷವೂ ಗೌರಿಹಬ್ಬದಲ್ಲಿ ೧೫-೨೦. ಇದ್ದಕ್ಕಿದ್ದಂತೆ ಸೃಷ್ಟಿ ಯಾಗಿ, ನೂರಾರು ರೂಪಾಯಿಗಳ ವ್ಯವಹಾರ ನಡೆದು ಹೋಗುತ್ತದೆ. ವಸ್ತಾದಿ ಕಾಯಿ ಎಸೆಯುತ್ತಾ ಓಡುತ್ತಿರುವಾಗ, ಆಚೆ-ಈಚೆ ನೆರೆದವರೂ ಹುಡುಗರೂ ಅಸಾಧ್ಯವಾದ ಕೋಲಾಹಲವನ್ನುಂಟು ಮಾಡುತ್ತಾ ಅವರ ಜತೆಯಲ್ಲಿಯೂ ಹಿಂದೆಯೂ ಓಡುತ್ತಿರುತ್ತಾರೆ. ಅನೇಕರು ತಾವೂ ಕಾಯಿಗಳನ್ನು ತೆಗೆದುಕೊಂಡು

೩-೪ ಸಲ ಎಸೆಯುವುದರಲ್ಲಿ ರಸ್ತೆಗೆ ಮುಟ್ಟಿಸಲು ಪ್ರಯತ್ನಿಸುತ್ತಿರುತ್ತಾರೆ. ಅವರಿಗೆ ಪ್ರೋತ್ಸಾಹಕರ ಗುಂಪು ಬೇರೆ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು. ೯೭-೯೮) ಗ್ರಾಮೀಣರ ಬದುಕಿನಲ್ಲಿ ಇಂತಹ ಜೂಜುಗಳು ಉತ್ಸಾಹದ ಸಾಮರ್ಥ್ಯದ ಸಂಕೇತಗಳಾಗಿರುತ್ತವೆ ಎಂಬುದನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ.

ಗ್ರಾಮೀಣ ಜನತೆಯಲ್ಲಿ ಮಂತ್ರ ಯಂತ್ರ ತಂತ್ರಗಳ ನಂಬಿಕೆ ಬಹಳ ಮಟ್ಟಿಗೆ ಬೇರೂರಿರುತ್ತದೆ. ಮಂತ್ರ ತಂತ್ರ ನಿರೂಪಣೆಯಲ್ಲಿ ಗೊರೂರರವರು ಕಲಾತ್ಮಕತೆಯನ್ನು ಮೆರೆದಿದ್ದಾರೆ ಎಂದು ಹೇಳಬಹುದು. ಇದಕ್ಕೆ ನಿದರ್ಶನವಾಗಿ 'ನಮ್ಮೂರಿನ ರಸಿಕರು' ಕೃತಿಯ ಒಂದು ಪ್ರಸಂಗವನ್ನು ಇಲ್ಲಿ ಉದಾಹರಿಸಬಹುದು. "ಜೋಡಿದಾರರ ಮನೆಯಲ್ಲಿ ಮದುವೆ ನಡೆಯಿತು. ಆ ಮದುವೆಯಲ್ಲಿ ಒಂದು ಅಚಾತುರ್ಯ ನಡೆಯಿತು. ಜೋಡಿದಾರರ ಹೆಂಡತಿಯು ಲಲಿತಮ್ಮನ ಕತ್ತಿನಲ್ಲಿ ತಮ್ಮ ಬಂಗಾರದ ಸರವನ್ನು ಹಾಕಿದ್ದರು. ಮದುವೆಯಾದ ಮಾರನೆಯ ದಿವಸ ರಾತ್ರಿ ಲಲಿತಮ್ಮ ಮಲಗುವುದು ಬಹಳ ಹೊತ್ತಾಯಿತು. ಬೆಳಿಗ್ಗೆ ಏಳು ಗಂಟೆಯವರೆಗೆ ಆ ಹುಡುಗಿ ಏಳಲಿಲ್ಲ. ಆಗ ಯಾರೋ ಒಳಕ್ಕೆ ಹೋಗಿ ಮತ್ತಾರು ಇಲ್ಲದ ಸಮಯವನ್ನು ನೋಡಿ, ನಿದ್ರಿಸುತ್ತಿದ್ದ ಹುಡುಗಿಯ ಕತ್ತಿನ ಸರವನ್ನು ತೆಗೆದುಕೊಂಡು ಹೋಗಿಬಿಟ್ಟರು. ಲಲಿತ ಎದ್ದ ಮೇಲೆ ಈ ವಿಷಯ ಎಲ್ಲರಿಗೂ ಗೊತ್ತಾಯಿತು. ಹೊರಗಿನ ಕಳ್ಳರಾರೂ ಬಂದಿರಲಿಲ್ಲ; ನಮ್ಮ ಊರಿನವಳೇ ಒಬ್ಬ ಹುಡುಗಿ ಆ ಒಡವೆಯನ್ನು ಒಡವೆಯ ಆಸೆಯಿಂದ ಕದ್ದಿದ್ದಳು. ಅವಳ ತಂದೆಗೆ ಈ ವಿಚಾರ ಗೊತ್ತಿರಲಿಲ್ಲ. .... ಹುಡುಗಿಯನ್ನು ಪೋಲಿಸರಿಗೆ ಕೊಡಿ ಎಂದು ನಮ್ಮೂರಿನ ಕೆಲವರು ಜೋಡಿದಾರರನ್ನು ಬಲತ್ಕರಿಸಿದರು. ಜೋಡಿದಾರರಿಗೆ ಮದುವೆ ಮಧ್ಯದಲ್ಲಿ ಹುಡುಗಿಯನ್ನು ಸೆರೆಮನೆಗೆ ಕಳುಹಿಸುವ ಕಳಂಕವನ್ನು ಕಟ್ಟಿಕೊಳ್ಳುವುದು ಬೇಕಾಗಿರಲಿಲ್ಲ. ಆದರೆ ಯಾವುದಾದರೂ ಒಂದು ಉಪಾಯದಿಂದ ಹೆದರಿಸದ ಹೊರತು ಒಡವೆ ಹಿಂದಕ್ಕೆ ಬರುವುದಿಲ್ಲ ಎಂದು ತಿಳಿದ ಜೋಡಿದಾರರು ಶೀನಪ್ಪನನ್ನು "ಏನಯ್ಯ ಮಾಡೋಣ?" ಎಂದು ಕೇಳಿದರು. ಆಗ ಶೀನಪ್ಪ "ದೇವಹಳ್ಳಿಯಿಂದ ಮಂತ್ರವಾದಿಯನ್ನು ಕರೆಸುತ್ತೇನೆಂದು ಸುದ್ದಿ ಹೊರಡಿಸಿ; ಆಮೇಲೆ ನೋಡೋಣ" ಎಂದನು. ಅನಂತರ ಶೀನಪ್ಪನು ಬೀದಿಯಲ್ಲೆಲ್ಲಾ "ದೇವಳ್ಳಿಯಿಂದ ಮಂತ್ರವಾದಿ ಬರ್ತಾನಂತೆ; ಅವನನ್ನು ನಾನು ಬಲ್ಲೆ - ಮಹಾ ಗಟ್ಟಿಗ. ಯಾರಾದರೂ ಏನಾದರೂ ಕದ್ದಿದ್ದರೆ ಅವನು ಬಂದು ಮಂತ್ರ ಹಾಕಿದ ಇಪ್ಪತ್ತು ನಾಲ್ಕು ಗಂಟೆಗಳೊಳಗಾಗಿ, ಅವರ ಹೊಟ್ಟೆ ಗುಡಾಣದಂತೆ ಊದುತ್ತೆ. ಬೇಲೂರಿನಲ್ಲಿ ಹೀಗೆ ಆಯಿತು; ಹಾಸನದಲ್ಲಿ ಹೀಗೆ ಆಯಿತು" ಎಂದೂ ಮುಂತಾಗಿ ಹೇಳುತ್ತಾ ಬಂದನು. ಆ ದಿವಸ ಊರಿನಲ್ಲಿ ಯಾರ ಬಾಯಲ್ಲಿ ನೋಡಿದರೂ ಮಂತ್ರವಾದಿಯ ಮಾತೇ ಮಾತಾಗಿತ್ತು. ....

ಮಂತ್ರವಾದಿಯ ಆಡಂಬರವನ್ನು ನೋಡಿ, ಎದೆಗಾರನಾದ ನನಗೂ ನಡುಕ ಬಂದಿತು. ಮಂತ್ರವಾದಿಯು ಅರಿಸಿನ ಬಣ್ಣದ ಬಟ್ಟೆಯನ್ನು ಉಟ್ಟಿದ್ದನು. ಮುಖಕ್ಕೆಲ್ಲಾ ಪೂರ್ಣವಾಗಿ ದಟ್ಟವಾಗಿ

ಕೆಂಪು ಬಣ್ಣವನ್ನು ಬಳಿದುಕೊಂಡು, ತಲೆಗೂದಲನ್ನು ಬತ್ತಿ ಬತ್ತಿಯಾಗಿ ಮಾಡಿ ಅದರಿಂದ ಮುಖವನ್ನು ಅರ್ಧ ಮುಚ್ಚಿ ಕೊಂಡಿದ್ದನು. ತಲೆಗೆ ನಮ್ಮೂರು ಯಕ್ಷಗಾನದ ಆಟಗಾರರು ಹಾಕಿಕೊಳ್ಳುವಂತಹ ಒಂದು ವಿಧವಾದ ಕಿರೀಟವನ್ನು ಧರಿಸಿ, ಅದರ ಮೇಲೆಲ್ಲಾ ನವಿಲು ಗರಿಯನ್ನು ಸಿಕ್ಕಿಸಿಕೊಂಡಿದ್ದನು. ಮಧ್ಯದಲ್ಲಿ ಮೂರು ನಾಲ್ಕು ಸೇರಿನಷ್ಟು ಕೆಂಪು ಅನ್ನವನ್ನು ಹಾಕಿ, ಅದರ ಸುತ್ತ ಹತ್ತು ಇಪ್ಪತ್ತು ಚೆಂಬುಗಳನ್ನಿಟ್ಟು ಅವುಗಳ ಮೇಲೆ ಒಂದೊಂದು ದೀಪವನ್ನು ಇಟ್ಟಿದ್ದನು. ಸುತ್ತ ಎಲ್ಲಾ ಕಡೆಯೂ ಕೆಂಪಾದ ಅನ್ನದ ಗುಡ್ಡೆಗಳು ನೋಡುವವರಿಗೆ ಭಯವನ್ನುಂಟು ಮಾಡುತ್ತಿದ್ದವು. ಮಧ್ಯ ಸುರಿದಿದ್ದ ಅನ್ನದ ಮುಂದುಗಡೆ ಹಸಿಮಣ್ಣಿನಿಂದ ಮಾಡಿದ್ದ ಒಂದು ಸ್ತ್ರೀ ವಿಗ್ರಹವನ್ನಿಟ್ಟು, ಅದರ ಮುಂದೆ ಒಂದು ಹರಿತವಾದ ಮತ್ತು ಉದ್ದವಾದ ಚಾಕುವನ್ನು ಇಟ್ಟಿದ್ದನು. ಮಂತ್ರವಾದಿಯು ಈ ಸಾಮಾನುಗಳ ಸುತ್ತ ಕುಣಿಯುವವನಂತೆ ತಿರುಗುತ್ತಾ, ಮಧ್ಯೆ ಮಧ್ಯೆ 'ಫಟ್ ಫಟ್' ಮುಂತಾಗಿ ಬಾಯಲ್ಲಿ ಉಚ್ಚರಿಸುತ್ತಾ ನಾವೆಲ್ಲ ಅಲ್ಲಿಗೆ ಹೋದುದನ್ನು ಕಂಡು, ಆ ಮಣ್ಣಿನ ಬೊಂಬೆಯ ಎದೆಯೊಳಕ್ಕೆ ಆ ಚಾಕುವನ್ನು ಮಂತ್ರದ ಉಚ್ಚಾರಣೆ ಯೊಂದಿಗೆ ಚುಚ್ಚಿದನು. ನಾನು ಸ್ವತಃ ನಾಸ್ತಿಕ. ನನಗೆ ಈ ಮಂತ್ರ ತಂತ್ರಗಳಲ್ಲಿ ನಂಬಿಕೆ ಇಲ್ಲ. ಆದರೆ ಮಂತ್ರವಾದಿಯು ಬೊಂಬೆಯ ಹೊಟ್ಟೆಗೆ ಚಾಕುವನ್ನು ತಿವಿದುದನ್ನು ಕಂಡು ನನಗೂ ಬಹಳ ಗಾಬರಿಯಾಯಿತು. ....

ಬಂದಿದ್ದವರೆಲ್ಲಾ ಒಬ್ಬೊಬ್ಬರಾಗಿ ಹೊರಟು ಹೋದರು. ನಾನು ಜೋಡಿದಾರರೊಂದಿಗೆ ಮಾತನಾಡುತ್ತಾ ನಿಂತಿದ್ದೆ. ಶೀನಪ್ಪ ಅಲ್ಲಿಗೆ ಬಂದು ನಕ್ಕಾಗ ಆ ಮಂತ್ರವಾದಿ ಬೇರೆ ಯಾರೂ ಅಲ್ಲ ಶೀನಪ್ಪನೇ ಎಂಬುದು ಜೋಡಿದಾರರಿಗೆ ತಿಳಿಯಿತು. ನಾನು ಆಶ್ಚರ್ಯದಿಂದ "ಏನೋ ಹುಟ್ಟು ಮಂತ್ರವಾದಿಗಳನ್ನೆಲ್ಲಾ ಮೀರಿಸಿಬಿಟ್ಟೆ?" ಎಂದೆ. ಈ ಮಂತ್ರವಾದಿಯ ಫಲದಿಂದ ಮರು ದಿವಸ ಬೆಳಗಾಗುವುದರೊಳಗೆ ಜೋಡಿದಾರರ ಮನೆಯ ಕಿಟಕಿಯಲ್ಲಿ ಸರವನ್ನು ಯಾರೋ ಒಳಕ್ಕೆ ಹಾಕಿದ್ದರು". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೧; ಪು. ೧೦೧-೧೦೩) ಇಲ್ಲಿ ಮಂತ್ರವಾದಿ ವೇಷದಲ್ಲಿನ ಕಲೆಗಾರಿಕೆಯನ್ನು ಗಮನಿಸಬಹುದು.

ಗ್ರಾಮೀಣ ಬದುಕಿನಲ್ಲಿ ಜನಪದ ಕಲೆಗಳ ಜೊತೆಗೆ ಶಿಷ್ಟ ಕಲೆಯ ಶಾಸ್ತ್ರೀಯವಾದ ನೃತ್ಯ, ಸಂಗೀತ ಹಾಸು ಹೊಕ್ಕಾಗಿರುವುದನ್ನು ಗೊರೂರವರ ಕೃತಿಗಳಲ್ಲಿ ಗುರುತಿಸಬಹುದಾಗಿದೆ. ಸಂಗೀತ ಕಲೆಯ ಬಗ್ಗೆ 'ಹೇಮಾವತಿ' ಕಾದಂಬರಿಯಲ್ಲಿ ಚಿತ್ರಿತವಾಗಿರುವಂತೆ ರಾಮಣ್ಣನವರದು ಸಂಗೀತದ ಮನೆತನ. ಅವರ ವಂಶದಲ್ಲಿ ಸುಮಾರು ಇನ್ನೂರು ವರುಷಗಳಿಂದಲೂ ಸಂಗೀತ ಸಾಹಿತ್ಯಗಳ ಪ್ರಾಬಲ್ಯ ಹೆಚ್ಚು. ಅವರ ಅಜ್ಜಂದಿರು ಶ್ರೀನಿವಾಸ ಪೆರುಮಾಳರು ಸಂಗೀತ ಪಾಂಡಿತ್ಯದಿಂದ ಮಹಾರಾಜರ ತಲೆತೂಗಿಸಿದ್ದರು. ಅವರೊಬ್ಬರಲ್ಲಿಯೇ ಸಾಹಿತ್ಯ ಸಂಗೀತಗಳೆರಡು ಸಮಾವೇಶವಾಗಿದ್ದವು. ಸಂಗೀತ ಸಾಹಿತ್ಯಗಳು ಆ ರಸಿಕರಿಗೆ ಜೀವನೋಪಾಯದ ಕಸುಬುಗಳಾಗಿರಲಿಲ್ಲ. ತಮ್ಮ ಆತ್ಮರತಿಗಾಗಿ ಅವರು ಆ ಕಲೆಗಳನ್ನು

ಅಭ್ಯಸಿಸಿ ಕೊಂಡಿದ್ದರು. ಕುಳಿತಲ್ಲೇ ಹಾಡುವುದು, ದೇವಸ್ಥಾನದಲ್ಲಿ ಪಾಡುವುದು, ಭಜನೆ ಮಾಡುವುದು, ಸುಗ್ಗಿಯ ಕಾಲದಲ್ಲಿ ಕಣದಲ್ಲಿ ಇಂಪಾಗಿ ಗಾನ ಮಾಡುವುದು ಅವರ ಪದ್ಧತಿಯಾಗಿತ್ತು. ಅರಮನೆಯ ದೃಷ್ಟಿ ಶ್ರೀನಿವಾಸ ಪೆರುಮಾಳರ ಮೇಲೆ ಬಿದ್ದದ್ದು ಆಕಸ್ಮಿಕ ಘಟನೆಯಿಂದಲೇ ಹೊರತು ಶ್ರೀನಿವಾಸ ಪೆರುಮಾಳರು ಬಯಸಿ ರಾಜಾಶ್ರಯಕ್ಕೆ ಹೋದುದರಿಂದ ಅಲ್ಲ.

ಪೆರುಮಾಳರು ಸಂಗೀತ ವಿದ್ಯೆಯಲ್ಲಿ ಪರಿಣಿತರಾಗಿದ್ದರೂ ಕೂಡ ತಮ್ಮ ಒಂದು ಎಕರೆ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಇಲ್ಲಿ ಒಮ್ಮೆ ಸಾಹುಕಾರರು ಪೆರುಮಾಳರಿಗೆ "ಪೆರುಮಾಳರೇ, ಮನಸ್ಸು ಮಾಡಿದರೆ ನೀವೂ ದುಡಿಯಬೇಕಾದುದಿಲ್ಲ. ಅರಮನೆಗೆ ಹೋದರೆ ನಿಮ್ಮ ಸಂಗೀತಕ್ಕೆ ಇಂದೂ ತಿಂಗಳಿಗೆ ಸಾವಿರ ರೂಪಾಯಿ ಬಹುಮಾನ ದೊರೆಯುವುದರಲ್ಲಿ ಸಂದೇಹವಿಲ್ಲ. ನೀವು ಅದನ್ನು ಬಿಟ್ಟು, "ಒಳ್ಳೆಯವರ ಮಾನ ಹಳ್ಳಿಯಲ್ಲಿ ಹೋಯಿತು" ಎಂಬಂತೆ ಈ ಹಾಳು ಕೊಂಪೆಯಲ್ಲಿ ಸೇರಿಕೊಂಡು ಯಾಕೆ ಪ್ರಾಣ ಬಿಡುತ್ತೀರಿ? ಈ ಭೂಮಿ ಕೆರೆಯುವುದು ನಿಮಗೆ ಯಾವ ಹಣೆಯ ಬರಹ? ಹಿಂದೆ ನಿಮ್ಮ ಪೂರ್ವಿಕರು ತಮ್ಮ ಗಾನದಿಂದ ಜಗತ್ತನ್ನೇ ಬೆರಗು ಮಾಡಿದರೆಂದು ಕೇಳಿದ್ದೇವೆ. ನಿಮ್ಮ ವಂಶದಲ್ಲಿ ಗಾನದಿಂದ ಮಳೆ ಬರಿಸಿದವರುಂಟು; ಕಾಡು ಪ್ರಾಣಿಗಳನ್ನು ಪಳಗಿಸಿದವ ರುಂಟು; ಹಾಲು ಕೊಡದ ಹಸುಗಳಿಂದ ಹಾಲು ಕರೆದವರುಂಟು; ಒಣಗಿದ ಪೈರನ್ನು ಚಿಗುರಿಸಿದವರುಂಟು; ಇಂತಹ ವಿದ್ಯೆಯನ್ನು ಕೈಯಲ್ಲಿ ಇಟ್ಟುಕೊಂಡು, ಕಾಮಧೇನುವನ್ನು ಕೈಯಲ್ಲಿಟ್ಟುಕೊಂಡು ಹಾಲಿಗೆ ತಿರುಪೆ ಹೋದಂತೆ ಇಲ್ಲಿ ಯಾಕೆ ಭೂಮಿ ಕೆರೆಯುತ್ತಾ ಕುಳಿತ್ತಿದ್ದೀರಿ? ನಿಮ್ಮ ವಿದ್ಯೆ ನಿಮ್ಮ ಪೂರ್ವಿಕರ ವಿದ್ಯೆಕ್ಕಿಂತ ಕಡಿಮೆಯಾದುದಲ್ಲ" ಎಂದರು. .... ಅದಕ್ಕೆ ಪೆರುಮಾಳರು ರಾಜಾಶ್ರಯ ಶಾಶ್ವತವಾದುದಲ್ಲ. ನೀವು ಹೇಳುವ ಗಾನ ಸಿದ್ಧರಾದ ಮಹಿಮಾನ್ವಿತರಾದ ನಮ್ಮ ಪೂರ್ವಜರು ಯಾರೂ ಭೂಮಿಯನ್ನು ತಿರಸ್ಕರಿಸಿ ಅರಮನೆಯಲ್ಲಿಯೇ ಜೀವನ ನಡೆಸಲಿಲ್ಲ. ಈ ತೋಟವನ್ನು ಇನ್ನೂರು ವರ್ಷಗಳಿಂದ ನಮ್ಮ ವಂಶದವರು ಆಬಾದು ಮಾಡಿಕೊಂಡಿರುವುದೇ ಅದಕ್ಕೆ ಸಾಕ್ಷಿ. ನಾವು ಬೆವರನ್ನು ಸುರಿಸಿದರೆ ನಮ್ಮನ್ನು ಈ ತೋಟ ತಾಯಿಯಂತೆ ಸಾಕುವುದು. ಹತ್ತು ತಲೆಗಳಿಂದಲೂ ಹೀಗೆ ಸಾಕಿದೆ. ಇದನ್ನು ಬಿಟ್ಟು ಬೇರೆ ಯಾರೊಬ್ಬ ಮನುಷ್ಯನ ಆಶ್ರಯಕ್ಕೂ ಹೋಗುವುದು "ಅರಸಿನ ಕೂಳನ್ನು ನೆಚ್ಚಿಕೊಂಡು ವರುಷದ ಕೂಳನ್ನು ತೊರೆದಂತೆಯೇ" ಎಂದರು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೫; ಪು.೬-೭) ಈ ಮಾತುಗಳಲ್ಲಿ ಗೊರೂರವರು ಸಂಗೀತ ಕಲೆಯ ವೈಭವವನ್ನು ಹೇಳುವುದರ ಜತೆಗೆ ಕೃಷಿಯ ಮಹಿಮೆಯನ್ನು ಸ್ಪಷ್ಟಪಡಿಸಿದ್ದಾರೆ. ಒಂದು ಕಾಲಕ್ಕೆ ಗ್ರಾಮೀಣ ಪರಿಸರದಲ್ಲಿ ಪ್ರಾಮಾಣಿಕ ಕೃಷಿಕನನ್ನು ಕಾಣಬಹುದಾಗಿತ್ತು ಎಂಬ ಸತ್ಯಾಂಶಕ್ಕೆ ಲೇಖಕರ ಈ ಮಾತುಗಳು ಸಾಕ್ಷಿ ಮಾತಾಗಿ ಉಳಿಯುತ್ತವೆ. ಕಲೆಯಷ್ಟೇ ಕೃಷಿಕನ ದುಡಿಮೆಯು ಮಾನ್ಯವಾದದ್ದು ಎಂಬ ಅಭಿಪ್ರಾಯವನ್ನು ವಿವೇಕಶಾಲಿಗಳು ವಿಚಾರವಂತರೂ ಇಂದಿಗೂ ಒಪ್ಪಿಕೊಳ್ಳುತ್ತಾರೆ. ಇದಕ್ಕೆ

ಗೊರೂರರವರೇ ಸಾಕ್ಷಿ. ಲಲಿತ ಕಲೆಯನ್ನು ಜೀವನ ಕಲೆಯೊಂದಿಗೆ ಸಂಯೋಜಿಸಿ ವಿಶಿಷ್ಟ ರೀತಿಯಲ್ಲಿ ಬದುಕನ್ನು ನಡೆಸಿರುವುದನ್ನು ಪೆರುಮಾಳರ ವಂಶದಲ್ಲಿ ಕಾಣುತ್ತೇವೆ.

ರಾಮಣ್ಣನವರ ಮೊದಲ ಹೆಂಡತಿ ಲಕ್ಷ್ಮಿ ಒಳ್ಳೆಯ ಮನೆತನದವಳು. ಅವಳ ಮಗಳೇ ಹೇಮಾವತಿ. ರಾಮಣ್ಣ ಪೆರುಮಾಳರು ವಿಷಯ ಲೋಲುಪರಲ್ಲ. ಸಂಸಾರದಲ್ಲಿ ಹೆಚ್ಚು ಆಸಕ್ತರೂ ಅಲ್ಲ. ಯಾವ ದುರಾಸೆಯನ್ನು ಅರೆತವರಲ್ಲ. ಹೆಂಡತಿ ಸತ್ತ ನಂತರ ಅವರು ಸ್ವಲ್ಪ ಕಾಲದಲ್ಲಿ ದುಃಖದಲ್ಲಿದ್ದರು. ಆನಂತರ ಹೆಂಡತಿಯ ದುಃಖವನ್ನು ಮರೆಯುತ್ತಾರೆ. ಅವರು ಪ್ರತಿದಿನ ಬೆಳಗಿನ ಜಾವ ಐದು ಗಂಟೆಗೆ ಹಾಡುವುದಕ್ಕೆ ಪ್ರಾರಂಭಿಸುತ್ತಿದ್ದರು. ಅವರಿಗೆ ಸಂಗೀತಶಾಸ್ತ್ರ ಪಾಠವಾಗಿರಲಿಲಲ್ಲ. ಆದರೆ ರಾಗಗಳು ಚೆನ್ನಾಗಿ ತಿಳಿದಿದ್ದವು. ಕಂಠ ಮನೋಹರವಾಗಿ ದೃಢವಾಗಿತ್ತು. ಅವರ ಧ್ವನಿ ಎಷ್ಟು ಎತ್ತರಕ್ಕೆ ಬೇಕಾದರೂ ಹೋಗುತ್ತಿತ್ತು. ಯಾವಾಗಲೂ ಶಾಂತರಾಗಿ ಇರುತ್ತಿದ್ದ ಪೆರುಮಾಳರು ಹಾಡುವಾಗ ಮಾತ್ರ ಆವೇಶದಿಂದ ತಮ್ಮನ್ನು ತಾವು ಮರೆತು ಗಾನಲೋಲರಾಗುತ್ತಿದ್ದರು. ರಾಮಣ್ಣ ಪೆರುಮಾಳರ ಮನೆಯೇ ಭಜನೆ ಮಂದಿರವಾಗಿತ್ತು. ಪೆರುಮಾಳರ ಮನೆಯ ಭಜನೆಯೇ ಅಗ್ರಹಾರದ ವಿನೋದವಾಯಿತು. ಗ್ರಾಮೀಣ ಪರಿಸರದಲ್ಲಿ ಭಜನೆ ಸಂಸ್ಕೃತಿಯ ಒಂದು ಲಕ್ಷಣವಾಗಿತ್ತು. "ಒಂದು ಊರನ್ನು ಒಂದು ಬಾವಿ ಬದುಕಿಸುವಂತೆ, ಒಂದು ಅಂಧಕಾರದ ಬೀದಿಯನ್ನು ಒಂದೇ ದೀವಟಿಗೆ ಬೆಳಗುವಂತೆ, ಒಂದು ವನವನ್ನೆಲ್ಲಾ ಒಂದೇ ಸುಮದ ಸೌರಭ ತುಂಬುವಂತೆ - ಭಜನೆ ಊರಿನ ಹಬ್ಬವಾಯಿತು. ಶನಿವಾರ ಭಜನೆ ಇಲ್ಲದಿದ್ದರೆ, ಆ ದಿನವನ್ನು ಹೇಗೆ ಕಳೆಯಬೇಕೆಂಬುದು ಜನರಿಗೆ ಗೊತ್ತಾಗುತ್ತಿರಲಿಲ್ಲ. ಪೆರುಮಾಳರು ಈ ಜೀವನದಿಂದ ತೃಪ್ತರಾಗಿದ್ದರು. .... ಬಾಳೆಗೆ ಒಂದು ಗೊನೆ ಎಂಬಂತೆ ಊರಿಗೆ ಒಂದು ಮನೆಯಾದರೆ ಹೆಚ್ಚಾಯಿತು. ಇಂತಹ ಒಂದು ಮನೆಯೇ ಹಳ್ಳಿಯೆಂಬ ಮುಳ್ಳು ಗಿಡದ ಒಂದು ಹೂವು". (ಅದೇ; ಪು. ೧೭-೧೮) ಇಂತಹ ಆಶಾರಹಿತ ಜೀವನವನ್ನು ಯಾರಿಗೆ ಯಾರು ಕಲಿಸಲಾರರು. ಇಂತಹ ಸಂಗೀತದಲ್ಲಿ ಆಸಕ್ತಿ ಇರುವ ವ್ಯಕ್ತಿತ್ವಗಳ ಚಿತ್ರವನ್ನು ಗೊರೂರರವರು ತಮ್ಮ ಕೃತಿಗಳಲ್ಲಿ ಸಾಕಷ್ಟು ಕೊಟ್ಟಿದ್ದಾರೆ.

"ಆನಂದ ಪೆರುಮಾಳ ರಾಮಣ್ಣ ಪೆರುಮಾಳರ ತಮ್ಮ. ಇವನಿಗೆ ಸಂಗೀತ ಅವನು ಹುಟ್ಟುವಾಗಲೆ ಜೊತೆಯಲ್ಲಿ ಬಂದಿತ್ತು. ಅವನಿಗೆ ಒಂದು ಸಲ ಒಂದು ಕೀರ್ತನೆ ರಾಗ ಕಿವಿಗೆ ಬಿದ್ದರೆ ಸಾಕು ಅದರಲ್ಲಿ ಹೊಸ ಹೊಸದನ್ನು ಕಲ್ಪಿಸಿ ತಕ್ಷಣ ಹಾಡುತ್ತಿದ್ದನು. ಆತನ ಬುದ್ಧಿ ಮನಸ್ಸು ಯಾವಾಗಲೂ ಸಂಗೀತದ ಕಡೆಗೆ ಇದ್ದಿತು. ಆನಂದ ಪೆರುಮಾಳ ಪೂರ್ಣ ವಿರಕ್ತ, ಬೇಜಾಬ್ದಾರ. ದೇವಸ್ಥಾನದಲ್ಲಿಯೋ ನದಿಯ ತೀರದ ಮಂಟಪದಲ್ಲಿಯೋ ಇವನು ಹಾಡುತ್ತಾ ಅಲ್ಲಿಯೇ ಮಲಗಿ ಬಿಡುತ್ತಿದ್ದನು. ಅವನು ಬದುಕಿದ್ದುದೇ ಸಂಗೀತಕ್ಕಾಗಿ". (ಅದೇ; ಪು.೨೦) ಇಲ್ಲಿ ಗೊರೂರರವರು ಸಂಗೀತಗಾರನ ಸ್ಥಿತ ಪ್ರಜ್ಞತನ ವನ್ನು ಹೇಳಿರುವುದು ಉಚಿತವಾಗಿದೆ. "ಆನಂದ ಕರುಣಾ ಸಮುದ್ರ. ಮತ್ತೊಬ್ಬರ ದುಃಖವನ್ನೂ

ನೋವನ್ನೂ ಸಹಿಸುವುದು ಅವನಿಂದ ಸಾಧ್ಯವಾಗುತ್ತಲೇ ಇರಲಿಲ್ಲ. ಇನ್ನೊಬ್ಬರ ಕಷ್ಟವನ್ನು ನೋಡಿದಾಗ, ಅವನ ಕಣ್ಣಿನಲ್ಲಿ ಧಾರೆ ಧಾರೆಯಾಗಿ ನೀರು ಸುರಿಯುತ್ತಿತ್ತು. ಆ ದುಃಖ ಪ್ರವಾಹವನ್ನು ತಡೆಯುವುದು ಆನಂದನಿಂದ ಸಾಧ್ಯವಾಗುತ್ತಿರಲಿಲ್ಲ. ದುಡಿಯುತ್ತಿರುವ ಗಾಡಿ ಎತ್ತುಗಳು ಉಳುವ ದನಗಳು, ಇವುಗಳು ಕೂಡ ಅವನ ಕನಿಕರವನ್ನು ಇಮ್ಮಡಿಸುತ್ತಿದ್ದವು. .... ದುಃಖದ ವೇಳೆಯನ್ನು ಆನಂದ ಒಬ್ಬನೇ ಕುಳಿತು ಹಾಡಿ ಮರೆಯುತ್ತಿದ್ದ. ಆನಂದ ಒಂದು ಸಲ ಕಾಲು ನಡಿಗೆಯಲ್ಲಿಯೇ ಭಾರತ ದೇಶವನ್ನು ತಿರುಗಿದನು". (ಅದೇ; ಪು.೨೧) ಲೇಖಕರು ಇಲ್ಲಿ ಕಲಾವಿದನು ಸಕಲ ಜೀವಿಗಳಲ್ಲಿ ಇಟ್ಟಿರುವ ದಯೆಯನ್ನು ಪ್ರಸ್ತಾಪಿಸಿದ್ದಾರೆ. ಜೊತೆಗೆ ಹಳ್ಳಿಗಳಲ್ಲಿ ಇಂತಹ ವಿಚಿತ್ರ ಪ್ರಕೃತಿಯ ವ್ಯಕ್ತಿಗಳನ್ನು ಗುರುತಿಸಬಹುದು. ಅವರ ಪ್ರವೃತ್ತಿ ವಿಚಿತ್ರವಾದರೂ ಅವರಿಗೆ ಅವರ ದೃಷ್ಟಿ ಆನಂದದಾಯಿಯಾಗಿರುತ್ತದೆ.

ಆನಂದನು "ನಮ್ಮದೆಲ್ಲಾ ಮನುಷ್ಯ ಕಂಠ. ತ್ಯಾಗ ಬ್ರಹ್ಮರ ಗಾನಾಮೃತವನ್ನು ಜಗತ್ತಿಗೆ ಹಂಚುವವರ ಕಂಠ ಹಾಹಾ ಹೂಹೂ ಮುಂತಾದ ಗಂಧರ್ವರ ಕಂಠವಾಗಿರಬೇಕು. ಆ ಕಂಠ ಹೇಗಿರಬೇಕೆಂಬುದು ನನಗೆ ಗೊತ್ತು. ಅದರ ಇಂಪಾದ ಸ್ವರವನ್ನು ನಾನು ಕನಸಿನಲ್ಲಿ ಕೇಳಿದ್ದೇನೆ. ಆ ಸ್ವರ ಆಗಾಗ್ಗೆ ನನ್ನ ಕಿವಿಗೆ ಬೀಳುತ್ತದೆ: ನನ್ನ ಸಮೀಪದಲ್ಲಿಯೇ ನನ್ನ ಕಿವಿಗೆ ಬೀಳುತ್ತಿದೆ. ಆದರೆ ಮಂಗಳಕರವಾದ ಸ್ವರದ ಪುಣ್ಯಾತ್ಮ ಯಾರೆಂಬುದು ಇನ್ನೂ ನನ್ನ ಕಣ್ಣಿಗೆ ಬಿದ್ದಿಲ್ಲ" ಎಂದನು. (ಅದೇ; ಪು.೨೨) ಗೊರೂರರವರು ಈ ಸಂದರ್ಭದಲ್ಲಿ ಕಲಾವಿದನ ಮನಸ್ಸಿನ ಆಸಕ್ತಿಯನ್ನು ಕಾವನ್ನು ವ್ಯಕ್ತಪಡಿಸಿದ್ದಾರೆ. ಇಂತಹ ತಾಪ ಕಲಾವಿದನಿಗೆ ಇದ್ದಷ್ಟು ಆತ ಕಲೆಯಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ ಎಂಬುದಕ್ಕೆ ಆನಂದ ಪೆರುಮಾಳರು ಸಾಕ್ಷಿಯಾಗಿದ್ದಾರೆ. "ಅಗ್ರಹಾರದಲ್ಲಿ ಸಂಗೀತದ ಹುಚ್ಚಿನವರೆಲ್ಲಾ ಆನಂದದಲ್ಲಿ ಬಂದು ಹಾಡುಗಳನ್ನು ಹೇಳಿಸಿಕೊಳ್ಳುತ್ತಿದ್ದರು. ಮದುವೆಗೆ ವಯಸ್ಸಾಗುತ್ತಿದ್ದ ಹುಡುಗಿಯರೆಲ್ಲಾ ಆನಂದನಿಂದ ಹಸೆಯ ಮಣೆಯ ಮೇಲೆ ಹಾಡಲು, ಹಾಡುಗಳನ್ನು ಕಲಿಯಲು ಬರುತ್ತಿದ್ದರು. ಮದುವೆಯಾಗದ ಹುಡುಗಿಯರು ಮೀನಿನ ಗಾಣದಂತೆ ಗಂಡನನ್ನು ಆಕರ್ಷಿಸಲು ಸಂಗೀತವನ್ನು ಇಟ್ಟುಕೊಂಡಿದ್ದಾರೆ". (ಅದೇ.) ಹಿಂದಿನ ಕಾಲದಲ್ಲಿ ಹಾಡು ಹೆಣ್ಣಿನ ಮದುವೆಯನ್ನು ಕುದುರಿಸಲು ಒಂದು ಕಾರಣವಾಗಿತ್ತು ಎಂಬುದನ್ನು ಗೊರೂರರವರು ಇಲ್ಲಿ ನೆನಪು ಮಾಡಿಕೊಡುತ್ತಾರೆ. "ಬಂದಿರುವವನು ಕೋಣ. ಇದರ ಮುಂದೆ ಹಾಡುವುದು ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ" (ಅದೇ) ಎಂಬುದು ಹುಡುಗಿಯರಿಗೆ ಅನೇಕ ವೇಳೆ ಅನುಭವಕ್ಕೆ ಬರುತ್ತಿತ್ತು.

ಆನಂದ ದೇವಸ್ಥಾನದ ಕೈ ಸಾಲೆಯಲ್ಲಿ ಬೆಳಗ್ಗೆ ಒಂಭತ್ತು ಗಂಟೆಗೆ ಕುಳಿತರೆ ಹನ್ನೆರಡು ಗಂಟೆಯ ವರೆಗೆ ಬಂದ ಬಂದವರಿಗೆ ಹಾಡುಗಳನ್ನು ಹೇಳಿಕೊಡುತ್ತಿದ್ದನು. ಅಗ್ರಹಾರದವರಿಗೆ ಆನಂದನಷ್ಟು ಪ್ರಿಯರಾದವರು ಮತ್ತಾರು ಇರಲಿಲ್ಲ. ರಾಮಣ್ಣ ಪೆರುಮಾಳರ ಮಗಳು ಹೇಮಾವತಿಗೆ ಆರು ವರ್ಷ ವಯಸ್ಸಾಗಿದ್ದಾಗ ಆನಂದ ಹೇಮಾವತಿಗೆ ಸಂಗೀತ ಹತ್ತುವುದೇ ಎಂದು ಪರೀಕ್ಷಿಸತೊಡಗಿದರು. ಇವಳು

ಒಳ್ಳೆಯ ಸಂಗೀತಗಾರಳಾಗುತ್ತಾಳೆ. ಆದರೆ ಮಾತ್ರ ಚೆನ್ನಾಗಿ ತಯಾರಿ ಕೊಡಬೇಕೆಂದು ರಾಮಣ್ಣನಿಗೆ ತಮ್ಮ ಹೇಳುತ್ತಿದ್ದನು. ಒಮ್ಮೆ ಆನಂದ ಪೆರುಮಾಳ್ ತನ್ನ ತೋಟಕ್ಕೆ ಹೋದಾಗ ಅಲ್ಲಿ ಕೆಲಸ ಮಾಡುತ್ತಿರುವ ಆಳು ಕಾಳನನ್ನು ನೋಡುತ್ತಾನೆ. ಅವನ ಮಗಳು ಚೆನ್ನಿ ಕಿರು ದನಿಯಲ್ಲಿ ಹಾಡುತ್ತಿದ್ದಳು. ಊರ ಸುತ್ತ ತಲೆಯ ಮೇಲೆ ಕುಕ್ಕೆ ಇಟ್ಟುಕೊಂಡು ಸಗಣಿಯನ್ನು ಎತ್ತಿಕೊಂಡು ಹೋಗುವಾಗ ಚೆನ್ನಿ ದೇವಸ್ಥಾನದ ಕೈ ಸಾಲಿಯ ಹತ್ತಿರ ನಿಂತು ಆನಂದ ಹುಡುಗಿಯರಿಗೆ ಹಾಡುಗಳನ್ನು ಕಲಿಸುವುದನ್ನು ಕೇಳಿದ್ದಳು. ಅವಳಿಗೆ ಒಂದು ದಿನ ಎರಡು ದಿನ ಕೇಳುವುದರೊಳಗಾಗಿ ಹಾಡುಗಳು ಬಾಯಿಗೆ ಬರುತ್ತಿದ್ದವು. ಅವಳು ಹಾಡುಗಳನ್ನು ತನ್ನ ಪಾಡಿಗೆ ತಾನು ದನ ಕಾಯುತ್ತಿರುವಾಗ ಸಗಣಿ ಎತ್ತುತ್ತಿರುವಾಗ ಹೇಳಿಕೊಳ್ಳುತ್ತಿದ್ದಳು. "ಆಗ ಅವಳ ಕಂಠವನ್ನು ಕೇಳಿ ಆನಂದನಿಗೆ ರೋಮಾಂಚನವಾಯಿತು. ಅವನು ಕನಸಿನಲ್ಲಿ ಕೇಳಿದ್ದ ಯಾವ ಧ್ವನಿಯನ್ನು ಅರಸುತ್ತಾ ತಿರುಗುತ್ತಿದ್ದನೋ ಅದೇ ಈ ಕಂಠ ಎಂದು ಅವನಿಗೆ ತೋರಿತು. .... ಆನಂದ ಬಂದು ಚೆನ್ನಿಯ ಎದುರಿಗೆ ಕುಳಿತನು. ಆಗ ಚೆನ್ನಿ ಆನಂದನನ್ನು ನೋಡಿದಳು. ಅವಳಿಗೆ ತಾನು ಮಗುವಾದರೂ ಬಹಳ ಗಾಬರಿಯಾಯಿತು. ಎದ್ದು ನಾಲ್ಕು ಮಾರು ಹಿಂದಕ್ಕೆ ಹೋದಳು. ಆನಂದನಿಗೆ "ಇವಳು ಹೊಲೆಯರವಳು, ನಾನು ಥೇಟ್ ಹದಿನಾರಾಣೆಯ ಬ್ರಾಹ್ಮಣ; ಇವಳು ನಮ್ಮ ಮನೆಯ ಜೀತದವಳು; ನಾನು ಯಜಮಾನ" ಎಂಬುದು ಎಲ್ಲ ಮರೆತು ಹೋಯಿತು. ಸೂಜಿಗಲ್ಲು ಸೂಜಿಯನ್ನು ಆಕರ್ಷಿಸುವಂತೆ ಚೆನ್ನಿಯ ಕಂಠ ಅವನನ್ನು ಆಕರ್ಷಿಸಿತು. ನಾಚಿಕೆಯ ಚೆನ್ನಿಗೆ, ಇಲ್ಲಿ ಬಾ ನಿನಗೆ ಎಲ್ಲಾ ಹಾಡುಗಳನ್ನು ಹೇಳಿ ಕೊಡುತ್ತೇನೆ ಎಂದು ಚೆನ್ನಿಯನ್ನು ಹತ್ತಿರಕ್ಕೆ ಕರೆಯುತ್ತಾನೆ". (ಅದೇ; ಪು.೨೫-೨೬) "ಚೆನ್ನಿ ಆನಂದರ ಏಕಾಗ್ರತೆಯನ್ನು ಕಂಡು ಕಾಳನಿಗೆ ಮಾತು ಮೌನವಾಗುತ್ತದೆ. ಅವಳ ಕಂಠದಂತಹ ಕೋಮಲ ಕಂಠ ಎಲ್ಲಿಯೂ ಕಾಣೆ, ಸಂಗೀತ ದೇವತೆಯೇ ಈಕೆಯ ಕೊರಳಲ್ಲಿ ಆವಿರ್ಭವಿಸಿದ್ದಾಳೆ. ಕೆಸರಿನಲ್ಲಿ ಕಮಲ ಎನ್ನುವುದು ಇದೆಯೇ ಎಂದು ಆನಂದ ನುಡಿಯುತ್ತಾನೆ". (ಅದೇ; ಪು.೨೬) ಕಾಳನು ನಮ್ಮಂತ ಕೀಳು ಜಾತಿಯವರ ಮಕ್ಕಳಿಗೆ ನಿಮ್ಮಂತ ಉತ್ತಮ ಜಾತಿಯವರು ಹಾಡು ಕಲಿಸುವುದು ಸರಿಯೆ? ಎಂದು ಪ್ರಶ್ನಿಸಿದಾಗ "ಸಂಗೀತ ಯಾರ ಮನೆಯ ಆಸ್ತಿಯೂ ಅಲ್ಲ. ಇದು ದೇವರು ಕೊಟ್ಟ ವಿದ್ಯೆ. ದೇವರು ಕೊಟ್ಟ ವರ. ಇದನ್ನು ಕಲಿಸದಿದ್ದರೆ ನನ್ನ ವಿದ್ಯೆ ವ್ಯರ್ಥ" ಎಂದನು. (ಅದೇ; ಪು. ೨೭) ಇಲ್ಲಿ ಕಲೆಯ ಬಗ್ಗೆ ಪ್ರಾಮಾಣಿಕವಾಗಿ ಕಲೆಗಾರನಿಗೆ ಇರಬೇಕಾದ ಮನೋಧರ್ಮವನ್ನು ಗೊರೂರರವರು ಸ್ಫುಟಪಡಿಸಿದ್ದಾರೆ.

ಆನಂದನ ಸಮಸ್ತ ಆಸೆ, ಶಕ್ತಿ, ಧ್ಯೇಯ, ಸಾಧನೆ ಎಲ್ಲಾ ಸಂಗೀತವೇ ಆಗಿದ್ದಿತು. ಇಂತಹ ನಿಸರ್ಗದತ್ತವಾದ ವಿದ್ಯೆಯಲ್ಲಿ ನಿಪುಣೆಯನ್ನಾಗಿ ಮಾಡಲು ಒಬ್ಬ ಹುಡುಗಿ ಸಿಕ್ಕಿದ್ದು ಆನಂದನ ಪಾಲಿಗೆ ಬಡವನಿಗೆ ಧನ ಸಿಕ್ಕಿದಂತೆ ಆಯಿತು. ಹೊಲತಿಗೆ ಹಾಡನ್ನು ಹೇಳಿಕೊಡಲು ಆನಂದನ ಪಾಲಿಗೆ ಕಣಜದ ಗೂಡಿಗೆ ಕೈ ಹಾಕಿದಂತೆ ಆಯಿತು. ಇದು ಗ್ರಾಮದಲ್ಲಿ ದೊಡ್ಡ ಕ್ರಾಂತಿ ಆಯಿತು. ಗೊರೂರರವರು ವೈಯಕ್ತಿಕವಾಗಿ ಹೊಲೆಯರ ಬಗ್ಗೆ ಹೊಂದಿರುವ ಔದಾರ್ಯದ ಭಾವನೆಯನ್ನು ಸಕಾರಣವಾಗಿ ತಮ್ಮ

ಕೃತಿಗಳಲ್ಲಿ ಸಮಯೋಚಿತವಾಗಿ ವ್ಯಕ್ತಪಡಿಸಿದ್ದಾರೆ. ಜಾತಿ ಗೊರೂರರವರ ಅಭಿಪ್ರಾಯದಲ್ಲಿ ಪ್ರಮುಖವಲ್ಲ. ಕಲೆಗಾರ ಜಾತಿಯನ್ನು ಹುಡುಕುವುದು ಅಸಾಧು ಎಂಬ ಭಾವನೆಯನ್ನು ಗೊರೂರರವರು ಈ ಪ್ರಸಂಗದಲ್ಲಿ ಖಚಿತಪಡಿಸಿದ್ದಾರೆ. ಯಾವುದೇ ಗುರು ತನ್ನ ಶ್ರೇಷ್ಠ ವಿದ್ಯೆಯನ್ನು ಶಿಷ್ಯನಿಗೆ ಧಾರೆ ಎರೆಯಬೇಕಾದರೆ ಶಿಷ್ಯನು ಸತ್ಪಾತ್ರನೆ ಎಂಬುದನ್ನು ಗಮನಿಸಬೇಕೆ ಹೊರತು ಶಿಷ್ಯನ ಜಾತಿಯನ್ನು ಅಲ್ಲ ಎಂಬುದು ಗೊರೂರರವರು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ವಿಚಾರ ಮಾಡಿದ್ದಾರೆ. ಆದರೆ ಮೇಲು ಜಾತಿಯ ಹಿರಿಯರಿಗೆ ಆನಂದನ ವರ್ತನೆ ಕಸಿವಿಸಿ ತರುವುದು ಸ್ವಾಭಾವಿಕ ಎಂಬುದನ್ನು ಈ ಘಟನೆಯಲ್ಲಿ ಗಮನಿಸಬಹುದು. ನಿಜವಾದ ಕಲಾವಿದ ಇಂತಹ ವಿಕೃತ ಸ್ಥಿತಿಯನ್ನು ಅಲಕ್ಷಿಸುವುದು ಅಷ್ಟೇ ಸ್ವಾಭಾವಿಕ. ಕಾಳ ಸಹಜವಾಗಿ "ಅಯ್ಯೋ ಬುದ್ಧಿ, ಗೊಬ್ಬರ ಹೊರೋ ಮುಕ್ಕಿ ಹೊಲೆ ಮಕ್ಕಳು ನಮಗೆ ಹಾಡು ಯಾಕೆ?" ಎಂದನು. (ಅದೇ; ಪು.೨೬) ಆದರೆ ಆನಂದ ಕಾಳನ ಮಾತಿಗೆ ಕಿವಿಗೊಡಲಿಲ್ಲ.

ಆನಂದ ಚೆನ್ನಿಯ ಸಂಗಡ ಮದ್ರಾಸಿಗೆ ಹೋಗುತ್ತಾರೆ. ಚೆನ್ನಿ ಆನಂದನ ಸನ್ನಿಧಿಯಲ್ಲಿ ಸಂಗೀತ ನಿಪುಣೆಯಾಗುತ್ತಾಳೆ. 'ಗಾನ ಶಾರದೆ' ಎಂಬ ಬಿರುದಿಗೂ ಪಾತ್ರಳಾಗುತ್ತಾಳೆ. ಚಲನಚಿತ್ರದವರ ಮೋಡಿಯ ಸಂಚಿಗೆ ಬಲಿಯಾಗದೆ ಚೆನ್ನಿ ಗಾನಕಲೆಯಲ್ಲಿ ತನ್ನ ಬದುಕನ್ನು ಸವಿಸುತ್ತಾ ಸಾರ್ಥಕ ಮಾಡುತ್ತಾಳೆ. ಚೆನ್ನಿ ಗಾನದ ಜತೆಗೆ ಭರತನಾಟ್ಯ ಕಲೆಯಲ್ಲಿಯು ನಿಷ್ಣಾತಳಾಗಿದ್ದಳು. ಭರತನಾಟ್ಯ ಶಾಲೆಯನ್ನು ಚೆನ್ನಿ ಮದರಾಸಿನಲ್ಲಿ ಸ್ಥಾಪಿಸಿ "ಈ ವಿದ್ಯೆ ಬರೀ ಸೂಳೆಯರ ವಿದ್ಯೆ ಎಂಬ ಅಪಕೀರ್ತಿಯನ್ನು ಹೋಗಲಾಡಿಸಿ ಸಭ್ಯ ಸಮಾಜದ ಸ್ತ್ರೀಯರೆಲ್ಲಾ ಅಭಿನಯ ವಿದ್ಯೆಯಲ್ಲಿ ಭಾಗಿಗಳಾಗುವಂತೆ ಮಾಡಿದ್ದಳು". (ಅದೇ; ಪು. ೯೨) ಇದು ಅಭಿನಯ ಶಾರದೆ ಚೆನ್ನಿಯ ದೊಡ್ಡ ಸೇವೆ ಎನ್ನಬಹುದು. ಬೆಂಗಳೂರಿನ ಸಂಗೀತ ಕಛೇರಿಯಲ್ಲಿ ಅಭಿನಯ ಶಾರದೆ ಚೆನ್ನಿಯ ಸಂಗೀತವನ್ನು ಕೇಳಿದವರೆಲ್ಲ "ಇದು ಗಾನಾವತಾರ. ಬರಿಯ ಗಂಟಲು ಮೂಳೆ ಮುರಿಯುವವರೆಗೆ 'ಸರಿಗಮಪದನಿಸ' ಕೂಗಿದ ಅಭ್ಯಾಸ ಮಾತ್ರವಲ್ಲ. ಈ ಕಂಠ, ಶಾರೀರ, ನೀರಿನ ಹರಿಯುವಿಕೆಯಂತೆ, ಗಾಳಿಯ ಚಲನದಂತೆ ಸ್ವಾಭಾವಿಕವಾದುದು. ಇದು ಕಲಿತ ಸಂಗೀತವಲ್ಲ. ಜೀರ್ಣಿಸಿಕೊಂಡ ಗಾನ" ಎಂದರು. (ಅದೇ) ಹೀಗೆ ಶ್ರೋತೃಗಳು ಚೆನ್ನಿಯ ಗಾನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಚೆನ್ನಿಯ ಗಾನವಾಹಿನಿ ಜನರನ್ನು ಯಾವ ಯಾವ ಜಗತ್ತಿಗೆ ಕೊಂಡು ಹೋಯಿತೋ ಎಂದು ಗಾನ ಕೊಟ್ಟ ಅಲೌಕಿಕ ಸುಖವನ್ನು ಲೇಖಕರು ಮೆಚ್ಚಿ ಕೊಂಡಿರುವುದರಲ್ಲಿ ಅವರಿಗೆ ಗಾನದಲ್ಲಿರುವ ಪ್ರಾವೀಣ್ಯತೆಯನ್ನು, ಆಸಕ್ತಿಯನ್ನು ಮನವರಿಕೆ ಮಾಡಿಕೊಡುತ್ತದೆ. ಅಂದಿನ ಕಾಲಕ್ಕೆ ಗಾನ ಶಾರದೆ ಚೆನ್ನಿ ಎಲ್ಲ ಹುಡುಗರಲ್ಲಿಯೂ ಗಾನದ ಹುಚ್ಚನ್ನು ಮೂಡಿಸಿ ತನ್ಮೂಲಕ ಕಲಾ ಸೇವೆಯನ್ನು ಉತ್ತಮ ರೀತಿಯಲ್ಲಿ ನಡೆಸಿದ್ದಳು. ಅಭಿನಯ ಶಾರದೆ ಚೆನ್ನಿಯ ಗಾನ ಕಲಾ ವೈಭವವನ್ನು ವರ್ಣಿಸುವುದರ ಮೂಲಕ ಗೊರೂರರವರು ಪ್ರತಿ ನುಡಿಯಲ್ಲಿಯೂ ಗಾನ ಕಲೆಯ ಹಿರಿಮೆಯನ್ನು ಅಚ್ಚೊತ್ತಿದ್ದಾರೆ. ಕಲೆಯಲ್ಲಿ ಆಸಕ್ತಿ ಕಲೆಯಲ್ಲಿ ಸಿದ್ಧಿ ಮಹಾ ಸಾಧಕರಿಗೆ ಮಾತ್ರ ಎಂಬ ಸತ್ಯಾಂಶವನ್ನು ಲೇಖಕರು ಚೆನ್ನಿಯ ಪಾತ್ರದ ಮೂಲಕ ಅನಾವರಣಗೊಳಿಸಿದ್ದಾರೆ. ಚೆನ್ನಿಗೆ 'ಕೆಸರಿನ ಕಮಲ' ಎಂಬುದು ಅನ್ವರ್ಥ ಬಿರುದಾಯಿತು.

ಬೆಂಗಳೂರಿನ ಗಾಯನ ಸಭೆಯಲ್ಲಿ ಗಾನ ಶಾರದೆಗೆ ಅಭಿವಂದನೆಯನ್ನು ಸಲ್ಲಿಸಿದಾಗ ಆಕೆ ಆಡುವ ಮಾತುಗಳು "ನೀವು ಕೊಡುತ್ತಿರುವ ಗೌರವವೆಲ್ಲಾ ನನ್ನ ಗುರುಗಳಿಗೆ ಸಲ್ಲಬೇಕು. ನನ್ನಲ್ಲಿ ಈ ವಿದ್ಯೆ ಇದೆ ಎಂಬುದು ನನಗೇ ತಿಳಿದಿರಲಿಲ್ಲ. ನನ್ನ ಗುರು ನನ್ನ ದೇವರಾಗಿ ಬಂದು ನನ್ನನ್ನು ನಾನು ಬಿದ್ದಿದ್ದ ಚರಂಡಿಯಿಂದ ಎತ್ತಿದರು. ನನ್ನ ಶಕ್ತಿಯಲ್ಲಿ ನನಗೇ ನಂಬಿಕೆಯಿಲ್ಲದಿದ್ದರೂ ನನ್ನನ್ನು ತಯಾರಿಸಿದರು. ಈ ಎಲ್ಲಾ ಗೌರವವೂ ಅವರಿಗೇ ಹೋಗಬೇಕು. ಬಡವರೂ ದೀನರೂ ಆದ ನಾವು, ಬಡವರೂ ದೀನರೂ ಆದ ಹರಿಜನರ ಸೇವೆಗೆ ನಿಧಿ ಅರ್ಪಿಸಲು ಸಿದ್ಧರಾಗಿರುವ ಮಹಾತ್ಮರ ದೇಶದಲ್ಲಿ ನಮ್ಮಂತವರ ಸಂಖ್ಯೆ ಇನ್ನೂ ಕೋಟಿಗಟ್ಲೆ ವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ". (ಅದೇ; ಪು.೯೩) ಗಾನ ಶಾರದೆಯ ಈ ಮಾತುಗಳು ಗುರುವಿನ ಮಹಿಮೆಯನ್ನು ಸಾರುವುದು ಮೆಚ್ಚುವ ಸಂಗತಿಯಾಗಿದೆ. ವಿದ್ಯೆ ಕಲೆಯ ಸಾಧನೆಯಲ್ಲಿ ಶಿಷ್ಯನಿಗೆ ಇಂತಹ ಗುರುಭಕ್ತಿಯ ಭಾವನೆ ಕಂಡುಬರುವುದು ಅಪರೂಪವಾದರೂ ಇದು ಶ್ಲಾಘನೀಯ.

ಅಭಿನಯ ಶಾರದೆ ತನ್ನ ಗುರುವಿನ ಹತ್ತಿರ ತಾನು ಗಾಂಧೀಜಿಯ ಆಶ್ರಮಕ್ಕೆ ಹೋಗಿ ತನ್ನ ಸೇವೆಯನ್ನು ಗಾಂಧೀಜಿಗೆ ಸಲ್ಲಿಸಬೇಕೆಂಬ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಆಗ ಆನಂದ ಗಾನ ಶಾರದೆಯನ್ನು ಗಾಂಧೀಜಿಯವರ ಆಶ್ರಮಕ್ಕೆ ಕರೆದುಕೊಂಡು ಹೋಗುತ್ತಾನೆ. ಸಂಗೀತ ಪ್ರೇಮಿಗಳಾದ ಗಾಂಧೀಜಿಯವರ ಸನ್ನಿಧಿಯಲ್ಲಿ ಗಾನ ಶಾರದೆ ಮೂರು ದಿನ ನಿತ್ಯ ಮುಕ್ಕಾಲು ಗಂಟೆ ಹಾಡಿದರು. ಗಾನ ಶಾರದೆಯ ಬಾಯಲ್ಲಿ ಮೀರಾಬಾಯಿ, ಕಬೀರರ ಹಾಡುಗಳನ್ನು ಕೇಳಿ ಗಾಂಧೀಜಿಯವರು ಕಣ್ಣಲ್ಲಿ ನೀರು ಸುರಿಸಿಬಿಟ್ಟರು. ಆಗ ಅಭಿನಯ ಶಾರದೆಗೆ ಮತ್ತು ಅವಳ ಗುರುಗಳಿಗೆ ನಮಗೆ ಇನ್ನು ಯಾರು ಕೇಳಿದರೇನು? ಬಿಟ್ಟರೇನು? ಎಂಬ ಕೃತಕೃತ್ಯ ಭಾವನೆ ಉಂಟಾಯಿತು. ಗುರೂಜಿ ಗಾಂಧಿಯವರಿಗೆ ತಮ್ಮ ಪುರಾಣವನ್ನೆಲ್ಲಾ ಹೇಳಿದರು. ಹೇಗೆ ಹೊಲತಿಯಾಗಿದ್ದವಳನ್ನು ಈ ಸ್ಥಿತಿಗೆ ತಂದೆ ಎಂದು ವಿವರಿಸಿದನು. ಗಾಂಧೀಜಿಯವರು ಇವರ ಸಾಹಸವನ್ನು ಮೆಚ್ಚಿಕೊಂಡರು. "ಇದುವರೆಗೆ ಒಂದು ವ್ಯಕ್ತಿಯನ್ನು-ಅದರಲ್ಲಿಯೂ ಹೊಲತಿಯನ್ನು ಪರಿಪೂರ್ಣ ಕಲಾವಿದಳನ್ನಾಗಿ ಮಾಡಲು ನೀನು ಇಷ್ಟು ಸಾಹಸ ಮಾಡಿದೆ. ನಿನ್ನಂಥವರ ಶಕ್ತಿ ಸಮಾಜಕ್ಕೆ ಪೂರ್ತ ದೊರೆಯಬೇಕು. ನಿನ್ನ ಏಕಾಗ್ರತೆಯೂ ಕಾರ್ಯ ತತ್ಪರತೆಯೂ ವ್ಯವಸ್ಥಾಶಕ್ತಿಯೂ ಅಸಾಧ್ಯವಾದುದು. ನಿಮ್ಮಿಬ್ಬರ ಪೂರ್ಣ ಶಕ್ತಿಯನ್ನು ನಿಮಗೆ ಪ್ರಿಯವಾದ ಹರಿಜನ ಸೇವೆಗೆ ವಿನಿಯೋಗಿಸಿ ಎಂದು ಗಾಂಧೀಜಿ ಅಭಿನಯ ಶಾರದೆಗೆ ಮತ್ತು ಅವಳ ಗುರುವಿಗೆ ಸಂದೇಶ ನೀಡಿದರು". (ಅದೇ; ಪು.೨೪೧) ಗಾಂಧೀಜಿ ಆಶ್ರಮದಲ್ಲಿ ಕಸ್ತೂರಿ ಬಾ ಅವರನ್ನು ಕಂಡಾಗ ಪುರಾಣದ ಸೀತೆ ಸಾವಿತ್ರಿ ಅರುಂಧತಿಯರ ನೆನಪು ಅಭಿನಯ ಶಾರದೆಗೆ ಉಂಟಾಯಿತು. ಕಸ್ತೂರಿ ಬಾ ರವರ ದೀನ ದಲಿತರ ಸೇವೆ ಅಭಿನಯ ಶಾರದೆಯ ಮನಸ್ಸನ್ನು ಸೂರೆಗೊಂಡಿತು.

ಗಾನ ಶಾರದೆಯ ಸಂಗೀತ ಸುಧೆಯಿಂದ ಮುಗ್ಧರಾದ ಕಸ್ತೂರಿ ಬಾ ಅವರು "ಈ ಶಕ್ತಿಯನ್ನು ನಿನ್ನ ಸ್ವಾರ್ಥಕ್ಕೆ ಉಪಯೋಗಿಸಬೇಡ ಇದು ಲೋಕವಾಳುವ ಶಕ್ತಿ. ನಿನ್ನ ಸಮಾಜದ, ಅದರಲ್ಲಿಯೂ ಹರಿಜನ ಸ್ತ್ರೀಯರ ಸೇವೆಗಾಗಿ ನಿನ್ನ ಆಯಸ್ಸನ್ನು ಮೀಸಲಾಗಿಡು ಎಂದರು. ನಾನು ಅರ್ಧ ಹಾಸ್ಯದಿಂದ 'ಹಾಗಾದರೆ ಮದುವೆಯಾಗುವುದು ಬೇಡವೆ?' ಎಂದೆ. ತಾಯಿ ಕಸ್ತೂರಿ ಬಾ ಒಂದು ಗಳಿಗೆ ಯೋಚಿಸಿ 'ಮದುವೆ ಒಂದು ಪವಿತ್ರ ಬಂಧನ. ಅದನ್ನು ಕುರಿತು ಹಾಸ್ಯವಾಗಿ ಮಾತನಾಡಬೇಡ. ಸ್ತ್ರೀಯರಿಗೆ ಗಂಡನ ಪ್ರೇಮ, ಮಕ್ಕಳ ಪ್ರೇಮ ಬೇಕೇಬೇಕು. ಆದರೆ ಹಣಕ್ಕೂ ದವಲತ್ತಿಗೂ ಆಸೆಪಟ್ಟು ಅಯೋಗ್ಯರನ್ನು ಮದುವೆಯಾಗಬೇಡ. ನಿಮ್ಮವರಲ್ಲಿ ಕನಿಕರವುಳ್ಳವರನ್ನು ಮದುವೆಯಾಗು. ಆಗ ನಿಮ್ಮ ದಾಂಪತ್ಯ ಜೀವನವೂ ಸುಖಕರವಾಗಿರುವುದು, ಸಮಾಜದ ಸೇವೆಯೂ ನಡೆಯುವುದು ಇಹಪರಗಳೆರಡೂ ದೊರೆಯು ವುದು" ಎಂದರು. (ಅದೇ; ಪು.೨೪೨) ಈ ಸಂದರ್ಭದಲ್ಲಿ ಗಾಂಧಿ ಅನುಯಾಯಿಗಳಾದ ಗೊರೂರವರು ಗಾಂಧೀಜಿ ಹಾಗೂ ಕಸ್ತೂರಿಬಾ ಅವರ ಭಾವನೆಗಳನ್ನು ಮನ ತುಂಬಿ ಉಲ್ಲೇಖಿಸುತ್ತಾರೆ. ಜನತೆಯನ್ನು ಅಂತಹ ಆದರ್ಶಗಳ ಕಡೆಗೆ ಆಕರ್ಷಿಸುತ್ತಾರೆ. ಗೊರೂರವರ ಸಾಹಿತ್ಯದ ಮೌಲ್ಯ ಗಾಂಧೀಜಿಯವರ ತತ್ವಗಳಿಂದ ವರ್ಧಿಸುತ್ತದೆ. ಕಸ್ತೂರಿ ಬಾ ಅವರ ನಿಧಿಗೆ ಅಭಿನಯ ಶಾರದೆ ತಮ್ಮ ಗಾನ ಸೇವೆಯ ಮೂಲಕ ಹಣ ಸಂಗ್ರಹಿಸುವ ರೀತಿಯನ್ನು ಗೊರೂರವರು ಉಲ್ಲೇಖಿಸಿದ್ದಾರೆ. ಇದೇ ಘಟನೆಯಲ್ಲಿ ಕಸ್ತೂರಿ ಬಾ ರವರು ಗಾನ ಶಾರದೆಯ ಮುಂದಿನ ವೈವಾಹಿಕ ಮಂಗಳ ಕಾರ್ಯಕ್ಕೆ ಕಸ್ತೂರಿ ಬಾ ಅವರ ಮಾತನ್ನು ಮಂಗಳ ಆಶೀರ್ವಾದವನ್ನಾಗಿ ನುಡಿಸಿರುವುದು ಗಮನಾರ್ಹವಾಗಿದೆ. ಗಾನ ಶಾರದೆಯ ಗಾನ ವೈಭವಕ್ಕೂ ಸಮಾಜ ಸೇವೆಗೂ ಆದರ್ಶ ಸಾಂಸಾರಿಕ ಬದುಕಿಗೂ ಗೊರೂರವರ ಗಾಂಧಿ ಭಾವನೆಗಳ ಶ್ರದ್ಧೆಗೂ ಗಾನ ಶಾರದೆಯ ಘಟನೆ ಉಜ್ವಲ ಕೈಗನ್ನಡಿಯಾಗಿದೆ.

ಗೊರೂರವರ 'ಊರ್ವಶಿ' ಕಾದಂಬರಿಯಲ್ಲಿಯೂ ಸಂಗೀತ ಕಲೆಯ ಅನನ್ಯತೆಯನ್ನು ಗಮನಿಸ ಬಹುದು. ವಿಧವೆಯಾದ ಕಮಲಮ್ಮ ಬದುಕಿನ ನೋವನ್ನು ಸಹಿಸಲಾರದೆ ಹೊಳೆಯಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾಳೆ. ಆ ಸಮಯದಲ್ಲಿ ಪಿಟೀಲು ಕಲಾವಿದೆಯಾದ ಕಮಲಮ್ಮನಿಗೆ ಪಿಟೀಲು ನೆನಪಾಗುತ್ತದೆ. ಈ ನೆನಪಿನ ಮಾತ್ರದಲ್ಲಿಯೇ ಆಕೆ ಸಾವಿನ ಚಿಂತೆಯನ್ನು ಕೈಬಿಟ್ಟು ಪಿಟೀಲು ವಿದ್ಯೆಯಲ್ಲಿ ಮತ್ತಷ್ಟು ನಿಷ್ಣಾತಳಾಗಿ ಅನೇಕರಿಗೆ ಪಿಟೀಲು ಕಲೆಯನ್ನು ಕಲಿಸಿಕೊಟ್ಟು ತನ್ನ ಜನ್ಮಸಾರ್ಥಕ ಮಾಡಿಕೊಳ್ಳುತ್ತಾಳೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಹತಾಶ ಬದುಕಿಗೆ ಕಲೆ ನವ ಚೈತನ್ಯವನ್ನು ಕೊಡಬಹುದು ಎಂಬ ನಿಜ ಸಂಗತಿ. ಈ ಉದಾಹರಣೆಯ ಮೂಲಕವು ಲೇಖಕರು ಕಲೆಯ ವಿಶೇಷತೆಯನ್ನು ನಮಗೆ ತಿಳಿಸಿಕೊಟ್ಟಿದ್ದಾರೆ. ಸಮರ್ಥ ಗುರು ಸಮರ್ಥ ಶಿಷ್ಯನಲ್ಲಿಯೂ ತನ್ನ ಗಾನ ಕಲೆಯ ನೈಪುಣ್ಯತೆಯನ್ನು ತುಂಬಿ ತೋರಿಸಬಲ್ಲ ಎಂಬುದಕ್ಕೆ ಕಮಲಮ್ಮನ ಶಿಷ್ಯೆ ಊರ್ವಶಿ ಮದುವೆಯ ಮನೆಯಲ್ಲಿ ಪಿಟೀಲನ್ನು ವೈವಿಧ್ಯಪೂರ್ಣವಾಗಿ ನುಡಿಸಿ ಎಲ್ಲ ಹಿರಿಯ ವಿದ್ವಾಂಸರಿಂದ ಮೆಚ್ಚುಗೆಗಳಿಸಿದ್ದು ಉತ್ತಮ ಸಾಕ್ಷಿಯಾಗಿದೆ. ಇದೇ ಕಾದಂಬರಿಯಲ್ಲಿ ಪಿಟೀಲು ಪ್ರವೀಣೆಯಾದ ಸೀತಾಲಕ್ಷ್ಮಿ ತನ್ನ ಗಾನ ಕೌಶಲ್ಯದಿಂದ ತೀವ್ರ

ರೋಗಕ್ಕೆ ಗುರಿಯಾಗಿದ್ದ ತನ್ನ ಗಂಡ ಸುಂದರರಾಜನ ವೇದನೆಯನ್ನು ಮಾರ್ಫಿಯಾ ಕೊಡದೆ ಕಲೆಯ ಮೂಲಕ ಸಮಾಧಾನಪಡಿಸಿದ ಘಟನೆ ಅತ್ಯಂತ ಗಮನಾರ್ಹವಾದದ್ದು. ಸುಂದರರಾಜ ಸಂಗೀತ ಪ್ರೇಮಿ ಆದರೆ ಅನಾರೋಗ್ಯದಲ್ಲಿ ಮಾರ್ಫಿಯಾಗೆ ಶರಣಾಗಿದ್ದ ವ್ಯಕ್ತಿ. ಮಾರ್ಫಿಯಾ ಸಿಗದಿದ್ದಾಗ ಸುಂದರರಾಜನ ಚಡಪಡಿಕೆ ಅಷ್ಟೇ ಘೋರವಾಗಿತ್ತು. ವೈದ್ಯರ ಸಲಹೆಯಂತೆ ಸೀತಾಲಕ್ಷ್ಮಿ ಮಾರ್ಫಿಯಾವನ್ನು ಮರೆಸಿ ಸಂಗೀತ ಸುಧೆಯ ಮೂಲಕ ತನ್ನ ಗಂಡನ ಆರೋಗ್ಯವನ್ನು ಸುಧಾರಿಸಿ ಆತನ ಮನಸ್ಸನ್ನು ಗೆಲ್ಲುತ್ತಾಳೆ. ಸಂಗೀತಕ್ಕಿರುವ ಈ ಅದ್ಭುತ ಶಕ್ತಿಯನ್ನು ಗೊರೂರವರು ಈ ಕಾದಂಬರಿಯಲ್ಲಿ ಪರಿಣಾಮಕಾರಿಯಾಗಿ ಬಳಿಸಿಕೊಂಡಿರುವುದು ಮೆಚ್ಚುವಂತಹ ಸಂಗತಿ. ಸಂಗೀತ ಮಾನವನ ಮನಸ್ಸನ್ನು ಭಗವಂತನ ಎಡೆಗೆ ಕೊಂಡೊಯ್ಯುವ ಯಾನವಿದ್ದಂತೆ. ಸಂಗೀತ ಸಿದ್ಧೌಷಧ ಎಂಬ ಸತ್ಯವೂ ಈ ಘಟನೆಯಲ್ಲಿ ಗುರುತಿಸ ಬಹುದಾಗಿದೆ.

'ಶಿವರಾತ್ರಿ' ಕಥಾಸಂಕಲನದ 'ಶಿವರಾತ್ರಿ' ಕತೆಯಲ್ಲಿ ಗೊರೂರವರು ಕುರೂಪಿ ಮಲ್ಲಮ್ಮನ ಗಾನ ವೈಭವವನ್ನು ಸೊಸಾಗಿ ಚಿತ್ರಿಸಿದ್ದಾರೆ. ಆಕೆ ತನ್ನ ಅದ್ಭುತವಾದ ಗಾನದ ಮೂಲಕ ಶಿವರಾತ್ರಿಯ ಜಾಗರಣೆಗೆ ಹನುಮನಹಳ್ಳಿಯಲ್ಲಿ ಹೊಸ ಚೈತನ್ಯವನ್ನು ತಂದು ಕೊಡುತ್ತಿದ್ದಳು. ಆಕೆ ಕಣ್ಮರೆಯಾದಾಗ "ಮಲ್ಲಮ್ಮನ ಜತೆಯಲ್ಲಿ ನಮ್ಮ ಸುತ್ತಲ ಹಳ್ಳಿಗಳ ಚೈತನ್ಯ ಸಂಸ್ಕೃತಿಗಳೇ ಮಾಯವಾದಂತೆ ತೋರಿದವು. ಜಡವಾದ ಉತ್ಸಾಹ ರಹಿತವಾದ ನಿಸ್ತೇಜರಾದ ಈ ಜನರ ಭಾವನೆಗಳನ್ನು ಉದ್ದೀಪನಗೊಳಿಸಿ ಒಂದು ಶಕ್ತಿ ಮರೆಯಾಯಿತು. ಕುರೂಪಿಯಾಗಿ ಯಾರಿಗೂ ಯಾತಕ್ಕೂ ಬೇಡವಳಾಗಿದ್ದ ಮಲ್ಲಮ್ಮ ಹತ್ತೂ ಹಳ್ಳಿಗಳ ಜನರ ಸುಪ್ತವಾದ ತೇಜಸ್ಸನ್ನು ಎಚ್ಚರಗೊಳಿಸಿ ಅವು ರೆಕ್ಕೆಗೊಂಡು ಹಾರುವಂತೆ ಮಾಡಿದ ಅದ್ಭುತವನ್ನು ಕುರಿತು ನಾವು ಬೆರಗಾದೆವು. ಮಲ್ಲಮ್ಮನ ಜತೆಯಲ್ಲಿಯೇ ಶಿವರಾತ್ರಿಯ ಶಿವವು ಕಣ್ಮರೆಯಾಯಿತು" (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೧೯೯೯; ಪು.೧೫೦) ಎಂದು ಗೊರೂರವರು ತಿಳಿಸಿ ಮಲ್ಲಮ್ಮನ ಹಾಡಿನ ದಿವ್ಯ ಪ್ರಭೆಯನ್ನು ಪರಿಣಾಮವನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತಾರೆ. ಹೀಗೆ ಸಂಗೀತದ ಸತ್ತ್ವ ವೈಭವವನ್ನು ಲೇಖಕರು ತಮ್ಮ ಕೃತಿಗಳಲ್ಲಿ ಪರಿಣಾಮಕಾರಿಯಾಗಿ ಕನ್ನಡಿ ಹಿಡಿದಿದ್ದಾರೆ, ಕನ್ನಡಿಸಿದ್ದಾರೆ. ಓದುಗರ ಕಣ್ಮನವನ್ನು ತೆರೆಸುವುದರಲ್ಲಿ ಯಶಸ್ವಿಗಳಾಗಿದ್ದಾರೆ.

ಸಹೃದಯಿಗಳಾದ ಗೊರೂರವರು ಸಾಮಾಜಿಕ ಚಿಂತಕರಾಗಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡಂತೆ ಕಲಾಭಿಮಾನಿಗಳಾಗಿ ಕಲೆಯ ಒಲುಮೆಯನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಜನಪದ ಕಲೆಗಳಲ್ಲಿ ಅವರಿಗಿರುವ ಆಸಕ್ತಿ ಪರಿಶ್ರಮ ಮೆಚ್ಚುವಂತಹದು. ಜನಪದ ಕಲೆಗಳಲ್ಲಿ ಲೇಖಕರಿಗಿರುವ ಆಸಕ್ತಿ ನೈಪುಣ್ಯತೆಯ ವ್ಯಕ್ತಿಯನ್ನು ಅಚ್ಚರಿಗೊಳಿಸುವಂತೆ ಇದೆ. ಚಿತ್ರಕಲೆಯ ಬಗ್ಗೆ ಗೊರೂರವರು 'ವೈಯಾರಿ' ಕಥಾ ಸಂಕಲನದಲ್ಲಿ ಕೊಟ್ಟಿರುವ ಭಾವನೆ ಗಮನಾರ್ಹವಾದದ್ದು. ಸಿದ್ಧಹಸ್ತದ ಚಿತ್ರಗಾರ ದೀಪದಾಸ ಬಿಡಿಸಿದ ಚಿತ್ರ ಕಲ್ಪನೆಯ ಚಿತ್ರವಾದರೂ ಸಹಜ ವ್ಯಕ್ತಿಯನ್ನು ಹೋಲಿಸುವಂತಾಗಿತ್ತು. ದೀಪದಾಸ ತನ್ನ

ಗೆಳೆಯ ರಾಜಕುಮಾರ ಸಿಂಹದೇವನ ಜೊತೆಯಲ್ಲಿ ಚಿತ್ರಕಲೆಯನ್ನು ಅಭ್ಯಾಸ ಮಾಡುತ್ತಾನೆ. ಆತ ಒಮ್ಮೆ ಒಂದು ಹೆಣ್ಣಿನ ಪಾದವನ್ನು ಚಿತ್ರ ಬಿಡಿಸಿ ಆ ಪಾದದ ಸೌಂದರ್ಯಕ್ಕೆ ಒಪ್ಪುವಂತಹ ಪೂರ್ಣ ಹೆಣ್ಣಿನ ಚಿತ್ರವನ್ನು ಬಿಡಿಸುತ್ತಾನೆ. ಇದು ಕೇವಲ ಕಲ್ಪನೆಯಲ್ಲಿ ಮೂಡಿ ಬಂದ ರಮ್ಯ ಚಿತ್ರವಾಗಿತ್ತು. ದೀಪದಾಸನ ಗೆಳೆಯ ಸಿಂಹದೇವ ದೀಪದಾಸ ಬಿಡಿಸಿರುವ ಹೆಣ್ಣಿನ ಚಿತ್ರವನ್ನು ಕಂಡಾಗ ಆಕಸ್ಮಿಕವಾಗಿ ಅದು ತನ್ನ ಸತಿಯ ಚಿತ್ರಕ್ಕೆ ತದ್ರೂಪಿ ಆಗಿತ್ತು. ಇದನ್ನು ಹೇಳಿದಾಗ ದೀಪದಾಸ ಘಾಸಿಗೊಳಗಾಗುತ್ತಾನೆ. ರಾಜಕುಮಾರನಲ್ಲಿ ತಿಳಿಯದೇ ಬಿಡಿಸಿದ ಚಿತ್ರಕ್ಕೆ ಕ್ಷಮೆ ಕೋರುತ್ತಾನೆ. ಆದರೆ ಗೆಳೆಯ "ದೀಪದಾಸ ನಿನಗೆ ಕಿಂಕೃತಿ ಬೇಡ. ಚಿತ್ರ ನಿಜವಾಗಿ ಅದ್ಭುತವಾಗಿದೆ" ಎಂದು ಹೇಳಿ ಮಿತ್ರನನ್ನು ಸಮಾಧಾನ ಪಡಿಸಲು ಬಯಸಿದನು. (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು.೨೭೯) ಚಿತ್ರವನ್ನು ಬಿಡಿಸ ಬಾರದಿತ್ತು ಎಂದು ದೀಪದಾಸ ಪಶ್ಚಾತ್ತಾಪಪಟ್ಟಾಗ ಅದಕ್ಕೆ ಉತ್ತರವಾಗಿ ಸಿಂಹದಾಸ ಆಡುವ ಮಾತು" ನಿನ್ನದು ಹುಚ್ಚುಮಾತು. ಕಲೆಗಾರ ತಾನು ಸಿದ್ಧಿಯನ್ನು ಹೊಂದಿರುವಾಗ ಇಂತಹ ಮಾತನ್ನು ಆಡಲೇಬಾರದು. ರೂಹಾದೇವಿಯ ದೇಹಕ್ಕೆ ನಾನು ಒಡೆಯನಿರಬಹುದು. ಈ ಚಿತ್ರಕ್ಕೆ ಜಗತ್ತು ಒಡೆಯ". (ಅದೇ) ಲೇಖಕರ ಈ ಮಾತುಗಳನ್ನು ಗಮನಿಸಿದಾಗ ಅವರಿಗೆ ಚಿತ್ರಕಲೆಯ ಬಗ್ಗೆ ಇರುವ ಅಭಿಮಾನ ಪರಿಣಿತಿ ಓದುಗರಿಗೆ ಮನವರಿಕೆ ಆಗುತ್ತದೆ.

'ಊರ್ವಶಿ' ಕಾದಂಬರಿಯಲ್ಲಿ ಗೊರೂರರವರು ನರ್ತಕಿ ಬೆಳಗಿಯ ನರ್ತನ ವೈಭವವನ್ನು ವರ್ಣಿಸುವಾಗ ಲೇಖಕರಿಗೆ ನರ್ತನ ಕಲೆಯ ಬಗ್ಗೆ ಇರುವ ಆಸಕ್ತಿ ಸ್ಫುಟವಾಗುತ್ತದೆ. "ಬೆಳಗಿ ತಾಪೆ ಕಟ್ಟುವುದರಲ್ಲಿ ಹೆಸರಾಂತವಳಾದಳು. ವಿದ್ಯೆ ಕಲಿಯದ ಹಳ್ಳಿಯ ಹೆಣ್ಣಾದರೂ, ಅಷ್ಟಪದಿ ಕೃಷ್ಣ ಕರ್ಣಾಮೃತ ಇವುಗಳ ಶ್ಲೋಕಗಳಿಗೆ ಅಭಿನಯವನ್ನು ಹಿಡಿಯುವುದರಲ್ಲಿ ನಿಸ್ಸೀಮಳಾಗಿದ್ದಳು. ಸಂಸ್ಕೃತ ಪಂಡಿತರಾದ ಅನೇಕ ವೈದಿಕ ವಿದ್ವಾಂಸರೂ ಸಹ ಅವಳ ಅಷ್ಟಪದಿಯ ಅಭಿನಯಕ್ಕೆ ಮರುಳಾಗಿ ಅವಳನ್ನೇ ರಾಧೆಯೆಂದು ಭಾವಿಸುತ್ತಾ ತಮಗೆ ಕೃಷ್ಣತ್ವವನ್ನು ಆರೋಪಿಸಿಕೊಂಡು, ಅವಳು ಕಾಸಿಕೊಟ್ಟ ಹಾಲನ್ನು ಕುಡಿದು, ಎಲೆ ಅಡಿಕೆ ಜಗಿಯುತ್ತಾ ಮನೆಗೆ ಹೋಗುತ್ತಿದ್ದರು. ಅದು ಕಲಾಭಿಮಾನಿಗಳ ಸರಸ ಸಲ್ಲಾಪವಾಗಿತ್ತೇ ಹೊರತು ಅದರಲ್ಲಿ ದೇಹಗಳ ಆಕರ್ಷಣೆ, ಕಾಮದ ವಾಸನೆ ಇರಲಿಲ್ಲ". (ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೪; ಪು. ೧೫೬) ಈ ನಿದರ್ಶನದಲ್ಲಿ ಗೊರೂರರವರು ನೃತ್ಯ ಕಲೆಯ ಬಗ್ಗೆ ಸುಂದರ ಸ್ವಾನುಭವದ ಮಾತನ್ನು ಆಡಿರುವುದು ಅವರ ಕಲಾಸಕ್ತಿಗೆ ಸ್ಪಷ್ಟ ಸಾಕ್ಷಿಯಾಗಿದೆ.

'ಹಳ್ಳಿಯ ಚಿತ್ರಗಳು' ಪ್ರಬಂಧ ಸಂಕಲನದಲ್ಲಿ ಗೊರೂರರವರು ಶಿಲ್ಪಕಲೆಯ ಚೆಲುವನ್ನು ಕಂಡು ಹರ್ಷಗೊಂಡಿದ್ದಾರೆ. ಶಿಲ್ಪಕಲೆಯ ತವರೂರಾದ ಹಳೇಬೀಡು, ಬೇಲೂರು ಇರುವ ಜಿಲ್ಲೆ ಗೊರೂರರವರ ಜಿಲ್ಲೆಯೂ ಆಗಿದೆ. ಪ್ರವಾಸದಲ್ಲಿ ಆಸಕ್ತಿ ಇರುವ ಗೊರೂರರವರು ಒಮ್ಮೆ ತಮ್ಮ ಗೆಳೆಯರಾದ ಗುಂಡನ ಜತೆ ಬೇಲೂರು ಹಳೇಬೀಡಿಗೆ ಹೋಗುತ್ತಾರೆ. ಬೇಲೂರು ಹಳೇಬೀಡಿನ ಶಿಲ್ಪ ಕಲಾವೈಭವ ವಿಶ್ವ

ವಿಖ್ಯಾತವಾದದ್ದು. ಬೇಲೂರಿನ ದೇವಾಲಯದ ಒಳಗೆ ಕಂಬದಲ್ಲಿರುವ ಸ್ತ್ರೀ ವಿಗ್ರಹವನ್ನು ಗೊರೂರರವರು ಕಂಡಾಗ ಅವರ ಮುಖವಂತು ಲಾವಣ್ಯದಿಂದ ಉಕ್ಕುತ್ತದೆ. ಇದಕ್ಕೆ ಜೀವವಿದೆಯೋ ಎಂದು ನಮಗೆ ಭ್ರಾಂತಿ ಬಂದಿತು. ವಿಗ್ರಹವಂತೂ ಲಜ್ಜೆಯೇ ಮೂರ್ತಿಯಾಗಿ ನಿಂತಂತೆ ಗೊರೂರರವರಿಗೆ ಭಾಸವಾಗುತ್ತದೆ. ಯಾರು ಏನು ತಿಳಿದುಕೊಳ್ಳುತ್ತಾರೆಯೋ ಎಂಬುದಾಗಿ ನಾವು ಸುತ್ತಲೂ ನೋಡಿ ಅದರ ಕೆನ್ನೆಗಳನ್ನು ಒಂದು ಸಲ ಮುಟ್ಟಿದೆವು. ನಮ್ಮ ಸ್ಪರ್ಶದಿಂದ ಅದು ನಾಚಿಕೊಂಡಂತೆ ತೋರಿತು. ಗುಂಡನು ಎಲ್ಲರು ಹೀಗಿಯೇ ಮುಟ್ಟುತ್ತಿದ್ದರೆ ಈ ವಿಗ್ರಹದ ಕೆನ್ನೆಯು ಬೇಗ ಗುಂಡಿ ಬಿದ್ದು ಹೋಗುತ್ತದೆ ಎಂದನು. ಗೊರೂರರವರ ರಸಿಕ ಮನೋಧರ್ಮ ಇಲ್ಲಿಯು ನವುರಾಗಿ ಮೂಡಿಬಂದಿದೆ. ಶೃಂಗಾರ ಸಭ್ಯತೆಯ ಎಲ್ಲೆಯಲ್ಲಿ ಮಿಂಚಿರುವುದನ್ನು ಇಲ್ಲಿ ಗುರುತಿಸಬಹುದು. ಬೇಲೂರಿನ ದೇವಾಲಯದ ಕಲೆಯ ಪರಾಕಷ್ಟತೆ ಗೊರೂರರವರಿಗೆ ಅಪೂರ್ವ ವಿಸ್ಮಯವನ್ನು ತರುವುದರ ಜೊತೆಗೆ ಆನಂದನ್ನುಂಟುಮಾಡಿತ್ತು. ಹಳೇಬೀಡಿನ ದೇವಾಲಯದ ಸೌಂದರ್ಯವನ್ನು ಕಂಡಾಗ ಲೇಖಕರ ಮನಸ್ಸು ಖಿನ್ನವಾಗುತ್ತದೆ. "ಕಲೆಯ ನೆಲೆಯಾದ ಆ ದೇವಾಲಯದಲ್ಲಿ ಪೂಜೆಯಿಲ್ಲ; ಗಂಟೆಯಿಲ್ಲ; ಗದ್ದಲವಿಲ್ಲ. ದೇವಾಲಯವು ವಿಧವೆಯ ಹಾಗೆ ಅಳುತ್ತಿರುವಂತೆ ತೋರಿತು. ಆ ಸೌಂದರ್ಯ ರಾಶಿಯೆಲ್ಲವು ವ್ಯರ್ಥ. ಹೇಳುವವರಿಲ್ಲ; ಕೇಳುವವರಿಲ್ಲ; ಬೇಕೆನ್ನುವವರಿಲ್ಲ; ಆದರಿಸುವವರಿಲ್ಲ. ಆ ಸೌಂದರ್ಯವನ್ನು ನೋಡಿದುದರಿಂದ ಉಂಟಾದ ಆನಂದದೊಂದಿಗೆ ಪ್ರತಿ ಕ್ಷಣದಲ್ಲಿಯೂ ಯಾವುದೋ ಒಂದು ವಿಧವಾದ ಅನಿರ್ವಚನೀಯವಾದ ದುಃಖವು ನಮ್ಮನ್ನು ಪೀಡಿಸುತ್ತಲೇ ಇದ್ದಿತು". (ಗೊರೂರು ರಾಮಸ್ವಾಮಿ ಅಯ್ಯಂಗಾರ್;೨೦೦೪;ಪು.೩೧)

ಕಲಾಸಕ್ತರಾದ ಗೊರೂರರವರು ರಾತ್ರಿ ಕನಸಿನಲ್ಲಿ ಹಗಲು ಕಂಡ ಬೇಲೂರು, ಹಳೇಬೀಡಿನ ಕಲಾ ವೈಭವವನ್ನು ಮತ್ತೆ ಕಾಣುತ್ತಾರೆ. ಹಗಲು ಕಂಡ ಸ್ತ್ರೀ ವಿಗ್ರಹ ಕನಸಿನಲ್ಲಿ ಸಜೀವ ವ್ಯಕ್ತಿಯಾಗಿ ಕಾಣಿಸುತ್ತದೆ. ಗಾನ ಪ್ರಪಂಚದಲ್ಲಿಯೂ, ನರ್ತನ ಪ್ರಪಂಚದಲ್ಲಿಯೂ, ಕಲಾ ಪ್ರಪಂಚದಲ್ಲಿಯೂ ಆ ನರ್ತಕಿಯ ಸಂಗಡ ಲೇಖಕರು ಸ್ವರ್ಗದ ಕಡೆಗೆ ಪಯಣ ಬೆಳೆಸುತ್ತಾರೆ. ಆಕೆ ಸ್ವರ್ಗಕ್ಕೆ ಹೋದಂತೆ ಸ್ವರ್ಗದ ಬಾಗಿಲು ತೆರೆಯಿತು. ಬಾಗಿಲು ಮುಚ್ಚುವ ಮೊದಲು ಆಕೆ ಆಡಿದ ಮಾತು "ಕನ್ನಡಿಗರಲ್ಲಿ ಕಲಾಭಿವೃದ್ಧಿಯನ್ನು ಸೌಂದರ್ಯೋಪಾಸನೆಯ ಧ್ಯೇಯವನ್ನು ಉಂಟು ಮಾಡುವುದಕ್ಕಾಗಿ ನಾನು ಸ್ವರ್ಗ ಲೋಕದಿಂದ ಭೂಮಿಗೆ ಬಂದೆ. ಹಿಂದಲ ಅರಸರೂ, ಹಿಂದಲ ಪ್ರಜೆಗಳೂ ನನ್ನ ಮಾತಿಗೆ ಗೌರವವನ್ನಿತ್ತು ಕಲೆಯನ್ನು ಜೀವನದ ಒಂದು ಭಾಗವನ್ನಾಗಿ ಮಾಡಿಕೊಂಡಿದ್ದರು. ಈಗ ಅದು ನಿಮಗೆ ಬೇಕಿಲ್ಲ. ಅಂದಿನ ಅವರ ವೈಭವವನ್ನು ಇಂದಿನ ನಿಮ್ಮ ಅವನತಿಯನ್ನು ನೋಡಿ ಅತ್ತು ನನ್ನ ಕಣ್ಣು ಪೋಟಿಯಾಯಿತು. ಸೌಂದರ್ಯವೂ ಕಲೆಯೂ ಭಗವಂತನ ಮುಖ್ಯ ಅಂಶವೆಂಬುದನ್ನೇ ನೀವು ಮರೆತಿದ್ದೀರಿ. ಅರಸಿಕರ ಬಳಿ ನನಗೇನು ಕೆಲಸ? ಮರಳು ಕಾಡಿನಲ್ಲಿ ಅರಳಿದ ಮಲ್ಲಿಗೆ ಇರಬಲ್ಲದೆ?" ಎಂದಳು. (ಅದೇ;ಪು.೩೪) ಕಲೆಯನ್ನು ಜೀವನದ ಒಂದು ಭಾಗವಾಗಿ ಪರಿಭಾವಿಸಬೇಕು ಎಂಬ ಎಚ್ಚರಿಕೆಯನ್ನು ಸ್ವಾನುಭವದ ಮೂಲಕ ಗೊರೂರರವರು ನೀಡುತ್ತಿರುವುದು ಗಮನಾರ್ಹವಾದ ಸಂಗತಿ.

ಹೀಗೆ ಗೊರೂರರವರ ಸಾಹಿತ್ಯವನ್ನು ಕೇವಲ ಶುದ್ಧ ಸಾಹಿತ್ಯ ದೃಷ್ಟಿಯಿಂದ ಅಧ್ಯಯನ ಮಾಡುವುದು ಒಂದು ಸಾರ್ಥಕ ಕೆಲಸವಾದರೆ ಅವರ ಕೃತಿಗಳನ್ನು ಸಾಂಸ್ಕೃತಿಕ ದೃಷ್ಟಿಯಿಂದ ಅಭ್ಯಾಸ ಮಾಡುವುದು ವಿಶೇಷ ಅಧ್ಯಯನವಾಗುತ್ತದೆ. ಇಂತಹ ವಿಶೇಷ ಅಧ್ಯಯನ ಸಾಂಸ್ಕೃತಿಕ ಅಧ್ಯಯನ ದೃಷ್ಟಿಗೆ ಒಂದು ಅನನ್ಯ ದಾಖಲೆಯಾಗುತ್ತದೆ. ಈ ದೃಷ್ಟಿಯಿಂದ ಗೊರೂರರವರ ಸಾಹಿತ್ಯ ಕೃತಿಗಳು ಕೇವಲ 'ದಾಖಲೆಗಳ ಕೃತಿಗಳಾಗಿ ಉಳಿಯದೆ ಸಾಹಿತ್ಯ ಕೃತಿಗಳಾಗಿ ವಿಶಿಷ್ಟ ಮೆರಗನ್ನು ಸತ್ತ್ವವನ್ನು ಮೈಗೂಡಿಸಿಕೊಂಡಿವೆ' ಲೇಖಕರು ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ವಿಶಿಷ್ಟ ಮಾಹಿತಿಯನ್ನು ಕೊಡುವಾಗ ರಸಿಕತೆಯ ಮೆರಗನ್ನು ಕೊಟ್ಟಿರುವುದು ಅತ್ಯಂತ ಮನೋಹರವಾಗಿದೆ. ಒಟ್ಟಿನಲ್ಲಿ ಗೊರೂರರವರ ಕೃತಿಗಳು ವಿಷಯ ವೈವಿಧ್ಯತೆಯಿಂದ ಸಹೃದಯರಲ್ಲಿ ದೃಷ್ಟಿ ವೈವಿಧ್ಯತೆಯನ್ನು ಮೂಡಿಸುವುದರಲ್ಲಿ ಸಫಲವಾಗಿದೆ ಎಂದು ನಿಶ್ಚಯಿಸಿ ಹೇಳಬಹುದು. ಸಾಹಿತ್ಯ ಕೃತಿ ಸಾಹಿತ್ಯದ ಆನಂದವನ್ನು ತುಂಬಿಕೊಡುವುದರ ಜತೆಗೆ ಕಲೆ, ಕ್ರೀಡೆ, ಸಂಸ್ಕೃತಿಗಳಂತಹ ಇತರ ಅಂಶಗಳಿಂದ ಬೆರತುಕೊಂಡು ವಿಷಯ ವೈವಿಧ್ಯತೆಯಿಂದ ಪ್ರಯೋಜನಕಾರಿ ಯಾಗಿರಬೇಕು ಎಂಬುದು ಗೊರೂರರವರ ಕೃತಿಗಳಿಂದ ಸ್ಫುಟವಾಗುತ್ತದೆ. ಅದರಲ್ಲೂ ಗೊರೂರರವರ ಕೃತಿಗಳು ಗ್ರಾಮೀಣ ಕಲೆಗಳ ವಿವರಗಳನ್ನು ಮನೋಜ್ಞವಾಗಿ ಕಟ್ಟಿಕೊಡುತ್ತವೆ.

ಅಧ್ಯಾಯ ೬

ಉಪಸಂಹಾರ

ಅಧ್ಯಾಯ ೬

ಉಪಸಂಹಾರ

ನವೋದಯ ಸಾಹಿತ್ಯದ ಸ್ವರೂಪ ಲಕ್ಷಣ ಆ ಯುಗಧರ್ಮಕ್ಕೆ ಅನುಗುಣವಾಗಿದೆ. ವರ್ತಮಾನದ ಜನರ ಬದುಕಿನ ಕತೆಯೇ - ರೀತಿಯೇ ಅಂದಿನ ಸಾಹಿತ್ಯದ ಮುಖ್ಯ ಲಕ್ಷಣವು, ಚಿಂತನೆಯ ತಳಹದಿಯು ಮತ್ತು ಚರ್ಚೆಯ ವಿಷಯವು ಆಗಿರುತ್ತದೆ ಎಂಬ ಸಿದ್ಧಾಂತಕ್ಕೆ ನವೋದಯ ಸಾಹಿತ್ಯದ ಕೃತಿಗಳು ಬದ್ಧವಾಗಿವೆ. ನವೋದಯ ಸಾಹಿತ್ಯದಲ್ಲಿ ವ್ಯಕ್ತಿ ಬದುಕನ್ನು 'ಸಂಯಮ ದೃಷ್ಟಿ'ಯಲ್ಲಿ ಪರಿಭಾವಿಸುವುದನ್ನು ಗುರುತಿಸಬಹುದು. ಬದುಕಿನಲ್ಲಿ ಸುಖಶಾಂತಿಯ ಬೆದಕಾಟದ ಜತೆಗೆ ಅದಕ್ಕಾಗಿ ಹೋರಾಟ ಮಾಡುವ ಸಂಯಮ ಪ್ರವೃತ್ತಿಯನ್ನು ಪಾತ್ರಗಳಲ್ಲಿ ನೋಡುತ್ತೇವೆ. ಸಮಾಜದಲ್ಲಿ ಘರ್ಷಣೆಗಳು ಕಂಡುಬಂದರು ಆ ಘರ್ಷಣೆಗಳಿಂದ ಸಾಮೂಹಿಕ ವಿಪ್ಲವಗಳು ಆಗದಿರುವುದು ನವೋದಯ ಕಾಲದ ವಿಶೇಷ ಸಂಗತಿ ಯಾಗಿದೆ. ಆದರ್ಶ ಬದುಕಿನ ಹಂಬಲದ ಜೊತೆಗೆ ವ್ಯಕ್ತಿ ನಡೆಸುವ ಚಟುವಟಿಕೆ ಗಮನಾರ್ಹವಾದದ್ದು. ಬದುಕಿನ ಈ ವಾಸ್ತವ ಚಿತ್ರವನ್ನು ನವೋದಯ ಸಾಹಿತಿಗಳೆಲ್ಲರು ತಮ್ಮ ಕೃತಿಗಳಲ್ಲಿ ಪಡಿಮೂಡಿಸಿದ್ದಾರೆ. ಇದರ ಜತೆಗೆ ನವೋದಯ ಸಾಹಿತ್ಯದಲ್ಲಿ ಮಾನವ ಪ್ರಕೃತಿಯೊಂದಿಗೆ ಸಹಜೀವಿಯಾಗಿ ಇರುವುದಷ್ಟೇ ಅಲ್ಲದೆ ಸ್ನೇಹಜೀವಿಯಾಗಿರುವ ವಿಶೇಷ ವಿಷಯವನ್ನು ನೋಡಬಹುದು. ಮಾನವನು ಪ್ರಕೃತಿಯೊಂದಿಗೆ ಮೈತ್ರಿ ಸಂಬಂಧವನ್ನು ಉಳಿಸಿಕೊಂಡು ಬದುಕಿದಷ್ಟು ಅವನ ಬದುಕು ಬಂಧುರವಾಗುತ್ತದೆ ಎಂಬ ವಾಸ್ತವಾಂಶವನ್ನು ನವೋದಯ ಸಾಹಿತ್ಯ ಸಾರಿ ಹೇಳುತ್ತದೆ. ವ್ಯಕ್ತಿಗೆ ಸಾಂಪ್ರದಾಯಿಕ ಪ್ರಜ್ಞೆ ವೈಚಾರಿಕತೆಯ ದೃಷ್ಟಿ ಎರಡು ಇದ್ದಾಗಲೇ ಬದುಕು ಪರಿಪೂರ್ಣವಾಗುತ್ತದೆ ಮತ್ತು ಅರ್ಥಪೂರ್ಣವಾಗುತ್ತದೆ ಎಂಬ ತತ್ತ್ವವನ್ನು ನವೋದಯ ಸಾಹಿತ್ಯ ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ಕನ್ನಡದ ನವೋದಯ ಸಾಹಿತ್ಯವನ್ನು ಮಾನವನ ಮನಸ್ಸಿನ ಶಾಂತಸ್ಥಿತಿಗೆ, ಪ್ರಫುಲ್ಲತೆಗೆ ಹಾಗೂ ಉತ್ಕರ್ಷಕ್ಕೆ ಕಾರಣೀಭೂತವಾದ ಸಾಹಿತ್ಯವೆಂದು ಕರೆದಿರುವುದು. ನವೋದಯ ಸಾಹಿತ್ಯದಲ್ಲಿ ವಿಶ್ವದ ಅತಿ ಶ್ರೇಷ್ಠ ಕೃತಿಗಳ ಪ್ರಭಾವವನ್ನು ಕಾಣುವುದರಿಂದ ವಿಶ್ವಸಾಹಿತ್ಯದ ಪರಿಚಯವು ನಮಗೆ ಆಗುತ್ತದೆ. ಈ ಮೂಲಕ ಸಾಹಿತ್ಯದ ಅಧ್ಯಯನದ ದೃಷ್ಟಿಯಲ್ಲಿ ಹೊಸದೊಂದು ದೃಷ್ಟಿಕೋನವನ್ನು ಸಹೃದಯರು ಪಡೆಯಬಹುದು. ಇಷ್ಟೇ ಅಲ್ಲದೆ ವಿಮರ್ಶಕರು ಸಾಹಿತ್ಯದ ಅಧ್ಯಯನದಲ್ಲಿ ತೌಲನಿಕ ದೃಷ್ಟಿಯನ್ನು ಸಂಪಾದಿಸಿಕೊಳ್ಳಬಹುದು.

ಗೊರೂರವರ ಕೃತಿಗಳಲ್ಲಿ ಕಂಡುಬರುವ ಗ್ರಾಮಸಮಾಜದ ಪರಿಕಲ್ಪನೆಯ ವಿಶೇಷತೆಯನ್ನು ಮಹಾಪ್ರಬಂಧದ ಹಲವು ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ - ಚಿಂತನೆ ಮಾಡಿ ಚಿತ್ರಿಸಲಾಗಿದೆ. ಸಮಾಜ ಶಾಸ್ತ್ರಜ್ಞರು ಕೊಡುವ ಗ್ರಾಮಸಮಾಜದ ಚಿತ್ರಣಕ್ಕೂ ಸಾಹಿತಿಯ ಕೃತಿಯಲ್ಲಿ ಕಂಡುಬರುವ ಗ್ರಾಮಸಮಾಜದ ಚಿತ್ರಣಕ್ಕೂ ಮೂಲತಃ ನಾವು ವ್ಯತ್ಯಾಸವನ್ನು ಗುರುತಿಸಬಹುದು. ಸಮಾಜಶಾಸ್ತ್ರಜ್ಞನು ಶಾಸ್ತ್ರೀಯ ದೃಷ್ಟಿಯಲ್ಲಿ ಗ್ರಾಮಸಮಾಜದ ಸ್ವರೂಪವನ್ನು ಕಂಡು ಪರಿಭಾವಿಸುತ್ತಾನೆ. ಗ್ರಾಮದ ಭೌಗೋಳಿಕ ಸ್ವರೂಪ ಸಮಾಜಶಾಸ್ತ್ರಜ್ಞನಿಗೆ ಪ್ರಧಾನ ವಿಷಯವಾಗಿರುತ್ತದೆ. ಅಲ್ಲಿ ಪ್ರಾಕೃತಿಕ ಪರಿಸರದ ಹಿನ್ನೆಲೆ ಭೌಗೋಳಿಕ ದೃಷ್ಟಿಯಲ್ಲಿಯೇ ಚರ್ಚಿತವಾಗಿರುತ್ತದೆ. ಗ್ರಾಮದಲ್ಲಿ ಕಾಣುವ ಭೂಮಿಯ ಫಲವತ್ತತೆ, ಮಳೆಯ ಆಸರೆ ಹಾಗೂ ಕೃಷಿಕ ಬೆಳೆಯುವ ವಿವಿಧ ಬೆಳೆಗಳ ಬೇಸಾಯದ ರೀತಿ ಬೆಳೆದ ಬೆಳೆಯಿಂದ ರೈತ ಪಡೆಯುವ ಆರ್ಥಿಕ ಲಾಭ ಇವೆಲ್ಲವು ಬಹುಮಟ್ಟಿಗೆ ವೈಜ್ಞಾನಿಕ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಸಮಾಜಶಾಸ್ತ್ರಜ್ಞನಿಂದ ನಿರೂಪಿತವಾಗುತ್ತದೆ. ವಾಸ್ತವಾಂಶ ನಿರೂಪಣೆ ಸಂಖ್ಯಾದೃಷ್ಟಿ ಸಮಾಜಶಾಸ್ತ್ರನಲ್ಲಿ ಪ್ರಮುಖವಾಗಿರುತ್ತದೆ. ಸಮಾಜಶಾಸ್ತ್ರಜ್ಞನು ಗ್ರಾಮಸಮಾಜದ ಬದುಕನ್ನು ಯಾವ ಕ್ಷಣಕ್ಕೂ ಭಾವನಾತ್ಮಕ ವಾಗಿ ವಿಚಾರ ಮಾಡುವುದಿಲ್ಲ. ಭಾವುಕತೆ ಸಮಾಜಶಾಸ್ತ್ರನಿಗೆ ಗ್ರಾಮಸಮಾಜದ ಚಿಂತನೆಯಲ್ಲಿ ದೋಷ ದೃಷ್ಟಿಯಾಗುತ್ತದೆ.

ಸಾಹಿತಿ ಗ್ರಾಮಸಮಾಜದ ಪರಿಕಲ್ಪನೆಯನ್ನು ಕುರಿತು ಚಿಂತಿಸಿರುವ ರೀತಿ ಹಾಗೂ ಚಿತ್ರಿಸುವ ರೀತಿ ಮೂಲಭೂತವಾಗಿ ಭಾವಾನಾತ್ಮಕವಾಗಿರುತ್ತದೆ. ವಾಸ್ತವ ಸಂಗತಿಯ ಜತೆಗೆ ಹದವರಿತ ಭಾವುಕತೆ ಸಾಹಿತ್ಯದ ಮೂಲ ಲಕ್ಷಣ ಎಂಬುದನ್ನು ನಾವು ಮರೆಯಬಾರದು. ವ್ಯಕ್ತಿ-ಸಮಾಜದ ಆಂತರ್ಯವನ್ನು ಪ್ರವೇಶಿಸಿ ಗ್ರಾಮೀಣ ಸಮಾಜದ ಸ್ವರೂಪವನ್ನು ನವುರಾಗಿ ಎಳೆ ಎಳೆಯಾಗಿ ಸಾಹಿತಿ ತೆರೆದಿಡುತ್ತಾನೆ. ಈ ರೀತಿಯ ಅಧ್ಯಯನದಿಂದ ಸಾಹಿತಿ ಗ್ರಾಮಸಮಾಜದ ಅಧ್ಯಯನದ ಮೂಲಕ ಗ್ರಾಮೀಣ ಸಂಸ್ಕೃತಿ ಯನ್ನು ಪರಿಚಯಿಸುತ್ತಾನೆ. ಸಾಹಿತಿಯ ಪಾಲಿಗೆ ಗ್ರಾಮಸಮಾಜದ ಒಟ್ಟು ಸ್ವರೂಪ ಅಧ್ಯಯನಕ್ಕೆ ಒಂದು ಮೊತ್ತ ವಸ್ತುವಾದರೆ ಅಲ್ಲಿಯ ವಿವಿಧ ನೇಲೆಗಳ ಅಧ್ಯಯನ ಕೃತಿಯ ವಿವರಣೆಗೆ ಸಹಕಾರಿಯಾಗುತ್ತದೆ. ಸಾಹಿತಿ, ವ್ಯಕ್ತಿ ಮತ್ತು ಸಮಾಜವನ್ನು ಮೂಲಭೂತವಾಗಿ ಸಾಂಸ್ಕೃತಿಕ ಅನನ್ಯತೆಯ ದೃಷ್ಟಿಯಲ್ಲಿ ಪರಿಭಾವಿಸುತ್ತಾನೆ - ವಿವರಿಸುತ್ತಾನೆ. ಗ್ರಾಮೀಣ ಪರಿಸರದ ವರ್ಣನೆಯಿಂದ ಪ್ರಾರಂಭಿಸಿ ಗ್ರಾಮದ ಜನರ ಮನದ ಆಸೆ - ಆಕಾಂಕ್ಷೆಗಳ ಅವಲೋಕನದೊಂದಿಗೆ ಅವರ ಮನದ ಮಿಡಿತವನ್ನು ಕಂಡುಕೊಳ್ಳುತ್ತಾನೆ. ಈ ಕಾರಣದಿಂದಲೇ ಸಾಹಿತಿಗೆ ಗ್ರಾಮಸಮಾಜದ ವ್ಯಕ್ತಿಗಳ ಎಲ್ಲಾ ಚಟುವಟಿಕೆಗಳು ಕುತೂಹಲಕ್ಕೆ ಕೇಂದ್ರ ಬಿಂದುಗಳಾಗಿರುತ್ತವೆ ಹಾಗೂ ಸಂಸ್ಕೃತಿಯ ಅಧ್ಯಯನಕ್ಕೆ ಅಪೂರ್ವ ಅಂಶಗಳಾಗಿರುತ್ತವೆ. ಸಾಹಿತಿಯ ಚಿಂತನೆಯಲ್ಲಿ ಕಲ್ಪನೆಯ ಬೆರಗು ಕಂಡುಬಂದರೂ ಅದು ವಾಸ್ತವಾಂಶದ ಮೂಲ ಸತ್ಯವನ್ನು ಮುಚ್ಚಿಡುವುದಿಲ್ಲ ಹಾಗೂ ಮಸಕು ಮಾಡುವುದಿಲ್ಲ. ಗ್ರಾಮಸಮಾಜದ ಬಗ್ಗೆ ಸಾಹಿತಿ ಕೊಡುವ ವಿವರಣೆಗಳಲ್ಲಿ ಕಲ್ಪನೆಯ ಅಂಶ ಕೇವಲ ಪ್ರಭಾವಳಿಯಾಗಿ ಮೂಲ ವಾಸ್ತವಾಂಶವನ್ನು ಬೆಳಗಿಸುತ್ತದೆ.

ಗ್ರಾಮಸಮಾಜದ ಬದುಕಿಗೆ ಸಹಕಾರಿಯಾದ ಕಲೆ, ಧಾರ್ಮಿಕ ಸಂಗತಿಗಳ ಚರ್ಚೆ, ಬದುಕಿನ ಹೋರಾಟ ಗಳು, ಅವರ ಬದುಕಿನ ಅನೇಕ ಆಚರಣೆಗಳು ಮತ್ತು ನಂಬಿಕೆಗಳು ಎಲ್ಲವು ಸಾಹಿತಿಯ ಪಾಲಿಗೆ ಅಮೂಲ್ಯ ವಿಷಯಗಳಾಗಿರುತ್ತವೆ. ಈ ಸಂಗತಿಗಳನ್ನು ಒಳಗೊಂಡ ಸಾಹಿತಿಯ ಗ್ರಾಮೀಣ ಸಮಾಜದ ಚಿತ್ರಣ ವಿಷಯ ಪೂರಿತವಾಗಿಯು, ವೈಶಿಷ್ಟಪೂರ್ಣವಾಗಿಯು ಮೂಡಿಬಂದಿರುತ್ತದೆ. ಸಾಹಿತಿಯ ಕೃತಿಗಳನ್ನು ಅಭ್ಯಾಸ ಮಾಡುವಾಗ ಕೃತಿಯಲ್ಲಿನ ಹೂರಣಭಾಗ ಕೃತಿಯ ಅಧ್ಯಯನಕ್ಕೆ ರಸಪಾಕವಾಗಿ ಸಹಕಾರಿಯಾಗುತ್ತದೆ. ಸಾಹಿತಿ ತನ್ನ ಚಿಂತನೆಯಲ್ಲಿ ಗ್ರಾಮೀಣ ಬದುಕಿನ ರೀತಿನೀತಿಗಳ ಬಗ್ಗೆ ಸತ್ಯಾನ್ವೇಷಣೆಯ ಕಾರ್ಯವನ್ನು ನಡೆಸಿರುತ್ತಾನೆ. ಗ್ರಾಮೀಣ ಜನರ ಬದುಕಿನ ರೀತಿ ನಂಬಿಕೆಗಳ ಹಿನ್ನೆಲೆಯಲ್ಲಿ ಧರ್ಮಾಚರಣೆಯಲ್ಲಿ ಅಂತರ್ಗತವಾಗಿರುವ ಅಮೂಲ್ಯ ಸತ್ಯಾಂಶಗಳನ್ನು ನಮಗೆ ವಿಶಿಷ್ಟ ಬೆಳಕಿನೋಪಾದಿಯಲ್ಲಿ ಕೃತಿಯ ಮೂಲಕ ತಂದುಕೊಡುತ್ತನೆ. ಕೃತಿಯಲ್ಲಿ ಕಂಡುಬರುವ ಈ ತಾತ್ವಿಕ ಚಿಂತನೆ ಕೃತಿಯ ಮೌಲ್ಯವಾಗಿರುತ್ತದೆ. ಸಾಂಸ್ಕೃತಿಕ ಅಧ್ಯಯನದಲ್ಲಿ ಗ್ರಾಮೀಣ ಸಂಸ್ಕೃತಿಯ ಅಧ್ಯಯನ ಮತ್ತು ಸಂಶೋಧನೆ ಒಂದು ವಿಶಿಷ್ಟ ಪ್ರಕ್ರಿಯೆ ಎಂದು ಹೇಳಬಹುದು.

'ಗೊರೂರವರ ಸಾಹಿತ್ಯದಲ್ಲಿ ಗ್ರಾಮಸಮಾಜ' ಎಂಬ ಈ ಮಹಾಪ್ರಬಂಧದಲ್ಲಿ ಗೊರೂರವರು ತಮ್ಮ ಕೃತಿಗಳಲ್ಲಿ ಚಿತ್ರಿಸಿರುವ ಗ್ರಾಮಸಮಾಜವನ್ನು ಪೂರ್ಣಾಂಶದಲ್ಲಿಯು ವಿಶಿಷ್ಟ ಸಂಗತಿಗಳ ಹಿನ್ನೆಲೆಯಲ್ಲಿಯು ಅಧ್ಯಯನ ಮಾಡಲಾಗಿದೆ. ಗ್ರಾಮಸಮಾಜದ ವಿವಿಧ ನೆಲೆಗಳಲ್ಲಿ ಕಾಣುವ ವಿಷಯಗಳ ಸಂಗ್ರಹ ಹೇಗೆ ಪ್ರಧಾನವಾಗಿದೆ ಎಂಬುದನ್ನು ತಾತ್ವಿಕವಾಗಿ ಹಾಗೂ ವೈಚಾರಿಕವಾಗಿ ವಿವೇಚಿಸಲಾಗಿದೆ. ಈ ಸಂದರ್ಭದಲ್ಲಿ ಗೊರೂರವರ ಕೃತಿಗಳ ಸೂಕ್ಷ್ಮ ಸಂಗತಿಗಳನ್ನು ಆಸಕ್ತಿಯಿಂದ ಪರಿಶೀಲಿಸಲಾಗಿದೆ, ಇಲ್ಲಿ ಗೊರೂರವರ ಐತಿಹಾಸಿಕ ದೃಷ್ಟಿಯನ್ನು ತಾತ್ವಿಕ ದೃಷ್ಟಿಯನ್ನು ಜನಪದ ನಂಬಿಕೆಗಳನ್ನು ವಿವರವಾಗಿ ತಿಳಿಸುವುದರ ಜತೆಗೆ ಗೊರೂರವರು ವಸಾಹತುಶಾಯಿ ಆಳ್ವಿಕೆಗೆ ಹೇಗೆ ತಮ್ಮ ಕೃತಿಗಳಲ್ಲಿ ಪ್ರತಿಕ್ರಿಯಿಸಿದರು ಎಂಬುದನ್ನು ಚರ್ಚಿಸಲಾಗಿದೆ. ಗೊರೂರವರ ಕೃತಿಗಳು ಚಿಂತನೆಗೆ ಚರ್ಚೆಗೆ ಅನೇಕ ಉತ್ತಮ ವಿಚಾರ ಗಳನ್ನು ನೆಲೆಗಟ್ಟುಗಳನ್ನು ಒಳಗೊಂಡಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ವಸ್ತುದೃಷ್ಟಿಯಿಂದ ಗೊರೂರವರ ಕೃತಿಗಳು ಎಷ್ಟು ಸಾರವತ್ತಾಗಿದೆಯೋ ವೈಚಾರಿಕ ದೃಷ್ಟಿಯಿಂದಲೂ ಅಷ್ಟೇ ಸತ್ವಪೂರ್ಣವಾಗಿದೆ. ಮೂಲಭೂತವಾಗಿ ಗೊರೂರವರು ಸಂಪ್ರದಾಯಪ್ರಿಯರಾಗಿ ತಮ್ಮ ಕೃತಿಯಲ್ಲಿ ಗ್ರಾಮೀಣ ಸಮಾಜಕ್ಕೆ ಸಂಬಂಧಿಸಿದಂತೆ ಸಂಪ್ರದಾಯಿಕ ಸಂಗತಿಗಳನ್ನು ಹೇಳಿ, ಸುಧಾರಣಾವಾದಿಯಾಗಿ ಗ್ರಾಮೀಣ ಸಮಾಜದ ಚಟುವಟಿಕೆಗಳನ್ನು ವೈಚಾರಿಕ ದೃಷ್ಟಿಯಿಂದಲೂ ವಿಚಾರ ಮಾಡಿರುವುದನ್ನು ಪರಾಮರ್ಶನ ಮಾಡಲಾಗಿದೆ.

ಗೊರೂರವರು ಹೇಮಾವತಿ ತೀರದ ಗ್ರಾಮೀಣ ಪರಿಸರದಲ್ಲಿ ಹುಟ್ಟಿ, ಆ ಪರಿಸರದೊಂದಿಗೆ ಹೊಂದಿಕೊಂಡು ಬದುಕಿ ಬಾಳಿದ ವ್ಯಕ್ತಿ, ಆ ಪರಿಸರದ ಕಣಕಣದ ಅನುಭವ ಅವರ ಕೃತಿಗಳಲ್ಲಿ ಕತೆಯಾಗಿ, ನಂಬಿಕೆಗಳಾಗಿ ಹಾಗೂ ಆಚರಣೆಯ ಸಂಗತಿಗಳಾಗಿ ಮೂರ್ತ ರೂಪತಾಳಿದೆ. ಗ್ರಾಮೀಣ

ಜೀವನದಲ್ಲಿ ಒಡನಾಡಿಯಾದ ಗೊರೂರರವರಿಗೆ ಗ್ರಾಮೀಣ ಪರಿಸರವನ್ನು ಚಿತ್ರಿಸಿರುವುದರಲ್ಲಿ ಜನತೆಯ ಜೀವನವನ್ನು ಕೃತಿಯಲ್ಲಿ ಕಟ್ಟಿಕೊಡುವುದು ಅತ್ಯಂತ ಸಂಭ್ರಮದ ವಿಷಯ ಎಂಬುದು ಅವರ ಎಲ್ಲಾ ಕೃತಿಗಳು ಸಾಬೀತುಪಡಿಸುತ್ತದೆ. ಸಾಹಿತಿಯ ಈ ನೈಪುಣ್ಯತೆ ಕೃತಿಗೆ ನೈಜತೆಯ ಉಜ್ವಲತೆಯನ್ನು ತಂದುಕೊಟ್ಟಿದೆ. ಗೊರೂರರವರ ಕೃತಿಗಳನ್ನು ಅಭ್ಯಾಸ ಮಾಡಿದವರು ಒಮ್ಮೆಯಾದರು ಹೇಮಾವತಿಯ ಪರಿಸರವನ್ನು ಕಾಣುವ ಹಂಬಲವನ್ನು ಪಡೆಯುತ್ತಾರೆ. ಆ ಪರಿಸರದ ಜನಜೀವನವನ್ನು ಪ್ರತ್ಯಕ್ಷವಾಗಿ ಕಾಣಬಯಸುತ್ತಾರೆ. ಗೊರೂರಿನ ಪರಿಸರದಲ್ಲಿ ಹುಟ್ಟಿ ಬೆಳೆದು ಬದುಕಿ ಬಾಳಿದ ಜನಕ್ಕೆ ಅವರ ಜೀವನಾನುಭವಕ್ಕೆ ಗೊರೂರರವರ ಕೃತಿಗಳು ಸಹೃದಯರ ಮನದಂಗಳಕ್ಕೆ ನೆನಪಿನ ಮೀಟುಗೋಲಾಗುತ್ತದೆ. ಮಹಾಪ್ರಬಂಧದಲ್ಲಿ ಈ ವಿಶೇಷ ಅನುಭವ ಅಭಿವ್ಯಕ್ತವಾಗಿದೆ. ಪ್ರಸ್ತುತ ಹಿನ್ನೆಲೆಯಲ್ಲಿ ನಡೆಸಿದ ಒಟ್ಟಾರೆ ಅಧ್ಯಯನದ ಫಲಿತಗಳು ಈ ಕೆಳಗಿನಂತಿವೆ. ಗೊರೂರರವರ ವ್ಯಕ್ತಿತ್ವವನ್ನು ಅವಲೋಕಿಸಿದಾಗ ಅವರ ಕೃತಿಗಳಲ್ಲಿ ಮೂಡಿ ಬಂದಿರುವ ಗ್ರಾಮೀಣ ವ್ಯಕ್ತಿತ್ವದ ಪರಿಪೂರ್ಣ ರೂಪ ಅವರದ್ದಾಗಿದೆ ಎಂಬುದು ನಮಗೆ ಸ್ಪಷ್ಟವಾಗುತ್ತದೆ. ಗೊರೂರರವರಲ್ಲಿ ಇರುವ ಪಾಂಡಿತ್ಯ, ಕ್ರಿಯಾಶೀಲತೆ, ಸಮನ್ವಯ ದೃಷ್ಟಿ, ಸಂಯಮ ಭಾವನೆ ಹಾಗೂ ತಾರ್ಕಿಕ ಬುದ್ಧಿ ಇವೆಲ್ಲವೂ ಅವರ ಕೃತಿಗಳಲ್ಲಿ ವಿಷಯ ಪ್ರತಿಪಾದನಾ ಸಂದರ್ಭದಲ್ಲಿ ಕಥಾ ನಿರೂಪಣೆಯ ಸನ್ನಿವೇಶದಲ್ಲಿ ಸಹಜವಾಗಿ ಮೂಡಿಬಂದಿದೆ. ಈ ಕಾರಣದಿಂದ ಗೊರೂರರವರ ವ್ಯಕ್ತಿತ್ವವೇ - ಚಿಂತನೆಯೇ ಅವರ ಕೃತಿರೂಪ ಎಂಬುದು ಮನವರಿಕೆಯಾಗುತ್ತದೆ.

ಗೊರೂರರವರ ಕೃತಿಗಳು ಗ್ರಾಮೀಣ ಸಮಾಜದ ಪ್ರತಿರೂಪವಾಗಿದೆ. ಗ್ರಾಮೀಣ ಸಮಾಜದ ಸ್ಥಿತ್ಯಂತರಗಳನ್ನು ಅನನ್ಯತೆಯನ್ನು ಅಲ್ಲಿ ವಿವರವಾಗಿ ಕಾಣಬಹುದು. ಸ್ವಾತಂತ್ರ್ಯ ಹೋರಾಟದ ಚಿತ್ರದ ಜತೆಗೆ ಗಾಂಧೀಜಿಯವರ ದೇಸಿ ಚಳುವಳಿಯ ಚಿತ್ರ ಬಹುಮಟ್ಟಿಗೆ ಗೊರೂರರವರ ಕೃತಿಗಳ ವಸ್ತುವಾಗಿದೆ. ಗ್ರಾಮಸಮಾಜದ ಜನರ ಬದುಕಿನಲ್ಲಿ ಕಾಣುವ ಸಾಹಸಿ ಪ್ರವೃತ್ತಿಯನ್ನು ಹಾಗೂ ಮಾನವೀಯ ಗುಣಗಳನ್ನು ಅವರ ಕೃತಿಗಳು ಪ್ರತ್ಯಕ್ಷವಾಗಿ ಪ್ರತಿಬಿಂಬಿಸುತ್ತದೆ. ಹೇಮಾವತಿ ಪರಿಸರದ ನೈಸರ್ಗಿಕ ಚಿತ್ರ ಗೊರೂರರವರ ಕೃತಿಗಳಲ್ಲಿ ಕಥಾವಸ್ತುವಿಗೆ ಜೀವತಂತುವಾಗಿದೆ ಎಂದು ಹೆಮ್ಮೆಯಿಂದ ಹೇಳಬಹುದು. ಕಥಾವಸ್ತುವಿಗೆ ಪೂರಕವಾಗಿ ನಿರೂಪಣೆಯಲ್ಲಿ ಸರಳತೆಯನ್ನು ದೇಸಿತನವನ್ನು ಗೊರೂರರವರ ಶೈಲಿಯಲ್ಲಿ ನೋಡಬಹುದು. ಅವರ ಶೈಲಿಯ ವಿಶೇಷ ಗುಣವಾದ ರಸಿಕತೆಯ ಲಕ್ಷಣ ಕತೆಗೆ ಮರೆಯಲಾಗದ ಸೊಗಸನ್ನು ತಂದುಕೊಟ್ಟಿದೆ. ಕತೆಗೆ ಪೋಷಕವಾಗಿ ಬಂದಿರುವ ತಾತ್ವಿಕ ವಿಚಾರಗಳ ಚರ್ಚೆಯಲ್ಲಿ ಗೊರೂರರವರು ಅಭಿವ್ಯಕ್ತಿಪಡಿಸಿರುವ ನಿಷ್ಪಕ್ಷಪಾತ ದೃಷ್ಟಿ ಮತ್ತು ಸ್ಪಷ್ಟತೆ ಮೆಚ್ಚುವಂತಹುದಾಗಿದೆ.

ಗ್ರಾಮಸಮಾಜದ ಸ್ವರೂಪವನ್ನು ತಿಳಿಸುವಾಗ ಅಂದಿನ ಗ್ರಾಮಸಮಾಜದ ಸ್ಥಿರ ಚಿತ್ರಣವನ್ನು ಯಥಾವತ್ತಾಗಿ ಕೊಟ್ಟಿದ್ದಾರೆ. ಗೊರೂರರವರ ಕೃತಿಗಳಲ್ಲಿ ಕಂಡುಬರುವ ಗ್ರಾಮೀಣ ಚಿತ್ರಣ ಅವಲೋಕನಕ್ಕೆ ಕುತೂಹಲಕಾರಿಯಾಗಿರುವಂತೆ ಅಷ್ಟೇ ಹೃದಯಸ್ಪರ್ಶಿಯಾಗಿದೆ. ವಸಾಹತುಶಾಹಿ ಸಂದರ್ಭದಲ್ಲಿ

ಗ್ರಾಮಸಮಾಜದಲ್ಲಿ ಕಂಡುಬಂದ ಬದಲಾವಣೆಗಳನ್ನು ಹಾಗೂ ಅದಕ್ಕೆ ಗೊರೂರರವರು ಪ್ರತಿಕ್ರಿಯಿಸಿದ ರೀತಿಯನ್ನು ಅವರ ಬಹುಪಾಲು ಕೃತಿಗಳಲ್ಲಿ ಕಾಣಬಹುದಾಗಿದೆ. ಗೊರೂರರವರ ಕೃತಿಗಳಲ್ಲಿ ಈ ಅಭಿಪ್ರಾಯಕ್ಕೆ ಪೂರಕವಾದ ಸಂಗತಿಗಳನ್ನು ತಿಳಿಯಬಹುದು. ಗೊರೂರರವರು ಕೊಟ್ಟಿರುವ ಗ್ರಾಮಸಮಾಜದ ಸ್ವರೂಪವನ್ನು ಆಧುನಿಕ ಗ್ರಾಮಸಮಾಜದ ಸ್ವರೂಪದ ಹಿನ್ನಲೆಯಲ್ಲಿ ತುಲನೆ ಮಾಡಿದಾಗ ನಮಗೆ ಭಾಸವಾಗುವ ಸೂಕ್ಷ್ಮ ಅಂಶಗಳ ವಿಚಾರಗಳು ಅವರ ಕೃತಿಗಳಲ್ಲಿ ನಮಗೆ ಮನವರಿಕೆಯಾಗುತ್ತದೆ. ಗ್ರಾಮೀಣ ಬದುಕಿನಲ್ಲಿ ಆಧುನಿಕತೆಯ ಒಲವಿನ ಸೆಳೆತಗಳನ್ನು ಗೊರೂರರವರು ನಿರೂಪಿಸುವಾಗ ಅವರಿಗಿರುವ ದೇಸಿತನದ ಅಭಿಮಾನವನ್ನು ಸ್ಪಷ್ಟಪಡಿಸಿದ್ದಾರೆ. ಅನೇಕ ಸಂದರ್ಭಗಳಲ್ಲಿ ದೇಸಿತನದ ಅಭಿಮಾನದ ಜತೆಗೆ ಜನರ ಬದುಕಿನಲ್ಲೂ ಕಂಡುಬಂದ ಆಧುನಿಕತೆಯ ಘರ್ಷಣೆಗಳು ಅವರ ಕೃತಿಗಳಲ್ಲಿ ಮಿಳಿತವಾಗಿದೆ. ಹಾಗೂ ಗ್ರಾಮಸಮಾಜದ ಸಂಕೀರ್ಣ ಅನುಭವ ಗೊರೂರರವರ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿವೆ.

ಗ್ರಾಮೀಣ ಜನತೆಯೊಂದಿಗೆ ನಿಸರ್ಗ ಹೊಂದಿರುವ ಅಪೂರ್ವ ಸಂಬಂಧವನ್ನು ಗೊರೂರರವರು ಕಲಾತ್ಮಕವಾಗಿ ಬಿಡಿಸಿರುವುದನ್ನು ಕಾಣಬಹುದು. ನಿಸರ್ಗದೊಂದಿಗೆ ಹೊಂದಿಕೊಂಡು ಬಾಳಿದ ಗ್ರಾಮೀಣ ಜನರ ಬದುಕು ಆಕರ್ಷಣೀಯ ಅಷ್ಟೇ ಅಲ್ಲ ಅರ್ಥಪೂರ್ಣ ಎಂಬುದನ್ನು ಗೊರೂರರವರು ಸೂಕ್ತ ಉದಾಹರಣೆಗಳ ಮೂಲಕ ತಮ್ಮ ಕೃತಿಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ದೃಷ್ಟಿಯಿಂದಲೇ ಗೊರೂರರವರ ಕೃತಿಗಳಲ್ಲಿ ಮೂಡಿ ಬಂದಿರುವ ಪ್ರಾಕೃತಿಕ ದರ್ಶನವನ್ನು ಕೃತಿಯ ಜೀವಕಳೆ ಎಂದು ಕರೆಯಬಹುದು. ಹೇಮಾವತಿ ಹರಿಯುವ ನೀರು ಒಂದೇ ಆದರೂ ಅದು ಅದರ ಪರಿಸರದಲ್ಲಿ ಬಾಳುವ ಜನರ ಮನಸ್ಸಿನ ಮೇಲೆ ಮೂಡಿಸುವ ಭಾವನೆಗಳು ವೈವಿಧ್ಯಪೂರ್ಣವಾದುದು ಹಾಗೂ ನಿತ್ಯ ಕುತೂಹಲವಾದದು. ಗೊರೂರರವರು ಸೃಷ್ಟಿಸಿರುವ ಪಾತ್ರಗಳು ನಿಸರ್ಗದಿಂದ ಮೂಡಿ ಬಂದ ಸಹಜ ಪಾತ್ರಗಳು.

ಗ್ರಾಮಸಮಾಜದ ಜೀವ ಸಂಸ್ಕೃತಿ - ಶಕ್ತಿ ಅಂದರೆ ಅವರಲ್ಲಿ ಕಾಣುವ ಕೃಷಿ ಸಂಸ್ಕೃತಿ. ರೈತ ದೇಶದ ಬೆನ್ನೆಲಬಾದರೆ ಕೃಷಿ ಅವನ ಉಸಿರು. ಕೃಷಿಯ ಮೂಲಕ ರೈತ ತನ್ನ ಬದುಕಿಗೆ ಸಾರ್ಥಕತೆಯನ್ನು ತಂದುಕೊಳ್ಳುವುದರ ಜತೆಗೆ ಸಮಾಜಕ್ಕೂ ಪರೋಪಕಾರಿಯಾಗಿದ್ದಾನೆ. ರೈತನ ದುಡಿಮೆ ಪ್ರತಿಹಂತದಲ್ಲಿಯು ಅವನ ಶ್ರಮಕ್ಕೆ ಸವಾಲಾಗಿರುತ್ತದೆ. ಗ್ರಾಮೀಣ ಜನತೆಯಲ್ಲಿ ಸ್ವಾವಲಂಬಿತನದ ಜತೆಗೆ ಪರಸ್ಪರ ಸಹಕಾರ ಮನೋಧರ್ಮ ಎಷ್ಟು ಉದಾತ್ತ ರೀತಿಯಲ್ಲಿ ಕಂಡುಬರುತ್ತದೆ ಎಂಬ ಸಂಗತಿಯನ್ನು ಗೊರೂರರವರ ಕೃತಿಗಳು ಪ್ರತಿಫಲಿಸುತ್ತವೆ. ಗ್ರಾಮೀಣ ಸಮಾಜದಲ್ಲಿ ಕೃಷಿಕ ಜೀವನ ಎಷ್ಟು ಧನ್ಯಭಾವದಲ್ಲಿ ಬೆಳೆದು ಬಂದಿದೆ ಎಂಬ ಸಂಗತಿಯನ್ನು ಗೊರೂರರವರ ಕೃತಿಗಳಲ್ಲಿ ವಿಶೇಷವಾಗಿ ಕಾಣಬಹುದು. ರೈತನ ಹೋರಾಟದ ಬದುಕಿನಲ್ಲಿ ಸರ್ಕಾರದ ಸಹಕಾರದ ಪಾತ್ರವನ್ನು ಇಂದು ಪ್ರಮುಖವಾಗಿ ಗುರುತಿಸಬಹುದು. ಕೃಷಿಕನ ಜೀವನದಲ್ಲಿ ಕುಟುಂಬ ಸಾಮರಸ್ಯ ಮತ್ತು ಸಾಮಾಜಿಕ ಸಾಮರಸ್ಯದ ಬಗ್ಗೆ ಗೊರೂರರವರು

ಕೊಡುವ ಅಭಿಪ್ರಾಯಗಳ ವಿವರಣೆ ಮಹಾಪ್ರಬಂಧದಲ್ಲಿ ಇದೆ. ಗೊರೂರರವರ ದೃಷ್ಟಿಯಲ್ಲಿ ಅಧ್ಯಾತ್ಮಿಕ ಯೋಗಿಯಷ್ಟೇ ನೇಗಿಲಯೋಗಿಯು ಮಾನ್ಯನಾಗಿರುವುದು ಸ್ಪಷ್ಟವಾಗಿದೆ. ವಸಾಹತುಶಾಹಿ ಪ್ರಭಾವ ಕೃಷಿಕನ ಬದುಕಿನಲ್ಲಿ ತಂದಿರುವ ಬದಲಾವಣೆಗಳನ್ನು ಹಾಗೂ ಅದಕ್ಕೆ ಗೊರೂರರವರು ನೀಡಿರುವ ಪ್ರತಿಕ್ರಿಯೆಗಳನ್ನು ಕಾಣಬಹುದು. ಇಂದಿನ ಜಾಗತೀಕರಣಕ್ಕೂ ಅನ್ವಯವಾಗಬಹುದಾದಂತ ಕೃಷಿ ಸಂಬಂಧಿ ಸಮಸ್ಯೆಗಳು ಗೊರೂರರವರ ಸಾಹಿತ್ಯ ಕೃತಿಗಳಲ್ಲಿ ಮೂಡಿ ಬಂದಿದೆ.

ಗ್ರಾಮೀಣ ಸಮಾಜದಲ್ಲಿ ಕಂಡುಬರುವ ಶಿಕ್ಷಣ ಪದ್ಧತಿಯಲ್ಲಿ ಬಹುಮಟ್ಟಿಗೆ ಗುರುಕುಲ ಪದ್ಧತಿಯ ಸಂಸ್ಕಾರವನ್ನು ಕಾಣುತ್ತೇವೆ. ಇದರ ಜತೆಗೆ ಕೆಲವು ಅಡೆತಡೆಗಳ ತೊಡುಕುಗಳನ್ನು ಗ್ರಾಮೀಣ ಶಿಕ್ಷಣದಲ್ಲಿ ಗುರುತಿಸಬಹುದು. ಈ ವಿಷಯಗಳ ಚಿಂತನೆಯಲ್ಲಿ ಗೊರೂರರವರು ಗ್ರಾಮೀಣ ಶಿಕ್ಷಣ ಪದ್ಧತಿಯನ್ನು ತಮ್ಮ ಕೃತಿಗಳಲ್ಲಿ ವಿವರಿಸಿದ್ದಾರೆ. ಗ್ರಾಮೀಣ ಜನತೆಗೆ ಅವಶ್ಯವಾದ ಶಿಕ್ಷಣವನ್ನು ಕೊಡುವುದರಲ್ಲಿ ಶಿಕ್ಷಣದಲ್ಲಿ ಆಗಬೇಕಾದ ಸುಧಾರಣೆಯ ವಿಚಾರಗಳನ್ನು ಗೊರೂರರವರು ಸೂಚಿಸಿದ್ದಾರೆ. ಆಧುನಿಕತೆ - ಶಿಕ್ಷಣ ಗ್ರಾಮಸಮಾಜದಲ್ಲಿ ಸೃಷ್ಟಿಸಿದ ಬಿಕ್ಕಟ್ಟುಗಳನ್ನು ತವಕ ತಲ್ಲಣಗಳನ್ನು, ಪಲ್ಲಟ ಗಳನ್ನು, ಸ್ಥಿತ್ಯಂತರಗಳನ್ನು ಹಾಗೂ ಸಂಕಟಗಳನ್ನು ಒಳಿತು ಕೆಡಕುಗಳನ್ನು ವಿಚಾರ ಮಾಡಲಾಗಿದೆ. ಗ್ರಾಮಸಮಾಜದ ಯಾವುದೇ ರೀತಿಯ ಪಲ್ಲಟಗಳಿಗೂ ಶಿಕ್ಷಣವೇ ಮೂಲಕಾರಣ ಹಾಗೂ ಆಧುನಿಕತೆಯ ಭ್ರಮೆಯೇ ಮುಖ್ಯ ಕಾರಣ ಎನಿಸುತ್ತದೆ. ಗೊರೂರರವರ ಅಭಿಪ್ರಾಯದಲ್ಲಿ ಗ್ರಾಮಸಮಾಜಕ್ಕೆ ಅವಶ್ಯವಾಗಿ ಬೇಕಾಗುವ ಶಿಕ್ಷಣ ಅವರ ವೃತ್ತಿ ಜೀವನಕ್ಕೆ ಮತ್ತು ವ್ಯಾವಹಾರಿಕ ಜೀವನಕ್ಕೆ ಪೂರಕವಾದ ಶಿಕ್ಷಣವೇ ಹೊರತು ಅವರ ಜೀವನಕ್ಕೆ ಭಾರವಾದ ಶಿಕ್ಷಣ ಅಲ್ಲ ಎನ್ನುತ್ತಾರೆ. ಆಧುನಿಕ ಶಿಕ್ಷಣ ಪದ್ಧತಿಯನ್ನು ಗ್ರಾಮೀಣ ಸಮಾಜದಲ್ಲಿ ಇಂದು ಗಮನಿಸಿದಾಗ ಗ್ರಾಮೀಣ ಮಕ್ಕಳು ನಗರದ ಮಕ್ಕಳಿಗಿಂತ ಶಿಕ್ಷಣದಲ್ಲಿ ಹೆಚ್ಚಿನ ಯಶಸ್ಸನ್ನು ತೋರಿಸಿರುವುದು ನಮಗೆ ಮನವರಿಕೆಯಾಗುತ್ತದೆ.

ಗ್ರಾಮಸಮಾಜ ಏಕತ್ರ ಘಟಕವಲ್ಲ. ಅದು ವಿಭಿನ್ನ ಜಾತಿ, ಧರ್ಮ, ಭಾಷೆ, ಜನಸಮೂಹವನ್ನು ಒಳಗೊಂಡಿದೆ. ಇವೆಲ್ಲವುಗಳ ಒಟ್ಟು ಸ್ವರೂಪವೇ ಗ್ರಾಮಸಮಾಜ. ಗ್ರಾಮೀಣ ಸಮಾಜದಲ್ಲಿ ಕಂಡುಬರುವ ಜಾತಿ ವ್ಯವಸ್ಥೆಯ ವಿಷಯವನ್ನು ವಿಚಾರ ಮಾಡುವಾಗ ಜಾತಿ ಸಾಮರಸ್ಯವನ್ನು ಬಹುಮಟ್ಟಿಗೆ ಮೆಚ್ಚುಗೆಯ ಅಂಶವಾಗಿ ಲೇಖಕರು ಗುರುತಿಸಿದ್ದಾರೆ. ಬೇರೆ ಬೇರೆ ಜಾತಿಯವರು ತಮ್ಮ ಹಬ್ಬ - ಹರಿದಿನಗಳನ್ನು ಆಚರಿಸುವಾಗ ತೋರಿಸುವ ಉತ್ಸಾಹ ಹಾಗೂ ಸಾಮರಸ್ಯ ಗಣನೀಯವಾದುದು. ಜಾತಿಯ ವೈಷಮ್ಯ ಗೋಚರವಾದರು ಅದು ಕ್ಷಣಕಾಲದಲ್ಲಿ ಪರಿಹಾರವಾಗುತ್ತದೆ ಎಂಬುದು ಗೊರೂರರವರ ಕೃತಿಗಳಲ್ಲಿ ಸಾಬೀತಾಗಿದೆ. ಹೊಲೆಯರನ್ನು ಉದ್ಧಾರ ಮಾಡುವ ರೀತಿ ಇವರ ಕೃತಿಗಳಲ್ಲಿ ವಿನೂತನವಾಗಿ ಕಂಡುಬರುತ್ತದೆ. ಕೀಳು ಜಾತಿಯವರು ನಿರೀಕ್ಷಿಸುವುದು ಧರ್ಮದ ಉಪದೇಶವಲ್ಲ, ಅರ್ಥವಿಲ್ಲದ ಅನುಕಂಪೆಯ ಮಾತಲ್ಲ ಸೌಜನ್ಯದ ವರ್ತನೆ ಎಂಬುದನ್ನು ಗೊರೂರರವರು ತಮ್ಮಲ್ಲಿ ಕೃತಿಗಳಲ್ಲಿ

ಸ್ಪಷ್ಟಪಡಿಸಿದ್ದಾರೆ. ಕೆಳಜಾತಿಯವರ ಬಗ್ಗೆ ಮಾತನಾಡುವಾಗ ಗೊರೂರರವರು ಬ್ರಾಹ್ಮಣರ ಕೆಲವು ಧೋರಣೆಗಳನ್ನು ಖಂಡಿಸಿದ್ದಾರೆ. ವರ್ಗ ವ್ಯವಸ್ಥೆಯನ್ನು ವೈಚಾರಿಕವಾಗಿ ಗೊರೂರರವರು ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ. ಶೋಷಿತ ವರ್ಗದ ಬಗ್ಗೆ ಗೊರೂರರವರು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿರುವ ಮಾನವೀಯ ದೃಷ್ಟಿ ಹೆಚ್ಚು ಮಾನ್ಯವು ವಿಶೇಷವು ಆಗಿದೆ. ಗೊರೂರರವರು ಹೆಣ್ಣು - ಗಂಡು ಜೀವನ ಸಾಮರಸ್ಯದ ಮೇಲೆ ನೀಡಿರುವ ವೈಚಾರಿಕ ಬೆಳಕು ಅತ್ಯಂತ ಸಮರ್ಪಕವಾಗಿದೆ.

ಧರ್ಮ- ನಂಬಿಕೆ - ಆಚರಣೆಗಳನ್ನು ಗ್ರಾಮಸಮಾಜದ ಹಿನ್ನೆಲೆಯಲ್ಲಿ ಗೊರೂರರವರು ಪರಿಭಾವಿಸಿರುವ ರೀತಿ ತಾರ್ಕಿಕವಾಗಿರುವುದರ ಜತೆಗೆ ವಿವರಣಾತ್ಮಕವಾಗಿಯು ಇದೆ. ಧರ್ಮ ವ್ಯಕ್ತಿ ಹಾಗೂ ಸಮಾಜವನ್ನು ಬದುಕಿಸಿ ಪಾಲಿಸುವ ವಿಶಿಷ್ಟ ಶಕ್ತಿ ಎಂಬ ಸಂಗತಿಯನ್ನು ಅವರು ಒಪ್ಪಿ ಸಾದರಪಡಿಸುತ್ತಾರೆ. ಧರ್ಮ ಹಾಗೂ ಹಬ್ಬಗಳ ಆಚರಣೆಗಳು ಎಷ್ಟು ಅರ್ಥಪೂರ್ಣವಾಗಿರಬೇಕು ಎಂಬ ಅಂಶವನ್ನು ಗೊರೂರರವರು ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಗ್ರಾಮೀಣ ಜನತೆಯಲ್ಲಿ ಕಂಡುಬರುವ ವಿಶಿಷ್ಟ ನಂಬಿಕೆಗಳನ್ನು ಇಂದು ನಾವು ಪರ್ಯಾಲೋಚಿಸಿದಾಗ ಎಷ್ಟು ಸಂಮಜಸವಾಗಿದೆ ಎಂಬ ಸಂಗತಿ ಚರ್ಚಿತವಾಗಿದೆ. ಗೊರೂರರವರು ಉತ್ತಮ ಜಾತಿಯಲ್ಲಿ ಹುಟ್ಟಿದವರಾದರು ಧರ್ಮ ಆಚರಣೆಯಲ್ಲಿ ಸ್ವತಂತ್ರ ಬುದ್ಧಿಯನ್ನು ಹಾಗೂ ವೈಚಾರಿಕತೆಯನ್ನು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ. ಅವರ ದೃಷ್ಟಿಯಲ್ಲಿ ಧರ್ಮ ಪುರಾಣದ ಹೇಳಿಕೆಯಷ್ಟೇ ಆಗಿ ಉಳಿಯಬಾರದು ಅದು ಒಳ್ಳೆಯ ಜೀವನ ನಿರ್ವಹಣೆಗೆ ಅನುಕೂಲಕರವಾದ ಜೀವನ ಕಲೆಯನ್ನು ತೋರಿಸುವುದೇ ಧರ್ಮವೆಂದು ತಮ್ಮ ಅಭಿಪ್ರಾಯವನ್ನು ಲೇಖಕರು ಸೂಚಿಸುತ್ತಾರೆ. ಕುರಡು ಧರ್ಮಾಚರಣೆ ಅರ್ಥಹೀನ ಎನ್ನುವುದಕ್ಕಿಂತ ಅತ್ಯಂತ ಅಪಾಯಕಾರಿ ಎಂಬುದು ಗೊರೂರರವರ ಎಚ್ಚರಿಕೆಯ ದನಿಯಾಗಿದೆ. ಮೂಢನಂಬಿಕೆಗಳಿಂದ ಬರುವ ಅಪಾಯಗಳನ್ನು ತಡೆಗಟ್ಟುವ ಸಲುವಾಗಿ ಗೊರೂರರವರು ಜೀವನದ ನಂಬಿಕೆಗಳನ್ನು ವೈಚಾರಿಕ ಹಿನ್ನೆಲೆಯಲ್ಲಿ ವಿಚಾರ ಮಾಡಿದ್ದಾರೆ.

ಕಲೆ ಪಕ್ವ ಮನಸ್ಸಿನ ಕ್ಷೇಮ ಮನಸ್ಸಿನ ವಿಶಿಷ್ಟ ಕಲ್ಪನೆಯ ಮೂರ್ತಿರೂಪ ಎಂಬ ಸಿದ್ಧಾಂತವನ್ನು ಗ್ರಾಮೀಣ ಕಲೆಯ ಬಗ್ಗೆ ವಿಚಾರ ಮಾಡುವಾಗ ಗೊರೂರರವರು ಸಾಧಿಸಿ ತೋರಿಸಿದ್ದಾರೆ. ಸಂಸ್ಕೃತಿ ನಾಗರಿಕತೆಯ ವಿಕಾಸದಲ್ಲಿ ಗ್ರಾಮೀಣ ಕಲೆಯ ಮಹತ್ವದ ಪಾತ್ರವನ್ನು ಅವರು ಕಂಡಂತೆ ವಿವರಿಸಿದ್ದಾರೆ. ಗೊರೂರರವರು ಸಂಗ್ರಹಿಸಿರುವ ಜಾನಪದ ಸಾಹಿತ್ಯ ಗ್ರಾಮೀಣ ಸಂಸ್ಕೃತಿಗೆ ಹಿಡಿದ ವಿಶೇಷ ಕನ್ನಡಿಯಾಗಿದೆ. ಹಬ್ಬ-ಹರಿದಿನಗಳಲ್ಲಿ ಗ್ರಾಮೀಣ ಜನತೆ ಅಭಿವ್ಯಕ್ತಿಸುವ ಜನಪದ ಕಲೆಗಳು ಹೇಗೆ ಕಲಾವಂತಿಕೆಯಿಂದ ಕೂಡಿದೆ ಎಂಬುದನ್ನು ಗೊರೂರರವರ ಕೃತಿಗಳಲ್ಲಿ ಮನದಣಿಯೆ ಕಾಣಬಹುದು. ಗ್ರಾಮೀಣ ಕಲೆಗಳು ವಿಶ್ವ ಸಂಸ್ಕೃತಿಗೆ ಹೇಗೆ ವಿಶಿಷ್ಟ ಕೊಡುಗೆಗಳಾಗಿವೆ ಎಂಬುದನ್ನು ಗೊರೂರರವರು ಸಾಬೀತುಪಡಿಸಿರುವ ರೀತಿ ಸಮಂಜಸವಾಗಿದೆ.

ಗ್ರಾಮಸಮಾಜದ ವಿವಿಧ ನೆಲೆಗಳ ವಿಷಯವನ್ನು ವಿಶ್ಲೇಷಿಸಿದಾಗ ಅದು ಕೆಲವೊಮ್ಮೆ ಆಧುನಿಕ ದೇಶಿ ಚಿಂತನೆಯೊಂದಿಗೆ ಸಂವಾದಿಯಾಗಿರುವುದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ಗೊರೂರವರು ದೇಸಿ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದರಲ್ಲಿ ಪಟ್ಟಿರುವ ಶ್ರಮವನ್ನು ಕಂಡುಕೊಳ್ಳಲಾಗಿದೆ. ಗೊರೂರವರ ಈ ಅಭಿಮತವನ್ನು ಪುನರ್ಮೌಲ್ಯ ದೃಷ್ಟಿಯಿಂದ ವಿಶೇಷ ಕಾರಣಗಳೊಂದಿಗೆ ಪುಷ್ಟೀಕರಿಸಲಾಗಿದೆ.

ಗೊರೂರವರು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿರುವ ಗ್ರಾಮಸಮಾಜದ ಸ್ವರೂಪವನ್ನು ಪೂರ್ಣ ದೃಷ್ಟಿಯಲ್ಲಿ ಪರಿಭಾವಿಸಿದಾಗ ಸ್ವಾತಂತ್ರ್ಯಪೂರ್ವ ಗ್ರಾಮೀಣ ಸ್ವರೂಪವನ್ನು ಕಾಣಬಹುದು. ಪುರಾತನ ಹಳ್ಳಿಗಳ ಸಮಸ್ಯೆಯ ಜತೆಗೆ ಗ್ರಾಮೀಣ ಸಮಾಜದ ಪುರಾತನ ಸಂಸ್ಕೃತಿಯ ಸ್ವರೂಪವನ್ನು ನಾವು ಈ ಹಳ್ಳಿಗಳಲ್ಲಿ ಗುರುತಿಸಬಹುದು. ಗ್ರಾಮೀಣ ಸಮಾಜದ ಸ್ವರೂಪವನ್ನು ತಿಳಿಯುವ ಆಸಕ್ತರಿಗೆ ಗೊರೂರವರ ಕೃತಿಗಳು ಪೂರ್ಣ ಸಮಾಧಾನವನ್ನು ತಂದುಕೊಡುತ್ತದೆ. ಕಲೆ ಮತ್ತು ಸಂಸ್ಕೃತಿಯ ಸೊಬಗಿನ ಜತೆಗೆ ಹಳ್ಳಿಯ ಸಮಸ್ಯೆಗಳು ಜನರ ಜೀವನದ ತೊಡಕುಗಳು ನಮ್ಮ ಕಣ್ಣನ್ನು ತೆರೆಸುತ್ತವೆ ಹಾಗೂ ವೈಚಾರಿಕತೆಯನ್ನು ಪ್ರಚೋದಿಸುತ್ತದೆ.

ಗೊರೂರವರು ಚಿತ್ರಿಸಿರುವ ಹಳ್ಳಿಯ ಚಿತ್ರಣ ನಮ್ಮನ್ನು ಪ್ರಗತಿ ಪರವಾಗಿ ಆಲೋಚಿಸುವಲ್ಲಿ ವಿಶೇಷವಾಗಿ ಪ್ರಚೋದಿಸುತ್ತದೆ. ಹಳ್ಳಿಯವರ ಅಜ್ಞಾನ, ಸರ್ಕಾರದ ಅಲಕ್ಷ್ಯ ಗ್ರಾಮೀಣ ಸಮಸ್ಯೆಗಳಿಗೆ ಮೂಲಭೂತ ಕಾರಣ ಅನಿಸಿದಾಗ ನಾವು ಗ್ರಾಮೀಣ ಜನತೆಗೆ ಸೂಕ್ತ ಜಾಗೃತ ಪ್ರಜ್ಞೆಯನ್ನು ಇಂದು ತಿಳಿಸಿಕೊಡಬೇಕಾದದ್ದು ಅವಶ್ಯವೆನಿಸುತ್ತದೆ. ಈ ದಿಶೆಯಲ್ಲಿ ಶಿಕ್ಷಣದ ಪಾತ್ರ ಅತ್ಯಂತ ಪ್ರಮುಖವೆನಿಸುತ್ತದೆ. ಇಂದು ಅಮೂಲ್ಯ ಸಂಸ್ಕೃತಿಯ ನೆಲೆಯಾದ ಗ್ರಾಮೀಣ ಪರಿಸರದಿಂದ ಯುವಕರು ನಗರದ ಪರಿಸರಕ್ಕೆ ವಲಸೆ ಹೋಗುತ್ತಿರುವುದು ನಮ್ಮ ಹಳ್ಳಿಗಳ ಸಮಸ್ಯೆಗಳಿಗೆ ಬಹುಮಟ್ಟಿಗೆ ಕಾರಣವಾಗಿದೆ. ವಿದ್ಯೆ ಮತ್ತು ಉದ್ಯೋಗದ ಸಲುವಾಗಿ ನಗರಕ್ಕೆ ಬಂದಿರುವ ಯುವಕರು ತಮ್ಮ ಮೂಲ ನೆಲೆಯಾದ ಗ್ರಾಮೀಣ ಪರಿಸರವನ್ನು ಸಂಪೂರ್ಣ ಮರೆಯುವುದು ಗ್ರಾಮೀಣ ಸಮಾಜದ ಪ್ರಗತಿಯ ದೃಷ್ಟಿಯಿಂದ ಅತ್ಯಂತ ವಿಷಾದನೀಯ ಸಂಗತಿಯಾಗಿದೆ. ಇದಕ್ಕೆ ಬದಲಾಗಿ ತಮ್ಮ ವೈಯಕ್ತಿಕ ಬದುಕನ್ನು ನಗರದ ಪರಿಸರದಲ್ಲಿ ಸುಧಾರಿಸಿಕೊಂಡ ಯುವಕರು ತಮ್ಮ ಗ್ರಾಮೀಣ ಪರಿಸರದಲ್ಲಿಯು ಸೂಕ್ತ ಪರಿವರ್ತನೆಗಳನ್ನು ಮಾಡಲು ಉತ್ಸಾಹಶಾಲಿಗಳಾಗಬೇಕು. ಗ್ರಾಮೀಣ ಪರಿಸರದೊಂದಿಗೆ ಅಭಿಮಾನದ ಸಂಬಂಧವನ್ನು ಯುವಕರು ಉಳಿಸಿಕೊಂಡಾಗಲೇ ಅವರ ಗ್ರಾಮಗಳ ಸ್ಥಿತಿ ಸುಧಾರಿತವಾಗುತ್ತದೆ, ಸಂಸ್ಕೃತಿ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ನಮ್ಮ ಪ್ರಜಾಪ್ರಭುತ್ವ ಸರ್ಕಾರವು ಸಹ ಗ್ರಾಮೀಣ ಜನತೆಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ ಕೊಡುವುದರಲ್ಲಿ ಮುಂದಾಗಬೇಕು. ನಗರಜೀವನದ ವೈಭವಕ್ಕೆ ಪ್ರಗತಿಗೆ ಕೇವಲ ಆದ್ಯತೆಯನ್ನು ಕೊಟ್ಟು ಹಳ್ಳಿಗಳ ಸ್ಥಿತಿಯನ್ನು ಮರೆತಿದ್ದೆ ಆದರೆ ನಂತರ ಕಾಲದಲ್ಲಿ ನಗರದ ಜೀವನ ಹೊಸ ಸಮಸ್ಯೆಗಳಿಗೆ ಬಲಿಯಾಗುತ್ತದೆ. ಈ ಕಾರಣದಿಂದಲೇ ಗಾಂಧೀಜಿಯವರು ವಿದ್ಯಾವಂತ ಯುವಕರನ್ನು ಗ್ರಾಮೀಣ

ಪರಿಸರಕ್ಕೆ ಹಿಂತಿರುಗಿ ಗ್ರಾಮೀಣ ಜನತೆಯ ಜೀವನವನ್ನು ಸುಧಾರಿಸುವಲ್ಲಿ ಸಕ್ರಿಯ ವ್ಯಕ್ತಿಗಳಾಗಿ ಎಂದು ಸಂದೇಶ ನೀಡಿದ್ದನ್ನು ನಾವು ಸದಾ ಸ್ಮರಿಸಬೇಕು. ಕಟ್ಟಿದ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟುವುದರ ಬದಲು ಕಟ್ಟಿದ ಮನೆಯನ್ನು ಉಳಿಸಿಕೊಂಡು ಹೊಸ ಮನೆಯನ್ನು ಕಟ್ಟುವುದು ಜಾಣತನದ ಲಕ್ಷಣ ಎಂಬಂತೆ ನಮ್ಮ ಪುರಾತನ ಹಳ್ಳಿಗಳು ಸಮಸ್ಯೆಯಿಂದ ಮುಕ್ತವಾಗಿ ಉಳಿದು ನಮ್ಮ ಪಟ್ಟಣಗಳು ಅಭಿವೃದ್ಧಿಯನ್ನು ಕಂಡುಕೊಳ್ಳಬೇಕಾದ ಸಂಗತಿ ಇಂದು ಅನಿವಾರ್ಯ ಎನಿಸಿದೆ. ಈ ಅಂಶಗಳನ್ನೇ ನಮ್ಮ ಹಳ್ಳಿಗಳ ಉದ್ಧಾರದ ಮುಂದಿನ ಸಾಧ್ಯತೆಯ ಮೆಟ್ಟಿಲುಗಳೆಂದು ನಾವು ನಿಶ್ಚಿಸಬಹುದು.

ಅನುಬಂಧ

I. ಗೊರೂರವರ ಜೀವನದ ಪ್ರಮುಖ ಘಟ್ಟಗಳು

II. ಗೊರೂರವರ ಸಾಹಿತ್ಯ ಕೃತಿಗಳು

III. ಪರಾಮರ್ಶನ ಗ್ರಂಥಗಳು

IV. ಪರಾಮರ್ಶನ ಲೇಖನಗಳು

ಅನುಬಂಧ

I. ಗೊರೂರವರ ಜೀವನದ ಕೆಲವು ಪ್ರಮುಖ ಘಟ್ಟಗಳು

೧೯೦೪ : ಜುಲೈ ೪ ಜನನ

೧೯೨೧ : ಗಾಂಧೀಜಿಯವರೊಡನೆ ಭೇಟಿ

೧೯೨೩ : ಮದುವೆ

೧೯೩೦ : 'ಹಳ್ಳಿಯ ಚಿತ್ರಗಳು' ಮೊದಲ ಕೃತಿ ಬಿಡುಗಡೆ

೧೯೩೨ : 'ನಮ್ಮೂರಿನ ರಸಿಕರು' ಕೃತಿ ಪ್ರಕಟಣೆ

೧೯೩೮ : 'ಹಳ್ಳಿಯ ಹಾಡುಗಳು' ಮತ್ತು 'ಹಳ್ಳಿಯ ಬಾಳು' ಕೃತಿಗಳ ಪ್ರಕಟಣೆ

೧೯೪೦ : ಮದ್ರಾಸ್ ವಿಶ್ವವಿದ್ಯಾಲಯದ ವಿದ್ವಾನ್ ಪರೀಕ್ಷೆ

೧೯೪೨ : ಸೆರೆಮನೆ ವಾಸ

೧೯೪೭ : 'ಮೆರವಣಿಗೆ' ಕಾದಂಬರಿ ಪ್ರಕಟಣೆ ಮತ್ತು ಮತ್ತೆ ಸೆರೆಮನೆ ವಾಸ. ಮಗ ಶ್ರೀರಾಮಚಂದ್ರ ಪೋಲೀಸರ ಗುಂಡೇಟಿನಿಂದ ತೀರಿಕೊಂಡಿದ್ದು.

೧೯೫೨ : ವಿಧಾನ ಪರಿಷತ್ತಿನ ಸದಸ್ಯತ್ವ

೧೯೫೪ : ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯತ್ವ

೧೯೬೭ : ತರೀಕೆರೆಯಲ್ಲಿ ಜರುಗಿದ ಮೊದಲನೆ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ

೧೯೬೯ : ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ

೧೯೭೧ : ಹಾಸನ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ

೧೯೭೩ : 'ಗೊರೂರು ಗೌರವ ಗ್ರಂಥ'ದ ಪ್ರಕಟಣೆ

೧೯೭೭ : ಅಮೆರಿಕ ಪ್ರವಾಸ

೧೯೮೦ : 'ಅಮೆರಿಕದಲ್ಲಿ ಗೊರೂರು' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೮೨ : ಸಿರಸಿ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಹಾಗೂ ಮೈಸೂರು ವಿಶ್ವವಿದ್ಯಾಲಯ ಗೌರವ ಪೂರ್ವಕ ಡಾಕ್ಟೊರೇಟ್ ಪದವಿ

೧೯೯೧ : ಸೆಪ್ಟೆಂಬರ್ ೨೮ ನಿಧನ

೧೯೯೧ : ಕನ್ನಡ ರಾಜ್ಯೋತ್ಸವ ಪ್ರಶಸ್ತಿ (ಮರಣೋತ್ತರ)

II. ಗೊರೂರವರ ಸಾಹಿತ್ಯ ಕೃತಿಗಳು

ಅ) ಕಥೆಗಳು

೧೯೪೬ : **ಶಿವರಾತ್ರಿ**; ಕಾವ್ಯಾಲಯ, ಮೈಸೂರು
(೧೯೯೯ ಮ.ಮು) ಅದೇ ಪ್ರಕಾಶನ

೧೯೪೭ : **ಚೆಸ್ತರ ಕರಿಯ**; ಕಾವ್ಯಾಲಯ, ಮೈಸೂರು

೧೯೫೪ : **ಉಸುಬು**; ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು

೧೯೬೪ : **ಗೋಪುರದ ಬಾಗಿಲು**; ರಾವ್ ಅಂಡ್ ಸನ್ಸ್, ಬೆಂಗಳೂರು

೧೯೬೬ : **ಕನ್ಯಾಕುಮಾರಿ ಮತ್ತು ಇತರ ಕತೆಗಳು**; ಶ್ರೀ ಲಕ್ಷ್ಮಿ ಬುಕ್‌ಹೌಸ್, ಮೈಸೂರು
(೨೦೦೪; ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯೬೭ : **ವೈಯಾರಿ**; ಶಾರದಾ ಮಂದಿರ, ಮೈಸೂರು
(೨೦೦೪ ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯೭೨ : **ಕತೆಗಳು ಮತ್ತು ವಿನೋದ ಚಿತ್ರಗಳು**; ಜನಮಿತ್ರ ಪ್ರಕಾಶನ, ಹಾಸನ

೧೯೭೯ : **ಮರೆಯಾದ ಮಾರಮ್ಮ**; ಬಾಪ್ಕೊ ಪಬ್ಲಿಕೇಷನ್ಸ್, ಬೆಂಗಳೂರು
(೨೦೦೪ ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೨೦೦೪ : (ಮ.ಮು) **ಕಮ್ಮಾರ ವೀರಭದ್ರಾಚಾರಿ**; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಆ) ಕಾದಂಬರಿಗಳು

೧೯೪೭ : **ಮೆರವಣಿಗೆ**; ಸತ್ಯಶೋಧನ ಪ್ರಕಟಣಾಲಯ, ಬೆಂಗಳೂರು
(೨೦೦೫; ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯೪೮ : **ಹೇಮಾವತಿ**; ಶಾರದಾ ಮಂದಿರ, ಮೈಸೂರು
(೨೦೦೪; ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯೫೦ : **ಪುನರ್ಜನ್ಮ**; ಮಾರುತಿ ಪುಸ್ತಕ ಮಂದಿರ, ಬೆಂಗಳೂರು
(೨೦೦೪; ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯೭೧ : **ಊರ್ವಶಿ**; ಶಾರದಾ ಮಂದಿರ, ಮೈಸೂರು
(೨೦೦೪; ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಇ) ಪ್ರಬಂಧಗಳು

೧೯೩೦ : **ಹಳ್ಳಿಯ ಚಿತ್ರಗಳು**; ಶಾರದ ಮಂದಿರ, ಮೈಸೂರು
(೨೦೦೪; ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯೩೨ : ನಮ್ಮೂರಿನ ರಸಿಕರು; ಶಾರದಾ ಮಂದಿರ, ಮೈಸೂರು
(೨೦೦೧; ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯೪೦ : ಗರುಡಗಂಬದದಾಸಯ್ಯ; ಸತ್ಯಶೋಧನ ಪ್ರಕಟಣ ಮಂದಿರ, ಬೆಂಗಳೂರು
(೨೦೦೪; ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯೬೬ : ಹೇಮಾವತೀ ತೀರದಲ್ಲಿ ಮತ್ತು ಇತರ ಪ್ರಬಂಧಗಳು; ಶ್ರೀಲಕ್ಷ್ಮಿ ಬುಕ್‌ಹೌಸ್, ಮೈಸೂರು
(೧೯೬೮; ಮ.ಮು) ಹೇಮಾವತೀ ಪ್ರಕಾಶನ ಮಂದಿರ, ಗೊರೂರು

೧೯೭೧ : ಬೈಲಹಳ್ಳಿಸರ್ವೆ; ಶಾರದಾ ಮಂದಿರ, ಮೈಸೂರು
(೨೦೦೪ ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯೭೨ : ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು; ಹೇಮಾವತೀ ಪ್ರಕಾಶನ, ಗೊರೂರು

೧೯೮೦ : ಹಳೆಯಪಳೆಯ ಮುಖಗಳು; ಗೀತಾ ಬುಕ್‌ಹೌಸ್, ಮೈಸೂರು
(೨೦೦೪ ಮ.ಮು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಈ) ಅನುವಾದ ಸಾಹಿತ್ಯ

i) ಕಥೆಗಳು

೧೯೩೬ : **ಪಾಶ್ಚಾತ್ಯ ಪುರಾತನ ಕಥೆಗಳು**; ಪ್ರೋಗ್ರೆಸ್ ಬುಕ್‌ಸ್ಟಾಲ್, ಮೈಸೂರು

೧೯೫೨ : **ಕೊನಷ್ಟೈ ಕಥೆಗಳು** (ಕೊನಷ್ಟೈ); ಸತ್ಯಶೋಧನ ಪ್ರಕಟಣ ಮಂದಿರ, ಬೆಂಗಳೂರು

ii) ಕಾದಂಬರಿಗಳು

೧೯೪೭ : **ಮಲೆನಾಡವರು** (ಕೌಂಟ್‌ಲಿಯೋ ಟಾಲ್‌ಸ್ಟಾಯ್); ಸತ್ಯಶೋಧನ ಪ್ರಕಟಣ ಮಂದಿರ, ಬೆಂಗಳೂರು

೧೯೫೭ : **ಕ್ರೌಂಚವಧ** (ವಿ.ಎಸ್. ಖಾಂಡೇಕರ್); ಸತ್ಯಶೋಧನ ಪ್ರಕಟಣ ಮಂದಿರ, ಬೆಂಗಳೂರು

೧೯೫೮ : **ಭಗವಾನ್ ಕೌಟಿಲ್ಯ** (ಕೆ.ಎಂ. ಮುನಿಷಿ); ಶಾರದಾ ಮಂದಿರ, ಮೈಸೂರು

೧೯೭೦ : **ರಾಜನರ್ತಕಿ** (ರಾಮಚಂದ್ರ ಠಾಕೂರ್); ಶಾರದಾ ಮಂದಿರ, ಮೈಸೂರು

iii) ಇತರ ಕೃತಿಗಳು

೧೯೩೧ : **ಶರೀರ ಸಾಧನಯೋಗ ಅಥವಾ ಸೌಖ್ಯದ ಗುಟ್ಟು** (ಎಸ್. ಸುಂದರಂ); ಬ್ರಹ್ಮಚರ್ಯ ಪ್ರಕಟನಾಲಯ, ಬೆಂಗಳೂರು

೧೯೪೦ : **ಭಕ್ತಿಯೋಗ** (ಸ್ವಾಮಿ ವಿವೇಕಾನಂದ); ಲಲಿತ ಸಾಹಿತ್ಯಮಾಲೆ, ಧಾರವಾಡ

೧೯೫೨ : **ಮಕ್ಕಳ ಪೋಷಣೆ** (ಚಕ್ರವರ್ತಿ ರಾಜಗೋಪಾಲಚಾರ್ಯರು); ರಾಮಚಂದ್ರ ಸ್ಮಾರಕ ಗ್ರಂಥಮಾಲೆ, ಗೊರೂರು

೧೯೫೫ : **ಜಗತ್ತಿನ ಮಹದ್ವ್ಯಕ್ತಿಗಳು**; ಮಾರುತಿ ಪುಸ್ತಕ ಮಂದಿರ, ಬೆಂಗಳೂರು

೧೯೬೭ : ಜಗದ್ಗುರುಗಳ ದಿವ್ಯಬೋಧೆ (ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಅವರ ಪ್ರವಚನಗಳ ಭಾಷಾಂತರ); ಹೇಮಾವತಿ ಪ್ರಕಾಶನ, ಗೊರೂರು

೧೯೭೩ : ಶ್ರೀ ಯೋಗನರಸಿಂಹಸ್ವಾಮಿ ದೇವಾಲಯದ ಮಹಿಮೆ ಮತ್ತು ಚರಿತ್ರೆ; ಮೈಸೂರು ಪ್ರಿಟಿಂಗ್ ಅಂಡ್ ಪಬ್ಲಿಕೇಷನ್ ಹೌಸ್, ಮೈಸೂರು

_____ : ತಾಯ್ನುಡಿಯಲ್ಲಿ ಶಿಕ್ಷಣ (ಶ್ರೀಮಾನ್ ನಾರಾಯಣ ಅಗರ್‌ವಾಲ); ರಾಷ್ಟ್ರೀಯ ಸಮಿತಿ, ಗೊರೂರು

ಉ) ಗಾಂಧಿ ಸಾಹಿತ್ಯ

೧೯೪೧ : ಪೂರ್ಣ ಸ್ವದೇಶಿ (ಮೋ.ಕ. ಗಾಂಧಿ); ಮೈಸೂರು ಗ್ರಾಮಸಂಘ, ಗೊರೂರು

೧೯೪೪ : ಸತೀ ಕಸ್ತೂರಿ ಬಾ; ರಾಷ್ಟ್ರೀಯ ಸಮಿತಿ, ಗೊರೂರು

೧೯೪೯ : ಮಹಾತ್ಮಾ ಗಾಂಧಿಯವರ ದಕ್ಷಿಣ ಯಾತ್ರೆ; ಮಿಂಚನಬಳ್ಳಿ, ಧಾರವಾಡ

೧೯೫೩ : ಮೌಲಾನಾ ಅಬುಲ್ ಕಲಾಂ ಅಜಾದ್; ಮಾರುತಿ ಪುಸ್ತಕ ಮಂದಿರ, ಬೆಂಗಳೂರು

೧೯೫೪ : ಮಹದೇವ ದೇಸಾಯಿಯವರ ಕೃತಿಗಳು; ಮಾರುತಿ ಪುಸ್ತಕ ಮಂದಿರ, ಬೆಂಗಳೂರು

೧೯೫೬ : ಭಾರತ ಭಾಗ್ಯವಿಧಾತ; ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು

೧೯೫೭ : ಮದ್ಯಪಾನದಿಂದ ವಿಮೋಚನೆ (ಎಚ್.ಸಿ. ಮುಖರ್ಜಿ) ಹೇಮಾವತಿ ಪ್ರಕಾಶನ, ಗೊರೂರು

೧೯೫೮ : ಸತ್ಯ-ಅಹಿಂಸೆ (ಮೋ.ಕ. ಗಾಂಧಿ); ಗಾಂಧಿಸ್ಮಾರಕ ನಿಧಿ, ಕರ್ನಾಟಕ ಶಾಖೆ, ಮೈಸೂರು

೧೯೬೨ : ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ (ಮೋ.ಕ. ಗಾಂಧಿ); ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಶಾಖೆ, ಮೈಸೂರು

_____ : ಸ್ವಾತಂತ್ರವೇ ಧರ್ಮ; ರಾಷ್ಟ್ರೀಯ ಸಮಿತಿ, ಗೊರೂರು

ಊ) ವ್ಯಕ್ತಿಚಿತ್ರ

೧೯೮೮ : ರಸಫಲ; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಋ) ಪ್ರವಾಸ ಕಥನ

೧೯೭೯ : (೨೦೦೧ ಮ.ಮು) ಅಮೆರಿಕದಲ್ಲಿ ಗೊರೂರು; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ೠ) ವಿಮರ್ಶೆ

೧೯೪೨ : ಸಾಹಿತ್ಯದ ಜೇವಾಳ (ಷೋಪನ್ ಹೌರ); ಕಾವ್ಯಾಲಯ, ಮೈಸೂರು

೧೯೬೩ : ಸಾಹಿತ್ಯ ರಶ್ಮಿ; ಸುದರ್ಶನ ಪ್ರಕಾಶನ, ತಿಪಟೂರು

ಎ) ಸಂಪಾದನೆ

೧೯೬೧ : ಹೊಸಗನ್ನಡ ಪ್ರಬಂಧ ಸಂಕಲನ; ಕನ್ನಡ ಕಾವ್ಯಮಾಲೆ, ಮೈಸೂರು

ಎ) ಜನಪದ ಸಾಹಿತ್ಯ

೧೯೩೮ : **ಹಳ್ಳಿಯ ಹಾಡುಗಳು**; ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು (೧೯೯೯ ಮ.ಮು) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೯೪೩ : **ಹಳ್ಳಿಯ ಬಾಳು**; (೧೯೯೯ ಮ.ಮು) ಕಾವ್ಯಾಲಯ, ಮೈಸೂರು

ಐ) ಲೇಖನಗಳು

೧೯೪೧ : **ಶ್ರೀ ರಾಮಾನುಜಾಚಾರ್ಯರು-ಹರಿಜನರೂ** (ಸಂಭಾವನೆ; ಬಿ.ಎಂ.ಶ್ರೀ.ಯವರಿಗೆ ಅವರ ಶಿಷ್ಯರು, ಮಿತ್ರರೂ ಒಪ್ಪಿಸಿದ ಪ್ರಬಂಧಗಳ ಸಂಪುಟ); ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೯೫೭ : **ನಿಕಟ ಪರಿಚಯ** (ಶ್ರದ್ಧಾಂಜಲಿ; ಮುಳಿಯ ತಿಮ್ಮಪ್ಪಯ್ಯ ಸ್ಮಾರಕ - ಗ್ರಂಥ); ತೆಕ್ಕುಂಜ ಗೋಪಾಲಕೃಷ್ಣಭಟ್, ಮುಳಿಯ ತಿಮ್ಮಪ್ಪಯ್ಯ ಸ್ಮಾರಕ ಸಮಿತಿ, ಮಂಗಳೂರು

೧೯೬೫ : **ಚಿತ್ರಭಾನು ಅಥವಾ ೧೯೪೨** (ದೀವಿಗೆ ಭಾಗ-೧, (ಸಂ); ಆರ್.ರಾಮದೇವ ಶೆಣೈ); ಎಂ. ಗೋವಿಂದ ಪೈ ಸ್ಮಾರಕ ನಿಧಿ, ಕುಂದಾಪುರ ದ.ಕ.

೧೯೬೭ : **ಜನಪದ ಸಾಹಿತ್ಯದಲ್ಲಿ ಹಾಸ್ಯ** (ಹೊನ್ನು ಬಿತ್ತೇವು ಹೊಲಕೆಲ್ಲ; ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನ ಸಂಸ್ಮರಣ ಗ್ರಂಥ); ಸಾಹಿತ್ಯ ಸಮಿತಿ, ತರೀಕೆರೆ

೧೯೬೭ : **ನಾಲಡಿಯಾರ್** (ಉಪಾಯನ; ಪ್ರೊ.ಡಿ.ಎಲ್. ನರಸಿಂಹಾಚಾರ್ ಅವರಿಗೆ ಅವರ ಮಿತ್ರರು, ಶಿಷ್ಯರೂ ಒಪ್ಪಿಸಿದ ಪ್ರಬಂಧಗಳ ಸಂಪುಟ); ಪ್ರೊ. ಡಿ.ಎಲ್.ಎನ್. ಸಂಭಾವನಾ ಗ್ರಂಥ ಪ್ರಕಾಶನ ಸಮಿತಿ, ಬೆಂಗಳೂರು

೧೯೬೮ : **ಮೋತಿಲಾಲ್ ನೆಹ್ರೂ** (ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ; (ಸಂ); ಹಾಮಾ ನಾಯಕ); ದೇಜಗೌ ಗೆಳೆಯರ ಬಳಗದ ಪ್ರಕಟಣೆ, ಮೈಸೂರು

೧೯೭೦ : **ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯನವರ ನೆನಪಿಗೆ** (ಸವಿನೆನಪು; ಟಿ.ಎಸ್. ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ); ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು

೧೯೭೦ : **ಆರೋಗ್ಯಕರವಾದ ಸಮಾಜ ವ್ಯವಸ್ಥೆಗೆ, ಆರೋಗ್ಯಕರವಾದ ತಳಪಾಯ** (ಮಹಾತ್ಮಾಗಾಂಧಿ ನೂರು ವರ್ಷಗಳು; (ಸಂ); ಡಾ.ಎಚ್. ತಿಪ್ಪೇರುದ್ರಸ್ವಾಮಿ); ಗಾಂಧಿ ಭವನ, ಮಾನಸ ಗಂಗೋತ್ರಿ, ಮೈಸೂರು

೧೯೭೦ : **ತೊಗಲು ಗೊಂಬೆ ಮತ್ತು ಸೂತ್ರದ ಗೊಂಬೆ ಆಟಗಳು** (ಜಾನಪದ-೪, ಸಂಪುಟ-೨); ಕರ್ನಾಟಕ ಜಾನಪದ ಪರಿಷತ್ತು, ಮಾನಸ ಗಂಗೋತ್ರಿ, ಮೈಸೂರು

೧೯೭೧ : **ಕೃಷ್ಣಶಾಸ್ತ್ರಿಗಳ ಮಾರ್ಗ** (ಎ.ಆರ್.ಕೃ.: ಜೀವನ-ಸಾಧನೆ); ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು

೧೯೭೨ : **ಶ್ರೀನಿವಾಸರ ಸಣ್ಣಕತೆಗಳು** (ಶ್ರೀನಿವಾಸ; ಮಾಸ್ತಿಯವರ ಸಂಭಾವನಾ ಗ್ರಂಥ, (ಸಂ); ಮಾವಿನಕೆರೆ ರಂಗನಾಥ); ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು

೧೯೭೩ : **ಮೌಂಟ್ ಅಬು** (ಸ್ನೇಹಾಂಜಲಿ; ಎಂ.ಎಚ್. ಶಂಕರ ನಾರಾಯಣರ ಮೆಚ್ಚುಗೆ ಗ್ರಂಥ; (ಸಂ); ಪ್ರಧಾನ ಗುರುದತ್ತ); ರಾಯರ ಗೆಳೆಯರ ಬಳಗದ ಪ್ರಕಟಣೆ, ಮೈಸೂರು

೧೯೭೪ : **ಸೂತ್ರದ ಗೊಂಬೆ** (ಕಬ್ಬಿನ ಹಾಲು; ಕೆ.ವಿ. ಶಂಕರೇಗೌಡರ ಅಭಿನಂದನಾ ಗ್ರಂಥ); ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು

೧೯೭೬ : **ಸನ್ಮಿತ್ರ ತೀನಂಶ್ರೀ** (ಶ್ರೀಕಂಠತೀರ್ಥ; ತೀ.ನಂ.ಶ್ರೀ, ಸ್ಮಾರಕ ಗ್ರಂಥ); ತೀ.ನಂ.ಶ್ರೀ. ಸಂಸಾರವರ್ಗ, ಬೆಂಗಳೂರು

೧೯೭೭ : **ಬೇಂದ್ರೆಯವರ ವ್ಯಕ್ತಿತ್ವ** (ಇಳಿದು ಬಾ ತಾಯಿ; ಬೇಂದ್ರೆಯವರ ಅಭಿನಂದನಾ ಗ್ರಂಥ; (ಸಂ); ಬುದ್ದಣ್ಣ ಹಿಂಗಮಿರೆ); ಸಮಾಜ ಪುಸ್ತಕಾಲಯ, ಧಾರವಾಡ

೧೯೭೭ : **ಶಂಕರಭಟ್ಟರ ಗಾಂಧಿ ಸಂದೇಶ** (ವಾಙ್ಮಯ ತಪಸ್ವಿ; ಕಡೆಂಗೋಡ್ಲು ಶಂಕರಭಟ್ಟರ ಸ್ಮಾರಕ ಗ್ರಂಥ); ಡಿ.ವಿ.ಕೆ. ಮೂರ್ತಿ, ಮೈಸೂರು

೧೯೮೦ : **ಸಮೀಪ ಪರಿಚಯ** (ರಾಜಮಾರ್ಗ; ಜಿ.ಪಿ. ರಾಜರತ್ನಂ ಅವರ ನೆನಪಿಗಾಗಿ); ಡಾ.ಜಿ.ಪಿ. ರಾಜರತ್ನಂ ಸ್ಮಾರಕ ಸಮಿತಿ, ಬೆಂಗಳೂರು

೧೯೮೦ : **ಶತಾಯುವಾಗಲಿ** (ರಸಷಷ್ಠಿ; ದೇ.ಜ.ಗೌ. ಷಷ್ಟ್ಯಭಿನಂದನಾ ಗ್ರಂಥ; (ಪ್ರ.ಸಂ); ಕೆ.ವಿ. ಶಂಕರೇಗೌಡ); ಡಾ. ದೇಜಗೌ ಷಷ್ಟ್ಯಭಿನಂದನ ಸಮಿತಿ, ಮೈಸೂರು

೧೯೮೧ : **ನಂದಾದೀವಿಗೆ** (ಜೀವಂತ ಜ್ವಾಲೆ; ಶಾಂತವೇರಿ ಗೋಪಾಲಗೌಡ ಸ್ಮಾರಕ ಗ್ರಂಥ, (ಸಂ); ಕೋಣಂದೂರು ವೆಂಕಪ್ಪಗೌಡ); ಯಶಸ್ವಿನಿ ಪ್ರಕಾಶನ, ಬೆಂಗಳೂರು

೧೯೮೪ : **ಶುಭ ಹಾರೈಕೆ** (ನವನೀತ; ಪ್ರೊ. ವಿ.ಎಂ. ಇನಾಂದಾರ್ ಅಭಿನಂದನ, (ಸಂ); ಎಂ. ರಾಜಗೋಪಾಲಾಚಾರ್ಯ); ಗೀತಾಬುಕ್‌ಹೌಸ್, ಮೈಸೂರು

೧೯೮೫ : **ಬಿ.ಎಂ.ಶ್ರೀ. ಪರಿಚಯ ಮತ್ತು ನೆನಪು** (ಶ್ರೀನಿಧಿ; ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ನೆನಪಿನ ಸಂಪುಟ; (ಸಂ); ಡಾ.ಜಿ.ಎಸ್. ಶಿವರುದ್ರಪ್ಪ); ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

೧೯೮೬ : **ದೇವತಾ ಮನುಷ್ಯರು** (ವಿನಯೋನ್ನತಿ; (ಸಂ); ರಾಮೇಗೌಡ, ಪ್ರಧಾನ ಗುರುದತ್ತ); ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೯೮೭ : **ಸೂರ್ಯಾಸ್ತದಂತೆ - ಶಾಂತವಾಗಿ - ವಿಶ್ರಾಂತಿಗೈದ ಮಾಸ್ತಿ** (ಮಾಸ್ತಿ ಸ್ಮರಣೆ; (ಸಂ); ನಾ. ಗೀತಾಚಾರ್ಯ); ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

೧೯೮೮ : **ಕನ್ನಡದ ಕಟ್ಟಾ ಅಭಿಮಾನಿ** (ಶಿವಚಿಂತನ; ಡಾ. ಎಚ್. ತಿಪ್ಪೇರುದ್ರಸ್ವಾಮಿ ಅಭಿನಂದನಾ ಗ್ರಂಥ; (ಸಂ); ಮಳಲಿ ವಸಂತಕುಮಾರ್); ಜಗದ್ಗುರು ಸಾರಂಗಧರೇಶ್ವರ ಪ್ರಕಾಶನ, ಶ್ರೀಶೈಲ (ಆಂಧ್ರಪ್ರದೇಶ)

vi

III. ಪರಾಮರ್ಶನ ಗ್ರಂಥಗಳು

೧. ಅನಂತರಾಮಯ್ಯ ಎನ್; **ಭಾರತ ಗ್ರಾಮೀಣ ಅಭಿವೃದ್ಧಿ ಒಂದು ವಿಮರ್ಶೆ**; ಅಂಬುಜ ಪ್ರಕಾಶನ, ಬೆಂಗಳೂರು; ೧೯೯೩

೨. ಇಂದಿರಾ ಆರ್; **ಭಾರತೀಯ ಸಮಾಜ**; ಪುಸ್ತಕ ಪ್ರಾಧಿಕಾರ, ಬೆಂಗಳೂರು; ೧೯೯೫

೩. ಕಮಲಾ ನರಸಿಂಹ (ಸಂ); **ಹೇಮಾವತಿಯ ಚೇತನ**; ಸುಮುಖ ಪ್ರಕಾಶನ, ಬೆಂಗಳೂರು; ೨೦೦೫

೪. ಕೀರ್ತಿನಾಥ ಕುರ್ತಕೋಟಿ; **ಯುಗ ಧರ್ಮ ಮತ್ತು ಸಾಹಿತ್ಯ ದರ್ಶನ**; ಮನೋಹರ ಗ್ರಂಥಾಲಯ, ಧಾರವಾಡ; ೨೦೦೨ (ಮ.ಮು)

೫. ಕೃಷ್ಣಮೂರ್ತಿ ಕೆ.ಎನ್. (ಸಂ); **ಹೇಮಾವತಿ ಸ್ಮರಣ ಸಂಚಿಕೆ**; ಹಾಸನದ ಮೊದಲನೇ ಜಿಲ್ಲಾ ಸಾಹಿತ್ಯ ಸಮ್ಮೇಳನ; ಜಿಲ್ಲಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತು, ಹಾಸನ; ೧೯೭೧

೬. ಕೃಷ್ಣಮೂರ್ತಿ ಎಂ. ಜಿ; **ಕೃಷಿ ಸಂಸ್ಕೃತಿ**; ಋಜುವಾತು ಪ್ರಕಾಶನ, ಮೈಸೂರು; ೧೯೯೪

೭. ಕೋದಂಡರಾಮ ಎನ್.ಕೆ; **ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ**; ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು; ೧೯೯೯

೮. ಗೊರೂರು ಸೋಮಶೇಖರ; **ಗೊರೂರು ... ನೆನಪುಗಳು**; ಗಾಯತ್ರಿ ಪ್ರಕಾಶನ, ಬೆಂಗಳೂರು; ೨೦೦೩

೯. ಚಿದಾನಂದ ಮೂರ್ತಿ ಎಂ; **ಜನ-ಜನಪದ-ಜಾನಪದ**; ಸಮಗ್ರ ಸಂಪುಟ, ಸಂಪುಟ ೩, ಸ್ವಪ್ನ ಬುಕ್ ಹೌಸ್, ಬೆಂಗಳೂರು; ೨೦೦೨

೧೦. ಚಿದಾನಂದ ಮೂರ್ತಿ ಎಂ; **ಗ್ರಾಮೀಣ**; ಬಾಪ್ಕೊ ಪ್ರಕಾಶನ, ಬೆಂಗಳೂರು; ೧೯೯೭

೧೧. ಚಿನ್ನಸ್ವಾಮಿ ಸೋಸಲೆ; **ನಮ್ಮ ಗ್ರಾಮ ಅಂದು ಇಂದು**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ೨೦೦೪

೧೨. ಜೋಗನ್ ಶಂಕರ್; **ಗ್ರಾಮಸಮಾಜ**; ಜೀವ ಪ್ರಕಾಶನ, ಮೈಸೂರು; ೧೯೯೫.

೧೩. ನಾಗರಾಜ್ ಡಿ.ಆರ್; **ಶಕ್ತಿ ಶಾರದೆಯ ಮೇಳ**; ಅಕ್ಷರ ಪ್ರಕಾಶನ, ಸಾಗರ; ೧೯೮೭

೧೪. ನಾಗೇಶ ಎಚ್.ವಿ; **ಭಾರತೀಯ ಗ್ರಾಮ**; ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು; ೧೯೮೬

೧೫. ನಾಗೇಶ ಎಚ್.ವಿ; **ಗ್ರಾಮಾಂತರ**; ಭಾರತ ಬುಕ್ ಡಿಪೋ ಮತ್ತು ಪ್ರಕಾಶನ, ಧಾರವಾಡ; ೧೯೯೨ (ಮ.ಮು)

೧೬. ನಾಯಕ ಹಾ.ಮಾ. (ಸಂ); **ಗೊರೂರು ಗೌರವ ಗ್ರಂಥ**; ಗೊರೂರು ಗೆಳೆಯರ ಬಳಗದ ಪ್ರಕಟಣೆ, ಮೈಸೂರು; ೧೯೭೩

೧೭. ನಾರಾಯಣ ವಿಶ್ವ; **ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ**; ಚೇತನ್ ಬುಕ್‌ಹೌಸ್, ಮೈಸೂರು; ೨೦೦೦

೧೮. ಪಾಟೀಲ ಪುಟ್ಟಪ್ಪ; ವ್ಯಕ್ತಿ ಪ್ರಪಂಚ ಭಾಗ-೧; ಸ್ವಪ್ನ ಬುಕ್‌ಹೌಸ್, ಬೆಂಗಳೂರು; ೨೦೦೨

೧೯. ಬಸವರಾಜ ಎಲ್. (ಸಂ); ಅಲ್ಲಮನ ವಚನಗಳು; ಗೀತಾ ಬುಕ್‌ಹೌಸ್, ಮೈಸೂರು; ೧೯೯೭ (ಮ.ಮು)

೨೦. ಮಳಲಿ ವಸಂತ ಕುಮಾರ್; ಪ್ರಬಂಧ ಸಾಹಿತ್ಯ; ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು; ೧೯೭೮

೨೧. ಮೈಲಾರಪ್ಪ ಡಿ.ಸಿ; ಗ್ರಾಮೀಣ ಬದುಕು ಮತ್ತು ಸಾಮಾಜಿಕ ಚಳುವಳಿ; ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು; ೧೯೯೮

೨೨. ರಮೇಶ್ ಬೆ.ಗೋ; ಗೊರೂರು ರಾಮಸ್ವಾಮಿ ಅಯ್ಯಂಗಾರ್; ದಿವ್ಯಚಂದ್ರ ಪ್ರಕಾಶನ, ಬೆಂಗಳೂರು; ೨೦೦೩

೨೩. ರಾವ್ ಬಹದ್ದೂರ್; ಗ್ರಾಮಾಯಣ; ಉಷಾ ಸಾಹಿತ್ಯಮಾಲೆ, ಮೈಸೂರು; ೧೯೭೦

೨೪. ವಾಮನ ಬೇಂದ್ರೆ (ಸಂ); ಅಂಬಿಕಾತನಯದತ್ತರ ಸಮಗ್ರ ಕಾವ್ಯ, ಸಂಪುಟ-೪, ವರಕವಿ ಡಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ; ೨೦೦೩

೨೫. ವಿವಿಧ ಲೇಖಕರು; ರಾಷ್ಟ್ರೀಯ ಚಳುವಳಿ ಮತ್ತು ಗೊರೂರು ಸಾಹಿತ್ಯ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; ೧೯೯೨

೨೬. ವೆಂಕಟೇಶ ಸಿ.; ಲಂಕೇಶರ ಕಥನ ಸಾಹಿತ್ಯದಲ್ಲಿ ಗ್ರಾಮಸಮಾಜ; ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು; ೧೯೯೮

೨೭. ವೆಂಕಟಯ್ಯ ಸಿ.ಜಿ; ಗೊರೂರರ ಜಾನಪದ ಸಾಧನೆ ಮತ್ತು ಸಿದ್ಧಿ; ಜ್ಞಾನೋದಯ ಪ್ರಕಾಶನ, ಬೆಂಗಳೂರು; ೨೦೦೨

೨೮. ವೆಂಕಟಯ್ಯ ಸಿ.ಜಿ; ಗೊರೂರು ರಾಮಸ್ವಾಮಿ ಅಯ್ಯಂಗಾರ್; ಸಾಹಿತ್ಯ ಅಕಾಡೆಮಿ, ಬೆಂಗಳೂರು; ೨೦೦೧

೨೯. ವೆಂಕಟಯ್ಯ ಸಿ.ಜಿ; ಗೊರೂರು - ಜೀವನ, ಸಾಧನೆ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; ೧೯೯೪

೩೦. ಶಿವರಾಮೇಗೌಡ ನಾಗವಾರ; ಗೊರೂರರ ಕೃತಿಗಳು: ಒಂದು ಸಾಂಸ್ಕೃತಿಕ ಅಧ್ಯಯನ; ಸಹ್ಯಾದ್ರಿ ಪ್ರಕಾಶನ, ಮೈಸೂರು; ೧೯೭೮

೩೧. ಶಿವಾರೆಡ್ಡಿ ಕೆ.ಸಿ. ಸಂಯೋಜಕ ಸಂಪಾದಕ; ಕುವೆಂಪು ಸಮಗ್ರ ಕಾವ್ಯ ಸಂಪುಟ-೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ; ೨೦೦೦

೩೨. ಶ್ರೀಕೃಷ್ಣ ಆಲನಹಳ್ಳಿ, (ಸಂ); ಗ್ರಾಮೀಣ ಸಮೀಕ್ಷೆ; ಸಮೀಕ್ಷಕ ಪ್ರಕಾಶನ, ಮೈಸೂರು; ೧೯೭೦

೩೩. ಶೂದ್ರ ಶ್ರೀನಿವಾಸ (ಸಂ); ಗಾಂಧಿ ತತ್ವ ಚಿಂತನೆ ಮತ್ತು ವಿಕೇಂದ್ರೀಕರಣ; ಶೂದ್ರ ಪ್ರಕಾಶನ, ಬೆಂಗಳೂರು; ೧೯೯೦

೩೪. ಸಿದ್ಧಯ್ಯಪುರಾಣಿಕ; ಗ್ರಾಮ ಸ್ವರಾಜ್ಯ; ಸಹ್ಯಾದ್ರಿ ಪ್ರಕಾಶನ, ಮೈಸೂರು; ೧೯೮೨

೩೫. ಸಿದ್ಧಲಿಂಗಯ್ಯ ಜಿ.ಎಸ್., ಕೃಷ್ಣಯ್ಯ ಎಂ. ಎಚ್. (ಸಂ); ಸಾಲುದೀಪಗಳು; ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು; ೧೯೯೦

IV. ಪರಾಮರ್ಶನ ಲೇಖನಗಳು

೧. ಅಮರೇಶ ನುಗಡೋಣಿ; ಗೊರೂರು ಕೃತಿಗಳಲ್ಲಿ ದಲಿತ ಸಂವೇದನೆ; 'ಉಪಕಿರಣ' ೧೬ ಅಕ್ಟೋಬರ್ ೨೦೦೫

೨. ಕೃಷ್ಣಸ್ವಾಮಿ ಅಯ್ಯಂಗಾರ್ ಎಚ್.ಎಸ್; ಗೊರೂರು : ವ್ಯಕ್ತಿ ವಿಷಯ; 'ಸುಧಾ' ೨೦ ಅಕ್ಟೋಬರ್ ೧೯೯೧

೩. ನಾಗರಾಜ್ ಡಿ.ಆರ್; ಗಾಂಧಿ ಸ್ಮರಣೆ-ಪುಸ್ತಕ ವಿಮರ್ಶೆ; 'ಸಂಕ್ರಮಣ' ೬೯, ಫೆಬ್ರುವರಿ, ಮಾರ್ಚ್ ೧೯೯೭

೪. ನಾಗರಾಜ್ ಡಿ.ಆರ್; ಗಾಂಧಿವಾದಿ - ರಸಿಕ ಗೊರೂರು; ಸಂದರ್ಶನ, 'ಉದಯವಾಣಿ ದೀಪಾವಳಿ ಸಂಚಿಕೆ' ೧೯೮೪

೫. ನಾಗರಾಜ್ ಡಿ.ಆರ್; 'ಲಂಕೇಶ ಪತ್ರಿಕೆ' ೬-೪-೧೯೯೧

೬. ನಾಗರಾಜಯ್ಯ ಹಂ.ಪ; ಭೀಷ್ಮನಿಗೆ ವೀರಪಟ್ಟ-ಸಾಂಸ್ಕೃತಿಕ ಒಳನೋಟಗಳು; ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ; ಸಂ: ೭೧. ೧-೬-೧೯೮೬

೭. ನಾಗರಾಜಯ್ಯ ಹಂ.ಪ; 'ತರಂಗ' ೯ ಆಗಸ್ಟ್ ೧೯೮೭, ಪು.೨೭

೮. ನಾಯಕ ಹಾ.ಮಾ; ಕಣ್ಮರೆಯಾದ ಇಬ್ಬರು ಹಿರಿಯರು; 'ತರಂಗ' ೨೭ ಅಕ್ಟೋಬರ್ ೧೯೯೧

೯. ಪೂರ್ಣಚಂದ್ರ ತೇಜಸ್ವಿ; ಜಾತಿ ಪದ್ಧತಿಯ ಆಧುನಿಕ ಆವಿಷ್ಕಾರಗಳು; 'ಲಂಕೇಶ್ ಪತ್ರಿಕೆ' ೧೦-೦೮-೧೯೮೬

೧೦. ಪೋಲಂಕಿ ರಾಮಮೂರ್ತಿ; ಭಾರತೀಯ ಸಂಸ್ಕೃತಿಯ ಅಂತರಂಗ-ಬಹಿರಂಗ; 'ಸಂಕ್ರಮಣ' ೧೧೦-೧೧, ಪು.೬೫, ೧೯೮೧

೧೧. ಬರಗೂರು ರಾಮಚಂದ್ರಪ್ಪ; ಸಂಸ್ಕೃತಿ ಮತ್ತು ಸೃಜನಶೀಲತೆ ; 'ಅನ್ವೇಷಣೆ' ಸಂ: ೧. ೭-೮ ಮೇ, ಜೂನ್, ೧೯೮೫

೧೨. ಮಿತ್ರ ಅ.ರಾ; 'ತುಷಾರ', ೧ ಅಕ್ಟೋಬರ್ ೧೯೯೦

೧೩. ರಾಜಕುಮಾರ್; ಪ್ರಜಾವಾಣಿ, ೨೯-೯-೧೯೯೧

೧೪. ರಾಮಚಂದ್ರ ಎಂ; ಉದಯವಾಣಿ, ೬-೧೦-೧೯೯೧

೧೫. ಲಕ್ಷ್ಮಿನಾರಾಯಣ ಭಟ್ಟ; ಕನ್ನಡ ಪ್ರಭ, ೨೦-೧೦-೧೯೯೧

೧೬. ವೈಕುಂಠರಾಜು; ವಾರಪತ್ರಿಕೆ, ೬-೧೨-೧೯೯೧

೧೭. ಶ್ರೀನಿವಾಸರಾವ್; 'ಕನ್ನಡ ನುಡಿ' (ಮಾಸಪತ್ರಿಕೆ); ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ಜುಲೈ ೨೦೦೪

೧೮. ಸೋಮಶೇಖರ ಗೌಡ ; ಗೊರೂರರ ಕೃತಿಗಳಲ್ಲಿ ಜಾನಪದ ಭಾಷೆ; ವಿಚಾರ ಸಂಕಿರಣದ ಪ್ರಬಂಧ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; ೧೯೯೨